ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೩೩

ಲೇಖನ ಸಾಹಿತ್ಯ : ಭಾಗ-೧



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೩೩ : ಲೇಖನ ಸಾಹಿತ್ಯ : ಭಾಗ-೧

● [illegible] ●

Selected
Halmidi
Pampa
etc

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

[illegible]

ಸಂಪಾದಕರು

ಡಾ. ಶಿ. [illegible]

[illegible]

[illegible] ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೦

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೩೩ : ಲೇಖನ ಸಾಹಿತ್ಯ : ಭಾಗ–೧

❖

• ಶಾಸನ ಸಾಹಿತ್ಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಕೆ. ರವೀಂದ್ರನಾಥ

ಹಂಪಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೦

COMPLETE WORK OF DR. M.M.KALBURGI
VOLUME - 33 : LEKHANA SAHITY : BHAGA-1
Edited by : Dr. K. Ravindranatha, Hampi

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2020
Pages : xxxxiii + 429=472

Copies: 1000
Price Rs:250/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೩೩–ಲೇಖನ ಸಾಹಿತ್ಯ : ಭಾಗ–೧

ಸಂಪಾದಕರು : ಡಾ. ಕೆ. ರವೀಂದ್ರನಾಥ, ಹಂಪಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೦
ಪುಟಗಳು: xxxxiii + ೪೨೯=೪೭೨

ಪ್ರತಿಗಳು: ೧೦೦೦
ಬೆಲೆ ರೂ: ೨೫೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ
ಡಾ. ವೀರಣ್ಣ ರಾಜೂರ, ಧಾರವಾಡ
ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ
ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ
ಡಾ. ಎಂ.ಎಸ್. ಮದಭಾವಿ, ವಿಜಯಪುರ
ಡಾ. ಎಸ್.ಕೆ. ಕೊಪ್ಪಾ, ಇಂಡಿ
ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ
ಡಾ. ಕೆ. ರವೀಂದ್ರನಾಥ, ಹಂಪಿ
ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ
ಡಾ. ವಿ. ಎಸ್. ಮಾಳಿ, ಹಾರೂಗೇರಿ
ಡಾ. ಪಿ. ಕೆ. ರಾಠೋಡ, ಧಾರವಾಡ
ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ
ಶ್ರೀ ಶಶಿಧರ ತೋಡ್ಕರ, ಧಾರವಾಡ
ಡಾ. ವಿ. ಡಿ. ಐಹೊಳ್ಳಿ, ವಿಜಯಪುರ
ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು-ನುಡಿ-ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ-ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ-ಅದ್ವಿತೀಯ-ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ-ಪಾಂಡಿತ್ಯ-ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ-ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ-ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು–ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ–ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ–ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಚೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ. ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ
೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
   ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ-೨ **-ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ-೩ **-ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ-೪ **-ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ-೫ **-ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ-೬ **-ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ-೭ **-ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ-೮ **-ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ-೯ **-ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ-೪

೨. ವಚನ ಸಂಕಲನ-೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ-೧೦ **-ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ-೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ-೧ **-ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ-೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ **–ಸಂ. ಡಾ. ವಿ.ಎಸ್. ಮಾಳಿ**

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ **–ಸಂ. ಡಾ. ಕೆ. ರವೀಂದ್ರನಾಥ**

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ **–ಸಂ. ಡಾ. ಕೆ. ರವೀಂದ್ರನಾಥ**

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ-೩ **-ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ-೪ **-ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ-೫ **-ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ
ಅರಿಕೆ-ಭಾಷಣ-ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೧ **-ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **-ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೨ **-ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ-ವರದಿಗಳು **-ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೩ **-ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ-ವಿಡಿಯೋ **-ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು-ಪುನರುಕ್ತಿಕಾರಣವಾಗಿ- ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ-ವಿಶ್ವಾಸ-ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ-ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ-ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ಕ್ರಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು. ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.

❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.

❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಕೆ. ರವೀಂದ್ರನಾಥ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಕೆ. ರವೀಂದ್ರನಾಥ

ಡಾ. ಎಂ. ಎಂ. ಕಲಬುರ್ಗಿ ಅವರು ಬದುಕಿನುದ್ದಕ್ಕೂ ಬೋಧನೆ–ಶೋಧನೆ–ಪ್ರಕಟಣೆ ಎಂಬ ನೆಲೆಗಳಲ್ಲಿ ದಣಿವರಿಯದೇ ದುಡಿದ ವಿದ್ವಾಂಸರು. ಆ ಮೂಲಕ ಕನ್ನಡ ಸಂಶೋಧನ ಮಹಾಮಾರ್ಗವನ್ನು ರೂಪಿಸಿದವರು. ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಶಾಸನ, ಹಸ್ತಪ್ರತಿ, ಗ್ರಂಥಸಂಪಾದನೆ, ಇತಿಹಾಸ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಹಳಗನ್ನಡ, ವಚನ ಹಾಗೂ ಲಿಂಗಾಯತ ಸಾಹಿತ್ಯ ಹೀಗೆ ಏಕಕಾಲಕ್ಕೆ ಹತ್ತಾರು ಕ್ಷೇತ್ರಗಳನ್ನು ತಮ್ಮ ಅಧ್ಯಯನದ ತೆಕ್ಕೆಗೆ ತೆಗೆದುಕೊಂಡು “ಸಮಗ್ರ ಸಂಶೋಧಕ” ಎಂಬ ಗೌರವಕ್ಕೆ ಪಾತ್ರರಾದರು. ಅದಮ್ಯ ಉತ್ಸಾಹ, ಕ್ರಿಯಾಶೀಲತೆ, ಸಮಯಪ್ರಜ್ಞೆಗೆ ಹೆಸರಾಗಿದ್ದ ಡಾ. ಎಂ. ಎಂ. ಕಲಬುರ್ಗಿ ಅವರು ತಾವೂ ದುಡಿದರು; ತಮ್ಮ ಸುತ್ತಲಿನ ಪರಿಸರವನ್ನೂ ದುಡಿಯುವಂತೆ ನೋಡಿಕೊಂಡರು. ಕೆಲಸ ಮಾಡುವುದನ್ನು ಬಿಟ್ಟರೆ ನನಗೆ ಬೇರೆ ಕೆಲಸವೇ ಇಲ್ಲ ಎಂದು ಹೇಳುವುದರ ಮೂಲಕ ಕೆಲಸ ಕಾಯಕವಾಗುವ ಬಗೆಯನ್ನು ತಮ್ಮದೇ ಆದ ಹೊಸ ವ್ಯಾಖ್ಯಾನದ ಮೂಲಕ ಮನವರಿಕೆ ಮಾಡಿಕೊಟ್ಟರು. ಇಂಥ ಅಪ್ರತಿಮ ಸಂಶೋಧಕನ ಸಮಗ್ರ ಸಾಹಿತ್ಯವನ್ನು ಪ್ರಕಟಿಸಬೇಕೆಂಬ ಯೋಜನೆಯನ್ನು ನಮ್ಮ ನಾಡಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ವಿಜಯಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ ರೂಪಿಸಿರುವುದು ಪ್ರಾತಃಸ್ಮರಣೀಯರಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಎಂದು ನಾನು ಭಾವಿಸಿದ್ದೇನೆ.

ಡಾ. ಎಂ. ಎಂ. ಕಲಬುರ್ಗಿ ಅವರ ಸಮಗ್ರ ಸಾಹಿತ್ಯವನ್ನು ೧. ಸ್ವತಂತ್ರ ಕೃತಿಗಳು ೨. ಸಂಪಾದಿತ ಕೃತಿಗಳು ೩. ಲೇಖನಗಳು ಎಂದು ವರ್ಗೀಕರಿಸಿಕೊಳ್ಳಲಾಗಿದೆ. ಈ ಮೂರರಲ್ಲಿ ಲೇಖನ ಸಂಪುಟಗಳ ಸಂಪೂರ್ಣ ಒಂದು ಪಾಲನ್ನು ನನಗೆ ನೀಡಿ ಸಂಪಾದಿಸಿಕೊಡುವ ಜವಾಬ್ದಾರಿಯನ್ನು ಯೋಜನೆಯ ನಿರ್ದೇಶಕರು, ಪ್ರಧಾನಸಂಪಾದಕರು, ಸಲಹಾ ಸಮಿತಿ ಸದಸ್ಯರು ವಹಿಸಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

೧. ಲೇಖನ ಸಂಪುಟಗಳ ಸ್ವರೂಪ ಮತ್ತು ಸಂಯೋಜನ ವಿಧಾನ

ಡಾ. ಎಂ. ಎಂ. ಕಲಬುರ್ಗಿ ಅವರ ಮಾರ್ಗ ಹೆಸರಿನ ೮ ಸಂಪುಟಗಳಲ್ಲಿ ಒಟ್ಟು ೮೬೮ ಲೇಖನಗಳಿವೆ. ಸಂಪುಟ ೧ರಲ್ಲಿ ಸಾಹಿತ್ಯಮಾರ್ಗ-೭೨, ಸಂಪಾದನಮಾರ್ಗ-೦೪, ವಿಮರ್ಶಾಮಾರ್ಗ-೨೪ ಸೇರಿ ಒಟ್ಟು ೧೦೦ ಲೇಖನಗಳು. ಸಂಪುಟ ೨ರಲ್ಲಿ ಶಾಸನಮಾರ್ಗ-೫೦, ಜಾನಪದಮಾರ್ಗ-೨೭, ಶಾಸ್ತ್ರಮಾರ್ಗ-೨೩ ಸೇರಿ ಒಟ್ಟು ೧೦೦ ಲೇಖನಗಳು. ಸಂಪುಟ ೩ರಲ್ಲಿ ಪ್ರಬಂಧ-೫೫, ಚಿಂತನ-೩೦, ನಿರ್ವಚನ-೧೫ ಸೇರಿ ಒಟ್ಟು ೧೦೦ ಲೇಖನಗಳು, ಸಂಪುಟ ೪ರಲ್ಲಿ ಸಂಪ್ರಬಂಧ-೧೦೦ ಲೇಖನಗಳು. ಸಂಪುಟ ೫ರಲ್ಲಿ ಪ್ರಸ್ತಾವನೆ-೨೯, ಅರಿಕೆ-೩೩, ಸಂಪಾದಕೀಯ-೨೩, ಸೇರಿ ಒಟ್ಟು ೮೫ ಲೇಖನಗಳು. ಸಂಪುಟ ೬ರಲ್ಲಿ ಭಾಷಣಗಳು-೩೪, ಮುನ್ನುಡಿಗಳು-೬೧, ಬೆನ್ನುಡಿಗಳು ೩೯, ವ್ಯಕ್ತಿಚಿತ್ರಣ-೩೫ ಸೇರಿ ಒಟ್ಟು ೧೬೯ ಲೇಖನಗಳು. ಸಂಪುಟ ೭ರಲ್ಲಿ ಪ್ರಬಂಧಗಳು -೪೩, ಪ್ರತಿಕ್ರಿಯೆಗಳು-೧೦, ಪ್ರಸ್ತಾವನೆಗಳು-೭, ಪುಸ್ತಕಾವಲೋಕನ-೧೧, ಭಾಷಣಗಳು-೧೯, ಸಂಪಾದಕರ ನುಡಿ-೧೦ ಸೇರಿ ಒಟ್ಟು ೧೦೦ ಲೇಖನಗಳು. ಸಂಪುಟ ೮ರಲ್ಲಿ ಆತ್ಮಕಥೆ-೧, ಪ್ರಬಂಧ-೨೦, ಭಾಷಣ-೧೪, ವ್ಯಕ್ತಿಚಿತ್ರಣ-೨೨, ಮುನ್ನುಡಿ-೨೦, ಬೆನ್ನುಡಿ ೨೧, ಅರಿಕೆ-೯ ಸೇರಿ ಒಟ್ಟು ೧೦೭ ಲೇಖನಗಳು. ಹೀಗೆ ೮ ಮಾರ್ಗಸಂಪುಟಗಳಲ್ಲಿ ಒಟ್ಟು ೮೬೮ ಲೇಖನಗಳು ಅಡಕಗೊಂಡಿವೆ.

ಈ ೮೬೮ ಲೇಖನಗಳು ಕಾವ್ಯ, ವಚನ, ಶಾಸ್ತ್ರ, ಶಾಸನ, ಭಾಷಣ, ಪ್ರಸ್ತಾವನೆ, ಮುನ್ನುಡಿ, ಬೆನ್ನುಡಿ, ಅರಿಕೆ, ವ್ಯಕ್ತಿಚಿತ್ರಣ, ಪುಸ್ತಕಾವಲೋಕನ ಇತ್ಯಾದಿ ಪ್ರಕಾರಗಳಲ್ಲಿ ಎಂಟೂ ಸಂಪುಟಗಳಲ್ಲಿ ಹಂಚಿಹೋಗಿವೆ. ಹೀಗೆ ಹಂಚಿಹೋಗಿರುವ ಲೇಖನಗಳನ್ನು ವಿಷಯಾನುಕ್ರಮದಲ್ಲಿ ವರ್ಗೀಕರಿಸಿಕೊಂಡು ೫ ಭಾಗಗಳಲ್ಲಿ (ಸಂಪುಟಗಳಲ್ಲಿ) ಈ ಕೆಳಗಿನಂತೆ ಸಂಯೋಜಿಸಲಾಗಿದೆ. ಪ್ರತಿಯೊಂದು ಸಂಪುಟಕ್ಕೂ ಪ್ರವೇಶಿಕೆಯ ರೂಪದ ಪ್ರಸ್ತಾವನೆಯನ್ನು ಬರೆಯಲಾಗಿದೆ.

I. ಲೇಖನ ಸಾಹಿತ್ಯ : ಭಾಗ-೧ ಶಾಸನಸಾಹಿತ್ಯ(ಸಂಪುಟ-೩೩)

II. ಲೇಖನ ಸಾಹಿತ್ಯ : ಭಾಗ-೨ ಶಾಸ್ತ್ರಸಾಹಿತ್ಯ (ಸಂಪುಟ-೩೪)

III. ಲೇಖನ ಸಾಹಿತ್ಯ : ಭಾಗ-೩ ವಚನಸಾಹಿತ್ಯ(ಸಂಪುಟ-೩೫)

IV. ಲೇಖನ ಸಾಹಿತ್ಯ : ಭಾಗ-೪ ಕಾವ್ಯಸಾಹಿತ್ಯ (ಸಂಪುಟ-೩೬)

V. ಲೇಖನ ಸಾಹಿತ್ಯ : ಭಾಗ-೫ ಭಾಷಣ-ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ ಸಂದರ್ಶನ-ಅರಿಕೆ-ಸಂಪಾದಕೀಯ(ಸಂಪುಟ-೩೭)

ಈ ಮೇಲಿನ ೫ ಸಂಪುಟಗಳಲ್ಲಿ ಡಾ. ಎಂ. ಎಂ. ಕಲಬುರ್ಗಿ ಅವರು ಬರೆದ ಸ್ವತಂತ್ರ ಕೃತಿಗಳಲ್ಲಿಯ ಅರಿಕೆಗಳನ್ನು, ಸಂಪಾದಿತಕೃತಿಗಳಲ್ಲಿಯ ಪ್ರಸ್ತಾವನೆಗಳನ್ನು ಕೈಬಿಡಲಾಗಿದೆ. ಯಾಕೆಂದರೆ ಈ ಅರಿಕೆ-ಪ್ರಸ್ತಾವನೆಗಳು ಆಯಾ ಕೃತಿಗಳಲ್ಲಿ ಬಂದಿರುವುದರಿಂದ ಮತ್ತೆ ಇಲ್ಲಿಯೂ ಉಳಿಸಿಕೊಳ್ಳುವುದು ಸರಿಯಲ್ಲವೆಂಬುದು ನಮ್ಮ ಉದ್ದೇಶ. ಆದರೆ ಡಾ. ಎಂ. ಎಂ. ಕಲಬುರ್ಗಿಯವರು ಬೇರೆ ಬೇರೆ ವಿದ್ವಾಂಸರಿಂದ ಯಾವುದೋ ವಿಷಯಕ್ಕೆ ಲೇಖನಗಳನ್ನು ಬರೆಸಿ ಸಂಪಾದಿಸಿರುವ

ಕೃತಿಗಳ ಸಂಪಾದಕೀಯ ಮತ್ತು ಪ್ರಧಾನ ಸಂಪಾದಕೀಯ ಮಾತುಗಳನ್ನು ಸೇರಿಸಿಕೊಂಡಿದ್ದೇವೆ. ಅದೇ ರೀತಿ ಮಾರ್ಗಸಂಪುಟ-೨ರಲ್ಲಿ ಪ್ರಕಟವಾಗಿರುವ ಜಾನಪದ ಸಂಬಂಧಿ ೨೭ ಲೇಖನಗಳು 'ಜಾನಪದಮಾರ್ಗ' ಹೆಸರಿನಲ್ಲಿ ಸ್ವತಂತ್ರ ಕೃತಿಯಾಗಿ ರೂಪ ತಾಳಿದ್ದರಿಂದ ಆ ಲೇಖನಗಳನ್ನೂ ಇಲ್ಲಿ ಕೈಬಿಡಲಾಗಿದೆ. ವಿಶೇಷವಾಗಿ ಡಾ. ಎಂ. ಎಂ. ಕಲಬುರ್ಗಿ ಅವರನ್ನು ಕೆಲವು ವ್ಯಕ್ತಿಗಳು, ಪತ್ರಿಕೆಗಳು ಸಂದರ್ಶನ ಮಾಡಿವೆ. ಈಗಾಗಲೇ ಸಂದರ್ಶನಗಳ ಸಂಗ್ರಹ ಕೃತಿಯೂ ಪ್ರಕಟವಾಗಿದೆ. ಆ ೨೫ ಸಂದರ್ಶನಗಳು ಲೇಖನಸಾಹಿತ್ಯ : ಭಾಗ-೫ ರಲ್ಲಿ ಅಳವಡಿಸುವುದು ಸೂಕ್ತವೆಂದು ಭಾವಿಸಿ ಅವುಗಳನ್ನು ಸೇರಿಸಿಕೊಂಡಿದ್ದೇವೆ. ಇದಿಷ್ಟು ನಾನು ಸಂಪಾದಿಸಿದ ಡಾ. ಎಂ.ಎಂ. ಕಲಬುರ್ಗಿ ಅವರ ಲೇಖನ ಸಾಹಿತ್ಯ ೫ ಸಂಪುಟಗಳ ಶಿಲ್ಪವಾಗಿದೆ.

೨. ಲೇಖನ ಸಾಹಿತ್ಯ : ಭಾಗ-೧ : ಶಾಸನಸಾಹಿತ್ಯ

ಈ ಸಂಪುಟದ ಲೇಖನಗಳನ್ನು ೧. ವ್ಯಕ್ತಿ-ಸ್ಥಳ ಕುರಿತಾದ ಚಾರಿತ್ರಿಕ ಅಧ್ಯಯನ ೨. ಕವಿ-ಕೃತಿ ಕುರಿತಾದ ಸಾಹಿತ್ಯಿಕ ಅಧ್ಯಯನ ೩. ಆಚರಣೆ-ನಂಬಿಕೆ ಕುರಿತಾದ ಸಾಂಸ್ಕೃತಿಕ ಅಧ್ಯಯನವೆಂದು ಸ್ಥೂಲವಾಗಿ ವರ್ಗೀಕರಿಸಬಹುದು.

ಕರ್ನಾಟಕವಿಶ್ವವಿದ್ಯಾಲಯದ ಕನ್ನಡವಿಭಾಗ ೧೯೭೨ರಲ್ಲಿ ಕನ್ನಡಅಧ್ಯಯನ ಪೀಠವಾಗಿ ರೂಪಾಂತರಗೊಂಡಿತು. ಇದರಿಂದ ಶೈಕ್ಷಣಿಕವಾಗಿ ಹೊಸ ಹೊಸ ಜ್ಞಾನವಲಯಗಳನ್ನು ಅಳವಡಿಸಿಕೊಂಡಿತು. ಇಂಥ ಹೊಸ ಜ್ಞಾನವಲಯಕ್ಕೆ ಬಂದು ಸೇರಿಕೊಂಡಿತು, ಶಾಸನವಿಭಾಗ. ಶಾಸನಗಳ ಸರ್ವೇಕ್ಷಣೆ ಹಾಗೂ ಅಧ್ಯಯನ ಈ ವಿಭಾಗದ ಶೈಕ್ಷಣಿಕ ಕಾರ್ಯಯೋಜನೆಯಾಗಿತ್ತು. ಡಾ. ಎಂ. ಎಂ. ಕಲಬುರ್ಗಿ ಅವರ ಮುಂದಾಳತ್ವದಲ್ಲಿ ಶಾಸನಗಳ ಸರ್ವೇಕ್ಷಣೆ-ಶೋಧಕಾರ್ಯ ಸಾಂಸ್ಥಿಕವಾಗಿ ನಡೆದರೆ; ಶಾಸನಗಳ ವಿಶ್ಲೇಷಣೆಯ ಕಾರ್ಯದಲ್ಲಿ ವೈಯಕ್ತಿಕವಾಗಿ ಶ್ರಮ ಹಾಕಿದವರು ಡಾ. ಎಂ. ಎಂ. ಕಲಬುರ್ಗಿಯವರು. ಸಾಂಸ್ಕೃತಿಕ ಅಧ್ಯಯನದ ಆಕರಸಾಮಗ್ರಿಗಳಾದ ಕನ್ನಡದ ೨೫ ಸಾವಿರ ಶಾಸನಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಕೆಲವೇ ಕೆಲವು ವಿದ್ವಾಂಸರಲ್ಲಿ ಇವರೂ ಒಬ್ಬರು. ಇವರ ಸಂಶೋಧನ ಅಕರಗಳಲ್ಲಿ ಮೂಲಧಾತು ಶಾಸನಗಳು. ಇವರ ಶಾಸನ ಪ್ರೀತಿಯನ್ನು ಕುರಿತು ಡಾ. ಶೇಷಶಾಸ್ತ್ರಿಯವರು ಹೀಗೆ ಅಭಿಪ್ರಾಯಪಡುತ್ತಾರೆ. "ಡಾ. ಎಂ. ಎಂ. ಕಲಬುರ್ಗಿಯವರು ಇದುವರೆಗೆ ಪ್ರಕಟಿಸಿರುವ ಎಲ್ಲ ಸಂಶೋಧನ ಕೃತಿಗಳನ್ನು ವಿಶ್ಲೇಷಿಸಿದಾಗ, ವಿವಿಧ ಸಂಶೋಧನ ರಂಗಗಳಿಗೆ ಅವರ ಪ್ರಯಾಣ ಬೆಳೆದಿರುವುದೇ ಶಾಸನ ನಿಲ್ದಾಣದಿಂದ. ಒಂದು ವೇಳೆ ಬೇರೆ ನಿಲ್ದಾಣದಿಂದ ಪ್ರಯಾಣಿಸಿದರೂ ಅವರು ಸೇರುವುದು ಶಾಸನ ನಿಲ್ದಾಣವನ್ನೇ." ಬಹುಶಃ ಡಾ. ಕಲಬುರ್ಗಿ ಅವರ ಶಾಸನ ಅಧ್ಯಯನದ ಆಸಕ್ತಿಗೆ ಮೂಲಕಾರಣ ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ ಎಂಬ ಅವರ ಪಿಎಚ್.ಡಿ. ಮಹಾಪ್ರಬಂಧ. ಅಜ್ಞಾತವಾದ ದುರ್ಗಮಯುಗವೊಂದರ ಪ್ರವೇಶದಲ್ಲಿ ನೂರಾರು ಶಾಸನಗಳನ್ನು, ಶಾಸನಕವಿಗಳನ್ನು, ಶಿಲ್ಪಗಳನ್ನು, ಅವುಗಳಲ್ಲಿಯ ಸಾಹಿತ್ಯಿಕ ಅಂಶಗಳನ್ನು ಶೋಧಿಸುವ-ಪರಿಶೋಧಿಸುವ ಹಿನ್ನೆಲೆಯಲ್ಲಿ ಶಾಸನಾಸಕ್ತಿಯನ್ನು ಬೆಳೆಸಿಕೊಂಡರು. ಕನ್ನಡ ಸಾಹಿತ್ಯಚರಿತ್ರೆಯಂತೆ ಕರ್ನಾಟಕ ಶಾಸನಚರಿತ್ರೆ ರೂಪುಗೊಳ್ಳಬೇಕೆಂಬುದು ಅವರ ಒತ್ತಾಸೆಯಾಗಿತ್ತು. ಅದರಲ್ಲೂ ಹೊಸದಾಗಿ ಸ್ಥಾಪನೆಯಾದ ಶಾಸನವಿಭಾಗಕ್ಕೆ ಪಠ್ಯವನ್ನು ರೂಪಿಸುವ, ಆ ಮೂಲಕ ವಿದ್ಯಾರ್ಥಿಗಳಲ್ಲಿ ಸಾಹಿತ್ಯದಂತೆ ಶಾಸನದಲ್ಲಿ

ಆಸಕ್ತಿ ಮೂಡಿಸಬೇಕೆಂಬ ಉದ್ದೇಶದಿಂದ ಕನ್ನಡ ಶಾಸನಸಂಪದ ಎಂಬ ಕೃತಿಯನ್ನು ಗುರುಗಳಾದ ಡಾ. ಆರ್. ಸಿ. ಹಿರೇಮಠರ ಜೊತೆಗೆ ಸಂಪಾದಿಸಿದರು. ಆ ಕೃತಿಯಲ್ಲಿ ಮೊದಲ ಮಾತಾಗಿ "ಶಾಸನಗಳು ಕರ್ನಾಟಕ ಪ್ರಾಚೀನ ಸಂಸ್ಕೃತಿಯ ಮೂಕಸಾಕ್ಷಿಗಳು. ಕ್ರಿ.ಶ.ಪೂ. ೩೦೦ ರ ಅಶೋಕನ ಶಾಸನಗಳನ್ನು ಮೊದಲುಗೊಂಡು ಪ್ರಾಕೃತ, ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಮಲೆಯಾಳ, ಉರ್ದು ಭಾಷೆಗಳಲ್ಲಿ ಬರೆಯಲಾದ ಇವುಗಳ ಅಧ್ಯಯನ ಅರಣ್ಯದಂತೆ ವೈವಿಧ್ಯಮಯ. ನಭೋಮಂಡಲದಂತೆ ಕುತೂಹಲಮಯ. ಈವರೆಗೆ ಸಂಗ್ರಹಿಸಿದ ಕರ್ನಾಟಕದ ಶಾಸನಗಳ ಸಂಖ್ಯೆ ಸುಮಾರು ೨೫ಸಾವಿರ. ವೈಪುಲ್ಯ ದೃಷ್ಟಿಯಿಂದ ತಮಿಳಿಗೆ, ಸಾಹಿತ್ಯ ದೃಷ್ಟಿಯಿಂದ ಸಂಸ್ಕೃತಕ್ಕೆ ದ್ವಿತೀಯ ಸ್ಥಾನದಲ್ಲಿ ನಿಂದು, ಭಾರತೀಯ ಮಹತ್ವಗಳಿಸಿದ ಇವುಗಳ ಅಧ್ಯಯನ ಎಂ. ಎ. ಕನ್ನಡ ವಿದ್ಯಾರ್ಥಿಗಳಿಗೆ ಅವಶ್ಯವೆಂಬುದನ್ನು ಮನಗಂಡು ಈ ಗ್ರಂಥದಲ್ಲಿ ೩೨ ಶಾಸನಗಳ ಸಮಗ್ರಪಾಠವನ್ನು ಕೊಡಲಾಗಿದೆ. ಇವು ಪ್ರಾಚೀನ ಕರ್ನಾಟಕದ ಇತಿಹಾಸ, ಸಾಹಿತ್ಯ, ಧರ್ಮ ಮತ್ತು ಸಮಾಜಗಳಿಗೆ ಹಿಡಿದ ಶಿಲಾದರ್ಪಣವೆನಿಸಿವೆ" ಎಂದಿದ್ದಾರೆ. ದಕ್ಷಿಣಕರ್ನಾಟಕ ಭಾಗದ ಎಪಿಗ್ರಾಫಿಯಾ ಕರ್ನಾಟಿಕಾ ಹೆಸರಿನ ಶಾಸನಸಂಪುಟಗಳು ಪ್ರಕಟವಾಗಿದ್ದವು. ಆದರೆ ಉತ್ತರಕರ್ನಾಟಕ ಭಾಗದ ಶಾಸನಗಳು ಎಪಿಗ್ರಾಫಿಯಾ ಇಂಡಿಕಾ, ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ ಹೆಸರಿನಲ್ಲಿ ಕೆಲವು ಶಾಸನಗಳು ಬೆಳಕು ಕಂಡಿದ್ದವು. ಹೀಗಾಗಿ ಈ ಭಾಗದ ಸಮಗ್ರ ಶಾಸನಗಳು ಪ್ರಕಟವಾಗಬೇಕೆಂಬ ಕನಸನ್ನು ಡಾ. ಕಲಬುರ್ಗಿ ಅವರು ಕಂಡಿದ್ದರು. ಅವರ ಈ ಕನಸು ನನಸಾಗಲಿಕ್ಕೆ ಕನ್ನಡ ವಿಶ್ವದ್ಯಾಲಯದ ಕುಲಪತಿಗಳಾಗಿ ಅವರು ಬರುವವರೆಗೂ ಕಾಯಬೇಕಾಯಿತು. 'ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ' ಹೆಸರಿನ ಜಿಲ್ಲಾವಾರು ಶಾಸನ ಸಂಪುಟಗಳಲ್ಲದೆ, ಅಕ್ಕಪಕ್ಕದ ತಮಿಳು, ಮಹಾರಾಷ್ಟ್ರ, ಆಂಧ್ರರಾಜ್ಯಗಳ ಕನ್ನಡ ಶಾಸನಗಳನ್ನು ಪ್ರಕಟಿಸುವ ಯೋಜನೆ ಹಾಕಿಕೊಟ್ಟರು. ಹೀಗೆ ಡಾ. ಎಂ. ಎಂ. ಕಲಬುರ್ಗಿ ಅವರ ಶಾಸನಾಧ್ಯಯನ ಕವಿರಾಜಮಾರ್ಗದಿಂದ ಆರಂಭವಾಗಿ, ಧಾರವಾಡ ಕನ್ನಡ ಅಧ್ಯಯನಪೀಠದಲ್ಲಿ ಬೆಳವಣಿಗೆ ಹೊಂದಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕೊನೆಗೊಂಡಿತು. ಶಾಸನ ಸಂಬಂಧಿ ಕೃತಿಗಳನ್ನು ಹೊರತುಪಡಿಸಿದರೂ ಮಾರ್ಗ–೨ರಲ್ಲಿ ಶಾಸನಮಾರ್ಗ ಶೀರ್ಷಿಕೆಯಲ್ಲಿ ೫೦ ಲೇಖನಗಳನ್ನು ಪ್ರಕಟಿಸಿದರು. ಇದರಿಂದ ಶಾಸನಗಳ ಹೊರಮೈ ಮತ್ತು ಒಳಮೈಗಳನ್ನು ಅಧ್ಯಯನ ಮಾಡುವುದರ ಮೂಲಕ ಶಾಸನ ಕ್ಷೇತ್ರಕ್ಕೂ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ.

ಕೆಲವು ವ್ಯಕ್ತಿಗಳು ಹಾಗೂ ಸ್ಥಳಗಳನ್ನು ಕುರಿತು ಮಾಡಿದ ಅಧ್ಯಯನಗಳು ಚಾರಿತ್ರಿಕ ಮಹತ್ವದಿಂದ ಕೂಡಿವೆ. ಕವಡೆಬೊಪ್ಪ ಎಂಬ ಲೇಖನದಲ್ಲಿ ಸೂಕ್ತಿಸುಧಾರ್ಣವದ ಕುಮಾರೋದಯ ವರ್ಣನೆಯಲ್ಲಿ ಉಲ್ಲೇಖಿತವಾದ ಕವಡೆಯಬೊಪ್ಪ ಒಬ್ಬ ಐತಿಹಾಸಿಕವ್ಯಕ್ತಿ. ಬಂದಳಿಕೆಪಟ್ಟಣದ ಶಾಂತಿನಾಥಬಸದಿ ಶಾಸನಪದ್ಯದಲ್ಲಿ ಈತನ ಉಲ್ಲೇಖವಿದೆ. ಮೊದಲು ಕಲಚೂರಿಗಳಲ್ಲಿ, ನಂತರ ಹೊಯ್ಸಳ ವೀರಬಲ್ಲಾಳನಲ್ಲಿ ಮಂತ್ರಿಯಾಗಿದ್ದು ೧೩ನೆ ಶತಮಾನದಲ್ಲಿ ಬದುಕಿದ್ದ ಈತನನ್ನು ಕುರಿತು ಚಂಪೂ ಕೃತಿಯೊಂದನ್ನು ಸೂರಿ ಕವಿ ಬರೆದಿದ್ದಾನೆಂದು ಊಹಿಸುತ್ತಾರೆ. ಗಂಗಾಧರಂ ಶಾಸನ ಕುರಿತ ಲೇಖನಗಳು ಒಟ್ಟು ನಾಲ್ಕು ಇವೆ. ಮೊದಲ ಲೇಖನ ಗಂಗಾಧರಂ ಶಾಸನ: ಒಂದು ತಿದ್ದುಪಡಿ ಎಂಬುದು. ಆಂಧ್ರದ ವಿದ್ವಾಂಸರಾದ ಡಾ. ಎಸ್. ವೆಂಕಟರಮಣಯ್ಯನವರು ಈ ಶಾಸನವನ್ನು ಶೋಧಿಸಿ ಪಂಪ ಕವಿಯ ವಂಶಾವಳಿಯನ್ನು ತೆಲುಗು ಪತ್ರಿಕೆಯಲ್ಲಿ ಪ್ರಕಟಿಸಿದ್ದರು.

ಇದರಲ್ಲಿಯ ಪಾಠದೋಷವನ್ನು ಗುರುತಿಸಿ, ಊಹಿಸಿ ಪಂಪನ ವಂಶಾವಳಿಯನ್ನು ಡಾ. ಎಂ. ಎಂ. ಕಲಬುರ್ಗಿ ಅವರು ಸರಿಯಾಗಿ ನಿರೂಪಿಸಿದರು. ಇವರ ಪ್ರಕಾರ 'ಅಭಿನವ ಚನ್ದ್ರನ ಮರ್ಮಂ ಭೀಮಪ್ಪಯ್ಯನ ಬೆಳ್ವಲದಣ್ಣಿಗೆಱೆಯ ಜೋಯಿಸ ಸಿಂಘನ ಮರ್ಮ[ಳ್] ವಬ್ಬಣಬ್ಬೆಯ ಮಗಂ' ಎಂದು ಶಾಸನ ಪಾಠವನ್ನು ಸರಿಯಾಗಿ ಓದಿ ಅಭಿನವಚಂದ್ರನ ಮೊಮ್ಮಗನಾದ ಭೀಮಪ್ಪಯ್ಯನ ಬೆಳ್ವಲದಣ್ಣಿಗೆಱೆಯ ಜೋಯಿಸ ಸಿಂಘನ ಮೊಮ್ಮಗಳಾದ ಅಬ್ಬಣಬ್ಬೆಯ ಮಗನಾದ ಜಿನವಲ್ಲಭ ಎಂಬುದನ್ನು ಸಾಬೀತು ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಾ. ಪಿ.ಬಿ. ದೇಸಾಯಿ ಅವರು ಗಂಗಾಧರಂ ಶಾಸನ: ತಿದ್ದುಪಡಿ ಗಡಿಬಿಡಿ ಎಂದು ಲೇಖನ ಬರೆದರು. ಮುಂದೆ ಡಾ.ಕಲಬುರ್ಗಿ ಅವರು ಸ್ವತಃ ಹೈದ್ರಾಬಾದಿಗೆ ಹೋಗಿ ಡಾ. ವೆಂಕಟರಮಣಯ್ಯನವರಲ್ಲಿದ್ದ ಮೂಲ ಶಾಸನಪ್ರತಿಯನ್ನು ಪರಿಶೀಲಿಸಿ ಅಬ್ಬಣಬ್ಬೆ: ಮಗಳಲ್ಲ-ಮೊಮ್ಮಗಳು ಎಂಬ ಇನ್ನೊಂದು ಲೇಖನವನ್ನು ಪ್ರಕಟಿಸಿದರು. ಗಂಗಾಧರಂ ಶಾಸನ : ಕೆಲವು ಹೊಸ ವಿಚಾರಗಳು ಎಂಬ ಲೇಖನದಲ್ಲಿ ಪಂಪನ ತಂದೆಯ ಹೆಸರು ಭೀಮಪ್ಪಯ್ಯ ಅಭಿರಾಮದೇವರಾಯನಲ್ಲ. ಪಂಪಭಾರತ ಪ್ರತಿಯಲ್ಲಿ ಲಿಪಿಕಾರನಿಂದ ಅಶುದ್ಧಪಾಠ ತಾಳಿದೆ. ಅದರ ನಿಜಪಾಠ 'ತಮೋನೀಕಪರಂ ಭೀಮನಾಮಧೇಯಂ ತನಯಂ' ಎಂದು ತಿಳಿಸಿ ಅಣ್ಣಿಗೇರಿಯ ದೇಶಪಾಂಡೆ ಮನೆತನದಲ್ಲಿ ತಲತಲಾಂತರದಿಂದ ಭೀಮಪ್ಪಯ್ಯನ ಹೆಸರು ಉಳಿದು ಬಂದಿರುವುದನ್ನು ಸ್ಪಷ್ಟಪಡಿಸುತ್ತಾರೆ. ಇದೇ ಲೇಖನದಲ್ಲಿ ತೆಲುಗು ಕವಿಗಳಾದ ತಿಕ್ಕನ, ಕೇತನ, ಮಾರನ, ಪೆದ್ದನ ಎಂಬ ಹೆಸರುಗಳಂತೆ ಪಂಪನ ಎಂದು ತೆಲುಗು ರೀತಿಯಲ್ಲಿ ಕರೆದಿರುವ ಸಾಧ್ಯತೆಯ ಕಡೆಗೆ ವಿದ್ವಾಂಸರ ಗಮನವನ್ನು ಸೆಳೆಯುತ್ತಾರೆ. ಜಿನವಲ್ಲಭನ ಗಂಗಾಧರಂ ಶಾಸನದಲ್ಲಿ ಉಲ್ಲೇಖಿತವಾದ "ಬರೆದುದೆ ತಾಂಬ್ರಶಾಸನಮದೇಯಮೆ" ಎಂಬ ಪದ್ಯವನ್ನು ಅದುವರೆಗೂ ಪಂಪನಿಗೆ ಅರಿಕೇಸರಿ ತಾಮ್ರಶಾಸನ ಹಾಕಿಸಿಕೊಟ್ಟಿರಬೇಕೆಂದು ವಿದ್ವಾಂಸರು ನಿರ್ಣಯಿಸಿದ್ದರು. ಈ ಪದ್ಯವನ್ನು ಒಬ್ಬ ಕಾವ್ಯಾಭ್ಯಾಸಿಯಾಗಿ ಓದಿದ ಕಲಬುರ್ಗಿಯವರು "ಪೋಗಿ ನೋಡು ಸುಂದರ ವೃಷಭಾಚಳೋನ್ನತ ಶಿಳಾತಳದೊಳ್ ಬರೆದಕ್ಕರಂಗಳಂ" ಎಂಬ ಮಾತನ್ನು ಹಿಡಿದು ಪಂಪನಿಗೆ ಹಾಕಿಸಿಕೊಟ್ಟ ಧರ್ಮಪುರ ದಾನಶಾಸನ ತಾಮ್ರಶಾಸನವಲ್ಲ; ವೃಷಭಗಿರಿಯ ಇನ್ನೊಂದು ಭಾಗದಲ್ಲಿ ಶಿಲಾಶಾಸನವೇ ಇರಬೇಕು!. ಇದನ್ನು ಶೋಧಿಸಿದ್ದೇ ಆದರೆ ಅರಿಕೇಸರಿಯ ವಂಶಾವಳಿ, ಪಂಪನ ಪೂರ್ವಜರ ವಿವರ, ಪಂಪಭಾರತದ ರಚನಾ ಸಂದರ್ಭ, ಅರಿಕೇಸರಿ ನೀಡಿದ ದಾನವಿವರ ಮುಂತಾದವುಗಳನ್ನು ಅನುಪಲಬ್ದ ಶಾಸನದಲ್ಲಿ ನಿರೀಕ್ಷಿಸಬಹುದಾಗಿದೆ ಎನ್ನುತ್ತಾರೆ. ಹೀಗೆ ಆದಿಕವಿ ಪಂಪನ ಅನೇಕ ಸಂಗತಿಗಳನ್ನು ಬಿಚ್ಚಿಡುವ ಗಂಗಾಧರಂ ಶಾಸನದ ಲೇಖನಗಳು ವಾದ-ವಾಗ್ವಾದಗಳನ್ನು ಸೃಷ್ಟಿಸುತ್ತಲೇ ಕನ್ನಡ ಶಾಸನಗಳ ವಿಶ್ಲೇಷಣೆಯಲ್ಲಿ ಡಾ. ಕಲಬುರ್ಗಿಯವರಿಗೆ ದೊಡ್ಡ ಹೆಸರನ್ನು ತಂದುಕೊಟ್ಟವು.

'ಪಂಪನ ಅಗ್ರಹಾರ-ರನ್ನನ ಬತ್ತಗಾವೆ' ಹೆಸರಿನ ಲೇಖನ ಅಗ್ರಹಾರ ಕುರಿತಾದ ನಮ್ಮ ಕಲ್ಪನೆಯನ್ನೇ ಬದಲಾಯಿಸುತ್ತದೆ. ಅಗ್ರಹಾರವೆಂದರೆ ಬ್ರಾಹ್ಮಣರಿಗೆ ಬಿಟ್ಟ ದತ್ತಿ ಎಂಬುದು ಇಲ್ಲವೇ ಗ್ರಾಮ ಎಂಬುದು ಸಾಮಾನ್ಯ ತಿಳುವಳಿಕೆಯಾಗಿತ್ತು. ಆದರೆ ಜೈನನಾದ ಪಂಪನಿಗೆ ಒಂದು ಗ್ರಾಮವನ್ನು ದಾನವಾಗಿ ಕೊಡುವಾಗ ಧರ್ಮಪುರ ಹೆಸರಿನಲ್ಲಿ ಕೊಟ್ಟಿರಬೇಕು. ಇದರಿಂದ ಅಗ್ರಹಾರ ಸಾಮಾನ್ಯ ಹೆಸರು. ಶೈವರಿಗೆ ಕೊಡುವ ಅಗ್ರಹಾರ ಗ್ರಾಮದ ಹೆಸರು ಶಿವಪುರವೆಂದೂ, ಬ್ರಾಹ್ಮಣರಿಗೆ

ನೀಡುವಾಗ ಬ್ರಹ್ಮಪುರವೆಂದೂ, ಜೈನರಿಗೆ ನೀಡುವಾಗ ಧರ್ಮಪುರವೆಂದೂ ಮರುನಾಮಕರಣ ಮಾಡಿ ಕೊಡುತ್ತಿದ್ದ ಬಗ್ಗೆ ಗಮನ ಸೆಳೆಯುತ್ತಾರೆ. ಅದೇರೀತಿ ರನ್ನನ ಬತ್ತಗಾವೆ ಎಂಬುದು ಭತ್ತ ಬೆಳೆಯುವ ಗ್ರಾಮದಲ್ಲಿ ಸ್ವಂತ ಉಪಯೋಗಕ್ಕೆ ಪಡೆದ ಇನಾಮ ಇಲ್ಲವೇ ಜಹಗೀರು ಗ್ರಾಮ ಎಂದು ಹೇಳಿ. ಈ ಗ್ರಾಮ ಗಂಗರ ಆಶ್ರಯದಲ್ಲಿದ್ದಾಗ ರನ್ನ ಪಡೆದಿಲ್ಲ; ಬದಲಾಗಿ ಕಲ್ಯಾಣಚಾಲುಕ್ಯ ಅರಸ ತೈಲಪನಿಂದ ಪಡೆದಿರಬೇಕು. ಹೀಗಾಗಿ ಸ್ವಗ್ರಾಮ ಮುಧೋಳದ ಸಮೀಪ, ಇಲ್ಲವೇ ಕಲ್ಯಾಣ ಚಾಲುಕ್ಯರ ರಾಜ್ಯಧಾನಿ ಮಾನ್ಯಖೇಡ, ಯಾತಗಿರಿ, ಪೊಟ್ಟಲಕೆರೆ ಭಾಗಗಳಲ್ಲಿರಬಹುದು ಎಂದು ಊಹಿಸುತ್ತಾರೆ. ಅತ್ತಿಮಬ್ಬೆಯ ಶಾಸನ ಮತ್ತು ಬುಕ್ಕರಾಯನ ಶಾಸನ ಎಂಬ ಲೇಖನದಲ್ಲಿ ಜೈನಧರ್ಮ ಪ್ರಸಾರದಲ್ಲಿ ದೊಡ್ಡ ಹೆಸರು ಮಾಡಿದ್ದ ಅತ್ತಿಮಬ್ಬೆ ಜಿನಧರ್ಮ ಪತಾಕೆಯಾಗಿ ಬೆಳೆದದ್ದು ಆಕೆಯ ಗಂಡನ ಮರಣದನಂತರ. ಕೊಪಣನಗರದಷ್ಟೇ ಪ್ರಸಿದ್ಧಿ ಪಡೆಯುವಂತೆ ಲಕ್ಕುಂಡಿಯನ್ನು ಕಟ್ಟಿ ಬೆಳೆಸಿದಳೆಂಬುದನ್ನು "ಕುಪಣದ ದೇವರ ವಲ್ಲಭನ ತೇಜಮನಿತುಂ ನಡೆಗುಂ" ಎಂಬ ಶಾಸನದ ಉಲ್ಲೇಖದಿಂದ ಸ್ಪಷ್ಟಪಡಿಸುತ್ತಾರೆ. ಈಕೆಗೆ ಸಂಬಂಧಿಸಿದಂತೆ ಎರಡು ಶಾಸನಗಳಲ್ಲಿ ಒಂದರ ವಿಸ್ತೃತ ಪಾಠ ಇನ್ನೊಂದು ಎಂಬಂತೆ ಕಂಡರಿಸಲಾಗಿದೆ. ಆ ಎರಡೂ ಶಾಸನಗಳ ಸ್ವರೂಪ-ಆಕಾರ ತೃಟಿತಭಾಗ ಕುರಿತಂತೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಮುಂದುವರಿದು ಎರಡನೆಯ ಶಾಸನ ಹುಟ್ಟಿಕೊಳ್ಳಲಿಕ್ಕೆ ಕಾರಣಗಳನ್ನು ಹುಡುಕುತ್ತಾರೆ. ಅತ್ತಿಮಬ್ಬೆಯ ಬಸದಿಗೆ ದಾನನೀಡಿದ ಬ್ರಾಹ್ಮರು ಅದನ್ನು 'ಬ್ರಹ್ಮ ಜಿನಾಲಯವೆಂದು' ಹೆಸರು ಬದಲಾಯಿಸಿದರು; ಆ ಬಸದಿಯಲ್ಲಿ ಚತುರ್ಮುಖ ಬ್ರಹ್ಮನ ವಿಗ್ರಹ ನಿರ್ಮಿಸಿದರು. ಈ ಕಾರಣವಾಗಿ ಜಿನನಿಷ್ಠವಾದ ಒಂದನೆಯ ಶಾಸನವನ್ನು ಹೊಡೆದು ಹಾಕಿರುವುದಕ್ಕೆ ಮತೀಯ ಸಂಘರ್ಷವೇ ಕಾರಣವೆನ್ನುತ್ತಾರೆ. ಅದೇರೀತಿ ಶ್ರವಣಬೆಳಗೊಳದ ಬುಕ್ಕರಾಯನ ಶಾಸನದ ಬಗ್ಗೆಯೂ ಶ್ರೀವೈಷ್ಣವರ ಜೈನಸ್ಮಾರಕಗಳ ಮೇಲಾದ ದಾಳಿಯೇ ಕಾರಣ. ಕಲ್ಯೆ ಗ್ರಾಮದ ಬುಸವಿಶೆಟ್ಟಿಯ ಜೈನನಿಷ್ಠೆಯನ್ನು ಕಂಡ ಬುಕ್ಕರಾಯ ಎರಡೂ ಧರ್ಮಗಳ ಸಮನ್ವಯ ಬದುಕಿಗೆ ರಾಜಿ ಒಪ್ಪಂದದ ಶಾಸನವನ್ನು ನಿರ್ಮಿಸುತ್ತಾನೆ. ದಾಖಲೆಗಾಗಿ ಈ ಶಾಸನದ ಪ್ರತಿಯನ್ನೆ ಕಲ್ಯೆದಲ್ಲಿ ನಿಲ್ಲಿಸಿದ್ದಾನೆಂದು ಹೇಳುವುದರ ಮೂಲಕ ಕರ್ನಾಟಕದ ಧಾರ್ಮಿಕಚರಿತ್ರೆಯಲ್ಲಿ ವೈದಿಕ-ಜೈನರ ನಡುವಿನ ಮತೀಯ ಸಂಘರ್ಷದ ಇತಿಹಾಸವನ್ನು ಅನಾವರಣಗೊಳಿಸಿದ್ದಾರೆ. ನಾಗಚಂದ್ರ ಕಟ್ಟಿದ ಬಸದಿಗೆ ಸಂಬಂಧಿಸಿದಂತೆ ಡಾ. ಎಂ. ಎಂ. ಕಲಬುರ್ಗಿ ಅವರು ಮೊದಲು ಬಾಬಾ ನಗರದಲ್ಲಿ ಜೀರ್ಣ ಸ್ಥಿತಿಯಲ್ಲಿದ್ದ ಬಸದಿಯೇ ನಾಗಚಂದ್ರನ ಮಲ್ಲಿನಾಥ ಬಸದಿ ಎಂದಿದ್ದರು. ಆಧಾರಗಳು ದೊರೆತಂತೆ ತಮ್ಮ ಅಭಿಪ್ರಾಯವನ್ನು ತಿದ್ದಿಕೊಂಡು 'ವಿಜಾಪುರದಲ್ಲಿ ನಾಗಚಂದ್ರನ ಮಲ್ಲಿನಾಥ ಬಸದಿ' ಎಂಬ ಮತ್ತೊಂದು ಲೇಖನವನ್ನು ಪ್ರಕಟಿಸಿದ್ದಾರೆ. ಕನ್ನಡದ ಶಕ್ತಿಕವಿ ರನ್ನನಿಗೂ ಮತ್ತು ಶ್ರವಣಬೆಳಗೊಳಕ್ಕೂ ಅವಿನಾಭಾವ ಸಂಬಂಧ. ಈ ಸಂಬಂಧದ ದ್ಯೋತಕವಾಗಿ ಅಲ್ಲಿಯ ಚಂದ್ರಗಿರಿ ಬೆಟ್ಟದ ಮೇಲೆ ಬರೆದ ಕವಿ ರನ್ನನ ರುಜುಶಾಸನ ಮತ್ತು ಇಂದ್ರಗಿರಿಯ ಮೇಲಿನ ಸಾವಿಯಬ್ಬೆಯ ಯುದ್ಧಮರಣವನ್ನು ಕುರಿತ ವೀರಗಲ್ಲಿನ ಮೂರು ಪದ್ಯಗಳು ರನ್ನನ ಗದಾಯುದ್ಧ ಹಾಗೂ ಅಜಿತಪುರಾಣದ ಪ್ರಭಾವಕ್ಕೆ ಒಳಗಾದುದ್ದನ್ನು ಶೋಧಿಸಿದ್ದಾರೆ. ಹೀಗೆ ಜೈನಧರ್ಮದ ವ್ಯಕ್ತಿ ಹಾಗೂ ಸ್ಥಳಗಳಿಗೆ ಸಂಬಂಧಿಸಿದ ಶಾಸನೋಕ್ತ ಲೇಖನಗಳನ್ನು ಇಲ್ಲಿ ಗಮನಿಸಬಹುದು.

ಇನ್ನು ಶಿವಶರಣರು ಹಾಗೂ ಶರಣಸ್ಥಳಗಳ ಕುರಿತು ಶಾಸನಗಳ ಮೂಲಕ ಅಧ್ಯಯನ ಮಾಡಿದ ಹಲವಾರು ಲೇಖನಗಳಿವೆ. ಅವುಗಳಲ್ಲಿ ಬಸವಣ್ಣನ ಜೀವನ ಕುರಿತಾದ ಮೂರು ಶಾಸನಗಳು, ಕೊಂಡಗುಳಿ ಕೇಶಿರಾಜನ ಎರಡು ಶಾಸನಗಳು, ನೆಲುವಿಗೆಯ ಶಾಂತಯ್ಯನ ಶಾಸನ, ಉಳಿಯುಮೇಶ್ವರ ಚಿಕ್ಕಯ್ಯನ ಶಾಸನ, ಬೇರೆ ಬೇರೆ ಶರಣರ ಕುರಿತ ಶಾಸನಗಳು, ನಿಂಬಣ್ಣ ದಂಡನಾಥನ ಕುರಿತ ಶಾಸನಗಳು, ಬಸವನಬಾಗೇವಾಡಿ ಕಳೆದು ಹೋದ ಶಾಸನ, ಪುಲಿಗೆರೆಯ ಒಂದು ವೀರಶೈವ ಪೀಠಪರಂಪರೆ ಮುಂತಾದ ಲೇಖನಗಳು ಪ್ರಮುಖವಾಗಿವೆ. ಕ್ರಿ.ಶ. ೧೧೦೭ ರ ಮತ್ತು ೧೧೩೨ ರ ಕಾಲದ ಕೊಂಡುಗುಳಿ ಶಾಸನಗಳಲ್ಲಿ ಕಂಡುಬರುವ ಬಸವಪೂರ್ವಯುಗದ ಸುಪ್ರಸಿದ್ಧ ಶಿವಭಕ್ತನಾದ ಕೊಂಡುಗುಳಿ ಕೇಶಿರಾಜ ಆರನೇ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿದ್ದವನು. ಈತ ದಂಡನಾಯಕ, ಈತ ಕಟ್ಟಿಸಿದನೆನ್ನಲಾದ ಸೋಮೇಶ್ವರ ದೇವಾಲಯ ಹಾಗೂ ಕೇಶವ ದೇವಾಲಯಗಳಿಗೆ ಬಿಟ್ಟ ದಾನದವಿಷಯವನ್ನು ಬೆಳಕಿಗೆ ತಂದಿದ್ದಾರೆ. ಕನ್ನಡಸಾಹಿತ್ಯದಲ್ಲಿ ಬಸವಣ್ಣನನ್ನು ಕುರಿತು ರಚನೆಯಾದ ಕಾವ್ಯಪುರಾಣಗಳ ಪ್ರಮಾಣದಲ್ಲಿ ಇನ್ನಾವ ದಾರ್ಶನಿಕನಿಗೂ ಸಾಹಿತ್ಯ ರಚನೆಯಾಗಿಲ್ಲ. ಅದೇರೀತಿ ಈತನನ್ನು ಕುರಿತು ರಚನೆಯಾದ ಶಾಸನಗಳ ಬಗ್ಗೆ ಅತ್ಯಂತ ಆಸಕ್ತಿ ಮತ್ತು ಕುತೂಹಲ ಹೊಂದಿದ್ದ ಡಾ. ಎಂ. ಎಂ. ಕಲಬುರ್ಗಿ ಅವರು ಅರ್ಜುನವಾಡ, ಚೌಡದಾನಪುರ ಶಾಸನಗಳನ್ನು ಅಧ್ಯಯನ ಮಾಡಿದ್ದಾರೆ. ಶ್ರೀಕಲಿದೇವರಸನ ಮಗ ಹಾಲಬಸವದೇವನಿಗೆ ಕ್ರಿ.ಶ. ೧೨೬೦ ರಲ್ಲಿ ದತ್ತಿಬಿಟ್ಟ ವಿಷಯವನ್ನು ಅರ್ಜುನವಾಡ ಶಾಸನ ತಿಳಿಸುತ್ತದೆ. ಈ ಶಾಸನದ ಮೂಲಕ ಬಸವಣ್ಣನಿಗೆ ದೇವರಾಜಮುನಿಪನೆಂಬ ಹೆಸರಿನ ಅಣ್ಣನಿದ್ದ ಬಗ್ಗೆ ಶಾಸನ ಉಲ್ಲೇಖವನ್ನು ಜನಪದ ಗೀತೆಯೊಂದಿಗೆ ಸಾಬೀತು ಮಾಡಿದ್ದಾರೆ. ಜೊತೆಗೆ ೧೨೦೦ರಲ್ಲಿ ಬಸವಣ್ಣ ಐಕ್ಯನಾದ ಬಗ್ಗೆ ಈ ಶಾಸನ ಆಧಾರವಾಗುತ್ತದೆಂದಿದ್ದಾರೆ. ಅದೇರೀತಿ ಚೌಡದಾನಪುರ ಶಾಸನಗಳು : ಇನ್ನಷ್ಟು ವಿವರಣೆ ಎಂಬ ಲೇಖನ ಶಿವದೇವನ ಮೇಲೆ ಬೆಳಕು ಚೆಲ್ಲುತ್ತದೆ. ಶರಣಸಂಪ್ರದಾಯ–ಶೈವಸಂಪ್ರದಾಯಗಳ ನೆಲೆವೀಡಾದ ಚೌಡದಾನಪುರದಲ್ಲಿ ೮ ಶಾಸನಗಳಿರುವುದನ್ನು ತಿಳಿಸಿ ಶಿವಮುದ್ದುದೇವ–ಶಿವದೇವ–ಜ್ಯೋತಿರ್ನಾಥರ ಉಲ್ಲೇಖವಿದೆ. ಜ್ಯೋತಿರ್ನಾಥನ ಪರಂಪರೆಯಲ್ಲಿ ಬರುವ ಶಿವದೇವ ಬಸವಣ್ಣನನ್ನು ಭಕ್ತಿಯಿಂದ ಕಂಡ ಬಗ್ಗೆ ಇಲ್ಲಿಯ ಎರಡು ಶಾಸನಗಳು ವರ್ಣಿಸುತ್ತವೆ. ಹೀಗಾಗಿ ಮೂಲತಃ ಕಾಳಾಮುಖ ಪರಂಪರೆಯ ಕ್ಷೇತ್ರವಾಗಿದ್ದ ಚೌಡದಾನಪುರ ಶಿವದೇನಿಂದ ಶೈವಕೇಂದ್ರವಾಗಿ ಪರಿವರ್ತನೆ ಹೊಂದಿರುವುದನ್ನು ಶೋಧಿಸಿದ್ದಾರೆ. ಭೂಯಾರದ ೧೧೬೨ರ ಶಾಸನದ ಮೂಲಕ ನೆಲುವಿಗೆ ಶಾಂತಯ್ಯನ ಚರಿತ್ರೆಯನ್ನು ದಾಖಲಿಸಲಾಗಿದೆ. ಶಿವಶರಣರ ಉಲ್ಲೇಖವನ್ನು ಒಳಗೊಂಡ ತಾಳಿಕೋಟಿಯ ಶಾಸನಕ್ಕಿಂತ ಪ್ರಾಚೀನವಾದ ಈ ಶಾಸನದ ಪ್ರಕಾರ ೧೧೮೭ರ ಸಿರಿವಾಳ ಶಾಸನೋಕ್ತ ರೇವಣಸಿದ್ಧಯ್ಯನೆಂಬುವನ ಗುರು ನೆಲುವಿಗೆ ಶಾಂತಯ್ಯನೆಂದು ತಿಳಿಸಿದ್ದಾರೆ. ಅದೇರೀತಿ "ಪುರಾತನ ನೂತನರೆನಿಸಿದ ಅಸಂಖ್ಯಾತಗಣಂಗಳ" ಗುಂಪಿನ ಭೃತ್ಯಾಚಾರದ ವೀರಶರಣರ ಮತ್ತು ಅವರ ಸ್ಥಳಗಳನ್ನು ತಾಳಿಕೋಟಿ ಶಾಸನದ ಮೂಲಕ ಬೆಳಕಿಗೆ ತಂದಿದ್ದಾರೆ. ಹುನಗುಂದದ ಮೂರು ಶಾಸನಾಧಾರದಿಂದ ನವಿಲೆಯ ಜಡೆಯಶಂಕರಲಿಂಗ, ಶಂಕರದಾಸಿಮಯ್ಯನವರನ್ನೂ, ಗುಡ್ಡಾಪುರದ ಶಾಸನದಿಂದ ನಾವಿದಗೆ ಗುಡ್ಡವ್ವೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಸಿಂಧನೂರು ತಾಲೂಕಿನ ದೇವರಗುಡ್ಡ ಗ್ರಾಮದ ಶಾಸನದಲ್ಲಿ ಉಲ್ಲೇಖಿತನಾದ ಉಳಿಯುಮೇಶ್ವರ ಚಿಕ್ಕಯ್ಯನ ಚರಿತ್ರೆಯನ್ನೂ ಮತ್ತು ೧೨ನೆಯ ಶತಮಾನದ ರಾಜಕೀಯ ಧಾರ್ಮಿಕ

ಸ್ಥಿತ್ಯಂತರಗಳನ್ನು ವಿಶ್ಲೇಷಿಸಿದ್ದಾರೆ. ಕರ್ಜಗಿಯವನಾದ ಶರಣ ಗಜೇಶಮಸಣಯ್ಯ ಹೆಸರು ಮತ್ತು ಮುದ್ರಿಕೆಗಳ ಮೂಲ ಪಾಠವನ್ನು ಬ್ಯಾಡಗಿ ತಾಲೂಕಿನ ಹಿರೇಹಳ್ಳಿ ಗ್ರಾಮದ ಗಜೇಶ್ವರ ದೇವಾಲಯದ ಶಾಸನದಿಂದ ಶೋಧಿಸಿದ್ದಾರೆ. ಇದರಿಂದ ಗಜೇಶಮಸಣಯ್ಯನ ಹೆಸರು ಅಂಗಜೇಶಮಸಣಯ್ಯ; ಈತನ ಅಂಕಿತ ಮಹಾಲಿಂಗಾಂಗಜೇಶ್ವರಾ ಎಂದು ದೃಢಪಡಿಸುತ್ತಾರೆ. ನಿಂಬಣ್ಣ ದಂಡನಾಥ : ಇನ್ನಷ್ಟು ಶಾಸನಗಳು ಎಂಬ ಲೇಖನದ ಪ್ರಕಾರ ಈತ ಕೊಂಡುಗುಳಿ ಕೇಶಿರಾಜನ ತಂದೆ; ಈತನ ವ್ಯಕ್ತಿತ್ವವನ್ನು ೧೧೦೭೫ ರ ಬೀಳಗಿ ತಾಲೂಕಿನ ಕೊಪ್ಪ ಹಾಗೂ ೧೧೦೮೬ ರ ಮುದ್ದೇಬಿಹಾಳ ತಾಲೂಕಿನ ತುಂಬಗಿಯ ಶಾಸನಗಳಿಂದ ನಿರೂಪಿಸಿದ್ದಾರೆ. ಬಸವನಬಾಗೇವಾಡಿಯಲ್ಲಿ ಕಳೆದುಹೋದ ಶಾಸನ ಎಂಬುದು ಫ.ಗು. ಹಳಕಟ್ಟಿ ಅವರ ಶಿವಾನುಭವದಲ್ಲಿ ಪ್ರಕಟವಾದ ಲೇಖನದ ವಿಶ್ಲೇಷಣೆಯಾಗಿದೆ. ದೇವಗಿರಿ ಅರಸರ ಮಾಂಡಲಿಕನಾದ ಮಲ್ಲಿಸೆಟ್ಟಿ ಹಾಕಿಸಿರುವ ಈ ಶಾಸನ ಮಗಚೌಡಿಶೆಟ್ಟಿಯ ಅರ್ಜುನವಾಡ ಶಾಸನದಂತೆ ಶುದ್ಧಶೈವ ಬ್ರಾಹ್ಮಣರಾದ ಬಸವಣ್ಣನ ವಂಶಜರನ್ನು ದಾಖಲಿಸುತ್ತದೆ. ಹೀಗೆ ಶರಣರು ಹಾಗೂ ಶರಣ ಸಂಪ್ರದಾಯದ ವ್ಯಕ್ತಿ ಹಾಗೂ ಸ್ಥಳಗಳ ಕುರಿತು ಇಲ್ಲಿಯ ಲೇಖನಗಳು ಚಾರಿತ್ರಿಕವಾಗಿ ಬಿಚ್ಚಿಡುತ್ತವೆ.

ಇನ್ನು ಕವಿ–ಕೃತಿ ಕುರಿತಾದ ಸಾಹಿತ್ಯಿಕ ದೃಷ್ಟಿಯಿಂದ ಶಾಸನಗಳನ್ನು ಕೆಲವು ಲೇಖನಗಳಲ್ಲಿ ಡಾ.ಕಲಬುರ್ಗಿ ಅವರು ನೋಡಿದ್ದಾರೆ. ಕವಿರಾಜಮಾರ್ಗವರೆಗಿನ ಶಾಸನಸಾಹಿತ್ಯ ಎಂಬ ಲೇಖನದಲ್ಲಿ ಕವಿರಾಜಮಾರ್ಗ ಪೂರ್ವದ ಅಜ್ಞಾತಯುಗದಲ್ಲಿ ಸಿಗುವ ಸಾಹಿತ್ಯಸಾಮಗ್ರಿಯೆಂದರೆ ಈ ಶಾಸನಸಾಹಿತ್ಯ. ಕನ್ನಡ ಕವಿಸಾಹಿತ್ಯ ಹಾಗೂ ಶಾಸನಸಾಹಿತ್ಯ ಒಂದಕ್ಕೊಂದು ಕೈ ಕೈ ಹಿಡಿದುಕೊಂಡು ಏಕಕಾಲಕ್ಕೆ ಒಂದು ಘಟ್ಟದಿಂದ ಇನ್ನೊಂದು ಘಟ್ಟಕ್ಕೆ ಹೆಜ್ಜೆ ಇಟ್ಟದ್ದು ಕವಿರಾಜಮಾರ್ಗ ಸಮಯದಲ್ಲಿ ಮಾತ್ರ. ಈ ಅವಧಿಯ ಶಾಸನ ಸಾಹಿತ್ಯವನ್ನು ಎರಡು ನೆಲೆಗಳಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾರೆ. ಅವುಗಳೆಂದರೆ ಪ್ರಾಕೃತ ಶಾಸನಯುಗ, ಸಂಸ್ಕೃತ–ಕನ್ನಡ ಶಾಸನಯುಗ. ಈ ಎರಡೂ ನೆಲೆಗಳಲ್ಲಿ ಕಾಣಸಿಗುವ ಶಾಸನಗಳ ಸಂಖ್ಯೆ ಐದುನೂರು. ಈ ಶಾಸನಗಳ ಲಿಪಿ, ಭಾಷೆ, ಉದ್ದೇಶ, ಸ್ವರೂಪ, ಛಂದಸ್ಸು ಇತ್ಯಾದಿ ಸಂಗತಿಗಳನ್ನು ಚರ್ಚಿಸಿದ್ದಾರೆ. ಶಾಸನಗಳಲ್ಲಿ ಆದಿಗುಣವರ್ಮನ ಪದ್ಯ, ಶಾಸನದಲ್ಲಿ ಆದಿಪುರಾಣದ ಪದ್ಯ, ಶಾಸನದಲ್ಲಿ ಮದನತಿಲಕ ಪದ್ಯ, ಶಾಸನದಲ್ಲಿ ಸೂಕ್ತಿಸುಧಾರ್ಣವ ಪದ್ಯಗಳು, ಶಾಸನದಲ್ಲಿ ಸಿದ್ಧರಾಮನ ವಚನ, ಮೊಲ್ಲೆಬೊಮ್ಮಯ್ಯಗಳ ಕಾವ್ಯ ಮತ್ತು ಶಾಸನಗಳು ಎಂಬ ಲೇಖನಗಳಲ್ಲಿ ಕನ್ನಡದ ಶಾಸನಕರ್ತೃಗಳು ಆಗಾಗ ಕನ್ನಡಕಾವ್ಯಗಳ ಪದ್ಯಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡಿರುವುದನ್ನು ಶೋಧಿಸಿದ್ದಾರೆ. ಇಲ್ಲೆಲ್ಲ ಡಾ. ಕಲಬುರ್ಗಿ ಅವರ ವ್ಯಾಪಕವಾದ ಓದು ಮತ್ತು ಸೂಕ್ಷ್ಮವಾದ ಸಂಶೋಧನ ಗ್ರಹಿಕೆಯನ್ನು ಗುರುತಿಸಬಹುದಾಗಿದೆ. ಆದಿಗುಣವರ್ಮ ಬರೆದನೆನ್ನಲಾದ ಶೂದ್ರಕ ಕಾವ್ಯದ ಪದ್ಯ ಮಾಗಳ, ಶಿವರ, ಬೆಣಕಲ್ಲು ಮತ್ತು ಸೋಗಿ ಶಾಸನಗಳಲ್ಲಿ ಬಳಕೆಯಾಗಿರುವುದಕ್ಕೆ ಗುಣವರ್ಮನ ಸ್ಥಳದ ಸಾಮಿಪ್ಯತೆ ಇಲ್ಲವೇ ಶೂದ್ರಕ ಕಾವ್ಯದ ಪ್ರೀತಿ ಕಾರಣವಾಗಿರಬೇಕು ಎಂದಿದ್ದಾರೆ. ಅದೇರೀತಿ ಆದಿಪುರಾಣದ ಪದ್ಯವೊಂದು ಬೇಲೂರಿನ ಆದಿನಾಥ ಬಸ್ತಿಯ ಬಾಗಿಲುವಾಡದ ಮೇಲೆ ಸ್ತುತಿಗೊಂಡಿದೆ. ಇದರಿಂದ ಆ ಕಾಲಕ್ಕಾಗಲೇ ಇಂಥ ಪದ್ಯಗಳು ಜನತೆಯ ಮೆಚ್ಚುಗೆಯನ್ನು ಪಡೆದಿದ್ದವೆನ್ನುತ್ತಾರೆ. ಪಂಪಭಾರತದ ಪ್ರಥಮ ಆಶ್ವಾಸದ ಪದ್ಯ ೧೫ ರಿಂದ ೫೧ರವರೆಗಿನ ವ್ಯಾಪ್ತಿಯಲ್ಲಿ ೫ ಕಂದ ಪದ್ಯಗಳನ್ನು ಕರೀಂನಗರದ ಶಾಸನಕವಿ

ಆಯ್ದುಕೊಂಡಿರುವುದನ್ನು ಶೋಧಿಸಿದ್ದಾರೆ. ಮುಖ್ಯವಾಗಿ ಬೋಧನ ಚಾಲುಕ್ಯರ ವಂಶಾವಳಿಯನ್ನು ಈ ಪದ್ಯಗಳಲ್ಲಿ ಕಾಣಬಹುದಾಗಿದೆ. ಈಗ ಲಭ್ಯವಾದ ಪಂಪಭಾರತದ ಎರಡುವರೆ ಹಸ್ತಪ್ರತಿಗಳು ಅಷ್ಟು ಪ್ರಾಚೀನವಲ್ಲ. ಹೀಗಾಗಿ ಈ ಶಾಸನದಲ್ಲಿದ್ದ ಪದ್ಯಗಳೇ ಪ್ರಾಚೀನ ಪಾಠವಾಗಿವೆನ್ನುತ್ತಾರೆ. ಚಂದ್ರರಾಜನ ಮದನತಿಲಕ ಒಂದು ಶಾಸ್ತ್ರ ಕೃತಿ–ಈ ಕೃತಿಯ ಪದ್ಯವೊಂದು ಸಿಂದಗಿಯ ೧೧೨೦ ರ ಶಾಸನದಲ್ಲಿ ಉಲ್ಲೇಖಿತವಾಗಿದೆ. ಆದರೆ ಮದನತಿಲಕದ ಪದ್ಯ ವಿಕ್ರಮಾದಿತ್ಯನ ಅಜ್ಜ ಜಯಸಿಂಹನಿಗೆ ಆರೋಪಿತವಾಗಿದ್ದರೆ; ಇದು ವಿಕ್ರಮಾದಿತ್ಯನ ಮಾಂಡಲಿಕ ಸೆಳರಸಿಂಗ ನೃಪನಿಗೆ ಸಂಬಂಧಿಸಿದೆ. ಹಾಸನ ಜಿಲ್ಲೆ ಶಾಂತಿಗ್ರಾಮದ ಶಾಸನದಲ್ಲಿ ಸೂಕ್ತಿಸುಧಾರ್ಣವದ ಎರಡು ಪದ್ಯಗಳನ್ನು ಗುರುತಿಸಿದ್ದಾರೆ. ಹೊನ್ನವಳ್ಳಿ ಕರಿಸಿದ್ಧೇಶ್ವರದೇವರ ಮಠದಲ್ಲಿ ದೊರೆತ ಸಿದ್ಧರಾಮನ ಆರುಸಾವಿರ ವಚನ ಕಟ್ಟಿನಲ್ಲಿ ಅನೇಕ ಹೊಸ ವಚನಗಳಿರುವುದನ್ನು ಗಮನಿಸಿದ ಡಾ. ಕಲಬುರ್ಗಿ ಅವರು, ಅದರಲ್ಲಿಯ ಒಂದು ವಚನ ಸಿದ್ಧರಾಮನ ಶಾಸನೋಕ್ತ ಫಲಶ್ರುತಿಯ ಪಠ್ಯವಾಗಿರುವುದನ್ನು ಶೋಧಿಸಿದ್ದಾರೆ. ಇದೇ ಲೇಖನದಲ್ಲಿ ಸೊಡ್ಡಳ ಬಾಚರಸ ಸೊಲ್ಲಾಪುರಕ್ಕೆ ಹೋಗಿ ಸಿದ್ಧರಾಮನ ದಿವ್ಯವ್ಯಕ್ತಿತ್ವ ಕೊಂಡಾಡುವ ಸಿದ್ಧರಾಮಚರಿತೆಯ ಪದ್ಯ ಸೊಡ್ಡಳ ಬಾಚರಸನ ವಚನವಾಗಿರುವುದನ್ನು ಗುರುತಿಸುತ್ತಾರೆ. ಬಿಜ್ಜಳನನ್ನು ಕೊಂದ ಜಗದೇವ–ಮೊಲ್ಲೆಬೊಮ್ಮಯ್ಯರನ್ನು ಚಿತ್ರಿಸುವ ಮೊಲ್ಲೆ ಬೊಮ್ಮಯ್ಯಗಳ ಕಾವ್ಯವನ್ನು ಕವಿಯ ಊರಾದ ಕಲ್ಲೂರಿನ ೧೩ ಶಾಸನಗಳೊಂದಿಗೆ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಈ ಶಾಸನಗಳಲ್ಲಿ ಎರಡು ನೇರವಾಗಿ ಮೊಲ್ಲೆಬೊಮ್ಮಯ್ಯನಿಗೆ ಸಂಬಂಧಿಸಿರುವುದನ್ನು ಉಲ್ಲೇಖಿಸುತ್ತಾರೆ. ಅದೇರೀತಿ ಕೋಡಿಕೊಪ್ಪದ ಶಾಸನಗಳಿಂದ ಮೊಲ್ಲೆಬೊಮ್ಮಯ್ಯರುಗಳು ಬೇರೆ ಬೇರೆ, ಇದರಲ್ಲಿ ಬಿಜ್ಜಳನನ್ನು ಕೊಂದ ಮೊಲ್ಲೆಬೊಮ್ಮಯ್ಯ ಕಲ್ಲೂರಿನವನು ಈತನದು ಧಾರ್ಮಿಕ ಮನಸ್ಥಿತಿ ಎಂದು ಮುಂತಾಗಿ ವಿಶ್ಲೇಷಿಸುತ್ತಾರೆ.

ಕನ್ನಡಸಾಹಿತ್ಯ ಕೃತಿಗಳು ಅಧ್ಯಯನಕ್ಕೆ ಒಳಪಟ್ಟಂತೆ ಕನ್ನಡಶಾಸನಗಳು ಅಷ್ಟಾಗಿ ಅಧ್ಯಯನಕ್ಕೆ ಒಳಪಡಲಿಲ್ಲ ಇದಕ್ಕೆ ಕಾರಣ ಅವು ರಾಜಾಜ್ಞೆಗಳು, ಆದೇಶಗಳು ಎಂಬ ಮನೋಧರ್ಮ. ಆದರೆ ಡಾ. ಕಲಬುರ್ಗಿ ಅವರು ಶಾಸನ ಸಾಹಿತ್ಯಾಧ್ಯಯನದ ಇತಿಹಾಸ ಕುರಿತಂತೆ ಶಾಸನ ಕವಿಗಳು, ಲಿಪಿಕಾರರು, ರೂವಾರಿಗಳು, ಶಾಸನಭಾಷೆ, ಲಿಪಿ, ಪರಿಭಾಷೆ, ಛಂದಸ್ಸು ಮುಂತಾಗಿ ಚರ್ಚಿಸುವುದರ ಮೂಲಕ ಕನ್ನಡ ಶಾಸನಮೀಮಾಂಸೆಯ ಅಥವಾ ವಿಮರ್ಶೆಯ ಹೊಸ ಅಧ್ಯಯನಕ್ಕೆ ದಾರಿಮಾಡಿ ತೋರಿಸಿದ್ದಾರೆ. ಕನ್ನಡ ಶಾಸನಪ್ರಪಂಚಕ್ಕೆ ಸಾಹಿತ್ಯ ದೃಷ್ಟಿಯಿಂದ ಭಾರತೀಯ ಮಹತ್ವವನ್ನು ತಂದುಕೊಟ್ಟವರು ಶಾಸನಕವಿಗಳು. ಇವರನ್ನು ಹೊರತುಪಡಿಸಿದ ಕವಿಚರಿತೆ ಅಪೂರ್ಣವಾದದ್ದು. "ನಿರ್ಮಿಸಿದಂ ಕವಿನಾಗದೇವನೀ ಶಾಸನಮಂ" ಎಂಬ ಉಲ್ಲೇಖಗಳು ಶಾಸನಕವಿಗಳನ್ನು ನಿರ್ದೇಶಿಸುತ್ತವೆ. ಇಂಥ ಅನೇಕ ಶಾಸನಗಳನ್ನು ಪರಿಶೋಧಿಸಿ ಶಾಸನಕವಿಚರಿತೆ ಬರೆಯುವುದಕ್ಕೆ ಸಾಧ್ಯವಿದೆ ಎನ್ನುತ್ತಾರೆ. ಇನ್ನೊಂದು ಲೇಖನ 'ಶಾಸನ ಲಿಪಿಕಾರರು' ಕನ್ನಡ ನಾಡಿನ ಶಾಸನ ಉತ್ಪಾದನೆಯಲ್ಲಿ ಇವರ ಪಾತ್ರ ಅಮೋಘವಾದದ್ದು. ಅಕ್ಷರಗಳ ಅವಯವಜ್ಞಾನ, ಪ್ರಮಾಣಜ್ಞಾನ, ಸೌಂದರ್ಯಪ್ರಜ್ಞೆ, ಚರಣವಿನ್ಯಾಸ, ಲಿಪಿಸೂಕ್ಷ್ಮತೆಯಿಂದ ಇವರ ಸಾಮರ್ಥ್ಯವನ್ನು ದಾಖಲಿಸುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ. 'ಪ್ರತಿಶಾಸನವ ನೋಡಬರದ ಆಚಾರಿ ಮನೋಜ' ಎಂಬ ಹೇಳಿಕೆಗಳು ಶಾಸನ ಲಿಪಿಕಾರರನ್ನು ನಿರ್ದೇಶಿಸುತ್ತವೆ. ಇನ್ನು ಶಾಸನ ರೂವಾರಿಗಳು ಎಂಬ ಲೇಖನದಲ್ಲಿ

ಇವರ ಕಲಾಪ್ರಜ್ಞೆ, ಸಾಮಾಜಿಕ ಗೌರವ, ಆತ್ಮ ಪ್ರಶಂಸೆ, ಪರಂಪರೆ ಎಲ್ಲವನ್ನೂ ದಾಖಲಿಸಬಹುದಾಗಿದೆ ಎಂದಿದ್ದಾರೆ. "ಕಲ್ಕುಟಿಗ ಸಾತೋಜಂ ಕಣ್ಡರಿಸಿದ" ಎಂಬ ಉಲ್ಲೇಖಗಳು ಶಾಸನ ರೂವಾರಿಗಳನ್ನು ನಿರ್ದೇಶಿಸುತ್ತವೆ ಎನ್ನುತ್ತಾರೆ. ಶಾಸನಸಾಹಿತ್ಯ ಎಂಬ ಲೇಖನದಲ್ಲಿ ಉತ್ತಮವಾದ ಸಾಹಿತ್ಯ ಗುಣಗಳನ್ನು ಹೊಂದಿರುವ ಶಾಸನಗಳಿಗೆ ಗ್ರಂಥಪರಿಷ್ಕರಣೆ, ಪ್ರಕಟನೆ, ಹಾಗೂ ಅಧ್ಯಯನಕ್ಕೆ ಕೊಟ್ಟಂಥ ಮಹತ್ವವನ್ನು ಕೊಟ್ಟಿಲ್ಲವೆನ್ನುತ್ತಾರೆ; ಕನ್ನಡಸಾಹಿತ್ಯ ಚರಿತ್ರೆಯ ಘಟ್ಟವನ್ನು ಗುರುತಿಸುವಂತೆ ನೃಪತುಂಗಪೂರ್ವಯುಗ, ನೃಪತುಂಗೋತ್ತರಯುಗ ಮತ್ತು ವಿಜಯನಗರಯುಗ ಎಂದು ಗುರುತಿಸುವರಲ್ಲದೆ; ಮೊದಲನೆಯದು ಪ್ರಾರಂಭಯುಗ, ಎರಡನೆಯದು ಪ್ರೌಢಯುಗ, ಮೂರನೆಯದು ಪತನಯುಗ ಎಂದು ಶಾಸನ ಚರಿತ್ರೆಯನ್ನು ನಿರೂಪಿಸುತ್ತಾರೆ. ಶಾಸನಛಂದಸ್ಸು ಲೇಖನದಲ್ಲಿ ಅಂಶಗಣಾನ್ವಿತ ಪಿರಿಯಕ್ಕರ, ತ್ರಿಪದಿ, ರಗಳೆ, ಷಟ್ಪದಿ, ವೃತ್ತ, ಕಂದಗಳು ಬಳಕೆಯಾದುದನ್ನು ಬಿಡಿಸಿ ತೋರಿಸಿದ್ದಾರೆ. ಶಾಸನಭಾಷೆ ಎಂಬ ಲೇಖನದಲ್ಲಿ ಕನ್ನಡ ಭಾಷೆಯ ನಾಲ್ಕೂ ಘಟ್ಟಗಳನ್ನು ತೌಲನಿಕವಾಗಿ ಮತ್ತು ಐತಿಹಾಸಿಕವಾಗಿ ಅಧ್ಯಯನ ಮಾಡುವ ಅಗತ್ಯವನ್ನು ವಿವರಿಸಿದ್ದಾರೆ. ಇದರಿಂದ ಶಾಸನಗಳ ಕಾಲನಿರ್ಣಯವನ್ನು ತಿಳಿಯಲು ಸಹಕಾರಿಯಾಗಬಹುದು ಎನ್ನುತ್ತಾರೆ. ಶಾಸನ ಪರಿಭಾಷೆಗಳಲ್ಲಿ ಚಕ್ರವರ್ತಿ, ಸಾರ್ವಭೌಮ, ಸಾಮಂತ-ಮಹಾಸಾಮಂತ, ಕುಮಾರವೃತ್ತಿ, ಅಚಳವೃತ್ತಿ, ಏಕಭೋಗ ಇತ್ಯಾದಿ ಪರಿಭಾಷೆಗಳನ್ನು ಕುರಿತು ಚರ್ಚಿಸಿದ್ದಾರೆ. ಪ್ರಾಚೀನ ಭಾರತದ ಏಕೈಕಲಿಪಿ ಬ್ರಾಹ್ಮಿ. ಇದು ಹಲವು ರೀತಿಯಲ್ಲಿ ರೂಪ ಧರಿಸಲು ನದಿ, ಅರಣ್ಯ, ಪರ್ವತ, ಪ್ರಾಂತಭೇದಗಳು ಕಾರಣವಾಗಿವೆನ್ನುತ್ತಾರೆ. ಇಲ್ಲೆಲ್ಲ ಒಂದು ಕಾವ್ಯ ಕೃತಿಯನ್ನು ಹಲವು ಮಗ್ಗಲುಗಳಲ್ಲಿ ಅಧ್ಯಯನ ಮಾಡಿದಂತೆ ಶಾಸನಗಳನ್ನು ಅಧ್ಯಯನ ಮಾಡಿರುವುದು ಅವರ ಆಳವಾದ ಓದು ಮತ್ತು ಪಾಂಡಿತ್ಯಕ್ಕೆ ನಿದರ್ಶನವಾಗಿದೆ.

ಕೊನೆಯದಾಗಿ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಇಲ್ಲಿಯ ಕೆಲವು ಲೇಖನಗಳನ್ನು ನಿರ್ವಚಿಸಿದ್ದಾರೆ. ಪುಲಿಗೆರೆಯ ಒಂದು ವೀರಶೈವಪೀಠ ಪರಂಪರೆ, ಶಿಲ್ಪಗಳಲ್ಲಿ ಶಿವಶರಣರು, ಬಸವಣ್ಣನ ವಿಗ್ರಹ, ಗುಂಡಬ್ರಹ್ಮಯ್ಯಗಳ ವಿಗ್ರಹ, ಚಿತ್ರದುರ್ಗದ ಪ್ರಾಚೀನಹೆಸರು, ಕೀಳ್ಗುಂಟಿ-ವೇಳವಾಳಿ-ಲೆಂಕವಾಳಿ-ಗರುಡ, ಅಣ್ಣಿಗೇರಿ ಶಾಸನೋಕ್ತ ವೀರಗೊಗ್ಗಿದೇವ, ಚಾಗದಕಂಬ-ಬೀರದಶಾಸನ, ಶಾಸನಗಳಲ್ಲಿ ಬಸವಪೂರ್ವ-ಬಸವೋತ್ತರಕಾಲದ ಶೈವಸ್ವರೂಪ, ಶಾಸನದಲ್ಲಿ ಬಾದುಬ್ಬೆ: ಇನ್ನಷ್ಟು ವಿಚಾರಗಳು, ಶಾಸನೋಕ್ತ ಶೈವರ ವ್ಯಾಸಂಗ-ಸಿದ್ಧಾಂತ ಮತ್ತು ಪಥ್ಯ, ಇತ್ಯಾದಿ ಲೇಖನಗಳನ್ನು ನೋಡಬಹುದು. 'ಹಲ್ಮಿಡಿಶಾಸನದ ಪ್ರೇಮಾಲಯ ಸುತನ್' ಎಂಬ ಲೇಖನದಲ್ಲಿ ಪ್ರೀತಿಯಮಗ ಎಂಬ ಸಾಮಾನ್ಯ ಸರಳ ಅರ್ಥಕ್ಕಿಂತ ಪೊರೆದ ಮಗನ್, ವೇಳವಾಳಿ, ಲೆಂಕವಾಳಿ, ಪ್ರಿಯಸುತನ್, ಮನೆಮಗನ್ ಎಂಬ ಸಾಂಸ್ಕೃತಿಕವಾದ ಅರ್ಥ ನಿರ್ವಚನ ಮಾಡಿದ್ದಾರೆ. ಬಾದಾಮಿ ಶಾಸನೋಕ್ತ ಕಪ್ಪೆ ಅರಭಟ್ಟನ್ ಎಂಬುದು ಕಪ್ಪೆಯರ ಭಟ್ಟ ಅಲ್ಲ, ಕಪ್ಪೆ ಅರಭಟ್ಟನ್ ಸರಿಯಾದುದು. ಕಪ್ಪೆ-ಕಪಲಿ ಹೆಸರಿನ ಮನೆತನಗಳು ಶಾಸನಗಳಲ್ಲಿ ಉಲ್ಲೇಖಿತವಾಗಿರುವುದನ್ನು ಸ್ಪಷ್ಟಪಡಿಸುತ್ತಾರೆ. ಗೋಸಾಸ ಎಂಬ ಪದದ ಅರ್ಥ ನಿಷ್ಪತ್ತಿಯನ್ನು ೨೯ ಶಾಸನಗಳ ಆಧಾರದಿಂದ ಶೋಧಿಸಿ ಇದೊಂದು ಗೋಸಹಸ್ರ ದಾನ ಪ್ರಕಾರ ಎಂದು ನಿರ್ಣಯಿಸಿದ್ದಾರೆ. ವೀರ-ಮಾಸ್ತಿ-ನಿಷಧಿಗಳಂತೆ ಗೋಸಾಸಗಲ್ಲು ಕುರಿತು ಪ್ರತ್ಯೇಕ ಅಧ್ಯಯನದ ಕಡೆಗೆ ಒತ್ತು ನೀಡಲು ಸೂಚಿಸುತ್ತಾರೆ. ಕೀಳ್ಗುಂಟಿ-ವೇಳವಾಳಿ-ಲೆಂಕವಾಳಿ-ಗರುಡ ಈ ಪರಿಭಾಷೆಗಳು ಕಾಲದಿಂದ ಕಾಲಕ್ಕೆ ಪರಿವರ್ತನೆಯಾದ

ರೀತಿಯನ್ನು ಶಾಸನಗಳ ಸಹಾಯದಿಂದ ವಿವರಿಸುತ್ತಾರೆ. ಸತಿಪದ್ಧತಿ ಸಹಗಮನವಾದರೆ; ವ್ಯಕ್ತಿಗಾಗಿ ಪ್ರಿಯವ್ಯಕ್ತಿಯ ಆತ್ಮಬಲಿದಾನ ಮಾಡಿಕೊಳ್ಳುವುದು ಕಿಳ್ಗುಂಟಿಯಾಗುತ್ತದೆ; ವೈರಿಯೊಂದಿಗೆ ಹೋರಾಡಿ ಜಯಿಸುವ ಇಲ್ಲವೆ ಸಾಯುವವ ಜೋಳವಾಳಿ, ಪರರ ಹಿತಕ್ಕಾಗಿ ತಾನೇ ಜೀವತ್ಯಾಗ ಮಾಡುವುದು ಲೆಂಕವಾಳಿ, ಗರುಡವೆಂಬುದು ಅನುಯಾಯಿ, ಸೇವಕ ಎಂಬರ್ಥಗಳಿರುವುದನ್ನು ಪ್ರತಿಪಾದಿಸುತ್ತಾರೆ. ಶಾಸನೋಕ್ತ ಕೆಲವು ಪದಗಳಾದ ಹದಿನೆಂಟು ಸಂತತಿ ಎಂಬ ಪದಕ್ಕೆ "ಪದಿನೆಣ್ಬರ್ ಪ್ರಧಾನರೆನಿಕುಂ" ಎಂಬ ಮಂಗರಾಜನ ನಿಘಂಟು ಮತ್ತು ಮುತ್ತುಗಿ, ಯಡ್ರಾಮಿ ಶಾಸನಗಳ ಉಲ್ಲೇಖದಿಂದ ೧೮ ಸದಸ್ಯರ ಸಮಿತಿ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ದೇವರಿಗೆ ದತ್ತಿಬಿಟ್ಟ ಹೊಲ-ಮನೆಗಳನ್ನು ತಾವು ಭೋಗಿಸುತ್ತಾ ಪ್ರತಿಯಾಗಿ ವಾರ್ಷಿಕವಾಗಿ ಕೊಡುವ ಧನ 'ಅರುವಣ' ಎಂದೂ, ನೆಲ ಅರ್ಥದ ಬೀಡು ಪದದಿಂದ ಬೀಟುವೃತ್ತಿ ಬಂದಿದೆಂದೂ ಹೇಳುತ್ತಾರೆ. ಚಿತ್ರದುರ್ಗದ ಪದನಿಷ್ಪತ್ತಿಯನ್ನು ಸಿದ್ಧರಕಲ್ಲು>ಚಿತ್ತರಕಲ್ಲು>ಚಿತ್ರಕಲ್ಲು>ಚಿತ್ರಕಲ್ಲುದುರ್ಗ>ಚಿತ್ರದುರ್ಗ ಎಂದು ನಿಖರವಾಗಿ ಪ್ರತಿಪಾದಿಸಿದ್ದಾರೆ.

ವೀರಶೈವ ಮತ್ತು ಲಿಂಗಾಯತ ಧಾರ್ಮಿಕ ಪರಂಪರೆಯನ್ನು ಮತ್ತು ಇತಿಹಾಸವನ್ನು ಹಾಗೂ ಸಿದ್ಧಾಂತಗಳನ್ನು ಅಧ್ಯಯನ ಮಾಡಲಿಕ್ಕೆ ಶಾಸನಗಳು ಆಕರಗಳಾಗುತ್ತವೆಂಬುದಕ್ಕೆ ಡಾ. ಕಲಬುರ್ಗಿ ಅವರ ಇಲ್ಲಿಯ ಲೇಖನಗಳು ನಿದರ್ಶನವಾಗಿವೆ. ಪುಲಿಗೆರೆಯ ಒಂದು ವೀರಶೈವಪೀಠ ಪರಂಪರೆ ಎಂಬ ಲೇಖನ ಆದಯ್ಯ, ಸೋಮೇಶ್ವರ ಶತಕದ ಸೋಮ, ಸುರಂಗ, ಜಕ್ಕಣಾರ್ಯ ಈತನ ಗುರು ಮಹಾಲಿಂಗದೇವ, ಈತನ ಶಿಷ್ಯ ಕುಮಾರಬಂಕನಾಥ ಮುಂತಾದವರು ಈ ಪೀಠ ಪರಂಪರೆಯವರು ಎನ್ನುತ್ತಾರೆ. ಇದಕ್ಕೆ "ಪುಲಿಗೆರೆಯೆನಿಪ ಪುರದ ವೀರಮಾಹೇಶ್ವರರ ಚರಣಾಂಬುಜಕೆ ಶರಣು" ಎಂಬ ಲಕ್ಕಣ್ಣದಂಡೇಶನ ಸ್ತುತಿಯಿಂದ ಈ ಪೀಠದ ಪರಂಪರೆಯ ಸ್ಪಷ್ಟತೆಯನ್ನು ನಿರೂಪಿಸಿದ್ದಾರೆ. ಕೊಲ್ಲಿಪಾಕೆಯ ಕನ್ನಡ ಶಾಸನಗಳು: ಧಾರ್ಮಿಕತೆ ಎಂಬ ಲೇಖನದಲ್ಲಿ ೩೬ ಕನ್ನಡಶಾಸನಗಳ ಅಧ್ಯಯನ ನಡೆಸಿ ಅಲ್ಲಿಯ ಧಾರ್ಮಿಕ ಚಟುವಟಿಕೆಗಳನ್ನು ನಿರೂಪಿಸಿದ್ದಾರೆ. ಜೈನ, ವೈಷ್ಣವ, ಶೈವಕೇಂದ್ರವಾಗಿದ್ದ ಇಲ್ಲಿ ಶೈವಶಾಸನಗಳೇ ಅಧಿಕ. ಇವುಗಳಲ್ಲಿ ಉತ್ತರೇಶ್ವರ, ಮಲ್ಲಿಕಾರ್ಜುನ, ಸೋಮೇಶ್ವರ ಹೆಸರಿನ ದೇವಾಲಯಗಳು, ಅವುಗಳ ಕಾಲವಿಚಾರ, ನೀಡಿದದತ್ತಿ ಕುರಿತು ಉಲ್ಲೇಖಗಳಿವೆಯೇ ಹೊರತು ಯಾವ ಆಚಾರ್ಯರ ಹೆಸರೂ ಇರುವುದಿಲ್ಲ. ಬಹುಶಃ ಕಲ್ಯಾಣಚಾಲುಕ್ಯರ ೧ನೆಯ ಅಥವಾ ೨ನೆಯ ಸೋಮೇಶ್ವರನ ಹೆಸರಿನಲ್ಲಿ ಸ್ಥಾಪಿತವಾದ ಸೋಮೇಶ್ವರಲಿಂಗದ ಕಾಲ ೧೦೪೨-೬೮ ಹೀಗಾಗಿ ಲಿಂಗೋದ್ಭವ ರೇಣುಕರ ಪ್ರಾಚೀನತೆಯ ಕಲ್ಪನೆ ಈ ಕಾಲಮಿತಿಗಿಂತ ಹಿಂದಕ್ಕೆ ಹೋಗಲಾರದು. ಸಾಮಾಜಿಕ ಕಾರ್ಯಗಳಿಗೆ ನೀಡಿದ ದತ್ತಿಗಳನ್ನು ಇಲ್ಲಿಯ ಶಾಸನಗಳು ಒಳಗೊಂಡಿವೆ. ಅದೇರೀತಿ ಶಾಸನಗಳಲ್ಲಿ ಬಸವಪೂರ್ವ-ಬಸವೋತ್ತರ ಕಾಲದ ಶೈವಸ್ವರೂಪ ಎಂಬ ಲೇಖನ ನಕುಲೀಶ, ಪಾಶುಪತ, ಮಹಾವ್ರತಿ, ಶೈವ ಇವು ಬಸವಪೂರ್ವದಲ್ಲಿ ವೈದಿಕ ಸಿದ್ಧಾಂತ ಮುಖಿಯಾಗಿದ್ದರೆ; ಬಸವೋತ್ತರ ಕಾಲದಲ್ಲಿ ಶರಣಸಿದ್ಧಾಂತ ಮುಖಿಯಾಗಿರುವ ಹೆಜ್ಜೆಗುರುತುಗಳನ್ನು ಶಾಸನಗಳ ಮೂಲಕ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಶಾಸನೋಕ್ತ ಶೈವಪ್ರಶಸ್ತಿ ಪಠ್ಯಗಳು ಎಂಬ ಲೇಖನ ನಕುಲೀಶಶೈವ, ಪಾಶುಪತಶೈವ, ಮಹಾವ್ರತಿಶೈವ, ಶ್ರೋತ್ರೀಯಶೈವರ ಪ್ರಶಸ್ತಿಗಳನ್ನು ಸಂಗ್ರಹಿಸಿ ಆಯಾ ಧರ್ಮದ ಸಿದ್ಧಾಂತಸ್ವರೂಪ, ಭೌಗೋಳಿಕ ವ್ಯಾಪ್ತಿ, ಐತಿಹಾಸಿಕ ಪ್ರಗತಿ-ಮಿತಿಗಳನ್ನು ಚರ್ಚಿಸಿದ್ದಾರೆ. ಇವೇ

ಪಂಥಗಳ ವ್ಯಾಸಂಗ, ಸಿದ್ಧಾಂತ ಮತ್ತು ಪಠ್ಯಗಳನ್ನು ಕುರಿತ ಲೇಖನದಲ್ಲಿ ಚತುರ್ವೇದ, ಕೌಮಾರ, ಪಾಣಿನೀಯ, ಶಾಕಟಾಯನ, ಶಬ್ದಾನುಶಾಸನಾದಿ ವ್ಯಾಕರಣ, ನ್ಯಾಯ, ವೈಶೇಷಿಕ, ಮೀಮಾಂಸ, ಸಂಖ್ಯಾ, ದರ್ಶನ ಇತ್ಯಾದಿ ವ್ಯಾಸಂಗ ವಿಷಯಗಳನ್ನು ಮತ್ತು ನಿರ್ದಿಷ್ಟ ಜ್ಞಾನವೆನಿಸಿದ ಸಿದ್ಧಾಂತಗಳನ್ನು, ನಂದಿಕೇಶ್ವರ ಲಾಕುಳಾಮಗಳಂಥ ಪಠ್ಯಗಳನ್ನು ಪರಿಚಯಿಸುತ್ತಾರೆ. ಶಾಸನಗಳಲ್ಲಿ ಬಾದುಬ್ಬೆ: ಇನ್ನಷ್ಟು ವಿಚಾರಗಳು ಹೆಸರಿನ ಲೇಖನದಲ್ಲಿ ಬಾದುಬ್ಬೆಯ ವಿಚಾರವನ್ನು ಬಾದಾಮಿ ಅಮವಾಸ್ಯೆಯ ಹಿನ್ನೆಲೆಯಲ್ಲಿ ಶೋಧಿಸುತ್ತಾರೆ– ಹೀಗೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ನಿರೂಪಿಸುವಲ್ಲಿ ಇಲ್ಲಿಯ ಲೇಖನಗಳು ಮಹತ್ವದ್ದಾಗಿವೆ. ಸಾಹಿತ್ಯ, ಶಿಲ್ಪ, ಪಂಥ, ಆಚರಣೆ, ಸಂಪ್ರದಾಯ, ಇತಿಹಾಸ ಹೀಗೆ ಬಹುಮೂಲದ ಅಧ್ಯಯನವನ್ನು ಶಾಸನಗಳ ಮೂಲಕ ಮಾಡಿರುವುದನ್ನು ಇಲ್ಲಿಯ ಲೇಖನಗಳು ಸಾರಿ ಹೇಳುತ್ತವೆ.

ಶಾಸನಗಳು ಪ್ರಾಚೀನ ಬದುಕಿನ ಸಮಸ್ತಸಂವೇದನೆಗಳ ಪ್ರಾಮಾಣಿಕ ಧ್ವನಿ. ಇವುಗಳ ಅಧ್ಯಯನ ಹಲವು ದೃಷ್ಟಿಗಳಿಂದ ಪ್ರಯೋಜಕವೆನಿಸಿದೆ. ಸಾಮಾನ್ಯರ ಸಹಜಭಾಷೆ, ಕವಿಗಳ ಕಾವ್ಯಭಾಷೆ, ಪ್ರತಿನಿಧಿಸುತ್ತ ಸಾಗಿಬಂದ ಇವನ್ನು ಹೊರತುಪಡಿಸಿ ಬರೆದ ಭಾಷಾಚರಿತ್ರೆ, ಸಾಹಿತ್ಯಚರಿತ್ರೆಗಳು ಅಪೂರ್ಣವೆಂದಿದ್ದಾರೆ. ದುರ್ದೈವದಿಂದ ನಮ್ಮ ನಾಡಿನ ಶಾಸನ, ಶಾಸನಶಿಲ್ಪ, ಸಾಹಿತ್ಯ, ಚಿತ್ರಗಳು ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಒಂದು ಕಾಲದ ಜನಬದುಕನ್ನು ಪ್ರತಿಬಿಂಬಿಸುವ ಶಾಸನ ಪಠ್ಯಗಳನ್ನು ಚಿತ್ರಸಮೇತ ಸಂಪಾದಿಸುವ, ವಿವೇಚಿಸುವ ಮೂಲಕ ಚಾರಿತ್ರಿಕ, ಸಾಹಿತ್ಯಿಕ, ಸಾಂಸ್ಕೃತಿಕ ಅಧ್ಯಯನ ಮಾಡುವುದರ ಕಡೆಗೆ ಇಲ್ಲಿಯ ಲೇಖನಗಳು ತೋರ್ಬೆರಳಾಗಿವೆ.

ಕೃತಜ್ಞತೆಗಳು

ಡಾ. ಎಂ. ಎಂ. ಕಲಬುರ್ಗಿ ಸಮಗ್ರಸಾಹಿತ್ಯ ಪ್ರಕಟನೆ ಯೋಜನೆಯಲ್ಲಿ ಅವರ ಮಾರ್ಗಸಂಪುಟಗಳ ಲೇಖನಗಳ ಸಂಪಾದನೆಗೆ ಅವಕಾಶ ದೊರೆತದ್ದು ನನ್ನ ಭಾಗ್ಯ. ದುರ್ದೈವದ ಸಂಗತಿಯೆಂದರೆ ಶ್ರೀಯುತರ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆಯನ್ನು ಇಷ್ಟುಬೇಗ ಕೈಗೆತ್ತಿಕೊಳ್ಳುತ್ತೇವೆಂದು ನಾವು ಊಹಿಸಿರಲಿಲ್ಲ. ಅನಿರೀಕ್ಷಿತ ಬೆಳವಣಿಗೆಗಳು ನಮ್ಮಿಂದ ಡಾ. ಎಂ.ಎಂ.ಕಲಬುರ್ಗಿ ಅವರನ್ನು ದೂರ ಮಾಡಿದವು. ನಮ್ಮ ಬರವಣಿಗೆಗೆ ಸಾಕ್ಷಿಪ್ರಜ್ಞೆಯಾಗಿದ್ದ ಅವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ಡಾ. ಎಂ.ಎಂ.ಕಲಬುರ್ಗಿ ಅವರ ಉತ್ತರಾಧಿಕಾರಿಗಳಾದ ಡಾ. ವೀರಣ್ಣ ರಾಜೂರ ಅವರು ಈ ಯೋಜನೆಯ ಪ್ರಧಾನ ಸಂಪಾದಕರು. ಅವರ ಮಾರ್ಗದರ್ಶನ ನನ್ನ ಕೆಲಸಕ್ಕೆ ಶ್ರೀರಕ್ಷೆ. ಅದೇರೀತಿ ಮಾತೃ ಸ್ವರೂಪಿಗಳಾದ ಶ್ರೀಮತಿ ಉಮಾದೇವಿ ಕಲಬುರ್ಗಿಯವರು. ಇವರೀರ್ವರಿಗೂ ನನ್ನ ಅನಂತ ವಂದನೆಗಳು. ಯೋಜನೆಯನ್ನು ರೂಪಿಸಿದ ವಿಜಯಪುರದ ಬಿ.ಎಲ್.ಡಿ.ಈ ಸಂಸ್ಥೆಯ ಅಧ್ಯಕ್ಷರಿಗೂ, ಪದಾಧಿಕಾರಿಗಳಿಗೂ, ಸಂಪಾದನ ಕಾರ್ಯದಲ್ಲಿ ನೆರವಾದ ಗೆಳೆಯ ಡಾ.ಪಿ.ಕೆ.ರಾಠೋಡ ಹಾಗೂ ವಿದ್ಯಾರ್ಥಿ ಮಿತ್ರರಾದ ಡಾ. ಕಾಂತೇಶರಡ್ಡಿ ಗೋಡಿಹಾಳ, ಶ್ರೀ ಟಿ. ಎಸ್. ಮಠದ, ಮತ್ತು ಡಾ.ಕೆ.ಆರ್.ಕೇಶವಮೂರ್ತಿ ಅವರಿಗೂ ಅಕ್ಷರ ಜೋಡಣೆ ಮಾಡಿದ ಗೆಳೆಯರಾದ ಡಾ. ಹನುಮಂತ ಮೇಲಿನಮನಿ ಹಾಗೂ ಡಾ. ಸರಸ್ವತಿದೇವಿ ಭಗವತಿ ಅವರಿಗೆ ಕೃತಜ್ಞತೆಗಳು.

ಹತ್ತೂ ಕಡೆ ಹಂಚಿಹೋಗಿದ್ದ ಲೇಖನಗಳನ್ನು ವಿಷಯಾನುಕ್ರಮದಲ್ಲಿ ಜೋಡಿಸುವುದು ದುಸ್ತರವಾದ ಕಾರ್ಯ. ಬಹುಶಿಸ್ತೀಯ ಅಧ್ಯಯನಕಾರರಾದ ಡಾ. ಎಂ.ಎಂ.ಕಲಬುರ್ಗಿ ಅವರು ಒಂದು ಲೇಖನದಲ್ಲಿ ಹತ್ತಾರು ವಿಷಯಗಳನ್ನು ಚರ್ಚಿಸಿದ್ದಾರೆ. ಹೀಗಾಗಿ ವರ್ಗೀಕರಣದಲ್ಲಿ ಸಮಸ್ಯೆಗಳು ಎದುರಾಗಿರುವುದು ಸಹಜ. ಈ ಕಾರ್ಯ ಆಧುನಿಕ ಗ್ರಂಥಸಂಪಾದನ ಶಾಸ್ತ್ರದ ವೈಧಾನಿಕತೆಯಾಗಿ ನನಗೆ ಅನುಭವ ತಂದುಕೊಟ್ಟಿತು. ಇಲ್ಲಿಯ ದೋಷಗಳನ್ನು ಮಿತಿಗಳೆಂದು ಪರಿಭಾವಿಸಿ ಈ ಸಂಪುಟವನ್ನು ವಿದ್ವಜ್ಜನತೆ ಪ್ರೀತಿಯಿಂದ ಸ್ವೀಕರಿಸುತ್ತೀರೆಂಬ ಭಾವನೆ ನನ್ನದು.

❖❖

*

ಪರಿವಿಡಿ

■■

೧

ಹಲ್ಮಿಡಿ ಶಾಸನದ ಪ್ರೇಮಾಲಯಸುತನ್

೧೯೩೦ರಲ್ಲಿ ಡಾ. ಎಂ.ಎಚ್. ಕೃಷ್ಣ ಅವರಿಂದ ಬೆಳಕಿಗೆ ಬಂದು, ಆಗ ಓದಲ್ಪಟ್ಟ ಹಲ್ಮಿಡಿಶಾಸನವನ್ನು[1] ಈಗ ಮತ್ತೊಮ್ಮೆ ಸರಿಯಾಗಿ ಓದುವುದು, ಸಮರ್ಪಕವಾಗಿ ಅರ್ಥೈಸುವುದು ಅವಶ್ಯವಿದೆ. ಈವರೆಗೆ ಅಲ್ಲಿಯ ಬಾಳ್ಗಳ್ಚು,[2] ಸಟ್ಬಿಜ್ಗದರ್[3] ಪದಗಳ ಬಗ್ಗೆ ಅನೇಕ ಚರ್ಚೆಗಳು ನಡೆದಿವೆ. ಪೊಗಲೆ ಪ್ಪೊಟ್ಟಣ,ಕುಱುಮ್ಬಿಡಿ, ಪ್ರೇಮಾಲಯಸುತನ್ ಪದಗಳ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ಇವುಗಳಲ್ಲಿ ಈಗ ಪ್ರೇಮಾಲಯಸುತನ್ ಪದವನ್ನು ಎತ್ತಿಕೊಳ್ಳಬಹುದು.

ಕದಂಬವಂಶದ ಕಕುತ್ಸ್ಥಭಟ್ಟಾರಕನು ಆಳುತ್ತಿಲಿರುವ ಸಮಯದಲ್ಲಿ, ನರಿದಾವಿಳೆ ಹೆಸರುಳ್ಳ ನಾಡಿನ ಮೃಗೇಶ, ನಾಗ ಎಂಬವರು "...ಪಶುಪತಿನಾಮಧೇಯನಾಸರಕ್ಕೆಲ್ಲಭಟರಿಯಾ ಪ್ರೇಮಾಲಯಸುತನ್ಗೆ..... ವಿಜಅರಸನ್ಗೆ....." ಯುದ್ಧವಿಜಯಿಯಾದ ನಿಮಿತ್ತ ಪಲ್ಮಡಿ, ಮೂಱಿವಳ್ಳಿ ಹೆಸರಿನ ಗ್ರಾಮಗಳನ್ನು ದಾನವಾಗಿ ಕೊಟ್ಟರೆಂದು ಈ ಶಾಸನ ಹೇಳುತ್ತದೆ.

ಇಲ್ಲಿಯ... "ಪಶುಪತಿನಾಮಧೇಯನಾಸರಕ್ಕೆಲ್ಲಭಟರಿಯಾ ಪ್ರೇಮಾಲಯ ಸುತನ್ಗೆ..... ವಿಜಅರಸನ್ಗೆ....." ಎಂಬ ವಾಕ್ಯಕ್ಕೆ ಡಾ. ಎಂ.ಎಚ್. ಕೃಷ್ಣ ಅವರು "ಪಶುಪತಿಯ ಆದೇಶದಂತೆ (At the word of) ಯುದ್ಧವನ್ನು ಗೆದ್ದ ಎಲ್ಲಭಟರಿಯ ಮಗನಾದ ವಿಜಅರಸನಿಗೆ..." ಎಂದು ಮುಂತಾಗಿ ಅರ್ಥ ಹಚ್ಚಿದ್ದಾರೆ.[4] ಆದರೆ ಇಲ್ಲಿಯ ಅಂಕಿತನಾಮದ ನಿಜರೂಪ 'ಎಲ್ಲಭಟರಿ' ಎಂಬುದು ಸಂದೇಹ. ಎರಡನೆಯದಾಗಿ 'ಆಸರಕ್ಕೆ' ಎಂದು ಪದವನ್ನು ಕತ್ತರಿಸಿಕೊಂಡುದೂ, ಅದಕ್ಕೆ At the word of ಎಂದು ಅರ್ಥ ಹಚ್ಚಿದುದೂ ತೀರ ತಪ್ಪು. ಕಾರಣ, ಈವರೆಗೆ ನಂಬುತ್ತ ಬಂದ ಡಾ. ಎಮ್.ಎಚ್.ಕೃಷ್ಣ ಅವರ ಅಭಿಪ್ರಾಯವನ್ನು, ಈ ಕೆಳಗಿನ ವಿವರಣೆಯ ಬೆಳಕಿನಲ್ಲಿ ಇನ್ನು ಮೇಲೆ ಕೈಬಿಡಬೇಕಾಗುತ್ತದೆ.

---

1. M.A.R. 1936 No. 16.
2. ಪ್ರಬುದ್ಧ ಕರ್ಣಾಟಕ, 51-2.
3. ಪ್ರಬುದ್ಧ ಕರ್ಣಾಟಕ, 20-3, 47-4, 50-4,51-1, 51-2, 52-3.
4. M.A.R. 1936 No. 16. pp, 72 and 73

೬ನೆಯ ಶತಮಾನದ ಹೊನ್ನಾವರ ಶಾಸನದಲ್ಲಿ ಮಹಾಕೆಲ್ಲ,[5] ೯ನೆಯ ಶತಮಾನದ ಉದಯಾವರದ ಶಾಸನದಲ್ಲಿ ಅರಕೆಲ್ಲ,[6] ಪೊಳಲಿಶಾಸನದಲ್ಲಿ ಸೇವ್ಯ ಅರಕೆಲ್ಲ,[7] ೧೨ನೆಯ ಶತಮಾನದ ವೇಣೂರ ಮತ್ತು ಉಳಿಪಾಡಿ ಶಾಸನಗಳಲ್ಲಿ ಸೇವ್ಯಗೆಲ್ಲ[8] ಎಂಬಿವು ವ್ಯಕ್ತಿನಾಮಗಳಾಗಿವೆ. ಇದೇ ರೀತಿ ಹಲ್ಮಿಡಿ ಶಾಸನದ ವಾಕ್ಯದಿಂದ 'ಸರಕ್ಕೆಲ್ಲ' ಎಂಬುದನ್ನು ಕತ್ತರಿಸಿಕೊಂಡು, ಅದು ವ್ಯಕ್ತಿನಾಮವೆಂದು ಭಾವಿಸುವುದು ಸೂಕ್ತವೆನಿಸುತ್ತದೆ. ಮತ್ತು ಹಲ್ಮಿಡಿ ಶಾಸನದ ಸರಕ್ಕೆಲ್ಲ ಎಂಬ ವ್ಯಕ್ತಿನಾಮವೇ ಮುಂದೆ ಉದಯಾವರ ಪೊಳಲಿ ಶಾಸನಗಳಲ್ಲಿ ಅರಕೆಲ್ಲವೆಂದು ಬದಲಾವಣೆಯಾದಂತಿದೆ. ಇದಕ್ಕೆ ವ್ಯಾಕರಣದ ಸಮರ್ಥನೆ ಹೀಗಿದೆ : ದ್ರಾವಿಡಭಾಷೆಯಲ್ಲಿ ಆದಿಯ ತಾಲವ್ಯ ಸಕಾರವು ಲೋಪವಾಗುತ್ತದೆ (ಉದಾ: ಸಾಯಿರ>ಆಯಿರ). ಮತ್ತು ಪದಮಧ್ಯದ 'ಕ' ವರ್ಣವು 'ಗ'ವರ್ಣವಾಗುವುದನ್ನು ತಪ್ಪಿಸಲು ಅದನ್ನು ದ್ವಿತ್ವಗೊಳಿಸಲಾಗುತ್ತದೆ.[9] ಹೀಗಾಗಿ ೯ನೆಯ ಶತಮಾನದ 'ಅರಕೆಲ್ಲ' ಅಂಕಿತನಾಮದ ಪ್ರಾಚೀನರೂಪವೇ ಹಲ್ಮಿಡಿ ಶಾಸನದ 'ಸರಕ್ಕೆಲ್ಲ' ಎಂಬ ಅಂಕಿತನಾಮವೆಂದು ಹೇಳಬಹುದು. ಹೀಗೆ ಭಾವಿಸಿದಲ್ಲಿ ಮೇಲಿನ ವಾಕ್ಯದಿಂದ ಪಶುಪತಿನಾಮಧೇಯನಾದ ಸರಕ್ಕೆಲ್ಲಭಟರಿ ಎಂಬವನ ಪ್ರೇಮಾಲಯಸುತ ವಿಜಅರಸನಿಗೆ - ಎಂಬ ಅರ್ಥ ಹೊರಡುತ್ತದೆ. ಅಲ್ಲದೆ ಪಶುಪತಿ ಮತ್ತು ಸರಕ್ಕೆಲ್ಲಭಟರಿ ಎಂಬಿವು ಒಬ್ಬನಿಗೆ ಇರುವ ಎರಡು ಹೆಸರುಗಳೆಂದು[10] ಸ್ಪಷ್ಟವಾಗುತ್ತದೆ. ಪಶುಪತಿಯನ್ನು ಕುರಿತು ಶಾಸನ ಪ್ರಾರಂಭದಲ್ಲಿ ಹೇಳಿದ 'ಬಟರಿಕುಲಾಮಲವ್ಯೋಮತಾರಾಧಿನಾಥನ್' ಮತ್ತು ಇಲ್ಲಿ ಹೇಳಿದ 'ಸರಕ್ಕೆಲ್ಲಭಟರಿ' ಈ ಎರಡೂ ಕಡೆಗಳಲ್ಲಿ ಬಂದಿರುವ ಭಟರಿ ಎಂಬ ಪದವು ಪಶುಪತಿ, ಸರಕ್ಕೆಲ್ಲ ಇವು ಒಬ್ಬನಿಗೇ ಇರುವ ಎರಡು ಹೆಸರುಗಳೆಂದು ಮತ್ತೂ ದೃಢಪಡಿಸುತ್ತದೆ. ಒಟ್ಟಿನಲ್ಲಿ ವಿಜಅರಸನು ಪಶುಪತಿ ನಾಮಧೇಯನಾದ ಸರಕ್ಕೆಲ್ಲಭಟರಿ ಎಂಬವನ ಪ್ರೇಮಾಲಯಸುತನೆಂದು ಒಪ್ಪಿಕೊಳ್ಳಬಹುದಾಗಿದೆ.

---

5. Honnavar Plates of Kaikeya Chitrasena. EI. xxvii. ಇಲ್ಲಿ ಕೈಕಯ ಅರಸನಾದ ಚಿತ್ರಸೇನನು ತನ್ನನ್ನು ಕೆಲ್ಲ, ಮಹಾಕೆಲ್ಲ ಎಂದು ಕರೆದುಕೊಂಡಿದ್ದಾನೆ.
6. ಕೊ.ವ್ಯಾ.ರಮೇಶ, ತುಳಿನಾಡಿನ ಇತಿಹಾಸ, ಪು. 41(1969). ಇಲ್ಲಿ ವಿಜಯಾದಿತ್ಯ ಆಳುಪೇಂದ್ರನು ನಾಡಾಧಿಕಾರಿ ಅರಕೆಲ್ಲನ ಸಮ್ಮುಖದಲ್ಲಿ ದಾನನೀಡುತ್ತಾನೆ.
7. ಅದೇ, ಪು. 42. ತಳಕಾಡಿಗೆ ತೆರಳಿದ್ದ ಸೇವ್ಯ ಅರಕೆಲ್ಲನು ಅಲ್ಲಿಯೇ ಮಡಿದ ವಾರ್ತೆಯನ್ನು ಕೇಳಿ ಪಲ್ಯವಣ ಅಳಿಗಾನಪ್ಪನೆಂಬುವನು ಅಗ್ನಿಪ್ರವೇಶ ಮಾಡಿದನೆಂದು ಇಲ್ಲಿ ಹೇಳಲಾಗಿದೆ.
8. Ramesh K.V. : A History of South Canara (1970), ಪು. 88. ಮಹಾಮಂಡಲೇಶ್ವರ ಸೇವ್ಯಗೆಲ್ಲನೆಂಬುನು ಆಳುತ್ತಿದ್ದ ವಿಷಯ ಈ ಎರಡೂ ಶಾಸನಗಳಲ್ಲಿದೆ..
9. i) ಆದಿ ಸಕಾರ ಲೋಪವಾಗುವುದಕ್ಕೆ ಉದಾಹರಣೆಗಳು:ಸಾಸಿರ>ಆಯಿರ, ಸುಪ್ಪು>ಉಪ್ಪು (ಉಪ್ಪಿನಿಂದ ಮಾಡಿದ ಅಡಿಗೆಗೆ 'ಸುಪ್ಪಲ್' ಎಂದು ಹೆಸರು, ನೋಡಿ:ಪಂಪಭಾರತ, 12-160) ಇತ್ಯಾದಿ.
   ii) ದ್ರಾವಿಡ ಭಾಷೆಗಳಲ್ಲಿ ಎರಡು ಸ್ವರಗಳ ನಡುವಿನ ಅಘೋಷವರ್ಣ ಘೋಷಕ್ಕೆ ತಿರುಗುವುದು ಸ್ವಾಭಾವಿಕ. ಈ ಅಂಶವನ್ನು ತಪ್ಪಿಸುವುದಕ್ಕೋಸುಗ ಇಲ್ಲಿ 'ಕ' ವರ್ಣಕ್ಕೆ ದ್ವಿತ್ವವನ್ನು ಕಲ್ಪಿಸಿರಬೇಕು.
   iii) ಕೆಲ್ಲ ಹೆಸರಿನ ಮನೆತನದ ಬಗ್ಗೆ, ಕೆಲ್ಲ ಪದಾಂತ್ಯ ಹೆಸರುಗಳ ಬಗ್ಗೆ ಸಂಶೋಧನೆ ನಡೆಯಬೇಕು. ಕೈಕಯ ಅರಸನಾದ ಚಿತ್ರಸೇನನು ತನ್ನನ್ನು ಕೆಲ್ಲ, ಮಹಾಕೆಲ್ಲ ಎಂದು ಕರೆದುಕೊಂಡುದನ್ನು (ಹೊನ್ನಾವರ ಶಾಸನ) ಇಲ್ಲಿ ಗಮನಿಸಬೇಕು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈಗಲೂ ಕೆಲ್ಲ ಹೆಸರಿನ ಮನೆತನಗಳಿವೆಯೆಂದು ತಿಳಿದುಬರುತ್ತದೆ.
10. ಅರಸರಿಗೆ ಒಂದಕ್ಕಿಂತ ಹೆಚ್ಚು ಅಂಕಿತನಾಮಗಳು ಪ್ರಾಚೀನ ಕರ್ನಾಟಕದಲ್ಲಿ ಸಾಮಾನ್ಯವಾಗಿದ್ದವು. ಉದಾ: ಶಿವಮಾರ-ಸೈಗೊಟ್ಟ.

'ಪ್ರೇಮಾಲಯಸುತನ್' ಎಂಬುದರ ಅರ್ಥ ಇಲ್ಲಿಯ ಇನ್ನೊಂದು ಸಮಸ್ಯೆಯಾಗಿದೆ. ನಮಗೆ ತಿಳಿದ ಮಟ್ಟಿಗೆ 'ಪ್ರೇಮಾಲಯಸುತನ್' ಎಂಬ ಪದಪ್ರಯೋಗ ಇಲ್ಲಿ ಬಿಟ್ಟರೆ ಬೇರೆ ಯಾವುದೇ ಕಾವ್ಯ ಶಾಸನಗಳಲ್ಲಿ ಕಂಡುಬರುವುದಿಲ್ಲ. ವಿಜಅರಸನು ಪಶುಪತಿಯ ಮಗನೆಂದು ಇಟ್ಟುಕೊಂಡರೆ ತಾಳಗುಂದ ಸಂಸ್ಕೃತಶಾಸನದಲ್ಲಿ ದಶಮಂಡಲಿಕರ ನಾಯಕನೆಂದೂ[11] ಈ ಶಾಸನದಲ್ಲಿ ದಾನಪಶುಪತಿಯೆಂದೂ ಕರೆಯಿಸಿಕೊಂಡ ಖ್ಯಾತಿಯ ಪಶುಪತಿ ಎಂಬವನ ಮಗನಿಗೆ ಎರಡು ಹಳ್ಳಿಗಳನ್ನು ಕೊಟ್ಟರೆಂಬುದು ಎಷ್ಟೂ ಶೋಭಿಸದ ಮಾತು. ಒಂದು ವೇಳೆ ಮಗನೆಂದು ಒಪ್ಪಿಕೊಳ್ಳುವುದಿದ್ದರೆ 'ಸುತನ್' ಎಂಬ ಪದಪ್ರಯೋಗವಿರಬೇಕೇ ಹೊರತು 'ಪ್ರೇಮಾಲಯಸುತನ್' ಎಂದಲ್ಲ. ಏಕೆಂದರೆ ಯಾವುದೇ ವ್ಯಕ್ತಿಯನ್ನು ತಂದೆಗೆ 'ಪ್ರೀತಿಯ ಮಗನು' ಎಂದು ಕರೆಯುವುದು ತುಂಬ ಕೃತಕವಾಗಿ ಕಾಣುತ್ತದೆ. ಆದುದರಿಂದ "ಪ್ರೇಮಾಲಯಸುತ" ಎಂಬುದಕ್ಕೆ ಬೇರೊಂದು ಅರ್ಥವಿರಬಹುದಾಗಿದ್ದು, ಇಲ್ಲಿ ಆ ಬಗ್ಗೆ ವಿವೇಚಿಸಬಹುದು.

ಗಂಗದೊರೆ ನೀತಿಮಾರ್ಗನು ತೀರಿಕೊಂಡ ಸಂದರ್ಭದಲ್ಲಿ ಪ್ರಾಣತ್ಯಾಗ ಮಾಡಿಕೊಂಡ ಅಗರಯ್ಯನನ್ನು ದೊಡ್ಡಹುಂಡಿ ಶಾಸನ 'ಮನೆಮಗನ್' ಎಂದು ಕರೆದಿದೆ.[12] ಪ್ರಭಾಕರವರ್ಧನನು ತೀರಿಕೊಳ್ಳಲು ಪ್ರಾಣತ್ಯಾಗ ಮಾಡಿಕೊಂಡವರನ್ನು ಬಾಣನ ಹರ್ಷಚರಿತೆ 'ಕುಲಪುತ್ರ'ರು ಎಂದು ಕರೆದಿದೆ. ...ಡದ ಈ ಮನೆಮಗನ್ ಮತ್ತು ಸಂಸ್ಕೃತದ ಕುಲಪುತ್ರನ್ ಸಮಾನಪದಗಳೆಂದು ವಿದ್ವಾಂಸರು ಈಗಾಗಲೆ ...ತಿಸಿದ್ದಾರೆ.[14] ಇವುಗಳಿಗೆ ಪರ್ಯಾಯವಾದ ಪದವೇ ಹಲ್ಮಿಡಿ ಶಾಸನದ 'ಪ್ರೇಮಾಲಯಸುತನ್' ಎಂದು ಹೇಳಬಹುದು. ಇಲ್ಲಿಯ ಮನೆಮಗನ್= (ಪ್ರೇಮ+) ಆಲಯಸುತನ್ ಎಂಬ ನೇರವಾದ ಭಾಷಾಂತರವನ್ನು ಗಮನಿಸಬೇಕು. ಈ ಮನೆಮಗನ್ ಎಂಬುದಕ್ಕೆ ಶಾಸನಗಳಲ್ಲಿ ಪೊರೆದ ಮಗನ್, ವೇಳೆವಾಳಿ, ಲೆಂಕವಾಳಿ ಎಂಬ ಪರ್ಯಾಯಪದಗಳು ಕಂಡುಬರುತ್ತವೆ. ಕೆಲವೊಮ್ಮೆ 'ಪ್ರಿಯಪುತ್ರನ್' ಎಂದೂ ಕರೆಯುತ್ತಿದ್ದರೆಂದು ಕುವರಲಕ್ಷ್ಮನ ಹಳೆಬೀಡು ಶಾಸನ (ಸಾಲು 88) ದಿಂದ ತಿಳಿದುಬರುತ್ತದೆ. ಬಹುಶಃ ಪ್ರಿಯಸುತನ್, ಮನೆಮಗನ್ ಎಂಬಿವೆರಡನ್ನೂ ಪ್ರೇಮಾಲಯಸುತನ್ ಎಂಬ ಪದ ಪ್ರತಿನಿಧಿಸುವಂತಿದೆ. ಇದು ನಿಜವೂ ಎನಿಸುತ್ತದೆ. ಇದರಿಂದ ಡಾ. ಎಮ್.ಎಚ್. ಕೃಷ್ಣ ಹೇಳುವಂತೆ ವಿಜಅರಸನು ಸಾಮಾನ್ಯ ಅರ್ಥದಲ್ಲಿ Beloved son of Ella Bhatari[15] ಅಲ್ಲ, ವಿಶೇಷಾರ್ಥದಲ್ಲಿ ಪಶುಪತಿ ನಾಮಧೇಯನಾದ ಸರಕ್ಕೆಲ್ಲಭಟರಿಯ 'ಮನೆಮಗನ್' ಎಂದು ಸ್ಪಷ್ಟವಾಗುತ್ತದೆ.

---

11. M.A.R. III. (Ed: S. Settar) P. 137)
12. EC, III TN 91 A.D. 921, ಗೋಗ್ರಹಣ ಪ್ರಸಂಗದಲ್ಲಿ ಮನೆಮುದ್ದಮಲ್ಲಯ್ಯ ಕಾದಿ ಸತ್ತನೆಂದು M.A.R. 1927, ಪು. 90 (ಎ.ಡಿ. 950) ಶಾಸನ ಹೇಳುತ್ತದೆ. ಇಲ್ಲಿಯ ಮನೆಮುದ್ದ ಎಂಬುದು 'ಮನೆಮಗನ್'ದ ಇನ್ನೊಂದು ರೂಪವಾಗಿರಬಹುದು. ಮಾವಳಿ ಶಾಸನದಲ್ಲಿ (EC. VIII ಸೊರಬ, 10) ಬರುವ 'ಕುಲಮುದ್ದ' ಎಂಬುದು 'ಕುಲಪುತ್ರನ್' ಎಂಬುದರ ಇನ್ನೊಂದು ರೂಪವಾಗಿರಬಹುದು. ಬೇರೆ ಶಾಸನಗಳಲ್ಲಿ ಬರುವ 'ಶಿವಮುದ್ದ' ಎಂಬುದೂ ವಿವೇಚಿಸಬೇಕಾದ ಶಬ್ದವಾಗಿದೆ.
13. ವಿ.ಎಸ್. ಅಗರವಾಲಾ: ಹರ್ಷಚರಿತ ಏಕ್ ಸಾಂಸ್ಕೃತಿಕ ಅಧ್ಯಯನ ಪು. 93.
14. ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (1979). ಪು. 306.
15. M.A.R. 1936. No. 16, C. 72, 73.

ಮನೆಮಗನ್ ಎನಿಸಿದವನ ಕರ್ತವ್ಯಗಳೇನು? ಎಂಬುದು ಇನ್ನೂ ಸ್ಪಷ್ಟವಾಗಬೇಕಾದ ವಿಷಯ. ದೊಡ್ಡಹುಂಡಿ ಶಾಸನದ ಮನೆಮಗನ್ ಅರಸನಿಗಾಗಿ ಪ್ರಾಣಘಾತ ಮಾಡಿಕೊಂಡರೆ, ಹಲ್ಮಿಡಿ ಶಾಸನದ ಮನೆಮಗನ್ ಅರಸನಿಗಾಗಿ ಹೋರಾಡುತ್ತಾನೆ. ಇದರಿಂದ, ತರುವಾಯದ ಶಾಸನಗಳಲ್ಲಿ ಪ್ರಾಣಘಾತವು ಕೇವಲ ವೇಳೆವಾಳಿಗಳಿಗೆ, ಹೋರಾಟವು ಕೇವಲ ಜೋಳವಾಳಿಗಳಿಗೆ ಮೀಸಲಾಗಿದ್ದರೂ, ಹಲ್ಮಿಡಿಶಾಸನದ ಕಾಲಾವಧಿಯಲ್ಲಿ ಈ ಎರಡನ್ನೂ ಒಬ್ಬನೇ ನಿರ್ವಹಿಸಬಹುದಾಗಿದ್ದಿತೆಂದು ಸ್ಪಷ್ಟವಾಗುತ್ತದೆ.

ಇದೆಲ್ಲವನ್ನೂ ಪರಿಭಾವಿಸಿದರೆ ಹಲ್ಮಿಡಿ ಶಾಸನದ ನಿಜಅರಸನು ಎಲ್ಲಭಟರಿಯ ಪ್ರೇಮಾಲಯಸುತನಲ್ಲ, ಸರಕ್ಕೆಲ್ಲಭಟರಿಯ ಪ್ರೇಮಾಲಯಸುತನೆಂದು ಖಚಿತವಾಗುತ್ತದೆ. ಇವನು ಜೋಳವಾಳಿ ಕಾರ್ಯವನ್ನೂ ನಿರ್ವಹಿಸಿದ ವೇಳೆವಾಳಿ (ಪ್ರೇಮಾಲಯಸುತನ್= ಮನೆಮಗನ್= ಪ್ರಿಯಸುತನ್= ಪೊರೆದ ಮಗನ್= ಕುಲಪುತ್ರನ್) ಆಗಿದ್ದನೆಂದೂ ಕರ್ನಾಟಕದಲ್ಲಿ ವೇಳೆವಾಳಿಯ ಪ್ರಥಮ ದಾಖಲೆಯುಳ್ಳದು ಕ್ರಿ.ಶ. ೮೬೫ರ ಮೇವುಂಡಿ ಶಾಸನವಲ್ಲ,[16] ಕ್ರಿ.ಶ. ೪೫೦ರ ಹಲ್ಮಿಡಿ ಶಾಸನವೆಂದೂ ವಿದಿತವಾಗುತ್ತದೆ.

■■

ಆಕರ : ಮಾರ್ಗ ಸಂಪುಟ-೨

---

16. BKI. 1-i No. 11.

೨

ಕಪ್ಪೆ ಅರಭಟ್ಟನ್

"ಸಾಧುಗೆ ಸಾಧು ಮಾಧೂರ್ಯ್ಯನ್ಗೆ ಮಾಧೂರ್ಯ್ಯಂ" ಎಂದು ಆರಂಭವಾಗುವ ಬಾದಾಮಿ ಶಾಸನ, ಕನ್ನಡಿಗರ ಮನೆಮಾತಾಗಿದೆ. 'ಕಪ್ಪೆ ಅರಭಟ್ಟನ್' ಎಂಬವನ ವ್ಯಕ್ತಿತ್ವ ಕೀರ್ತನೆ, ಇದರ ವಸ್ತು. ಮೋಜಿನದೂ, ಕುತೂಹಲಜನಕವೂ ಆದ ಈ ಹೆಸರಿನಲ್ಲಿರುವ 'ಕಪ್ಪೆ' ಮತ್ತು 'ಅರ' ಎಂಬ ಪದಗಳು ತೀರ ಸಂದಿಗ್ಧವಾಗಿವೆ. ಮೊದಲು 'ಅರ' ಪದವನ್ನೇ ವಿವೇಚಿಸಬಹುದು.

ಅರ: "ಈ ಹೆಸರು ಕಪ್ಪೆ+ಅರಭಟ್ಟ ಅಲ್ಲ. ಕಪ್ಪೆಯರ+ಭಟ್ಟ ಎಂದು ಪ್ರೊ.ತೀ.ನಂ.ಶ್ರೀಕಂಠಯ್ಯನವರು ಸೂಚಿಸುತ್ತಾರೆ. ಇದು ನಿಜವಾದರೆ 'ಕಪ್ಪೆಯರ' ಎಂಬುದು ' ಕಪ್ಪೆಯರಸ' ಎಂಬುದರ ಸಂಕ್ಷಿಪ್ತರೂಪವೆಂದು ಭಾವಿಸಬೇಕಾಗುತ್ತದೆ" ಎಂದು ಡಾ. ಚಿದಾನಂದಮೂರ್ತಿಯವರು ಹೇಳಿ, ಕಪ್ಪೆ ಎಂಬ ಪೂರ್ವಪದಕ್ಕೆ 'ಅರ' ಎಂಬ ಉತ್ತರ ಪದವನ್ನು ಜೋಡಿಸುತ್ತಾರೆ.[1] ಆದರೆ ಸಮಾಸ ಪ್ರಸಂಗದಲ್ಲಿ ಅರಸು ಎಂಬುದು ಪೂರ್ವಪದವಾಗಿ ಬಂದರೆ ಮಾತ್ರ ಅರ ಆಗುವುದೇ ಹೊರತು (ಅರಸು+ ಗಿಳಿ=ಅರಗಿಳಿ), ಉತ್ತರಪದವಾಗಿ ಬಂದರೆ ಅರ (ಗಿಳಿ+ಅರಸು=ಗಿಳಿಯರ) ಆಗುವುದಿಲ್ಲ. ಮೇಲಾಗಿ ಇಲ್ಲಿ ಮೂಲಪಾಠವಿದ್ದುದು 'ಕಪ್ಪೆ ಅರಭಟ್ಟ'ವೇ ಹೊರತು 'ಕಪ್ಪೆಯರ ಭಟ್ಟ' ಅಲ್ಲ. ಆದುದರಿಂದ "ಕಪ್ಪೆ ಅರ" ಅಂದರೆ ಕಪ್ಪೆಯರಸು ಎಂದು ಪರಿಭಾವಿಸಲು ಮನವೊಪ್ಪದು.

ಕಪ್ಪೆ ಎಂಬುದು ಪ್ರಾಚೀನಕಾಲದಲ್ಲಿ ಅಡ್ಡ ಹೆಸರಿನಂತೆ ಬಳಕೆಯಾದ ಉದಾಹರಣೆಗಳಿವೆ. ಮಲ್ಲಾಪುರ ಶಾಸನದಲ್ಲಿ[2] (1150) ಬರುವ "ಸೇನಬೋವಂ ಕಪ್ಪೆಯರ ಚಾವುಣ್ಡಯ್ಯನ ಸ್ವಹಸ್ತಲಿಖಿತ" ಎಂಬುದು ಇದಕ್ಕೆ ಉದಾಹರಣೆಯಾಗಿದೆ. ಇದೇ ರೀತಿ ಬಾದಾಮಿ ಶಾಸನದ ಕಪ್ಪೆ ಎಂಬುದೂ ಒಂದು ಮನೆತನವನ್ನು ಇಲ್ಲವೆ ಒಂದು ವರ್ಗವನ್ನು ಸೂಚಿಸುತ್ತಿರಬಹುದೆನಿಸುತ್ತದೆ.

ಈಗ 'ಅರ' ಮತ್ತು 'ಭಟ್ಟನ್' ಪದಗಳನ್ನು ಜೋಡಿಸಿದರೆ ಅರಭಟ್ಟನ್ ರೂಪ ಸಿದ್ಧವಾಗುತ್ತದೆ. ಇದಕ್ಕೆ ಕಪ್ಪೆ ಹೆಸರಿನ ಮನೆತನ ಇಲ್ಲವೆ ವರ್ಗಕ್ಕೆ ಸಂಬಂಧಿಸಿದ 'ಅರಸುಭಟ್ಟ' ಎಂದು ಅರ್ಥ ಹೇಳಬೇಕಾಗುತ್ತದೆ. ಇದೇ ಸರಿಯಾದ ವಿವರಣೆಯೆನಿಸುತ್ತದೆ.

ಕಪ್ಪೆ : ಬಳ್ಳಾರಿ ಜಿಲ್ಲೆಯ ಓರುವಾಯಿ ಗ್ರಾಮದ ಶಾಸನ (೧೧೪೮) ದಲ್ಲಿ ಸಾಮಂತ ಲಕ್ಷ್ಮೆಯನಾಯಕನನ್ನು

---

1. ಸಂಶೋಧನ ತಂರಗ, ಸಂಪುಟ:2. ಪುಟ, 225.
2. SII. XV-53 ಮಲ್ಲಾಪೂರ-ಧಾರವಾಡ ಜಿಲ್ಲೆ (1156)

ಇಂಮಡಿ ರಾಚಮಲ್ಲದೇವ ರಾಜ್ಯಸಮುದ್ಧರಣಂ ಕೃತಯುಗ ಚರಿತ್ರೋದ್ಧರಣಂ ಕಪ್ಪೆಯರಾಹಾರದಾನವಿನೋದ[ಂ] ಕೃತಪರಿಜನಾಹ್ಲಾದಂ ವಿದ್ವಿಷ್ಟ ಸಾವಂತವಾಹಿನೀ ತ್ರಿಪುರತ್ರೀನೇತ್ರ [ಂ] ಪುರಾಂಗನಾಪುತ್ರ"[3]

ಎಂದು ವರ್ಣಿಸಲಾಗಿದೆ. ಇಲ್ಲಿ ಕಪ್ಪೆಯರ ಎಂಬುದು ಬಹುಶಃ 'ಆಹಾರದಾನ' ಪಡೆಯುವ ಯತಿ ಇಲ್ಲವೆ ವ್ರತಿ ವರ್ಗವನ್ನು ಸೂಚಿಸುವಂತಿದೆ.

ಇನ್ನು ಈ ಓರುವಾಯಿಗೆ ಸಮೀಪದಲ್ಲಿರುವ ಶತಕೋಟಿತೀ[illegible] ಹೆಸರಿನ ಕುಡುತಿನಿ ಗ್ರಾಮದ ಸ್ವಾಮಿ (ಷಣ್ಮುಖ) ದೇವಾಲಯದ ಶಾಸನ (೧೧೪೮) ದಲ್ಲಿ ಒಂದು [illegible]ದೆ:

"ಶತಕೋಟಿತೀರ್ತ್ಥದ ಶ್ರೀಸ್ವಾಮಿದೇವರ ಸಂವಿಧಾನದಲು ಸ್ವಾ[illegible]ತ್ರೆಗೆ ಬಂದ ಕಪ್ಪಡಿಗಳ ಸತ್ರಕ್ಕೆ ಬಿಟ್ಟ ಕೆಯಿ."[4]

ಈ ಕುಡುತಿನಿ ಶಾಸನವು 'ಕಪ್ಪಡಿ'ಗಳ ಆಹಾರಕ್ಕೆ ಮಲ್ಲರಸನು ದಾನವಿಟ್ಟುದನ್ನು ಹೇಳಿದರೆ, ಮೇಲಿನ ಓರುವಾಯಿ ಶಾಸನ 'ಕಪ್ಪೆಯರಾಹಾರದಾನ'ವನ್ನು ಸೂಚಿಸುತ್ತದೆ. ಇವೆರಡೂ ಸಮೀಪದ ಗ್ರಾಮಗಳಾಗಿದ್ದು, ಈ ಶಾಸನಗಳು ಒಂದೇ ಕಾಲ(1148) ದವಾಗಿವೆ. ಅಡಿಗಳು ಎಂಬುದು ಗೌರವಸೂಚಿ ಪದವಾಗಿರುವುದರಿಂದ, ಇಲ್ಲಿಯ 'ಕಪ್ಪೆಯರು' ಮತ್ತು 'ಕಪ್ಪಡಿಗಳು' ಒಂದೇ ಅರ್ಥದ ಪದಗಳೆನಿಸುತ್ತವೆ. ಇದು ನಿಜವಿದ್ದರೆ 'ಕಪ್ಪೆ ಅರಭಟ್ಟ'ನು ಕಪ್ಪೆ ಅಥವಾ ಕಪ್ಪಡಿಗಳ ವರ್ಗಕ್ಕೆ ಸಂಬಂಧಿಸಿದ ಅರಸುಭಟ್ಟನಾಗಿರಬಹುದು. ಆದರೆ ಅರಸುಭಟ್ಟ (ಅರಭಟ್ಟ) ಎಂಬುದು ಅಂಕಿತನಾಮವೋ, ಅನ್ವರ್ಥಕನಾಮವೋ ಎಂಬುದು ಮಾತ್ರ ಚಿಂತನೀಯ.

ಈ ಕಪ್ಪೆಯರು ಅಥವಾ ಕಪ್ಪಡಿಗಳು ಯಾರು? ಎಂಬುದು ಮುಖ್ಯಪ್ರಶ್ನೆ. ಕಪ್ಪಡಿ ಪದವನ್ನು ಕಾಯ್+ಪ=ಕಾಯ್ಪ(ಕಾಯುವ)+ಅಡಿ=ಕಾಯ್ಪಡಿ> ಕಪ್ಪಡಿ ಎಂದು ಶ್ರೀ ಎಚ್.ದೇವೀರಪ್ಪನವರು ಅರ್ಥೈಸುತ್ತಾರೆ.[5] ಇದು ನಿಜವಿದ್ದರೆ ಇತ್ತೀಚೆ ಶೈವಸನ್ಯಾಸಿಗಳಿಗೆ ಮಾತ್ರ ಸೀಮಿತವಾಗಿರುವ ಕಪ್ಪಡಿ ಎಂಬುದು, "ಕಾಯುವವ" (=ರಕ್ಷಕ) ಅರ್ಥದಲ್ಲಿ ಮೊದಮೊದಲು ಎಲ್ಲ ಮತದ ಸನ್ಯಾಸಿಗಳಿಗೂ ಅನ್ವಯಿಸುತ್ತಿರಬಹುದು. ಅದಕ್ಕಾಗಿಯೇ ಮಾಧವನೀತನ್ವೈಜನಲ್ಲ ಎಂದು ಈ ಕಪ್ಪೆ (=ಕಪ್ಪಡಿ) ಅರಭಟ್ಟನನ್ನು ವೈಷ್ಣವ ರೀತಿಯಲ್ಲಿ ಬಾದಾಮಿ ಶಾಸನ ವರ್ಣಿಸಿರಬೇಕು.

ಈ ಎಲ್ಲ ವಿವರಣೆ, ಅಭಿಪ್ರಾಯಗಳ ಬಗೆಗೆ ನನಗೆ ಇನ್ನೂ ಸಂದೇಹ. ಆದರೆ ಈ ಪದವನ್ನೊಳಗೊಂಡ ಕೆಲವು ಅಪರೂಪದ ಪ್ರಯೋಗಗಳನ್ನು ಹುಡುಕಿ ವಿಸ್ವಾಂಸರು ಒರೆಹಚ್ಚಬೇಕಾಗಿದೆ.[6]

■■

ಆಕರ : ಮಾರ್ಗ ಸಂಪುಟ–೨

---

3. SII. IX-i-253 ಓರುವಾಯಿ-ಬಳ್ಳಾರಿ ಜಿಲ್ಲೆ (1184)
4. SII. IX-i 252 ಕುಡತಿನಿ ಬಳ್ಳಾರಿ ಜಿಲ್ಲೆ (1148)
5. ಪ್ರ.ಕ. 51-1 (ಕಮ್ಮಟದ ಕಿಡಿಗಳು)
6. ಕಪ್ಪಡಿ ಎಂಬ ಪದ ಹುನಗುಂದ ತಾಲೂಕಿನ ಸಂಗಮದ (ಶಾಸನ SII. XV-88 ಕ್ರಿ.ಶ.1160)ದಲ್ಲಿ, ಬ್ರಹ್ಮಶಿವನ ಸಮಯಪರೀಕ್ಷೆ (IX-61)ಯಲ್ಲಿ, ಹರಿಹರನ ಬಸವರಾಜದೇವರ ರಗಳೆ, ತೆಲುಗು ಬಸವಪುರಾಣಗಳಲ್ಲಿ ಕಂಡುಬರುತ್ತದೆ. ಈ ಪದದ ಬಗ್ಗೆಶ್ರೀ ಎಚ್. ದೇವಿರಪ್ಪ ಅವರ ಒಂದು ಲೇಖನವನ್ನು ಪ್ರ.ಕ. 51-1 ಪು. 47ರಲ್ಲಿ ನೋಡಬಹುದು.

೩

ಗೋಸಾಸ

ರನ್ನನ ಅಜಿತಪುರಾಣದಲ್ಲಿ ಬರುವ "ಪರಹಿತ ವ್ಯಸನಿಗಳಲ್ಲದೆ ದುರ್ವ್ಯಸನಿಗಳಿಲ್ಲ, ಗೋಸಾಸಮಲ್ಲದೆ ಕನ್ನೆ ಗೋಸಾಸಮಿಲ್ಲ"[1] ಎಂಬ ವಾಕ್ಯವನ್ನು ಬಿಟ್ಟರೆ ಸಾಹಿತ್ಯಕೃತಿಗಳಲ್ಲಿ ಕಾಣಸಿಗದ, ಕೇವಲ ಶಾಸನಗಳಲ್ಲಿ, ಅದೂ ಒಂದು ನಿರ್ದಿಷ್ಟ ಅವಧಿಯ ಶಾಸನಗಳಲ್ಲಿ ಕಂಡು ಮರೆಯಾಗುವ ಪದ ಗೋಸಾಸ. ಫ್ಲೀಟ್,[2] ಎನ್. ಲಕ್ಷ್ಮೀನಾರಾಯಣರಾವ್,[3] ಎಂ. ಚಿದಾನಂದಮೂರ್ತಿ,[4] ಎಲ್.ಟಿ,ಶರ್ಮ[5] ಅವರು ಈ ಬಗ್ಗೆ ಚರ್ಚಿಸಿದ್ದಾರೆ.

ಗೋಸಾಸವೆಂದರೆ ಊರಹೊರಗೆ ಗೋವುಗಳು ನಿಂತುಕೊಳ್ಳುವ ಸ್ಥಳ (cow pen) ಎಂಬುದು ಡಾ. ಫ್ಲೀಟ್ ಅವರ ಅಭಿಪ್ರಾಯ. ಷೋಡಶದಾನಗಳಲ್ಲಿ ಒಂದಾದ 'ಗೋಸಹಸ್ರ' ಎಂಬುದರ ಉದ್ಭವವೆಂದು ಡಾ. ಲಕ್ಷ್ಮೀನಾರಾಯಣರಾವ್ ಅವರ ಅಭಿಮತ. ಡಾ. ಲಕ್ಷ್ಮೀನಾರಾಯಣರಾವ್ ಅವರ ನಿರ್ಣಯವನ್ನು ಡಾ. ಚಿದಾನಂದಮೂರ್ತಿ, ಪ್ರೊ. ಎಲ್.ಟಿ.ಶರ್ಮ ಅನುಮೋದಿಸುತ್ತಾರೆ. ಈ ಸಂದರ್ಭದಲ್ಲಿ ಡಾ. ಮೂರ್ತಿ ಅವರು ಮತ್ತಷ್ಟು ಉದಾಹರಣೆಗಳನ್ನು ಸಂಗ್ರಹಿಸಿದ್ದಾರೆ. ಪ್ರೊ. ಶರ್ಮ ಅವರು ಎಸಳೆ ಮತ್ತು ಹುಸ್ನಿ ಗ್ರಾಮಗಳ ಗೋಸಾಸ ಶಾಸನಗಳನ್ನು ವಸ್ತುವಾಗಿಟ್ಟುಕೊಂಡು ಮತ್ಸ್ಯ ಹಾಗೂ ಲಿಂಗಪುರಾಣಗಳಲ್ಲಿ ಬರುವ ಈ ದಾನದ ಸ್ವರೂಪವನ್ನು ವಿವರಿಸಿದ್ದಾರೆ. ಇದು ಇಲ್ಲಿಯ ವರೆಗೆ ವಿದ್ವಾಂಸರು ಮಾಡಿದ ಶೋಧ.

ಕನ್ನಡ ಸಾಹಿತ್ಯ ನಿಘಂಟು ಗೋಸಾಸ ಪದಕ್ಕೆ 1) ತುರಗಾಳಗದಲ್ಲಿ ಹಸುಗಳನ್ನು ಬಿಡಿಸಿಕೊಳ್ಳುವುದಕ್ಕಾಗಿ ತೋರುವ ಸಾಹಸ, ಗೋವುಗಳನ್ನು ಹಿಡಿಯುವಲ್ಲಿ ತೋರುವ ಪರಾಕ್ರಮ 2) ಸಾವಿರ ದಾನ 3) ಪುಣೆ ಜಿಲ್ಲೆಯ ಬೇಡ ತಾಲೂಕಿನ ಒಂದು ಹಳ್ಳಿ-ಹೀಗೆ ಮೂರು ಅರ್ಥಗಳನ್ನು ಕೊಟ್ಟಿದ್ದಾರೆ. ಇವುಗಳಲ್ಲಿ ಮೊದಲನೆಯ ಅರ್ಥ ಬಹುಶಃ ತಪ್ಪು. ಮೂರನೆಯ ಅರ್ಥ ನಮಗೆ ಸಂಬಂಧವಿಲ್ಲ. ಎರಡನೆಯ. ಅರ್ಥ ಶ್ರೀ ಲಕ್ಷ್ಮೀ ನಾರಾಯಣರಾವ್ ಅವರ ಅಭಿಪ್ರಾಯವೇ ಆಗಿದೆ. ಮೇಲೆ ಸೂಚಿಸಿದ ಅಜಿತ ಪುರಾಣದ ವಾಕ್ಯದ ಅರ್ಥ ಸ್ಪಷ್ಟವಿಲ್ಲ. ಇಷ್ಟು ಹಿನ್ನೆಲೆಯಲ್ಲಿ ಕೆಲವು ವಿಚಾರಗಳನ್ನು ಚರ್ಚಿಸಿ, ಶಾಸನಗಳ ಆಧಾರದಿಂದ ಹೊಸ ವಿಷಯಗಳನ್ನು ಇಲ್ಲಿ ಮಂಡಿಸಬಹುದು.

---

1. ಅಜಿತ ಪುರಾಣ, 1-21 ವ.
2. IA.vi p. 255 (ಅಡಿಟಿಪ್ಪಣಿ)
3. EI. xxi p. 207.
4. ಸಂಶೋಧನ ತರಂಗ ಸಂ.2. ಪು. 287
5. Piller inscriptions at yasale & Husni (ಅಪ್ರಕಟಿತ)

ಸಹಸ್ರ ಎಂಬುದರ ತದ್ಭವ ಸಾಸಿರ, ಸಾವಿರ, ಸಾಯಿರ, ಆಯಿರ ಆಗುತ್ತದೆ. ಸಾಸ ಆಗಲಿಕ್ಕಿಲ್ಲ; ಆಗಿಲ್ಲ. ಹೀಗಾಗಿ ಗೋಸಾಸ ಎಂಬುದರ ತತ್ಸಮ ಬೇರೆ ಇರಬಹುದೇ ಎನಿಸುತ್ತದೆ. ಈ ಪ್ರಸಂಗದಲ್ಲಿ ಇದನ್ನು ಹೋಲುವ ಘಳಿಸಾಸ (ಘೈಸಾಸ) ಎಂಬ ಶಾಸನೋಕ್ತ ಪದ ನೆನಪಾಗುತ್ತದೆ. ಇದನ್ನು ಘಟಿಕಾ ಸಾಹಸಿ ಎಂದು ಬಿಡಿಸಿ ಘಟಿಕಾಸ್ಥಾನಗಳಲ್ಲಿ ಜ್ಞಾನದ ಸಾಹಸವನ್ನು ಪ್ರದರ್ಶಿಸುವವನು ಎಂದು ವಿದ್ವಾಂಸರು ಅರ್ಥ ಹೇಳಿದ್ದಾರೆ.[6] ಇದೇ ರೀತಿ 'ಗೋಸಾಸಿ' ಎಂದರೆ ಗೋವುಗಳನ್ನು ದಾನವಾಗಿ ಕೊಡುವಲ್ಲಿ ಸಾಹಸಿ (ಸಮರ್ಥ)ಯಾದವನು ಎಂದು ಅರ್ಥಹೇಳಲು ಮನಸ್ಸಾಗುತ್ತಿದ್ದರೂ ಇಂಥ ಕೆಲವು ಶಾಸನಗಳಲ್ಲಿ 'ಗೋಸಾಸ'ಕ್ಕೆ ಪ್ರತಿಯಾಗಿ 'ಗೋಸಹಸ್ರ' ಪದ ಬಳಕೆಯಾಗಿರುವುದರಿಂದ ಹೊಸ ಆಧಾರಗಳು ಸಿಗುವ ವರೆಗೆ ಶ್ರೀ ಲಕ್ಷ್ಮೀನಾರಾಯಣರಾವ್ ಅವರ ಅರ್ಥವನ್ನೇ ಇಟ್ಟುಕೊಳ್ಳುವುದು ಲೇಸು.

ಗೋಸಹಸ್ರ ದಾನ :

ದಾನಿ ಒಂದು ದಿನ ಇಲ್ಲವೆ ಮೂರು ದಿನ ಕೇವಲ ಹಾಲಿನ ಮೇಲೆ ಇರಬೇಕು. ಬಳಿಕ ಲೋಕಪಾಲನನ್ನು ಸ್ತುತಿಸಿ ಪುಣ್ಯಾಹವಾಚನ ಹೋಮ ಮಾಡಬೇಕು. ಒಂದು ಎತ್ತಿನ ದೇಹಕ್ಕೆ ಗಂಧವನ್ನು ಲೇಪಿಸಿ, ಅದನ್ನು ವೇದಿಕೆಯ ಮೇಲೆ ನಿಲ್ಲಿಸಬೇಕು. ಸಾವಿರ ಗೋವುಗಳನ್ನು ಒಂದೆಡೆಗೆ ಸಂಗ್ರಹಿಸಿ ಅವುಗಳಲ್ಲಿ ಹತ್ತನ್ನು ಆಯ್ದುಕೊಳ್ಳಬೇಕು. ಜೂಲು ಹೊದಿಸಲ್ಪಟ್ಟ ಈ ಹತ್ತು ಗೋವುಗಳನ್ನು ಮಂಟಪದೊಳಗೆ ತರಬೇಕು. ಈ ಹತ್ತು ಗೋವುಗಳ ಮಧ್ಯೆ ಬಂಗಾರದ ಕೊರಳ ಗೆಜ್ಜೆ ಮತ್ತು ರೇಶಿಮೆಯ ಜೂಲುಗಳಿಂದ ಅಲಂಕರಿಸಲ್ಪಟ್ಟ ಬಂಗಾರದ ನಂದಿ ವಿಗ್ರಹವನ್ನು ನಿಲ್ಲಿಸಬೇಕು. ದಾನಿಯು ಸರ್ವೌಷಧಿ ಸ್ನಾನಮಾಡಿದ ಬಳಿಕ, ಮುಗಿದ ಕೈಗಳಲ್ಲಿ ಹೂಗಳನ್ನು ಹಿಡಿದು ಗೋಸ್ತುತಿ, ಮಂತ್ರಪಠಣ ಮಾಡಬೇಕು. ಬಂಗಾರದ ನಂದಿಸಹಿತ ಎರಡು ಗೋವುಗಳನ್ನು ಗುರುವಿಗೆ ಕೊಡಬೇಕು. ಮಿಕ್ಕ ಎಂಟು ಗೋವುಗಳನ್ನು ಎಂಟು ಜನ ಪುರೋಹಿತರಿಗೆ ಕೊಡಬೇಕು. ಉಳಿದಿರುವ 990 ಗೋವುಗಳಲ್ಲಿ 5 ಇಲ್ಲವೆ 10 ಗೋವುಗಳನ್ನು ಬ್ರಾಹ್ಮಣರಿಗೆ ಕೊಡಬೇಕು. ಹಾಲು ಸೇವಿಸುವುದರ ಮೂಲಕ ದಾನಿಯು ಈ ಸಮಾರಂಭವನ್ನು ಮುಕ್ತಾಯಗೊಳಿಸಬೇಕು. ಈ ದಾನಿಯು ಬ್ರಾಹ್ಮಣನಾಗಿರಬೇಕೆಂಬ ಕಡ್ಡಾಯವಿಲ್ಲ.[7]

ಗೋಸಹಸ್ರ ದಾನದ ಶಾಸನಗಳು :

ಕರ್ನಾಟಕದ ಶಾಸನಗಳ ಅನೇಕ ಪ್ರಕಾರಗಳಲ್ಲಿ ದಾನಶಾಸನ ಪ್ರಕಾರವೂ ಒಂದು. ಗೋಸಾಸ ಮೂಲತಃ ದಾನಶಾಸನ ಪ್ರಕಾರವಾಗಿದ್ದರೂ ಈ ಕೆಳಗೆ ಸೂಚಿಸಿದಂತೆ ಸಂಖ್ಯೆ, ಕಾಲ, ಭೌಗೋಲಿಕತೆ, ಪಾಠ, ಶಿಲ್ಪವಿನ್ಯಾಸ ಇತ್ಯಾದಿ ದೃಷ್ಟಿಗಳಿಂದಾಗಿ ಇವುಗಳನ್ನು ಪ್ರತ್ಯೇಕ ಪ್ರಕಾರವೆಂದು ಪರಿಗಣಿಸಬೇಕಾಗುತ್ತದೆ.

I.ವಿಜಯನಗರ ಅರಸು ಅಚ್ಯುತರಾಯನ ಕಾಲದ (೧೬ನೆಯ ಶತಮಾನ) ಕೆಲವು ಶಾಸನಗಳು ಅವನನ್ನು "ಹಿರಣ್ಯಾಶ್ವರಥಮಪಿ ತುಲಾಪುರುಷ ಗೋಸಹಸ್ರಂ ಹೇಮಾಶ್ವಗರ್ಭಂ....."[8] ಮುಂತಾದ ದಾನಮಾಡಿದವನೆಂದು

---

6. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (1979 ಪು. 225).
7. P.V. Kane - History of Darmasnastra, ch. 25. P 860-67
8. Ec. iii, Ng. 398 (ಕ್ರಿ.ಶ. 1443) ಇತ್ಯಾದಿ.

ಹೊಗಳುತ್ತ, 'ಗೋಸಹಸ್ರ' ಎಂಬ ಪದವನ್ನು ಬಳಸಿದ್ದರೂ ಇವನು ಗೋಸಹಸ್ರ ದಾನಮಾಡಿಲ್ಲ. ಇದು ಗತಾನುಗತಿಕ ಪ್ರಶಸ್ತಿ ಮಾಲಿಕೆ.

II.ಸುಮಾರು ಎಂಟು ಶಾಸನಗಳಲ್ಲಿ ಗೋಸಾಸ ಎಂಬ ಪದಗಳು ವಿಶೇಷಣಗಳಾಗಿ ಹೀಗೆ ಬಂದಿವೆ:

1.ಕೋಸಿಗ್ಗರಾ ಕೋಟೆಯಮ್ಮ ಗೋಸಾಸಿಯ ಪೆಣ್ಡಾತಿ ಪೊನ್ನಬ್ಬೆ...[9]

2.ಕೇಸಿಗರಾ ಜಯಮಲ್ಲ ಎಮ್ಬೊಸ ಗೋಸಾಸಿಪುದಾರುಂ ....[10]

3.ಮುತ್ತವುರೆರ ಸರುವಿ ಗೋಸಾಸಿಗ...[11]

4.ನಾವಿದರ ಗೋಸಾಸಿ ಗುಲುಗಂ...[12]

5.ಗೋಸಾಸಿಯ ಕೆಱೆಯ ತೆಂಕಣ.....[13]

6......ಳ್ಗೋಸಸ. ಮುತ್ತಯ್ಯನ ಮ(ಗ) ....[14]

7.ಗೋಸಾಸಿಗರಾ ಮಱುಧರ್ಮ್ಮ(ಕ್ಕೆ) ...[15]

8.ದುಗ್ಗಟಿ ಅವಸಿದಗ್ಗೋಸಾಸಿರದಯ್ಯೂಱು ನ್ರಿಬುಲ ಕೊಟ್ಟನ್.[16]

ಈ ವಾಕ್ಯಗಳಲ್ಲಿ ಬರುವ ವ್ಯಕ್ತಿಗಳು ಇಲ್ಲವೆ ಇವರ ಪೂರ್ವಜರು ಗೋಸಾಸ ದಾನ ಮಾಡಿದ ಕಾರಣ, ಅದು ಅವರಿಗೆ ಅಡ್ಡ ಹೆಸರಿನಂತೆ ಬಳಕೆಯಾಗಿದೆ. ಇಲ್ಲಿ 8 ನೆಯ ವಾಕ್ಯ ಅಷ್ಟಾಗಿ ಅರ್ಥವಾಗುವುದಿಲ್ಲ. ಈ 8 ಶಾಸನಗಳನ್ನು ಬಿಟ್ಟರೆ ನೇರವಾಗಿ ಗೋಸಾಸ ಘಟನೆಗೋಸುಗ ನಿಲ್ಲಿಸಿದ ಶಾಸನಗಳು 29. ಅವುಗಳ ವಿವರ ಹೀಗಿದೆ.

---

9. M.A.R. 1929, P. 152-79 ಬೆಳಾಗಿ, ಕಪ್ಪಗುಡ್ಡೆ ಹೋಬಳಿ.
10. EC VIII. Sb. 91 (910).
11. ತುಳುನಾಡಿನ ಶಾಸನಗಳು (ಸಂಪುಟ1) ಶಾಸನ 21.
12. EC VII SK. 195 (1007).
13. Ei.XV P 87 (1058).
14. Sii, XI-i, 29 (912).
15. ಎ.ಎಂ. ಅಣ್ಣಿಗೇರಿ, ಐಹೊಳೆ, ಸಂಸ್ಕೃತಿ ಮತ್ತು ಕಲೆ, 154 (708)
16. ಅದೇ, ಪು. 152 (8 ನೆಯ ಶತಮಾನ)

	ಊರು	ತಾಲುಕು	ಜಿಲ್ಲೆ	ಆಕರ	ಮುಖ್ಯಪಾಠ
೧.	ಪಟ್ಟದಕಲ್ಲು	ಹುನಗುಂದ	ವಿಜಾಪುರ	IA.XI, P೧೨೪ (೭೭೮-೯)	ಲೋಕಮಹಾದೇವಿಯರ ದೇಗುಲದ ಸೂಳೆ ಗೋಯಿನ್ದ ಪೊಟ್ಟಿಯ ಮಗಳು ಬಾದಿಪೊಟ್ಟಿಯೆಮ್ಬೊ[ಳ್] ಉತ್ತ[ಮ] ಗೋಸಾಸಮಿಟ್ಟೊ[ಳ್]
೨.	ಐಹೊಳೆ	ಹುನಗುಂದ	ವಿಜಾಪುರ	SII.XV, 515 (೯೪೫-೪೬)	ಗೋಸಾಸಿಯ ಮರ್ಮ್ಮದರಮ್ಮಯ ಗೋಸಹಸ್ರ[ಮಿ]ಟ್ಟಿಂ
೩.	ಐಹೊಳೆ	ಹುನಗುಂದ	ವಿಜಾಪುರ	SII.XI-1, 44 (೯೭೧)	ಶಾಂತಗಾವುಣ್ಡ ದೇಗುಲಂಮ್ಮಾಡಿಸಿ ಗೋಸಹಶ್ರಮಿಟ್ಟಿಂ
೪.	ಅಸೂಟಿ	ರಾಮದುರ್ಗ	ಬೆಳಗಾವ	SII.XX, 16 (೯೨೦-೨೧)	ಸಡಗರರ ತಿಟ್ಟಮ್ಮಂ ವಿಕ್ರಮ ವೆಂಬ ವರ್ಷದೊ[ಳ್] ಗೋಸಹಶ್ರಮಿಟ್ಟೊ[ಂ]
೫.	ಅಣ್ಣಿಗೇರಿ	ನವಲಗುಂದ	ಧಾರವಾಡ	SII.XI-i.5 (೭೫೦)	ಕೋಣ್ಣೆಶುಲರ ಕುಪ್ಪ ಕೀರ್ತ್ತಿವರ್ಮ್ಮ ಗೋಸಾಸಿಯಾ[ನಿ]ಱಿಸಿದಾ ಕೀರ್ತ್ತನಂ.
೬.	ಸೊರಟೂರು	ಗದಗ	ಧಾರವಾಡ	SII.XI-i.20 (೮೩೩)	ಮಾಸಿಗರ ಚಿದಾಣ್ಣ ಗೋಸಾಸ[ಂ] ಮಿಟ್ಟೊಂ
೭.	ಬೆಲಹೊಡ	ಗದಗ	ಧಾರವಾಡ	SII.XI-i.6 (೮೦೦)	ಎರೆವಾಸನೂ ಗೋಸಹಸ್ರ ಕೊಟ್ಟೋನ್
೮.	ಚಿಂಚಲಿ	ಗದಗ	ಧಾರವಾಡ	SII.XI-i.15 (೭೯೩)	...ಱಿಯಮ್ಮ ಗೋಸಾಸಮಿಟ್ಟೋ
೯.	ಗುಡಿಗೇರಿ	ಶಿರಹಟ್ಟಿ	ಧಾರವಾಡ	EI VI-P 257 (೮ನೆಯ ಶತಮಾನ)	ಇಂದಮ್ಮನ ಗೋಸಾಸದ ಮೇಂಟಿ.
೧೦.	ಹಳೇರಿತ್ತಿ	ಹಾವೇರಿ	ಧಾರವಾಡ	SII.XVIII-23 (೯೨೮)	ಅಣ್ಣಱಯ...[ಸನುಂ] ನರೆಯಂಗಲ್ಲ ಮಹಾಜನಮಿ [ಟ್ಟು...] ಸಮನಿಟ್ಟಂ...
೧೧.	ದೇವಗೇರಿ	ಹಾವೇರಿ	ಧಾರವಾಡ	SII.XVIII-306 (7-8ನೆಯ ಶತಮಾನ)	ಶ್ರೀಭಿಸರ ಅಮ್ಮಕೀರ್ತ್ತಿ ಕೊಟ್ಟನ್ ಗೋಸಾಸಮಾನ್
೧೨.	ಹಿರೇಮಾಗನೂರು	ರಾಣೇಬೆನ್ನೂರು	ಧಾರವಾಡ	SII.XVIII-20	ಮಾಗನ್ದೂರ[ಕೊಣ್ಣನ್ದ]... ಗವುಣ್ಡ... ಚಿತ್ರ ಗೋಸಸಮಿಟ್ಟು

೧೩.	ಹೂಲಿಹಳ್ಳಿ	ರಾಣೇಬೆನ್ನೂರು	ಧಾರವಾಡ	SII.XVIII-313 (8-9ನೆಯ ಶತಮಾನ)	ಗೋಸಾಸಮಿಟ್ಟು ನಿಜೆಸಿ ಮೇಣ್ಣೈ...ಮುಂ ಪೊನ್ನಮಾರನುಂ
೧೪.	ಹೂಲಿಹಳ್ಳಿ	ರಾಣೇಬೆನ್ನೂರು	ಧಾರವಾಡ	SII.XVIII-314 (8-9ನೆಯ ಶತಮಾನ)	ಸ್ವಸ್ತಿಶ್ರೀ ಮುಟ್ಟೊಡರ ಮಾರಪುಲಿ ಅಲ್ಲಾರು ಅಱಿಮಣ್ಣಮೆ ಪುದುರು [ವೆ]ಳೆಮತ್ತರಾ ಪಡಲ್ದಾನಮು ಕೊಟ್ಟು ಗೋಸಸ ಇಟ್ಟೋ
೧೫.	ಹಿರೇಕೆರೂರ	ಹಿರೇಕೆರೂರ	ಧಾರವಾಡ	ಅಪ್ರಕಟಿತ	-
೧೬.	ಹಿರೇಕೆರೂರ	ಹಿರೇಕೆರೂರ	ಧಾರವಾಡ	ಅಪ್ರಕಟಿತ	-
೧೭.	ಹೊಲಬಿಕೊಂಡ	ಹಿರೇಕೆರೂರ	ಧಾರವಾಡ	ಅಪ್ರಕಟಿತ	-
೧೮.	ಬೆಳಗಿ	ಕುಪ್ಪಗುಡ್ಡೆ	ಶಿವಮೊಗ್ಗೆ	MAR.1929, No.78 (964)	ಕೋಸಿಗರ ಕೋಟೆಯಮ್ಮಂ ಗೆ[illegible]ಪಸ್ರಮಾಟ್ಟಿಂ.
೧೯.	ಹುನವಳ್ಳಿ	ಸೊರಬ	ಶಿವಮೊಗ್ಗೆ	EC.VIII.ಸೊರಬ532 (964)	[illegible]ಯುಂ ಗಾಸಸ ಪೇಟ್ಟಿ.
೨೦.	ಕುಪ್ಪಟೂರು	ಸೊರಬ	ಶಿವಮೊಗ್ಗೆ	EC.VIII.ಸೊರಬ248 (950)	ಬಿದಿಯಮ್ಮಂ... ಕುಪ್ಪಟೂರ ಮಹಾಜನಕ್ಕೆ ಗೋಸಹಸ್ರಕೆ ಪೊನ್ನ ಕೊಟ್ಟು.
೨೧.	ಕುಪ್ಪಟೂರು	ಸೊರಬ	ಶಿವಮೊಗ್ಗೆ	EC.VIII.ಸೊರಬ245 (950)	ಚಟ್ಟಂ ಕುಪ್ಪಟೂರ ಮಹಾ ಜನಕ್ಕೆ ಗೋಸಹಸ್ರಂಗೊಟ್ಟು
೨೨.	ಓಟೂರು	ಸೊರಬ	ಶಿವಮೊಗ್ಗೆ	EC.VIII.ಸೊರಬ77 (940)	ಅಕ್ಕತಿ ಅಗ್ಗಸಂ ಗೋಸಸವಿಳ್ದ
೨೩.	ಓಟೂರು	ಸೊರಬ	ಶಿವಮೊಗ್ಗೆ	EC.VIII.ಸೊರಬ75 (940)	ಮಕತಿ...ಸ ಗೋಸಮಿಟ್ಟಿ
೨೪.	ಹಿರೇಮತ್ತೂರು	ಸಾಗರ	ಶಿವಮೊಗ್ಗೆ	EC.VIII.ಸಾಗರ100 (940)	ಪನ್ನಿಗೋಸಾಸಿ ಕೆಱೆಯಂ ಮಾಡಿಸಿ ಕೊನಲ್ಲಿಯ ಮಹಾ ಜನಕ್ಕೆ ಗೋಸಾಸಮಿಟ್ಟು
೨೫.	ಎಸಳೆ	ಸಿರಸಿ	ಕಾರವಾರ	ಅಪ್ರಕಟಿತ (986)	ತದ್ದವೂರ ಕಾಲ್ಕರ ಉಲ್ಲಮ ಗೋಸಾಸಮಿಟ್ಟ
೨೬.	ಎಸಳೆ	ಸಿರಸಿ	ಕಾರವಾರ	ಅಪ್ರಕಟಿತ (993)	ಅಂತಬಳ್ಳಿಯರ[ಮ]ಗ ಸಗರುವಣ ಗೋಸಾಸಮಿಟ್ಟಿಂ
೨೭.	ಹುಸ್ನಿ	ಸಿರಸಿ	ಕಾರವಾರ	ಅಪ್ರಕಟಿತ	-
೨೮.	ಹುಸ್ನಿ	ಸಿರಸಿ	ಕಾರವಾರ	ಅಪ್ರಕಟಿತ	-
೨೯.	ಸೋಮನಹಳ್ಳಿ	ಸಿರಸಿ	ಕಾರವಾರ	ಅಪ್ರಕಟಿತ	-

ಹೀಗೆ ಈವರೆಗೆ ಇಷ್ಟು ಲಿಖಿತ ಗೋಸಾಸ ಶಾಸನಗಳು ಪ್ರಕಟವಾಗಿವೆ. ಇನ್ನೂ ಪ್ರಕಟವಾಗದೆ ಉಳಿದ ಲಿಖಿತ ಮತ್ತು ಅಲಿಖಿತ ಅನೇಕ ಗೋಸಾಸ ಶಾಸನಗಳನ್ನು ನಾನು ಅಲ್ಲಲ್ಲಿ ನೋಡಿದ್ದೇನೆ. ಈ ೨೯ ಶಾಸನಗಳಿಂದ ತಿಳಿದು ಬರುವ ವಿಷಯ ಇಷ್ಟು :

III.ಭೌಗೋಲಿಕವಾಗಿ ವಿಜಾಪುರ ಜಿಲ್ಲೆಯ ಬಾದಾಮಿ, ಹುನಗುಂದ ತಾಲೂಕು ; ಬೆಳಗಾವ ಜಿಲ್ಲೆಯ ರಾಮದುರ್ಗ ತಾಲೂಕು; ಧಾರವಾಡ ಜಿಲ್ಲೆಯ ನವಲಗುಂದ, ಗದಗ ಶಿರಹಟ್ಟಿ, ಹಾವೇರಿ, ರಾಣೇಬೆನ್ನೂರು, ಹಿರೆಕೇರೂರ ತಾಲೂಕು; ಶಿವಮೊಗ್ಗೆ ಜಿಲ್ಲೆಯ ಕುಪ್ಪಗುಡ್ಡೆ ಸೊರಬ, ಸಾಗರ ತಾಲೂಕು; ಕಾರವಾರ ಜಿಲ್ಲೆಯ ಸಿರಸಿ ತಾಲೂಕುಗಳನ್ನು ಈ ಶಾಸನಗಳು ವ್ಯಾಪಿಸಿ ನಿಂತಿವೆ. ಈ ಗ್ರಾಮಗಳು ಪ್ರಾಚೀನ ಬೆಳ್ವೊಲ ೩೦೦, ಪುಲಿಗೆರೆ ೩೦೦, ಬನವಾಸಿ ೧೨೦೦೦ ನಾಡಿಗೆ ಸಂಬಂಧಿಸಿದುವೆಂಬುದು ಗಮನಿಸಬೇಕಾದ ಸಂಗತಿ. ಹೀಗೆ ಇವು ಅಲ್ಲೊಂದು ಇಲ್ಲೊಂದು ನಿಂತಿದ್ದರೂ ಕೆಲವೊಮ್ಮೆ ಒಂದೇ ಸ್ಥಳದಲ್ಲಿ ಒಂದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಗುಂಪಾಗಿ ಇರುವುದು ಇವುಗಳ ವೈಶಿಷ್ಟ್ಯ. ಐಹೊಳೆ, ಹೂಲಿಹಳ್ಳಿ, ಕುಪ್ಪಟೂರು, ಓಟೂರು, ಎಸಳೆ, ಹುಸ್ಕಿ, ಹಿರೇಕೆರೂರುಗಳಲ್ಲಿ ಒಂದಕ್ಕಿಂತ ಹೆಚ್ಚು ಶಾಸನಗಳಿರುವುದು ಈ ಮಾತಿಗೆ ಉದಾಹರಣೆಯೆನಿಸಿದೆ. ಐಹೊಳೆಯಲ್ಲಿ ಇತ್ತೀಚೆ ನಾನು ಇಂಥ ೬-೭ ಶಾಸನಗಳನ್ನು ನೋಡಿದ್ದೇನೆ. ಎಸಳೆಯಲ್ಲಿ ಒಂದೇ ಸ್ಥಳದಲ್ಲಿ ೧೫ ಕಂಬ, ಹುಸ್ಕಿಯಲ್ಲಿಯೂ ಒಂದೇ ಸ್ಥಳದಲ್ಲಿ ೧೫ ಕಂಬಗಳಿವೆ. (ಕೆಲವು ಕಂಬಗಳ ಮೇಲೆ ಬರವಣಿಗೆಯಿದೆ; ಕೆಲವು ಕಂಬಗಳ ಮೇಲೆ ಅಪೂರ್ಣ ಬರವಣಿಗೆಯಿದೆ, ಕೆಲವು ಕಂಬಗಳ ಮೇಲೆ ಬರವಣಿಗೆ ಇಲ್ಲ). ಎಸಳೆಯ ಒಂದು ಶಾಸನದ ಪಾಠ ಮೂರು ಕಂಬಗಳನ್ನು ವ್ಯಾಪಿಸಿದೆ.

IV.ಬಾದಾಮಿ ಚಾಲುಕ್ಯರ ಕೊನೆಯ ಅವಧಿಯಲ್ಲಿ ಪ್ರಾರಂಭವಾಗಿ ರಾಷ್ಟ್ರಕೂಟರ ಅವಧಿಯಲ್ಲಿ ಬೆಳವಣಿಗೆ ಹೊಂದಿ, ಕಲ್ಯಾಣ ಚಾಲುಕ್ಯರ ಆರಂಭದ ಅವಧಿಯಲ್ಲಿ ಇವು ನಿಂತುಬಿಟ್ಟಿವೆ. ಅಂದರೆ ೮,೯,೧೦ ಮೂರು ಶತಮಾನಗಳಲ್ಲಿ ಮಾತ್ರ ಇವು ಕಂಡುಬರುತ್ತವೆ. ಒಟ್ಟಿನಲ್ಲಿ ಇವು ಪಾಳಿಧ್ವಜದಂತೆ ರಾಷ್ಟ್ರಕೂಟರ ಕಾಲದ ವೈಶಿಷ್ಟ್ಯಗಳೆನಿಸಿವೆ.

V.ರಾಷ್ಟ್ರಕೂಟರ ಬಹುಪಾಲು ಶಾಸನಗಳಂತೆ ಇವುಗಳ ಪಾಠವ್ಯಾಪ್ತಿ ಸಣ್ಣದು. ರಾಜನ ಆಳಿಕೆಯನ್ನು ಸೂಚಿಸಿ, ಕೆಲವೊಮ್ಮೆ ತೇದಿಯನ್ನು ಹೇಳಿ, ಗೋಸಹಸ್ರ ಘಟನೆಯನ್ನು ನಿರೂಪಿಸಿ, ನಿಂತುಬಿಡುತ್ತವೆ. ಕೆಲವೊಮ್ಮೆ ಒಂದು ಶಾಸನ ಒಂದಕ್ಕಿಂತ ಹೆಚ್ಚು ಕಂಬಗಳಿಗೆ ಮುಂದುವರಿದಿರುತ್ತದೆ. ಉದಾ : ಎಸಳೆ.

VI.ಪುರುಷರಂತೆ ಸ್ತ್ರೀಯರೂ ಈ ದಾನಮಾಡಿದುದಕ್ಕೆ ಪಟ್ಟದಕಲ್ಲಿನ ಬಾದಿಪೊಟ್ಟ ಸೂಳೆಯೇ ಉದಾಹರಣೆಯಾಗಿದ್ದಾಳೆ. ಸಾಮಾನ್ಯವಾಗಿ ರಾಜರಲ್ಲದವರು ಅಂದರೆ ಪ್ರಜೆಗಳು, ಕೆಲವೊಮ್ಮೆ ಸೂಳೆ, ನಾವಿದ ಇತ್ಯಾದಿ ಕೆಳವರ್ಗದವರೂ ಇದನ್ನು ನೆರವೇರಿಸಿದ್ದಾರೆ. ಈ ಘಟನೆ ಮಹಾಜನದ ಸನ್ನಿಧಿಯಲ್ಲಿ ಜರುಗಿದಂತೆ ಕೆಲವು ಶಾಸನಗಳಲ್ಲಿದೆ. (ಉದಾ : ಕುಪ್ಪಟೂರು, ಹಿರೇಮತ್ತೂರು).

VII.'ಗೋಸಾಸಮಿಟ್ಟೊಂ' ಎಂಬುದೇ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಪಾಠ. ಕೊಟ್ಟೊನ್ ಗೋಸಸನಮಾನ್, ಗೋಸಾಸಿಯಾ(ನಿ)ಜೆಸಿದಾ, ಗೋಸಹಸ್ರಮಿಟ್ಟಿ, ಗೋಸಹಸ್ರ ಕೊಟ್ಟೊನ್, ಗೋಸಹಸ್ರಮಾಟ್ಟಂ[17] ಎಂಬ ರೂಪಗಳೂ ಸಿಗುತ್ತವೆ. 'ಇಟ್ಟಂ' ಎಂಬುದು 'ಕೊಟ್ಟೊನ್' ಎಂಬುದಕ್ಕೆ ಪರ್ಯಾಯ

---

17. ಮೂಲತಃ ಶಾಸನಗಳಲ್ಲಿ ಗೋಸಹಸ್ರ ಮಾಟ್ಟಂ' (ಗೋಸಹಸ್ರ ದಾನವನ್ನು ಮಾಡಿದವನು) ಎಂಬ ಪಾಠವಿದ್ದು, ಸಂಪಾದಕರು 'ಗೋಸಹಸ್ರಮಿಟ್ಟಂ' ಎಂದು ಕೆಲವೊಮ್ಮೆ ತಪ್ಪು ಗ್ರಹಿಸಿರಬಹುದೇ? ಎನಿಸುತ್ತದೆ.

ಪದವೆಂಬಂತೆ ಇಲ್ಲಿ ಬಳಕೆಯಾದುದು ಒಂದು ವೈಶಿಷ್ಟ್ಯ. ಗೋಸಾಸವೆಂದರೆ ಗೋಸಹಸ್ರವೆಂದೂ ಇದು ದಾನಪ್ರಕಾರವೆಂದೂ ಈ ಎಲ್ಲ ಪಾಠಗಳು ತಿಳಿಸುತ್ತವೆ.

VIII.ರಾಣೆಬೆನ್ನೂರು ತಾಲೂಕಿನ ಹಿರೇಮಾಗನೂರು ಶಾಸನದಲ್ಲಿ 'ಚಿತ್ರ ಗೋಸಾಶಮಿಟ್ಟು' ಎಂಬ ಮಾತು ಬರುತ್ತದೆ. ಇಲ್ಲಿಯ ಚಿತ್ರ ಎಂಬ ವಿಶೇಷಣದ ಅರ್ಥ ಸ್ಪಷ್ಟವಾಗಿವುದಿಲ್ಲ. ಬಾದಿಪೊಟ್ಟಿಯು 'ಉತ್ತ(ಮ) ಗೋಸಾಸಮಿಟ್ಟೊಳ್' ಎಂದು ಹೇಳಲಾಗಿದ್ದು, ಇಲ್ಲಿಯ 'ಉತ್ತಮ'ವೆಂಬುದು ಗಮನ ಸೆಳೆಯುವ ಪದವಾಗಿದೆ.

ಗೋಸಹಸ್ರ ದಾನಶಾಸನಗಳ ಶಿಲ್ಪ :

ಆಕಳು- ಕರು ಇದ್ದರೆ ದಾನಶಾಸನ, ಹೋರಾಟ - ಸ್ವರ್ಗಾರೋಹಣ - ಸ್ವರ್ಗವಾಸ ಸ್ತರಗಳಿದ್ದರೆ ವೀರಗಲ್ಲು, ಎತ್ತಿದ ಕೈಯಿದ್ದರೆ ಮಾಸ್ತಿ ಶಾಸನೆಂದು ತಟ್ಟನೆ ಹೇಳುವಂತೆ, ಗೋಸಾಸ ಶಾಸನಗಳನ್ನೂ ನೋಡಿದ ತಕ್ಷಣ ಗುರುತಿಸಬಹುದು. ಇವು ಮಿಕ್ಕ ಶಾಸನಗಳಂತೆ ಫಲಕದ ಆಕಾರದಲ್ಲಿರದೆ ಕಂಬದ ಆಕಾರದಲ್ಲಿರುತ್ತವೆ. (ಉದಾ : ಇಂದಮ್ಮನ ಗೋಸಾಸನ ಮೇಂಟಿ). ಇದು ದಾನ ಅಥವಾ ತ್ಯಾಗದ ದಾಖಲೆ. ಪಂಪಭಾರತದಲ್ಲಿ "ಚಾಗದ ಕಂಬಮಂ ನಿಜೆಸಿ, ಬೀರದ ಶಾಸನಮಂ ನೆಗಟ್ಟಿ" ಎಂಬ ಮಾತು ಬರುವುದರಿಂದ, ದಾನಕ್ಕಾಗಿ ನಿಲ್ಲಿಸಿದುವು ಮೂಲತಃ ಕಂಬರೂಪದಲ್ಲಿರುತ್ತಿರಬಹುದೇ? ಎನಿಸುತ್ತದೆ.

ನಾಲ್ಕು ಮೈಯುಳ್ಳ ಈ ಕಂಬದ ಎತ್ತರ ಸುಮಾರು ೪-೫ ಅಡಿ. ಮೇಲ್ಭಾಗ ಕಮಾನಿನಂತೆ ಅರ್ಧವರ್ತುಲಾಕಾರವಾಗಿರುತ್ತದೆ. ಸಾಮಾನ್ಯವಾಗಿ ಈ ಅರ್ಧ ವರ್ತುಲಾಕಾರದಲ್ಲಿ ಕಲಶ, ಕಲಶದ ಎಡಬಲದಲ್ಲಿ ಮೀನು ಬಿಡಿಸಲಾಗಿರುತ್ತದೆ. ಎಸಳೆಯ ಗೋಸಾಸ ಕಂಬದ ಒಂದು ಭಾಗದಲ್ಲಿ ಕಲಶ, ಇನ್ನೊಂದು ಭಾಗದಲ್ಲಿ ಆನೆ, ನೊಗ ಹೇರಿದ ಎರಡು ಎತ್ತು. ಎರಡು ಹಂಸ- ಒಂದು ಆಮೆಯ ಪಂಚತಂತ್ರ ಘಟನೆ, ಎರಡು ನರಿ, ಒಂದು ಗಣಪತಿ ಚಿತ್ರಗಳನ್ನು ಬಿಡಿಸಲಾಗಿದೆ. ಇಲ್ಲಿ ಇಂಥದೇ ಇನ್ನೊಂದು ಗೋಸಾಸ ಶಾಸನವಿದೆ. ಹುಸ್ಕಿ ಗೋಸಾಸ ಶಾಸನದಲ್ಲಿ ಗಣಪತಿಗೆ ಬದಲು ಅರ್ಚಕ ಶಿವಲಿಂಗಗಳಿವೆ. ಮಿಕ್ಕ ಚಿತ್ರಗಳೆಲ್ಲ ಎಸಳೆ ಶಾಸನದಂತೆ. ಈ ಚಿತ್ರಗಳನ್ನು ಏನೆಂದು ಅರ್ಥೈಸಬೇಕೋ ತಿಳಿಯದು.

ಒಟ್ಟಿನಲ್ಲಿ, ಶಿಲ್ಪವಿನ್ಯಾಸ ದೃಷ್ಟಿಯಿಂದ ಕಂಬದಂತಿರುವ, ಕಲಶ ಇತ್ಯಾದಿ ವಿಶಿಷ್ಟ ಚಿತ್ರಗಳನ್ನೊಳಗೊಂಡ ತುಂಬ ಆಕರ್ಷಕ ಶಾಸನವರ್ಗವಿದು. ಆದುದರಿಂದ ಇವನ್ನು ಇನ್ನು ಮುಂದೆ ವೀರಗಲ್ಲು, ಮಾಸ್ತಿಕಲ್ಲು, ನಿಷಧಿಕಲ್ಲುಗಳಂತೆ ಪ್ರತ್ಯೇಕ ವರ್ಗವೆಂದು ಪರಿಗಣಿಸಿ, 'ಗೋಸಾಸಗಲ್ಲು' ಇಲ್ಲವೆ 'ಗೋಸಾಸಶಾಸನ' ಎಂದು ಭಾವಿಸುವುದು, ಕರೆಯುವುದು ಸೂಕ್ತವಾಗಿದೆ.

■■

ಆಕರ : ಮಾರ್ಗ ಸಂಪುಟ–೨

೪

ಓವನಿಗೆ

'ಓವನಿಗೆ' ಪ್ರಾಚೀನ ಕರ್ನಾಟಕದ ಒಂದು ಜಾನಪದ ಸಾಹಿತ್ಯ ಪ್ರಕಾರ. ಹುಮ್ಮಚ ಶಾಸನದ

ಏವೇೞ್ವುದೊ ಶಿವಮಾರ ಮ ।
ಹೀವಳಯಾಧಿಪನ ಸುಭಗ ಕವಿತಾಗುಣಮಂ।
ಭೂವಳಯದೊಳ್ ಗಜಾಷ್ಟಕ ।
ಮೋವನಿಗೆಯುಮೊನಕೆವಾಡುಮಾದುದೆ ಪೇೞ್ಗುಂ ॥[೧]

ಎಂಬ ಪದ್ಯದಲ್ಲಿ ಒನಕೆವಾಡಿನ ಜೊತೆ ಓವನಿಗೆಯ ಉಲ್ಲೇಖ ಬರುತ್ತದೆ. ಇದರ ಬಗೆಗೆ ಡಾ. ಮುಗಳಿ, ಶ್ರೀ. ಪ್ರ. ಗೋ. ಕುಲಕರ್ಣಿ ಮೊದಲಾದವರು ಅಲ್ಲಲ್ಲಿ ವಿವರಣೆ ನೀಡಿದ್ದಾರೆ. ಅದೆಲ್ಲವನ್ನೂ ಹಿನ್ನೆಲೆಯಾಗಿಟ್ಟುಕೊಂಡು "ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ" ಕೃತಿಯಲ್ಲಿ ನಾನು ಒಂದಿಷ್ಟು ಚರ್ಚೆ ನಡೆಸಿದ್ದೇನೆ. ಇಲ್ಲಿ ಮಾನಸೋಲ್ಲಾಸದ "ತಥಾ ಮಹಾರಾಷ್ಟ್ರೇಷು ಯೋಷಿದ್ಭಿಃ ಓವೀ ಗೇಯಾತು ಕಂಡನೇ"[2] ಅಂದರೆ ಮಹಾರಾಷ್ಟ್ರ (ಕರ್ನಾಟ?)ದ ಸ್ತ್ರೀಯರು ಕಂಡನ ಸಮಯದಲ್ಲಿ ಓವಿಯನ್ನು ಹಾಡುತ್ತಾರೆ. ಕಂಡನವೆಂದರೆ ಕುಟ್ಟುವಿಕೆ. ಆದುದರಿಂದ 'ಓವಿ','ಓವನಿಗೆ' ಎಂದರೆ 'ಕುಟ್ಟುವ ಹಾಡು' ಎಂಬ ಅಭಿಪ್ರಾಯವನ್ನು ಮಂಡಿಸಿದ್ದೇನೆ. ಆದರೆ 'ಬೀಸುವಾಗ ಓವಿ ನೆನಪಾಗುತ್ತದೆ' ಎಂಬ ಮರಾಠಿ ಗಾದೆಯನ್ನವಲಂಬಿಸಿ ಡಾ. ಮುಗಳಿಯವರು ಓವಿ, ಓವನಿಗೆ ಎಂದರೆ 'ಬೀಸುವ ಹಾಡು' ಎಂದು ಊಹಿಸಿದ್ದಾರೆ.

ಪ್ರ. ಗೋ. ಕುಲಕರ್ಣಿಯವರು 'ಕಂಡನ' ಎಂಬ ಪದಕ್ಕೆ ಕುಟ್ಟು, ಮೊರದಿಂದ ಕೇರು ಎಂದು ಎರಡು ಅರ್ಥಗಳಿವೆಯೆನ್ನುತ್ತ, ಓವಿಯನ್ನು ಕೇರುವಾಗಲೂ ಹಾಡಬಹುದೆಂದು ಹೇಳುತ್ತಾರೆ. ಮುಂದುವರಿದು ಓವನೆ>ಒನೆ ಎಂದಾಗುವುದೆಂದು ಹೇಳಿ, 'ಒನೆ ಶೂರ್ಪಕರಣೇ' ಎಂಬ ಕೇಶಿರಾಜನ ಮಾತನ್ನು ಆಧಾರವಾಗಿ ಹಿಡಿಯುತ್ತಾರೆ.

ಒಟ್ಟಿನಲ್ಲಿ ಓವನಿಗೆ ಎಂದರೆ ಕುಟ್ಟುವ ಹಾಡು, ಬೀಸುವ ಹಾಡು, ಕೇರುವ ಹಾಡು ಎಂದು ಈವರೆಗೆ ಅರ್ಥಮಾಡಲಾಗಿದೆ. ಓವನಿಗೆಯೆಂಬ ಪದ ಈ ಶಾಸನವನ್ನು ಬಿಟ್ಟರೆ ಬೇರೆ ಯಾವ ಕನ್ನಡ ಕೃತಿಯಲ್ಲಿಯೂ ಕಂಡುಬರುವುದಿಲ್ಲ[೩] ಎಂದು ಹೇಳಿ ನಿಂತು ಬಿಡಲಾಗಿತ್ತು. ಆದರೆ ಇತ್ತೀಚೆ ಆಚಣ್ಣನ ವರ್ಧಮಾನಪುರಾಣದಲ್ಲಿ ಈ ಪದ ಬಳಕೆಯಾದ ವಿಷಯ ನನ್ನ ಗಮನಕ್ಕೆ ಬಂದಿತು.

---

೧. E.C>VIII ನಗರ, ೩೫, ಹುಮ್ಮಚ.

೨. ಮಾನಸೊಲ್ಲಾಸ ೪-೧೬-೫೫೩.

೩. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪು. ೧೭೦.

ಜ್ವಲನಜಟಿ ಖೇಚರನ ಮಗಳು ಸ್ವಯಂಪ್ರಭೆ ಪ್ರಜಾಪತಿ ಮಹಾರಾಜನ ಮಗ ತ್ರಿಪೃಷ್ಟನ ವಿರಹದಲ್ಲಿ ಕೊರಗುವ ಸಂದರ್ಭ. ಆಗ ಗೆಳತಿಯರೆಲ್ಲ ತ್ರಿಪೃಷ್ಟನ ಗುಣವರ್ಣನೆ ಮಾಡುತ್ತ,

ಆಡುವ ಮುಗ್ಧಬಾಳಕಿಯರುಂ ನುಡಿಜಾಣೆಯರಾದರೀಗಳಿಂ।
ಪೋಡದ ನಿನ್ನ ಮಾತುಗಳನಾಡಿಯೆ; ಕೇಳಿಸಲಾವ ಮೆಯ್ಯೊಳಂ।
ಹಾಡುವರಾದಗೋ [=ರೋ]ವನಿಗೆವಾಡುವರುಂ ನೃಪ ನಿನ್ನ ಗೀತಮಂ।
ಹಾಡಿಯೆ; ಖೇಚರಾತ್ಮಜೆಗೆ ಭಾವಿಪೊಡಿಂತುಟೆ ಮೆಯ್ಮೆ ಬೇಟದಾ॥[೪]
[ಚೌಕ ಕಂಸಿನೊಳಗಿನ ಪಾಠ ನಾನು ಊಹಿಸಿದುದು.]

ನಿನ್ನ ವಿಷಯವಾಗಿ ಮಾತನಾಡಿ ಆಡಿ ಮುಗ್ಧಬಾಲಕಿಯರು 'ನುಡಿಜಾಣೆ'ಯರಾದರು; ನಿನ್ನನ್ನು ಕುರಿತು ಗೀತವನ್ನು ಹಾಡಿ ಹಾಡಿ ಓವನಿಗೆ ಹಾಡುವವರೂ ಸುಪ್ರಸಿದ್ಧ ಗಾಯಕಿಯರಾದರು. ಖೇಚರಾತ್ಮಜೆಯಾದ ಸ್ವಯಂಪ್ರಭೆಗೆ ಆದ ಬೇಟದ ಆಧಿಕ್ಯ ಎಂತಹದೋ!- ಎಂದು ಈ ಪದ್ಯದ ಅರ್ಥ. ಇದರಿಂದ 'ಓವನಿಗೆ'ಯ ಬಗ್ಗೆ ಕೆಳಗಿನ ಸಂಗತಿಗಳು ಸ್ಪಷ್ಟವಾಗುತ್ತವೆ.

೧. ಓವನಿಗೆ ಹೆಣ್ಣುಮಕ್ಕಳ ಹಾಡು.

೨. ಓವನಿಗೆ ಪ್ರೌಢವಲ್ಲದ ಸಾಮಾನ್ಯ ಹಾಡು.

೩. ಓವನಿಗೆ ಹಾಡುವವರು ಸಾಮಾನ್ಯರು.[೫]

■■

ಆಕರ : ಮಾರ್ಗ ಸಂಪುಟ–೧

---

೪. ವರ್ಧಮಾನ ಪುರಾಣಂ, ೪-೩೬.

೫. ಹೆಚ್ಚಿನ ವಿಷಯಕ್ಕಾಗಿ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ ೧೭೦, ಅಡಿಟಿಪ್ಪಣಿ ೫೧ ನೋಡಿರಿ.

೫

ಕವಿರಾಜಮಾರ್ಗ ವರೆಗಿನ ಶಾಸನಸಾಹಿತ್ಯ

ಜನಪದಸಾಹಿತ್ಯ, ಕವಿಸಾಹಿತ್ಯ, ಶಾಸನಸಾಹಿತ್ಯ - ಈ ಮೂರರ ಮಹಾಸಂಗಮವೆನಿಸಿದ ಕನ್ನಡಸಾಹಿತ್ಯದ ಪರಂಪರೆ ಮತ್ತು ಪ್ರಗತಿಗಳ ಪರಾಮರ್ಶೆಯೇ 'ಸಮಗ್ರ ಕನ್ನಡ ಸಾಹಿತ್ಯಚರಿತ್ರೆ'ಯಾಗಿದೆ. ಇವುಗಳಲ್ಲಿ ಪರಿಸರ ಪ್ರಜ್ಞೆ, ಸಾಮಾನ್ಯರ ಕಂಠಸ್ಥಭಾಷೆ, ಕವಿಗಳ ಗ್ರಂಥಸ್ಥಭಾಷೆ ಇತ್ಯಾದಿ ಲಕ್ಷಣಸಮನ್ವಿತವಾಗಿದೆ, ಶಾಸನಕ್ಷೇತ್ರ. ಕವಿರಾಜಮಾರ್ಗಪೂರ್ವದ ಅಜ್ಞಾತಯುಗದಲ್ಲಿ ಸಿಗುವ ಸಾಹಿತ್ಯಿತ ಸಾಮಗ್ರಿಯೆಂದರೆ, ಈ ಶಾಸನಗಳು ಮಾತ್ರ. ಹೀಗಾಗಿ ಕವಿರಾಜಮಾರ್ಗದ ವರೆಗಿನ ಕನ್ನಡ ಸಾಹಿತ್ಯಚರಿತ್ರೆಯೆಂದರೆ ಇಲ್ಲಿ ಸಿಗುವ ಶಾಸನಗಳ ಸಾಹಿತ್ಯಚರಿತ್ರೆಯೇ ಆಗಿದೆ.

ಕನ್ನಡದ ಕವಿಸಾಹಿತ್ಯ ಹಾಗೂ ಶಾಸನಸಾಹಿತ್ಯಗಳು ಕೈ- ಕೈ ಹಿಡಿದುಕೊಂಡು, ಏಕಕಾಲಕ್ಕೆ ಒಂದು ಘಟ್ಟದಿಂದ ಇನ್ನೊಂದು ಘಟ್ಟಕ್ಕೆ ಹೆಜ್ಜೆ ಇಟ್ಟುದು 'ಕವಿರಾಜಮಾರ್ಗ' ಸಮಯದಲ್ಲಿ ಮಾತ್ರ. ಹೀಗಾಗಿ ಪ್ರಥಮ ಉಪಲಬ್ಧಗ್ರಂಥವೆಂದು ಅಭಿಮಾನನಿಷ್ಠವಾಗಿ, ಸಂಕೀರ್ಣಕೃತಿಯೆಂದು ವಿಷಯನಿಷ್ಠವಾಗಿ ನೋಡುವುದರ ಜೊತೆಗೆ ಸಂಕ್ರಮಣ ಕಾಲದ 'ಸೀಮಾಕೃತಿ'ಯೆಂದು ಪರಿಸರನಿಷ್ಠವಾಗಿ ನೋಡಬೇಕಾದ ಐತಿಹಾಸಿಕ ಮಹತ್ವ ಕವಿರಾಜಮಾರ್ಗಕ್ಕೆ ಸಲ್ಲುತ್ತದೆ. ಕಾರಣ ಕವಿರಾಜಮಾರ್ಗ ವರೆಗಿನ ಕವಿಸಾಹಿತ್ಯದ, ಶಾಸನಸಾಹಿತ್ಯದ ಅಭ್ಯಾಸವೆಂದರೆ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಸರಿದುಹೋದ ಒಂದು ಘಟ್ಟದ ಅಥವಾ ಘಟ್ಟಗಳ ಅಭ್ಯಾಸವಾಗಿದೆ.

ಉಪಲಬ್ಧ ಸಾಮಗ್ರಿಯನ್ನು ಅವಲಂಬಿಸಿ ಹೇಳುವುದಾದರೆ, ಕವಿರಾಜಮಾರ್ಗದ ಹಿಂದೆ ಶಾಸನಪ್ರಪಂಚದಲ್ಲಿ ಎರಡು ಘಟ್ಟಗಳು ಕಾಣುತ್ತವೆ. ಒಂದು : ಪ್ರಾಕೃತ ಶಾಸನಯುಗ, ಎರಡು : ಸಂಸ್ಕೃತ - ಕನ್ನಡ ಶಾಸನಯುಗ. ಎರಡೂ ಕೂಡಿ ಸುಮಾರು 500 ಶಾಸನಗಳು.

ಪ್ರಾಕೃತ ಶಾಸನಯುಗ :

ಕರ್ನಾಟಕದಲ್ಲಿ ಲಿಪಿ ಉಗಮಿಸಿದ ಅಥವಾ ಆಗಮಿಸಿದ ಕಾಲ ಇನ್ನೂ ಅನಿರ್ಣೀತ. ಈಗಿನಮಟ್ಟಿಗೆ, ಅಶೋಕನ ಶಾಸನಗಳೇ ಈ ನಾಡಿನ ಪ್ರಪ್ರಥಮ ಬರವಣಿಗೆಗಳು. ಇವುಗಳ ಕಾಲ ಕ್ರಿ. ಪೂ. ೩೦೦. ಇಲ್ಲಿಂದ ಕ್ರಿ.ಶ. ೪೫೦ರ ವರೆಗಿನ ೭೫೦ 'ವರ್ಷಗಳ ಕಾಲ ಪ್ರಾಕೃತ ಶಾಸನಯುಗ.' ಈ ಅವಧಿಯಲ್ಲಿ ಸಿಕ್ಕ ಪ್ರಾಕೃತ ಶಾಸನಗಳು ಸಮಾರು ೧೩, ಇವುಗಳಲ್ಲಿ ಅಶೋಕನ ಶಾಸನಗಳು ಆರು, ಮಿಕ್ಕವು ಏಳು.

ಉತ್ತರದ ಅಫಘಾನಿಸ್ಥಾನದಿಂದ, ದಕ್ಷಿಣದ ಕರ್ನಾಟಕದ ವರೆಗೆ ಕಂಡುಬರುವ ಅಶೋಕನ ಶಾಸನಗಳಲ್ಲಿ ಒಂದು ವರ್ಗ 'ಲಘು ಶಿಲಾಲಿಪಿಗಳು'. ಇವುಗಳ ಸಂಖ್ಯೆ ಹದಿಮೂರು. ಇವುಗಳಲ್ಲಿ ದಕ್ಷಿಣ ಭಾರತಕ್ಕೆ ಸಂಬಂಧಪಟ್ಟುವು ಎಂಟು. ಈ ಎಂಟರಲ್ಲಿ ಆರು ಕರ್ನಾಟಕದಲ್ಲಿ ಸಿಗುತ್ತವೆ. ಅವು : ಚಿತ್ರದುರ್ಗ

ಜಿಲ್ಲೆಯ ಬ್ರಹ್ಮಗಿರಿ, ಗಿರಿಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರ;[೧] ರಾಯಚೂರು ಜಿಲ್ಲೆಯ ಪಾಲ್ಕಿಗುಂಡ ಗವಿಮಠ[೨] ಮತ್ತು ಮಸ್ಕಿ[೩] - ಹೀಗೆ ಎರಡು ಪ್ರದೇಶಗಳಲ್ಲಿವೆ. ಚಿತ್ರದುರ್ಗ ಜಿಲ್ಲೆಯ ಶಾಸನಗಳ ಆರಂಭದಲ್ಲಿ ಬರುವ ಆದೇಶರೂಪದ ಒಕ್ಕಣಿಕೆ, ಅಂತ್ಯದಲ್ಲಿ ಬರುವ ಕೆಲವು ಸಾಲುಗಳನ್ನು ಬಿಟ್ಟರೆ ಈ ಎರಡೂ ಪ್ರದೇಶಗಳ ಶಾಸನಪಾಠ ಒಂದೇ ಆಗಿದೆ.

ಪ್ರದೇಶಗಳಿಗೆ ತಕ್ಕಂತೆ ಬ್ರಾಹ್ಮಿ, ಖರೋಷ್ಠಿ, ಅರಮೆಯಿಕ್, ಗ್ರಿಕ್ ಲಿಪಿಗಳನ್ನೂ ಪ್ರಾಕೃತ ಅರಮೆಯಿಕ್, ಗ್ರೀಕ್ ಭಾಷೆಗಳನ್ನೂ ಬಳಸಿದ್ದಾನೆ. ಆ ಕಾಲಕ್ಕಾಗಲೇ ಈ ನಾಡಿನಲ್ಲಿ ಪ್ರಾಕೃತ ಭಾಷೆ ಬ್ರಾಹ್ಮೀ ಲಿಪಿಗಳು ಬಳಕೆಯಲ್ಲಿದ್ದುದೇ ಇದಕ್ಕೆ ಕಾರಣವಾಗಿರಬಹುದು. ಮೇಲಾಗಿ ಲಭ್ಯ ಆಕರಗಳನ್ನಾಧರಿಸಿ ಹೇಳುವುದಾದರೆ ಉತ್ತರಬ್ರಾಹ್ಮಿಯಿಂದ ಈ ದಕ್ಷಿಣ ಬ್ರಾಹ್ಮಿ ಕೊಂಚ ಭಿನ್ನವಾಗಿರುವುದರಿಂದ ಅದನ್ನು ಬಹುಕಾಲದಿಂದಲೂ ಇಲ್ಲಿ ಬಳಸುತ್ತಿದ್ದಿರಬೇಕು. ಆದರೆ ಅಂದು ಕನ್ನಡ ಭಾಷೆಗೂ ಬ್ರಾಹ್ಮೀಲಿಪಿಯನ್ನು ಬಳಸಲಾಗಿತ್ತೇ ? ಎಂಬುದು ಅನುಮಾನ.

ಈ ಶಾಸನಗಳ ಭಾಷೆ ಪ್ರಾಕೃತ. ಬೌದ್ಧ ಗ್ರಂಥಗಳಲ್ಲಿ ಬಳಸಿದ ಪಾಕೃತದಿಂದ ಭಿನ್ನವಾಗಿರುವ ಇದನ್ನು ಶಾಸನಪ್ರಾಕೃತವೆಂದು ಕರೆಯಬಹುದು. ಆಜ್ಞಾರೂಪದ ಸರಳ ಗದ್ಯವಾಗಿರುವ ಅಶೋಕನ ಶಾಸನಗಳಲ್ಲಿ ಪ್ರಜಾಕಲ್ಯಾಣದ ಪ್ರಾಮಾಣಿಕ ಅಂತಃಕರಣ ತುಂಬಿನಿಂತಿದ್ದರೂ ಸಾಹಿತ್ಯಗುಣ ಇಲ್ಲವೆಂದೇ ಹೇಳಬೇಕು. ಇವುಗಳ ತರುವಾಯ ಸಿಗುವ ಏಳು ಪ್ರಾಕೃತ ಶಾಸನಗಳು ಹೀಗಿವೆ.

೧.ವಡಗಾಂವ ಮಾಧವಪುರ[೪]

(ಕ್ರಿ.ಶ. ೧ನೆಯ ಶತಮಾನ)

೨.ಮ್ಯಾಕದೋನಿ ಸಾತವಾಹನ ಸಿರಿಪುಳುಮಾಯಿ[೫]

(ಕ್ರಿ.ಶ. ೧೩೫)

೩.ಮಳವಳ್ಳಿ - ಚುಟುವಂಶದ ಸಾತಕರ್ಣಿ[೬]

(ಕ್ರಿ.ಶ.ಸು. ೧೫೦)

೪.ಬನವಾಸಿ - ಚುಟುವಂಶದ ಸಾತಕರ್ಣಿ[೭]

(ಕ್ರಿ.ಶ.ಸು. ೩೦೦) ಗುಂದಜತ

---

1. E. Hultzch : Corpus Inscription Indicarum, (Vol, I Inscriptions of Ashoka) 1925.p. 175, 178, 179.
2. R.L.Turner: H.A.S. Vol. X. The Gavimath and Palkigunda Incriptions of Asoka (1925).
3. E. Hultzch: Corpus inssription Indiacarum I (Inscriptions of Ashoka) 1925 p. 174.
4. ಆರ್.ಎಸ್. ಪಂಚಮುಖಿ ; ಮುಂಬೈ ರಾಜ್ಯದಲ್ಲಿ ಕನ್ನಡ ಸಂಶೋಧನೆ (1950) ಪು. 2-3.
5. E.I.XVI p. 153 (A.D. 35).
6. E.C. VII ಶಿಕಾರಿಪುರ 263 (A.D. 130)
7. SII. XX-1. A.D. 300)

೫.ಹಿರೇಹಡಗಲಿ - ಕದಂಬ ಶಿವಸ್ಕಂಧವರ್ಮ[8]

(ಕ್ರಿ.ಶ.ಸು. ೩೦೦)

೬.ಚಂದ್ರವಳ್ಳಿ - ಕದಂಬ ಮಯೂರಶರ್ಮ[9]

(ಕ್ರಿ.ಶ.ಸು. ೨೦೦)

೭.ಮಳವಳ್ಳಿ - ಕದಂಬ ಶಿವಸ್ಕಂಧವರ್ಮ[10]

(ಕ್ರಿ.ಶ.ಸು. ೨೫೦)

ಇವಲ್ಲದೆ ಇತ್ತೀಚೆ ಗುಲ್ಬರ್ಗಾ ಜಿಲ್ಲೆಯ ಬೆಳ್ವಾಡಗಿ[11]ಯಲ್ಲಿ ಒಂದು ಸನ್ನತಿ[12]ಯಲ್ಲಿ ಹಲವು ಬಿಡಿ ಬರಹಗಳು ಸಿಕ್ಕಿವೆ. ಅಶೋಕನ ಶಾಸನಗಳಲ್ಲಿ ಒಬ್ಬನೇ ವ್ಯಕ್ತಿ, ಒಂದೇ ಧರ್ಮ, ಒಂದೇ ಉದ್ದೇಶವಿದ್ದರೆ ಇಲ್ಲಿ ಹಲವು ವ್ಯಕ್ತಿ, ಹಲವು ಧರ್ಮ, ಹಲವು ಉದ್ದೇಶಗಳು ಕಂಡುಬರುವುದು ಕರ್ನಾಟಕದ ಶಾಸನವಾಹಿನಿ ಕವಲೊಡೆಯುತ್ತಿರುವುದರ ನಿದರ್ಶನವಾಗಿದೆ.

ಬ್ರಾಹ್ಮಣರಾದ ಕದಂಬರು ಪಟ್ಟಕ್ಕೆ ಬರುತ್ತಲೇ ಈ ಶಾಸನಗಳಲ್ಲಿ ಕಾಣತೊಡಗಿದ 'ಬಹ್ಮಂ ದೆಜ್ಜಂ', 'ಚಾತುವೆಜ್ಜಂ ಸಿದ್ಧಿತಂ ನಿಗಮವಿಧಿತಂ', 'ನನ್ದನುತ್ತ ಗೋಬ್ಬಮ್ಹಾಣ'[13] ಎಂಬ ಪದಗಳು ಬ್ರಾಹ್ಮಣರಿಗೆ ಸಿಕ್ಕ ಸ್ವಾಗತ ಗಮನಾರ್ಹವಾಗಿದೆ. ಪಲ್ಲವರ ಹಿರೇಹಡಗಲಿ ತಾಮ್ರ ಶಾಸನ, ಕದಂಬರ ಮಳವಳ್ಳಿಯ ಶಿಲಾಶಾಸನಗಳು ಪ್ರಾಕೃತವಾಗಿದ್ದರೂ ಕೊನೆಯಲ್ಲಿ ಸಂಸ್ಕೃತ ಮಂಗಳವಾಕ್ಯಗಳು ಬಂದಿವೆ. ಬೌದ್ಧ ಒಲುಮೆಯುಳ್ಳ ಶಾತವಾಹನರ ಕಾಲಕ್ಕಿಂತ, ಚುಟು, ಪಲ್ಲವರ ಪ್ರಾಕೃತಶಾಸನಗಳಲ್ಲಿ ಸಂಸ್ಕೃತದ ಪ್ರಭಾವ ಕ್ರಮೇಣ ವರ್ಧಿಸುತ್ತ ಬಂದು, ಕದಂಬರಲ್ಲಿ ಅದು ದಟ್ಟವಾಗಿ ಕವಿದಿದೆ, ಹೀಗಾಗಿ ಎರಡೂ ಪ್ರಾಕೃತವೇ ಆಗಿದ್ದರೂ ಅಶೋಕನ ಶಾಸನಗಳ ಪ್ರಾಕೃತ, ತರುವಾಯ ಸಂಸ್ಕೃತಭೂಯಿಷ್ಠವಾಗಿ 'ಮಹಾರಾಷ್ಟ್ರೀ ಪ್ರಾಕೃತ'ವಾಗಿ ಬೆಳೆದಿದೆ, ಉದಾ : "ಸುವಣಂಗಿರೀತೆ ಅಯಪುತಸ ಮಹಾಮಾತಾಣಂ ಚ ವಚನೇನ ಇಸಿಲಸಿ ಮಹಾಮಾತಾ ಆರೋಗಿಯಂ ವತವಿಯಾ ಹೇವಂ ಚ ವತವಿಯಾ"[14] ಎಂಬ ಅಶೋಕನ ಶಾಸನಗಳಲ್ಲಿಲ್ಲದ ಸಂಸ್ಕೃತ ಪ್ರಭಾವವು "ಸಿದ್ಧಮ|| ಜಯಂತಿ ಭಗವಾನ್ ಮಟ್ಟಪಟ್ಟಿದೇವೋ ವೈಜಯನ್ತೀಪುರರಾಜಾ ಮಾನವ್ಯಸಗೋತ್ತೊ ಹಾರೀತಿ ಪುತ್ತೋ ವಿಣ್ಹುಕಡ್ಡ ಚುಟುಕುಲಾನನ್ದ ಸಾತಕಣ್ಣಿ ಆಣಪಯತಿ ಮಹಾವಲಭುಂ ರಜ್ಜುಕಂ[15] ಎಂಬ ಚುಟುವಂಶೀಯರ ಶಾಸನದಲ್ಲಿ ಕಂಡುಬರುತ್ತಿರುವುದು ಇದಕ್ಕೆ ನಿದರ್ಶನವೆನಿಸಿದೆ. ಹೀಗೆ ಪ್ರಾಕೃತವನ್ನು ಹಿಂದೆ ಹಾಕಿ, ಮಹಾರಾಷ್ಟ್ರೀಪ್ರಾಕೃತ ನಮ್ಮ ನಾಡಿನಲ್ಲಿ ನಡೆದು ಬರುತ್ತಿದ್ದುದನ್ನು ಕಾಣಬಹುದು. ಈ ಶಾಸನಗಳಲ್ಲಿಯ 'ಸಿರಿ', 'ದೇಸಕಾಲ', 'ಸಾಸನ', 'ತಪ' - ಮೊದಲಾದ

---

8. E.I.I. p.2 ಇದು ತಾಮ್ರ ಶಾಸನ.
9. M.A.R. 1929 p.50.
10. E.C. VII ಶಿಕಾರಿಪುರ, 264 (A.D.250)
11. E.I. XXXVI.i. p 283.
12. Karnataka through the ages (1968) APP IX A.R.I.E. 1966-67. Nos. B. 2003-225 and 228-233.
13. E.C. VII ಶಿಕಾರಿಪುರ 264 (A.D. 250).
14. E. Hultzch: Corpus inscription Indiacarum, p. 175 ಬ್ರಹ್ಮಗಿರಿ.
15. E.C. VII ಶಿಕಾರಿಪುರ 263 (A.D. 150).

ತದ್ಭವ, ಸಂಸ್ಕೃತ ಪದಗಳನ್ನು ಗಮನಿಸಿದರೆ ಪ್ರಾಕೃತದ ಪ್ರವೇಶವು ಸಂಸ್ಕೃತ ಮತ್ತು ಕನ್ನಡಗಳ ಮಧ್ಯ ಸಂಧಿವಿಗ್ರಹಿಯಾಗಿ ಪರಿಣಮಿಸಿತೆಂದೂ, ಸಂಸ್ಕೃತವನ್ನು ಕನ್ನಡಕ್ಕೆ ಹಿತವಾಗಿ ಬಳಸಿಕೊಳ್ಳುವ ಒಂದು ಅನುಕೂಲಮಾರ್ಗವನ್ನು ತೆರೆದುಕೊಟ್ಟಿತೆಂದೂ ಸ್ಪಷ್ಟವಾಗುತ್ತದೆ.

ಅಶೋಕನ ಧರ್ಮಲಿಪಿಗಳಿಂದ ಭಿನ್ನವಾದ ವಿಷಯಾನುಕ್ರಮಣಿಕೆ ಈ ಶಾಸನಗಳ ಇನ್ನೊಂದು ವೈಶಿಷ್ಟ್ಯ. ದೇವತಾಸ್ತುತಿ, ಅರಸು, ದಾತೃ, ಭೋಕ್ತೃ, ಭೋಗವಸ್ತು, ಮಿತಿ, ರೂವಾರಿ, ಲಿಪಿಕಾರ, ಫಲಶ್ರುತಿ - ಈ ವಿಷಯಾನುಕ್ರಮವು ಆಮೇಲೆ ಹುಟ್ಟಿದ ಕರ್ನಾಟಕದ ಎಲ್ಲ ಶಾಸನಗಳಿಗೂ ಸ್ಥೂಲ ಮಾದರಿಯಾಗಿ ನಿಂತಿತು. ಅಶೋಕನ ಶಾಸನಗಳ ದೃಷ್ಟಿ 'ಆಜ್ಞಾರೂಪ'ದ್ದಾಗಿದ್ದರೆ, ಇವುಗಳದು 'ವರದಿ ರೂಪದ್ದು', ಇಲ್ಲಿಯೂ ಸಾಹಿತ್ಯಗುಣ ಕಣ್ಣಿಗೆ ಬೀಳುವುದಿಲ್ಲ. ಭಾಷೆಯಲ್ಲಿ ಮಾತ್ರ ಸಂಸ್ಕೃತದ ಬಣ್ಣ ಪ್ರವೇಶಿಸಿದೆ. ಈ ಪ್ರಾಕೃತ ಶಾಸನಗಳು ಮುಗಿಯುವಲ್ಲಿ, ಸಂಸ್ಕೃತ - ಕನ್ನಡವೆಂಬ ಇನ್ನೆರಡು ಭಾಷೆಯ ಶಾಸನಗಳು ನಮ್ಮ ನಾಡಿನಲ್ಲಿ ಕಾಣಿಸಿಕೊಳ್ಳಲಾರಂಭಿಸಿವೆ.

ಸಂಸ್ಕೃತ - ಕನ್ನಡ ಶಾಸನ ಯುಗ :

ಕನ್ನಡ ನಾಡಿನಲ್ಲಿ ಲಿಪಿ ಬಳಕೆ ಕ್ರಿ.ಪೂ. ೩೦೦ರಷ್ಟು ಪ್ರಾಚೀನವಾದರೂ ಕನ್ನಡ ಭಾಷೆ ಲಿಪಿಬದ್ಧಗೊಂಡ ಪ್ರಥಮ ಉಲ್ಲೇಖವೆಂದರೆ ಕ್ರಿ.ಶ. ೪೫೦ ಹಲ್ಮಿಡಿ ಶಾಸನ.[೧೬] ಇಲ್ಲಿಂದ ಆರಂಭವಾದ ಕನ್ನಡಶಾಸನಗಳು ಕವಿರಾಜಮಾರ್ಗದ ಕಾಲಕ್ಕೆ ಒಂದು ಅವಸ್ಥೆಯನ್ನು ಮುಟ್ಟುತ್ತವೆ. ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ನೊಳಂಬ, ಬಾಣ, ವೈದುಂಬರೆಂಬ ದೊಡ್ಡ- ಸಣ್ಣ ರಾಜಮನೆತನಗಳ ಈ ಶಾಸನಗಳಲ್ಲಿ ಪೂರ್ವದ ಹಳಗನ್ನಡವನ್ನು ಬಳಸಲಾಗಿದೆ.

ಲಿಪಿದೃಷ್ಟಿಯಿಂದ ಇಲ್ಲಿ ಎರಡು ಮಾತುಗಳನ್ನು ಹೇಳಬಹುದು. ಒಂದು : ಹಲ್ಮಿಡಿಯ ಕನ್ನಡ ಶಾಸನದ ಲಿಪಿಗೂ ಸುಮಾರು ಇದೇ ಕಾಲಕ್ಕೆ ಹುಟ್ಟಿದ ತಾಳಗುಂದದ ಸಂಸ್ಕೃತ ಶಾಸನದ ಲಿಪಿಗೂ ವ್ಯತ್ಯಾಸ ತೋರಿಬರುವುದರಿಂದ, ಈ ಹೊತ್ತಿಗಾಗಲೇ ಬ್ರಾಹ್ಮೀ ಲಿಪಿ ಅತಿಬಳಕೆಯಿಂದ 'ಕನ್ನಡವಿಶಿಷ್ಟ'ವಾಗಿ ಅಸ್ತಿತ್ವದಲ್ಲಿ ಬಂದಿದ್ದಿತು.

ಎರಡು : ಬ್ರಾಹ್ಮೀ ಲಿಪಿ ಮಾಲೆಯಲ್ಲಿಲ್ಲದ ಕನ್ನಡದ ಶಕಟರೇಫೆ ಮತ್ತು ರಳ ಲಿಪಿಗಳನ್ನು ಹಲ್ಮಿಡಿ ಶಾಸನವೇ ಬಳಸಿರುವುದರಿಂದ ಈ ಕಾಲಕ್ಕಾಗಲೇ ತನಗೆ ಅವಶ್ಯವಿರುವ ಹೊಸ ಲಿಪಿಗಳನ್ನು ಕನ್ನಡ ಭಾಷೆ ಸೃಷ್ಟಿಸಿಕೊಂಡಿದ್ದಿತು. ಲಿಪಿಬೆಳವಣಿಗೆಯ ದೃಷ್ಟಿಯಿಂದ ಈ ಎರಡು ಅಂಶಗಳು ಇಲ್ಲಿ ಗಮನಾರ್ಹವಾಗಿವೆ.

ಹೀಗಿದ್ದರೂ ಈ ಯುಗದ ಪ್ರಾರಂಭದ ಶಾಸನಗದ್ಯದಲ್ಲಿ, ಮಾತನಾಡಲು ಕಲಿತ ಮಗು ಅದನ್ನು ಲಿಪಿಗೊಳಿಸುವಲ್ಲಿ ನಡೆಸುವ ಹೋರಾಟ, ಎಡಹುವ ರೀತಿಗಳು ಸರ್ವಸಾಮಾನ್ಯವಾಗಿವೆ. ಇದಕ್ಕೆ ಹಲ್ಮಿಡಿ ಶಾಸನದ[೧೭] 'ಪಲ್ಮಿಡಿಉಂ ಮೂಟಿವಳ್ಳಿಉಂ' ಎಂಬ ಶಿಥಿಲಸಂಧಿ, 'ಭಟಾರಿಕುಲದೊನಳುಕದಮ್ಬನ್ಕಳ್ಬೊನ್

೧೬. ಕನ್ನಡ ಸಾಹಿತ್ಯದ ಪ್ರಾಚೀನತೆ (ಮೂರು ಉಪನ್ಯಾಸಗಳು, ಪು. 101). ಕನ್ನಡ ಸಾಹಿತ್ಯ ಹಾಗೂ ಭಾಷೆಯ ಹಳಮೆ (ಉಪಾಯನ, ಪು. 94). ಈ ಲೇಖನಗಳಲ್ಲಿ ಗೋವಿಂದ ಪೈಗಳು ಹಲ್ಮಿಡಿಯ ಹಿಂದಣ ಶಾಸನಗಳನ್ನು ಸೂಚಿಸಿರುವರು.

೧೭. M.A.R. 1936, No. 16

ಮಹಾಪಾತಕನ್' ಎಂಬ ಸಂದಿಗ್ಧವಾಕ್ಯ, 'ಭಟ್ಟರ್ಗ್ಗೀಗಟ್ಟಿ ಒಡ್ಡಲಿ ಅಪತ್ತೊನ್ನಿ ವಿಟ್ಟಾರಕರ' ಎಂಬ ವಾಕ್ಯದ ತೊಡಕುಗಳನ್ನು ನೋಡಬೇಕು. ಇದಲ್ಲದೆ 'ಬಾಳ್ಗಚ್ಚು ಪಲ್ಮಿಡಿಉಂ ಮೂಟಿವಳ್ಳಿಉಂ ಕೊಟ್ಟಾರ್.......ಇರ್ವ್ವರುಂ ಸಟ್ಬಜ್ಜದರ್ ವಿಜಾರಸುರುಂ ಪಲ್ಮಿಡಿಗೆ ಕುಱುಮ್ಬಿಡಿವಿಟ್ಟಾರ್......."[18] ಎಂಬಲ್ಲಿನ ಶೈಲಿಯ ನಿರಾಡಂಬರತೆ, ಬಟರಿಕುಲಾಮಲವ್ಯೋಮತಾರಾಧಿನಾಥನ್ನಳಪ ಗಣಪಶುಪತಿ ಮಾದಕ್ಷಿಣಾಪಥ ಬಹುಶತಹವನಾಹವದು[ಳ್] ಪಶುಪ್ರದಾನ ಶೌರ್ಯೋದ್ಯ ಮಭರಿತೋ[ನ್ದಾನ್] ಪಶುಪತಿನೆನ್ದು........"[19] ಎಂಬಂತಹ ಸಂಸ್ಕೃತದ ವಾಗಾಡಂಬರಗಳು ಈ ಗದ್ಯದ ಇನ್ನೆರಡು ಲಕ್ಷಣಗಳಾಗಿವೆ. ಈ ಮೊದಲು 'ಪ್ರಾಕೃತಶಾಸನ' ದ ಪರದೆಯ ಹಿಂದೆ ನಿಂತಿದ್ದ ಸಂಸ್ಕೃತವು ಇಂದು ಸಂಸ್ಕೃತ ಶಾಸನ ರೂಪದಲ್ಲಿ ಪ್ರಕಟವಾಗುವುದರ ಜೊತೆ, ಕನ್ನಡ ಶಾಸನಗಳಲ್ಲಿಯೂ ನುಗ್ಗಿ ಬಂದಿತು. ಬ್ರಾಹ್ಮಣನ ಜೊತೆ ವ್ಯವಹರಿಸುವ ಶೂದ್ರನಂತೆ, ಸಂಸ್ಕೃತದ ಜೊತೆ ಕನ್ನಡ ಇಲ್ಲಿ ಭಯಭಾವದಿಂದ ಬದುಕುತ್ತಲಿದೆಯೇ ಹೊರತು ಬಂಧುಭಾವದಿಂದಲ್ಲ. ಈ ಕಾಲದ ಬಹಳಷ್ಟು ಕನ್ನಡ ಶಾಸನಗಳಲ್ಲಿ ಬರುವ ಸಂಸ್ಕೃತವು ಪರಿಚಿತರ ಮಧ್ಯೆ ಕುಳಿತ ಒಬ್ಬ ಅಪರಿಚಿತನಂತೆ ಪ್ರತ್ಯೇಕವಾಗಿ ಕಾಣುತ್ತದೆ. ಕೆಲವೆಡೆಗಳಲ್ಲಂತೂ ಕನ್ನಡವು ಹೊಸದಾಗಿ ಅನ್ಯಭಾಷೆಯನ್ನು ಕಲಿತವನ ಹಾಗೆ ಸಂಸ್ಕೃತವನ್ನು ಉದ್ಧರಣೆಯಂತೆ ಉದ್ದುದ್ದ ವಾಕ್ಯರೂಪದಲ್ಲಿ ಬಳಸುತ್ತಲಿದೆಯೇ ಹೊರತು ಸಣ್ಣ ಸಣ್ಣ ರೂಪದಿಂದಲ್ಲ.

ಇಲ್ಲಿಂದ ನೂರೈವತ್ತು ವರ್ಷಗಳ ತರುವಾಯ ಹುಟ್ಟಿದ ಚಾಲುಕ್ಯ ಮಂಗಳೇಶನ ಶಾಸನ (೫೯೭-೬೦೦) ಹೀಗಿದೆ.[20]

" ಸ್ವಸ್ತಿ ಶ್ರೀಮತ್ ಪ್ರಿಥಿವೀಲ್ಲಭ ಮಂಗಲೀಸನಾ
ಕಲ್ಮನೆಗೆ ಇತ್ತೊದು ಲಂಜಿಗೇಸರಂ. ದೇವರ್ಕೆ ಪೂನಿಱುವ
ಮಾಲಕಾರನ್ಗೆ ಅರ್ದ್ಧವಿಸದಿ ಇತ್ತೋದಾನಟಿವೊನ್
ಪಞ್ಚಮಹಾಪಾತಕನಕುಂ ಎಟನೆಯಾ ನರಕದಾ ಪುಣು ಅಕುಂ"

ಬಾದಾಮಿ ಚಾಲುಕ್ಯರ ಈ ಪ್ರಾಚೀನತಮ ಶಾಸನದಲ್ಲಿ ಭಾಷೆ ತಕ್ಕಮಟ್ಟಿಗೆ ಲಿಪಿಯೊಂದಿಗೆ ಪಳಗಿದ ರೀತಿಯನ್ನೂ, ವಾಕ್ಯದ ತೊಡಕು ಬಿಡಿಕೊಂಡಿರುವ ಪ್ರಗತಿಯನ್ನೂ ಸಂಸ್ಕೃತದೊಂದಿಗೆ ಸಾಧಿಸಿದ ಮೈತ್ರಿಯನ್ನೂ ಕಾಣಬಹುದು. ಇಲ್ಲಿಂದ ಮುಂದೆ ಕನ್ನಡಿಗರ ಬರವಣಿಗೆಯು ಭಾಷೆ ಮತ್ತು ಲಿಪಿಗಳ ಅನ್ಯೋನ್ಯಸಿದ್ಧಿ, ಸಂಸ್ಕೃತ-ಕನ್ನಡಗಳ ಮಧುರ ಮೈತ್ರಿ, ಸಾಹಿತ್ಯಗುಣಗಳನ್ನು ಸಂವರ್ಧಿಸಿಕೊಳ್ಳುತ್ತ ಮುಂದುವರಿದಿದೆ. ಈ ಪ್ರವೃತ್ತಿ ಕ್ರಿ.ಶ. ೮೦೦ರ ಒಂದು ಗದ್ಯಶಾಸನದಲ್ಲಿ ಹೀಗೆ ವ್ಯಕ್ತವಾಗಿದೆ.[21]

"ಸ್ವಸ್ತಿ ಪ್ರಭೂತವರ್ಷ ಶ್ರೀ ಪ್ರಿಥಿವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಾ ಭಟ್ಟಾರಾಕ ಶ್ರೀಗೋಇನ್ದರಸರ್ಚ್ಚತುಸಮುದ್ರಾನ್ತ ವಸುಧೆಯಾ ಧವಳೈಕ ಛತ್ರಛಾಯೆ ಇನ್ದಾಳೆ ಬನವಾಸಿಮಣ್ದಲಮಾನಾ

---

೧೮. M.A.R. 1936, No. 16.

೧೯. M.A.R. 1936. No. 16.

೨೦. Ind. Ant. X. p.60.

೨೧. E.C. VIII ಸೊರಬ 10-ಮಾವಳಿ.

ಈ ಸೂಚನೆ ವಿದ್ವಾಂಸರಿಂದ ಮನ್ನಣೆ ಪಡೆಯಬೇಕಾಗಿದೆ. ಇದಲ್ಲದೆ ರೈಸ್ ಮುಂತಾದವರು ಸೂಚಿಸುವ ಹಲ್ಮಿಡಿ ಶಾಸನಕ್ಕೆ ಪ್ರಾಚೀನವಾದ ಶಾಸನಗಳನ್ನು ಕೆಲವರು ಕೃತಕವೆಂದು ಸಾಧಿಸಿರುವರು. (ನೋಡಿ GOKI. Instroduction XIV-XVI).

ಸಮುದ್ರಾಂತ ರಾಜಾದಿತ್ಯರಾಸನ್ ಆಳೆ। ಆಳೆವಖೇಡಮಱುಸಾಸಿರನುಮಾನ್ ಚಿತ್ರವಾಹನನಾಳುತ್ತುಂ ಬಾಯ್ಕೇಳದಿರೆ ಮುನಿದು ಕೊಲ್ಲಿಪಲ್ಲವ ನೊಳಮ್ಬಂನ್ನೊಳಮ್ಬರಾದಿತ್ಯನನ್ವೆಸಸಲಾ ಕಾಕರಾಸರುಮೆಟ್ಟಿ ಪೆರ್ಗ್ಗಂಜಿಯ ಕೋಟೆಯಾನ್ ರೋಹಿಸಿಬಿಟ್ಟು ಎರಡುಮ್ಬಲದ ವೀರಭಟರ್ಕಳೋಟ್ಟಿ ಪೆರ್ಗ್ಗಂಜಿಯ ಕೋಟೆಯಾನ್ ರೋಹಿಸಿಬಿಟ್ಟು ಎರಡುಮ್ಬಲದ ವೀರಭಟರ್ಕ್ಕಳೋಟ್ಟಿ ಪೊಱಮಟ್ಟು ಬಿಲ್ವಿಲ್ಲಳ್ಕುದುರೆ ಕುದುರೆಯೊಳ್ಕಿಟ್ಟಿ ಅತಿತುಮುಲ ಕಾಳಗ ಪೆಟ್ಟಿ ಬಲದ ಕೆಯ್ಯಂ ಚಿತ್ರವಾಹನನೊತ್ತಿ ಪುಗುತ್ತನ್ನು ಕಾದಿಸೆ ಕಣ್ಣು ಕುಲಮುದ್ದ ನೀನೀ ಕಯ್ಯುಪೊಕ್ಕು ಕಾದೆನ್ನು ಬೆಸಸೆ ಪ್ರಸಾದಮೆನ್ದಯ್ದಿ ಕಿಟ್ಟಿಕಾದಿ ಮಱುವಕ್ಕದವರ ಮೆಯ್ಮೆಯ್ಯಮ್ಬಾಗೆ ಎಚ್ಚೋಡಿಸಿ ಆ ಕಯ್ಯಂ ಗೆಲ್ದು ತಾನುಂ ಪಲವುಂ ಎಸುವೆತ್ತುಂ ಎಯ್ವೊದೊದಪ್ಪಿದಪ್ಪೊಲ್ಕಣೆ ಪಂಜರದೊಳಗೆಱಿಗಿ ಭೀಷ್ಮನ್ನಿಟ್ಟಂತೆ ನೆಲಮುಟ್ಟದೆ ಬಿಟ್ಟೊನಾನ್ದೇವಗಕ್ಕೆಯರಾಗ್ರ್ಪಂಮ್ಬಿಡಿದು ಬನ್ದಿದಿರ್ಗ್ಗೊಣ್ಡುಯೆ ವೀರಲೋಕಕ್ಕೆ ಸನ್ದೋನ್".

ಈ ಗದ್ಯದ ಸ್ಪಷ್ಟತೆ, ಸರಳತೆ ಮತ್ತು ನಾಟಕೀಯತೆಗಳು ಕನ್ನಡ ಗದ್ಯ ನೃಪತುಂಗನ ಕಾಲಕ್ಕೆ ಯಾವ ಹದಕ್ಕಿಳಿದು ಬರುತ್ತಿದ್ದಿತೆಂಬುದರ ನಿದರ್ಶನವೆನಿಸಿದೆ. 'ಬಾಯ್ಕೇಳದಿರೆ' 'ಬಿಲ್ವಿಲ್ಲೊಳ್ ಕುದುರೆ ಕುದುರೆಯೊಳ್ ಕಿಟ್ಟಿ ಅತಿ ತುಮುಲ ಕಾಳಗಂ ಪೆಟ್ಟಿ', 'ಮಱುವಕ್ಕದವರ ಮೆಮ್‌ಮೆಯ್ಯಮ್ಬಾಗೆ ಎಚ್ಚೋಡಿಸಿ', 'ಎಯ್ವೊದೆದಪ್ಪಿದಪ್ಪೊಲ್ ಕಣೆಪಂಜರದೊಳಗೆಱಿಗಿ ಭೀಷ್ಮನ್ನಿಟ್ಟಂತೆ ನೆಲಮುಟ್ಟದೆ ಬಿಟ್ಟಾನ್' ಎಂಬ ಮಾತುಗಳಲ್ಲಿ ಉತ್ಕೃಷ್ಟ ಗದ್ಯಗುಣ ಎದ್ದು ತೋರುತ್ತದೆ. ಶಾಸನಗಳ ಒಲವು ಸಾಹಿತ್ಯಗುಣಕ್ಕಿಂತ ವಿಷಯ ವಿವರಣೆಯ ಕಡೆಗೆ ಹೆಚ್ಚು ಇದ್ದ ಕಾಲದಲ್ಲಿ ಈ ಶಾಸನ ಹುಟ್ಟಿದೆಯೆಂಬುದನ್ನು ನೆನೆದರೆ, ಇದರ ಸಾಹಿತ್ಯಿಕ ಬೆಲೆ ಮತ್ತೂ ಸ್ಪಷ್ಟವಾಗುತ್ತದೆ. ವಿಮಲೋದಯ ನಾಗಾರ್ಜುನಾದಿಗಳು[22] ಕೃತಿ ಕಟ್ಟಿದುದು ಕೊನೆಯ ಪಕ್ಷ ಇಂಥ ಗದ್ಯದಲ್ಲಿಯಾಗಿರಬೇಕು.

ಶಾಸನಗಳ ಗದ್ಯಸಾಹಿತ್ಯದಂತೆ ಪದ್ಯಸಾಹಿತ್ಯವೂ ಪರಿಷ್ಕಾರಗೊಳ್ಳುತ್ತ ಬಂದಿದ್ದರೂ ಕವಿರಾಜಮಾರ್ಗಪೂರ್ವದ ಕನ್ನಡ ಶಾಸನಗಳಲ್ಲಿ ಗದ್ಯ ಹೆಚ್ಚು, ಪದ್ಯ ಕಡಿಮೆ. ಈ ಪದ್ಯಸಂಖ್ಯೆ ಅರುವತ್ತನ್ನು ಮಿಕ್ಕಲಾರದು. ತ್ರಿಪದಿ, ಪಿರಿಯಕ್ಕರ, ಕಂದ, ಅಕ್ಷರವೃತ್ತಗಳಾಗಿರುವ ಇವುಗಳ ಹರಹು ಹೀಗಿದೆ :

ಕವಿರಾಜಮಾರ್ಗಪೂರ್ವದ ತಮಿಳು ಸಾಹಿತ್ಯ 'ಆಶಿರಿಯಮ್', 'ವೆಣ್ಬಾ', 'ವಂಜಿ', 'ಕಲಿ' ಎಂಬ ದೇಸೀ ಛಂದೋಪ್ರಕಾರಗಳನ್ನು ವಿಶೇಷವಾಗಿ ಬಳಸಿದೆ. ಈ ಅವಧಿಯ ತೆಲುಗಿನ ಏಕೈಕ ಸಾಹಿತ್ಯವೆನಿಸುವ ಶಾಸನಪ್ರಪಂಚದಲ್ಲಿ 'ತರುವೋಜ', 'ಸೀಸ', 'ಆಟವೆಲದಿ', 'ತೇಟಗೀತಿ' - ಎಂಬ ದೇಸೀ ಬಂಧಗಳು[23] ಮಾತ್ರ ಕಾಣುತ್ತವೆ. ಆದರೆ ಕನ್ನಡವು ದೇಶೀ ಬಂಧಗಳಾದ ತ್ರಿಪದಿ, ಪಿರಿಯಕ್ಕರ ಮಟ್ಟುಗಳ ಜೊತೆ ಕಂದ, ಅನೇಕ ಬಗೆಯ ವರ್ಣವೃತ್ತಗಳನ್ನು ಬಳಸಿದೆ. ಬಾದಾಮಿ (೭೦೦),[24] ಹುಮ್ಮಚ (೮೦೦),[25] ಸೊರಬ (೮೦೦),[26] ಶಾಸನಗಳಲ್ಲಿ ಕ್ರಮವಾಗಿ ೩,೫,೫ - ಹೀಗೆ ೧೩ ತ್ರಿಪದಿಗಳು ದೊರೆತಿವೆ. ಬಾದಾಮಿ ಶಾಸನದ ಒಂದು ಮತ್ತು

---

೨೨. ಕವಿರಾಜಮಾರ್ಗ. 1-29.

೨೩. Advanced Studies in Tamil Prosody (A.Chidambarnath Chattiyar).

೨೪. I.A.X. p. 61.

೨೫. E.C. VIII ನಗರ 62- ಹುಮ್ಮಚ.

೨೬. E.C. VIII ಸೊರಬ- ಸೊರಬ.

ಎರಡನೆಯ ತ್ರಿಪದಿಗಳಲ್ಲಿ ಛಂದೋದೋಷವಿದ್ದರೆ, ಎರಡು ಮತ್ತು ಮೂರನೆಯ ತ್ರಿಪದಿಗಳಲ್ಲಿ ಭಾವೋತ್ಕಟತೆ ಇದ್ದರೂ ಮಕ್ಕಳ ಬರವಣಿಗೆಯಂತೆ ಅವು ಗಂಟುಗಂಟಾಗಿವೆ. ಆದರೆ ಒಂದು ಶತಮಾನ ಕಳೆಯುವಲ್ಲಿ ಕಂಡುಬರುವ ಹುಮ್ಮಚ ಮತ್ತು ಸೊರಬ ಶಾಸನದ ತ್ರಿಪದಿಗಳು ಮಾತ್ರ ಕ್ಲಿಷ್ಟತೆಯನ್ನು ನೀಗಿ, ಬಾದಾಮಿಗಿಂತ ಕರ್ಣಮಧುರವಾಗಿವೆ. ಬಾದಾಮಿ ಶಾಸನ ಸಮೀಪದ ಒಂದು ಕಲ್ಲಮೇಲಿನ ಪಿರಿಯಕ್ಕರ,[27] ಅದರ ಬಳಕೆಯ ಜೀವಂತಿಕೆಯನ್ನು ಸ್ಪಷ್ಟಪಡಿಸುತ್ತದೆ.

ಪ್ರಾಕೃತದ ಕಂದ ಮತ್ತು ಸಂಸ್ಕೃತದ ವೃತ್ತಗಳು ಕನ್ನಡವನ್ನು ಪ್ರವೇಶಿಸಿದ ಕಾಲ ಇನ್ನೂ ಅನಿಶ್ಚಿತದಲ್ಲಿ ನಿಂತಿದೆ, ಇವುಗಳಲ್ಲಿ ಕನ್ನಡಕ್ಕೆ ಅನುಕೂಲಬಂಧವಾದ ಕಂದಗಳು ಕ್ರಿ.ಶ. ೮೫೦ಕ್ಕೆ ಹಿಂದೆ ಸಿಕ್ಕುವು ಕೇವಲ ಮೂರು:

ನಿರ್ಮಲಕೋಶಕ ವಂಶನ್ ।
ಧರ್ಮಪರನ್ ಚಾರು ಮಣಲಿ ಮನೆ ಒಡೆಯೊನ್ ವಲಂ ।
ತಮ್ಮ ಕ್ಷೇತ್ರೋಚಿತಮಾನ್ ।
ಸಮ್ಯಗ್ದರ್ಶನವಿಶುದ್ಧನುಂ ವಟಿಗಿತ್ತಾನ್ ॥

ಮುಖಮಾಗೆ ತಳ್ವರೊಡೆ ಒ ।
ರ್ಸುಖಾಧ್ಯರೆಪ್ಪಿತ್ತರು ಪ್ರಧಾನರುಮೊಡಾನೆ ।
ನಿಖಿಳಸಾಕ್ಷಿಗಳವರೇ ।
ಸುಕರದೆ ನರಶಾಸನಂಗಳಾಯ್ದೋರೆನ್ದುಮ॥[28]

x x ಅದು ಧರ್ಮ್ಮಸಾಗರಣೆ ।
ವದಿತರ್ಕನಾವೊಲೆ ಬೆಳಪುದಾಕೆಯ ಕೈಯ್ಯು ।
ಳ್ಪಿದಱೋರ್ವಟ್ಟುಗಮನೆಯ ।
ಬದೆಗಸ x x x x x x x x ಣಪ್ಪೊರ್ ।[29]

ಇವು ಆ ಅವಧಿಯ ಕಂದರಚನೆಯ ಮಾದರಿಗಳು ಖ-ಕ ವರ್ಗಪ್ರಾಸ (ದೋಷ) ಇಲ್ಲಿ ಗಮನಿಸಬೇಕಾದ ಅಂಶವಾಗಿದೆ.

ಕಂದಕ್ಕೆ ದ್ವಿತೀಯವಾಗಿ ಕನ್ನಡಿಗರ ಮನಸೆಳೆದುವು ಅಕ್ಷರ ವೃತ್ತಗಳು. ಕವಿರಾಜಮಾರ್ಗಪೂರ್ವದಲ್ಲಿ ಸಿಗುವ ಇಂಥ ಸಂಖ್ಯೆ ಸುಮಾರು ಐವತ್ತು ಇಲ್ಲವೆ ಅರವತ್ತು. ಇವುಗಳಲ್ಲಿ ಕ್ರಿ.ಶ.ಸು. ೫೦೦ ರ ತಮಟುಕಲ್ಲು ಶಾಸನದ

---

೨೭. ಕರ್ನಾಟಕದ ಇತಿಹಾಸ (ಪ್ರಥಮ ಸಂಪುಟ) ಸಾಂಸ್ಕೃತಿಕ ಚರಿತ್ರೆ, ಪು. 123.

೨೮. M.A.R. 1920. p. 23, ನರಸಿಂಹರಾಜಪುರ.

೨೯. E.C. VIII ಸೊರಬ 1 ಸೊರಬ (A.D. 792).

ಬಿಣಮಣಿ ಅನ್ತು ಭೋಗಿ ಬಿಳದುಳ್ಮಣಿವಿಲ್ಮನದೋನ್ ।
ರಣಮುಖದುಳ್ಳಕೋಲಂ ನೆರಿಯಕ್ಕುಮನಿನ್ದ್ಯಗುಣನ್ ।
ಪ್ರಣಯಿಜನಕ್ಕೆ ಕಾಮನಸಿತೋತ್ಪಲ ವಣ್ಣನವನ್ ।
ಗುಣಮಧುರಾಂಕ್ಕ ದಿವ್ಯಪುರುಷನ್ ಪರುಷಪ್ರವರನ್ ।।[30]

ಎಂಬುದು ಕನ್ನಡದ ಪ್ರಥಮ ಪದ್ಯವೆಂದು ವಿದ್ವಾಂಸರ ಮತ. ಇಲ್ಲಿಂದ ಮುಂದೆ ಕಾಣುವ ಪದ್ಯಗಳೆಂದರೆ : ಮಂಗಳೂರು,[೩೧] ಬೆಲವತ್ತ,[೩೨] ನರಸಿಂಹರಾಜಪುರಂ,[೩೩] ಉದಯಾವರ[೩೪] ಶಾಸನಸ್ಥ ಅಕ್ಷರವೃತ್ತಗಳು. ಈ ಐದರಲ್ಲಿ ಹಲ್ಮಿಡಿ ಶಾಸನದಂತೆ ಸಂಸ್ಕೃತದ ಆಧಿಕ್ಯ, ಪದ-ಪ್ರತ್ಯಯ-ಸಂಧಿಗಳ ತೊಡಕು ಸಾಮಾನ್ಯವಾಗಿದೆ. ಇದೇ ಕಾಲದ ಮಿಕ್ಕ ವೃತ್ತಗಳೆಂದರೆ ಶ್ರವಣಬೆಳಗೊಳಕ್ಕೆ ಸಂಬಂಧಿಸಿದವು. ಅವುಗಳ ಛಂದೋವಿವರ ಹೀಗಿದೆ:[೩೫]

ಮಹಾಸ್ರಗ್ಧರೆ	೨	(ನಂ. ೧೨. ೧೮)
ಶಾರ್ದೂಲ	೪	(ನಂ. ೧೩, ೨೨, ೨೭, ೧೧೬)
ಮತ್ತೇಭವಿಕ್ರೀಡಿತ	೫	(ನಂ. ೭೬, ೭೭, ೯೭, ೯೮, ೧೦೬)
ಉತ್ಪಲಮಾಲೆ	೨	(ನಂ. ೨೧, ೭೯)
ಚಂಪಕ ಮಾಲೆ	೧	(ನಂ. ೯೩)
ಮಲ್ಲಿಕಾಮಾಲೆ	೧	(ನಂ. ೩೧)
ವಸಂತ ತಿಲಕ	೧	(ನಂ. ೧೦೫)
ವಂಶಸ್ಥ	೧	(ನಂ. ೧೪)
ಮಂಗಳ	೨	(ನಂ. ೧೧೩, ೧೧೫)
ಮಹಾಸ್ರಗ್ಧರೆ(?)	೧	(ನಂ. ೮೪, ೧೧೧)
ಮಲ್ಲಿಕಾಮಾಲೆ (?)	೧	(ನಂ. ೯೫)
ಚಂಪಕಮಾಲೆ (?)	೨	(ನಂ. ೨೬, ೧೦೮)
ರಥೋದ್ಧತ	೧	(ನಂ. ೩೪)
ಹೆಸರು ಗೊತ್ತಾಗದ ವೃತ್ತಗಳು	೬	(ನಂ. ೨೯,೮೦, ೯೯, ೧೦೨, ೧೦೭, ೧೦೯)

ಸುಮಾರು ೧೫ ಬಗೆಯ ಈ ವೃತ್ತಗಳು ಕನ್ನಡವು ವಿಪುಲವಾಗಿ ಸಂಸ್ಕೃತ ಛಂದಸ್ಸನ್ನು ಬಳಸಿಕೊಂಡುದಕ್ಕೆ ನಿದರ್ಶನವೆನಿಸಿವೆ. ಇಲ್ಲಿ ಮಂಗಳ, ವಂಶಸ್ಥ, ರಥೋದ್ಧತಗಳಂತಹ ಅಪರೂಪ ವೃತ್ತಗಳಿವೆಯೆಂಬುದನ್ನು ನೋಡಬೇಕು.

---

೩೦. E.C. XI cd 43 ತಮಟಕಲ್ಲು (A.D. 500).

೩೧. S.I.I. IX-I ಮಂಗಳೂರು 392 ಪೊಳಲಿ ಅಮ್ಮುಂಜೆ (A.D. 800).

೩೨. E.C. III ಮೈಸೂರು 6 ಬೆಲವತ್ತ (A.D. 750).

೩೩. M.A.R. 1920, p. 23.

೩೪. ಕರ್ನಾಟಕದ ಇತಿಹಾಸ (ಪ್ರಥಮ ಸಂಪುಟ) ಸಾಂಸ್ಕೃತಿಕ ಇತಿಹಾಸ, ಪು. 124.

೩೫. E.C. II (ಆರ್. ನರಸಿಂಹಾಚಾರ್ ಆವೃತ್ತಿ.)

ಇವುಗಳಲ್ಲಿ ರಚನೆಯ ದೃಷ್ಟಿಯಿಂದ ಕೆಲವು ಅಪ್ರಬುದ್ಧವೆನಿಸುತ್ತಿದ್ದರೆ, ಕೆಲವಂತೂ ತೀರ ಪ್ರಬುದ್ಧವಾಗಿವೆ; ಸೌಂದರ್ಯದಿಂದಲೂ ಶೋಭಿಸಿವೆ.

ಬಾಳಾಮೇಲ್ ಶಿಖಿ ಮೇಲೆ ಸರ್ಪ್ಪದ ಮಹಾದನ್ತಾಗ್ರದುಳ್ಸಲ್ಪವೊಲ್ ।
ಸಾಲಾಮ್ಬಾಲ ತಪೋಗ್ರದಿನ್ತುನಡೆದೊಂ ನೂಱಿಣ್ಬು ಸಂವತ್ಸರಂ ।
ಕೇಳೊಯ್ಬಿನ್ಕಟವಪ್ರಶೈಲಮಡಱ್ದೀನಮ್ಮಾ ಕಳನ್ತೂರನಂ ।
ಬಾಲೇ ಪೆರ್ಗ್ಗೊರವಂ ಸಮಾಧಿನೆಱಿದೊನ್ ನೋನ್ತೆಯ್ದಿಸ್ಸಿದ್ಧಿಯಾನ್॥[36]

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೊಲ್ಮಂಜುವೊಲ್ತೋರಿ ಬೇಗಂ ।
ಪಿರಿಗುಂ ಶ್ರೀರೂಪಲೀಲಾಧನವಿಭವ ಮಹಾರಾಶಿಗಳ್ನಿಲ್ಲವಾರ್ಗ್ಗಂ ।
ಪರಮಾರ್ತ್ಥಂ ಮೆಚ್ಚೆನಾನೀ ಧರಣಿಯುಳಿರವಾನೆನ್ದು ಸನ್ಯಸನಂಗೆ ।
ಯ್ದುರುಸತ್ವನ್ನನ್ದಿಸೇನ ಪ್ರವರಮುನಿವರನ್ ದೇವಲೋಕಕ್ಕೆ ಸನ್ದಾನ್ ॥[37]

ಈ ಪದ್ಯಗಳಲ್ಲಿ ಅತಿಮಾರ್ಗ, ಅತಿದೇಶೀ ಅಭಾಸ ಕಡಿಮೆಯಾಗಿ ಸಂಸ್ಕೃತಭಾಷೆ ಕನ್ನಡದಲ್ಲಿ ತನ್ನ ದಾರಿಯನ್ನು ಸ್ಪಷ್ಟಪಡಿಸಿಕೊಂಡಿದೆ. ಶ್ರೀವಿಜಯ ಕವೀಶ್ವರಾದಿಗಳು[೩೮] ಕನಿಷ್ಟಪಕ್ಷ ಇಷ್ಟು ಸತ್ವಪೂರ್ಣವಾದ ಪದ್ಯಗಳಲ್ಲಿ ಕಾವ್ಯಕಟ್ಟಿರಬೇಕು. ಹಿಂದಿನ ಯುಗದ ಪ್ರಾಕೃತಶಾಸನಗಳಲ್ಲಿ ಸಾಹಿತ್ಯದ ಗಂಧವೂ ಇಲ್ಲದಿದ್ದರೆ, ಈ ಯುಗದ ಕನ್ನಡ ಶಾಸನಗಳು (ಹಾಗೂ ಸಂಸ್ಕೃತ ಶಾಸನಗಳು) ಸಾಹಿತ್ಯಗಂಧಿಯಾಗಿವೆ. ಅಲ್ಲಿಲ್ಲದ ಸಾಹಿತ್ಯಿಕ ವಾತಾವರಣ ಇಲ್ಲಿ ತುಂಬಿಬರುತ್ತಲಿದೆ. ಈ ಅವಧಿಯಲ್ಲಿ ಪಟ್ಟದಕಲ್ಲು ಶಾಸನದ[೩೯] ಅಚಲನ್ ಎಂಬುವನನ್ನು ಬಿಟ್ಟರೆ ಹೇಳಿಕೊಳ್ಳುವ ಬೇರೆ ಶಾಸನಕವಿಗಳು ಕಂಡುಬರದಿದ್ದರೂ ಶ್ರವಣಬೆಳಗೊಳದಂತಹ ಮನೋಜ್ಞಶಾಸನಗಳನ್ನು ಬರೆದವರು ಆ ಯುಗದ ಸಾಹಿತ್ಯಕೃಷಿಯಲ್ಲಿ ಪಾಲುಗಾರರೆಂಬುದು ಸತ್ಯ.

ಪದ್ಯಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಪ್ರಾಸ ಮತ್ತು ಯತಿ ಇಲ್ಲಿ ಗಮನಿಸಬೇಕಾದ ಇತರ ಸಂಗತಿಗಳು. ಪ್ರಾಸ ಕನ್ನಡದ ವೈಶಿಷ್ಟ್ಯ. ಪ್ರಾಸದೂರವಾದ ಸಂಸ್ಕೃತ ವೃತ್ತಗಳು ಕನ್ನಡಕ್ಕೆ ಬರುವಾಗ ಪ್ರಾಸದ ಮಾಂಗಲ್ಯದಿಂದ ಶೋಭಿಸಿದುವು. ಆದರೆ ಶ್ರವಣಬೊಳಗೊಳದ ಶಾಸನಗಳ

೧. ರಾಗದ್ವೇಷ............
ವೇಗೂರಾ..............
XXXಗಾದೇವ ....
ಶ್ರೀ ಕೇಣ್ಣಾರ್ ....[40]

---

೩೬. E.C. II, p. 33.

೩೭. E.C. II. No. 88.

೩೮. ಕವಿರಾಜಮಾರ್ಗ 1-32

೩೯. ಜಯಕರ್ನಾಟಕ 9-6 ಪು. 431.

೪೦. E.C. II, 13 (ಕ್ರಿ.ಶ. 7 ಶತಮಾನ).

೨. ಗತಿಚೇಷ್ಟಾ..........
ಯತಿಯಂ ಪೇಟ್ದಿ............
ಪ್ರಥಿತಾರ್ತ್ಥ ....
ಸ್ಥಿತಿ ದೇಹಾ...........[41]

೩. ಬಾಳಾಮೇಲ್ಸಿಖಿ..............
ಸಾಲಾಮ್ಬಾಲ....................
ಕೇಳೊಯ್ಬಿನ್ನಟವಪ್ರ..............
ಬಾಲೇಪೆಗ್ಗೊರವ...........[42]

ಈ ಪದ್ಯಗಳಲ್ಲಿ ಒಂದು, ಎರಡನೆಯವು ವರ್ಗಪ್ರಾಸ ; ಮೂರನೆಯದು ಸಮೀಪ ಪ್ರಾಸವಾಗಿದೆ. ಕವಿರಾಜಮಾರ್ಗ ಹೇಳುವ ವಿವಿಧ ಪ್ರಾಸಗಳಿಗೆ[43] ಇವು ಆ ಕಾಲದ ಉದಾಹರಣೆಗಳಾಗಿ ನಿಲ್ಲುತ್ತವೆ.

೧. ಅನವದ್ಯಯನ್ನದಿ...........
ವಿನಯಾಚಾರ..............
ಉದಿತಶ್ರೀ...................
ನಿರವದ್ಯನ್ನೇರಿ...............[44]

ಈ ಪದ್ಯದಲ್ಲಿಯಂತೂ ಪ್ರಾಸಪಾಲನೆಯೇ ಇಲ್ಲ. ಹೀಗೆ ಈ ಕನ್ನಡ ಪದ್ಯ ಪ್ರಾಸ ರಹಿತವಾದುದು ಎಷ್ಟು ಆಶ್ಚರ್ಯವೋ, ಪಟ್ಟದಕಲ್ಲು ಶಾಸನದ (ಕ್ರಿ.ಶ. ೮೦೦)[45] ಸಂಸ್ಕೃತ ಪದ್ಯಗಳು ಪ್ರಾಸಹಿತವಾದುದು ಅಷ್ಟೇ ಆಶ್ಚರ್ಯವೆನಿಸಿದೆ. ಉದಾ:

ಭರತನುತವಚನರಚನಾ ।
ವಿರಚಿತ ನಟಸೇವ್ಯ ಸಿಂಘನಾದೇನ ॥
ಪರನಟ ಮಹಾಂಧಹಸ್ತಿಃ ।
ಪರಿಹೀನ ಮದೋಭವತ್ಯೇವ ॥

ನಟಸೇವ್ಯ ಭರತಮತಯುತ ।
ಪಟುತರ ವಚನಾಶನಿ ಪ್ರಪಾತೇನ ॥
ಕಟಿಲೋನ್ನತ ನಟಶೈಲ ।
ಸ್ಫುಟಿತಾನತ ಮಸ್ತಕಃ ಪತತಿ ॥

---

೪೧. E.C. II, 77 (ಕ್ರಿ.ಶ. 7 ನೆಯ ಶತಮಾನ).
೪೨. E.C. II, 22 (ಕ್ರಿ.ಶ. 7 ನೆಯ ಶತಮಾನ).
೪೩. ಕವಿರಾಜಮಾರ್ಗ 2-32, 34, 35, 37, 39, 41, 43, 45.
೪೪. E.C. II, 84 (ಕ್ರಿ.ಶ. 7 ನೆಯ ಶತಮಾನ).
೪೫. ಜಯಕರ್ನಾಟಕ 9-6, ಪು. 431.

ಮೇಲೆ ಉದಾಹರಿಸಿದ ಕನ್ನಡ ಪದ್ಯಗಳ ಪ್ರಾಸೋಲ್ಲಂಘನೆ ಮತ್ತು ಪ್ರಾಸಪಾಲನೆಗಳು ಪ್ರಯೋಗಾವಸ್ಥೆಯ ಲಕ್ಷಣವೋ, ಸಂಕ್ರಮಣಾವಸ್ಥೆಯ ಲಕ್ಷಣವೋ ಹೇಳುವುದು ಕಷ್ಟ.

ಇಂಥದೇ ಇನ್ನೊಂದು ಪ್ರಕ್ರಿಯೆ, ಯತಿ. ಅಕ್ಷರವೃತ್ತಗಳಲ್ಲಿ ಪ್ರಕೃತಿಯನ್ನು ಒಡೆಯದೆ ಯತಿ ಬರಬೇಕೆನ್ನುವುದು ಸಂಸ್ಕೃತದ ನಿಯಮ. ವರ್ಣವೃತ್ತಗಳನ್ನು ಬರಮಾಡಿಕೊಂಡ ಆರಂಭದಲ್ಲಿ ಕನ್ನಡಿಗರು ಇಂಥ ಯತಿನಿಯಮವನ್ನೂ ಪಾಲಿಸಿರಬಹುದು. ಉದಾ :

ಮಾಸೇನರ್ ಪರಮ ಪ್ರಭಾವ ರಿಷಿಯರ್ *ಕಟ್ವಿಪ್ಪಿನಾವೆಟ್ಟದುಳ್*
ಸ್ರೀಸಂಗಂಗಳ ಪೇಳ್ದ ಸಿದ್ಧಸಮಯಂ* ತಪ್ಪಾದೆ ನೋನ್ತಿಮ್ಬಿನಿನ್*
ಪ್ರಾಸಾದಾನ್ತರಮಾನ್ವಿಚಿತ್ರಕನಕ* ಪ್ರಜ್ವಲ್ಯದಿನ್ಮಿಕ್ಕುದಾನ್*
ಸಾಸಿರ್ವರ್ವ್ವರ ಪೂಜೆದನ್ಪುಯೆ ಅವರ್* ಸ್ವರ್ಗಾಗ್ರಮಾನೇಱಿದಾರ್* ||[46]

ಈ ಕಡೆ ಕನ್ನಡದ ಪ್ರಾಸವನ್ನೂ ಆ ಕಡೆ ಸಂಸ್ಕೃತದ ಯತಿಯನ್ನೂ ಪಾಲಿಸಿದ ಇಂಥ ಅನೇಕ ಅಕ್ಷರವೃತ್ತಗಳು ಈ ಕಾಲದಲ್ಲಿ ಸಿಗುತ್ತವೆ. ಆದರೆ ಈ ಉಭಯ ನಿರ್ಬಂಧಗಳು ದೊಡ್ಡ ತೊಡಕೆನಿಸಲು, ಒಂದನ್ನು ಬಿಡಬೇಕಾದ ಪ್ರಸಂಗ ಬಂದಾಗ, ಕನ್ನಡಿಗರು ಕನ್ನಡದ ಪ್ರಾಸನಿಯಮವನ್ನು ಪಾಲಿಸಿದರು ; ಸಂಸ್ಕೃತದ ಯತಿನಿಯಮವನ್ನು ಮೀರಿದರು. ಅಂದರೆ ಪ್ರಕೃತಿಯನ್ನು ಸೀಳಿ ಯತಿಯನ್ನು ಸ್ಥಾಪಿಸತೊಡಗಿದರು.. ಇದಕ್ಕೆ

೧. ಪರಮಾರ್ತ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆನ್ದು ಸನ್ನ್ಯಾಸನಂಗೆ*
ಯ್ಯುದ್ದುರು ಸತ್ವನ್ನನ್ದಿಸೇನ ಪ್ರವರಮುನಿವರನ್ ದೇವಲೋಕಕ್ಕೆ ಸನ್ದಾನ್ ||[47]

೨. ಚಪಲಿಲ್ಲಾ ನವಿಲೂರ ಸಂಘದ ಮಹಾ* ನನ್ತಾಮತೀಗನ್ತಿಯಾರ್[48]

೩. ಅವರುಂ ಸಾಧಿಸಿ ಸ್ವರ್ಗಲೋಕಸುಖ ಚಿ*ತ್ತಂ X X X ಮಾಧಿಗಳ್ |[49]

ಮೊದಲಾದ ಪದ್ಯಗಳು ಉದಾಹರಣೆಯಾಗಿವೆ. ಕವಿರಾಜಮಾರ್ಗಕಾರ ಹೇಳುವ ನಿಱಿಸಿ ಖಂಡಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್"[50] ಎಂಬ ಮಾತನ್ನು ಸಮರ್ಥಿಸುತ್ತವೆ, ಈ ಪದ್ಯಗಳು.

ಶತಮಾನದಿಂದಲೂ ಅಂಬೆಗಾಲಿಕ್ಕುತ್ತ, ಹೆಜ್ಜೆತಪ್ಪುತ್ತ, ತಪ್ಪಿದ ಹೆಜ್ಜೆಯನ್ನು ತಿದ್ದಿಕೊಳ್ಳುತ್ತ ಬಂದ ಕನ್ನಡದ ಗದ್ಯ ಪದ್ಯ ಶಾಸನಗಳ ಜೊತೆ, ಸಂಸ್ಕೃತ ಶಾಸನಗಳೂ ಬೆಳೆದು ಬಂದವು. ಕಾಕುತ್ಸ್ಥವರ್ಮನ ಹಲ್ಮಿಡಿಯ ಕನ್ನಡಶಾಸನ[೫೧] ದ ಜೊತೆ ಅವನ ಮಗ ಶಾಂತಿವರ್ಮ ಬರೆಯಿಸಿದ ತಾಳಗುಂದದ ಸಂಸ್ಕೃತ ಶಾಸನ,[೫೨] ಮತ್ತು

---

೪೬. E.C. II, No. 27 (ಕ್ರಿ.ಶ. 7ನೆಯ ಶತಮಾನ).
೪೭. E.C. II, No.88.
೪೮. E.C. II, 98.
೪೯. E.C. II, No. 106
೫೦. ಕವಿರಾಜಮಾರ್ಗ 1-75.
೫೧. M.A.R. 1936 No. 16, p.72 and 73.
೫೨. E.C. VII ಶಿಕಾರಿಪುರ 176, ತಾಳಗುಂದ.

ಮಂಗಳೇಶನ ಬಾದಾಮಿಯ ಕನ್ನಡ ಶಾಸನದ ಜೊತೆ ಅವನ ಅಣ್ಣನ ಮಗ ಪುಲಕೇಶಿ ಬರೆಯಿಸಿದ ಮೇಗುತಿ ಸಂಸ್ಕೃತಶಾಸನ[೫೩]ಗಳನ್ನು ಹೋಲಿಸಿದರೆ ಕನ್ನಡದ ಎಳಮೆ, ಸಂಸ್ಕೃತದ ಪ್ರೌಢಿಮೆ ವೇದ್ಯವಾಗುತ್ತದೆ.

ಸಂಸ್ಕೃತ ಮತ್ತು ಕನ್ನಡ ಶಾಸನಗಳು ಹೀಗೆ ಆರಂಭವಾದ ಕಾಲದಲ್ಲಿ ಕನ್ನಡ ಶಾಸನಗಳು ಕಡಿಮೆ, ಸಂಸ್ಕೃತ ಶಾಸನಗಳು ಹೆಚ್ಚು. ಬಾದಾಮಿ ಚಾಲುಕ್ಯರ ಕಾಲಕ್ಕೆ ಎರಡೂ ಸಮ. ಮುಂದೆ ಕನ್ನಡ ಶಾಸನಗಳು ಸಂಖ್ಯಾಪ್ರಮಾಣ ಹೆಚ್ಚಿಸಿಕೊಳ್ಳಲು ಪ್ರಾರಂಭಿಸಿದುದು ಗಂಗ ಶ್ರೀಪುರುಷನ ಕಾಲದಲ್ಲಾದರೂ ನೃಪತುಂಗನ ವರೆಗೂ ನಮ್ಮ ಶಾಸನಗಳಲ್ಲಿ ಏಕರೂಪತೆಯಿಲ್ಲ. ಪ್ರಾರಂಭದ ಮಂಗಲ, ಕೊನೆಯ ಫಲಶ್ರುತಿ ಸಹಿತವಾಗಿ ಬಹಳಷ್ಟು ಶಾಸನಗಳು ತಮತಮಗೆ ಬೇರೆ ಬೇರೆ ಸ್ವರೂಪದ ಒಂದು ತುಂಡು ಗದ್ಯ ಇಲ್ಲವೆ ಬಿಡಿ ಪದ್ಯಗಳಾಗಿವೆ. ಆದರೆ ಪ್ರಮಾಣಭೂತ ಚೌಕಟ್ಟು, ನಿರ್ದಿಷ್ಟ ವಿಷಯಾನುಪೂರ್ವಿ, ಸಾಹಿತ್ಯದ ಶ್ರೀಮಂತಿಕೆ ಸಾಧ್ಯವಾದುದು ನೃಪತುಂಗನ ಕಾಲದಲ್ಲಿ. ಕರ್ನಾಟಕದ ರಾಜಕೀಯ ಕ್ಷಿತಿಜದ ಮೇಲೆ ಒಂದೇ ಕಾಲಕ್ಕೆ ಮೂಡಿದ ಉತ್ತರದ ಚಕ್ರವರ್ತಿ ನೃಪತುಂಗ, ದಕ್ಷಿಣದ ಗಂಗಮಂಡಲದ ಸಾಮಂತ ಶಿವಮಾರ, ಪೂರ್ವದ ವೆಂಗಿಮಂಡಲದ ಸಾಮಂತ ಗುಣಕ ವಿಜಯಾದಿತ್ಯರು ಕನ್ನಡ ಸಾಹಿತ್ಯಲೋಕದ ದಿಕ್ಪಾಲಕರಂತೆ ಶೋಭಿಸಿದರು. ಸಾಹಿತ್ಯಪ್ರಿರಾದ ಈ ದೊರೆಗಳ ಆಶ್ರಯ, ಆಲೋಚನೆಯಿಂದಾಗಿ ಕನ್ನಡಸಾಹಿತ್ಯಕ್ಕೆ ಹೊಸ ಹರೆಯ ಮೂಡಿತು. ಕವಿಕೃತಿಗಳನ್ನು ಕಳೆದುಕೊಂಡಿರುವ ನಾವು ಶಾಸನಗಳಿಂದ ಈ ಮಾತನ್ನು ಹೀಗೆ ಖಚಿತಪಡಿಸಿಕೊಳ್ಳಬಹುದು:

೧.ಶಾಸನ ಸಂಖ್ಯೆಯಲ್ಲಿ ಕನ್ನಡ ಸಂಸ್ಕೃತಗಳ ೧:೩ ಪ್ರಮಾಣ ನೀಗಿ ೨:೨ ಪ್ರಮಾಣ ಕಂಡುಬರತೊಡಗಿತು.

೨. ರಾಜದತ್ತಿ, ದಿಗ್ವಿಜಯ, ರಾಜಪ್ರಶಸ್ತಿಗಳೆಂಬ ಮಹತ್ವಪೂರ್ಣ ವಿಷಯಗಳಿಗೆ ಸಂಸ್ಕೃತದಂತೆ ಕನ್ನಡವೂ ಬಳಕೆಗೊಳ್ಳಲಾರಂಭಿಸಿತು.

೩. ಕನ್ನಡ ಶಾಸನಗಳಲ್ಲಿ ಶುಷ್ಕನಿರೂಪಣೆ ಕಡಿಮೆಯಾಗಿ, ಸಾಹಿತ್ಯಗುಣ ಸಂವರ್ಧಿಸುತ್ತ ನಡೆಯಿತು.

೪. ತುಣುಕು ಗದ್ಯ ಇಲ್ಲವೆ ಬಿಡಿಪದ್ಯಗಳಿಗೆ ಬದಲು, ಚಂಪುವನ್ನು ನೆನಪಿಸುವ ಗದ್ಯ- ಪದ್ಯ ಮಿಶ್ರಿತ ಸುದೀರ್ಘಪಾಠ ಗೋಚರಿಸತೊಡಗಿತು.

೫. ಗದ್ಯವನ್ನು ಹಿಂದೆಹಾಕಿ ಪದ್ಯ ಪ್ರಗತಿಯನ್ನು ಸಾಧಿಸಲಾರಂಭಿಸಿತು.

೬. ಕವಿರಾಜಮಾರ್ಗಪೂರ್ವದ ಕನ್ನಡ ಶಾಸನಗಳ ಒಟ್ಟು ಪದ್ಯಗಳು ಸುಮಾರು ೬೦ ಇದ್ದರೆ, ತರುವಾಯದ ಒಂದೊಂದು ಶಾಸನದಲ್ಲಿ ೪೦ರಷ್ಟು ಪದ್ಯಗಳು ಮೂಡಿದುವು (ಉದಾ: ೯೩೦ರ ಕಳಸ ಶಾಸನ)

೭. ಅನಿರ್ದಿಷ್ಟ ವಿಷಯನಿರೂಪಣೆಗೆ ಬದಲು ಒಂದು ನಿರ್ದಿಷ್ಟ ವಿಷಯಾನುಪೂರ್ವಿ ಈ ಕಾಲದ ಶಾಸನಗಳಲ್ಲಿ ಕಾಣಲಾರಂಭಿಸಿತು.

---

೫೩. Ind. Ant. X p. 60

೮. ಸಣ್ಣ ಅಕಾರಕ್ಕೆ ಬದಲು ದೊಡ್ಡ ಅಕಾರ, ಒರಟು ಬಂಡೆಗೆ ಬದಲು ನುಣುಪು ಫಲಕ, ಫಲಕದ ಮೇಲೆ ಶುದ್ಧಭಾಷೆ, ಸುಂದರಲಿಪಿಗಳು ಎದ್ದು ಕಾಣತೊಡಗಿದವು.

ತಂದೆ ಗೋವಿಂದನ ಶಾಸನಗಳನ್ನು ಒಂದೆಡೆ, ಮಗ ನೃಪತುಂಗನ ಶಾಸನಗಳನ್ನು ಇನ್ನೊಂದೆಡೆ ಇಟ್ಟು ನೋಡಿದರೆ ಸಾಕು, ಮೇಲಣ ತೀವ್ರ ಬದಲಾವಣೆಗಳು ಒಡೆದು ಕಾಣುತ್ತವೆ. ಈ ಪರಂಪರೆ-ಪ್ರಗತಿಗಳ ಮಧ್ಯ 'ಸೀಮಾಕೃತಿ'ಯಾಗಿ ತಲೆಯೆತ್ತಿದೆ, ಲಕ್ಷಣಗ್ರಂಥವಾದ 'ಕವಿರಾಜಮಾರ್ಗ'.

■■

ಆಕರ : ಮಾರ್ಗ ಸಂಪುಟ-೩

೬

ಶಾಸನಗಳಲ್ಲಿ ಆದಿಗುಣವರ್ಮನ ಪದ್ಯ

ಪಂಪಪೂರ್ವಯುಗದ ಅಜ್ಞಾತಕವಿಗಳಲ್ಲಿ ಗುಣವರ್ಮನದು ಕಣ್ಣುಕುಕ್ಕಿಸುವ ವ್ಯಕ್ತಿತ್ವ. ಕಾವ್ಯಾವಲೋಕನ, ಕರ್ಣಾಟ ಭಾಷಾಭೂಷಣ, ಸೂಕ್ತಿಸುಧಾರ್ಣವ, ಶಬ್ದಮಣಿದರ್ಪಣ ಮತ್ತು ಕಾವ್ಯಸಾರಗಳಲ್ಲಿ ಈತನ ಕವಿತ್ವದ ಅವಶೇಷಗಳು ದೊರೆಯುತ್ತವೆ. ಇವುಗಳಲ್ಲಿ ಕಾವ್ಯಸಾರ ಸುಮಾರು ೬೦ ಪದ್ಯಗಳಿಗೆ ಕೇವಲ ಶೂದ್ರಕ ಎಂದೂ, ಒಂದು ಸಲ ಮಾತ್ರ 'ಗುಣವರ್ಮನ ಶೂದ್ರಕ' (ಕಾಸಾ ಪು.೧೩) ಎಂದೂ ಆಕರ ಹೇಳುತ್ತದೆ. ಒಂದು ಸಲ ಹೇಳಿದ ಈ ತೆಳ್ಳನೆಯ ಆಧಾರವನ್ನು ಬಿಟ್ಟರೆ ಶೂದ್ರಕವು ಗುಣವರ್ಮನದೆಂದು ನಂಬುವುದೇ ಕಷ್ಟ. ಆದರೆ -ಅವಲೋಕನ -ಭೂಷಣ, - ದರ್ಪಣ ಮತ್ತು -ಸುಧಾರ್ಣವಗಳೆಲ್ಲ ಸೇರಿದರೂ ಕಾವ್ಯಸಾರದಲ್ಲಿಯ ಶೂದ್ರಕದ ಪದ್ಯಗಳು ಹೆಚ್ಚಿಗಿರುವುದರಿಂದ ಅಭಿನವವಾದಿ ವಿದ್ಯಾನಂದನು ಈ ಶಾಸ್ತ್ರ ಮತ್ತು ಸಂಕಲನ ಗ್ರಂಥಗಳಿಂದ ಮಾತ್ರ ಶೂದ್ರಕದ ಪದ್ಯಗಳನ್ನು ಸ್ವೀಕರಿಸದೆ, ಅದರ ಹಸ್ತಪ್ರತಿಯಿಂದಲೇ ಕೈಮುಟ್ಟಿ ಆಯ್ದುಕೊಂಡಿರುವ ಸಾಧ್ಯತೆಯಿದೆ. ಹೀಗಾಗಿ ಆ 'ಒಂದು ಸಲದ ಹೇಳಿಕೆ' ಸತ್ಯವೆಂದು ಭಾವಿಸಿ, ಶೂದ್ರಕವು ಗುಣವರ್ಮನ ಕೃತಿಯೆಂದು ಒಪ್ಪಿಕೊಳ್ಳಬೇಕಾಗಿದೆ.

ಈತನನ್ನು ಹಾಗೂ ಈತನ ಕೃತಿಗಳನ್ನು ಕುರಿತು ಈ ವರೆಗೆ ಹಲವು ವಿದ್ವಾಂಸರು ವಿವೇಚಿಸಿರುವರು. ಇಲ್ಲಿಂದ ಒಂದು ಹೆಜ್ಜೆ ಮುಂದುಹೋಗಿ, ಶೂದ್ರಕದ ಸಮುದ್ರವರ್ಣನೆಯ ಒಂದು ಪದ್ಯವನ್ನು ಶಾಸನಗಳಿಂದ ಹುಡುಕಿ ಹೇಳುವುದು ಈ ಲೇಖನದ ಉದ್ದೇಶ.

ಕನ್ನಡ ಸಾಹಿತ್ಯ, ಹಲವಾರು ಸಾಹಿತ್ಯ ಪ್ರಕಾರಗಳನ್ನು ಬದಲಿಸಿಕೊಳ್ಳುತ್ತ ಸಾಗಿಬಂದರೂ ಶಾಸನ ಮಾತ್ರ ಒಂಬತ್ತನೆಯ ಶತಮಾನದಿಂದ ಕೊನೆಯ ವರೆಗೂ ಸಾಮಾನ್ಯವಾಗಿ ಚಂಪೂಪ್ರಕಾರವನ್ನೇ ಒಪ್ಪಿಕೊಳ್ಳುತ್ತ ಬಂದಿತು. ಹೀಗಾಗಿ ಕನ್ನಡ ಶಾಸನಕರ್ತೃಗಳು ಆಗಾಗ ಚಂಪೂಕೃತಿಗಳಿಂದ ಸಂದರ್ಭೋಚಿತ ಪದ್ಯಗಳನ್ನು ಆಯ್ದುಕೊಂಡಿರುವರು. ಇಂಥವುಗಳಲ್ಲಿ ಗುಣವರ್ಮನ ಅನುಪಲಬ್ಧ ಶೂದ್ರಕದ ಸಮುದ್ರವರ್ಣನೆಯ ಪದ್ಯವೂ ಒಂದು.

ದಿ. ಆರ್. ನರಸಿಂಹಾಚಾರ್ ಅವರು, ಕಾವ್ಯಾವಲೋಕನ (೧೯೦೨) ದ Introductionದಲ್ಲಿ "Gunavarma's Verse describing the sea is quoted in Channarayapattana 197" ಎಂದು ಬರೆಯುತ್ತ, ಕಾವ್ಯಸಾರದಲ್ಲಿ ಬರುವ ಶೂದ್ರಕಕ್ಕೆ ಸಂಬಂಧಿಸಿದ ' ಗಂಭೀರಸ್ಫಾರ.....' ಎಂಬ ಸಮುದ್ರವರ್ಣನೆಯ ಪದ್ಯ, ಹಾಸನಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಶಿವರ ಗ್ರಾಮದ ಶಾಸನ (ಕ್ರಿ. ಶ. ೧೨೨೩) ದಲ್ಲಿದೆಯೆಂದು ಸೂಚಿಸಿದರು. ಈ ಪದ್ಯ ಬಳ್ಳಾರಿ ಜಿಲ್ಲೆಯ ಮಾಗಳ ಶಾಸನ (ಕ್ರಿ.ಶ. ೧೨೧೪) ದಲ್ಲಿಯೂ ಇದೆಯೆಂದು ಶ್ರೀ ಟಿ.ಟಿ. ಶರ್ಮ ಸೂಚಿಸಿದರು. (Memoires of the Archaeological Survey of India XII, P.೩). ಇದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಬೆಣ್ಣೆಕಲ್ಲು (ಕ್ರಿ.ಶ. ೧೨೨೬),

ಹಡಗಲಿ ತಾಲೂಕಿನ ಸೋಗಿ ಶಾಸನ (ಕ್ರಿ.ಶ.?) ಗಳಲ್ಲಿಯೂ ಇದ್ದುದಾಗಿ ಇತ್ತೀಚೆ ನನ್ನ ಗಮನಕ್ಕೆ ಬಂದಿತು. ಹೀಗೆ ಶಾಸನಗಳಲ್ಲಿ ಮತ್ತು ಸೂಕ್ತಿಸುಧಾರ್ಣವ, ಕಾವ್ಯಸಾರಗಳಲ್ಲಿ ಬರುವ ಈ ಪದ್ಯವನ್ನು ಪಾಠದೃಷ್ಟಿಯಿಂದ ಜೊತೆಜೊತೆಯಾಗಿಟ್ಟು ನೋಡಬಹುದು.

ಒಂದನೆಯ ಚರಣ :

ಸೂಕ್ತಿ : ಗಂಭಿರಸ್ಫಾರವೇಳಾ ಬಹಳ ಪರಿವೃತೋಲ್ಲೋಲಕಲ್ಲೋಲಮಾಲಾ
ಕಾಸಾ : ಗಂಭೀರಸ್ಫಾರವೇಳಾ ಬಹಳ ಪರಿವೃತೋಲ್ಲೋಲಕಲ್ಲೋಲಮಾಲಾ
ಮಾಗಳ : ಗಂಭೀರಸ್ಫಾರವೇಳಾ ಬಹಳ ಪರಿವೃತೋಲ್ಲೋಲಕಲ್ಲೋಳಮಾಲಾ
ಶಿವರ : ಗಂಭೀರಸ್ಫಾರವೇಳಾ ಬಹಳ ಪರಿವ್ರಿಡಲ್ಲೋ್ೕಕಲ್ಲೋಲಮಾಲಾ
ಬೆಣ್ಣೆಕಲ್ಲು : ಗಂಭೀರಸ್ಫಾರವೇಳಾ ಬಹಳ ಪರಿವ್ರಿಢಲ್ಲೋಲಕಲ್ಲೋಲಮಾಲಾ
ಸೋಗಿ : x x x x x x x x x x x x x x x x x x x

ಎರಡನೆಯ ಚರಣ :

ಸೂಕ್ತಿ : ರಂಭಪ್ರೋಡ್ಡೀನಫೇನ ಪ್ರಬಳಜಲಚರೋಲ್ಲುಂಡ ಪಾಠೀನ ಶುಂಭ
ಕಾಸಾ : ರಂಭಪ್ರೋಡ್ಡೀನಫೇನ ಪ್ರಬಳಜಲಚರೋಲ್ಲೋಲ ಪಾಠೀನ ಶುಂಭ
ಮಾಗಳ : ರಂಭಪ್ರೋಡ್ಡೀನಫೇನ ಪ್ರಬಳಜಲಚರಲ್ಲೋಠ ಪಾಠೀನ ಕುಂಭ
ಶಿವರ : ರಂಭಪ್ರೋಡ್ಡೀನಫೇನ ಪ್ರಬಳಜಲಚರಲ್ಲೋ್ೕಠ ಪಾಠೀನ ಶುಂಭ
ಬೆಣ್ಣೆಕಲ್ಲು : ರಂಭಪ್ರೋಡ್ಡೀನಫೇನ ಪ್ರಬಳಜಲಚರಲ್ಲೋಠ ಪಾಠೀನ ಕುಂಭ
ಸೋಗಿ : x x x x x ನಿ ಪ್ರಬಳ x x x x x x x x x ಶುಂಭ

ಮೂರನೆಯ ಚರಣ :

ಸೂಕ್ತಿ : ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಭ ರತ್ನಪ್ರಪಾಳೋ
ಕಾಸಾ : ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಧ ರತ್ನಪ್ರಭಾವೋ
ಮಾಗಳ : ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಧ ರತ್ನಪ್ರಭಾಳೋ
ಶಿವರ : ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಭ ರತ್ನಪ್ರಭಾವೋ
ಬೆಣ್ಣೆಕಲ್ಲು : ತ್ಕುಂಭೀರಾಭೀಳ ನಕ್ರಪ್ರಕರ ಕಮದ ನೀರೇಭ-ರತ್ನಪ್ರಭಾವೋ
ಸೋಗಿ : ತ್ತುಂ x x x x x x x x x x x x x x x x x x x x

ನಾಲ್ಕನೆಯ ಚರಣ :

ಸೂಕ್ತಿ : ಜ್ಜೃಂಭತ್ಪ್ರೋದ್ಭಾಸಿ ವೀಚೀನಿಚಯ ಘನಘನಾರಾವ ರೌದ್ರಂ ಸಮುದ್ರಂ
ಕಾಸಾ : ಜ್ಜೃಂಭತ್ಪ್ರೋದ್ಭಾಸಿ ವೀಚೀನಿಚಯ ಘನಘನಾರಾವ ರೌದ್ರಂ ಸಮುದ್ರಂ
ಮಾಗಳ : ಜ್ರಂಭಪ್ರೋದ್ಭಾಸಿ ವೀಚೀನಿಚಯ ಘನಘನಧ್ವಾನ ರೌದ್ರಂ ಸಮುದ್ರಂ
ಶಿವರ : ಜ್ರಂಭಪ್ರೋದ್ಭಾಸಿ ವೀಚೀನಿಚಯ ಘನಘನಧ್ವಾನ ರೌದ್ರಂ ಸಮುದ್ರಂ
ಬೆಣ್ಣೆಕಲ್ಲು : ಜ್ರಂಭಪ್ರೋದ್ಭಾಸಿ ವೀಚೀನಿಚಯ ಘನಘನಧ್ವಾನ ರೌದ್ರಂ ಸಮುದ್ರಂ
ಸೋಗಿ : x x x x x x x ಘನಘನಧ್ವಾನ ರೌದ್ರಂ ಸಮುದ್ರಂ

ಈ ವಿವರಣೆಗಳಿಂದ ಕೆಳಗಿನ ಅಭಿಪ್ರಾಯಗಳನ್ನು ಸಂಗ್ರಹಿಸಬಹುದು.

೧. ಕಾವ್ಯಸಾರ ಕ್ರಿ.ಶ. ೧೫೩೩, ಸೂಕ್ತಿಸುಧಾರ್ಣವ ಕ್ರಿ.ಶ. ೧೨೪೫, ಬೆಣ್ಣೆಕಲ್ಲು ಕ್ರಿ.ಶ. ೧೨೨೬, ಶಿವರ ಕ್ರಿ.ಶ.೧೨೨೩, ಮಾಗಳ ಕ್ರಿ.ಶ. ೧೨೧೪, ಸೋಗಿ (ಕ್ರಿ.ಶ. ?) - ಇಲ್ಲಿಯ ಮಿತಿಗಳನ್ನು ಗಮನಿಸಿದರೆ, ಈ ಶಾಸನಗಳು ಈಗಿನ ಮಟ್ಟಿಗೆ ಶೂದ್ರಕದ ಪದ್ಯವನ್ನೊಳಗೊಂಡ ಪ್ರಥಮ ಆಕರಗಳೆಂದು ಸ್ಪಷ್ಟವಾಗುತ್ತದೆ.

೨. ಸೂಕ್ತಿಸುಧಾರ್ಣವ ಮತ್ತು ಕಾವ್ಯಸಾರಗಳ ಪಾಠಕ್ಕಿಂತ, ಈ ಶಾಸನಗಳ ಪಾಠ ಪ್ರಾಚೀನವಾಗಿದ್ದು, ಸುಮಾರು ೭೫೦ ವರ್ಷಗಳ ಹಿಂದಿನ ರೂಪವನ್ನು ಉಳಿಸಿಕೊಂಡುವಾಗಿವೆ.

೩. ಲಿಪಿಕಾರ ಮತ್ತು ರೂವಾರಿಗಳ ಹಸ್ತದೋಷಗಳನ್ನು ಬಿಟ್ಟರೂ ಈ ಆರು ಆಕರಗಳಲ್ಲಿ ಪಾಠದೃಷ್ಟಿಯಿಂದ ಸಾಮಾನ್ಯವಾಗಿ ಕಾವ್ಯಗಳದೇ ಒಂದು ಗುಂಪು, ಶಾಸನಗಳದೇ ಒಂದು ಗುಂಪು. ಉದಾ:

ಅ. ಪರಿವೃತೋಲ್ಲೋಲ (ಸೂಕ್ತಿ, ಕಾಸಾ)
ಪರಿವೃಢಲ್ಲೋಲ (ಶಾಸನಗಳು)

ಬ. ಘನಘನಾರಾವ ರೌದ್ರಂ (ಸೂಕ್ತಿ, ಕಾಸಾ)
ಘನಘನಧ್ವಾನ ರೌದ್ರಂ (ಶಾಸನಗಳು)

ಇದರಿಂದ ಬಹುಮಟ್ಟಿಗೆ ಹೋಲಿಕೆಯಿಂದ ಕೂಡಿದ ಮತ್ತು ಪ್ರಾಚೀನವಾಗಿರುವ ಶಾಸನಪಾಠ ಮೂಲಕ್ಕೆ ಹೆಚ್ಚು ಸಮೀಪವೆನ್ನಬೇಕಾಗುತ್ತದೆ.

೪. ಬಳ್ಳಾರಿ ಜಿಲ್ಲೆಯ ಬೆಣ್ಣೆಕಲ್ಲು, ಮಾಗಳ, ಸೋಗಿ ಗ್ರಾಮಗಳ ಶಾಸನ ಮತ್ತು ಹಾಸನ ಜಿಲ್ಲೆಯ ಶಿವರ ಶಾಸನಗಳಲ್ಲಿ ಈ ಪದ್ಯ ಸಿಗುವುದಕ್ಕೆ ಕವಿ ಗುಣವರ್ಮನ ಸ್ಥಳ ಸಾಮಿಪ್ಯವೋ, ಶಾಸನಕವಿಯ ಶೂದ್ರಕ ಪ್ರೀತಿಯೋ ಕಾರಣವಾಗಿರಬಹುದು.

■■

ಆಕರ : ಮಾರ್ಗ ಸಂಪುಟ–೨

೭

ಶಾಸನದಲ್ಲಿ ಆದಿಪುರಾಣದ ಪದ್ಯ

ಬಿ.ಎಲ್.ರೈಸ್ ಅವರ "The Poet Pampa" ಲೇಖನದ (J.R.A.S. ೧೮೮೨) ಮೂಲಕ ಕನ್ನಡ ಸಂಶೋಧನಲೋಕಕ್ಕೆ ಪ್ರಥಮಸಲ ಪರಿಚಿತನಾದ[೧] ಮಹಾಕವಿ ಪಂಪನನ್ನು ಕುರಿತು ಆರ್.ನರಸಿಂಹಾಚಾರ್, ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಬೆಳ್ಳಾವೆ ವೆಂಕಟ ನಾರಾಯಣಪ್ಪ, ನೆಲಮಂಗಲ ಲಕ್ಷ್ಮೀನಾರಾಯಣರಾವ್, ಆರ್.ಎಸ್.ಪಂಚಮುಖಿ, ಪಿ.ಬಿ.ದೇಸಾಯಿ ಮತ್ತು ಕೆ. ವೆಂಕಟರಮಣಾಚಾರ್ ಮೊದಲಾದ ವಿದ್ವಾಂಸರು ವಿದ್ವತ್ಪೂರ್ಣ ಲೇಖನ ವ್ಯವಸಾಯಗೆಯ್ದಿದ್ದಾರೆ. ಇತ್ತೀಚೆ ಶ್ರೀ ಎನ್. ವೆಂಕಟರಮಣಯ್ಯನವರು ಪ್ರಕಟಿಸಿದ (ಭಾರತಿ ೧೯೬೭ ಮಾರ್ಚ) ಜಿನವಲ್ಲಭವ ಗಂಗಾಧರಂ ಶಾಸನ, ಈ ದಿಕ್ಕಿನಲ್ಲಿ ಒಂದು ಮಹತ್ವಪೂರ್ಣ ಸಂಶೋಧನೆಯೆನಿಸಿದೆ. ಈ ಶಾಸನದ ಮೂಲಕ ಪಂಪನಿಗೆ ಸಂಬಂಧಿಸಿದ ನವೀನ ವಿಷಯಗಳು ಬೆಳಕಿಗೆ ಬಂದ ಸಂದರ್ಭದಲ್ಲಿ, ಈ ಲೇಖನದ ಮೂಲಕ ಆದಿಪುರಾಣದ ಪದ್ಯವೊಂದನ್ನು ಶಾಸನದಿಂದ ಹುಡುಕಿ ಕೊಡಲಾಗುತ್ತಿದೆ.

ರನ್ನನ ಅಜಿತಪುರಾಣದ ಕೆಲವು ಪದ್ಯಗಳು ಲಕ್ಕುಂಡಿ ಶಾಸನದಲ್ಲಿ, ನಾಗಚಂದ್ರನ ರಾಮಾಯಣದ ಕೆಲವು ಪದ್ಯಗಳು ವಿಜಾಪುರ, ಶ್ರವಣಬೆಳ್ಗೊಳ ಶಾಸನಗಳಲ್ಲಿ ಸ್ಥಾನ ಪಡೆದ ಸಂಗತಿ ಸರ್ವಶ್ರುತವೆನಿಸಿದೆ. ಇದೇ ರೀತಿಯಲ್ಲಿ ಪಂಪನ ಆದಿಪುರಾಣದ ಪದ್ಯವೊಂದು ಹಾಸನ ಜಿಲ್ಲೆಯ ಬೇಲೂರು ಗ್ರಾಮದ ಆದಿನಾಥ ಬಸ್ತಿಯ ಗರ್ಭಾಂಕಣದ ಬಾಗಿಲುವಾಡದ ಮೇಲಿನ ಶಾಸನದಲ್ಲಿ ಕಂಡುಬರುತ್ತಿದೆ. E.C.XV. ನಂ.೩೩೫, ಪುಟ ೮೭ರಲ್ಲಿ ಪ್ರಕಟವಾದ ಈ ಶಾಸನದ ಕಾಲ ಕ್ರಿ.ಶ.೧೧೩೮.

ಶಾಸನಪ್ರಾರಂಭದಲ್ಲಿ ಸ್ತುತಿರೂಪದದ, ಆಶೀರ್ವಾದರೂಪದ ಪದ್ಯಗಳನ್ನು ಬರೆಯುವುದು ಸಾಮಾನ್ಯಪದ್ಧತಿ. ಪ್ರಸ್ತುತ ಬೇಲೂರ ಶಾಸನದಲ್ಲಿ ಆದಿಪುರಾಣದಿಂದ ಆಶೀರ್ವಾದರೂಪದ ಪದ್ಯವೊಂದನ್ನು ಬಳಸಿಕೊಳ್ಳಲಾಗಿದ್ದು, ಅದು ಕೆಳಗಿನಂತಿದೆ :

---

೧. ಡಾ. ಕಿಟೆಲ್ ಅವರು ೧೮೭೫ರಲ್ಲಿ ನಾಗವರ್ಮನ ಕನ್ನಡ ಛಂದಸ್ಸು ಎಂಬ ಗ್ರಂಥಕ್ಕೆ ವಿಸ್ತಾರವಾದ ಮುನ್ನುಡಿಯನ್ನು ಬರೆಯುತ್ತ, ಪಂಪನನ್ನು ಕುರಿತು "One Abhinavapampa, a Jain wrote a Ramachandra Charita Purana... It is not quite impossible that the original Hampa is indentical with the Tamil Kamba or Kampa, the author of a Ramayan...." ಎಂದು ಮುಂತಾಗಿ ಊಹಿಸಿದ್ದಾರೆ. ಇದು ಶಬ್ದಮಣಿದರ್ಪಣ, ಜಗನ್ನಾಥವಿಜಯಗಳ ಸ್ತುತಿಪ್ರಸಂಗದಲ್ಲಿ ಬರುವ ಪಂಪನ ಹೆಸರನ್ನು ನೋಡಿ ಮಾಡಿದ ಊಹೆ. ಆದರೆ ಮೇಲೆ ಹೇಳಿದ "The Poet Pampa" ಎಂಬುದು ಬಿ.ಎಲ್.ರೈಸ್ ಅವರು ಪಂಪಭಾರತವನ್ನು ಅಭ್ಯಸಿಸಿ ಬರೆದ ಲೇಖನ.

ಮುನಿಜನದೋದಿಸಿದೋಜೆಯ ।
ಲನುವದಿಪುದಿದೊಂದೆ ಕೊಣ್ಡಕುಂದಾನ್ವಯ ನ ।
ನ್ದನವನಶುಕವೆಂದೆನಗಿನಿ ।
ತನನುಗ್ರಹಂ ಗೆಯ್ಗೆ ಕರುಣದಿಮ್ಮುನಿನಿವಹಂ ॥

ಈ ಪದ್ಯ ಆದಿಪುರಾಣ (೧ - ೧೫) ದಲ್ಲಿ ಹೀಗೆ ಕಂಡುಬರುತ್ತದೆ :

ಮುನಿಜನದೋದಿಸಿದೋಜೆಯೊ ।
ಳನುವದಿಪುದಿದೊಂದೆ ಕೊಂಡಕುಂದಾನ್ವಯ ನಂ ।
ದನವನಶುಕಮೆಂದೆನಗಿನಿ।
ಸನುಗ್ರಹಂ ಗೆಯ್ಗೆ ಕರುಣದಿಂ ಮುನಿನಿವಹಂ ॥

(ಎಸ್.ಜಿ. ನರಸಿಂಹಾಚಾರ್ ಆವೃತ್ತಿ - ಕ್ರಿ.ಶ. ೧೯೦೦- ಯಲ್ಲಿ " ದೊಂದೆ<>ದೊಂದು" ಎಂಬ ಭಿನ್ನಪಾಠವಿದೆ. ಕುಂದಣಗಾರ ಆವೃತ್ತಿಯಲ್ಲಿ ಒಂದೂ ಭಿನ್ನಪಾಠವಿಲ್ಲ)

ಶಾಸನ ಮತ್ತು ಕಾವ್ಯಗಳಲ್ಲಿ ಕಂಡುಬರುವ ಮೇಲಿನ ಪದ್ಯಗಳಲ್ಲಿ "ಯಲನು<>ಯೊಳನು" ಮತ್ತು "ತನನುಗ್ರಹಂ<>ಸನುಗ್ರಹಂ" ಎಂಬ ಮುಖ್ಯಪಾಠಭೇದಗಳು ಕಂಡುಬರುತ್ತವೆ. ಇವುಗಳಲ್ಲಿ "ಯಲನು<>ಯೊಳನು" ಎಂಬ ಮುಖ್ಯ ಪಾಠಭೇದದಿಂದ ಪದ್ಯದ ಅರ್ಥ ಮತ್ತು ಛಂದಸ್ಸುಗಳಿಗೆ ಯಾವ ವ್ಯತ್ಯವೂ ಉಂಟಾಗುವುದಿಲ್ಲ. ಇನ್ನು "ತನನುಗ್ರಹಂ<>ಸನುಗ್ರಹಂ" ಎಂಬ ಭಿನ್ನಪಾಠಗಳಲ್ಲಿ ಶಾಸನವು ಒಂದು 'ನಕಾರ'ವನ್ನು ಹೆಚ್ಚಿಗೆ ಇಟ್ಟುಕೊಂಡಿರುವುದರಿಂದ ಛಂದೋದೋಷಕ್ಕೆ ಎಡೆಲಭಿಸಿದೆ. ಹಸ್ತಪ್ರತಿ ಲಿಪಿಕಾರನಿಂದಲೋ, ಶಾಸನಲಿಪಿಕಾರನಿಂದಲೋ ಈ ದೋಷವುಂಟಾಗಿರಬೇಕು. ಒಟ್ಟಿನಲ್ಲಿ,

೧.ಕ್ರಿ.ಶ. ೯೪೧ರಲ್ಲಿ ಪೂರ್ಣಗೊಂಡ ಆದಿಪುರಾಣದ ಹಸ್ತಪ್ರತಿ, ಕ್ರಿ.ಶ. ೧೧೩೪ರ ಸುಮಾರಿಗೆ ಹಳೇಬೀಡು-ಬೇಲೂರಿನ ಕಡೆಗೆ ಪ್ರಸಾರಗೊಂಡಿತ್ತು.

೨.ಪಂಪನ ಹಸ್ತದಿಂದ ಇಳಿದು ೧೯೩ ವರುಷ ದಾಟಿಬರುವಲ್ಲಿ ಅದಕ್ಕೆ ಭಿನ್ನಪಾಠಗಳು ಪ್ರಾರಂಭವಾಗಿದ್ದವು.

೩.ಶಾಸನದಲ್ಲಿ ಸ್ಥಾನಪಡೆಯುವಷ್ಟು ಆದಿಪುರಾಣದ ಪದ್ಯಗಳು ಆ ಕಾಲದಲ್ಲಿಯೇ ಜನತೆಯ ಮೆಚ್ಚುಗೆಗಳಿಸಿದ್ದವು.

೪.ಈಗಿನ ಮಟ್ಟಿಗೆ ಪ್ರಾಚೀನತಮ ಮಿತಿಯುಳ್ಳ ಆದಿಪುರಾಣದ ಪದ್ಯವಿದು.

■■

ಆಕರ : ಮಾರ್ಗ ಸಂಪುಟ–೨

೮

ಶಾಸನದಲ್ಲಿ ಮದನತಿಲಕದ ಪದ್ಯ

ಚಂದ್ರರಾಜನ ಮದನತಿಲಕ ೧೧ನೆಯ ಶತಮಾನದ ಒಂದು ಶಾಸ್ತ್ರಗ್ರಂಥ. ಈ ಕೃತಿಯ ಪ್ರಥಮ ಅಧಿಕಾರದಲ್ಲಿ ಆಶ್ರಯದಾತನಾದ ಮಾಂಡಲಿಕ ರೇಚಭೂಪನ ಪ್ರಭು ಕಲ್ಯಾಣ ಚಾಲುಕ್ಯಚಕ್ರವರ್ತಿ ಜಯಸಿಂಹನ ಉಲ್ಲೇಖ ಬರುತ್ತದೆ. ಮದನತಿಲಕದ ಸಂಪಾದಕರಾದ ಶ್ರೀ ಪಂಚಮುಖಿಯವರು ಈ ಜಯಸಿಂಹನ ಬಗ್ಗೆ ವಿವೇಚಿಸುತ್ತ "ಚಾಳುಕ್ಯ ವಂಶಾವಳಿಯಲ್ಲಿ ಇಬ್ಬರು ಜಯಸಿಂಹದೇವರು ರಾಜ್ಯಭಾರ ಮಾಡಿದರು. ಒಬ್ಬನು ೧೧ನೆಯ ಶತಮಾನದಲ್ಲಿ (ಕ್ರಿ.ಶ. ೧೦೧೪-೧೦೪೨) ಆಳಿದನು; ಇನ್ನೊಬ್ಬನು ಪೆರ್ಮ್ಮಜಗದೇಕಮಲ್ಲನೆಂಬ ಹೆಸರಿನಿಂದ ೧೨ ಶತಮಾನದಲ್ಲಿ (ಕ್ರಿ.ಶ. ೩೮-೧೧೫೧) ರಾಜ್ಯಭಾರ ಮಾಡಿದನು. ಪ್ರಕೃತ ರೇಚಿಗನ ಪ್ರಭು ಜಯಸಿಂಹನು ೧೧ನೆಯ ಶತಮಾನದವನಿರಬೇಕು."[೧] ಎಂದು ತೀರ್ಮಾನಿಸಿದ್ದಾರೆ. ಈ ಜಯಸಿಂಹನನ್ನು ಕುರಿತ ಒಂದು ಪದ್ಯ ಮದನತಿಲಕದಲ್ಲಿ ಹೀಗಿದೆ:

ಚೋಳಕುಲ ವಿಲಯಕಾಲಂ
ಕಾಳಾಮುಖ ಪ್ರಾಹಿತೋದ್ಧತಾಹಿತಮಾಳಂ ||
ಮಾಳವರಾಜಕ ಶೂಲಂ |
ಶೂಲಾಯುಧ ಚರಣಕಮಲಭೃಂಗಂ ಸಿಂಗಂ ||[೨]

ಇದೇ ಪದ್ಯ ವಿಜಾಪುರ ಜಿಲ್ಲೆಯ ತಾಲೂಕ ಸ್ಥಳವಾದ ಸಿಂದಗಿಯ ಶಾಸನದಲ್ಲಿ ಕಂಡುಬರುತ್ತದೆ. ಇದು ಕಲ್ಯಾಣ ಚಾಲುಕ್ಯಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಹುಟ್ಟಿದ ಶಾಸನ. ಇದರ ಕಾಲ ಕ್ರಿ.ಶ. ೧೧೨೦. ಇಲ್ಲಿ ಚಕ್ರವರ್ತಿ ವಿಕ್ರಮಾದಿತ್ಯದೇವ ಮತ್ತು ಆತನ ಮಗ ಜಯಕರ್ಣದೇವರ ಪ್ರಶಸ್ತಿಗಳ ತರುವಾಯ ಮಹಾಮಂಡಲೇಶ್ವರ ಸೆಳರವಂಶದ ಸಿಂಗರಸನ ವಿಷಯ ಬರುತ್ತದೆ. ಈತನನ್ನು ಕುರಿತ ಹಲವು ಪದ್ಯಗಳಲ್ಲಿ,

ಚೊಟಿಕುಟವಿಟಿಯಕಾಟಿಂ |
ಕಳಾಮುಖ ಪ್ರಾಹಿತೋದ್ಧತಾಹಿತಮಾಟಿಂ ||
ಮಾಟಿವರಾಜಕ ಸೋಟಿಂ |
ಸೂಟಿಯುವ ಚೆರಣಕಮಟಿಃ ಭೃಂಗಂ ಸಿಂಗ ||[೩]

---

೧. ಮದನತಿಲಕ ಮುನ್ನುಡಿ 15-16.

೨. ಮದನತಿಲಕ 1-5.

೩. SII XX 80 ಈ ಶಾಸನ ಈಗ ವಿಜಾಪುರ ಮ್ಯುಜಿಯಮ್‌ನಲ್ಲಿದೆ.

ಎಂಬುದೂ ಒಂದು. ಇದು ಮೇಲೆ ಹೇಳಿದ ಮದನತಿಲಕ ಪದ್ಯವೇ ಆಗಿದೆ. ಆದರೆ ಅದು ಚಕ್ರವರ್ತಿ ವಿಕ್ರಮಾದಿತ್ಯ ಅಜ್ಜ ಜಯಸಿಂಹನಿಗೆ ಸಂಬಂಧಿಸಿದ್ದರೆ ; ಅದು ವಿಕ್ರಮಾದಿತ್ಯನ ಮಾಂಡಲಿಕ ಸೆಳರ ಸಿಂಗನೃಪನಿಗೆ ಸಂಬಂಧಿಸಿದೆ. ಇದರಿಂದ ಕೆಳಗಿನ ಅಭಿಪ್ರಾಯಗಳು ವ್ಯಕ್ತವಾಗುತ್ತವೆ.

೧.ಇದು ಮೂಲತಃ ಮದನತಿಲಕದ ಪದ್ಯವಾಗಿದ್ದರೆ, ಚಂದ್ರರಾಜ ಬಾಳಿದುದು ಈ ಶಾಸನ ಕಾಲವಾದ ಕ್ರಿ.ಶ. ೧೧೨೦ಕ್ಕೆ ಮೊದಲು ಆಳಿದ ಮೊದಲನೆಯ ಜಯಸಿಂಹ (೧೦೧೪-೪೨) ಕಾಲದಲ್ಲಿಯೇ ಹೊರತು ಎರಡನೆಯ ಜಯಸಿಂಹನ (೧೧೩೮-೫೧) ಕಾಲದಲ್ಲಲ್ಲ.

೨.ಈ ಪದ್ಯ ಮೊದಲು ತಲೆದೋರಿದುದು ಕಾವ್ಯದಲ್ಲಿ, ಆ ಮೇಲೆ ಶಾಸನದಲ್ಲಿ.

೩.ಈ ಶಾಸನಕವಿ ಮದನತಿಲಕದಿಂದಲೇ ಈ ಪದ್ಯವನ್ನೆತ್ತಿಕೊಂಡಿರಬಹುದು. ಇಲ್ಲವೆ ಆ ಕಾಲಕ್ಕಾಗಲೇ ಇದು ಶಾಸನಪದ್ಯವಾಗಿ ಬಳಕೆಗೊಂಡಿರಬಹುದು.

೪.೭೫ ವರ್ಷಗಳ ಅವಧಿಯಲ್ಲಿ ಇದು ಗಮನಾರ್ಹ ಭಿನ್ನಪಾಠಗಳಿಗೆ ಗುರಿಯಾಗಿದೆ.

■■

ಆಕರ : ಮಾರ್ಗ ಸಂಪುಟ–೨

೯

ಕರೀಂನಗರ ಶಾಸನದಲ್ಲಿ ಪಂಪಭಾರತದ* ಪದ್ಯಗಳು

ಕೆಲವು ವರ್ಷಗಳ ಹಿಂದೆ ಕುರ್ಕಿಯಲ್ ಗ್ರಾಮದ ಗಿರಿಶಾಸನ ಲಭಿಸಿ, ಮಹಾಕವಿ ಪಂಪನಿಗೆ ಸಂಬಂಧಿಸಿದ ಹೊಸಹೊಸ ವಿಷಯಗಳು ಬೆಳಕಿಗೆ ಬಂದವು. ಈಗ ಇತ್ತೀಚೆ ಬೆಳಕಿಗೆ ಬಂದಿರುವ ಕರೀಂನಗರ ಮ್ಯೂಜಿಯಂ ಶಾಸನ, ಪಂಪಭಾರತದ ಕಾಲ ಮೊದಲಾದ ವಿಷಯಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ನೀಡುತ್ತಿದೆ.

೧. ಶಾಸನ ಲಭಿಸಿದ ಗ್ರಾಮ : ಆಂಧ್ರಪ್ರದೇಶದ ಜಿಲ್ಲೆಯ ಸ್ಥಳವಾದ ಕರೀಂನಗರ ಪಟ್ಟಣದ ಮ್ಯೂಜಿಯಂ ಉಪವನದಲ್ಲಿ ಈ ಶಾಸನವಿದೆ. ಇದನ್ನು ಯಾರು? ಎಂದು? ಯಾವ ಊರಿನಿಂದ ಇಲ್ಲಿಗೆ ತಂದರು? ಎಂಬ ಪ್ರಶ್ನೆಗಳಿಗೆ ಈಗ ಖಚಿತ ಉತ್ತರಕೊಡುವುದು ಸಾಧ್ಯವಿಲ್ಲ. ಶಾಸನದಲ್ಲಿ ಬರುವ ಭೌಗೋಲಿಕ ಸಂಗತಿಗಳ ಹಿನ್ನೆಲೆಯಲ್ಲಿ ಹೇಳುವುದಾದರೆ, ಇದು ಕರೀಂನಗರ ಜಿಲ್ಲೆಯ ಒಂದು ಹಳ್ಳಿಗೆ ಸಂಬಂಧಿಸಿರಬಹುದು. ನೂತುಲಪಾಡು ಗ್ರಾಮದ ಬ್ರಾಹ್ಮಣನೊಬ್ಬನಿಗೆ ಪಂಪನ ಆಶ್ರಯದಾತನಾದ ಇಮ್ಮಡಿ ಅರಿಕೇಸರಿ ಅರಿಪನಪಳ್ಳಿ ಗ್ರಾಮದಲ್ಲಿ ಭೂಮಿಯನ್ನು ದಾನವಾಗಿ ಕೊಟ್ಟ ವಿಷಯವನ್ನೊಳಗೊಂಡ ಕಾರಣ, ಇದು ಈ ಎರಡರಲ್ಲಿ (ನೂತುಲಪಾಡು, ಅರಿಪನಪಳ್ಳಿ) ಒಂದು ಗ್ರಾಮಕ್ಕೆ ಸಂಬಂಧಿಸಿರಬಹುದು. ಇವು ಈಗಿನ ಯಾವ ಗ್ರಾಮಗಳೆಂಬುದನ್ನು ಗುರುತಿಸಿದರೆ ಶಾಸನದ ಮೂಲಸ್ಥಳ ಗೊತ್ತಾಗಬಹುದು.

೨. ಶಾಸನದ ಕಾಲ : ಈ ಶಾಸನದಲ್ಲಿ "[ಸ]ಕ ವರ್ಷ [೮]೬೯ ನೆಯ ಪರಾಭವ ಸಂವತ್ಸರದ ಕಾರ್ತಿಕ ಬಹುಳ ಏ[ಕಾದ]ಸಿ ಸೋಮವಾರ" ಎಂದು ಕಾಲನಿರ್ದೇಶನವಿದೆ. ಇದಕ್ಕೆ ಸಮಾನವಾದ ವರ್ಷ ಕ್ರಿ.ಶ. ೯೪೬.

ಇಮ್ಮಡಿ ಅರಿಕೇಸರಿಯ ಕಾಲದಲ್ಲಿ ಹುಟ್ಟಿದ ತೇದಿಯಿಲ್ಲದ ವೇಮುಲವಾಡ ಶಾಸನ ಮತ್ತು ಕ್ರಿ.ಶ. ೯೪೦ರ ಚೆನ್ನೂರ ಶಾಸನಗಳ ಮಗ್ಗುಲಲ್ಲಿಟ್ಟು ನೋಡಿದರೆ, ಕ್ರಿಶ. ೯೪೬ರ ಈ ಶಾಸನ ಈಗಿನ ಮಟ್ಟಿಗೆ ಇಮ್ಮಡಿ ಅರಿಕೇಸರಿಯ ಆಳಿಕೆಯ ಉತ್ತರಸೀಮೆಯನ್ನು ಸೂಚಿಸುವುದಾಗಿದೆ.

ತನ್ನ ಎರಡು ಕೃತಿಗಳಲ್ಲಿ ಆದಿಪುರಾಣವನ್ನು ಕ್ರಿ.ಶ. ೯೪೧ರಲ್ಲಿ ರಚಿಸಿರುವೆನೆಂದು ಹೇಳುವ ಪಂಪ, ವಿಕ್ರಮಾರ್ಜುನವಿಜಯದ ರಚನೆಯ ಕಾಲದ ಬಗ್ಗೆ ಮೌನತಾಳಿದ್ದಾನೆ. ಈ ಶಾಸನದಲ್ಲಿ ವಿಕ್ರಮಾರ್ಜುನವಿಜಯದ ಐದುಪದ್ಯಗಳು ಬರುವುದರಿಂದ, ಆ ಕಾವ್ಯ ಶಾಸನಕಾಲವಾದ ೯೪೬ಕ್ಕೆ ಮುಂಚೆ ಹುಟ್ಟಿದೆಯೆಂಬ ಸಂಗತಿ ಮೊದಲಬಾರಿ ನಮ್ಮ ಗಮನಕ್ಕೆ ಬರುತ್ತದೆ.

---

* ಈ ಲೇಖನದ ಸಹಲೇಖಕರು ಶ್ರೀ ಪಿ.ವಿ. ಪರಬ್ರಹ್ಮಶಾಸ್ತ್ರಿಗಳು.

೩. **ಅರಸು:** ದೇವತಾಸ್ತುತಿ ಮೊದಲಾದವುಗಳು ಇಲ್ಲದೆ "ಸ್ವಸ್ತಿ" ಎಂಬುದರ ತರುವಾಯವೇ ರಾಜವಂಶಾವಳಿಯನ್ನು ಹೇಳುವ ೫ ಕಂದಪದ್ಯಗಳಿಂದ ಪ್ರಾರಂಭವಾಗುತ್ತದೆ, ಈ ಶಾಸನ. ಪಂಪಭಾರತದ ಪ್ರಥಮಾಶ್ವಾಸದ ಪದ್ಯ ೧೫ರಿಂದ ೫೦ರ ವ್ಯಾಪ್ತಿ ಭಾಗದಿಂದ ಆಯ್ದುಕೊಂಡ ಈ ಪದ್ಯಗಳು ಶಾಸನದಲ್ಲಿ ಹೀಗಿವೆ.

೧. ಶ್ರೀಮಚ್ಚೆಳುಕ್ಯವಂಸ ।
[ವ್ಯೋ]ಮಾಮೃತಕಿರಣನೆನಿಪ ಕಾನ್ತಿಯನೊಳಕೊ ।
ಣ್ಡೀ ಮಹಿಯೊಳಾತ್ಮವಂಸ ಸಿ ।
ಖಾಮಣಿ [ಜ]ಸಮೆಸೆಯೆ ಜುದ್ಧಮಲ್ಲ ನೆಗಟ್ಟಿಂ ॥

೨. ಆತ್ಮಭವನಾ ಧರಾಧಿಪ ।
ನಾತ್ಮಜನಜನಹುಷ ಪೃಥುಭಗೀರತನಳರಾ ।
ಮಾತ್ಮಜ[ರನಿಳಿ]ಸಿ ನೆಗಟ್ದಿ ಮ ।
ಹಾತ್ಮ ನರಸಿ[ಙ್ಗ]ನಱಿನಿ[ನೊಳ್ ಪ]ರಮಾತ್ಮಂ ॥

೩. ಆ ಜಾಕಯ್ಯೆಗಮಾ ವಸು ।
ಧಾಜಯಾವಲ್ಲಭಂಗಮತಿವಿಶದಿ(ದ) ಯಶೋ ।
ರಾಜಿತನೆನಿಪರಿಕೇಸರಿ ।
ರಾಜತ್ತೇಜೋಗ್ನಿಮಾ(ಮ)ಗ್ನರಿಪುನೃಪ[ಶ]ಲಭಂ ॥

4. ಮಗನಾ[ಳೆ]ನಾಗಿವಾಗಳೆ ।
ನೆಗಟ್ತಿಯೋಳ್ಬೀರದೆಸಕದೊಳ್ನೆಗಟಿ ಮಗಂ ।
ಸಮನೆನೆ ಪುಟ್ಟಲೊಡಂ ಕೊ ।
ಳ್ಮಗಗೊಣ್ಡುದು ಭುವನಭವನಮರಿಕೇಸರಿಯಾ ॥

5. ಚಾಗದ ಕಂಭ ಚಾಗದ ಕಂಭಮ[ನ್ನಿಱಿಸಿ ಬೀ]ರದ ಶಾಸನಮನ್ನೆಗಟ್ಚಿ ಕೊ ।
ಳ್ಪೋಗದ ಮಣ್ಡಲಂಗಳನೆ [ಕೊ]ಣ್ಡು ಜಗತ್ರಿತಯಂಗಳೊಳ್ ಜಶ ।
ಕ್ಕಾಗ[ರ]*ಮಾದ ಬದ್ದೆಗನಿನಾ ನರಸಿಂಘನಿನತ್ತನಾಲ್ವರಿಂ ।
ಮೇಗೆ ಪೊದಲ್ದ ಜಾಗದೊಳಮೊನ್ದಿದ ಬೀರದೊಳಂ ಗುಣಾರ್ಣ್ನವಂ ॥

ಬೋಧನಚಾಲುಕ್ಯರ ವಂಶಾವಳಿಯು ಈ ಪದ್ಯಗಳಿಂದ ಹೀಗೆ ವ್ಯಕ್ತವಾಗುತ್ತದೆ :

ಯುದ್ಧಮಲ್ಲ (III)
|
ನರಸಿಂಹ + ಜಾಕವ್ವೆ
|
ಅರಿಕೇಸರಿ (II)

ಮೊದಲನೆಯ ಯುದ್ಧಮಲ್ಲನನ್ನು ಕುರಿತ ಪಂಪಭಾರತದ ಪದ್ಯ, ಇಲ್ಲಿ ಮೂರನೆಯ ಯುದ್ಧಮಲ್ಲನಿಗೆ ಬಳಕೆಯಾಗಿದೆ. ಆಮೇಲೆ ಅಲ್ಲಿ ನರಸಿಂಹ (೧-೩೧), ಅರಿಕೇಸರಿ (೧-೪೧, ೪೨, ೫೦)ಯರಿಗೆ ಬಳಸಿದ ಪದ್ಯಗಳನ್ನು ಇಲ್ಲಿಯೂ ಅವರಿಗಾಗಿ ಬಳಸಲಾಗಿದೆ. ಪ್ರಸ್ತುತ ಶಾಸನ ಸಂಬಂಧಿಸಿದುದು ಈ ಎರಡನೆಯ ಅರಿಕೇಸರಿಗೆ.

೪. **ಶಾಸನದ ವಿಷಯ :** ಉಕ್ತವಾದ ತಿಥಿಯಂದು ಅರಿಕೇಸರಿಯು ನೂತುಲಪಾಡು ಗ್ರಾಮದ ಕೌಶಿಕಗೋತ್ರದ ವಿಷ್ಣುಭಟ್ಟನ ಮಗ ಅಪ್ಪಣ್ಣಯ್ಯನ ಮಗನಾದ ಧಾರಪಯ್ಯನೆಂಬ ಬ್ರಾಹ್ಮಣನಿಗೆ "ತುಷ್ಟಿದಾನ"ವೆಂದು ಅರಿಪನಪಳ್ಳಿ ಗ್ರಾಮದಲ್ಲಿ ೫೦ ಮತ್ತರು ಭೂಮಿಯನ್ನು ನೀಡಿದುದು ಇದರ ವಿಷಯ. ಈ ಸಂದರ್ಭಕ್ಕೆ ಅನುಗುಣವಾದ ಇನ್ನೂ ಕೆಲವು ದತ್ತಿ ಸಂಗತಿಗಳು ಶಾಸನದ ಕೊನೆಯಲ್ಲಿವೆ.

೫. **ಪದ್ಯಗಳ ಪಾಠಾಂತರ :** ಕವಿರಚಿತ ಕೃತಿಯು ಸಾಮಾನ್ಯವಾಗಿ ಪ್ರಾಚೀನವಿದ್ದಷ್ಟು ಶುದ್ಧವಾಗಿರುತ್ತದೆ. ಈಗ ಲಭಿಸಿದ ಪಂಪಭಾರತದ ಎರಡೂವರೆ ಹಸ್ತಪ್ರತಿಗಳು ಅಷ್ಟು ಪ್ರಾಚೀನವಲ್ಲ. ಹೀಗಾಗಿ ಈ ಶಾಸನದಲ್ಲಿದ್ದುದೇ ಪಂಪಭಾರತದ ಐದು ಪದ್ಯಗಳಪ್ರಾಚೀನತಮ ಪಾಠವಾಗಿದೆ. ಶಾಸನಶಿಲೆಯೇರಿದ ಈ ಪದ್ಯಗಳು "ಸಧ್ಯಪ್ರತಿ"ಯ ಪಾಠವೆನಿಸಿಕೊಳ್ಳುತ್ತವೆ. ಆದುದರಿಂದ ಇವು ಬಹುಮಟ್ಟಿಗೆ ಶುದ್ಧಪಾಠವೆನ್ನಬಹುದಾದರೂ ಲಿಪಿಕಾರ, ರೂವಾರಿಗಳಿಂದ ಕೆಲವು ಪಾಠಗಳು ಕೆಟ್ಟಂತಿವೆ. ಇಷ್ಟು ಹಿನ್ನೆಲೆಯೊಂದಿಗೆ ಇಲ್ಲಿಯ ಪಾಠಾಂತರಗಳನ್ನು ನೋಡಬಹುದು:

	ಕಾವ್ಯ	ಶಾಸನ
೧.	ವಂಶವ್ಯೋಮ	ವಂಸ[ವ್ಯೋ]ಮ
	ಮಹಿಯೊಳಾತ್ಮವಂಶ	ಮಹಿಯೋಳಾತ್ಮ ವಂಸ
	ಶಿಖಾಮಣಿ	ಸಿಖಾಮಣಿ
	ಯುದ್ಧಮಲ್ಲಂ	ಜುದ್ಧಮಲ್ಲಂ
	ದುದ್ಧಮಲ್ಲ(ಘ)	
೨.	ನರಾಧಿಪನಾತ್ಮಜನಾ ನಹುಷ	ಧರಾಧಿಪನಾತ್ಮಜನಜನಹುಷ
	ನರಾಧಿಪನಾತ್ಮಭವಂ ನಹುಷ(ಘ)	
	ನಳಮಹಾತ್ಮರನಿಳಿಸಿ	ನಳರಾಮಾತ್ಮಜರನಿಳಿಸಿ
	ಮಹಾತ್ಮಂ	ಮಹಾತ್ಮ
	ನರಸಿಂಹನಜಿವಿನೊಳ್ ಪರಮಾತ್ಮಂ	ನರಸಿ[ಙ್ಗ]ನಜಿವಿ[ನೊಳ್ ಪ]ರಮಾತ್ಮಂ
	ನರಸಿಂಹನಜಿವಿನೊಳನುಪಮಾತ್ಮಂ (ಕ,ಖ)	
೩.	ಆ ಜಾಕವ್ವೆಗಮಾ	ಆ ಜಾಕಯ್ಯೆಗಮಾ
	ವಸುಧಾಜಯ ಸದ್ವಲ್ಲಭಂ	ವಸುಧಾಜಯಾ ವಲ್ಲಭಂ
	ವಸುಧಾಜಿಯ ಸದ್ವಲ್ಲಭಂ (ಖ,ಕ)	
	ವಿಶದ ಯಶೋರಾಜಿತ	ವಿಶದಿ(ದ) ಯಶೋರಾಜಿತ
	ವಿಶದ ಯಶೋಭ್ರಾಜಿತ (ಕ,ಖ)	

	ರಾಜಂ ತೇಜೋಗ್ನಿಮಗ್ನರಿಪು ನೃಪಶಲಭಂ	ರಾಜತ್ತೇಜೋಗ್ನಿಮಾ(ಮ)ಗ್ನರಿಪು ನೃಪ[ಶ]ಲಭಂ
	ರಾಜಂ ತೇಜೋಗ್ನಿಮಗ್ನರಿಪು ನೃಪಶರಭಂ (ಖ,ಘ)	
೪.	ಮಗನಾದ	ಮಗನಾ[ಳೆ]
	ಚಾಗದ ನೆಗಟ್ತೆಯೊಳ್	ವಾಗಳೆ ನೆಗಟ್ತೆಯುಳ್
	ಬೀರದೇಟ್ಗಿಯೊಳ್	ಬೀರದೆಸಕದೊಳ್
	ಮಗನೆನೆ	ಸಮನೆನೆ
	ಕೋಳ್ಮೃಗದೊಂಡುದು	ಕೊಳ್ಮೃಗಗೊಣ್ಡುದು
	ಕೋಳ್ಮೊಗಗೊಂಡುದು (ಕ,ಖ)	
	ಭುನಭವನಮರಿಕೇಸರಿಯೊಳ್	ಭುವನಭವನಮರಿಕೇಸರಿಯಾ
೫.	ಚಾಗದ ಕಂಬಮಂ ನಿಜಿಸಿ	ಚಾಗದ ಕಂಭ ಚಾಗದ ಕಂಭನ್ನಿಜಿಸಿ
	ಜಸಕ್ಕಾಗರಮಾದ	ಜಶಕ್ಕಾಗ[ರ]*ಮಾದ
	ನರಸಿಂಹನಿನತ್ತ ನಾಲ್ವೆರಲ್ ಮೇಗಂ	ನರಸಿಂಘನಿನತ್ತ ನಾಲ್ವರಿಂ ಮೇಗೆ
	ನರಸಿಂಹನಿನಂತೆ ನಾಲ್ವರೊಳ್ ಮೇಗು (ಕ,ಖ)	
	ನರಸಿಂಹನಿನತ್ತ ನಾಲ್ವೆರಲ್ ಮೇಗೆ (ಘ)	
	ಚಾಗದೊಳಮೊಂದಿದ	ಜಾಗದೊಳಮೊನ್ದಿದ

ಈ ಐದು ಪದ್ಯಗಳ ತರುವಾಯ ಶಾಸನದ ಪ್ರಶಸ್ತಿಗದ್ಯದಲ್ಲಿ ಬರುವ 'ಪ್ರತ್ಯಕ್ಷ ವಾಗ್ದಮೆ]' ಎಂಬುದು, ಪರಭಣಿ ತಾಮ್ರಶಾಸನದಲ್ಲಿ ಮುಮ್ಮಡಿ ಅರಿಕೇಸರಿಗೆ ಬಳಸಿದ "ಪ್ರತ್ಯಕ್ಷ ವಾದ್ವಳಿ" ಎಂಬ ಬಿರುದೇ ಆಗಿದೆ. ಪಂಪಭಾರತದಲ್ಲಿ ಈ ಇಮ್ಮಡಿ ಅರಿಕೇಸರಿಗಿರುವ "ಪ್ರತ್ಯಕ್ಷ ಜೀಮೂತವಾಹನಂ" ಎಂಬ ಬಿರುದನ್ನೂ ಇಲ್ಲಿ ಗಮನಿಸಬೇಕು.

ಹೀಗೆ ಹಸ್ತಪ್ರತಿಗಳಿಗೂ ಶಾಸನಕ್ಕೂ ಪಾಠವ್ಯತ್ಯಾಸ ಕಂಡುಬರುತ್ತದೆ. ಶಾಸನದಲ್ಲಿ ಸಪ್ತಮಿಯ ಉಳ್ ಎಂಬ ಪ್ರಾಚೀನ ಪ್ರತ್ಯಯವಿದೆಯೆಂಬುದನ್ನು ಬಿಟ್ಟರೆ, ಇಲ್ಲಿಯ ಪಾಠಗಳು ಅಷ್ಟೇನೂ ಸಾಧುವಾಗಿಲ್ಲ. ಲಿಪಿಕಾರ ಇಲ್ಲವೆ ರೂವಾರಿಗಳು ಸಾಧಾರಣ ಮಟ್ಟದವರಿದ್ದುದೇ ಇದಕ್ಕೆ ಕಾರಣವೆಂಬಹುದು.

ಉತ್ತರಾರ್ಧ ಶಾಸನದ ಗದ್ಯವನ್ನು ನೋಡಿದರೆ, ಶಾಸನಕ್ಕೆ ಪಾಠವನ್ನೊದಗಿಸಿದವನು ಪಂಪನಲ್ಲವೆಂದೂ ಆತನ ಕೃತಿಯಿಂದ ಯಾವನೋ ಒಬ್ಬ ಶಾಸನಕವಿ ೫ ಪದ್ಯಗಳನ್ನು ಮಾತ್ರ ಸ್ವೀಕಸಿದನೆಂದೂ ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಈ ಶಾಸನದಿಂದ ತಿಳಿದುಬರುವ ಮಹತ್ವದ ಸಂಗತಿಗಳಿವು :

ಅ. ವಿಕ್ರಮಾರ್ಜುನವಿಜಯದ ೫ ಪದ್ಯಗಳು ಇದರಲ್ಲಿವೆ.

ಆ. ವಿಕ್ರಮಾರ್ಜುನವಿಜಯ ಕ್ರಿ.ಶ. ೯೪೬ಕ್ಕೆ ಮೊದಲು ಹುಟ್ಟಿದೆ.

ಇ. ಬಹುಶಃ ಪಂಪ ಬದುಕಿದ್ದಾಗಲೇ ಏಕೆ, ವಿಕ್ರಮಾರ್ಜುನವಿಜಯ ಹುಟ್ಟಿದ ಹೊಸದರಲ್ಲಿಯೇ ಕಾವ್ಯಕ್ಕೆ ಪಾಠಾಂತರಗಳಾಗಿದ್ದವು.

ಈ. ಈ ಪದ್ಯಗಳು ವಿಕ್ರಮಾರ್ಜುನವಿಜಯದ ಪ್ರಾಚೀನತಮಪಾಠ.

೮. ಈ ಶಾಸನ ಅರಿಕೇಸರಿಯ ಆಳಿಕೆಯ ಉತ್ತರಸೀಮೆಯನ್ನು ಈಗಿನ ಮಟ್ಟಿಗೆ ಕ್ರಿ. ಶ. ೯೪೬ರಷ್ಟು ಮುಂದೆ ಖಚಿಪಡಿಸುತ್ತದೆ.

೯. ವಿಕ್ರಮಾರ್ಜುನವಿಜಯದ ಪದ್ಯಗಳಿಗೆ ಪಂಪನು ಜೀವಿಸಿರುವಾಗಲೇ ಶಾಸನಮರ್ಯಾದೆ ಲಭಿಸಿದೆ.

ಶಾಸನಪಾಠ

ಒಂದನೆಯ ಮುಖ

೧. ಸ್ವಸ್ತಿ ಶ್ರೀಮಚ್ಚಳು-

೨. ಕ್ಯವಂಸ[ವ್ಯೋ]ಮಾ-

೩. ಮೃತಕಿರಣನೆನಿಪ ಕಾ-

೪. ನ್ತಿಯನೊಳಕೊಣ್ಡೀ ಮಹಿಯೋ-

೫. ಳಾತ್ಮವಂಸ ಸಿಖಾಮಣಿ [ಜ]-

೬. ಸಮೆಸೆಯೆ ಜುದ್ಧಮಲ್ಲ ನೆಗ-

೭. ಟ್ದಿಂ*[೧]* ಆತ್ಮಭವನಾ ಧರಾಧಿ-

೮. ಪನಾತ್ಮಜನಜನಹುಷ ಪೃಥುಭ-

೯. ಗೀರತನಳರಾಮಾತ್ಮಜ[ರನಿಳಿ]-

೧೦. ಸಿ ನೆಗಟ್ದ ಮಹಾತ್ಮ ನರಸಿ[ಙ್ಗ]-

೧೧. ನಱುವಿ[ನೊಳ್ ಪ]ರಮಾತ್ಮಂ [೨]*-

೧೨. ಆ ಜಾಕಯ್ಯೆಗಮಾ ವಸುಧಾ-

೧೩. ಜಯಾವಲ್ಲಭಂಗಮತಿವಿಶ-

೧೪. ದಿ(ದ)ಯಶೋರಾಜಿತನೆನಿಪರಿಕೇ-

೧೫. ಸರಿ ರಾಜತ್ತೇಜೋಗ್ನಿಮಾ(ಮ)ಗ್ನರಿ-

೧೬. ಪುನೃಪ[ಶ]ಲಭಂ+[೩]* ಮಗನಾ[ಳೆ]-

೧೭. ನಾಗಿವಾಗಳೆ ನೆಗಟ್ತೆಯೊಳ್ಬೀರ-

೧೮. ದೆಸಕದೊಳ್ನೆಗಟೆ ಮಗಂ ಸಮ-

೧೯. ನೆನೆ ಪುಟ್ಟಲೊಡಂ ಕೊಳ್ಮಗಗೊಣ್ಡು-

೨೦. ದು ಭುನಭವನಮರಿಕೇಸರಿ-

೨೧. ಯಾ॥[೪]* ಚಾಗದ ಕಂಭ-

ಎರಡನೆಯ ಮುಖ

೨೨. ಚಾಗದ ಕಂಭಮ[ನ್ನಿಱಿಸಿ ಬೀ]-

೨೩. ರದ ಶಾಸನಮನ್ನೆಗಟ್ಚಿ ಕೊ-

೨೪. ಳ್ವೋಗದ ಮಣ್ಡಲಂಗಳನೆ [ಕೊ]-

೨೫. ಣ್ಣು ಜಗತ್ರಿತಯಂಗಳೊಳ್ ಜ-
೨೬. ಶಕ್ಕಾಗ[ರ]*ಮಾದ ಬದ್ದೆಗನಿನಾ ನ-
೨೭. ರಸಿಂಘನಿನತ್ತ ನಾಲ್ವರಿಂ ಮೇ-
೨೮. ಗೆ ಪೊದಳ್ದ ಜಾಗದೊಳಮೊನ್ದಿ-
೨೯. ದ ಬೀರದ್ಧೊಳಂ ಗುಣಾರ್ಣ್ನವಂ[ಘ]*-
೩೦. ಸ್ವಸ್ತಿ ಸಮಧಿಗತ ಪಞ್ಚಮ-
೩೧. ಹಾಶಬ್ದ ಮಹಾಸಮನ್ತಾಧಿ-
೩೨. ಪತಿ ಸಮಸ್ತಭುವನ ಸಂಸ್ತೂ-
೩೩. ಯಮಾನ ಚಾಳುಕ್ಯವಂಶೋದ್ಭ-
೩೪. ವಂ ಪಾಂಬರಾಂಕುಶನಮ್ಮನಗ-
೩೫. ನ್ಧವಾರಣಂ ಗನ್ಧೇಭವಿದ್ಯಾಧ-
೩೬. ರನುದತ್ತನಾರಾಯಣಂ ಪ್ರತ್ಯ-
೩೭. ಕ್ಷ[ವಾಗ್ದಮೆ]ಯಾರೂಢಸರ್ವ್ವ-
೩೮. ಜ್ಞ ಗುಣನಿಧಿ ಗುಣಾರ್ಣ್ನವ ಪ್ರಿ-
೩೯. ಯಗಳ್ಳಂ ತ್ರಿಭುವನಮಲ್ಲಂ-
೪೦. ಸಾಮನ್ತಚೂಡಾಮಣಿ ನೋ[ಡಿ]-
೪೧. ತ್ತೆ ಗೆಲ್ವಂ ಶ್ರೀಮದರಿಕೇಸ-
೪೨. ರಿಯರಸಯ್ಯಂಗೊಡೆಯ-
೪೩. ನೆತ್ತಿಸಿ [ಇರ್ಪತ್ತಿಚ್ಛಾ-]
೪೪. ಮುಂ ದುಷ್ಟನಿಗ್ರಹ ವಿ[-]
೪೫. ಷ್ಟ ಪ್ರತಿಪಾಲನದಿಂ [ರಾ]ಜ್ಯ---

ಮೂರನೆಯ ಮುಖ

೪೬. [ಸ]ಕ ವರ್ಷ[ಲ]೬೯ ನೆ-
೪೭. ಯ ಪರಾಭವ ಸಂ
೪೮. ವತ್ಸರದ ಕಾರ್ತ್ತಿಕ ಬ-
೪೯. ಹುಳ ಏ[ಕಾದ]ಸಿ ಸೋಮ-
೫೦. ವಾರದನ್ದು ಶ್ರೀಮದರಿಕೇಸ-
೫೧. ರಿಯರಸ[ರ್ಚ್ಚಾ]ದನ ದಣ್ದೆ [ಗೋ]-
೫೨. [ವಿಣ]ತ್ತುವ[ಳ್ಳೇ]ಱ ತಟಿಯ ಬೀ-
೫೩. [ಡಿನೊಳ್] ಕೆವಿಶಿಕ ಗೋತ್ರ ನೂ-
೫೪. ತುಲಪಾಟು ಬೋವಂ ವಿ[ಷ್ಣು] ಭ-

೫೫. ಟ್ಬರ ಮಗಂ ಅ[ಪ್ಪ]ಣಯ್ಯ ಅ-
೫೬. ಪ್ಪಣಯ್ಯನ ಮಗಂ ಧಾರಪ-
೫೭. ಯ್ಯಂಗೆ ತು[ಷ್ಟಿ]ದಾನಂ ಅರಿಪ-
೫೮. [ನ]ಪಳ್ಳಿಯ ಬಡಗಣದೆಸೆಯ
೫೯. [ಗಾಮುಣನೆಯ್ದೊ]ಳೆಂಗೆನಿಳನಾ-
೬೦. ರೆಯೆಲಯ್ವತ್ತು ಮತ್ತರ್ನ್ನೀಲನನ-
೬೧. ರಿಕೇಸರಿಯರಸರ್ದ್ದಯೆಂಗೆಯ್ದ-
೬೨. ರುದಕ್ಕೆ ಸಿದ್ಧಾಯಂ ಮುದ್ದರಣಗಾ-
೬೩. ಮುಣ್ಡಗೆ ಇಮ್ಮತ್ತರ್ನ್ನೆಲಕ್ಕೆ ನೀ-
೬೪. [ರುಮಂ ಕುಳ]ವರು ಈ ಸ್ಥಿತಿ-
೬೫. ಯಂ ತಪ್ಪದತು ನಗರೂರ-
೬೬. ಅಯ್ಯಪಗಾಮುಣ್ಡನು ಶಾ[ವು]-
೬೭. [ಲೂ]ರದೆನ್ತೆಯನು ಮೂಲ-
೬೮. [ಗೂ]ರ ಪೋಮಯಗಾಮುಣ್ಡೆ-
೬೯. [-----]ದ ಮಹಾ[ಜ]-
೭೦. ನ ದಿಣ್ಣಮಯ್ಯನು ಕನ್ದಪ್ರ್ಪಯ-

ನಾಲ್ಕನೆಯ ಮುಖ

೭೧. [ತಾಟೂ]ರ ಮಹಾಜಂಕಸ-
೭೨. [ನ]ಯ್ಯನುಂ ಅಪ್ಪಣನು ಚಡ್ಡಿ-
೭೩. ಯ ರಾಜನುಂ ರಾಜರಾಜನು-
೭೪. [ರೇ]ಕುರಿಕಿಯ ಮಲ್ಲಪರಾಜನು-
೭೫. ಸಾಕ್ಷಿಯಾಗೆ ಗಾಮುಣ್ಡನೆ ಚ[ಟ್ಟ]-
೭೬. ಯ್ಯನುಂ ತಮ್ಮಂಮಕಯ್ಯ-
೭೭. ಮುನಿಬ್ದಿಕ್ಕಿಸಿದ ಕಮ್ಬ ಚನು-
೭೮. ಲೂರ ಗಾಮುಣ್ಡಂ ಚಿಂಗಪುಲಿಗೆ-
೭೯. [ಒನ್ದು] ಮತ್ತರುವಿಟುಮಡಿಯು-
೮೦. ಮಾಯ್ಯಾರಭೋಗಪತಿ ಗಾಮುಣ್ಡ-
೮೧. ಯ[ಗಮೆ]ರಡುಪಲದೊಳಂ ಕೆ-
೮೨. ಱೆಯ ಮುನ್ದ[ಣ್ಣೆ] ಗುಡುವರ್ನೆಲ್ಲು-
೮೩. ಖಣ್ಡುಗ ಪನ್ನೆರಡು [ಈ] ಸ್ಥಿತಿಯಾ-
೮೪. ಗ್ಗೆ ತಪ್ಪಸಲ್ಲ ಕುಳವತ್ತಳೆ-

೮೫. ಯ ಪೆರ್ಗ್ಗಡೆ ಜುಟ್ಟಯ್ಯನ ಸಂ-
೮೬. ಧಿಪ್ಟಿತರ್ಸನಬೋಜಯ ನಾ-
೮೭. ಪದಿಯತ್ತಂ ಶ್ರೀ ಮಮ್ನ ಬರೆ-
೮೮. ದೊ|| ಸ್ವದತ್ತಂ ಪರದತ್ತಂ ವ-
೮೯. ಯೋ ಹ್ಯರೇತಿ ವಸುನ್ದರಿ ಷ-
೯೦. ಷ್ಟಿವರಿಷ ಸಹಸ್ರಾಣಿ ವಿ-
೯೧. ಷ್ಟಯಾಂ ಜಾಯತೇ ಕ್ರಿಮಿ|| ಇ-
೯೨. ದು ತಪ್ಪಿದವ ಪ್ರಯಾಗೆಯು-
೯೩. ಬಾರಣಾಸಿಯು ಮಡಿದ ಪಾ-
೯೪. ಪಮಕಮರಸರಜೆಯ-
೯೫. ಮಿಕ್ಕೆ||

■■

ಆಕರ : ಮಾರ್ಗ ಸಂಪುಟ–೨

೧೦

ಶಾಸನಗಳಲ್ಲಿ ಸೂಕ್ತಿಸುಧಾರ್ಣವದ ಪದ್ಯಗಳು

"ವೀರ ಹೊಯ್ಸಳ ಸೋವಿದೇವರಾಯ ವಿನೋದಾರ್ಕರ್ಣ ಕೌತುಕೋತ್ಪಾದಿತ" ಸೂಕ್ತಿಸುಧಾರ್ಣವ, ಹೊಯ್ಸಳ ಆಸ್ಥಾನದಲ್ಲಿ ರೂಪಗೊಂಡ ಕೃತಿ, ಜಯದಂಕರಾಮ, ಪ್ರತಿರೂಪಶೂದ್ರಕಂ, ಸುಭಟಶೂದ್ರಕಂ (51-160-61), ಶುಭತುಂಗದೇವ (94-7), ನಾರಸಿಂಹ (96-20), ದಕ್ಷಿಣ ಚಕ್ರವರ್ತಿ(96-21), ವತ್ಸಭೂಪತಿ(96-96), ನೃಪಧೀರ(97-24), ಕವಡೆಯ ಬೊಪ್ಪ (130-66), ವೀರಬಲ್ಲಾಳನೃಪಂ ಮೊದಲಾದ ಬಿರುದು ಮತ್ತು ಹೆಸರುಗಳನ್ನೊಳಗೊಂಡ ಪದ್ಯಗಳು, ಈ ಕೃತಿಯಲ್ಲಿ ಆಗಾಗ ಕಣ್ಣಿಗೆ ಬೀಳುತ್ತವೆ. ಇವು ಆಶ್ರಿತ ಅರಸನನ್ನು ಕುರಿತ ಕೃತಿ ಇಲ್ಲವೆ ಯಾವುದೇ ಕೃತಿಯ ಪೀಠಿಕಾ ಪ್ರಸಂಗ ಇಲ್ಲವೆ ಶಾಸನಗಳಿಂದ ಎತ್ತಿಕೊಂಡ ಪದ್ಯಗಳಾಗಿರಬಹುದು. ಇವುಗಳಲ್ಲಿ ಶಾಸನಪ್ರಪಂಚಕ್ಕೆ ಸಂಬಂಧಿಸಿದ ೧೩ ಪದ್ಯಗಳನ್ನು ಸೂಕ್ತಿಸುಧಾರ್ಣವ ಸಂಪಾದಕರು ಹೀಗೆ ಹುಡುಕಿ ಹೇಳಿದ್ದಾರೆ:

೧.	ಶ್ರೀವಧು ಮೃತ್ತಿನೆಕ್ಕಸರ 1-9	EC.iii ಮಂಡ್ಯ 121 ಬಸರಾಳು EC. iv-ii ನಾಗಮಂಗಲ 98 ಭೀಮನಹಳ್ಳಿ (1230) EC.vi ಕಡೂರ 12 ದೇವನೂರ
೨.	ಹರಿನಾಭೀ ಕಮಲಕ್ಕೆ 1-10	EC. iii ಮಂಡ್ಯ 121 ಬಸರಾಳು EC. iv ನಾಗಮಂಗಲ 98 ಭೀಮನಹಳ್ಳಿ (1230)
೩.	ಸಳನೆಂಬಂ ಶಶಕಾಭಿಧಾನ 1-11	EC. vi ತರಿಕೆರೆ 42 ಅಮೃತಾಪುರ
೪.	ಆದಿವರಾಹಂ ಕೋಡೊಳ್ 1-12	EC.iii ಮಂಡ್ಯ 121 ಬಸರಾಳು
೫.	ವಿನಯಾದಿತ್ಯನ ನಂದನಂ 1-13	EC.iii ಮಂಡ್ಯ 121 ಬಸರಾಳು
೬.	ಪೆಸರ್ಗೊಂಡಾಡುವ 1-14	EC. iii ಮಂಡ್ಯ 121 ಬಸರಾಳು
೭.	ದೇವಿವೆಸರೆಸೆವ ಲಕುಮಾ ೧-೧೫	EC.VI ತರೀಕೆರೆ ೪೨ ಅಮೃತಾಪುರ
೮.	ಇದಿರಾದರಿಭೂಪಾಳರ ೧-೧೬	EC. v-ii ಅರಸಿಕೆರೆ ೬೨ ಹಲಕೂರು
೯.	ಆ ವಿಜಯ ನಾರಸಿಂಹ ೧-೧೭	EC. iii ಮಂಡ್ಯ ೧೨೧ ಬಸರಾಳು

೧೦.	ಉರದೊಳ್ ಸಪ್ತಾಂಗ ಲಕ್ಷ್ಮೀ ೧-೧೧	EC. iii ಮಂಡ್ಯ ೧೨೧ಬಸರಾಳು
೧೧.	ಆ ಚಕ್ರೇಶನ ಸೂನು ೧-೧೯	EC. iii ಮಂಡ್ಯ ೧೨೧ ಬಸರಾಳು EC. vi ನಾಗಮಂಗಲ ೯೮ ಭೀಮನಹಳ್ಳಿ (೧೨೩೦) EC. vi ಕಡೂರ ೧೨ ದೇವನೂರ
೧೨.	ಮುನ್ನಂ ರೂಢಿಯ ಕಂಧರನುಮಂ ೧-೨೦	EC. vi ನಾಗಮಂಗಲ ೯೮ ಭೀಮನಹಳ್ಳಿ (೧೨೩೦)
೧೩.	ಸಿರಿ ವಕ್ಷೋರಂಗದೊಳ್ ೫-೬	EC.iii ೭೭ ನಾಗಮಂಗಲ ೯೮ EC.iv ನಾಗಮಂಗಲ ೯೮ ಭೀಮನಹಳ್ಳಿ (೧೨೩೦)

ಹೀಗೆ ಶಾಸನ ಪ್ರಪಂಚದಿಂದ ಸಂಪಾದಕರು ಹುಡುಕಿದ ಬಳಿಕ ಮತ್ತೆ ಶಾಸನಗಳಲ್ಲಿ ಹುಡುಕುವ ಪ್ರಯತ್ನ ನಡೆಯಲಿಲ್ಲ. ಈ ದಿಶೆಯಲ್ಲಿ ಹೊಸ ಪ್ರಯತ್ನ ಮಾಡಬಹುದು.

ಮೇಲಿನ ಪದ್ಯಗಳಲ್ಲಿ "ಇದಿರಾದರಿ ಭೂಪಾಳರ" ..... ಎಂಬುದು ಲಾಲನಕೆರೆ, ಅರಸಿಕೆರೆ, ಬೆಳಗುಂಬ, ಹಿರಿಯೂರು-ಹೀಗೆ ಬೇರೆ ೪ ಶಾಸನಗಳಲ್ಲಿ ತೋರಿಬರುತ್ತದೆ. "ಸಿರಿ ವಕ್ಷೋರಂಗದೊಳ್........", "ಮುನ್ನಂ ರೂಢಿಯ ಕೃಷ್ಣ......" ಎಂಬ ೨ ಪದ್ಯಗಳು ಮಂಡ್ಯ ೧೨೨ನೆಯ ಬಸರಾಳು ಶಾಸನಗಳಲ್ಲಿವೆ. "ಆದಿವರಾಹಂ......", "ವಿನಯಾದಿತ್ಯನ ನಂದನಂ....." "ಪೆಸರ್ಗೊಂಡಾವಾವ......" "ಆ ವಿಜಯನಾರಸಿಂಹ.....", "ಉರದೊಳ್ ಸಪ್ತಾಂಗ ....." ಎಂಬ ೫ ಪದ್ಯಗಳು ನಾಗಮಂಗಲ ೯೮ರ ಭೀಮನಹಳ್ಳಿ ಶಾಸನದಲ್ಲಿಯೇ ಇವೆ. ಸಮುದ್ರವರ್ಣನೆಗೆ ಸಂಬಂಧಿಸಿದ "ಗಂಭೀರಸ್ವಾರ......." ಎಂಬ ಆದಿಗುರ್ಣವರ್ಮನ ಪದ್ಯ ಮಗಲ, ಬೆಣ್ಣೆಕಲ್ಲು, ಸೋಗಿ, ಶಿವರ- ಹೀಗೆ ನಾಲ್ಕು ಶಾಸನಗಳಲ್ಲಿ ಸಿಗುತ್ತದೆಯೆಂದು ಈ ಮೊದಲು "ಶಾಸನಗಳಲ್ಲಿ ಆದಿಗುಣವರ್ಮನ ಪದ್ಯ" ಎಂಬ ನನ್ನ ಲೇಖನದಲ್ಲಿ ಗುರುತಿಸಲಾಗಿದೆ.

ಈಚೆಗೆ ಹಾಸನ ಜಿಲ್ಲೆಯ ಶಾಂತಿಗ್ರಾಮದ ಶಾಸನದಲ್ಲಿ ನನ್ನ ಗಮನಕ್ಕೆ ಬಂದ ಸೂಕ್ತಿಸುಧಾರ್ಣವದ ಇನ್ನೆರಡು ಪದ್ಯಗಳು (5-23 ಮತ್ತು 18-12) ಹೀಗಿವೆ:

೧. ಸೂಕ್ತಿ : ಆ ಸಕಲಪ್ರಧಾನಜನಮುಂ ಪೆಸರೋಲಗಕಾರ್ತಿಯರ್ಕಳುಂ
ಕೂಸುಗಳುಂ ಮಹಾಕವಿಗಳೇವೆಸಗೇಳ್ವ ಸರಸ್ವತೀ ಗಣೇ
ಶಾಸಮೆ ಬೀಡಿನೊಳ್ ಮಗಟಿ ಮಜ್ಜನ ಭೋಜನ ತೃಷ್ಣೆ ರಾಜನಾ
ದೇಶ ವಿಳಾಸಮಂ ಪಡೆದು ನಿಂದುದು ದಕ್ಷಿಣಚಕ್ರವರ್ತಿಯಾ ||

ಶಾಸನ : [ಆ ಸಕಲಪ್ರಧಾನ ಜನಮುಂ] ಪೆಸರೋಗಲಕಾರ್ತಿಯರ್ಕ್ಕಳು
ಕೂಸುಗಳುಂ ಮಹಾಕವಿಗಳೇವೆಸಗೊಪ್ಪೆ ಸರಸ್ವತೀ ಸಮು
ಲ್ಲಾಸಮೆ ಬೀಡಿನೊಳ್ ಮಗುಳೆ ಮ xxxxxx
xಸೆ ವಿಳಾಸಮಂ ಪಡೆದು ನಿಂದುದು ದಕ್ಷಿಣಚಕ್ರವರ್ತಿಯೊಳೂ ||

೨. ಸೂಕ್ತಿ : ರಸೆಯಂ ತೆಕ್ಕನೆ ತೀವಿ ವಾಯುಪಥಮಂ ಪೊತ್ತೆತ್ತಿ ದಿಕ್ಸಂಧಿಯಂ
ವಸುಧಾಭಾಗಮನೊತ್ತಿ ಸೀಳ್ದು ಕಡಲಂ ಕೈಗಾದು ತಳ್ಪಂಕಗು
ಟ್ಟಿಸಿ ವಿದ್ವಿಣ್ನೃಪಕಾಂತೆಯರ್ಕಳೆರ್ದೆಗಳ್ ಝಲ್ಲೆಂಬಿನಂ ಪೊಣ್ಮಿ ದ
ಳ್ಪಿಸುಗುಂ ದಕ್ಷಿಣಚಕ್ರವರ್ತಿಯ ಜಯಪ್ರಸ್ಥಾನ ಭೇರೀರವಂ ||

ಶಾಸನ : ರಸೆಯಂ ತೆಳ್ಪನೆ ತಾಗಿ ವಾಯುಪಥಮಂ ಪೊತ್ತೆತ್ತಿ ದಿಕ್ಸಂಧಿಯಂ
ವಸುಧಾಭಾಗದಿನೊತ್ತಿ ಸೀಳ್ದು ಕಡಲಲಿ xxxxxx
ಟ್ಟಿಸಿ ವಿದ್ಯುಡ್ನೃಪಕಾಂತೆಯರ್ಕಳೆರ್ದೆಗಳು ಝಲೆಂ... ಪೊಣ್ಮಿದ
ಳ್ಪಿಸುಗುಂ ದಕ್ಷಿಣಚಕ್ರವರ್ತಿಯ ಉಠತ್ಕೋದಂಡಮ...ರವಂ||

ಈ ಪದ್ಯಗಳನ್ನು ಜೊತೆಯಿಟ್ಟು ನೋಡಿದಾಗ ಕೆಲವು ಸಂಗತಿಗಳು ಹೊಳೆಯುತ್ತವೆ.

೧. ಪ್ರಸ್ತುತ ಶಾಸನ ಹಾಸನ ಜಿಲ್ಲೆಯ ಹಾಸನ ತಾಲೂಕಿನ ಶಾನ್ತಿಗ್ರಾಮದ ನರಸಿಂಹ ದೇವಾಲಯದ ಸುಖನಾಸಿಯ ಎಡಭಾಗದ ಮೇಲೆ ಬರೆದುದು. ಹೀಗಾಗಿ ಇದು ಸೂಕ್ತಿಸುಧಾರ್ಣವ ಹುಟ್ಟಿದ ಪ್ರದೇಶದ ಶಾಸನ.

೨. ಮೊದಲ ಪದ್ಯಕ್ಕಿಂತ ಎರಡನೆಯ ಪದ್ಯಗಳಲ್ಲಿ ಪಾಠಾಂತರ ಹೆಚ್ಚು. ಅದನ್ನು ಶಾಸನಕವಿ ಅಥವಾ ಮಲ್ಲಿಕಾರ್ಜುನ ಮಾಡಿಕೊಂಡಿರಬಹುದು.

೩. ಈಗಿನ ಮಟ್ಟಿಗೆ ಇವು ಈ ಪದ್ಯಗಳ ಪ್ರಾಚೀನತಮ ಪಾಠ.

೪. ಈ ಪದ್ಯಗಳನ್ನು ಮಲ್ಲಿಕಾರ್ಜುನನು ಕಾವ್ಯಗಳಿಂದ ಎತ್ತಿಕೊಂಡಿರದೆ ಶಾಸನಗಳಿಂದ ಎತ್ತಿಕೊಂಡಿರುವ ಸಂಭವ ಹೆಚ್ಚು.

■■

ಆಕರ : ಮಾರ್ಗ ಸಂಪುಟ–೨

೧೧

ಅರ್ಜುನವಾಡ ಶಾಸನದ ತ್ರುಟಿತಪದ್ಯ

ನಾ. ಶ್ರೀ ರಾಜಪುರೋಹಿತರು ಕಂಡುಹಿಡಿದ, ಮಧುರಚೆನ್ನರು ಮತ್ತು ನಂದಿಮಠರು ಅಚ್ಚು ತೆಗೆದುಕೊಂಡು ಬಂದ, ಬಹುಶಃ ಮಧುರಚೆನ್ನರು ಶ್ರಮಪಟ್ಟು ಓದಿ ಪಾಠಸಿದ್ಧಮಾಡಿಕೊಟ್ಟ ಈ ಅರ್ಜುನವಾಡ ಶಾಸನ, ಹಳಕಟ್ಟಿಯವರ ಮೂಲಕ ೧೯೨೮ರಲ್ಲಿ (ಶಿವಾನುಭವ 3-9) ಪ್ರಥಮಸಲ ಬೆಳಕಿಗೆ ಬಂದಿತು. ಕನ್ನಡದ ಅಪೂರ್ವ ಶೋಧನೆಗಳಲ್ಲೊಂದಾದ ಈ ಶಾಸನದಿಂದಾಗಿ ಬಸವಣ್ಣನವರ ಚರಿತ್ರೆಯ ಮುಚ್ಚಿದ ಬಾಗಿಲೊಂದು ತೆರೆದಂತಾಗಿದೆ. ಅಲ್ಲಿಯ ಒಂದು ಮಹತ್ವದ ಪದ್ಯ ಹೀಗಿದೆ.

ಸಂಗನ ಬಸವನ ಅಗ್ರ X।
X X ಕಂ ದೇವರಾಜಮುನಿಪನ ತನಯಂ।
ಜಂಗಮಪರುಸಂ X X ರ।
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ।


(ಈ ಕಲಿದೇವರಸನ ಮಗ ಹಾಲಬಸವಿದೇವನಿಗೆ ಕ್ರಿ.ಶ. ೧೨೬೦ರಲ್ಲಿ ದತ್ತಿಕೊಟ್ಟುದು ಈ ಶಾಸನದ ವಿಷಯ). ಈ ಪದ್ಯದ ಮರ್ಮಸ್ಥಾನಗಳಲ್ಲಿ ತ್ರುಟಿತವಾಗಿರುವ ಅಕ್ಷರಗಳನ್ನು ತುಂಬಿಕೊಡಲು ಶ್ರೀ ಹಳಕಟ್ಟಿ (೧೯೨೮), ಎಸ್. ಶ್ರೀಕಂಠಶಾಸ್ತ್ರಿ (೧೯೩೦-೩೧), ಎನ್.ಲಕ್ಷ್ಮೀನಾರಾಯಣರಾಯರು (೧೯೩೦-೩೧), ಕಪಟ್ರಾಳ ಕೃಷ್ಣ (೧೯೪೭), ಟಿ. ಎನ್. ಮಲ್ಲಪ್ಪ (೧೯೪೭)- ಈ ಐವರು ಪ್ರಯತ್ನಿಸಿದ ಫಲವಾಗಿ ವಂಶಚಿತ್ರವೂ ಬೇರೆ ಬೇರೆ ಸ್ವರೂಪ ತಾಳಿದೆ. ಆದರೆ ಈಗಿನ ಮಟ್ಟಿಗೆ ಎಲ್ಲರೂ ಒಪ್ಪಿರುವ ಎನ್.ಲಕ್ಷ್ಮೀನಾರಾಯಣರಾಯರ ಪಾಠ ಹೀಗಿದೆ:

ಸಂಗನ ಬಸವನ ಅಗ್ರಜ
ಲಿಂಗೈಕಂ ದೇವರಾಜಮುನಿಪನ ತನಯಂ।
ಜಂಗಮ ಪರಸುಂ ಕಾವ*ರ
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ।।

ಈ ಪದ್ಯವನ್ನವಲಂಬಿಸಿ ಅವರು ಕೆಳಗಿನ ವಂಶಚಿತ್ರವನ್ನು ಕೊಟ್ಟಿದ್ದಾರೆ.

---

* ಸೋವ ಎಂದೂ ಓದಬಹುದು ಎಂದು ಪಿ.ಬಿ. ದೇಸಾಯಿ ಅವರು, ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ ಈ ಶಾಸನವನ್ನು ಪರೀಕ್ಷಿಸಿ ನನಗೆ ಮುಖತಃ ಹೇಳಿದ್ದಾರೆ.



ಆದರೆ (ಅ) ಈ ಪದ್ಯದಿಂದ ಮೇಲಣ ವಂಶಚಿತ್ರದ ವಿವರ ಹೊರಡುವುದಿಲ್ಲ.


(ಆ) ಒಂದು ಸಣ್ಣ ಗಾತ್ರದ ಕಂದಪದ್ಯದಿಂದ ಮೂರು ತಲೆಮಾರುಗಳನ್ನು ಅನವಶ್ಯ ಎಳೆದಂತಾಗಿದೆ.

(ಇ) 'ಕಾವರಸಂಗಂ ಪ್ರಿಯಸುತ'[೧] ಎಂಬಲ್ಲಿಯ ಸಮುಚ್ಚಯವನ್ನು ಗಮನಿಸಿಲ್ಲ.

ಈ ಆಕ್ಷೇಪಣೆಗಳಿಗೆ ಇಲ್ಲಿ ಅವಕಾಶವಿದೆ. ಹೀಗಾಗಿ ಈ ಪದ್ಯದ ಮಾತುಗಳೆಲ್ಲ ಕಲಿದೇವರಸನಿಗೆ ವಿಶೇಷಗಣಗಳಾಗಿವೆಯೆಂಬ ದೃಷ್ಟಿಯಿಂದ ಓದಿ, ಎರಡು ವಿಧಗಳಲ್ಲಿ ಹೀಗೆ ಅರ್ಥಹೇಳಬಹುದು.

೧. ಸಂಗನಬಸವನ ಅಗ್ರಜ (ಎನಿಪ್ಪ)
ಲಿಂಗೈಕಂ ದೇವರಾಜಮುನಿಪನ ತನಯಂ (ಎನಿಪ್ಪ)
ಜಂಗಮಪರುಸಂ ಕಾವರಸಂಗಂ ಪ್ರಿಯಸುತಂ ಎನಿಪ್ಪ ಕಲಿದೇವರಸಂ.

ಅಂದರೆ ಸಂಗನಬಸವನ ಅಣ್ಣನೂ ಲಿಂಗೈಕನಾದ ದೇವರಾಜಮುನಿಪನ ಮಗನೂ ಜಂಗಮಪರುಷನಾದ ಕಾವರಸನಿಗೂ (ಶಿಷ್ಯನೆಂಬ ಅರ್ಥದಲ್ಲಿ) ಪ್ರೀತಿಯ ಮಗನು, ಎನಿಸಿದ ಕಲಿದೇವರಸನು-ಎಂದು ಇದರ ಅರ್ಥ. ಇದರಿಂದ ಕೆಳಗಣ ವಂಶಚಿತ್ರ ಸಿದ್ಧವಾಗುತ್ತದೆ.



ಅಂದರೆ ದೇವರಾಜಮುನಿಪ ಮತ್ತು ಮಾದಿರಾಜರು ಅಣ್ಣತಮ್ಮಂದಿರು. ಈ ದೇವರಾಜನ ಮಗನಾದ ಕಲಿದೇವರಸ ಮತ್ತು ಮಾದಿರಾಜನ ಮಗನಾದ ಸಂಗನಬಸವರು ದೊಡ್ಡಪ್ಪ-ಚಿಕ್ಕಪ್ಪನ ಮಕ್ಕಳೆಂಬ ಅರ್ಥದಲ್ಲಿ ಅಣ್ಣತಮ್ಮಂದಿರು. ಅದಕ್ಕಾಗಿಯೇ ಬಸವಣ್ಣನವರ ನಿಜಸಹೋದರಿಯಾದ ನಾಗಮ್ಮನ ಹೆಸರನ್ನು ಹೇಳಿದ


---

೧. ತನ್ನ ತಂದೆಗೆ ತಾನು ಪ್ರೀತಿಯ ಮಗನು ಎಂದು ಹೇಳಿಕೊಳ್ಳುವುದು ಕೃತ್ರಿಮವೆನಿಸುತ್ತದೆ. ಅದಕ್ಕಾಗಿ ಇಲ್ಲಿ ಶಿಷ್ಯನೆಂಬ ಅರ್ಥವನ್ನೇ ಗ್ರಹಿಸಿಕೊಳ್ಳಬೇಕು.

ಕವಿಗಳು, ನಿಜಸಹೋದರನಲ್ಲದ ಕಲಿದೇವರಸನ ಹೆಸರನ್ನು ಎತ್ತಿರಲಿಕ್ಕಿಲ್ಲ. ಆದರೆ 'ಅಗ್ರಜ' ಎಂಬ ಪದಕ್ಕೆ ಪ್ರತ್ಯಯವಿಲ್ಲದುದರಿಂದ ಅದನ್ನು ಸ್ವತಂತ್ರವಿಶೇಷಣವೆಂದು ಭಾವಿಸಲು ಬರುವಂತಿಲ್ಲ. ಹೀಗಾಗಿ ಈ ಅನ್ವಯ ಕ್ರಮವನ್ನು ಬಿಟ್ಟು ಇನ್ನೊಂದು ರೀತಿಯ ಅನ್ವಯ ಹೊಂದಿಸಿಕೊಳ್ಳಬೇಕೆನಿಸುತ್ತದೆ.

೨. ಸಂಗನಬಸವನ ಅಗ್ರಜ ಲಿಂಗೈಕಂ ದೇವರಾಮುನಿಪನ ತನಯಂ (ಎನಿಪ್ಪ)
ಜಂಗಮಪರುಸಂ ಕಾವರಸಂಗಂ ಪ್ರಿಯಸುತಂ ಎನಿಪಪ್ಪ ಕಲಿದೇವರಸಂ

ಅಂದರೆ ಸಂಗನಬಸವನ ಅಣ್ಣನಾದ ಲಿಂಗೈಕಂ ದೇವರಾಜಮುನಿಪನ ಮಗನು, ಜಂಗಮಪರುಷನಾದ ಕಾವರಸನಿಗೂ (ಶಿಷ್ಯನೆಂಬ ಅರ್ಥದಲ್ಲಿ) ಪ್ರೀತಿಯ ಮಗನು ಎನಿಸಿದ ಕಲಿದೇವರಸನು - ಎಂದು ಇದರ ಅರ್ಥ. ಒಟ್ಟಿನಲ್ಲಿ ಕಲಿದೇವರಸನು ಒಬ್ಬನಿಗೆ ಉದರಸಂಜಾತ, ಇನ್ನೊಬ್ಬನಿಗೆ ಕರಸಂಜಾತ. ಇದರಿಂದ ಸಿದ್ಧವಾಗುವ ವಂಶಚಿತ್ರ ಹೀಗೆ:



ಬಸವಣ್ಣನವರಿಗೆ ದೇವರಾಜನೆಂಬ ನಿಜಸೋದರನಿದ್ದನೆಂದು ಈ ಚಿತ್ರದಿಂದ ತಿಳಿದು ಬರುತ್ತದೆ. ಕವಿಗಳು ಈ ಅಂಶವನ್ನು ಹೇಳಿರದಿದ್ದರೂ ಜನಪದ ಗೀತೆಯಲ್ಲಿ, "ಬಸವ ನಿನಗೊಬ್ಬಣ್ಣ ಬಸವಗೊಬ್ಬಳೆ ಅಕ್ಕ"[೨] ಎಂದು ಹೇಳಿದುದು ಗಮನಾರ್ಹ. ಒಟ್ಟಿನಲ್ಲಿ ನನಗೆ ಈ ಎರಡನೆಯ ಅರ್ಥವೇ ಸ್ವೀಕಾರಯೋಗ್ಯವೆನಿಸುತ್ತದೆ. ಬಸವಣ್ಣನವರ ಜೀವಿತದ ಅವಧಿಯ ವಿಷಯದಲ್ಲಿ.

೧. 1106-1168 ಆರ್.ಸಿ.ಸಿ. ಕಾರ್;ಈ. ಥರಸ್ಟನ್ ; ಚನ್ನಮಲ್ಲಿಕಾರ್ಜುನ; ಬಸವನಾಳ.
೨. 1131-1168 ಹಳಕಟ್ಟಿ ; ಎಂ.ಪಿ. ಪಾಟೀಲ ಮುಂತಾದವರು.
೩. 1131-1200 ಎಸ್. ಶ್ರೀಕಂಠಶಾಸ್ತ್ರೀ; ಎಲ್. ಬಸವರಾಜು

ಎಂಬ ಮೂರು ಪ್ರಮುಖ ಹೇಳಿಕೆಗಳಿವೆ. ಕಲಿದೇವನ ಮಗನಾದ ಹಾಲಬಸವಿದೇವನ ಕಾಲ ಕ್ರಿ.ಶ. ೧೨೬೦ ಎಂಬ ಈ ಶಾಸನ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು, ತಲೆಮಾರಿಗೆ ೩೦ ವರುಷ ಕಳೆಯುತ್ತ ಹಿಂದೆ ಹೋದರೆ, ಬಸವಣ್ಣನವರ ಐಕ್ಯ ಕ್ರಿ.ಶ. ೧೨೦೦ ಎನಿಸುತ್ತದೆ. ಈಗ ಶಾಸನ ಪದ್ಯಕ್ಕೆ ನಾವು ಮಾಡಿದ ಅರ್ಥ ವಿವರಣೆಯಿಂದ ಎಸ್. ಶ್ರೀಕಂಠಶಾಸ್ತ್ರೀ, ಎಲ್. ಬಸವರಾಜು ಮೊದಲಾದವರಿಗೆ ಬಸವಣ್ಣನವರ ಕಾಲ ವಿಷಯವಾಗಿ ಇನ್ನೊಂದು ಹೊಸ ಆಧಾರ ಲಭಿಸಿದಂತಾಗುತ್ತದೆ.

■■

೨. 'ಕನ್ನಡ ಜಾನಪದ ಗೀತಗಳು' ಡಾ. ಬಿ.ಎಸ್. ಗದ್ದಿಗಿಮಠ, ಪುಟ 231. ಈ ಪದ್ಯ ಕೃತಕವಾಗಿರಬಹುದು.

ಆಕರ : ಮಾರ್ಗ ಸಂಪುಟ–೨

೧೨

ಗಂಗಾಧರ ಶಾಸನ : ಒಂದು ತಿದ್ದುಪಡಿ

ಪಂಪನ ತಮ್ಮನಾದ ಜಿನವಲ್ಲಭನು ಬರೆಯಿಸಿದ ಶಿಲಾಶಾಸನವೊಂದು ಇತ್ತೀಚೆ ಲಭಿಸಿದುದು, ಕನ್ನಡ ಸಂಶೋಧನಕ್ಷೇತ್ರದಲ್ಲಿ ಒಂದು ಚಿರಸ್ಮರಣೀಯ ಘಟನೆ. ತೆಲುಗು ಪತ್ರಿಕೆ 'ಭಾರತಿ'ಯ (೧೯೬೭ ಮಾರ್ಚ) ಮೂಲಕ ವಿಶೇಷ ಲೇಖನದೊಂದಿಗೆ ಇದನ್ನು ಬೆಳಕಿಗೆ ತಂದವರು, ಆಂಧ್ರಪ್ರದೇಶದ ವಿದ್ವಾಂಸ ಡಾ. ಎನ್.ವೆಂಕಟರಮಣಯ್ಯನವರು. ಪಂಪನಿಗೆ ಸಂಬಂಧಿಸಿದ ಹಲವು ಅಪೂರ್ವ ಸಂಗತಿಗಳನ್ನೊಳಗೊಂಡ ಈ ಪ್ರಶಸ್ತಿ ಶಾಸನದ ಪ್ರಾರಂಭ ಪಾಠ ಹೀಗಿದೆ :[1]

"....ಸ್ವಸ್ತಿ ಸಮಸ್ತಸಕಳಕಳಾಳಾಪಪ್ರವೀಣಂ ಭವ್ಯರತ್ನಾಕರ[ಂ] ಗುಣಪಕ್ಷಪಾತಿ ಬೆಂಗಿನಾಡ ಸಪ್ತಗ್ರಾಮಗಳೊಳಗಣ ವಂಗಿಪಱ್ಱು ಕಮ್ಮೆ ಬ್ರಾಹ್ಮಣಂ ಜಮದಗ್ನಿ ಪಂಚಾರ್ಷೇಯಂ ಶ್ರೀವತ್ಸಗೋತ್ರಂ ಗುಣ್ಣಿಕಱ್ಱು ನಿಡುಂಗೊಣ್ಡೆಯಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸಸಿಂಘನ ಮರ್ಮ[ಂ]* ವಬ್ಬಣಬ್ಬೆಯ ಮಗಂ... ಜಿನವಲ್ಲಭಂ.

ಈ ಗದ್ಯಭಾಗವನ್ನು ಮತ್ತು ಶಾಸನೋಕ್ತ ಕೆಲವು ಒಳವಿಷಯಗಳನ್ನು ಅವಲಂಬಿಸಿ ಡಾ. ಎನ್. ವೆಂಕಟರಮಣಯ್ಯನವರು ತಮ್ಮ ಲೇಖನದಲ್ಲಿ ಪಂಪನ ವಂಶಚಿತ್ರವನ್ನು ಹೀಗೆ ಕೊಟ್ಟಿದ್ದಾರೆ.

ಅಭಿಮಾನಚಂದ್ರ
|
X ಜೋಯಿಸ ಸಿಂಘ
| |
ಭೀಮಪಯ್ಯ + ವಬ್ಬಣಬ್ಬೆ
|
ಪಂಪ ಜಿನವಲ್ಲಭ

ಶ್ರೀ ವೆಂಕಟರಮಣಯ್ಯನವರು ಕೊಟ್ಟ ಮೇಲಿನ ಗದ್ಯಭಾಗದಲ್ಲಿ ಕಂಡುಬರುವ ಪಾಠದೋಷವನ್ನು ತಿದ್ದಿ, ಈ ವಂಶಚಿತ್ರವನ್ನು ಸರಿಪಡಿಸಿಕೊಡುವುದು ಪ್ರಸ್ತುತ ಲೇಖನದ ಉದ್ದೇಶ.

***

೧. ಈ ಶಾಸನದ ಪೂರ್ಣ ಪಾಠಕ್ಕಾಗಿ Journal of the Karnataka University' (Humanities Vol. XI) ೧೯೬೭ದಲ್ಲಿಯ ಡಾ. ಆರ್.ಸಿ. ಹಿರೇಮಠ ಅವರ ಲೇಖನವನ್ನು ನೋಡಬಹುದು.


"...ಅಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸಸಿಂಘನ ಮರ್ಮ[ಂ]* ವಬ್ಬಣಬ್ಬೆಯ ಮಗಂ... ಜಿನವಲ್ಲಭಂ" ಎಂಬ ವಾಕ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದರ ಸಂಯೋಜನೆಯಲ್ಲಿ ಅವ್ಯವಸ್ಥೆ, ಅರ್ಥದಲ್ಲಿ ಅಸ್ಪಷ್ಟತೆ ಕಂಡುಬರುತ್ತಿದ್ದು, ಅದನ್ನು ಎರಡು ವಿಧದಲ್ಲಿ ಪರೀಕ್ಷಿಸಬಹುದು.

೧. : ಈ ಶಾಸನದ ಇನ್ನೆರಡು ಕಡೆಗಳಲ್ಲಿ ಜಿನವಲ್ಲಭನನ್ನು "ಭೀಮತನುಜಂ" ಎಂದು ಹೇಳಿರುವುದರಿಂದ, ಈ ವಂಶಚಿತ್ರದಲ್ಲಿ ತೋರಿಸಿದಂತೆ ಭೀಮಪಯ್ಯನ ಮಗನು ಜಿನವಲ್ಲಭ ಎಂಬುದು ಸುಸ್ಪಷ್ಟ. ಆದರೆ ಈ ವಾಕ್ಯದಿಂದ, ಭೀಮಪಯ್ಯನಿಗೆ ಸಂಬಂಧಿಸಿದ ಬೆಳ್ವೊಲದಣ್ಣಿಗೆರೆ (=ಭೀಮಪಯ್ಯನ ಬೆಳ್ವೊಲದಣ್ಣಿಗೆಱೆ) ಎಂಬ ಅರ್ಥ ಹೊರಡುತ್ತಿದೆಯೇ ಹೊರತು, ಭೀಮಪಯ್ಯನ ಮಗ ಜಿನವಲ್ಲಭ ಎಂಬ ಅರ್ಥ ಹೊರಡುವುದಿಲ್ಲ. ಅದಕ್ಕಾಗಿ 'ಭೀಮಪಯ್ಯನ' ಎಂಬುದರ ಮುಂದೆ 'ಮಗಂ' ಎಂಬುದನ್ನು ಹೊಸದಾಗಿ ಸೇರಿಸಬೇಕೆನಿಸುತ್ತದೆ. ಆಗ "...ಅಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ [ಮಗಂ]* ಬೆಳ್ವೊಲದಣ್ಣಿಗೆಱೆಯ ಜೋಯಿಸಸಿಂಘನ ಮರ್ಮ[ಂ]* ವಬ್ಬಣಬ್ಬೆಯ ಮಗಂ ...ಜಿನವಲ್ಲಭಂ" ಎಂಬ ಪಾಠ ಸಿದ್ಧವಾಗುತ್ತದೆ. ಇದರಿಂದ ಅಭಿಮಾನಚಂದ್ರನ ಮೊಮ್ಮಗನಾದ ಭೀಮಪಯ್ಯನ ಮಗನೂ, ಬೆಳ್ವೊಲದಣ್ಣಿಗೆಱೆಯ ಜೋಯಿಸ ಸಿಂಘನ ಮೊಮ್ಮಗನೂ, ವಬ್ಬಣಬ್ಬೆಯ ಮಗನೂ (ಆದ) ಜಿನವಲ್ಲಭ ಎಂಬ ಸ್ಪಷ್ಟ ಅರ್ಥ ಹೊರಡುತ್ತದೆ. ಆದರೆ ಇಲ್ಲಿಯ 'ಭೀಮಪಯ್ಯನ [ಮಗಂ]*' ಮತ್ತು 'ವಬ್ಬಣಬ್ಬೆಯ ಮಗಂ' ಎಂಬ ಎರಡು ಹೇಳಿಕೆಗಳ ಮಧ್ಯ 'ಜೋಯಿಸಸಿಂಘನ ಮರ್ಮ[ಂ]*' ಎಂಬುದು ಸೇರಿಕೊಂಡಿದೆ. ಇದರಿಂದ ಒಂದೇ ಕಡೆಗೆ ಬರಬೇಕಾದ ತಂದೆ ತಾಯಿಗಳ ಹೆಸರುಗಳಿಗೆ ಅಜ್ಜನ ಹೆಸರು ಅಡ್ಡಗಟ್ಟಿದಂತಾಗಿದೆ. ಹೀಗಾಗಿ ನಾವು ಊಹಿಸಿದ ಈ ಪಾಠದಲ್ಲಿ ಅರ್ಥಸಂಶಯ ಇನ್ನೂ ಉಳಿದುಕೊಳ್ಳುತ್ತದೆ. ಕಾರಣ, ಈ ತಿದ್ದುಪಡಿಯನ್ನು ಕೊಂಚ ಬದಿಗಿರಿಸಿ ಇನ್ನೊಂದು ತಿದ್ದುಪಡಿಯನ್ನು ಹೀಗೆ ಊಹಿಸಬಹದು.

೨. ಮೇಲಿನ ವಾಕ್ಯದ 'ಜೋಯಿಸ ಸಿಂಘನ ಮರ್ಮ[ಂ]*' ಎಂಬಲ್ಲಿಯ ಅನುಸ್ವಾರವು ಚೌಕಕಂಸಿನಲ್ಲಿದ್ದುದರಿಂದ ಅದು ಸಂಪಾದಕರು ಹೊಸದಾಗಿ ಸೇರಿಸಿದುದೆಂದು ತಿಳಿದುಬರುತ್ತದೆ. ಈಗ ಅನುಸ್ವಾರಕ್ಕೆ ಬದಲು ನಾವು 'ಳ್' ವರ್ಣವನ್ನು ಊಹಿಸಿಕೊಳ್ಳಬೇಕು. ಈಗ 'ಅಭಿಮಾನಚನ್ದ್ರ ಮರ್ಮಂ ಭೀಮಪಯ್ಯನ, ಬೆಳ್ವೊಲದಣ್ಣಿಗೆಱೆಯ ಜೋಯಿಸ ಸಿಂಘನ ಮರ್ಮ[ಳ್]* ವಬ್ಬಣಬ್ಬೆಯ ಮಗಂ... ಜಿನವಲ್ಲಭಂ' ಎಂಬ ಪಾಠ ಸಿದ್ಧವಾಗುತ್ತದೆ. ಇದರಿಂದ ನಮ್ಮ ಮೊದಲನೆಯ ತಿದ್ದುಪಡಿಯಿಂದ ತಲೆದೋರಿದ 'ಅಜ್ಜನ ಹೆಸರು ಅಡ್ಡ ಬರುತ್ತದೆ' ಎಂಬ ಸಂದೇಹ ನಿವಾರಣೆಯಾಗಿ, 'ಅಭಿಮಾನಚನ್ದ್ರನ ಮೊಮ್ಮಗನಾದ ಭೀಮಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸ ಸಿಂಘನ ಮೊಮ್ಮಗಳಾದ ವಬ್ಬಣಬ್ಬೆಯ ಮಗನಾದ .... ಜಿನವಲ್ಲಭ' ಎಂಬ ಸುಸ್ಪಷ್ಟ ಅರ್ಥ ಹೊರಡುತ್ತದೆ; ವಾಕ್ಯಯೋಜನೆ ಸರಿಗೊಳ್ಳುತ್ತದೆ. ಅದಕ್ಕಾಗಿ 'ಜೋಯಿಸ ಸಿಂಘನ ಮರ್ಮ[೧][ಳ್][೧] ವಬ್ಬಣಬ್ಬೆಯ ಮಗಂ' ಎಂಬ ಪಾಠವೇ ಗ್ರಾಹ್ಯವಾದುದೆಂದು ನಮ್ಮ ಅಭಿಪ್ರಾಯ.

೧-೧ ಚೌಕ ಕಂಸಿನಲ್ಲಿ ಸಂಪಾದಕರು ಸೇರಿಸಿದ ಅನುಸ್ವಾರಕ್ಕೆ ಬದಲು ನಾವು ಸೇರಿಸಿದ 'ಳ್' ವರ್ಣವನ್ನೂ ಬಿಟ್ಟುಕೊಟ್ಟು 'ಮರ್ಮಳಬ್ಬಣಬ್ಬೆ' ಎಂದು ಸ್ವಲ್ಪ ತಿದ್ದಿಕೊಂಡು ಓದಿದರೆ 'ಮೊಮ್ಮಗಳಾದ' ಎಂಬ ನಮ್ಮ ಅರ್ಥವೇ ಹೊರಡುತ್ತದೆ. ಆಗ ತಾಯಿಯ ಹೆಸರು ಮಾತ್ರ (ಮರ್ಮಳ್+ಅಬ್ಬಣಬ್ಬೆ=ಮರ್ಮಳಬ್ಬಣಬ್ಬೆ) ಅಬ್ಬಣಬ್ಬೆ ಎಂದಾಗುತ್ತದೆ. ಶಾಸನ ಲಿಪಿಸೂಕ್ಷ್ಮಜ್ಞರು ಇಲ್ಲಿಯ ಳ, ವ, ವರ್ಣಗಳಿಗಾಗಿ ಮೂಲ ಶಾಸನವನ್ನು ಪರೀಕ್ಷಿಸಬೇಕು. ಒಟ್ಟಿನಲ್ಲಿ ಪಂಪನ ತಾಯಿಯ ಹೆಸರು ಅಬ್ಬಣಬ್ಬೆಯೋ ವಬ್ಬಣಬ್ಬೆಯೋ ಆಗಿರಲಿ. ಆಕೆ ಮಾತ್ರ ಜೋಯಿಸಸಿಂಘನ ಮಗಳಲ್ಲ, ಮೊಮ್ಮಗಳು.

ಒಟ್ಟಿನಲ್ಲಿ ಜಿನವಲ್ಲಭನು ಇಲ್ಲಿ ತನ್ನ ತಂದೆಯ ತಂದೆಯ ಹೆಸರನ್ನು, ಅದರಂತೆ ತನ್ನ ತಾಯಿಯ ತಂದೆಯ ಹೆಸರನ್ನು ಹೇಳಿಲ್ಲ. ಕೇವಲ ತನ್ನ ತಂದೆಯ ಅಜ್ಜನ (ಅಭಿಮಾನಚಂದ್ರನ) ಹೆಸರನ್ನು, ಅದರಂತೆ ತನ್ನ ತಾಯಿಯ ಅಜ್ಜನ (ಜೋಯಿಸ ಸಿಂಘನ) ಹೆಸರನ್ನು ಹೇಳಿದ್ದಾನೆ. ಹೀಗಾಗಿ ಶ್ರೀ ವೆಂಕಟರಮಣಯ್ಯನವರು ಹೇಳುವಂತೆ ವಬ್ಬಣಬ್ಬೆಯು ಜೋಯಿಸಸಿಂಘನ ಮಗಳಲ್ಲ, ನಾವು ಹೇಳುವಂತೆ ಮೊಮ್ಮಗಳು. ಇಷ್ಟು ಹಿನ್ನೆಲೆಯಲ್ಲಿ ಜಿನವಲ್ಲಭನ ವಂಶಚಿತ್ರವನ್ನು ಹೊಸದಾಗಿ ಹೀಗೆ ರೇಖಿಸಬಹುದು :



■■

ಆಕರ : ಮಾರ್ಗ ಸಂಪುಟ-೨

೧೩

ಗಂಗಾಧರ ಶಾಸನ : ಒಂದು ಉತ್ತರ

ಪಂಪ ಮಹಾಕವಿಯ ತಾಯಿಯು ಜೋಯಿಸಸಿಂಘನ ಮಗಳೇ? ಮೊಮ್ಮಗಳೇ? ಎಂಬ ವಿಷಯದ ಬಗೆಗೆ ಡಾ. ಪಿ.ಬಿ.ದೇಸಾಯಿ ಅವರಿಗೂ ನನಗೂ ಲೇಖನ ಮರುಲೇಖನಗಳ ಚರ್ಚೆ ನಡೆದು, ಇಲ್ಲಿಗೆ ಒಂದು ವರ್ಷ ಗತಿಸಿತು. ಈ ಮಧ್ಯೆ ಡಾ. ಚಿದಾನಂದಮೂರ್ತಿಗಳು ನನ್ನ ಅಭಿಪ್ರಾಯವೇ ಸರಿಯೆಂದು ನಿಷ್ಪಕ್ಷಪಾತ ಹೇಳಿಕೆಯನ್ನು[೧] ವ್ಯಕ್ತಪಡಿಸುವಲ್ಲಿ ಈ ಚರ್ಚೆ ಒಂದು ಘಟ್ಟಕ್ಕೆ ಬಂದಿತ್ತು. ಈಗ ಮತ್ತೆ ಡಾ. ಪಿ.ಬಿ. ದೇಸಾಯಿ ಅವರು ಕನ್ನಡನುಡಿ[೨] ಯಲ್ಲಿ 'ಗಂಗಾಧರಂ ಶಾಸನ ಕೈಗೆ ಕನ್ನಡಿ' ಎಂಬ ಇನ್ನೊಂದು ಲೇಖನ (ಶಾಸನದ ಲಿಪಿಚಿತ್ರ ಸಹಿತ) ಬರೆದು ನನ್ನ ಅಭಿಪ್ರಾಯವನ್ನು ಟೀಕಿಸಿದ್ದಾರೆ. ಇದೇ ಸಮಯಕ್ಕೆ ಮೈಸೂರು ಶಾಸನ ಇಲಾಖೆಯ ವರಿಷ್ಠ ಅಧಿಕಾರಿಗಳೂ, ಸುಪ್ರಸಿದ್ಧ ಶಾಸನವಿದ್ವಾಂಸರೂ ಆದ ಶ್ರೀ ಜಿ.ಎಸ್.ಗಾಯಿ ಅವರು ಶಾಸನವಿದ್ದ ಸ್ಥಳಕ್ಕೆ ಹೋಗಿ, ಶಾಸನ ಶಿಲೆಯನ್ನು ಕಣ್ಣಾರೆ ಪರೀಕ್ಷಿಸಿ,[೩] ಅದರ ನಕಲನ್ನು ಅಭ್ಯಸಿಸಿ, ಪ್ರಬುದ್ಧ ಕರ್ನಾಟಕ[೪]ದಲ್ಲಿ ಪಂಪನ ತಮ್ಮ ಜಿನವಲ್ಲಭ ಶಾಸನ ಎಂಬ ಲೇಖನ ಬರೆಯುತ್ತ ನನ್ನ ಅಭಿಪ್ರಾಯವನ್ನು ನಿರ್ಣಯಾತ್ಮಕವಾಗಿ ಎತ್ತಿಹಿಡಿದಿದ್ದಾರೆ. ಶ್ರೀ ದೇಸಾಯಿ ಅವರಿಗೆ ಶ್ರೀ ಗಾಯಿ ಅವರ ಲೇಖನವೇ ಉತ್ತರರೂಪದಲ್ಲಿರುವಾಗ ಈ ಲೇಖನ ಅನವಶ್ಯ. ಆದರೂ ಶ್ರೀ ದೇಸಾಯಿ ಅವರ ಲೇಖನದ ನಾಲ್ಕು ಅಂಶಗಳನ್ನು ಇಲ್ಲಿ ಚರ್ಚಿಸುವುದು ಅನಿವಾರ್ಯವಾಗಿದೆ.

೧. ಶ್ರೀ ದೇಸಾಯಿ ಅವರು "ಜೋಯಿಸಸಿಂಘನ ಮರ್ಮವಬ್ಬಣಬ್ಬೆಯ ಮಗಂ" ಎಂಬ ಪಾಠವನ್ನು ಇಟ್ಟುಕೊಂಡು, ಅದನ್ನು "ಜೋಯಿಸಸಿಂಘನ ಮರ್ಮಂ+ಅಬ್ಬಣಬ್ಬೆಯ ಮಗಂ" ಎಂದು ಬಿಡಿಸಿದ್ದಾರೆ. ಹೀಗೆ ಬಿಡಿಸಿ ಕೂಡಿಸಿದಲ್ಲಿ "ಜೋಯಿಸಸಿಂಘನ ಮರ್ಮನಬ್ಬಣಬ್ಬೆಯ ಮಗಂ" ಎಂದಾಗುತ್ತದೆಯೇ ಹೊರತು, ಶ್ರೀ ದೇಸಾಯಿ ಅವರು ಹೇಳುವಂತೆ "ಜೋಯಿಸಸಿಂಘನ ಮರ್ಮವಬ್ಬಣಬ್ಬೆಯ ಮಗಂ" ಎಂದಾಗದು. ಒಂದು ವೇಳೆ ಅಬ್ಬಣಬ್ಬೆ ಜೋಯಿಸಸಿಂಘನ ಮಗಳು ಎಂದು ಅವರು ಸಾಧಿಸುವುದಾದರೆ ಅಲ್ಲಿ 'ನ'ಕಾರವಿರಬೇಕೇ ಹೊರತು ಈಗ ಭಾವಿಸಿರುವ ವ ಕಾರವಿಲ್ಲ. (ನಕಾರವಿಟ್ಟುಕೊಂಡರೂ ವಾಕ್ಯ ರಚನೆ ತಪ್ಪುತ್ತದೆ. ಆ ಮಾತು ಬೇರೆ.) ಹೀಗಾಗಿ ಶ್ರೀ ದೇಸಾಯಿ ಅವರು ಸಾಧಿಸುವ ಸಂಧಿವಿಗ್ರಹಗಳು ವ್ಯಾಕರಣಮಾನ್ಯವೆನಿಸವು.

---

೧. ಪ್ರಜಾವಾಣಿ, ೮-೧೨-೧೯೭೮.

೨. ಏಪ್ರಿಲ್ ಮೇ ೧೯೭೯.

೩. ಡಾ. ದೇಸಾಯಿ ಅವರೂ ಈ ಶಾಸನಶಿಲೆಯನ್ನೂ ಕಣ್ಮುಟ್ಟ ನೋಡಿಲ್ಲವೆಂಬುದನ್ನು ಇಲ್ಲಿ ನೆನೆಯಬೇಕು.

೪. ಪ್ರಬುದ್ಧ ಕರ್ನಾಟಕ, ೫೦-೪

೨. ಜನತೆಯ ಅಜ್ಞಾನ ಮತ್ತು ಪ್ರಕೃತಿ ಪ್ರಕೋಪಗಳಿಂದಾಗಿ ಶಾಸನಗಳ ಮೈತುಂಬ ಗೆರೆ ಕಚ್ಚುಗಳುಂಟಾಗುವುದು ಸ್ವಾಭಾವಿಕ. ಇದನ್ನು ನಕಲುಗೊಳಿಸಿದಾಗ, ನಕಲುಪ್ರತಿಯಲ್ಲಿ ಬಿಳಿ ಹಾಳೆ-ಕಪ್ಪು ಮಸಿಗಳಿಂದಾಗಿ ಇವು ಇನ್ನೂ ಒಡೆದು ಕಾಣಿಸುತ್ತವೆ. ಇಂಥ ನಕಲು ಪ್ರತಿಯ ಫೋಟೋ ತೆಗೆದಾಗ ಅಕ್ಷರಗಳ ಜೊತೆ ಕಚ್ಚು-ಗೆರೆಗಳು ಮೂಡುವುದು ಸಹಜ. ಆದರೆ ಡಾ. ದೇಸಾಯಿ ಅವರು ಇಲ್ಲಿ ನುಣುಪಾದ ಕರಿಯ ಹಲಗೆಯ ಮೇಲೆ ಲಕ್ಷಣವಾಗಿ ಅಕ್ಷರ ತೀಡಿದಂತಹ ಫೋಟೋ ಪ್ರಕಟಿಸಿರುವರೇ ಹೊರತು ಕಚ್ಚು-ಗೆರೆಗಳಿಂದ ಕೂಡಿದ ಸ್ವಾಭಾವಿಕ ಚಿತ್ರ ಕೊಟ್ಟಿಲ್ಲ. ಇದು ತಮಗೆ ಬೇಡವಾದ ಗೆರೆಗಳನ್ನು ಮರೆಮಾಡಿ, ಬೇಕಾದ ಗೆರೆಗಳನ್ನು ಇಟ್ಟುಕೊಂಡು ರೂಪಿಸಿದ ಅನುಕೂಲಕರ ಚಿತ್ರವಾಗಿದೆ; ತಮ್ಮ ಅಭಿಪ್ರಾಯಕ್ಕೆ ಅನುಕೂಲಿಸಿಕೊಳ್ಳುವ ಒಂದು ತಂತ್ರವಾಗಿದೆ. ಹೀಗಾಗಿ ಈ ಚಿತ್ರ ಪ್ರಾಮಾಣಿಕವಾಗಿಲ್ಲವೆನ್ನಬೇಕಾಗುತ್ತದೆ.

೩. ಶಾಸನದಲ್ಲಿಯ ಭೀಮಪಯ್ಯ, ಜೋಯಿಸಸಿಂಘ, ಅಬ್ಬಣಬ್ಬೆ ಮತ್ತು ಜಿನವಲ್ಲಭ ಇವರ ಸಂಬಂಧವನ್ನು "ರಾಮನ, ಜನಕನ ಮೊಮ್ಮಗ, ಸೀತೆಯ ಪುಗ ಲವ" ಎಂಬ ಉದಾಹರಣೆಯಿಂದ ತಿಳಿಸಿ ಹೇಳಿದುದು ವ್ಯರ್ಥ ಪ್ರಯತ್ನವಾಗಿದೆ. ಕನ್ನಡ ವಾಕ್ಯರಚನಾ ವಿಧಾನಕ್ಕೆ ತೀರ ವ್ಯತಿರಿಕ್ತವಾಗಿದೆ. ಹೀಗಿದ್ದರೂ "ಇಂಥ ಪ್ರಯೋಗವು ಅಂದಿನ ನಿರೂಪಣಾಶೈಲಿಗೆ ಸ್ವಾಭಾವಿಕವಾದುದು" ಎಂದು ಹೇಳಿದ ಮಾತು, ಹಳಗನ್ನಡ ವ್ಯಾಕರಣದೆದುರು ಅಮಾನ್ಯವೆನಿಸುತ್ತದೆ.

೪. 'ಅಬ್ಬಣಬ್ಬೆ ಜೋಯಿಸಿಂಘನ ಮಗಳು' ಎಂಬ ತಮ್ಮ ವಾದವನ್ನು ಬಲಪಡಿಸಿಕೊಳ್ಳಲು ಡಾ. ವೆಂಕಟರಮಣಯ್ಯ, "ಡಾ. ಹಿರೇಮಠ, ಪ್ರೊ. ಕುಲಕರ್ಣಿ ಅವರು ಇದೇ ಅಭಿಪ್ರಾಯವನ್ನು ಗ್ರಹಿಸಿದ್ದಾರೆ" ಎಂದು ಡಾ. ದೇಸಾಯಿ ಅವರು ಹೇಳಿತ್ತಾರೆ. ಈ ಶಾಸನ ದೊರೆತ ಹೊಸದರಲ್ಲಿ, ಮಗಳು-ಮೊಮ್ಮಗಳು ಎಂಬುದು ಸಮಸ್ಯೆಯಾಗಿರದ ಸಮಯದಲ್ಲಿ ಹೇಳಿದ ಅವರ ಮಾತುಗಳನ್ನು ಬೆಂಬಲವಾಗಿಟ್ಟುಕೊಂಡಿದ್ದಾರೆ. ಆದರೆ ಈಗ ಅದೇ ಡಾ. ವೆಂಕಟರಮಣಯ್ಯ, ಡಾ. ಆರ್.ಸಿ.ಹಿರೇಮಠ, ಪ್ರೊ. ವ್ಹಿ.ಜಿ. ಕುಲಕರ್ಣಿ ಅವರನ್ನು ಕೇಳಿದರೆ "ಅಬ್ಬಣಬ್ಬೆ ಮಗಳಲ್ಲ ಮೊಮ್ಮಗಳು" ಎಂದು ಅವರು ಸತ್ಯವನ್ನು ಮುಕ್ತಮನಸ್ಸಿನಿಂದ ಒಪ್ಪಬಹುದೇನೋ? ಈ ಎಲ್ಲ ಕಾರಣಗಳಿಂದ ಡಾ. ದೇಸಾಯಿ ಅವರ ವಾದ, ನಿರಾಧಾರವೆಂದು ಇನ್ನೊಮ್ಮೆ ಹೇಳಬಯಸುತ್ತೇನೆ.

■■

ಆಕರ : ಮಾರ್ಗ ಸಂಪುಟ-೨

೧೪

ಗಂಗಾಧರಂ ಶಾಸನ : ಕೆಲವು ಹೊಸ ವಿಚಾರಗಳು

ಮಹಾಕವಿ ಪಂಪನ ತಮ್ಮ ಜಿನವಲ್ಲಭನು ಬರೆಯಿಸಿದ ಗಂಗಾಧರಂ ಶಾಸನವನ್ನು ಕುರಿತು, ಈ ವರೆಗೆ ವಿದ್ವಾಂಸರಿಂದ ಬರೆಯಲಾದ ೧೦-೧೨ ಲೇಖನಗಳ ಮೂಲಕ ಹೊಸ ಹೊಸ ವಿಚಾರಗಳು ಹೊರಬಂದಿವೆ. ಈಗ ಇನ್ನೂ ಐದು ಅಂಶಗಳನ್ನು ವಿವೇಚಿಸುವುದು ಈ ಲೇಖನದ ಉದ್ದೇಶ.

೧. ಭೀಮಪಯ್ಯ- ಅಭಿರಾಮದೇವರಾಯ :

ಪಂಪನ ತಂದೆಯ ಹೆಸರು ಗಂಗಾಧರಂ ಶಾಸನದಿಂದ ಭೀಮ ಅಥವಾ ಭೀಮಪಯ್ಯನೆಂದೂ ಮುದ್ರಿತ ಪಂಪಭಾರತದಿಂದ ಅಭಿರಾಮದೇವರಾಯನೆಂದೂ ತಿಳಿದುಬರುತ್ತದೆ. ಪಂಪಭಾರತದ ಅಡಿಯಲ್ಲಿ ಭೀಮನಾಮಧೇಯಂ[೧] ಎಂದು ಭಿನ್ನಪಾಠವಿದ್ದು, ಈ ಹೆಸರಿನ ಬಗೆಗೆ ಉದ್ಭವಿಸಬಹುದಿದ್ದ ದೊಡ್ಡ ಸಮಸ್ಯೆಯನ್ನು ಅದು ತಪ್ಪಿಸಿದೆ. ಆದರೆ ಹೀಗೆ ಎರಡು ಹೆಸರುಗಳು ಕಂಡುಬರುವುದಕ್ಕೆ ಕಾರಣವೇನು? ಎಂಬ ಅನುಮಾನ ಹುಟ್ಟುವುದು ಸಹಜ. ಶ್ರೀ ವೆಂಕಟರಮಣಯ್ಯನವರು "ಪಂಪನ ತಂದೆಯ ಹೆಸರು ಅಭಿರಾಮದೇವರಾಯನೆಂಬುದು ಅಲ್ಲ; (ಅದು) ಅಪಪಾಠವನ್ನು ಸ್ವೀಕರಿಸಿದುದರಿಂದುಂಟಾದುದು .... ಭೀಮನೆಂಬುದೇ ಪಂಪನ ತಂದೆಯ ನಿಜವಾದ ಹೆಸರು" ಎಂದು ಹೇಳುತ್ತಾರೆ.[೨] ಇದನ್ನು ಒಪ್ಪದೆ ಡಾ. ದೇಸಾಯಿ ಅವರು "ಇಬ್ಬಗೆಯ ಜೋಡು ಹೆಸರುಗಳ ರೂಢಿ ಅಪರೂಪವೇನಲ್ಲ. ಅವು ಎಲ್ಲಿಯೂ ದೊರೆಯುತ್ತವೆ. ದೇವರಾಯ ಅಥವಾ ಅಭಿರಾಮದೇವರಾಯ ಎಂಬುದು ಪ್ರತಿಷ್ಠೆಯ ನಾಮಧೇಯವಾಗಿರಬೇಕು"[೩] ಎಂದು ಹೇಳುತ್ತಾರೆ.

ಇಲ್ಲಿ ಒಬ್ಬರು 'ಅಪಪಾಠವನ್ನು ಸ್ವೀಕರಿಸಿದುದರಿಂದುಂಟಾದುದು' ಎಂಬ, ಇನ್ನೊಬ್ಬರು 'ಇಬ್ಬಗೆಯ ಜೋಡು ಹೆಸರುಗಳ ರೂಢಿ ಅಪರೂಪವೇನಲ್ಲ' ಎಂಬ ಬಾಯಿಮಾತಿನ ಆಧಾರ ನೀಡಿರುವರೇ ಹೊರತು ನಂಬುಗೆ ಹುಟ್ಟಿಸುವ ಆಧಾರ ನೀಡಿಲ್ಲ. ಆದುದರಿಂದ ಇನ್ನೂ ಉಳಿದುಕೊಳ್ಳುವ ಸಂಶಯಕ್ಕೆ ಹೀಗೆ ಸಮಾಧಾನ ಹೇಳಬಹುದು:

ಪ್ರಾಚೀನಕಾಲದ ಹಸ್ತಪ್ರತಿಗಳಲ್ಲಿ ಸಾಮಾನ್ಯವಾಗಿ ಮಹಾಪ್ರಾಣಸಂಕೇತ, ದೀರ್ಘಸಂಕೇತಗಳನ್ನು ಬಳಸುವುದಿಲ್ಲವಾದುದರಿಂದ ಪಂಪನ ಕೈಯಿಂದ ಇಳಿದುಬಂದಿರುವ 'ಭೀಮನಾಮಧೇಯಂ' ಎಂಬ ಶುದ್ಧಪಾಠವನ್ನು 'ಬಿಮನಾಮದೆಯಂ' ಎಂದು ಲಿಪಿಕಾರರು ಬರೆದಿರುವುದು ಸಹಜ. ಅಕ್ಷರದ ರೂಪಸಾದೃಶ್ಯ, ಲಿಪಿಕಾರರ ಅಜ್ಞಾನ,

---

೧. ಪಂಪಭಾರತ, ಪು. ೪೧೪. ಅಡಿಟಿಪ್ಪಣಿ.

೨. ಪ್ರಬುದ್ಧ ಕರ್ನಾಟಕ, ೫೦-೩, ಪು. ೨೭.

೩. ಕನ್ನಡನುಡಿ ೧೯೬೮ ಏಪ್ರಿಲ್ ಮೇ, ಪು. ೨೦.

ಅನ್ಯಥಾಜ್ಞಾನಗಳಿಂದಾಗಿ ಈ ಬಿಮನಾಮದೆಯಂ ಎಂಬುದು ಬಿಮರಾಮದೆಯಂ> ಬಿಮರಾಮದೇವಂ>ಬಿರಾಮದೇವಂ>(ಅ+)ಬಿರಾಮದೇವರಾಯಂ ಎಂಬ ಕ್ರಮದಲ್ಲಿಯೋ ಇನ್ನೊಂದು ಕ್ರಮದಲ್ಲಿಯೋ ಕುಲಗೆಡುತ್ತ ಬಂದು, ರೈಸ್ ಸಂಪಾದಿತ ಪಂಪ ಭಾರತದಲ್ಲಿ 'ತಮೋನೀಕಪರನಭಿರಾಮದೇವರಾಯಂ ತನಯಂ' ಎಂಬ ಅಶುದ್ಧ ರೂಪತಾಳಿದಂತಿದೆ. ಆದುದರಿಂದ 'ತಮೋನೀಕಪರಂ ಭೀಮನಾಮಧೇಯಂ ತನಯಂ' ಎಂಬುದೇ ಮೂಲಪಾಠವಾಗಿಬೇಕು. ಹೀಗಾಗಿ ಶ್ರೀ ದೇಸಾಯಿ ಅವರು ಹೇಳುವಂತೆ 'ಅಭಿರಾಮದೇವರಾಯ' ಎಂಬುದು ಭೀಮಪಯ್ಯನ ಇನ್ನೊಂದು ಹೆಸರಲ್ಲ. ಹೊಣೆಗೇಡಿ ಲಿಪಿಕಾರರಿಂದ ಕುಲಗೆಡುತ್ತ ಬಂದ ಒಂದು ಪರಮಾವಧಿ ಪಾಠದೋಷವೆಂದು ನನ್ನ ಭಾವನೆ.

2. ಮರ್ಮಳ್ ಅಬ್ಬಣಬ್ಬೆ :

ಈ ಶಾಸನದ 'ಜೋಯಿಸಸಿಂಘನ ಮರ್ಮಳಬ್ಬಣಬ್ಬೆ' ಎಂಬ ವಾಕ್ಯದಿಂದ ಸಾಮಾನ್ಯವಾಗಿ ಜೋಯಿಸಸಿಂಘನ ಮೊಮ್ಮಗಳಾದ ಅಬ್ಬಣಬ್ಬೆ ಎಂದು ಅರ್ಥ ಹೊರಡುತ್ತದೆ. ಆದರೆ ಶ್ರೀ.ಪಾ.ವೆಂ. ಆಚಾರ್ಯ ಅವರು ತುಳು ಭಾಷೆಯಲ್ಲಿ 'ಮರ್ಮಳ್' ಪದಕ್ಕೆ ಸೊಸೆ ಅರ್ಥವಿರುವುದರಿಂದ ಈ ಅಬ್ಬಣಬ್ಬೆ ಜೋಯಿಸಸಿಂಘನ ಮೊಮ್ಮಗಳಲ್ಲ ಸೊಸೆ (ಸೋದರಸೊಸೆ)ಯಾಗಿರಬಹುದೆಂಬ ಒಂದು ಅಪರೂಪ ಹೇಳಿಕೆಯನ್ನು ಮಂಡಿಸಿರುವರು. ಈ ಶಾಸನದ ಬೇರೊಂದೆಡೆಯಲ್ಲಿ 'ಮರ್ಮ' ಎಂಬ ಪದ ಬಳಕೆಯಾಗಿದೆ. ಇದನ್ನು ಕುರಿತು ಬರೆಯುತ್ತ "ಮೊಮ್ಮಗ ಎಂಬರ್ಥದಲ್ಲಿ 'ಮರ್ಮ' ಪದವನ್ನು ಕಾಣುವುದು ಇದೇ ಮೊದಲು. ಪಂಪ ಕೂಡ 'ಮೊಮ್ಮ'ನೆನ್ನುತ್ತಾನೆ ಹೊರತು ಮರ್ಮನೆಂದಲ್ಲ. ಕಿಟೆಲ್ ಕೋಶದಲ್ಲಿಯೂ ಮರ್ಮಕ್ಕೆ ಈ ಅರ್ಥ ಕಾಣುವುದಿಲ್ಲ"[೪] ಎಂಬ ಆಧಾರವನ್ನು ಅವರು ಹಿಡಿಯುತ್ತಾರೆ. ಆದರೆ ಮರ್ಮ ಎಂಬುದು ಪ್ರಾಚೀನ ಪ್ರಯೋಗವೆಂಬುದಕ್ಕೆ

ಜಕ್ಕಿಮಯ್ಯನ ಮರ್ಮ್ಮಂ ಮಹಾದೇವಯ್ಯನ ಬರೆಪಂ "[೫]
ಆತನ ಮರ್ಮಂ ಭುವನಖ್ಯಾತ ಯಶಂ ಕಲಿದೇವಂ"[೬]

ಎಂಬ ಎರಡು ಉದಾಹರಣೆಗಳನ್ನು ಅವರ ಗಮನಕ್ಕೆ ತರುತ್ತೇನೆ. ಎರಡನೆಯದಾಗಿ ಜಿನವಲ್ಲಭನು ಒಂದು ಕಡೆ ತನ್ನ ತಂದೆಯ ಅಜ್ಜನ ಹೆಸರನ್ನು ಹೇಳಿರುವಂತೆ, ಇನ್ನೊಂದು ಕಡೆ ತನ್ನ ತಾಯಿಯ ಅಜ್ಜನ ಹೆಸರನ್ನು ಹೇಳಿರಬಹುದೆಂದು ಇಟ್ಟುಕೊಂಡರೆ ಈಕೆ ಸೊಸೆಯಲ್ಲ; ಮೊಮ್ಮಗಳು ಎಂದು ಇನ್ನೂ ಖಚಿತವಾಗುತ್ತದೆ.

೩. ಪಂಪ - ಪಂಪನ :

ಗಂಗಾಧರಂ ಶಾಸನದ 'ಸನ್ದ ಪಂಪನ ತಮ್ಮಂ', 'ಪಂಪಂಗೆ ಕೊಟ್ಟಾ ದ್ವಿಜಾವಸಥಗ್ರಾಮಂ', 'ಪಂಪಾರ್ಯನುಜಂ' ಎಂಬಿವುಗಳ ಜೊತೆ 'ಪಂಪನನಾ ಬಿರುದು' ಎಂಬ ವಿಶಿಷ್ಟ ಪ್ರಯೋಗವೊಂದು ಕಂಡುಬರುತ್ತದೆ. ಇಲ್ಲಿಯ 'ಪಂಪನ' ಎಂಬುದಕ್ಕೆ ಅಡಿಯಲ್ಲಿ 'ಪಂಪಣ' ಎಂಬ ಸಂವಾದಿನ್ನು ಸೂಚಿಸಿದ್ದಾರೆ. ಆದರೆ ಶಿಲೆಯ ಮೇಲೆ ಯಾವ ಪಾಠವಿರಬಹುದು ಎಂಬ ಸಂದೇಹ ಹುಟ್ಟಿ ಪ್ರೊ. ಡಿ.ಕೆ. ಭೀಮಸೇನರಾಯರಿಗೆ ಪತ್ರ ಬರೆದೆನು. ಅವರು ಶಾಸನದ ನಕಲುಪ್ರತಿ (Impression)ಯನ್ನು ಕಣ್ಮುಟ್ಟ ನೋಡಿ, ಅಲ್ಲಿದ್ದುದು

---

೪. ಕನ್ನಡನುಡಿ, ೧೯೬೪, ಸಪ್ಟಂಬರ್

೫. B.K.I. Vol 1, Part 1, p. ೭೯

೬. E.C. XI, ದಾವಣಗೆರೆ ೪೪ (ಕ್ರಿ.ಶ. ೧೧೪೦)

'ಪಂಪಣನಾ ಬಿರುದು' ಅಲ್ಲ ಪಂಪನನಾ ಬಿರುದು ಎಂದು ತಿಳಿಸಿದರು. ಈಗ ಇದರಲ್ಲಿಯ ಷಷ್ಠೀದೀರ್ಘವನ್ನು ತೆಗೆದುಹಾಕಿದರೆ 'ಪಂಪನ' ಎಂಬ ಅಂಕಿತನಾಮ ಉಳಿಯುತ್ತದೆ. ಇದರೊಂದಿಗೆ 'ತಿಕ್ಕನ', 'ಕೇತನ', 'ಮಾರನ', 'ಪೆದ್ದನ' - ಎಂಬ ತೆಲಗು ಕವಿಗಳ ಹೆಸರುಗಳನ್ನು ಹೋಲಿಸಿದರೆ ಪಂಪಕವಿಯನ್ನು ಇಲ್ಲಿ ಪಂಪನ ಎಂದು ತೆಲುಗು ರೀತಿಯಲ್ಲಿ ಕರೆದಿರುವರೆಂದು ವ್ಯಕ್ತವಾಗುತ್ತದೆ.

ಅಣ್ಣ>ಅಣ>ಅನ ರೀತಿಯಲ್ಲಿ ರೂಪಗೊಂಡ ಈ 'ಪಂಪನ' ಎಂಬುದಕ್ಕೆ ಪಂಪಣ ಅಥವಾ ಪಂಪಣ್ಣ ಎಂದೇ ಅರ್ಥ. ಆದರೆ ಇಲ್ಲಿ ಬಳಸಲಾದ ತೆಲುಗಿನ ರೀತಿ ಗಮನಾರ್ಹವಾದುದು. ಈ ಶಾಸನಕ್ಕೆ ಸಾಹಿತ್ಯವನ್ನು ಪೂರೈಸಿದವನು ಜಿನವಲ್ಲಭನೆಂದು ಪಂಡಿತರ ಊಹೆ. ಇದು ನಿಜವಿದ್ದರೆ ಕನ್ನಡ ಪದ್ಯದಲ್ಲಿ, ಅದೂ ಪಂಪನ ತಮ್ಮನ ಬಾಯಿಯಿಂದ ನುಗ್ಗಿಬಂದ ಈ ತೆಲುಗು ಬಂಧುವಾಚಕ ಪದ ಇನ್ನೂ ಗಮನಾರ್ಹವೆನಿಸುತ್ತದೆ.[೭] ಅದೇನೇ ಇದ್ದರೂ ಪಂಪನನ್ನು ಅರಿಕೇಸರಿಯ ಆಶ್ರಯದಲ್ಲಿರುವಾಗ 'ಪಂಪನ' ಎಂದೂ ತೆಲುಗು ರೀತಿಯಲ್ಲಿ ಕರೆಯುತ್ತಿದ್ದರೆಂದು ಹೇಳಬೇಕಾಗುತ್ತದೆ.

೪. ಧರ್ಮಪುರದ ದಾನಶಾಸನ :

ವೃಷಭಾದ್ರಿಯ ಸಿದ್ಧಶಿಲೆಯ ಮೇಲೆ ಕೆತ್ತಲಾದ ಜಿನವಲ್ಲಭನ ಶಾಸನದಲ್ಲಿ -

ಬರೆದುದೆ ತಾಂಬ್ರಶಾಸನಮದೇಯಮೆ ಧರ್ಮಪುರಂ ನೆಗಟ್ತೆವೆ ।
ತ್ತರಿಗನ ಕೊಟ್ಟುದೇ ನೆಗಟ್ದಿ ಪಂಪನ ಪೆತ್ತುದೆ ಪೇಟಿಮೆಂದು ನೀ ।
ಮ್ಮರುಳೆ ಪಲಮ್ಮೆಯುಂ ಪಲಬರಂ ಬೆಸಗೊಳ್ಳದೆ ಪೋಗಿ ನೋಡು ಸುಂ ।
ದರ ವೃಷಭಾಚಳೋನ್ನತ ಶಿಳಾತಳದೊಳ್ಬರೆದಕ್ಕರಂಗಳಂ ॥

ಎಂಬ ಪದ್ಯವಿದೆ. ಇದರಿಂದ "ತಾಮ್ರಶಾಸನವನ್ನು ಬರೆಯಲಾಯಿತೇ? ಅರಿಕೇಸರಿ ಧರ್ಮಪುರವನ್ನು ಕೊಟ್ಟನೇ? ಪಂಪನು ಅದನ್ನು ಗ್ರಹಿಸಿದನೇ? ಎಂದು ಮುಂತಾಗಿ ಉನ್ಮಾದದಿಂದ ಹಲವು ಪ್ರಶ್ನೆ ಕೇಳುವವರು ಹೋಗಿ ನೋಡಿರಿ, ಸುಂದರ ವೃಷಭಾಚಳೋನ್ನತ ಶಿಳಾತಳದೊಳ್ಬರೆದಕ್ಕರಂಗಳಂ" ಎಂಬ ಅರ್ಥ ಹೊರಡುವದನ್ನು ಗಮನಿಸಿದರೆ, ಧರ್ಮಪುರದ ಶಾಸನವು ಶಿಲಾಶಾಸನವೆಂದೂ ಅದನ್ನು ವೃಷಭಪರ್ವತದಲ್ಲಿ ಕೆತ್ತಲಾಗಿದೆಯೆಂದೂ ತಿಳಿದುಬರುತ್ತದೆ. 'ವೃಷಭಾದ್ರಿ' ಯಾವುದೆಂದು ತಿಳಿದುಬಂದಾಗ[೮] ಅಲ್ಲಿ ಈ ಶಾಸನವು ತಪ್ಪದೆ ಕಾಣದೊರೆಯಬಹುದು" ಎಂದು ಡಾ. ವೆಂಕಟರಮಣಯ್ಯನವರು ಹೇಳುತ್ತಾರೆ.[೯]

ಡಾ. ಪಿ.ಬಿ. ದೇಸಾಯಿ ಅವರು "ಅರಿಕೇಸರಿ ಧರ್ಮಪುರವನ್ನು ದಾನಮಾಡಿದನು. ಈ ವಿಷಯವನ್ನು ನಿವೇದಿಸುವ ತಾಮ್ರಶಾಸನವನ್ನು ಪಂಪನಿಗೆ ದಯಪಾಲಿಸಿದನು. ಆದರೆ ತಾಮ್ರಶಾಸನವು ..... ಸಾರ್ವಜನಿಕ

---

೭. ಈ ಶಾಸನದ ಕನ್ನಡ ಪದ್ಯಗಳಲ್ಲಿ ಲಿಪಿದೋಷ ತೀರ ಕಡಿಮೆ, ತೆಲಗು ಪದ್ಯಗಳಲ್ಲಿ ಲಿಪಿದೋಷ ತೀರ ಹೆಚ್ಚು ಇರುವುದರಿಂದ, ಈ ಲಿಪಿಕಾರನು ತೆಲುಗಿಗಿಂತ ಕನ್ನಡದಲ್ಲಿ ಹೆಚ್ಚು ಪಳಗಿದವನೆಂದು ಸ್ಪಷ್ಟವಾಗುತ್ತದೆ. ಅದಕ್ಕಾಗಿ ಪಂಪನ ಎಂಬ ತೆಲಗು ರೂಪಕ್ಕೆ ಲಿಪಿಕಾರನು ಹೊಣೆಗಾರನಲ್ಲವೆನಿಸುತ್ತದೆ.

೮. ಈ ಶಾಸನ ನಿಂತ ನೆಲೆಯೇ ಸಿದ್ಧಶಿಲೆ ಎಂದು ಹೇಳುವ ಡಾ. ವೆಂಕಟಮಣಯ್ಯನವರು ವೃಷಭಾದ್ರಿಯೆಲ್ಲಿದೆ ? ಎಂದು ಕೇಳುತ್ತಾರೆ. ಡಾ. ದೇಸಾಯಿ ಅವರು ಹೇಳುವಂತೆ ವೃಷಭಾದ್ರಿಯ ಒಂದು ಭಾಗವೇ ಸಿದ್ಧಶಿಲೆ.

೯. ಪ್ರಬುದ್ಧ ಕರ್ನಾಟಕ ೫೦-೩.

ವಸ್ತು ಪ್ರದರ್ಶನವಲ್ಲ.... ಅದಕ್ಕಾಗಿ ವೃಷಭಗಿರಿಯಂಥ ಯಾತ್ರಾಸ್ಥಳದಲ್ಲಿ ..... ಈ ವಿಷಯವನ್ನು ಸಾರಿಹೇಳುವಂಥ ಭವ್ಯಶಿಲಾಶಾಸನವನ್ನು ಕೆತ್ತಿಸುವುದೇ ಒಳ್ಳೆಯ ಉಪಾಯವಲ್ಲವೆ? ಇಂಥ ಒಂದು ಹಿನ್ನೆಲೆಯ ಆವರಣದಲ್ಲಿ...... ಬೊಮ್ಮಲಗುಟ್ಟ ಎಂಬ ಗುಡ್ಡದ ಬಂಡೆಯ ಮೇಲೆ ಪಂಪನ ಕುರಿತು (ಈ) ಹೊಸದಾಗಿ ದೊರೆತ ಶಿಲಾಶಾಸನವು ನಿರ್ಮಾಣವಾಗಿರಬೇಕು".[೧೦] ಅದಕ್ಕಾಗಿ ಪಂಪನನ್ನು ಕುರಿತು .... ರಚಿಸಿದ .... ಶಾಸನಕ್ಕಾಗಿ ನಾವು ಬೇರೆ ಕಡೆ ಹೋಗಿ ಹುಡುಕಾಡುವ ಅಗತ್ಯವಿಲ್ಲ .... ನಮಗೀಗ ದೊರೆತ ಈ ಶಾಸನವೇ ಆ ಶಾಸನ"[೧೧] ಎಂದು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ.

ಈ ಉಭಯ ವಿದ್ವಾಂಸರ ಹೇಳಿಕೆಯಿಂದ, ಒಂದು: ಪಂಪನು ಅರಿಕೇಸರಿಯಿಂದ ಪಡೆದುದು ಶಿಲಾಶಾಸನವೇ? ತಾಮ್ರಶಾಸನವೇ? ಎರಡು: ಶಿಲಾಶಾಸನವಾಗಿದ್ದರೆ ಅದು ಈಗ ಉಪಲಬ್ಧವಾಗಿರುವ ಶಾಸನವೇ? ಬೇರೊಂದು ಇದೆಯೇ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ನನಗೆ ಮಾತ್ರ ಪಂಪನಿಗೆ ಅರಿಕೇಸರಿ ತಾಮ್ರಶಾಸನವನ್ನು ಕೊಟ್ಟಿರಲಿ ಬಿಡಲಿ; ಶಿಲಾಶಾಸನವನ್ನು ತಪ್ಪದೇ ಕೊಟ್ಟಿರುವನು; ಅದು ಬೊಮ್ಮಲಗುಟ್ಟ (ವೃಷಭಾದ್ರಿ)ದಲ್ಲಿ ಈಗ ದೊರೆತಿರುವ ಶಾಸನವಲ್ಲ; ಇದೇ ಬೆಟ್ಟದಲ್ಲಿ ಬೇರೊಂದೆಡೆ ಇದ್ದಿರಬಹುದಾದ ಇನ್ನೊಂದು ಶಾಸನವೆನಿಸುತ್ತದೆ.

ಮೇಲಣ ಪದ್ಯದ 'ಬರೆದುದೆ ತಾಂಬ್ರಶಾಸನಂ' ಎಂಬುದನ್ನು ಸಾಮಾನ್ಯ ವಾಕ್ಯದಂತೆ ಓದಿ ಅರಿಕೇಸರಿಯು ಪಂಪನಿಗೆ ತಾಮ್ರಶಾಸನವನ್ನು ದಯಪಾಲಿಸಿದನು - ಎಂದು ಡಾ. ದೇಸಾಯಿ ಅವರು ಹೇಳುತ್ತಾರೆ. ಆದರೆ "ಬರೆದುದೆ ತಾಂಬ್ರಶಾಸನಂ?...." ಎಂದು, "ಬೆಸಗೊಳ್ಳದೆ ಪೋಗಿ ನೋಡು ಸುಂದರ ವೃಷಭಾಚಳೋನ್ನತ ಶಿಲಾತಳದೊಳ್ಬರೆದಕ್ಕರಂಗಳಂ" ಎಂದು ಪ್ರಶ್ನೆ-ಉತ್ತರ ರೀತಿಯಿಂದ ಓದಿದರೆ ಪಂಪನು ಪಡೆದುದು ತಾಮ್ರಶಾಸನವಲ್ಲ; ಶಿಲಾಶಾಸನವೆಂಬ ಧ್ವನಿ ಎದ್ದು ಕೇಳಿಸುತ್ತದೆ. ತಾಮ್ರಶಾಸನಗಳು ಕೃತಕವಾಗಿರುವ ಸಂಭವ ಹೆಚ್ಚು. ಅವುಗಳ ಬಗೆಗೆ ವಿಶ್ವಾಸ ಕಡಿಮೆ. ಅದಕ್ಕಾಗಿ ಪಂಪನು ಪಡೆದುದು ಕೃತಕವೆಂದು ಸಂದೇಹ ಹುಟ್ಟಿಸುವ ತಾಮ್ರಶಾಸನವಲ್ಲ ಬಹಿರಂಗವಾಗಿ ಬರೆದ ಶಿಲಾಶಾಸನ - ಎಂದು ಹೆಮ್ಮೆಯಿಂದ ಹೇಳುವುದೇ ಈ ಪದ್ಯದ ಅಭಿಪ್ರಾಯವಾಗಿದೆ.

ಎರಡನೆಯದಾಗಿ ಪಂಪಮಹಾಕವಿಯು ಅರಿಕೇಸರಿಯ ಆತ್ಮೀಯ ಗೆಳೆಯ; ಆಸ್ಥಾನಕವಿ. ಇಂಥವನು, ತನ್ನನ್ನು ಕುರಿತು ಮಹಾಕಾವ್ಯ ಬರೆದ ಪ್ರಸಂಗದಲ್ಲಿ ಮನೆಯಲ್ಲಿ ಮಡಗಬಹುದಾದ ತಾಮ್ರಶಾಸನ ನೀಡದೆ, ಸಾರ್ವಜನಿಕ ಪ್ರದರ್ಶನೀಯವೆನಿಸುವ ಶಿಲಾಶಾಸನವನ್ನೇ ಬರೆಯಿಸಿ ಕವಿಸನ್ಮಾನ ಮಹೋತ್ಸವವನ್ನೇ ಆಚರಿಸಿರಬೇಕು. ಈಗ ಉಪಲಬ್ಧವಿರುವ ಶಾಸನದ "ಪೋಗಿ ನೋಡು ಸುಂದರ ವೃಷಭಾಚಳೋನ್ನತ ಶಿಲಾತಳದೊಳ್ ಬರೆದಕ್ಕರಂಗಳಂ" ಎನ್ನುವಲ್ಲಿಯ 'ಪೋಗಿ ನೋಡು' ಎಂಬ ಮಾತು ಈಗ ಉಪಲಬ್ಧವಿರದ ಇನ್ನೊಂದು ಶಾಸನಕ್ಕೆ ಬೆರಳು ನೀಡುತ್ತದೆ. ಅದು ವೃಷಭಗಿರಿಯ (ಬೊಮ್ಮಲಗುಟ್ಟದ) ಇನ್ನೊಂದು ಭಾಗದಲ್ಲಿರಬಹುದು.

---

೧೦. ಕನ್ನಡನುಡಿ, ೧೯೬೮, ಮಾರ್ಚ, ಪು. ೧೦.

೧೧. ಕನ್ನಡನುಡಿ, ೧೯೬೮, ಮಾರ್ಚ, ಪು. ೧೧.

ವಿನುತ ಚಳುಕ್ಯವಂಶಪತಿ ಮಿಕ್ಕರಿಕೇಸರಿ ಸನ್ನ ವಿಕ್ರಮಾ।
ರ್ಜುನವಿಜಯಕ್ಕೆ ಧರ್ಮಪುರಮೆನ್ನು ಮದೀಯಮಿದೆನ್ನು ಕೀರ್ತಿ ಶಾ।
ಸನಮೆನೆ ಕೊಟ್ಟ ಶಾಸನದ, ಪಂಪನನಾ ಬಿರುದೊಂದು ಜೈನ ಶಾ।
ಸನದ ನೆಗೞ್ತೆಯಂ ವೃಷಭಪರ್ವತಮನ್ತದು ತಾನೆ ಪೇೞದೇ॥

ಎಂಬ ಪದ್ಯ ಅರ್ಥದೃಷ್ಟಿಯಿಂದ ಸ್ವಲ್ಪ ಕ್ಲಿಷ್ಟವಾಗಿದ್ದರೂ ಇಲ್ಲಿಯ ಅರಿಕೇಸರಿ .... ಕೊಟ್ಟ ಶಾಸನದ .... ನೆಗೞ್ತೆಯಂ ವೃಷಭಪರ್ವತಮನ್ತದು ತಾನೆ ಪೇೞದೇ" ಎಂಬ ಮಾತಿನಿಂದ ಅರಿಕೇಸರಿ ಪಂಪನಿಗೆ ದಾನ ನೀಡಿದ ವಿಷಯಗಳನ್ನೊಳಗೊಂಡ ಶಾಸನದ ಪ್ರಸಿದ್ಧಿಯನ್ನು ವೃಷಭಪರ್ವತವು ಸಾರುತ್ತದೆ - ಎಂದು ತಿಳಿದುಬರುತ್ತದೆ. ಈಗ ಉಪಲಬ್ಧವಿದ್ದ ಶಾಸನದಲ್ಲಿ ಪಂಪನ ಉಲ್ಲೇಖವಿದ್ದರೂ ಅದೆಲ್ಲ ಆನುಷಂಗಿಕ; ಮುಖ್ಯ ವಿಷಯ ಜಿನವಲ್ಲಭನ ಕೀರ್ತಿಘೋಷಣೆ. ಅದಕ್ಕಾಗಿ ಪಂಪನನ್ನೇ ಮುಖ್ಯ ವಿಷಯವಾಗಿಟ್ಟುಕೊಂಡು ಬರೆದ ಬೇರೊಂದು ಶಾಸನವಿರಬೇಕೆನಿಸುತ್ತದೆ. ಅದು ರಾಷ್ಟ್ರಕೂಟ ಚಕ್ರವರ್ತಿಯ ಪ್ರಶಸ್ತಿ ಮತ್ತು ಸಾಮಂತನಾದ ಅರಿಕೇಸರಿಯ ವಂಶಾವಳಿಗಳಿಂದ ಪ್ರಾರಂಭವಾಗಿ ಪಂಪನ ವಂಶಾವಳಿ ಹಾಗೂ ವರ್ಣನೆ, ವಿಕ್ರಮಾರ್ಜುನವಿಜಯ ರಚನೆಗೊಂಡ ಘಟನೆ, ಅದಕ್ಕೆ ಮೆಚ್ಚಿ ಅರಿಕೇಸರಿ ನೀಡಿದ ದಾನ ವಿವರಣೆ ಇತ್ಯಾದಿ ವಿಷಯಗಳನ್ನೊಳಗೊಂಡಿರಬೇಕು. ಬೊಮ್ಮಲಗುಟ್ಟದ (ವೃಷಭಗಿರಿಯ) ಬೇರೊಂದು ಭಾಗದಲ್ಲಿ ಕೆತ್ತಲ್ಪಟ್ಟಿರಬಹುದಾದ ಅದು, (ಪ್ರಕೃತಿಯ ಪ್ರಕೋಪಕ್ಕೆ ತುತ್ತಾಗದಿದ್ದ ಪಕ್ಷದಲ್ಲಿ) ಹುಡುಕಿದರೆ ದೊರೆಯಬಹುದೇನೋ? ದುರ್ಗಮವಾದ ಈ ಬೆಟ್ಟದಲ್ಲಿ ಅದನ್ನು ಶೋಧಿಸುವ ಕಾರ್ಯ ನಡೆಯಬೇಕಾಗಿದೆ.

೫. ಜಿನವಲ್ಲಭನ ಶಾಸನಕಾಲ :

ಗಂಗಾಧರಂ ಶಾಸನದಲ್ಲಿ ಮಿತಿ ಕಂಡುಬರುವುದಿಲ್ಲ. ಆದಿಪುರಾಣದ ಕಾಲ ಮತ್ತು ಈ ಶಾಸನದ ಅಕ್ಷರಸ್ವರೂಪಗಳನ್ನವಲಂಬಿಸಿ ಇದರ ಕಾಲ 10ನೆಯ ಶತಮಾನದ ಮಧ್ಯವೆಂದು ಡಾ. ವೆಂಕಟರಮಣಯ್ಯನವರ ಊಹೆ. ಆದರೆ ಈ ಶಾಸನ ಬರೆದ ಸಮಯದಲ್ಲಿ ಪಂಪನು ಜೀವಿಸಿದ್ದನೇ? ಇಲ್ಲವೇ? ಎಂಬ ಸಂದೇಹ ಮೂಡುತ್ತದೆ.

ಡಾ. ದೇಸಾಯಿ ಅವರು "ಪಂಪನು ವಿಕ್ರಮಾರ್ಜುನವಿಜಯವನ್ನು ಬರೆದು ಅರಿಕೇಸರಿಯಿಂದ ಧರ್ಮಪುರವನ್ನು ಸಂಭಾವನೆಯಾಗಿ ಪಡೆದನು. ಈ ವಿಷಯ, ಪಂಪನ ತಮ್ಮನಾದ ಜಿನವಲ್ಲಭನಿಗೆ ಹರ್ಷದಾಯಕವಾಯಿತು. ಆತನ ಈ ಘಟನೆಯ ಸ್ಮೃತಿಯನ್ನು ಚಿರಸ್ಥಾಯಿಗೊಳಿಸಬೇಕೆಂದು ಆಲೋಚಿಸಿದನು. ಅದಕ್ಕಾಗಿ ತನ್ನ ಊರಿಂದ ಬಹುದೂರವಲ್ಲದ ಒಂದು ಖ್ಯಾತ ಜೈನಸ್ಥಳವನ್ನು ಗೊತ್ತು ಮಾಡಿದನು. ಅದು ವೃಷಭಗಿರಿ"[೧೨] ಎಂದು; "ಜಿನವಲ್ಲಭನು ನೆರವೇರಿಸಿದ ಮಹೋತ್ಸವದ ಕಾಲದಲ್ಲಿ ಪಂಪನು ಬಾಳಿದ್ದನೇ? ಏಕೆ ಬಾಳಿರಬಾರದು?...... ಬಾಳಿದ್ದರೆ ಈ ಉತ್ಸವದಲ್ಲಿ ಭಾಗಿಯಾಗಿದ್ದನೇ? ಏಕೆ ಆಗಬಾರದು?"[೧೩] ಎಂದು ಹೇಳುತ್ತಾರೆ. ಅಂದರೆ ಪಂಪನು ದತ್ತಿ ಪಡೆದ ಪ್ರಸಂಗದಲ್ಲಿ ಜಿನವಲ್ಲಭನು ಈ ಕಾರ್ಯಾಕಲಾಪಗಳನ್ನು ನೆರವೇರಿಸಿದನೆಂದೂ ಈ ಸಮಾರಂಭ ಸಮಯದಲ್ಲಿ ಪಂಪನು ಬದುಕಿದ್ದನೆಂದೂ ಅವರ ಅಭಿಪ್ರಾಯ. ಇದಕ್ಕೆ ನಮ್ಮ ಪ್ರತಿಕ್ರಿಯೆ ಹೀಗಿದೆ:

---

೧೨. ಕನ್ನಡನುಡಿ, ೧೯೬೮, ಮಾರ್ಚ, ಪು. ೯
೧೩. ಕನ್ನಡನುಡಿ, ೧೯೬೮, ಏಪ್ರಿಲ್, ಮೇ, ಪು. ೨೦.

ಪಂಪನು ಧರ್ಮಪುರವನ್ನು (ಅದರ ಸೀಮೆಯಲ್ಲಿರುವ ವೃಷಭಪರ್ವತ ಸಹಿತ) ದತ್ತಿಯಾಗಿ ಪಡೆದನು. ಈ ವಿಷಯವನ್ನು ಕಥಿಸುವ, ಈಗ ದೊರೆಯದ ಶಿಲಾಶಾಸನವೊಂದು ವೃಷಭಪರ್ವತದಲ್ಲಿ ಸ್ಥಾಪನೆಗೊಂಡಿತು. ಧರ್ಮಪುರ ಪಂಪನ ಒಡೆತನಕ್ಕೆ ಒಳಗಾಯಿತು. ಆತನು ಅಧಿಕಾರದಿಂದ ಧರ್ಮಪುರದ ಪ್ರಥಮ ಪೌರನೂ, ಸದ್ಗುಣಗಳಿಂದ ಆ ಪ್ರದೇಶದಲ್ಲಿ ಪ್ರಥಮವಂದ್ಯನೂ ಆಗಿರಬೇಕು. ಆದರೆ ಈಗ ದೊರೆತ ಶಾಸನವನ್ನು ಬರೆಯುವಾಗ ಧರ್ಮಪುರದಲ್ಲಿ ನೋಡತಕ್ಕವೆಂದರೆ "ಜೈನಾಭಿಷೇಕೋತ್ಸವ ಕ್ಷೀರಪ್ಲಾವಿತ ತುಂಗ ಶೃಂಗ ವೃಷಭಕ್ಷೋಣೀಧ್ರ" ಮತ್ತು "ಯಾತ್ರಾ ಯಾತ ಸಮಸ್ತ ಭವ್ಯಜನತಾ ಸನ್ಮಾನ ದಾನೋದ್ಯತಂ ಪಂಪಾರ್ಯಾನುಜಮತ್ರ ಭೀಮತನುಜಂ" ಎನಿಸಿದ ಜಿನವಲ್ಲಭರನ್ನು - ಎಂದು ಶಾಸನ ಹೇಳುವುದನ್ನು ನೆನೆದರೆ, ಈ ಸಮಯಕ್ಕೆ ಮಹಾಕವಿ ಪಂಪನು ಕೀರ್ತಿಶೇಷನಾಗಿರಬಹುದೆನಿಸುತ್ತದೆ. ಈಗ ಪಂಪನ ತರುವಾಯ ಸ್ವಾಭಾವಿಕವಾಗಿ ಧರ್ಮಪುರದ ಹೊಣೆಹೊತ್ತ ಜಿನವಲ್ಲಭನು, ಅಣ್ಣನ ಪರೋಕ್ಷದಲ್ಲಿ ಆತನಿಗೆ ತಾನು ಸಲ್ಲಿಸುವ ವೈಭವಪೂರ್ಣ ಸ್ಮಾರಕವೆನ್ನುವಂತೆ ವೃಷಭಗಿರಿಯ ಸಿದ್ಧಶಿಲೆಯಲ್ಲಿ "ತಮ್ಮ ಕುಲದೈವಮಪ್ಪಾದ್ಯಂತ ಜಿನಬಿಂಬಗಳುಮಂ ಚಕ್ರೇಶ್ವರಿಯುಮಂ ಪೆಱವುಂ ಜಿನಪ್ರತಿಮೆಗಳುಮಂ ತ್ರಿಭುವನತಿಲಕಮೆಂಬ ಬಸದಿಯುಮಂ ಕವಿತಾಗುಣಾರ್ಣವಮೆಂಬ ಕೆಱೆಯುಮುಮಂ ಮದನವಿಳಾಸಮೆಂಬ ಬನಮುಮಂ ಮಾಡಿಸಿರಬೇಕು. ಇದು ಕವಿತಾಗುಣಾರ್ಣವನ ಕೀರ್ತಿಯ ಮೂರ್ತಿ" ಎಂಬಂತೆ ವೃಷಭಾದ್ರಿ ದಿವ್ಯಸ್ವರೂಪ ಪಡೆಯಿತು. ಈ ಮಾತನ್ನು ಹೇಳುವಲ್ಲಿ, ತಾನು ಗೈದ ಸ್ಮಾರಕಗಳಿಂದಾಗಿ ಕೀರ್ತಿಶೇಷನಾದ ಅಣ್ಣನ ಕೀರ್ತಿ ಗುಡಿಗಟ್ಟಿ ನಿಂತಿತೆಂದು ಜಿನವಲ್ಲಭನು ಅಭಿಮಾನಪಟ್ಟಂತಿದೆ. ಈ ಸ್ಮಾರಕ ಕಾರ್ಯಕಲಾಪಗಳನ್ನು ಪ್ರಕಟಿಸುವುದಕ್ಕಾಗಿ ಈತನು ವೃಷಭಗಿರಿಯ ಸಿದ್ಧಶಿಲೆಯಲ್ಲಿ, ಈಗ ದೊರೆತ ಶಾಸನವನ್ನು ಕೆತ್ತಿಸಬೇಕಾಯಿತು. ಹೀಗೆ ಪಂಪನ ಸ್ಮಾರಕವೆಂದು ಎತ್ತಿಸಿದ ದೇವಾಲಯ, ಕಟ್ಟಿಸಿದ ಕೆರೆ, ನಿಲ್ಲಿಸಿದ ಜಿನ ಪ್ರತಿಮೆ, ನಿರ್ಮಿಸಿದ ಉದ್ಯಾನಕಾರ್ಯ ವಿಶೇಷಗಳನ್ನು ವಿವರಿಸುವುದರಿಂದ ಈ ಶಾಸನ ; ಪಂಪನು ಗತಿಸಿಹೋದ ತರುವಾಯ ಹುಟ್ಟಿತೆಂದು ಹೇಳಬಹುದು.

ಈಗ ಪ್ರಕಟವಾದ ಗಂಗಾಧರಂ ಶಾಸನದಲ್ಲಿ ಅನೇಕ ಪಾಠದೋಷಗಳಿವೆ. ಇದರ ಶುದ್ಧಪಾಠವನ್ನು ಪ್ರಕಟಿಸುವ, ನೇರವಾಗಿ ಪಂಪನಿಗೆ ಸಂಬಂಧಿಸಿದ ಇನ್ನೊಂದು ಅನುಪಲಬ್ಧ ಶಾಸನವನ್ನು ಶೋಧಿಸುವ ಕಾರ್ಯ ನಡೆಯಬೇಕಾಗಿದೆ. ಇದರಿಂದ ಇನ್ನೂ ಕೆಲವು ಹೊಸ ಸಂಗತಿಗಳು ಬೆಳಕಿಗೆ ಬರಬಹುದು.

ಅನುಬಂಧ

ಇತ್ತೀಚೆ ನನ್ನ ಗಮನಕ್ಕೆ ಬಂದ "ಮಂಮ[ಗ]ಳಿಗೆ" (EC. IX ನೆಲಮಂಗಲ ೧೨) ಎಂಬ ಪ್ರಯೋಗವು ಗಂಗಾಧರಂ ಶಾಸನಸ್ಥ ಮರ್ಮಳ್ ಪ್ರಯೋಗದ ಬಳಕೆಯನ್ನು ಬೆಂಬಲಿಸುವುದಲ್ಲದೆ, ಅಬ್ಬಣಬ್ಬೆಯು ಜೋಯಿಸಸಿಂಘನ ಸೊಸೆಯಾಗಿರದೆ ಮೊಮ್ಮಗಳೇ ಆಗಿರಬೇಕೆಂದು ತಿಳಿಸುತ್ತದೆ.

ಈ ಲೇಖನ ಪ್ರಕಟವಾದ ತರುವಾಯ ಪ್ರ.ಕ. ೫೩-೪ದಲ್ಲಿ ಡಾ. ಜಿ.ಎಸ್.ಗಾಯಿ ಅವರು ಈ ಶಾಸನವನ್ನು ಮತ್ತೊಮ್ಮೆ ಓದಿ ಅನೇಕ ಹೊಸಪಾಠಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ 'ಪಂಪನನಾ ಬಿರುದೊಂದು' ಎಂಬುದಕ್ಕೆ ಪ್ರತಿಯಾಗಿ ಹೇಳಿದ 'ಪಂಪನ ನಂಬಿದುದೊಂನ್ದು' ಎಂಬ ಹೊಸಪಾಠ ಗಮನಾರ್ಹವಾಗಿದ್ದು, ಇದು ನಾನು ಮಂಡಿಸಿದ 'ಪಂಪ-ಪಂಪನ' ವಾದವನ್ನು ಸ್ವಲ್ಪ ಸಡಿಲುಗೊಳಿಸಿದೆ.

■■

ಆಕರ : ಮಾರ್ಗ ಸಂಪುಟ-೨

೧೫

ಅಬ್ಬಣಬ್ಬೆ : ಮಗಳಲ್ಲ - ಮೊಮ್ಮಗಳು

ಪಂಪನನ್ನು ಕುರಿತ 'ಗಂಗಾಧರಂ ಶಾಸನ: ಒಂದು ತಿದ್ದುಪಡಿ'[೧] ಎಂಬ ನನ್ನ ಲೇಖನವನ್ನು ವಿರೋಧಿಸಿ, ಡಾ. ಪಿ.ಬಿ.ದೇಸಾಯಿ ಅವರು 'ಗಂಗಾಧರಂ ಶಾಸನ - ತಿದ್ದುಪಡಿಯ ಗಡಿಬಿಡಿ'[೨] ಎಂಬ ಉತ್ತರವನ್ನು ಬರೆದರು. ಈ ಲೇಖನ ಅದಕ್ಕೆ ಬರೆದ ಮಾರುತ್ತರ.

ನನ್ನ ಲೇಖನದಲ್ಲಿ ಗಂಗಾಧರಂ ಶಾಸನದ ಅಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ ಬೆಳ್ವೊಲದಣ್ನಿಗೆಱೆಯ ಜೋಯಿಸಸಿಂಘನ ಮರ್ಮ[ಂ]' ವಬ್ಬಣಬ್ಬೆಯ ಮಗಂ ಜಿನವಲ್ಲಭಂ ಎಂಬ ಭಾಗದಲ್ಲಿ ಅರ್ಥಕ್ಲಿಷ್ಟತೆ ಇದೆಯೆಂದು ವಿವರವಾಗಿ ತೋರಿಸಿಕೊಟ್ಟು, ಅದನ್ನು ಕೆಳಗಿನಂತೆ ಮೂರು ಬಗೆಯಲ್ಲಿ ತಿದ್ದಬಹುದೆಂದು ಸೂಚಿಸಿದ್ದೆನು.

೧. "ಅಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ [ಮಗಂ] ಬೆಳ್ವೊಲದಣ್ನಿಗೆಱೆಯ ಜೋಯಿಸಸಿಂಘನ ಮರ್ಮ್ಮ[ಂ]*, ವಬ್ಬಣಬ್ಬೆಯ ಮಗಂ ... ಜಿನವಲ್ಲಭಂ."[3]

೨. "ಅಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ ಬೆಳ್ವೊಲದಣ್ನಿಗೆಱೆಯ ಜೋಯಿಸಸಿಂಘನ ಮರ್ಮ್ಮ[ಳ್] ವಬ್ಬಣಬ್ಬೆಯ ಮಗಂ ... ಜಿನವಲ್ಲಭಂ."[3ಅ]

೩. "ಅಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ ಬೆಳ್ವೊಲದಣ್ನಿಗೆಱೆಯ ಜೋಯಿಸಸಿಂಘನ ಮರ್ಮ್ಮ[ಳ]ಣಬ್ಬೆಯ ಮಗಂ ... ಜಿನವಲ್ಲಭಂ."*

ಈ ಮೂರರಲ್ಲಿ ಮೊದಲಿನದು ನನಗೆ ಸಮ್ಮತವಿಲ್ಲ. ಎರಡನೆಯದು ಅರ್ಥದೃಷ್ಟಿಯಿಂದ ಸಮ್ಮತವಿದೆ. ಮೂರನೆಯದೂ ಸಮ್ಮತವಿದೆ, ಆದರೆ ಶಾಸನ ಪಾಠನೋಡಿ ನಿರ್ಣಯಕ್ಕೆ ಬರಬೇಕು ಎಂದು ಮುಕ್ತಮನಸ್ಸಿನಿಂದ ಸೂಚಿಸಿದ್ದೆನು. ೨ ಮತ್ತು ೩ನೆಯ ತಿದ್ದುಪಡಿಯಿಂದ ಪಂಪನ ತಾಯಿಯು ಜೋಯಿಸಸಿಂಘನ ಮಗಳಲ್ಲ, ಮೊಮ್ಮಗಳು ಎಂದೂ, ೩ನೆಯ ತಿದ್ದುಪಡಿಯಿಂದ ಆಕೆಯ ಹೆಸರು ವಬ್ಬಣಬ್ಬೆಯಲ್ಲ, ಅಬ್ಬಣಬ್ಬೆಯೆಂದೂ ತಿಳಿದುಬರುವುದೆಂದು (ಅಡಿಟಿಪ್ಪಣಿಯಲ್ಲಿ) ಹೇಳಿದ್ದೆನು.

---

೧. ಕನ್ನಡ ನುಡಿ, ೧೯೬೮ ಮೇ.

೨. ಕನ್ನಡ ನುಡಿ, ೧೯೬೮ ಅಗಸ್ಟ.

೩ ಈ ವಾಕ್ಯದಲ್ಲಿಯ ಮೊದಲ ಕಂಸ ನನ್ನದು, ಎರಡನೆಯದು ಶ್ರೀ ವೆಂಕಟರಮಣಯ್ಯನವರದು.

೩ಅ. ಈ ವಾಕ್ಯದಲ್ಲಿಯ ಚೌಕ ಕಂಸ ನನ್ನದು.

* ವಾಕ್ಯದಲ್ಲಿಯ ಪಾಠವನ್ನು ನನ್ನ ಲೇಖನದ ಅಡಿಯಲ್ಲಿ ಊಹಿಸಿದ್ದೆನು.

ಶ್ರೀ ದೇಸಾಯಿ ಅವರು, ಇದನ್ನೊಪ್ಪದೆ, ಮೂಲಪಾಠದಲ್ಲಿ ಯಾವ ಅರ್ಥಕ್ಲಿಷ್ಟತೆ ಇಲ್ಲವೆಂದೂ ಪಂಪನ ತಾಯಿ ಜೋಯಿಸಸಿಂಘನ ಮೊಮ್ಮಗಳಲ್ಲ; ಮಗಳೆಂದೂ ಹೇಳಿಕೆ ನೀಡಿದರು. ನನ್ನ ಊಹೆಯನ್ನು ಪ್ರಶ್ನಿಸುತ್ತ "ಈ ಸೂಚನೆಗೆ ಅಂತಹದೊಂದು ಸಾಹಿತ್ಯದ ಅಥವಾ ಶಾಸನದ ಪ್ರಮಾಣವನ್ನು ಒದಗಿಸಬೇಡವೇ? ಇಂಥ ಶಾಸನಬದ್ಧ ವಿಷಯದಲ್ಲಿ ನಿರಾಧಾರವಾಗಿ, ಸ್ವಕಪೋಲಕಲ್ಪಿತವಾಗಿ ತಿದ್ದುಪಡಿಯನ್ನು ಮಾಡಲು ಸಾಹಸ ತೊಟ್ಟರೆ ಇದಕ್ಕೆ ಇತಿಮಿತಿಯೆಲ್ಲಿ ?" ಎಂದು ಬರೆದರು. ಆದರೆ ಶಾಸನಪಂಡಿತರಾದ ತಾವಾದರೂ ಮೂಲಶಾಸನವನ್ನು ನೋಡಿ ಆ ಮಾತನ್ನು ನನಗೆ ಹೇಳಿದ್ದರೆ ಅವರ ಅಭಿಪ್ರಾಯವನ್ನು ಶಿರಸಾವಹಿಸುತ್ತಿದ್ದೆನು. ಆದರೆ ಧಾರವಾಡದಲ್ಲಿ ಕುಳಿತು, ದೂರದ ಗಂಗಾಧರಂ ಶಾಸನದ ವಿಷಯವಾಗಿ ಪ್ರತಿವಾದ ಹೂಡಿದ ಅವರ ಸಾಹಸ ನನಗೆ ಅಸಮಾಧಾನವನ್ನುಂಟುಮಾಡಿತು. ಕಾರಣ ಕಳೆದ ಅಕ್ಟೋಬರ (೧೯೬೮) ನಲ್ಲಿ ಹೈದರಾಬಾದಿಗೆ ಹೋಗಬೇಕಾಯಿತು. ಅಲ್ಲಿ ಈ ಶಾಸನವನ್ನು ಪ್ರಕಟಿಸಿದ ವೆಂಕಟರಮಣಯ್ಯನವರನ್ನು ಕಂಡು, ಅವರ ಬಳಿಯಲ್ಲಿರುವ ಶಾಸನದ ಪಡಿಯಚ್ಚನ್ನು ಕಣ್ಮುಟ್ಟ ನೋಡಿದೆನು. ಶ್ರೀ ವೆಂಕಟರಮಣಯ್ಯನವರು ಓದಿದ 'ವಬ್ಬಣಬ್ಬೆ' ಎಂಬಲ್ಲಿಯ ವಕಾರದ ಮೇಲೆ ಕಚ್ಚುಬಿದ್ದಿರುವ ಕಾರಣ ಅದು ಪ್ರಥಮ ದೃಷ್ಟಿಗೆ 'ವ'ಕಾರವೆಂಬ ಭ್ರಾಂತಿಯನ್ನು ಹುಟ್ಟಿಸುತ್ತದೆ. ಆದರೆ ಸೂಕ್ಷ್ಮವಾಗಿ ನೋಡಿದರೆ ಇಲ್ಲಿ ಇದ್ದುದು ವಕಾರವಲ್ಲ ; 'ಳ'ಕಾರವೆಂದು ನನಗೆ ಸ್ಪಷ್ಟ ಮನವರಿಕೆಯಾಯಿತು. ಇದನ್ನು ಶ್ರೀ ವೆಂಕಟರಮಣಯ್ಯನವರೂ ಒಪ್ಪಿಕೊಂಡರು. ಆದುದರಿಂದ ನಾನು ಅಡಿಟಿಪ್ಪಣಿಯಲ್ಲಿ ಮಾಡಿದ 'ಮರ್ಮ[ಳ]ಬ್ಬಣಬ್ಬೆ' ಎಂಬ ಮೂರನೆಯ ಊಹೆ ಸರಿಯಾದುದೆಂದೂ ಅದರ ಪ್ರಕಾರ ಪಂಪನ ತಾಯಿಯು ಜೋಯಿಸಸಿಂಘನ ಮಗಳಲ್ಲ, ಮೊಮ್ಮಗಳು.[೪] ಅವಳ ಹೆಸರು ವಬ್ಬಣಬ್ಬೆಯಲ್ಲ, ಅಬ್ಬಣಬ್ಬೆ[೫] ಎಂದೂ ಇನ್ನೊಮ್ಮೆ ಸೂಚಿಸಬಯಸುತ್ತೇನೆ.[೬] ಇದರೊಂದಿಗೆ ಶ್ರೀ ದೇಸಾಯಿ ಅವರ 'ಗಡಿಬಿಡಿ ಲೇಖನ' ನಿರಾಧಾರವೆಂದೂ ಹೇಳಬಯಸುತ್ತೇನೆ.

■■

ಆಕರ : ಮಾರ್ಗ ಸಂಪುಟ–೨

---

೪. ಹಳಗನ್ನಡ ಕಾವ್ಯಗಳಲ್ಲಿ ನನಗೆ ತಿಳಿದಂತೆ 'ಮರ್ಮಳ್' ಎಂಬ ಪದ ಎಲ್ಲಿಯೂ ಬಳಕೆಯಾಗಿಲ್ಲ. ಬಹುಶಃ ಅದನ್ನು ಬಳಸುವ ಸಂದರ್ಭ ಎಲ್ಲಿಯೂ ಬಂದಂತೆ ಕಾಣುವುದಿಲ್ಲ. ಒಂದು ವೇಳೆ ಬಂದಿದ್ದರೆ 'ವರ್ಮನ್' ಎಂಬುದರ ಸ್ತ್ರೀವಾಚಕ 'ಮರ್ಮಳ್' ಎಂದೇ ಇರಬೇಕಾಗುತ್ತದೆ.

೫. 'ಅಬ್ಬಲಬ್ಬೆ' ಎಂಬುದು ನೃಪತುಂಗನ ಮಗಳ ಹೆಸರು. ಅಬ್ಬಲಬ್ಬೆ, ಅಬ್ಬಣಬ್ಬೆ- ಎಂಬಿವು ಒಂದೇ ಮೂಲದ ಭಿನ್ನ ಹೆಸರುಗಳಾಗಿರುವುದರಿಂದ ಇದೊಂದು ಆ ಕಾಲದ ಪ್ರಚಲಿತ ಹೆಸರೆಂದು ಹೇಳಬಹುದು.

೬. 'ನುಡಿ'ಯಲ್ಲಿಯ ನನ್ನ ಲೇಖನವನ್ನು ನೋಡಿ 'ಶ್ರೀ ಕಲಬುರ್ಗಿ ಅವರ ಊಹೆ ಸಾಧುವಾದುದು... ಇದು ಕೇವಲ ಊಹೆಯಲ್ಲ, ಶಾಸನಪಾಠವನ್ನು ಪರೀಕ್ಷಿಸಿ ನೋಡಿದರೆ 'ಜೋಯಿಸ ಸಿಂಘನ ವರ್ಮವಬ್ಬಣಬ್ಬೆಯ ಮಗಂ' ಎಂಬಲ್ಲಿಯ 'ವ' ಎಂಬುದನ್ನು 'ಳ' ಎಂದೂ ಓದಲು ಸಾಧ್ಯವೆಂಬುದು ಗೊತ್ತಾಗುತ್ತದೆ' ಎಂದು ಡಾ. ಎಂ.ಚಿದಾನಂದಮೂರ್ತಿಗಳು 'ಪ್ರಜಾವಾಣಿ' (೫-೧೨-೬೮)ರಲ್ಲಿ ಹೇಳಿದ್ದಾರೆ. ಸತ್ಯವನ್ನು ತಾಳ್ಮೆಯಿಂದ ನೋಡಿ, ಮುಕ್ತಮನಸ್ಸಿನಿಂದ ಮನ್ನಿಸಿದ ಅವರಿಗೆ, ಹೀಗೆ ಹೇಳುವಲ್ಲಿ ಅವರಿಗೆ ನೆರವಾದ ಶಾಸನಲಿಪಿ ಸೂಕ್ಷ್ಮಜ್ಞರಾದ ಡಾ. ರಮೇಶ ಮತ್ತು ಶ್ರೀ ನಾಗರಾಜ್ ಅವರಿಗೆ ನನ್ನ ಕೃತಜ್ಞತೆಗಳು. 'ವ' ಎಂಬುದನ್ನು 'ಳ' ಎಂದು ಓದಲು ಅವಕಾಶವಿದೆಯೆಂದು ಶಾಸನದ ಪಡಿಯಚ್ಚು ನೋಡಿ, ಪತ್ರದ ಮೂಲಕ ತಿಳಿಸಿರುವ ಶ್ರೀ ಡಿ.ಕೆ. ಭೀಮಸೇನರಾಯರಿಗೆ ನನ್ನ ವಂದನೆಗಳು.

೧೬

ಪಂಪನ ಅಗ್ರಹಾರ - ರನ್ನನ ಬತ್ತಗಾವೆ

ಉದಯಾಸ್ತೋನ್ನತಶೈಲ ಸೇತುಹಿಮವತ್ ಕುತ್ಕೀಲ ಪರ್ಯಂತ ಸಂ।
ಪದೆಯಂ ವಾರ್ಧಿತರತ್ತರಂಗ ನಿನದತ್ ಕಾಂಚೀಕಳಾಪಾಂಚಿತಾ।
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ।
ರ್ಚಿದ ಗೆಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆಱರ್ಗಕ್ಕುಮೇ ॥

ಕಾವ್ಯಾವಲೋಕನ (175), ಶಬ್ದಮಣಿದರ್ಪಣ (167) ಗಳಲ್ಲಿ ಕಂಡುಬರುವ ಈ ಪದ್ಯ, ಪೊನ್ನನ ಅನುಪಲಬ್ಧ ಭುವನೈಕರಾಮಾಭ್ಯುದಯಕ್ಕೆ ಸಂಬಂಧಿಸಿರಬಹುದು. ಭುನೈಕರಾಮ ಬಿರುದಿನ ಅರಸ (ರಾಷ್ಟ್ರಕೂಟ ಕೃಷ್ಣ III)ನೊಬ್ಬನು ಸಮಸ್ತ ಭಾರತವನ್ನು ಗೆದ್ದು, ಕಬ್ಬಿಗನಿಗೆ (ಪೊನ್ನನಿಗೆ?) 'ನೆಲ'ವನ್ನು ನೀಡಿದನೆಂದು ಈ ಪದ್ಯದ ಅರ್ಥ. ಪೊನ್ನನಿಗೆ ದಾನವಾಗಿ ನೀಡಿದ ಈ 'ನೆಲ' ಯಾವ ಪ್ರದೇಶದ್ದು? ಅದರ ಸ್ವರೂಪವೇನು? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಈಗ ಸಾಕಷ್ಟು ಆಧಾರಗಳಿಲ್ಲ. ಇದೇ ರೀತಿ ಪಂಪನು 'ಅಗ್ರಹಾರ'ವನ್ನು ರನ್ನನು 'ಬತ್ತಗಾವೆ'ಯನ್ನು ಪಡೆದಿರುವರು. ಇವುಗಳನ್ನು ಕುರಿತು ಇಲ್ಲಿ ವಿವೇಚಿಸಬಹುದು.

ಬಹುದಿನಗಳಿಂದ ನಡೆದ 'ಅಗ್ರಹಾರ'ವನ್ನು ಕುರಿತ ಚರ್ಚೆ ಆತ್ಯಂತಿಕವಾಗಿ ಬಗೆಹರಿಯದಿದ್ದರೂ, ಈಗಿನ ಪರಿಸ್ಥಿತಿಯಲ್ಲಿ ಅದನ್ನು ಹೀಗೆ ಅರ್ಥೈಸಬಹುದು. ಶ್ರೇಷ್ಠರ ಸ್ಥಳ (ಅಗ್ರ=ಶ್ರೇಷ್ಠ+ಆಹಾರ=ಸ್ಥಳ) ಎಂಬ ಅರ್ಥದ 'ಅಗ್ರಾಹಾರ' ಪದದಿಂದ 'ಅಗ್ರಹಾರ' ರೂಪತಾಳಿದೆ. ಒಂದು ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನವಾಗಿ ಕೊಡುತ್ತಿದ್ದರು. ಹೀಗೆ ದಾನ ಪಡೆದ ಬ್ರಾಹ್ಮಣರೇ ಆ ಅಗ್ರಹಾರದ ಮಹಾಜನರು. ಅಲ್ಲಿ ಬೇರೆ ಜಾತಿಯವರೂ ಇರಬಹುದು. ಆದರೆ ಊರಿನ ಸುಂಕರೂಪದ ಉತ್ಪನ್ನ ಹೋಗುವುದು ಅರಸು ಭಾಂಡಾರಕ್ಕಲ್ಲ, ಈ ಮಹಾಜನರಿಗೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಅಗ್ರಹಾರವನ್ನು ಬ್ರಾಹ್ಮಣರಿಗೇ ಕೊಡಬೇಕು. ಅದು ಜಾತಿ ಗೌರವದ ಪ್ರಶ್ನೆ. ಆದರೆ ಜಾತಿಯಿಂದ ಜೈನನಾದ ಪಂಪನು 'ಧರ್ಮಪುರ' ಹೆಸರಿನ ಒಂದು ಅಗ್ರಹಾರವನ್ನು ಪಡೆದನೆಂದು-

ಬೀರದಳವಿಯ ನನ್ನಿಯ ಚಾಗದ ಶಾಸನಂ ಚಂದ್ರಾರ್ಕತಾರಂಬರಂ ।
ಮೇರು ನಿಲ್ವಿನಂ ನಿಲವೇಳ್ಕುಂ ಕಾವ್ಯಕ್ಕೆ ತಾನಿತ್ತ ಶಾಸನದಗ್ರಹಾರಂ ।

---

೧. ಪಂಪಭಾರತ ೧೪-೫೬. ("ತಾಂ ಶಾಸನ(ದಿನ್ದಂ ಸಾರ)ಮೆಂಬಂತಿರೆ ನಿಲಿಸಿದಂ" ಎಂಬ ಬೋದನಗ್ರಾಮದ ಶಾಸನದಲ್ಲಿಯ 'ಸಾರ' ಪದವನ್ನೂ ಈ ಪದ್ಯದಲ್ಲಿಯ 'ಸಾರ' ಪದವನ್ನೂ ಗಮನಿಸಿರಿ.)

ಸಾರಮೆಂಬಿನಂ ಪೆಸರಿಟ್ಟು ತಾನೀಯೆ ಹರಿಗನ ಧರ್ಮಭಂಡಾರದಂತೆ ।
ಸಾರಮಾದುದು ಬಿಟ್ಟಗ್ರಹಾರಮಾ ಬಚ್ಚೆಸಾಸಿರದೊಳಂ ಧರ್ಮಪುರಂ ॥[೧]

ಎಂಬ ಪದ್ಯವನ್ನವಲಂಬಿಸಿ ಹೇಳುತ್ತಾರೆ. ಅರ್ಥದೃಷ್ಟಿಯಿಂದ ಕ್ಲಿಷ್ಟವಾಗಿರುವ ಈ ಪದ್ಯದಿಂದ, ಒಂದು ಊರನ್ನು ಅಗ್ರಹಾರವಾಗಿಸಿ ಬ್ರಾಹ್ಮಣರಿಗೆ ಕೊಡುವಂತೆ ಜೈನನಾದ ಪಂಪನಿಗೆ ಕೊಟ್ಟರೆ? ಹಾಗೆ ಕೊಡಲು ಬರುತ್ತದೆಯೇ? ಅಥವಾ ಈ ಮೊದಲು ಬ್ರಾಹ್ಮಣರ ಅಗ್ರಹಾರವಾಗಿದ್ದ ಒಂದು ಊರನ್ನು (ಹೆಸರು?) ಅವರಿಂದ ಬಿಡಿಸಿ ಪಂಪನಿಗೆ ನೀಡಿದರೆ? ಧರ್ಮಪುರವೆಂಬುದು ಊರಿನ ಅಂಕಿತನಾಮವೇ? ಅಥವಾ ಅಗ್ರಹಾರದಂತಹ ಬೇರೊಂದು ಪಾರಿಭಾಷಿಕ ಪದವೇ? ಎಂಬ ಸಂದೇಹಗಳು ಹುಟ್ಟುತ್ತಿದ್ದು, 'ಅಗ್ರಹಾರ' 'ಧರ್ಮಪುರ' ಈ ಶಬ್ದಗಳ ಮೇಲೆ ಒತ್ತುಕೊಟ್ಟು ಇಲ್ಲಿ ಎರಡು ವಿಚಾರಗಳನ್ನು ಮಂಡಿಸಬಹುದು.

೧.ಪಂಪನಿಗೆ ಒಂದು ಊರನ್ನು ಅಗ್ರಹಾರವೆಂದು ಕೊಡಲಾಯಿತೆಂದು ವಿದ್ವಾಂಸರ ಅಭಿಪ್ರಾಯ. ಆದರೆ ಜಾತಿಯಿಂದ ಜೈನನಾದ ಪಂಪನಿಗೆ ಅಗ್ರಹಾರ ನೀಡಿರಲು ಸಾಧ್ಯವೆ? ಎಂಬ ಮೂಲಭೂತ ಸಂದೇಹ ಹುಟ್ಟುತ್ತದೆ. ಮೇಲಾಗಿ ಜೈನರಿಗೆ ಅಗ್ರಹಾರ ನೀಡಿದ ಇಂಥ ಬೇರೆ ಉದಾಹರಣೆಗಳು ಎಲ್ಲಿಯೂ ಲಭಿಸಿಲ್ಲ. ಈ ಪ್ರಸಂಗದಲ್ಲಿ, ಪಂಪನು ಮೂಲತಃ ಬ್ರಾಹ್ಮಣನೆಂದೋ, ಜೈನ ಬ್ರಾಹ್ಮಣನೆಂದೋ ಒಂದು ಊರನ್ನು ಅಗ್ರಹಾರವಾಗಿ ಕೊಟ್ಟಿರಬಹುದೆಂದು ಇದಕ್ಕೆ ಸಮಾಧಾನ ಹೇಳಬಹುದಾದರೂ ಕರ್ನಾಟಕದ ಅಗ್ರಹಾರಗಳ ಇತಿಹಾಸದಲ್ಲಿ ಇದೊಂದು ಅಪೂರ್ವ ಉದಾಹರಣೆಯೆನ್ನಬೇಕಾಗುತ್ತದೆ.

೨.'ಅಗ್ರಹಾರ'ವೆಂದು ಘೋಷಿಸದೆ, ಕೇವಲ ದಾನವಾಗಿ ಕೊಟ್ಟ ಗ್ರಾಮಕ್ಕೆ 'ಧರ್ಮಪುರ'ವೆಂದು ಕರೆದ ಕೆಲವು ಉಲ್ಲೇಖಗಳಿವೆ. "... ಉತ್ತರಾಯಣ ಸಂಕ್ರಮಣದಂದು ಆರಿದವಾಳಿಕೆಯ ತೊಗರವಾಡಿಯಂ, ಮನ್ನೆಯ ಬೂವನಹಳ್ಳಿ ಒಳಗಾದ ಹಳ್ಳಿಗಳು ಸಹಿತ ಧರ್ಮಪುರವೆಂಬ ಹೆಸರು ಮಾಡಿ ಶ್ರೀಕೇಶವೇಶ್ವರಂಗಭೋ...ಕ್ಕಂ...ಸಲುವಂತನಾಗಿ....ಅಲ್ಲಿಯ ಶ್ರೀಧರೆಯನ ಕೈಯಲು ಶ್ರೀನಾರಸಿಂಹದೇವನು... ಕೊಟ್ಟ ದತ್ತಿ..."[೨]

ಈ ಹಿನ್ನೆಲೆಯಲ್ಲಿ ನೋಡಿದರೆ ಬ್ರಾಹ್ಮಣನಲ್ಲದ ಪಂಪನಿಗೆ ಒಂದು ಊರನ್ನು ಅಗ್ರಹಾರವಾಗಿಸಿ ಕೊಡಲು ಬಾರದ ಕಾರಣ[೨ಅ] ಧರ್ಮಪುರವಾಗಿಸಿ ಕೊಟ್ಟಿರಬಹುದೆನಿಸುತ್ತದೆ. ಇದು ನಿಜವಿದ್ದರೆ ಈ ಮೊದಲು ಅಗ್ರಹಾರ'ವಾಗಿದ್ದ ಒಂದು ಗ್ರಾಮವನ್ನು ಪಂಪನಿಗೆ 'ಧರ್ಮಪುರ'ವಾಗಿಸಿ ಕೊಟ್ಟರೆಂದು ಮೇಲಣ ಪದ್ಯಕ್ಕೆ ಅರ್ಥ ಹಚ್ಚಬೇಕಾಗುತ್ತದೆ. ಇದರ ಮೂಲ ಹೆಸರು ಏನಿತ್ತೊ ಗೊತ್ತಿಲ್ಲ. ಮುಂದೆ ಧರ್ಮಪುರವೆಂಬ ಈ ಪಾರಿಭಾಷಿಕ ಪದವೇ ಅದರ ಅಂಕಿತನಾಮವಾಗಿ ಬಳಕೆಗೊಂಡಿರಬಹುದು.[೩]

---

೨. E.C.IV ಹುಣಸೂರ ೧೩೭. ಧರ್ಮಾಪುರ

೨ಅ. ಆಂಧ್ರಪ್ರದೇಶದಲ್ಲಿ ವೈಶ್ಯರಿಗೂ ಅಗ್ರಹಾರ ನೀಡಿದ ನೀಡಿದ ಉದಾಹರಣೆಗಳಿವೆಯೆಂದು ತಿಳಿದುಬಂದಿದೆ. ಆದರೆ ಇದು ಪಂಪನಷ್ಟು ಪ್ರಾಚೀನವೇ? ನೋಡಬೇಕು. ಅದೇನೇ ಇದ್ದರೂ ಅಗ್ರಹಾರವನ್ನು ಬ್ರಾಹ್ಮಣರಿಗೆ ಮಾತ್ರ ನೀಡಬೇಕೆಂಬುದು ಮೂಲ ತಿಳುವಳಿಕೆ ಎಂಬುದನ್ನು ಮರೆಯುವಂತಿಲ್ಲ.

೩. ಕೆಲವು ಊರುಗಳಿಗೆ ಈಗಲೂ 'ಅಗ್ರಹಾರ' 'ಶಿವಪುರ' ಎಂಬ ಹೆಸರುಗಳು ಇರುವುದನ್ನೂ ಗಮನಿಸಬೇಕು.

ಇನ್ನೂ ಆಧಾರಗಳನ್ನು ಬಯಸುವ ಊಹೆಗಳಿವು.[೪] ಇವುಗಳ ಹಿನ್ನೆಲೆಯಲ್ಲಿ ಪಂಪನ ದತ್ತಿಗ್ರಾಮದ ಸ್ವರೂಪವನ್ನು ನಿರ್ಣಯಿಸುವುದು ವಿದ್ವಾಂಸರಿಗೆ ಬಿಟ್ಟ ವಿಷಯ. ಈ ಪ್ರಸಂಗದಲ್ಲಿ 'ಜಿನೇಂದ್ರಧರ್ಮಮೆ ವಲಂ ದೊರೆ ಧರ್ಮದೊಳ್' ಎಂದು ನಂಬಿದ ಪರಮಜಿನಭಕ್ತ ಪಂಪನು "ತನ್ನಧ್ವರಧೂಮದೆ ಕರಿದು ಮಾಡಿದಂ ನಿಜಯಶಮಂ" ಎಂದು ಯಜ್ಞವನ್ನು ತಿರಸ್ಕರಿಸಿದ್ದರೂ ಆತನ ಧರ್ಮಪುರವು-

ದೆಸೆಮುಖಧೂಮದಿಂ ದ್ವಿಜರ ಹೋಮದಿನೊಳ್ಗಿಳಿ ಹಂಸಕೋಕ ಸಾ।
ರಸ ಕಳನಾದದಿಂದೊಳಗೆ ವೇದಧ್ವನಿನಾದದಿನೆತ್ತಮುಯ್ವ ಘೋ।
ಭಿಸಿ ಸುರಮಥ್ಯಮಾನ ವನಧಿಕ್ಷುಭಿತಾರ್ಣವ ಘೋಷದಂತೆ ಘೂ।
ರ್ಣಿಸುತಿರ(ಲೀ) ಗುಣಾರ್ಣವನ ಧರ್ಮದ ಧರ್ಮವುರಂ ಮನೋಹರಂ ||[೫]

ಹೀಗೆ ಯಜ್ಞಧೂಮ, ವೇದಘೋಷಗಳಿಂದ ಕೂಡಿ ಬ್ರಾಹ್ಮಣರ ಪರಿಪೂರ್ಣ ಅಗ್ರಹಾರವೆಂಬಂತೆಯೇ ಶೋಭಿಸುತ್ತದೆ. ಹೀಗಾಗಿ ಜೈನನಾದ ಪಂಪನು ಪಡೆದ ಗ್ರಾಮದಲ್ಲಿಯ ಈ ವೈಭವಪೂರ್ಣ ಬ್ರಾಹ್ಮಣ ಆಚರಣೆಗಳು (ಜೈನ ಆಚರಣೆಗಳ ಸೂಚನೆಯಿಲ್ಲದೆ) ಸೋಜಿಗವನ್ನುಂಟು ಮಾಡುತ್ತವೆ.

* * *

ಪಂಪನು 'ಅಗ್ರಹಾರ'ವನ್ನು ಇಲ್ಲವೆ 'ಧರ್ಮಪುರ'ವನ್ನು ಪಡೆದರೆ ರನ್ನ ಪಡೆದುದು 'ಬತ್ತಗಾವೆ'ಯನ್ನು.

ಮದನಾವತಾರಮಂ ಕನ।
ಕದಂಡ ಚಾಮರಮನುನ್ನದೇಭಮನುತ್ತುಂ।
ಗದ ಬತ್ತಗಾವೆಯಂ ಪಡೆ।
ದುದಾತ್ತ ಕವಿತಿಲಕನೆನಿಸಿದಂ ಕವಿರತ್ನಂ||[೬]

ಅಜಿತಪುರಾಣದ ಈ ಪದ್ಯದಿಂದ ರನ್ನನು ಮದನಾವತಾರವೆಂಬ ಅಪೂರ್ವ ಛತ್ರ, ಚಿನ್ನದ ಹಿಡಿಕೆಯುಳ್ಳ ಚಾಮರ, ಶ್ರೇಷ್ಠವಾದ ಆನೆ, ಸುಪ್ರಸಿದ್ಧ ಬತ್ತಗಾವೆ -ಇವುಗಳನ್ನು ಪಡೆದಿದ್ದನೆಂದು ತಿಳಿದುಬರುತ್ತದೆ. ಈ

---

೪. ಬ್ರಾಹ್ಮಣರಿಗೆ ಕೊಡುವ ಗ್ರಾಮಕ್ಕೆ 'ಅಗ್ರಹಾರ', ಶೈವರಿಗೆ ಕೊಡುವ ಗ್ರಾಮಕ್ಕೆ 'ಶಿವಪುರ' ಎಂಬ ಪರಿಭಾಷೆಗಳನ್ನು ಬಳಸುವಂತೆ ಮಿಕ್ಕವರಿಗೆ (ಜೈನರಿಗೆ) ಕೊಡುವ ಗ್ರಾಮಕ್ಕೆ 'ಧರ್ಮಪುರ' ಎಂಬ ಪರಿಭಾಷೆಯನ್ನು ಪ್ರಾಚೀನ ಕಾಲದಲ್ಲಿ ಬಳಸುತ್ತಿರಬಹುದೇ? ಇಂತಹ ಬೇರೆ ಉದಾಹರಣೆಗಳು ಲಭಿಸುವುದಿಲ್ಲವಾದುದರಿಂದ ಇಲ್ಲಿಯೇ ಅಂಥ ಪರಿಭಾಷೆಯನ್ನು ಬಳಸಲು ಮೊದಲು ಮಾಡಿರಬಹುದೇ? ಎಂದು ಊಹಿಸಿದ ಪಕ್ಷದಲ್ಲಿ, ಧರ್ಮಪುರವೆಂಬುದು ಅಂಕಿತನಾಮವಲ್ಲ. ಕೇವಲ ದಾನವಾಗಿ ಕೊಟ್ಟ ಗ್ರಾಮಕ್ಕೆ ಹೇಳುವ ಪಾರಿಭಾಷಿಕ ಪದವಲ್ಲ, ಜೈನರ (?) ಅಗ್ರಹಾರವನ್ನು ಸೂಚಿಸುವ ಹೊಸ ಪಾರಿಭಾಷಿಕ ಪದವೆನ್ನಬೇಕಾಗುತ್ತಿದೆ. ಈ ಊಹೆಗೆ ಆಧಾರಗಳು ಬೇಕು.

೫. ಪಂಪಭಾರತ ೧೪-೫೬.

೬. ಅಜಿತಪುರಾಣ ೧೨-೫೧.

ಬತ್ತಗಾವೆಯೆನ್ನುವುದು (ಮಡಗಾಂವ, ವಡಗಾಂವಗಳಂತೆ ಇದು ಬತ್ತಗಾಂವ) ಒಂದು ಊರ ಹೆಸರಾಗಿರಬಹುದೆಂದು ವಿದ್ಯಾರ್ಥಿಯಾಗಿರುವಾಗ ನನ್ನಷ್ಟಕ್ಕೆ ಭಾವಿಸಿದ್ದೆನು. ಮುಂದೆ ಡಾ. ಡಿ.ಎಲ್.ಎನ್. ಅವರ 'ಮದನಾವತಾರ'[೭] ಲೇಖನ ಕಣ್ಣಿಗೆ ಬಿದ್ದಿತು. ಮದನಾವತಾರ ಪದವನ್ನು ಮುಖ್ಯವಾಗಿ ಚರ್ಚಿಸುತ್ತ ಅವರು, ಆನುಷಂಗಿಕವಾಗಿ ಬತ್ತಗಾವೆಯೆಂದರೆ ನೆಲ್ಲು ಬೆಳೆಯುವ ಗ್ರಾಮ ಎಂದು ಅರ್ಥ ಹೇಳಿರುವರು. ನೆಲ್ಲು ರನ್ನನ ಜನ್ಮಪ್ರಾಂತವಾದ ಉತ್ತರಕರ್ನಾಟಕದ ಪ್ರಮುಖ ಬೆಳೆಯಲ್ಲ. ಮೇಲಾಗಿ ಊರ ಹೆಸರನ್ನು ಮುಚ್ಚಿಟ್ಟು ನೆಲ್ಲು ಬೆಳೆಯುವ ಗ್ರಾಮವನ್ನು ಪಡೆದೆನೆಂದು ಹೇಳುವಲ್ಲಿಯೂ ಅಂಥ ಔಚಿತ್ಯವಿಲ್ಲ. ಹೀಗಾಗಿ ಇವರ ಅರ್ಥ ನನಗೆ ಸಮ್ಮತವೆನಿಸದೆ ಇದು ಊರ ಹೆಸರಾಗಿರಬಹುದು, ಇಲ್ಲವೆ ಇದಕ್ಕೆ ಬೇರೊಂದು ಅರ್ಥವಿರಬಹುದು ಎಂಬ ಅಂಶ ನನ್ನ ಮನದಲ್ಲಿ ಉಳಿದುಕೊಂಡಿದ್ದಿತು, ಕೆಲವು ವರ್ಷಗಳ ಹಿಂದೆ ಶಾಸನಗಳನ್ನು ಓದುತ್ತಿರುವಾಗ ಅಲ್ಲಿ 'ಬತ್ತಗ್ರಾಮ' ಎಂಬ ಪದ ನನ್ನ ಗಮನಕ್ಕೆ ಬಂದು, ಇದಕ್ಕೂ ರನ್ನನ ಬತ್ತಗಾವೆಗೂ ಏನೋ ಸಂಬಂಧವಿರಬಹುದೆಂದು ಆಲೋಚಿಸುತ್ತಿರುವಲ್ಲಿ ಡಾ. ಪಿ.ಬಿ. ದೇಸಾಯಿ ಅವರ 'Epigraphical discoveries' ಎಂಬ ಲೇಖನ ನನ್ನ ಗಮನಕ್ಕೆ ಬಂದಿತು.[೮] ಅವರು ಲಿಂಗಸಗೂರು, ಹೂಣಸೀಹಡಗಲಿ, ಸಿರಗುಪ್ಪಾ, ಸೂಡಿ ಶಾಸನಗಳಲ್ಲಿ ಬರುವ

"ಶ್ರೀಮದಬ್ಬಲದೇವಿಯರು ಕರಡಿಕಲ್ಲಾನೂಱಱ ಬಟಿಯ ಬತ್ತಗ್ರಾಮಂ ಲಿಂಗಮನಾಳಿತ್ತಮಿರೆ"[೯]

"ಶ್ರೀಮತ್ ಪಿರಿಯರಸಿ ಚಂದಲದೇವಿಯರು ಅಲಂದೆಸಾವಿರ ಪ್ರಮುಖವನೇಕ ಬತ್ತಗ್ರಾಮಂಗಳುಮಂ... ಅರಸುಗೆಯ್ಯುತ್ತಮಿರೆ"[೧೦]

"ಶ್ರೀಮದಭಿನವಸರಸ್ವತಿ ಪಿರಿಯ ಕೇತಲದೇವಿಯರು ಭಲ್ಲಕು xxx ನೂಱಱ ಬಟಿಯ ತೆಕ್ಕೆಕಲ್ಲ ಪನ್ನೆಱಡಱೊಳಗಣ ಸಿರಗುಪ್ಪೆxxxರ ಕೊಳನೂರಂತು..."[೧೧]

ಶ್ರೀಮತ್ರಿಭುವನಲ್ಲxx ಪಾದಾಬ್ಜಬ್ರಿಂಗಂ ಶ್ರೀ ಮನ್ಮಹಾಮಣ್ಡಳೇಶ್ವರಂ ತ್ರಿಭುವನ ಮಲ್ಲ ಪಾಂ(ಡ್ಯರು)ಸರು ಕುತ್ತುಂಭಿತ್ತಿ ಭತ್ತಗ್ರಾಮೆ xx...xx ರಾಜ್ಯಂಗೆಯ್ಯುತ್ತಿರೆ xxx.... ರೊಳಗಣ ಭತ್ತಗ್ರಾಮೆ xx ....xx ಪ್ರತಿಪಾಟಿ..."[೧೨]

---

೭. ಮದನಾವತಾರ-ಪ್ರ. ಕ ೩೮-೪.

೮. The Quarterly Journal of the Mythic Society, Volume: XLIX No. 2. 1959.

೯. A Corpus of Inscriptions in the Kannada Districts of Hyderabad State No.9. A.D. 1124.

೧೦. Bom. Gaz. Vol. I-II p.485. A.D. 1098.

೧೧. SII. IX-I No. ೧೫೯, ಚಾಳುಕ್ಯ ವಿಕ್ರಮನ ೧೬ನೆಯ ವರ್ಷ.

೧೨. SII IX-I. No. 167. A.D. 1102.

"(ನಾಗದೇವನೆಂಬುವನು) ಬಾಳ್ಗುಳಿ ಕಾರಿಟ್ಟಗೆ ಮೊದಲಾಗೆ ಪಲವು ಬತ್ತಗ್ರಾಮೆಗಳುಮಂ.... ಪ್ರತಿಪಾಳನಂಗೆಯ್ದು..."[೧೩]

ಎಂಬ ವಾಕ್ಯಗಳನ್ನೂ, ರೋಣ ಶಾಸನದಲ್ಲಿ ಬರುವ 'ಭತ್ತಾಯ' ಎಂಬ ಪದವನ್ನೂ, ಕುಕ್ಕನೂರು ಶಾಸನದಲ್ಲಿಯ 'ಭತ್ತಾಯ', 'ಸಿದ್ಧಾಯ' ಎಂಬ ಪದಗಳನ್ನೂ ಮುಂದಿಟ್ಟುಕೊಂಡು ಈ ಪದದ ವಿವೇಚನೆ ಮಾಡಿದ್ದಾರೆ. 'ಬೇಯಿಸಿದ ಅಕ್ಕಿ' ಅರ್ಥದ 'ಭಕ್ತ' ಎಂಬ ಸಂಸ್ಕೃತಪದದಿಂದ ಕನ್ನಡದ 'ಭತ್ತ' ರೂಪ ತಾಳಿರುವುದರಿಂದ, ಶಾಸನಗಳಲ್ಲಿ ಬರುವ 'ಭತ್ತಗ್ರಾಮ'ವೆಂದರೆ ಭತ್ತ ಬೆಳೆಯುವ ಗ್ರಾಮ ಎಂಬ ಅರ್ಥ ಮಾಡಲು ಆತುರ ಹುಟ್ಟುವುದಾದರೂ, ಮೇಲೆ ಹೇಳಿದ ಕೆಲವು ಗ್ರಾಮಗಳಲ್ಲಿ ಭತ್ತ ಬೆಳೆಯುವುದೇ ಇಲ್ಲ. ಅಲ್ಲದೆ ಕೇವಲ ಭತ್ತ ಬೆಳೆಯುವ ಗ್ರಾಮಗಳನ್ನೇ ಆರಿಸಿಕೊಂಡು ಆಳಿದರು ಎಂಬ ಅರ್ಥವೂ ಸರಿಹೊಂದುವುದಿಲ್ಲ. ಅದಕ್ಕಾಗಿ ಈ ಅರ್ಥ ಅಸಮಂಜಸ. ಸಂಸ್ಕೃತದ ಭಜ್ (To obtain as one's share, enjoy, to allot) ಧಾತುವಿನ ಭೂತನ್ಯೂನರೂಪವಾದ 'ಭಕ್ತ' ಎಂಬುದು ಮುಂದೆ ಭತ್ತ ಎಂದಾಗಿದೆ. ಸ್ವಂತ ಉಪಭೋಗಕ್ಕೆ ಮೀಸಲಾಗಿರುವ ಪಾಲು, ಆಸ್ತಿ ಎಂದು ಇದರ ಅರ್ಥ. ಹೀಗಾಗಿ ಭತ್ತ ಗ್ರಾಮವೆಂದರೆ ಸ್ವಂತ ಉಪಭೋಗಕ್ಕೆ ಪಡೆದ ಗ್ರಾಮ ಅಂದರೆ ಈಗಿನ ಅರ್ಥದಲ್ಲಿ ಇನಾಮ ಅಥವಾ ಜಹಗೀರು ಗ್ರಾಮ ಎಂಬುದು ಶ್ರೀ ದೇಸಾಯಿ ಅವರ ಅಭಿಪ್ರಾಯ.

ಶ್ರೀ ದೇಸಾಯಿ ಅವರು ವಿವೇಚಿಸಿದ ಶಾಸನೋಕ್ತ ಭತ್ತಗ್ರಾಮ ಮತ್ತು ರನ್ನ ಹೇಳಿದ ಅಜಿತಪುರಾಣೋಕ್ತ ಬತ್ತಗಾವೆಗಳು ಸಮಾನಾರ್ಥಕ ಪದಗಳೆಂಬುದು ಸ್ಪಷ್ಟ. ಹಾಗಿದ್ದ ಪಕ್ಷದಲ್ಲಿ ಶ್ರೀ ಡಿ.ಎಲ್.ಎನ್. ಹೇಳುವಂತೆ ರನ್ನನು ಭತ್ತ ಬೆಳೆಯುವ ಗ್ರಾಮವನ್ನು ಪಡೆದನೆನ್ನುವುದಕ್ಕಿಂತ ಒಂದು ಗ್ರಾಮವನ್ನು ಇನಾಮ ಇಲ್ಲವೆ ಜಹಗೀರ ರೂಪದಲ್ಲಿ ಪಡೆದನೆನ್ನಬೇಕಾಗುತ್ತದೆ. ಇಷ್ಟು ವಿವೇಚನೆಯ ಹಿನ್ನೆಲೆಯಲ್ಲಿ ಎರಡು ಹೊಸ ಊಹೆಗಳನ್ನು ಮಾಡಬಹುದು.

---

೧೩. EI XV. P. ೮೮. A.D. ೧೦೬೦. ಇಂಥ ಇನ್ನೂ ಕೆಲವು ಉದಾಹರಣೆಗಳನ್ನು ಇಲ್ಲಿ ಹೀಗೆ ಸಂಗ್ರಹಿಸಬಹುದು:

ಅ) "..... ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಳಿದೇವರು ....ಮಾಸವಾಡಿಯೊಳಗಣ ಭತ್ತಗಾವೆ ಪಂಚಗ್ರಾಮಮಂ ....ಆಳುತ್ತಮಿರೆ......."(SII.IX-i, ೮೮ A.D. ೧೦೩೪ ಚಿಮ್ಮಹಳ್ಳಿ)

ಆ) "ಗಣ್ಡರಾದಿತ್ಯರಸರ್ ಸಿನ್ದವಾಡಿ ಸಾಸಿರಮಂ ಬೆಣ್ಣೆವೂರ್ ಪನ್ನೆರಡುಮುಂ ತಂಮ ಭತ್ತಗಾಮೆ ನಜುಗುನ್ದಮಂ ..... ರಾಜ್ಯಂಗೆಯುತ್ತಮಿರೆ "(SII IX-i, ೧೦೫. A.D. ೧೦೪೭, ಕಂಚಗಾರ ಬೆಳಗಲ್ಲು)

ಇ) "ಶ್ರೀಮತ್ತರ್ದವಾಡಿ ನಾಡ ಬಳಿಯ ಭತ್ತಗ್ರಾಮ ಕನ್ನವಳ್ಳಿಯ
ಪ್ರಭುಗಳುಂ ... "(SII.XX. ೧೪೦. A.D. ೧೧೬೪ ಕನ್ನೊಳ್ಳಿ)

ಈ) ".......ತರ್ದ್ದವಾಡಿ ಸಾಸಿರದೊಳಗಣ (ಮುಂ)ಬಾಡದ ಬಳಿಯ ಬತ್ತಗ್ರಾಮ
ಹೊಂನವಾಡಿ[ಯೊ]ಳೆಯ.....(XI-i, ೮೩, A.D. ೧೦೪೯. ಬಾಗೇವಾಡಿ).

ಉ) "ಶ್ರೀಮತು ಮೈಳಲದೇವಿಯರ್ ಬತ್ತಗ್ರಾಮ ಕುಣಿಲಂಗೇಜಿಯಂ ಆಳುತ"

ಊ) "........ಮೈಳಲದೇವಿಯರು ತಮ್ಮಾಳ್ಕೆ ಭತ್ತಗ್ರಾಮ ಕುಣಿಲಂಗೇಜಿಯ..."
".....ಶ್ರೀಮತು ಮೈಳಲದೇವಿಯರು ತಮ್ಮೊಳ್ಕೆ ಭತ್ತಗ್ರಾಮ ಕುಣಿಲಂಗೇಜಿ....."
(ಕೊನೆಯ ಮೂರು ಶಾಸನಗಳು ಕಲಬುರ್ಗಿ ಜಿಲ್ಲೆಯ ಕುಳಗೇರಿ ಗ್ರಾಮಕ್ಕೆ ಸಂಬಂಧಿಸಿದವು.. ಅಪ್ರಕಟಿತ))

೧.'ಭತ್ತಗಾವೆ' ಎನ್ನುವುದು ಗ್ರಾಮುಗಳಿಗೆ ಹೇಳುವ 'ಅಗ್ರಹಾರ'ದಂಥ ಒಂದು ಪಾರಿಭಾಷಿಕ ಪದ. ಆದರೆ ಬ್ರಾಹ್ಮಣರ ಉಪಭೋಗಕ್ಕೆ ಕೊಟ್ಟ ಗ್ರಾಮ 'ಅಗ್ರಹಾರ' ಕುಲಭೇದವಿಲ್ಲದೆ ಯಾರೊಬ್ಬರ ಉಪಭೋಗಕ್ಕೆ ಕೊಟ್ಟ ಗ್ರಾಮ 'ಬತ್ತಗಾವೆ'. (ಪಂಪನು ಜೈನಬ್ರಾಹ್ಮಣನೆಂದು ಅಗ್ರಹಾರ ಕೊಟ್ಟರೆ, ರನ್ನನು ಜೈನವೈಶ್ಯನೆಂದು ಬತ್ತಗಾವೆ ಕೊಟ್ಟಿರಬಹುದೇ?).

೨.ಸಾಮಾನ್ಯವಾಗಿ ಹಳೆಯ ಮೈಸೂರು ಪ್ರದೇಶದ ಶಾಸನಗಳಲ್ಲಿ ಬತ್ತಗಾವೆ ಪದ ಕಂಡುಬರದೆ[೧೪] ಉತ್ತರಕರ್ನಾಟಕದ ಶಾಸನಗಳಲ್ಲಿ ಮಾತ್ರ ವಿಶೇಷ ಕಂಡುಬರುತ್ತದೆ. ಅದಕ್ಕಾಗಿ ರನ್ನನು ಮೈಸೂರುಪ್ರದೇಶವನ್ನಾಳಿದ ಗಂಗರ (ಚಾವುಂಡರಾಯ) ಆಶ್ರಯದಲ್ಲಿರುವಾಗ ಬತ್ತಗಾವೆಯನ್ನು ಪಡೆಯದೆ, ಉತ್ತರಕರ್ನಾಟಕವನ್ನಾಳಿದ ಕಲ್ಯಾಣಚಾಲುಕ್ಯ ಅರಸನಿಂದ (ತೈಲಪ) ಪಡೆದಿರಬೇಕು. ಇದು ಬಹುಶಃ ಸ್ವಗ್ರಾಮವಾದ ಮುಧೋಳದ ಸಮೀಪ, ಇಲ್ಲವೆ ಕಲ್ಯಾಣ ಚಾಲುಕ್ಯರ ರಾಜಧಾನಿಗಳಾದ ಮಾಳಖೇಡ(?), ಯಾತಗಿರಿ, ಪೊಟ್ಟಲಕೆರೆ, ಕಲ್ಯಾಣಗಳ ಸಮೀಪ ಇರಬಹುದು.

ಇಷ್ಟಾಗಿಯೂ ರನ್ನನು ತಾನು ಪಡೆದ ಬತ್ತಗಾವೆ (ಇನಾಮಗ್ರಾಮ)ಯ ಹೆಸರನ್ನು ಹೇಳದುದು ಕುತೂಹಲವನ್ನು ಹುಟ್ಟಿಸುತ್ತದೆ. ಈ ಬತ್ತಗಾವೆಯನ್ನು ಹುಡುಕಿದಲ್ಲಿ, ರನ್ನನಿಗೆ ಸಂಬಂಧಿಸಿದ ಶಾಸನ ಮೊದಲಾದವು ದೊರೆತು, ಹೊಸ ವಿಷಯಗಳು ಬೆಳಕಿಗೆ ಬರಬಹುದು.

■■

ಆಕರ : ಮಾರ್ಗ ಸಂಪುಟ-೫

---

೧೪. " ಪದಿನೆಂಟು ಭಕ್ತಗ್ರಾಮಂಗಳಂ ......"MAR, ೧೯೩೦. ಶಿಕಾರಿಪುರ ತಾಲೂಕ, ಪು. ೨೩೪. ೧೦೮೦. "ಭತ್ತಕ್ಕೆ ಬಿಡಿಸಿ.... ಬತ್ತನೂಟ" MAR ೧೯೩೨ ಪು. ೧೭೨. ಹೀಗೆ ಒಂದೆರಡು ಉದಾಹರಣೆಗಳು ಮಾತ್ರ ಮೈಸೂರುಪ್ರದೇಶದ ಶಾಸನಗಳಲ್ಲಿ ಗೋಚರಿಸುತ್ತದೆ.

೧೭

ಶ್ರವಣಬೆಳ್ಗೊಳ ಶಾಸನದ ಮೇಲೆ ರನ್ನನ ಪ್ರಭಾವ

ಭಟ್ಟನಾರಾಯಣ, ಭಾಸ, ಬಾಣ ಮೊದಲಾದ ಪ್ರಾಚೀನಕವಿಗಳಿಂದ ಪ್ರಭಾವಿತನಾದ ರನ್ನನ ಪ್ರಭಾವ ಮುಂದಿನ ಆಮೇಲಿನ ಕವಿಸಾಹಿತ್ಯ ಮತ್ತು ಶಾಸನಸಾಹಿತ್ಯಗಳ ಮೇಲೆ ನಿಚ್ಚಳವಾಗಿ ಮೂಡಿನಿಂತಿದೆ. ಈ ಅಂಶವನ್ನು ತೀ.ನಂ.ಶ್ರೀ. ಅವರು ಲಕ್ಕುಂಡಿ ಶಾಸನ ಮತ್ತು ಅಜಿತಪುರಾಣಗಳ ಹೋಲಿಕೆಯಿಂದ ತೋರಿಸಿಕೊಟ್ಟುದು ಸರ್ವವಿಶ್ರುತ. ಅಂತಹ ಇನ್ನೊಂದು ಪ್ರಯತ್ನ ಈ ಲೇಖನ.

ಶ್ರವಣಬೆಳ್ಗೊಳ, ಜೈನರ ಒಂದು ಪುಣ್ಯಕ್ಷೇತ್ರ. ಇಲ್ಲಿಯ ಚಂದ್ರಗಿರಿ ರಾಜಮಹಾರಾಜರ ಯತಿ-ಮಹಾಪುರುಷರುಗಳ ಕೀರ್ತಿಶಾಸನಗಳಿಂದ, ಸಂದರ್ಶಕರ ಅಂಕಿತಶಾಸನಗಳಿಂದ ನಿಬಿಡಗೊಂಡಿದೆ. ಈ ಶಾಸನಗಳ ಮಾಲಿಕೆಯಲ್ಲಿ 'ಶ್ರೀ ಕವಿರತ್ನ' ಎಂಬ ರುಜು ಶಾಸನವೂ ಒಂದು.

ರನ್ನನೇ ಸ್ವಹಸ್ತದಿಂದ ಬರೆದಿರಬಹುದೆಂದು ಊಹಿಸಬಹುದಾದ ಈ ಹೆಸರು ಆತನ ಬೆಳ್ಗೊಳ ಸಂದರ್ಶನದ ಗುರುತಾಗಿದ್ದರೆ, ಅದೇ ಬೆಟ್ಟದ ಮೇಲಿನ ಬಾಹುಬಲಿ ಬಸದಿಯ [illegible] ಸಾವಿಯಬ್ಬೆಯೆಂಬ ಮಹಾಸಾಧ್ವಿಯ ಯುದ್ಧಮರಣವನ್ನು ಉದ್ಘೋಷಿಸುತ್ತ ನಿಂತಿರುವ ಒಂದು ವೀರಗಲ್ಲು, ಆತನ ಸಾಹಿತ್ಯ ಪ್ರಭಾವದ ದ್ಯೋತಕವಾಗಿದೆ.

ಆನೆಯ ಮೇಲೆ ಕುಳಿತು ಆಯುಧವನ್ನೆಸೆಯುತ್ತಿರುವ ವೈರಿಯನ್ನು ಕುದುರೆಯ ಮೇಲೆ ಕುಳಿತು ಎದುರಿಸುತ್ತಿರುವ ಸಾವಿಯಬ್ಬೆಯ ಚಿತ್ರದ ಕೆಳಗೆ - ಮೇಲೆ ಕೂಡಿ ೩೫ ಸಾಲುಗಳಲ್ಲಿ ಬರೆಯಲಾದ ಈ ಶಾಸನದ ಮೂರು ಪದ್ಯಗಳನ್ನು ರನ್ನನ ಪದ್ಯಗಳ ಮಗ್ಗುಲಲ್ಲಿಟ್ಟು ನೋಡಬಹುದು.

೧. ಶ್ರೀಯುವತಿಗೆ ನಿಜವಿಜಯ।
ಶ್ರೀಯುವತಿಯೆ ಸವತಿಯಾಗೆ ರಿಪುನೃಪರಂ ಶೌ।
ರ್ಯಾವಷ್ಟಂಬದೆ ಗೆಲ್ದ ಜ।
ಯಶಾವಸಥನಸಾಧ್ಯನಲ್ತೆ ಸಾಹಸಭೀಮಂ ॥

(ಗ.ಮು ೪-೧)

ಶ್ರೀಯುವತಿಗೆ ನಿಜವಿಜಯ।
ಶ್ರೀಯುವತಿಯೆ ಸವತಿಯೆನಿಸಿ ರಣಮೂರ್ಖನೃಪಾ।
ವ್ಯಾಯುಧದೊಳಾಯದ ಮೆಯ್ಗಲಿ।
[illegible]ಕನೆಂಬಂ ನೆಗೞ್ತೆಯಂ ಪ್ರಕಟಿಸಿದನ್।

(ಪ್ರಸ್ತುತ ಶಾಸನ)

ಈ ಎರಡು ಪದ್ಯಗಳಲ್ಲಿ ಮೊದಲಿನದು ಇರಿವಬೆಡಂಗನ, ಎರಡನೆಯದು ಸಾವಿಯಬ್ಬೆಯ ತಂದೆ ಬಾಯಿಕನ ಪರಾಕ್ರಮವನ್ನು ಕುರಿತುದಾಗಿದೆ. ಇಲ್ಲಿ ಎರಡನೆಯದರ ಮೊದಲ ಸಾಲು ಗದಾಯುದ್ಧದ ಪ್ರಭಾವವನ್ನು ಎತ್ತಿ ಹೇಳುತ್ತದೆ.

೨. ಶ್ರಾವಕ ಧರ್ಮದೊಳ್ ದೊರೆಯೆನಲ್ ಪೆಱರಿಲ್ಲೆನೆ ಸಂದ ರೇವತಿ।
ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ಶೀಲದೊಳ್।
ದೇವಕಿ ತಾನೆ ದಾನಗುಣದಿಂದೆ ಸುಲೋಚನೆ ತಾನೆಯೆಂದು ಭ।
ವ್ಯಾವಳಿ ಮೆಚ್ಚಿ ಬಣ್ಣಿಪುದು ಭವ್ಯ ಮನೋರಥ ಜನ್ಮಭೂಮಿಯಂ। (ಅಜಿ. ೧-೫೩)

ಶ್ರಾವಕ ಧರ್ಮದೊಳ್ ದೊರೆಯೆನಲ್ ಪೆಱರಿಲ್ಲೆನೆ ಸನ್ದ ರೇವತಿ।
ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ರೂಪಿನೊಳ್।
ದೇವಕಿ ತಾನೆ ಪೆಂಪಿನೊಳರುಂಧತಿ ತಾನೆ ಜಿನೇಂದ್ರ ಭಕ್ತಿ ಸ।
ದ್ಭಾವದೆ ಸಾವಿಯಬ್ಬೆ ಜಿನಶಾಸನದೇವತೆ ತಾನೆ ಕಾಣಿರೇ। (ಪ್ರಸ್ತುತ ಶಾಸನ)

ಅತ್ತಿಮಬ್ಬೆ, ಸಾವಿಯಬ್ಬೆಯರ ಉದಾತ್ತ ವ್ಯಕ್ತಿತ್ವದ ಸಮುದಾಯಶೋಭೆಯನ್ನು ಬಿಡಿಸಿ ಹೇಳುವ ಈ ಎರಡು ಪದ್ಯಗಳಲ್ಲಿ ಪೂರ್ವಾರ್ಧ ಒಂದೇ ಆಗಿದ್ದು, ಇದು ಅಜಿಪುರಾಣದ ಪ್ರಭಾವಕ್ಕೆ ನೇರ ನಿದರ್ಶನವೆನಿಸಿದೆ.

೩. ಈ ಶಾಸನದಲ್ಲಿ ಕೆಳಗಿನ ದೋಷಯುಕ್ತ ಮತ್ತು ತ್ರುಟಿತ ಬರವಣಿಗೆ ಕಂಡುಬರುತ್ತದೆ.

೨೪. ...ವೆತ್ತ
೨೫. ... ಯಬ್ಬೆ
೨೬. ಸಾಯಲೆನ್ದು
೨೭. ಪೆಂಡತಿಯೆ
೨೮. .... ವೊತ್ತ
೨೯. ಣ್ನಳೊಗಳೆ
೩೦. ಪಲರುಂ ತೊ
೩೧. ಲಗಿದ ರಾಯ
೩೨. ದ ಚಲಮ
೩೪. ಸಲ ಬಳಗಿ
೩೫. ಗಿನ್ದಿನಿಪ್ಪ
೩೫. ಣ್ಡತಿಯಿನ್

ಇಲ್ಲಿ ಸಂದರ್ಭಬಲದಿಂದ ೨೫ನೆಯ ಚರಣದ ಎರಡು ಅಕ್ಷರಗಳನ್ನು ತುಂಬಿಕೊಂಡು [ಸಾವಿ]ಯಬ್ಬೆಯೆಂಬ ಪಾಠವನ್ನು ಸಿದ್ಧಗೊಳಿಸಬಹುದು. ಆದರೆ ಮಿಕ್ಕ ಎರಡು ತ್ರುಟಿತಭಾಗ (ಚರಣ. ೨೪-೨೮)ಗಳನ್ನು ತುಂಬುವುದು ಇಷ್ಟು ಸುಲಭವಲ್ಲ. ಇದಕ್ಕೆ ಅಜಿತಪುರಾಣವನ್ನೇ ಮೊರೆಹೊಗಬೇಕು. ಅಲ್ಲಿಯ-

ಕಲಿಯೆನೆ ನೆಗಟ್ದಳ್ ಕಸವರ।
ಗಲಿಯೆನೆ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್।

ಮೊಲೆವೆತ್ತ ತೈಲಜನನಿಯ ।
ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್ । (ಅಜಿ. ಪು. ೧-೫೬)

ಈ ಪದ್ಯವನ್ನು ನೆನೆದ ಮಾತ್ರಕ್ಕೆ ಎರಡು ತ್ರುಟಿತಭಾಗಗಳ ಅಕ್ಷರ ಕಣ್ಮುಂದೆ ಸುಳಿದು ನಿಲ್ಲುತ್ತದೆ. ಈಗ ಶಾಸನದ ನಷ್ಟಭಾಗವನ್ನು ತುಂಬಿಕೊಂಡು, ಅದನ್ನು ಹೀಗೆ ಕಂದಗೊಳಿಸಬಹುದು :

[ಮೊಲ್ಲೆ]ವೆತ್ತ [ಸಾವಿ]ಯಬ್ಬೆ ಸಾ ।
ಯಲೆನ್ದು ಪೆಂಡತಿಯೆ [ಮೀಸೆ]ವೊತ್ತಣ್ಣಳೊಗಳೆ ।
ಪಲರುಂ ತೊಲಗಿದ ರಾಯದ ।
ಚಲಮಸಬಳಗೆಗನ್ದಿ ನಿಪ್ಪಣ್ಣಾತಿಯಿನ್ ।

ಈ ಕಂದಪದ್ಯ ಪಾಠದೋಷ, ಛಂದದೋಷಗಳಿಂದ ಕೂಡಿದ್ದು, ಇದನ್ನು ಶುದ್ಧಗೊಳಿಸುವುದು ನನಗೆ ಸಾಧ್ಯವಾಗಲಿಲ್ಲ.

ಈ ವರೆಗಿನ ವಿವೇಚನೆಯಿಂದ ಲಕ್ಕುಂಡಿ ಶಾಸನವನ್ನು ಬಿಟ್ಟರೆ ರನ್ನನಿಂದ ಅಧಿಕ ಪ್ರಭಾವಿತವಾದುದು ಈ ಶಾಸನವೆಂದು ತಿಳಿದುಬರುತ್ತದೆ. ಆದರೆ ಅಲ್ಲಿ ಅಜಿತಪುರಾಣದ ಪದ್ಯಗಳನ್ನು ನೇರವಾಗಿ ಎತ್ತಿಕೊಂಡಿದ್ದರೆ ಇಲ್ಲಿ ಗದಾಯುದ್ಧ, ಅಜಿತಪುರಾಣಗಳ ಪದ್ಯಗಳನ್ನು ಸಂದರ್ಭಕ್ಕೆ ಉಚಿತವಾಗುವಂತೆ ವ್ಯತ್ಯಾಸಗೊಳಿಸಿಕೊಳ್ಳಲಾಗಿದೆ.*

ಈ ಶಾಸನದಲ್ಲಿ ಮಿತಿ ನಿರ್ದೇಶನವಿಲ್ಲ. ಅಕ್ಷರ ಸ್ವರೂಪವನ್ನನುಲಕ್ಷಿಸಿ ಸಂಪಾದಕರು ಇದರ ಕಾಲ ಕ್ರಿ.ಶ. ೯೫೦ ಎಂದು ಊಹಿಸಿದ್ದಾರೆ. ಅಜಿತ ಪುರಾಣ ರಚನೆಯ ಕಾಲ ಕ್ರಿ.ಶ. ೯೯೩ ಎಂದು ರನ್ನನೇ ಸ್ಪಷ್ಟವಾಗಿ ಹೇಳಿರುವುದರಿಂದ ಆ ಪುರಾಣದ ಪ್ರಭಾವಕ್ಕೊಳಗಾದ ಈ ಶಾಸನದ ಮಿತಿ ಕ್ರಿ.ಶ. ೯೫೦ ಅಲ್ಲ; ಕ್ರಿ.ಶ. ೯೯೩ ತರುವಾಯವೆಂದು ಈಗ ಭಾವಿಸಬೇಕಾಗುತ್ತದೆ.

■■

---

* ರನ್ನನ ಪದ್ಯಗಳನ್ನು ಹೋಲುವ ಇನ್ನೂ ಕೆಲವು ಶಾಸನೋಕ್ತ ವಾಕ್ಯ, ಪದ್ಯಗಳು ಕೆಳಗಿನಂತಿವೆ.

1. ಜವನುಂಡು ಕಾಱಿದವೊಲಾಯ್ತೆತ್ತಂ ಕುರುಕ್ಷೇತ್ರದೊಳ್ (ಗ.ಯು. ೩-೨) ಜವನುಂಡೊಯ್ಯನೆ ಕಾಱಿದನ್ತೆ (E.C. viii-ii ಸೊರಬ ೩-೧೧ ಮತ್ತು ೧೨).
2. ಗುಣಕ್ಕೆ ಮಚ್ಚರಮುಂಟೆ (ಅಜಿ ಪು. ೧೨-೪೦)
ಗುಣಕ್ಕೆ ಮಚ್ಚರಮುಂಟೆ (E.C. vii p. ೨೦ ಮತ್ತು M.A.R. ೧೯೩೮ p. ೯೮).
3. ಅರೆಮುಗಿದಿರ್ದ ಕಣ್ಗಳುಮಲರ್ದ ಮೊಗಂ (ಗ.ಯು, ೪-೫೪)
ಅರೆಮುಗುಳ್ದಿರ್ದ ಕಣ್ಮಲರ್ಗಳೋದುವ ಪಂಚಪದಂ (E.C. II; ೧೪೩).
4. ಗುರುಭಾರಕ್ಕಿರಿವಾಳ್ ರಣಕ್ಕೆ ತುಳಿಲಾಳ್ ಕಟ್ಟಾಯದೊಳ್ ಮೇಳದಾಳ್ ।
ಪರಿಹಾಸಕ್ಕೆನಿಸಿರ್ದನೆಂತು ಮಱೆವಂ ದುರ್ಯೋಧನಂ ಕರ್ಣನಂ । (ಗ.ಯು ೫-೩೫)
ಅಣುಗಾಳ್ ಕಾರ್ಯದ ಶೌರ್ಯದಾಳ್ ವಿಜಯದಾಳ್ ಚಾಳುಕ್ಯರಾಜ್ಯಕ್ಕೆ ಕಾ ।
ರಣಮಾದಾಳ್ ತುಳಿಲಾಳ್ತನಕ್ಕೆ ನೆಱೆದಾಳ್ ಕಟ್ಟಾಯದಾಳ್ ಮಿಕ್ಕ ಮ ।
ನ್ನಣೆಯಾಳ್ ಮಾಂತನದಾಳ್ ನೆಗಟ್ತೆವಡೆದಾಳ್ ವಿಕ್ರಾಂತದಾಳ್ ಮೇಳದಾಳ್ ।
ರಣದಾಳಾಳ್ದನ ನಚ್ಚುವಾವೆಡೆಯೊಳಂ ವಿಶ್ವಾಸದಾಳ್ ಲಕ್ಷ್ಮಣಂ ॥ (ಶಾಸನ ಪದ್ಮ ಮಂಜರಿ, ಪು. ೧೭).)

ಆಕರ : ಮಾರ್ಗ ಸಂಪುಟ–೨

೧೮

ಕಿಳ್ಗುಂಟೆ-ವೇಳೆವಾಳಿ-ಲೆಂಕವಾಳಿ-ಗರುಡ

ದೈವನಿಷ್ಠವಾಗಿ ನಡೆಸುವ ಆತ್ಮಾನುಸಂಧಾನದಿಂದ ಸದ್ಗತಿಸಾಧ್ಯವೆಂದು ಭಾವಿಸಿದ ಹಿಂದೂಗಳು, ದೇವರ ಹೆಸರಿನಲ್ಲಿ ಕೈಕೊಳ್ಳುವ ಆತ್ಮಬಲಿದಾನದಿಂದಲೂ ಸದ್ಗತಿ ಸಾಧ್ಯವೆಂದು ನಂಬಿದವರು. ಹೀಗೆ ಮೂಲತಃ ದೇವರ ಸಂಪ್ರೀತಿಗಾಗಿ ಅರ್ಪಿಸುತ್ತಿದ್ದ ಪ್ರಾಣವನ್ನು ಪ್ರಿಯವ್ಯಕ್ತಿ ಸಂಪ್ರೀತಿಗಾಗಿಯೂ ಅರ್ಪಿಸುವಲ್ಲಿ, ಆತ್ಮಬಲಿದಾನ ಸಂಪ್ರದಾಯವು 'ಧಾರ್ಮಿಕ ಸಂದರ್ಭ'ದಿಂದ 'ಲೌಕಿಕ ಸಂದರ್ಭ'ಕ್ಕೆ ಸರಿದುಬಂದಿತು.

ಈ ಲೌಕಿಕ ಆತ್ಮಬಲಿದಾನವು ಪತಿಗಾಗಿ ಪ್ರಿಯಸತಿಯ ಪ್ರಾಣೋತ್ಕ್ರಮಣ, ವ್ಯಕ್ತಿಗಾಗಿ ಪ್ರಿಯವ್ಯಕ್ತಿಯ ಪ್ರಾಣೋತ್ಕ್ರಮಣ (ಇದು ಮುಂದೆ ಒಡೆಯ-ಸೇವಕ ಸಂಬಂಧದಲ್ಲೂ ಬೆಳೆಯಿತು) - ಹೀಗೆ ಎರಡು ಕವಲುಗಳಲ್ಲಿ ಬೆಳೆದುಬಂದಿತು. ಇವುಗಳಲ್ಲಿ ಒಂದರ ಹೆಸರು ಸಹಗಮನ, ಇನ್ನೊಂದರ ಹೆಸರು ಕಿಲ್ಗುಂಟೆ. ಈ ಕಿಲ್ಗುಂಟೆ ಪುರುಷನಿಗಾಗಿ ಪುರುಷ, ಪುರುಷನಿಗಾಗಿ ಸ್ತ್ರೀ, ಸ್ತ್ರೀಗಾಗಿ ಸ್ತ್ರೀ, ಸ್ತ್ರೀಗಾಗಿ ಪುರುಷ ಹೀಗೆ ಯಾವುದೇ ಬಗೆಯಲ್ಲಿ ಕೈಕೊಂಡ ಬಲಿದಾನವಾಗಿರಬಹುದು. ಪ್ರಿಯವ್ಯಕ್ತಿ ಜೀವಿಸಿದ್ದ ಪ್ರಸಂಗದಲ್ಲಿ ಶುಭ ಹಾರೈಸಿ, ಇಲ್ಲವೆ ಅವನ ಮರಣ ಪ್ರಸಂಗದಲ್ಲಿ ಮೋಕ್ಷಹಾರೈಸಿ ಇವರು ಆತ್ಮಬಲಿದಾನ ಮಾಡಿಕೊಳ್ಳುತ್ತಿದ್ದರು.

ನಮ್ಮನಾಡಿನ ಶಾಸನ, ಕಾವ್ಯಗಳನ್ನು ಐತಿಹಾಸಿಕವಾಗಿ ನೋಡಿದರೆ ಈ ಸಂಪ್ರದಾಯ ಕ್ರಮವಾಗಿ ಕಿಲ್ಗುಂಟೆ-ವೇಳೆವಾಳಿ-ಲೆಂಕವಾಳಿ ಎಂದು ಹೆಸರುಗಳನ್ನು ಬದಲಿಸುತ್ತ ಬಂದಿದೆಯೆಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಕಿಲ್ಗುಂಟೆ ಗಂಗ-ರಾಷ್ಟ್ರಕೂಟರ ಕಾಲದಲ್ಲಿ, ವೇಳೆವಾಳಿ ಕಲ್ಯಾಣಚಾಲುಕ್ಯರ ಕಾಲದಲ್ಲಿ, ಲೆಂಕವಾಳಿ ಕಲ್ಯಾಣಚಾಲುಕ್ಯ-ಹೊಯ್ಸಳರ ಕಾಲದಲ್ಲಿ, ಪ್ರಧಾನವಾಗಿ ಬಳಕೆಗೊಂಡ ಪದಗಳಾಗಿವೆ. ಕಿಲ್ಗುಂಟೆ ಎಂಬುದು ಹೂಳುವ ಸಂಪ್ರದಾಯವನ್ನು, ವೇಳೆವಾಳಿ ಎಂಬುದು ಸುಡುವ ಸಂಪ್ರದಾಯವನ್ನು ಪ್ರತಿನಿಧಿಸಲು ಹುಟ್ಟಿದ ಪದಗಳಾಗಿರಬಹುದೆಂದು ನಾನು ಬೇರೆಡೆ ಚರ್ಚಿಸಿದ್ದೇನೆ.[೧] ಇವೆರಡರಲ್ಲಿ ಬಹುಶಃ ಕಿಲ್ಗುಂಟೆ ಹಳೆಯ ಪದ, ವೇಳೆವಾಳಿ ಆ ಮೇಲೆ ಬಳಕೆಗೆ ಬಂದ ಪದವಾಗಿರುವಂತೆ ತೋರುತ್ತದೆ. ಹೀಗೆ ತರುವಾಯ ಬಳಕೆಯಾದ ವೇಳೆವಾಳಿ ಎಂಬುದು ಕಿಲ್ಗುಂಟೆ ಪದವನ್ನು ತಳ್ಳಿ, ಎರಡೂ ಸಂಪ್ರದಾಯಗಳಿಗೆ ತಾನೇ ಬಳಕೆಯಾಗುತ್ತ ಬಂದಿತೆಂದು ಹೇಳಬಹುದು. ಕಿಲ್ಗುಂಟೆ ಬಹಳ ಹಿಂದೆಯೇ ಕಾಣೆಯಾಗಿ, ವೇಳೆವಾಳಿ ೧೨ನೆಯ ಶತಮಾನದ ವರೆಗೆ ಬಳಕೆಯಲ್ಲಿದ್ದುದೂ ಈ ಅಭಿಪ್ರಾಯವನ್ನು ಪೋಷಿಸುತ್ತದೆ.

'ಜೋಳವಾಳಿ'ಯೆಂಬುದು ವೈರಿಯೊಂದಿಗೆ ಹೋರಾಡಿ ಗೆದೆಯುವ ಇಲ್ಲವೆ ಮಡಿಯುವ ವ್ಯಕ್ತಿಯನ್ನು ಸೂಚಿಸಿದರೆ, ಈ ವೇಳೆವಾಳಿ ತಾನಾಗಿಯೇ ಜೀವತ್ಯಾಗ ಮಾಡಿಕೊಳ್ಳುವ ಇಲ್ಲವೆ ಮಾಡಿಸಿಕೊಳ್ಳುವ ವ್ಯಕ್ತಿಯನ್ನು ಸೂಚಿಸುತ್ತದೆ. ಈ 'ಜೋಳವಾಳಿ-ವೇಳೆವಾಳಿ' ಎಂಬಿವು ಒಂದು ಬಗೆಯ ಜೋಡುಪದಗಳೆಂಬಂತೆ ಕಲ್ಯಾಣಚಾಲುಕ್ಯರ ಕಾಲದ ವರೆಗೂ ಬಳಕೆಗೊಂಡಿವೆ. ಆದರೆ ಕಲಚುರಿ ಹೊಯ್ಸಳರ ಕಾಲಕ್ಕೆ ಈ ಪದಗಳಿಗೆ

ಪರ್ಯಾಯವಾಗಿ ಅಂಕ-ಲೆಂಕಯೆಂಬಿವು ಬಳಕೆಯಲ್ಲಿ ಬರತೊಡಗಿದವು. ಬಸವಣ್ಣನವರ ವಚನಗಳಲ್ಲಿ 'ವೇಳೆವಾಳಿ -ಜೋಳವಾಳಿ', ಅಂಕ-ಲೆಂಕ ಎರಡೂ ಪ್ರಯೋಗಗಳಿರುವುದು ಈ ಹೇಳಿಕೆಯನ್ನು ಸಮರ್ಥಿಸುತ್ತವೆ.

ಪ್ರಾಚೀನ ಕಾಲದಲ್ಲಿ ಕೆಲವು ವೃತ್ತಿಯವರು ತಮ್ಮ ವೃತ್ತಿಸಂಘಗಳನ್ನು ಅಸ್ತಿತ್ವಕ್ಕೆ ತಂದಿದ್ದರು. ಉದಾ: ಉಗುರು ಮೂನ್ನೂರ್ವರು, ಐಯ್ಯಾವೊಳೆ ಐನೂರ್ವರು ಇತ್ಯಾದಿ. ಈ ಮಾದರಿಯಲ್ಲಿ ಲೆಂಕವಾಳಿಗಳೂ ಲೆಂಕಸಾಸಿರ್ವರು ಎಂಬ ಸಂಘವನ್ನು ಅಸ್ತಿತ್ವಕ್ಕೆ ತಂದ ವಿಷಯ ಶಾಸನಗಳಲ್ಲಿ ಬರುತ್ತದೆ. ಬಹುಶಃ ಯಾವುದೋ ಊರಿನಲ್ಲಿ ಮೂಲತಃ ಸಾವಿರ ಜನ ಲೆಂಕರ ಸಂಸ್ಥೆಯಿದ್ದು, ಕಾಲಕ್ರಮದಲ್ಲಿ ಯಾವುದೇ ಊರಿನಲ್ಲಿ ಎಷ್ಟೇ ಜನ ಲೆಂಕರಿದ್ದರೂ ಆ ಸಂಘಕ್ಕೆ (ಸಮೂಹಕ್ಕೆ) ಲೆಂಕಸಾಸಿರ್ವರು ಎಂದು ಕರೆಯುವುದು ರೂಢವಾಗಿರಬೇಕು.

ಈ ಲೆಂಕ ಇಲ್ಲವೆ ಲೆಂಕವಾಳಿ ಎಂಬ ಪದ ವೇಳೆವಾಳಿ ಎಂಬುದರ ಚಲಾವಣೆಯನ್ನು ಕಡಿಮೆ ಮಾಡಿ, ಹೊಯ್ಸಳರ ಕಾಲದಲ್ಲಿ ಹೆಚ್ಚು ಬಳಕೆಗೊಂಡಿತು. ಹೀಗಿರುವಾಗ ಈ ಆತ್ಮಬಲಿದಾನದ ಸಂಪ್ರದಾಯದ ವ್ಯಕ್ತಿಗಳಿಗೆ ಹೊಯ್ಸಳರ ಕಾಲದಲ್ಲಿ 'ಗರುಡ' ಎಂದೂ ಕರೆಯುತ್ತಿದ್ದರೆಂದು ವಿದ್ವಾಂಸರು ಹೇಳುವುದಕ್ಕೆ ಆಧಾರವೇನು? ಎಂಬ ಪ್ರಶ್ನೆ ಹುಟ್ಟುತ್ತದೆ. ಗರುಡ ಎಂದಾಕ್ಷಣ ನಮಗೆ ನೆನಪಾಗುವದೆಂದರೆ ಕುವರಲಕ್ಷ್ಮನನ್ನು ಕುರಿತ ಬೇಲೂರ ಶಾಸನ. ಆದರೆ ಶಾಸನದಲ್ಲಿ ಕುವರಲಕ್ಷ್ಮನಿಗಾಗಿ 'ಪೊರೆದಂ ಮಗಂ' (ಸಾಲು ೩೮): 'ಪ್ರಿಯಪುತ್ರಂ' (ಸಾಲು ೮೮), 'ವೇಳೆ' (ಸಾಲು ೯೬), 'ಲೆಂಕ' (ಸಾಲು ೧೧೨)- ಎಂಬ ಪದಗಳು ಬಳಕೆಯಾಗಿದ್ದು, ಇವು ಸಮಾನಾರ್ಥವನ್ನು ಕೊಡುತ್ತವೆ. ಇದರಿಂದ ಕುವರಲಕ್ಷ್ಮನನ್ನು ಬೇಲೂರು ಶಾಸನ ವೇಳೆವಾಳಿ ಅಥವಾ ಲೆಂಕವಾಳಿ ಎಂಬ ಪದದಿಂದ ಕರೆದಿದೆಯೇ ಹೊರತು ಅವನಿಗಾಗಿ ಗರುಡವೆಂಬ ಪದವನ್ನು ಬಳಸಿಲ್ಲವೆನಿಸುತ್ತದೆ. ಈ ಶಾಸನದಲ್ಲಿ ಗರುಡ ಎಂಬ ಪದ ಎರಡು ಸಲ ಬಳಕೆಯಾಗಿದೆ.

ದೊರೆ ಪತಿಭಕ್ತಿಗೆ ತನ್ನೊಳ್
ಗರುಡಂ, ಗರುಡಂಗೆ ತಾನೆ ದೊರೆ, ಪೆರರಾರುಂ
ದೊರೆಯಲ್ಲವೆಂಬ ತೆರದಿಂ
ದೊರೆಯಾದುವು ತನ್ನ ಗರುಡನೆಸೆವಾಕೃತಿಗಳ್ ||

ವೇಳೆವಾಳಿ ಸ್ಮಾರಕ ಕಂಬದ ಮೇಲೆ ಗರುಡನ ಮತ್ತು ವೇಳೆವಾಳಿವ್ಯಕ್ತಿಯ ವಿಗ್ರಹಗಳನ್ನು ಕೆತ್ತುವುದು ಸಂಪ್ರದಾಯ. ಈ ಪದ್ಯದಲ್ಲಿ ಗರುಡ ಮತ್ತು ಲಕ್ಷ್ಮ ಇವರ ವಿಗ್ರಹ ಕೆತ್ತಿದುದನ್ನು ಸೂಚಿಸಲಾಗಿದೆ; ಮತ್ತು ಗರುಡನನ್ನು ಲಕ್ಷ್ಮನಿಗೆ ಉಪಮಾನವಾಗಿ ಬಳಸಲಾಗಿದೆ. ಹೀಗಾಗಿ ಗರುಡ ಎಂಬುದು ಆತ್ಮಬಲಿದಾನ ಮಾಡಿಕೊಳ್ಳುವವರಿಗೆ ಬಳಸುತ್ತಲಿದ್ದ ಪಾರಿಭಾಷಿಕ ಪದವೆಂದು ಶಾಸನದಲ್ಲಿ ಖಂಡಿತ ಸೂಚಿತವಾಗಿಲ್ಲ. ಇಲ್ಲಿಯೇ ಇನ್ನೊಂದೆಡೆ 'ಕಂಬದ ಮೇಲೆ ಲಕ್ಷ್ಮಿವೆರಸಾ ಗರುಡಂ ಬೆರಸಾದಮಳ್ಕರಿಂದಂ ಬುಧ' (ಇಲ್ಲಿಗೆ ಶಾಸನ ಪಾಠ ನಿಂತು ಬಿಟ್ಟಿದೆ) ಎಂಬ ಬರವಣಿಗೆ ಇದೆ. ಇಲ್ಲಿ 'ಲಕ್ಷ್ಮಿ' ಪದ ಅರ್ಥಕೊಡುವುದಿಲ್ಲ. ಬಹುಶಃ ಇದರ ಸರಿಯಾದ ರೂಪ ಲಕ್ಷ್ಮ ಅಂದರೆ ಕುವರಲಕ್ಷ್ಮ. ಆಗ ಸ್ಮಾರಕ ಕಂಬದ ಮೇಲೆ ಲಕ್ಷ್ಮನ ವಿಗ್ರಹದೊಂದಿಗೆ ಗರುಡನ ವಿಗ್ರಹವು ಬೆರೆಸಿ ನಿರ್ಮಿತವಾದ..... ಇತ್ಯಾದಿ ಅರ್ಥ ಹೊರಡುತ್ತದೆ. ಇದರಿಂದಲೂ ಕಂಬದ ಮೇಲೆ ಕುವರಲಕ್ಷ್ಮ ಮತ್ತು ಗರುಡರ ವಿಗ್ರಹಗಳಿದ್ದ ಸೂಚನೆ ವ್ಯಕ್ತವಾಗುವುದೇ ಹೊರತು ಗರುಡವೆಂಬುದು ಒಂದು ಪಾರಿಭಾಷಿಕ ಪದವೆಂದು ಸ್ಪಷ್ಟವಾಗುವುದಿಲ್ಲ. ಆದುದರಿಂದ ಆತ್ಮ ಬಲಿದಾನದ ವ್ಯಕ್ತಿಗಳಿಗೆ ಗರುಡರೆಂದು ಹೊಯ್ಸಳರ ಕಾಲದಲ್ಲಿ ಕರೆಯುತ್ತಿದ್ದರೆಂಬುದು ಆಧಾರವೇ ಇಲ್ಲದ, ವಿದ್ವಾಂಸರು ಮಾಡಿದ ತಪ್ಪು ಪ್ರಚಾರವೆಂದು

ಹೇಳಬೇಕಾಗುತ್ತದೆ. ಹೀಗಾಗಿ ಇನ್ನು ಮೇಲೆ ಗರುಡ ಎಂಬುದು ವೇಳೆವಾಳಿಯ ಪರ್ಯಾಯಪದವೆಂದು ಹೇಳುವುದನ್ನು ಕೈಬಿಡಬೇಕಾಗುತ್ತದೆ.[೨] ಇಲ್ಲವೆ ಖಚಿತ ಉದಾಹರಣೆಗಳನ್ನು ಕೊಟ್ಟು ಅದನ್ನು ಸರಿಯಾಗಿ ಸ್ಥಾಪಿಸಬೇಕಾಗುತ್ತದೆ.

ಇನ್ನೊಂದು ವಿಷಯ: ಕುವರ ಲಕ್ಷ್ಮನೊಂದಿಗೆ ಸಾವಿರಜನ ಲೆಂಕರು ಆತ್ಮ ಬಲಿಯಾದರೆಂದು ಶಾಸನ ಸೂಚಿಸುವುದೆಂದು ವಿದ್ವಾಂಸರು ಹೇಳುತ್ತ ಬಂದಿದ್ದಾರೆ. ಬಹುಶಃ ಇದು ಅಮಾನವೀಯತೆಯ ಅತಿರೇಕವೂ ಅಸಂಭವವೂ ಎನಿಸುತ್ತದೆ. ಆದುದರಿಂದ ಈ ಶಾಸನ ಹೇಳುವ 'ಭಾಷೆಯಂ ಧರೆ ಪೊಗಳ್ವನ್ನೆಗಂ ನೆರಪುವಗ್ಗದ ವೀರರದೊಂದು ಸಾಸಿರಂ' ಎಂಬ ವಾಕ್ಯವನ್ನು ವಾಚ್ಯಾರ್ಥದಲ್ಲಿ ಗ್ರಹಿಸದೆ 'ಲೆಂಕ ಸಾಸಿರ್ವರು' ಎಂಬ ಪರಿಭಾಷೆಯಲ್ಲಿ ಗ್ರಹಿಸಬೇಕು. ಇಲ್ಲಿಯ ವೀರರ ಸಂಖ್ಯೆ ಸಾವಿರವಲ್ಲ, ಬಹಳಷ್ಟು ಸಣ್ಣದಾಗಿರಬಹುದೆನಿಸುತ್ತದೆ.

■■

ಆಕರ : ಮಾರ್ಗ ಸಂಪುಟ-೨

---

೨. ಹೊಯ್ಸಳರ ಶಾಸನಗಳಲ್ಲಿ ಪಡೆವಳ ಚಾವಣನನ್ನು ಬಿಟ್ಟಿದೇವನ ಗರುಡಂ ಎಂದೂ, ಸೇನಾಧಿಪತಿ ಬೋಕಣನನ್ನು ಬಿಟ್ಟಿದೇವ ಗರುಡಂ ಎಂದೂ ಕರೆಯಲಾಗಿದೆ. (ಶಾಸನ ಪದ್ಯಮಂಜರಿ ಪು. ೧೧೬). ಇಲ್ಲಿ ಗರುಡ ಎಂಬುದು ವೇಳೆವಾಳಿಗೆ ಸಮಾನವಾದ ಪಾರಿಭಾಷಿಕ ಪದವಲ್ಲ, ಅನುಯಾಯಿ ಸೇವಕ ಅರ್ಥದ ಪದವೆಂಬುದನ್ನು ಗಮನಿಸಬೇಕು.

೧೯

ಕೊಂಡಗುಳಿ ಕೇಶಿರಾಜನ ಒಂದು ಶಾಸನ

ಪುಲಿಗೆರೆಯ ಸೋಮನಾಥನನ್ನು ಉಲ್ಲೇಖಿಸುವ ಶಾಸನಗಳ ಅಧ್ಯಯನಕ್ಕೆ ತೊಡಗಿದ ನನಗೆ South Indian Inscriptions Vol. XX (No. ೬೯) ರಲ್ಲಿ ಪ್ರಕಟವಾದ ಕೊಂಡಗುಳಿ (ಸಿಂದಗಿ ತಾಲೂಕ, ವಿಜಾಪೂರ ಜಿಲ್ಲೆ)ಯ ಶಾಸನವೊಂದು ಕಂಡುಬಂದಿತು. ಕಲ್ಯಾಣ ಚಾಲುಕ್ಯರ ವಿಕ್ರಮಾದಿತ್ಯ VI ನ ಆಳಿಕೆಯ ೩೩ ನೆಯ ವರುಷದಲ್ಲಿ ಹುಟ್ಟಿದ ಈ ಶಾಸನದ ಕಾಲ, ಕ್ರಿ.ಶ. ೧೧೦೭. ಆದರ ಪೂರ್ಣ ಭಾಗ ಹೀಗಿದೆ :

೧. ಶ್ರೀ [ಓಂ ನಮಃ] ಶಿವಾಯ ॥ ನಮ..............
೨-೫. ಈ ಸಾಲುಗಳು ಸವೆದು ಹೋಗಿವೆ.
೬. ಗಳುರ್ವ್ವಿಗೆಮ .... [ಸಿದ]ನಾ ನ್ರಿಪೋತ್ತಮನಿಂ ತ್ರೈಳೋ
೭. ಕ್ಯಮಲ್ಲನಾಹವಮಲ್ಲಂ ॥ ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀ
೮. ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪ-
೯. ರಮ ಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾ-
೧೦. ಭರಣಂ ಶ್ರೀಮತ್ರಿಭುವನಮಲ್ಲದೇವರ ವಿಜಯ -
೧೧. ರಾಜ್ಯಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾ
೧೨. ಚಂದ್ರಾರ್ಕ್ಕತಾರಂಬರಂ ಸಲುತ್ತಂ ಕಲ್ಯಾಣಪುರದ
೧೩. ನೆಲೆವೀಡಿನೊಳ್ಸುಖಸಂಕಥಾವಿನೋದದಿಂ ರಾಜ್ಯಂಗೆ-
೧೪. ಯ್ಯುತ್ತಮಿರೆ ತತ್ಪಾದ ಪದ್ಮೋಪಜೀವಿ ಸಮಧಿಗತ
೧೫. ಪಞ್ಚಮಹಾಶಬ್ದ ಮಹಾಸಾಮನ್ತಾಧಿಪ-
೧೬. ತಿ ಮಹಾಪ್ರಚಣ್ಡದಣ್ಡನಾಯಕ[ಂ] ವಿಬ್ಧವರ-
೧೭. ದಾಯಕ ಗೋತ್ರಪವಿತ್ರ ಸುಜನೈಕ-
೧೮. ಮಿತ್ರ ಅಭಿಮಾನಮನ್ದರ ವಿಭವಪುರಂದರ ಸರಸ್ವತೀಗಣ
೧೯. ಲಲಾಟಪಟ್ಟ ಕನ್ನಕೈರದಿಶಾಪಟ್ಟ ವಾಜಿಕುಳಾಂ-
೨೦. ಬರದ್ಯುಮಣಿ ಬನ್ಧುಜನಚಿನ್ತಾ[ಮ]ಣಿ ಶ್ರೀ
೨೧. ಮತ್ರಿಭುವನಮಲ್ಲದೇವ ಪದಾರಾಧಕಂ ಪಂ..........
೨೨. ಕ ನಾಮಾದಿ ಸಮಸ್ತ ಪ್ರಶಸ್ತಿ ಸಹಿತ ....
೨೩. ಮನು ಮಹಾಪ್ರಧಾನಂ ಮನೆವೆರ್ಗ್ಗಡೆ ದಂಡ .....

೨೪. ಬಣಯ್ಯಂಗಳ್ ರಾಯನಾರಾಯಣಪು ....
೨೫. ಯು[ದ್ಯಾಪ]ನದಲು ಕೆಱೆಯಪುರದೊ ....
೨೬. ಧರ್ಮ್ಮಮಾಗಿ ಶ್ರೀ ಮತ್ರಿಭುವನಮ ......
೨೭. ....ಲು ಧಾರಾಪೂರ್ವ್ವ .....
೨೮. .... ಶ್ಯದಗ್ರ [ಹಾ] ....

ಎರಡನೆಯ ತುಂಡು

೨೯. ...... ಮಾಗಿರೆ ಪಡೆದ ಸಹಿ....
೩೦. .... ಕೊಣ್ಡಾಂಗುಳಿಯಲು ನಿಂಬ....
೩೧. ....ಗಳ ಮಗ ಶ್ರೀ ಸ್ವಸ್ತಿ ಸಮಧಿಗತ ಪಞ್ಚ
೩೨. ಮಹಾಶಬ್ದ ಮಹಾಸಾಮನ್ತಾಧಿಪತಿ (ಮ) .....
೩೩. ಮಹಾಪ್ರಚಣ್ಡದಣ್ಣನಾಯಕ ದುಷ್ಟವಿದ್ವಿಷ್ಟ
೩೪. ವಿಧೇಯಕ ವಾಜಿಕುಳಾರ್ಣ್ನವ ಪಾರಿಜಾತ
೩೫. ಸುಕವಿಶುಕಚೂತ ಬನ್ಧುವನವಸನ್ತ ವಚಶ್ರೀವಧೂ
೩೬. ಕಾನ್ತ ಸಾಹಿತ್ಯಸರೋರುಹ ಮಧುಬ್ರತ ಸತ್ಯಸ -
೩೭. ತ್ಯಬ್ರತ ಹರಚರಣ ರಜೋರಂಜಿತೋತ್ತಮಾಂಗನ
೩೮. ಯ್ಯನಸಿಂಗ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಪ್ರ
೩೯. ಧಾನಂ ಹೇರಿಲಾಳ ಸನ್ಧಿವಿಗ್ರಹಿ ದಣ್ಡನಾ[ಯ]ಕಂ ಕೇಸಿರಾ
೪೦. ಜರಸರು ಶ್ರೀ ಶ್ರೀಮಚ್ಚಾಳುಕ್ಯವಿಕ್ರಮವರ್ಷದ ೩೩ನೆ
೪೧. ಯ ಸರ್ವ್ವಜಿತ್ ಸಂವತ್ಸರದ ಮಾರ್ಗ್ಗಸಿರದಮವಾಸ್ಯೆ
೪೨. ಸೋಮವಾರದಂದಿನ ಸೂರ್ಯ್ಯಗ್ರಹಣ ಪರ್ವ್ವನಿಮಿತ್ತದಲು
೪೩. ತಾವು ಮಾಡಿಸಿದ ಶಿವಾಲೆಯದ ಮೂಲಸ್ಥಾನದ
೪೪. ಶ್ರೀಸೋಮೇಶ್ವರದೇವರ್ಗ್ಗೆ ತಮ್ಮ ಪ್ರಭುತ್ವದ ದೋಣೆಯಿಂ
೪೫. ತೆಂಕ ಒಡ್ಡವಾಡಿಗೆಯ ಬಟ್ಟೆಯಿಂ ಪ-
೪೬. ಡುವ ಬನ್ಧುಚಿನ್ತಾಮಣಿಯ ಈರ್ಪತ್ತೆಂಟು ಗೇಣಕೋ-
೪೭. ಲಲು ತಮ್ಮಂ[ಬ]ಕ್ಕೆ ಬಂದ ಮತ್ತರಯ್ವತ್ತೇಳಱೊಳಗೊ

(ಇಲ್ಲಿಗೆ ಶಾಸನ ನಿಂತು ಬಿಟ್ಟಿದೆ)

ಈ ಶಾಸನದ ಪೂರ್ವಾರ್ಧದಲ್ಲಿ[೧] "...ಬಣಯ್ಯ" ಎನ್ನುವವನ ವಿಷಯ ಬಂದರೆ ಉತ್ತರಾರ್ಧದಲ್ಲಿ ಕೇಶಿರಾಜ ಎನ್ನುವವನ ವಿಷಯ ಬಂದಿದೆ. ಪೂರ್ವಾರ್ಧ ಶಾಸನದ ಮನೆವೆರ್ಗ್ಗಡೆ ದಂಡ.... ಬಣಯ್ಯಂಗಳ್" ಮತ್ತು "ನಿಂಬ.....ಗಳ ಮಗ" ಎಂಬ ಎರಡೂ ಹೆಸರುಗಳು ಒಬ್ಬನನ್ನೇ ಸೂಚಿಸುತ್ತಿದ್ದ ಪಕ್ಷದಲ್ಲಿ ಈ

೧. ಚರಣ ೧ ರಿಂದ ೩೧ ಪೂರ್ವಾರ್ಧ, ೩೧ ರಿಂದ ೪೭ ಉತ್ತರಾರ್ಧ ಎಂದು ಭಾವಿಸಲಾಗಿದೆ.

ತ್ರುಟಿತ ಭಾಗಗಳನ್ನು ಹೊಂದಿಸಿದರೆ 'ನಿಂಬಣಯ್ಯ' ಎಂಬ ಹೆಸರು ಸಿದ್ಧವಾಗುತ್ತದೆ. ಈ ನಿಂಬಣಯ್ಯನ ಉಲ್ಲೇಖ (ವಿಶೇಷಣಗಳು ಸಹ), ಚಾಳುಕ್ಯ ತ್ರಿಭುವನಮಲ್ಲ ವಿಕ್ರಮಾದಿತ್ಯ VI ನ ೧೧ನೆಯ ವರುಷದ (ಕ್ರಿ.ಶ. ೧೦೮೮) ತುಂಬಗಿ ಶಾಸನದಲ್ಲಿಯೂ ಬರುತ್ತದೆ. ಆದರೆ ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ, ಮಹಾಪ್ರಧಾನ, ಮನೆವೆರ್ಗಡೆ, ಹೇರಿಲಾಳಸಂಧಿವಿಗ್ರಹಿ ಎಂದು ಹೆಸರಾದ ಈ ನಿಂಬಣಯ್ಯನು ರಾಜ್ಯದ ಕೇಂದ್ರ ಪಟ್ಟಣದವರಾದ ಕಲ್ಯಾಣದಲ್ಲಿ ಅಧಿಕಾರಿಯಾಗಿದ್ದನೋ, ರಾಜ್ಯದ ಒಂದು ಭಾಗಕ್ಕೆ ಅಧಿಕಾರಿಯಾಗಿದ್ದನೋ ಗೊತ್ತಾಗುವುದಿಲ್ಲ.[೩]

ಪೂರ್ವಾರ್ಧದಲ್ಲಿ ಬರುವ ನಿಂಬಣಯ್ಯನನ್ನು "ವಾಜಿಕುಳಾಂಬರ ದ್ಯುಮಣಿ" ಎಂದೂ ಉತ್ತರಾರ್ಧದಲ್ಲಿ ಬರುವ ಕೇಶಿರಾಜನನ್ನು "ವಾಜಿಕುಳಾರ್ಣವ ಪಾರಿಜಾತ" ಎಂದೂ ಕರೆದುದನ್ನು ನೋಡಿದರೆ, ಈ ಇಬ್ಬರಿಗೂ ರಕ್ತಸಂಬಂಧವಿರಬಹುದೆನಿಸುತ್ತದೆ. ಬಹುಶಃ ಪೂರ್ವಾರ್ಧದ ಕೊನೆಯ (ಚರಣ ೩೦-೩೧) "ನಿಂಬ ....ಗಳ ಮಗ" ಎಂಬುದು ಉತ್ತರಾರ್ಧ ಕೇಶಿರಾಜನಿಗೆ ಸೂಚನೆಯಾಗಿದೆಯೆಂದಿಟ್ಟುಕೊಂಡರೆ, ದಂಡನಾಯಕ ನಿಂಬಣಯ್ಯಗಳ ಮಗ ದಂಡನಾಯಕ ಕೇಶಿರಾಜ ಎಂದು ಹೇಳಬೇಕಾಗುತ್ತದೆ. ಪ್ರಸಿದ್ಧ ತಂದೆಯ ಪ್ರಸಿದ್ಧ - ಮಗನಾದುದರಿಂದಲೇ ಕೇಶಿರಾಜನನ್ನು "ಅಯ್ಯನಸಿಂಗ" ಎಂದು ಶಾಸನದಲ್ಲಿ ಕರೆಯದಿರಬಹುದು. ಒಟ್ಟಿನಲ್ಲಿ ಕೇಶಿರಾಜನು ನಿಂಬಣಯ್ಯಗಳ ಮಗನೆಂದೂ ತಂದೆಯಂತೆ (ತರು[illegible]) ವಿಕ್ರಮಾದಿತ್ಯ VI ನಲ್ಲಿ ಅಧಿಕಾರಿಯಾಗಿದ್ದನೆಂದೂ ಹೇಳಬಹುದು.

ಶಿವಶರಣರಿಂದ, ಶಿವಕವಿಗಳಿಂದ "ಕೊಂಡುಗುಳಿ ಕೇಶಿರಾಜ" ಎಂಬ ಶರಣ, ವೀರಶೈವರಲ್ಲಿ ಪ್ರಸಿದ್ಧನಾಗಿದ್ದಾನೆ. ಬಸವಣ್ಣನವರಿಗೆ ಪ್ರಾಚೀನವಾದ ಈತನ ವಿಷಯ ವೀರಶೈವಗ್ರಂಥಗಳ ಆದಿಯ ಸ್ತುತಿ, ಸಾಂದರ್ಭಿಕ ಕಥೆ, ಸ್ವತಂತ್ರ ಕೃತಿಗಳ ಮೂಲಕ ಲಭಿಸುತ್ತಿದ್ದು, ಅದನ್ನು ಹೀಗೆ ಸಂಗ್ರಹಿಸಬಹುದು: ಕೇಶಿರಾಜನು ಕೊಂಡಗುಳಿ ಗ್ರಾಮದವ. ಗಂಗಾದೇವಿಯ ಪತಿ. ವಿರೂಪಾಕ್ಷನೆಂಬವನ ಶಿಷ್ಯ. ಸೋಮೇಶ್ವರನ ಭಕ್ತ. ಕಲ್ಯಾಣದ ಪೆರ್ಮಾಡಿಯ ದಂಡನಾಯಕ. ತೆಲುಗು ಜೊಮ್ಮಣ್ಣ, ವಂಶವರ್ಧನರ ಸಮಕಾಲೀನ, 'ಮಂತ್ರ ಮಹತ್ವದ ಕಂದ'ದ ಕರ್ತೃ-ಇತ್ಯಾದಿ.

ವೀರಶೈವ ಪುರಾಣೋಕ್ತ ಈ ಕೊಂಡಗುಳಿ ಕೇಶಿರಾಜ ಮತ್ತು ಪ್ರಸ್ತುತ ಕೊಂಡಗುಳಿ ಶಾಸನೋಕ್ತ ಕೇಶಿರಾಜ ಇಬ್ಬರೂ ಒಬ್ಬನೇ ಆಗಿರಬಹುದೆಂದು ನನ್ನ ಅಭಿಪ್ರಾಯ. ಅದಕ್ಕೆ ಆಧಾರಗಳು :

---

೨. S.I.I. Vol. XI, Part II. No. ೧೩೨.

೩. ಎನಿತುಂ ಚಾಳುಕ್ಯ ಚಕ್ರೇಶ್ವರ ನಿಜವಿಜಗೀಷು ಪ್ರಭಾಟೋಪಮಾ ।
ಯ್ತನಿತರ್ಕಂ ಮಂತ್ರ ಸಂಪಾದನದ ಪದಕೆ ತಾಂ ಮಂತ್ರಿ ಯುದ್ಧಕ್ಕದೇನ ।
ಚ್ಚಿನ ದಣ್ಡಾಧೀಶ್ವರಂ ತಾನೆನೆ ಚತುರುಪಧಾಶುದ್ಧಿಯಿಂ ತಾಳ್ದಿದಂ ನೂ ।
ತನ ಮುದ್ರಾರಾಕ್ಷಸಂ ನೂತನ ಕಮಳಭವಂ ನಿಂಬದಣ್ಡಾದಿನಾಥಂ ।
ವಚನ ॥ ಎನೆ ನೆಗಟ್ದ ಮನೆವರ್ಗ್ಗಡೆ ದಂಡನಾಯಕಂ ನಿಂಬಣಯ್ಯಂಗಳ
ಬಿನ್ನಪದಿಂ ॥(S.I.I. Vol. XI No. ೧೬೬, ಕೊಪ್ಪ) ಎಂಬ ಶಾಸನೋಕ್ತ ಈ ನಿಂಬಣಯ್ಯನೂ ಈತನೇ ಆಗಿರಬಹುದು.

೧. ಇಬ್ಬರೂ ಪೆರ್ಮಾಡಿಯ (ವಿಕ್ರಮಾದಿತ್ಯ VI) ದಂಡನಾಥರು.

೨. ಇಬ್ಬರ ಆರಾಧ್ಯ ದೈವತ ಸೋಮೇಶ್ವರ.

೩. ಇಬ್ಬರೂ ಬಸವಣ್ಣನವರಿಗೆ ಪ್ರಾಚೀನರು.

೪. ಈ ಶಾಸನದಲ್ಲಿಯ "ಸುಕವಿಶುಕಚೂತಬಂಧುವನವಸಂತ, ವಚಶ್ರೀ ವಧೂಕಾಂತ, ಸಾಹಿತ್ಯ ಸರೋರುಹ ಮಧುವ್ರತ " ಎಂಬ ಕೇಶಿರಾಜನ ವಿಶೇಷಣಗಳು ಮಂತ್ರ ಮಹತ್ವದ ಕಂದ (ಇತ್ಯಾದಿ?) ಕೃತಿ ರಚಿಸಿದ ಕೊಂಡಗುಳಿ ಕೇಶಿರಾಜನನ್ನು ನೆನಪಿಗೆ ತರುತ್ತವೆ.

೫. "ಸತ್ಯ ಸತ್ಯಬ್ರತ, ಹರಚರಣ ರಜೋರಂಜಿತೋತ್ತಮಾಂಗ" ಎಂಬ ಈ ಶಾಸನದ ವಾಕ್ಯಗಳು ಕೊಂಡಗುಳಿ ಕೇಶಿರಾಜನ ಶಿವಶರಣ ತತ್ವವನ್ನು ಸೂಚಿಸುತ್ತವೆ.

ಈ ಎಲ್ಲ ಕಾರಣಗಳಿಂದ ಪ್ರಸ್ತುತ ಶಾಸನೋಕ್ತ ಕೇಶಿರಾಜನೇ ಪ್ರಸಿದ್ಧ ಕೊಂಡಗುಳಿ ಕೇಶಿರಾಜನೆನ್ನಬಹುದು.

ಒಂದು ತೊಡಕು : ಸಿಂದಗಿ (ವಿಜಾಪುರ ಜಿಲ್ಲೆ) ಸಮೂಪದಲ್ಲಿ ಎರಡು ಕೊಂಡಗುಳಿಗಳಿವೆ. ಒಂದು: ಡೋಣಿಕೊಂಡಗುಳಿ, ಇನ್ನೊಂದು ಜಾಡಕೊಂಡಗಳಿ. ಕೇಶಿರಾಜನು ಜಾಡಕೊಂಡಗುಳಿಯವನೆಂದು ಡಾ. ಹಳಕಟ್ಟಿ ಮೊದಲಾದವರು ಹೇಳುತ್ತಾರೆ. ಬಹುಶಃ ಈ ಹೇಳಿಕೆಗಳನ್ನೇ ನಂಬಿ ಆ ಗ್ರಾಮದವರು ತಮ್ಮಲ್ಲಿಯದು ಕೇಶಿರಾಜನ ದೇವಾಲಯವೆಂದು ಹೇಳುತ್ತಲಿದ್ದಾರೆ.[೪] ಇದೆಲ್ಲ ಕಟ್ಟುಕಥೆ. ಪ್ರಸ್ತುತ ಶಾಸನ, ಡೋಣಿಕೊಂಡಗುಳಿಯಲ್ಲಿ ಸಿಕ್ಕಿದೆ. ಅಲ್ಲಿ ಸೋಮೇಶ್ವರ ದೇವಾಲಯವೂ ಇದೆ. ಈ ಎಲ್ಲ ಆಧಾರಗಳಿಂದ ಡೋಣಿಕೊಂಡಗುಳಿಯೇ ಕೇಶಿರಾಜನ ಗ್ರಾಮವೆಂದು ಆತ್ಯಂತಿಕವಾಗಿ ಹೇಳಬಹುದು.

ಕೆಲವು ಹೊಸ ಸಂಗತಿಗಳು : ಕೊಂಡಗುಳಿ ಕೇಶಿರಾಜನ ವಿಷಯದಲ್ಲಿ ಈ ವರೆಗೆ ಗೊತ್ತಾಗದ ಕೆಲವು ಸಂಗತಿಗಳು ಈ ಶಾಸನದಿಂದ ಬಯಲಿಗೆ ಬರುತ್ತವೆ.

೧. ಕೇಶಿರಾಜನು ವಿಕ್ರಮಾದಿತ್ಯ VI ನ ದಂಡಾಧಿಪನಾದ ನಿಂಬಣಯ್ಯನ ಮಗನು.

೨. ವಿಕ್ರಮಾದಿತ್ಯ VIನಲ್ಲಿ ಹೇರಿಲಾಳ ಸಂಧಿವಿಗ್ರಹಿ ಅಂದರೆ, ಲಾಟದೇಶ (?) ಸಂಬಂಧದ ಹಿರಿಯ ಸಂಧಿವಿಗ್ರಹಿಯೂ ಆಗಿದ್ದನು.

೩. ಈತನು ವಾಜಿಕುಲದ ಶಿವಭಕ್ತ.[೫]

೫. ಈತನ ಗ್ರಾಮ ಜಾಡಕೊಂಡಗುಳಿಯಲ್ಲ, ಡೋಣಿಕೊಂಡಗುಳಿ. ಅಲ್ಲಿ ಸೋಮೇಶ್ವರ ದೇವಾಲಯವನ್ನು ಈತ ಕಟ್ಟಿಸಿದ.

---

೪. ಇನ್ನೊಂದು ಆತನ ಮಗ ಶೈವಲಿಂಗನ ದೇವಾಲಯವೆಂದು ಹೇಳುತ್ತಾರೆ.

೫. ಚತುರ್ಮುಖ ಬೊಮ್ಮರಸನದು ಕಾಸ್ಯಪಗೋತ್ರ, ಬೋಧಾಯನ ಸೂತ್ರ, ಯಜುರ್ವೇದಿ. ಚನ್ನವೀರನದು ತೈತ್ತರೀಯ ಯಜುಶ್ಶಾಖೆ, ಅತ್ರಿಗೋತ್ರ. ಇಲ್ಲಿ ವೀರಶೈವ ಕವಿಗಳು ತಮ್ಮ ಗೋತ್ರ, ಸೂತ್ರಗಳನ್ನು ಹೇಳಿದುದನ್ನು ನೆನೆಯಬಹುದು.

೬. ವಿಕ್ರಮಾದಿತ್ಯನಿಗೂ ಈತನಿಗೂ ಕೊನೆಕೊನೆಗೆ ವಿರಸ ಹುಟ್ಟಿತೆಂದು ವೀರಶೈವ ಪುರಾಣಗಳು ಹೇಳುತ್ತವೆ. ಈ ಶಾಸನದಲ್ಲಿ ಅವನ ಸಚಿವತ್ವದ ಉಲ್ಲೇಖ ಬರುವುದರಿಂದ ಈ ತರುವಾಯ (ಕ್ರಿ.ಶ. ೧೭೭೦ರ ತರುವಾಯ) ಅವರಲ್ಲಿ ವಿರಸಹುಟ್ಟಿರಬಹುದು.

***

ಈವರೆಗೆ ಅಬ್ಬಲೂರು ಶಾಸನ[೬] ದಲ್ಲಿ ಬರುವ ಇಬ್ಬರು, ಶಿಕಾರಿಪುರ ಶಾಸನ[೭]ರಲ್ಲಿ ಬರುವ ಇಬ್ಬರು, ಹೀಗೆ ನಾಲ್ಕು ಜನ ಕೇಶಿರಾಜರನ್ನು ಸುತ್ತುಹಾಕಿಕೊಂಡು ಅವರಲ್ಲಿ ಕೊಂಡಗುಳಿ ಕೇಶಿರಾಜನನ್ನು ಗುರುತಿಸಲು ಶ್ರೀ ಆರ್. ನರಸಿಂಹಾಚಾರ್[೮] ಮತ್ತು ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು[೯] ಪ್ರಯತ್ನಪಟ್ಟಿದ್ದಾರೆ.

ಮೇಲುನೋಟಕ್ಕೆ ಇಲ್ಲಿ ಉಭಯ ವಿದ್ವಾಂಸರು ವಿರುದ್ಧವೆಂಬಂತೆ ವಾದ ಹೂಡಿದ್ದರೂ ಕೊನೆಗೆ ಶಿಕಾರಿಪುರಶಾಸನದ ಲಖ್ಮಾದೇವಿ ಪತಿ ಕೇಶವರಾಜ ದಂಡಾಧೀಶನೇ ಕೊಂಡಗುಳಿ ಕೇಶಿರಾಜನೆಂದು ಒಮ್ಮತಕ್ಕೆ ಬಂದಿದ್ದಾರೆ. ಅದಕ್ಕಾಗಿಯೇ ಕವಿಚರಿತೆಯಲ್ಲಿ "ಕೊಂಡಗುಳಿ ಕೇಶಿರಾಜ ಸು. ೧೧೬೦..... ಶಿಕಾರಿಪುರದ ೧೧೯ನೆಯ ಮತ್ತು ೧೨೩ನೆಯ ಶಾಸನಗಳಿಂದ ಈತನ ವಿಷಯವಾಗಿ ಈ ಅಂಶಗಳು ತಿಳಿಯುತ್ತವೆ.: ಭಾರದ್ವಾಜ ಗೋತ್ರದವನು. ಇವನ ತಂದೆ ಹೊಳಲಮರಸ, ತಾಯಿ ದುರ್ಗಾದೇವಿ. ಈತನು ಬಿಜ್ಜಳರಾಜನ (೧೧೫೬-೧೧೭೭) ಕೈಯ ಕೆಳಗೆ ದಂಡನಾಯಕನಾಗಿ ಬನವಾಸಿ ಪನ್ನಿರ್ಛಾಸಿರವನ್ನು ಆಳುತ್ತ ಬಲಿಪುರದಲ್ಲಿದ್ದನು. ಬಿಜ್ಜಳನ ಕಾಲವಾದ ಮೇಲೆ ಅವನ ಮಗ ರಾಯಮುರಾರಿ ಸೋಯಿದೇವನ ಕಾಲದಲ್ಲಿಯೂ ಇದ್ದನು. (ಬಿಜ್ಜಳನ ಮಕ್ಕಳು ಸಂಕಮ, ಆಹವಮಲ್ಲರ (೧೧೮೦-೮೩) ಕಾಲದಲ್ಲಿಯೂ ಇದ್ದನೆಂದು ಅದೇ ಶಾಸನದಲ್ಲಿ ಹೇಳಿದ ಅಂಶ, ಶ್ರೀ ನರಸಿಂಹಾಚಾರ್ ಅವರ ಗಮನಕ್ಕೆ ಬಂದಂತಿಲ್ಲ.) ಇವನು ಬಹಳ ಪರಾಕ್ರಮಶಾಲಿ" ಎಂದು ಮುಂತಾಗಿ ಬರೆದಿದ್ದಾರೆ. ಆದರೆ ಈ ಹೇಳಿಕೆಗಳು ಪುರಾಣೋಕ್ತ ಕೊಂಡಗುಳಿ ಮತ್ತು ಕೊಂಡಗುಳಿ ಶಾಸನೋಕ್ತ ಕೇಶಿರಾಜ ಇಬ್ಬರಿಗೂ ವಿರೋಧವಾಗಿವೆ.

ಪುರಾಣೋಕ್ತ ಕೊಂಡಗುಳಿ ಕೇಶಿರಾಜ ಮತ್ತು ಶಿಕಾರಿಪುರ ಶಾಸನೋಕ್ತ ಕೇಶವರಾಜ ದಂಡಾಧೀಶ :

೧. ಪುರಾಣೋಕ್ತ ಕೇಶಿರಾಜ ಪೆರ್ಮಾಡಿಯ ದಂಡನಾಯಕ. ಶಿಕಾರಿಪುರ ಶಾಸನೋಕ್ತ ಕೇಶಿರಾಜ ಬಿಜ್ಜಳ ಮತ್ತು ಆತನ ಮಕ್ಕಳು ಸೋಯಿದೇವ, ಸಂಕಮ, ಅಹವಮಲ್ಲ (ಕ್ರಿ.ಶ. ೧೧೮೦-೮೨) ರ ದಂಡನಾಯಕ.

೨. ಪುರಾಣೋಕ್ತ ಕೇಶಿರಾಜನ ಹೆಂಡತಿ ಗಂಗಾದೇವಿ. ಶಿಕಾರಿಪುರ ಶಾಸನೋಕ್ತ ಕೇಶಿರಾಜನ ಹೆಂಡದಿರು ಲಖ್ಮಾದೇವಿ ಮತ್ತು ಸಿರಿದೇವಿ.

೩. ಒಬ್ಬ ಬಸವಣ್ಣನವರಿಗೆ ಪ್ರಾಚೀನ. ಇನ್ನೊಬ್ಬ ಬಸವಣ್ಣನವರಿಗೆ ಅರ್ವಾಚೀನ.

ಈ ಕಾರಣಗಳಿಂದ ಪುರಾಣೋಕ್ತ ಕೇಶಿರಾಜ, ಶಿಕಾರಿಪುರ ಕೇಶಿರಾಜ ಇಬ್ಬರೂ ಭಿನ್ನ ಎನ್ನಬೇಕಾಗುತ್ತದೆ.

---

೬. Epi. Ind V. 245.

೭. ಶಿಕಾರಿಪುರ ೧೧೯ನೆಯ ಶಾಸನ.

೮. ಕರ್ಣಾಟಕ ಕವಿಚರಿತೆ ಭಾಗ ೧. ಪು. ೧೮೬ (ಪರಿಷತ್ ಮುದ್ರಣ).

೯. 'ಷಡಕ್ಷರ ಮಂತ್ರ ಮಹಿಮೆ' - ಮುನ್ನುಡಿ ಮತ್ತು ಹಿನ್ನುಡಿ.

ಕೊಂಡಗುಳಿ ಶಾಸನೋಕ್ತ ಕೇಶಿರಾಜ ಮತ್ತು ಷಿಕಾರಿಪುರ ಶಾಸನೋಕ್ತ ಇನ್ನೊಬ್ಬ ಕೇಶವರಾಜ ದಂಡಾಧೀಶ:

೧. ಕೊಂಡಗುಳಿ ಶಾಸನನೋಕ್ತ ಕೇಶಿರಾಜ ನಿಂಬಣಯ್ಯಗಳ ಮಗ. ಷಿಕಾರಿಪುರ ಶಾಸನೋಕ್ತ ಕೇಶಿರಾಜ ಹೊಳಲಮರಸನ ಮಗ.

೨. ಒಬ್ಬ ವಾಜಿಕುಲದವ, ಇನ್ನೊಬ್ಬ ಭಾರದ್ವಾಜ ಗೋತ್ರದವ.[೧೦]

೩. ಒಬ್ಬ ಪೆರ್ಮಾಡಿ (ವಿಕ್ರಮಾದಿತ್ಯ VI)ಯ ದಂಡನಾಥ. ಇನ್ನೊಬ್ಬ ಬಿಜ್ಜಳ, ಸೋಯಿದೇವ, ಸಂಕಮ, ಆಹವಮಲ್ಲರ ದಂಡನಾಥ.

೪. ಒಬ್ಬ ಕ್ರಿ.ಶ. ೧೧೦೭ರಲ್ಲಿದ್ದವ. ಇನ್ನೊಬ್ಬ ಕ್ರಿ.ಶ.ಸು. ೧೧೮೩ರಲ್ಲಿದ್ದವ.

ಈ ಕಾರಣಗಳಿಂದ ಕೊಂಡಗುಳಿ ಶಾಸನೋಕ್ತ ಕೇಶಿರಾಜ ಮತ್ತು ಶಿಕಾರಿಪುರ ಶಾಸನೋಕ್ತ ಕೇಶಿರಾಜ ಇಬ್ಬರೂ ಭಿನ್ನ ಎನ್ನಬೇಕಾಗುತ್ತದೆ.

ಒಟ್ಟಿನಲ್ಲಿ ಪುರಾಣೋಕ್ತ ಕೇಶಿರಾಜ, ಕೊಂಡಗುಳಿ ಶಾಸನೋಕ್ತ ಕೇಶಿರಾಜ ಒಂದು ಕಡೆ ನಿಂತು, ಶಿಕಾರಿಪುರ ಶಾಸನೋಕ್ತ ಕೇಶಿರಾಜ ಇನ್ನೊಂದು ಕಡೆ ನಿಲ್ಲುತ್ತಾನೆ. ಆದುದರಿಂದ ಈವರೆಗೆ ನಡೆದುಬಂದ ಶ್ರೀ ನರಸಿಂಹಾಚಾರ್, ಶ್ರೀ ಶಾಸ್ತ್ರಿಗಳವರ ಒಮ್ಮತದ ಅಭಿಪ್ರಾಯವನ್ನು[೧೧] ಈಗ ಬಿಟ್ಟುಕೊಡಬೇಕಾಗುತ್ತದೆ.

ಕೊಂಡಗುಳಿ ಕೇಶಿರಾಜನ ಪೋಷಕ ಅರಸರು :

೧. ಕಲ್ಯಾಣವನ್ನಾಳುವ ಪೆರ್ಮಾಡಿ - (ವೀರಶೈವ ಪುರಾಣಗಳು)

೨. ಪೆರ್ಮಾಡಿ ಅಂದರೆ ಕಲ್ಯಾಣ ಚಾಲುಕ್ಯರ ವಿಕ್ರಮಾದಿತ್ಯ VI - (ಶ್ರೀ ಹಳಕಟ್ಟಿ)[೧೨]

೩. ಪೆರ್ಮಾಡಿ ಅಂದರೆ ಬಿಜ್ಜಳನ ತಂದೆ - (ಶ್ರೀ ಹಳಕಟ್ಟಿ[೧೩] ಮತ್ತು ಶ್ರೀ ಶಿವಮೂರ್ತಿಶಾಸ್ತ್ರಿ)[೧೪]

೪. ಬಿಜ್ಜಳ, ಸೋಯಿದೇವ (ಸಂಕಮ, ಆಹವಮಲ್ಲ) - (ಶ್ರೀ ನರಸಿಂಹಚಾರ್)[೧೫]

---

೧೦. ವಾಜಿಕುಲದಲ್ಲಿ ಭಾರದ್ವಾಜವೆಂಬುದು ಗೋತ್ರವಿದ್ದಂತೆಯೂ ಕಾಣುತ್ತದೆ. "ವಾಜಿಕುಳ ತಿಳಕಂ। ಭಾರದ್ವಾಜ ಗೋತ್ರ ಪವಿತ್ರಂ। ಇಟ್ಟಗೆಯ ದುಗ್ಗಿಸೆಟ್ಟಿಯ ಪುತ್ರಂ" ಎಂಬ ಶಿಕಾರಿಪುರ ೧೮೯ಯ ಶಾಸನದ ವಾಕ್ಯವನ್ನು ನೋಡಬಹುದು.

೧೧. ಷಿಕಾರಿಪುರ ಶಾಸನೋಕ್ತ ಈ ಕೇಶಿರಾಜನೇ ಕೊಂಡಗುಳಿ ಕೇಶಿರಾಜನೆಂಬ ಒಮ್ಮತಕ್ಕೆ ಇವರು ಬಂದಿದ್ದರೂ ಆರ್. ನರಸಿಂಹಾಚಾರ್ ಅವರು ಇವನೊಂದಿಗೆ ಅಬ್ಬಲೂರು ಶಾಸನದ ಮಧ್ಯ ಬರುವ ಕೇಶಿರಾಜನನ್ನೂ, ಶಾಸ್ತ್ರಿಗಳು ಅದೇ ಅಬ್ಬಲೂರು ಶಾಸನದ ಕೊನೆಗೆ ಬರುವ ಕೇಶಿರಾಜನನ್ನೂ ಗಂಟುಹಾಕಿದ್ದಾರೆ. ಆಚಾರ್ಯರು ಅಬ್ಬಲೂರು ಶಾಸನದ ಮಧ್ಯ ಬರುವ ಕೇಶಿರಾಜನನ್ನು ಕೊಂಡಗುಳಿ ಕೇಶಿರಾಜನೆಂದು ಭಾವಿಸಿದುದು ಸರಿಯೆಂದು ಕಾಣುತ್ತದೆ. ಆದರೆ ಶಿಕಾರಿಪುರ ಕೇಶಿರಾಜನೊಂದಿಗೆ ಗಂಟುಹಾಕಬಾರದಿತ್ತು. ಶಾಸ್ತ್ರಿಗಳು ಅಬ್ಬಲೂರು ಶಾಸನದ ಕೊನೆಗೆ ಬರುವ ಕೇಶಿರಾಜನೇ ಕೊಂಡಗುಳಿ ಕೇಶಿರಾಜ ಎಂದು ಭಾವಿಸಿದುದು ತಪ್ಪು.

೧೨. ಶಿವಶರಣರ ಚರಿತ್ರೆ ಭಾಗ ೨ ಪು. ೯೯.

೧೩. ಶಿವಾನುಭವ ೧೬-೬. ಪುಟ ೨೮೦.

೧೪. ಷಡಕ್ಷರ ಮಂತ್ರ ಮಹಿಮೆ. ಪು. ೩೦ ಅಡಿಟಿಪ್ಪಣಿ.

೧೫. ಕರ್ಣಾಟಕ ಕವಿಚರಿತ್ರೆ ಭಾಗ ೧ ಪು. ೧೮೯ (ಪರಿಷತ್ ಮುದ್ರಣ).

ಹೀಗೆ ಕೊಂಡಗುಳಿ ಕೇಶಿರಾಜನ ಪೋಷಕ ಅರಸನ ವಿಷಯದಲ್ಲಿ ಭಿನ್ನ ಅಭಿಪ್ರಾಯಗಳು ಬೆಳೆದುಬಂದಿದ್ದು, ಪ್ರಸ್ತುತ ಕೊಂಡಗುಳಿ ಶಾಸನದಿಂದ ಪೆರ್ಮಾಡಿ ಅಂದರೆ ವಿಕ್ರಮಾದಿತ್ಯ VIನೇ ಪೋಷಕನೆಂಬ ಶ್ರೀ ಹಳಕಟ್ಟಿಯವರ ಹಳೆಯ ವಾದ ಪುನಃ ಸ್ಥಾಪನೆಗೊಳ್ಳುತ್ತದೆ.

ಕೊಂಡಗುಳಿ ಕೇಶಿರಾಜನನ್ನು ಉಲ್ಲೇಖಿಸುವ ಒಟ್ಟು ಶಾಸನಗಳು :

ವೀರಶೈವ ಪುರಾಣಗಳಲ್ಲಿ ಮೇಲಿಂದ ಮೇಲೆ ಕಂಡುಬರುವ ಕೇಶಿರಾಜನು ಕೆಳಗಿನ ಶಾಸನಗಳಲ್ಲಿ ಗೋಚರಿಸುವಂತಿದೆ.

೧. ಪ್ರಸ್ತುತ ಕೊಂಡಗುಳಿ ಶಾಸನ - ಕ್ರಿ.ಶ. ೧೧೦೭.

೨. ಅಬ್ಬಲೂರು ಶಾಸನ ಕ್ರಿ.ಶ.ಸು. ೧೧೯೫.

"ಓಹಿಲ ದಾಸಿ ಚೆನ್ನ ಸಿರಿಯಾಳ ಹಲಾಯುಧ ಬಾಣನುದ್ಭಟ।

ದೇಹದೊಳೊಂದಿ ಬಂದ ಮಳಯೇಶ್ವರ **ಕೇಶವರಾಜಾದಿಯಾಗಿ-**"[೧೬]

೩. ಮರಡಿಪುರ ಶಾಸನ ಕ್ರಿ.ಶ. 1280.

"....... ಕಾಳಿದಾಸ ಕೇಶಿರಾಜದಣ್ನಾಯಕ ಸುರಿಗೆಯ ಚಲ್ವಡರಾಯ ಸಂಗನ ಬಸವಯ್ಯ ಲಿನಿಮಿತಿ ಕೇಸವರಾಜ[೧೭] (=ಬಹುಶಃ ಇದು ಅನಿಮಿಷ ಕೇಶವರಾಜ ಎಂದಿರಬಹುದು).

■■

ಆಕರ : ಮಾರ್ಗ ಸಂಪುಟ-೨

೧೬. EI. V. p. ೨೪೫.

೧೭. ಶರಣರಲ್ಲಿ ಕೊಂಡಗುಳಿ ಕೇಶಿರಾಜ, ಅನಿಮಿಷ ಕೇಶಿರಾಜ, ಮೊಗವಾಡದ ಕೇಶಿರಾಜ, ಉತ್ತಮಾಂಗದ ಕೇಶಿರಾಜ, ಧೂರ್ಜಟಿ ಕೇಶಿರಾಜಯ್ಯ ಎಂಬ ಹಲವು ಜನ ಕೇಶಿರಾಜರಿದ್ದಾರೆ.

೨೦

ಕೊಂಡಗುಳಿ ಕೇಶಿರಾಜನ ಇನ್ನೊಂದು ಶಾಸನ

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾದ ಕೊಂಡಗುಳಿ ಕೇಶಿರಾಜ, ಬಸವಪೂರ್ವಯುಗದ ಸುಪ್ರಸಿದ್ಧ ಶಿವಭಕ್ತ, ಶಿವಕವಿ, ಮತ್ತು ರಾಜಕಾರ್ಯಧುರಂಧರ. ಮೂರು ವರುಷಗಳ ಹಿಂದೆ "ಕೊಂಡಗುಳಿ ಕೇಶಿರಾಜ: ಒಂದು ಹೊಸ ಶಾಸನ, ಒಂದು ಹೊಸ ಕೃತಿ" ಎಂಬ ಲೇಖನವನ್ನು ಪ್ರಕಟಿಸುತ್ತ ಈತನ ಕೊಂಡಗುಳಿ ಶಾಸನವನ್ನು ಬೆಳಕಿಗೆ ತಂದಿದ್ದೆನು.[೧] ಈಗ ಇನ್ನೊಂದು ಶಾಸನವನ್ನು ಈ ಲೇಖನದ ಮೂಲಕ ಬೆಳಕಿಗೆ ತರುತ್ತಲಿದ್ದೇನೆ.

* * * * *

ಈ ಮೊದಲು S.I.I. XX No. ೬೯ರಿಂದ ಆಯ್ದುಕೊಂಡು ಪ್ರಕಟಿಸಿದ್ದ ಶಾಸನ (ಕ್ರಿ.ಶ. ೧೧೦೭) ಕೊಂಡಗುಳಿ (ಸಿಂದಗಿ ತಾಲೂಕು, ವಿಜಾಪುರ ಜಿಲ್ಲೆ) ಗ್ರಾಮಕ್ಕೆ ಸಂಬಂಧಿಸಿದರು. ಇದೇ ಗ್ರಾಮಕ್ಕೆ ಸಂಬಂಧಿಸಿದ ಇನ್ನೊಂದು ಶಾಸನ Epigraphia Indiaca Vol. XXXVII, Part iv ದಲ್ಲಿ ಇದ್ದುದಾಗಿ ಕೆಲವು ದಿನಗಳ ಹಿಂದೆ ನನ್ನ ಗಮನಕ್ಕೆ ಬಂದಿತು.[೨] ಇವುಗಳಲ್ಲಿ ಮೊದಲಿನದನ್ನು "ಶಾಸನ -೧" ಎಂದೂ ಎರಡನೆಯದನ್ನು 'ಶಾಸನ- ೨' ಎಂದೂ ಅನುಕೂಲ ದೃಷ್ಟಿಯಿಂದ ಕರೆಯಬಹುದು. ಕಲ್ಯಾಣಚಾಲುಕ್ಯ ಮನೆತನದ ಭೂಲೋಕಮಲ್ಲ ಸೋಮೇಶ್ವರ (೧೧೨೬-೧೧೩೮)ನ ಕಾಲಕ್ಕೆ ಸಂಬಂಧಿಸಿದ ಈ "ಶಾಸನ-೨"ರ ಕಾಲ ಕ್ರಿ.ಶ. ೧೧೩೨. ಇದರ ಪೂರ್ತಿ ಪಾಠ ಹೀಗಿದೆ.

೧. ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ
೨. ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ
೩. ಪರಮೇಶ್ವರ ಪರಮಭಟ್ಟಾರಕ ಸತ್ಯಾ
೪. ಶ್ರಯ ಕುಲತಿಲಕ ಚಾಲುಕ್ಯಾಭರ
೫. ಣ ಶ್ರೀಮಚ್ಚಾಲುಕ್ಯ ಭೂಲೋಕಮಲ್ಲದೇ
೬. ವರ ವಿಜಯಾರಾಜ್ಯಮುತ್ತರೋತ್ತರಾ
೭. ಭಿವೃದ್ಧಿ ಪ್ರವರ್ಧಮಾಣಮಾಚಂದ್ರಮಾ
೮. ರ್ಕ ತಾರಂಬರಂ ಸಲುತ್ತಮಿರೆ ಮಾಹುರ

---

೧. ಪ್ರ.ಕ. ೫೦-೩.

೨. Agraharas in ancient Karnatak (1970) - S Leela Shantakumari (unpublished)

೯. ದ ನೆಲೆವೀಡಿನೊಲು ಸುಖಸಂಕಥಾ
೧೦. ವಿನೋದದಿಂ ರಾಜ್ಯಂಗೆಯ್ಯುತ್ತಮಿರಲು
೧೧. ಶ್ರೀಮಚ್ಚಾಲುಕ್ಯ ಭೂಲೋಕ ವರ್ಷದ ೭ನೆ
೧೨. ಯ ಪರಿಧಾವಿ ಸಂವತ್ಸರದ ಪುಷ್ಯದ
೧೩. ಪೌರ್ಣಮಾಸ್ಯೆ ಆದಿತ್ಯವಾ[ರ] ದುತ್ತರಾ
೧೪. ಯಣ ಸಂಕ್ರಮಣ ಪರ್ವದಂದು ಶ್ರೀಮತ್ಸ
೧೫. ರ್ವ್ವನಮಸ್ಯದಗ್ರಹಾರಂ ಕೊಂಡಂಗು
೧೬ . ಳ್ಯಸೇಷ ಮಹಾಜನಂಗಲಿ[ಳಿ]ಗೆ
೧೭. ಶ್ರೀಮತ್ ಕೇಸಿಮಯ ದಂಡನಾಯಕರುಂ ಗ
೧೮. ಣಪತಿ ದಂಡನಾಯಕರು[ಂ] ಕೂಡಿ ವಿದ್ಯ[ದಾ]
೧೯. ನ ನಿಮಿತ್ತವಾಗಿ ಸೂತ್ರ ಸ[ಂಹಿ]ತ ಪಿರಿ
೨೦. ಯ ಗ್ರಂಥಂಗಲ[ಳ]ಂ ಪೇಳ್ವ ವುಪಾಧ್ಯಯರ್ಗೆ ಪೊಂನ
೨೧. ವ್ರಿದ್ಧಿಯಲೆ ಗ್ರಾಸ ನಡವಂತಾಗಿ
೨೨. ಪೊಂಗೆ ತಿಂಗಲಿ[ಳಿ]ಂಗೆ ವೀಸಂ ನಾ
೨೩. ನಾಲ್ಕಱ ವಡ್ಡಿಯಲು ಕೊಟ್ಟ ವರ್ತಕ
೨೪. ಲೊಕ್ಕಿ ಗದ್ಯಾಣ 20 ಮತ್ತ[ಂ]
೨೫. ಸಂಹಿತೆಯುಂ ಕಿ[ಱಿ]ಯ ಗ್ರಂಥ
೨೬. ಲು(ಳುಂ) ಯಾಜ್ಞವಲ್ಕಿ ಸಹಿತ ಪೇಲ್ವ(ಳ್ವ)
೨೭. ಉಪಾಧ್ಯಾಯರ್ಗೆ ಪೊನಂ ವಿ(ವೃ)ದ್ಧಿಯ
೨೮. ಲೆ ಗ್ರಾಸ ನಡವಂತಾಗಿ ಪೊಂ -
೨೯. ಗೆ ತಿಂಗಲಿ(ಳಿ)ಂಗೆ ವೀಸಂ ನಾಲ್ಕ
೩೦. ರ ವೃದ್ಧಿಯಂ ಕೊಟ್ಟ ವರ್ತಕ ಲೊ -
೩೧. ಕ್ಕಿ ಗದ್ಯಾಣ 20 ಮತ್ತ ಅಕ್ಷ-
೩೨. ರ ವ್ಯಾಕರಣ ರೂಪಾವತಾರಮಿಂ -
೩೩. ತಿನಿತುಂ ಪೇರ್ದು ವಾ(ಬಾ)ಲ ಶಿಕ್ಷೆ
೩೪. ಯಂ ಮಾರ್ಪ ಉಪಾಧ್ಯಾಯರ್ಗೆ ಪೊಂ -
೩೫. ನ ವೃದ್ಧಿಯಲೆ ಗ್ರಾಸಂ ನಡವಂ -
೩೬. ತಾಗಿ ಪೊಂಗೆ ತಿಂಗಲಿ(ಳಿ)ಗೆ
೩೭. ವೀಸಂ ನಾಲ್ಕ[ಱ] ವೃದ್ಧಿಯಂ ಕೊ -
೩೮. ಟ್ಟ ವರ್ತಕ ಲೊಕ್ಕಿ ಗದ್ಯಾ
೩೯. ಣ ೨೦ ಈ ಧರ್ಮವಂ ಮಹಾಜ
೪೦. ನಂಗಲು(ಳು) ನಡಸುವರು ॥

೪೧. ಶ್ರೀಮತು ಭಾಂಡಾರಿಗ ರಾಮದೇ

೪೨. ವ ನಾಯಕರು ಸೌಪರ್ಣ

೪೩. ದ ತಾಂಬೂಲ ದಾನಕ್ಕೊ(ಕ್ಕೆ) ಪೊಂ(ಗೆ)

೪೪. ತಿಂಗಲಿ(ಳಿಂ)ಗೆ ವೀಸ ೪[ಱ] ವೃ[ದ್ಧಿ]-

೪೫. ಯಲು ಕೊಟ್ಟ ಕಟಕಪ್ರಿಯ

೪೬. ಗದ್ಯಾಣ ೧೦ ಮತ್ತಂ ಬ್ರಹ್ಮದೇ -

೪೭. ವಭಟ್ಟರು ತಾಂಬೂಲದಾನಕ್ಕಾ

೪೮. ವೃದ್ಧಿಯಲೆ ಕೊಟ್ಟ ಕಟಕಂ ಗ -

೪೯. ದ್ಯಾಣ ೨ ಶ್ರೀಮತ್ಸರ್ವನಮ -

೫೦. ಸ್ಯದಗ್ರಹಾರ ಕೊಂಡಂಗುಲಿ(ಳಿ)ಯ -

೫೧. ಶೇಷಮಹಾಜನಂಗಲು(ಳು) ಶ್ರೀ

೫೨. ಕೇಶವದೇವರ್ಗೆ ದೀಪ ದಾ -

೫೩. ನವಾಗಿ ಗಾಣವಾಯಿಲೆಯ -

೫೪. ಲ್ಲಿ ದೇವಸ(ದ)ಲು ಸೊಲ್ಲಗೆ

೫೫. ಯೆಣ್ಣೆಯಂ ಕೊಟ್ಟರು ಮತ್ತಂ ಪು -

೫೬. ಷ್ಪದಾನವಾಗಿಯರೆವತ್ತರು

೫೭. ತೋಂಟಮಂ ಕೊಟ್ಟರು[೩]

ಈ ಶಾಸನದಲ್ಲಿ ಒಟ್ಟು ಮೂರು ದತ್ತಿಗಳಿವೆ :

ದತ್ತಿ ೧ (ಸಾಲು ೧೭-೪೦) : ಕೇಶಿಮಯ್ಯದಂಡನಾಕ, ಗಣಪತಿ ದಂಡನಾಯಕರು ಕೂಡಿ 'ಪಿರಿಯ ಗ್ರಂಥಗಳಂ ಪೇಳ್ವ' ಉಪಾಧ್ಯಾಯರಿಗೆ ವರ್ತಕ ಲೊಕ್ಕಿಗದ್ಯಾಣ ೨೦, 'ಕಿಱಿಯ ಗ್ರಂಥಗಳಿಂ ಯಾಜ್ಞವಲ್ಕ್ಯ ಸಹಿತ ಪೇಳ್ವ' ಉಪಾಧ್ಯಾಯರಿಗೆ ವರ್ತಕ ಲೊಕ್ಕಿಗದ್ಯಾಣ ೨೦, ಅಕ್ಷರ ವ್ಯಾಕರಣ ರೂಪಾವತಾರ[೪] ಮಿಂತಿನಿತುಂ ಪೇರ್ವು(ಳ್ವ) ವಾ(ಬಾ)ಲ ಶಿಕ್ಷೆಯಂ ಮಾರ್ಪ(ಱ್ಪ) ಉಪಾಧ್ಯಾಯರಿಗೆ ವರ್ತಕ ಲೊಕ್ಕಿಗದ್ಯಾಣ ೨೦- ಹೀಗೆ ೬೦ ಗದ್ಯಾಣಗಳನ್ನು ದಾನನೀಡಿರುವರು.

ದತ್ತಿ ೨ (ಸಾಲು ೪೧-೪೯) : ಭಾಂಡಾರಿಗ ರಾಮದೇವನಾಯಕರು ಸೌಪರ್ಣದ ತಾಂಬೂಲದಾನಕ್ಕೆ, ಬ್ರಹ್ಮದೇವಭಟ್ಟರು ತಾಂಬೂಲದಾನಕ್ಕೆ ಕೆಲವು ಗದ್ಯಾಣಗಳನ್ನು ದಾನನೀಡಿರುವರು.

ದತ್ತಿ ೩ (ಸಾಲು ೪೯-೫೭) : ಅಗ್ರಹಾರ ಕೊಂಡಗುಳಿಯ ಮಹಾಜನಂಗಳು ಶ್ರೀ ಕೇಶವದೇವರಿಗೆ ದೀಪೋತ್ಸವ, ಪುಷ್ಪಾರ್ಚನೆಗಳಿಗಾಗಿ ಎಣ್ಣೆ ಹೂದೋಟಗಳನ್ನು ದಾನನೀಡಿರುವರು.

---

೩. EI. XXXVII. Part IV. P. ೧೮೯.

೪. ಈ ಗ್ರಂಥದ ಉಲ್ಲೇಖ ಚೋಳ ವೀರಕೇಸರಿವರ್ಮನ ತಮಿಳು ಶಾಸನ (EI. XXXVI P. ೧೮೯) ಮತ್ತು ತಾಳಗುಂದದ ಶಾಸನ (EC.VII. SK, ೧೮೫) ಗಳಲ್ಲಿಯೂ ಬರುತ್ತದೆ.

ಈ ಮೂರರಲ್ಲಿ, ಶರಣ ಕೇಶಿರಾಜನ ಚರಿತ್ರೆಗೆ ಸಂಬಂಧಿಸಿದುವು ಒಂದು ಮತ್ತು ಮೂರನೆಯ ದತ್ತಿಗಳು. ತ್ರಿಭವನಮಲ್ಲ ವಿಕ್ರಮಾದಿತ್ಯನ ಸಮಯದ "ಶಾಸನ -೧" ರ ಕಾಲ ಕ್ರಿ.ಶ. ೧೧೦೭. ಈತನ ಮಗ ಭೂಲೋಕಮಲ್ಲ ಸೋಮೇಶ್ವರನ ಸಮಯದ "ಶಾಸನ -೨" ರ ಕ್ರಿ.ಶ. ೧೧೩೨ಕ್ಕೆ ತರುವಾಯ ಲಿಂಗೈಕ್ಯನಾಗಿರುವುದು ಸತ್ಯ. ತ್ರಿಭುವನಮಲ್ಲ ವಿಕ್ರಮಾದಿತ್ಯ (ಹೆಮ್ಮಾಡಿರಾಯ)ನಿಗೂ ಈತನಿಗೂ ಕೊನೆಕೊನೆಗೆ ವಿರಸಹುಟ್ಟಿ ಈತನು ದಂಡನಾಯಕ ಪದವಿಯನ್ನು ತ್ಯಜಿಸಿದನೆಂದು ವೀರಶೈವ ಪುರಾಣಗಳು ಹೇಳುತ್ತವೆ. ಈ ವಿಕ್ರಮಾದಿತ್ಯನ ಆಳ್ವಿಕೆಯು ಕೊನೆ ಕ್ರಿ.ಶ. ೧೧೨೬. ಹೀಗಾಗಿ ಕೇಶಿರಾಜನು ಕ್ರಿ.ಶ. ೧೧೨೬ಕ್ಕೆ ಮೊದಲು ಮಂತ್ರಿ ಪದವಿಯನ್ನು ತ್ಯಜಿಸಿರಬೇಕು. ಅದಕ್ಕಾಗಿಯೇ "ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದ ಮಹಾಸಾಮನ್ತಾಧಿಪತಿ (ಮ) xxx ಪ್ರಚಣ್ಡ ದಣ್ಮನಾಯಕ ....." ಎಂದು ಶಾಸನ -೧" (ಕ್ರಿ.ಶ. ೧೧೦೭) ಕರೆದರೆ, "ಶ್ರೀಮತ್ ಕೇ [ಸಿ]ಮಯ್ಯ ದಂಡನಾಯಕರು" ಎಂದು ರಾಜಕೀಯ ಬಿರುದುಗಳಿಲ್ಲದೆ ಈ ಶಾಸನ-೨" (ಕ್ರಿ.ಶ. ೧೧೩೨) ಕರೆದಂತಿದೆ. ಒಟ್ಟಿನಲ್ಲಿ ಈ ಕೇಶಿರಾಜನು ಬಸವಣ್ಣನವರ ಕಾಲಕ್ಕೆ ಸಮೀಪದವನಾಗಿ ಕನಿಷ್ಟಪಕ್ಷ ಕ್ರಿ.ಶ. ೧೧೩೨ರ ವರೆಗೆ ಬದುಕಿದ್ದನೆಂದು ತಿಳಿದು ಬರುತ್ತದೆ.

ಈ ಶಾಸನದಲ್ಲಿ "ಶ್ರೀಮತ್ ಕೇ[ಸಿ]ಮಯ ದಂಡನಾಯಕರುಂ ಗಣಪತಿ ದಂಡನಾಯಕರುಂ ಕೂಡಿ ದತ್ತಿ" ನೀಡಿದ್ದಾರೆ. ಈ ರೀತಿ ಅನ್ಯೋನ್ಯರಾಗಿ ನಿಂತು ದತ್ತಿ ನೀಡಿರುವ ವಿಷಯ, ಅವರಲ್ಲಿ ಕೌಟುಂಬಿಕ ಸಂಬಂಧವನ್ನು ಕಲ್ಪಿಸಲು ಪ್ರಚೋದನೆ ನೀಡುತ್ತದೆ. "ಶಾಸನ -೧"ರ ಪ್ರಕಾರ ನಿಂಬಣದಂಡನಾಯಕನ ಮಗ ಕೇಶಿದಂಡನಾಯಕ. ಹಾಗೆಯೇ ಈ ಗಣಪತಿದಂಡನಾಯಕನೂ ಇನ್ನೊಬ್ಬ ಮಗನಾಗಿರಲು ಅಂದರೆ ಕೇಶಿರಾಜದಂಡನಾಯಕನ ತಮ್ಮನಾಗಿರಲು ಸಾಧ್ಯವಿದೆ. ಈ ಮಾತಿಗೆ ಇನ್ನೂ ಆಧಾರ ಬೇಕು.

ಕೊಂಡಗುಳಿ, ಪ್ರಾಚೀನ ಕರ್ನಾಟಕದ ಸುಪ್ರಸಿದ್ಧ ಅಗ್ರಹಾರಗಳಲ್ಲಿ ಒಂದು ಎಂಬ ವಿಷಯ ಇತ್ತೀಚೆ ಬೆಳಕಿಗೆ ಬಂದಿದೆ.[೫] ಈ ಅಗ್ರಹಾರದಲ್ಲಿ ಒಂದು ವಿದ್ಯಾಪೀಠವಿದ್ದಿತು. ಇಲ್ಲಿಯ ಬೇರೆ ಶಾಸನಗಳೂ ಇದನ್ನು ಉಲ್ಲೇಖಿಸುತ್ತವೆ.[೬] ಬಹುಶಃ ಬ್ರಾಹ್ಮಣರಿಂದ ನಡೆಯುತ್ತಿದ್ದ ವೈದಿಕ ಶಿಕ್ಷಣಕ್ರಮವನ್ನೊಳಗೊಂಡ ಈ ಶಾಲೆಗೆ ಅನ್ಯಮತೀಯನಾದ ಕೇಶಿರಾಜನು ನೀಡಿದ ದತ್ತಿಯು ಅವನ ಉದಾರಭಾವವನ್ನೂ ವಿದ್ಯಾಪ್ರೇಮವನ್ನೂ ಸಾರುತ್ತದೆ. ದಂಡನಾಯಕ ಕೇಶಿರಾಜನು ಶರಣನಾಗಿದ್ದ ಕಾರಣ, ಈ ಶಾಸನದ ಮಹಾಜನಗಳಿಗೆ ವರ್ಣನಪರ ವಿಶೇಷಣಗಳನ್ನಾಗಲೀ, ದತ್ತಿಕೊಡುವಲ್ಲಿ "ಮಹಾಜನಂಗಳ ಕಾಲಂ ಕರ್ಚಿ" "ಸರ್ವನಮಸ್ಯವಾಗಿ" ಎಂಬ ಪದಗಳ್ನಾಗಲೀ ಬಳಸಿಲ್ಲವೆಂದು ಭಾವಿಸಬಹುದಾಗಿದೆ.

ಕೇಶಿರಾಜನು ಮಹಾಜನರಿಗೆ ವಿದ್ಯಾನಿಮಿತ್ತ ದತ್ತಿಕೊಟ್ಟರೆ, ಮಹಾಜನರು ಆ ಊರ ಕೇಶವದೇವರಿಗೆ ದೀಪದಾನ, ಪುಷ್ಪದಾನವೆಂದು ಎಣ್ಣೆ, ತೋಟಗಳನ್ನು ನೀಡಿದ್ದಾರೆ. ಹೀಗೆಂದಾಗ ಈ ಸಮಯದಲ್ಲಿ ಕೇಶಿರಾಜನು ಲಿಂಗೈಕ್ಯನಾಗಿ, ಅವನ ಹೆಸರಿನಲ್ಲಿ ಒಂದು ದೇವಾಲಯ ನಿರ್ಮಾಣವಾಗಿದ್ದಿತೆಂದು ಭಾವಿಸುವ ಕಾರಣವಿಲ್ಲ. ಪ್ರಾಚೀನ ಕಾಲದಲ್ಲಿ ತಮ್ಮ ಹೆಸರಿನ ಲಿಂಗಪ್ರತಿಷ್ಠೆಯಿಂದ ತಮಗೆ ದೇವತ್ವ ಪ್ರಾಪ್ತವಾಗುವುದೆಂಬ

---

೫. Agraharas in Ancient Karnataka (೧೯೭೦) S. Leela.

೬. ಸಾಲೆಯ ಸುತ್ತಲುಂ ನಾಲ್ಕು ಬೀದಿಯಲು" SII XX. ೩೦೨
"ಸಾಲೆಯ ಕೇರಿ"- SII XX. ೩೧೯

ನಂಬಿಕೆಯಿದ್ದುದರಿಂದ ಸ್ವತಃ ಕೇಶೀರಾಜನೇ ಒಂದು ದೇವಾಲಯವನ್ನು ಕಟ್ಟಿಸಿ, ತನ್ನ ಹೆಸರಿನ ಲಿಂಗವನ್ನು ಸ್ಥಾಪಿಸಿರಬಹುದು.[೭] ಅಂತಹ ದೇವಾಲಯಕ್ಕೆ ಈ ಮಹಾಜನರು ಕೇಶಿರಾಜನ ಸಮ್ಮುಖದಲ್ಲಿ ದತ್ತಿ ನೀಡಿರಬೇಕು. ಒಟ್ಟಿನಲ್ಲಿ ಕೇಶಿರಾಜನು ತನ್ನ ಅಧಿದೈವ ಸೋಮೇಶ್ವರನ ದೇವಾಲಯವನ್ನು ಕಟ್ಟಿಸಿದನೆಂದು "ಶಾಸನ -೧" ಹೇಳಿದರೆ, ತನ್ನ ಹೆಸರಿನ ಕೇಶವದೇವಾಲಯವನ್ನು ಕಟ್ಟಿಸಿರಬಹುದೆಂದು "ಶಾಸನ -೨" ರಿಂದ ಊಹಿಸಲು ಸಾಧ್ಯವಿದೆ.

■■

ಆಕರ : ಮಾರ್ಗ ಸಂಪುಟ-೨

೭. ಇಲ್ಲವೆ 'ಕೇಶವದೇವ' ಹೆಸರಿನ ಒಂದು ದೇವರು ಪ್ರಾಚೀನ ಕಾಲದಿಂದಲೂ ಆ ಗ್ರಾಮದಲ್ಲಿ ಇದ್ದು, ಆ ಹೆಸರನ್ನೇ ಈ ದಣ್ಣಾಯಕನಿಗೆ ಇಟ್ಟಿರಬಹುದು.

೨೧

ನೆಲುವಿಗೆಯ ಶಾಂತಯ್ಯನ ಒಂದು ಶಾಸನ

'ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ, ಕೂಡಲಸಂಗಮದೇವ ಏಕೋಭಾವ' ಎಂಬ ಆದರ್ಶವನ್ನು ನಂಬಿದ ಶರಣರಿಗೆ, ಕೊಡುವುದು -ಕೊಂಬುದು ಬದುಕಿನ ಸಹಜ ವ್ಯಾಪಾರಗಳೆನಿಸಿದ್ದವು. ಹೀಗಾಗಿ ಅವರು ದಾನಶಾಸನ ಬರೆಯಿಸಲಿಲ್ಲ. ವಸ್ತುಸ್ಥಿತಿ ಹೀಗಿದ್ದರೂ ಮುಂದಿನ ದಿನಗಳಲ್ಲಿ ಅವರ ವಿಷಯವಾಗಿ ಹುಟ್ಟಿದ ಕೆಲವು ಶಾಸನಗಳು ಸಂಶೋಧಕರ ಪರಿಶ್ರಮದಿಂದ ಬೆಳಕಿಗೆ ಬಂದಿದ್ದು, ಪ್ರಸ್ತುತದಲ್ಲಿ ನೆಲುವಿಗೆಯ ಶಾಂತಯ್ಯನೆಂಬ ಶರಣನನ್ನು ಉಲ್ಲೇಖಿಸುವ ಶಾಸನವನ್ನು ಗುರುತಿಸಿಕೊಡಲಾಗಿದೆ.

SII. XX ಗ್ರಂಥವನ್ನು ನಿರೀಕ್ಷಿಸುತ್ತಿರುವಲ್ಲಿ ಭೂಯಾರ (ಇಂಡಿ ತಾಲೂಕ, ವಿಜಾಪೂರ ಜಿಲ್ಲೆ) ಗ್ರಾಮಕ್ಕೆ ಸಂಬಂಧಿಸಿದ ೧೩೮ನೆಯ ನಂಬರಿನ ಶಾಸನವೊಂದು ನನ್ನ ಗಮನಕ್ಕೆ ಬಂದಿತು. ಅದರ ಮುಖ್ಯ ಭಾಗ ಹೀಗಿದೆ :

೧. ನೆಲುವಿಗೆಯ ಸಾತೈಯ[ಗ]ಳ ಶ್ರೀಪಾದಗಳೆ ಶರಣು
೨. ಓಂ ನಮಃ ಶಿವಾಯಃ । ಸ್ವಸ್ತಿ ಶ್ರೀಮತ್ಕಳಚುರಿ -
೩. ಯ ಕುಳ ಭುಜಬಳ ಚಕ್ರವರ್ತಿ ತ್ರಿಭುವನಮ -
೪. ಲ್ಲದೇವರು ಕಲ್ಯಾಣದ ನೆಲವೀಡಿನೊಳು ಸುಖಸಂಕಥಾ -
೫. ವಿನೋದದಿಂ ರಾಜ್ಯಂಗೆಯುತ್ತಮಿರೆ ತತ್ಪಾದ ಪದ್ಮೋಪಜೀವಿಗಳ -
೬. ಪ್ಪ ಶ್ರೀಮನ್ಮಹಾಪ್ರಧಾನಂ ಲಕ್ಷ್ಮೀದೇವ ದಣ್ಣನಾಯಕಂ ಮೂ -
೭. ವತ್ತಾಱುಂ ಬಾಡವಂ ತ್ರೀಭೋಗಾಭ್ಯನ್ತರ ಸಿದ್ಧಿಯಿಂದಾಳು -
೮. ತ್ತಮಿರ್ದ್ದು ಭುಯ್ಯಾರಕ್ಕೆ ನದೀಸ್ನಾನ ನಿಮಿತ್ತಂ ಬಂದು ಕೂ
೯. (ಡ)ಲ ಅಭಿನವ ಮಲ್ಲಿಕಾರ್ಜುನದೇವರಂ ಕ(ಂ)ಣ್ಡು ತಂನ ಪೆರ್ಗ್ಗ-
೧೦. (ಡೆ) ನಾಗ್ಯಣನಾಯಕ ಪ್ರಮುಖ ನಾಲುಕು ಕರಣ್ಣಗಳುಂ (ಪೆ)-
೧೧. ರ್ಗಡೆ ನಾಗದೇವನುಂ ಚಿಕ್ಕಚಂಡರಸಂ ಸಾಂಬರಸಂ ಮಾಚಗಾಲು
೧೨. ಡ (ರೇ)ಚಿಗಾಉಡರು(ಂ) ಮುಖ್ಯವಾಗಿ ಸಮಸ್ತ ಮಾನ್ಯಕಾಜಿರುಂ
೧೩. ಏಳನೆಯ ಚಿತ್ರಭಾನು ಸಂವತ್ಸರದ ವೈಶಾಖದ ಅಮವಾ -
೧೪. ಸ್ಯೆ ಸೋಮವಾರ ಬ್ಯತೀಪಾತದಂದು ನೆಲುವಿಗೆಯ ಶಿವಯೋಗಿ
೧೫. ಸಾತೈಯ್ಯನನುದ್ದೇಶಿಸಿ ಅವರ ಭೃತ್ಯ ಬಸವಯ್ಯಂಗೆ ಊರಿಂ ಪಡುವ

೧೯. ಬೇವಿನೂರ ದಾರಿಯಿಂ ಬಡಗ ಅಮ್ಮಬ್ಬೇಶ್ವ(ರ)ದ ಸ್ಥಳದಿಂ
೧೮. ದೇವರ ಕೇಱಂ ತೆಂಕ ಸರ್ವ್ವಮನಶ್ಯವಾಗಿ ಬಿಟ್ಟರು[೧]........

ಇನ್ನು ಈ ಶಾಸನದಲ್ಲಿ ಉಕ್ತವಾದ ವಿಷಯಗಳನ್ನು ಒಂದೊಂದಾಗಿ ವಿವೇಚಿಸಬಹುದು.

ಶಾಸನದ ಮಿತಿ : ಇಲ್ಲಿ ಹೇಳಲಾದ ಕಳಚುರಿಯಕುಳ ಭುಜಬಳ ಚಕ್ರವರ್ತಿ ತ್ರಿಭುವನಮಲ್ಲದೇವನೆಂದರೆ ಕಳಚುರಿ ವಂಶದ ಸುಪ್ರಸಿದ್ಧ ಅರಸನಾದ ಬಿಜ್ಜಳ. ಈತನ 'ಏಳನೆಯ ಚಿತ್ರಭಾನು ಸಂವತ್ಸರ'ವೆಂದರೆ ಕ್ರಿ.ಶ. ೧೧೬೨. ಅಂದರೆ ಕ್ರಿ.ಶ. ೧೧೬೨ರಲ್ಲಿ ಬಿಜ್ಜಳನು ಕಲ್ಯಾಣ ಪಟ್ಟಣವನ್ನು ಆಳುತ್ತಿದ್ದ ಸಮಯದಲ್ಲಿ ಈ ಶಾಸನ ಹುಟ್ಟಿದೆ.

ಮೂವತ್ತಾಱುಂ ಬಾಡ : "ತರ್ದವಾಡಿಯೆಸೆಗುಂ ತತ್ಕುನ್ತಳಕ್ಷೋಣಿಯೊಳ್. ಆ ವಿಷಯದಲ್ಲಿ ಸೊಗಯಿಸುವುದದು ಮೂವತ್ತಾಱುಂ ಬಾಡ"[೨] ಎಂಬ ಬೇವಿನೂರಿನ ಶಾಸನದಿಂದ ಕುಂತಳನಾಡಿನ ತರ್ದವಾಡಿ ವಿಷಯದಲ್ಲಿ ಮೂತ್ತಾಱುಂ ಬಾಡವೆಂಬ ವಿಭಾಗವೊಂದು ಇದ್ದಿತೆಂದು ತಿಳಿದುಬರುತ್ತದೆ. ೩೬ ಗ್ರಾಮಗಳನ್ನೊಳಗೊಂಡ ಈ ಪ್ರದೇಶ, ಈಗಿನ ಇಂಡಿ ತಾಲೂಕಿಗೆ ಸಂಬಂಧಿಸಿದ ಒಂದು ಭಾಗವಾಗಿದೆ.

ಲಕ್ಷ್ಮೀದೇವ ದಂಡನಾಯಕ : ಮೇಲೆ ಹೇಳಿದ 'ಮೂವತ್ತಾಱುಂ ಬಾಡ' ಪ್ರದೇಶವನ್ನು ಕ್ರಿ.ಶ. ೧೧೬೨ ಸುಮಾರಿಗೆ ಆಳುತ್ತಿದ್ದವನು, ಲಕ್ಷ್ಮೀದೇವ ದಂಡನಾಯಕ. ಈತನು ಒಮ್ಮೆ ಅಮಾವಾಸ್ಯೆಯ ದಿನ, ಭೀಮಾತೀರದ ಭುಯ್ಯಾರ ಗ್ರಾಮಕ್ಕೆ ನದಿಸ್ನಾನದ ನಿಮಿತ್ತ ಬಂದು ಅಲ್ಲಿಯ ಅಭಿನವ ಮಲ್ಲಿಕಾರ್ಜುನದೇವರ ದರ್ಶನ ಪಡೆದು, 'ನೆಲುವಿಗೆಯ ಶಿವಯೋಗಿ ಸಾತ್ಯೆಯ್ಯನ ಭ್ರಿತ್ಯ ಬಸವಯ್ಯ'ನೆಂಬವನಿಗೆ ಭೂಮಿಯೊಂದನ್ನು ದಾನಮಾಡಿದನು.

ನೆಲುವಿಗೆಯ ಶಿವಯೋಗಿ ಸಾತಯ್ಯ : ಗಣಸಹಸ್ರ ನಾಮಾವಳಿಯಲ್ಲಿ ನೆಲುವಿಗೆಯ ಶಾಂತಯ್ಯನೆಂಬ ಶರಣನ ಹೆಸರು ಕಂಡುಬರುತ್ತದೆ. ನೆಲುವಿಗೆ ಎಂಬ ಹೆಸರಿನ ಗ್ರಾಮಗಳು ಹಲವು ಇದ್ದರೂ ಶಾಂತಯ್ಯನಿಗೆ ಸಂಬಂಧಿಸಿದುದು ಗುಲ್ಬರ್ಗಾ ಜಿಲ್ಲೆ ಜೇವರಗಿ ತಾಲೂಕಿಗೆ ಸಂಬಂಧಿಸಿದ ನೆಲವಿಗೆ ಎಂದು ಪರಂಪರೆಯ ಹೇಳಿಕೆ. ಈ ನೆಲುವಿಗೆಗೂ ಪ್ರಸ್ತುತ ಶಾಸನ ಲಭಿಸಿದ ಭೂಯಾರಕ್ಕೂ ಸುಮಾರು ೨೫ ಮೈಲಿನ ಅಂತರವಿದೆ. ಅಲ್ಲದೆ ಶಾಂತಯ್ಯ> ಸಾಂತಯ್ಯ> ಸಾತಯ್ಯ ಎಂಬ ಪರಿವರ್ತನ ಭಾಷೆಯಲ್ಲಿ ನಡೆಯುವ ಸಹಜಕ್ರಿಯೆಯಾಗಿದೆ. ಆದುದರಿಂದ ಶಾಸನೋಕ್ತ ನೆಲುವಿಗೆಯ ಸಾತಯ್ಯನೆಂದರೆ ಶರಣ ಸಮುದಾಯದಲ್ಲಿ ಕಂಡುಬರುವ ನೆಲುವಿಗೆಯ ಶಾಂತಯ್ಯನೇ ಆಗಿರಬೇಕು.

ನನಗೆ ತಿಳಿದ ಮಟ್ಟಿಗೆ, ನೆಲುವಿಗೆಯ ಶಾಂತಯ್ಯನನ್ನು ಕುರಿತು ಯಾವುದೇ ವಿಷಯ ವೀರಶೈವ ಪುರಾಣಗಳಲ್ಲಿ ಕಂಡುಬರುವುದಿಲ್ಲ. ಈ ಶಾಸನದಿಂದ ಮಾತ್ರ ಬಸವಯ್ಯವೆಂಬುವನು ಅತನ ಭೃತ್ಯನೆಂದು ವಿದಿತವಾಗುತ್ತದೆ. ನೆಲುವಿಗೆಯ ಶಿವಯೋಗಿ ಸಾತ್ಯೆಯನನ್ನುದ್ದೇಶಿಸಿ ಅವರ ಭ್ರಿತ್ಯ ಬಸವಯ್ಯಂಗೆ ದತ್ತಿ ನೀಡಲಾಯಿತೆಂದು ಇಲ್ಲಿ ಹೇಳಿರುವುದರಿಂದ ದತ್ತಿ ಪಡೆದವನು ಶಾಂತಯನಲ್ಲ ಅವನ ಭೃತ್ಯ ಬಸವಯ್ಯ.

---

೧. ಶಾಸನ ಇನ್ನೂ ಮುಂದೆ ಇದ್ದು, ಅಲ್ಲಿ ಹಲವು ದತ್ತಿಗಳ ವಿಷಯ ಬಂದಿದೆ.
೨. SII XX No. ೧೭೫

ಬಹುಶಃ ಈ ಶಾಸನದ ಕಾಲದಲ್ಲಿ ಶಾಂತಯ್ಯನು ಬದುಕಿರುವುದಕ್ಕಿಂತ ಐಕ್ಯನಾಗಿರುವುದೇ ಹೆಚ್ಚು ಸಂಭವನೀಯವಾಗಿರುವುದರಿಂದ, ಬಸವನಿಗೆ ಪ್ರಾಚೀನರಾಗಿ ವೀರಶೈವವನ್ನು ರೂಪಿಸುತ್ತಿದ್ದ ಶರಣರಲ್ಲಿ ಈತನೂ ಒಬ್ಬನಾಗಿರಬಹುದು. ಅಥವಾ ಬಸವಣ್ಣನವರಿಗೆ ಹಿರಿಯ ಸಮಕಾಲೀನವಾಗಿ ಕಲ್ಯಾಣದ ಆಂದೋಲನದ ಕಾಲದಲ್ಲಿ ಬದುಕಿರಲೂಬಹುದು.

ಪರಿಯಳಿಗೆ, ಆಣಿಲೆವಾಡ, ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮಾರುಡಿಗೆ, ಅಣಂಪೂರ, ಕರಹಾಡ, ಕೆಂಭಾವಿ ಮತ್ತು ಬಮ್ಮಕೂರ ಗ್ರಾಮಗಳಿಗೆ ಸಂಬಂಧಿಸಿದ ಶರಣರನ್ನು ಉಲ್ಲೇಖಿಸುವ ತಾಳಿಕೋಟಿ ಶಾಸನ (೧೧೮೪)ವೇ ಶರಣರನ್ನು ಉಲ್ಲೇಖಿಸುವ ಪ್ರಾಚೀನತಮ ಶಾಸನವೆಂದು ಈವರೆಗೆ ಭಾವಿಸಲಾಗಿತ್ತು. ಆದರೆ ಶರಣರ ಆಂದೋಲನೆಯ ಯೌವನಕಾಲದಲ್ಲಿ ಹುಟ್ಟಿದ (ಕ್ರಿ.ಶ. ೧೧೬೨) ಈ ಶಾಸನವೇ ಕಲ್ಯಾಣ ಶರಣರನ್ನು ಕುರಿತ ಪ್ರಾಚೀನತಮ ಶಾಸನವೆಂದು ಈಗ ತಿಳಿದುಬರುತ್ತದೆ. ಈ ದೃಷ್ಟಿಯಿಂದ ಈ ಶಾಸನಕ್ಕೆ ಬಹಳ ಬೆಲೆ ಕೊಡಬೇಕಾಗುತ್ತದೆ.

ಒಂದು ಊಹೆ : ಮೊಗಲಾಯಿ ಇಲಾಖೆಯ ಸಿರಿವಾಳ ಗ್ರಾಮದ ಸಿದ್ಧಲಿಂಗೇಶ್ವರ ಗುಡಿಯ ಶಾಸನ[೩]ವೊಂದರಲ್ಲಿ "ಶ್ರೀಮದ್ಯಣಿಮಾದ್ಯಷ್ಟಗುಣ ಸಂಪನ್ನರುಂ, ಪಟ್ಕ್ರಿಯಾನಿರತರುಂ, ಸಾರಸೌರಭ್ಯ ಸರ್ವನಿಸ್ಸಂಗರುಮಪ್ಪ ಶಿವಯೋಗಿ ಶಾಂತಿಮಯ್ಯಗಳ ಪುತ್ರ ರೇವಣದೇವಯ್ಯಗಳ ಪ್ರಸಿದ್ಧಿಯೆಂತೆಂದಡೆ" ಎಂದು ಶಿವಯೋಗಿ ಶಾಂತಿಮಯ್ಯನೆಂಬವನ ಹೆಸರು ಕಂಡುಬರುತ್ತದೆ. ಭೂಯಾರ-ನೆಲುವಿಗೆ ಮತ್ತು ನೆಲುವಿಗೆ-ಸಿರಿವಾಳಗಳು ಪರಸ್ಪರ ೨೫ ಮೈಲು ಅಂತರದಲ್ಲಿವೆ. ಅಲ್ಲದೆ ಭೂಯಾರ ಶಾಸನ (ಕ್ರಿ.ಶ. ೧೧೬೨) ಮತ್ತು ಸಿರಿವಾಳ ಶಾಸನ (೧೧೮೭)ಗಳು ಕೇವಲ ೨೫ ವರ್ಷಗಳ ಅಂತರದಲ್ಲಿ ಹುಟ್ಟಿಕೊಂಡಿವೆ.

ಇಲ್ಲಿ ಕಾಲ, ದೇಶ ಮತ್ತು ನಾಮಗಳಲ್ಲಿ ಸಾಮ್ಯತೆ ಕಂಡುಬರುವುದರಿಂದ ನೆಲುವಿಗೆಯ ಶಿವಯೋಗಿ ಸಾತಯ್ಯ ಮತ್ತು ಸಿರಿವಾಳ ಶಾಸನದ ಶಿವಯೋಗಿ ಶಾಂತಿಮಯ್ಯ ಈ ಇಬ್ಬರೂ ಒಬ್ಬನೇ ಆಗಿರುವ ಸಂಭವವಿದೆ. ಇದು ನಿಜವಿದ್ದ ಪಕ್ಷದಲ್ಲಿ ಒಂದು ಬಳ್ಳ ಅನ್ನದಿಂದ ಸಮಸ್ತ ಸೈನ್ಯವನ್ನೇ ತೃಪ್ತಿಗೊಳಿಸಿದನೆಂಬಿವೇ ಮೊದಲಾದ ಆರು ಪವಾಡಗಳಿಂದ ಸಿರಿವಾಳ ಶಾಸನದಲ್ಲಿ ಉಲ್ಲೇಖಿತನಾದ ರೇವಣದೇವಯ್ಯನೆಂಬವನ ಗುರು, ಈ ನೆಲುವಿಗೆಯ ಸಾಂತಯ್ಯನೆನ್ನಬೇಕಾಗುತ್ತದೆ. ಈ ವಿಷಯವನ್ನು ವಿದ್ವಾಂಸರು ವಿವೇಚಿಸಬೇಕು.

■■

ಆಕರ : ಮಾರ್ಗ ಸಂಪುಟ–೨

---

೩. ಶಿವಾನುಭವ ೪-೨.

೨೨

ಶಾಸನಗಳಲ್ಲಿ ಶಿವಶರಣರು

ಸತ್ಯ, ಸಂಭಾವ್ಯ, ಊಹೆ - ಈ ಮೂರನ್ನು ಒಂದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸೇರಿಸಿ ಚರಿತ್ರೆ ಬರೆಯಬೇಕಾಗಿ ಬಂದುದು ನಮ್ಮ ದುರ್ದೈವ. ಇದರಿಂದ ತಪ್ಪಿಸಿಕೊಳ್ಳಲು ನಾವು ಆಶ್ರಯಿಸಬೇಕಾದ ಪ್ರಮುಖಸಾಧನಗಳೆಂದರೆ ಶಾಸನಗಳು. ಇವುಗಳನ್ನು ಅಭ್ಯಸಿಸಿ ಶರಣ ಚರಿತ್ರೆಯನ್ನು, ಅವರ ಪರಂಪರೆ ಸಾಗಿಬಂದ ರೀತಿಯನ್ನು ಅರ್ಥಮಾಡಿಕೊಳ್ಳುವುದು ಮಹತ್ವಪೂರ್ಣ ಅಭ್ಯಾಸವೆನಿಸಿದೆ. ಆದರೆ ಶಾಸನನಿರ್ಮಾಣದ ಮೂಲೋದ್ದೇಶಗಳಾದ ಲಿಂಗಪ್ರತಿಷ್ಠಾಪನೆ, ದೇವಾಲಯ ನಿರ್ಮಾಣ, ಕೀರ್ತಿಮೂಲ ಪರೋಪಕಾರ, ಪರಾವಲಂಬನ ಪ್ರವೃತ್ತಿಗಳನ್ನು ಮೆಟ್ಟಿನಿಂತ ಶರಣರು ತಮ್ಮನ್ನು ಕುರಿತು ಶಾಸನಗಳನ್ನು ಬರೆದಿರುವುದು, ಬರೆಸಿರುವುದು ಅಸಂಭವ. ಹೀಗಾಗಿ ಶಾಸನಗಳಲ್ಲಿ ಶಿವಶರಣರನ್ನು ಗುರುತಿಸುವವರಿಗೆ ಸಾಮಗ್ರಿಯೆಂದರೆ, ಶರಣರು ಪೂರ್ವಾಶ್ರಮದಲ್ಲಿ ಬರೆಯಿಸಿರಬಹುದಾದ ಮತ್ತು ತರುವಾಯದ ಕಾಲದಲ್ಲಿ ಅವರ ಅನುಯಾಯಿಗಳು ಬರೆಯಿಸಿರಬಹುದಾದ ಶಾಸನಗಳು. ಕರ್ನಾಟಕದ ಅಪಾರ ಶಾಸನಸಂಪತ್ತಿನೊಂದಿಗೆ ಹೋಲಿಸಿದರೆ ಅವುಗಳ ಸಂಖ್ಯೆ ತೀರ ವಿರಳ. ಈ ವಿರಳ ಸಂಖ್ಯೆ ಪೂರೈಸುವ ಅತ್ಯಮೂಲ್ಯ ಸತ್ಯವನ್ನು ಹೀಗೆ ಸಂಗ್ರಹಿಸಬಹುದು :

ಕರ್ನಾಟಕದಲ್ಲಿ ಶರಣಪರಂಪರೆಯನ್ನು ನಿಚ್ಚಳವಾಗಿ ಪ್ರಾರಂಭಿಸಿದವರು ಕಲ್ಯಾಣದ ಶಿವಶರಣರು. ಇವರಿಗೆ ವಂದ್ಯರಾದ ಅರುವತ್ತುಮೂರು ಪುರಾತನರನ್ನು, ಭೋಜ ಮೊದಲಾದ ಶಿವೋಪಾಸಕರನ್ನು ಈ ಶರಣವರ್ಗದಲ್ಲಿ ಪರಿಗಣಿಸಬೇಕಾಗುತ್ತದೆ. ಅರವತ್ತುಮೂವರು ತಮಿಳುನಾಡಿಗೆ ಸಂಬಂಧಿಸಿದವರು. ರಾಜವಂಶ ಸಂಭೂತರೂ, ರಾಜಪೂಜ್ಯರೂ ಆದ ಈ ಕೆಲವರ ಅನೇಕ ವಿಗ್ರಹ, ದೇವಾಲಯ ಮತ್ತು ಶಾಸನಗಳು ತಮಿಳುನಾಡಿನಲ್ಲಿ ಕಾಣಸಿಗುತ್ತವೆ. ಕರ್ನಾಟಕದಲ್ಲಿ ಮಾತ್ರ ಈ ಸಂಖ್ಯೆ ತೀರ ಕಡಿಮೆ. ನಂಜನಗೂಡು ಶ್ರೀ ಕಂಠೇಶ್ವರ ದೇವಾಲಯ, ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ ಮತ್ತು ಬಳ್ಳಾರಿಯ ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಇವರ ವಿಗ್ರಹಗಳಿವೆ. 'ಪುರಾತನ' ಎಂಬ ಸ್ತೋಮಸೂಚೀ ಪದ ತಾಳಿಕೋಟೆ, ಅಬ್ಬಲೂರು, ಅರ್ಜುನವಾಡ ಮತ್ತು ಕೇರಳಾಪುರ ಗ್ರಾಮಗಳಲ್ಲಿ ಕಂಡುಬರುತ್ತದೆ. ಅರುವತ್ತುಮೂವರಲ್ಲಿ ಒಬ್ಬನಾದ ಚೋಳನನ್ನು ಹಿರಿಯೂರು ಕಲ್ಲೇದೇವರಪುರ ಶಾಸನಗಳು 'ಚೋಳ' ಎಂದು, ಮರಡಿಪುರ ಶಾಸನ 'ಕರಿಕಾಲಚೋಳ' ಎಂದು ಹೆಸರಿಸಿದರೆ, ಚೋಳನಿಗೆ ಹೊನ್ನ ಮಳೆಗರೆದ ಪವಾಡವನ್ನು ಹೇಳುತ್ತದೆ - ಶ್ರೀಶೈಲ ಶಾಸನ. ಚೋಳನಂತೆ 63 ರಲ್ಲಿ ಪರಿಗಣಿತವಾದವ ಚಕ್ರವರ್ತಿ ಚೇರಮ. ಈತನ ಉಲ್ಲೇಖ ಬರುವುದು ಕಲ್ಲೇದೇವರಪುರದ ಶಾಸನದಲ್ಲಿ. ಅಬ್ಬಲೂರು ಹಿರಿಯೂರ, ಮರಡಿಪುರ ಶಾಸನಗಳಲ್ಲಿ ಹೆಸರಿನ ಮೂಲಕ ಕಾಣಿಸಿಕೊಂಡ ಸಿರಿಯಾಳ ಅಬ್ಬಲೂರಿನ ಸೋಮೇಶ್ವರ ದೇವಾಲಯದಲ್ಲಿ ಶಿಲ್ಪದ ಮೂಲಕವೂ ಅಭಿವ್ಯಕ್ತಿಗೊಂಡಿದ್ದಾನೆ. ಅಬ್ಬಲೂರು, ಕಲ್ಲೇದೇವರಪುರ ಶಾಸನಗಳಲ್ಲಿ ಮಾದಾರಚೆನ್ನ ನಾಮಮಾತ್ರ ಉಲ್ಲೇಖಿತನಾಗಿದ್ದಾನೆ. ಕಬ್ಬೂರು ಶಾಸನೋಕ್ತ

ಕಾರಿಕಲ್ಲಯಮ್ಮೆಯನ್ನು ಪುರಾತನ ಸಮೂಹದ ಕಾರಿಕಲ್ಲಮ್ಮೆಯೊಂದಿಗೆ ಸಮೀಕರಿಸುವಲ್ಲಿ ಸಂದೇಹ ಉಳಿದುಕೊಳ್ಳುತ್ತದೆ. ಇದಲ್ಲದೆ ಕುಡುತಿನಿ ಶಾಸನದ

ಕರಕಮಳಂಗಳಂ ಮುರಿದುಮಾಪತಿಗೇರಿಸಿ ಮೀಂಟಿ ಕಂಗಳಂ।
ಹರನ ಶಿಖಾಗ್ರದೊಳ್ನಿರಿಸಿ ದಂಡೆಗರುಳ್ಗಳೊಳೆಡೆಯಂ ಭಯಂ।
ಕರಮೆನೆ ಮಾಡಿ ಶಂಕರನನರ್ಚಿಸಿ ಪಂದಲೆಯಿಂ ನಿವಾಳಿಯಂ
ಪುರಮಥನಂಗೆ ಕೊಟ್ಟು ಮಗಳ್ದಿಂ ಪಡೆವರ್ಪ್ರಮಥರ್ಕಳದ್ಭುತಂ ॥

ಕ್ರೂರವಿಷಯಂಗಳಂ ಕುಡಿವರಂತಕನಂ ಜರೆವರ್ಮಹೋಗ್ರ ಕಾ।
ಘೋರಗನಂ ಕಡಂಗಿ ಪಿಡಿವರ್ಸಿಡಿಲಂ ಪೊಡೆವರ್ಗ(ಜಾ)ರಿಯಂ
(ಯಾ)ರಿಗೆ ತಪ್ಪ(ರಿ)ಳ್ದು ಶಿವದೂಷಕನೆಂಬವನೊಕ್ಕಲಿಕ್ಕುವ
ವೀರ ಗಣಂಗಳೆಂದೊಡಿದಿರಾರ್ ಪ್ರಮಥರ್ಗ್ಗೆ ಜಗತ್ರಯಂಗಳೊಳ್ ॥

ಎಂಬ ಪದ್ಯಗಳ ಮತ್ತು ಇಂಗಳಗಿ ಶಾಸನದ

ಕರಕರನಂ ಸೆಂಡಾಡುವ।
ರುರಗಪನಂ ಕೀರಲಿಟ್ಟು ಬಿಟ್ಟಿಕ್ಕುವರಾ।
ಗಿರಿಕುಳಮಂ ಕಿತ್ತೆತ್ತುವ।
ರುರಿಯೊಳು ಪರಿಮರಿಯಾಡುತಿರ್ಪರು ಶರಣರು ॥

ಎಂಬ ಪದ್ಯದ ಉಗ್ರಭಕ್ತಿ ಈ ಅರುವತ್ತುಮೂವರನ್ನು ನೆನಪಿಸುತ್ತದೆ. ಇವರನ್ನು ಬಿಟ್ಟರೂ ಮಿಕ್ಕ ಶಿವಭಕ್ತರಾದ ಕುಂಬಾರಗುಂಡ, ಆಂಡವಲ (?) ಇವರ ಉಲ್ಲೇಖ ಮರಡಿಪುರ ಶಾಸನದಲ್ಲಿ, ಕುಂಬಾರ ಗುಂಡನ ವಿಗ್ರಹ ಅಬ್ಬಲೂರು ಸೋಮೇಶ್ವರದೇವಾಲಯದಲ್ಲಿ ಗೋಚರಿಸುತ್ತವೆ.

ಈ ಅರುವತ್ತಮೂವರನ್ನು ಬಿಟ್ಟರೆ, ಶರಣರಿಗೆ ಪೂಜ್ಯರಾದವರು ಬಾಣ, ಮಯೂರ, ಕಾಳಿದಾಸ, ಹಲಾಯುಧ, ಉದ್ಭಟ, ಮಳಯೇಶ್ವರ ಮತ್ತು ಭೋಜ. ಇವರ ಪ್ರತ್ಯಕ್ಷ ಇಲ್ಲವೆ ಪರೋಕ್ಷ ಉಲ್ಲೇಖ ಹಿಪ್ಪರಗಿ, ಅಬ್ಬಲೂರು, ಹಿರಿಯೂರು, ಮರಡಿಪುರ, ಕುಡತಿನಿ, ಬೆಣಚಮಟ್ಟಿ, ಹುಮ್ಮಚ, ಚಿಕ್ಕಹಂದಿಗೋಳ, ತಂಡಗದ, ಕಲ್ಲೇದವಪುರ ಶಾಸನಗಳಲ್ಲಿ ಎಡೆಪಡೆದಿದೆ.

ಈ ತರುವಾಯ ಬರುವವರು ಷೋಡಶರು, ತೇರಸರು ಮತ್ತು ದಶಗಣರು. ಷೋಡಶರಲ್ಲಿ ಒಬ್ಬಳಾದ ಅಣಂಪುರ ಗುಡ್ಡವ್ವೆಯು ತಾಳಿಕೋಟೆ, ಇಂಗಳಿಗಿ, ವಿಜಾಪುರ ಶಾಸನಗಳಲ್ಲಿ ವರದಾನಿ, ದಾನಚಿಂತಾಮಣಿ ಎಂದೂ ಪರಸಮಯಿಗಳನ್ನು ಪಡವಲ್ಪಡಿಸಿದ ಶಿವಭಕ್ತೆಯೆಂದೂ ವರ್ಣಿತಳಾಗಿದ್ದಾಳೆ. ತೇರಸವರ್ಗದ ಶರಣರ ಉಲ್ಲೇಖ ಶಾಸನಗಳಲ್ಲಿ ಬಾರದಿದ್ದರೂ ಷೋಡಶ ಮತ್ತು ತೇರಸ ವರ್ಗಗಳ ಮಧ್ಯ ಬಾಳಿನ ಮಾರುಡಿಗೆ ನಾಚಯ್ಯನ ಉಲ್ಲೇಖ ತಾಳಿಕೋಟೆ ಶಾಸನದಲ್ಲಿ ನೆಲೆವಡೆದಿದೆ. ದಶಗಣದಲ್ಲಿ ಒಬ್ಬನಾದ ಸಿಂಗಿದೇವನು ಇಂಗಳಗಿಯ ಶಾಸನದಲ್ಲಿ ಕಂಡುಬರುತ್ತಾನೆ. ಇವರಲ್ಲದೆ ಪರಿಯಳಿಗೆಯ ವೈಜಕವ್ವೆಯನ್ನು ಮತ್ತು ಅಣಿಲೆವಾಡ, ಉಣಕಲ್ಲ, ಸಂಪಗಾವ, ಕರಹಾಡ, ಬಮ್ಮಕೂರುಗಳಿಗೆ ಸಂಬಂಧಿಸಿದ ಹೆಸರುಗೊತ್ತಿರದ ಶರಣರನ್ನು ಉಲ್ಲೇಖಿಸುತ್ತದೆ, ತಾಳಿಕೋಟೆ ಶಾಸನ.

ಈ ಹೆಸರುಗಳ ಜೊತೆ ಬಸವಪೂರ್ವಯುಗದ ಇನ್ನೂ ಕೆಲವು ಶರಣರನ್ನು ಶಾಸನಗಳು ಉಲ್ಲೇಖಿಸುತ್ತವೆ: ಹಿರಿಯೂರು, ಮರಡಿಪುರ ಶಾಸನಗಳು ಕೆಂಬಾವಿಭೋಗಣ್ಣನನ್ನು; ಗೊಬ್ಬೂರು, ಚಿಕ್ಕಮುದೇನೂರು, ಕಿರಿಯಿಂಡಿ, ಗೀಜಗನಹಳ್ಳಿ, ಬಿದರೆ, ಅಬ್ಬಲೂರು ಶಾಸನಗಳು ಜೇಡರದಾಸಿಮಯ್ಯನನ್ನು ಹೆಸರಿಸುತ್ತವೆ. ಇವುಗಳಲ್ಲಿ ಅಬ್ಬಲೂರು ಶಾಸನದ ಕೆಳಗೆ ಅವನ ವಿಗ್ರಹವನ್ನು ಕೆತ್ತಲಾಗಿದೆ. ಒಂದುನೂರು ವರ್ಷದ ಅವಧಿಯಲ್ಲಿ ರಾಯಚೂರು ಜಿಲ್ಲೆಯ ಗೊಬ್ಬೂರಿನಿಂದ ಹಾಸನ ಜಿಲ್ಲೆಯ ಅರಸಿಕೆರೆಯಷ್ಟು ದೂರ ಜೇಡರ ದಾಸಿಮಯ್ಯನ ಶಿಷ್ಯಪರಂಪರೆ ಹಬ್ಬಿದ್ದುದನ್ನು ತಿಳಿಸಿಕೊಡುತ್ತವೆ, ಈ ಶಾಸನಗಳು. ದೇವರ ದಾಸಿಮಯ್ಯನ ಶಿಷ್ಯೆಯಾದ ರಾಣಿ ಸುಗ್ಗಲೆಯನ್ನು ದೇವೂರುಶಾಸನ ಅರಸಿಯೆಂದು ಉಲ್ಲೇಖಿಸಿದರೆ, ಕೆರೆಸಂತೆ ಶಾಸನವು-

ಪಡೆದಳ್ಸುಗ್ಗಲದೇವಿ ಮುನ್ನೆ ಜಯಸಿಂಹೋರ್ವೀಶನೊಳು ಸೌಖ್ಯಮಂ ।
ಪಡೆದಳು ಸಾಂತಲದೇವಿ ಮತ್ತೆ ತೊದಳೇ ಶ್ರೀ ವಿಷ್ಣು ಭೂಪಾಳನೊಳ್।
ಪಡೆದಳ್ಕೇತಲದೇವಿ ವಲ್ಲಭನೊಳೀ ಬಲ್ಲಾಳ ಭೂಪಾಳನೊಳ್ ।
ಪಡೆದಮ್ಮೂರ್ವರು ಮೂವರರಸಿಯರು ಸೌಭಾಗ್ಯ ಭಾಗ್ಯಂಗಳಂ ॥

ಎಂಮೂ, ಬೇಲೂರಿನ ಶಾಸನ

ಜಯಸಿಂಹಕ್ಷಿತಿಪಾಳಕಂಗೆ ಜಗಮೆಲ್ಲಂ ಬಣ್ಣಿಸಲ್ ಪೂಣ್ಬ ಭಾ ।
ಷೆಯನಾ ಸುಗ್ಗಲದೇವಿ ಕೊಟ್ಟ ತೆರದಿಂ ಬಲ್ಲಾಳಭೂಪೋತ್ತಮ ।
ಪ್ರಿಯಪುತ್ರಂಗೆ ಕುಮಾರಲಕ್ಷ್ಮರಥಿನೀನಾಥಂಗೆ ಕೊಟ್ಟಳ್ ಮನಃ ।
ಪ್ರಿಯದಿಂ ಸುಗ್ಗಲದೇವಿಯ ಭಾಷೆಯನಿಳಾಚಕ್ರಂ ಪೊಗಳ್ವನ್ನೆಗಂ ॥

ಎಂದೂ ಈಕೆಯ ಘನವ್ಯಕ್ತಿತ್ವವನ್ನು ಕೀರ್ತಿಸುತ್ತವೆ. ಇದೇ ಕಾಲದ ಇನ್ನೊಬ್ಬ ಶರಣನಾದ ಕೊಂಡಗುಳಿ ಕೇಶಿರಾಜನನ್ನು ಅಬ್ಬಲೂರು, ಮರಡಿಪುರ ಶಾಸನಗಳು ನಾಮಮಾತ್ರ ಉಲ್ಲೇಖಿಸಿದರೆ, ಇತ್ತೀಚೆ ಬೆಳಕಿಗೆ ಬಂದ ಕೊಂಡಗುಳಿಯ ಎರಡು ಶಾಸನಗಳು ಈತನ ಚರಿತ್ರೆ ಮತ್ತು ವ್ಯಕ್ತಿತ್ವಗಳ ಮೇಲೆ ಬೆಳಕು ಚೆಲ್ಲಿವೆ. ಈತನ ತಂದೆ ನಿಂಬಣದಂಡನಾಥ. ತಮ್ಮ ಗಣಪತಿ ದಂಡನಾಥ (?) ಎಂಬ ನವೀನ ಅಂಶಗಳು ಇದರಿಂದ ತಿಳಿದುಬಂದಿವೆ.

ಬಸವಯುಗದ ಒಳ-ಹೊರಗೆ ಇರಬಹುದಾದ ಪಂಚಾಚಾರ್ಯ ಮತ್ತು ಪಂಡಿತತ್ರಯರನ್ನೂ ಶಾಸನಗಳು ಮರೆತಿಲ್ಲ. ಶ್ರೀಪತಿ ಪಂಡಿತರು ಬಟ್ಟೆಯಲ್ಲಿ ಬೆಂಕಿಕಟ್ಟಿದ ಪವಾಡವನ್ನು ಬೆಳ್ಳುವಾಡ ಶಾಸನ ಹೇಳಿದರೆ, ಗುಬ್ಬಿಶಾಸನ ಅಮರಗುಂಡ ಮಲ್ಲಿಕಾರ್ಜುನನ್ನೂ, ಬಯಿರತ್ತಿ, ಸಿರಿವಾಳ, ಅವ್ವೆಯರ ಹಳ್ಳಿ, ಚೌಡದಾನಪುರ, ಲಕ್ಷ್ಮೇಶ್ವರ ಶಾಸನಗಳು ರೇವಣಸಿದ್ಧನನ್ನೂ ಹೆಸರಿಸುತ್ತವೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ರೇವಣಸಿದ್ಧನ ಅನೇಕ ಕುರುಹುಗಳನ್ನು ಜನತೆ ತೋರಿಸುತ್ತಾರೆ. ಇವುಗಳಲ್ಲಿ ಕಾಲ ಮತ್ತು ಚರಿತ್ರೆಗಳ ದೃಷ್ಟಿಯಿಂದ ಮಹತ್ವಪೂರ್ಣವಾದುದು ಸಿರಿವಾಳ ಶಾಸನ.

ಇವರೆಲ್ಲ ಶಾಸನಗಳಲ್ಲಿ ಕಂಡುಬರುವ ಬಸವಪೂರ್ವದ ಶಿವಶರಣರು. ಈ ತರುವಾಯ ಕನ್ನಡನಾಡಿನ ಕ್ಷಿತಿಜದ ಮೇಲೆ ಅಗಣಿತ ಶರಣರು ಮೂಡಿಬಂದು ವೀರಶೈವ ಆಂದೋಲನಕ್ಕೆ ಸುಗ್ಗಿಯ ತಿರುವು ಕೊಟ್ಟರು. ಈ ಆಂದೋಲನದ ಅಧಿನಾಯಕ ಬಸವಣ್ಣ. ಈವರೆಗೆ ಬಸವಣ್ಣನವರನ್ನು ಕುರಿತು ಹಿರಿಯೂರು, ಅರ್ಜುನವಾಡ, ಚೌಡದಾನಪುರ-೧, ಚೌಡದಾನಪುರ-೨, ಕಲ್ಲೇದೇವರಪುರ, ಮರಡಿಪುರ, ಗುಡಿಹಾಳ, ಕುಂಟೋಜಿ, ಆನಂದಪುರ,

ಜೋಡಿದಾಸೇನಹಳ್ಳಿ, ಕಾನಕಾನಹಳ್ಳಿ-೧ ಕಾನಕಾನಹಳ್ಳಿ-೨, ಹೀಗೆ ೧೧ ಶಾಸನಗಳು ಲಭಿಸಿ "ಬಸವಣ್ಣನವರನ್ನು ಕುರಿತು ಗ್ರಂಥಗಳಲ್ಲಿರುವ ಒಂದು ವಿಷಯಕ್ಕೂ ಶಾಸನಾಧಾರ ಒಂದಾದರೂ ಇಲ್ಲವೆಂಬುದೇ ಆಶ್ಚರ್ಯವು. ಇಂಥ ಮಹಾಪುರುಷನನ್ನು ಕುರಿತು ಶಾಸನಗಳೆಲ್ಲ ಮೌನಮುದ್ರೆ ವಹಿಸಿವೆ ...... ಇದೇ ಬಸವಣ್ಣನು ಚಾರಿತ್ರಿಕ ಪುರುಷನೋ ಅಲ್ಲವೋ ಎಂಬ ಸಂದೇಹಕ್ಕೆ ಮೂಲವು" ಎಂಬ ಮಾತುಗಳು ಈಗ ಬೇರು ಸಹಿತ ಬಿದ್ದುಹೋಗಿವೆ.

ಈಗ ಹನ್ನೊಂದು ಶಾಸನಗಳಿಂದ ಬಸವಣ್ಣನವರಿಗೆ ಸಂಬಂಧಿಸಿದ ನಂದಿಯ ಅವತಾರ, ೧,೯೬,೦೦೦ ಜಂಗಮದಾಸೋಹ ಮತ್ತು ನಿತ್ಯಪವಾಡಗಳೆಂಬ ಅಲೌಕಿಕ ಹೇಳಿಕೆಗಳ, ತರ್ದವಾಡಿ ಮಧ್ಯಗ್ರಾಮ ಬಾಗವಾಡಿ, ಬಾಗವಾಡಿಯ ಪುರಪ್ರಭು ಮಾದಿರಾಜನ ಮಗ ಬಸವಣ್ಣ, ಬಸವಣ್ಣನ ಅಣ್ಣ ದೇವರಾಜ, ದೇವರಾಜನ ಮಗ ಕಲಿದೇವ, ಕಲಿದೇವನ ಮಗ ಹಾಲಬಸವಿದೇವ ಎಂಬ ಚಾರಿತ್ರಿಕ ಸಂಗತಿಗಳ ಮತ್ತು ಅವನು ಆತ್ಮೀಕರಿಸಿಕೊಂಡ ಲಿಂಗಪೂಜೆ, ಜಂಗಮದಾಸೋಹ, ಪ್ರಸಾದಸಿದ್ಧಿ, ಪುರಾತನ ಭಕ್ತಿ, ಸಮಯಭಕ್ತಿಗಳೆಂಬ ವ್ಯಕ್ತಿಸಿದ್ಧಿಗಳ ಒಟ್ಟು ಚಿತ್ರ ಕಣ್ಣಿಗೆ ಕಟ್ಟುತ್ತದೆ.

ಹರಿಹರದೇವನು "ಬಸವಣ್ಣ ಬಸವರಾಜ ... ಎಂದು ಎದೆಯುಕ್ಕಿ ಕರೆದಂತೆ ಈ ಶಾಸನಗಳು ಬಸವಯ್ಯ, ಸಂಗನಬಸವಯ್ಯ, ಬಸವೇಶ್ವರ, ಬಸವೇಶ್ವರಸ್ವಾಮಿ, ಬಸವರಾಜ, ಬಸವರಾಜದೇವರು, ಸಂಗನಬಸವರಾಜೇಂದ್ರ ಎಂದು ನಾಮಸ್ಮರಣೆ ಮಾಡಿವೆ. ಅರ್ಜುನವಾಡ ಶಾಸನವಂತೂ

ಮಂಗಳಕೀರ್ತಿ ಪುರಾತನ ।
ಜಂಗಮ ಲಿಂಗೈಕ ಭಕ್ತಿನಿರ್ಭರ ಲೀಲಾ ।
ಸಂಗಂ ಸಂಗನ ಬಸವಂ ।
ಸಂಗತಿಯಂ ಮಾಳ್ಕೆ ಭಕ್ತಿಯೊಳಗನವರತಂ ॥

ಎಂದು ಭಕ್ತಿಪ್ರಸಾದವನ್ನು ಯಾಚಿಸುತ್ತ, ಅವನ ವ್ಯಕ್ತಿತ್ವದ ಚಿತ್ರವನ್ನು ಬಿಡಿಸಿದೆ.

ಇಲ್ಲಿಯ ಹಿರಿಯೂರ- ೧೨೫೫ (ಹಾಸನಜಿಲ್ಲೆ), ಕಲ್ಲೇದೇವರಪುರ -೧೨೭೮(ಚಿತ್ರದುರ್ಗ ಜಿಲ್ಲೆ), ಮುರಡಿಪುರ -೧೨೮೦ (ಮೈಸೂರುಜಿಲ್ಲೆ) ಶಾಸನಗಳಲ್ಲಿ ಬರುವ ಶರಣರ ಮತ್ತು ಬಸವಣ್ಣನ ನಾಮಸ್ಮರಣೆಯನ್ನು ಗಮನಿಸಿದರೆ ಕಲ್ಯಾಣದಲ್ಲಿ ತಲೆಯೆತ್ತಿದ ವೀರಶೈವವು ೧೩ನೆಯ ಶತಮಾನದ ಹೊತ್ತಿಗೆ ತುಂಗಭದ್ರೆಯನ್ನು ದಾಟಿ, ದಕ್ಷಿಣ ಕರ್ನಾಟಕವನ್ನೂ ವ್ಯಾಪಿಸಿತ್ತೆಂದು ಹೇಳಬೇಕಾಗುತ್ತದೆ.

ಬಸವಣ್ಣನವರನ್ನು ಬಿಟ್ಟರೆ ವೀರಶೈವದಲ್ಲಿ ಎದ್ದು ಕಾಣುವ ಪುಣ್ಯಪುರುಷ ಪ್ರಭುದೇವ. ಆನಂದಪುರ, ಜೋಡಿದಾಸೇನಹಳ್ಳಿ, ಚಿಕ್ಕಹೆಜ್ಜಾಜೆ ಶಾಸನದಲ್ಲಿ ಉಲ್ಲೇಖ ಮಾತ್ರ ಕಂಡುಬರುವ ಈತನ ಬಗ್ಗೆ ವಿಶೇಷ ಸಂಗತಿಗಳಿಲ್ಲ. ಆನಂದಪುರ, ಜೋಡಿದಾಸೇನಹಳ್ಳಿ, ತಿರುಪತಿ ಶಾಸನಗಳಲ್ಲಿ ಚೆನ್ನಬಸವಣ್ಣನವರ ಉಲ್ಲೇಖವಿದೆಯೇ ಹೊರತು ವಿವರಗಳಿಲ್ಲ. ಶರಣ ಸಮುದಾಯದಲ್ಲಿ ಎಲ್ಲರಿಗಿಂತ ಅಧಿಕ ಶಾಸನಗಳಲ್ಲಿ ಗೋಚರಿಸುವವನೆಂದರೆ ಸಿದ್ಧರಾಮ. ಈವರೆಗೆ ಈತನ ಹೆಸರಿನಲ್ಲಿ ಸುಮಾರು ೨೨ (ಕೋಳೂರು ಶಾಸನವನ್ನು ಪರಿಗಣಿಸಿದರೆ ೨೩) ಶಾಸನಗಳು ಬೆಳಕಿಗೆ ಬಂದಿವೆ. ಅವು ಉಸ್ಮಾನಾಬಾದ ಜಿಲ್ಲೆಯ ನಿಲೇಗಾಂವ, ಕೇಸೆಗಾಂವ, ಇಟ್ಕಲ್; ಸೋಲಾಪೂರ ಜಿಲ್ಲೆಯ ಜಂಬಗಾಂವ, ಅಕ್ಕಲಕೋಟೆ, ತಡವಳ; ವಿಜಾಪುರ ಜಿಲ್ಲೆಯ ಚೋರ್ಗಿ, ಸಂಖ, ಕೂಡಗಿ, ಕಪ್ಪನಿಂಬರಗಿ, ಗುಂಡಕರ್ಜಗಿ, ಟಾಕಳಿ, ಘಡಕೇನೂರು, ಜತ್ತಿಗಿ, ಎವಹಳ್ಳಿ, ಚಡಚಣ, ಧಾರವಾಡ ಜಿಲ್ಲೆಯ ಮಂತ್ರವಾಡಿ, ಬುಡರಸಿಂಗಿ, ಕೊಟ್ಟಬಾಗಿ, ಸಂಗೂರು, ಕಟನೂರ; ಶಿವಮೊಗ್ಗ ಜಿಲ್ಲೆ

ಸೊರಬ, (ಚಿತ್ರದುರ್ಗ ಜಿಲ್ಲೆಯ ಕೋಳಿಸಾಲೆ) ಶಾಸನಗಳು. ದೇವಗಿರಿ ಯಾದವ, ಗೋವೆಯ ಕದಂಬ, ವಿಜಯನಗರದ ಸಂಗಮ ಅರಸರ ಆಳಿಕೆಯಲ್ಲಿ ಹುಟ್ಟಿದ ಈ ಶಾಸನಗಳು ಕಾಲದೃಷ್ಟಿಯಿಂದ ಕ್ರಿ.ಶ. ೧೧೯೦ ರಿಂದ ೧೫೪೮೧ರ ವರೆಗೆ, ಪ್ರದೇಶ ದೃಷ್ಟಿಯಿಂದ ಉತ್ತರದ ಉಸ್ಮಾನಾಬಾದ ಜಿಲ್ಲೆಯಿಂದ ದಕ್ಷಿಣದ ಚಿತ್ರದುರ್ಗ ಜಿಲ್ಲೆಯ ವರೆಗೆ ಹಬ್ಬಿವೆ. ಬೆಮ್ಮತ್ತನಕಲ್ಲು ಸಿದ್ಧನಾಥದೇವರಿಗೆ ಸಂಬಂಧಿಸಿದ ಕೋಳಿಸಾಲೆ ಶಾಸನವನ್ನು ಬಿಟ್ಟರೆ ಮಿಕ್ಕ ೨೨ ಶಾಸನಗಳು ಸಿದ್ಧರಾಮ ಮತ್ತು ಕಪಿಲಸಿದ್ಧಮಲ್ಲಿಕಾರ್ಜುನರಿಗೆ ಸಂಬಂಧಿಸಿದವು. ಇವುಗಳಲ್ಲಿ ಕಟನೂರ, ಬುಡರಸಿಂಗಿ, ಘಡಕೆನೂರ, ಮತ್ತು ಗುಂಡಕರ್ಜಗಿ ಶಾಸನಗಳು ಸಿದ್ಧರಾಮನನ್ನು ಮುಕ್ತ ಕಂಠದಿಂದ ಹೊಗಳಿವೆ. ಇವಲ್ಲದೆ ಇಂಗಳಗಿ, ಗುಬ್ಬಿ, ಮರಡಿಪುರ ಶಾಸನಗಳು ಸಿದ್ಧರಾಮಮನ್ನು ನಾಮಮಾತ್ರ ಉಲ್ಲೇಖಿಸುತ್ತವೆ.

ಅಭಿಮಾನದಿಂದ ಬರೆಯಿಸಿದ ಕಾನಕಾನಹಳ್ಳಿ ತಾಮ್ರಶಾಸನ, ಮಡಿವಾಳ ಮಾಚಿದೇವನನ್ನು ಕುರಿತುದು. ಕಲ್ಯಾಣದ ತ್ರಿಪುರಾಂತಕಕೆರೆಯ ಮೇಲಿನ ಶಾಸನವೂ, ಇವನದೆನ್ನುವ ಪಿ.ಬಿ. ದೇಸಾಯಿ ಅವರ ಮಾತಿಗೆ ಆಧಾರಗಳಿಲ್ಲ.

ನೆಲುವಿಗೆಯ ಶಾಂತಯ್ಯನನ್ನು ಕುರಿತುವು ಎರಡು ಶಾಸನಗಳು. "ನೆಲುವಿಗೆಯ ಸಾತೈಯ(ಗ)ಳ ಶ್ರೀಪಾದಗಳೇ ಶರಣು" ಎಂದು ಶರಣು ಸಮರ್ಪಿಸಿ ಭೂಯಾರ ಶಾಸನ ಪ್ರಾರಂಭವಾದರೆ, ಮರಡಿಪುರ ಶಾಸನ ಶರಣಸ್ತೋಮದ ಮಧ್ಯ ಹೆಸರಿಸಿ ಸಾಗುತ್ತದೆ. ಇವುಗಳಲ್ಲಿ ವೀರಶೈವ ಆಂದೋಲನೆಯ ಯೌವನ ಕಾಲವಾದ ೧೧೬೨ರಲ್ಲಿ ಹುಟ್ಟಿದ ಭೂಯಾರಶಾಸನ ಕಾಲದೃಷ್ಟಿಯಿಂದ ಗಮನಾರ್ಹವಾದುದು.

ರಾಯಚೂರು ಜಿಲ್ಲೆಯ ದೇವರಗುಡಿ ಗ್ರಾಮದಲ್ಲಿ ಉಳಿಯುಮೇಶ್ವರ ಚಿಕ್ಕಯ್ಯನ ಎರಡು ಶಾಸನಗಳು ಇತ್ತೀಚೆ ಲಭಿಸಿ, ಇವನ ಹೆಸರು ಹುಳಿಯಮೇಶ್ವರ ಚಿಕ್ಕಯ್ಯನೆಂದು ಸ್ಪಷ್ಟಪಡಿಸಿವೆ. ಈ ಗ್ರಾಮದ ಹುಳಿಯಮೇಶ್ವರ ದೇವರ ಸ್ಥಾನಪತಿಯಾಗಿದ್ದ ಈತನನ್ನು ಒಂದು ಶಾಸನ

ಸಕಳ ಸುರ ಸಿದ್ಧ ಕಿನ್ನರ ।
ನಿಕರ ಕಿರೀಟ ಬಹುರತ್ನ ಕೋಟಿರಂಜಿತ ಚರಣಂ ।
ಸಕಳಗುರು ಹುಳಿಯಮೇಶಾ ।
ಕರುಣದ ಭೃತ್ಯ ನಮ್ಮ ಚಿಕ್ಕಯತೀಂದ್ರಂ ॥
ಲಾಳ ವರಾಳ ಗೂರ್ಜರ ತುರುಷ್ಕ ಹಿಮಾಚಳ ಮೇರೆಯಪ್ಪಿನಂ ।
ಕೇಳಿರೆ ಬೆಂಗಿಮಂಡಳ ಕಳಿಂಗಕುಳಂ ಜಳರಾಶಿ ಪೂರ್ಬ್ಬಕ್ಕಂ ।
ಚೋಳ ದಿಶಾವರಂ ನೆಗಳ್ದ ತೆಂಕಣ ಕೊಂಕಣ ಪಾಡುತಿಪ್ಪರೀ ।
ಪಾಳಿತ ಕೀರ್ತಿಯಂ ಹುಳಿಯಮೇಸನ ಗೀತವ ಲೋಕ ಲೋಕದೊಳು।

ತರ್ಕ ವ್ಯಾಕರಣಂಗಳು ।
ಅಕ್ಕರಮುಂ ಶಬ್ದಶಾಸ್ತ್ರಮುಂ ವೋದುಗಳಂ ॥
ತಿಕ್ಕೆ ಶಿವಭಕ್ತಿಯೊಳು (ಸವೆ) ।
(ದ)ಕೆಯ್ಯಂ ಹಲರು ಮೆಚ್ಚಲೀ ಚಿಕ್ಕಯ್ಯಂ ॥

ದಿಕ್ಕರಿಯ ಕಟದ ತಳದೊಳು ।
ಮಿಕ್ಕ ಸುರದ್ರುಮದ ಮೇರುಗಿರಿ ಮನ್ದಿರದೊಳು ॥
ಬೊಕ್ಕನೆ ಕೀರ್ತಿ ಲತಾವಧು ॥
ಚಿಕ್ಕಯ್ಯನ ಹೆಸರ ಜಸವ ಬರೆಯಿಸುತಿರ್ದಳು ॥

ಎಂದು ವರ್ಣಿಸುತ್ತದೆ. ಇದಲ್ಲದೆ ಕಲ್ಲೇದೇವರಪುರ ಶಾಸನದಲ್ಲಿಯೂ ಇವನ ಹೆಸರಿದೆ. ಇದೇ ಅವಧಿಯ ಕುರಗೋಡ ಶಾಸನದಲ್ಲಿ ಮಹಾನವಿಹಾಳ ಕಲ್ಲಿಸೆಟ್ಟಿಯ ಹೃದಯಂಗಮ ವರ್ಣನೆ ಬರುತ್ತಿದ್ದು, ಈತನು ಶರಣ ಹಾವಿನಹಾಳ ಕಲ್ಲಯ್ಯನೋ ಅಲ್ಲವೋ ಸಂದೇಹ.

ವೀರಶೈವ ಇತಿಹಾಸದಲ್ಲಿ ಸಮಯಾಭಿಮಾನ ನಿಮಿತ್ತ ರಕ್ತರಂಜಿತ ಘಟನೆಯನ್ನು ಮೆರೆದವ ಏಕಾಂತರಾಮಯ್ಯ. ತಾಳಿಕೋಟೆ, ಮರಡಿಪುರ ಶಾಸನಗಳು ಕೇವಲ ಹೆಸರನ್ನೂ, ಬೋಗಾವೆಶಾಸನ ಒಂದಿಷ್ಟು ಚರಿತೆಯನ್ನೂ ಹೇಳಿದರೆ, ಕುಡನಿತಿ ಶಾಸನ ".......ಪಂದಲೆಯಿಂ ನಿವಾಳಿಯಂ ಪುರಮಥನಂಗೆ ಕೊಟ್ಟು ಮಗಳ್ದುಂ ಪಡೆವರ್ಪ್ರಮಥರ್ಕಳದ್ಭುತಂ....." ಎಂದು ಹೇಳಿ ಇವನನ್ನು ನೆನಪಿಗೆ ತರುತ್ತದೆ. ಈತನ ಬಗ್ಗೆ ವಿಶೇಷ ಸಂಗತಿಯನ್ನೊದಗಿಸುವುವು, ಇವನ ಕಾರ್ಯಕ್ಷೇತ್ರವಾದ ಅಬ್ಬಲೂರಿನ ಸೋಮೇಶ್ವರ ದೇವಾಲಯದ ಶಾಸನಗಳು. ಇವುಗಳಲ್ಲಿ ಒಂದು ಶಾಸನವಂತೂ ರಾಮಯ್ಯನ ಚರಿತ್ರೆ, ಧರ್ಮಶ್ರದ್ಧೆ, ಸಿರಸ್ಸುಪವಾಡಗಳನ್ನು ೧೦೫ ಸಾಲುಗಳಷ್ಟು ದೀರ್ಘವಾಗಿ ವರ್ಣಿಸುತ್ತದೆ. ಮಿಕ್ಕುವು ಮೂರು ಶಿಲ್ಪಶಾಸನಗಳು. ಅವು : "ಶ್ರೀಮದ್ ಏಕಾಂತ ರಾಮಯ್ಯಂಗೆ ಸಂಕಗೌಂಡನ ಓಲೆಯ ಕುಡುವ ಠಾವು "ಶ್ರೀ ಬ್ರಹ್ಮೇಶ್ವರದೇವರಲ್ಲಿ ಏಕಾಂತದ ರಾಮಯ್ಯ ಬಸದಿಯ ಜಿನನೊಡ್ಡವಾಗಿ ತಲೆಯನರಿದು ಹಡೆದ ಠಾವು" "ಸಂಕಗೌವುಂಡ ಬಸದಿಯನೊಡೆಯಲೀಯದೆ ಆಳು ಕುದುರೆಯನೊಡ್ಡಿರಲು ಏಕಾಂತದ ರಾಮಯ್ಯ ಕಾದಿಗೆಲ್ದು ಜಿನನನೊಡೆದು ಲಿಂಗಮಂ ಪ್ರತಿಷ್ಠೆಯಂ ಮಾಡಿದ ಠಾವು". ಈ ವಾಕ್ಯಗಳನ್ನು ಬರೆದು, ಕೆಳಗೆ ಸುಂದರ ಶಿಲ್ಪಗಳನ್ನು ಬಿಡಿಸಲಾಗಿದೆ. ಇವಲ್ಲದೆ ಈ ಘಟನೆಯನ್ನು ಚಾಕ್ಷುಷಗೊಳಿಸುವ ಇನ್ನೂ ಕೆಲವು ಶಿಲ್ಪಗಳು ಆ ದೇವಾಲಯದಲ್ಲಿ ಕಾಣಸಿಗುತ್ತವೆ. ಮೇಲಾಗಿ ಅಲ್ಲಿ ಈ ಹೆಸರಿನ ಒಂದು ಶಿವಲಿಂಗವೂ ಪ್ರತಿಷ್ಠಾಪನೆಗೊಂಡಿದೆ.

ಈ ಶರಣರಲ್ಲದೆ ಕಲ್ಲೇದೇವಪುರ ಶಾಸನದಲ್ಲಿ ಕಕ್ಕಯ್ಯ, ಬಂಕಯ್ಯ, ಮರಡಿಪುರ ಶಾಸನದಲ್ಲಿ ಜಗದೇವದಣ್ಣಾಯಕ, ಸುರಿಗೆಯ ಚೌಡಯ್ಯ, ಕಲ್ಲೇದೇವರಪುರ ಶಾಸನದಲ್ಲಿ ದಶವರ್ಮ ಮತ್ತು ಅನಿಮಿಷ ಕೇಶವರಾಜರು ಗೋಚರಿಸುತ್ತಾರೆ. ಮರಡಿಪುರ ಶಾಸನಗಳಲ್ಲಿ ಹುಲಿಗೆರೆಯ ಪೊನ್ನಯ್ಯನ ಉಲ್ಲೇಖ ಬರುತ್ತಿದ್ದು, ಈ ಹೆಸರಿನ ಶಿವಲಿಂಗವೊಂದು ಅಬ್ಬಲೂರು ಸೋಮೇಶ್ವರ ದೇವಾಲಯದಲ್ಲಿ (ಅಗ್ಗವಣಿ ಹೊನ್ನಯ್ಯ ಎಂಬ ಹೆಸರಿನಿಂದ) ಕಂಡುಬರುತ್ತದೆ. ಬನವಾಸಿಯ ಮಧುಕೇಶ್ವರ ಶಿಲಾಮಂಟಪದ ಗಗ್ಗರಿ ಕಲ್ಲಿನಲ್ಲಿ ಕೆತ್ತಿದ ಹಲವು ಶರಣರ ವಿಗ್ರಹಗಳ ಸಾಲಿನಲ್ಲಿ ಮೇಲೆ ಉಲ್ಲೇಖಿಸಿದ ಮೋಳಿಗೆಯ ಮಾರಯ್ಯ, ನುಲಿಯುಚಂದಯ್ಯ, ಆಯ್ದಕ್ಕಿಮಾರಯ್ಯ, ಹಡಪದ ಅಪ್ಪಣ್ಣ ಹೆಸರಿನ ವಿಗ್ರಹಗಳು ಕಂಡರಿಸಲ್ಪಟ್ಟಿವೆ. ಶಾಸನಗಳ ಪ್ರಕಾರ ಬಸವಯುಗದ ಕೊನೆಕೊನೆಗೆ ಗೋಚರಿಸುವವ ಶರಣ ಅಮುಗಿದೇವ. ಕರ್ನಾಟಕದ ಕುರುಬಜನಾಂಗದ ಕುಲದೈವನಾದ ಈತನ ಒಂದು ಶಾಸನ ಮತ್ತು ದೇವಾಲಯಗಳು ಪುಳಜೆಯಲ್ಲಿವೆ. ಈ ಶಾಸನದಲ್ಲಿ ಬರುವ "ಶಿವಾಚಾರ್ಯೈಕ ನಿರತಃ" "ಮಹೇಶ್ವರಗಣ ಕುಲಾನ್ವಯ ದಿವಾಕರ" "ಶರಣ ಸಂತಾನ" "ಸಿದ್ಧಕುಲಾರ್ಣವ ಪ್ರವರ್ಧನ ಸುಧಾರಕ"ಎಂಬ ವಿಶೇಷಣಗಳು ಮನನೀಯವಾಗಿವೆ.

ವೀರಶೈವದ ಸುಗ್ಗಿಯನ್ನು ಸಾರ್ಥಕಗೊಳಿಸಿದ ಬಸವಯುಗದ ಈ ಶರಣರು ಕಲ್ಯಾಣಕ್ರಾಂತಿಯಿಂದಾಗಿ ಆಂಧ್ರಪ್ರದೇಶದ ಓರಂಗಲ್ಲು, ಶ್ರೀಶೈಲ, ಕರ್ನಾಟಕದ ದ್ವಾರಸಮುದ್ರ, ಹಂಪೆಗಳತ್ತ ಮುನ್ನಡೆದರು. ಮುಂದೆ ಕ್ರಮೇಣ ವೀರಶೈವಧರ್ಮ ಎಡೆಯೂರು, ಗುಬ್ಬಿ, ಗುಳೂರು, ಪುಲಿಗೆರೆ, ಹಂಪೆ ಮೊದಲಾದವುಗಳನ್ನೂ ಕೇಂದ್ರ ಸ್ಥಳಗಳನ್ನಾಗಿ ಹೊಂದಿ ಕರ್ನಾಟಕದ ಮೂಲೆ ಮೂಲೆಗಳನ್ನು ತನ್ನ ಬಾಹುವ ಬಾಹುಗಳಿಂದ ಅಪ್ಪಿಕೊಂಡಿತು. ಶಾಸನಗಳಲ್ಲಿ ಕಾಣುವ ಈ ಅವಧಿಯ ಶರಣರಲ್ಲಿ ಮೂರುಜಾವಿದೇವನನ್ನು ಮೊದಲು ನೆನೆಯಬೇಕಾಗುತ್ತದೆ.

ಏಕಾಂತರಾಮಯ್ಯನ ಶಿರಸ್ಸು ಪವಾಡ ಪ್ರಸಂಗದಲ್ಲಿ ಮುಳುಗುವ ಸೂರ್ಯನನ್ನು ಮೂರು ಜಾವಗಳ ವರೆಗೆ ತಡೆದ ಪವಾಡ ಪುರುಷನೀತ. ಅಬ್ಬಲೂರು ಚರಿತೆ, ವೀರಶೈವಾಮೃತ ಮಹಾಪುರಾಣಗಳಲ್ಲಿ ಕಂಡುಬರುವ ಈತನ ಹೆಸರಿನಲ್ಲಿ ಹಲವು ಶಾಸನಗಳು ಸಿಗುತ್ತವೆ. ರಟ್ಟಿಹಳ್ಳಿಯ ಒಂದು ಶಾಸನ(೧೨೩೮)ದಲ್ಲಿ ಲಕುಳೀಶನೆಂಬುವನ ಗುರು ಮತ್ತು ಶಿಷ್ಯ ಹೀಗೆ ಇಬ್ಬರು ಮೂರುಜಾವಿ ಪಂಡಿತರಿದ್ದಾರೆ. ಅಲ್ಲಿಯ ಲಕುಳೀಶನ ಗುರು ಮೂರುಜಾವಿ ಪಂಡಿತನನ್ನು ರಟ್ಟಿಹಳ್ಳಿಯ ಇನ್ನೊಂದು ಶಾಸನ(೧೧೫೪)ವೂ ಉಲ್ಲೇಖಿಸುತ್ತದೆ. ಇವರಲ್ಲದೆ ಹಿರೇಮುಗಲಗೇರಿ ಶಾಸನ (೧೦೫೪)ದಲ್ಲಿಯೂ ಒಬ್ಬ ಮೂರುಜಾವಿಪಂಡಿತನ ಹೆಸರಿದೆ. ಲಕ್ಷ್ಮೇಶ್ವರದ ಒಂದು ಶಾಸನದಲ್ಲಿ (೧೨೨೭) ಮೂರು ಜಾವಿದೇವಮುನಿ, ಕಲಕೇರಿಯ ಎರಡು ಶಾಸನಗಳಲ್ಲಿ ಭಿಕ್ಷೆಯ ಮೂರುಜಾವಿದೇವ ಎಂಬ ಹೆಸರುಗಳಿವೆ. ಇವರಲ್ಲಿ ಯಾವನೋ ಒಬ್ಬನು ಪ್ರಸ್ತುತ ಮೂರುಜಾವಿದೇವನಾಗಿರಬಹುದು. ಈತನ ಒಂದು ವಿಗ್ರಹ ಧಾರವಾಡ ಜಿಲ್ಲೆಯ ಅಂತರವಳ್ಳಿಯಲ್ಲಿದ್ದು ಅದು ವಿಶ್ವಕರ್ಮ ಸಮಾಜದ ಆರಾಧ್ಯದೈವತವಾಗಿದೆ. ಈ ಅವಧಿಯ ಇನ್ನೊಬ್ಬ ಶರಣ ಕುರುಗೋಡ ಸಿಂದವಂಶದ ರಾಚಮಲ್ಲ ನೃಪ. ಸಾನಂದ ಚರಿತ್ರೆ, ವೀರಶೈವಾಮೃತ ಮಹಾಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟ ಅವನು "ಶಿವೈಕ್ಯ ಚೂಡಾಮಣಿ, ಅರ್ಚಿತಶಿವಪಾದಂ". "ಪಾರ್ವತೀಶಾಂಘ್ರಿ ನಿರ್ಭರಭಕ್ತಂ" ಎಂದು ಪ್ರಖ್ಯಾತನಾದ ಮೊದಲನೆಯ ರಾಚಮಲ್ಲನ ಮೊಮ್ಮಗ. ಈತನನ್ನು ಒಂದು ಶಾಸನ

"ಪ್ರೊಡವಿಯ ಸಮಸ್ತ ಭಕ್ತರ।
ನಡುವೆ ಪ್ರೌಢಂ ಮೆಚ್ಚಿ ಇಟ್ಟ ವರಮಂ ಕುಡಲಿ।
ಮೆರಟಿ ರಾಚಮಲ್ಲ ದೇವಂ।
ಪಡೆದಂ ನಿತ್ಯಪ್ರಸಾದ ರಾಜ್ಯಶ್ರೀಯಂ॥

ಭಕ್ತರಂ ಪಿರಿದು ಮನ್ನಿಸಲೀಶ್ವರಂ ವರನಾಗಲ್ ರಾಜ್ಯಮಂ ತಾಳ್ದಿ ವಿಸ್ತರಿಸುತ್ತೊಪ್ಪಿರೆ, ಬಾವರೊಂದು ದಿವಸಂ ಪ್ರತ್ಯಕ್ಷದಿಂ ಬರ್ಪುದುಂ, ರಾಜಮಲ್ಲರಸಂ ಭೋಂಕನೆ ಕಂಡು ಪೊಡಮಟ್ಟಾನಂದದಿಂ ಶಿವಲಿಂಗಾರ್ಚನಂ ಮಾಡಿ, ಬೆರಸುತ್ತುಂಗಾಶ್ವ ಚಂಚಚ್ಚಮರರುಹ ಸಿತಚ್ಛತ್ರ ಚಿಹ್ನಾನ್ವಿತಂ ಶಂಕರನೊಳ್ ಪೊರ್ದಿದಂ" ಎಂದು ವರ್ಣಿಸುತ್ತದೆ.

ಗಿರಿಸಿದ್ಧಾಪುರ ಶಾಸನದಲ್ಲಿ ಪುರಾಣದ ಮಾಯಿದೇವಪಂಡಿತ, ಶಿವರಾತ್ರಿ ಮಾಯಿದೇವ, ಗೊಪೆಯ ಶಿವದೇವ, ಶಿವಶರಣ ಎಂಬ ನಾಲ್ಕು ಜನ ಶರಣರ ಹೆಸರು ಬರುತ್ತವೆ. ಪುಲಿಗೆರೆಯ ಜಕ್ಕಣಾರ್ಯನ ಗುರುಪರಂಪರೆಯಲ್ಲಿ ಬರುವ ಪುರಾಣದ ಮಾಯಿದೇವಪಂಡಿತ, ವಾದದಲ್ಲಿ ಗೆದ್ದ ಕೆರೆಯ ಪದ್ಮರಸರನ್ನು ಸ್ತುತಿಸಿದ ಪುಲಿಗೆರೆಯ ಮಾಯಿದೇವ ಪುರಾಣಭಟ್ಟ ಎಂಬ ಹೆಸರುಗಳು ಈ ಶಾಸನದ ಪುರಾಣದ ಮಾಯಿದೇವ ಪಂಡಿತನೆಡೆಗೆ ಬೆರಳು ನೀಡುತ್ತವೆ. ಸಾಲದುದಕ್ಕೆ ಮಹಾಕವಿ ಹರಿಹರನ ಗುರು "ಪುರಾಣದ ಮಾಯಿದೇವಭಟ್ಟ"ನೆಂದು ಶಾಂತಲಿಂಗ ದೇಶಿಕ ಹೇಳುತ್ತಾನೆ. ಈ ಎಲ್ಲ ಸಂಗತಿಗಳ ಪುನರಾಲೋಚನೆ ಕನ್ನಡ ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಮಹತ್ವಪೂರ್ಣ ಅಭ್ಯಾಸವೆನಿಸಿದೆ. ಇಲ್ಲಿಯ ಗೊಪಯ ಶಿವದೇವ, ಸಕಲೇಶ

ಮಾದರಸರಿಂದ ಮುಕ್ತಿ ಪಡೆದನೆಂದು ಪದ್ಮರಾಜ ಪುರಾಣ ಹೇಳುವ ಗೋಪೆಯ ಶಿವದೇವ ಮತ್ತು ಚೌಡದಾನಪುರ ಶಾಸನೋಕ್ತ ಶಿವದೇವರ ಸಂಬಂಧ ಬಿಡಿಸಲಾರದ ತೊಡಕಾಗಿ ನಿಂತಿದೆ.

ವೀರಶೈವ ಕವಿಗಳ ಗರುಡದೃಷ್ಟಿಗೆ ಬೀಳದಿದ್ದುದು ಆಶ್ಚರ್ಯವೆಂಬಂತೆ ಬಾಳಿದ ಚೌಡದಾನಪುರ ಶಿವಗೇವನೊಬ್ಬ ಈ ಯುಗದ ಮಹತ್ವದ ವ್ಯಕ್ತಿ. ಚೌಡದಾನಪುರದ ಹಲವು ಶಾಸನಗಳಲ್ಲಿ ಈತನ ವರ್ಣನೆ ದೇದೀಪ್ಯಮಾನವಾಗಿದೆ. ಭಕ್ತಿಮಾರ್ಗವನ್ನು ಮರ್ತ್ಯರಿಗೆ ತೋರಬೇಕೆಂದು ಪಾರ್ವತಿ ಶಿವನಿಗೆ ಬಿನ್ನವಿಸಿಕೊಳ್ಳಲು "ಶ್ರೀ ಸಂಗಮೇಶನ ಪುತ್ರಂ ಬಸವಯ್ಯ"ನಂತೆ ಈ ಶಿವದೇವ ಅವತರಿಸಿದನೆಂದು ಒಂದು ಶಾಸನ ಹೇಳಿದರೆ, ಇನ್ನೊಂದು ಶಾಸನದ

ಲಿಂಗಕ್ಕೆ ಜಂಗಮಕ್ಕಂ ।
ಹಿಂಗದೆ ದಾಸತ್ವ ಮಾಳ್ಪುದೇ ಬೆಸನೆಂದಾ ॥
ಸಂಗನಬಸವಂ ಬೆಸಸೆ ಮ ।
ಸಂಗೊಂಡರ್ಚಿಸುವನುಭಯಲಿಂಗವ ಮುದದಿಂ ॥

ಮೃಡಗಣ ವರಪ್ರಸಾದಮ ।
ಪಡೆದಂ ಜಗವರಿಯಲಂದು ಸಂಗನಬಸವಂ ॥
ಪಡೆದಾ ಪ್ರಸಾದಸಿದ್ಧಿಯ ।
ಕಡುವೀರಬ್ರತದಿ ಪಡೆದನೀ ಶಿವದೇವಂ॥

ಎಂಬ ಮಾತುಗಳು ಶಿವದೇವನು ಬಸವಮಾರ್ಗದ ನಿಷ್ಠೆಯ ಅನುಯಾಯಿಯೆಂದು ಸ್ಪಷ್ಟಪಡಿಸುತ್ತವೆ. ಈ ಪದ್ಯಗಳಲ್ಲಿ ಬರುವ ವೀರಶೈವ ತತ್ವಗಳಾದ ಲಿಂಗಜಂಗಮ ಸೇವೆ, ಪ್ರಸಾದಸಿದ್ಧಿಗಳ ಉಲ್ಲೇಖ ಚರಿತ್ರೆಯ ದೃಷ್ಟಿಯಿಂದ ಮಹತ್ವಪೂರ್ಣವಾದವು, ಇದೇ ಶಾಸನಗಳಲ್ಲಿ ಭಕ್ತಾಚಾರದ ಚೀಲಾಳ (ಈತನ ಉಲ್ಲೇಖ ವೀರಶೈವಾಮೃತ ಮಹಾಪುರಾಣದಲ್ಲಿದೆ) ಮತ್ತು ಶಿಷ್ಯೆ ವೀರಕನ್ನಾದೇವಿಯರ ವಿಷಯವೂ ಬರುತ್ತದೆ. ಕೆರೆಮಲ್ಲಾಪುರ ಶಾಸನ (ಇದರ ಸತ್ಯದ ಬಗ್ಗೆ ಸಂದೇಹ)ದಲ್ಲಿ ಬರುವ "ಶರಣ ಚೌಡಯ್ಯ"ನೆಂದರೆ ಅಂಬಿಗರ ಚೌಡಯ್ಯನೆಂದೂ, ಇನ್ನೊಂದು ಶಾಸನವಲ್ಲಿ ಬರುವ ಮಾಚಿಬೆನಾಯಕನು ಈತನೇ ಎಂದೂ, ಈ ಹೆಸರು ಕಾರಣವಾಗಿ ಚೌಡದಾನಪುರ ಎಂಬುದು ರೂಪುಗೊಂಡಿದೆಯೆಂದೂ ಕೆಲವರ ಊಹೆ. ಇದಕ್ಕೆ ಆಧಾರಗಳು ಬೇಕು.

ಶಿವದೇವನಂತೆ ವೀರಶೈವ ಕವಿಗಳ ಕಣ್ಣಿಗೆ ಬೀಳದಿದ್ದರೂ ಮಾವನೂರು ಶಾಸನದಲ್ಲಿ "ತಿಲಮಧ್ಯದೊಳಿರ್ಪ ತೈಲದಂತೆ, ಕಾಷ್ಟಮಧ್ಯದೊಳಿರ್ಪ ಅಗ್ನಿಯಂತೆ, ಜಲಮಧ್ಯದೊಳಿರ್ಪ ಕಮಳದಂತೆ ತಾವು ಮಾನುಷಚರಿತರಪ್ಪುದಱಿಂ ಸಂಸಾರಮಂ ಸೋಂಕದೆ ಅಣೋರಣೀಯಂ ಮಹತೋಮಹಿಯಾಂ ಎಂಬ ಶ್ರುತಿವುಂಟಾಗಿ ಇಹ ಹೆ ಮೊದಲಾದ ಪರಮಾಣುವಿನ ನೋವಂ ಸೈರಿಸದೆ ಇಚ್ಛಾಶಕ್ತಿ, ಗ್ನಾನಶಕ್ತಿ, ಕ್ರಿಯಾಶಕ್ತಿಯುಳ್ಳ ಶಿವಭಕ್ತ"ರೆಂದು ಕೀರ್ತಿತರಾಗಿದ್ದಾರೆ, ಅಪ್ಪಯ್ಯ ಮತ್ತು ದೇವರಸರು. ಇಲ್ಲಿಯ "ಚಂದ್ರಂಗೆ ಬೆಳುದಿಂಗಳಂ, ಬೆಳುದಿಂಗಳಿಂಗೆ ಪರಿಮಳಮಂ, ಪರಿಮಳಕ್ಕೆ ಸವಿಯಂ, ಸವಿಗೆ ರೂಪಂ, ರೂಪಕ್ಕೆ ಸೌಂದರ್ಯಮಂ ಕೊಡುವಂತೆ ಉಪದೇಶ ಮಾಡೆ" ಎಂಬ ಏಕಾವಳಿ ಶೈಲಿ, "ಪುಟ್ಟವಿಟ್ಟ ಪುಣ್ಯಂ ಪುರುಷಾಕಾರವಾದಂತೆ, ಶಾಂತಿ ಸಾಕಾರವೆತ್ತಂತೆ, ಪರಮಾರ್ಥ ಶರೀರವಡೆದಂತೆ, ಭಕ್ತಿ ಜ್ಞಾನ ಸಂಸಾರಮಂ ಸವಿವಂತೆ" ಎಂಬ ಉಪಮಾಶೈಲಿ, "ಲೋಭವಡಿಯಿಡದ ಕರಪಲ್ಲವಂಗಳ, ಅನೃತವಂಕುರಿಸದ ರಸನಾಪ್ರದೇಶದ, ಸಂಸೃತಿ ಸರಸವಾಡದ ಚರಿತಶುದ್ಧಿಯ, ಕಾಮನ ಡಾಮರಕೊಳಸೋರದ ಮನದ ಬಿನದದ" ಎಂಬ ವೈವಿಧ್ಯಪೂರ್ಣ ಗದ್ಯಶೈಲಿ ಹರಿಹರನನ್ನು ನೆನಪಿಸುತ್ತವೆ.

ಲಕ್ಕಣದಂಡೇಶನ ಶಿವತತ್ವಚಿಂತಾಮಣಿಯಲ್ಲಿ ಬರುವ ಆಕಾಶವಾಸಿಯತಿಯನ್ನು ದೊಡ್ಡಕೌಲಂದೆಯ ಎರಡು ಶಾಸನಗಳು, ಲಕ್ಕಣ್ಣದಂಡೇಶನನ್ನು ಕನ್ನಡದ ೧೩, ತಮಿಳಿನ ೪- ಹೀಗೆ ೧೭ ಶಾಸನಗಳು ಉಲ್ಲೇಖಿಸುತ್ತವೆ. ಚಿತ್ರದುರ್ಗ, ಕೋಲಾರ, ಬೆಂಗಳೂರು, ಮಂಡ್ಯ, ಸೇಲಂ, ತಿರುಚನಾಪಳ್ಳಿ, ತಂಜಾವೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡುಬರುವ ಈ ಶಾಸನಗಳು ಲಕ್ಕಣ್ಣನ ಪ್ರಜಾನುರಾಗ, ಅರಸುಮೈತ್ರಿ, ದಾನಗುಣ ಮೊದಲಾದವುಗಳನ್ನು ಹೇಳುವವೇ ಹೊರತು ವೀರಶೈವಕ್ಕೆ ಸಂಬಂಧಪಟ್ಟಂತೆ ಈತನು ನಿರ್ವಹಿಸಿದ ಪಾತ್ರವನ್ನು ತಿಳಿಸುವುದಿಲ್ಲ.

ಇಲ್ಲಿಯ ವರೆಗೆ ಕಲ್ಯಾಣದ ತರುವಾಯ ವೀರಶೈವದ ಕೇಂದ್ರಭೂಮಿ ಹಂಪೆಯಾಗಿದ್ದಿತು. ಹಂಪೆಯ ಬಳಿಕ ಕೇಂದ್ರಭೂಮಿಯಾಗುವ ಪುಣ್ಯ ಪಡೆಯಿತು, ಎಡೆಯೂರು. ಈ ಎಡೆಯೂರು ಸಿದ್ಧಲಿಂಗನ ಗುರುಪರಂಪರೆಯನ್ನು ಪ್ರಭುದೇವ, ಚನ್ನಬಸವ, ಸಿದ್ಧರಾಮ, ಅನಾದಿಗಣೇಶ್ವರ, ನಿರ್ಮಾಯಗಣೇಶ್ವರ (ಮಲೆಯ ಮಾದೇಶ್ವರ), ನಿರಂಜನ ಗಣೇಶ್ವರ, ಆದಿಲಿಂಗಗಣೇಶ್ವರ. ಚನ್ನವೀರೇಶ್ವರದೇವ, ಹರಪನಹಳ್ಳಿಯ ಗೋಸಲಯತೀಶ ಎಂದು ನಿರಂಜನವಂಶ ರತ್ನಾಕರ ಹೇಳುತ್ತದೆ. ಇವರಲ್ಲಿ ನಿರ್ಮಾಯ ಗಣೇಶ್ವರ (ಮಾದೇಶ್ವರ), ಗೋಲಸಯತೀಶರ ಬಗ್ಗೆ ಎರಡು ಶಾಸನಗಳು ಲಭಿಸುತ್ತಿದ್ದು, ಗೋಸಲಾರ್ಯನು 'ಅಪ್ಪಣಾರ್ಯ ನಿಜಗರ್ಭಸಂಭೂತ'ನೆಂದು ಒಂದು ಶಾಸನದಿಂದ ತಿಳಿದುಬರುತ್ತದೆ. ಮುಂದೆ ಶಂಕರಾಚಾರ್ಯ, ದಿವ್ಯಲಿಂಗೇಶ್ವರರ ತರುವಾಯ ಈ ಪೀಠವೇರಿದವರು ಚೆನ್ನಬಸವರಾಜಯತಿ. ಈತನ ಶಿಷ್ಯರಲ್ಲಿ ಸುಪ್ರಸಿದ್ಧರಾದವರು ತೋಂಟದ ಸಿದ್ಧಲಿಂಗ ಮತ್ತು ಗುಬ್ಬಿಯ ಮಲ್ಲಣಾರ್ಯ. ಗುಬ್ಬಿಯ ಒಂದು ಶಾಸನ ಚೆನ್ನಬಸವರಾಜ ಮತ್ತು ಮಲ್ಲಣಾರ್ಯರನ್ನು ಉಲ್ಲೇಖಿಸಿದರೆ, ಹಲವಾರು ಶಾಸನಗಳು ತೋಂಟದ ಸಿದ್ಧಲಿಂಗನನ್ನು ಬಾಯ್ತುಂಬ ಬಣ್ಣಿಸಿವೆ. ಏಳುನೂರು ವಿರಕ್ತರ ನಾಯಕವ್ಯಕ್ತಿಯಾಗಿ ನಿಂತು, ವೀರಶೈವವನ್ನು ತುಂಗಭದ್ರೆಯ ದಕ್ಷಿಣಕ್ಕೆ ಹೆಚ್ಚು ಪ್ರಚಾರಗೊಳಿಸಿದ ಈತ, ವೀರಶೈವದ ಇತಿಹಾಸದಲ್ಲಿ ದ್ವಿತೀಯ ಪ್ರಭು, ಬಸವ ಮತ್ತು ಚೆನ್ನಬಸವ. ಎಡೆಯೂರು ಮಠದ ಆವರಣದ ಒಂದು ಶಾಸನ "ಆ ಸಿದ್ಧಲಿಂಗೇಶ್ವರನ ಮೂರ್ತಿಕ್ರಮವೆಂತೆಂದೆಡೆ: ಪ್ರಣಮವೆ ಶಿರಸು, ನಮಸಾ(ಸ್ಕಾ)ರನೇ ಭುಜ, ಶಿಕಾರವೇ ದೇಹ, [ವಾ]ಯಸ್ಕಾರವೇ ಪಾದಂ, ಅನಂತಕೋಟಿ ಬ್ರಹ್ಮಾಂಡಗಳೇ ಮಕುಟ, ಸಮಸ್ತಲೋಕಾದಿಲೋಕಂಗಳೇ ದೇಹದ ಜಳವಳೆಯ, ಆಕಾಶವೇ ಮುಖ. ದಶದಿಕ್ಕುಗಳೇ ತೋಳು, ಚಂದ್ರಸೂರ್ಯಾದಿಗಳೇ ನಯನ, ಪಾತಾಳವೇ ಹೆದೆ (ಎದೆ?), ಮೇಘಂಗಳೇ ಜಟಾಬಂಧ, ಆ ಜಟಾಬಂಧದಲ್ಲಿ ಶೂನ್ಯಲಿಂಗ, ವೇದಪುರಾಣಂಗಳೆ ಕ್ರೀ, ನಕ್ಷತ್ರಂಗಳೇ ಪುಷ್ಪ, ಚಂದ್ರಪ್ರಕಾಶವೇ ವಿಭೂತಿ, ಅಷ್ಟಕುಲ ಪರ್ವತಗಳೇ ರುದ್ರಾಕ್ಷಿ, ಸಪ್ತಸಮುದ್ರಂಗಳೇ ಕಮಂಡಲ, ಭುವನಸೃಷ್ಟಿಯೇ ಕಂತೆ, ದಿವಾರಾತ್ರಿಗಳೇ ಮಠ, ಷಡುರುತುಗಳೇ ಷಡುಸ್ಥಲ, ಮಹಾಶೇಷನೇ ಕಟಿಸೂತ್ರ, ಪರಿಪೂರ್ಣಜ್ಞಾನವೇ ಪಂಚಮುದ್ರೆ, ತ್ರಿಕಾಲಜ್ಞಾನವೇ ಮಹದೈಶ್ವರ್ಯ, ಮಹಾಮೇರುವೇ ದಂಡ, ಸದ್ಗುಣವೇ ಕರ್ಪರ, ಕುಲವೇ ಶಿವಕುಲ. ಯಿಂತಪ್ಪ ಅನಾದಿ ಜಂಗಮವೆ ಜಗಹಿತಾರ್ಥವಾಗಿ ಚರಿಸಿದ ಕ್ರಮವೆಂತೆಂದರೆ : ಜ್ಞಾನಕ್ರಿಯಾಸ್ವರೂಪನು, ಸರ್ವಾಂಗಲಿಂಗಿ, ಷಟಸ್ಥಲಜ್ಞಾನಿ, ಸರ್ವಾಚಾರ ಸಂಪನ್ನ, ಪಾದೋದಕ ಪ್ರಸಾದ ಪ್ರತಿಷ್ಠಾಚಾರ್ಯನು ಅಷ್ಟಾವರಣಾಲಂಕರಣ, ದ್ವೈತಾದ್ವೈತ ತಿಮಿರ ಮಾರ್ತಂಡನು, ಯಿಂತಪ್ಪ ದಿವ್ಯಶಿವಯೋಗಿ ಸಿದ್ಧಲಿಂಗೇಶ್ವರರಿಗೆ ಸಂಮ್ಯಜ್ಞಾನೋದಯವಾಗಿ, ಸಂಸಾರಹೇಯಮಂ ಮಾಡಿ, ಶರಣುಹೊಕ್ಕ ಶಿಷ್ಯಜನಗಳ ನಾಮ ಪರಿಕ್ರಮಗಳೆಂತೆಂದಡೆ : ಸಪ್ಪೆದೇವರು, ಉಪ್ಪಿನಹಳ್ಳಿಸ್ವಾಮಿ, ಸಿದೇದೇವರು, ನಂಜೇದೇವರು, ಬೋಳ ಬಸವರಾಜ ದೇವರು, ಗುಮ್ಮಳಾಪುರದ ಸಿದ್ಧಲಿಂಗದೇವರು,ಪಟ್ಟಣದೇವರು, ರೇವಣಸಿದ್ದೇ ದೇವರು, ಸೀಲವೆಂತದೇವರು, ಚಿಟ್ಟಿಗದೇವರು, ಯಿಂತಿವರು ಮುಖ್ಯವಾದ ಭಕ್ತಮಹೇಶ್ವರರ್ಗೆ ಷಡುಸ್ಥಲಜ್ಞಾನ ಲಿಂಗಾಂಗಸಂಬಂಧ ಸಮರಸ ಏಕಾರ್ತ್ಥಮಂ ಬೋಧಿಸಿ,

ಮುಕ್ತರಂ ಮಾಡಿ, ಷಡುಸ್ಥಲಯೇಕಾರ್ತವಾಗಿ ಮಾಡುವ ಕ್ರೀಗಳೆಲ್ಲ ನಿಷ್ಪತ್ತಿಯಾಗಿ ಯೆಡೆಯೂರಲ್ಲಿ ತಮಗೆ ಕಟ್ಟಿಸಿದ ಮಠದಲ್ಲಿ ಶಿವಯೋಗ ಸಮಾಧಿ ಸಂನದ್ಧರಾದರು.........." ಎಂದು ಮುಂತಾಗಿ ಶ್ರೀಗಳವರನ್ನು, ಅವರ ಶಿಷ್ಯದಿಗ್ಗಜಗಳನ್ನು ಉಲ್ಲೇಖಿಸುತ್ತದೆ. ಕಗ್ಗೆರೆಯ ಒಂದು ಶಾಸನ, ಇಕ್ಕೇರಿಯವರೊಂದಿಗೆ ಏರ್ಪಟ್ಟ ಯುದ್ಧದಲ್ಲಿ ತಮಗೆ ಜಯಲಭಿಸಬೇಕೆಂದು ಹೊತ್ತ ಹರಕೆ ಕೈಗೂಡಲು ಮೈಸೂರು ಒಡೆಯರ ದಳವಾಯಿ ನಂದಿನಾಥಯ್ಯನು ಸಿದ್ಧಲಿಂಗನ ಸೇವೆಗೆಂದು ಭೂಮಿದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಶ್ರೀಗಳಿಗೆ ಭಕ್ತರು ಸಲ್ಲಿಸಿದ ಸೇವೆಯನ್ನು ತಿಳಿಸುತ್ತವೆ, ಕಗ್ಗೆರೆಯ ಇನ್ನೆರಡು ಶಾಸನಗಳು. ಸಿದ್ಧಲಿಂಗೇಶ್ವರ ದೇವಾಲಯದ ಎರಡು ದೊಡ್ಡ ಗಂಟೆಗಳ ಮೇಲೆ ಟಿಪ್ಪುಸುಲ್ತಾನನ ಅಧಿಕಾರಿ ಜಾಫರಖಾನನು ಅರ್ಪಿಸಿದುವೆಂದು ಬರೆದಿವೆ. ಇದಲ್ಲದೆ ಪೂಜಾಪರಿಕರಗಳ ಮೇಲೆ ಅವುಗಳನ್ನು ಸಲ್ಲಿಸಿದ ಸಾಮಂತರ, ಸಾಮಾನ್ಯರ ಹೆಸರುಗಳಿವೆ. ಇವುಗಳಿಗಿಂತ ಮುಖ್ಯವಾದುದು ಚಿತ್ರದುರ್ಗ ಶಾಸನ. ಸಮಗ್ರ ವಚನವಾಙ್ಮಯದಲ್ಲಿ ಶಿಲಾಸ್ಥಾಯಿಯಾದ ವಚನ ಇದೊಂದೇ.

ಇದೇ ಸುಮಾರಿಗೆ ಹುಟ್ಟಿದ ಗುಮ್ಮಳಾಪುರದ ತಾಮ್ರಶಾಸನವೊಂದು ಗಮನಾರ್ಹವೆನಿಸಿದೆ. ಸಾಮಾನ್ಯವಾಗಿ ಶಾಸನಗಳು ಸೂರ್ಯ ಮತ್ತು ಚಂದ್ರಗ್ರಹಣ ಕಾಲದಲ್ಲಿ ಬ್ರಾಹ್ಮಣರಿಗೆ ದತ್ತಿಕೊಟ್ಟುದನ್ನು ಉಲ್ಲೇಖಿಸುತ್ತಿದ್ದರೆ, ಇಲ್ಲಿ ಶಿವರಾತ್ರಿಯಂದು ಚಿಕ್ಕದೇವಪ್ಪ, ಶಂಖದ ಸಿದ್ಧಲಿಂಗ, ನಿಜಲಿಂಗ ಚಿಕ್ಕಯ್ಯ, ಬಿಟ್ಟಮಂಡೆಯ ಪ್ರಭು, ಜಂಗುಳಿದೇವ, ಪ್ರಸಾದಿದೇವರು ಸೇರಿ ಬ್ರಾಹ್ಮಣ ಮಠದ ವೆಂಕಟೇಶ್ವರ ಉಪಾಧ್ಯಾಯರಿಗೆ ಒಂದು ಅಗ್ರಹಾರವನ್ನು ದಾನನೀಡಿ ಮತ ಮೈತ್ರಿಯನ್ನು ಮೆರೆದಿದ್ದಾರೆ.

ವೀರಶೈವ ಕಾಲಜ್ಞಾನ ಸಾಹಿತ್ಯದಲ್ಲಿ ಶಿಖರ ಸದೃಶನಾದ ಎಮ್ಮೆ ಬಸವನಿಗೆ ಮಂಡಲೇಶ್ವರ ಸಕಲರಾಜುವಿನ ಪುತ್ರ ತಿರುಮಲರಾಯನು ಕೊರಮಗೆರೆಯೆಂಬ ಗ್ರಾಮವನ್ನು ನೀಡಿದ ವಿಷಯ ನಂಜನಗೂಡ ತಾಮ್ರಶಾಸನದಲ್ಲಿದೆ. ಇಲ್ಲಿ ಬರುವ "ಪ್ರಾಪ್ತ ಕಾಲತ್ರಯೋದಂತ ಪರಿಜ್ಞಾನಾಯಧೀಮತಾ" "ವೀರಶೈವಾಗಮಜ್ಞಾಯ" ಎಂಬಿವು ಮಹತ್ವಪೂರ್ಣ ಉಲ್ಲೇಖಗಳು. ಇದಲ್ಲದೆ ಹೋಳಿನ ಹಿರಿಯ ಹಂಪಯ್ಯನ ವಿಷಯ ಕವಲೇದುರ್ಗ ಮತ್ತು ಕೊಪ್ಪಳ ಶಾಸನಗಳಲ್ಲಿ ಬರುತ್ತಿದ್ದರೆ, ಕವಲೇದುರ್ಗದ ಇನ್ನೊಂದು ಶಾಸನ ಪುರಾಣದ ರಾಚವಟ್ಟಿದೇವನಿಗೆ ದತ್ತಿ ನೀಡಿದ ಸಂಗತಿಯನ್ನು ಹೇಳುತ್ತದೆ.

ಹೀಗೆ ಶರಣರನ್ನು ಕುರಿತ ಶಾಸನಗಳು ಕಾಲಕಾಲಕ್ಕೆ ಹುಟ್ಟುತ್ತ ಬಂದಿವೆ. ಇವು ಒಬ್ಬೊಬ್ಬ ಶರಣನನ್ನು ಉಲ್ಲೇಖಿಸುತ್ತಿದ್ದರೂ ಕ್ರಮವಾಗಿ ನೋಡಿದರೆ ಶರಣಪರಂಪರೆ ಸಾಗಿಬಂದ ದಾರಿಯನ್ನೂ ವೀರಶೈವದ ಮುಖ್ಯ ಹೆಜ್ಜೆಗಳನ್ನೂ ಸ್ಪಷ್ಟಪಡಿಸುತ್ತವೆ. ಒಟ್ಟಿನಲ್ಲಿ "ವೀರಶೈವಮತ ಸ್ಥಾಪಕರೆಂದು ಪ್ರಸಿದ್ಧರಾದ ಬಸವ, ಚೆನ್ನಬಸವಾದಿಗಳು ಕ್ರಿ.ಶ. ೧೧೫೬-೧೧೬೭ರಲ್ಲಿ ಆಳುತ್ತಿದ್ದ ಬಿಜ್ಜಳನ ಕಾಲದಲ್ಲಿ ಇದ್ದರೆಂದು ಸರ್ವತ್ರ ಪ್ರತೀತಿ ಇದ್ದು, ಕರ್ನಾಟಕ ದೇಶದ ಶಾಸನಗಳಲ್ಲಿ ಇದಕ್ಕೆ ಯಾವ ವಿಧವಾದ ಆಧಾರವೂ ದೊರೆಯುವುದಿಲ್ಲ. ಅವರು ಕ್ರಿ.ಶ. ೧೧೫೬-೧೧೬೭ರಲ್ಲಿ ಇರಲಿಲ್ಲವೆಂದಂತೂ ಸುಮಾರಾಗಿ ದೃಢವಾಗಿಯೇ ಹೇಳಬಹುದು" ಎಂಬಂತಹ ಹೇಳಿಕೆಗಳನ್ನು ತಳ್ಳಿ ಹಾಕಿದ ಶ್ರೇಯಸ್ಸು ಈ ಶಾಸನಗಳಿಗೆ ಸಲ್ಲುತ್ತದೆ.

ಶಾಸನ ಬರವಣಿಗೆ ಶರಣಧರ್ಮಕ್ಕೆ ವಿರುದ್ಧವಾಗಿದ್ದರೂ ಅವರ ಬಗೆಗಿನ ಉತ್ಕಟ ಅಭಿಮಾನ ಮತ್ತು ಕೃತಜ್ಞತೆಯ ದ್ಯೋತಕವಾಗಿ ಕನ್ನಡಿಗರು ಅವರ ಹೆಸರಿನಲ್ಲಿ ಶಾಸನಗಳನ್ನು ಕೆತ್ತಿಸಿ, ಶರಣ ಚರಿತ್ರೆಯ ಮೇಲೆ ಕವಿದ ಕತ್ತಲೆಯನ್ನು ಕಳೆಯಲು ನೆರವಾಗಿದ್ದಾರೆ.

■■

ಆಕರ : ಮಾರ್ಗ ಸಂಪುಟ-೨

೨೩

ಶಿಲ್ಪಗಳಲ್ಲಿ ಶಿವಶರಣರು

ಶರಣರನ್ನು ಕಾವ್ಯಗಳಲ್ಲಿ, ತರುವಾಯ ಶಾಸನಗಳಲ್ಲಿ ಹುಡುಕುವ ಪ್ರಯತ್ನಗಳು ಈವರೆಗೆ ತೃಪ್ತಿಕರವಾಗಿ ನಡೆದಿದ್ದು, ಇನ್ನು ಮುಂದೆ ಶಿಲ್ಪಗಳಲ್ಲಿ ಶೋಧಿಸುವ ಕಾರ್ಯ ನಡೆಯಬೇಕಾಗಿದೆ. ಪವಾಡವನ್ನು ನಿರೂಪಿಸುವ ಕಾವ್ಯಗಳಿಗಿಂತ ಚರಿತ್ರೆಯನ್ನು ಹೇಳುವ ಶಾಸನಗಳು ಹೆಚ್ಚು ವಿಶ್ವಸನೀಯವಾಗಿವೆ. ಈ ಶಾಸನಗಳು ಶರಣರ ಶಬ್ದಚಿತ್ರವನ್ನು ಬಿಡಿಸಿದರೆ ಶಿಲ್ಪಗಳು ರೂಪಚಿತ್ರವನ್ನು ಕಂಡರಿಸಿವೆ.

ಶರಣರ ಬದುಕು-ಬರಹಗಳನ್ನು ಅರ್ಥಮಾಡಿಕೊಂಡವನ ಚಿತ್ತಭಿತ್ತಿಯ ಮೇಲೆ ಅವರ ಚಿತ್ರ ಮೂಡಿನಿಲ್ಲುವುದು ಸಹಜ. ಈ ಅಮೂರ್ತಚಿತ್ರಗಳನ್ನು ಬಣ್ಣ ಮಾಧ್ಯಮದಿಂದ ಮೂರ್ತಚಿತ್ರಗಳನ್ನಾಗಿ, ಶಿಲಾಮಾಧ್ಯಮದಿಂದ ಮೂರ್ತವಿಗ್ರಹಗಳನ್ನಾಗಿ ರೂಪಿಸಿ ಇತ್ತೀಚೆ ಪ್ರಕಟಿಸುತ್ತಲಿದ್ದಾರೆ. ಇಂಥ ಊಹಾತ್ಮಕ ಚಿತ್ರ ವಿಗ್ರಹಗಳ ಸೃಷ್ಟಿ ಈ ನಾಡಿನಲ್ಲಿ ಇತಿಹಾಸದುದ್ದಕ್ಕೂ ನಡೆದು ಬಂದಂತಿದೆ. ಊಹೆಯೇ ಆಗಿದ್ದರೂ ಪ್ರಾಚೀನ ಚಿತ್ರ-ಶಿಲ್ಪಗಳಿಗಿಂತ ಸತ್ಯಕ್ಕೆ ಹೆಚ್ಚು ಸಮೀಪ. ಶರಣರನ್ನು ಕಣ್ಣುಮುಟ್ಟಿ ಕಂಡವರು ಹೇಳಿದ, ಹೇಳಿದವರು ಮತ್ತೆ ಹೇಳಿದ ಹಿನ್ನೆಲೆಯಲ್ಲಿ ಹುಟ್ಟಿದ ಇವುಗಳಲ್ಲಿ ಅವರ ಶಾರೀರಿಕ ನಿಲುವುಗಳು, ಉಡುಪು ವಿಶೇಷಗಳು ಕೆಲಮಟ್ಟಿಗಾದರೂ ಮೂಲರೂಪದಲ್ಲಿ ಉಳಿದುನಿಂತಿರುತ್ತವೆ. ಪ್ರಾಚೀನ ಚಿತ್ರ-ಶಿಲ್ಪಗಳು ಅರ್ವಾಚೀನದವುಗಳಿಗಿಂತ ಹೆಚ್ಚು ಪ್ರಾಮಾಣಿಕವೆಂದು ಇದರ ಅರ್ಥ. ಶರಣರ ಇಂಥ ಚಿತ್ರ-ವಿಗ್ರಹಗಳು ನಮ್ಮ ನಾಡಿನ ಕೆಲವೆಡೆಗಳಲ್ಲಿ ಸಿಗುತ್ತಿದ್ದು, ಬೇರೊಂದು ಅಭ್ಯಾಸದ ವಸ್ತುವಾದ ಚಿತ್ರಪ್ರಪಂಚವನ್ನು ಬಿಟ್ಟು, ಇಲ್ಲಿ ಶಿಲ್ಪಪ್ರಪಂಚವನ್ನು ಮಾತ್ರ ಗಮನಿಸಬಹುದು.

ವೀರಶೈವಕ್ಕೆ ಮೂರ್ತಿಪೂಜೆ, ದೇವಾಲಯನಿರ್ಮಾಣ ಕಾರ್ಯಗಳು ವಿರೋಧವಾಗಿದ್ದರೂ ಆಮೇಲೆ ಬಂದ ಅನುಯಾಯಿಗಳು ಮತ್ತೆ ಹಿಂದೂಧರ್ಮದ ಪ್ರಭಾವಕ್ಕೆ ಒಳಗಾಗಿ ಮೂರ್ತಿಗಳನ್ನು ಕೆತ್ತಿಸಿದರು; ದೇವಾಲಯಗಳನ್ನು ಕಟ್ಟಿಸಿದರು. ಇದರ ಫಲವಾಗಿ ಹುಟ್ಟಿದ ಶರಣರ ವಿಗ್ರಹಗಳನ್ನು ಬಸವಪೂರ್ವಯುಗ, ಬಸವಯುಗ, ಬಸವೋತ್ತರಯುಗ ಎಂಬ ಘಟ್ಟಗಳನ್ನು ಕಲ್ಪಿಸಿ ವಿವೇಚಿಸಬಹುದು.

ಬಸವಪೂರ್ವಯುಗ :

ವೀರಶೈವದ ಇತಿಹಾಸದಲ್ಲಿ ಬಸವಪೂರ್ವಯುಗ ಮಂಜು ಮುಸುಕಿದ ಸಮಯ. ವಿದ್ವಾಂಸರ ಸಂಶೋಧನೆಯಿಂದ ಈ ಮಂಜುಕರಗುತ್ತ ನಡೆದು, ಶರಣರು ಒಬ್ಬೊಬ್ಬರಾಗಿ ಈಗ ಪ್ರಕಟಗೊಳ್ಳುತ್ತಲಿದ್ದಾರೆ. ಇವರಲ್ಲಿ ಅರವತ್ತು ಮೂವರು ಪುರಾತನರು, ಕುಂಬಾರ ಗುಂಡಯ್ಯ, ಜೇಡರ ದಾಸಿಮಯ್ಯ ಮುಂತಾದವರು ಶಿಲ್ಪದಲ್ಲಿ ಹೀಗೆ ಗೋಚರಿಸುತ್ತಾರೆ.

ತಮಿಳುನಾಡಿನಲ್ಲಿ ೬೩ರ ವಿಗ್ರಹಗಳು ಇಡಿಯಾಗಿ ಬಿಡಿಯಾಗಿ ಅನೇಕ ಕಡೆಗಳಲ್ಲಿ ಸಿಗುತ್ತವೆ. ಕರ್ನಾಟಕಕ್ಕೆ ಬಂದರೆ ನಂಜನಗೂಡಿನ ಶ್ರೀ ಕಂಠೇಶ್ವರ ದೇವಾಲಯ, ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ, ಬಳ್ಳಾರಿಯ ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಇಡಿಯಾಗಿ ಅರುವತ್ತುಮೂವರ ವಿಗ್ರಹಗಳು ಲಭಿಸುತ್ತವೆ.[೧] ಇವುಗಳಲ್ಲಿ ಬಳ್ಳಾರಿಯ ವಿಗ್ರಹಗಳು ಕೊಂಚ ಪ್ರಾಚೀನ, ಮಿಕ್ಕವು ೧೭ನೆಯ ಶತಮಾನದವು. ಈ ವಿಗ್ರಹಗಳ ಹೆಸರಿನಲ್ಲಿ, ರೂಪದಲ್ಲಿ ತುಂಬ ವ್ಯತ್ಯಾಸ ಕಂಡುಬರುತ್ತಿದ್ದು ವಿದ್ವಾಂಸರು ಇವುಗಳ ತೌಲನಿಕ ಅಧ್ಯಯನ ನಡೆಸುವುದು ಅವಶ್ಯವಿದೆ. ಈ ಅರುವತ್ತು ಮೂವರಲ್ಲಿಯ ಚಿರುತ್ತೊಂಡನ ಇನ್ನೊಂದು ಹೆಸರು ಸಿರಿಯಾಳಸೆಟ್ಟಿ, ಕಾರಿಕಾಲಮ್ಮೆಯ ಇನ್ನೊಂದು ಹೆಸರು ಅಮ್ಮವ್ವೆ ಅಥವಾ ಬಿಜ್ಜಮಹಾದೇವಿ. ಅಬ್ಬಲೂರು, ಹಿರಿಯೂರು, ಮರಡಿಪುರ, ಬೇಗೂರ ಶಾಸನಗಳಲ್ಲಿ[೨] ಸಿರಿಯಾಳ ಸೆಟ್ಟಿಯ ಹೆಸರು ಕಾಣಿಸಿಕೊಂಡರೆ, ಅಬ್ಬಲೂರು ಸೋಮೇಶ್ವರ ದೇವಾಲಯದಲ್ಲಿ "ಸಿರಿಯಾಳ ಶೆಟ್ಟಿ, ಚಂಗಳವ್ವೆ ದೇವರಿಗೆ ಮಗನ ಇಕ್ಕುವ ಠಾವು" ಎಂದು ಬರೆದು ಕೆಳಗೆ ಈ ದೃಶ್ಯವನ್ನು ಕೆತ್ತಲಾಗಿದೆ. ಮಗನನ್ನು ಬಗಲಲ್ಲಿ ಹೊತ್ತ ಚಂಗಳವ್ವೆ ಮತ್ತು ಕೈಮುಗಿದ ಸಿರಿಯಾಳ ಶೆಟ್ಟಿಯರು ಶಿವನಿಗೆ ಅಭಿಮುಖವಾಗಿ ನಿಂತ ಚಿತ್ರವಿದು. ಕಬ್ಬೂರು ಶಾಸನದಲ್ಲಿ 'ಕಾರಿಕಾಲಮ್ಮೆ' ಎಂಬ ಹೆಸರು ಬರುತ್ತಿದ್ದು[೩] ಇವಳು ಪುರಾತನ ಸಮೂಹಕ್ಕೆ ಸೇರಿದ ಕಾರಿಕಾಲಮ್ಮೆಯಿಂದ ಬೇರೆಯಿರಬಹುದು. ಆದರೆ ಪುರಾತನರಲ್ಲಿ ಒಬ್ಬಳಾದ ಈ ಕಾರಿಕಾಲಮ್ಮೆಯ ವಿಗ್ರಹ ಬಿಜ್ಜಾವರದಲ್ಲಿ ಇರುವುದಾಗಿ ಬಿ. ಶಿವಮೂರ್ತಿಶಾಸ್ತ್ರಿಗಳು ಹೇಳುತ್ತಿದ್ದು,[೪] ಇದರ ಪರೀಕ್ಷೆ ಅಗತ್ಯವಿದೆ. ಕುಡುತಿನಿ ಶಾಸನದಲ್ಲಿ "ಮೀಂಟಿ ಕಣ್ಗಳಂ ಹರನ ಶಿಖಾಗ್ರದೊಳ್ನಿಜಿಸಿ" ಎಂಬ ಮಾತಿನ ಮೂಲಕ ಬೇಡರ ಕಣ್ಣಪ್ಪ ಸೂಚಿತನಾಗಿದ್ದಾನೆ. ಈತನ ಮತ್ತು ಚೋಳ ರಾಜನ ವಿಗ್ರಹಗಳು ಗೂಳೂರಿನಲ್ಲಿವೆ.[೪ಅ]

ಅರವತ್ತು ಮೂವರನ್ನು ಬಿಟ್ಟರೆ ಬಸವಪೂರ್ವಯುಗದ ಇನ್ನೊಬ್ಬ ಶರಣ ಕುಂಬಾರಗುಂಡ. ಮರಡೀಪುರ ಶಾಸನದಲ್ಲಿ ಈತನ ಉಲ್ಲೇಖವಿದೆ.[೫] ಅಬ್ಬಲೂರು ಸೋಮೇಶ್ವರ ದೇವಾಲಯದಲ್ಲಿ "ಕುಂಬಾರ ಗುಂಡನ ಮುಂದೆ ಬಂದಾಡಿದ ನಮ್ಮ ಶಿವನು" ಎಂಬ ಬರಹವಿದ್ದು, ಅದರ ಕೆಳಗೆ ಗಡಿಗೆ ನುಡಿಸುತ್ತ ಕುಳಿತ ಗುಂಡಯ್ಯನ ವಿಗ್ರಹವನ್ನು ಕೆತ್ತಲಾಗಿದೆ.[೫] ಕುಣಿಯುತ್ತಲಿರುವ ಶಿವನ ವಿಗ್ರಹ ಇಲ್ಲಿ ಕಂಡುಬರುವುದಿಲ್ಲ. ಬಹುಶಃ ಕಳೆದುಹೋಗಿರಬೇಕು. ಬಸವಪೂರ್ವಯುಗದಲ್ಲಿ ಜೇಡರ ದಾಸಿಮಯ್ಯನೊಬ್ಬ ಸುಪ್ರಸಿದ್ಧ ಶರಣ. ಗೊಬ್ಬೂರು. ಚಿಕ್ಕಮುದನೂರು, ಕಿರಿಯಂಡಿ, ಗೀಜಗನಹಳ್ಳಿ, ಬಿದರೆ, ಹಿರಿಯೂರು, ಮರಡೀಪುರಗ್ರಾಮದ ಶಾಸನಗಳಲ್ಲಿ ಕಂಡುಬರುವ ಈತನ ಜೀವನದಲ್ಲಿ ನಡೆದ ವಸ್ತ್ರದಾನಘಟನೆಯ ಶಿಲ್ಪ ಅಬ್ಬಲೂರು ಸೋಮೇಶ್ವರ ದೇವಾಲಯದಲ್ಲಿ ಕಂಡುಬರುತ್ತದೆ. "ಜೇಡರ ದಾಸಿಮಯ್ಯಗಳು ದೇವರಿಗೆ ವಸ್ತ್ರವ ಕೊಡುವ ಠಾವು" ಎಂಬ ಬರಹದ ಕೆಳಗೆ ದಾಸಿಮಯ್ಯ ವಸ್ತ್ರದ ಸುರುಳೆ ಬಿಚ್ಚಿ ಹಿಡಿದ, ಜಂಗಮ ಕೈಯೊಡ್ಡಿನಿಂತ ಚಿತ್ರವನ್ನು ಇಲ್ಲಿ ಬಿಡಿಸಲಾಗಿದೆ.[೬] ಕೊಲ್ಲಿಪಾಕಿಯಲ್ಲಿಯೂ ಜೇಡರ ದಾಸಿಮಯ್ಯನ ಶಿಲ್ಪವಿರುವುದಾಗಿ ಲಿಂ. ಮಲ್ಲಿಕಾರ್ಜುನ ಹೇಳುತ್ತಿದ್ದು,[೭] ವಿದ್ವಾಂಸರು ಈ ದಿಶೆಯಲ್ಲಿ ಸಂಶೋಧನೆ ಕೈಗೊಳ್ಳಬೇಕಾಗಿದೆ.

---

೧. ಡಾ. ಎಂ.ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪುಟ 14-15

೨. ಡಾ. ಎಂ.ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪುಟ : 17.

೩. ಡಾ. ಎಂ.ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪುಟ:20

೪. ಕರ್ನಾಟಕ ಭಾರತಿ 8-2(1975).

೪ಅ. ಜ.ಚ.ನಿ. :ಶ್ರೀಶೈಲ ಪೀಠದರ್ಶನಂ (1967) ಪು. 18.

೫. ಡಾ. ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪು. 22

ಬಸವಯುಗ :

ಬಸವಯುಗ ವೀರಶೈವ ಇತಿಹಾಸದ ಸುಗ್ಗಿಕಾಲ. ಈ ಯುಗದ ನಾಯಕವ್ಯಕ್ತಿಯಾದ ಬಸವಣ್ಣನವರನ್ನು ಕುರಿತು ಹಿರಿಯೂರು, ಅರ್ಜುನವಾಡ-೧, ಅರ್ಜುನವಾಡ-೨, ಚೌಡದಾನಪುರ-೧, ಚೌಡದಾನಪುರ-೨, ಕಲ್ಲೇದೇವರಪುರ, ಮರಡೀಪುರ, ಗುಡಿಹಾಳ ಕುಂಟೋಜಿ, ಆನಂದಪುರ, ಜೋಡಿದಾಸೇನಹಳ್ಳಿ, ಕಾನಕಾನಹಳ್ಳಿ-೧, ಕಾನಕಾನಹಳ್ಳಿ-೨ ಇಷ್ಟು ಶಾಸನಗಳು ಸಿಗುತ್ತವೆ.[೬] ಇದಲ್ಲದೆ ಕರ್ನೂಲ ಜಿಲ್ಲೆಯ ನಂದಿಕೋಟೂರು ತಾಲೂಕಿನ ನಾಗಲೂಟಿ ಗ್ರಾಮದ ಶಾಸನ (೧೬೨೪)ದಲ್ಲಿ ಬರುವ "ಶ್ರೀಶೈಲ ಸಿಧಾಪುರಂ ಲಾಂಗಲೂಟಿ ವೀರಭದ್ರುನಿ ದೇವುಳ ಪ್ರಾಕಾರಮಂದು ತೂರ್ಪುನ ಗೋಪುರಮುನ್ನ ಆ ಸಮೀಪಮಂದು ಶಿಲಾಮಂಟಪಮುನ್ನ ಗಟ್ಟಿಂಚಿ ಕಾಶೀವಿಶ್ವೇಶ್ವರುನಿ ಕಲ್ಯಾಣಬಸವೇಶ್ವರುನಿ ಪ್ರತಿಷ್ಟಚೇಶಿ-" ಎಂಬ ಉಲ್ಲೇಖ ಬರುತ್ತದೆ.[೭] ಇದರಿಂದ ಬಸವಣ್ಣನವರ ವಿಗ್ರಹವೊಂದನ್ನು ಅಲ್ಲಿ ಪ್ರತಿಷ್ಠೆಮಾಡಿದುದರ ಸುಳುಹು ಸಿಗುತ್ತಿದ್ದು, ಆ ಗ್ರಾಮದಲ್ಲಿ ಸಂಶೋಧನೆ ನಡೆಯಬೇಕಾಗಿದೆ. ಉಜ್ಜಯನಿಯಲ್ಲಿಯ ವಿಗ್ರಹವೊಂದು ಬಸವಣ್ಣನವರದೆಂದು ಶ್ರೀ ಎಚ್.ದೇವಿರಪ್ಪ ಅವರು ಹೇಳುತ್ತಾರೆ.[೮] ಈ ಅಭಿಪ್ರಾಯ ವಿದ್ವಾಂಸರ ಚರ್ಚೆಗೆ ಒಳಪಡಬೇಕಾಗಿದೆ.

ಬಸವಯುಗದ ಇನ್ನೊಬ್ಬ ಪ್ರಮುಖ ಶರಣ ಮಡಿವಳ ಮಾಚಿದೇವ. ಕಾನಕಾನಹಳ್ಳಿಯ ೨ ತಾಮ್ರಪಟಗಳಲ್ಲಿ ಈತ ಉಲ್ಲೇಖಿತನಾಗಿದ್ದಾನೆ.[೧೦] ಬಿಜ್ಜಳನ ಪಟ್ಟದಾನೆಯನ್ನು ತುಳಿದು ಹಾಕಿದ ವೀರ ಘಟನೆ ಇವನ ಜೀವನದ ಒಂದು ಉಜ್ವಲ ಪ್ರಸಂಗ. ಈ ಸನ್ನಿವೇಶವನ್ನೊಳಗೊಂಡ ವಿಗ್ರಹಗಳು ಅಮ್ಮಿನಭಾವಿ, ಮುಳಗುಂದ, ಧಾರವಾಡಗಳಲ್ಲಿ[೧೧] ಲಭಿಸಿವೆ. ಅಮ್ಮಿನಭಾವಿ ವಿಗ್ರಹದ ಕೆಳಗೆ "ತಾರಣ ಸಂವತ್ಸರದ ವೈಶಾಕ ಸು. ೧೫ ಅಲು ಅಂಮ್ಮೆಯನಭಾವಿಯಲಿ ಮಡಿವಾಳರು ವೀರಮಡಿವಾಳ ಮಾಚಿದೇ xxx ಯುಗ ಪ್ರತಿಷ್ಠೆಯಂ ಮಾಡಿದರು ಮಂಗಳ xxx" ಎಂಬ ಬರಹವಿದೆ. ಈ ಮೂರು ವಿಗ್ರಹಗಳು ಸೊಂಡಿಲನ್ನು ಒಂದು ಕೈಯಿಂದ ಎತ್ತಿಹಿಡಿದು. ಆನೆಯನ್ನು ತುಳಿದು ಹಾಕುತ್ತಿರುವ ದೃಶ್ಯವನ್ನೊಳಗೊಂಡಿದ್ದು ಮಡಿವಳಯ್ಯನ ಪಕ್ಕದಲ್ಲಿ ಬಹುಶಃ ಅವನ ಹೆಂಡತಿಯಾಗಿರಬಹುದಾದ ಒಬ್ಬ ಸ್ತ್ರೀಯ ಚಿತ್ರವನ್ನು ಬಿಡಿಸಲಾಗಿದೆ. ಅಮ್ಮಿನಭಾವಿ ವಿಗ್ರಹ ೧೨೮೪ರಲ್ಲಿ ಹುಟ್ಟಿರುವುದರಿಂದ ಲಿಂಗೈಕ್ಯರಾದ ಒಂದು ಶತಮಾನದಲ್ಲಿಯೇ ದೇವರ ಮಟ್ಟಕ್ಕೇರಿ ಶರಣರು ಮೂರ್ತಿರೂಪದಲ್ಲಿ ಪೂಜೆಗೊಳ್ಳುತ್ತಲಿದ್ದರೆಂದು ವೇದ್ಯವಾಗುತ್ತದೆ. ಉಡುತಡಿಯ ಜನರು ಹೇಳುತ್ತಿರುವಂತೆ ಅಲ್ಲಿಯ ಒಂದು ಸ್ತ್ರೀವಿಗ್ರಹ ಮಹಾದೇವಿಯಕ್ಕನದು ಅಲ್ಲ. ಯಾವಳೊ ಒಬ್ಬ ಸ್ತ್ರೀಯ ನೆನಪಿಗಾಗಿ ನಿಲ್ಲಿಸಿದ ಮಾಸ್ತಿಕಲ್ಲು. ಇದನ್ನು ಬಿಟ್ಟರೆ ಶ್ರೀಶೈಲದ ಕದಳಿವನದ ಸ್ತ್ರೀವಿಗ್ರಹ ಮಹಾದೇವಿಯಕ್ಕನದೆಂದು ಕೆಲವರು ಹೇಳುತ್ತಿರುವುದು ಆಧಾರಗಳನ್ನು ಬಯಸುತ್ತದೆ.[೧೨]

---

೬. ಡಾ.ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪುಟ 35-38

೭. ಶ್ರೀ ಮಲ್ಲಿಕಾರ್ಜುನ : ಶ್ರೀ ರೇವಣಸಿದ್ಧರು, ಪುಟ 512

೮. ಡಾ. ಎಂ.ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪುಟ 54-55

೯. ಶ್ರೀ ಎಚ್. ದೇವೀರಪ್ಪ : ಬಸವರಾಜದೇವರ ರಗಳೆಯ ಮುನ್ನುಡಿ.

೧೦. ಡಾ. ಎಂ.ಎಂ. ಕಲಬುರ್ಗಿ :ಶಾಸನಗಳಲ್ಲಿ ಶಿವಶರಣರು (1978) ಪುಟ 86-88.

೧೧. ಡಾ. ಎನ್. ಆರ್. ಗುರವ: ಕರ್ನಾಟಕ ಭಾರತಿ 6-4 ಮತ್ತು ಡಾ. ಎಂ.ಎಂ. ಕಲಬುರ್ಗಿ ಸಂಯುಕ್ತ ಕರ್ನಾಟಕ.

೧೨. ಡಾ. ಎಂ.ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪುಟ 95-101.

ಏಕಾಂತದ ರಾಮಯ್ಯ, ಶರಣ ಸಮೂಹದಲ್ಲಿ ರಕ್ತರಂಜಿತ ಘಟನೆಗೆ ಕಾರಣನಾದವ. ತಾಳಿಕೋಟೆ, ಭೋಗಾವೆ, ಮರಡಿಪುರ, ಬಂದಳಿಕೆ, ಕೆಂಪನಪುರ ಗ್ರಾಮದ ಶಾಸನಗಳಲ್ಲಿ ಉಲ್ಲೇಖಿತವಾದ ಈತನು ಮೆರೆದ ವೀರಘಟನೆಯನ್ನು ಕುರಿತ ಸುದೀರ್ಘ ಶಾಸನವೊಂದು ಅಬ್ಬಲೂರಿನಲ್ಲಿ ದೊರೆಯುತ್ತದೆ. ಇವಲ್ಲದೆ ಈ ಹೆಸರಿನ "ಏಕಾಂತ ರಾಮೇಶ್ವರಲಿಂಗ"ವೊಂದು ಅಬ್ಬಲೂರಿನಲ್ಲಿ ಕಂಡುಬರುತ್ತದೆ. ಇದಕ್ಕೆ ಹೆಚ್ಚಿನದಾಗಿ, ಜಿನವಿಗ್ರಹವನ್ನೊಡೆದು ಶಿವಲಿಂಗವನ್ನು ಪ್ರತಿಷ್ಠಾಪಿಸಿದ ಘಟನೆಯ ಬೇರೆ ಬೇರೆ ಹಂತಹಂತಗಳನ್ನೊಳಗೊಂಡ ಚಿತ್ರಗಳನ್ನು ಅಲ್ಲಿ ಕೆತ್ತಲಾಗಿದೆ. ಅವುಗಳಲ್ಲಿ ಈ ಮೂರು ಚಿತ್ರಗಳು ಮಹತ್ವಪೂರ್ಣವಾದುವು. ೧. ಸೋಮೇಶ್ವರ ದೇವಾಲಯದ ಒಳಗೋಡೆಯ ಮೇಲೆ ಬಲಕ್ಕೆ "ಶ್ರೀಮದ್ ಏಕಾಂತರ ರಾಮಯ್ಯಂಗೆ ಸಂಕಗೌಂಡನು ಓಲೆಯ ಕುಡುವ ಠಾವು' ಎಂಬ ವಾಕ್ಯ ಬರೆದು ಕೆಳಗೆ ಸಂಬಂಧಿಸಿದ ಚಿತ್ರವನ್ನು ಬಿಡಿಸಲಾಗಿದೆ. ೨. ಸೋಮೇಶ್ವರದೇವಾಲಯದ ಒಳಗೋಡೆಯ ಮೇಲೆ ಎಡಕ್ಕೆ "ಯೆ[ಏ]ಕಾಂತ ರಾಯಯ್ಯಂಗಳು ಜಿನನ ಒಡೆದು ಲಿಂಗಪ್ರತಿಷ್ಠೆಯಂ ಮಾಡಿದ ಠಾವು" ಎಂಬ ವಾಕ್ಯವಿದ್ದು, ಕೆಳಗೆ ಅದಕ್ಕೆ ಸಂಬಂಧಪಟ್ಟ ಚಿತ್ರವನ್ನು ಕೊರೆಯಲಾಗಿದೆ.[೧೩] ಸೋಮೇಶ್ವರದೇವಾಲಯದ ಹೊರಭಾಗದ ಮೇಲೆ "ಶ್ರೀ ಬ್ರಹ್ಮೇಶ್ವರದೇವರಲ್ಲಿ ಏಕಾಂತದ ರಾಮಯ್ಯ ಬಸದಿಯ ಜಿನನೊಡ್ಡವಾಗಿ ತಲೆಯನರಿದು ಹಡೆದ ಠಾವು ॥ ಸಂಕಗೌವುಂಡ ಬಸದಿಯನೊಡೆಯಲೀಯದೆ ಆಳು ಕುದುರೆಯನೊಡ್ಡಿರಲು ಏಕಾಂತದ ರಾಮಯ್ಯ ಕಾದಿ ಗೆಲ್ದು ಜಿನನೊಡೆದು ಲಿಂಗಮಂ ಪ್ರತಿಷ್ಠೆ ಮಾಡಿದಂ" ॥ ಎಂಬ ವಾಕ್ಯವಿದ್ದು, ಕೆಳಗೆ ಸಂಬಂಧಪಟ್ಟ ದೃಶ್ಯಗಳು ಕೆತ್ತಲ್ಪಟ್ಟಿವೆ. ಬಹುಶಃ ಸ್ವತಃ ಏಕಾಂತ ರಾಯಮ್ಯನೇ ಕೆತ್ತಿಸಿದ ಇವು ಶರಣರನ್ನು ಕುರಿತ ಶಿಲ್ಪಗಳಲ್ಲಿಯೇ ತುಂಬ ಅಪೂರ್ವವೆನಿಸಿವೆ.

ಬಸವಯುಗದ ಇನ್ನೊಬ್ಬ ಶರಣನಾದ ಆದಯ್ಯನ ವಿಗ್ರಹವೊಂದು ಸಾಸಲದಲ್ಲಿ ಇರುವುದಾಗಿ ಬಿ. ಶಿವಮೂರ್ತಿಶಾಸ್ತ್ರಿಗಳು ಹೇಳುತ್ತಿದ್ದು,[೧೪] ಪ್ರತ್ಯಕ್ಷ ಪರೀಕ್ಷೆ ಅವಶ್ಯವಿದೆ.

ಶರಣರ ವಿಗ್ರಹಗಳಿಗೆ ಸಂಬಂಧಪಟ್ಟಂತೆ ಬನವಾಸಿ ಗಮನಾರ್ಹ ಕೇಂದ್ರವೆನಿಸಿದೆ. ಅಲ್ಲಿಯ ಮಧುಕೇಶ್ವರ ದೇವಾಲಯದ ಶಿಲಾಮಂಟರದ ಸುತ್ತ ಲದ್ದೆ ಸೋಮಣ್ಣ, ಮೋಳಿಗೆ ಅಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಇಕ್ಕದ ಮಾರಯ್ಯ, ಹಡಪದ ಅಪ್ಪಣ್ಣ, ಹೋಳಿನ ಹಂಪಣ್ಣ, ಅಗ್ಗಣಿ ಹೊನ್ನಯ್ಯ, ಗುಂಡಬ್ರಹ್ಮಯ್ಯ ಎಂಬ ಹೆಸರಿನೊಂದಿಗೆ ಬಸವಯುಗದ ಶರಣರ ವಿಗ್ರಹಗಳು ಕಂಡುಬರುತ್ತವೆ.[೧೪] ಇವು ೧೭ನೆಯ ಶತಮಾನಕ್ಕೆ ಸಂಬಂಧಪಟ್ಟಿದ್ದು, ಆಯಾ ಶರಣರ ಅಂಗವಿನ್ಯಾಸ, ವೇಷಭೂಷಣ ಬಳಸುವ ವಸ್ತುಸಾಮಗ್ರಿಗಳು ಅಭ್ಯಾಸಯೋಗ್ಯವೆನಿಸಿವೆ. ಇವುಗಳಲ್ಲಿ ಅಗ್ಗವಣಿ ಹೊನ್ನಯ್ಯನ ಉಲ್ಲೇಖ ಕಲ್ಲೇದೇವರಪುರ ಮರಡೀಪುರ ಶಾಸನಗಳಲ್ಲಿ ಕಂಡುಬರುತ್ತಿದ್ದು, ಅಬ್ಬಲೂರಿನಲ್ಲಿ ಈ ಹೆಸರಿನ ಒಂದು ಶಿವಲಿಂಗವಿದೆ. ಇವರನ್ನು ಬಿಟ್ಟರೆ ಕೆಲವು ಶರಣರ ವಿಗ್ರಹಗಳು ಅಲ್ಲಲ್ಲಿ ಇರುವುದಾಗಿ ವದಂತಿಯಿದೆ. ಗೂಳೂರಿನ ಮಠದ ಮಂಟಪದಲ್ಲಿ ಬಿಡಿಸಲಾದ ಕೆಲವು ವಿಗ್ರಹಗಳು ಈ ಪೀಠದ ಜಗದ್ಗುರು ಪಂಡಿತಾಚಾರ್ಯ, ವಿರೂಪಾಕ್ಷದೇಶಿಕೇಂದ್ರ, ಚಂದ್ರಗುಂಡ ಶಿವಾಚಾರ್ಯ ಈ ಮೂವರುವಾಗಿವೆಯೆಂದು ಪ್ರೊ. ಎಸ್.ಕೆ. ರಾಮಚಂದ್ರರಾವ್ ಅವರು ಒಂದು ಲೇಖನದಲ್ಲಿ ಹೇಳಿದ್ದಾರೆ.[೧೫] ಇಂಗಳೇಶ್ವರದಲ್ಲಿ ಇರುವ ಒಂದು ವಿಗ್ರಹ ರೇವಣಸಿದ್ಧೇಶ್ವರನದೆಂದು ಅಲ್ಲಿಯ ಜನರ ವದಂತಿ.

---

೧೩. ಬಿ. ಶಿವಮೂರ್ತಿಶಾಸ್ತ್ರಿ : ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದ ಮುನ್ನುಡಿ.

೧೪. ಡಾ. ಎಂ.ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪು. 103.

೧೫. ಜ. ಚ. ನಿ. - ಶ್ರೀಶೈಲ ಪೀಠದರ್ಶನಂ (1967) ಪು. ೧೩

ಬಸವೋತ್ತರ ಯುಗ :

ಬಸವೋತ್ತರಯುಗದ ಶರಣರಲ್ಲಿ ಶಿಲ್ಪದಲ್ಲಿ ಪ್ರಧಾನವಾಗಿ ಕಂಡುಬರುವವರು ಗುಂಡ ಬ್ರಹ್ಮಯ್ಯಗಳು. ಓರಂಗಲ್ಲಿನ ಕಾಕತೀಯ ಗಣಪತಿರಾಯನ ಮನೆಯಲ್ಲಿ ಕಳುವುಮಾಡಿ ಮೊರೆಹೊಕ್ಕ ಕಳ್ಳನರೂಪದ ಶಿವನನ್ನು ಬೆನ್ನಿಗೆ ಹಾಕಿಕೊಂಡು ಶೂಲವನ್ನೇರಿದ ಶರಣರಿವರು. ಕರ್ನಾಟಕದಲ್ಲಿ ಗುಂಡ ಬ್ರಹ್ಮಯ್ಯಗಳ ದೇವಾಲಯ, ವಿಗ್ರಹಗಳು ಕಂಡುಬರುತ್ತವೆ; ಉತ್ಸವಗಳು ಜರುಗುತ್ತವೆ. ಗುಂಡೇನಹಳ್ಳಿಯಲ್ಲಿ ಗುಂಡಬ್ರಹ್ಮಯ್ಯಗಳ ದೇವಾಲಯ, ವಿಗ್ರಹ ಇದ್ದರೆ ಕೆಲವು ಗ್ರಾಮಗಳಲ್ಲಿ ಕೇವಲ ವಿಗ್ರಹಗಳು ಲಭಿಸುತ್ತವೆ. ಈವರೆಗೆ ಲಭಿಸಿದ ಏಳು ವಿಗ್ರಹಗಳನ್ನು ಶಿಲ್ಪದೃಷ್ಟಿಯಿಂದ

೧. ಹಾವೇರಿ, ಗುಂಡೇನಹಳ್ಳಿ, ಕುಸಕೂರು. ೨. ಚಿತ್ರದುರ್ಗ, ಬಸವಾಸಿ, ನೀತಿಗೆರೆ. ೩. ಬಳ್ಳಾರಿ.

ಎಂದು ವರ್ಗೀಕರಿಸಬಹುದು.[೧೬] ಬನವಸೆಯನ್ನುಳಿದು ಯಾವ ವಿಗ್ರಹಕ್ಕೂ ಬರವಣಿಗೆ ಇಲ್ಲ. ಜೋಡು ವಿಗ್ರಹ, ಕೈಯಲ್ಲಿ ಇಷ್ಟಲಿಂಗ, ಶೂಲದ ಮೇಲೆ ಕುಳಿತಿರುವ ಇಲ್ಲವೆ ಶೂಲದ ಮಗ್ಗಲು ನಿಂತಿರುವ ಭಂಗಿ - ಇವುಗಳ ಸ್ವರೂಪ. ಹೊಸದುರ್ಗ ತಾಲೂಕಿನ ಬೂದಿಹಾಳು ಗ್ರಾಮದಲ್ಲಿಯೂ ಗುಂಡಬ್ರಹ್ಮಯ್ಯಗಳ ವಿಗ್ರಹವಿರುವುದಾಗಿ ತಿಳಿದುಬರುತ್ತದೆ.[೧೭] ಕುಮಾರರಾಮನ ಸಾಂಗತ್ಯದಲ್ಲಿ ಶೂಲದ ಹಬ್ಬದ ವರ್ಣನೆ ಮತ್ತು ಕುಮಾರ ರಾಮನು ಓರಂಗಲ್ಲಿನ ಗುಂಡಬ್ರಹ್ಮಯ್ಯ ದೇವಾಲಯಕ್ಕೆ ಭೇಟಿಕೊಟ್ಟ ವಿಷಯಗಳು ಬರುತ್ತವೆ. ಅಲ್ಲಿಯ ದೇವಾಲಯ ಮತ್ತು ಮೂರ್ತಿಗಳನ್ನು ಶೋಧಿಸುವುದು ಅವಶ್ಯವಿದೆ.

ಬಸವೋತ್ತರಯುಗದ ಶರಣರಲ್ಲಿ ಮೂರುಜಾವಿದೇವನ ಹೆಸರು ಹಿರೇಮಗಲಗೇರಿ, ರಟ್ಟಿಹಳ್ಳಿ, ಲಕ್ಷ್ಮೇಶ್ವರ, ಕಲಕೇರಿ-1, ಕಲಕೇರಿ-2 ಇಷ್ಟು ಶಾಸನಗಳಲ್ಲಿ ಕಂಡುಬರುತ್ತದೆ. ಅಂತರವಳ್ಳಿ ಗ್ರಾಮದಲ್ಲಿ ನಿಂತಭಂಗಿಯ ಈತನ ಒಂದು ವಿಗ್ರಹ ಜನರಿಂದ ಪೂಜೆಗೊಳ್ಳುತ್ತಲಿದೆ.[೧೮] ಹೋಳಿನ ಹಂಪಯ್ಯ ೧೩ನೆಯ ಶತಮಾನದ ಒಬ್ಬ ಶಿವಶರಣ. ಕವಲೆದುರ್ಗ, ಕೊಪ್ಪಳದ ಶಾಸನಗಳಲ್ಲಿ ಉಲ್ಲೇಖಿತವಾದ ಈತನ ಒಂದು ವಿಗ್ರಹ ಬನವಾಸಿ ಮಧುಕೇಶ್ವರ ದೇವಾಲಯದ ಶಿಲಾಮಂಟಪದಲ್ಲಿ ಕೆತ್ತಿದ ಶರಣರ ಸಾಲಿನಲ್ಲಿ ಕಂಡುಬರುತ್ತದೆ.[೧೯]

ಈವರೆಗೆ ಶರಣರ ಈ ವಿಗ್ರಹಗಳು ನಮ್ಮ ಗಮನಕ್ಕೆ ಬಂದಿದ್ದು, ಇವುಗಳ ರಕ್ಷಣೆ ತೀವ್ರ ಕೈಕೊಳ್ಳಬೇಕಾದ ಕಾರ್ಯ. ಇದಲ್ಲದೆ ಪ್ರತಿಯೊಂದು ವಿಗ್ರಹವನ್ನು ಶಿಲ್ಪಶಾಸ್ತ್ರದ ಹಿನ್ನೆಲೆಯಲ್ಲಿ ಅಭ್ಯಸಿಸಿ ಅದರ ಶಿಲ್ಪವಿನ್ಯಾಸ, ಕಾಲ ಇತ್ಯಾದಿ ವೈಶಿಷ್ಟ್ಯಗಳನ್ನು ಅರಿತುಕೊಳ್ಳಬೇಕಾಗಿದೆ. ಇದಕ್ಕೆ ಹೆಚ್ಚಿನವಾಗಿ ಅವುಗಳ ಚಿತ್ರ ಬಿಡಿಸಿ, ಫೋಟೋ ತೆಗೆದುಕೊಂಡು ಪುಸ್ತಕರೂಪದಲ್ಲಿ ಪ್ರಕಟಿಸುವ, ಸಾಧ್ಯವಾದರೆ ಫಿಲ್ಮ ಮಾಡಿಸಿಕೊಂಡು ಅಲ್ಲಲ್ಲಿ ಪ್ರದರ್ಶಿಸುವ ಕೆಲಸವೂ ನಡೆಯಬೇಕಾಗಿದೆ. ಜೊತೆಗೆ ಶರಣರ ವಾಸಸ್ಥಳದಲ್ಲಿ ವ್ಯಾಪಕವಾದ ಸಂಶೋಧನೆ ನಡೆಸಿ ಹೊಸ ಹೊಸ ವಿಗ್ರಹಗಳನ್ನು ಶೋಧಿಸುವ ಕಾರ್ಯವೂ ಜರುಗಬೇಕಾಗಿದೆ.

■■

---

೧೬. ಡಾ. ಎಂ.ಎಂ. ಕಲಬುರ್ಗಿ :ಶಾಸನಗಳಲ್ಲಿ ಶಿವಶರಣರು (1978) ಪು. 113-114.

೧೭. ಈ ವಿಗ್ರಹ ಇನ್ನೂ ಪ್ರಕಟವಾಗಿಲ್ಲ.

೧೮. ಡಾ. ಎಂ.ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪು. 108-113

೧೯. ಡಾ.ಎಂ.ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು (1978) ಪು. 162.

ಆಕರ : ಮಾರ್ಗ ಸಂಪುಟ–೨

೨೪

ಶರಣರನ್ನು ಕುರಿತು ಒಂದು ಶಾಸನ

"ಮಾಡಿನೆಂಬುದು ಮನದಲ್ಲಿ ಹೊಳೆದರೆ ಪಿಡಿಸಿ ಕಾಡಿತ್ತು ಶಿವನ ಡಂಗುರ" ಎಂಬ ಮಾತು ಶರಣರ ನಿರಪೇಕ್ಷ ಪರೋಪಕಾರಸೂತ್ರ. ಅದಕ್ಕಾಗಿಯೇ ಒಂದು ಕೈಯಿಂದ ದಾನಮಾಡುತ್ತ ಇನ್ನೊಂದು ಕೈಯಿಂದ ಲಿಪಿ ತೀಡಿದ ಕೀರ್ತಿಕಾಮಿಗಳ ಅಗಣಿತ ಶಾಸನಗಳನ್ನು ಕಾಣುವ ನಾವು, ಕಲ್ಯಾಣದ ಶರಣರು ಬರೆಯಿಸಿದ ಕಲ್ಬರಹಗಳನ್ನು ಕಾಣುವುದು ಅಪರೂಪ. ಇದರಿಂದ "No Epigraphic mention of Basava and Channabasava had been obtained, which is really peculiar if they held the high office that is alloted to them by tradition."[1] ಎಂಬಂಥ ಸಂಶಯಯುಕ್ತ ಮಾತುಗಳು ಹುಟ್ಟಿಬಂದವು. ಆದರೆ ಉತ್ತರಕಾಲೀನ ಭಕ್ತರು ಬರೆಯಿಸಿದ ಕೆಲವು ಶಾಸನಗಳು ಇತ್ತೀಚೆ ಲಭಿಸಿ, ಇಂಥ ಮಾತುಗಳು ಮುರಿದುಬಿದ್ದು, ಶರಣರ ಚರಿತ್ರೆಗೆ ಐತಿಹಾಸಿಕ ಸತ್ಯ ಲಭಿಸಿದೆ. ಪ್ರಸ್ತುತ ಇಂಥ ಒಂದು ಶಾಸನವನ್ನು ಇಲ್ಲಿ ವಿವೇಚಿಸಲಾಗಿದೆ.

ಹಗರಟಿಗೆ ನಾಡಿನ ಶಾಸನಗಳನ್ನು ಸಮೀಕ್ಷಿಸುತ್ತಿರುವಲ್ಲಿ South Indian Inscriptions XV No. 56ರಲ್ಲಿ ಪ್ರಕಟವಾದ ತಾಳಿಕೋಟೆ (ವಿಜಾಪುರ ಜಿಲ್ಲೆ) ಶಾಸನವೊಂದು ನನ್ನ ಗಮನಕ್ಕೆ ಬಂದಿತು. ಕಲ್ಯಾಣ ಚಾಲುಕ್ಯ ಸೋಮೇಶ್ವರ IVನ ಆಳಿಕೆಯ 3ನೆಯ ವರುಷದಲ್ಲಿ ಹುಟ್ಟಿದ ಈ ಶಾಸನದ ಕಾಲ ಕ್ರಿ.ಶ. ೧೧೮೪. ಅದರ ಪೂರ್ಣಪಾಠ ಹೀಗಿದೆ.[2]

(ಪ್ರಾರಂಭದ ಕೆಲವು ನಾಶವಾಗಿವೆ)

೧. ದಿಂ ಮುಜಿವರುಂ ಪರಸಮಯ ಗಿರಿವಜ್ರದಂಡರುಂ ಜಗದಲುಪ್ದಂ -
೨. ಡರುಂ ಜಿನಸಮಯ ವನದಹನದಾವಾನಳರುಂ ಮುನಿದರ್ಗೆ
೩. ಹಾಳಾಹಳರುಂ ಬೌದ್ಧಸಮಯ ವಿಧ್ವಂಸನ ಪ್ರವೀಣರುಂ ಬಗೆ -
೪. ಯಲು ಜಾಣರುಂ ಅನ್ಯಸಮಯಿಗಳ ಬೆನ್ನಬಾರಸೆತ್ತುವರುಂ ಸೆ-
೫. ಣಸುವರ ನೆತ್ತರಂ ಮರುಳ್ಗಳಿಂ ಕುಡಿಸುವರುಂ ಪರಸಮಯ
೬. ಘುರಟ್ಟಮಂ ವೀರಕು[ಪ್ಪ]ರವಟ್ಟರುಂ ಕಾಲನ ಸಾಲಗೆಯಂ ಕೀಳ್ವರುಂ
೭. [ಬಾ]ರಿಯಂ ಕೂರದಗ್ಗ್ರೀವರುಂ ನಂಜನಂಜದುಂಬರುಂ

---

೧. Dynasties of the Kanarese Districts. Page 481.

೨. Jainism in South India - Page 398ರಲ್ಲಿ ಈ ಶಾಸನದ ಸ್ವಲ್ಪ ಭಾಗವೂ, ಎಂ. ಗದ್ದಗಿಮಠರ "ಶಾಸನೋಕ್ತ ವೀರಶೈವರು" ಎಂಬ ಲೇಖನದಲ್ಲಿ ಈ ಶಾಸನದ ಒಂದೆರಡು ಸಾಲುಗಳೂ ಪ್ರಕಟವಾಗಿವೆ.

೮. .... ಱಿಸಿ ಮಾರ್ಕ್ಕೊಳ್ವರುಂ ಬಹುವಿಧ ನಿಷ್ಟಾವಶೀಕ್ರಿತ -
೯. ....[ರುಂ] ಅಸಂಖ್ಯಾತಸಂಖ್ಯಾಭಿಧೇಯ ಮಹಾ-
೧೦. ...... ಪರಸಮಯ ಸರಸಿಜಾತ ಸಮೂಹ ಮದಕರಿಗಳಂ
೧೧. ..... [ಹು]ವಿಧ ನಿಷ್ಠೆಯಿಂ ಹರನಂ ಪರಿಕ್ಷಿ ಭವಮನಂತರ್ಪ್ಪಿ ಪರಸಮ-
೧೨. .....ಲೆ ಗಂಡರುಂ ಪರಿಯಳಿಗೆ ಅಣೆಲೆವಾಡ ಉಣುಕಲ್ಲು ಸಂ -
೧೩. ಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ ಕೆಂ-
೧೪. ಬಾವಿ ಬಮ್ಮುಕೂರು ಮೊದಲಾಗಿ ಅನನ್ತದೇಶ ದೇಶಾನ್ತರದಲಿದಿ -
೧೫. ರಾದ ಪರಸಮಯಿಗಳಂ ಪಡಲ್ವಡ್ಸಿ ಲೋಕಮನಾಕಂಪಂಗೊ-
೧೬. ಳ್ಸಿ ಬಸದಿಗಳಂ ಹೊಸದು ಮುಕ್ಕಿ ಶಿವಲಿಂಗಸಿಂಹಾಸನಮಂ [ಕ]-
೧೭. ಣ್ಗೊಳ್ಸಿ ಚಲಮಂ ಮೆಱೆದು ಧೀರದೊಳು ನೆರೆದು ಸ್ವರ್ಗ್ಗ ಮರ್ತ್ಯ -
೧೮. ಪಾತಾಳದೊಳನಂಗಾರಿಯ ಹೆಮ್ಮೆಯ್ಮಂ ತಮ್ಮ ಭ್ರಿ-
೧೯. ತ್ಯಾಚಾರದ ತೊಮ್ಪ್ರೆಯ್ಮಂ ತಳದಲಿಕ್ಕಿ ತೋರ್ಪ್ಪನ್ತೆ ತೋರಿದ ಪುರಾತ-
೨೦. ನ ನೂತರೆನಿಸಿದ ಅಸಂಖ್ಯಾತಗಣಂಗಳ ನಾಮಾದಿ ಸ -
೨೧. ಮಸ್ತ ಪ್ರಶಸ್ತಿ ಸಹಿತಂ । ಸ್ವಸ್ತಿ ಶ್ರೀಮಚ್ಚಾಳುಕ್ಯ ಚಕ್ರವರ್ತಿ ತ್ರಿಭು -
೨೨. ವನಮಲ್ಲ ವೀರಸೋಮೇಶ್ವರದೇವ ವರ್ಷದ ೩ನೆಯ ಕ್ರೋಧಿಸಂವತ್ಸ-
೨೩. ರದ ವೈಶಾಖ ಸುದ್ಧ ೧೩ ಸೋಮವಾರದಂದು ಶ್ರೀ ವೀರಬಯ್ಸೇಶ್ವ-
೨೪. ರ ದೇವರ್ಗ್ಗೆ ಅಂಗಭೋಗ ಚೈತ್ರ ಪೈತ್ರ ಸಕಲಗಣಂಗಳ ದೇವತಾರ್ಚ್ಚನೆ-
೨೫. ಗಳಂ ಮಾಳ್ಪಂತಾ[ಗಿ] ಶ್ರೀ ಮನುಮಹಾಮಂಡಳೇಸ್ವರಂ ವಿರುಪ-
೨೬. ರಸದೇವರು ವೀರದಾಸಂಗೆ ಗಣಮಠವಾಗಿ ಕೊಟ್ಟ ಕೆಯಿ ತಾಳಿಯ -
೨೭. ಕೋಟೆಯಿಂ ಬಡಗಲು ಬಂಮನಹಳ್ಳಿಯಿಂ ಮೂಡಲು ಕಾರೆಗನೂರಿ -
೨೮. ಗೆ ಹೋದದಾರಿಯಿಂ ಉಪ್ಪುವಳ್ಳ ತೆಂಕಣಸೀಮೆಯಾಗಿ ಬಡಗಲು
೨೯. ಗೊಟ್ಟಕಂಡಿಕೆಯಿಂದಿಳಿದು ಬಂದ ಹಳ್ಳ ಮೇರೆಯಾಗಿ ಮಾಣಿಕೇಶ್ವ-
೩೦. ರದ ಕೋಲಲು ಚದುರಸ ಮತ್ತರು ೧೦ಂ ದೇವರ ಪೌಳಿಯಿಂ ಸಂದ್ಸಿ
೩೧. ಹೊಱಗೆ ತೆಂಕಲರಮನೆಯ ಬೀದಿ ಮೇರೆಯಾಗಿ ನೀಳ ಹಸ್ತ ೨೭ ಅಗಲ ಹ-
೩೨. ಸ್ತಂ ೨೦ರ ನೀವೇಶಣ ೧ ಅಂಗಡಿ ೧ ಊರಿಂ ಮೂಡಲು ತೋಟ ೧ ಡೋಣಿಯಿಂ
೩೩. ಪಡುವಲು ತೋಟ ೧ ಅನ್ತು ತೋಟ ೨ ದೇವಮಾನ ಹೊಂಗೆ ಜೋಳ ಮಾ ೨ ನುಣ್ಬ-
೩೪. [ನ]ಹೊಂಗೆ ಮಾನ ೧ ದೇವರ ನಂದಾದೀವಿಗೆಗೆ ಗಾಣ ೧ ಮೇಲಾದ ಗಾಣಂಗ-
೩೫. ಳಲು ಏಣ್ಣೆ ಸೊಟಗೆ ೧ ಹೊಂಗೆ ಮಾಱಿದಲ್ಲಿ ಅಡಕೆ ೫ ಎಲೆ ಹೇಱಿಂಗೆ ೫ಂ ದೇ-
೩೬. ವರ ಕಾಣಿಕೆ ಹಗರಿತಿಗೆ ಮೂನೂಱಱೊಳಗೆ ಊರೂರಲು ಗದ್ಯಾಣ
೩೭. [1]ಇನ್ತಿನಿತಕ್ಕಂ ವೀರದಾಸನ ವಂಸ ವೈಜವ್ವೆ ಬಾಗೆಯನಾಯಕ ದೇವರ್ಗ್ಗಂ
೩೮. [ಭ]ಕ್ತರ್ಗ್ಗಂ ಅ[ಅಂ]ಜಿ ಬೆಸಕೆಯ್ವರು ಆ ಮಠದ ಹೆಗ್ಗಡೆ ಸಂಕಯ್ಯಂಗೆ ದೇವ -
೩೯. ಕೆಯ್ಯೊಳಗೆ ಮತ್ತರು ೧೦ ಪೌಳಿಯೊಳಗೆ ನೀಳಹಸ್ತ ೧೨ ಅ-
೪೦. ಗಲ ಹಸ್ತ ೫ಱ ನಿವೇಶಣಂ ೧ ಕಾಣಿಕೆಯೊಳಗೆ ಊರು ೨ ಎ-

೪೧. ನೆನ್ನು ದೇವರಿಗೆ ವ್ರಿತ್ತಿ ಘನವಾಗಲನ್ತ [ನ್ತೆ] ದಶವಂದ ಸಂಕಯ್ಯಂಗೆ ॥
೪೨. ಚಾವಿಸೆಟ್ಟಿಗೆ ಮತ್ತರು ೫

ಇಲ್ಲಿ "ಪುರಾತನ ನೂತನರೆನಿಸಿದ ಅಸಂಖ್ಯಾತಗಣಂಗಳ" ಗುಂಪಿನ "ಭೃತ್ಯಾಚಾರದ" ವೀರಶರಣರನ್ನು - ನೇರವಾಗಿ ಅಲ್ಲದಿದ್ದರೂ - ಅವರ ಕ್ಷೇತ್ರಗಳ ಮೂಲಕ ಉಲ್ಲೇಖಿಸಲಾಗಿದೆ. ಈ ಕ್ಷೇತ್ರ (ಗ್ರಾಮ)ಗಳನ್ನು ಆಧಾರವಾಗಿಟ್ಟುಕೊಂಡು -ವೀರಶೈವ ಪುರಾಣಗಳ ನೆರವಿನಿಂದ ಆ ಆ ವೀರಶರಣರನ್ನು ಹೀಗೆ ಗುರುತಿಸಬಹುದು.

೧. ಪರಿಯಳಿಗೆ -ವೈಜಕವ್ವೆ

ಅನಿವಾರ್ಯವಾಗಿ ಜೈನಪತಿಯನ್ನು ಮದುವೆಯಾದ ಈಕೆ, ಒಮ್ಮೆ ಶ್ರಮಣರಿಗಾಗಿ ಸಿದ್ಧಪಡಿಸಿದ ಅನ್ನವನ್ನು ಜಂಗಮರಿಗೆ ಉಣಬಡಿಸಿದಳು. ಇದರಿಂದ ಕೋಪಗೊಂಡು ಪತಿ ಹೊಡೆದ ಹೊಡೆತಗಳೆಲ್ಲ ಆ ಊರ ಜೈನರನ್ನು ಘಾತಿಸಿದವು. ಮರುದಿನ ಮುಂಜಾನೆ ಎಷ್ಟು ಪ್ರಯತ್ನಿಸಿದರೂ ತೆರೆಯದಿದ್ದ ಬಸದಿಯ ಬಾಗಿಲು, ಇವಳ ಹಸ್ತಸ್ಪರ್ಶದಿಂದ ತೆರೆಯುವಷ್ಟರಲ್ಲಿ ಜಿನಮೂರ್ತಿ ಒಡೆದು ಉದ್ಭವಿಸಿದ ಶಿವಲಿಂಗದಲ್ಲಿ ಈಕೆ ಐಕ್ಯವಾದಳು.

ಕೋಪಗೊಂಡ ಗಂಡನಿಂದ ಹೊಡೆತತಿಂದು ಮನೆಯಿಂದ ಹೊರದೂಡಿಸಿಕೊಂಡ ಈಕೆ, ದುಃಖಭಾರದಲ್ಲಿ ದಿಕ್ಕುತೋರದೆ ಶಿವನೆಂದು ಭಾವಿಸಿ ಜಿನಬಿಂಬಕ್ಕೆ ನಮಸ್ಕರಿಸಲು ಅದು ಭಗ್ನಗೊಂಡು ಶಿವಲಿಂಗ ಮೂಡಿತು, ಎಂಬುದು ಈ ಕಥೆಯ ಇನ್ನೊಂದು ರೂಪ.

ಗಣಸಹಸ್ರದಲ್ಲಿ ಇವಳ ಹೆಸರಿದೆ. ಬಸವಣ್ಣನವರಿಗೆ ಕೊಂಚ ಪ್ರಾಚೀನಳೆಂದು ಪಂಡಿತರ ಮತ. ಹರಿಹರನು ಈಕೆಯನ್ನು ಕುರಿತು ರಗಳೆ ಬರೆದಿದ್ದಾನೆ.

೨. ಅಣಿಲೆವಾಡ -?

ಈ ಊರು ಯಾವುದೋ ಗೊತ್ತಾಗುವುದಿಲ್ಲ. ಗುಜರಾಥದಲ್ಲಿಯ ಅನಹಿಲವಾಡವಾಗಿರಲಿಕ್ಕಿಲ್ಲ. ಇದಕ್ಕೆ ಹೋಲುವ ಕೆಲವು ಊರುಗಳು ಕರ್ನಾಟಕದಲ್ಲಿದ್ದು ಅವುಗಳ ಬಗ್ಗೆ ವಿಚಾರಿಸಬೇಕು.

೩. ಉಣಕಲ್ಲು -?

ಧಾರವಾಡಕ್ಕೆ ಸಮೀಪದಲ್ಲಿ ಉಣಕಲ್ಲು ಎಂಬ ಗ್ರಾಮವಿದೆ. ಅಲ್ಲಿ ವೀರಶರಣನು ಆಗಿ ಹೋದ ಬಗ್ಗೆ ಯಾವ ಸಂಗತಿಗಳೂ ತಿಳಿದುಬರುವದಿಲ್ಲ. ಪುರಾತನಕಾಲದ ಚಂದ್ರಮೌಳಿಲಿಂಗ (ಚದುರಲಿಂಗವೆಂಬುದು ಈಗಿನ ಹೆಸರು) ದೇವಾಲಯ ಮಾತ್ರ ಇದೆ. ಈತನು ಪೌರಾಣಿಕ ದೇವತೆಯೋ, ಐತಿಹಾಸಿಕ ಶರಣನೋ ಗೊತ್ತಾಗುವುದಿಲ್ಲ.

೪. ಸಂಪಗಾವಿ

ಬೆಳಗಾವ ಜಿಲ್ಲೆಯಲ್ಲಿ ಸಂಪಗಾವಿ ಎಂಬ ಗ್ರಾಮವಿದೆ. ಅಲ್ಲಿ ಆಗಿಹೋದ ವೀರಶರಣನ ಬಗ್ಗೆ ಏನೂ ತಿಳಿದುಬರುವದಿಲ್ಲ.

೫. ಅಬ್ಬಲೂರು-ಏಕಾಂತರಾಮಯ್ಯ

ಜೈನರೊಂದಿಗೆ ವಾದಕ್ಕೆ ನಿಂತು, ಶಿರವನ್ನು ಕತ್ತರಿಸಿಕೊಂಡು, ಏಳು ದಿನಗಳ ತರುವಾಯ ಪಡೆದ ಈತನ ವೀರಘಟನೆ[೩] ಸರ್ವವಿದಿತವಾಗಿದೆ. ಆದರೆ ಈ ಪ್ರಸಂಗಕ್ಕೆ ಪ್ರಚೋದನೆ ನೀಡಿದುದು ಜೈನರು ಬ್ರಹ್ಮೇಶ್ವರಲಿಂಗದೆದುರು ಜಿನಪಾರಮ್ಯ ಘೋಷಿಸಿದುದು ಎಂದು ಅಬ್ಬಲೂರ ಶಾಸನ,[೪] ಜೈನನೊಬ್ಬ ಕೆರಹುಗಾಲಿನಿಂದ ಶಿವದೇವಾಲಯ ಪ್ರವೇಶಿಸಿದುದು ಎಂದು ಬಸವ ಪುರಾಣಗಳು ತಿಳಿಸುತ್ತವೆ.

ಕಾವ್ಯ -ಶಾಸನಗಳೆಲ್ಲ ಈ ಘಟನೆ ಅಬ್ಬಲೂರಲ್ಲಿ ಎಂದು ಹೇಳುತ್ತಿದ್ದರೆ, ಬಸವಪುರಾಣವು ಮಾತ್ರ ಅಬ್ಬಲೂರಲ್ಲಿ ಈ ಮೊದಲು ಜೈನರನ್ನು ಜಯಿಸಿದ (ಅದರ ವಿವರ ಹೇಳಿಲ್ಲ) ಏಕಾಂತರಾಮಯ್ಯನ ಮಸ್ತಕಾರ್ಮಣೆಯ ಘಟನೆ ಬಸವ ಬಿಜ್ಜಳರೆದುರು ಕಲ್ಯಾಣದಲ್ಲಿ ನಡೆಯಿತೆಂದು ಹೇಳುತ್ತದೆ. ಹೀಗೆ ಇನ್ನೂ ಕೆಲವು ವ್ಯತ್ಯಾಸಗಳು ಈತನ ವಿಷಯವಾಗಿ ಕಂಡುಬರುತ್ತವೆ.

ಅಬ್ಬಲೂರು ಶಾಸನದಲ್ಲಿ ಬಿಜ್ಜಳ, ವೀರಸೋಮೇಶ್ವರ IV, ಕದಂಬಕಾಮ ಅರಸರು ರಾಮಯ್ಯಗಳ 'ಕಾಲಂ ಕರ್ಚಿ'ದತ್ತಿ ಬಿಟ್ಟಿರುವುದರಿಂದ ಈತನು ಬಿಜ್ಜಳ (ಬಸವ)ನ ಸಮಕಾಲೀನನಾಗಿ, ಮುಂದೆ ಇನ್ನೂ ಕೆಲವು ವರುಷ (ಕಾಮರಸನ ಸಮಕಾಲೀನನಾಗಿ) ಬಾಳಿರಬೇಕು.

ಅಬ್ಬಲೂರು ಶಾಸನದಲ್ಲಿ ಈ ರಾಮಯ್ಯನ ಚರಿತ್ರೆ ವಿಸ್ತಾರವಾಗಿ ಬಂದರೆ, ಮರಡಿಪುರ ಶಾಸನದಲ್ಲಿ[೫] 'ಜಗದೇವ ದಣ್ಣಾಯಕ ಏಕಾಂತದ ರಾಮಯ್ಯ ಸೊನ್ನಲಿಗೆಯ ರಾಮಯ್ಯ' ಎಂದು ಹೆಸರು ಮಾತ್ರ ಬರುತ್ತದೆ. ಹರಿಹದೇವ ಮೊದಲು ಮಾಡಿಕೊಂಡು ಇನ್ನೂ ಕೆಲವರು ಈತನನ್ನು ಕುರಿತು ಕೃತಿ ರಚಿಸಿದ್ದಾರೆ. ಗಣಸಹಸ್ರದಲ್ಲಿ ಈತನ ಹೆಸರಿದೆ. ಚೆನ್ನರಾಮ, ಎನ್ನಯ್ಯ ಚೆನ್ನರಾಮ, ಚೆನ್ನರಾಮೇಶ್ವರ, ಚೆನ್ನರಾಮೇಶ್ವರಲಿಂಗ ಎಂಬ ಮುದ್ರಿಕೆಯ ವಚನಗಳು ಈತನ ಹೆಸರಿನಲ್ಲಿ ಲಭಿಸುತ್ತವೆ.

೬. ಮಾರುಡಿಗೆ-ನಾಚಯ್ಯ

ಶಿವಭಕ್ತನೊಬ್ಬನನ್ನು ಜೈನರು ಘಾತಿಸಲು, ಶಿವನ ಆದೇಶದಂತೆ ತೇರಸಗಣವನ್ನು ಬೆಂಬಲವಾಗಿ ಪಡೆದು, ಜೈನರನ್ನು ಹತಿಸಿದ ವೀರಭಕ್ತ. ಈತನ ಶಿಷ್ಯ ದಶಗಣ ಸಿಂಗಿದೇವ.

ಬಸವಣ್ಣನವರಿಗೆ ಕೊಂಚ ಪ್ರಾಚೀನನಾಗಿರಬಹುದಾದ ಈತನು ವಚನಕಾರನಾಗಿದ್ದು, ಮುದ್ರಿಕೆ "ನಾಚಯ್ಯಪ್ರಿಯ ಮಲ್ಲಿನಾಥ". ಹರಿಹರನು ಇವನನ್ನು ಕುರಿತು ರಗಳೆ ಬರೆದಿದ್ದಾನೆ.

---

೩. ಎಡಬಲಕ್ಕೆ ಕೊಂಡಿ ಇರುವ ಅರ್ಧಚಂದ್ರಾಕಾರದ ಹರಿತ ಆಯುಧಕ್ಕೆ ಗಂಡಗತ್ತರಿ ಎಂದು ಹೆಸರು. ಇದನ್ನು ಕುತ್ತಿಗೆಯ ಮೇಲೆ ಹೊಂದಿಸಿಕೊಂಡು, ಎಡಬಲದ ಕೊಂಡಿಗಳಿಂ. ಇಳಿಬಿದ್ದ ಸರಪಳಿಗಳ ತುದಿಯನ್ನು ಕಾಲ ಹೆಬ್ಬೆರಳಿಗೆ ಕಟ್ಟಿಕೊಂಡು ಹಿಂದಕ್ಕೆ ಸೆಟೆದರೆ, ಕುತ್ತಿಗೆ ಸುಲಭವಾಗಿ ಕತ್ತರಿಸುತ್ತದೆ. ಇಂಥ ಒಂದು ಗಂಡಗತ್ತರಿ ಲಕ್ಷ್ಮೇಶ್ವರದ ನಿಂಬಯ್ಯನ ಮಠದಲ್ಲಿ ಇದ್ದು ದಿನಂಪ್ರತಿ ಪೂಜೆಗೊಳ್ಳುತ್ತದೆ. ಶರಣರು ಮಾಡಿದ ಇಂಥ ಪವಾಡಕ್ಕೆ 'ಶಿರಸ್ಸು ಪವಾಡ' ಎಂದು ಹೆಸರು. ಏಕಾಂತ ರಾಮಯ್ಯನದು ಇಂಥ ಪವಾಡಗಳಲ್ಲಿ ಒಂದು.

೪. E.I Vol V Page 245

೫. E.C. III Md. 83

೭. ಅಣಂಪೂರು-ವರದಾನಿ ಗುಡ್ಡವ್ವೆ

'ಷೋಡಶಗಣ'ದಲ್ಲಿ ಒಬ್ಬಳು. ವೈಷ್ಣವರು ಕಿತ್ತೊಗೆದ ಅಣಂಪೂರ (ಅಲಂಪೂರ) ಗ್ರಾಮದ ಬಾಲಬ್ರಹ್ಮೇಶ್ವರಲಿಂಗವನ್ನು ಕಲಿತನ ತೋರಿ ಸ್ಥಾಪಿಸಿದ ವೀರಶರಣೆ. ಹರಿಹರನು ಈಕೆಯನ್ನು ಕುರಿತು ರಗಳೆ ಬರೆದಿದ್ದಾನೆ.

"ಶ್ರೀ ತೇಜೇಶ್ವರ............ ಶ್ರೀ ವರದಾನಿ........... ಶ್ರೀ ಪುರುಶೇಶ್ವರ ..... ದೇವರ ......"[೬]

"ದಾನಚಿಂತಾಮಣಿಯ ಘಳೆಯೆನಿಸುವ ಆ ಘಳೆಯಲು ಗುಡ್ಡಾದೇವಿಯಭೂಮಿಯೊಳಗೆ............"[೭]

"ಇಂತೀ ಸಕಲ ಲಿಂಗದೇವರಿಗೆ ಗುಡ್ಡವ್ವೆಗಳು ...."[೮] ಎಂದು ಮೂರು ಶಾಸನಗಳಲ್ಲಿ ಇವಳ ಹೆಸರು ಕಂಡುಬರುತ್ತದೆ.

೮. ಕರಹಾಡ -?

ಸಾತಾರ ಜಿಲ್ಲೆಯ ತಾಲೂಕು ಸ್ಥಳ. ಇಲ್ಲಿಯ ಶರಣನ ಬಗ್ಗೆ ಏನೂ ತಿಳಿದುಬಂದಿಲ್ಲ.

೯. ಕೆಂಭಾವಿ ಭೋಗಣ್ಣ

ಅಂತ್ಯಜನನ್ನು ಆದರಿಸಿದವನೆಂಬ ಆರೋಪ ಹೊತ್ತು, ಬ್ರಾಹ್ಮಣರಿಂದ ಬಹಿಷ್ಕೃತನಾಗಿ, ಊರುಬಿಟ್ಟು ನಡೆದರೆ ಗ್ರಾಮಲಿಂಗಗಳೆಲ್ಲ ಈತನ ಬೆನ್ನುಹಿಂದೆ ಹೋದ ಕಥೆ ಸರ್ವವಿದಿತ.

ಬಸವಣ್ಣನವರಿಗೆ ಕೆಲವು ವರುಷ ಪ್ರಾಚೀನ. ಚಂದಿಮರಸ ಎಂಬ ಶರಣ ಈತನಿಗೆ ಸಮಕಾಲೀನ. ಹರಿಹರನು ಈತನನ್ನು ಕುರಿತು ರಗಳೆ ಬರೆದಿದ್ದಾನೆ. ವಚನಕಾರನಾಗಿದ್ದು "ನಿಜಗುರು ಭೋಗಸಂಗ", "ನಿಜಗುರು ಭೋಗೇಶ್ವರ" ಎಂಬ ಮುದ್ರಿಕೆಗಳು ಈತನ ಹೆಸರಿನಲ್ಲಿ ಲಭಿಸುತ್ತವೆ.

"ಕರಿಕಾಲ ಚೋಳ ಭೋಗದೇವ ಬಾಣ ....."[೯] ಎಂದು ಮರಡಿಪುರ ಶಾಸನದಲ್ಲಿ

"ಬಾಣನುಂ ಧರಭೋಗ ಸಲೆ ಚೋಳ........"[೧೦] ಎಂದು ಹಿರಿಯೂರು ಶಾಸನದಲ್ಲಿ ಈತನ ಹೆಸರು ಬರುತ್ತದೆ.

೧೦. ಬಮ್ಮಕೂರು-?

ಗುಲ್ಬರ್ಗಾ ಜಿಲ್ಲೆಯ ಬಂಕೂರು ಶಾಸನದಲ್ಲಿ ಇದರ ಹೆಸರು ಭೂಮುಕುರ ಎಂದು ಬಳಸಲ್ಪಟ್ಟಿದೆ. ಇದು ಪುರಾತನ ಜೈನಕೇಂದ್ರವೆಂದು ಇಲ್ಲಿಯ ಅವಶೇಷಗಳಿಂದ ತಿಳಿದುಬರುತ್ತದೆ. ಆದರೆ ಇಲ್ಲಿ ಆಗಿಹೋದ ಶರಣನ ಬಗ್ಗೆ ಏನೂ ಗೊತ್ತಾಗುವುದಿಲ್ಲ.

---

೬. Inscriptions in Northern Karnatak and Kolhapur State No, 21 A.

೭. Inscription in Nothern Karnatak and Kolhapur State No. 21 B.

೮. ಇಂಗಳಗಿ ಶಾಸನ (ಕ್ರಿ.ಶ. 1389) ವಿಭೂತಿ. ಪು. 74

೯. E.C. III Md. 83

೧೦. E.C. V. Part II ಅರಸಿಕೆರೆ 109.

ಮೇಲೆ ಹೇಳಿದಂತೆ ಪರಿಯಳಿಗೆ (ವೈಜಕವ್ವೆ), ಅಬ್ಬಲೂರು (ಏಕಾಂತರಾಮಯ್ಯ) ಮಾರುಡಿಗೆ(ನಾಚಯ್ಯ), ಅಣಂಪೂರ (ಗುಡ್ಡವ್ವೆ), ಕೆಂಭಾವಿ (ಭೋಗಣ್ಣ) ಎಂಬ ಐದು ಊರುಗಳ ಶರಣರ ವಿಷಯ ತಿಳಿದುಬರುತ್ತದೆ. ಮಿಕ್ಕ ಅಣೆಲೆವಾಡ, ಉಣಕಲ್ಲ, ಸಂಪಗಾವಿ, ಕರಹಾಡ, ಬಮ್ಮುಕೂರು ಎಂಬ ಐದು ಊರುಗಳ ಶರಣರ ಬಗ್ಗೆ ಗೊತ್ತಾಗುವುದಿಲ್ಲ. ಕೆಲವು ಊರುಗಳ ಗುರುತು ಸಹ ಹತ್ತುವುದಿಲ್ಲ.

ವೀರಶೈವರ "ಪ್ರಮಥಗಣ - ರುದ್ರಗಣ - ವೃಷಭಗಣ - ತ್ರಿಷಷ್ಠಿಪುರಾತಗಣ - ಷೋಡಶಗಣ - ತೇರಸಗಣ - ದಶಗಣ - ಬಸವಾದಿ ಅಸಂಖ್ಯಾತಗಣ" ಎಂಬ ಯಾದಿ ಕಾಲಕ್ರಮವನ್ನು ತಿಳಿಸುವಂತೆ ತೋರುತ್ತದೆ. ಇದು ನಿಜವಿದ್ದ ಪಕ್ಷದಲ್ಲಿ ಈ ಐದು ಜನರನ್ನು ಗುಡ್ಡವ್ವೆ (ಷೋಡಶರಲ್ಲಿ ಒಬ್ಬಳು) - ಮಾರುಡಿಗಿ ನಾಚಯ್ಯ (ತೇರಸಗಣದ ಕೊನೆಯಲ್ಲಿ ಬದುಕಿದವ) - ವೈಜಕವ್ವೆ -ಕೆಂಭಾವಿ ಭೋಗಣ್ಣ -ಏಕಾಂತರಾಮಯ್ಯ ಎಂದು ಕಾಲಕ್ರಮವಾಗಿ ಜೋಡಿಸಬಹುದು.

ಈ ಶಾಸನದ ಮಹತ್ವ

೧. ಏಕಾಂತರಾಯಮ್ಯನನ್ನು ಕುರಿತ ಅಬ್ಬಲೂರು ಶಾಸನ[೧೧] ಸಿದ್ಧರಾಮನನ್ನು ಸೂಚಿಸುವ ಕ್ರಿ.ಶ. ೧೧೫೦ರ ಚೂರ್ಗಿಯ ಶಾಸನಗಳಿಗೆ[೧೨] ಇದ್ದ, ಬಸವಣ್ಣನವರ ಸಮಕಾಲೀನ ಶರಣರನ್ನು ಉಲ್ಲೇಖಿಸುವ ಪ್ರಥಮ ಶಾಸನಗಳು ಎಂಬ ಕೀರ್ತಿ, ಈಗ ಈ ತಾಳಿಕೋಟೆಯ ಶಾಸನಕ್ಕೆ ಲಭಿಸುತ್ತದೆ.

೨. ಏಕಾಂತರಾಮಯ್ಯನ ಪವಾಡದ ಕಾಲ ಈ ಶಾಸನದಿಂದ ಕನಿಷ್ಟಪಕ್ಷ ಕ್ರಿ.ಶ. ೧೧೮೪ರಷ್ಟು ಹಿಂದೆ ಖಚಿತಪಡುತ್ತದೆ.

೩. ಅಬ್ಬಲೂರು ಶಾಸನದಲ್ಲಿ "ಅಸಂಖ್ಯಾತಗಣ" ಪದ ಮೊದಲು ಕಂಡುಬರುತ್ತಿದ್ದರೆ "ಪುರಾತನ ನೂತನ ಅಂಸಖ್ಯಾತಗಣ' ಎಂಬ ವಿಶಿಷ್ಟಪದ ಈ ಶಾಸನದಲ್ಲಿ ಮೊದಲು ಕಂಡುಬರುತ್ತದೆ.

೪. ವೈಜಕವ್ವೆ, ಮಾರುಡಿಗೆ ನಾಚಯ್ಯರು ಪ್ರಥಮವಾಗಿ ಈ ಶಾಸನದಲ್ಲಿ ಕಂಡುಬರುತ್ತಾರೆ.

ವೀರಶೈವ ವಿಶಿಷ್ಟಪದಗಳಾದ ಅಸಂಖ್ಯಾತ, ಭತ್ಯಾಚಾರ, ಪುರಾತನ, ನೂತನ ಅಸಂಖ್ಯಾತಗಣ, ಗಣಮಠ ಎಂಬಿವುಗಳ ಬಳಕೆ ಗಮನಾರ್ಹ.

೬. ಮಿಕ್ಕ ಬಮ್ಮಕೂರು, ಕರಹಾಡ, ಸಂಪಗಾವ, ಉಣಕಲ್ಲ, ಅಣೆಲೆವಾಡಗಳ ಶರಣರ ಬಗ್ಗೆ ಸಂಶೋಧಕರಿಗೆ ಸೂಚನೆ ಲಭಿಸುತ್ತದೆ.

೭. ಇಲ್ಲಿ ರೋಮಾಂಚನಕಾರಕ ಗದ್ಯ, ಸಾಹಿತ್ಯದೃಷ್ಟಿಯಿಂದ ಸೊಗಸಾಗಿದೆ.

---

೧೧. ಅಬ್ಬಲೂರ ಶಾಸನದ ಕಾಲ ಕ್ರಿ.ಶ. ಸು. 1200 (ಫ್ಲೀಟ) ; ಕ್ರಿ.ಶ.ಸು. 1197(R.ನರಸಿಂಹಾಚಾರ್); ಕ್ರಿ.ಶ. 1185 (ಬಿ. ಶಿವಮೂರ್ತಿಶಾಸ್ತ್ರಿ); ಕ್ರಿ.ಶ. 1180 (ಶ್ರೀ ಗದ್ದಿಗಿಮಠ); ಕ್ರಿ.ಶ. 1170 (ಪಿ.ಬಿ. ದೇಸಾಯಿ) ಎಂದು ಊಹಿಸಲಾಗಿದೆ.

೧೨. S.I.I. xx No. 177

ಈ ಶಾಸನದಲ್ಲಿಯ ತ್ರಿಭುವನಮಲ್ಲ ನಾಲ್ಮಡಿ ವೀರಸೋಮೇಶ್ವರನು ಚಾಲುಕ್ಯ ಮುಮ್ಮಡಿ ತೈಲಪನ ಮಗ. ವಿರುಪರಾಜನು ಹಗರಟಗೆ ೩೦೦ರ ಮಂಡಳೇಶ್ವರ, ಮಿಕ್ಕ ವ್ಯಕ್ತಿಗಳಾದ ವೀರದಾಸ, ವೀರದಾಸನ ವಂಶದ ವೈಜವ್ವೆ, ಬಾಗೆನಾಯಕ, ಹೆಗ್ಗಡೆ ಸಂಕಯ್ಯ, ದಶವಂದ ಸಂಕಯ್ಯ, ಚಾವಿಶೆಟ್ಟಿಗಳ ಬಗ್ಗೆ ಏನೂ ತಿಳಿದುಬರುವುದಿಲ್ಲ. ಇಲ್ಲಿಯ ಗಣಮಠದ ದೈವತ 'ವೀರಬಯ್ಸೇಶ್ವರ' ಅಂದರೆ ಯಾರೆಂಬುದು ಗೊತ್ತಾಗುವುದಿಲ್ಲ. ದತ್ತಿಬಿಟ್ಟ ವಿರುಪರ್ರಾಜನನ್ನು ಇನ್ನೊಂದು ಶಾಸನದಲ್ಲಿ "ಬೈಸ(ಬಯ್ಸ)ಕುಳಾಂಬರಭಾನು"[೧೩] ಎಂದು ಕರೆಯಲ್ಪಟ್ಟಿರುವುದರಿಂದ ಈ ದೇವತೆ ವಿರುಪರಾಜನ ಮೂಲ ವಂಶಜನಾಗಿರಬಹುದು.

ಒಟ್ಟಿನಲ್ಲಿ ಇದು ಬಸವಣ್ಣನವರ ಸಮಕಾಲೀನ ಶರಣರನ್ನು ಉಲ್ಲೇಖಿಸುವ ಕಾಲನಿರ್ದೇಶಿತ ಪ್ರಥಮ ಶಾಸನ (ಕ್ರಿ.ಶ. 1184) ವಾಗಿದೆ.[೧೪]

* * *

ಅನುಬಂಧ : ಇತ್ತೀಚೆ ಇದಕ್ಕಿಂತ ಪ್ರಾಚೀನವಾದ ಭೂಯಾರ ಶಾಸನ (ಕ್ರಿ.ಶ. 1162) ಲಭಿಸಿದೆ. ನೋಡಿ "ನೆಲುವಿಗೆಯ ಶಾಂತಯ್ಯನ ಒಂದು ಶಾಸನ".

ಆಕರ : ಮಾರ್ಗ ಸಂಪುಟ-೨

---

೧೩. S. I.I. xx 174 ಕಲಕೇರಿ ಶಾಸನ ಕ್ರಿ.ಶ. 1187

೧೪. ಜೇಡರದಾಸಿಮಯ್ಯಾದಿಗಳ 3-4 ಶಾಸನಗಳು, ಕ್ರಿ.ಶ. 1184ಕ್ಕೆ ಹಿಂದೆ ಲಭಿಸುತ್ತಿದ್ದು, ಅವರು ಬಸವಾದಿಗಳಿಗೆ ಪ್ರಾಚೀನರೆನಿಸುವ ಆದ್ಯರು.

೨೫

ಶರಣರನ್ನು ಕುರಿತು ಇನ್ನಷ್ಟು ಶಾಸನಗಳು

"ಶಾಸನಗಳಲ್ಲಿ ಶಿವಶರಣರು" ಹೆಸರಿನ ನನ್ನ ಪುಸ್ತಕ ಶರಣರ ಚಾರಿತ್ರಿಕ ಸತ್ಯವನ್ನು, ಅವರು ಜನಮನದಲ್ಲಿ ಜೀವಂತವಾಗಿ ಉಳಿದು ಬಂದ ಬಗೆಯನ್ನು ತಿಳಿಸಿಕೊಡುತ್ತಿದ್ದು, ಈ ತಿಳಿವಳಿಕೆಯನ್ನು ವಿಸ್ತರಿಸುವ ಇನ್ನೂ ಕೆಲವು ಸಂಗತಿಗಳು ಅಲ್ಲಲ್ಲಿಯ ಶಾಸನಗಳಲ್ಲಿ ಸಿಗುತ್ತವೆ. ಇಂಥ ಒಂದೆರಡು ಹೊಸಸಂಗತಿಗಳನ್ನು ಶೋಧಿಸಿಕೊಡುವ ಪ್ರಯತ್ನ ಈ ಲೇಖನ.

ನವಿಲೆಯ ಜಡೆಯ ಶಂಕರಲಿಂಗ -ಶಂಕರದಾಸಿಮಯ್ಯ :

ಶರಣ ಶಂಕರದಾಸಿಮಯ್ಯನ ಊರು ಕಂದಶಿಲೆ (ಕಂದಗಲ್ಲು). ಇದರ ನೆರೆಯಲ್ಲಿರುವ ನವಿಲೆ ಗ್ರಾಮದ ಜಡೆಯ ಶಂಕರಲಿಂಗ ಇವನ ಆರಾಧ್ಯ ದೈವತ. ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನಲ್ಲಿ ಕಂದಗಲ್ಲು, ನವಿಲೆ ಹೆಸರಿನ ಗ್ರಾಮಗಳು ೭ ಮೈಲು ಅಂತರದಲ್ಲಿವೆ. ವಿಜಾಪುರ ಜಿಲ್ಲೆಯ ಹುನಗುಂದ ತಾಲೂಕು, ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕುಗಳಲ್ಲಿ ಇದೇ ಹೆಸರಿನ ಎರಡು ಗ್ರಾಮಗಳು ೧೨ ಮೈಲು ಅಂತರದಲ್ಲಿವೆ. ಇವುಗಳಲ್ಲಿ ಹುನಗುಂದ ತಾಲೂಕಿನ ಗ್ರಾಮಗಳೇ ಶಂಕರದಾಸಿಮಯ್ಯನವೆಂದು ವಿದ್ವಾಂಸರು ನಿಶ್ಚಯಿಸಿದ್ದಾರೆ. ಈ ನವಿಲೆಯಲ್ಲಿ ಜಡೆಯ ಶಂಕರದೇವಾಲಯವಿದೆ. ಲಿಂಗದ ಮೇಲೆ ಜಡೆಗಳನ್ನು ಕೆತ್ತಿದುದು ಅನ್ವರ್ಥಕವಾಗಿದೆ. ಇದು ನಕುಲೀಶ ಪಾಶುಪತ ದೇವಾಲಯವಾಗಿರುವುದರಿಂದ ಶಂಕರದಾಸಿಮಯ್ಯ ಮೂಲತಃ ಕಾಳಾಮುಖಶೈವ, ಅಂದರೆ ಹಳಬ ಲಿಂಗವಂತ.

ಹುನಗುಂದ ತಾಲೂಕಿನ ಈ ನವಿಲೆಯಲ್ಲಿರುವ ಜಡೆಯ ಶಂಕರ ದೇವಾಲಯದಲ್ಲಿ ೧೧ ಮತ್ತು ೧೨ನೆಯ ಶತಮಾನಗಳಲ್ಲಿ ಹುಟ್ಟಿದ ಮೂರು ಶಿಲಾಶಾಸನಗಳಿವೆ. ಇವುಗಳಲ್ಲಿ ದೈವತ ಜಡೆಯ ಶಂಕರಲಿಂಗನ ಹೆಸರಿದೆ; ಶಂಕರದಾಸಿಮಯ್ಯನ ಹೆಸರಿಲ್ಲ. ಈ ಸಂಗತಿ ಶಂಕರದಾಸಿಮಯ್ಯನ ಪುರಾಣದ ಮುನ್ನುಡಿಯಿಂದ ತಿಳಿದುಬರುತ್ತದೆ. ಈಗ ಇನ್ನೂ ಕೆಲವು ಶಾಸನಗಳತ್ತ ಗಮನ ಹರಿಸಬಹುದು.

೧.ಹುನಗುಂದ ತಾಲೂಕಿನ ನಂದವಾಡಗಿಯಲ್ಲಿ ಕಲ್ಯಾಣ ಚಾಲುಕ್ಯ ತ್ರೈಲೋಕ್ಯಮಲ್ಲನ (ರಾಣಿ ಮೈಲಳದೇವಿಯ) ಒಂದು ಶಾಸನವಿದೆ.[೧] ಇಲ್ಲಿ ಭಾವನಗಂಧವಾರಣ ಬಿರುದಿನ ವ್ಯಕ್ತಿಯೊಬ್ಬ, ಕಾರವಾರ,

---

೧. SII XI-i No 103

ಧಾರವಾಡ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿದನೆಂಬ ಸೂಚನೆಯಿದೆ. ಈತನು 'ನವಿಲೆಯ ಜ [ಡೆ]ಯ ಶಂಕರ ದೇವಾಲಯಮಮಂ" ಕಟ್ಟಿಸಿದ ವಿಷಯವೂ ಇಲ್ಲಿದೆ. ಈ ಶಾಸನದಲ್ಲಿ ಕಾಲ ನಮೂದು ಇಲ್ಲ. ಇದು ಹುನಗುಂದ ತಾಲೂಕಿನ ನವಿಲೆಯ ಜಡೆಯ ಶಂಕರಲಿಂಗ ದೇವಾಲಯವೇ ಆಗಿರಬೇಕು.

೨. ಶರಣರನ್ನು ಹೆಸರಿಸುವ ಮರಡಿಪುರ ಶಾಸನ ಪ್ರಸಿದ್ಧವಾದುದು.[೨] ಈ ಶಾಸನದಲ್ಲಿ "........ತ್ರಿಯಂಬಕ ತ್ರಿಲೋಚನ ತ್ರಿಸೂಳಧರ ಕಟ್ವಾಂಗಧಾರಿ ಕಪಾಳಧರ ಕಱೆಕೊರಳ ಹೆಱೆನೊಸಲ ತುಱುಗಿದ ಕೆಂಜೆಡೆಯ ನವಿಲೆಯ ಜಡೆಯ ಶಂಕರದೇವರ ಪಡಿಹಾರ ದಾಸಯ್ಯ ಸದ್ಯೋಜಾತನ ಮನೋಮೂರ್ತಿ......" ಎಂದು ಕಲಿದೇವರ ಪ್ರಶಸ್ತಿಯನ್ನು ಹೇಳಲಾಗಿದೆ. ಇಲ್ಲಿಯ ದಾಸಯ್ಯನೆಂದರೆ ಶಂಕರದಾಸಿಮಯ್ಯ, ಸದ್ಯೋಜ್ಯಾತನೆಂದರೆ ಅವನ ಮಗ. ಈ ತಂದೆ ಮಕ್ಕಳು 'ಜಡೆಯ ಶಂಕರದೇವರ ಪಡಿಹಾರ' ಅಂದರೆ ದ್ವಾರಪಾಲಕರೆಂದು ಈ ಶಾಸನ ತಿಳಿಸುತ್ತದೆ. 'ಪಡಿಹಾರ' ಪದವನ್ನು ಇಲ್ಲಿ ವಾಚ್ಯಾರ್ಥದಲ್ಲಿ ಗ್ರಹಿಸಬೇಕೋ, ವಿಶೇಷಾರ್ಥದಲ್ಲಿ ಗ್ರಹಿಸಬೇಕೋ ತಿಳಿಯದು. ಈ ಶಾಸನದ ಕೊನೆಯಲ್ಲಿ ಬರುವ "ಶ್ರೀ ಜಡೆಯ ಸಂಕರದೇವರ ಮಲ್ಲಯ್ಯ ಬರೆದ, ಶಿವದೇವ ಮಂಗಳ ಮಹಾಶ್ರೀ" ಎಂಬ ವಾಕ್ಯವೂ ಇಲ್ಲಿ ಲಕ್ಷಿಸತಕ್ಕುದಾಗಿದೆ.

೩. ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ಕರಜಗಿ ಗ್ರಾಮದ ಶಂಕರಲಿಂಗ ದೇವಾಲಯದ ತೊಲೆಯ ಮೇಲೆ ಕ್ರಿ.ಶ. ೧೮೭೨ರಲ್ಲಿ ಬರೆದ ಒಂದು ಶಾಸನವಿದೆ.[೩] ಇದರಲ್ಲಿ ಜಡೆಯ ಶಂಕರಲಿಂಗಸ್ವಾಮಿ ಮತ್ತು ಶ್ರೀಶಂಕರದಾಸ ಎಂಬ ಉಲ್ಲೇಖಗಳಿವೆ.

೪. ಹಂಪೆಯ ಹೇಮಕೂಟದ ದಕ್ಷಿಣ ದ್ವಾರದ ಬಳಿ ಜಡೆಯ ಶಂಕರದೇವರ ಮಂದಿರವಿದೆ. ಕವಿ ಹರಿಹರನ ಪಂಪಾಕ್ಷೇತ್ರದ ರಗಳೆಯಲ್ಲಿ ಬರುವ "ಕ್ರಮದಿಂದೆ ಜಡೆಯ ಶಂಕರದೇವರೊಪ್ಪಿರಲು" ಎಂಬ ಉಲ್ಲೇಖ ಈ ದೇವಾಲಯವನ್ನೇ ಸೂಚಿಸುತ್ತದೆ. ಈ ದೇವಾಲಯದ ಶಾಸನವೊಂದು ಇಲ್ಲಿಯ ಜಡೆಯ ಶಂಕರದೇವರಿಗೆ ಇಮ್ಮಡಿ ಹರಿಹರನ ಹೆಂಡತಿ ಬುಕ್ಕಾಯವ್ವೆ ದೀಪಸ್ತಂಭ ನಿಲ್ಲಿಸಿದುದನ್ನು ತಿಳಿಸುತ್ತದೆ.[೪]

ಈ ಶಾಸನಗಳಿಂದಾಗಿ ಜಡೆಯ ಶಂಕರಲಿಂಗ ಸಂಪ್ರದಾಯದ ವಿಸ್ತಾರ, ಮಹತ್ವಗಳನ್ನು ಅರಿಯಬಹುದಾಗಿದೆ.

ನಾವಿದಗೆ ಗುಡ್ಡವ್ವೆ :

ನಾವಿದಗೆ ಗುಡ್ಡವ್ವೆ ಜಾತಿಯಿಂದ ಅಸ್ಪೃಶ್ಯೆ, ಕುಷ್ಟರೋಗಿ, ವಿಪ್ರರನ್ನು ಎದುರು ಹಾಕಿಕೊಂಡು ನಾವಿದಗೆಯಲ್ಲಿ ಸೌರಾಷ್ಟ್ರ ಸೋಮೇಶ್ವರನನ್ನು ಪ್ರತಿಷ್ಠಾಪಿಸಿದವಳೆಂದು ಬಸವಪುರಾಣ ತಿಳಿಸುತ್ತದೆ. ೨ನೆಯದಾಗಿ ಸೋಮೇಶ್ವರನ ಭಕ್ತೆಯಾದ ಗುಡ್ಡಾಪುರ ಗುಡ್ಡವ್ವೆ ಅಣಂಪುರಕ್ಕೆ ಹೋಗಿ, ಷೋಡಶರ ಸಹಾಯದಿಂದ ಬ್ರಹ್ಮೇಶ್ವರಲಿಂಗವನ್ನು ಪ್ರತಿಷ್ಠಾಪಿಸಿದಳೆಂದು ಶಿವತತ್ವಚಿಂತಾಮಣಿ ಹೇಳುತ್ತದೆ. ೩ನೆಯದಾಗಿ ಇಂದಿನ ಜತ್ತ ತಾಲೂಕಿನ ಗುಡ್ಡಾಪುರದ ಸೋಮೇಶ್ವರ ದೇವಾಲಯದ ಆವರಣದಲ್ಲಿ ದಾನಮ್ಮನ ಸುಪ್ರಸಿದ್ಧ ದೇವಾಲಯವಿದೆ.

---

೨. EC III-i ಮಂಡ್ಯ 83 (1280)

೩. ARIE, 1960-61 B-367

೪. ವಸುಂಧರಾ ಫಿಲಿಯೋಜಾ - ಅಳಿದುಳಿದ ಹಂಪೆ ಪು. 30.

ಈ ಮೂರರಲ್ಲಿ ಸೋಮೇಶ್ವರನ ಪ್ರಸ್ತಾಪವಿದ್ದರೂ ಇಲ್ಲಿ ಒಬ್ಬಳು ನಾವಿದಗೆ ಗುಡ್ಡವ್ವೆ, ಇನ್ನೊಬ್ಬಳು ಗುಡ್ಡಾಪುರ ಗುಡ್ಡವ್ವೆ, ಮತ್ತೊಬ್ಬಳು ಗುಡ್ಡಾಪುರ ದಾನಮ್ಮ, ಹೀಗಾಗಿ ಇವರಲ್ಲಿ ಪರಸ್ಪರ ಸಂಬಂಧ ಕಲ್ಪಿಸುವುದು ತೊಂದರೆಯೆನಿಸಿದ್ದಿತು. ಈ ಸಂದರ್ಭದಲ್ಲಿ ಗುಡ್ಡಾಪುರ ಶಾಸನಗಳು ಸಹಾಯಕ್ಕೆ ಬರುತ್ತವೆ.

೧. ಜತ್ತ ತಾಲೂಕಿನ ಗುಡ್ಡಾಪುರದಲ್ಲಿ ಎರಡು ಶಿಲಾಶಾಸನಗಳಿವೆ. ಈ ಶಾಸನಗಳ ಪಾಠ ಇನ್ನೂ ಪ್ರಕಟವಾಗಿಲ್ಲ. (Annual Report on Indian Epigraphy 1940-41, Appendix-E No.100 ಮತ್ತು 101ರಲ್ಲಿ ಈ ಶಾಸನಗಳ ಸಾರಾಂಶ ಇಂಗ್ಲಿಷಿನಲ್ಲಿ ಕೊಟ್ಟಿದ್ದು, ಅದರ ಕನ್ನಡ ರೂಪ ಹೀಗಿದೆ:

"ತ್ರುಟಿತ, ಅಸ್ಪಷ್ಟ, ನಾಯಿಂತಿಗೆಯ ವೀರಸೋಮೇಶ್ವರ ದೇವರಿಗಾಗಿ ಭೂಮಿದಾನ. ಈ ದಾನವನ್ನು ವೀರವ್ರತಿ ಕ್ಷೇತ್ರ ಸಂನ್ಯಾಸಿ ರೇವಯ್ಯನ ಕೈಯಲ್ಲಿ ಕೊಡಲಾಯಿತು. ಗುಡ್ಡವ್ವೆಯೆಂಬ ಭಕ್ತೆಯ ಉಲ್ಲೇಖವೂ ಇದೆ. ಕಲಚುರಿ ಸಂಕಮದೇವನ ಆಳಿಕೆಯ ೪ನೆಯ ವರ್ಷದ ಪರಾಭವ ಸಂವತ್ಸರದಲ್ಲಿ ಹುಟ್ಟಿದೆ."

"ತ್ರುಟಿತ, ಅಸ್ಪಷ್ಟ. ಹೂಬನ್ನೂರು ಗ್ರಾಮದಲ್ಲಿ ಬಿಡಾರ ಬಿಟ್ಟ ಸಂದರ್ಭದಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸೋಮೇಶ್ವರ IV ಮತ್ತು ಮಹಾಪ್ರಧಾನ ಸೇನಾಪತಿ ಪ್ರಚಂಡ ದಂಡನಾಯಕ ಬಮ್ಮಿದೇವರಸರು ಗುಡಿವೆಪ್ರಿಯ ಸ್ವಯಂಭು ಸೋಮನಾಥದೇವರಿಗಾಗಿ ವೀರವ್ರತಿ ಕ್ಷೇತ್ರ ಸನ್ಯಾಸಿ ಸಕ್ಕೆಯ ತೈಲೆಯಗಳ ಕೈಯಲ್ಲಿ ಸೋರಡಿ ಗ್ರಾಮವನ್ನು ದಾನವಾಗಿ ನೀಡಿದರು.

ಈ ಶಾಸನಗಳು ಕಲ್ಯಾಣಕ್ರಾಂತಿಯ ಬೆನ್ನಹಿಂದೆಯೇ ಹುಟ್ಟಿಕೊಂಡಿವೆ. ಇವುಗಳ ಪ್ರಕಾರ ಇಂದಿನ ಗುಡ್ಡಾಪುರದ ಪ್ರಾಚೀನ ಹೆಸರು ನಾವಿದಗೆ, ಇಲ್ಲಿಯ ದಾನಮ್ಮನ ಪ್ರಾಚೀನ ಹೆಸರು ಗುಡ್ಡವ್ವೆ. ಹೀಗಾಗಿ ಗುಡ್ಡಾಪುರ ದಾನಮ್ಮ ಮತ್ತು ಬಸವಪುರಾಣೋಕ್ತ ನಾವಿದಗೆ ಗುಡ್ಡವ್ವೆ ಒಂದೇ ಎಂದು ಈಗ ಆತ್ಯಂತಿಕವಾಗಿ ಹೇಳಬಹುದು. ಇನ್ನೂ ಮುಂದೆ ಹೋಗಿ ಈ ಎರಡರ ಸಮೀಕರಣದಿಂದ ಇವಳ ಇನ್ನೊಂದು ಹೆಸರು ಗುಡ್ಡಾಪುರ ಗುಡ್ಡವ್ವೆಯೆಂದು ಭಾವಿಸಿದರೆ, ಇವಳು ಶಿವತತ್ವಚಿಂತಾಮಣಿಯ ಗುಡ್ಡಾಪುರ ಗುಡ್ಡವ್ವೆಯೆಂದೂ ಹೇಳಬೇಕಾಗುತ್ತದೆ. ಶಿವತತ್ವಚಿಂತಾಮಣಿಯಲ್ಲಿ ಇವಳನ್ನು ವರದಾನಿ ಎಂದು ಕರೆದುದೂ ಗುಡ್ಡಾಪುರದಲ್ಲಿ ಇವಳು ದಾನಮ್ಮ ಹೆಸರಿನಿಂದ ಪ್ರಸಿದ್ಧವಾಗಿರುವುದೂ ಇಲ್ಲಿ ಹೆಚ್ಚಿನ ಆಧಾರವಾಗಿ ನಿಲ್ಲುತ್ತದೆ. ಗುಡ್ಡವ್ವೆ ಕಾರಣವಾಗಿ ನಾವಿದಗೆಗೆ ಗುಡ್ಡಾಪುರ ಎಂಬ ಹೆಸರೂ ಶಿಷ್ಯವರದೆಯಾಗಿದ್ದ ಇವಳಿಗೆ ದಾನಮ್ಮ ಎಂಬ ಹೆಸರೂ ಬಳಕೆಗೆ ಬಂದಿತು. ವಚನಕಾತಿರ್ಯರ ಮುದ್ರಿಕೆಯ ಮಧ್ಯೆ ಸಾಮಾನ್ಯವಾಗಿ 'ಪ್ರಿಯ' ಪದ ಸೇರುವುದರಿಂದ, ಶಾಸನೋಕ್ತ 'ಗುಡಿವೆಪ್ರಿಯ ಸ್ವಯಂಭು ಸೋಮನಾಥ' ಎಂಬುದು ಈ ಗುಡ್ಡವ್ವೆಯ ಮುದ್ರಿಕೆಯಾಗಿರಬಹುದೆನಿಸುತ್ತದೆ.

ಬಸವಪುರಾಣದ ಪ್ರಕಾರ ಇವಳು ನಾವಿಗದೆಯಲ್ಲಿ ಸೋಮೇಶ್ವರನನ್ನು, ಅಲಂಪುರದಲ್ಲಿ ಬ್ರಹ್ಮೇಶ್ವರದೇವರನ್ನು ಸ್ಥಾಪಿಸಿದಳು. ಈ ಅಲಂಪುರವು ಆಂಧ್ರಪ್ರದೇಶದ ತುಂಗಭದ್ರಾ ತೀರದ ಸುಪ್ರಸಿದ್ಧ ಅಲಂಪುರವೆಂದು ಈ ವರೆಗೆ ವಿದ್ವಾಂಸರು ಭಾವಿಸಿದ್ದಾರೆ. ಇಲ್ಲಿ ಬ್ರಹ್ಮೇಶ್ವರ ದೇವಾಲಯವೂ ಇದೆ. ಆದರೆ ಶಿವತತ್ವಚಿಂತಾಮಣಿಯ ಪ್ರಕಾರ ಇದು ಮಲಪ್ರಹಾರಿ ನದಿಯ ಮೇಲಿನ ಮತ್ತು ಗುಡ್ಡಾಪುರದಿಂದ ಪೂರ್ವಕ್ಕೆ ೩೦ ಗಾವುದ ದೂರವಿರುವ ಗ್ರಾಮವೆಂದು ತಿಳಿದುಬರುವುದರಿಂದ ಅದು ಬಹುಶಃ ವಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ಎಲ್ಲಿಯೋ ಇರಬಹುದು. ಆಳಂಪೂರ ಗ್ರಾಮದ ಉಲ್ಲೇಖ ಇಂಡಿ ತಾಲೂಕಿನ ರೂಗಿ ಶಾಸನದಲ್ಲಿ

ಬರುತ್ತದೆ.[೫] ಅದೇನೇ ಇರಲಿ. ಈ ಗ್ರಾಮ ಯಾವುದೆಂಬುದನ್ನು ಶೋಧಿಸಿದಲ್ಲಿ ಬ್ರಹ್ಮೇಶ್ವರಲಿಂಗ ಇತ್ಯಾದಿ ಸಂಗತಿಗಳು ಬಯಲಿಗೆ ಬರಬಹುದಾಗಿವೆ.

ವಿಜಾಪುರ ಮ್ಯೂಜಿಯಂದಲ್ಲಿರುವ ಗುಡ್ಡವ್ವೆಯನ್ನು ಕುರಿತ ಒಂದು ಕಲ್ಲಿನ ಮೇಲೆ ಎರಡು ಶಾಸನಗಳಿದ್ದು, ಈ ಶಿಲೆ ಮೂಲತಃ ಮುದ್ದೇಬಿಹಾಳ ತಾಲೂತಿನ ನಾಲ್ವತ್ತವಾಡ ಗ್ರಾಮಕ್ಕೆ ಸಂಬಂಧಿಸಿದೆ. ಈ ಶಾಸನಗಳ ಪ್ರಕಾರ ಆ ಗ್ರಾಮದಲ್ಲಿ ಗುಡ್ಡವ್ವೆಯ ದೇವಾಲಯವಿದ್ದಿತು. ಇದರ ಶೋಧವೂ ನಡೆಯಬೇಕಾಗಿದೆ.

ದೇವಗಿರಿ ಮಹಾದೇವನ ಮಾಂಡಲಿಕ ಸಾಯಿದೇವನು ಭೀಮಾತೀರದ ವಾತಾಖ್ಯಪುರ ಅಂದರೆ ವಿಜಾಪುರದಿಂದ ಉತ್ತರಕ್ಕೆ ೫೦ ಮೈಲು ದೂರವಿರುವ ಇಂದಿನ ವಾಡಪುರಿಯಲ್ಲಿ ಗುಡ್ಡವ್ವೆಯ ದೇವಾಲಯ ಕಟ್ಟಿಸಿದ ವಿಷಯ ಅಲ್ಲಿಯ ಒಂದು ಸಂಸ್ಕೃತ ಶಾಸನದಲ್ಲಿದೆಯೆಂದು ತಿಳಿದುಬರುತ್ತದೆ.[೬] ಈ ಅಭಿಪ್ರಾಯದ ಸತ್ಯವನ್ನು ಶೋಧಿಸುವುದೂ ಅವಶ್ಯವಿದೆ.

■■

ಆಕರ : ಮಾರ್ಗ ಸಂಪುಟ–೨

---

೫. SII.XX No. 21 ರೂಗಿ (ಇಂಡಿ ತಾಲೂಕು) ಕ್ರಿ.ಶ.1019.

೬. ಬಸವೇಶ್ವರ ಸಮಕಾಲೀನರು (ಬಸವ ಸಮಿತಿ, ಬೆಂಗಳೂರು 1976) ಪು. 586

೨೬

ಬಸವಣ್ಣನವರ ವಿಗ್ರಹ

ವೀರಶೈವ ಶರಣರಿಗೆ ಸಂಬಂಧಿಸಿದ ಶಾಸನ ಮತ್ತು ವಿಗ್ರಹಗಳನ್ನು ಗುರುತಿಸುವ ಕಾರ್ಯ ಇತ್ತೀಚೆ ಆಶಾದಾಯಕವಾಗಿ ನಡೆದಿದೆ. ಈ ಅವಧಿಯಲ್ಲಿ ಬಸವಣ್ಣನವರ ಶಾಸನಗಳ ಬಗ್ಗೆ ಬರೆಯುತ್ತ ಶ್ರೀ ಗೋವಿಂದ ಪೈಗಳು ಸೊರಟೂರು ಶಾಸನದ (ಶಿವಾ 14-2) "ಶ್ರೀ ಹಂದಿಗನೂರು ಸಿದೇನಾಯಕರ ಮುತಾಲಿಕನು ಗುಬ್ಬಿನಾಯಕನು ಸೊರಟೂರು ಹಾಳುದೇವಾಲ್ಯವನ್ನು ಜೀರ್ಣೋದ್ಧಾರವನ್ನೂ ಮಾಡಿ ಬಸವೇಶ್ವರದೇವರನೂ ಪ್ರತಿಷ್ಠೆ ಮಾಡಿದನು" ಎಂಬ ವಾಕ್ಯವನ್ನೂ ಗಮನಿಸಿ "ಈ ಕಾಲಕ್ಕೆ (ಕ್ರಿ.ಶ. 1365) ಹಿಂದಿನಿಂದಲೇ ಬಸವೇಶ್ವರನ ವಿಗ್ರಹಮಾಡಿ ಪೂಜಿಸುತ್ತಿದ್ದರೆಂದು ಇದರಿಂದ ಸ್ಪಷ್ಟವಾಗಿ ತಿಳಿಯುತ್ತದೆ" ಎಂದು ಹೇಳಿದ್ದರು. ಆದರೆ "ಬಸವಣ್ಣನವರನ್ನು ಕುರಿತ ಶಾಸನಗಳು "ಪುಸ್ತಿಕೆಯಲ್ಲಿ ಇದು ಬಸವಣ್ಣನವರ ವಿಗ್ರಹವಾಗಿರದೆ ನಂದಿಯ ವಿಗ್ರವಾಗಿರುವ ಸಂಭವ ಹೆಚ್ಚು. ಸಬಲವಾದ ಆಧಾರಗಳಿಲ್ಲದ ಕಾರಣ ಈ ಶಾಸನ ಬಸವಣ್ಣನವರನ್ನು ಕುರಿತುದಾಗಿರಲಿಕ್ಕಿಲ್ಲ" ಎಂದು ಹೇಳಿ ಅವರ ಅಭಿಪ್ರಾಯವನ್ನು ಅಲ್ಲಗಳೆಯಲಾಗಿದ್ದಿತು.

ಇತ್ತೀಚೆ ಪ್ರಕಟವಾದ SII. XVI ಶಾಸನ ಸಂಪುಟ, ಬಸವಣ್ಣನವರ ವಿಗ್ರಹದ ಬಗ್ಗೆ ಒಂದು ಸೂಚನೆಯನ್ನು ಕೊಡುವಂತೆ ತೋರುತ್ತದೆ.

ವಿಜಯನಗರ ಸಾಮ್ರಾಜ್ಯದ ಸಮಯದಲ್ಲಿ ಹುಟ್ಟಿದ ೩೩೫ ತೆಲುಗು ಶಾಸನಗಳನ್ನೊಳಗೊಂಡಿದೆ. ಈ ಸಂಪುಟ. ಕರ್ನೂಲ ಜಿಲ್ಲೆಯ ನಂದಿಕೋಟೂರ ತಾಲೂಕಿನ ನಾಗಲೂಟಿ ಗ್ರಾಮಕ್ಕೆ ಸಂಬಂಧಿಸಿದ ಈ ಶಾಸನವ ಕಾಲ ಕ್ರಿ.ಶ. ೧೬೨೪. ಅಳಿಯ ರಾಮರಾಯನ ಆಳಿಕೆಯಲ್ಲಿ ಹುಟ್ಟಿದ ಇದು ನಾಗಸೆಟ್ಟಿಯೆಂಬವನ ಪುಣ್ಯಕಾರ್ಯಗಳನ್ನು ವಿವರಿಸುತ್ತ "ಶ್ರೀಶೈಲ ಸಿಧಾಪುರಂ ಲಾಂಗ್ಗಲೂಟಿ ವೀರಭದ್ರುನಿ ದೇವುಳ ಪ್ರಾಕಾರಮಂದು ತೂ(ರ್ಪು)ನ ಗೋಪುರಮುನ್ನು ಆ ಸಮೀಪಮಂದು ಶಿಲಾಮಂಟಪ್ಪಮುನ್ನು ಗಟ್ಟಿಂಚಿ ಕಾಶೀವಿಶ್ವೇಶ್ವರುನಿ ಕಲ್ಯಾಣಬಸ[ವೇ)ಶ್ವರುನಿ ಪ್ರ[ತಿ]ಷ್ಟಚೇತಿ....." ಎಂದು ಹೇಳುತ್ತದೆ. ಸಂಪಾದಕರು ಈ ಶಾಸನದ ತಲೆಯ ಮೇಲಿನ ಟಿಪ್ಪಣಿಯಲ್ಲಿ "It registers the construction of gopur towards the east and a mantapa near it in the prakar of the temple of Virabhadra Langguti in the region of Shrishail sidhapuram, the Consecreation of the images of Kasi-Visvesvara and Knlyana-Basavesvera in it" ಎಂದು ವಿವರಿಸಿದ್ದಾರೆ.

ಇವರು ಹೇಳುವಂತೆ ಇದು ವಿಗ್ರಹವಾಗಿದ್ದ ಪಕ್ಷದಲ್ಲಿ ೧೬ನೆಯ ಶತಮಾನದವರ ದೃಷ್ಟಿಯಲ್ಲಿದ್ದ ಕಲ್ಯಾಣ ಬಸವಣ್ಣನವರ ಭಾವಚಿತ್ರದ ಅಪರೂಪ ಸಂಶೋಧನೆಯಾಗುತ್ತದೆ. ಲಿಂಗವಾಗಿದ್ದ ಪಕ್ಷದಲ್ಲಿ

ಬಸವಣ್ಣನವರ ಬಗ್ಗೆ ಜನರಿಗಿದ್ದ ಭಕ್ತಿ ವೇದ್ಯವಾಗುತ್ತದೆ. ನಂದಿಯನ್ನು ಸ್ಥಾಪಿಸಿ ಹೀಗೆ ಹೇಳಿದ್ದರೆ ಬಸವಣ್ಣ-ನಂದಿಗಳ ಅವತಾರ ಸಂಬಂಧದ ಬಗ್ಗೆ ಜನರ ದೃಷ್ಟಿಯೇನೆಂಬುದು ತಿಳಿದುಬರುತ್ತದೆ.

ಈ ಮೂರು ಶಕ್ಯತೆಗಳಲ್ಲಿ ಸತ್ಯವಾದುದನ್ನು ಅರಿಯಲು, ಆ ಸ್ಥಳಕ್ಕೆ ಹೋಗಿ ಶೋಧಿಸುವುದು ಅವಶ್ಯವಿದೆ.

■■

ಆಕರ : ಮಾರ್ಗ ಸಂಪುಟ–೨

೨೭

ವಾಟಿಯಾವು

ವಚನಸಾಹಿತ್ಯದ ವೈವಿಧ್ಯಪೂರ್ಣ ಉಪಮೆ ಮತ್ತು ರೂಪಕಪ್ರಪಂಚದಲ್ಲಿ ಹಸು ಹಲವು ರೀತಿಯಲ್ಲಿ ಗೋಚರಿಸುತ್ತದೆ. ಅವುಗಳಲ್ಲಿ 'ವಾಟಿಯಾವು' ಒಂದು. ಬಸವಣ್ಣ ಮತ್ತು ಚನ್ನಬಸವಣ್ಣ ಮೊದಲಾದವರ ವಚನಗಳಲ್ಲಿ ಅನೇಕ ಭಿನ್ನ ಪಾಠಗಳಿಂದ ಕಂಡುಬರುವ ಈ ಪದದ ಅರ್ಥ ಇನ್ನೂ ಸಂದೇಹದಲ್ಲಿ ನಿಂತಿದೆ.

೧. ಬಸವಣ್ಣನವರ ವಚನ :

ಊರ ಮುಂದೆ ಹಾಲಹಳ್ಳ ಹರಿವುತ್ತಿರಲು
[1]ಒಱಿ[1] ಯಾವಿನ ಬೆನ್ನ ಹರಿಯಲದೇಕಯ್ಯಾ ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ ?
ಕೂಡಲಸಂಗಮದೇವರುಳ್ಳನ್ನಕ್ಕ ಬಿಜ್ಜಳನ ಭಂಡಾರವೆನಗೇಕಯ್ಯಾ?[೧]

[ಪಾಠಾಂತರ : 1-1ವಾಳಿ. ವಱಿ]

ಈ ವಚನಕ್ಕೆ ಡಾ. ಡಿ.ಎಲ್.ಎನ್. ಅವರು "ಊರ ಮುಂದೆ ಹಾಲಿನ ಹಳ್ಳವೇ ಹರಿಯತ್ತಿದ್ದರೆ ತೊಟ್ಟು ತೊಟ್ಟಾಗಿ ಹಾಲನ್ನು ಜಿನುಗಿಸುವ ಹಸುವಿನ ಹಿಂದೆ ಹಾಲಿಗಾಗಿ ಯಾರು ಹೋಗುತ್ತಾರೆ?"[೨] ಎಂದು ವಿವರಣೆ ನೀಡಿರುವರು.[೩] ಇವರ ಪ್ರಕಾರ 'ಒಱಿ;' ಶುದ್ಧಪಾಠ. ಇವರ ಅರ್ಥ ಜಿನುಗುಹಾಲಿನ ಹಸು, ಅಂದರೆ ನಿಷ್ಪ್ರಯೋಜಕ ಆಕಳು.[೪]

---

೧. ಬಸವಣ್ಣನವರ ವಚನಗಳು (ಡಾ. ಆರ್.ಸಿ. ಹಿರೇಮಠ ಸಂಪಾದಿತ), 754.

೨. "ಹಾಲು ಬತ್ತಿದ ಹಸುವಿಂಗೆ ಕಱುವ ಬಿಟ್ಟಡೆ ಒದೆವುದಲ್ಲದೆ ಉಣಿಸಲೀವುದೇ ?
(ಅರಿವಿನ ಮಾರಿತಂದೆಯ ವಚನ, ಕ.ಕ.ಚ., ಪು. 211, ಹೋಲಿಸಿರಿ)

೩. ಬಸವಣ್ಣನವರ ವಚನಗಳ ಪಾಠ - ಡಿ.ಎಲ್. ಎನ್. (ಶರಣ ಸಾಹಿತ್ಯ, 11-5+6).

೪. ಬಸವಣ್ಣನವರ ಟೀಕಿನ ವಚನಗಳು ಎಂಬ ಇತ್ತೀಚಿನ ಗ್ರಂಥದಲ್ಲಿ ಈ ವಚನಕ್ಕೆ 'ವಾಟಿಯಾವು' ಎಂಬ ಪಾಠವಿದ್ದು 'ಗೊಡ್ಡಾಕಳು' ಎಂದು ಅರ್ಥ ಹೇಳಲಾಗಿದೆ.

೨. ಚನ್ನಬಸವಣ್ಣನವರ ವಚನ :

.......ಹಾಲಸಾಗರದೊಳಗೋಲಾಡುತಿರ್ದು
[1]ಒಱೆ[1]ಯಾವಿನ ಬೆನ್ನ ಹರಿವವನಲ್ಲ...... [೫]

[ಪಾಠಾಂತರ: 1-1 ದೊಡ್ಡ. ದೊಡ್ಡಿ, ವಾರಿ, ವಾಲಿ, ವೊದಿ]

ಇಲ್ಲಿಯ ದೊಡ್ಡ, ದೊಡ್ಡಿ ಮತ್ತು ಶ್ರೀ ಡಿ.ಎಲ್.ಎನ್. ಒಪ್ಪಿದ 'ಒಱೆ' ಎಂಬ ಪಾಠಗಳನ್ನು ಬಿಟ್ಟರೂ 'ವೊದಿಯಾವು' ('ಒದೆ' ಶುದ್ಧಪಾಠ) ಎಂಬ ಪಾಠವೂ ಸಂದರ್ಭಕ್ಕೆ ಹೊಂದಿಕೊಂಡು 'ನಿಷ್ಪ್ರಯೋಜಕ ಆಕಳು' ಎಂಬ ಅರ್ಥವನ್ನೇ ಕೊಡುತ್ತದೆ.

೩. ಪ್ರಭುದೇವರ ವಚನ :

ದೂರದ ತುದಿಗೊಂಬನಾರಯ್ಯ ಗೆಲುವರು ?
ಮೀರಲಿಲ್ಲದ ನಿರಾಳದ ನಿಲುವನು ಮೀಱೆ ಕಾಬ ಘನವನು
ಬೇಱೆ ತೋಱಲಿಲ್ಲ, ತೋಱೆ ಕಾಬಡೆ ತನ್ನ ಹಿಡಿಯಲಿಲ್ಲಯ್ಯ.
[1]ಒಱೆ[1] ಯಾವಿನ ಹಾಲನಾಱಯ್ಯ ಕಱೆವರು ?
ಮೂಱುಲೋಕದೊಳಗೆ ತಾನಿಲ್ಲ ಗುಹೇಶ್ವರ.[೬]

[ಪಾಠಾಂತರ:ವೊಱೆ, ಒದೆ]

ಅಸಾಧ್ಯ ಕಾರ್ಯಗಳನ್ನು ಹೇಳುವ ಈ ಸಂದರ್ಭಕ್ಕೆ ಶ್ರೀ ಡಿ.ಎಲ್. ಎನ್. ಅರ್ಥದ 'ಒಱೆಯಾವು' ಪಾಠಕ್ಕಿಂತ 'ಒದೆಯಾವು' ಹೆಚ್ಚು ಒಪ್ಪುತ್ತಿದ್ದು 'ನಿಷ್ಪ್ರಯೋಜಕ ಆಕಳು' ಎಂಬ ಅರ್ಥವನ್ನೇ ಕೊಡುತ್ತದೆ.[೭]

೪. ಸ್ವತಂತ್ರ ಸಿದ್ಧಲಿಂಗೇಶ್ವರ ವಚನ :

ಹಾಲಹಳ್ಳ ಹರಿಯುತ್ತಿರಲು
ಅದ ಬಿಟ್ಟು ಓರೆಯಾವಿನ ಬೆನ್ನ ಬಳಿ ಹರಿಯಲುಂಟೇ?[೮]

---

೫. ಚನ್ನಬಸವಣ್ಣನವರ ವಚನಗಳು (ಡಾ. ಆರ್.ಸಿ. ಹಿರೇಮಠ ಸಂಪಾದಿತ) 683
೬. ಅಲ್ಲಮನ ವಚನಚಂದ್ರಿಕೆ (ಡಾ.ಎಲ್. ಬಸವರಾಜು) 365
೭. ಪ್ರಭುದೇವರ ಟೀಕಿನ ವಚನಗಳು ಎಂಬ ಗ್ರಂಥದಲ್ಲಿ ".......ತನ್ನ ಭಿನ್ನವ ಮಾಡಿ ಆ ವಸ್ತುವ ಅಱಿಸಿಹೆನೆಂದಡೆ ವೊಱೆಯಾಕಳ ಹಾಲ ಕಱಿದುಕೊಂಡು ಸುಖಿಸಿಹೆನೆಂಬಂತೆ ಮನದ ಆಯಾಸವೆ ಮುಟ್ಟೂದಲ್ಲದೆ ಕಾರ್ಯವಿಲ್ಲ......" ಎಂದು ಇದಕ್ಕೆ ಅರ್ಥ ಹೇಳಲಾಗಿದೆ.
".....ಒಲ್ಲದ ಸತಿಗೆ ರತಿಕೂಟವ ಬೆಳೆಸುವಂತೆ ....ಕೊಲ್ಲಿಯಾವಿನಲ್ಲಿ ಸಲ್ಲೀಲೆಯನಱಸುವಂತೆ" (ಮೋಳಿಗೆಯ್ಯನ ವಚನ, ಕ.ಕ.ಚ. ಪು. 192) ಹೋಲಿಸಿರಿ. "ಕೊಲ್ಲಿಯೆಂದು ವಕ್ರಂ" -ಕರ್ನಾಟಕ ಶಬ್ದಸಾರಂ ಪು.23
೮. ಮಾಹೇಶ್ವರಸ್ಥಲದ ೩೧ನೆಯ ವಚನ

೫. ಸಿಂಗಿರಾಜಪುರಾಣ :

ಕಾಮಧೇನುವ ಕಱಿವರಲ್ಲದದಱೊಳುಹನಱಿ
ವಾಮಿಷಕೆ ಕೆಚ್ಚಲಂ ಸೀಳ್ವರೇ

ಈ ಎರಡು ಪಾಠಗಳು ಅಶುದ್ಧವಾಗಿದ್ದು ಸ್ವಲ್ಪ ಹೆಚ್ಚು ಕಡಿಮೆ ಮೇಲಿನ ವಚನಗಳ ಅರ್ಥವನ್ನೇ ಒಳಗೊಂಡಿವೆ.

೬. ಲೋಕೋಪಕಾರಕ ಪದ್ಯ:

ರುಜೆ ಮೇಣು ಬಿಳಿಯ ಸಾಸಿವೆ ।
ಬಜೆ ಬಿಟಲಿನ ಬೀಜಮೆಂಬಿವಂ ಸರಿಗೊಂಡಂ ।
ತಜಮೂತ್ರದೊಳರೆದೆಚ್ಚುಗೆ ।
ನಿಜೇಚ್ಛೆಯಿಂದೊಱಿಯಾವು ಮಟ್ಟಂ ಕಱಿಗುಂ ||[೧೦]

ಎಂಬ ಕಂದಕ್ಕೆ "ಅಡಗಾಗಿರ್ದ ಆಕಳು ಸಾಧುಗಳಾಗಿ ಕಱಿವುವು....." ಎಂದು ಪ್ರಾಚೀನ ಟೀಕೆಯಿರುವುದರಿಂದ 'ಒಱಿಯಾವು' ಅಂದರೆ ಅಗಡು ಆಕಳು(ತುಂಟ ಆಕಳು)[೧೧] ಎಂದು ಅರ್ಥ ಹೇಳಬೇಕಾಗುತ್ತದೆ.

೭. ಗುರುಶಂಕರೇಶ್ವರ ಶತಕ :

ನೋಡಿರೆ ನೋಡಿರೇ ಮನೆಯ ಮುಂದಣ ಪಾಲ್ಗಡಲಂ ಬಿಸುಟ್ಟು ಱೋ ।
ಡಾಡುವ ಬಂಜೆಗೋವ ಕಱಿದುಂಡಪೆನೆಂಬವನಂತೆ ಜಾಹ್ನವೀ।
ಚೂಡನ ಪಾದಪಂಕಜಮನೊಲ್ಲದೆ ಸಿಂಬಕ ಕೋಟಿದೈವಮಂ।
ಮಾಡುವ ಮೂಢರಂ ಹಿರಿಯ ಹೇಸಿಗಳಂ ಗುರುಶಂಕರೇಶ್ವರಾ||[೧೨]

ಬಸವಣ್ಣ ಚನ್ನಬಸವಣ್ಣನವರ ವಚನಗಳ ಭಾವವನ್ನೇ ವ್ಯಕ್ತಮಾಡುವ ಈ ಪದ್ಯದಿಂದ ಒಱಿಯಾವು ಇಲ್ಲ ಓಱಿಯಾವು ಎಂಬ ಪದಕ್ಕೆ ಬಂಜೆಗೋವು ಎಂದೂ, ಒಟ್ಟಿನಲ್ಲಿ ನಿಷ್ಪ್ರಯೋಜಕ ಆಕಳು ಎಂದೂ ಅರ್ಥ ಹೇಳಬೇಕಾಗುತ್ತದೆ.

---

೯. ಸಿಂಗಿಪುರಾಣ, 20-11.

೧೦. ಲೋಕೋಪಕಾರ, 9-196.

೧೧. "ಪಾಲ್ತೀವಿದ ಮೊಲೆಯಿರೆ ಮತಿಗೆಟ್ಟಾವಿನ ತುದಿಕೋಡ ನೀಡಿ ಕರೆಯದೆ ಮಾಣಂ"-ಧರ್ಮನಾಥಪುರಾಣ5-117
"ಕಾಮಧೇನುವಂ ಬಿಟ್ಟಿಟ್ಟಿಯಗಡಾವಿಗಿರದೆ ಬೆಟ್ಟದಿ ತೃಣವ ಪೊತ್ತಡಕುವಂದಂ" - ರಾಘವಾಂಕ ಚರಿತ್ರೆ, 13-40 ಹೋಲಿಸಿರಿ.

೧೨. ಕರ್ನಾಟಕ ಭಾರತಿ, 2-1.
"ಹಟ್ಟಿಯೊಳು ಸುರಧೇನುವಿಗೆ ಬಂದದಳವಟ್ಟಿರಲು ಗೊಡ್ಡಂ ಪಿಡಿದು ಮತಿಗೆಟ್ಟು ಕಱಿದುಂಡಪೆನೆಂಬವನವೊಲು" -ಬಸವ ಪುರಾಣ, 59-45.
"ಸುರಧೇನುವಿದ್ದು ಬರಡಾಕಳಿಗೆ ಆಸೆಮಾಡುವಂತೆ" -ಅಖಂಡೇಶ್ವರ ವಚನ, 9-56 ಹೋಲಿಸಿರಿ.

ಈ ವರೆಗಿನ ವಿವೇಚನೆಯಿಂದ ಬಸವಣ್ಣನವರ ವಚನದ ಪಾಠ, ಒಱೆಯಾವು ಇಲ್ಲವೆ ಓಱೆಯಾವು ಇರಬಹುದೆಂದೂ, ಅರ್ಥ: ಜಿನುಗುಹಾಲಿನ ಆಕಳು, ತುಂಟ ಆಕಳು (ಒದೆವ ಆಕಳು), ಬಂಜೆ ಆಕಳು ಎಂದೂ ಒಟ್ಟಿನಲ್ಲಿ 'ನಿಷ್ಪ್ರಯೋಜಕ ಗೋವು' ಎಂದೂ ಅರ್ಥ ಹೇಳಬೇಕೆನಿಸುತ್ತದೆ. ಆದರೆ ಬಸವಣ್ಣನವರ (ಮತ್ತು ಚನ್ನಬಸವಣ್ಣನವರ)ವಚನಕ್ಕೆ ಇರುವ 'ವಾಟಿಯಾವು' ಎಂಬ ಇನ್ನೊಂದು ಪಾಠಕ್ಕೆ ಮೇಲೆ ಹೇಳಿದ ಅರ್ಥಗಳನ್ನೊಳಗೊಂಡ 'ನಿಷ್ಪ್ರಯೋಜಕ ಆಕಳು' ಎಂದು ಅರ್ಥವೇ ? ಎಂಬ ಪ್ರಶ್ನೆ ಎದುರಾಗುತ್ತದೆ. ಈ ಪ್ರಶ್ನೆಯನ್ನು ಬಿಡಿಸುವಲ್ಲಿ ಶಾಸನಗಳ ಕೊನೆಯಲ್ಲಿ ಬರುವ ಫಲಶ್ರುತಿವಾಕ್ಯಗಳನ್ನು ನೋಡಬಹುದಾಗಿದೆ.

"ಇದ ಸಲಲೀಯದವರು ವಾರಣಾಸಿಯುಂ ಕವಿಲೆಯುಮನಱಿದೊ"[೧೩]

"ಇ[ದ]ನಱಿದಾತ ವಾರಣಾಸಿಯುಮ ಕವಿಲೆಯುಮಱಿದ ಪಾತಕವನಕ್ಕು"[೧೪]

ಶಾಸನವನ್ನು ಹಾಳುಗೆಯ್ದರೆ ಗೋಹತ್ಯದ ಪಾಪ ಎಂದು ಈ ವಾಕ್ಯಗಳ ಅರ್ಥ. ಇನ್ನು,

"ಅರಾಮನುಮೀ ದಾನವನಱಿದೊರುಳ್ಳೊಡೆ ವಾರಣಾಸಿಯುಂ ಶ್ರೀಪರ್ವತಮುಮಂ
ಕವಿಲೆಯಂ ಕವಿಲೆಯ ಕಱುವುಮನಱಿದೊರ್"[೧೫]

"ಪೂರ್ವಸಿ[ದ್ಧಾ]ಯ ಕಱಿದುಕೊಣ್ಡರಪ್ಪಡೆ ಕವಿಲೆಯುವ ಕಱುವುವನಱಿದರ
ಲೋಕಕೆ ಸಲ್ಗು"[೧೬]

ಶಾಸನವನ್ನು ನಾಶಗೊಳಿಸಿದರೆ ಆಕಳನ್ನೂ ಕರುವನ್ನೂ ಕೊಂದ ಪಾಪ ಎಂದು ಈ ವಾಕ್ಯಗಳ ಅಭಿಪ್ರಾಯ. ಇನ್ನು "ಬ್ರಾಹ್ಮರ ಕೊಂದ ಪಾಪ ಕಂದಳು ಕಪಿಲೆಯ ಕೊಂದ ಪಾಪ"[೧೭] ಎನ್ನುವ ಬೂದಿಕೋಟೆ ಗ್ರಾಮದ ಶಾಸನವು ಕರುಪಿದ್ದ(?) ಆಕಳನ್ನು[೧೮] ಕೊಂದ ಪಾಪವನ್ನು ಉಲ್ಲೇಖಿಸುತ್ತದೆ. ಇಷ್ಟು ಹಿನ್ನೆಲೆಯಲ್ಲಿ ಗಟ್ಟುಕಾಮದೇವನಹಳ್ಳಿ ಶಾಸನದ ಕೊನೆಯ "ಇದನಱಿದವ ಬರನಸಿಯು ವಾಟಿಕವಿಲೆಯುವನ[ಱಿ]ದ ಪತಕನಕ್ಕು"[೧೯] ಎಂಬ ವಾಕ್ಯಕ್ಕೆ 'ವಾಟಿಯಾವು' ಅಂದರೆ ಬಂಜೆ ಆಕಳು, ಒದೆಯುವ ಆಕಳಿಗೆ ಬದಲು ಕರುವುಳ್ಳ ಆಕಳನ್ನು (ಸವತ್ಸಗೋವು) ಕೊಂದ ಪಾಪಿಯೆಂಬ ಅರ್ಥ ಹೊರಡಲು ಅವಕಾಶವಿದೆ. ಮರಾಠಿಯಲ್ಲಿ ಆಕಳು ಈಯಿತು ಎನ್ನುವುದಕ್ಕೆ 'ಗಾಯ ವ್ಯಾಲೀ' ಎಂದು ಹೇಳುವುದರಿಂದ ವಾಟಿಯಾವು ಅಂದರೆ ಕರುವುಳ್ಳ ಹಸು ಎನ್ನಲು ಇನ್ನೂ ಸಮರ್ಥನೆ ಸಿಗುತ್ತದೆ.

---

೧೩. S. I. I. IX-i 26.

೧೪. S.I. I. IX-i 54

೧೫. S.I. I. IX-i 59.

೧೬. S. I. I. IX-i, 35.

೧೭. EC XVII, ಬೌರಿಂಗಪೇಟೆ 112, (ಕ್ರಿ.ಶ. 1467)

೧೮. ಕೆಲವು ಶಾಸನಗಳು ಉಭಯಮುಖಿದಾನ (ಇಕ್ಕತ್ತಿಗೆಯ ಕಪಿಲೆಯ ದಾನ)ವನ್ನು ಹೇಳುತ್ತವೆ. ಈಯುತ್ತಿರುವ ಅಂದರೆ ಕರುವಿನ ಮುಖ ಹೊರಗೆ ಬಂದ ಆಕಳನ್ನು ದಾನವಾಗಿ ಕೊಡುವುದು ಇದರ ಅರ್ಥ. ಯಾಜ್ಞವಲ್ಕ್ಯಸ್ಮೃತಿ, ವರಾಹ ಪುರಾಣಗಳು ಈ ಉಭಯಮುಖಿ ದಾನವನ್ನು ಉಲ್ಲೇಖಿಸುತ್ತವೆ.

೧೯. EC, XVII, i-2

ಬಸವಣ್ಣನವರು ಕರುಣೆಯ ಕಡಲು. ಅವರ ಮನದಲ್ಲಿ ಮರುಕು ಹೆಚ್ಚು. ದಯಾಶೀಲರಾದ ಅವರು ಇಲ್ಲಿ ಜಿನುಗುಹಾಲಿನ, ಒದೆಯುವ, ಬಂಜೆ ಎಂಬ ಅರ್ಥದ ಒಜಿೀಯಾವು. ಓಜಿೀಯಾವು, ಒದೆಯಾವು ಪದವನ್ನು ಬಳಸದೆ, ಕರುವುಳ್ಳ ಆಕಳು ಎಂಬ ಅರ್ಥದ ವಾಟಿೀಯಾವು[೨೦] ಪದವನ್ನು ಬಳಸಿರುವ ಸಂಭವ ಹೆಚ್ಚು.

ಕರುವನಗಲಿಸಿ ತಾಯ ಮರುಗಿಸಿ
ಮೊಲೆವಾಲ ಕರೆದುಣಬೇಡೆಲವೋ......

ಮೊದಲಾದ ವಚನಗಳಲ್ಲಿ ವ್ಯಕ್ತವಾದ ಅವರ ಇಂಥ ಅನುಕಂಪ, ಪ್ರಾಣಿದಯೆಗಳನ್ನು ಗಮನಿಸಬೇಕು, ಅದಕ್ಕಾಗಿ ಬಸವಣ್ಣ, ಚನ್ನಬಸವಣ್ಣನವರ ವಚನಗಳ ಮೂಲಪಾಠ 'ವಾಟಿಯಾವು', ಇದರ ಅರ್ಥ ಕರುವುಳ್ಳ ಆಕಳು ಎಂದು ಭಾವಿಸುವುದು ಹೆಚ್ಚು ಸಂಗತ.

ಬಸವಣ್ಣನವರ ವಚನದ 'ವಾಟಿ' ಎಂಬ ಈ ಅಪರಿಚಿತ ಪದ, ಅರ್ಥ ಸ್ಪಷ್ಟತೆಗಾಗಿ ಇಲ್ಲವೆ ಲೇಖನಸ್ಖಾಲಿತ್ಯದಿಂದಾಗಿ ಒಜಿ, ಒದೆ ಇತ್ಯಾದಿ ಪರಿಚಿತ ಪದಗಳ ರೂಪವನ್ನು ಕೆಳಗಿನಂತೆ ಪಡೆದಿರಬೇಕು.

ವಾಟಿ(ಳಿ)- ವಾಜಿ(ರಿ)- ವೊಜಿ
- ವೊಜಿ-ಒಜಿ(ವಜಿ)-ಒರೆ
- ವೋಜಿ-ಓಜಿ-ಒಜಿ
- ವೊದೆ(ವೊದಿ)-ಒದೆ-ಒದಿ

ಹೀಗೆ ಬಸವಣ್ಣ, ಚನ್ನಬಸವಣ್ಣನವರ ವಚನಗಳಲ್ಲಿ ಬಳಕೆಯಾದ 'ವಾಟಿಯಾವು 'ಪದಕ್ಕೆ ಅರ್ಥ ಮತ್ತು ರೂಪವ್ಯತ್ಯಾಸಗಳನ್ನು ಮಾತ್ರ ಹೇಳಬಹುದು. ಆದರೆ 'ವಾಟಿ' ಮತ್ತು 'ವಾಳಿ' ಎಂದು ಎರಡು ಬಗೆಗಳಲ್ಲಿ ಕಂಡುಬರುವ ಈ ಪದ ನಿಷ್ಪತ್ತಿದೃಷ್ಟಿಯಿಂದ ಅಭ್ಯಾಸಯೋಗ್ಯವಾಗಿದೆ.

■■

ಆಕರ : ಮಾರ್ಗ ಸಂಪುಟ–೨

---

೨೦. ವಾಟಿಯೆಂದಾಕ್ಷಣ 'ನಿವಾಳಿ' (ನಿರುಪಯೋಗಿ, ತುಂಟ) ಎಂಬ ಜನ ಬಳಕೆಯ ಪದ ವ್ಯಾಲ>ವ್ಯಾಳ>ವ್ಯಾಳಿ>ವಾಳಿ(?) ಎಂಬ ತದ್ಭವ ಪದ ನೆನಪಾಗಿ ಬಂಜೆಯಾವು, ಒದೆಯಾವು ಎಂದು ಅರ್ಥ ಹೇಳಲು ಮನಸ್ಸು ಹರಿಯುತ್ತದೆ. ಆದರೆ ಇವಕ್ಕೆ ಆಧಾರವಿಲ್ಲ. ಮೇಲಾಗಿ ವಾರಣಾಸಿಯಲ್ಲಿ ಬಂಜೆಗೋವು, ಇಲ್ಲವೆ ಒದೆಯಾವು ಕೊಂದ ಪಾಪವೆಂದು ಅರ್ಥ ಹೇಳುವುದೂ ತೀರ ವಿಪರೀತ.

೨೮

ಅಂ+ಗಜೇಶ್ವರ ಮಸಣಯ್ಯ

ಗಜೇಶ್ವರ ಮಸಣಯ್ಯನೊಬ್ಬ ಶರಣ ಸಮುದಾಯದಲ್ಲಿ ಸುಪ್ರಸಿದ್ಧ ಶರಣ. ಸುಮಾರು ೬೦ ವಚನಗಳನ್ನು ಬರೆದ ಈತನ ಮುದ್ರಿಕೆ "ಮಹಾಲಿಂಗ ಗಜೇಶ್ವರಾ."[೧] ಶಾಸನವೊಂದರ ಸಹಾಯದಿಂದ ಈ ಹೆಸರು ಮತ್ತು ಮುದ್ರಿಕೆಗಳ ಮೂಲಪಾಠವನ್ನು ನಿರ್ಣಯಿಸಿಕೊಡುವ ಪ್ರಯತ್ನ ಈ ಲೇಖನ.

ಧಾರವಾಡ ಜಿಲ್ಲೆ ಬ್ಯಾಡಗಿ ತಾಲೂಕಿನ ಹಿರೇಹಳ್ಳಿ (ಪ್ರಾಚೀನ ಹೆಸರು ಗೊಟ್ಟಗಡಿ) ಗ್ರಾಮದಲ್ಲಿ ಗಜೇಶ್ವರ ಹೆಸರಿನ ಒಂದು ದೇವಾಲಯವಿದೆ. ಇದರ ಮುಂದೆ ನಿಂತಿರುವ ಶಾಸನವೊಂದರ ಪ್ರಕಾರ, ಈ ದೇವರ ಮೂಲ ಹೆಸರು ಅಂಗಜೇಶ್ವರ.[೨] ಇಲ್ಲಿಯ ಗಜೇಶ್ವರ, ಅಂಗಜೇಶ್ವರ ಹೆಸರುಗಳನ್ನು ಗಮನಿಸುತ್ತಲೇ ಶರಣ ಗಜೇಶಮಸಣಯ್ಯನ ನಿಜ ಹೆಸರು ಅಂಗಜೇಶ ಮಸಣಯ್ಯ ಇರಬಹುದೇ? ಎಂಬ ಕುತೂಹಲ ಮೂಡಿ ನಿಲ್ಲುತ್ತದೆ. ಈ ಕುತೂಹಲವನ್ನು ಒರೆಗೆ ಹಚ್ಚಿ ಕೆಳಗಿನ ನಿರ್ಣಯಕ್ಕೆ ಬರಬಹುದು.

೧. ಅಪರಿಚಿತ ಪದಗಳನ್ನು ಪರಿಚಿತ ರೂಪಕ್ಕೆ ತಿರುಗಿಸಿಕೊಳ್ಳುವುದು ಮನುಷ್ಯನ ಸ್ವಭಾವ. ಉದಾ: "ಕೊಳನ ತಡಿಯಲೊಂದು [3]ಹೊಜಿಸು[3] ಕುಳ್ಳಿರ್ದಡೇನು ಕಳಹಂಸಿಯಾಗಬಲ್ಲುದೆ?" (ಪಾಠಾಂತರ: 3-3 ಹೊಲಸು), "ನಡೆವರೆಡಹದೆ [4]ಬರುಬ[4]ರೆಡಹುವರೆ?" (ಪಾಠಾಂತರ: 4-4 ಬರೆವ). ಇದೇ ರೀತಿ ಶಾಸನೋಕ್ತ ಅಂಗಜೇಶ ಜನತೆಯ ಬಾಯಿತಪ್ಪಿನಿಂದ ಗಜೇಶವಾದಂತೆ, ಶರಣ ಅಂಗಜೇಶ ಮಸಣಯ್ಯ ಎಂಬುದು ಗಜೇಶಮಸಣಯ್ಯ ಎಂದಾಗಿರಬಹುದು.

೨. ಈಗ ಸಿಗುವ ಗಜೇಶಮಸಣಯ್ಯ ಮುದ್ರಿಕೆ "ಮಹಾಲಿಂಗ ಗಜೇಶ್ವರಾ". ಇದರ ಶುದ್ಧರೂಪ ಮಹಾಲಿಂಗ+ಅಂಗಜೇಶ್ವರಾ= ಮಹಾಲಿಂಗಾಂಗಜೇಶ್ವರಾ ಇರಬಹುದು. ಜನಬಳಕೆಯಲ್ಲಿ ಮಧ್ಯದ ಗಾ>ಗ ಆಗಿ ಮಹಾಲಿಂಗಂಗಜೇಶ್ವರಾ ಎಂಬ ರೂಪ ಪ್ರಸಾರಗೊಂಡಿರಲು ಸಾಧ್ಯವಿದೆ. ಲಿಪಿಕಾರರು ಅದನ್ನು "ಮಹಾಲಿಂಗಂ+ಗಜೇಶ್ವರಾ" ಎಂದು ಅನ್ಯಥಾಜ್ಞಾನದಿಂದ ಬಿಡಿಸಿ ಓದಿ, ಬಳಿಕ "ಗಜೇಶ್ವರಾ" ಎಂಬುದರ ಹಿಂದಿನ ಬಿಂದುವನ್ನು ಕೈಬಿಟ್ಟ ಕಾರಣ "ಮಹಾಲಿಂಗ ಗಜೇಶ್ವರಾ" ಎಂಬ ಮುದ್ರಿಕೆ ರೂಢಿಗೊಂಡಿರಬೇಕು.

---

೧. ಕನ್ನಡ ಅಧ್ಯಯನಪೀಠದಿಂದ ಪ್ರಕಟವಾಗಲಿರುವ 'ಸಕಲ ಪುರಾತನರ ವಚನಗಳು' ಭಾಗ 2ರಲ್ಲಿ ಈತನ 60 ವಚನಗಳಿವೆ.

೨. Karnatak Inscriptions Vol. IV No.10

೩. ಬಸವಣ್ಣನವರ ವಚನಗಳು, 98.

೪. ಹರಿಶ್ಚಂದ್ರ ಕಾವ್ಯ 1-23.

೩. ಶರಣ ಮತ್ತು ಶಿವ ಇವರ ಸಂಬಂಧ ಸತಿ-ಪತಿ ಭಾವದ್ದು. ಪ್ರತಿಯೊಬ್ಬ ಶರಣನಲ್ಲಿ ಕೆಲವು ವಚನಗಳು ಮಾತ್ರ ಈ ಭಾವದಿಂದ ಕೂಡಿದ್ದರೆ ಗಜೇಶಮಸಣಯ್ಯನ ಎಲ್ಲ ವಚನಗಳೂ ಸತಿಸಹಜ ಭಾವ-ಭಾಷೆಯಿಂದ ಮೂಡಿ ಬಂದಿವೆ. ಉದಾಹರಣೆಗೆ -

ತಮ್ಮ ತಮ್ಮ ಗಂಡರು ಚೆಲುವರೆಂದು
ಕೊಂಡಾಡುವ ಹೆಣ್ಣುಗಳು ಪುಣ್ಯಜೀವಿಗಳವ್ವಾ,
ನಾ ನಮ್ಮ ನಲ್ಲನೆಥವನೆಂದಱಿಯೆನವ್ವಾ,
ಮಹಾಲಿಂಗ ಗಜೇಶ್ವರದೇವ ನಿಱಿಯ ಸೆಱಗ
ಸಡಿಲಿಸಿದೊಡೆ ನಾನೇನೆಂದಱಿಯೆನವ್ವಾ,

ಎಂಬ ವಚನವನ್ನು ನೋಡಬಹುದು. ಹೀಗೆ ಇವನ ಎಲ್ಲ ವಚನಗಳಲ್ಲಿಯೂ ಶಿವಕಾಮವ್ಯಾಮೋಹ ತುಂಬಿ ಮೊರೆಯುತ್ತದೆ. ಇದರಿಂದ ಈತನ ಮುದ್ರಿಕೆ ಅಂಗಜೇಶ್ವರ (ಕಾಮರೂಪಿ ಶಿವ)ವೆಂದು ಇನ್ನೂ ಸ್ಪಷ್ಟವಾಗುತ್ತದೆ.

ಹಾಗಾದರೆ ಶರಣ ಮಸಣಯ್ಯ, ಈ ಹಿರೇಹಳ್ಳಿ ಶಾಸನೋಕ್ತ ಅಂಗಜೇಶ್ವರನ ಭಕ್ತನೇ? ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಹೀಗೆ ಉತ್ತರಿಸಬಹುದು.

೧. ಶಾಸನೋಕ್ತ ಅಂಗಜೇಶ್ವರದೇವರ ಪ್ರತಿಷ್ಠಾಪನೆಯ ಕಾಲ ಕ್ರಿ.ಶ. ೧೧೨೧. ಇದರಿಂದ ಕಲ್ಯಾಣದ ಆಂದೋಲನೆಯಲ್ಲಿ ಬಾಳಿದ ಮಸಣಯ್ಯನ ಕಾಲಕ್ಕೆ ವ್ಯತ್ಯಯ ಬರುವುದಿಲ್ಲ.

೨. ಮಸಣಯ್ಯನ ಊರು ಕರಜಗಿ ಎಂದು ವೀರಶೈವ ಪುರಾಣಗಳು ಹೇಳುತ್ತವೆ. ಕರಜಗಿ(ಸ್ಟೇಶನ್) ಹೆಸರಿನ ಗ್ರಾಮವೊಂದು ಹಿರೇಹಳ್ಳಿಗೆ ಸಮೀಪವಾಗಿ ೨೨ ಮೈಲು ಅಂತರದಲ್ಲಿದೆ.[೫]

೩. ಪ್ರಭುದೇವ, ಮಹಾದೇವಿ ಮೊದಲಾದ ಶರಣರು ಬನವಸೆ ಪ್ರಾಂತಕ್ಕೆ ಸಂಬಂಧಿಸಿದವರಾದುದರಿಂದ ಮಸಣಯ್ಯನೂ ಇದೇ ಬನವಸೆ ೧೨೦೦೦ಕ್ಕೆ ಸಂಬಂಧಿಸಿದ ಗೊಟ್ಟಗಡಿ (ಈಗಿನ ಹೆಸರು ಹಿರೇಹಳ್ಳಿ)ಯ ಅಂಗಜೇಶ್ವರನ ಭಕ್ತನಾಗಿರಲು ಸಾಧ್ಯವಿದೆ.

ಒಟ್ಟಿನಲ್ಲಿ, ಈತನ ಹೆಸರು ಗಜೇಶಮಸಣಯ್ಯವಲ್ಲ; ಅಂಗಜೇಶಮಸಣಯ್ಯ. ಮುದ್ರಿಕೆ 'ಮಹಾಲಿಂಗ ಗಜೇಶ್ವರಾ' ಅಲ್ಲ; "ಮಹಾಲಿಂಗಾಂಗಜೇಶ್ವರಾ". ಬಹುಶಃ ಈತನು ಧಾರವಾಡ ಜಿಲ್ಲೆಯ ಹಿರೇಹಳ್ಳಿ ಗ್ರಾಮದ ಅಂಗಜೇಶದೇವನ ಭಕ್ತನಾಗಿರಬಹುದು.

■■

೫. ಅಕ್ಕಲಕೋಟ ತಾಲೂಕಿನಲ್ಲಿ ಕರಜಗಿ ಹೆಸರಿನ ಒಂದು ಗ್ರಾಮವಿದೆ. ಅಲ್ಲಿ ಶ್ರೀ ಸಿದ್ಧಗಜೇಶ್ವರ ಹೆಸರಿನ ದೇವಾಲಯವಿದೆಯೆಂದು Karnatak Inscription Vol. II No. 12, A.D. 1114 ರಿಂದ ತಿಳಿದುಬರುತ್ತದೆ. ಈ ಎರಡೂ ಗ್ರಾಮಗಳ ಶಾಸನ ಶಿಲ್ಪಗಳನ್ನು ಪರೀಕ್ಷಿಸಿ ಮಸಣಯ್ಯ ಗ್ರಾಮವನ್ನು ಖಚಿತಗೊಳಿಸಿಕೊಳ್ಳಲು ಅವಕಾಶವಿದೆ.

ಆಕರ : ಮಾರ್ಗ ಸಂಪುಟ–೨

೨೯

ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು

ಬನವಾಸಿ ಮಧುಕೇಶ್ವರ ದೇವಾಲಯದ ಶಿವೋತ್ಸವಮಂಟಪದ ಗಗ್ಗರಿ ಕಲ್ಲಿನ ಸುತ್ತ "ದಾಸಿಮಯ್ಯ, ಮೋಳಿಗಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಹಡಪದ ಅಪ್ಪಣ್ಣ, ಅಗ್ಗವಣಿ ಹೊನ್ನಯ್ಯ, ಗುಂಡಬ್ರಹ್ಮಯ್ಯ ಈ ಶರಣರ ವಿಗ್ರಹಗಳನ್ನು ಕೆತ್ತಲಾಗಿದೆಯೆಂದು ಶ್ರೀ ಬಿ.ಎಸ್.ಗದಗಿಮಠ ಅವರು 'ಶಾಸನೋಕ್ತ ವೀರಶೈವರು' ಎಂಬ ಲೇಖನ (ವಿಭೂತಿ 1961)ದಲ್ಲಿ ಹೇಳಿದರು. ಆಮೇಲೆ ಹಲವು ವಿದ್ವಾಂಸರೂ 'ಶಾಸನದಲ್ಲಿ ಶಿವಶರಣರು' ಎಂಬ ಗ್ರಂಥದಲ್ಲಿ ನಾನೂ ಈ ಹೇಳಿಕೆಯನ್ನೇ ಉದ್ಧರಿಸುತ್ತ ನಡೆದಿದ್ದೆವು. ಇತ್ತೀಚೆ ಡಾ. ವಿ. ಶಿವಾನಂದ ಅವರು 'ಕರ್ನಾಟಕ ಭಾರತಿ' (6-3)ಯಲ್ಲಿ ಅವುಗಳ ವಿಷಯವಾಗಿ ಲೇಖನ ಬರೆಯುತ್ತ ಜೊತೆಗೆ ಕಷ್ಟಪಟ್ಟು ಸಂಗ್ರಹಿಸಿದ ಆ ಚಿತ್ರಗಳನ್ನೂ ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಮೊದಲನೆಯ ಚಿತ್ರ : ದಾಸಿಮಣ್ಣ (ದೇವರದಾಸಿಮಯ್ಯ), ಐದನೆಯ ಚಿತ್ರ: ಹೆಸರು ಸ್ಪಷ್ಟವಾಗಿ ಕಾಣುವುದಿಲ್ಲ - ಎಂದು ಹೇಳಿದ್ದಾರೆ. ಇತ್ತೀಚೆ ಅವರು ನನಗೆ ಪೂರೈಸಿದ ಚಿತ್ರಗಳ ಮೇಲಿನ ಲಿಪಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಮೊದಲನೆಯದು ದಾಸಿಮಣ್ಣನಾಗಿರದೆ ಲಧೆ(=ಲದ್ದೆ) ಸೋಮಣ್ಣನದೆಂದೂ,[೧] ಐದನೆಯನದು 'ಯಿಕಧ ಮಾರೈಯ' (=ಇಕ್ಕದ ಮಾರಯ್ಯ)ನದೆಂದೂ ತಿಳಿದುಬಂದಿತು.[೨]

ಚನ್ನಬಸವಪುರಾಣ(57-58)ವು ಲದ್ದೆಯ ಸೋಮಣ್ಣ ಎಂದು ಕೇವಲ ಹೆಸರನ್ನು, ಮಹಾಲಿಂಗಲೀಲೆ(10-48) ಈತನು ಒಂದು ಪಟ್ಟಣ ರಚಿಸಿದನೆಂಬ ವಿಷಯವನ್ನು ತಿಳಿಸುತ್ತವೆ. ಈತನ ಹೆಸರಿನಲ್ಲಿ,

ಆವ ಕಾಯಕವಾದಡೂ ಸ್ವಕಾಯಕವ ಮಾಡಿ,
ಗುರುಲಿಂಗಜಂಗಮದ ಮುಂದಿಟ್ಟು,
ಒಕ್ಕುದ ಹಾರೈಸಿ ಮಿಕ್ಕುದ ಕೈಕೊಂಡು,

---

೧. ಡಾ. ವಿ. ಶಿವಾನಂದರು ಇತ್ತೀಚೆ ಸಂಪಾದಿಸಿದ 'ಗುಂಡಬ್ರಹ್ಮಯ್ಯಗಳ ಚರಿತ್ರೆ'ಯನ್ನು ಪ್ರಕಟಿಸುತ್ತ ನನ್ನ ಸೂಚನೆಯಂತೆ ದೇವರದಾಸಿಮಯ್ಯ ಎಂಬುದನ್ನು ಲದ್ದೆಯ ಸೋಮಣ್ಣ ಎಂದು ತಿದ್ದಿಕೊಂಡಿದ್ದಾರೆ.

೨. ಡಾ. ಗದ್ದಗಿಮಠ ಅವರು 'ವಿಭೂತಿ'ಯಲ್ಲಿ ಪ್ರಕಟಿಸಿದ 'ಶಾಸನೋಕ್ತ ವೀರಶೈವರು' (೧೯೬೧) ಹೆಸರಿನ ಲೇಖನದಲ್ಲಿ ಐದನೆಯ ಚಿತ್ರದ ಹೆಸರನ್ನು ಹೇಳಿಲ್ಲ. ಇದನ್ನು ಅನುಸರಿಸಿ ಡಾ. ವಿ. ಶಿವಾನಂದರು ಕೂಡ ಹೆಸರು ಸ್ಪಷ್ಟವಾಗಿಲ್ಲವೆಂದು ಹೇಳಿದ್ದಾರೆ. ಆಶ್ಚರ್ಯದ ಸಂಗತಿಯೆಂದರೆ ಶ್ರೀ ಗದ್ದಗಿಮಠರು ಶರಣಸಾಹಿತ್ಯ (23-7-1960)ದಲ್ಲಿ ಪ್ರಕಟಿಸಿದ "ಶಾಸನೋಕ್ತ ವೀರಶೈವರು" ಲೇಖನದಲ್ಲಿಯೇ ಇದು ಇಕ್ಕದ ಮಾರಯ್ಯನದೆಂದು ಹೇಳಿದ್ದಾರೆ. ನನ್ನ ಈ ಲೇಖನ ಪೂರ್ತಿಯಾದ ಮೇಲೆ ಆ ಅಂಶ ನನ್ನ ಕಣ್ಣಿಗೆ ಬಿತ್ತು.

ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು
ಜೀವ ಹೋದಡೆ ಸಾಯಿ,
ಇದಕ್ಕಾ ದೇವರ ಹಂಗೇಕೆ ಭಾಪು ಲದ್ದೆಯಸೋಮ

ಎಂಬ ಒಂದು ವಚನವು ಸಿಗುತ್ತದೆ.

ಐದನೆಯ ಚಿತ್ರದಲ್ಲಿಯವ 'ಇಕ್ಕದ ಮಾರಯ್ಯ'ನೆಂಬ ಶರಣ. ಶಿರಾಳಕೊಪ್ಪದ ಸಮೀಪವಿರುವ ಶಿವನಪಾದ ಇವನ ಗ್ರಾಮ. ಭಿಕ್ಷುಕನಾಗಿ ಬಂದ ಶಿವನಿಂದ ಕಾಯಕ ಮಾಡಿಸಿದ ಶರಣನೀತ. ಇತ್ತೀಚೆ ಲಭಿಸಿದ 'ಇಕ್ಕದ ಮಾರಯ್ಯನ ಸಾಂಗತ್ಯ' ಎಂಬ ಕೃತಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿ ಇರುವುದಾಗಿ ತಿಳಿದುಬರುತ್ತದೆ.*

■■

ಆಕರ : ಮಾರ್ಗ ಸಂಪುಟ-೨

---

* ಇಕ್ಕದ ಮಾರಯ್ಯನ ಸಂಗತಿಗಳನ್ನು ನನ್ನ ಗಮನಕ್ಕೆ ತಂದ ಶ್ರೀ ಎಚ್. ದೇವೀರಪ್ಪ ಅವರಿಗೆ ಕೃತಜ್ಞನಾಗಿದ್ದೇನೆ.

೩೦

ಉಳಿಯು(=ಹುಳಿಯು)ಮೇಶ್ವರ ಚಿಕ್ಕಯ್ಯನ ಶಾಸನ

ರಾಯಚೂರು ಜಿಲ್ಲೆಯ, ಸಿಂಧನೂರು ತಾಲೂಕಿನ ದೇವರಗುಡಿ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ಹೊರಗಡೆ ಒಂದು ಶಿಲಾಶಾಸನ ನಿಂತಿದೆ.[೧] ೧೨ ಶತಮಾನದ ರಾಜಕೀಯ, ಧಾರ್ಮಿಕ ಹಿನ್ನೆಲೆಯಲ್ಲಿ ಶರಣ ಚಿಕ್ಕಯ್ಯನ ಪರಿಚಯವನ್ನೊದಗಿಸುವ ೭೪ ಸಾಲುಗಳ ಈ ಶಾಸನ ಹುಳಿಯಮೇಶ್ವರ ದೇವರಿಗೆ ಬಿಟ್ಟ ಬೇರೆಬೇರೆ ಕಾಲದ ಐದು ದತ್ತಿಗಳನ್ನೊಳಗೊಂಡಿದೆ.

೧ನೆಯ ದತ್ತಿ : ಸಾಲು 13-36. ಹುಳಿಯಮೇಶ್ವರಲಿಂಗಕ್ಕೆ "ಕೇದಾರಪಂಡಿತರ ಕಾಲಂ ಕರ್ಚಿ" ಕದ್ದರನೂರ ನಾಲ್ವರು ಪ್ರಭುಗಳು ಚಾಳುಕ್ಯ ವಿಕ್ರಮನ ೨೫ನೆಯ ವರುಷ ಅಂದರೆ ಕ್ರಿ. ಶ. ಸು. ೧೧೦೦ರಂದು ನೀಡಿದ ದತ್ತಿ ಇದರ ವಿಷಯ

೨ನೆಯ ದತ್ತಿ : ಸಾಲಿ 13-36. ಈಶ್ವರ ದಂಡನಾಯಕನು ಹುಳಿಯಮೇಶ್ವರ ದೇವರಿಗೆ ನೀಡಿದ ದತ್ತಿಯ ವಿಷಯವಿದೆ, ಮಿತಿ ಹೇಳಿಲ್ಲ.

೩ನೆಯ ದತ್ತಿ : ಸಾಲು 36-55. ಸೋಮರಸ ದಂಡನಾಯಕ, ಈಶ್ವರ ದಂಡನಾಯಕರು ಚೌಂಡರಸನ ಹೆಸರಿನಲ್ಲಿ ಮತ್ತು ತಮ್ಮ ಹೆಸರಿನಲ್ಲಿ "ಚಿಕ್ಕಯ್ಯಪಂಡಿತರ ಕಾಲಂ ಕರ್ಚಿ" ಹುಳಿಯಮೇಶ್ವರ ದೇವರಿಗೆ ಬಿಟ್ಟ ದತ್ತಿ. ಮಿತಿ ಸರ್ವಧಾರಿ ಸಂವತ್ಸರ ಪುಷ್ಯ ಶುದ್ಧ ತ್ರಯೋದಶಿ ಆದಿವಾರ ಅಂದರೆ ಕ್ರಿ.ಶ. ೧೧೬೮ ರ ಡಿಶಂಬರ ತಿಂಗಳಿನ ಒಂದು ದಿನ.

೪ನೆಯ ದತ್ತಿ : ಸಾಲು 56-61. ಸಿಂದ ರಾಚಮಲ್ಲನು ಹುಳಿಯಮೇಶ್ವರ ದೇವರಿಗೆ "ಚಿಕ್ಕಯ್ಯ ಪಡಿತರ ಕಾಲಂ ಕರ್ಚಿ" ಬಿಟ್ಟ ದತ್ತಿ, ಮಿತಿ ಹೇಳಿಲ್ಲ.

೫ನೆಯ ದತ್ತಿ : ಸಾಲು 62-64. ಸಿಂದ ಹರಿಹರದೇವನು "ಚಿಕ್ಕಯ್ಯ ಪಂಡಿತರ ಕಾಲಂ ಕರ್ಚಿ" ಹುಳಿಯಮೇಶ್ವರನಿಗೆ ಬಿಟ್ಟ ದತ್ತಿ ಮಿತಿ ಹೇಳಿಲ್ಲ.

ಇಲ್ಲಿಯ ಎರಡನೆಯ ದತ್ತಿಭಾಗದಲ್ಲಿ

---

೧. ಈ ಶಾಸನವನ್ನು ಅಚ್ಚುಮಾಡಿ ತಂದುಕೊಟ್ಟ ನನ್ನ ವಿದ್ಯಾರ್ಥಿಮಿತ್ರ ಶ್ರೀ ಮುಕ್ಕುಂದಿಮಠ ಅವರ ನೆರವನ್ನು ನೆನೆಯುತ್ತೇನೆ.

ಶ್ರೀ ಸಕಳದಿವಿಜಪತಿ ಪರ ।
ಮೇಶಂ ಶ್ರೀ ಶಂಭು ಹುಳಿಯಮೇಶ್ವರದೇವಂ ।
ಭಾಸುರ ಶಶಾಂಕಜೂಟನು ।
ಮೇಶಂ ನಮಗೀಗೆ ಸಕಳಸುಖಸಂಪದಮಂ ॥

ಕುನ್ತಳ ಕಾನ್ತೆಗೆ ನೋಡಲು ।
ಕಿನ್ನಿದೆ ಕನ್ನಡಿಯೆನಿಪ್ಪ ಕೆಳವಾಡಿಯೊಳ ।
ತ್ಯನ್ತ ಶುಭನಿಳಯ ಗೌರೀ ।
ಕಾನ್ತಂ ಶ್ರೀ ಹುಳಿಯಮೇಶ್ವರಂ ನೆಲಸಿರ್ದನು ॥

ಎಂದು ಹೇಳಿದ ತರುವಾಯ, ಚೌಂಡರಸನ ಮಂತ್ರಿ ಸೋಮದಂಡನಾಥ, ಸೋಮದಂಡನಾಥನ ತಮ್ಮ ಈಶ್ವರದಂಡನಾಥ, ಈಶ್ವರದಂಡನಾಥನು ಕೆಳವಾಡಿ ನಾಡನ್ನಾಳುತ್ತಿದ್ದ ವಿಷಯ, ಓರುವಾಯಿಯ ಮಲ್ಲಚಮೂವಲ್ಲಭ ಮತ್ತು ಚಿಕ್ಕಮಲ್ಲದೇವ ಚಮೂಪ, ಇವರ ಮತದಂತೆ ಈಶ್ವರದಂಡನಾಥನು ಹುಳಿಯಮೇಶ್ವರ ದೇವರಿಗೆ ದತ್ತಿ ಬಿಟ್ಟ ವಿಷಯಗಳೊಂದಿಗೆ ೨ನೆಯ ದತ್ತಿ ಕೊನೆಗೊಳ್ಳುತ್ತದೆ.

ಚಿಕ್ಕಯ್ಯನನ್ನು ಕುರಿತು ವಿವೇಚಿಸಬೇಕಾದ ನಮಗೆ ೩, ೪ ಮತ್ತು ೫ನೆಯ ದತ್ತಿಗಳು ಪ್ರಮುಖವಾಗಿದ್ದು ಅವುಗಳ ಮುಖ್ಯ ಬರೆವಣಿಗೆ ಇಂತಿದೆ :

ಸಕಳ ಸುರ ಸಿದ್ಧ ಕಿನ್ನರ ।
ನಿಕರ ತಿರೀಟ ಬಹುರತ್ನ ಕೋಟಿರಂಜಿತಚರಣಂ ।
ಸಕಳಗುರು ಹುಳಿಯಮೇಶಾ ।
ಕರುಣದ ಭೃತ್ಯ ನಮ್ಮ ಚಿಕ್ಕಯತೀಂದ್ರಂ ॥

ಲಾಳ ವರಾಳ ಗೂರ್ಜರ ತುರುಷ್ಕ ಹಿಮಾಚಳ ಮೇರೆಯಪ್ಪಿನಂ
ಕೇಳಿರೆ ಬೆಂಗಿಮಂಡಳ ಕಳಿಂಗ ಕುಳಂ ಜಳರಾಶಿ ಪೂರ್ಬ್ಬಕಂ ।
ಚೋಳ ದಿಶಾವರಂ ನೆಗಳ್ದ ತೆಂಕಣ ಕೊಂಕಣ ಪಾಡುತಿಪ್ಪರೀ ।
ಪಾಳಿತ ಕೀರ್ತಿಯಂ ಹುಳಿಯಮೇಶನ ಗೀತೆವ ಲೋಕಲೋಕದೊಳು ॥

ತರ್ಕ್ಕ ವ್ಯಾಕರಣಂಗಳು ।
ಅಕ್ಕರಮುಂ ಶಬ್ದಶಾಸ್ತ್ರಮುಂ ವೋದುಗಳಂ।
ತಿಕ್ಕೆ ಶಿವಭಕ್ತಿಯೊಳು [ಸವೆ।
ದ] ಕೆಯ್ಯಂ ಹಲರು ಮೆಚ್ಚಲೀ ಚಿಕ್ಕಯ್ಯ ॥

ದಿಕ್ಕರಿಯ ಕಟದ ತಳದೊಳು ।
ಮಿಕ್ಕ ಸುರದ್ರುಮದ ಮೇರುಗಿರಿ ಮನ್ದಿರದೊಳು ।
ಬೊಕ್ಕನೆ ಕೀರ್ತಿಲತಾವಧು ।
ಚಿಕ್ಕಯ್ಯನ ಹೆಸರ ಜಸವ ಬರೆಯಿಸುತಿರ್ದಳು ॥

ಶ್ರೀ ಸ್ವಸ್ತಿ ಶ್ರೀಮತು ಸರ್ಬ್ಬಧಾರಿ ಸಂವತ್ಸರದ ಪುಷ್ಯ ಸುದ್ಧ ತ್ರಯೋದಶಿ ಆದಿವಾರ ದಂದುತ್ತರಾಯಣ ಸಂಕ್ರಾನ್ತಿ ಪರ್ಬ್ಬನಿಮಿತ್ತದಿಂ ಶ್ರೀಮನ್ಮಹಾಮಂಡಳೇಶ್ವರ ಚೌಂಡದೇವರಸರ ಹೇಳಿಕೆಯಿಂ ಮಹಾಪ್ರದಾನ ಸೋವರಸ ದಂಡನಾಯಕರು ಮತ್ತು ಈತನ ತಮ್ಮ ಈಶ್ವರದಂಡನಾಯಕರು ಶ್ರೀಮನ್ಮಹಾಲಿಂಗಂ ಹುಳಿಯಮೇಶ್ವರ ದೇವರಂಗಭೋಗಕ್ಕಂ ಖಂಡಸ್ಫುಟಿತ ಜೀರ್ಣೋದ್ಧಾರಕ್ಕವೆಂದು ಆ ಮಠದಾಚಾರ್ಯರಪ್ಪ ಚಿಕ್ಕಯ್ಯಪಂಡಿತರ ಕಾಲಂ ಕರ್ಚಿ...." (ದತ್ತಿ ವಿವರಣೆಯಿದೆ).

"ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಮಂಡಳೇಶ್ವರ ಶಿವಪಾದಶೇಖರಂ ಮಾಹೇಶ್ವರಜನ ಪ್ರಸಾದಕಂ ಪರಬಳಸಾದಕಂ ಸಿಂದಕುಳ ಕಮಳಮಾರ್ತಾಂಡ ಶ್ರೀ ಕಲಿದೇವರ ಪಾದಾರಾಧಾಕನಪ್ಪ ರಾಚಮಲ್ಲದೇವರಸರು ಸೂರ್ಯಗ್ರಹಣ ನಿಮಿತ್ತದಿಂ ..... ಶ್ರೀಮನ್ಮಹಾಲಿಂಗ ಹುಳಿಯಮೇಶ್ವರ ದೇವರಂಗಭೋಗಕ್ಕೆಂದು ಆ ದೇವರ ಮಠರಾಚಾರ್ಯರಪ್ಪ ಚಿಕ್ಕಯ್ಯಪಂಡಿತರ ಕಾಲಂ ಕರ್ಚಿ......" (ದತ್ತಿ ವಿರಣೆಯಿದೆ).

"ಸ್ವಸ್ತಿ ಶ್ರೀಮನ್ಮಹಾಂಡಳೇಶ್ವರಂ ಪಾತಾಳಚಕ್ರವರ್ತಿ ಸಿಂದನಾರಾಯಣಂ ನುಡಿದಂತೆಗಂಡನುಂ ನೀತಿಚಾಣಕ್ಯನುಂ ಶ್ರೀಮತು ಕಪಾಳೇಶ್ವರದೇವರ ಪಾದಾರಾಧಕಂ ಹರಿಹರದೇವರಸರು.... ಶ್ರೀಮನ್ಮಹಾಲಿಂಗಂ ಹುಳಿಯಮೇಶ್ವರದೇವರಂಗಭೋಗಕೆಂದು ಆ ದೇವರ ಮಠದಾಚಾರ್ಯ್ಯರಪ್ಪ ಚಿಕ್ಕಯ್ಯಪಂಡಿತರ ಕಾಲಂ ಕರ್ಚಿ...." (ದತ್ತಿ ವಿವರಣೆಯಿದೆ. ಇನ್ನೆರಡು ಚಿಕ್ಕ ದತ್ತಿಗಳಿವೆ.) ಇನ್ನು ಈ ಉದ್ಧರಣೆಗಳನ್ನು ವಿವೇಚಿಸಬಹುದು.

ಚಿಕ್ಕಯ್ಯನ ಕಾಲ :

ಎಲಬುರ್ಗಿಯ ಸಿಂದ ಚಾವುಂಡII, ಕುರಗೋಡ ರಾಚಮಲ್ಲ I, ಮತ್ತು ಸಿಂದ ಹರಿಹರದೇವ - ಈ ಮೂವರಿಂದ ಚಿಕ್ಕಯ್ಯ ದಾನ ಪಡೆದಿದ್ದಾನೆ. ಸಿಂದಚಾವುಂಡನು ದತ್ತಿ ನೀಡಿದ ಕಾಲ "ಸರ್ಬ್ಬಧಾರಿ ಸಂವತ್ಸರ ಪುಷ್ಯ ಸುದ್ದ ತ್ರಯೋದಶಿ ಆದಿವಾರದಂದುತ್ತರಾಯಣ ಸಂಕ್ರಾನ್ತಿ" ಅಂದರೆ ಕ್ರಿ.ಶ. ೧೧೬೮ರ ಡಿಸೆಂಬರದ ಒಂದು ದಿನ. ರಾಚಮಲ್ಲನು ದತ್ತಿ ನೀಡಿದ ಮಿತಿ ಈ ಶಾಸನದಲ್ಲಿ ಹೇಳಿಲ್ಲವಾದರೂ ಆತನ ಕಾಲ ಕ್ರಿ.ಶ. ೧೧೭೩-೭೭ ಎಂಬುದು ಗೊತ್ತಿದ್ದ ಸಂಗತಿ. ಹರಿಹರದೇವನು ದತ್ತಿ ನೀಡಿದ ಮಿತಿ ಹೇಳಲಾಗಿಲ್ಲ; ಈತನಾರೆಂಬುದೂ ನನಗೆ ತಿಳಿದುಬಂದಿಲ್ಲ. ಬಹುಶಃ ಇದೇ ಸುಮಾರಿಗೆ ಬಾಳಿದ ವ್ಯಕ್ತಿಯಾಗಿರಬೇಕು.

ಇದೆಲ್ಲವನ್ನು ನೋಡಿದರೆ ಕ್ರಿ. ಶ. ೧೧೬೮ರಲ್ಲಿದ್ದ ಚಿಕ್ಕಯ್ಯನು ಕನಿಷ್ಠ ಪಕ್ಷ ಬಸವಣ್ಣನವರ ಸಮಕಾಲೀನನಾಗಿದ್ದವನು ಮುಂದೆ ಇನ್ನೂ ಕೆಲವು ವರುಷ ಬದುಕಿರಬಹುದು. ಅದಕ್ಕಾಗಿ ಕವಿಚರಿತೆಕಾರರು ಈತನ ಕಾಲ ಕ್ರಿ.ಶ. ೧೧೬೦ ಎಂದಿರುವುದು ಸತ್ಯಕ್ಕೆ ದೂರವಾಗಿಲ್ಲ.

ಚಿಕ್ಕಯ್ಯನ ವಚನಕ್ಕೆ ಸಂಬಂಧಿಸಿದ "ಅಂದು ಕಲ್ಯಾಣದಲ್ಲಿ ಹುಸಿಯನೆ ದಿಟವ ಮಾಡಿ ಬದನೆಕಾಯಿ ಲಿಂಗವ ಮಾಡಿ ಸಲಿಸನೆ ನಮ್ಮ ಬಸವಣ್ಣನು" ಈ ವಾಕ್ಯದಲ್ಲಿ ಬಸವನನ್ನು 'ನಮ್ಮ ಬಸವಣ್ಣ' ಎಂದು ಕರೆದಿರುವುದನ್ನು ನೋಡಿದರೆ ಚಿಕ್ಕಯ್ಯನು ಇವನನ್ನು ಚೆನ್ನಾಗಿ ಬಲ್ಲವಾಗಿರಬೇಕು. ಅಲ್ಲದೆ ಅವನು ಹಿಂದೆ ಮಾಡಿದ ಪವಾಡವನ್ನು ಕೆಲವು ಕಾಲದ ಮೇಲೆ ವರ್ಣಿಸಿರುವ ಹಾಗೆ ತೋರುತ್ತದೆ"*

---

* ಕ.ಕ. ಚರಿತೆ, ಅನುಬಂಧ II, ಪುಟ 49, 1961 (ಪರಿಶೋಧಿತ ಮುದ್ರಣ.)

ಎಂದು ಕವಿಚರಿತೆಕಾರರು ಊಹಿಸಿದುದೂ ಸತ್ಯಕ್ಕೆ ದೂರವಾಗಿಲ್ಲ. ಒಟ್ಟಿನಲ್ಲಿ ಬಸವಣ್ಣನವರ ಸಮಕಾಲೀನನಾಗಿದ್ದ ಚಿಕ್ಕಯ್ಯನು ಇನ್ನೂ ಕೆಲವು ವರುಷ ಬದುಕಿದ್ದನೆಂಬುದು ಸ್ಪಷ್ಟ.

ಹುಳಿಯುಮೇಶ್ವರ-ಉಳಿಯುಮೇಶ್ವರ :

ಈ ಶಾಸನದ ವ್ಯೆತುಂಬ ಹುಳಿಯುಮೇಶಂ, ಹುಳಿಯುಮೇಶ್ವರದೇವಂ, ಶಂಭು ಹುಳಿಯುಮೇಶ್ವರದೇವಂ, ಶ್ರೀ ಶಂಭುಹುಳಿಯುಮೇಶ್ವರದೇವಂ, ಶ್ರೀ ಶರಣು ಹುಳಿಯುಮೇಶ್ವರದೇವಂ, ಶ್ರೀಮನ್ಮಹಾಲಿಂಗ ಹುಳಿಯುಮೇಶ್ವರ ಎಂಬ ಪದಗಳು ದೇವರ ಹೆಸರುಗಳಾಗಿ ಬಳಕೆಗೊಂಡಿವೆ.[೨] ಶಿವತತ್ವ ಚಿಂತಾಮಣಿಯಲ್ಲಿ (38-182)

..........ಓಹಿಲಪುರದೊಳರ್ತಿಯಿಂ ।
ದೆಸೆಗೆಸೆವ ಭಕ್ತಿಯಿಂದಿಪ್ಪನುಂ ಉಳಿಯುಮೇಶ್ವರನೆಂಬ ಶಿವಭಕ್ತನು ।

ಎಂಬ ಹೇಳಿಕೆಯೊಂದಿದೆ. ಮೇಲಿನ ಶಾಸನೋಕ್ತ ಹೆಸರನ್ನು ಗಮನಿಸಿದರೆ, "ಹುಳಿಯುಮೇಶ್ವರನೆಂಬ ಶಿವಭಕ್ತನು" ಎಂಬುದೇ ಇಲ್ಲಿ ಇರಬೇಕಾದ ಪಾಠವೆಂದು ದೃಢವಾಗುತ್ತದೆ. ಶಾಸನದಲ್ಲಿ ದೇವರ ಹೆಸರಾಗಿರುವ ಈ ಪದ, ಶಿವತತ್ವಚಿಂತಾಮಣಿಯಲ್ಲಿ ವ್ಯಕ್ತಿ ಹೆಸರಾಗಿ ಬಳಕೆಗೊಂಡಿದೆ.

ಚಿಕ್ಕಯ್ಯನೆಂಬ ಒಬ್ಬ ಶರಣನ ಮುದ್ರಿಕೆ "ಉಳಿಯುಮೇಶ್ವರ" ಎಂದು ಈಗ ಪ್ರಚಾರದಲ್ಲಿದೆ. "ಎನ್ನ ದೇವಯುಳಿಯುಮೇಶ್ವರನ ಪಿಂಗದ ಚಿಕ್ಕ" ಮೊದಲಾದ ವಚನವಾಕ್ಯಗಳು ಇದನ್ನು ಸ್ಪಷ್ಟಪಡಿಸುತ್ತವೆ. ಈ ವಚನಕಾರ ಉಳಿಯುಮೇಶ್ವರ ಚಿಕ್ಕಯ್ಯನು ಈ ಶಾಸನದಲ್ಲಿ ಕಂಡುಬರುವ ಹುಳಿಯುಮೇಶ್ವರ ದೇವರ ಮಠದಾಚಾರ್ಯ ಚಿಕ್ಕಯ್ಯನೇ ಎಂದು ಬೇರೆ ಹೇಳಬೇಕಿಲ್ಲ. ಇಬ್ಬರ ಕಾಲ ಒಂದೇ ಎಂಬುದನ್ನು ಇಲ್ಲಿ ನೆನೆಯಬಹುದು.

ವಚನದಲ್ಲಿ ಬರುವ ೧. ಉಳಿಯುಮೇಶ್ವರನ ಪಿಂಗದ ಚಿಕ್ಕ ೨. ಉಳುಮೇಶ್ವರನ ಲಿಂಗವೆ ಬಾರಯ್ಯ. ೩. ಉಳ್ಳಿಮೇಶ್ವರ ಲಿಂಗವೆ ಬಾರಯ್ಯ ೪. ಉಳಿಮೇಶ್ವರನ ಪಿಂಗದ ಚಿಕ್ಕ ಎಂಬ ಪಾಠಗಳನ್ನು ನೋಡಿದರೆ, ಇಲ್ಲಿ ಮುದ್ರಿಕೆಯ ಅಲ್ಪ ವ್ಯತ್ಯಾಸದ ನಾಲ್ಕು ರೂಪಗಳಿದ್ದುದು ಸ್ಪಷ್ಟವಾಗುತ್ತದೆ. ಇವು ;'ಹುಳಿಯುಮೇಶ್ವರ' ಎಂಬ ಪದದ ವ್ಯತ್ಯಸ್ತರೂಪಗಳು, ಆದುದರಿಂದ ಇನ್ನು ಮುಂದೆ ಚಿಕ್ಕಯ್ಯನ ವಚನಗಳನ್ನು ಸಂಪಾದಿಸುವವರು "ಹುಳಿಯುಮೇಶ್ವರ" ಎಂಬ ಯೋಗ್ಯ ಪಾಠವನ್ನೇ ಮುದ್ರಿಕೆಯಾಗಿ ಸ್ವೀಕರಿಸಬೇಕಾಗುತ್ತದೆ.

ಚಿಕ್ಕಯ್ಯ :

ಶರಣಸಮುದಾಯದಲ್ಲಿ ಕಂಡುಬರುವ ನಿಂಜಲಿಂಗ ಚಿಕ್ಕಯ್ಯ, ಬೊಕ್ಕಸದ ಚಿಕ್ಕಯ್ಯ, ಮಲಹರಕಾಯಕದ ಚಿಕ್ಕಯ್ಯಗಳಿಗಿಂತ ಈ ಹುಳಿಯುಮೇಶ್ವರ ಚಿಕ್ಕಯ್ಯ ಭಿನ್ನವ್ಯಕ್ತಿ. ಈತನ ವರ್ಣನೆ ಶಾಸನದಲ್ಲಿ

---

೨. ಭೈರವದೇವನು "ಮಲ್ಲಿಪಟ್ಟಣಮಂ ಪೊಕ್ಕು ಉಳಿಯುಮೇಶ್ವರಲಿಂಗಮಂ ಕಂಡು ನುತಿಸಿ" ಎಂದು ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ (ಪು. ೫)ದಲ್ಲಿ ಹೇಳಲಾಗಿದೆ. ಇಲ್ಲಿ 'ಉಳಿಯುಮೇಶ್ವರಲಿಂಗ' ಮತ್ತು ಶಾಸನನೋಕ್ತ ಹುಳಿಯುಮೇಶ್ವರ ಒಂದೇ ಆಗಿದ್ದ ಪಕ್ಷದಲ್ಲಿ ಈ ದೇವರಗುಡಿ ಗ್ರಾಮದ ಪ್ರಾಚೀನ ಹೆಸರು ಮಲ್ಲಿಪಟ್ಟಣವೆಂದೂ, ಭೈರದೇವನು ಅಲ್ಲಿ ದರ್ಶನವಿತ್ತಿದ್ದನೆಂದೂ ಭಾವಿಸಬೇಕಾಗುತ್ತದೆ. ಈ ಹುಳಿಯುಮೇಶ್ವರ ದೇವಾಲಯದಿಂದ ಒಂದು ಮೈಲು ಅಂತರದಲ್ಲಿ ಮಲ್ಲಾಪುರ ಎಂಬ ಹೆಸರಿನ ಗ್ರಾಮವಿದೆ. ಇದೇ ಮಲ್ಲಿಪಟ್ಟಣವಾಗಿರಬಹುದು.

ಮನೋಜ್ಞವಾಗಿ ಬಿತ್ತರಗೊಂಡಿದೆ. ಅವನೊಬ್ಬ ಅನುಭಾವಿ, ಭಕ್ತನೆಂದು ಬಣ್ಣಿಸಲಾಗಿದೆ. ಈಗ ಉಪಲಬ್ಧವಿರುವ ಹಾಡು ಮತ್ತು ವಚನಗಳು ಅವನ ಪ್ರತಿಭೆಗೆ ಸಾಕ್ಷಿಯಾಗಿವೆ. ಕವಿಚರಿತೆಕಾರರು ಈತನ ಒಂದು ವಚನ ಹಾಗೂ ಹಾಡಿಗೆ ಸಂಬಂಧಿಸಿದ ಒಂದು ಷಟ್ಪದಿಯನ್ನು ಉದ್ಧರಿಸಿದ್ದಾರೆ. ಈ ಹಾಡನ್ನು ಡಾ. ಎಲ್.ಬಸವರಾಜು ಅವರ ಶಿವದಾಸ ಗೀತಾಂಜಲಿ (ಪು.೫)ಯಲ್ಲಿ ಇಡಿಯಾಗಿ ಕೊಟ್ಟಿದ್ದಾರೆ. ಶ್ರೀ ಡಿ.ಎಲ್.ಎನ್. ಅವರು "ಇವನ ವಚನಗಳಲ್ಲಿ ೩ ಮಾತ್ರ ದೊರೆತಿವೆ" ಎಂದು ಹೇಳಿದ್ದಾರೆ. ಆದರೆ ನನಗೆ ದೊರೆತುವು ೧೦ ವಚನ, ೧ ಹಾಡು (ಅನುಬಂಧ ನೋಡಿರಿ.)

ಒಂದು ವಿಚಾರ :

ಶಾಸನೋಕ್ತ ಚಿಕ್ಕಯ್ಯನು ಹುಳಿಯಮೇಶ್ವರವೆಂಬ ಸ್ಥಾವರಲಿಂಗದ ಭಕ್ತ. ದೇವಾಲಯ ಜೀರ್ಣೋದ್ಧಾರಕ್ಕಾಗಿ ದತ್ತಿ ಸ್ವೀಕರಿಸಿದ ಆಚಾರ್ಯಪುರುಷ. ಈ ಸ್ಥಾವರಲಿಂಗಪೂಜೆ, ದೇವಾಲಯ ನಿರ್ಮಾಣ, ದಾನಸ್ವೀಕಾರಗಳು ವೀರಶೈವಕ್ಕೆ ವಿರುದ್ಧವಾಗಿರುವುದರಿಂದ ಚಿಕ್ಕಯ್ಯನನ್ನು ವೀರಶೈವನೆನ್ನಲು ಧೈರ್ಯ ಸಾಲದು. ಈತನು "ಶೈವ ನೇಮಸ್ತರ ಕೈಯ್ಯಲುಪದೇಶವಾದರೇನಯ್ಯ ಅಲ್ಲಿ ಏನೂ ವೂಣಯವಿಲ್ಲ; ಪಾರಂಪರ್ಯದಲ್ಲಿ ನಡೆದಿತ್ತಾಗಿ, ನದಿಯ ಮೂಲವನು ಗುರುವಿನ ಮೂಲವನು ಅಜಿಸುವರೆ ? ಗುರುಲಿಂಗಜಂಗಮಸಾಕ್ಷಿಯಾಗಿ ಪಟ್ಟಾಭಿಷೇಕ ಪ್ರಣವಮಂತ್ರದಿಂ ಲಿಂಗದರ್ಶನವಾಯಿತ್ತಾಗಿ, ಕಳೆಯಬಾರದು, ತನ್ನೊಳಗೆ ತಾನಚ್ಚೊತ್ತಿಗೊಂಡಿತ್ತಾಗಿ. ಅಂದು ಬಳ್ಳೇಶ್ವರದ ಮಲ್ಲಯ್ಯಗಳು ಬಳ್ಳವ ಲಿಂಗವ ಮಾಡಿದರೆಂದು ಕಳೆದರೆ ನಮ್ಮ ಪ್ರಮಥರು? ಅಂದು ತಿರುಕಾಳಹಸ್ತಿಯಲ್ಲಿ ಕಪ್ಪಣದೇವರು ಸುಜ್ಞಾನಭಕ್ತಿಯಿಂದ ಸ್ಥಾವರವನೆ ಗುರುರೂಪಮಾಡಿ ಪೂಜಿಸಿದರೆಂದು ಕಳೆದರೆ ನಮ್ಮ ಪುರಾತನರು? ಅಂದು ಕಲ್ಯಾಣದಲ್ಲಿ ಹುಸಿಯನೇ ದಿಟವ ಮಾಡಿ ಬದನೆಕಾಯ ಲಿಂಗವಮಾಡಿ ಸಲಿಸನೆ ನಮ್ಮ ಬಸವಣ್ಣನು? ಇವರೆಲ್ಲರೂ ನಿಮ್ಮ ಭಜಿಸಿ ನಿಮ್ಮಿತ್ತಲಾದರು. ನಾ ನಿನಗೇನ ಮಾಡಿದೆನಯ್ಯ ಉಳಿಯುಮೇಶ್ವರಾ" ಎಂಬ ವಚನದಲ್ಲಿ ಶೈವನೇಮಸ್ತರ ಉಪದೇಶವನ್ನು ಮನ್ನಿಸಿದುದೂ, ಸ್ಥಾವರವನ್ನು ಮೆಚ್ಚಿದುದೂ ಈತನ ಶೈವಮನೋಧರ್ಮವನ್ನು ವ್ಯಕ್ತಪಡಿಸುತ್ತದೆ. ಅದೇ ಸಮಯಕ್ಕೆ "ಎನ್ನಂತರಂಗದ ಜ್ಯೋತಿಯೆ ಬಸವಣ್ಣನಯ್ಯ, ಎನ್ನ ಬಹಿರಂಗದ ಜ್ಯೋತಿಯೆ ಚನ್ನಬಸವಣ್ಣನಯ್ಯ; ಎನ್ನ ಸರ್ವಾಂಗದ ಜ್ಯೋತಿಯೇ ಪ್ರಭುದೇವರಯ್ಯ, ಎಂದು ಶ್ರೀಪಾದದಲ್ಲಿ ಉರಿಕರ್ಪೂರ ಸಂಯೋಗದಂತೆ ಬೆರೆಸಿದೆನಯ್ಯ ಉಳಿಯುಮೇಶ್ವರಾ" ಎಂದು ಹೇಳಿದುದು ಈತನ ವೀರಶೈವಮನೋಧರ್ಮವನ್ನು ವ್ಯಕ್ತಪಡಿಸುತ್ತದೆ. ಅದಕ್ಕಾಗಿ ಚಿಕ್ಕಯ್ಯನು ಕೊಂಡಗುಳಿ ಕೇಶಿರಾಜ, ಕೆಂಭಾವಿ ಭೋಗಣ್ಣ ಮೊದಲಾದವರಂತೆ ವೀರಶೈವನನ್ನು ಮನ್ನಿಸಿದ ಶೈವನೆಂದು ಹೇಳಬಹುದಾಗಿದೆ. ಇದೆಲ್ಲವನ್ನು ಗಮನಿಸಿದರೆ ಸ್ಥಾವರ ಇಷ್ಟಗಳನ್ನು ಸಮಸಮನಾಗಿ ಪೂಜಿಸುತ್ತಿದ್ದ ಶಿವೋಪಾಸಕರಲ್ಲಿ ವಚನರಚನೆ ಸೆಲೆಯೊಡೆದು, ೧೨ನೆಯ ಶತಮಾನದಲ್ಲಿ ಮಹಾಪೂರಗೊಂಡಿತೆಂದು ಈಗಿನ ಮಟ್ಟಿಗೆ ಊಹಿಸಬಹುದಾಗಿದೆ.[೩]

---

೩. ಈ ಶಾಸನದಲ್ಲಿ ಬರುವ ಕೇದಾರಪಂಡಿತ, ಮತ್ತು ಚಿಕ್ಕಯ್ಯಪಂಡಿತ ಎಂಬ ಹೆಸರುಗಳೂ, ಸ್ಥಾವರಲಿಂಗಪೂಜೆಯ ವಿಷಯವೂ ಚಿಕ್ಕಯ್ಯನು ನಕುಲೀಶಪಾಶುಪತ ಇಲ್ಲವೆ ಕಾಳಾಮುಖನಾಗಿಬಹುದೆಂಬ ಸೂಚನೆ ನೀಡುತ್ತವೆ. ಹಾಗಿದ್ದರೆ ವಚನರಚನೆ ಈ ಕಾಳಾಮುಖ ಇಲ್ಲವೆ ನಕುಲೀಶಪಾಶುಪತದಿಂದ ಸೆಲೆಯೊಡೆದು ಶರಣರಲ್ಲಿ ಸಾಗರವಾಗಿರಬಹುದೇ? ಅಥವಾ ವೀರಶೈವ ಶರಣರಲ್ಲಿ ತಲೆದೋರಿದ ಈ ಸಾಹಿತ್ಯಪ್ರಕಾರವನ್ನು ೧೨ನೆಯ ಶತಮಾನದಲ್ಲಿ ಚಿಕ್ಕಯ್ಯ ಪಂಡಿತನಂಥ ಮಿಕ್ಕ ಶೈವರೂ ಅನುಸರಿಸಿದರೇ? ವಿಚಾರಿಸಬೇಕು.

ಅನುಬಂಧ

ಶ್ರೀ ನಂದಿನಾಥ ಭೃಂಗಿನಾಥ ವೀರಭದ್ರಗಣಂಗಳೆಲ್ಲ ನೀವು ಕೇಳಿರೇ, ನಿಮ್ಮ ತೊತ್ತು ಬಂದಿದ್ದಾನೆಂದು ನೀವು ಹೇಳಿರೇ.[೪] ನಿಮ್ಮ ಲೆಂಕ ಬಂದಿದ್ದಾನೆಂದು ನೀವು ಬನ್ನಿರೇ.[೫] ನಿಮ್ಮ ದಾಸ ಬಂದಿದ್ದಾನೆಂದು ನೀವು ಹೇಳಿರೆ.[೬] ಎನ್ನ ದೇವ [ಹುಳಿಯ]ಮೇಶ್ವರ ಪಿಂಗದ[೭] ಚಿಕ್ಕ ಬಂದಿದ್ದಾನೆಂದು ನೀವು ಹೇಳಿರೇ || 1 ||

ವಾರಣಾಸಿ ಅವಿಮುಕ್ತಿಯಿಲ್ಲಿಯಿದಾನೆ. ಹಿಮದ ಕೇತಾರ ವಿರೂಪಾಕ್ಷಯಿಲ್ಲಿಯಿದಾನೆ. ಗೋಕರ್ಣ ಸೇತುರಾಮೇಶ್ವರಯಿಲ್ಲಿಯೆಯಿದ್ದುತೆ ಸಕಳಲಿಂಗ [ಹುಳಿಯ]ಮೇಶ್ವರನಿದಾನೆ || 2 ||

ಶೈವ ನೇಮಸ್ತರ ಕೈಯ್ಯಲ್ಲುಪದೇಶವಾದರೇನಯ್ಯ ಅಲ್ಲಿ ಏನೂ ವೂಣಯ[೮]ವಿಲ್ಲ; ಪಾರಂಪರ್ಯದಲ್ಲಿ ನಡೆದಿತ್ತಾಗಿ. ನದಿಯ ಮೂಲವನು ಗುರುವಿನ ಮೂಲವನು ಅರಸುವರೆ? ಗುರುಲಿಂಗಜಂಗಮ ಸಾಕ್ಷಿಯಾಗಿ ಪಟ್ಟಾಭಿಷೇಕ ಪ್ರಣವಮಂತ್ರದಿಂ ಲಿಂಗದರ್ಶವಾಯಿತ್ತಾಗಿ. ಕಳೆಯಬಾರದು ತನ್ನೊಳಗೆ ತಾನಚ್ಚೊತ್ತಿ ಕರಿಗೊಂಡಿತ್ತಾಗಿ. ಅಂದು ಬಳ್ಳೇಶ್ವರದ ಮಲ್ಲಯ್ಯಗಳು ಬಳ್ಳವ ಲಿಂಗವ ಮಾಡಿದರೆಂದು ಕಳೆದರೆ ಎಮ್ಮ ಪ್ರಮಥರು? ಅಂದು ತಿರುಕಾಳಹಸ್ತಿಯಲ್ಲಿ ಕಪ್ಪಣದೇವರು ಸುಜ್ಞಾನಭಕ್ತಿಯಿಂ ಸ್ಥಾವರವನೆ ಗುರುರೂಪಮಾಡಿ ಪೂಜಿಸಿದರೆಂದು ಕಳೆದರೆ ನಮ್ಮ ಪುರಾತನರು? ಅಂದು ಕಲ್ಯಾಣದಲ್ಲಿ ಹುಸಿಯನೆ ದಿಟವ ಮಾಡಿ ಬದನೆಕಾಯ ಲಿಂಗವ ಮಾಡಿ ಸಲಿಸನೆ ನಮ್ಮ ಬಸವಣ್ಣನು? ಇವರೆಲ್ಲರೂ ನಿಮ್ಮ ಭಜಿಸಿ ನಿಮ್ಮತ್ತಲಾದರು. ನಾ ನಿನಗೇನ ಮಾಡಿದೆನಯ್ಯ [ಹುಳಿಯ]ಮೇಶ್ವರಾ ||3||

ಒಂದು ಯೋನಿಯಲಿ ಬಂದ ದುಃಖವ ನಾನೆಂದಿಗೂ ಕಳೆಯಲಾರೆನಯ್ಯ, ಎಂಬತ್ತುನಾಲ್ಕು ಲಕ್ಷಯೋನಿಯೆಂದಡೆ ಇನ್ನೇವೆನಯ್ಯ, ನೊಂದೆನಯ್ಯ, ನೊಂದೆನಯ್ಯ, ಮತ್ತೊಂದನರಿಯದ ಶಿಶು ನಾನು ಬೆಂದೆನಯ್ಯ, ಶಿವಶಿವಾ ಎನ್ನ ಕಂದ ನೀ ಬಾರಾಯೆಂದು ಕಂಬನಿಯ ತೊಡದು, ಎತ್ತಿ ಆನಂದದಿಂ, ಕಂದೆಱ [ಹುಳಿಯ]ಮೇಶ್ವರಾ ||5||

ಎಲುದೋರೆ ಸರಸವಾಡಲೇನು ಭೃಂಗೀಶನೇ? ಸೀಳಿ ಹೊದೆಯಲೇನು ಗಜಾಸುರನೇ? ಹೆಣಲೀಲೆಯಾಡಲೇನು ಅಂಧಕಾಸುರನೇ? ಮನವನಲ್ಲಾಡಲೇನು ಸಿರಿಯಾಳನೆ? ನೊಣ ವ್ರಣದೋಪಾದಿ ನಾನು. ಎನ್ನನಿನಿತು ಬಳಲಿಸುವರೆ? ಕರುಣಿಸು ಕರುಣಾಕರ [ಹುಳಿಯ]ಮೇಶ್ವರಾ ||6||

ಎಲುವೊಡೆದು ತನುಕರಗಿ ಮನವು ಜಜ್ಜರವೋಗಿ ಲಿಂಗದಲ್ಲಿ ನೀರುನೀರಾಗಿ ಬೆರಸಲಿಬೇಕು. ಜಂಗಮದಲ್ಲಿ ವಾರಿಕಲ್ಲಾಗಿ ಕರಗಲಿಬೇಕು. ಸರ್ವಾಂಗ ಪುಳಕಂಗಳೊಡೆದು ಕಡಲುಗಳಾಗಿ ಸದ್ಗುರುವಿನೊಳು ಬೇರಿಲ್ಲದಂತೆ ಬೆರೆಯಿಸಿರಬೇಕು. ಇಂತೀ ತ್ರಿವಿಧಲಿಂಗವ ಕೂಡಿದಲ್ಲದೆ ಸುಖವಿಲ್ಲ ನೋಡಾ. ಇಂತಪ್ಪ ನಿರ್ವಾಣ ನಿಜಪದವೆಂದಪ್ಪುದೋ [ಹುಳಿಯ]ಮೇಶ್ವರಾ ||7||

---

೪. ಕೇಳಿರೇ (ಪ್ರತಿ 434).
೫. ಕೇಳಿರೇ ಬನ್ನಿರೇ (ಪ್ರತಿ 478).
೬. ಕೇಳಿರೇ (ಪ್ರತಿ 438).
೭. ಪಿಂಗುವ (ಪ್ರತಿ 37,40)
೮. ವುಣಯ (ಪ್ರತಿ 40).

ಎನ್ನಂತರಂಗದ ಜ್ಯೋತಿಯೇ ಬಸವಣ್ಣನಯ್ಯ. ಎನ್ನ ಬಹಿರಂಗದ ಜ್ಯೋತಿಯೇ ಚೆನ್ನಬಸವಣ್ಣನಯ್ಯ. ಎನ್ನ ಸರ್ವಾಂಗದ ಜ್ಯೋತಿಯೇ ಪ್ರಭುದೇವರಯ್ಯ. ಇಂತಿವರ ಶ್ರೀಪಾದದಲ್ಲಿ ಉರಿಕರ್ಪುರ ಸಂಯೋಗದಂತೆ ಬೆರೆಸಿದೆನಯ್ಯ [ಹುಳಿಯ]ಮೇಶ್ವರಾ ||8||

ಬಸವಣ್ಣನೆ ಎನಗೆ ಗುರುಸ್ವರೂಪನಯ್ಯ, ಚೆನ್ನಬಸವಣ್ಣನೆ ಎಂಗೆ ಲಿಂಗಸ್ವರೂಪನಯ್ಯ, ಸಿದ್ಧರಾಮನೆ ಎನಗೆ ಜಂಗಮಸ್ವರೂಪನಯ್ಯ. ಮರುಳ ಶಂಕರದೇವರೇ ಎನಗೆ ಪ್ರಸಾದರೂಪನಯ್ಯ. ಪ್ರಭುದೇವರೇ ಎನಗೆ ಜ್ಞಾನಸ್ವರೂಪನಯ್ಯ, ಇಂತಿವರ ಶ್ರೀಪಾದದಲ್ಲಿ ಉರಿವುಂಡ ಕರ್ಪುರದಂತಡಗಿದೆನಯ್ಯ [ಹುಳಿ]ಮೇಶ್ವರಾ ||9||

ಎನ್ನ ಮನವ ಮಂಚವ ಮಾಡಿ ತನುವ ಹಚ್ಚವಡಿಸುವೆ ಬಾರಯ್ಯ. ಎನ್ನಂತರಂಗದಲ್ಲಿಪ್ಪೆ ಬಾರಯ್ಯ. ಎನ್ನ ಬಹಿರಂಗದಲ್ಲಿಪ್ಪೆ ಬಾರಯ್ಯ. ಎನ್ನ ಶಿವಲಿಂಗ ದೇವನೆ ಬಾರಯ್ಯ. ಎನ್ನ ಭಕ್ತ ದೇಹಿಕ ದೇವನೆ ಬಾರಯ್ಯ. ಎನ್ನ ಭಕ್ತವತ್ಸಲನೆ ಬಾರಯ್ಯ. ಓಂ ನಮಃಶಿವಾಯ ಎಂದು ಕರೆವೆನು [ಹುಳಿಯ]ಮೇಶ್ವರ ಲಿಂಗವೆ ಬಾರಯ್ಯ ||10||

[೧ ಪಲ್ಲವ, ೫ ವಾರ್ಧಕ ಷಟ್ಪದಿಗಳಿಂದ ಕೂಡಿದ ಒಂದು ಹಾಡು ಈತನ ಹೆಸರಿನಲ್ಲಿ ಲಭಿಸುತ್ತದೆ. 'ಶಿವದಾಸಗೀತಾಂಜಲಿ', ಪು. ೫ ನೋಡಿರಿ.]

■■

ಆಕರ : ಮಾರ್ಗ ಸಂಪುಟ-೨

೩೧

ಗುಂಡಬ್ರಹ್ಮಯ್ಯಗಳ ವಿಗ್ರಹ

ವೀರಶೈವ ಪರಂಪರೆಯಲ್ಲಿ ಜಗದೇವ, ಮಲ್ಲಿಬೊಮ್ಮಣ್ಣಗಳಂತೆ ಕೇಳಿ ಬರುವ ಇನ್ನೊಂದು ಅಖಂಡನಾಮ ಗುಂಡಬ್ರಹ್ಮಯ್ಯಗಳದು. ಜಗದೇವ ಮತ್ತು ಮಲ್ಲಿಬೊಮ್ಮಣ್ಣಗಳೇ ಗುಂಡಯ್ಯ ಮತ್ತು ಬ್ರಹ್ಮಯ್ಯಗಳಾಗಿ ಹುಟ್ಟಿದರೆಂದು ಈ ಜೋಡಿಗಳಿಗೆ ಅವತಾರದ ಕೊಂಡಿ ಹಾಕಿದ್ದಾನೆ, ವಿರೂಪಾಕ್ಷ ಪಂಡಿತ. ಕಾವ್ಯ, ಯಕ್ಷಗಾನ, ಸ್ಥಳವದಂತಿಗಳಲ್ಲಿ ಸಿಗುವ ಇವರ ಚರಿತ್ರೆ ಹೀಗಿದೆ :

ಬಿಜ್ಜಳನನ್ನು ಕೊಂದ ಜಗದೇವ ಮಲ್ಲಿಬೊಮ್ಮಣ್ಣಗಳು ಶಿವನಾಜ್ಞೆಯಂತೆ ಓರುಗಲ್ಲಿ ಪಟ್ಟಣದಲ್ಲಿ ಗುಂಡಯ್ಯ, ಬ್ರಹ್ಮಯ್ಯಗಳಾಗಿ ಹುಟ್ಟುತ್ತಾರೆ. ಇವರ ಭಕ್ತಿಪರೀಕ್ಷೆಗಾಗಿ ಶಿವನು ಕಳ್ಳನ ವೇಷಧರಿಸಿ ಕಾಕತೀಯ ಗಣಪತಿರಾಯನ ಮನೆಗೆ ಕನ್ನವಿಕ್ಕಿ ಓಡಿಬಂದು, ಈ ಗುಂಡಬ್ರಹ್ಮಯ್ಯರ ಮೊರೆ ಹೋಗುತ್ತಾನೆ. ಮೊರೆಹೊಕ್ಕವರನ್ನು ರಕ್ಷಿಸುವ ಕರ್ತವ್ಯಕ್ಕೆ ಕಟ್ಟುಬಿದ್ದು ಗುಂಡಬ್ರಹ್ಮಯ್ಯಗಳು ರಾಜಾಜ್ಞೆಯಂತೆ ಶೂಲವೇರುವಲ್ಲಿ ಶಿವ ಪ್ರತ್ಯಕ್ಷನಾಗುತ್ತಾನೆ. ಇದು ಕಥೆಯ ಮುಖ್ಯಸ್ವರೂಪ.

ಬನವಾಸಿ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿಯಲ್ಲಿ ಕೆತ್ತಲಾದ ಶರಣರ ವಿಗ್ರಹಗಳ ಜೊತೆ ಗುಂಡಬ್ರಹ್ಮಯ್ಯಗಳ ನಿಂತ ವಿಗ್ರಹವಿದ್ದುದಾಗಿ ಹದಿನೈದು ವರುಷಗಳ ಹಿಂದೆ ಡಾ. ಗದ್ದಗಿಮಠ ಅವರು ಹುಡುಕಿ ಹೇಳಿದ್ದರು[೧]. ಇತ್ತೀಚೆ ಡಾ. ವಿ. ಶಿವಾನಂದ ಅವರು ಸಂಪಾದಿಸಿ ಪ್ರಕಟಿಸಿದ 'ಗುಂಡಬ್ರಹ್ಮಯ್ಯನ ಸುವ್ವಿ'ಯಲ್ಲಿ ಗುಂಡೇನಹಳ್ಳಿಯಲ್ಲಿರುವ ಗುಂಡಬ್ರಹ್ಮಯ್ಯಗಳ ಕುಳಿತ ವಿಗ್ರಹದ ಚಿತ್ರವೊಂದು ಪ್ರಕಟವಾಗಿದೆ. ಕೆಳಗೆ ಹೆಸರು ಕೆತ್ತಿರದಿದ್ದರೂ ಜನತೆ ಪರಂಪರಾಗತವಾಗಿ ಕರೆಯುವ ಹೆಸರು, ಆಚರಿಸುವ ಜಾತ್ರೆ, ಹೇಳುವ ವದಂತಿಗಳಿಂದಾಗಿ, ಇದು ಗುಂಡಬ್ರಹ್ಮಯ್ಯಗಳ ವಿಗ್ರಹವೆಂಬುದು ಸತ್ಯ.[೨] ಶಿಲ್ಪವಿನ್ಯಾಸದಲ್ಲಿ ಇದನ್ನು ಹೋಲುವ ಇನ್ನೊಂದು ವಿಗ್ರಹ ಚಿತ್ರದುರ್ಗ ಸಂಪಗೆ ಸಿದ್ಧೇಶ್ವರ ದೇವಾಲಯದಲ್ಲಿದೆ ಎಂದು ಸೂಚಿಸಿದ್ದಾರೆ. ಹಾಗಿದ್ದರೆ ಇವುಗಳಲ್ಲಿ ಬನವಾಸಿ ವಿಗ್ರಹದ ಶಿಲ್ಪವಿನ್ಯಾಸ ವರ್ಗಕ್ಕೆ, ಗುಂಡೇನಹಳ್ಳಿ ಚಿತ್ರದುರ್ಗ ವಿಗ್ರಹಗಳ ಶಿಲ್ಪವಿನ್ಯಾಸ ಇನ್ನೊಂದು ವರ್ಗಕ್ಕೆ ಒಳಪಡುತ್ತವೆ. ಇಲ್ಲಿ ಗುಂಡೇನಹಳ್ಳಿ, ಚಿತ್ರದುರ್ಗ ವರ್ಗಕ್ಕೆ ಸಂಬಂಧಪಡುವ ಒಂದು ಹೊಸ ವಿಗ್ರಹವನ್ನು ಸೂಚಿಸಬಯಸುತ್ತೇನೆ.

---

೧. ಈ ವಿಗ್ರಹದ ಚಿತ್ರವನ್ನು ಕ. ಭಾ. 6-3ರಲ್ಲಿ ನೋಡಬಹುದು. (ಬನವಾಸಿ ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು-ಡಾ. ವಿ. ಶಿವಾನಂದ).

೨. ಡಾ. ವಿ. ಶಿವಾನಂದ : ಗುಂಡಬ್ರಹ್ಮಯ್ಯಗಳ ಚರಿತ್ರೆ, ಪೀಠಿಕೆ ಪು. 23.

ನಾಲ್ಕು ವರ್ಷಗಳ ಹಿಂದೆ 'ಶಾಸನಗಳಲ್ಲಿ ಶಿವಶರಣರು' ಪುಸ್ತಕವನ್ನು ಬರೆಯುವಾಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ "ಎರಡು ವ್ಯಕ್ತಿಗಳು ಕೈಯಲ್ಲಿ ಇಷ್ಟಲಿಂಗ ಹಿಡಿದ ಮೂರ್ತಿ"ಯೊಂದು ನನ್ನ ಗಮನವನ್ನು ಬಲವಾಗಿ ಸೆಳೆಯಿತು. ಇದು ಗುಂಡಬ್ರಹ್ಮಯ್ಯಗಳ ಮೂರ್ತಿಯೆಂದೂ ಇಂತಹ ಮೂರ್ತಿಗಳು ಬೇರೆ ಬೇರೆ ಊರುಗಳಲ್ಲಿವೆಯೆಂದೂ ಅಂದು ಕ್ಯೂರೇಟರರಾಗಿದ್ದ ಡಾ. ಎಂ. ಎಸ್. ನಾಗರಾಜರಾವ್‌ರು ಹೇಳಿದರು. ಕೆಳಗೆ ಹೆಸರುಗಳಿಲ್ಲದ ಕಾರಣ ಅಂದು ನನಗೆ ನಂಬಿಕೆ ಹುಟ್ಟಲಿಲ್ಲ. ಆದರೆ ಗುಂಡೇನಹಳ್ಳಿ ಮೂರ್ತಿಯನ್ನು ಯಥಾವತ್ತಾಗಿ ಹೋಲುವ ಈ ಮೂರ್ತಿಯೂ ಗುಂಡಬ್ರಹ್ಮಯ್ಯ[೩]ಗಳದೆಂದು ಇಂದು ನಿಸ್ಸಂದೇಹವಾಗಿ ಹೇಳಬಹುದು.

ಈ ಮೂರ್ತಿ ಮೂಲತಃ ಹಾವೇರಿಯ ವೀರಭದ್ರ ದೇವಾಲಯದ ಹಿಂದೆ ಮರದ ಕೆಳಗೆ ಇದ್ದುದು ೪ ವರ್ಷಗಳ ಹಿಂದೆ ಡಾ. ಶ್ರೀನಿವಾಸ ರಿತ್ತಿ ಅವರ ಮೂಲಕ ಕನ್ನಡ ಸಂಶೋಧನ ಸಂಸ್ಥೆಗೆ ಬಂದಿತು.

ಒಟ್ಟಿನಲ್ಲಿ ೧. ಗುಂಡೇನಹಳ್ಳಿ, ೨. ಚಿತ್ರದುರ್ಗ, ೩. ಕನ್ನಡ ಸಂಶೋಧನ ಸಂಸ್ಥೆ ಈ ಮೂರು ಮೂರ್ತಿಗಳು ಒಂದು ವರ್ಗಕ್ಕೆ, ಬನವಾಸಿ ವಿಗ್ರಹ ಇನ್ನೊಂದು ವರ್ಗಕ್ಕೆ ಸೇರುತ್ತವೆ. ಈ ನಾಲ್ಕು ವಿಗ್ರಹಗಳಲ್ಲದೆ ದೊಡ್ಡಾಣೆಗೆರೆಯಲ್ಲಿ ಗುಂಡಬ್ರಹ್ಮಯ್ಯನ ದೇವಾಲಯ, ಶೂಲ (ಇಷ್ಟಲಿಂಗ ಹಿಡಿದ ಮೂರ್ತಿಗೆ ಬದಲು ಈಶ್ವರಲಿಂಗ)ಗಳಿವೆಯೆಂಬುದನ್ನು ಇಲ್ಲಿ ಗಮನಿಸಿಬೇಕು.

ಆಕರ : ಮಾರ್ಗ ಸಂಪುಟ–೨

---

೩. ಡಾ. ವಿ. ಶಿವಾನಂದ : ಗುಂಡಬ್ರಹ್ಮಯ್ಯಗಳ ಚರಿತ್ರೆ, ಪೀಠಿಕೆ ಪು. ೨೧.

೩೨

ಚಿತ್ರದುರ್ಗದಲ್ಲಿಯ ಗುಂಡಬ್ರಹ್ಮಯ್ಯಗಳ ವಿಗ್ರಹ

ಡಾ. ಬಿ.ಎಸ್. ಗದ್ದಗಿಮಠ. ಡಾ. ವಿ. ಶಿವಾನಂದ ಮತ್ತು ನಾನು ನಡೆಸಿದ ಸಂಶೋಧನೆಯ ಫಲವಾಗಿ ಬನವಾಸಿ, ಗುಂಡೇನಹಳ್ಳಿ, ಹಾವೇರಿ ಗ್ರಾಮಗಳಲ್ಲಿಯ ಗುಂಡಬ್ರಹ್ಮಯ್ಯಗಳ ಜೋಡುವಿಗ್ರಹ ಬೆಳಕಿಗೆ ಬಂದುವು. ಡಾ. ವಿ. ಶಿವಾನಂದ ಅವರು ಗುಂಡೇನಹಳ್ಳಿ ವಿಗ್ರಹವನ್ನು ಬೆಳಕಿಗೆ ತರುತ್ತ, ಇದನ್ನು ಹೋಲುವ ಇನ್ನೊಂದು ವಿಗ್ರಹ ಚಿತ್ರದುರ್ಗದ ಸಂಪಗೆಸಿದ್ಧೇಶ್ವರ ದೇವಾಲಯದಲ್ಲಿರುವುದಾಗಿ 'ಗುಂಡಬ್ರಹ್ಮಯ್ಯಗಳ ಚರಿತ್ರೆ'ಯ ಮುನ್ನುಡಿಯಲ್ಲಿ ಸೂಚಿಸಿದ್ದರು. ಈ ಎರಡನ್ನು ಹೋಲುವ ಇನ್ನೊಂದು ವಿಗ್ರಹ, ಕನ್ನಡ ಸಂಶೋಧನ ಸಂಸ್ಥೆಯ (ಮೂಲತಃ ಹಾವೇರಿಗೆ ಸಂಬಂಧಿಸಿದ್ದು)ದಲ್ಲಿರುವ ಸಂಗತಿಯನ್ನು ಲೇಖನವೊಂದರ ಮೂಲಕ ನಾನು ಪ್ರಕಟಿಸಿದ್ದೆನು. ಹೀಗೆ ಗುಂಡೇನಹಳ್ಳಿ, ಚಿತ್ರದುರ್ಗ ಮತ್ತು ಹಾವೇರಿ ವಿಗ್ರಹಗಳು ರೂಪದೃಷ್ಟಿಯಿಂದ "ಒಂದು ವರ್ಗಕ್ಕೆ" ಸಂಬಂಧಿಸಿವೆಯೆಂದು ಈ ಲೇಖನದಲ್ಲಿ ನಿರ್ಣಯಕ್ಕೆ ಬರಲಾಗಿದ್ದಿತು. ಆದರೆ ಇತ್ತೀಚೆ ನನ್ನ ಕೈಸೇರಿದ[1] ಚಿತ್ರದುರ್ಗ ವಿಗ್ರಹದ ಚಿತ್ರ ಆ "ಒಂದು ವರ್ಗಕ್ಕೆ" ಸಂಬಂಧಿಸಿವೆಯೆಂಬ ನನ್ನ, ಅಂದರೆ ಡಾ. ವಿ. ಶಿವಾನಂದರ ಅಭಿಪ್ರಾಯವನ್ನು ಕೈಬಿಡಲು ಹಚ್ಚುತ್ತದೆ.

ಗುಂಡೇನಹಳ್ಳಿ, ಹಾವೇರಿ ವಿಗ್ರಹಗಳು ಶೂಲದ ಮೇಲೆ ಕುಳಿತಿದ್ದರೆ, ಚಿತ್ರದುರ್ಗದ ಈ ವಿಗ್ರಹ ಶೂಲವನ್ನು ಕೈಯಲ್ಲಿ ಹಿಡಿದುಕೊಂಡು ನಿಂತಿದೆ. ಬನವಾಸಿ ವಿಗ್ರಹಗಳು ಹೀಗೆಯೇ ನಿಂತಿದ್ದರೂ ಭಂಗಿ ಬೇರೆಯಾಗಿದೆ. ಕಾರಣ ಶಿಲ್ಪವಿನ್ಯಾಸ ದೃಷ್ಟಿಯಿಂದ ಗುಂಡೇನಹಳ್ಳಿ ಹಾವೇರಿಯವು ಒಂದು ವರ್ಗ, ಬನವಾಸಿಯದು ಇನ್ನೊಂದು ವರ್ಗ, ಚಿತ್ರದುರ್ಗದ್ದು ಮತ್ತೊಂದು ವರ್ಗವೆಂದು ಹೇಳಬೇಕಾಗುತ್ತದೆ. ಎಡಗೈಯಲ್ಲಿ ಇಷ್ಟಲಿಂಗವಿರುವುದು ಗುಂಡಬ್ರಹ್ಮಯ್ಯಗಳ ವಿಗ್ರಹದ ಒಂದು ವೈಶಿಷ್ಟ್ಯವಾಗಿದೆ. ಆದರೆ ಇಲ್ಲಿಯ ಒಂದು ವಿಗ್ರಹ ಲಿಂಗವನ್ನು ಎಡಗೈಯಲ್ಲಿ ಹಿಡಿದಿದ್ದರೆ ಇನ್ನೊಂದು ಬಲಗೈಯಲ್ಲಿ ಹಿಡಿದಿದೆ. ಎಡಬಲದಲ್ಲಿ ಸಮಾನ ಆಕಾರ ಸಾಧಿಸಲು ಹೀಗೆ ಮಾಡಿರಬಹುದು.

ಇನ್ನೊಂದು ವಿಷಯ : ಈ ಮೂರ್ತಿ ಲಭಿಸಿದುದು, ಬೇಡನಾಯಕರ ರಾಜಧಾನಿಯಾದ ಚಿತ್ರದುರ್ಗದಲ್ಲಿ. ಬೇಡಜನಾಂಗದ ಇನ್ನೊಂದು ರಾಜಧಾನಿಯಾದ ಸುರಪುರದಲ್ಲಿ "ಶೂಲದ ಹಬ್ಬ" ನಿನ್ನೆ-ಮೊನ್ನೆಯ ವರೆಗೂ ಆಚರಿಸುತ್ತಿದ್ದರಂತೆ. ಗುಂಡಬ್ರಹ್ಮಯ್ಯಗಳು ಬೇಡರಾಗಿ ಹುಟ್ಟಿ ವೀರಶೈವರಾಗಿ ಬೆಳೆದು, ಬೆಳಗಿದುದೇ ಇದಕ್ಕೆ ಕಾರಣವಾಗಿರಬಹುದು. ಕರ್ನಾಟಕ ತುಂಬ ಅಲ್ಲಲ್ಲಿ ನೆಲೆನಿಂತ ಬೇಡ ಜನಾಂಗದ ಆಚಾರ, ವಿಚಾರಗಳ ಸಂಶೋಧನೆಯಿಂದ ಗುಂಡಬ್ರಹ್ಮಯ್ಯಗಳ ಚರಿತ್ರೆಯ ಮೇಲೆ ಹೆಚ್ಚಿನ ಬೆಳಕು ಬೀಳಬಹುದಾಗಿದೆ.

---

೧. ಈ ಚಿತ್ರಗಳನ್ನು ಪೂರೈಸಿದ ಪ್ರಿ. ಜಿ.ಎಸ್. ಸಿದ್ಧಲಿಂಗಯ್ಯ, ಸರಕಾರೀ ಕಾಲೇಜು, ಚಿತ್ರದುರ್ಗ ಅವರಿಗೆ ಕೃತಜ್ಞನಾಗಿದ್ದೇನೆ.

ನಂಜುಂಡಕೃತ 'ಕುಮಾರಾಮನ ಸಾಂಗತ್ಯ', ಪಾಂಚಾಳಗಂಗಕೃತ 'ಬಾಲರಾಮನ ಸಾಂಗತ್ಯ'ಗಳಲ್ಲಿ ಗುಂಡಬ್ರಹ್ಮಯ್ಯಗಳ 'ಶೂಲದ ಹಬ್ಬ'ದ ವಿಸ್ತಾರವಾದ ವರ್ಣನೆ ಬರುತ್ತದೆ. ಕುಮಾರರಾಮನು ಭಕ್ತಿಯಿಂದ ಈ ಹಬ್ಬವನ್ನಾಚರಿಸಿ ಶೂಲಗಳನ್ನು ಪೂಜಿಸುತ್ತಾನೆ. ಇದು ಹುಟ್ಟಿನಿಂದ ಬೇಡನಾಗಿರಬಹುದಾದ ಕುಮಾರರಾಮನಿಗೂ ವೀರಶೈವತತ್ವಕ್ಕೂ ಇರುವ ಯಾವುದೋ ಸಂಬಂಧವನ್ನು ಸೂಚಿಸುತ್ತಿರಬಹುದು. ಹೆಚ್ಚಿನ ಸಂಶೋಧನೆ ನಡೆದಲ್ಲಿ ಗುಂಡಬ್ರಹ್ಮಯ್ಯ, ಕುಮಾರರಾಮ, ಬೇಡಜನಾಂಗ, ವೀರಶೈವ-ಇವುಗಳ ಪರಸ್ಪರ ಸಂಬಂಧವನ್ನು ಸೂಚಿಸುವ ವಿವರಗಳು ಬೆಳಕು ಕಾಣುವ ಸಂಭವವಿದೆ.

■■

ಆಕರ : ಮಾರ್ಗ ಸಂಪುಟ–೨

೩೩

ಶ್ರೀಶೈಲದಲ್ಲಿ ಶರಣರ ಶಿಲ್ಪಗಳು

'ಶಾಸನಗಳಲ್ಲಿ ಶಿವಶರಣರು' ಪುಸ್ತಕ(೧೯೭೦)ವನ್ನು, 'ಶಿಲ್ಪದಲ್ಲಿ ಶಿವಶರಣರು' 'ಲೇಖನ (೧೯೮೧)ವನ್ನು ನಾನು ಪ್ರಕಟಿಸಿದ ಬಳಿಕ, ಆಗಾಗ ಕೆಲವು ವಿದ್ವಾಂಸರು ಶರಣರ ಇನ್ನಷ್ಟು ಶಿಲ್ಪಗಳನ್ನು ಶೋಧಿಸಿದ್ದಾರೆ. ಈ ಮಾಲಿಕೆಯಲ್ಲಿ ತುಂಬ ಪ್ರಾಚೀನ ಶಿಲ್ಪಗಳೆಂದರೆ ಅಬ್ಬಲೂರಿನವು. ಅಲ್ಲಿ ಏಕಾಂತ ರಾಮಯ್ಯನ ಶಿರಸ್ಸು ಪವಾಡ ಘಟನೆಯ ಎಲ್ಲ ಹಂತಗಳ ಚಿತ್ರಗಳಲ್ಲದೆ, ಜೇಡರದಾಸಿಮಯ್ಯನು ಶಿವನಿಗೆ ವಸ್ತ್ರನೀಡಿದ, ಶಿವನು ಕುಂಬಾರ ಗುಂಡಯ್ಯನ ಭಕ್ತಿಗೆ ಮೆಚ್ಚಿದ, ಸಿರಿಯಾಳ ಚಂಗಳೆಯರು ಶಿವನಿಗೆ ಮಗನನ್ನು ಅರ್ಪಿಸಿದ ಶಿಲ್ಪಗಳಿವೆ. ಈ ಬಳಿಕ ಅಲ್ಲೊಂದು ಇಲ್ಲೊಂದು ಶರಣ ಶಿಲ್ಪಗಳು ಹುಟ್ಟಿಕೊಂಡಿವೆ. ಈಗ ಡಾ. ಜಿ. ವೆಂಕಟರಾಮಯ್ಯ ಅವರು ತಮ್ಮ "Narrative art of South Indian Temples (Srisailam)" ಗ್ರಂಥದಲ್ಲಿ ವಿವರಣೆ ಸಹಿತ ಪ್ರಕಟಿಸಿರುವ ಶರಣರ ಇನ್ನಷ್ಟು ಶಿಲ್ಪಗಳನ್ನು ಇಲ್ಲಿ ಕನ್ನಡಿಗರ ಗಮನಕ್ಕೆ ತರಬಹುದಾಗಿದೆ.

ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರ ಗೋಡೆಯ ಮೇಲೆ ಕೆತ್ತಲಾಗಿರುವ ಈ ಶಿಲ್ಪಗಳ ಕಾಲ ಸುಮಾರು ೧೪ನೆಯ ಶತಮಾನ. ಇಲ್ಲಿ ಯುದ್ಧಪ್ರಯಾಣ–ಕೋಲಾಟ–ಸಂಗೀತ ಕಚೇರಿ–ಬೇಟೆ–ಲಿಂಗಪೂಜೆಗಳಂಥ ಸಾಮಾನ್ಯ ದೃಶ್ಯ, ರಾಮಾಯಣ–ಮಹಾಭಾರತ–ಶಿವಪುರಾಣಗಳ ದೃಶ್ಯ, ೬೩ ಪುರಾತನರಾದ ಸಿರಿಯಾಳ, ಬೇಡರಕಣ್ಣಪ್ಪ ಮೊದಲಾದವರ ಚಿತ್ರಗಳನ್ನಲ್ಲದೆ ೧೨ನೆಯ ಶತಮಾನದ ಶರಣರ ಶಿಲ್ಪಗಳನ್ನೂ ಕಂಡರಿಸಲಾಗಿದೆ. ಇದರಿಂದ ಶರಣರನ್ನು ಪುರಾಣಪುರುಷ, ಪುರಾತನ ಪುರುಷರ ಹಂತದಲ್ಲಿ ಗೌರವಿಸಿದುದು, ಆಂಧ್ರಪ್ರದೇಶವು ಅದರಲ್ಲಿಯೂ ಶ್ರೀಶೈಲಕ್ಷೇತ್ರವು ಶರಣರಿಂದ ಪ್ರಭಾವಿತವಾಗಿದ್ದುದು ಇದರಿಂದ ಸ್ಪಷ್ಟವಾಗುತ್ತದೆ.

ಈ ಶಿಲ್ಪಗಳಿಗೆ ಬರೆವಣಿಗೆ ಇಲ್ಲದಿದ್ದರೂ ಚಿತ್ರಿಸಲಾದ ಘಟನೆಯ ವಿವರಗಳ ಆಧಾರದಿಂದ ಅವು ಶರಣರ ಶಿಲ್ಪಗಳೆಂದು ವೆಂಕಟರಾಮಯ್ಯ ಅವರು ಭಾವಿಸಿದ್ದು, ಅವು ಹೀಗಿವೆ:

೧. ಕಿನ್ನರಿ ಬ್ರಹ್ಮಯ್ಯ

ಈತನನ್ನು ಕುರಿತು ಎರಡು ಶಿಲ್ಪ ಪಟ್ಟಿಕೆಗಳಿವೆ. ಒಂದನ್ನು ದಕ್ಷಿಣ ಗೋಡೆಯ ಮೇಲೆ ಪೂರ್ವ ಗೋಪುರದ್ವಾರದತ್ತ, ಇನ್ನೊಂದನ್ನು ಉತ್ತರ ಗೋಡೆಯ ಮೇಲೆ ಪಶ್ಚಿಮ ಗೋಪುರದ್ವಾರದತ್ತ ಬಿಡಿಸಲಾಗಿದೆ. ಇವುಗಳಲ್ಲಿ ಒಂದು ಪಟ್ಟಿಕೆ ಸೂಳೆಗಾಗಿ ವಿಟನೊಬ್ಬನು ಕುರಿ ಖರೀದಿಸಿ ತರುವುದನ್ನು, ಅದು ಅಂಜಿ ಕಿನ್ನರಿ ಬ್ರಹ್ಮಯ್ಯನಿದ್ದ ತ್ರಿಪುರಾಂತಕ ದೇವಾಲಯ ಲಿಂಗದ ಹಿಂದೆ ಅಡಗುವುದನ್ನು

ಒಳಗೊಂಡಿದೆ. ಇನ್ನೊಂದು ಪಟ್ಟಿಕೆ ಕಿನ್ನರಿ ಬ್ರಹ್ಮಯ್ಯನು ವಿಟನ ರುಂಡ ಕತ್ತರಿಸಿ ಕುರಿ ರಕ್ಷಿಸಿದುದನ್ನು ಒಳಗೊಂಡಿದೆ.

೨. ಮಡಿವಾಳ ಮಾಚಯ್ಯ

ಮಾಚಯ್ಯನು ಬಿಜ್ಜಳನ ಆನೆಯನ್ನು ಮರ್ದಿಸಿದ ಘಟನೆ ವೀರಶೈವ ಪುರಾಣಗಳಲ್ಲಿ ಚಿತ್ರಿತವಾಗಿದೆ. ಈ ಘಟನೆಯನ್ನೊಳಗೊಂಡ ಶಿಲ್ಪಗಳು ಈಗಾಗಲೇ ಅಮ್ಮಿನಭಾವಿ ಮೊದಲಾದ ಗ್ರಾಮಗಳಲ್ಲಿ ಲಭಿಸಿವೆ. ಈ ಶ್ರೇಣಿಗೆ ಪ್ರಸ್ತುತ ಶ್ರೀಶೈಲಶಿಲ್ಪ ಸೇರುತ್ತಿದ್ದು, ಇದನ್ನು ಇಲ್ಲಿಯ ಉತ್ತರ ಗೋಡೆಯ ಮೇಲೆ ಪಶ್ಚಿಮ ಗೋಪುರದ್ವಾರದತ್ತ ಬಿಡಿಸಲಾಗಿದೆ.

೩. ಅಕ್ಕಮಹಾದೇವಿ

ಚೆನ್ನಮಲ್ಲಿಕಾರ್ಜುನನ ಭಕ್ತೆಯಾದ ಈಕೆ ಅಂತ್ಯಕಾಲದಲ್ಲಿ ಶ್ರೀಶೈಲದ ಕದಳಿಗೆ ಹೋದುದು ಸರ್ವಶ್ರುತ. ಇಲ್ಲಿಯ ಪೂರ್ವ ಗೋಡೆಯ ಮೇಲೆ ಉತ್ತರಗೋಪುರದ್ವಾರದತ್ತ ಬಿಡಿಸಲಾದ ಚಿತ್ರಪಟದಲ್ಲಿ ಶಿವಲಿಂಗದಿಂದ ಹೊರಬಂದ ಆಶೀರ್ವಾದ ಹಸ್ತ, ಎದುರು ಒಬ್ಬ ಸ್ತ್ರೀ ನಿಂತಿರುವ ದೃಶ್ಯವಿದೆ. ಇದು ಅಕ್ಕಮಹಾದೇವಿಯದೆಂದು ಹಿಂದಿನಿಂದಲೂ ನಂಬಲಾಗಿದೆ. ಉದ್ದವಾದ ಕೂದಲು, ಯೋಗಿಣಿರೂಪದ ನಿಲವು ಹೀಗೆ ಭಾವಿಸಲು ಕಾರಣವಾದಂತಿವೆ.

೪. ಕಾಟಕೋಟ ಕುರುಬ ಗೊಲ್ಲಾಳ

ಕುರಿ–ದನ ಮೊದಲಾದ ಸಾಕು ಪ್ರಾಣಿಗಳ ಪಾಲನೆ ಮಾಡುವ ಗೊಲ್ಲಾಳನ ಇನ್ನೊಂದು ಹೆಸರು ಕಾಟಕೋಟ. ಈತ ಲಿಂಗಕ್ಕೆ ಕ್ಷೀರಾಭಿಷೇಕ ಮಾಡುವುದು, ಸಿಟ್ಟಿಗೆದ್ದ ತಂದೆ ಲಿಂಗಕ್ಕೆ ಒದೆಯುವುದು, ಗೊಲ್ಲಾಳನು ತಂದೆಯ ರುಂಡ ಕತ್ತರಿಸುವುದು–ಈ ವಿವರಗಳು ಪ್ರಸ್ತುತ ಶಿಲ್ಪದಲ್ಲಿವೆ. ಇದನ್ನು ದಕ್ಷಿಣಗೋಡೆಯ ಮೇಲೆ ಪೂರ್ವ ಗೋಪುರದ್ವಾರದತ್ತ ಬಿಡಿಸಲಾಗಿದೆ.

೫. ಮುಸುಡಿ ಚೌಡಯ್ಯ

ದಕ್ಷಿಣ ಗೋಡೆಯ ಮೇಲೆ ಪೂರ್ವ ಗೋಪುರದ್ವಾರದತ್ತ ಈ ಶಿಲ್ಪವನ್ನು ಕಂಡರಿಸಲಾಗಿದೆ. ಚೌಡಯ್ಯನು ಮುಸುಡಿ ಮರವನ್ನು ಕತ್ತರಿಸಿ ಹಣ್ಣು ತಿನ್ನುತ್ತಿದ್ದನು. ಒಂದು ದಿನ ವಟವೃಕ್ಷವನ್ನು ಕತ್ತರಿಸಲು, ಅದರೊಳಗಿಂದ ವೃಷಭರೂಪ ಆವಿರ್ಭವಿಸಿತು. ಚೌಡಯ್ಯನಿಗೆ ತನ್ನ ತಪ್ಪಿನ ಅರಿವಾಗಿ, ಅಂದಿನಿಂದ ನಂದಿಯನ್ನು ಪೂಜಿಸತೊಡಗಿದ ಚಿತ್ರವನ್ನು ಇಲ್ಲಿ ಬಿಡಿಸಲಾಗಿದೆ.

೬. ಮಾದಲಾಂಬಿಕೆ

ಪೂರ್ವದ ಗೋಡೆಯ ಮೇಲೆ ಉತ್ತರ ಗೋಪುರದ್ವಾರದತ್ತ ಬಿಡಿಸಿದ ಒಂದು ಶಿಲ್ಪವನ್ನು ಮಾದಲಾಂಬಿಕೆಯದೆಂದು ವೆಂಕಟರಾಮಯ್ಯ ಹೇಳುತ್ತಾರೆ. ಇದರಲ್ಲಿ ೩ ದೃಶ್ಯಗಳಿವೆ. ೧ನೆಯದರಲ್ಲಿ ಅವಳು ಮಂಚದ ಮೇಲೆ ಮಲಗಿದ, ೨ನೆಯ ದೃಶ್ಯದಲ್ಲಿ ಬಲಗೈಯ್ಯಲ್ಲಿ ಯಾವುದೋ ಉಪಕರಣ ಹಿಡಿದು ನಿಂತಿರುವ, ೩ನೆಯ ದೃಶ್ಯದಲ್ಲಿ ಗರ್ಭಿಣಿಯಾಗಿರುವ ಚಿತ್ರಗಳಿವೆ. ಈ ಚಿತ್ರ ಮಾದಲಾಂಬಿಕೆಯದೆನ್ನುವುದಕ್ಕೆ ಇನ್ನಷ್ಟು ಆಧಾರ ಬೇಕೆನಿಸುತ್ತದೆ.

೭. ಬಸವೇಶ್ವರ ಮತ್ತು ಶಿವಭಕ್ತರು

ಉತ್ತರಗೋಡೆಯ ಮೇಲೆ ಪಶ್ಚಿಮ ಗೋಪುರದತ್ತ ಕೆತ್ತಿದ ಶಿಲ್ಪ ಬಸವಣ್ಣ ಮತ್ತು ಶಿವಭಕ್ತರದೆಂದು ವೆಂಕಟರಾಮಯ್ಯ ಅವರ ಅಭಿಪ್ರಾಯ. ಸುಖಾಸೀನನಾಗಿ ಕುಳಿತಿರುವ ಬಸವಣ್ಣನ ಪಾದವನ್ನು ಭಕ್ತನೊಬ್ಬನು ತೊಳೆಯುತ್ತಿದ್ದು, ಹಿಂದೆ ಮುಂದೆ ಪುರುಷಭಕ್ತರು, ಹಿಂದೆ ಮಹಿಳಾಭಕ್ತರಿದ್ದಾರೆ.

೮. ಬಸವೇಶ್ವರ ಮತ್ತು ಭಂಡಾರ

ಪೂರ್ವದ ಗೋಡೆಯ ಮೇಲೆ ಉತ್ತರ ಗೋಪುರದ್ವಾರದತ್ತ ಬಿಡಿಸಿದ ಮತ್ತೊಂದು ಶಿಲ್ಪ ಬಸವಣ್ಣನದೆಂದು ವೆಂಕಟರಮಣಯ್ಯ ಹೇಳುತ್ತಾರೆ. ಸೇವಕನೊಬ್ಬ ಎಡಗೈಯಲ್ಲಿ ಕೋಲು ಬಲಗೈಯಲ್ಲಿ ಪೆಟ್ಟಿಗೆ ಹಿಡಿದು ರಾಜನಿಗೆ ತೋರಿಸುತ್ತಲಿದ್ದಾನೆ. ರಾಜನ ಹಿಂದೆ ಬಸವೇಶ್ವರ ನಿಂತಿದ್ದು, ಎಡಗೈಯಲ್ಲಿ Kundika, ಬಲಗೈಯಲ್ಲಿ ಕೋಲು ಹಿಡಿದಿದ್ದಾನೆ. ಈ ೭, ೮ನೆಯ ಪಟ್ಟಿಕೆಗಳ ಬಗ್ಗೆ ನೀಡಿರುವ ವಿವರಣೆ ಇನ್ನೂ ಆಧಾರ ಬಯಸುತ್ತದೆ.

೯. ಏಕಾಂತ ರಾಮಯ್ಯ

ಪೂರ್ವಗೋಡೆಯ ಮೇಲೆ ದಕ್ಷಿಣ ಗೋಪುರದ್ವಾರದತ್ತ ಬಿಡಿಸಿದ ಶಿಲ್ಪವಿದು. ಶಿವಲಿಂಗದ ಮುಂದಿರುವ ಪೀಠದ ಮೇಲೆ ತನ್ನ ಕತ್ತರಿಸಿದ ರುಂಡವನ್ನಿಟ್ಟು, ಮುಂಡವೊಂದು ಕುಳಿತಿದೆ. ಮುಂಡದ ಹಿಂದೆ ಒಬ್ಬ ವ್ಯಕ್ತಿ ನಿಂತಿದ್ದಾನೆ. ಅವನ ಹಿಂದೆ ಇನ್ನೊಬ್ಬ ವ್ಯಕ್ತಿ ಕತ್ತರಿಸಿದ ರುಂಡಗಳನ್ನು ಸಾಲಾಗಿ ಹೊಂದಿಸುತ್ತಿದ್ದಾನೆ. ಒಟ್ಟು ೫ ಸಾಲುಗಳಲ್ಲಿ ೬೦ ರುಂಡಗಳನ್ನು ಹೊಂದಿಸಿಡಲಾಗಿದೆ. ಇದು ಏಕಾಂತರಾಮಯ್ಯನಿಗೆ ಸಂಬಂಧಿಸಿದ ಘಟನೆಯೆಂದು ಡಾ. ವೆಂಕಟರಾಮಯ್ಯ ಹೇಳಿದರೆ, ಭಕ್ತರ ಸಾಮೂಹಿಕ ರುಂಡ ಸಮರ್ಪಣೆಯ ದೃಶ್ಯವೆಂದು ಡಾ. ವಿ. ಅನುರಾಧಾ(Temples of Srisailam)ಹೇಳುತ್ತಾರೆ.

ಮೇಲೆ ಹೇಳಿದ ಯಾವುದೇ ಶಿಲ್ಪಕ್ಕೆ ಬರಹವಿಲ್ಲ. ಹೀಗಿದ್ದೂ ಇವು, ಈ ಶರಣರ ಜೀವನದಲ್ಲಿ ಸಂಭವಿಸಿದ ಘಟನೆಗಳ ಆಧಾರದಿಂದ ನೀಡಿದ ವಿವರಣೆಗಳಾಗಿವೆ. ಈ ವಿವರಣೆಯಲ್ಲಿ ಕಿನ್ನರಿಬ್ರಹ್ಮಯ್ಯ ಮೊದಲಾದುವು ನಿಜವಿದ್ದರೆ, ಏಕಾಂತರಾಮಯ್ಯ ಮೊದಲಾದುವು ಊಹೆ, ಇನ್ನೂ ಕೆಲವು ದೂರದ ಊಹೆ ಎನಿಸುತ್ತವೆ. ಅದೇನೇ ಇದ್ದರೂ ಕಲ್ಯಾಣದಿಂದ ದೂರವಿರುವ ಸ್ಥಳದಲ್ಲಿ , ಅದರಲ್ಲಿಯೂ ಶ್ರೀಶೈಲದಂಥ ಪ್ರಸಿದ್ಧ ಕ್ಷೇತ್ರದಲ್ಲಿ ಈ ಶಿಲ್ಪ ಬಿಡಿಸಿದುದು ಶರಣರ ಸಿದ್ಧಿ-ಪ್ರಸಿದ್ಧಿಗಳಿಗೆ ಸಾಕ್ಷಿಯಾಗಿದೆ.

■■

ಆಕರ : ಮಾರ್ಗ ಸಂಪುಟ-೭

೩೪

ಅತ್ತಿಮಬ್ಬೆಯ ಬಗ್ಗೆ ಇನ್ನಷ್ಟು ಸಂಗತಿಗಳು

ಕರ್ನಾಟಕದ ಸಾಂಸ್ಕೃತಿಕ ಸಂದರ್ಭದಲ್ಲಿ ಅತ್ತಿಮಬ್ಬೆಯದು ಬಹಳ ದೊಡ್ಡ ಹೆಸರು. ಬಹುಶಃ ಈಕೆ ಜೈನ 'ಜಾತಿ'ಯವಳಲ್ಲ - ಜೈನ 'ಧರ್ಮ'ಕ್ಕೆ ಒಕ್ಕಲಾಗಿದ್ದವಳೆಂದೂ, ತಾನು ಈ ಹಿಂದೆ ಲಕ್ಕುಂಡಿಯಲ್ಲಿ ಕಟ್ಟಿಸಿದ್ದ ಬಸದಿಯ ಹೆಸರನ್ನು 'ಬ್ರಹ್ಮಜಿನಾಲಯ'ವೆಂದು ಬದಲಿಸಿಕೊಳ್ಳುವ ಮೂಲಕ ಅಲ್ಲಿಯ 'ವೈಷ್ಣವ ಗೀತ ಮನೋಹರ'ರೆನಿಸಿದ ಬ್ರಾಹ್ಮಣರೊಂದಿಗೆ ಒಪ್ಪಂದಮಾಡಿಕೊಂಡವಳೆಂದೂ ನಾನು ಬೇರೆಡೆ (ಮಾರ್ಗ-III ೩೧ ಮತ್ತು ಮಾರ್ಗ IV-೧೦೮) ಚರ್ಚಿಸಿದ್ದೇನೆ. ಅದರ ಮುಂದುವರಿಕೆಯಾಗಿ ಇನ್ನಷ್ಟು ಸಂಗತಿಗಳನ್ನು ಇಲ್ಲಿ ಮಂಡಿಸುತ್ತೇನೆ. ಭಾರತೀಯ ಪರಂಪರೆಯಲ್ಲಿ ಪುರುಷನು ತಾನು ಹುಟ್ಟಿದ ಮನೆಯಲ್ಲಿಯೇ ಮುಂದುವರಿಯುವುದರಿಂದ ಅವನಿಗೆ ಧಾರ್ಮಿಕ ತೊಡಕು ಉದ್ಭವಿಸುವುದಿಲ್ಲ. ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆಯಲ್ಲಿ ಬೆಳೆಯುವುದರಿಂದ ಮಹಿಳೆಗೆ ಮಾತ್ರ ಕೆಲವೊಮ್ಮೆ ಅಂಥ ತೊಡಕು ಸೃಷ್ಟಿಯಾಗಬಹುದಾಗಿದೆ. ಬ್ರಹ್ಮಶಿವ ಹೇಳುವಂತೆ, "ಪೆಂಡತಿ ಮಾಹೇಶ್ವರಿ ಗಂಡಂ ಜೈನಂ ಗಡ" ಎಂಬಂತಹ ವ್ಯವಸ್ಥೆಗೆ ಮನ್ನಣೆಯಿದ್ದ ಕಾಲದವಳಾದ ಅತ್ತಿಮಬ್ಬೆಗೂ ಇಂಥ ತೊಡಕು ಎದುರಾಗಿರಬಹುದೇ? ಎಂಬುದನ್ನು ಕುರಿತು ಇಲ್ಲಿ ಚರ್ಚಿಸಬಹುದಾಗಿದೆ.

ಈಕೆಯ ತವರುಮನೆಯ ವಿವರ ಪೊನ್ನನ ಶಾಂತಿಪುರಾಣದಲ್ಲಿ, ತವರುಮನೆ-ಗಂಡನ ಮನೆಗಳ ವಿವರ ರನ್ನನ ಅಜಿತಪುರಾಣ ಮತ್ತು ಶಾಸನಗಳಲ್ಲಿ ಕಂಡುಬರುತ್ತವೆ. ತವರುಮನೆಯ ಸದಸ್ಯರಲ್ಲಿ ಅಜ್ಜ ನಾಗಮಯ್ಯ, ಕಕ್ಕ ಪುನ್ನಮಯ್ಯ, ತಂದೆ ಮಲ್ಲಪಯ್ಯ, ತಾಯಿ ಅಪ್ಪಕಬ್ಬೆ (ಇವಳ ತಾಯಿ ನಾಗಿಯಬ್ಬೆ, ತಂದೆ ನಾಗಮಯ್ಯ), ಸಹೋದರರು ಗುಂಡಮಯ್ಯ, ಎಳಮಯ್ಯ, ಪೊನ್ನಮಯ್ಯ, ಅಹವಮಲ್ಲ, ವಲ್ಲ, ಸೋದರಿಯರು ಗುಂಡಮಬ್ಬೆ, ನಾಗಿಯಬ್ಬೆ- ಈ ಹೆಸರುಗಳೆಲ್ಲ ಅಜೈನೀಯವಾಗಿವೆ. ಇಲ್ಲಿ ಒಂದು ತಲೆಮಾರು ಅಲ್ಲ; ಅಜ್ಜನ, ತಂದೆಯ, ಇವಳ ಮತ್ತು ಮಗನ-ಹೀಗೆ ನಾಲ್ಕು ತಲೆಮಾರುಗಳಲ್ಲಿ ಒಂದೂ ಹೆಸರು ಜೈನೀಯವಾಗಿಲ್ಲದಿರುವುದು ಆಶ್ಚರ್ಯದ ಸಂಗತಿ. ಇದಲ್ಲದೆ ಜೈನಸಂಪ್ರದಾಯದಲ್ಲಿ ಸಲ್ಲೇಖನ ಮರಣ ಮಾತ್ರ ಮಾನ್ಯ. ಹೀಗಿದ್ದೂ ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆ ಪತಿ ನಿಧನಾನಂತರ ಹಿಂದೂ ಪದ್ಧತಿಯ ಚಿತಾಪ್ರವೇಶ ಮಾಡುತ್ತಾಳೆ. ಇವೆಲ್ಲ ಕಾರಣಗಳಿಂದಾಗಿ ಇವಳ ತವರುಮನೆಯವರು 'ಧರ್ಮ'ದಿಂದ ಜೈನರಾಗಿದ್ದರೂ 'ಜಾತಿ'ಯಿಂದ ಅಜೈನರಾಗಿ ಕಾಣುತ್ತಾರೆ. ಹಾಗಾದರೆ ಈ ಮನೆತನದವರು ಯಾವ 'ಜಾತಿ'ಯವರು?

ಅಜಿತಪುರಾಣದಲ್ಲಿ ಅತ್ತಿಮಬ್ಬೆಯ ತಂದೆಯನ್ನು 'ವಿಪ್ರಕುಲಪ್ರದೀಪ", "ಕೌಂಡಿನ್ಯಗೋತ್ರ ಮಂಡನಂ" ಇತ್ಯಾದಿ ವಿಶೇಷಣಗಳಿಂದ ಕರೆದಿರುವ ಕಾರಣ ಇವರು ಯಾವುದೋ

ಬ್ರಾಹ್ಮಣಜಾತಿಯವರಾಗಿರಬಹುದು. ಇಲ್ಲಿಯ ಹೆಸರುಗಳ ಕೊನೆಯಲ್ಲಿ ಭಟ್ಟ ಇತ್ಯಾದಿಗಳಿಲ್ಲವಾಗಿ ಬಹುಶಃ ಇವರು ವೈದಿಕಬ್ರಾಹ್ಮಣರಾಗದೆ ಆಗಮಿಕ ಶೈವಬ್ರಾಹ್ಮಣರಾಗಿರಬಹುದೆನಿಸುತ್ತದೆ.[೧] (ಅತ್ತಿಮಬ್ಬೆಯ ಗಂಡನ ಮನೆಯವರೂ ಆಗಮಿಕ ಶೈವಬ್ರಾಹ್ಮಣ, ಅದರಲ್ಲಿಯೂ ಕಾಳಾಮುಖರೆಂದು ಮುಂದೆ ಚರ್ಚಿಸಲಾಗಿದೆ). ಒಟ್ಟಾರೆ, ಇವಳ ತವರುಮನೆಯವರು ಬಹುಶಃ ಆಗಮಿಕ ಶೈವ ಬ್ರಾಹ್ಮಣರಾಗಿದ್ದು, ಜೈನ 'ಧರ್ಮ'ಕ್ಕೆ ಒಕ್ಕಲಾಗಿದ್ದರೆಂದು ತೋರುತ್ತದೆ.

ಈ ಕಡೆ ಗಂಡನ ಮನೆತನವನ್ನು ಕುರಿತು ಸಿಗುವ ಮಾವ ದಲ್ಲಪಯ್ಯ, ಗಂಡ ನಾಗಮಯ್ಯನೆಂಬ ವ್ಯಕ್ತಿನಾಮ ಇತ್ಯಾದಿ ವಿವರಗಳನ್ನು ನೋಡಿದರೆ ಇಲ್ಲಿಯೂ ಜೈನರೆಂಬ ಸೂಚನೆ ಕಂಡುಬರುವುದಿಲ್ಲ. ಅತ್ತಿಮಬ್ಬೆಯ ಮಗ ಅಣ್ಣಿಗದೇವನನ್ನು ಅಜಿತಪುರಾಣದಲ್ಲಿ (೧೨-೨೧)

ಶ್ರೀ ನೇಮಿಚಂದ್ರ ಮುನಿಗಳ್
ಕಾಣೂರ್ಗಣ ತಿಲಕರವರ ಶಿಷ್ಯ(ಂ) ಸದ್ವಿ।
ದ್ಯಾ ನಿಳಯನಯ್ಯಣಯ್ಯಂ
ತಾನೋದಿಸೆ ಕುಶಲನಾದನಣ್ಣಿಗದೇವಂ॥

ಎಂದು ಹೇಳಲಾಗಿದೆ. ಇಲ್ಲಿ ಅಣ್ಣಿಗದೇವನು ಜೈನನಾದ ಅಯ್ಯಣಯ್ಯನಲ್ಲಿ ವಿದ್ಯಾಭ್ಯಾಸ ಮಾಡಿದವನೆಂದು ಮಾತ್ರ ಹೇಳಲಾಗಿದೆಯೇ ಹೊರತು, ಅವನು ಜೈನನೆಂಬ ಸೂಚನೆ ಕಂಡುಬರುವುದಿಲ್ಲ. ಇನ್ನು ಮಾವನಾದ ದಲ್ಲಪನನ್ನು ಅಜಿತಪುರಾಣ 'ಉತ್ತಮಜಾತಿ' (೧-೩೮ ಗದ್ಯ)ಯವನೆಂದು ಒಂದು ಸಲ ಹೇಳಿದೆ. ಲಕ್ಕುಂಡಿ ಶಾಸನ ಗಂಡನಾಗಿದೇವನನ್ನು "ಮಹಿದೇವ (=ಬ್ರಾಹ್ಮಣ) ಕುಳಗಗನ ಗಭಸ್ತಿ ಮೌಳಿ" ಎಂದು ಕರೆದಿದೆ. ಈ ಉಲ್ಲೇಖಗಳಲ್ಲಿ ಕಿಂಚಿತ್ತೂ ಜೈನ ಸೂಚನೆಯಿಲ್ಲವಾಗಿ ಗಂಡನದು ಜೈನಕ್ಕೆ ಒಕ್ಕಲೂ ಆಗಿರದ ಯಾವುದೋ ಅಜೈನೀಯ ಕುಟುಂಬವಾಗಿರಬಹುದು. ಅದರಲ್ಲಿಯೂ ಆಕರಗಳು ಹೇಳುವ ಪ್ರಕಾರ ಇವರದು ವಾಜಿವಂಶವಾಗಿರಬಹುದೆನಿಸುತ್ತದೆ. ಒಟ್ಟಾರೆ, ಗಂಡನ ಮನೆತನದವರು ಜಾತಿ ಮತ್ತು ಧರ್ಮ ಎರಡೂ ನೆಲೆಗಳಲ್ಲಿ ಅಪ್ಪಟ ಅಜೈನರೇ (ಹಿಂದೂ) ಆಗಿದ್ದರೆಂದು ಈವರೆಗಿನ ಚರ್ಚೆ ತಿಳಿಸುತ್ತದೆ. ಈ ಕಾರಣದಿಂದಾಗಿಯೇ ಮಗನಿಗೆ ಅಣ್ಣಿಗದೇವನೆಂಬ ಅಜೈನೀಯ (ಹಿಂದೂ) ಹೆಸರಿಟ್ಟಂತಿದೆ. ತಂಗಿ ಗುಂಡಮಬ್ಬೆ ಹಿಂದೂ ಪದ್ಧತಿಯಂತೆ ಸಹಗಮನ ಮಾಡಿದಂತಿದೆ. ಹೀಗೆ ಹಿಂದೂ ಪರಂಪರೆಯದಾಗಿರುವ ಈ ಗಂಡನ ಮನೆತನವು ಆಗಮಿಕ ಶೈವಬ್ರಾಹ್ಮಣ, ಅದರಲ್ಲಿಯೂ ಕಾಳಾಮುಖ ಸಂಪ್ರದಾಯದ್ದಾಗಿರಬಹುದೆಂದು ಇತ್ತೀಚೆ ಬೆಳಕಿಗೆ ಬಂದು ಕೆಳಗಿನ ಶಾಸನಾಧಾರದಿಂದ ಸ್ಪಷ್ಟಪಡಿಸಬಹುದಾಗಿದೆ.

ಶ್ರೀ ಬಿ. ಸಿ. ಪಾಟೀಲ ಅವರು ಶೋಧಿಸಿ, "ಇತಿಹಾಸ ದರ್ಶನ"ದ XIXನೆಯ ಸಂಚಿಕೆಯಲ್ಲಿ ಪ್ರಕಟಿಸಿರುವ ಈ ಶಾಸನ ಕೊಪ್ಪಳ ತಾಲೂಕಿನ ಗುಡ್ಲಾನೂರು (ಶಾಸನದ ಪ್ರಕಾರ ಇದರ ಹಳೆಯ ಹೆಸರು ಗಾವುಂಡನೂರು) ಗ್ರಾಮದ ಶಿವದೇವಾಲಯದ ಆವರಣದಲ್ಲಿದೆ. ಇದರ ಕಾಲ ಕ್ರಿ.ಶ. ೯೮೭. ಇದರ ಮೇಲ್ಭಾಗದಲ್ಲಿ ಸೂರ್ಯ-ಚಂದ್ರ, ಆಕಳು-ಕರುಗಳ ಸಾಂಪ್ರದಾಯಿಕ ಚಿತ್ರಗಳಿವೆ. ಜೊತೆಗೆ

---

೧. ಈ ಮನೆತನ ಕಮ್ಮೆನಾಡು ಮೂಲದ್ದು. ಕಮ್ಮೆನಾಡು ಮೂಲದ ಬಸವಣ್ಣನೂ ಆಗಮಿಕ ಶೈವಬ್ರಾಹ್ಮಣದ ಒಂದು ಶಾಖೆಯವನೆಂದು ನಾನು ಬೇರೆಡೆ ಚರ್ಚಿಸಿದ್ದೇನೆ.

ಲಿಂಗದ ಮುಂದೆ ಕೈಮುಗಿದು ಕುಳಿತ ಭಕ್ತನ ಶಿಲ್ಪವಿರುವುದರಿಂದ ಇದು, ಮುಕ್ಕೊಡೆಯ ತೀರ್ಥಂಕರನ ಚಿತ್ರವನ್ನೊಳಗೊಂಡ ಜೈನಶಾಸನವಲ್ಲ; ಹಿಂದೂ (ಶೈವ) ಶಾಸನವೆಂದು ಸ್ಪಷ್ಟವಾಗುತ್ತದೆ. "

ಅತ್ತಿಮಬ್ಬೆಯ ಮಗ ಅಣ್ಣಿಗದೇವನು ಮಾಸವಾಡಿ-೧೪೦ ಪ್ರಾಂತವನ್ನಾಳುತ್ತಲಿರುವಾಗ, ತನ್ನ ತಂದೆ ನಾಗದೇವನ ಸ್ಮರಣಾರ್ಥ, ಅವನ ಹೆಸರಿನ ನಾಗೇಶ್ವರದೇವಾಲಯ ನಿರ್ಮಿಸಿ, ತಾಯಿ ಅತ್ತಿಮಬ್ಬೆಯೊಂದಿಗೆ, ದೇವರಾಸಿ ಪಂಡಿತರ ಕಾಲು ತೊಳೆದು, ಈ ದೇವಾಲಯವನ್ನೂ, ಕೆಲವು ದಾನಗಳನ್ನೂ ಆ ಯತಿಗೆ ನೀಡಿದನೆಂದು ಪ್ರಸ್ತುತ ಶಾಸನ ತಿಳಿಸುತ್ತದೆ. ಇದರಿಂದ ಈ ಕೆಳಗಿನ ಸಂಗತಿಗಳು ವ್ಯಕ್ತವಾಗುತ್ತವೆ;

೧. ತಂದೆ ನಾಗಮಯ್ಯನು ಜೈನ (ಧರ್ಮೀಯರ್ನೋ, ಒಕ್ಕಲೋ)ನಾಗಿದ್ದರೆ ಅವನ ಪರೋಕ್ಷವಿನಯದಲ್ಲಿ ಮಗ ಅಣ್ಣಿಗದೇವನು ಬಸದಿಯನ್ನು ಕಟ್ಟಿಸುತ್ತಿದ್ದನು. ಇದರ ಬದಲು ಶಿವಲಿಂಗ ಸ್ಥಾಪಿಸಿ, ದೇವಾಲಯ ಕಟ್ಟಿಸಿರುವುದರಿಂದ ಅವನು ಖಂಡಿತವಾಗಿಯೂ ಜಾತಿ ಮತ್ತು ಧರ್ಮ ಎರಡೂ ನೆಲೆಗಳಲ್ಲಿ ಅಜೈನ ಅಂದರೆ ಆಗಮಿಕ ಶೈವ (ಬ್ರಾಹ್ಮಣ)ನಾಗಿದ್ದಾನೆ. ಮೇಲೆ ಹೇಳಿದಂತೆ ಅತ್ತಿಮಬ್ಬೆಯೂ ಆಗಮಿಕ ಶೈವಬ್ರಾಹ್ಮಣ ಮೂಲದ ತವರಿನವಳಾಗಿರುವುದರಿಂದ, ಇವರಿಬ್ಬರ ಮದುವೆ ಸಹಜವೆಂಬಂತೆ ಜರುಗಿದೆ. ಇಲ್ಲಿರುವ ವ್ಯತ್ಯಾಸವೆಂದರೆ ಇವಳ ತವರು ಮನೆತನ ಜೈನಧರ್ಮಕ್ಕೆ ಒಕ್ಕಲು ಆಗಿದ್ದಿತು ಅಷ್ಟೆ. "ಪೆಂಡತಿ ಮಾಹೇಶ್ವರಿ ಗಂಡಂ ಜೈನಂ ಗಡ"[೨] ಎಂದು ಮುಂತಾಗಿ ಹೇಳಿ ಬ್ರಹ್ಮಶಿವನು ಇಂಥವರು "ಉತ್ತಮ ಜೈನರಲ್ಲ"ವೆನ್ನುವುದನ್ನು ಗಮನಿಸಿದರೆ, ಇವನ ದೃಷ್ಟಿಯಲ್ಲಿ ಅತ್ತಿಮಬ್ಬೆಯದು ಉತ್ತಮ ಜೈನಬಾಂಧವ್ಯವಲ್ಲವೆನಿಸುತ್ತದೆ.

ಇಲ್ಲಿ ನಾಗೇಶ್ವರದೇವಾಲಯವನ್ನು ಕಟ್ಟಿಸಿ ದೇವರಾಸಿ ಪಂಡಿತರಿಗೆ ಅರ್ಪಿಸಲಾಗಿದೆ. ಹೆಸರಿನ ಕೊನೆಗೆ ಬರುವ ರಾಸಿ, ಜೀಯ, ಪಂಡಿತ ಎಂಬ ಉಪಾಧಿಗಳು ಕಾಳಾಮುಖಯತಿಗಳನ್ನು ಸೂಚಿಸುವುದರಿಂದ ಆಗಮಿಕ ಶೈವಬ್ರಾಹ್ಮಣ (ವೈದಿಕ ಶೈವಬ್ರಾಹ್ಮಣ ಅಲ್ಲ)ನಾಗಿರುವ ಈಕೆಯ ಗಂಡ ನಾಗಿದೇವನು, ಅದರಲ್ಲಿಯೂ ಕಾಳಾಮುಖ ಅನುಯಾಯಿಯಾಗಿರಬಹುದೆನಿಸುತ್ತದೆ.

೨. ಅಜಿತಪುರಾಣವು ನಾಗಿದೇವನ ಮರಣವನ್ನು ಸೂಚಿಸಿರುವುದರಿಂದ ಈ ಪುರಾಣದ ಕಾಲವಾದ ಕ್ರಿ.ಶ. ೯೯೩ಕ್ಕೆ ಮೊದಲು ಅವನು ನಿಧನನಾಗಿರುವನೆಂದು ಈವರೆಗೆ ಭಾವಿಸಲಾಗಿತ್ತು. ಈಗ ಈತನ ಮರಣವನ್ನು (ಪರೋಕ್ಷವಿನಯ) ಈ ಗುಡ್ಡಾನೂರು ಶಾಸನ ತಿಳಿಸುವುದರಿಂದ, ಈ ಶಾಸನದ ಕಾಲವಾದ ೯೮೭ಕ್ಕೆ ಮೊದಲು, ಅಂದರೆ ಅಜಿತಪುರಾಣಕ್ಕೂ ಆರು ವರ್ಷ ಮೊದಲು ಅವನು ತೀರಿಕೊಂಡಿದ್ದನೆಂಬ ಹೊಸ ಅಂಶ ಈಗ ಬೆಳಕಿಗೆ ಬರುತ್ತಿದೆ.

ಬಹುಶಃ ಗಂಡ ಸತ್ತ ಬಳಿಕ ಆರಂಭಿಸಿದ ಲೋಕಹಿತ ಕಾರ್ಯಗಳಿಂದಾಗಿ ಲಭ್ಯವಾಗಿರಬಹುದಾದ ಕವಿವರ ಕಾಮಧೇನು, ಕಟಕಪವಿತ್ರೆ ಇತ್ಯಾದಿ ಬಿರುದುಗಳನ್ನು ಈ ಶಾಸನ (೯೮೭)ದಲ್ಲಿ ಬಳಸಲಾಗಿದೆ. ಇದರಿಂದ ಕ್ರಿ.ಶ. ೯೯೩ರಲ್ಲಿ ಬರೆದ ಅಜಿತಪುರಾಣಕ್ಕೆ ಆರುವರ್ಷ ಮೊದಲು, ಈಕೆ ಕವಿ ರನ್ನನಿಗೆ (ಬೇರೆ ಕವಿಗೆ?) ಆಶ್ರಯ ನೀಡಿದ್ದಳೆಂದೂ, ಈ ಹೊತ್ತಿಗಾಗಲೇ (೯೮೭) 'ಕಟಕಪವಿತ್ರೆ' ಎಂಬಂಥ ಬಿರುದು

---

೨. ಅತ್ತಿಮಬ್ಬೆಯ ವಿಷಯದಲ್ಲಿ ಹೆಂಡತಿ ಧರ್ಮೀಯವಾಗಿ ಜೈನ, ಗಂಡ ಧರ್ಮೀಯವಾಗಿ ಮಾಹೇಶ್ವರ ಆಗಿದ್ದರೆಂಬುದನ್ನು ಇಲ್ಲಿ ಗಮನಿಸಬಹುದು.

ಧರಿಸುವಷ್ಟು ಪ್ರಸಿದ್ಧಿ ಹೊಂದಿದ್ದಳೆಂದೂ ವಿದಿತವಾಗುವುದರಿಂದ, ಈ ಶಾಸನಕ್ಕೂ ಬಹಳ ಮೊದಲೇ ಅವಳ ಗಂಡ ತೀರಿಕೊಂಡಿದ್ದನೆಂದು ಊಹಿಸಬೇಕಾಗುತ್ತದೆ.

ಮಗ ಅಣ್ಣಿಗದೇವನಿಗೆ ಈ ಶಾಸನ (೯೮೭)ದಲ್ಲಿ "ಸಮಸ್ತ ರಾಜ್ಯಭರನಿರೂಪಿತಂ ಮಹಾಸೈನ್ಯಾಧಿಪತಿ ಪ್ರಚಂಡದಂಡನಾಯಕಂ" ಮೊದಲಾದ ಪ್ರಸಿದ್ಧ ಬಿರುದುಗಳನ್ನು ಬಳಸಲಾಗಿದೆ. ತಂದೆ ಸತ್ತ ಬಳಿಕ ಈತ ಈ ಹುದ್ದೆ ಗಳಿಸಿದ್ದರೆ, ಈ ಬಿರುದು ಪ್ರಸಿದ್ಧಿಗೆ ಕೆಲವು ವರ್ಷಗಳಾದರೂ ಹಿಡಿದಿರುವುದು ಸ್ವಾಭಾವಿಕ. ಹಾಗಿದ್ದರೆ, ಈ ಶಾಸನಕ್ಕೆ ಕೆಲವು ವರ್ಷ ಮೊದಲೇ ತಂದೆ ನಾಗಮಯ್ಯ ತೀರಿಕೊಂಡಿರುವನೆಂದು ಮತ್ತೂ ಸ್ಪಷ್ಟವಾಗುತ್ತದೆ.

೩. ರಾಜ್ಯದ ಬೇರೆ ಗ್ರಾಮಗಳನ್ನು ಬಿಟ್ಟು ಈ ಸಿಂಧೋಗಿ ಗ್ರಾಮದಲ್ಲಿಯೇ ಏಕೆ ನಾಗಿದೇವನ ಸ್ಮಾರಕ ಕಟ್ಟಿಸಲಾಯಿತು? ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುವುದು ಸಹಜ. ಬಹುಶಃ ಅಣ್ಣಿಗದೇವನು ಆಳುತ್ತಲಿದ್ದ ಮಾಸವಾಡಿ ೧೪೦ ಪ್ರಾಂತ್ಯಕ್ಕೆ ಸೇರಿದುದೆಂಬ ಇಲ್ಲವೆ ಬಹುಶಃ ಈ ಪ್ರಾಂತದ ರಾಜಧಾನಿಯೆಂಬ ಇಲ್ಲವೆ ಇದು ನಾಗಿದೇವನ ಸ್ವಗ್ರಾಮವಾಗಿದ್ದಿತೆಂಬ ಕಾರಣದಿಂದ ಇಲ್ಲಿ ಕಟ್ಟಿಸಿರಬಹುದು. ಈ ದೇವಾಲಯಕ್ಕೆ ೬೦೦ ಮತ್ತರದಷ್ಟು ದೊಡ್ಡ ಪ್ರಮಾಣದ ಭೂದಾನ ನೀಡಿದುದನ್ನು ಗಮನಿಸಿದರೆ, ಇದು ನಾಗಿಮಯ್ಯನ ಸ್ವಗ್ರಾಮವಾಗಿರುವುದು ಹೆಚ್ಚು ಸಂಭವನೀಯವಾಗಿದೆ.

೪. ಈ ಶಾಸನದ ಕೊನೆಯಲ್ಲಿರುವ "ಅಲಸುತಮೀವ ಚಿಂತಿಸುತಮೀವ . . . . " ಎಂಬ ಚಂಪಕಮಾಲಾ ಪದ್ಯ ಅಜಿತಪುರಾಣದಲ್ಲಿ (೧೨-೧೭) ಕಂಡುಬರುತ್ತದೆ. ಬಹುಶಃ ರನ್ನನೇ ಶಾಸನಕ್ಕಾಗಿ ೯೮೭ರಷ್ಟು ಪೂರ್ವದಲ್ಲಿಯೇ ಬರೆದ ಈ ಪದ್ಯವನ್ನು ಆಮೇಲೆ ೯೯೩ರಲ್ಲಿ ಬರೆದ ತನ್ನ ಅಜಿತನಾಥಪುರಾಣದಲ್ಲಿ ಬಳಸಿಕೊಂಡಿರುವನೆಂದು ತಾನಾಗಿಯೇ ವ್ಯಕ್ತವಾಗುತ್ತದೆ. ಇಲ್ಲಿಯೇ "ಮೊಳೆತು ರಸಾತಳದೊಳ್...." ಎಂದು ಆರಂಭವಾಗುವ ಸುಂದರ ಚಂಪಕಮಾಲಾ ಪದ್ಯವಿದೆ. ಇದು ತಂದೆ ನಾಗಮಯ್ಯನನ್ನೋ, ಮಗ ಅಣ್ಣಿಗದೇವನನ್ನೋ ಕುರಿತುದಾಗಿರಬೇಕು. ಆ ಪದ್ಯದಂತೆ ಈ ಪದ್ಯವನ್ನೂ ರನ್ನನೇ ಬರೆದಿರಬಹುದು.

ಒಟ್ಟಾರೆ ಈ ಶಾಸನದಿಂದ ೧. ಗಂಡ ನಾಗಿದೇವನು ಕಾಳಾಮುಖ (ಆಗಮಿಕ) ಶೈವಬ್ರಾಹ್ಮಣ ಸಂಪ್ರದಾಯದವ. ೨. ಈತನು ಅಜಿತಪುರಾಣ (೯೯೩)ಕ್ಕೆ ಆರು ವರ್ಷ ಮೊದಲು, ಬಹುಶಃ ಇದಕ್ಕೂ ಮೊದಲು ನಿಧನ ಹೊಂದಿದನು. ೩. ಕೊಪ್ಪಳ ತಾಲೂಕಿನ ಸಿಂಧೋಗಿಯು ಬಹುಶಃ ಈತನ ಗ್ರಾಮವಾಗಿರಬಹುದು. ೪. ಈ ಶಾಸನಕ್ಕಾಗಿ ತಾನು ಬರೆದ ಪದ್ಯವನ್ನು ರನ್ನನು ಆಮೇಲೆ ತನ್ನ ಅಜಿತಪುರಾಣಕ್ಕೂ ಬಳಸಿಕೊಂಡನು - ಎಂಬ ಹೊಸ ಸಂಗತಿಗಳು ತಿಳಿದುಬರುತ್ತವೆ.

■■

ಆಕರ : ಮಾರ್ಗ ಸಂಪುಟ-೩

೩೫

ಆಹವಮಲ್ಲನುಪ್ಪಳನುಂ

ಪುಲ್ಲಡಿಗ ರೇಚಯ್ಯ ಮಲ್ಲಣ
ಮೊಲ್ಲೆಯರ ಬೊಮ್ಮಯ್ಯ ಮಲ್ಲಣಿ
ತೆಲ್ಲಿಗೇಶನ ಮಸಣ ಹುಳ್ಳಿಯ ಮಾರತಂದೆಗಳು
ಮಲ್ಲಬೊಮ್ಮಯ್ಯಂಗಳುನ್ನತ
ಬಿಲ್ಲಣಂ ಬಳ್ಳೇಶಮಲ್ಲಂ
ಪಲ್ಲೇಶ ಸೋಮಯ್ಯನಾಹವಮಲ್ಲನುಪ್ಪಳನುಂ

ಇದು ಕುಮಾರಪದ್ಮರಸನ ಸಾನಂದಚರಿತೆಯಲ್ಲಿ ಬರುವ ೯ನೆಯ ಸಂಧಿಯ ೭೯ನೆಯ ಪದ್ಯ. ಈ ಸಂಧಿಯುದ್ದಕ್ಕೂ ಕೈಲಾಸದೊಳಗೆ ಶಿವಸನ್ನಿಧಿಯಲ್ಲಿದ್ದ ಶರಣರ ಹೆಸರಿನ ದೊಡ್ಡ ಪಟ್ಟಿಯನ್ನೇ ಕೊಡಲಾಗಿದೆ. ಬಸವಪೂರ್ವ, ಬಸವಕಾಲೀನ ಶರಣರಲ್ಲದೆ ಬಸವೋತ್ತರಕಾಲೀನ ಗೊಪೆಯ ಶಿವದೇವ, ಮಹಾಲಿಂಗರಾಮ, ಕೆರೆಯ ಪದ್ಮರಸ, ಮೂಜುಜಾವದದೇವರು, ಕುರುಗೋಡ ನೃಪರಾಚಮಲ್ಲ, ಅಪ್ಪರಸಯ್ಯ, ಗೋವೆಯ ವಜ್ರರಾಯ ಮೊದಲಾದ ಶಿವಭಕ್ತರ ಹೆಸರುಗಳು ಇಲ್ಲಿ ಉಲ್ಲೇಖಿತವಾಗಿದ್ದು, ಚರಿತ್ರೆಕಾರರಿಗೆ ಇದೊಂದು ದೊಡ್ಡ ಗಣಿಯಾಗಿ ಪರಿಣಮಿಸಿದೆ. ಈ ಪಟ್ಟಿಯ ಒಂದು ಭಾಗ ಮೇಲಿನ ಪದ್ಯ. ಇಲ್ಲಿಯ 'ಅಹವಮಲ್ಲನುಪ್ಪಳನುಂ' ಎಂಬ ಹೇಳಿಕೆ ಇತಿಹಾಸ ಓದಿದ ವಿದ್ವಾಂಸರನ್ನು ತಟ್ಟನೆ ತನ್ನತ್ತ ಸೆಳೆಯುತ್ತದೆ. ಇದಕ್ಕೆ ಮಹವಮಲ್ಲನಾದ (ಯುದ್ಧವೀರನಾದ) ಉಪ್ಪಳನೆಂದು ಅರ್ಥಹೆಚ್ಚುವುದಕ್ಕಿಂತ ಇಲ್ಲಿ ಅಹವಮಲ್ಲ, ಉಪ್ಪಳ ಹೆಸರಿನ ಇಬ್ಬರು ಶಿವಭಕ್ತರು ಉಕ್ತರಾಗಿರುವರೆಂದು ಭಾವಿಸುವುದು ಸೂಕ್ತವೆನಿಸುತ್ತದೆ.

'ಅಹವಮಲ್ಲ' ಎಂಬುದು ರಾಜವ್ಯಕ್ತಿಯ ಹೆಸರಾಗಿದೆ. ಕರ್ನಾಟಕದಲ್ಲಿ ಈ ಹೆಸರಿನ ಅಧಿರಾಜರು, ಅಧೀನರಾಜರು, ಅಧಿಕಾರಿಗಳು ಕಂಡುಬರುತ್ತಿದ್ದರೂ ಮುಖ್ಯವಾಗಿ ಇದು ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳ ಪರಂಪರಾಗತ ಹೆಸರು. ಬಹುಶಃ ಈ ಪದ್ಯದಲ್ಲಿ ಕಾಣಿಸಿಕೊಳ್ಳುವವನು ಕಲ್ಯಾಣ ಚಾಲುಕ್ಯ ವಂಶದ ಮೂಲಪುರುಷನಾದ ಅಹವಮಲ್ಲ ಇಮ್ಮಡಿ ತೈಲಪನೇ ಆಗಿರಬೇಕು. ಆತನ ತಾಯಿಯ ಹೆಸರು ಬೊಂತಾದೇವಿ. ವೀರಶೈವ ಪುರಾಣಗಳು ಆಗಾಗ ಹೆಸರಿಸುವ ಶಿವಭಕ್ತೆ ಬೊಂತಾದೇವಿ ಈಕೆಯೇ ಆಗಿದ್ದ ಪಕ್ಷದಲ್ಲಿ ಇವಳ ಮಗ ಅಹವಮಲ್ಲ ತೈಲಪನೂ ಶಿವಭಕ್ತನಾಗಿರಬಹುದಾದ ಕಾರಣ, ಆತನೇ ಇಲ್ಲಿ ಉಲ್ಲಿಖಿತನಾಗಿರುವನೆಂದು ಹೇಳಬೇಕಾಗುತ್ತದೆ.

ಇಲ್ಲಿ ಬರುವ ಇನ್ನೊಂದು ಹೆಸರು ಉಪ್ಪಳ. ಕಾವ್ಯಾವಲೋಕನದಲ್ಲಿ (ಪದ್ಯ ೬೩)

ಪದಿನೆಣ್ಛಾಸಿರ ಲೋಹವಕ್ಕರೆಯ ಜಾತ್ಯಶ್ವಂಗಳಿರ್ಛಾಸಿರಂ
ಮದಮಂ ಮುಕ್ಕಳಿಸಿರ್ದ ದಂತಿಘಟೆಗಳ್ ಪತ್ತೆಂಟು ಲಕ್ಕಂ ರಣೋ
ನ್ಮದ ಪತ್ತಿವ್ರಜಮೆಂಬ ಸೈನ್ಯಮದದಿಂ ಬಂದುಪ್ಪಳಂ ಕಾದಿಯೋ
ಡಿದೊಳೆಟ್ಟಿಟ್ಟಿದನಟ್ಟಿ ಮುಟ್ಟಿ ಪಿಡಿದಂ ಚಾಳುಕ್ಯಚಕ್ರೇಶ್ವರಂ॥

ಎಂಬ ಪದ್ಯವಿದೆ. ಇಲ್ಲಿಯ ಗೆದ್ದ ಚಾಳುಕ್ಯಚಕ್ರೇಶ್ವರನೆಂದರೆ ಕಲ್ಯಾಣಚಾಲುಕ್ಯ ಚಕ್ರವರ್ತಿ ಆಹವಮಲ್ಲ ಇಮ್ಮಡಿ ತೈಲಪ (ಕ್ರಿ. ಶ. ೯೭೩-೯೯೭); ಸೋತ ಉಪ್ಪಳ (ಉತ್ಪಲ)ನೆಂದರೆ ಮಾಳವದ ಪರಮಾರಚಕ್ರವರ್ತಿ ಮುಂಜರಾಜ (೯೭೪-೯೯೫). ಸಾನಂದಚರಿತೆಯಲ್ಲಿ ಉಲ್ಲೇಖಿತನಾದ 'ಉಪ್ಪಳ' ಈತನೇ ಆಗಿರಬೇಕು. ಈ ಪದ್ಯದಲ್ಲಿ ಹೆಸರುಗಳು 'ಆಹವಮಲ್ಲನುಪ್ಪಳನುಂ' ಎಂದು ಜೊತೆಯಾಗಿ ಬಂದಿದ್ದು, ಇವರು ಇಮ್ಮಡಿ ತೈಲಪ ಮತ್ತು ಮುಂಜರೆಂಬುದಕ್ಕೆ ಪರಸ್ಪರ ಆಧಾರವಾಗಿ ನಿಲ್ಲುತ್ತವೆ.

ಈ ಯುದ್ಧದ ವಿಷಯವನ್ನು ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಜಮ್ಮಿಕುಂಟ ಶಾಸನ (೯೯೫)[೧] "ಚಾಳುಕ್ಯಾಭರಣಂ ಸತ್ಯಾಶ್ರಯ ಕುಳತಿಳಕಂ ಶ್ರೀಮದಾಹವಮಲ್ಲದೇವ ಪ್ರವರ್ಧಮಾನ ವಿಜಯರಾಜ್ಯಾಭಿವೃದ್ಧಿಯೊಳುತ್ತರ ದಿಗ್ವಿಜಯದೊಳುಪ್ಪಳನಂ ಗೆಲ್ದು" ಎಂದು, ಧಾರವಾಡ ಜಿಲ್ಲೆಯ ಚಿಕ್ಕೆರೂರು ಶಾಸನ (ಕ್ರಿ. ಶ. ೯೯೨) "ಮಹಾಮಂಡಳೇಶ್ವರ ಶ್ರೀಮತೇ ಆಹವಮಲ್ಲದೇವಂ ದಕ್ಷಿಣದಿಗ್ಭಾಗವಂ ನಿರಾಕುಳಂ ಮಾಡಿಯುತ್ತರ ದಿಗ್ವಿಜಯಂಗೆಯ್ದುಪ್ಪಳನ ಮೇಲೆ ನಡೆದು" ಎಂದು ತಿಳಿಸುತ್ತವೆ. ಈ ಯುದ್ಧಕಾಲದಲ್ಲಿ ಚಕ್ರವರ್ತಿಯಾಗಿದ್ದವನು ಆಹವಮಲ್ಲ ಇಮ್ಮಡಿ ತೈಲಪ; ಮಹಾಮಂಡಳೇಶ್ವರನಾಗಿದ್ದವನು ಈತನ ಮಗ ಆಹವಮಲ್ಲ ಇರಿವಬೆಡಂಗ; ಉತ್ಪಲನ ಮೇಲೆ ತಂದೆ ಮಗ ಜೊತೆಯಾಗಿ ಇಲ್ಲವೆ ಇಬ್ಬರಲ್ಲಿ ಒಬ್ಬರು ಏರಿ ಹೋದರೆಂದು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅದೇನೇ ಇದ್ದರೂ ಆಹವಮಲ್ಲ ಇಮ್ಮಡಿ ತೈಲಪನು ಉತ್ಪಲನ ಮೇಲೆ ವಿಜಯ ಸಾಧಿಸಿದುದು ಸತ್ಯಸಂಗತಿ. ಈ ಆಹವಮಲ್ಲ ಮತ್ತು ಉತ್ಪಲರೇ ಸಾನಂದಚರಿತೆಯಲ್ಲಿ ಉಲ್ಲಿಖಿತರಾಗಿರುವರೆಂದೂ ಶಿವನ ಒಡ್ಡೋಲಗದ ಭಕ್ತಗಣದಲ್ಲಿ ಹೆಸರಿಸಿರುವುದರಿಂದ ಇವರು ಶಿವಶರಣ (ಶಿವಭಕ್ತರೆನ್ನುವುದು ಹೆಚ್ಚು ಸಮಂಜಸ)ರೆಂದೂ ಹೇಳಬೇಕಾಗುತ್ತದೆ. ಹೀಗಾಗಿ ಇನ್ನು ಮೇಲೆ ಇವರು ಮೆರೆದ ಶಿವಭಕ್ತಿಯ ವಿಶೇಷತೆಗಳನ್ನು ವಿದ್ವಾಂಸರು ಶೋಧಿಸಬೇಕಾಗಿದೆ.

■■

ಆಕರ : ಮಾರ್ಗ ಸಂಪುಟ-೧

೩೬

ಕವಡೆಯ ಬೊಪ್ಪ

ಕವಡಿಕೆ ಭಾಳದಂಡದೊಳೊಡಂಬಡೆ ದಾದಿಯರಿಕ್ಕೆಲಂಗಳೊಳ್
ಸವಡಿಸಿ ಸಾರ್ಚೆ ದಟ್ಟಡಿಯೊಳೆಟ್ಟಿರುತಿರ್ದ್ದನನಾರಬೊಪ್ಪನೀ
ಕವಡೆಯ ಬೊಪ್ಪನೆಂದು ನಡೆ ನೋಡಿದಱಿಟ್ಕಱೊಳಪ್ಪುಕೆಯ್ಬಿನಂ
ಕವಡೆಯ ಬೊಪ್ಪನೆಂಬ ಪೆಸರಗ್ಗಳಮೊಪ್ಪಿದುದಾ ಕುಮಾರನೊಳ್ ||[೧]

ಸೂಕ್ತಿಸುಧಾರ್ಣವದ 'ಕುಮಾರೋದಯ ವರ್ಣನಂ' ಪ್ರಸಂಗದಲ್ಲಿ ಕಂಡುಬರುವ ಈ ಪದ್ಯ 'ಕವಡೆಯ ಬೊಪ್ಪ'ನೆಂಬ ಐತಿಹಾಸಿಕ ವ್ಯಕ್ತಿಯ ಬಾಲಲೀಲೆಯನ್ನು ಬಣ್ಣಿಸುತ್ತದೆ. ಹಣೆಯ ಮೇಲೆ ಕವಡೆಯ ಸರ ಕಟ್ಟಿಕೊಂಡು ದಟ್ಟಹೆಜ್ಜೆಗಳನ್ನಿಡುತ್ತ ಬರುವಲ್ಲಿ, ದಾದಿಯರು ಎಡಬಲಕ್ಕೆ ನಿಂತು, 'ಆರ ಬೊಪ್ಪಂ? ಈ ಕವಡೆಯ ಬೊಪ್ಪಂ?' ಎಂದು ಲಲ್ಲೆಯಿಂದ ನುಡಿಯುತ್ತಿರಲು ಆ ಕುಮಾರನಿಗೆ "ಕವಡೆಯ ಬೊಪ್ಪಂ" ಎಂಬ ಹೆಸರು ಶೋಭಿಸಿತು- ಎಂದು ಈ ಪದ್ಯದ ಅರ್ಥ. ಈ ಪದ್ಯವನ್ನು ಸೂಕ್ತಿಸುಧಾರ್ಣವಕಾರನು ಯಾವ ಕಾವ್ಯದಿಂದ ಎತ್ತಿಕೊಂಡನೋ ತಿಳಿಯದು. ಶಾಸನಗಳು ಸಾಮಾನ್ಯವಾಗಿ ವ್ಯಕ್ತಿಯೊಬ್ಬನ ದಾನ-ವೀರ ಗುಣಗಳನ್ನು ಮಾತ್ರ ವರ್ಣಿಸುವುದರಿಂದ ಬಾಲಲೀಲೆಯ ಈ ಪದ್ಯ ಶಾಸನಕ್ಕೆ ಸಂಬಂಧಿಸದೆ ಒಂದು ಕಾವ್ಯಕ್ಕೆ ಸಂಬಂಧಿಸಿದುದಾಗಿರಬೇಕು. ಈ ಕಾವ್ಯ, ಕವಿ ಮತ್ತು ಕಾವ್ಯನಾಯಕನಾದ ವ್ಯಕ್ತಿ ಮುಂತಾದ ವಿಷಯಗಳು ಈ ವರೆಗೆ ಬೆಳಕಿಗೆ ಬಂದಿಲ್ಲ.

ಪ್ರಾಚೀನ ಕಾಲದಲ್ಲಿ ಬಾಂಧವಪುರವೆಂದು ಪ್ರಸಿದ್ಧಿ ಪಡೆದ ಈಗಿನ ಬಂದಳಿಕೆ ಕರ್ನಾಟಕದ ಇತಿಹಾಸದಲ್ಲಿ ಒಂದು ಮಹತ್ವದ ಪಟ್ಟಣ. ಇಲ್ಲಿಯ ಶಾಂತಿನಾಥ ಬಸದಿಯ ಮುಂದಣ ಶಾಸನವೊಂದು E.C. VII ಶಿಕಾರಿಪುರ 225ರಲ್ಲಿ ಅಚ್ಚಾಗಿದೆ. ಈ ಶಾಸನದ ಪ್ರಾರಂಭದಲ್ಲಿಯೇ

ಕವಿನಿವಹಸ್ತುತಂ ನೆಗಟ್ದಿ ರೇಚಚಮೂಪತಿಯಿಂ ಬಳಿಕ್ಕಮಾ
ಭುವನದೊಳಿಂತನಂತ ಜಿನಧರ್ಮ್ಮಮನುದ್ಧರಿಪರ್ದ್ದರೇಚನಂ
ಸುವಿದಿತಮಾಗೆ ಬಾಂಧವಪುರಾಧಿಪ ಶಾನ್ತಿಜಿನೇಶ ತೀರ್ಥಮಂ
ಕವಡೆಯ ಬೊಪ್ಪನುದ್ಧರಿಸಿದಂ ಯದುವಲ್ಲಭ ರಾಜ್ಯಭೂಷಣಂ ||

ಮಡಗಿಡಲೆಂದೇ ಧನಮಂ
ಪಡೆವನೆ ನಾಳ್ದೆಱದ ದಾನಮಂ ಮಾಡಲುಕೆಂ
ದೊಡೆಮೆಯನಜ್ಜಪನಾರಿಂ
ಕಡು ಜಾಣಂ ಭವ್ಯರೊಳಗೆ ಕವಡೆಯ ಬೊಪ್ಪಂ ||

೧. ಸೂಕ್ತಿ ಸೂಧಾರ್ಣವ VII-66, ಪುಟ 130

ಎಂಬ ಪದ್ಯಗಳಿದ್ದು ತರುವಾಯ "ಶ್ರೀ ಮತ್ಪರಮ ಗಂಭೀರ ಸ್ಯಾದ್ವಾದಾಮೋಘ....." ಎಂಬ ಮಂಗಲಪದ್ಯ, ಸಳನನ್ನು ಮೊದಲುಗೊಂಡು ವಿಷ್ಣುವರ್ಧನ-ನರಸಿಂಹ-ಏಚಲೆ-ಬಲ್ಲಾಳನ ವರೆಗಣ ಹೊಯ್ಸಳ ವಂಶವೃಕ್ಷ, ಬನವಾಸಿನಾಡು ಮತ್ತು ಅದರ ಒಂದು ಪ್ರಾಂತವಾದ ನಾಗರಖಂಡ, ಅದರಲ್ಲಿರುವ ಬಾಂಧವನಗರ ಇತ್ಯಾದಿ ವರ್ಣನೆಗಳು ಬರುತ್ತವೆ. ತರುವಾಯ

ಅದನಾಳ್ವಂ ಪ್ರಜೆಮೆಚ್ಚೆ ಗಂಡನದಟಂ ಕಾದಂಬವಂಶೋದ್ಭವಂ
ಮುದದಿಂ ಸೋಮನೃಪಾತ್ಮಜಾತನೆನಿಸಿರ್ದಾ ಬೊಪ್ಪದೇವಂಗೆ ಪು
ಟ್ಟಿದ ಸತ್ಪುತ್ರನನೂನ ಶೌರ್ಯನಿಳೆಯಂ ಕಂದರ್ಪ ಸನ್ಮೂರ್ತಿಯ
ಭ್ಯುದೆಯಾಳಂಕ್ರಿತಿಯಾನ್ತ ಕೀರ್ತಿರಮಣಂ ಶ್ರೀಬ್ರಹ್ಮಭೂಪಾಳಕಂ॥

ಆ ಬಂದಣಿಕೆಯ ಶಾಂತಿನಾಥದೇವರ ಮಂಟಪಮಂ ಮಾಡಿಸಿ ಕವಡೆಯ ಬೊಪ್ಪಸೆಟ್ಟಿಯರು ಸರ್ವನಮಸ್ಯಮಂ ಮಾಡಿದಂ" ಎಂಬ ಕವಡೆಯ ಬೊಪ್ಪನನ್ನು ವರ್ಣಿಸುವ ಭಾಗ ಕಂಡುಬರುತ್ತದೆ. ಇಲ್ಲಿ 'ಕಾದಂಬ ವಂಶೋದ್ಭವ'ನಾದ ಬೊಪ್ಪದೇವನಿಂದ ಈ ಕವಡೆಯ ಬೊಪ್ಪಸೆಟ್ಟಿ ಬೇರೆ ಎಂದು ಸ್ಪಷ್ಟವಾಗಿಯೇ ಇದೆ. ಶಾಸನದಲ್ಲಿ "ಕವಿನಿವಹಸ್ತುತಂ' ಎಂದೂ 'ಕಡುಚಾಣಂ ಭಭವ್ಯರೊಳ್' ಎಂದೂ ಕರೆದುದರಿಂದ ಈತನೊಬ್ಬ ಆ ಕಾಲದ ಸುಪ್ರತಿಷ್ಠ ವ್ಯಕ್ತಿಯಾಗಿರಬೇಕು. ಈತನನ್ನು ಕುರಿತು. ಹುಟ್ಟಿರಬಹುದಾದ ಯಾವುದೋ ಒಂದು ಕಾವ್ಯದಿಂದ ಮಲ್ಲಿಕಾರ್ಜುನನು ಮೇಲಣ ಪದ್ಯವನ್ನು ಸ್ವೀಕರಿಸಿದಂತಿದೆ.

ಮೊದಲು ಕಲಚೂರಿಗಳಲ್ಲಿ ಆ ಮೇಲೆ ಹೊಯ್ಸಳ ವೀರಬಲ್ಲಾಳ (1173-1220) ನಲ್ಲಿ ಮಂತ್ರಿಯಾಗಿದ್ದ, ಆಚಣ್ಣನಿಂದ ವರ್ಧಮಾನಪುರಾಣವನ್ನು ಬರೆಸಿದ ವಸುಧೈಕಬಾಂಧವ ರೇಚಣಮಂತ್ರಿ ಜೈನಧರ್ಮವನ್ನುದ್ಧರಿಸಿದ ಪುಣ್ಯಪುರುಷರಲ್ಲಿ ಒಬ್ಬ. ತರುವಾಯ ಜೈನಮತವನ್ನು ಬೆಳಗಿದ ಈ ಕವಡೆಯ ಬೊಪ್ಪನು 'ಅರ್ಧರೇಚಣಂ' ಎಂದು ಹೆಸರಾಗಿದ್ದಾನೆ. ಅದಕ್ಕಾಗಿ ಆತನು ರೇಚಣನಿಗೆ ತರುವಾಯ, ಸೂಕ್ತಿಸುಧಾರ್ಣವಕಾರ (1245)ನಿಗೆ ಮೊದಲು, ಅಂದರೆ ೧೩ನೆಯ ಶತಮಾನದ ಆದಿಭಾಗದಲ್ಲಿ ಬಾಳಿರಬೇಕು. ಈತನನ್ನು ಕುರಿತು ಬರೆದ ಕಾವ್ಯದ ಹೆಸರು, ಕವಿಯ ಹೆಸರು, ಕಥಾವಸ್ತು ಇನ್ನೂ ಗೊತ್ತಾಗಿಲ್ಲ. ಆದರೆ ಕವಡೆಯ ಬೊಪ್ಪನು ಜೀರ್ಣೋದ್ಧರಿಸಿದ ಶಾಂತಿನಾಥ ಬಸದಿಯ ಮಂಟಪದ ನೈಋತ್ಯ, ವಾಯವ್ಯ, ಈಶಾನ್ಯ, ಆಗ್ನೇಯ ಕಂಬಗಳ ಮೇಲೆ ಒಂದೊಂದು ಚಿತ್ರಬಂಧ ಕಂಡುಬರುತ್ತವೆ. ಇವುಗಳಲ್ಲಿ ಒಂದು ಚಿತ್ರಬಂಧ (ಚಕ್ರಬಂಧ)ಕ್ಕೆ "ಸೂರಿ ವಿರಚಿತಾಯೆಂದು ಕವಿನಾಮವನೋದಿಕೊಂಬುದು" ಎಂಬು ವಿವರಣೆ ಕೊಡಲಾಗಿದ್ದು, ಶಾಸನೋಕ್ತ ಈ ಸೂರಿಯೇ ಕವಡೆ ಬೊಪ್ಪನನ್ನು ಕುರಿತು ಚಂಪೂ(?) ಕೃತಿಯನ್ನು ಬರೆದಿರಬಹುದೆಂದು ಊಹಿಸಲು ಅವಕಾಶವಿದೆ.*

■■

* "ಕವಡಿಕೆ ಭಾಳದಂಡದೊಳೊಡಂಬಡೆ ......"ಎಂಬ ಪದ್ಯದ ಮುಂದಣ 2-3 ಪದ್ಯಗಳು ಕವಡೆಯ ಬೊಪ್ಪನನ್ನು ಕುರಿತ ಕಾವ್ಯಕ್ಕೆ ಸಂಬಂಧಿಸಿದವುಗಳೆಂದು ಊಹಿಸಲು ಬರುವಂತಿದೆ.

ಆಕರ : ಮಾರ್ಗ ಸಂಪುಟ–೨

೩೭

ಪುಲಿಗೆರೆಯ ಒಂದು ವೀರಶೈವ ಪೀಠಪರಂಪರೆ

ಕಲ್ಯಾಣದ ತರುವಾಯ ವೀರಶೈವ ಇತಿಹಾಸದಲ್ಲಿ ಮಹತ್ವದ ಪಾತ್ರವಹಿಸಿದ ಗುಮ್ಮಳಾಪುರ, ವಿಜಯನಗರ, ಗುಬ್ಬಿ, ಎಡೆಯೂರಗಳ ಸಾಲಿನಲ್ಲಿ ನಿಲ್ಲುವ ಊರು ಪುಲಿಗೆರೆ. ಸೋಮನಾಥ ಪ್ರತಿಷ್ಠಾಪಕ ಆದಯ್ಯ ಇಲ್ಲವೆ ಸೋಮಣ್ಣ[೧] ಏಕಾಂತ ರಾಮಯ್ಯನ ರುಂಡವನ್ನು ಹೊತ್ತು ಮೆರೆಸಿದ ಅಗ್ಗವಣಿ ಹೊನ್ನಯ್ಯ[೨], ಸೋಮೇಶ್ವರ ಶತಕದ ಕರ್ತೃ ಕವಿ ಸೋಮ(?), ತ್ರಿಷಷ್ಠಿ ಪುರಾತನಚಾರಿತ್ರ್ಯದ ಕರ್ತೃ ಸುರಂಗ. ಆದಯ್ಯನ ಸಂಪ್ರದಾಯಕ್ಕೆ ಮುಖ್ಯನಾದ ಚಿಕ್ಕಣಾಚಾರ್ಯ[೩] ಮೊದಲಾದ ಶಿವಶರಣರು ಮತ್ತು ಶಿವಕವಿಗಳು ಈ ಗ್ರಾಮಕ್ಕೆ ಸಂಬಂಧಿಸಿದವರು. ಇವರಲ್ಲಿ ಎದ್ದು ಕಾಣುವ ವ್ಯಕ್ತಿ ಭಕ್ತಿಭಾಂಡಾರಿ ಜಕ್ಕಣ್ಣನ ಗುರು ಮಹಾಲಿಂಗದೇವ.

೧೫ನೆಯ ಶತಮಾನದಲ್ಲಿ ವೀರಶೈವ ಜಗತ್ತನ್ನು ಜೀವಂತಗೊಳಿಸಿ, ಅದನ್ನು ಉದ್ದಗಲ ಬೆಳೆಸಿದ ಗಣ್ಯವ್ಯಕ್ತಿಗಳಲ್ಲಿ ಈತನ ಹೆಸರು ಚಿರಸ್ಮರಣೀಯವೆನಿಸಿದೆ. ಏಕೋತ್ತರಶತಸ್ಥಲ ಮತ್ತು ಪ್ರಭುದೇವರ ಷಟ್ಸ್ಥಲವಚನ ಟೀಕೆ ಗ್ರಂಥಗಳಲ್ಲಿ ಈತನು ತನ್ನ ಪೀಠಪರಂಪರೆಯನ್ನು ಹೀಗೆ ಹೇಳಿಕೊಂಡಿರುವನು:

"ಸ್ವಸ್ತಿ ಸಮಸ್ತ ಭುವನಜನ ತಿಮಿರಹರಣ ಕಾರಣಸ್ವರೂಪರುಂ, ಭಕ್ತದೇಹಿಕ ದೇವರುಂ, ಭಕ್ತವತ್ಸಲರುಂ, ಸರ್ವಾಂಗಪ್ರಾಣಲಿಂಗಮೂರ್ತಿ ವಿಳಾಸಂ, ಹುಲಿಗೆರೆಯ ಪುರವಾಧೀಶ್ವರರುಂ, ಅಪೂರ್ವ ಸ್ವಯಂಭು ಪ್ರಸನ್ನ ಚೆನ್ನದಕ್ಷಿಣ ಶ್ರೀ ಸೋಮನಾಥದೇವರ ದಿವ್ಯಶ್ರೀಪಾದಪದ್ಮಾರಾಧಕರುಂ, ತ್ರಿಕಾಂಡನಿಷ್ಠರುಂ, ಋಗ್ಯಜುಸ್ಸಾಮಾಥರ್ವಣಾಂತರ್ಗತ ಪ್ರತಿಪಾದ್ಯ ಪ್ರಮುಖರು, ಶ್ರುತಿ-ಸ್ಮೃತಿ-ಪುರಾಣಾಗಮ ಇತಿಹಾಸಾದಿ ನಾನಾಶಾಸ್ತ್ರಕೋವಿದರುಂ, ಪರಮವೀರಶೈವಾಗಮಾಚಾರ್ಯರುಂ, ಸಕಲ ಪ್ರಸಾದ ಪಂಚಾಕ್ಷರೀಮಂತ್ರ ಶುದ್ಧರುಂ, ನಿತ್ಯಪರಿಪೂರ್ಣ ಸಚ್ಚಿದಾನಂದ ನಿರಂಜನ ಪರಂಜ್ಯೋತಿಸ್ವರೂಪರುಂ, ಪರಮಗುರುಮೂರ್ತಿ ಜಗದಾರಾಧ್ಯರುಮಪ್ಪ ಮಹಾಲಿಂಗದೇವರ ಅನಾದಿ ಸಂಸಿದ್ಧ ಗುರುಕುಲದನ್ವಯವೆಂತೆಂದಡೆ:ಪ್ರಥಮದಲ್ಲಿ ನಿತ್ಯನಿರ್ಮಳ ನಿರಂಜನ ವಾಙ್ಮನಕ್ಕಗೋಚರಮಪ್ಪ ಪರಶಿವನು, ದ್ವಿತೀಯದಲ್ಲಿ ವಾಙ್ಮನೋತೀತನಪ್ಪ ನಂದಿಕೇಶ್ವರನು, ತೃತೀಯದಲ್ಲಿ ಪರಮ ಋಷೀಶ್ವರನಪ್ಪ ದೂರ್ವಾಸದೇವರು, ಚತುರ್ಥದಲ್ಲಿ, ದ್ವಿತೀಯಸ್ವಯಂಭೂ ತ್ರಿಣೇತ್ರದೇವರು,

---

೧. ವಚನ ಪಿತಾಮಹ ಪು. 470.

೨. ಏಕಾಂತರಾಮಯ್ಯನ ರಗಳೆ

೩. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಭಾಗ 2 ಪು. 68 (1968)

ಪಂಚಮದಲ್ಲಿ ಉರಿಲಿಂಗಪೆದ್ದಣ್ಣಗಳು. ಷಷ್ಟಮದಲ್ಲಿ ಸರ್ವೇಶ್ವರದೇವರು, ಸಪ್ತಮದಲ್ಲಿ ವಿಶ್ವೇಶ್ವರ ಪೆದ್ದಣ್ಣಗಳು, ಅಷ್ಟಮದಲ್ಲಿ ಸಂಹಿತೆಯ ಕಾಳಿದಾಸಭಟ್ಟರು. ನವಮದಲ್ಲಿ ಸದಾಶಿವದೇವರು, ದಶಮದಲ್ಲಿ ಪ್ರಣಮಿದೇವರು, ಏಕಾದಶದಲ್ಲಿ ಈಶಾನ್ಯದೇವರು, ದ್ವಾದಶದಲ್ಲಿ ಮೋನಿದೇವರು, ತ್ರಯೋದಶದಲ್ಲಿ ಚೆನ್ನಸೋಮಯ್ಯ ದೇವರು, ಚತುರ್ದಶದಲ್ಲಿ ಬಾಗಿಯ ಬಂಕನಾಥದೇವರು, ಪಂಚಮದಶದಲ್ಲಿ ಶಂಕರದೇವರು, ಷೋಡಶದಲ್ಲಿ ಗಂಗಾಧರ ದೇವರು, ಸಪ್ತದಶದಲ್ಲಿ ಬಂಕನಾಥದೇವರು, ಅಷ್ಟಾದಶದಲ್ಲಿ ಪುರಾಣದ ಮಾಯಿದೇವಪಂಡಿತರು, ನವದಶಕದಲ್ಲಿ ಬಂಕಯ್ಯದೇವರು, ವಿಂಶತಿಯಲ್ಲಿ ಮಹಾಲಿಂಗದೇವರು, ಏಕವಿಂಶತಿಯಲ್ಲಿ ಕುಮಾರ ಬಂಕನಾಥದೇವರು, ಆ ಕುಮಾರ ಬಂಕನಾಥದೇವರ ದಿವ್ಯಜ್ಞಾನಾನಂದಕರಕಮಲದಲ್ಲಿ ಉದಯನಾದ ತತ್‌ಶಿಷ್ಯ ಭಕ್ತಿಭಂಡಾರಿ ಜಕ್ಕಣ್ಣನು".

ಇವರಲ್ಲಿ ಪ್ರಾರಂಭದ ಮೂವರನ್ನು ಬಿಟ್ಟರೆ ಮಿಕ್ಕವರೆಲ್ಲ ಐತಿಹಾಸಿಕ ವ್ಯಕ್ತಿಗಳು ನಾಲ್ಕನೆಯವನಾದ ತ್ರಿಣೇತ್ರದೇವನ ವಿಷಯ ತಿಳಿದುಬಂದಿಲ್ಲ. ಐದನೆಯ ವ್ಯಕ್ತಿ ಉರಿಲಿಂಗಪೆದ್ದಣ್ಣ. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರದಲ್ಲಿ ಶರಣ ಉರಿಲಿಂಗದೇವ ಮತ್ತು ಶಿಷ್ಯ ಉರಿಲಿಂಗಪೆದ್ದಿಗಳನ್ನು ಕುರಿತು ಬರುವ "ಅವಸೆಕಂಧಾರವೆಂಬ ಪಟ್ಟಣದಲ್ಲಿ ಉರಿಲಿಂಗದೇವರೆಂಬ ಆಚಾರ್ಯರು ವೀರಶೈವಮತಾಚಾರಕ್ಕೆ ಗುರುವಾಗಿರುತ್ತ ಭಕ್ತಜನಕ್ಕೆ ಉಪದೇಶಮಂ ಮಾಡುತ್ತ ಇಪ್ಪತ್ತೊಂದು ಗುರುಸಂಪ್ರದಾಯಕ್ಕೆ ಯೋಗ್ಯರಾಗಿ .... ಇತ್ತ ಪೆದ್ದಣ್ಣನೆಂಬವಿದ್ದು"[೪] ಎಂಬ ಹೇಳಿಕೆಯಲ್ಲಿಯ 'ಇಪ್ಪತ್ತೊಂದು ಗುರುಸಂಪ್ರದಾಯ'ದ ಉಲ್ಲೇಖ ಮಹಲಿಂಗದೇವನ ಸಂಪ್ರದಾಯವನ್ನು ಸೂಚಿಸುತ್ತದೆ.[೫] ಮಹಲಿಂಗದೇವನ ಗುರುಸಂಪ್ರದಾಯದ ಉರಿಲಿಂಗ ಪೆದ್ದಣ್ಣನು ಕಲ್ಯಾಣದ ಶಿವಶರಣ ಬಳಗಕ್ಕೆ ಸಂಬಂಧಿಸಿದವೆನ್ನಬಹುದು. ಇವನು "ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ" ಎಂಬ ಮುದ್ರಿಕೆಯಿಂದ ವಚನಗಳನ್ನು ರಚಿಸಿರುವರು.

ಆರನೆಯ ವ್ಯಕ್ತಿ ಸರ್ವೇಶ್ವರದೇವರು. ಈತನ ವಿಷಯ ತಿಳಿದುಬಂದಿಲ್ಲ. ಏಳನೆಯ ವ್ಯಕ್ತಿ ವಿಶ್ವೇಶ್ವರ ಪೆದ್ದಣ್ಣ. ಈತನ ವಿಷಯ ತಿಳಿದುಬಂದಿಲ್ಲವಾದರೂ "ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ" ಎಂಬ ಉರಿಲಿಂಗ ಪೆದ್ದಣ್ಣಗಳ ಮುದ್ರಿಕೆಯಲ್ಲಿ ಈ ಹೆಸರಿನ ಸುಳುಹನ್ನು ಕಾಣಬಹುದು.

ಎಂಟನೆಯ ಅಧಿಕಾರಿ ಸಂಹಿತೆಯ ಕಾಳಿದಾಸಭಟ್ಟರು. ಲಕ್ಷ್ಮೇಶ್ವರ ಒಂದು ಶಾಸನದಲ್ಲಿ (ಕ್ರಿ.ಶ. 1116) ಸಂಹಿತೆಯ ರೇವರಸ ಎಂಬ ಹೆಸರು ಕಂಡುಬರುತ್ತಿದ್ದರೂ ಈ ಇಬ್ಬರ ವಂಶಸಂಬಂಧ ಸಂದೇಹ.[೬] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರದಲ್ಲಿ ಬರುವ "ಕವಿಕಾಳಿದಾಸನು ಮೂಗುಳ ನವಣೆಯಷ್ಟು ಕಣ್ಣು ಪಡೆದು ಕಂಗಳಂಗೆ ಕೊಡುತಹನೆ. ಭೋಜನ ಸಭೆಗೆ ಪೋದರೆ ಕಾಳಿದಾಸ ಕಣ್ಣ ಕೊಡುವನೆನಲು, ಆಗ ವೀರಶೈವದ ಇಪ್ಪತ್ತೊಂದು ಗುರುಸಂಪ್ರದಾಯದಲ್ಲಿ ಎಂಟನೆಯ ಸಂಪ್ರದಾಯದ ಗುರುಮೂರ್ತಿಯಾದ ಸಂಹಿತೆಯ ಕಾಳಿದಾಸಭಟ್ಟರು ಕೇಳಿ, ಆ ಕಾಳಿದಾಸ ಕೊಟ್ಟಹನು ನಾವು ಕೊಡಲಾರೆವೆ? ಎಂಬ ಶಿವನ ನುತಿಸಿ ಖಂಡುಗ

---

೪. ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ, II ಪುಟ: 39 (1968)

೫. ಈ ಉರಿಲಿಂಗದೇವ ಮತ್ತು ಶಿಷ್ಯ ಉರಿಲಿಂಗಪೆದ್ದಿಗಳು ನಲ್ಲೂರಿ ಮಠದ ಅಧಿಕಾರಿಗಳೆಂದು ನೀಲಕಂಠಾಚಾರ್ಯನ (ಕ್ರಿ.ಶ. 1485) ಆರಾಧ್ಯ ಚರಿತ್ರೆ ಹೇಳುತ್ತದೆ. (ಕವಿಚರಿತೆ। 297. 305)

೬. SII XX No. 144.

ನವಣೆಯಷ್ಟು ಕಣ್ಣ ಪಡೆದ"[೭]ಎಂಬ ಹೇಳಿಕೆಯಿಂದ ಈ ಸಂಹಿತೆಯ ಕಾಳಿದಾಸಭಟ್ಟನ ಅಲ್ಪಚರಿತ್ರೆ ತಿಳಿದುಬಂದು ಈತನ ಶಿವನಿಷ್ಠೆ ವ್ಯಕ್ತವಾಗುತ್ತದೆ.

ಒಂಬತ್ತು, ಹತ್ತು, ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾಲ್ಕು* ಹದಿನೈದು, ಹದಿನಾರು ಹದಿನೇಳನೆಯ ಪೀಠಾಧಿಕಾರಿಗಳ ವಿಷಯ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಹದಿನೆಂಟನೆಯ ವ್ಯಕ್ತಿ ಪುರಾಣದ ಮಾಯಿದೇವಪಂಡಿತ. ಗಿರಿಸಿದ್ಧಾಪುರದ ಒಂದು ಶಾಸನ "ಹುಲಿಗೆರೆಯ..... ಕ್ಷೇತ್ರನಿವಾಸಿಗಳಪ್ಪ ಪುರಾಣದ ಮಾಯಿದೇವಪಂಡಿತರ ......"[೮] ಎಂದು ಪುಲಿಗೆರೆಗೆ ಸಂಬಂಧಪಟ್ಟ ಒಬ್ಬ ಪುರಾಣದ ಮಾಯಿದೇವನನ್ನು ಉಲ್ಲೇಖಿಸುತ್ತದೆ. ಈತನು ಮೇಲೆ ಹೇಳಿದ ಹದಿನೆಂಟನೆಯ ಅಧಿಕಾರಿಯಾಗಿರಲು ಸಾಧ್ಯವಿದೆ. ಹಾಗಿದ್ದರೆ ಹದಿನೆಂಟನೆಯ ಅಧಿಕಾರಿಯಾದ ಪುರಾಣದ ಮಾಯಿದೇವ ಪಂಡಿತರ ಕಾಲ, ಶಾಸನದ ಪ್ರಕಾರ ಕ್ರಿ.ಶ. ೧೨೮೪, ಅಂದರೆ ೧೩ನೆಯ ಶತಮಾನದ ಅಂತ್ಯ.

ತ್ರಿಭುವನತಾತನೊಂದಿಗೆ ವಾದಕ್ಕೆ ನಿಂತ ಕೆರೆಯ ಪದ್ಮರಸರಿಗೆ ಬೆಂಬಲ ನೀಡಿದವರಲ್ಲಿ "ಹುಲಿಗೆರೆಯ ಮಾಯಿದೇವ ಪುರಾಣಭಟ್ಟ'ನೂ ಒಬ್ಬನೆಂದು ಸಾನಂದಚರಿತೆ[೯] ಮತ್ತು ಪದ್ಮರಾಜ ಪುರಾಣಗಳು[೧೦] ಹೇಳುತ್ತವೆ. ಈತನು ೧೩ನೆಯ ಶತಮಾನದ ಅಂತ್ಯನಾದವನಾಗಿರಬೇಕು. ಈ ಎರಡೂ ಹೆಸರುಗಳ ಹಿಂದೆ ಇರುವ 'ಹುಲಿಗೆರೆ' ಎಂಬ ಪದ ಮತ್ತು ಎರಡೂ ವ್ಯಕ್ತಿಗಳ ಸಮಕಾಲೀನತೆಯನ್ನು ಗಮನಿಸಿದರೆ ಮಹಲಿಂಗದೇವನ ಗುರು ಸಂಪ್ರದಾಯ ಮತ್ತು ಗಿರಿಸಿದ್ಧಾಪುರ ಶಾಸನಗಳಲ್ಲಿ ಬರುವ 'ಹುಲಿಗೆರೆಯ ಪುರಾಣದ ಮಾಯಿದೇವ ಪಂಡಿತ' ಮತ್ತು ಸಾನಂದ ಚರಿತೆ, ಪದ್ಮರಾಜ ಪುರಾಣಗಳಲ್ಲಿ ಬರುವ 'ಹುಲಿಗೆರೆಯ ಮಾಯಿದೇವ ಪುರಾಣಭಟ್ಟ' ಒಬ್ಬನೇ ಎಂಬ ಭಾವ ಹುಟ್ಟುತ್ತದೆ.

ಇನ್ನು "ಹಂಪೆಯಲ್ಲಿದ್ದ ಶಂಕರರಸರ ಮಗ ಮಾದರಸರು. ಅವರ ಮಗ ಹರೀಶ್ವರದೇವರು ಪುರಾಣದ ಮಾಯಿದೇವಭಟ್ಟರಿಂದುಪದೇಶವ ಪಡೆದು ವಿರೂಪಾಕ್ಷಲಿಂಗವೇ ತನಗೆ ಪ್ರಾಣಲಿಂಗವಾಗಿ"[೧೧] ಎಂಬ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರದ ಹೇಳಿಕೆಯಲ್ಲಿ ಒಬ್ಬ ಪುರಾಣದ ಮಾಯಿದೇವಭಟ್ಟ ಕಂಡುಬರುತ್ತಾನೆ. ಈ ಪುರಾಣದ ಮಾಯಿದೇವಭಟ್ಟ, ಮೇಲೆ ಹೇಳಿದ ಮಾಯಿದೇವ ಪುರಾಣಭಟ್ಟ (=ಪುರಾಣದ ಮಾಯಿದೇವ ಪಂಡಿತ) ಒಬ್ಬನೇ ಆಗಿರಲು ಸಾಧ್ಯವಿದೆ. ನಾಮಸಾಮ್ಯತೆ ಸಮಕಾಲೀನತೆಗಳೂ ಇದನ್ನು ಬೆಂಬಲಿಸುತ್ತವೆ. ಹೀಗಾಗಿ ಮಹಲಿಂಗದೇವನ ಗುರುಪರಂಪರೆಗೆ ಸೇರಿದ ಪುರಾಣದ ಮಾಯಿದೇವ ಪಂಡಿತನು ಮಹಾಕವಿ ಹರಿಹರನ

---

೭. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಭಾಗ 2 ಪುಟ: 214 (1968). ಪುಟ 215 ರಲ್ಲಿಯ "ನಂಬ್ಯಣ್ಣನು ಸಂಹಿತೆಯ ಕಾಳಿದಾಸ ಪಂಡಿತರು, ಕವಿ ಕಾಳಿದಾಸಯ್ಯನು, ಕನ್ನಪ್ಪದೇವನು ಅವರು ಮೊದಲಾದವರು ಶಿವನಿಗೆ ಕಣ್ಣನ್ನಿತ್ತು ಮತ್ತೆ ಕಣ್ಣು ಪಡೆದರು' ಎಂಬ ಮಾತನ್ನು ಇಲ್ಲಿ ಗಮನಿಸಬೇಕು.

* 14ನೆಯ ಬಾಗಿಯ ಬಂಕನಾಥನು ಈಗಿನ ರಾಯಬಾಗದವನು.

೮. E.C.V. ಬೇಲೂರ 244 ಗಿರಿಸಿದ್ಧಾಪುರ (Sup).

೯. ಸಾನಂದಚರಿತೆಯ ಕೊನೆಯ ಸಂಧಿ.

೧೦. ಪದ್ಮರಾಜಪುರಾಣ 9-29.

೧೧. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಬಾಗ 2. ಪುಟ : 258 (1968)

ಗುರುವೆಂದೂ[೧೨] ಕವಿ ಹರಿಹರನ ಕಾಲ, ಶಾಸನದ ಕಾಲವಾದ ಕ್ರಿ.ಶ. ಸು. ೧೨೮೫ ಎಂದೂ ಹೇಳಬಹುದು. ಇದಕ್ಕೆ ಇನ್ನೂ ಆಧಾರಗಳು ಬೇಕು.

ಹತ್ತೊಂಬತ್ತನೆಯ ಅಧಿಕಾರಿ ಬಂಕಯ್ಯದೇವರು. ತರುವಾಯ ಬಂದವರು ಇಪ್ಪತ್ತನೆಯ ಅಧಿಕಾರಿ ಮಹಲಿಂಗದೇವರು. ೧೫ನೆಯ ಶತಮಾನದ ವೀರಶೈವ ದಿಗ್ಗಜಗಳಲ್ಲಿ ಒಬ್ಬನಾದ ಈತನ ಕೃತಿಗಳು ಏಕೋತ್ತರ ಶತಸ್ಥಲ ಮತ್ತು ಪ್ರಭುದೇವರ ವಚನ ಟೀಕು. ಶರಣರ ವಚನಗಳನ್ನು ನೂರೊಂದು ಸ್ಥಲಗಳಲ್ಲಿ ಹೆಣೆದು ಏಕೋತ್ತರ ಶತಸ್ಥಲದ ಪ್ರಥಮಕಲ್ಪನೆ ಕೊಟ್ಟವನು, ಮಹಲಿಂಗದೇವ. ಈತನ ಈ ಕೃತಿ, ತರುವಾಯ ಬಂದ ಹಲವಾರು ಏಕೋತ್ತರಶತಸ್ಥಲಗಳಿಗೆ ಗಂಗೋತ್ರಿ ಎನಿಸಿದೆ. ಪ್ರತಿಯೊಂದು ಸ್ಥಲದಲ್ಲಿ ಮೊದಲಿಗೆ ಕೆಲವು ವಚನ, ತರುವಾಯ ಒಂದು ಸ್ವರವಚನ (ಹಾಡು) ಕೊನೆಗೆ ಗದ್ಯರೂಪದ ಸೂತ್ರ- ಹೀಗೆ ಸ್ಥಲಗಳನ್ನು ಮುಂದುವರೆಸಿರುವನು. ತಾನು ಆಯ್ದುಕೊಂಡ ಉಚಿತವಾದ ವಚನ ಹಾಡುಗಳಿಗೆ ಗದ್ಯರೂಪದ ಸೂತ್ರ ಕೊಂಡಿಯನ್ನು ಯೋಜಿಸಿಕೊಂಡು, ಬಿಡಿವಚನಗಳಿಗೆ ನೂರೊಂದು ಸ್ಥಲಗಳ ಸಕ್ರಮತೆಯನ್ನು ರೂಪಿಸಿದ ಈತನ ಕಲ್ಪನೆ ನವೀನವಾಗಿದೆ. ಪ್ರಶಿಷ್ಯ ಜಕ್ಕಣಾಚಾರ್ಯನ ಬಿನ್ನಹದ ಮೇರೆಗೆ ರಚಿಸಿದ ಈ ಕೃತಿಯಲ್ಲಿ ಸುಮಾರು ಒಂದು ಸಾವಿರ ವಚನ, ೧೦೧ ಸ್ವರವಚನಗಳಿವೆ. ಮಹಲಿಂಗದೇವನ ಇನ್ನೊಂದು ಕೃತಿ ಪ್ರಭುದೇವರ ಟೀಕಿನ ವಚನ. ಮುಕ್ತವಾಗಿದ್ದ ಪ್ರಭುವಿನ ವಚನಗಳನ್ನು ತಳಮಟ್ಟ ಅಭ್ಯಸಿಸಿ, ಅವುಗಳಲ್ಲಿ ೬೯೪ ವಚನಗಳನ್ನು ಆಯ್ದು ಷಟ್ಸ್ಥಲಕ್ರಮದಲ್ಲಿ ಹೊಂದಿಸಿದುದು ಈತನ ಷಟ್ಸ್ಥಲ ಪರಿಣತಿಗೆ ನಿದರ್ಶನ. ಇದರಿಂದ ಪ್ರಭುವಿನ ವಚನಗಳಿಗೆ ಒಂದು ವ್ಯವಸ್ಥೆ ಸಂಪ್ರಾಪ್ತವಾಯಿತು. ಹೀಗೆ ಹೊಂದಿಸಿದ ತರುವಾಯ ಪ್ರತಿಯೊಂದು ವಚನಕ್ಕೂ ಟೀಕೆ ಬರೆದಿರುವನು. ೧೫ನೆಯ ಶತಮಾನದಷ್ಟು ಪೂರ್ವಕಾಲದಲ್ಲಿ ಬರೆದ ಈ ಟೀಕೆ, ಪ್ರಭುವಿನ ವಚನಗಳ ಅಂತರಾರ್ಥವನ್ನು ಅರಿಯಬಯಸುವವರಿಗೆ ಪರಮ ಪ್ರಮಾಣವೆನಿಸಿದೆ.

ಈತನ ಶಿಷ್ಯ ಮತ್ತು ಇಪ್ಪತ್ತೊಂದನೆಯ ಅಧಿಕಾರಿ ಕುಮಾರಬಂಕನಾಥ. "ಈತನು ಷಟ್ಸ್ಥಲೋಪದೇಶ, ಪ್ರಭುದೇವರ ಟೀಕಿನ ವಚನ ಇವುಗಳನ್ನು ಬರೆದಿದ್ದಾನೆ"[೧೩] ಎಂದು ಕವಿ ಚರಿತೆಕಾರರು ಹೇಳುವ ಮಾತಿನ ಮರುಪರಿಶೀಲನೆ ನಡೆಯಬೇಕಾಗಿದೆ.

ಈತನ ಶಿಷ್ಯ ಭಕ್ತಿ ಭಾಂಡಾರಿ ಜಕ್ಕಣ್ಣ, ಪ್ರೌಢದೇವರಾಯನ ಮಂತ್ರಿಯಾಗಿ ೧೫ನೆಯ ಶತಮಾನದಲ್ಲಿ ವೀರಶೈವವನ್ನು ಪುನರುದ್ಧರಿಸಿದ ಪುಣ್ಯಪುರುಷನೀತ. ವೀರಶೈವ ಜಗತ್ತಿಗೆ ಮಹಲಿಂಗದೇವ ನೀಡಿದ ಕಾಣಿಕೆಗಳಲ್ಲಿ ಅಮೋಘವೆನಿಸಿದ ಈತನು ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ ಕಾರ್ಯಗಳ ನೇತಾರನೆನಿಸಿದ್ದಾನೆ. ಚಾಮರಸನಿಂದ ಪ್ರಭುಲಿಂಗಲೀಲೆಯನ್ನು ಬರೆಯಿಸಿದ, ಈತನ ಕೃತಿ ಏಕೋತ್ತರ ಶತಸ್ಥಲ. ಮಹಲಿಂಗದೇವನ ಏಕೋತ್ತರ ಶತಸ್ಥಲದ ವಚನಗಳನ್ನು ಬಿಟ್ಟುಕೊಟ್ಟು, ಸ್ವರವಚನ ಮತ್ತು ಸೂತ್ರಗಳನ್ನು ಮಾತ್ರ ಇಟ್ಟುಕೊಂಡ ಕೃತಿ ಇದು. ಇದಕ್ಕೆ ಮೂರು ಟೀಕೆಗಳಿವೆಯೆಂದು ತಿಳಿದುಬಂದಿದೆ.[೧೪] ಜಕ್ಕಣಾಚಾರ್ಯನ ತರುವಾಯ ಈ ಪೀಠದ ಇತಿಹಾಸ ತಿಳಿದುಬಂದಿಲ್ಲ.

---

೧೨. ಹರಿಹರನ ಗುರು ಮಾಯಿದೇವ, ಗುರುವಿನ ಗುರು ಮಾದರಸ, ಹಾಗೆಯೇ ಕೆರೆಯ ಪದ್ಮರಸನ ತಂದೆ ಮಾಯಿದೇವ, ತಂದೆಯ ತಂದೆ (ಸಕಲೇಶ) ಮಾದರಸ. ಇಲ್ಲಿಯ ಹೆಸರಿನ ಸಾಮ್ಯ ಸಮಕಾಲೀನತೆಗಳು ಇವರಲ್ಲಿ ಪರಸ್ಪರ ಸಂಬಂಧವನ್ನು ಕಲ್ಪಿಸಲು ಪ್ರಚೋದನೆ ಕೊಟ್ಟರೂ ಅದು ಸತ್ಯವಲ್ಲದ ಮಾತೆನಿಸುತ್ತದೆ.

೧೩. ಕರ್ನಾಟಕ ಕವಿಚರಿತೆ II ಪು. 56 (1919)

೧೪. ಶಿವದಾಸ ಗೀತಾಂಜಲಿ ಪೀಠಿಕೆ ಪು. 84

ಹೀಗೆ ಬಸವಾದಿ ಪ್ರಮಥರಿಗಿಂತ ಪ್ರಾಚೀನ ಕಾಲದಲ್ಲಿ ಅಂಕುರಿಸಿದ ಈ ವಂಶವೃಕ್ಷ, ಕಾಲಕಾಲಕ್ಕೆ ಮಹಾಪುರುಷರನ್ನು ನೀಡಿ ವೀರಶೈವಸಂವರ್ಧನೆಯಲ್ಲಿ ತನ್ನ ಪಾಲಿನ ಕರ್ತವ್ಯವನ್ನು ಪೂರೈಸಿದೆ. ಇಂಥ ಉಜ್ವಲ ಪೀಠಪರಂಪರೆಯ ವಿವರ ಅಭ್ಯಾಸ ಇನ್ನೂ ನಡೆಯಬೇಕಾದುದು ಅತ್ಯವಶ್ಯ.

ಕಲಿಕಾಲ ಕಲ್ಮಷಕ್ಕೆಡೆಗುಡದೆ ಸದ್ಭಕ್ತಿ
ನೆಲೆಗೊರಿಡು ಪುತ್ರ ಮಿತ್ರ ಕಳತ್ರವೆಂದೆಂಬ
ಬಲೆಯೊಳಗೆ ಸಿಲುಕದಾಚಾರಲಿಂಗದ ನಿಷ್ಠೆ ನೆಲೆಗೊಂಡು ದಾಸೋಹದ ।
ಸುಲಲಿತ ಸುಮಾರ್ಗದೊಳಗಾಚರಿಸುತಾನಂದ
ಜಲಧಿಯೊಳಗೋಲಾಡುತಿರ್ಪ ಲೀಲೆಯೊಳೆಸೆವ
ಹುಲಿಗೆರೆಯೆನಿಪ ಪುರದ ವೀರಮಾಹೇಶ್ವರರ ಚರಣಾಂಬುಜಕ್ಕೆ ಶರಣು ॥[೧೫]

■■

ಆಕರ : ಮಾರ್ಗ ಸಂಪುಟ–೨

---

೧೫. ಶಿವತತ್ವಚಿಂತಾಮಣಿ 38-197.

೩೮

ಬಾಬಾನಗರದಲ್ಲಿ ನಾಗಚಂದ್ರ ಕಟ್ಟಿಸಿದ ಬಸದಿ

"ನಿಜವಿಭವೋದಯಂ ಸಫಲಮಾಯ್ತೆನೆ ಮಲ್ಲಿಜಿನೇಂದ್ರಗೇಹಮಂ ವಿಜಯಪುರಕ್ಕಲಂಕರಣಮಾಗಿರೆ" ತಾನು ಕಟ್ಟಿಸಿದುದಾಗಿ ಹೇಳುತ್ತಾನೆ, ನಾಗಚಂದ್ರ. ಈ ವಿಜಾಪುರ ಯಾವುದು? ಮಲ್ಲಿನಾಥ ತೀರ್ಥಂಕರ ಬಸದಿ ಈಗ ಅಲ್ಲಿ ಇದೆಯೇ? ಎಂಬ ಪ್ರಶ್ನೆಗಳು ಬಹಳ ದಿನಗಳಿಂದ ವಿದ್ವಾಂಸರನ್ನು ಕಾಡುತ್ತಲಿದ್ದರೂ ಒಂದೆರಡು ಅಭಿಪ್ರಾಯಗಳು ಹೀಗಿದ್ದವು:

ಜಿಲ್ಲಾ ಸ್ಥಳವಾಗಿರುವ ಬಿಜಾಪುರದಲ್ಲಿ ಮಲ್ಲಿನಾಥ ಬಸದಿಯನ್ನು ಶೋಧಿಸಲು ಒಬ್ಬಿಬ್ಬರು ತೊಡಗಿ, ಇಂದು ಅಲ್ಲಿರುವ ಕರೀಮುದ್ದೀನ ಮಸೀದಿಯೇ ಪ್ರಾಚೀನ ಮಲ್ಲಿನಾಥ ಬಸದಿಯಾಗಿರಬೇಕೆಂದು ಊಹಿಸಿದ್ದುದಲ್ಲದೆ, ಬೆಂಗಳೂರು ವಿಶ್ವವಿದ್ಯಾಲಯದ ಸಾಹಿತ್ಯ ಚರಿತ್ರೆಯ ಸಂಪುಟದಲ್ಲಿಯೂ ಈ ಚಿತ್ರವನ್ನು ಪ್ರಕಟಿಸಲಾಗಿದ್ದಿತು. ಸಾಲದುದಕ್ಕೆ ವಿಜಾಪುರದ ನೆರೆಯ ದರ್ಗಾಗ್ರಾಮದಲ್ಲಿ ಈ ಬಸದಿ ಇರಬಹುದೆಂದೂ ಕೆಲವರು ಊಹಿಸುತ್ತಿದ್ದರು.

ಇಂಥ ಅನಿಶ್ಚಿತ ಪ್ರಸಂಗದಲ್ಲಿ SII XVIII-೧೮೭ದಲ್ಲಿ ಪ್ರಕಟವಾದ ವಿಜಾಪುರದ ನೆರೆಯ ಬಾಬಾನಗರದ ಶಾಸನದತ್ತ ಶ್ರೀ ಸೀತಾರಾಮ್ ಜಾಗೀರದಾರ್ ಅವರು ವಿದ್ವಾಂಸರ ಗಮನ ಸೆಳೆದರು. ಆ ಶಾಸನದಲ್ಲಿ ನಾಗಚಂದ್ರ ಮತ್ತು ಆತನ ಮೊಮ್ಮಗನ ಹೆಸರು, ಮಲ್ಲಿನಾಥ ಬಸದಿ-ಇವುಗಳ ಉಲ್ಲೇಖ ಬರುವುದರಿಂದ ಇದು ನಾಗಚಂದ್ರನ ಗ್ರಾಮವೆಂದೂ ಆತ ಕಟ್ಟಿಸಿದ ಬಸದಿ ಇದೇ ಊರಿನಲ್ಲಿತ್ತೆಂದೂ ಹೇಳಿ ಈ ವಾದಕ್ಕೆ ಕೊನೆಯ ತೆರೆ ಎಳೆದರು. ಇದರಿಂದ ಬಾಬಾನಗರ ಪ್ರಾಚೀನ ಕಾಲದಲ್ಲಿ ವಿಜಾಪುರದ ಒಂದು ಭಾಗವಾಗಿರಬಹುದಾದ ಕಾರಣ 'ವಿಜಯಪುರಕ್ಕಲಂಕರಣಮಾಗಿರೆ' ಎಂಬ ಪದಪುಂಜವನ್ನು ಬಳಸಿರುವನೆಂದು ಭಾವಿಸಬೇಕಾಗುತ್ತದೆ.

ಈ ಮಲ್ಲಿಜಿನೇಂದ್ರ ಬಸದಿಯನ್ನು ಉಲ್ಲೇಖಿಸುವ ಮೇಲಣ ಶಾಸನವನ್ನು ಇಂದು ಬಸವಣ್ಣನ (ಶಿವನ) ದೇವಾಲಯದ ಕಟ್ಟೆಗೆ ಜೋಡಿಸಲಾಗಿದ್ದರೂ, ಮೂಲತಃ ಇದನ್ನೊಳಗೊಂಡಿದ್ದ ಬೇರೊಂದು ಬಸದಿ, ಬಾಬಾನಗರದಲ್ಲಿ ಇನ್ನೂ ಜೀರ್ಣಾವಸ್ಥೆಯಲ್ಲಿದೆ. ಅದರಲ್ಲಿ ಜಿನವಿಗ್ರಹವಿಲ್ಲದಿದ್ದರೂ ಅದು ಜೈನ ಬಸದಿಯೆಂದು ಸಾರುವ ಅನೇಕ ಸೂಚನೆಗಳನ್ನೊಳಗೊಂಡಿದೆ. ಆದುದರಿಂದ ಶಾಸನಗಳನ್ನೊಳಗೊಂಡಿದ್ದ ಈ ಜೀರ್ಣಕಟ್ಟಡವೇ ಮಲ್ಲಿನಾಥ ಜಿನಾಲಯವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಹಿಂದೊಮ್ಮೆ ಈ ಬಸದಿಯಲ್ಲಿದ್ದು ಈಗ ಕಳೆದುಹೋಗಿರುವ ಮಲ್ಲಿನಾಥ ಜಿನವಿಗ್ರಹದ ಶೋಧ ನಡೆಯಬೇಕಾಗಿದೆ.ಜೊತೆಗೆ ಈ ಶಾಸನವನ್ನು ಸಂರಕ್ಷಿಸಬೇಕಾಗಿದೆ. ರಾಜ್ಯ ಪುರಾತತ್ವ ಇಲಾಖೆ ಈ ಕಡೆಗೆ ಗಮನ ಕೊಡುವುದು. ಅವಶ್ಯವಿದೆ.*

---

* ಈ ಬಸದಿಯ ಫೋಟೋ ದೊರಕಿಸುವಲ್ಲಿ ನೆರವಾದ ಪ್ರೊ॥ ಬಿ.ಆರ್. ಹಿರೇಮಠ ಅವರಿಗೆ ಕೃತಜ್ಞ.

ಆಕರ : ಮಾರ್ಗ ಸಂಪುಟ–೨

೩೯

ವಿಜಾಪುರದಲ್ಲಿ ನಾಗಚಂದ್ರನ ಮಲ್ಲಿನಾಥ ಬಸದಿ

ಸಾಹಿತ್ಯ ವಿದ್ಯಾರ್ಥಿಗಳಿಗೆ ವಿಜಾಪುರ ಎಂದಾಕ್ಷಣ ಕವಿ ನಾಗಚಂದ್ರ ನೆನಪಾಗುತ್ತಾನೆ. ವಿಜಾಪುರಕ್ಕೆ ಅಲಂಕಾರಪ್ರಾಯವೆನ್ನುವಂತೆ ಈತ ಕಟ್ಟಿಸಿದ್ದ ಮಲ್ಲಿನಾಥ ಬಸದಿ ಎಲ್ಲಿದೆ? ಎಂಬ ಕುತೂಹಲ ಸಹಜವಾಗಿ ಕೆರಳುತ್ತದೆ. ಗಗನಮಹಲ್ ಹಿಂದಿರುವ ಇಂದಿನ ಕರೀಮುದ್ದೀನ್ ಮಸೀದಿಯೇ ಪ್ರಾಚೀನ ಮಲ್ಲಿನಾಥ ಬಸದಿಯೆಂದು ಯಾರೋ ಮಾಡಿದ ಊಹೆಯನ್ನು ಬಿಟ್ಟರೆ ನಮಗೆ ಅನ್ಯ ಆಧಾರಗಳೇ ಇಲ್ಲ. ಶೋಧನದೃಷ್ಟಿಯಿಂದ ಆ ಮಸೀದಿಯ ಒಳಹೊರಗೆ ನಾನು ಅನೇಕ ಸಲ ಸ್ನೇಹಿತರೊಂದಿಗೆ ಸುತ್ತಿದ್ದುಂಟು; ಮಲ್ಲಿನಾಥಪುರಾಣ ಸಂಗ್ರಹವನ್ನು ಸಂಪಾದಿಸುತ್ತಿರವಾಗ ಇದು ಸಿದ್ಧೇಶ್ವರ ದೇವಾಲಯವಾಗಿರಬಹುದೇ? ಎಂದು ಊಹಿಸಿದ್ದೂ ಉಂಟು.

ಈ ಸಂದರ್ಭದಲ್ಲಿ South Indian Inscription Vol XVIII-187 ರಲ್ಲಿ ಪ್ರಕಟವಾಗಿರುವ ಬಾಬಾನಗರದ ಶಾಸನವನ್ನು ಕುರಿತು ಶ್ರೀ ಸೀತಾರಾಮ ಜಾಗೀರದಾರ್ ಒಂದು ಲೇಖನ ಬರೆದರು.[೧] ಬಾಬಾನಗರವು ವಿಜಾಪುರದಿಂದ ೨೦ ಕಿ.ಮಿ. ದೂರದ ಒಂದು ದೊಡ್ಡಹಳ್ಳಿ. ಅಲ್ಲಿಯ ಬಸವಣ್ಣ ದೇವಾಲಯಕ್ಕೆ ಮೆಟ್ಟಿಲಾಗಿರುವ ಶಾಸನವಿದು. ಬಿಜ್ಜಳನ ಮಗ ರಾಯಮುರಾರಿ ಸೋವಿದೇವನ ಕಾಲದ ಈ ಶಾಸನದ ಪ್ರಕಾರ ಕವಿ ನಾಗಚಂದ್ರನಿಗೆ ಇಬ್ಬರು ಮೊಮ್ಮಕ್ಕಳು. ಒಬ್ಬ ಮೂಲಿಗ ನಾಗಾರ್ಯ; ಇನ್ನೊಬ್ಬ ನಾಗಚಂದ್ರ. ಇವರಲ್ಲಿ ಈ ಶಾಸನವನ್ನು ಬರೆದವ ಅಣ್ಣ ಮೂಲಿಗ ನಾಗಾರ್ಯ. ಇಲ್ಲಿ ಮಲ್ಲಿನಾಥ ಜಿನಾಲಯದ ಉಲ್ಲೇಖವೂ ಇದೆ. ಆದುದರಿಂದ ನಾಗಚಂದ್ರ ಬಸದಿ ಕಟ್ಟಿಸಿದ್ದು ಬಾಬಾನಗರದಲ್ಲಿ (ಇದರ ಪ್ರಾಚೀನ ಹೆಸರು 'ಕನ್ನಡಿಗೆ'); ಆಗ ವಿಜಾಪುರ ಈ ಬಾಬಾನಗರವನ್ನೂ ಒಳಗೊಂಡು ವ್ಯಾಪಿಸಿದ್ದಿತು. ಇಷ್ಟು ಶ್ರೀ ಜಾಗೀರದಾರರ ಅಭಿಪ್ರಾಯ.

ಈವರೆಗೆ ವಿಜಾಪುರದ ಮೇಲೆ ಕೇಂದ್ರೀಕೃತವಾಗಿದ್ದ ವಿದ್ವಾಂಸರ ದೃಷ್ಟಿ ಈಗ ಬಾಬಾನಗರದ ಕಡೆಗೆ ತಿರುಗಿತು. ಬಾಬಾನಗರದಲ್ಲಿ ಈ ಬಸದಿಯನ್ನು ಶೋಧಿಸಲು ನಾನೂ ತವಕಿಸಿದೆ. ಇಂದು ಬಸವಣ್ಣನ ಗುಡಿಯ ಮುಂದೆ ಮಲಗಿರುವ ಈ ಶಾಸನ ಮೂಲತಃ ಅದೇ ಊರಿನ ಜೀರ್ಣಬಸದಿಯಲ್ಲಿ ಇದ್ದಿತೆಂದು ಅಲ್ಲಿಯ ಜನರಿಂದ ತಿಳಿದು ಬಂದಿತು. ಈ ಜೀರ್ಣಬಸದಿಯೇ ಮಲ್ಲಿನಾಥ ಜಿನಾಲಯವೆಂದು ಸಹಜವಾಗಿ ನಂಬಿ 'ಬಾಬಾನಗರದಲ್ಲಿ ನಾಗಚಂದ್ರ ಕಟ್ಟಿಸಿದ ಬಸದಿ' ಹೆಸರಿನ ಲೇಖನವನ್ನು ಡಾ|| ಬಿ.ಆರ್.ಹಿರೇಮಠರ

೧. 'ಎರಡು ಹೊಸ ಶಾಸನಗಳು ಮತ್ತು ನಾಗಚಂದ್ರನ ಇತಿವೃತ್ತ', ಮಾನವಿಕ ಕರ್ನಾಟಕ, ೫-೧, ನವೆಂಬರ್ ೧೯೭೪, ಪು. ೧೨೧-೧೨೮

ಸಹಾಯದಿಂದ 'ಕನ್ನಡ ನುಡಿ'ಯಲ್ಲಿ[೨] ಪ್ರಕಟಿಸಿದೆ. ಈ ಸಂಚಿಕೆಯ ಮುಖಪುಟದ ಮೇಲೆ ಆ ಜೀರ್ಣಬಸದಿಯ ಚಿತ್ರವೂ ಪ್ರಕಟವಾಯಿತು.

೧೯೮೨ರ ಬೇಸಿಗೆಯಲ್ಲಿ, ವಿಜಾಪುರದಲ್ಲಿ, ಕನ್ನಡ ಸಾಹಿತ್ಯಪರಿಷತ್ತು ನಾಗಚಂದ್ರನನ್ನು ಕುರಿತು ಒಂದು ವಿಚಾರಸಂಕಿರಣವನ್ನು ಸಂಘಟಿಸಿತ್ತು. ಗೋಷ್ಠಿಯೊಂದರ ಅಧ್ಯಕ್ಷನಾಗಿ 'ನಾಗಚಂದ್ರನ ಇತಿವೃತ್ತ' ಎಂಬ ಲೇಖನವನ್ನು ನಾನು ಮಂಡಿಸಬೇಕಿದ್ದಿತು. ಈ ಪ್ರಸಂಗದಲ್ಲಿ ಈ ಶಾಸನದ ಮೇಲೆ ನನ್ನ ದೃಷ್ಟಿಯನ್ನು ಮತ್ತೆ ಮತ್ತೆ ಕೇಂದ್ರೀಕರಿಸಿದೆ. ಆಗ ನಾಗಚಂದ್ರನಿಗೂ ಬಾಬಾನಗರಕ್ಕೂ ಸಂಬಂಧವಿಲ್ಲ; ಮಲ್ಲಿನಾಥ ಜಿನಾಲಯವನ್ನು ಅತ ಬಾಬಾನಗರದಲ್ಲಿ ನಿರ್ಮಿಸಿರಲಿಕ್ಕಿಲ್ಲ ಎಂಬ ಅಂಶ ಹೊಳೆಯಿತು. ರಾಜ್ಯದ ಅನೇಕ ವಿದ್ವಾಂಸರು ಸೇರಿದ್ದ ಆ ಸಭೆಯಲ್ಲಿ ಈ ಸಂಗತಿಯನ್ನು ಪ್ರಸ್ತಾಪಿಸಿದೆ. ಪ್ರಸ್ತುತಕ್ಕೆ ಸಂಬಂಧಪಟ್ಟ ಈ ಶಾಸನ ಪದ್ಯಭಾಗ ಹೀಗಿದೆ:

೭೦ ಪೊಸಮುತ್ತಂ ಚತುರಾಸ್ಯನಾಯ್ದುಮೃತದಿಂದ(ಂ)ತೋಯ್ದು ಕೋದಿ
ಕ್ಕಿದೆಕ್ಕಸರಂ ವಾಗ್ವಧುವಿಗೆ ತಾನೆನಿಸಿ ಸುವ್ಯಕ್ತಂಗಳಾದಕ್ಕರಂ ಮಿಸುಗಲು
ಶಾಸನಮಂ ಸಮನ್ತು ಬರೆದಂ

೭೧ ಶ್ರೀ ಮಲ್ಲಿನಾಥದೇವಾವಸಥಂ ಸತ್ಕವಿ ನಾಗಚಂದ್ರನುತ ಮೊಮ್ಮಂ
ನಾಗಚಂದ್ರಾಗ್ರಜಂ || ಮೂಲಿಗ ನಾಗಾರ್ಯಂ..........||

ಇದು ಮತ್ತೇಭವಿಕ್ರೀಡಿತ ವೃತ್ತ. ಅಲ್ಲಲ್ಲಿ ಛಂದಸ್ಸು ತಪ್ಪಿದೆ. ಈ ತಪ್ಪುಗಳನ್ನು ವಾಗ್ವಧುವಿಗೆ>ವಾಗ್ವಧಿವಿಂಗೆ, ಮಿಸುಗಲು>ಮಿಸುಗಲ್ ಎಂದು ಸಹಜವಾಗಿಯೇ ನಿವಾರಿಸಿಕೊಳ್ಳಬಹುದು. ನಿಜವಾದ ಸಮಸ್ಯೆಯಿರುವುದು ಛಂದೋದೋಷಕ್ಕೆಡೆಯಾಗಿರುವ 'ಶ್ರೀ ಮಲ್ಲಿನಾಥ ದೇವಾವಸಥಂ' ಭಾಗದಲ್ಲಿ -ಎಂದು ಸಭೆಯಲ್ಲಿ ಸೂಚಿಸಿದೆ. "ಛಂದಸ್ಸಿಗೆ ಹೊಂದುವಂತೆ ಇದನ್ನು 'ಶ್ರೀ ಮಲ್ಲಿನಾಥಂ ಜಿನಾವಸಥಂ' ಎಂದು ತಿದ್ದಲು ಸಾಧ್ಯವಿದೆ; ಇಲ್ಲಿ 'ಜಿನಾವಸಥಂ' ಇರಬಹುದು, ಇರಲಿಕ್ಕಿಲ್ಲ; 'ಶ್ರೀ ಮಲ್ಲಿನಾಥಂ' ಮಾತ್ರ ಇರಲೇಬೇಕು. ಆಗ 'ಶಾಸನಮಂ ಸಮನ್ತು ಬರೆದಂ ಶ್ರೀ ಮಲ್ಲಿನಾಥಂ' ಎಂಬ ಪಾಠ ಸಿದ್ಧವಾಗುತ್ತದೆ. ಆದುದರಿಂದ 'ಮಲ್ಲಿನಾಥ' ಎಂಬುದು ಬಸದಿಯ ಹೆಸರಲ್ಲ, ಶಾಸನ ಬರೆದವನ ಹೆಸರು" ಎಂದು ನಾನು ಬಹಿರಂಗ ಹೇಳಿಕೆ ನೀಡಿದೆ.

ನನ್ನ ಈ ಹೇಳಿಕೆಯು ನಾಗಚಂದ್ರನ ಬಗೆಗೆ ಪಿಎಚ್.ಡಿ. ಅಧ್ಯಯನ ಮಾಡಿದ ಡಾ|| ವಿಜಯಾ ದಬ್ಬೆ, ಛಂದಸ್ಸನ್ನು ವ್ಯಾಸಂಗಕ್ಷೇತ್ರವನ್ನಾಗಿಟ್ಟುಕೊಂಡ ಡಾ|| ಟಿ.ವಿ. ವೆಂಕಟಾಚಲಶಾಸ್ತ್ರೀ, ಜೈನ ಅಧ್ಯಯನದಲ್ಲಿ ಆಸಕ್ತರಾದ ಶ್ರೀ ಶುಭಚಂದ್ರ ಮತ್ತು ಅವರ ಪತ್ನಿ ಶ್ರೀಮತಿ ಪ್ರೀತಿ ಅವರ ಗಮನ ಸೆಳೆಯಿತು. "ಪ್ರಕಟಿತ ಶಾಸನದ ಮೂಲ ಪಡಿಯಚ್ಚನ್ನು ಪರೀಕ್ಷಿಸುತ್ತ ಇದನ್ನು 'ಕಳಾವಸಥಂ' ಎಂದು ಓದಲು ಸಾಧ್ಯವಿದೆಯೆಂದು ಡಾ || ಕೆ.ವಿ. ರಮೇಶ್ ತಮಗೆ ಸೂಚಿಸಿದ್ದರು" ಎಂಬುದನ್ನು ಡಾ|| ವಿಜಯಾ ನೆನಪು ಮಾಡಿಕೊಂಡರು. 'ಕಳಾವಸಥ' ಪ್ರಯೋಗಗಳು ಬೇರೆಡೆ ಸಿಗುವುದೆಂದು ಡಾ|| ಶಾಸ್ತ್ರೀ ಸಾಕ್ಷಿನುಡಿದರು.

ಆಗ "ಅದು ಜಿನಾವಸಥ"ವೇ ಇರಲಿ, 'ಕಳಾವಸಥ'ವೇ ಇರಲಿ, ನನಗೆ ಮುಖ್ಯವಲ್ಲ. 'ಮಲ್ಲಿನಾಥ' ಎಂಬುದು ತೀರ್ಥಂಕರನನ್ನು ಸೂಚಿಸುವುದಿಲ್ಲ;ಶಾಸನ ಬರೆದವನನ್ನು ಸೂಚಿಸುತ್ತದೆ. ಈ ಮಲ್ಲಿನಾಥನು

---

೨. ಸಂಪುಟ ೪೪, ಸಂಚಿಕೆ ೧೩. ಪು. ೮.

ನಾಗಂಚದ್ರನ ಮೊಮ್ಮಗನೂ ಹೌದು; ನಾಗಚಂದ್ರ ಹೆಸರಿನ ವ್ಯಕ್ತಿಯ ಅಣ್ಣನೂ ಹೌದು. ಈ ಇಬ್ಬರು ಮೊಮ್ಮಕ್ಕಳಲ್ಲಿ ಒಬ್ಬನಿಗೆ ಅಜ್ಜ ಪ್ರತಿಷ್ಠಾಪಿಸಿದ ತೀರ್ಥಂಕರ ಮಲ್ಲಿನಾಥನ ಹೆಸರಿಡಲಾಗಿದೆ, ಇನ್ನೊಬ್ಬನಿಗೆ ಅಜ್ಜ ನಾಗಚಂದ್ರನ ಹೆಸರನ್ನೇ ಇಡಲಾಗಿದೆ. ಕವಿ ನಾಗಚಂದ್ರ ಗತಿಸಿದ ಬಳಿಕ ಈ ಹೆಸರನ್ನು ಈ ಎರಡನೆಯ ಮೊಮ್ಮಗನಿಗೆ ಇಟ್ಟಿರುವುದು ಸಹಜ. ಮೂಲಿಗ ನಾಗಾರ್ಯ ಯಾವನೋ ಬೇರೊಬ್ಬ ವ್ಯಕ್ತಿ, ಈ ಪದ್ಯದ ಅನ್ವಯಕ್ಕೂ ಹೊಂದಿಕೊಳ್ಳದೆ ಪ್ರತ್ಯೇಕ ಸಿಡಿದು ನಿಲ್ಲುವ ವ್ಯಕ್ತಿ. ಶಾಸನವನ್ನು ಬರೆದ ಮಲ್ಲಿನಾಥನು ಕವಿಯೋ, ಲಿಪಿಕಾರನೋ ಸ್ಪಷ್ಟವಾಗುವದಿಲ್ಲ. ಒಂದು ವೇಳೆ ಕವಿಯಾಗಿದ್ದಲ್ಲಿ, ಅಜ್ಜ ನಾಗಚಂದ್ರನ ಕವಿತ್ವ ಮೊಮ್ಮಗ ಮಲ್ಲಿನಾಥನಲ್ಲಿಯೂ ಮುಂದುವರಿದಿದೆಯೆಂದು ಹೇಳಬೇಕಾಗುತ್ತದೆ" ಎಂದು ಸ್ಪಷ್ಟಪಡಿಸಿದೆ. ಮುಂದುವರಿದು, " 'ಕನ್ನಡನುಡಿ'ಯ ಮುಖಪುಟದ ಮೇಲೆ ನಾನು ಪ್ರಕಟಿಸಿದ ಚಿತ್ರ ಬಹುಶಃ ಮಲ್ಲಿನಾಥ ಬಸದಿಯಾಗಿರಲಿಕ್ಕಿಲ್ಲ. ಮಲ್ಲಿನಾಥನ ಬಸದಿ ಬಾಬಾನಗರದಲ್ಲಿರುವ ಸಂಭವವೂ ಕಡಿಮೆ. ನಾಗಚಂದ್ರ ಸ್ಪಷ್ಟವಾಗಿ ವಿಜಾಪುರದ ಹೆಸರನ್ನು ಹೇಳಿರುವನೇ ಹೊರತು ಅವನ ಕಾಲಕ್ಕಾಗಲೇ ಸ್ವತಂತ್ರ ಗ್ರಾಮವಾಗಿ ಅಸ್ತಿತ್ವದಲ್ಲಿದ್ದ " 'ಕನ್ನಡಿಗೆ'ಯ (ಬಾಬಾನಗರದ ಪ್ರಾಚೀನ ಹೆಸರು) ಹೆಸರನ್ನು ಹೇಳಿಲ್ಲ. ಕಾರಣ ಬಾಬಾನಗರದ ಮೇಲಿನ ನಮ್ಮ ದೃಷ್ಟಿಯನ್ನು ಈಗ ಮತ್ತೆ ವಿಜಾಪುರದ ಮೇಲೆ ಕೇಂದ್ರೀಕರಿಸಬೇಕಾಗುತ್ತದೆ"-ಎಂದು ಉತ್ತರಿಸಿದೆ. " 'ಕನ್ನಡನುಡಿ'ಯಲ್ಲಿ ನಾನು ಪ್ರಕಟಿಸಿದ ಲೇಖನವನ್ನು ಈಗ ಚಿತ್ರಸಹಿತ ಹಿಂತೆಗೆದುಕೊಳ್ಳುತ್ತೇನೆ" ಎಂದೂ ಸಾರಿದೆ.

ಈ ವಿಷಯದ ಸತ್ಯವನ್ನು ಮನಗಾಣಲು ಮುಂಜಾನೆ ೧೦-೧೫ ಜನ ಆಸಕ್ತ ಸಂಶೋಧಕ-ಸಂಶೋಧಕಿಯರು ವಾಹನ ಮಾಡಿಕೊಂಡು ಬಾಬಾನಗರಕ್ಕೆ ಪ್ರಯಾಣ ಬೆಳೆಸಿದೆವು.

ನಾವು ನೇರವಾಗಿ ಮೊದಲು ಹೋದುದು 'ಕನ್ನಡನುಡಿ'ಯಲ್ಲಿ ನಾನು ಪ್ರಕಟಿಸಿದ್ದ ಬಸದಿಗೆ. ಅದೊಂದು ಜೀರ್ಣದೇವಾಲಯ. ಪೂಜೆ-ಪುರಸ್ಕಾರಗಳಿಲ್ಲ; ದೇವರಂತೂ ಮೊದಲೇ ಇಲ್ಲ. ಇದು ಜೈನಬಸದಿಯೆಂದು ಅಳಿದುಳಿದ ಅವಶೇಷಗಳಿಂದ ಖಾತ್ರಿ ಮಾಡಿಕೊಂಡೆವು. ಆದರೆ ತಕ್ಕಮಟ್ಟಿಗೆ ಕಲಾತ್ಮಕವಾಗಿದ್ದರೂ ಇದು ಸಣ್ಣ ದೇವಾಲಯ; 'ವಿಜಯಪುರಕ್ಕಲಂಕರಣ' ಎನಿಸುವ ಯೋಗ್ಯತೆ ಇದಕ್ಕಿಲ್ಲವೆಂದು ನಿರ್ಧರಿಸಿದೆವು. 'ಅಲಂಕರಣಂ' ಎನ್ನುವುದು ಕವಿಯ ಅತಿಶಯೋಕ್ತಿ ಏಕಾಗಿರಬಾರದು? ದೇವಾಲಯದ ಕೆಲ ಭಾಗ ನಾಶವಾಗಿರಬಾರದೇಕೆ? ಎಂದೂ ಶಂಕಿಸಿದೆವು. ಈಗ ನಮಗೆ ಉಳಿದದ್ದು ಇದು ಯಾವ ತೀರ್ಥಂಕರನ ಬಸದಿ? ಎಂಬುದು. ಈ ಸಣ್ಣ ದೇವಾಲಯದ ಸಂದಿಗೊಂದಿಗಳನ್ನೆಲ್ಲ ಶೋಧಿಸಿ ನಾವೆಲ್ಲ ನಿರಾಸೆಯ ಅಂಚಿನಲ್ಲಿ ನಿಂತಾಗ, ಶ್ರೀ ಶುಭಚಂದ್ರ ಅವರು ಪ್ರವೇಶದ್ವಾರದ ಮೇಲಿನ ಭಗ್ನಮೂರ್ತಿಯನ್ನು ಗರುಡದೃಷ್ಟಿಯಿಂದ ಗಮನಿಸಿ, ಅಸ್ಪಷ್ಟ ಏಳು ಹೆಡೆಗಳನ್ನು ಗುರುತಿಸಿ, "ಇದು ಪಾರ್ಶ್ವನಾಥ ಬಸದಿ" ಎಂದು ಎಲ್ಲರ ಗಮನ ಸೆಳೆದರು. ಅದನ್ನು ಮತ್ತೆ ಪರೀಕ್ಷಿಸಿ, ಶ್ರೀ ಶುಭಚಂದ್ರರ ಸೂಚನೆಯನ್ನು ಎಲ್ಲರೂ ಅನುಮೋದಿಸಿದೆವು. ಹೀಗಾಗಿ ನಾನು ಹಿಂದಿನ ದಿನದ ಸಭೆಯಲ್ಲಿ ಊಹಿಸಿದಂತೆ, ' ಕನ್ನಡನುಡಿ'ಯಲ್ಲಿ ಪ್ರಕಟಿಸಿದ ಈ ದೇವಾಲಯವು ಮಲ್ಲಿನಾಥ ತೀರ್ಥಂಕರನದಲ್ಲವೆಂದು ಖಚಿತವಾಯಿತು.

ಇಲ್ಲಿಂದ ನಾವು ಬಸವಣ್ಣನ ಗುಡಿಯ ಮೆಟ್ಟಿಲು ಮೇಲೆ ಹಾಸಿರುವ ಶಾಸನದ ಪರೀಕ್ಷೆಗೆ ಧಾವಿಸಿದೆವು. ಡಾ|| ಬಿ.ಆರ್. ಹಿರೇಮಠ ಅವರು ಶಾಸನದ ಪಡಿಯಚ್ಚು ತೆಗೆಯಲು ಪ್ರಯತ್ನಿಸಿದರು. ಸವಕಳಿ ಕಾರಣವಾಗಿ ಪಡಿಯಚ್ಚು ಸರಿಯಾಗಿ ಬರಲಿಲ್ಲವಾದರೂ 'ಶ್ರೀ ಮಲ್ಲಿನಾಥಂ ಕಳಾವವಸಥಂ" ಎಂಬ ಪಾಠವಿದ್ದುದನ್ನು ಕಷ್ಟಪಟ್ಟು ಗುರುತಿಸಿ ಅದನ್ನು ಖಚಿತಪಡಿಸಿಕೊಂಡೆವು.

ಈಗ ನಮ್ಮ ಮುಂದೆ ಉಳಿದಿದ್ದ ಮುಖ್ಯ ಕೆಲಸವೆಂದರೆ, ವಿಜಾಪುರದಲ್ಲಿ ಮಲ್ಲಿನಾಥ ಬಸದಿಯನ್ನು ಶೋಧಿಸುವುದು. ಇಂದು ವಿಜಾಪುರದ ಮಗ್ಗುಲಿನ ದರ್ಗಾ ಪ್ರದೇಶದಲ್ಲಿರುವುದು ಪಾರ್ಶ್ವನಾಥ ಬಸದಿ.

ಗೋಳಗುಮ್ಮಟ ವಸ್ತು ಸಂಗ್ರಹಾಲಯದಲ್ಲಿ ಮಲ್ಲಿನಾಥ ಜಿನವಿಗ್ರಹವಿಲ್ಲ. ಸರಕಾರಿ ಸರ್ಕೀಟ್ ಹೌಸ್ ಎಡಭಾಗದ ಹಾಳುಕಟ್ಟಡ ಶಿವದೇವಾಲಯವೆಂದು ಅಲ್ಲಿಯ ಕಂಬದ ಶಾಸನ ತಿಳಿಸುತ್ತದೆ. ಅರಕಿಲ್ಲಾ ರಸ್ತೆಯ ಕೋಟೆಯ ಬಾಗಿಲಲ್ಲಿರುವ ಪಾಂಡವರ ಗುಡಿಯು ಜಲಮಂಟಪದ ನರಸಿಂಹ ದೇವಾಲಯ ಇತ್ಯಾದಿ ವಿವರಗಳವನ್ನು ಖಚಿತಗೊಳಿಸಿಕೊಂಡೆವು.

ಬಳಿಕ ನಾಗಚಂದ್ರ ಕಟ್ಟಿಸಿದ ಪ್ರಾಚೀನ ಮಲ್ಲಿನಾಥ ಜಿನಾಲಯವೆಂದು ಈ ಹಿಂದೆ ಯಾರೋ ಊಹಿಸಿರುವ ಇಂದಿನ ಕರೀಮುದ್ದೀನ್ ಮಸೀದಿಗೆ ಬಂದೆವು. ಇಂದು ಮಸೀದಿಯಾಗಿದ್ದರೂ ಒಂದು ಕಾಲಕ್ಕೆ ಇದು ಹಿಂದೂ ದೇವಾಲಯವೆಂದು ಮೇಲುನೋಟಕ್ಕೇ ಸ್ಪಷ್ಟವಾಗುತ್ತದೆ. ಆದರೆ ಇದು ಜೈನಬಸದಿಯೆನ್ನಲು ಒಂದೂ ಆಧಾರವಿಲ್ಲವೆಂದು ಪರಿತಪಿಸುತ್ತಿರುವಾಗ, ಒಂದು ಘಟ್ಟದಲ್ಲಿ ಶ್ರೀ ಶುಭಚಂದ್ರ ಅವರು "ಮೇಲಿನ ಅಂತಸ್ತು ಬಿದ್ದಿದ್ದರೂ ಎರಡೂ ಅಂತಸ್ತಿನ ಕಟ್ಟಡವಾಗಿರುವುದರಿಂದ ಇದು ಜೈನದೇವಾಲಯವೇ ಆಗಿರಬೇಕು" ಎಂಬ, ಇಷ್ಟುದಿನ ಯಾರಿಗೂ ಹೊಳೆಯದಿದ್ದ ಅಂಶದತ್ತ ಬೆಳಕಿನ ಬೆರಳು ನೀಡಿದರು. ಶ್ರೀಮತಿ ಪ್ರೀತಿ ಅವರು ಇದಕ್ಕೆ ಸಮಾನವಾದ ಬೇರೆ ಜೈನವಾಸ್ತುಗಳನ್ನು ಉದಾಹರಿಸಿದರು. ವಿಸ್ತಾರವಾದ ಆವರಣ, ವಿಶಾಲವಾದ ಕಟ್ಟಡ, ಅಂತಸ್ತಿನ ಅಪರೂಪತೆಗಳಿಂದಾಗಿ ಒಂದು ಕಾಲದಲ್ಲಿ 'ವಿಜಯ ಪುರಕ್ಕಲಂಕರಣ'ವೆನಿಸದ್ದ ಮಲ್ಲಿನಾಥ ಬಸದಿ ಇದೇ ಆಗಿರಬಹುದೆಂಬ ಅಂಶ ಮನದಲ್ಲಿ ಫಕ್ಕನೇ ಮಿಂಚಿದಾಗ, ವಿಜಾಪುರದ ಸುಡುಬಿಸಿನಲ್ಲಿಯೂ ಬೆಳದಿಂಗಳಿನ ಅನುಭವ ಪಡೆದೆವು.

■■

ಆಕರ : ಮಾರ್ಗ ಸಂಪುಟ-೨

೪೦

ಚಿತ್ರದುರ್ಗದ ಪ್ರಾಚೀನ ಹೆಸರು

೧೯೮೦ ಜೂನ್ ತಿಂಗಳಲ್ಲಿ ದಾಖಲೆಗಳ ಸಂಗ್ರಹಕ್ಕಾಗಿ ಚಿತ್ರದುರ್ಗಕ್ಕೆ ನಾನು ಭೇಟಿ ನೀಡಿದ ಸಂದರ್ಭ. ಸರ್ವಶ್ರೀ ಬಿ. ರಾಜಶೇಖರಪ್ಪ ಹಾ. ಶ್ರೀಶೈಲಾರಾಧ್ಯ, ಕೃಷ್ಣಮೂರ್ತಿ ಹನೂರು, ಟಿ. ಶಂಭುಲಿಂಗಪ್ಪ, ಬಸವರಾಜ ಕುಂಬಾರ ಮೊದಲಾದ ಸ್ನೇಹಿತರ ಮಧ್ಯದಲ್ಲಿ ಸಂಶೋಧನೆಗಾಗಿ ಕಳೆದ ಆ ಎರಡು ದಿನಗಳು ಆತ್ಮೀಯ, ಅವಿಸ್ಮರಣೀಯ. ಇವರೆಲ್ಲರ ಒತ್ತಾಸೆಗೆ ಕಟ್ಟುಬಿದ್ದು ಒಂದು ಉಪನ್ಯಾಸ ನೀಡಲು ಒಪ್ಪಿದೆ. ಚಿತ್ರದುರ್ಗವನ್ನೇ ಕೇಂದ್ರ ವಿಷಯವನ್ನಾಗಿಟ್ಟುಕೊಂಡು ೧. ಬೆಮ್ಮತ್ತನಕಲ್ಲು: ಪಾಠ ಪರಿಶೀಲನೆ, ೨. ಚಿತ್ರದುರ್ಗ ಹೆಸರಿನ ಪ್ರಾಚೀನ ರೂಪ - ಎಂಬ ಅಂಶಗಳ ಮೇಲೆ ಒತ್ತುಕೊಟ್ಟು ಮಾತನಾಡಿದೆ.

೧. ಬೆಮ್ಮತ್ತನಕಲ್ಲು ಪಾಠಪರಿಶೀಲನೆ : "ಶಾಸನಗಳಲ್ಲಿ ಚಿತ್ರದುರ್ಗಕ್ಕೆ ಇರುವ ಪ್ರಾಚೀನ ಹೆಸರು ಬೆಮ್ಮತ್ತನಕಲ್ಲು ಎಂದು ಬಿ.ಎಲ್. ರೈಸ್, ಆರ್. ನರಸಿಂಹಾಚಾರ್, ಹುಲ್ಲೂರು ಶ್ರೀನಿವಾಸ ಜೋಯಿಸ ಮೊದಲುಮಾಡಿ ಇಂದಿನ ವರೆಗಿನ ಎಲ್ಲ ವಿದ್ವಾಂಸರೂ ಹೇಳುತ್ತಲಿದ್ದಾರೆ. ನನಗೇಕೋ ಬೆಮ್ಮತ್ತನಕಲ್ಲು ಎಂಬುದು ಚಿತ್ರಕಲ್ಲು(ದುರ್ಗ) ಆಗುವುದು ಅಸಂಭವವೆನಿಸುತ್ತದೆ. ಏಕೆಂದರೆ ಆದಿಯ 'ಬೆ' ಎಂಬುದು ಉಚ್ಚಾರದಲ್ಲಿ 'ಚಿ' ಆಗಲಾರದು. ಆದುದರಿಂದ ವಿಸ್ವಾಂಸರು ಓದಿದ 'ಬೆಮ್ಮತ್ತನಕಲ್ಲು' ತಪ್ಪುಪಾಠ; ಬಹುಶಃ ಅಲ್ಲಿ 'ಚಿಮ್ಮತ್ತನಕಲ್ಲು' ಎಂಬ ಪಾಠ ಇರಬಹುದು. ಇದು ಕಾಲಕ್ರಮದಲ್ಲಿ ಚಿಂತನಕಲ್ಲು, ಚಿಂತಕಲ್ಲು, ಚಿತ್ರಕಲ್ಲುದುರ್ಗ ಆಗಿರಬಹುದು."- ಎಂದು ಸಭೆಯಲ್ಲಿ ಹೇಳಿದೆ.[೧] (ನಿಷ್ಪತ್ತಿಯ ಸರಿಯಾದ ವಿವರ ಮುಂದೆ ಬರುತ್ತದೆ.) ಮುಂದುವರಿದು, "ಶಾಸನವನ್ನು ಓದುವಾಗ ಅನೇಕ ವಿದ್ವಾಂಸರು 'ಬೆ', 'ಚಿ'ಗಳಲ್ಲಿ ಪರಸ್ಪರ ಗೊಂದಲಮಾಡಿಕೊಳ್ಳುತ್ತಾರೆ. ಚೌಡದಾನಪುರ ಶಾಸನದ 'ಚೀಲಾಳ' ಎಂಬುದನ್ನು 'ಬೇಲಾಳ' ಎಂದು ಓದಲಾಗಿದೆ. ಇದೇ ರೀತಿ ಭಟ್ಟವೃತ್ತಿ, ಚಟ್ಟವೃತ್ತಿಗಳನ್ನು ಪರಸ್ಪರ ತಪ್ಪಾಗಿ ಓದಿರುವ ಸಂಭವವಿದೆ." ಎಂದು ಸೂಚಿಸಿದೆ. 'ಬೆಮ್ಮತ್ತನಕಲ್ಲು' ಎಂಬ ಗ್ರಾಮನಾಮದ ರೂಪವನ್ನೇ ಪ್ರಶ್ನಿಸಿದ ನನ್ನ ಮಾತಿನಿಂದ ಉತ್ತೇಜಿತರಾದ ಸಭಿಕರಲ್ಲೊಬ್ಬರು, " ನಾಳೆ ಇಲ್ಲಿಯ ಶಾಸನ ಶಿಲೆಗಳನ್ನು ಪ್ರತ್ಯಕ್ಷ ಪರಿಶೀಲಿಸಿ ಈ ಅಭಿಪ್ರಾಯವನ್ನು ಸ್ಪಷ್ಟಪಡಿಸುವುದು ಲೇಸು" ಎಂದು ನನಗೆ ಸೂಚಿಸಿದರು.

ಮರುದಿನ ಮುಂಜಾನೆ ಸ್ನೇಹಿತರೆಲ್ಲ ಚಿತ್ರದುರ್ಗದಲ್ಲಿಯ ಶಾಸನಗಳನ್ನು ಗುರಿಯಿಟ್ಟು ನಡೆದೆವು. ಗುಡ್ಡದ ಮೇಲಿನ ಒಂದು ಶಾಸನ ಪರಿಶೀಲಿಸಿದೆವು. ಅಲ್ಲಿದ್ದುದು ಬೆಮ್ಮತ್ತನಕಲ್ಲು ಅಲ್ಲ, ಚಿಮ್ಮತ್ತನಕಲ್ಲು. ಹಿಂದಿನ ದಿನದ ನನ್ನ ಊಹೆ ಸತ್ಯವಾಯಿತು. ಆ ಶಾಸನದ ಬೇರೆ ಕಡೆಗಳಲ್ಲಿ ಬರುವ ಚಿ, ಬೆ ಗಳನ್ನು ಆಯ್ದು ನೋಡಿ ನಮ್ಮ ಅಭಿಪ್ರಾಯವನ್ನು ಇನ್ನೂ ಖಚಿತಪಡಿಸಿಕೊಂಡೆವು. ಮತ್ತೆ ಕೆಲವು ಶಾಸನಗಳ

---

೧. 'ಸಾಹಿತ್ಯ ಸಂಪಾದನೆ' ಹೆಸರಿನ ನನ್ನ ಪುಸ್ತಕದಲ್ಲಿ (ಪು. ೩೦) ಈ ರೀತಿ ನಾನು ನಿಷ್ಪತ್ತಿ ಊಹೆ ಮಾಡಿದ್ದೇನೆ. ಇದು ಬಹುಶಃ ತಪ್ಪು. ಈ ಲೇಖನದ ಮುಂದಿನ ಪುಟಗಳಲ್ಲಿ ಇದರ ಚರ್ಚೆ ಬಂದಿದೆ.

ಪರಿಶೀಲನೆಯಿಂದಲೂ ಇದು ಸ್ಪಷ್ಟವಾಯಿತು. ಆಗ ನಾನು ಶ್ರೀ ರಾಜಶೇಖರಪ್ಪನವರಿಗೆ "ಈ ಅಕ್ಷರಗಳ ಚಿತ್ರ ತೆಗೆಯಿಸಿ, ನನ್ನ ಈ ಅಭಿಪ್ರಾಯವನ್ನು ಪ್ರಸಿದ್ಧಿಪಡಿಸಿರಿ" ಎಂದು ಸೂಚಿಸಿದೆ.

ಈ ಸೂಚನೆಯ ಮೇರೆಗೆ, ಇತ್ತೀಚೆ ಶ್ರೀ ರಾಜಶೇಖರಪ್ಪ ಅವರು "ಚಿತ್ರದುರ್ಗದ ಪ್ರಾಚೀನ ಹೆಸರಿನ ಪ್ರಥಮಾಕ್ಷರ 'ಬೆ' ಅಲ್ಲ, 'ಚಿ' ಎಂಬ ಲೇಖನವನ್ನು 'ಸಾಧನೆ' (೧೩-೪)ಯಲ್ಲಿ ಪ್ರಕಟಿಸಿದುದು ಸಂತೋಷದ ಸಂಗತಿ. ಆದರೆ ಅವರ ಈ ಲೇಖನದಲ್ಲಿ ನನ್ನ ಭಾಷಣ ಮೇಲಿನ ವಿವರಗಳು ಇಲ್ಲವಾಗಿ ಈ ಶೋಧ ಮೂಲತಃ ಶ್ರೀ ರಾಜಶೇಖರಪ್ಪನವರಿಗೇ ಸೇರಿದುದೆಂಬ ತಪ್ಪು ಅಭಿಪ್ರಾಯ ಮೂಡುತ್ತದೆ. ತಮ್ಮ ಲೇಖನದ ಅಡಿಟಿಪ್ಪಣಿ (೧೪)ಯಲ್ಲಿ "ಇಲ್ಲಿನ ಶಾಸನ ಲಿಪಿಯಲ್ಲಿಯ ಬೆ, ಚಿ ಗಳ ಸ್ವರೂಪವನ್ನು ಖಚಿತ ಪಡಿಸಿಕೊಳ್ಳುವಲ್ಲಿ ನನಗೆ ಉಪಕರಿಸಿದುದಕ್ಕಾಗಿ..... ಅವರನ್ನು....... ನೆನೆಯುತ್ತೇನೆ" ಎಂದು ನನ್ನನ್ನು ಕುರಿತು ಹೇಳಿದ್ದರೂ ಇದರಿಂದ ತಾವೇ ಈ ಅಕ್ಷರಗಳ ವ್ಯತ್ಯಾಸವನ್ನು ಮೊದಲು ಗುರುತಿಸಿರದವರೆಂದೂ, ಈ ವ್ಯತ್ಯಾಸವನ್ನು ಖಚಿತಪಡಿಸಿಕೊಳ್ಳುವಲ್ಲಿ ನಾನು ಉಪಕರಿಸಿದೆನೆಂದೂ ಅರ್ಥ ಹೊರಡುತ್ತದೆ. ವಸ್ತುಸ್ಥಿತಿ ಹೀಗಲ್ಲ. ಆದುದರಿಂದ ಮೂಲತಃ ಈ ವ್ಯತ್ಯಾಸವನ್ನು ಊಹಿಸಿದವನೂ ಶಾಸನಗಳನ್ನು ಕಣ್ಮುಟ್ಟಿ ನೋಡಿ ಆ ಊಹೆಯನ್ನು ಸತ್ಯಪಡಿಸಿಕೊಂಡವನೂ ನಾನು. ನನ್ನ ಅಭಿಪ್ರಾಯವನ್ನು ನನ್ನ ಅನುಮತಿಯ ಮೇರೆಗೆ ಲೇಖನ ರೂಪದಲ್ಲಿ ಪ್ರಕಟಿಸಿದವರು ಶ್ರೀ ರಾಜಶೇಖರಪ್ಪನವರು - ಎಂದು ಸ್ಪಷ್ಟಪಡಿಸುತ್ತೇನೆ.

೨. ಚಿತ್ರದುರ್ಗ ಹೆಸರಿನ ಪ್ರಾಚೀನ ರೂಪ : ಚಿತ್ರದುರ್ಗದ ಕೆಲವು ಶಾಸನ ಪಾಠಗಳನ್ನು ಶಿಲೆಯ ಮೇಲೆಯೇ ಪರಿಶೀಲಿಸಿ ಅವುಗಳಲ್ಲಿರುವುದು 'ಬೆ' ಅಲ್ಲ, 'ಚಿ' ಎಂದು ಸ್ಪಷ್ಟಪಡಿಸಿಕೊಂಡ ನಾವು ಇಲ್ಲಿ ಕೋಟೆ ಕೊತ್ತಲಗಳನ್ನು ನೋಡಲು ಹೊರಟೆವು. "ನಿನ್ನೆಯ ಸಭೆಯಲ್ಲಿ ನಾನು ಊಹಿಸಿದಂತೆ ಶಾಸನಗಳಲ್ಲಿ 'ಚಿಮ್ಮತ್ತನಕಲ್ಲು' ಎಂಬ ಪಾಠವಿರುವುದು ನಿಜ.ಆದರೆ ಮುಂದುವರಿದು ಹೇಳಿದಂತೆ ಈ 'ಚಿಮ್ಮತ್ತನಕಲ್ಲು' ಎಂಬುದೇ ಚಿತ್ರಕಲ್ಲು(ದುರ್ಗ) ಎಂದು ಬದಲಾಗುವುದು ಭಾಷಾಶಾಸ್ತ್ರೀಯವಾಗಿ ಎಷ್ಟು ನಿಜ? ಈ ವಿಷಯವನ್ನು ಈ ಮೊದಲು ನನ್ನ 'ಸಾಹಿತ್ಯ ಸಂಪಾದನೆ' ಗ್ರಂಥದಲ್ಲಿ ಬರೆದುದು ಎಷ್ಟರಮಟ್ಟಿಗೆ ಸತ್ಯ?" ಎಂಬ ಸಂದೇಹ ನನ್ನನ್ನು ದಾರಿಯುದ್ದಕ್ಕೂ ಕಾಡತೊಡಗಿತು. ಇದನ್ನು ಸ್ನೇಹಿತರಿಗೆ ನಿವೇದಿಸಿ ಈ ಊರಿನ ಶಾಸನಗಳಲ್ಲಿ 'ಚಿಮ್ಮತ್ತನಕಲ್ಲು' ಎಂಬುದಲ್ಲದೆ ಬೇರೆ ಹೆಸರುಗಳೇನಾದರೂ ಕಂಡು ಬರುತ್ತವೆಯೇ? ಎಂದು ಕೇಳಿದೆ. ಆಗ ಶ್ರೀ ರಾಜಶೇಖರಪ್ಪನವರು "ಸೂಳ್ಗಲ್ಲು, ಚಿತ್ತರಕಲ್ಲು ಎಂಬ ಬೇರೆ ಹೆಸರುಗಳು ಶಾಸನಗಳಲ್ಲಿ ಬರುವುವು - ಎಂದು ಸೂಚಿಸಿದರು. "ಇವೆಲ್ಲ ಹೆಸರುಗಳು ಒಂದೇ ಕಾಲದ ಶಾಸನಗಳಲ್ಲಿ ಬರುವುದರಿಂದ ಇವು ಒಂದೇ ಊರಿನ ಪರ್ಯಾಯ ನಾಮಗಳಲ್ಲ. ಇಲ್ಲಿ ಪರಸ್ಪರ ಸಮೀಪದಲ್ಲಿ ಚಿಮ್ಮತ್ತನಕಲ್ಲು, ಸೂಳ್ಗಲ್ಲು, ಚಿತ್ತರಕಲ್ಲು ಎಂಬ ಸ್ವತಂತ್ರ ಹಳ್ಳಿಗಳೇ ಇದ್ದು, ಕಾಲಕ್ರಮದಲ್ಲಿ ಇವು ಬೆಳೆದು ಒಂದರೊಳಗೊಂದು ಬೆರೆತು ಹೋಗಿರಬೇಕು. ಆಗ ಮಿಕ್ಕ ಹೆಸರುಗಳು ಕರಗಿಹೋಗಿ 'ಚಿತ್ತರಕಲ್ಲು' ಎಂಬುದೇ ಪ್ರಧಾನವಾಗಿ ಉಳಿದುಕೊಂಡಿರಬೇಕು. ಕೋಟೆ ಕಟ್ಟಿದ ಬಳಿಕ ಆ ಚಿತ್ತರಕಲ್ಲು ಎಂಬುದು ಚಿತ್ತರಕಲ್ಲು+ದುರ್ಗಯೆನಿಸಿಕೊಂಡು, ಉಚ್ಚಾರ ಸರಳತೆಗಾಗಿ 'ಚಿತ್ರದುರ್ಗ' ಎಂಬ ರೂಪ ತಾಳಿರಬೇಕು" - ಎಂದು ಸ್ನೇಹಿತರಿಗೆ ಸೂಚಿಸಿದೆ.

ನಾವು ಮಾತನಾಡುತ್ತ ಮುಂದೆ ಸಾಗಿದೆವು. 'ಚಿತ್ತರ' ಪದಕ್ಕೆ ಏನು ಅರ್ಥ?" ಎಂದು ಒಬ್ಬರು ಪ್ರಶ್ನೆ ಹಾಕಿದರು. ಯಾವುದೇ ಗ್ರಾಮನಾಮದ ಮಧ್ಯದಲ್ಲಿ (ಪೂರ್ವಪದದ ಕೊನೆಗೆ) 'ರ' ಬಂದರೆ ಅದು ಜನಾಂಗವನ್ನು ಸೂಚಿಸುತ್ತದೆ (ಈ ನಿಯಮವನ್ನು ನಾನು ಬೇರೆಡೆ ಸ್ಪಷ್ಟಪಡಿಸಿದ್ದೇನೆ). ಹೀಗಾಗಿ 'ಚಿತ್ತರು' ಹೆಸರಿನ ಜನಾಂಗ ಇಲ್ಲಿ ನೆಲೆಸಿದ ಕಾರಣವಾಗಿ 'ಚಿತ್ತರಕಲ್ಲು' ಎಂಬ ಹೆಸರು ಬಂದಿರಬಹುದೆಂದು ಹೇಳಿದೆ. ಅಷ್ಟರಲ್ಲಿ ಒಬ್ಬರು

"ಇದೋ ನೋಡಿ, ಇದನ್ನು ಸಿದ್ಧರಗವಿ ಎಂದು ಕರೆಯುತ್ತಾರೆ" ಎಂದು ನನಗೆ ಹೇಳಿದರು. ಆಗ ಶ್ರೀ ರಾಜಶೇಖರಪ್ಪ ಅವರು "ಈಗಾಗಲೇ ವಿದ್ವಾಂಸರು ಹೇಳಿದಂತೆ, ನಾಗಾರ್ಜುನ ಮೊದಲಾದ ಸಿದ್ಧರು ಇದ್ದುದು ಇದೇ ಗವಿಯಲ್ಲಿ" ಎಂದು ಹೇಳುತ್ತ, "ಈ ಸಿದ್ಧರಿಗೂ ನೀವು ಹೇಳುವ ಚಿತ್ತರಿಗೂ ಏನಾದರೂ ಸಂಬಂಧವಿರಬಹುದೇ?" ಎಂದರು. ಈ ಸೂಚನೆಯಿಂದ ಪ್ರಚೋದಿತನಾಗಿ ದ್ರಾವಿಡಭಾಷೆಯಲ್ಲಿ ಸಿದ್ಧ>ಚಿತ್ತ ಎಂದಾಗುವುದರಿಂದ ಈ ಊರಿನ ನಿಜವಾದ ಹೆಸರು ಸಿದ್ಧರಕಲ್ಲು. ಇದು ಉಚ್ಚಾರದಲ್ಲಿ 'ಚಿತ್ತರಕಲ್ಲು' ಎಂದಾಗಿ, ಚಿತ್ರಕಲ್ಲುದುರ್ಗ ಇತ್ಯಾದಿ ರೂಪ ತಾಳಿದೆಯೆಂದು ಹೇಳಿದೆ. ಆಗ ಶ್ರೀ ಶ್ರೀಶೈಲಾರಾಧ್ಯರು "ಇಲ್ಲಿ ಮಗ್ಗುಲಲ್ಲಿಯೇ ಚಿತ್ರಹಳ್ಳಿ ಹೆಸರಿನ ಊರು ಇದೆ" ಎಂದುರು. "ಹಾಗಾದರೆ ಅದರ ಮೂಲ ಹೆಸರು ಸಿದ್ಧರಹಳ್ಳಿ ಎಂದು ಉತ್ತರಿಸಿದೆ. ಹೀಗೆ ನಾವೆಲ್ಲ ಸ್ನೇಹಿತರು ಚರ್ಚೆಯಲ್ಲಿ ಸಿದ್ಧರಕಲ್ಲು>ಚಿತ್ತರಕಲ್ಲು>ಚಿತ್ರಕಲ್ಲು>ಚಿತ್ರಕಲ್ಲುದುರ್ಗ>ಚಿತ್ರದುರ್ಗ ಎಂಬ ನಿಷ್ಪತ್ತಿಯನ್ನು ಒಪ್ಪಿಕೊಂಡೆವು. ಈ ಹೆಸರಿನ ವಿಷಯವಾಗಿ ಬಖೈರು ಮೊದಲಾದವುಗಳಲ್ಲಿರುವ ಚಿತ್ರನಾಯಕ ಇತ್ಯಾದಿ ವಿವರಗಳೆಲ್ಲ ಕಾಲ್ಪನಿಕ ಕಥೆಗಳೆಂದು ತಳ್ಳಿಹಾಕಿದೆವು.

ಈ ನಿರ್ಣಯಕ್ಕೆ ಬಂದುದು ೧೯೭೦ ಜುಲೈ ತಿಂಗಳಲ್ಲಿ, ಆದರೆ ಒಂದು ವರ್ಷದ ಬಳಿಕ ಡಾ. ಎಂ. ಚಿದಾನಂದಮೂರ್ತಿಯವರು ೧೯೭೧ರಲ್ಲಿ, ತಮ್ಮ 'ವಾಗರ್ಥ' ಹೆಸರಿನ ಗ್ರಂಥದಲ್ಲಿ, 'ಕರ್ನಾಟಕದ ಸ್ಥಳನಾಮಗಳು' ಎಂಬ ಲೇಖನ ಬರೆಯುತ್ತ, "ಚಿತ್ರದ ಮೂಲ ಸಿದ್ಧರು ಇರಬಹುದು. ಆಗ ಚಿತ್ರದುರ್ಗವು ಸಿದ್ಧರ + ಕಲ್ಲುಗಳ ದುರ್ಗ ಆಗುತ್ತದೆ" ಎಂದು ಹೇಳಿದ್ದಾರೆ. ಇಲ್ಲಿ ೧೯೭೦ರ ನನ್ನ ಅಭಿಪ್ರಾಯ ಮತ್ತು ೧೯೭೧ರ ಡಾ. ಚಿದಾನಂದಮೂರ್ತಿಗಳ ಅಭಿಪ್ರಾಯ ಒಂದೇ ಬಗೆಯಾಗಿವೆ. ಬಹುಶಃ ಈ ಅಭಿಪ್ರಾಯವನ್ನು ಡಾ. ಚಿದಾನಂದಮೂರ್ತಿಗಳಿಗೆ ನಾನಾಗಲೀ, ಈ ಚರ್ಚೆಯಲ್ಲಿ ಪಾಲುಗೊಂಡಿದ್ದ ಸ್ನೇಹಿತರಾಗಲೀ ಹೇಳಿರುವ ಸಂಭವವಿದೆ. ಸಂಶೋಧನ ಸಂತೋಷದ ಉದ್ರೇಕವನ್ನು ಲೇಖನ ರೂಪದಲ್ಲಿ ಪ್ರಕಟಿಸುವ ಮೊದಲೇ ಒಬ್ಬರು ಇನ್ನೊಬ್ಬರ ಮುಂದೆ ವ್ಯಕ್ತಪಡಿಸುವುದು ಸ್ವಾಭಾವಿಕ. ಡಾ. ಚಿದಾನಂದಮೂರ್ತಿ ಮತ್ತು ನಾನು ಸೇರಿದಾಗಲೆಲ್ಲ ಇಂಥ ಉದ್ರೇಕಗಳನ್ನು ಆಗಾಗ ಚರ್ಚಿಸುವುದು ವಾಡಿಕೆ.

'ವಾಗರ್ಥ'ದಲ್ಲಿ ಪ್ರಕಟವಾದ ಡಾ. ಚಿದಾನಂದಮೂರ್ತಿ ಅವರ ಈ ಕನ್ನಡ ಲೇಖನಕ್ಕೆ ಮೂಲವಾದುದು ೫-೬-೧೯೬೬ರಂದು ವಾಲ್ಟೇರದಲ್ಲಿ ಮಾಡಿದ ಇಂಗ್ಲಿಷ್ ಉಪನ್ಯಾಸವೆಂದು ಅವರೇ ಅಡಿಟಿಪ್ಪಣಿಯಲ್ಲಿ ಹೇಳಿದ್ದಾರೆ. ಬಹುಶಃ ೧೯೬೬ರ ಇಂಗ್ಲಿಷ ಉಪನ್ಯಾಸದಲ್ಲಿ 'ಸಿದ್ಧರಕಲ್ಲು' ಎಂಬುದರ ಪ್ರಸ್ತಾಪವಿರಲಿಕ್ಕಿಲ್ಲ. ಈ ಉಪನ್ಯಾಸವನ್ನು ೧೯೭೧ರಲ್ಲಿ ಕನ್ನಡ ರೂಪದಿಂದ 'ವಾಗರ್ಥ'ದಲ್ಲಿ ಪ್ರಕಟಿಸುವಾಗ ಚಿತ್ರದುರ್ಗದ ವಿವರಣೆಯ ಭಾಗ ಹೊಸದಾಗಿ ಸೇರಿಕೊಂಡಿರಬಹುದು. ಇದು ನಿಜವಿದ್ದರೆ 'ಸಿದ್ಧರಕಲ್ಲು' ನಿಷ್ಪತ್ತಿಯನ್ನು ಮೊದಲು ಗುರುತಿಸಿದವನು ನಾನು. ಒಂದು ವೇಳೆ ಡಾ. ಚಿದಾನಂದಮೂರ್ತಿಯ ೧೯೬೬ರಷ್ಟು ಹಿಂದೆಯೇ ಹೀಗೆ ಊಹಿಸಿದ್ದರೆ, ನನ್ನದೂ ಅದೇ ಬಗೆಯ ಸ್ವತಂತ್ರ ಊಹೆ. ಇದಕ್ಕೆ ಡಾ. ಚಿದಾನಂದಮೂರ್ತಿಗಳೇ ಉತ್ತರ ಹೇಳಬೇಕು.

ಇನ್ನೊಂದು ವಿಚಾರ : ಚಿತ್ತರಕಲ್ಲು>ಚಿತ್ರಕಲ್ಲು>ಚಿತ್ರಕಲ್ಲುದುರ್ಗ>ಚಿತ್ರದುರ್ಗ ಎಂದು ಈ ಪಟ್ಟಣದ ಹೆಸರು ಬದಲಾಗುತ್ತ ಬಂದಿತೆಂಬ ನಮ್ಮ ಚರ್ಚೆಯಲ್ಲಿ ಶ್ರೀ ರಾಜಶೇಖರಪ್ಪ ಭಾಗವಹಿಸಿದ್ದರೂ ಈ ನಿಷ್ಪತ್ತಿಯನ್ನು ಅವರು ಮರೆತಂತೆ ಕಾಣುತ್ತದೆ. ಆದುದರಿಂದಲೇ 'ಸಾಧನೆ' (೧೩-೪)ಯಲ್ಲಿ ಚಿಮ್ಮತ್ತನಕಲ್ಲು ಎಂಬುದೇ ಚಿತ್ರದುರ್ಗದ ಪ್ರಾಚೀನ ರೂಪವೆಂಬ ಒಲವು ತೋರುತ್ತ, "ಚಿತ್ರದುರ್ಗದ ಪ್ರಾಚೀನ ರೂಪಗಳು..... ಚಿಮ್ಮಚ್ಚನೂರು, ಚಿಮ್ಮತ್ತನೂರು, ಚಿಮ್ಮತ್ತನಕಲ್ಲು ಪಟ್ಟಣ, ಚಿಮತುರಕಲು, ಚಿಂಮತನೂರು, ಚಿಮ್ಮತ್ತನೂರು

ಎಂದು ಹೇಳಲಾಗಿದೆ." "ಚಿತ್ರದುರ್ಗದ ಹಿಂದಿನ ಹೆಸರುಗಳಲ್ಲಿಯಂತೆ, ಪ್ರಥಮಾಕ್ಷರ ;ಚಿ' ಈಗಿನ ಹೆಸರಿನಲ್ಲೂ ಇದೆ. ಆದುದರಿಂದ ಹಿಂದಿನ ಮತ್ತು ಇಂದಿನ ಹೆಸರುಗಳಿಗೆ ಪರಸ್ಪರ ಸಂಬಂಧವೇನಾದರೂ ಉಂಟೇ? ಇದನ್ನು ಸ್ಪಷ್ಟಪಡಿಸಿಕೊಳ್ಳಬೇಕಾದ ಅಗತ್ಯ ಒದಗಿದೆ." (ಈ ಬಗ್ಗೆ ನನ್ನ ಇನ್ನೊಂದು ಲೇಖನ ಬರಲಿದೆ' ಎಂದು ಅಡಿಟಿಪ್ಪಣಿಯಲ್ಲಿ ಹೇಳಿದ್ದಾರೆ) ಎಂಬ ಅಭಿಪ್ರಾಯಕ್ಕೆ ಬಂದು ನಿಂತಿದ್ದಾರೆ. ಆದರೆ ನಾವೆಲ್ಲ ಸೇರಿ ಚರ್ಚಿಸಿದಂತೆ, 'ಚಿತ್ತರಕಲ್ಲು' (>ಸಿದ್ದರಕಲ್ಲು) ಹೆಸರಿನಿಂದಲೇ ಚಿತ್ರಕಲ್ಲು ಬಂದಿದೆಯೇ ಹೊರತು 'ಚಿಮ್ಮತ್ತನಕಲ್ಲು' ಹೆಸರಿನಿಂದಲ್ಲ. ಈ ಚಿಮ್ಮತ್ತನಕಲ್ಲು ಎಂಬ ಅಲ್ಲಿಯ ಬೇರೊಂದು ಊರಿನ ಹೆಸರು ಈಗ ಮಾಯವಾಗಿದೆ. ಆ ಬೇರೊಂದು ಊರು, ಬೆಳೆದುನಿಂತ ಚಿತ್ರದುರ್ಗ (ಚಿತ್ತರಕಲ್ಲುದುರ್ಗ)ದಲ್ಲಿ ಲೀನವಾಗಿ ಹೋಗಿದೆ.

ಒಟ್ಟಿನಲ್ಲಿ, ೧. ಶಾಸನಗಳಲ್ಲಿ ಬರುವ 'ಬೆಮತ್ತನಕಲ್ಲು' ಎಂಬುದರ ಸರಿಯಾದ ಪಾಠ 'ಚಿಮತ್ತನಕಲ್ಲು' ಎಂದು ಮೊದಲು ಹೇಳಿದವರು ಶ್ರೀ ರಾಜಶೇಖರಪ್ಪನವರಲ್ಲ; ನಾನು. ೨. ಚಿತ್ರದುರ್ಗದ ಪ್ರಾಚೀನತಮರೂಪ 'ಸಿದ್ಧರಕಲ್ಲು' ಎಂದು ಮೊದಲು ಹೇಳಿದವರು ಬಹುಶಃ ಡಾ. ಚಿದಾನಂದಮೂರ್ತಿಗಳಲ್ಲ; ನಾನು. ೩. ಶ್ರೀ ರಾಜಶೇಖರಪ್ಪನವರು ಹೇಳುವಂತೆ 'ಚಿತ್ರದುರ್ಗ'ದ ನಿಷ್ಪತ್ತಿಯನ್ನು ;ಚಿಮ್ಮತ್ತನಕಲ್ಲು' ಎಂಬುದರಿಂದ ಸಾಧಿಸುವುದು ತಪ್ಪು; 'ಚಿತ್ತರಕಲ್ಲು' ಎಂಬುದರಿಂದ ಸಾಧಿಸುವುದು ಸರಿ.

ಒಂದು ವಿಷಯ : ಚಿತ್ರದುರ್ಗದ ಶಾಸನದಲ್ಲಿ 'ಚಿತ್ತರಕಲ್ಲು' ಎಂಬ ಹೆಸರು ಬಳಕೆಯಾಗಿದೆಯೆಂದು ಶ್ರೀ ರಾಜಶೇಖರಪ್ಪ ಅಂದು ಹೇಳಿದರು. ಅವರ ಈ ಮಾತನ್ನು ಆಧರಿಸಿ ಕೆಲವು ವಿವರಗಳನ್ನು ಇಲ್ಲಿ ಬರೆದಿದ್ದೇನೆ. ಆದರೆ ಈಗ ಪ್ರಕಟವಾದ ಯಾವ ಶಾಸನದಲ್ಲಿಯೂ ಈ ಹೆಸರು ನನಗೆ ಕಂಡು ಬರಲಿಲ್ಲ. ಹೀಗಾಗಿ ಶಾಸನದಲ್ಲಿ 'ಚಿತ್ತರಕಲ್ಲು' ಪ್ರಯೋಗವಾಗಿರುವ ಬಗ್ಗೆ ಶ್ರೀ ರಾಜಶೇಖರಪ್ಪನವರೇ ಈಗ ಉತ್ತರಿಸಬೇಕು. ಒಂದು ವೇಳೆ 'ಚಿತ್ತರಕಲ್ಲು' ಎಂಬುದು ಶಾಸನಗಳಲ್ಲಿ ಸಿಗದಿದ್ದರೆ, ಶಾಸನೋಕ್ತ 'ಚಿಮತುರಕಲ್ಲು' ಎಂಬುದರಿಂದ 'ಚಿತ್ರಕಲ್ಲು' ಹೆಸರನ್ನು ಸಾಧಿಸಬೇಕಾಗುತ್ತದೆ.

■■

ಆಕರ : ಮಾರ್ಗ ಸಂಪುಟ–೨

೪೧

ಅಗ್ಗಳನನ್ನು ಕುರಿತು

ಚಂದ್ರಪ್ರಭುಪುರಾಣದ ಕರ್ತೃ ಅಗ್ಗಳನ ಕಾಲ ೧೧೮೯. ಊರು ವಿಜಾಪೂರ ಜಿಲ್ಲೆಯ ಇಂಗುಳೇಶ್ವರ. ಶಾಂತೀಶ-ವಾಚಾಂಬಿಕೆಯರು[೧] ತಂದೆ-ತಾಯಿಗಳು. ಮೂಲಸಂಘ, ದೇಶೀಯ ಗಣ, ಪುಸ್ತಕಗಚ್ಛ, ಕೊಂಡಕುಂದಾನ್ವಯ ಶಾಖೆಯವನಾದ ಈತನ ಗುರು ಶ್ರುತಕೀರ್ತಿ ತ್ರೈವಿದ್ಯ.

ಇಂಗುಳೇಶ್ವರ ಒಂದು ಪ್ರಾಚೀನ ಜೈನಕೇಂದ್ರ. "ಇಂಗುಳೇಶ್ವರ ಬಳಿ" ಹೆಸರಿನ ಜೈನಪರಂಪರೆಯನ್ನೇ ತೆರೆದ ಕೀರ್ತಿ ಈ ಗ್ರಾಮದ್ದಾಗಿದೆ. ಶಾಸನಗಳಲ್ಲಿ ಈ 'ಇಂಗುಳೇಶ್ವರ ಬಳಿ'ಯ ಸೂಚನೆ ಅಗ್ಗಳನಿಗಿಂತ ಹಿಂದಿನಿಂದಲೂ ಕಂಡುಬರುತ್ತಿದ್ದು ಅಗ್ಗಳ ಹೇಳಿರದಿದ್ದರೂ ಇಂಗುಳೇಶ್ವರದವನಾದ ಈತನದೂ ಇದೇ "ಬಳಿ"ಯಾಗಿರುವ ಸಾಧ್ಯತೆಯಿದೆ. ಇಷ್ಟು ಹಿನ್ನೆಲೆಯೊಂದಿಗೆ ಅಗ್ಗಳನ ಚರಿತ್ರೆಯ ಮೇಲೆ ಬೆಳಕು ಚೆಲ್ಲಬಹುದಾದ ಈ ಗ್ರಾಮದ ಎರಡು ಸಣ್ಣ ಶಾಸನಗಳನ್ನು[೨] ಇಲ್ಲಿ ಪರೀಶೀಲಿಸಬಹುದು.

ಶಾಸನ -೧ (ಕ್ರಿ.ಶ ೧೧೬೦)

ನಿರುಪಮ ಮಲ್ಲಿನಾಥಜಿನನಾಥ ಶಿಲಾಮಯ ಗೇಹಮಂ ಸುರೇ।
ಶ್ವರ ಮಣಿಗೇಹಮೆಂದೆನಿಸಿ ಮಾಡಿಸಿದಪ್ಪದಪಿಂದಮಿಂಗಳೇ॥
ಶ್ವರಪುರನಾಥ ನಾಥ ಶಶಿನಾಥ ವಿರಾಜಿತ ತೀರ್ತ್ಥನಾಥಮಂ।
ದಿರದ ಪುರೋವಿಭಾಗ ಹರಿದಿಕ್ತಟದೊಳು ವಿಭು ಶಾಂತಿಪಂಡಿತರು ॥

.... ತಳೆದಂ ಪ್ರಮಾದಿ ವತ್ಸ
[ರ್ಮ]ಲ [ಮಾ]ಘದ ಬಹುಳ ಷಷ್ಟಿ ಸಿತವಾರದೊಳು।
ಜ್ವಳಿಪರ್ಥೋದಯದೊಳು ವಿಭು।
ವಿಳಾಸದಿಂ ಶಾಂತಿದೇವಮುನಿ ಸುರಪದಮಂ ॥

ಶಾಸನ-೨ (ಕ್ರಿ.ಶ. ೧೨೧೨)

---

೧. ಕರ್ನಾಟಕ ಕವಿಚರಿತೆಯಲ್ಲಿ 'ಪೋಚಾಂಬಿಕೆ' ಎಂದು ಕಂಡು ಬರುತ್ತದೆ.

೨. SII XV ೫೪೪ ಮತ್ತು ೬೦೫.

ಸ್ಥಿರತೆಯಿನೊಪ್ಪುತಿರ್ದ್ದ ಜಿನದರ್ಶನ ಸದ್ವ್ರತ ಸಚ್ಚರಿತ್ರದಿಂ।
ಪರಮಜಿನಾಭಿ[ಷೇಕ] ವರಪೂಜನದಿಂ ನುತ ಸಂಘದಾನದಿಂ।
ಸುರುಚಿರಕೀರ್ತಿಮೂರ್ತ್ತಿ ಸುಜನಂ ಗುಣಿಯಗ್ಗಳಸೆಟ್ಟಿಯಾ[ತ್ಮ]ಜಂ।
ಪರಮ ನಿಜಾಯುವಂ ತಳೆದು ಭವ್ಯಜನಾಗ್ರಣಿ ಶಾನ್ತನೊಪ್ಪಿದಂ॥

ಒಪ್ಪಿ ಬಳಿಕ್ಕೆ ದೇವಗತಿಗೊಪ್ಪಿರೆ ಸಂದನಮರ್ತ್ಯಲೋಕದೊಳು।
ತಪ್ಪದೆ ಜೈನಮಂದಿರ ನಿಕಾಯಮನರ್ತ್ಥಿಯೆ ಬಂದಿಪಂದದಿಂ।
ಮುಪ್ಪು ರುಜಾದಿಯಿಲ್ಲದೆ ಸುಸೌಖ್ಯಮನುಣ್ಬನುರಾಗಭಾವದಿಂ।
ಕಪ್ಪುರಪುಂಜದಂತೆ ಸಲೆ ಕಾಯಮನರ್ತ್ಥಿಪ ಶಾನ್ತನುತ್ತಮಂ ॥

ಯೆಸೆದಿರಲುತ್ತಮಾಂಗಿರದ ಚೈತ್ರದ ಪಾಡಿವ ಸೋಮವಾರದೊಳು।
ಪಸರಿಸೆಯಾತ್ಮಭಾವನ ಸಮಾಧಿಯೊಳೊಂದಿರೆ ದೇವಲೋಕಮಂ ।
ಪಾ[ಲಿ]ಸಲೆನೆ ಸಾಂತಿಸೆಟ್ಟಿ ಜಗಮೊಪ್ಪಿರೆ ಬಣ್ಣಿಸೆ ಪೊಕ್ಕನುನ್ನತಂ।
ಮಸಮಸಮಾಸ್ತ್ರನ್ನಿ ಭ..... ಪ ಸುರಪ್ರಭ ಭೋಗದರ್ತ್ಥಿಗಂ॥

ಇಲ್ಲಿಯ ಪ್ರಥಮ ಶಾಸನ (೧೧೬೦) ಶಾಂತಿಪಂಡಿತನನ್ನು(ಶಾಂತಿದೇವಮುನಿ), ದ್ವಿತೀಯ ಶಾಸನ (೧೨೧೨) ಅಗ್ಗಳಸೆಟ್ಟಿಯ ಮಗ ಶಾಂತನನ್ನು (ಶಾಂತಿಸೆಟ್ಟಿ) ಉಲ್ಲೇಖಿಸುತ್ತಿದ್ದು ಇವುಗಳಿಂದ

ಶಾಂತಿಪಂಡಿತ(೧೧೬೦)
↓
ಅಗ್ಗಳಸೆಟ್ಟಿ
↓
ಶಾಂತಿಸೆಟ್ಟಿ (೧೨೧೨)

ಎಂಬ ವಂಶಾವಳಿ ಹೊರಡುವ ಸಾಧ್ಯತೆಯಿದೆ. ಏಕೆಂದರೆ ಇಲ್ಲಿ ಅಜ್ಜನ ಹೆಸರನ್ನು ಮೊಮ್ಮಗನಿಗೆ ಇಟ್ಟಿರಬಹುದಾಗಿದೆ. ಇಂಗುಳೇಶ್ವರದವನಾದ ಕವಿ ಅಗ್ಗಳನ ತಂದೆ ಶಾಂತೀಶ, ಈತನ ಚಂದ್ರಪ್ರಭ ಪುರಾಣದ ಕಾಲ ೧೧೮೯ ಎಂಬುದನ್ನು ನೆನೆದರೆ ಶಾಸನೋಕ್ತ ಅಗ್ಗಳಸೆಟ್ಟಿ, ಚಂದ್ರಪ್ರಭ ಪುರಾಣದ ಕರ್ತೃ ಅಗ್ಗಳ ಒಬ್ಬನೇ ಎನ್ನಲು ಮನಸ್ಸಾಗುತ್ತದೆ. ಇದರಿಂದ ಈ ಕೆಳಗಿನ ನಿರ್ಣಯಗಳಿಗೆ ಬರಬಹುದಾಗಿದೆ.

ಕವಿ ಅಗ್ಗಳ ಜೈನ ವ್ಯಾಪಾರೀ ಕುಟುಂಬಕ್ಕೆ ಸಂಬಂಧಿಸಿದ ಶೆಟ್ಟಿಯಾಗಿದ್ದಾನೆ. ಈತನ ತಂದೆ ಶಾಂತಿಪಂಡಿತನು ಇಂಗುಳೇಶ್ವರದ ಚಂದ್ರಪ್ರಭ(ಶಶಿನಾಥ) ಬಸದಿಯ ಮುಂಭಾಗದಲ್ಲಿ ಮಲ್ಲಿನಾಥ ಬಸದಿಯನ್ನು ಕಟ್ಟಿಸಿದ್ದು, ಇವನ ಹೆಸರಿನ ಮುಂದಿರುವ 'ಪಂಡಿತ' ಬಿರುದು ಗಮನಾರ್ಹವಾಗಿದೆ. ಈ ಶಾಂತಿಪಂಡಿತ ಮರಣಕಾಲಕ್ಕೆ ಮುನಿಯಾಗಿದ್ದು ಅರ್ಧೋದಯ ಮುಹೂರ್ತದಲ್ಲಿ ತೀರಿಕೊಂಡನು. ಅಗ್ಗಳನ ಮಗನಾದ ಶಾಂತನಿಗೆ ಅಜ್ಜನ ಹೆಸರನ್ನು ಇಡಲಾಗಿದ್ದು, ಈತನು ಸಮಾಧಿ ಮರಣದಿಂದ ತೀರಿಕೊಂಡನು.

ಈ ಎಲ್ಲ ಸಂಗತಿಗಳು ನಮಗೆ ಅಗ್ಗಳನ ವಿಷಯವಾಗಿ ಇನ್ನೂ ಆಸಕ್ತಿ ಹುಟ್ಟಿಸುತ್ತಿದ್ದು ವಿದ್ವಾಂಸರು 'ಇಂಗುಳೇಶ್ವರ ಬಳಿ'ಯ ಅಭ್ಯಾಸದೊಂದಿಗೆ ಇಂಗುಳೇಶ್ವರ ಗ್ರಾಮದ ಕ್ಷೇತ್ರಕಾರ್ಯವನ್ನೂ ಕೈಕೊಳ್ಳಬಹುದಾಗಿದೆ.

ನಾಗಚಂದ್ರನು ಅಗ್ಗಳನ ಗುರು ಶ್ರುತಕೀರ್ತಿ ತ್ರೈವಿದ್ಯನನ್ನು ಸ್ಮರಿಸಿದುದು, ಈ ಇಬ್ಬರೂ ಕವಿಗಳ ಜೈನ ಶಾಖಾಪರಂಪರೆ ಒಂದೇ ಆಗಿರುವುದು, ನಾಗಚಂದ್ರನ ಮೊಮ್ಮಗನಾಗಿರಬಹುದಾದ ಬ್ರಹ್ಮಶಿವನು ಅಗ್ಗಳನ ಸ್ನೇಹಿತನಾಗಿರುವುದು, ನಾಗಚಂದ್ರನು ವಿಜಾಪುರದಲ್ಲಿಯೂ, ಅಗ್ಗಳನ ತಂದೆ ಇಂಗುಳೇಶ್ವರದಲ್ಲಿಯೂ ಮಲ್ಲಿನಾಥ ಬಸದಿ ಕಟ್ಟಿಸಿದುದು - ಇತ್ಯಾದಿ ಸಂಗತಿಗಳು ಈ ಇಬ್ಬರೂ ಕವಿಗಳನ್ನು ತೀರ ಹತ್ತಿರಕ್ಕೆ ತರುತ್ತವೆ. "ನಿಜ ವಿಭವೋದಯಂ ಸಫಲಮಾಯ್ತು" ಎಂಬಂಥ ಶ್ರೀಮಂತಿಕೆ ವ್ಯಾಪಾರದಿಂದಲೇ ನಾಗಚಂದ್ರನ ಕುಟುಂಬಕ್ಕೆ ಪ್ರಾಪ್ತವಾಗಿದ್ದರೆ, ಅಗ್ಗಳನಂತೆ ನಾಗಚಂದ್ರನೂ ಜೈನಶೆಟ್ಟಿಯಾಗಿರುವ ಸಾಧ್ಯತೆಯಿದೆ.

■■

ಆಕರ : ಮಾರ್ಗ ಸಂಪುಟ–೨

೪೨

ಶಾಸನೋಕ್ತ ಕೆಲವು ಪದಗಳು

ಶಾಸನಾಧ್ಯಯನ ನಮ್ಮ ನಾಡಿನಲ್ಲಿ ಪ್ರಾರಂಭವಾದ ಕಾಲದಿಂದಲೂ ಅನೇಕ ವಿದ್ವಾಂಸರು ಅಲ್ಲಿಯ ಪಾರಿಭಾಷಿಕ ಪದಗಳ ಅರ್ಥವನ್ನು ವಿವೇಚಿಸುತ್ತ ಬಂದಿದ್ದಾರೆ. ಈ ಅವಧಿಯಲ್ಲಿ ಅವುಗಳಿಗೆ ಸರಿಯಾದ ಅರ್ಥವನ್ನು ಹೇಳುತ್ತ, ಹೇಳಿದ ತಪ್ಪು ಅರ್ಥವನ್ನು ತಿದ್ದುತ್ತ ವಿದ್ವಾಂಸರು ಮುಂದುವರಿದಿದ್ದು; ಇಲ್ಲಿ ಶಾಸನೋಕ್ತ ಹದಿನೆಂಟು ಸಂತತಿ, ಅರುವಣ, ಬೀಟವೃತ್ತಿ ಪದಗಳ ಬಗೆಗೆ ಹೊಸ ವಿಚಾರಗಳನ್ನು ಮಂಡಿಸಲಾಗಿದೆ.

ಹದಿನೆಂಟು ಸಂತತಿ :

ಕರ್ನಾಟಕ ಭಾರತಿ ೧೦-೪ರ ಒರೆಗಲ್ಲು ವಿಭಾಗದಲ್ಲಿ ಪ್ರೊ. ಬಿ.ಆರ್. ಹಿರೇಮಠ ಅವರ 'ಹದಿನೆಂಟು ಸಂತತಿ' ಹೆಸರಿನ ಲೇಖನ ಪ್ರಕಟವಾಗಿದೆ. ಯಡ್ರಾಮಿಯ ಒಂದು ಶಾಸನ ಮುತ್ತಿಗೆಯ ಎರಡು ಶಾಸನಗಳನ್ನು ಆಧರಿಸಿ 'ಹದಿನೆಂಟು ಸಂತತಿ'ಯವರೆಂದು ಕರೆಯಿಸಿಕೊಳ್ಳಲ್ಪಡುತ್ತಿದ್ದವರು ಹದಿನೆಂಟು ಜನ (ಶಿಲಾಹಾರ) ಮಹಾಮಂಡಳೇಶ್ವರರು ಎಂದೂ ಇವರು ಸಂಯುಕ್ತವಾಗಿ ರಾಜ್ಯಭಾರ ನಡೆಸುತ್ತಿದ್ದರೋ? ಬೇರೆ ಬೇರೆಯಾಗಿ ಆಳುತ್ತಿದ್ದರೋ? ಎಂಬುದು ಸಂದೇಹ - ಎಂದೂ ಹೇಳಿರುವರು.

ಈ ಮೂರರ ಪೈಕಿ ಮುತ್ತಿಗೆಯ ಎರಡು ಶಾಸನ (ಕ್ರಿ.ಶ. ೧೧೪೭, ೧೧೭೯)ಗಳಲ್ಲಿ ಕೆಲವು ಜನರ ಹೆಸರು ಒಂದೇ ಬಗೆಯಾಗಿವೆ. ಯಡ್ರಾಮಿ ಶಾಸನ (ಕ್ರಿ.ಶ. ೧೧೬೦)ದಲ್ಲಿ ಮಾತ್ರ ಬೇರೆ ಹೆಸರುಗಳಿವೆ. ಮುತ್ತಗಿಯ ಆ ಎರಡು ಶಾಸನ ಶಿಲಾಹಾರರಿಗೆ ಸಂಬಂಧಿಸಿದವು. ಯಡ್ರಾಮಿಯ ಈ ಒಂದು ಶಾಸನ ಯಾದವರಿಗೆ ಸಂಬಂಧಿಸಿದುದು. ಹೀಗಾಗಿ ಇವು ಭಿನ್ನ ಯಾದಿಗಳೆಂದೂ ಇದು ಮಹಾಮಂಡಳೇಶ್ವರರನ್ನು ಸೂಚಿಸದೆ ಒಬ್ಬೊಬ್ಬ ಅರಸನಲ್ಲಿರುವ ೧೮ ಸದಸ್ಯರ ಸಮಿತಿಯನ್ನು ಸೂಚಿಸುತ್ತಿರಬಹುದೆಂದೂ ಹೇಳಬೇಕಾಗುತ್ತದೆ. ಹಾಗಾದರೆ ೧೮ ವ್ಯಕ್ತಿಗಳನ್ನೊಳಗೊಂಡ ಈ ಸಮಿತಿ ಯಾವುದು? ಎಂಬ ಪ್ರಶ್ನೆಗೆ ಅಭಿನವ ಮಂಗರಾಜ ವಿರಚಿತ 'ಅಭಿನವಾಭಿಧಾನ' ಉತ್ತರಿಸುವಂತಿದೆ. ಈ ನಿಘಂಟುವಿನ 'ಕ್ಷತ್ರಿಯವರ್ಗಂ' ವಿಭಾಗದಲ್ಲಿ ರಾಜನಿಗೆ ಸಂಬಂಧಿಸಿದ ವಿಷಯಗಳನ್ನು ವಿವರಿಸುತ್ತ (ಕ್ಷತ್ರಿಯ ವರ್ಗ-೧೧)

ಪೌರೋಹಿತಂ ದಂಡನಾಥನಧ್ಯಕ್ಷನಧಿ
ಕಾರಿ ಮಂತ್ರಿಪ್ರಧಾನಂ ಮಹೋಗ್ರಾಣಿ ಭಂ ।
ಡಾರಿ ಸೇನಾನಾಯಕಂ ಸಂಧಿವಿಗ್ರಹಿ ಪ್ರತಿಹಾರಿಯಂತಃಸ್ಥಿತಂ॥
ದ್ವಾರಪಾಲಂ ಕರಣಿಕಂ ದಂಡಪಾಣಿ ಕೊ।
ತಾರಿ ಯುವರಾಜನಾ ತಳವಾರನೆಂಬಿವರು
ಭೂರಮಣನಲ್ಲಿ ನಿಯೋಗಮಂ ತಾಳ್ದು ಪದಿನೆಣ್ಬರ್ ಪ್ರಧಾನರೆನಿಕುಂ ।

ಎಂದು ತಿಳಿಸುತ್ತದೆ. ಬಹುಶಃ ಈ 'ಪದಿನೆಣ್ಬರ್ ಪ್ರಧಾನ'ರೇ ಹದಿನೆಂಟು ಸಂತತಿಯಾಗಿರಬೇಕು. ಇಲ್ಲಿಯ ಸಂತತಿ ಎಂಬ ಪದಕ್ಕೆ ಗುಂಪು, ಮಂಡಲ, ಸಮಿತಿ ಎಂಬ ಅರ್ಥವನ್ನು ಪರಿಭಾವಿಸಬೇಕು. ಶಿಲಾಹಾರರೂ ಯಾದವರೂ ಈ ವ್ಯವಸ್ಥೆಯನ್ನು ಒಪ್ಪಿದ್ದ ಕಾರಣ ಇಬ್ಬರಲ್ಲಿಯೂ ೧೮ ಜನರುಳ್ಳ 'ಪ್ರಧಾನಿ ವರ್ಗ' ಇದ್ದಿತೆಂದು ಹೇಳಬಹುದು.

'ಸಮಸ್ತ ಸಂತಾನರು' ಹೆಸರಿನಿಂದ ಮೇಲಿನ ಮುತ್ತಗಿಯ ಶಾಸನಗಳಲ್ಲಿ 'ತರ್ದವಾಡಿ ಶಿಲಾಹಾರ' ಮನೆತನದ ೧೮ ಜನ ಪ್ರಧಾನರು ಕಂಡುಬಂದರೆ, ಚಟ್ಟರಕಿಯ ಶಾಸನದಲ್ಲಿ ಕನ್ನೊಳ್ಳಿ ಶಿಲಾಹಾರ ಮನೆತನದವರು ಸೂಚಿತರಾಗಿದ್ದಾರೆ.[೧]

ಅರುವಣ :

ಶಾಸನಗಳ ದತ್ತಿಪ್ರಸಂಗದಲ್ಲಿ ಬರುವ ಪಾರಿಭಾಷಿಕ ಪದಗಳಲ್ಲಿ ಅರುವಣವೂ ಒಂದು.[೨] ಈ ಪದದ ಸರಿಯಾದ ರೂಪ, ಅರ್ಥಗಳ ಬಗೆಗೆ ಡಾ. ಬಾರ್ನೆಟ್, ಡಾ. ಎಂ. ಚಿದಾನಂದಮೂರ್ತಿ ಮತ್ತು ಪರಿಷತ್ತಿನ ನಿಘಂಟುಕಾರರು ಈಗಾಗಲೇ ಚರ್ಚಿಸಿದ್ದಾರೆ.

ಡಾ. ಬಾರ್ನೆಟ್ ಅವರು ಅರುವಣವೆಂದರೆ 'ಮಾನ್ಯಭೂಮಿಗಳ ಮೇಲಿನ ತೆರಿಗೆ' ಎಂದು ಅರ್ಥ ಹೇಳಿದ್ದಾರೆ. ನಿಷ್ಪತ್ತಿಯ ಆಳಕ್ಕೆ ಇಳಿಯದೆ ಸಂದರ್ಭ ನೋಡಿಕೊಂಡು ಹೇಳಿದ ಅರ್ಥವಿದು.[೩]

ಡಾ. ಎಂ. ಚಿದಾನಂದಮೂರ್ತಿಗಳು "ಸಾಮಾನ್ಯವಾಗಿ ದತ್ತಿಯ ಭೂಮಿಗಳ ತೆರಿಗೆಗಳನ್ನು ಅರ್ಧದಷ್ಟಕ್ಕೆ ಇಳಿಸಿ ಅಥವಾ ಇನ್ನೂ ಇಳಿಸಿ ಹೆಸರಿಗೆ ಮಾತ್ರ ಸ್ವಲ್ಪ ತೆರಿಗೆಯನ್ನು ತೆಗೆದುಕೊಳ್ಳುತ್ತಿದ್ದರು. ಇದೇ 'ಅರುವಣ'ವೆಂದು ಕಾಣಿಸುತ್ತದೆ. (ಅರ, ಅರೆ, ಅರಮೆ=ಅರ್ಧ, ಸ್ವಲ್ಪ[೪])" ಎಂದು ಹೇಳುತ್ತ ದೇವರಿಗೆ ಬಿಟ್ಟ ಭೂಮಿಯಿಂದ ಸರ್ಕಾರ ಪಡೆವ ಅಲ್ಪಪ್ರಮಾಣದ ತೆರಿಗೆಯೆಂದು ಅರ್ಥ ಮಾಡಿದ್ದಾರೆ.

ಪರಿಷತ್ತಿನ ನಿಘಂಟುಕಾರರು ಈ ಪದವನ್ನು ಆರು(ಆರ್)+ಪಣ ಎಂದು ಬಿಡಿಸಿ ಆರ್ ಎಂಬುದಕ್ಕೆ ನೇಗಿಲು ಎಂಬ ಅರ್ಥವಿರುವುದರ ಹಿನ್ನೆಲೆಯಲ್ಲಿ ಇದಕ್ಕೆ 'ನೇಗಿಲು ತೆರಿಗೆ' ಎಂದು ಅರ್ಥ ಹೇಳಿದ್ದಾರೆ. ಇನ್ನೂ ಮುಂದು ಹೋಗಿ ಒಂದು ತೆರನಾದ ಸುಂಕ (?) ಎಂದೂ ಸಂದೇಹತಾಳಿ ನಿಂತಿದ್ದಾರೆ.[೫]

ಒಟ್ಟಿನಲ್ಲಿ ಭೂಮಿಗೆ ಹಾಕುವ ತೆರಿಗೆಯೆಂಬ ಅಭಿಪ್ರಾಯ ಮೂರೂ ವಿವರಣೆಗಳದ್ದಾಗಿದೆ. ಆದರೆ "ಶ್ರೀ ಸರ್ವೇಶ್ವರ ದೇವರ್ಗ್ಗೆ ಶ್ರೀಮತು ರೆಬ್ಬಲದೇವಿಯರು ತಮ್ಮ ಮನೆಯ ಸ್ವಾಮ್ಯದ ಅರುವಣಮಂ ಬಿಟ್ಟ ಶಾಸ......."[೬] ಎಂಬ ವಾಕ್ಯದಲ್ಲಿ ಬರುವ 'ಮನೆ' ಎಂಬ ಪದ, 'ರೆಬ್ಬಲದೇವಿಯರು ತಮ್ಮ' ಎಂಬ ಹೇಳಿಕೆಗಳು

---

೧. ಗುರವ, ಆರ್.ಎನ್: ತರ್ದವಾಡಿ ನಾಡು, ಪು. ೯೯

೨. ಈ ಪದ ಕ್ವಚಿತ್ತಾಗಿ 'ಅಱುವಣ' ಎಂಬ ರೂಪದಲ್ಲಿ ಕಂಡುಬರುತ್ತಿದ್ದರೂ 'ಅರುವಣ'ವೆಂಬುದೇ ಶುದ್ಧರೂಪವಾಗಿದೆ.

೩. EI,XV. P. 97

೪. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (೧೯೬೬) ಪು. ೩೯೭.

ಮೇಲಿನ ಮೂವರು ವಿವರಿಸುವಂತೆ ಇದು ಕೇವಲ ಹೊಲ-ತೋಟಗಳಿಗೆ ಹಾಕುವ ತೆರಿಗೆಯೂ ಅಲ್ಲ, ಸರ್ಕಾರ ಆಕರಿಸುವುದೂ ಅಲ್ಲವೆಂದು ಸ್ಪಷ್ಟಪಡಿಸುತ್ತವೆ. "ಪರಿಕಿಸದೀ ಧರ್ಮದೊಳರಸರ ಕಾಣಿಕೆ ಕೊಳ್ಳಿ ಅರುವಣಂ ಕಿಱುಸುಂಕಂ ಪುರಧರ್ಮಂ ಬಣ್ಣಿಗೆಯೆಂದರೆ ವಾಸಮನಳಿಪಿಕೊಣ್ಡವಂ ಚಣ್ಡಾಳಂ[ ]"[೭] ಎಂಬ ವಾಕ್ಯದಲ್ಲಿ "ಅರುವಣಂ ಕಿಱುಸುಂಕಂ" ಎಂಬ ಪ್ರತ್ಯೇಕ ಪದಗಳೇ ಬಂದುದರಿಂದ ಅರುವಣಕ್ಕೆ 'ಸ್ವಲ್ಪ ಸುಂಕ' ಎಂಬ ಡಾ. ಚಿದಾನಂದಮೂರ್ತಿಗಳ ಅಭಿಪ್ರಾಯವೂ ಇಲ್ಲಿ ಸರಿಯೆನಿಸುವುದಿಲ್ಲ.

ಬಹುಶಃ ಹೊಲವನ್ನಾಗಲಿ, ಮನೆಯಲ್ಲಾಗಲಿ ದೇವರಿಗೆ ದತ್ತಿಕೊಟ್ಟು ಆ ದಾನಿಗಳು ಅಥವಾ ಬೇರೊಬ್ಬರು ಅದನ್ನು ಭೋಗಿಸುತ್ತ ಆ ಭೋಗಕ್ಕೆ ಪ್ರತಿಯಾಗಿ ದೇವರಿಗೆ ಕೊಡುವ ಒಂದಿಷ್ಟು ಹಣವೇ ಅರುವಣವಾಗಿರಬೇಕು. 'ಸರ್ವೇಶ್ವರದೇವರಿಗೆ ರೆಬ್ಬಲದೇವಿಯರು ತಮ್ಮ ಮನೆಯ ಸ್ವಾಮ್ಯದ ಅರುವಣಮಂ ಬಿಟ್ಟ'ರೆಂಬ ವಾಕ್ಯದಿಂದ ಹೊರಡುವ ಸರ್ವೇಶ್ವರದೇವರಿಗೆ ಬಿಟ್ಟರೆಂಬ, ತಮ್ಮ ಮನೆಯ ಸ್ವಾಮ್ಯಕ್ಕೆ ಸಂಬಂಧಿಸಿದುದನ್ನು ಬಿಟ್ಟರೆಂಬ ಅಭಿಪ್ರಾಯ ನಮ್ಮ ಅರ್ಥವನ್ನು ಪೋಷಿಸುತ್ತದೆ. ಇದಲ್ಲದೆ ದಾನವಾಗಿ ಬಂದ "ಮೂಱು ತೋಂಟಕ್ಕೆ ಮೂಱು ಮತ್ತರ್ಕ್ಕಿಸುಕಾಡಿಂಗಮರುಣಮನಿತ್ತುಣ್ಬರ್"[೮] ಎಂಬ ಶಾಸನ ಹೇಳಿಕೆ ನಮ್ಮ ಅಭಿಪ್ರಾಯವನ್ನು ಇನ್ನೂ ಸ್ಪಷ್ಟಪಡಿಸುತ್ತದೆ. ದೇವರಿಗೆ ದತ್ತಿಬಿಟ್ಟ ಹೊಲ, ಮನೆಗಳನ್ನು ತಾವು ಭೋಗಿಸುವುದಕ್ಕೆ ಇಟ್ಟುಕೊಂಡು, ಪ್ರತಿಯಾಗಿ ಕೊಡುವ ಧನವೇ ಅರುವಣವೆಂದೂ ಬಹುಶಃ ಇದು ಅರ್ಪಣ ಎಂಬುದರ ತದ್ಭವವೆಂದೂ ಹೇಳಬಹುದು. ಅರ್ಪಣ>ಅರುಪಣ>ಅರುವಣವೆಂಬ ರೂಪಾಂತರ ಕನ್ನಡದಲ್ಲಿ ಮಾನ್ಯವಾದುದೆಂದು ಬೇರೆ ಹೇಳಬೇಕಿಲ್ಲ.

ಶಾಸನಗಳಲ್ಲಿ ಬರುವ "................... ಅದಕ್ಕೆ ವಂಶ ನಿಬಂಧದಿಂ ತಿಱುವರುವಣ ಕರಿಯ ದ್ರಮ್ಮ ೫" "............. ಇನ್ತಿನಿತರ್ಕ್ಕೆ ನಿಬನ್ಧದಿಂ ತಿಱುವರುವಣ ಗದ್ಯಾಣಂ ಎರಡು"[೯] ಎಂಬ ಶಾಸನ ವಾಕ್ಯಗಳು ಹೀಗೆ ನಿರ್ದಿಷ್ಟಪಡಿಸಿದ ಅರುವಣವನ್ನು ಪ್ರತಿವರ್ಷ ದೇವಾಲಯಕ್ಕೆ ಕೊಡಬೇಕಾಗುತ್ತಿದ್ದಿತೆಂದು ತಿಳಿಸುತ್ತವೆ, ಇಲ್ಲಿಯ 'ತಿಱುವರುವಣ' ಎಂಬುದಕ್ಕೆ ತಿರುಪತಿ>ಶ್ರೀಪತಿ, ತಿರುನೀಲಕಂಠ>ಶ್ರೀ ನೀಲಕಂಠ ಮಾದರಿಯಲ್ಲಿ 'ಶ್ರೀಯರ್ಪಣ' ಎಂದು ಅರ್ಥ ಹೇಳಬೇಕಾಗುತ್ತದೆ.

ಬೀಜವತ್ತಿ :

ಶಾಸನಗಳಲ್ಲಿ ಆಗಾಗ ಕಂಡುಬರುವ ಪದ 'ಬೀಟಿವೃತ್ತಿ'[೧೦] ಈ ಪದವನ್ನು ಕುರಿತು ನಿರ್ಣಯ ನೀಡುವುದು ಕಠಿಣವೆಂದು ಹೇಳುತ್ತ ಡಾ. ಎಂ. ಚಿದಾನಂದಮೂರ್ತಿಗಳು "ಬೀಟು ಎಂದರೆ ಕೆಳಗೆ ಬೀಳು ಸೋಲು ಎಂದರ್ಥ. 'ಬೀಟಿವೃತ್ತಿ' ಸಾಮಂತನು ಅಧಿರಾಜನಿಗೆ ಸೋತುದುನ್ನೂ, ಅವನಿಗೆ ತೋರಿಸುತ್ತಿದ್ದ

೫. ಕನ್ನಡ ನಿಘಂಟು, ಪು. ೩೮೮.

೬. Inscription fron Nanded District. P. 30

೭. ಕನ್ನಡ ನಿಘಂಟು, ಪು. ೩೮೮

೮. Bkl. I-i, 47, 995 A.D.

೯. Inscriptions from Nanded District, P. 12, 15

೧೦. ಈ ಪದ 'ಬೀಳವೃತ್ತಿ' ಎಂಬ ರೂಪದಲ್ಲಿಯೂ ಸಿಗುತ್ತದೆ. 'ಬೀಳಾನುವೃತ್ತಿ' ಎಂಬುದು ಇದಕ್ಕೆ ಸಂವಾದಿಯಾದ ಪದವೋ, ಬೇರೊಂದು ಅರ್ಥದ ಪದವೋ ಗೊತ್ತಾಗುವುದಿಲ್ಲ.

ಗೌರವವನ್ನೂ ಭಕ್ತಿಯನ್ನೂ ಸೂಚಿಸುವಂತೆ ಕಾಣಿಸುತ್ತದೆ ಅಥವಾ ಇದಕ್ಕಿಂತ ಉತ್ತಮವಾದ ಊಹೆಯೊಂದನ್ನು ಮಾಡಬಹುದು. ಬೀಬಿಲ್ ಎಂದರೆ ಆಲದ ಮರದ ಬೀಳಿಲು ಅಥವಾ ಬೇರು. ಇದೂ ಬೀಟ್ ಧಾತುವಿನಿಂದ ಬಂದಿರುತ್ತದೆ. ಆಲದ ಮರದ ವಂಶವು ಈ ಬಿಳಿಲುಗಳಿಂದ ಬೆಳೆಯುತ್ತ ಹೋಗುತ್ತದೆ. ಈ ವಂಶದ ರಾಜನ ಆಶ್ರಯದಲ್ಲಿ ಇತರರು ಅಧೀನರಾಗಿ ಆಳುತ್ತಿದ್ದ ವಿಷಯವನ್ನು ಬೀಟಿವೃತ್ತಿ ಸೂಚಿಸುತ್ತಿರುವುದು" ಎಂದು ವಿವರಣೆ ನೀಡುತ್ತಾರೆ.[೧೧]

ಬಹುಶಃ ಯಾವುದೇ ವೃತ್ತಿವ್ಯವಸ್ಥೆಗೆ ಇಷ್ಟು ಅಲಂಕಾರಿಕವಾಗಿ ಹೆಸರು ಇಡುವುದು ಅಸಂಭವ ಆದುದರಿಂದ ಈ ಪದದ ನಿಷ್ಪತ್ತಿಗಾಗಿ ಬೇರೆ ಮಾರ್ಗವನ್ನು ಹುಡುಕಬೇಕಾಗುತ್ತದೆ. ಶಾಸನಗಳಲ್ಲಿ ಈ ಪದ 'ಬೀಡವೃತ್ತಿ' ಎಂಬ ರೂಪದಲ್ಲಿಯೂ ಸಿಗುತ್ತದೆ. ಡ>ಟಿ ವ್ಯತ್ಯಾಸ ಕನ್ನಡದಲ್ಲಿ ಸಹಜಕ್ರಿಯೆ.

೧. ಚಾಲುಕ್ಯ ಭುವನೈಕಮಲ್ಲನ ಕೈಕೆಳಗೆ ಶ್ರೀಮನ್ಮಹಾಮಂಡಳೇಶ್ವರ ಚಿದ್ದಣಚೋಳಮಹಾರಾಜನು "ಕನ್ನೆ ಮುನೂಱುಂ ಪೆಡಕಲ್ಲೆಂಟುನೂಱು ನಱವಾಡಿಯಯ್ನೂಱು ಮಯಜೆ ಮೂನೂಱುವಿನ್ತು ನಾಲ್ಕು ನಾಡುಮಂ ಬಿಡವಿತ್ತಿಯನಾಳುತ್ತುಂ" ಇದ್ದನೆಂದು ಆಲಂಪುರ ಶಾಸನ ಹೇಳುತ್ತದೆ.[೧೨]

೨. ಶ್ರೀ ಮನ್ಮಹಾಮಂಡಳೇಶ್ವರ ಗಂಡರಾದಿತ್ಯ ದೇವನು "ವಲ್ಲವಾಡ ಗ್ರಾಮೇ ಬೀಡಾನುವೃತ್ಯಾ" ಆಳುತ್ತಿದ್ದವೆಂದು ಕೊಲ್ಲಾಪೂರ ತಾಮ್ರಪಟದಲ್ಲಿ (೧೧೨೬) ಹೇಳಲಾಗಿದೆ.[೧೩]

ಹೀಗಾಗಿ ಶಾಸನೋಕ್ತ "ಬೀಟಿವೃತ್ತಿ", ಪದದ ಮೂಲವನ್ನು "ಬೀಡವೃತ್ತಿ"ಯಲ್ಲಿ ಹುಡುಕುವದೇ ಯೋಗ್ಯವೆಂದೂ, ನೆಲೆ ಅರ್ಥದ 'ಬೀಡು' ಪದದಿಂದ ಇದು ಬಂದಿದೆಯೆಂದೂ ಹೇಳಬಹುದು. ಈ ದಾರಿಯಲ್ಲಿ ನಡೆದು 'ಬೀಟಿವೃತ್ತಿ'ಗೆ ವಿದ್ವಾಂಸರು ಇಡಿಯಾದ ಅರ್ಥ ಹುಡುಕಬೇಕಾಗಿದೆ.

■■

ಆಕರ : ಮಾರ್ಗ ಸಂಪುಟ–೨

---

೧೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (೧೯೬೬)ಪು. ೩೪೧.

೧೨. ತೆಲಂಗಾಣ ಶಾಸನಮುಲು (೧೯೬೦)ಪು. ೩೧.

೧೩. ಡಾ. ಎಂ.ಎಂ. ಕಲಬುರ್ಗಿ-ನಿಂಬಸಾಮಂತ ಚರಿತೆ (ಪ್ರಸ್ತಾವನೆ ಪು. ೩).

೪೩

ರಾಜಧಾನಿ : ಒಂದು ಸ್ಪಷ್ಟನೆ

"ಕಲುಚುರಿಗಳ ಶಾಸನಗಳನ್ನು ಅವಲೋಕಿಸಿದರೆ ಅವರು ಅನೇಕ ಸ್ಥಳಗಳನ್ನು ಆಗಾಗ ರಾಜಧಾನಿಯಾಗಿ ಮಾಡಿಕೊಂಡು ಆಳಿದಂತೆ ಕಂಡುಬರುತ್ತದೆ. ಇಂತಹ ಸ್ಥಳಗಳು ನಾಲ್ಕು: ೧. ಮಂಗಳಿವೇಡ, ೨. ಕಲ್ಯಾಣ, ೩. ಮೊದೆಗನೂರು, ೪. ಸೆಲೆಯಹಳ್ಳಿ."[೧]

"ಕರ್ನಾಟಕ ಕಲಚುರಿಗಳು"ಎಂಬ ಲೇಖನದಲ್ಲಿ ಹೀಗೆ ಹೇಳುತ್ತ ಡಾ. ಪಿ.ಬಿ. ದೇಸಾಯಿ ಅವರು ಈ ರಾಜಧಾನಿಗಳಲ್ಲಿ ಆಳಿದ ಕಲಚುರಿ ಅರಸರನ್ನು ಈ ರೀತಿ ವಿವರಿಸುತ್ತಾರೆ:[೨]

೧. ಮಂಗಳಿವೇಡ - ಬೀಜ್ಜಳ I, ಜೋಗಮ, ಬಿಜ್ಜಳII, ಸೋವಿದೇವ, ಸಂಕಮ, ವೀರಬಿಜ್ಜಳ

೨. ಕಲ್ಯಾಣ-ಬಿಜ್ಜಳ II, ಸೋವಿದೇವ, ಸಂಕಮ.

೩. ಮೊದೆಗನೂರ - ಸೋವಿದೇವ, ಸಂಕಮ, ಅಹವಮಲ್ಲ.

೪, ಸೆಲೆಯಹಳ್ಳಿ- ಸೋವಿದೇವ, ಸಂಕಮ.

ಇಲ್ಲಿ ಎರಡನೆಯ ಬಿಜ್ಜಳ ಮಾಂಡಲಿಕನಾಗಿ ಮಂಗಳವಾಡದಲ್ಲಿ, ಸಾಮ್ರಾಟನಾಗಿ ಕಲ್ಯಾಣದಲ್ಲಿ ಆಳಿದುದನ್ನು ಒಪ್ಪಬಹುದು. ಆದರೆ ಸೋವಿದೇವ, ಸಂಕಮರು ನಾಲ್ಕು ರಾಜಧಾನಿಗಳಿಂದ ಆಳಿದರೆಂಬುದು ಅಸಮಂಜಸ. ಏಕೆಂದರೆ, ತಮ್ಮ ಒಟ್ಟು ಆಳಿಕೆಯ ಅಲ್ಪಾವಧಿಯಲ್ಲಿ ಇವರು ಇಷ್ಟು ಊರುಗಳಿಗೆ ರಾಜಧಾನಿಯನ್ನು ಸ್ಥಳಾಂತರಿಸಿದುದೂ ಅಸಾಧ್ಯ; ಮೊದಗನೂರು, ಸೆಲೆಯಹಳ್ಳಿಗಳು ರಾಜಧಾನಿ ಹೋಗಲಿ, ಉಪರಾಜಧಾನಿಗಳಾಗುವ ಯೋಗ್ಯತೆಯ ಗ್ರಾಮಗಳೂ ಅಲ್ಲ.

ಡಾ. ದೇಸಾಯಿಯವರ ಪ್ರಕಾರ ಸೋವಿದೇವನು ಮಂಗಳವಾಡದಿಂದ ಆಳಿದುದನ್ನು ಕ್ರಿ.ಶ. ೧೧೬೮, ೧೧೭೩, ೧೧೭೬ನೆಯ ಇಸ್ವಿಯ ಶಾಸನಗಳೂ, ಕಲ್ಯಾಣದಿಂದ ಆಳಿದುದನ್ನು ಕ್ರಿ.ಶ. ೧೧೭೦, ೧೧೭೨ನೆಯ ಇಸ್ವಿಯ ಶಾಸನಗಳೂ, ಮೊದೆಗನೂರಿನಿಂದ ಆಳಿದುದನ್ನು ಕ್ರಿ. ಶ. ೧೧೭೦-೭೧, ೧೧೭೨-೭೩ನೆಯ ಇಸ್ವಿಯ ಶಾಸನಗಳೂ, ಸೆಲೆಯಹಳ್ಳಿಯಿಂದ ಆಳಿದುದನ್ನು ೧೧೭೨-೭೩ನೆಯ ಇಸ್ವಿಯ

---

೧. ಡಾ.ಪಿ.ಬಿ.ದೇಸಾಯಿ: ಕರ್ನಾಟಕದ ಕಲಚುರಿಗಳು (ಸಾ.ಪ. ೩೭-೧ ಮತ್ತು ೨ ಪು. ೧೧೪)

೨. ಡಾ.ಪಿ.ಬಿ. ದೇಸಾಯಿ ಅವರ ಲೇಖನದಿಂದ ಈ ವಿವರಗಳನ್ನು ಬಿಡಿಸಿಕೊಳ್ಳಲಾಗಿದೆ.

ಶಾಸನವೂ ತಿಳಿಸುತ್ತವೆ.[೩] ಇಲ್ಲಿಯ ೧೧೭೨-೧೧೭೩ನೆಯ ಇಸ್ವಿಯ ಶಾಸನಗಳಲ್ಲಿ ಈ ನಾಲ್ಕೂ ಊರುಗಳು ಸೂಚಿತವಾಗಿರುವುದರಿಂದ ಒಂದೇ ವರ್ಷದ ಅವಧಿಯಲ್ಲಿ ನಾಲ್ಕು ಸಲ ಇಡಿಯಾಗಿ ರಾಜಧಾನಿಯನ್ನು ಸ್ಥಳಾಂತರಿಸಿದುದಾಗಲೀ, ಸಿಬ್ಬಂದಿ ಸಮೇತ ಅಲ್ಲಷ್ಟು ದಿನ, ಇಲ್ಲಷ್ಟು ದಿನ ಆಡಳಿತ ನಡೆಸಿದನೆಂಬುದಾಗಲೀ ಸರಿಕಾಣುವುದಿಲ್ಲ. ಬೇರೆ ಅರಸರ ವಿಷಯವಾಗಿಯೂ ಇತರ ವಿದ್ವಾಂಸರು ಇದೇ ರೀತಿ ಹೇಳುವುದರಿಂದ[೪] ನಮ್ಮ ಇತಿಹಾಸ ಲೇಖಕರು ಇಲ್ಲಿ ಏನೋ ತಪ್ಪು ಮಾಡುತ್ತಲಿದ್ದಾರೆನಿಸುತ್ತದೆ.

ರಾಜಧಾನಿ ಸ್ಥಳಾಂತರವಾಗುವುದಿಲ್ಲವೆಂದು ನನ್ನ ಅಭಿಪ್ರಾಯವಲ್ಲ. ಆದರೆ ಡಾ. ದೇಸಾಯಿ ಮೊದಲಾದವರು ಹೇಳುವ ರೀತಿ ಮಾತ್ರ ತುಂಬ ವಿಚಿತ್ರವಾಗಿ ಕಾಣುತ್ತದೆ. ಹೀಗಾಗಿ ಪ್ರಾಚೀನ 'ರಾಜಧಾನಿ'ಯ ಸ್ಪಷ್ಟ ತಿಳಿವಳಿಕೆಗೆ ಮೊದಲು, ಇಲ್ಲಿ ಉದಾಹರಣೆಗಳೊಂದಿಗೆ ಕೆಲವು ವಿಷಯಗಳನ್ನು ಚರ್ಚಿಸಬಹುದು.

೧. "ವೀರಬಲ್ಲಾಳದೇವ ಶ್ರೀಮದ್ರಾಜಧಾನಿ ದೋರಸಮುದ್ರದ
ನೆಲೆವೀಡಿನಲು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿರ್ದ್ದು"[೫]

೨. "ವೀರಬಲ್ಲಾಳದೇವರು ಶ್ರೀಮದ್ರಾಜಧಾನಿ ದೋರಸಮುದ್ರದ
ಬೀಡಿನಲು ಸುಖಸಂಕಥಾವಿನೋದದಿಂ ಪ್ರಿಥ್ವೀರಾಜ್ಯಂಗೈಯುತ್ತಮಿರೆ"[೬]

೩. "ಶ್ರೀ ವೀರನಾರಸಿಂಹದೇವರಸರು ದೋರಸಮುದ್ರದ ನೆಲೆವೀಡಿನೊಳು
ಪ್ರಿಥ್ವೀರಾಜ್ಯಂಗೈಯುತ್ತಮಿರಲು"[೭]

ಈ ವಾಕ್ಯಗಳಿಂದ ರಾಜನು ಆಳುತ್ತಿದ್ದ ಪಟ್ಟಣದ ಹಿಂದೆ 'ರಾಜಧಾನಿ' ಎಂಬ ವಿಶೇಷಣ ಬಳಸುವುದು ಐಚ್ಛಿಕವಾಗಿದ್ದಿತೆಂದೂ, ರಾಜಧಾನಿ ಎಂಬ ಅರ್ಥದಲ್ಲಿ ಬೀಡು, ನೆಲೆವೀಡು ಪದಗಳು ಬಳಕೆಯಾಗುತ್ತಿದ್ದುವೆಂದೂ ಸ್ಪಷ್ಟವಾಗುತ್ತದೆ, ಇಷ್ಟು ಹಿನ್ನೆಲೆಯಲ್ಲಿ ಕಲ್ಯಾಣಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕೆಲವು ಶಾಸನಗಳನ್ನು ನೋಡಬಹುದು.

೧. "........ ಪೊಟ್ಟಳಕೆಱೆಯ ನೆಲೆವೀಡಿನೊಳು ಸುಖಸಂಕಥಾವಿನೋದದಿಂ
ರಾಜ್ಯಂಗೈಯ್ಯೆ...." (ಕೊನಕೊಂಡಲು-೧೦೮೦)[೮]

---

೩. ಡಾ.ಪಿ.ಬಿ. ದೇಸಾಯಿ ಅವರ ಲೇಖನದ ಪು. ೧೧೪, ೧೧೫, ೧೧೬ ಅ.ಟಿ. ನೋಡಿರಿ.

೪. "ಜಯಸಿಂಹ ಮೊದಲು ಮಾನ್ಯಖೇಟದಿಂದ ಆಳುತ್ತಿದ್ದು ನಂತರ ಏತಗಿರಿ, ಪೊಟ್ಟಳಕೆರೆ, ಕೊಲ್ಲಿಪಾಕೆಗಳಿಗೆ ರಾಜಧಾನಿಗಳನ್ನು ಬದಲಾಯಿಸಿದ"-ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯಚರಿತ್ರೆIII, ೧೨೧. ಬಾ.ರಾ. ಗೋಪಾಲ್. "ಈ ಮೂರೂ ಶಿಲಾಲೇಖಗಳು ಸೋಮೇಶ್ವರನು "ಮಂಗಳವಾಡ (ಮಂಗಳವೇಢ)ದ ನೆಲೆವೀಡಿನೊಳು ಸುಖಸಂಕಥಾವಿನೋದದಿಂದ ರಾಜ್ಯಂಗೈಯುತ್ತಿದ್ದ"ನೆಂದು ಸ್ಪಷ್ಟವಾಗಿ ಹೇಳುತ್ತವೆ". -ಮಂಗಳವಾಡವು ಬಿಜ್ಜಳನ ರಾಜಧಾನಿಯಾಗಿತ್ತೆ? ಎನ್. ಲಕ್ಷ್ಮೀನಾರಾಯಣರಾವ್, ಸಾಹಿತ್ಯ ಪರಿಷತ್ ಪತ್ರಿಕೆ ೨೬-೨

೫. Ec. VI ಪಾಂಡವಪುರ ೧೫ ಕ್ಯಾತನಹಳ್ಳಿ ಕ್ರಿ. ಶ. ೧೧೭೫ (೧೯೭೭)

೬. Ec VI ಕೃಷ್ಣರಾಜಪೇಟೆ ೭೭, ಅಗ್ರಹಾರ ಬಾಚಹಳ್ಳಿ ಕ್ರಿ.ಶ. ೧೧೭೯ (೧೯೭೭)

೭. Ec VI ಕೃಷ್ಣರಾಜಪೇಟೆ ೯೮, ಭೈರಾಪುರ ಕ್ರಿ.ಶ. ೧೨೬೭ (೧೯೭೭)

೮. SII IX-i ೧೫೦ ಕೊನಕೊಂಡಲು, ಅನಂತಪುರ ಜಿಲ್ಲೆ (೧೦೮೧)

೨. "…….ಬಲ್ಲಕುಂದೆಯ ನೆಲೆವೀಡಿನೊಳ್ ರಾಜ್ಯಂಗೆಯ್ಯುತ್ತಮಿರೆ …." (ಸಿರಗುಪ್ಪಾ -೧೧೦೨)[೯]

೩. "…..ಕಲ್ಯಾಣದ ನೆಲೆವೀಡಿ(ನೊಳು) ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ …." (ಗೂಟಿ-೧೧೦೭)[೧೦]

೪. "….. ಜಯಂತೀಪುರದ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತಮಿರೆ …."(ಸೇರಮ್ -೧೧೨೪)[೧೧]

೫. "……. ಮನ್ನೆಯಕೆಱೆಯ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೈಯುತ್ತಿಮಿರೆ ….." (ಬಾಗಳಿ-೧೧೨೬)[೧೨]

ವಿಕ್ರಮಾದಿತ್ಯ ಕ್ರಿ.ಶ. ೧೦೭೬ಕ್ಕೆ ಪಟ್ಟವೇರಿ ಕಲ್ಯಾಣದಿಂದ ರಾಜ್ಯವಾಳಿದುದು ಸ್ಪಷ್ಟವಿದ್ದರೂ ಈ ವಾಕ್ಯಗಳಲ್ಲಿಯ "ನೆಲೆವೀಡಿನೊಳ್ ….. ರಾಜ್ಯಂಗೆಯ್ಯುತ್ತಮಿರೆ" ಎಂಬ ಹೇಳಿಕೆಗಳನ್ನು ಗಮನಿಸಿ ಪೊಟ್ಟಳಕೆರೆ, ಬಲ್ಲಕುಂದೆ, ಜಯಂತೀಪುರ, ಮನ್ನೆಯಕೆರೆ ಮತ್ತು ಶಾಸನೋಕ್ತ ಇಂಥ ಬೇರೆ ಗ್ರಾಮಗಳು ಈತನ ರಾಜಧಾನಿಗಳಾಗಿದ್ದವೆಂದು ಭಾವಿಸುವುದು (ಡಾ. ದೇಸಾಯಿ ಅವರು ಕಲಚುರಿಗಳ ವಿಷಯವಾಗಿ ಮೇಲೆ ಭಾವಿಸಿದಂತೆ) ತಪ್ಪಾಗುತ್ತದೆ. ಇಲ್ಲಿಯ ಒಂದೊಂದು ಊರು ಒಂದೊಂದು ದಿಕ್ಕಿಗೆ; ಪರಸ್ಪರ ಅಂತರವೂ ಅಧಿಕ. ೧೧೦೨ರಲ್ಲಿ ಬಲ್ಲಕುಂದೆ, ೧೧೦೭ರಲ್ಲಿ ಕಲ್ಯಾಣ, ೧೧೨೪ರಲ್ಲಿ ಜಯಂತೀಪುರ, ೧೧೨೬ರಲ್ಲಿ ಮನ್ನೆಯಕೆರೆ ಹೀಗೆ ೩-೪ ವರ್ಷಗಳ ಅಂತರದಲ್ಲಿ ರಾಜಧಾನಿಯಂಥ ಬಹುದೊಡ್ಡ ವ್ಯವಸ್ಥೆಯನ್ನು ಸ್ಥಳಾಂತರಿಸುತ್ತ ಹೋದುದು, ಮನ್ನೆಯಕೆರೆಯಂಥ ಅಪ್ರಸಿದ್ಧ ಗ್ರಾಮಗಳನ್ನು ರಾಜಧಾನಿ ಇಲ್ಲವೆ ಉಪರಾಜಧಾನಿಯಾಗಿ ಆಯ್ದುಕೊಂಡಿರುವುದು ಅಸಾಧ್ಯ. ಆದುದರಿಂದ ಇವು ರಾಜಧಾನಿಗಳಾಗಿರದೆ, ಈ ಶಾಸನೋಕ್ತ ಘಟನೆಗಳು ಜರುಗಿದಾಗ ಚಕ್ರವರ್ತಿಯು ಯಾವ ಊರಿನಲ್ಲಿ ಇದ್ದನೆಂಬುದುನ್ನು ಮಾತ್ರ ಸೂಚಿಸುತ್ತಿರಬೇಕು. ಅಂದರೆ ಆತನು ಪ್ರಯಾಣ ಪ್ರಸಂಗದಲ್ಲಿ ಒಂದು ದಿನವೋ ಹಲವು ದಿನವೋ ನೆಲೆನಿಂತ ಊರುಗಳಿವು. ಸೆಟ್ಟಿ ಇಳಿದಲ್ಲಿ ಪಟ್ಟಣವೆಂಬಂತೆ ರಾಜ ನೆಲೆನಿಂತುದೇ ರಾಜಧಾನಿ. ಅಲ್ಲಿಂದಲೇ ರಾಜ್ಯದ ಆಡಳಿತವನ್ನು ಆತ ಚಲಾಯಿಸುತ್ತಿದ್ದ ಕಾರಣ, "ರಾಜ್ಯಂಗೆಯ್ಯುತ್ತಮಿರೆ" ಎಂಬ ಪದವು ಆಡಳಿತ ದೃಷ್ಟಿಯ ಗೌರವವಾಚಿ ಪ್ರಯೋಗವೆಂದು ಭಾವಿಸಬೇಕಾಗುತ್ತದೆ. ಆದುದರಿಂದ ಇನ್ನು ಮೇಲೆ "ಬೀಡಿನೋಳ್…. ರಾಜ್ಯಂಗೈಯ್ಯುತ್ತಮಿರೆ" "ನೆಲೆನೀಡಿನೊಳ್ ….. ರಾಜ್ಯಂಗೈಯ್ಯುತ್ಮಿರೆ" ಎಂಬ ಹೇಳಿಕೆ ಶಾಸನಗಳಲ್ಲಿ ಬಂದ ತಕ್ಷಣ ಅದು ಅವನ ರಾಜಧಾನಿಯಾಗಿದ್ದಿತೆಂದು ಹೇಳುವುದನ್ನು ಬಿಟ್ಟು, ಕೇಂದ್ರ ರಾಜಧಾನಿಯಿಂದ ಭಿನ್ನವಾದ ಇವು. ಅರಸನು ಸಂದರ್ಶಿಸಿದ ಗ್ರಾಮಗಳೆಂದು ಭಾವಿಸಬೇಕು. ರಾಜಧಾನಿಗಳೆಂದು ಮೊದಲಿನಿಂದಲೂ ಸುಪ್ರಸಿದ್ಧವಾಗಿದ್ದವನ್ನು (ಕಲ್ಯಾಣ, ದ್ವಾರಸಮುದ್ರ, ಸವದತ್ತಿ, ಯಲಬುರ್ಗಿ ಇತ್ಯಾದಿ) ಮತ್ತು ಯಾವುದೇ ಪಟ್ಟಣದ ಹಿಂದೆ ಇಲ್ಲವೆ ಮುಂದೆ 'ರಾಜಧಾನಿ' ಇಲ್ಲವೆ ಈ ಅರ್ಥದ ಇತರ ಪದ ಬಳಕೆಯಾಗಿದ್ದರೆ ಅಂಥವುಗಳನ್ನು ಮಾತ್ರ ರಾಜಧಾನಿಗಳೆಂದು ತಿಳಿಯಬೇಕು.

---

೯. SII IX-i೧೬೭ ಸಿರಗುಪ್ಪಾ, ಬಳ್ಳಾರಿ ಜಿಲ್ಲೆ (೧೧೦೨)

೧೦. SII VII ೨೭೧ ಗೂಟಿ. ಅನಂತಪುರ ಜಿಲ್ಲೆ.

೧೧. SII VII ೭೨೩ ಸೇಲಮ್, ಹೈದ್ರಾಬಾದ್ ಸ್ಟೇಟ್ (೧೧೨೪)

೧೨. SII IX -i ೨೧೧ ಬಾಗಳಿ, ಬಳ್ಳಾರಿ ಜಿಲ್ಲೆ (೧೧೨೬)

ರಾಜಧಾನಿಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಕಂಡುಬರುವ ಇನ್ನೊಂದು ಪದ "ಬೀಟುವೃತ್ತಿ" ಇಲ್ಲವೆ "ಬೀಟೌನುವೃತ್ತಿ". ಶಾಸನಗಳಲ್ಲಿ ಇದಕ್ಕೆ ಬೀಡವೃತ್ತಿ, ಬೀಡಾನುವೃತ್ತಿ ಎಂಬ ಪರ್ಯಾಯ ಪದಗಳು ಸಿಗುವುದರಿಂದ ಇದು "ಬೀಡು" ಶಬ್ದದಿಂದ ನಿಷ್ಪನ್ನವೇ ಹೊರತು ಡಾ. ಎಂ. ಚಿದಾನಂದಮೂರ್ತಿ ಅವರು ಊಹಿಸಿದಂತೆ 'ಬೀಟು' (=ಪತನ) ಧಾತುವಿನಿಂದಲ್ಲವೆಂದು ಈಗ ಹೇಳಬೇಕಾಗುತ್ತದೆ.[೧೩] ಬೀಡು, ನೆಲೆವೀಡು ಪದಗಳು ಚಕ್ರವರ್ತಿ, ಸಾಮಂತ, ಮಾಂಡಲಿಕರಿಗೆ ತಾರತಮ್ಯವಿಲ್ಲದೆ ಬಳಕೆಯಾಗುತ್ತಿದ್ದರೂ ಚಕ್ರವರ್ತಿಗಳಲ್ಲದವರ ವಿಷಯದಲ್ಲಿ ಮಾತ್ರ ಕೆಲವೊಮ್ಮೆ ಬೀಡವೃತ್ತಿ ಇಲ್ಲವೆ ಬೀಡಾನುವೃತ್ತಿ ತೋರಿಬರುತ್ತವೆ. ಆದರೆ ಬೀಡು ನೆಲೆವೀಡುಗಳಿಂದ ಈ 'ಬೀಡವೃತ್ತಿ' ಯಾವ ಅರ್ಥದಲ್ಲಿ ಭಿನ್ನವಾಗಿದೆಯೆಂಬುದನ್ನು ಇನ್ನು ಮೇಲೆ ಶೋಧಿಸಬೇಕಾಗಿದೆ.

■■

ಆಕರ : ಮಾರ್ಗ ಸಂಪುಟ-೨

---

೧೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೩೧೪ (೧೯೬೬)

೪೪

ಶಾಸನದಲ್ಲಿ ಭಾಮಿನಿ

ಕನ್ನಡ ಮಾತು ಗೀತವಾಗಬೇಕೆಂದು ಹಂಬಲಿಸಿದಾಗ ಮೂಡಿ ಬಂದಿರಬಹುದಾದ ಹಲವಾರು ಛಂದಃ ಪ್ರಭೇದಗಳಲ್ಲಿ ಹತ್ತು ಮಾತ್ರ ಛಾಂದಸಿಗರ ಗಮನವನ್ನು ಸೆಳೆದವು. 'ಕರ್ಣಾಟ ವಿಷಯ ಜಾತಿ' ಎಂಬ ವರ್ತುಲದಲ್ಲಿ ನಿಂತ ಇವುಗಳಲ್ಲಿ ಮದನವತಿ, ಛಂದೋವಸಂತಗಳು ಕೇವಲ ಛಂದೋಗ್ರಂಥಗಳಲ್ಲಿ ಜೀವಹಿಡಿದು ಕುಳಿತರೆ, ಮಿಕ್ಕ ಅಕ್ಕರಿಕೆ, ಅಕ್ಕರ, ಗೀತಿಕೆ, ಏಳೆ, ಚೌಪದಿ ಉತ್ಸಾಹಗಳು ಒಂದು ಹೆಜ್ಜೆ ಮುಂದು ಹೋಗಿ ಕವಿಗಳ ಹಸ್ತ ಹಬ್ಬಿ ನಿಲ್ಲುವ ವಿಫಲ ಸಾಹಸ ತೋರಿಸಿದವು. ಆದರೆ ತ್ರಿಪದಿ-ಷಟ್ಪದಿಗಳು ಮಾತ್ರ ಕವಿ ಮನವನ್ನು ತಮ್ಮತ್ತ ಸರ್ವತ್ರ ಆಕರ್ಷಿಸಿ, ಜನವಾಣಿಯಿಂದ ಕವಿವಾಣಿಗೆ ಹಂತಕಟ್ಟಿ ಹಬ್ಬಿ ನಿಂತವು. ಷಟ್ಪದಿಯಂತೂ ಒಂದು ಆರಾಗಿ, ಆರು ಅನೇಕವಾಗಿ ನಿಂತು ಹೊಸ ಹೊಸ ವೇಷಹೊತ್ತು ಕುಣಿಯಿತು. ಅದರ ಕುಣಿತ ಮಣಿತಗಳಿಗೆ ಮಾರುಹೋಗಿ

ನಿರುತ ಮಂಜುಳ ಶಬ್ದದಿಂದ ಕಿವಿಗಿಂಪಾಗಿ
ಚರಿಸುವ ಸುಲಲಿತ ಷಟ್ಪದಿಗಳೆಡಬಿಡದೆ ಝೇಂ
ಕರಿಸದಿರ್ಪುವೆ ಬಂದು ನೆರೆದ ವಿದ್ವತ್ಸಭಾ ನೀರೇರುಹಾಕರದೊಳು॥[೧]

ಎಂದು ಲಕ್ಷ್ಮೀಶನೂ,

ಆರು ಕಾಲುಗಳಿಂದ ನಡೆವಳು
ಮೂರು ಹೆಜ್ಜೆಗಳಿಂದ ರಂಜಿಸಿ
ಸಾರಿ ಡಂಗುರ ಹೊಯ್ಸಿ ಕವಿಗಳಿಗಾನೆ ನೆರವೆಂದು
ತೋರಿದುಕ್ತಿಯನಧಿಕ ವೇಗದಿ
ತೋರಿ ಸೊಗಸನು ಬೀರಿ ಸುಖವನು
ಸೂರೆಗೊಟ್ಟಳು ಕೇಳಿದವರಿಗೆ ಭಾರತೀರನ್ನೆ॥[೨]

ಎಂದು ರಾಮಚಂದ್ರ ಗುರುಶಿಷ್ಯರೂ ಎದೆತುಂಬಿ ಕೀರ್ತಿಸಿದರು. ಹೀಗೆ ಕವಿಕುಲವನ್ನು ತಣಿಸಿದ ಷಟ್ಪದಿಗಳಿಗೆ ಮೂಲ, ಅಂಶಗಣ ಘಟಿತ ಷಟ್ಪದಿ. ಈ ಮೂಲ ಷಟ್ಪದಿಯು ತ್ರಿಪದಿ, ಅಕ್ಕರೆಗಳಂತೆ ಶಾಸನಪ್ರಪಂಚದಲ್ಲಿಯೂ ಸ್ಥಾನಗಳಿಸಿಕೊಂಡಿವೆ. ಈವರೆಗೆ ಪಂಡಿತರ ಶ್ರಮದಿಂದ ಇಂಥ ಶಾಸನಸ್ಥ ಎರಡು ಷಟ್ಪದಿಗಳು ಬೆಳಕಿಗೆ ಬಂದಿವೆ. ಅವು :

---

೧. ಜೈಮಿನಿ ಭಾರತ, 1-12

೨. ಆದಿತ್ಯಪುರಾಣ.

೧. ಭೀಮಸಮುದ್ರ ಶಾಸನ[೩] ಕ್ರಿ.ಶ. ೧೦೬೭

೨. ಅಮ್ಮಿನಭಾವಿ ಶಾಸನ[೪] ಕ್ರಿ.ಶ. ೧೦೭೧.

ಶ್ರೀ ಪಿ.ಬಿ. ದೇಸಾಯಿ ಮತ್ತು ಶ್ರೀ ತೀ.ನಂ. ಶ್ರೀಕಂಠಯ್ಯ ಅವರು ಇವನ್ನು ತೋರಿಸಿಕೊಟ್ಟಿದ್ದಾರೆ.[೫] ಆದರೆ ಕನ್ನಡ ಸಾಹಿತ್ಯಪ್ರಪಂಚದಲ್ಲಿ ದೀರ್ಘಕಾಲ ಬದುಕು ಮಾಡಿದ ಮಾತ್ರಾಗಣ ಘಟಿತ ಷಟ್ಪದಿ ಈವರೆಗೆ ಶಾಸನದಲ್ಲಿ ಕಂಡುಬಂದಿರಲಿಲ್ಲ. ಪ್ರಸ್ತುತ ಲೇಖನದಲ್ಲಿ ಅಂಥ ಒಂದು ಷಟ್ಪದಿಯನ್ನು ತೋರಿಸಿಕೊಡಲಾಗಿದೆ.

SII. XV ಗ್ರಂಥವನ್ನು ನಿರೀಕ್ಷಿಸುತ್ತಿರುವಲ್ಲಿ No.೯೧ರ ಯಾಳವಾರ (ಬಾಗೇವಾಡಿ ತಾಲೂಕ, ವಿಜಾಪುರ ಜಿಲ್ಲೆ) ಶಾಸನವೊಂದು ನನ್ನ ಗಮನವನ್ನು ಸೆಳೆಯಿತು. ಇದರ ಕಾಲ ಶಾಲಿವಾಹನ ಶಕೆ ೧೪೩೬ ಅಂದರೆ ಕ್ರಿ.ಶ. ೧೫೫೭. ನಮಗೆ ಸಂಬಂಧಪಟ್ಟ ಅದರ ಮುಖ್ಯಭಾಗ ಹೀಗಿದೆ.

ಯಾಳವಾರ ಶಾಸನ

೫. - - - - - - - - - - - - - ಹರನ ಗಿರಿಜಾ
೬. ವರನ ಕರುಣಾಕರನ ದುರಿತಾಂತರನ ಗಂಗಾಧರನ
೭. ಫಣಿಯ ಕುಂಡಲನ ಹರನು ಸಿಖರನ ನಿಲಗಣ
೮. ನಿಗಮಸ್ವರೂಪದೆ ನೀಲಕಂಠಾಭರಣ ಭಸ್ಮಾ[ದಿ]ಧೂಳಿ
೯. ತಾಂಗನ ಚಿತ್ರಕಾಯನ ಚಿನ್ಮಯಾಂಬರನನೊಲವಿ
೧೦. .. ರ [ಪಾಲಿಸಿರ ಭೂಹಿದಸೆ] ಭುಜದ ಗೌರಿಯ ಬಾಲನಂ
೧೧. ಫ್ರಿಯ ಅರ್ಚಿಪುವೀಜೆಯ[ಹುರ ಸಿಮಿ]ಯೊಳು - - - -[೬]

ಈ ಭಾಗವನ್ನು ಹೀಗೆ ಷಟ್ಪದಿಗೊಳಿಸಬಹುದು :

ಹರನ ಗಿರಿಜಾವರನ ಕರುಣಾ
ಕರನ ದುರಿತಾಂತರನ ಗಂಗಾ
ಧರನ ಫಣಿಯ ಕುಂಡಲನ ಹರನು ಸಿಖರನ

---

೩. E.C. XI No. ೪೭.

೪. B.K.I. Vol. I, Part II, No. ೧೨೧

೫. ಶ್ರೀ ಪಿ.ಬಿ. ದೇಸಾಯಿ ಅವರು ಕನ್ನಡ ನುಡಿ ೧೫-೨ರಲ್ಲಿ ಅಮ್ಮಿನಭಾವಿ ಶಾಸನದ ಷಟ್ಪದಿಯನ್ನು ೪ ಮಾತ್ರೆಯ ೩ ಗಣಯೋಜಿತ 'ಅಪೂರ್ವ ಷಟ್ಪದಿ' ಎಂದು ತಪ್ಪಾಗಿ ಭಾವಿಸಿದರು. ಶ್ರೀ ಪಾ. ವೆಂ. ಆ ಅವರು ಕರ್ಮವೀರ ೧೯೫೨ರ ಮಾರ್ಚ ೧೭ರ ಸಂಚಿಕೆಯಲ್ಲಿ ಇದನ್ನು 'ಆರ್ಯಾವೃತ್ತ ಪ್ರಭೇದ' ಎಂದು ಊಹಿಸಿದರು. ಆದರೆ ಶ್ರೀ. ತೀ.ನಂ. ಶ್ರೀ ಅವರು ಕನ್ನಡ ನುಡಿ ೧೫-೧ ಮತ್ತು ೪ರಲ್ಲಿ ಇದು ಅಂಶಗಣಘಟಿತ ಮೂಲಷಟ್ಪದಿ ಎಂದು ಸರಿಯಾಗಿ ನಿರ್ಧರಿಸಿದರಲ್ಲದೆ ತಮ್ಮ ಸಮಾಲೋಕನ ಗ್ರಂಥದ ಪರಿಶಿಷ್ಟದಲ್ಲಿ ಮೇಲಣ ಭೀಮಸಮುದ್ರ ಶಾಸನಸ್ಥ ಇನ್ನೊಂದು ಮೂಲಷಟ್ಪದಿಯನ್ನು ತೋರಿಸಿಕೊಟ್ಟರು. ತರುವಾಯ ಶ್ರೀ ಪಿ.ಬಿ. ದೇಸಾಯಿ ಅವರು ಕನ್ನಡ ನುಡಿ ೧೫-೧೧ರಲ್ಲಿ ತಮ್ಮಿಂದ ಬೆಳಕಿಗೆ ಬಂದ ಆ ಅಮ್ಮಿನಭಾವಿ ಶಾಸನದ ಷಟ್ಪದಿಯು ಅಂಶಗಣ ಘಟಿತ ಷಟ್ಪದಿಯೆಂದು ಒಪ್ಪಿಕೊಂಡರು.

೬. - - - - - ಅಪ್ರಸ್ತುತವೆನಿಸಿದುದರಿಂದ ನಾನು ಬಿಟ್ಟಭಾಗ
...... ತ್ರುಟಿತ ಭಾಗ.
[ ]ಶಾಸನ ಸಂಪಾಕದರು ಊಹಿಸಿದ ಪಾಠ.

ಇಷ್ಟಕ್ಕೆ ಇದನ್ನು ನಿಲ್ಲಿಸಬೇಕೆಂದು ತೋರುತ್ತದೆ. ಅಂದರೆ ಅರ್ಧಷಟ್ಪದಿ ಮಾತ್ರ ಇಲ್ಲಿ ಲಿಪಿಸಿಂದತಿದೆ. ಇಲ್ಲಿಂದ ಮುಂದಿನ

ನಿಲಗಣ ನಿಗಮ ಸ್ವೂರೂಪದೆ
ನೀಲಕಂಠಾಭರಣ ಭಸ್ಮಾ[ದಿ]
ಧೂಳಿತಾಂಗನ ಚಿತ್ರಕಾಯನ ಚಿನ್ಮಯಾಂಬರನ
ನೊಲವಿ ---ರ [ಪಾಲಾಸಿರಭೂ
ಹಿದಸೆ]ಭುಜದ ಗೌರಿಯ
ಬಾಲನಂಘ್ರಿಯ ಅರ್ಚಿಪುವೀಜೆಯ[ಹುರ ಸಿಮಿ]ಯೊಳು ||

ಎಂಬ ಭಾಗ ಒಂದು ಪೂರ್ಣ ಷಟ್ಪದಿಯಾಗುತ್ತದೆ.

ಅಶುದ್ಧ ಭಾಷೆ, ತ್ರುಟಿತಭಾಗ ಮತ್ತು ಸಂಪಾದಕರ ಊಹಿತ ಪಾಠ-ಇವುಗಳ ಮೂಲಕ ಇಲ್ಲಿ ಶುದ್ಧ ಷಟ್ಪದಿಯನ್ನು ನಿರೀಕ್ಷಿಸಿವುದು ಕಷ್ಟಕರವಾಗಿದೆ. ಆದರೂ ಈ ಭಾಮಿನಿಯನ್ನು ಹೀಗೆ ಸಂಸ್ಕರಣಗೊಳಿಸಬಹುದು.

ಹರನ ಗಿರಿಜಾವರನ ಕರುಣಾ
ಕರನ ದುರಿತಾಂತರನ ಗಂಗಾ
ಧರನ ಫಣಿಕುಂಡಲನ ಭವಭಯ ಹರನ ಶಂಕರನ ||
ನೀಲಗಳ ನಿಗಮಸ್ವರೂಪದ
ನೀಲಕಂಠಾಭರಣ ಭಸ್ಮೋ
ದ್ಧೂಳಿತಾಂಗನ ಚಿತ್ರಕಾಯನ ಚಿನ್ಮಯಾಂಬರನ |
ಶೂಲವಿಧಿಯಕಪಾಲ ಸಿರ ಭೂ
-UU ಹಿ ದಶಭುಜದ ಗೌರಿಯ
ಲೋಲನಂಘ್ರಿಯ ಅರ್ಚಿಪ ವಿಜಯಹೂರ ಸೀಮೆಯೊಳು ||

ಶಾಸನಸ್ಥ ಪಾಠವನ್ನು ಹೆಚ್ಚು ಗಮನದಲ್ಲಿಟ್ಟುಕೊಂಡು ಈ ಪದ್ಯವನ್ನು ಪರಿಷ್ಕರಿಸಲಾಗಿದೆ. ಇದು ಪ್ರಾಚೀನ ಕವಿಗಳಿಂದ ಸ್ವೀಕರಿಸಿದ ಸ್ವತಂತ್ರ ಪದ್ಯವೆಂದು ತೋರುತ್ತದೆ. ಕಾಲದೃಷ್ಟಿಯಿಂದ ಇತ್ತೀಚಿನ (ಕ್ರಿ.ಶ. 1557)ದೆನಿಸಿದರೂ ಶಾಸನದಲ್ಲಿ ಸ್ಥಾನ ಪಡೆದ ಮಾತ್ರಾಗಣಘಟಿತ ಷಟ್ಪದಿಯೆಂಬ ದೃಷ್ಟಿಯಿಂದ ಇದಕ್ಕೆ ಐತಿಹಾಸಿಕ ಮಹತ್ವವಿದೆ. ಒಟ್ಟಿನಲ್ಲಿ ಈಗಿನ ಮಟ್ಟಿಗೆ ಇದು ಶಾಸನ ಪ್ರಪಂಚದಲ್ಲಿ ತೋರಿಬಂದ ಮಾತ್ರಾ ಗಣಘಟಿತ ಪ್ರಥಮ (ಭಾಮಿನಿ) ಷಟ್ಪದಿಯೆನ್ನಬಹುದು.

■■

ಅನುಬಂಧ : ಈವರೆಗೆ ಶಾಸನದಲ್ಲಿ ಮೂಲಷಟ್ಪದಿಗಳು ೨ ಸಿಕ್ಕಿವೆಯೆಂದು ಮೇಲೆ ಹೇಳಿದೆ. ಆದರೆ ಈ ಸಂಖ್ಯೆ ಈಗ ೬ಕ್ಕೇರಿದೆ.

ಆಕರ : ಮಾರ್ಗ ಸಂಪುಟ–೨

೪೫

ಶಾಸನ ಕವಿಗಳು

ಕನ್ನಡ ಶಾಸನಪ್ರಪಂಚಕ್ಕೆ ಸಾಹಿತ್ಯದೃಷ್ಟಿಯಿಂದ ಭಾರತೀಯ ಮಹತ್ವವನ್ನು ದೊರಕಿಸಿಕೊಟ್ಟವರು ಶಾಸನಕವಿಗಳು. ರಾಜಕೀಯ ಮತ್ತು ಸಾಮಾಜಿಕ ದಾಖಲೆಗಳಾದ ಶಾಸನಗಳನ್ನು ತಮ್ಮ ಪ್ರತಿಭಾಸ್ಪರ್ಶದಿಂದ ಸಾಹಿತ್ಯವನ್ನಾಗಿಸಿದ ಈ ಕವಿಗಳ ಸಂಖ್ಯೆ ಕರ್ನಾಟಕದಲ್ಲಿ ವಿಪುಲವಾಗಿದೆ. ಇವರನ್ನು ಹೊರತುಪಡಿಸಿ ಬರೆದ ಕವಿಚರಿತೆ ಯಾವಕಾಲಕ್ಕೂ ಅಪೂರ್ಣ. ಇದನ್ನು ಮನದಂದು ಶ್ರೀ ಆರ್. ನರಸಿಂಹಾಚಾರ್, ಶ್ರೀ ಮೇವುಂಡಿ ಮಲ್ಲಾರಿ ಮೊದಲಾದವರು ಕೆಲಮಟ್ಟಿಗೆ ಪ್ರಯತ್ನಪಟ್ಟಿದ್ದರೂ ಕನ್ನಡ ಶಾಸನಕವಿಗಳನ್ನು ಕುರಿತು ಒಂದು ವ್ಯವಸ್ಥಿತ ಚರಿತ್ರೆಯನ್ನು ಬರೆಯದಿರುವುದು ಇಂದಿಗೂ ಒಂದು ಕೊರತೆಯಾಗಿ ಉಳಿದಿದೆ.*

ನಮ್ಮ ನಾಡಿನ ಸುಮಾರು ೨೫೦೦೦ ಶಾಸನಗಳನ್ನು ಬರೆದಿರುವ ಇವರು ತಮ್ಮ ಪೆಸರನ್ನು ಹೇಳಿಕೊಂಡುದು ಕೆಲವು ಶಾಸನಗಳಲ್ಲಿ ಮಾತ್ರ; ಅದೂ ಶಾಸನದ ತೀರ ಕೊನೆಯ ಭಾಗದಲ್ಲಿ. ಅಲ್ಲಿ

'ಬಮ್ಮರ ಹರಿಯಂಣ ಹೇಳ್ದ ಶಾಸನ'[೧]

'...... ವಿರಚಿಸಿದನೊಪ್ಪೆ ಲಕ್ಷ್ಮೀಧರತನಯಂ ರಾಮದೇವನೀ ಶಾಸನಮಂ.......'[೨]

'ಕವಿರಾಜಪಂಡಿತ ಮಾಳೆಯನ ಕವಿತೆ'[೩]

'...... ನಿರ್ಮಿಸಿದಂ ಕವಿನಾಗದೇವನೀ .... ಶಾಸನಮಂ ....'[೪]

---

* ಕರ್ನಾಟಕ ಕವಿಚರಿತೆ-ಆರ್, ನರಸಿಂಹಾಚಾರ್.

MASI Vol Xiii- T. T. Sharma

ಕೆಲವು ಕರ್ನಾಟಕ ಕವಿಗಳ ಚರಿತ್ರೆ -ಟಿ.ಟಿ. ಶರ್ಮ (ಸಾಪ ೭-೩)

ಶಿಲಾಶಾಸನದ ಕನ್ನಡ ಕವಿಗಳು - ಟಿ. ಟಿ ಶರ್ಮ (ಸಾಪ-೩೬-೧ &೨)

ಕೆಲವು ಕನ್ನಡ ಶಾಸನಕವಿಗಳು-ಎಂ ಮರಿಯಪ್ಪಭಟ್ಟ(ಕನ್ನಡಸಂಸ್ಕೃತಿ)

ಶಿಲಾಶಾಸನಗಳ ಕೆಲವು ಕನ್ನಡ ಕವಿಗಳು -ಡಾ. ರಿತ್ತಿ (ಸಾಪ ೪೧-೧ & ೨, ೪೩-೨)

ಶಿಲಾಶಾಸನಗಳ ಕನ್ನಡ ಕವಿಗಳು -ಡಾ. ರಿತ್ತಿ (ಸಾಪ ೪೫-೧)

ಹೀಗೆ ಕೆಲವರು ಶಾಸನಕವಿಗಳನ್ನು ಕುರಿತು ಬರೆದಿರುವರು, ಇವರಲ್ಲಿ ಶ್ರೀ ಮೇವುಂಡಿ ಮಲ್ಲಾರಿ ಅವರ "ಕನ್ನಡನಾಡಿನ ಕೆಲವು ಶಾಸನಕವಿಗಳು" ಎಂಬುದು ಗ್ರಂಥರೂಪದ ಪ್ರಥಮ ಪ್ರಯತ್ನವಾಗಿದೆ.

೧. EC VIII-ii ಸೊರಬ ೨೬೨ ಕುಪ್ಪಟೂರು (೧೦೭೭)

೨. EC VII-i ಹೊನ್ನಾಳಿ ೨೫ ಚಿಕ್ಕಯೆರಬಳ್ಳಿ (೧೨೦೮)

೩. EC VII-i ಶಿಕಾರಿಪುರ ೧೦೫ ಬಳ್ಳಿಗಾವಿ (೧೧೯೩)

೪. EC VI ಕಡೂರ ೬೫ ಕೆರೆಸಂತೆ (೧೨೨೪)

' ಶ್ರೀ ಕಂದರ್ಪನ ಕಾವ್ಯಂ'[೫]

'ಜಾಗವಲ್ಲ ಪುರಾಣದ ಕೇಶವಭಟ್ಟರ ಕೃತಿ'[೬]

ಎಂಬಂತಹ ಸ್ಪಷ್ಟ ಉಲ್ಲೇಖಗಳಿದ್ದರೆ ಶಾಸನಕವಿಗಳನ್ನು ಬೇರಳಿಟ್ಟು ಗುರುತಿಸುವುದು ತೀರ ಸುಲಭ. ಇಂಥ ಅವಕಾಶಗಳನ್ನು ಬಳಸಿಕೊಂಡು ಶಾಸನ ಕವಿಗಳ ಚರಿತ್ರೆಯನ್ನು ಬಹುಮಟ್ಟಿಗೆ ಖಚಿತವಾಗಿ ಬರೆಯಬಹುದು. ಆದರೆ

೧. 'ಶ್ರೀ ಮತ್ಕವಿರಾಜವಲ್ಲಭಂ ಕಪ್ಪಣ್ಣಭಟ್ಟರ ಲಿಖಿತಂ'[೭]

'......ಚಂದ್ರಮೌಳಿಭಳಾರರ ಲಿಖಿತಂ'[೮]

೨. 'ಕವಿ ವೈಜನಾಥ ಬರೆದಂ'[೧೦]

'ಬರವರಾಚಾರ್ಯ್ಯ ಸೂರ್ಯ್ಯಣಂ ಬರದ'[೧೧]

'ಇಕ್ಕುಡಾಚಾರಿ ಎರಡು ದೇವಾಲೆಯಮಂ ಮಾಡಿ ಸಾಸಮನಂ ಬರೆದ'[೧೨]

೩. 'ಸಹಜಕವಿ ಉಪಾಧ್ಯಾಯ ಮಹಾದೇವಭಟ್ಟನ ಬರೆಪಂ'[೧೪]

'ಜನ್ನಯ್ಯನ ಕವಿತೆ, ದಾವಣ್ಣಮ ಬರಪ......'[೧೪]

'ಸಿಂಗೋಜನ ಪುತ್ರ ಗಣಪೋಜನ ಬರೆಪಂ'[೧೫]

ಎಂಬ ವಾಕ್ಯಗಳಲ್ಲಿಯಂತೆ ಕವಿ, ಲಿಪಿಕಾರ, ರೂವಾರಿ ಮೂವರಿಗೂ 'ಲಿಖಿತಂ' 'ಬರೆದಂ' 'ಬರೆಪಂ' ಎಂಬ ಪದಗಳನ್ನು ಬಳಸಿದ್ದರೆ ಇವರಿಂದ ಕವಿಯನ್ನು ಪ್ರತ್ಯೇಕಿಸುವುದು ಕಷ್ಟವಾಗುತ್ತದೆ. ಅಂಥ ಪ್ರಸಂಗದಲ್ಲಿ "ಶ್ರೀ ಮತ್ಕವಿರಾಜವಲ್ಲಭಂ ಕಪ್ಪಣ ಭಟ್ಟರ ಲಿಖಿತಂ" ಎಂಬಂತೆ ಹೆಸರಿನ ಹಿಂದೆ ವಿದ್ವತ್‌ಸೂಚಕ ವಿಶೇಷಣಗಳಿದ್ದರೆ ಮಾತ್ರ ಆತನು ಶಾಸನಕವಿಯೆಂದು ಭಾವಿಸಬಹುದು. ಇಷ್ಟು ಹಿನ್ನೆಲೆಯಲ್ಲಿ ಶಾಸನ ಕವಿಗಳ ಬಗೆಗೆ ಕೆಲವು ಸಂಗತಿಗಳನ್ನು ತಿಳಿದುಕೊಳ್ಳಬಹುದು.

ಶಾಸನಕ್ಕೆ ಪಾಠವನ್ನು ಮಾತ್ರ ರಚಿಸಿಕೊಡುವುದು ಕವಿಯ ಕಾರ್ಯ. ಆದರೆ ಅಲ್ಲಲ್ಲಿ ಬರುವ

---

೫. ಕಸಾಪ ೪೫-೧ ಕಳ್ಳಿಹಾಳ-ಧಾರವಾಡ ಜಿಲ್ಲೆ (೧೦೧೯)

೬. SII VII ೫೬೫ ಪೆನುಕೊಂಡೆ (೧೩೯೨)

೭. EC VII-ii ಸೊರಬ ೧೮೪ ಕುಪ್ಪಗಡ್ಡೆ (೧೦೩೩)

೮. SII XI-i ಐಹೊಳೆ-ವಿಜಾಪುರ ಜಿಲ್ಲೆ (೯೭೧)

೯. EC V-ii ಅರಸಿಕೆರೆ ೧೨೪ ಹಾರನಹಳ್ಳಿ(೧೧೩೮)

೧೦. SII XI-i ೧೧೬ ಕೊಪ್ಪ (೧೦೭೫)

೧೧. EC V-ii ಬೇಲೂರು ೭೨ ಬೇಲೂರ (೧೨೦೦)

೧೨. EC XI ದಾವಣಗೆರೆ ೧೫೫ ಕಬ್ಬೂರ (೧೧೦೯)

೧೩. EI V ಪು. ೨೩೪ ಅಬ್ಬಲೂರು-ಧಾರವಾಡ ಜಿಲ್ಲೆ (೧೧೪೪)

೧೪. EC V-ii ಚನ್ನರಾಯಪಟ್ಟಣ ೧೭೯ ಆನೇಕೆರೆ (೧೧೯೦)

೧೫. SII XI-i ೫೦ ತುಂಬಗಿ -ವಿಜಾಪೂರ ಜಿಲ್ಲೆ (೧೦೦೫)

'ಕನ್ಥೆಯ ಗುರುಗಳ ಹರವಿಯರ ಚಟ್ಟಪಾರ್ಯ್ಯಂ ಪೇಳ್ದು ಬರೆದ'[೧೬]

'.....ದೇವರಸರ ಮಗಂ ಮಾರಮರಸಂ ಹೇಳ್ದು ತಾನೆ ಬರೆದ ಶಾಸನಂ'[೧೭]

'ಸನ್ಧಿವಿಗ್ರಹಿ ದಾಮರಾಜಂ ಸಾಸನಗಬ್ಬಮಂ ಪೇಳ್ದು ಬರೆದಂ'[೧೮]

ಎಂಬ ಮಾತುಗಳು ಕವಿಯು ಲಿಪಿಕಾರನ ಕಾರ್ಯಮಾಡಿದುದನ್ನೂ ತಿಳಿಸುತ್ತವೆ. ಇದಕ್ಕೆ ಶಾಸನಕವಿಯ ಹಸ್ತಾಕ್ಷರಸೌಂದರ್ಯ ಇಲ್ಲವೆ ಲಿಪಿಕಾರನ ಅಭಾವ ಕೆಲವು ಸಲ ಕಾರಣವಾಗಿರಬೇಕು. ಸಾಮಾನ್ಯವಾಗಿ ಒಂದು ಶಾಸನಕ್ಕೆ ಒಬ್ಬನೇ ಸಾಹಿತ್ಯವನ್ನು ಒದಗಿಸುತ್ತಿದ್ದರೂ

೧. 'ಸುಕರ ಕವಿಯಪ್ಪಚರಾಜನುಂ ಸಹಜಕವಿ ಮಲ್ಲಿದೇವನುಂ ಬರೆದರು'[೧೯]

೨. ಒದವಿದ ಕುಪ್ಪಟೂರ ಸುಜನಾಗ್ರಣಿ ಚಿಂಮರ ವಾಸು[ದೇವ]ನುಂ]
ಸದುಗುಣಯುಕ್ತನಪ್ಪ ಕವಿ ದೊಡ್ಡರ ನಾಚಯನುಂ ಸಮಸ್ತ ಸ।
xxxxxxxxxಗ್ಯರ ಕೇಸವದೇವನೆಂಬಿವ ।
ಮ್ಮ್ರದದೊಳೆ ಕೂಡಿ ಪೇಳ್ದರಿದು ಸಲ್ಗು ಶಶಾಂಕದಿನೇಶರುಳ್ಳಿನಂ॥[೨೦]

೩. ಕವಿ ಕಬ್ಬದ ದಾಮೋದರ xxx ಚಕ್ರೇಶ ಚೇರೆಯಲ್ಲಾಳಬುಧಂ ।
ಸವಿನಯದೆ ಪೇಳ್ದರೆನೆ । ಪಳಿವವನೆಂಬನಾವxಕವಿಗಳ ಕೃತಿಯಂ॥[೨೦ಅ]

ಎಂಬ ಹೇಳಿಕೆಗಳಿಂದ ಇಬ್ಬರು ಇಲ್ಲವೆ ಮೂವರು ಕೂಡಿ ಸಾಹಿತ್ಯವನ್ನು ಪೂರೈಸಿದ ವಿಷಯ ತಿಳಿದುಬರುತ್ತದೆ.

ದಂಡನಾಯಕ ಕೇಶಿ, ವಾದಿರಾಜ ಮುನಿಪುಂಗವ, ಬ್ರಹ್ಮ, ಆರ್ಯಸೇನ ಮೊದಲಾದ 'ಅಧಿಕಪ್ರಜ್ಞರ್' ಕನ್ನಡದ ಗದಾಯುದ್ಧ, ಪಂಚತಂತ್ರ, ಮದನತಿಲಕ, ಪುಣ್ಯಾಸ್ರವ ಕೃತಿಗಳನ್ನು ತಿದ್ದಿದಂತೆ ಒಬ್ಬ ರಚಿಸಿದ ಶಾಸನ ಪಾಠವನ್ನು ಇನ್ನೊಬ್ಬನು ತಿದ್ದಿ ಒಪ್ಪಗೊಳಿಸಬಹುದು. ಈ ಮಾತಿಗೆ

ಸ್ಫು[ರಿತ]ವಚೋವಿಭಾಸಿ ಚಟುವಾಣಿಯ ಸತ್ಕವಿರಾಜವಲ್ಲಭಂ
ವಿರಚಿಸಿದಂ ವಿವೇಕನಿಧಿ ಷಟ್ಟಲ xxxxxxxಗಿಯಿಂ ।
ಬರೆದನಿದಂ, ಸವಿಸ್ತರಿಸಿ ತಿದ್ದಿದ ವಾಕ್ಪತಿ ಚಂದ್ರಭಟ್ಟರುಂ।
ಗುರು ಬಡಭದ್ರದೇವರುವಿದೇಂ ತ್ರಿಜಗದ್ಗುರುವಾಯ್ತೊ ಶಾಸನಂ॥[೨೧]

---

೧೬. ಕಕಚ (1961) ಅನು ೧. ಪು. ೧೫ ಹೊಂಬಳ-ಧಾರವಾಡ ಜಿಲ್ಲೆ (೧೧೧೬)

೧೭. SII IV-೨೬೦ ಹಂಪೆ -ಬಳ್ಳಾರಿ ಜಿಲ್ಲೆ (೧೧೯೯)

೧೮. EC VII ಶಿವಮೊಗ್ಗ ೧೦ ತಟ್ಟೆಕೆರೆ (೧೦೮೫)

೧೯. EI V ಪು. ೨೩೧ (ಅ.ಟಿ.) ಅಬ್ಬಲೂರು-ಧಾರವಾಡ ಜಿಲ್ಲೆ (೧೧೦೪)

೨೦. EC VII -ii ಸೊರಬ ೧೭೯ ಕುಪ್ಪಗುಡ್ಡೆ (೧೧೮೯)

೨೦ಅ. EC VI ಚಿಕ್ಕಮಗಳೂರು ೨೦ ಅಂಬಳೆ (೧೨೪೯)

೨೧. EI XVI ೮೩ ಹುಟ್ಟೂರ-ಧಾರವಾಡ ಜಿಲ್ಲೆ (೧೦೬೭)

ಎಂಬ ಹೇಳಿಕೆ ಉದಾಹರಣೆಯಾಗಿದೆ. ಆದರೆ

ನಿರತಿಶಯೋನ್ನತಮತಿ ಭಾ।
ಸ್ಕರ ಸರಸಕವೀಂದ್ರ ರಚಿತ ಶಾಸನಮಂ ಬಿ।
ತ್ತರದಿಂ ಪ್ರತಿಕಂಠ ಸಾ।
ಕ್ಷರನಿಳಯಂ ತಿಟ್ಟಿ ಭಾಸ್ಕರಯ್ಯಂ ಬರೆದಂ ॥[೨೨]

ಮೊದಲಾದ ಹೇಳಿಕೆಗಳಲ್ಲಿಯ 'ತಿಟ್ಟಿ ಬರೆದಂ' ಎಂಬಿವು ಕಲ್ಲ ಮೇಲೆ ಅಕ್ಷರಗಳನ್ನು ತೀಡಿ ಬರೆದ ಲಿಪಿಕಾರನನ್ನು ಸೂಚಿಸುತ್ತಿರಬೇಕು. ಇದೇ ರೀತಿ

೧. ಹರಿಹರಸೂರಿ ಸೀಗುರಿಯ ಕಾಮನ ತಮ್ಮನುಮೇಶದತ್ತ ವಾ।
ಗ್ವಿರಚಿಸಿದಂ, ತ್ರಿವಿಕ್ರಮ ಕವೀಶ್ವರನೂರ್ಜಿತವಾಣಿ ತಿಳ್ದಿ ತಾಂ।
ಬರಧನುಪೇತ ಲಕ್ಷಣಗಣಂ ಗುಣಿ ದಾಸಮನೊಪ್ಪುವನ್ನು ಕಂ।
ಡರಿಸಿದನಿನ್ನು ಶಾಸನದೊಳಾದುದಯಂ ಧರೆಯಗುತ್ತರೋತ್ತರಂ॥[೨೩]

೨. ಕೇಶವರಾಜಚಮೂಪಂ ।
ಶಾಸನಮಂ ಪೇಳ್ದನಂತದಂ ತಿರ್ದಿ ನಿರಾ ।
ಯಾಸದೆ ಬರೆದವನೀಶನ ।
ದಾಸಂ ಶಿವಚರಣಕಮಲಶರಣಂ ಸರಣಂ ॥[೨೪]

ಎಂಬಲ್ಲಿಯ ಹರಿಹರಸೂರಿ ಮತ್ತು ಸರಣ, ಕವಿಚರಿತೆಕಾರರು ಹೇಳುವಂತೆ ಶಾಸನಪಾಠವನ್ನು ತಿದ್ದುಪಡಿಗೊಳಿಸುವ ಕಾರ್ಯಮಾಡದೆ, ಕಲ್ಲಮೇಲೆ ಅಕ್ಷರಗಳನ್ನು ತೀಡಿ ಬರೆದಿರಬೇಕು.

ಹೀಗೆ ಹಲವರು ಕೂಡಿ ಒಂದು ಶಾಸನ ಬರೆದಿರಲಿ, ಒಬ್ಬ ಬರೆದುದನ್ನು ಇನ್ನೊಬ್ಬ ಒಪ್ಪಗೊಳಿಸಿರಲಿ, ಈ ಸಾಹಿತ್ಯವನ್ನು ಹುಲುಸುಗೊಳಿಸುವಲ್ಲಿ ಅಕ್ಷರಜ್ಞರಾದ ಹಲವು ವರ್ಗದ, ಹಲವು ವೃತ್ತಿಯ ವ್ಯಕ್ತಿಗಳು ದುಡಿದಿರುವರು.

೧. ವಿಪ್ರಕುಳಾಂಬರ ಚಂದ್ರಂ ।
ಶ್ರೀ ಪ್ರತಿಮೆಯ ಮಾರಸಿಂಹ ತನಯಂ ವಿದ್ವ ।
ದ್ವಿಪ್ರ ಗಂಗನೃಪನಿಯೋ
ಗ ಪ್ರಭು ಕವಿರಾಜವಲ್ಲಭಂ ಗೋವಿನ್ದಂ॥[೨೫]

---

೨೨. ಕಕಚ (೧೯೬೧) ಪಟ್ಟಚೆರವು-ನಿಜಾಂರಾಜ್ಯ (೧೧೨೭)
೨೩. EC V-ii ಅರಸಿಕೆರೆ ೧೧೮ ಬೊಮ್ಮೇನಹಳ್ಳಿ (೧೧೯೪)
೨೪. EI V ಪು. ೨೪೫ ಅಬ್ಬಲೂರು-ಧಾರವಾಡ ಜಿಲ್ಲೆ (೧೧೯೫)
೨೫. MAR ೧೯೩೧ ನಂ. ೭೪ ಹೆಬ್ಬೈಲು -ನಗರ ತಾಲೂಕ (೧೦೫೩)

೨. 'ಸನ್ಧಿವಿಗ್ರಹಿ ದಾಮರಾಜಂ ಸಾಸನಗಬ್ಬಮಂ ಪೇಳ್ದು ಬರೆದಂ'[೨೬]

೩. 'ಸಾಸನಪದ್ಯವಂ ಹೇಳ್ದು ಪ್ರಶಸ್ತಿಯಂ ಬರೆದ ಸೇನಬೋವ ಬಾಚರಸಂ'[೨೭]

೪. 'ಆಚಾರ್ಯತ್ವಮನೊಲ್ದು । ತ್ತಾಚಂದ್ರಸ್ಥಾಯಿಯಾಗಿ ಶಾಸನ ಕೃತಿಯಂ ।
ರೇಚಣಭಟ್ಟಂ ವಿರಚಿಸೆ। ಭೂಚಕ್ರದೊಳೆಸೆಯೆ ಬರೆಸಿದಂ ಶಾಸನಮಂ ॥[೨೮]

೫. 'ಸಹಜಕವಿ ಉಪಾಧ್ಯಾಯ ಮಹಾದೇವಭಟ್ಟರ ಬರೆಪ'[೨೯]

೬. ಸಲೆ ಶಂಕರನಾರಾಯಣ ।ರೊಲವಿನ ಕಾರುಣ್ಯದಿಂದಮೀ ಶಾಸನಮಂ ।

ಸುಲಲಿತಮಾಗಿರೆ ಮುದದಿಂ । ಕಲುಕೆಱೆಯ ಕುಳಾಗ್ರ್ಯ ರಾಮದೇವಂ ಪೇೞ್ದಂ॥[೩೦]

೭. 'ವಾಗ್ವಧೂಮಂಡನಂ ಜಿನಪಾದಾಂಭೋಜಭೃಂಗಂ ನಾಗಾರ್ಜುನಪಂಡಿತಂ ಬರೆದಂ'[೩೧]

೮. 'ಪ್ರಣುತಾರ್ಥಂ ಹೃದ್ಯಮೀ ಪದ್ಯನಿಚಯಮೆನೆ ಪೇೞ್ದಂ ...... ನಾರಣದೇವಂ
ಪಾರ್ವತೀವಲ್ಲಭಪದಯುಗಳಾರಾಧಕಂ '[೩೨]

ಈ ಹೇಳಿಕೆಗಳಿಂದ ನಿಯೋಗಪ್ರಭು, ಸಂಧಿವಿಗ್ರಹಿ ಸೇನಬೋವ, ಆಚಾರ್ಯ, ಉಪಾಧ್ಯಾಯ ಶಿವ-ವಿಷ್ಣು-ಜಿನಭಕ್ತರೆಲ್ಲ ಈ ಕ್ಷೇತ್ರದಲ್ಲಿ ಕಾರ್ಯಗೆಯ್ದುದು ವೇದ್ಯವಾಗುತ್ತದೆ.

ಸಾಹಿತ್ಯರಚನೆ ಒಂದು ವೃತ್ತಿಯಲ್ಲ, ಪ್ರವೃತ್ತಿ. ಹೀಗಾಗಿ ಇವು ರೂವಾರಿ, ಲಿಪಿಕಾರರಂತೆ ಸಾಮಾನ್ಯವಾಗಿ ಪ್ರತಿಫಲದ ಆಶೆಗಾಗಿ ಬರೆದ ಪಾಠಗಳಲ್ಲ. ಹೀಗಿದ್ದರೂ ಸಮಾಜದಿಂದ ಅನೇಕ ಶಾಸನಕವಿಗಳಿಗೆ ಮರ್ಯಾದೆ ಸಂದುದಕ್ಕೆ ಹೇರಳ ಉದಾಹರಣೆಗಳು ದೊರೆಯುತ್ತವೆ.

'ಸಾಸನವ ಪೇಳ್ದ ಬೆಡಗಿನ ಸೋಮನಾಥಪಣ್ಡಿತರ್ಗೆ ಮಾಮರನೆರಡು'[೩೩]

'ಗೋಮಕವಿಗೆ ದಯೆಯಿಂ ಹನ್ನಿರ್ಮತ್ತರ್ಕೆಯ್ಯಂ'[೩೪]

'ಯೀ ಶಾಸನಕೃತಿಯನು ಹೇಳಿದುದಕೆ ಶ್ರೀ ಹರಿಹರದೇವರೂ ಕಾಲುವೆಯ ವೃತ್ತಿವಂತ ಮಹಾಜನಂಗಳು ಪರಿಣಮಿಸಿ ದೇವರಿಂದ ನಾಗುಳ, ಬ್ರಹ್ಮರಿಂದ ನಾಗುಳ, ಉಭಯಂ ಯೆಂಟು ಕೊಳಗ ಗದ್ದೆಯನು ಕಾಶ್ಯಪಗೋತ್ರದ ಯಜುಶ್ಯಾಖೆಯಚಲಸಂಪ್ರದಾಯದ

---

೨೬. EC VII-i ಶಿವಮೊಗ್ಗ ೧೦ ತಟ್ಟೆಕೆರೆ (೧೦೮೫)
೨೭. MAR ೧೯೨೦ ನಂ. ೧೩೪೫ ನೀಲೂರ, ಗುತ್ತಿ ತಾಲೂಕ (೧೨೧೫)
೨೮. SII XX ೧೧೧ ದೇವರ ನಾವದಗಿ-ವಿಜಾಪುರ ಜಿಲ್ಲೆ (೧೧೪೪)
೨೯. EI V ಪು. ೨೩೪ ಅಬ್ಬಲೂರು -ಧಾರವಾಡ ಜಿಲ್ಲೆ (೧೧೪೪)
೩೦. SII XX ೧೭೪ ಕಲಕೇರಿ-ವಿಜಾಪುರ ಜಿಲ್ಲೆ (೧೧೮೭)
೩೧. Jainism in South India ೨೩೬-೩೯ ಇಂಗಳಗಿ-ಗುಲ್ಬರ್ಗಾ ಜಿಲ್ಲೆ (೧೦೯೪)
೩೨. ಕಕಚ (೧೯೬೧) ೧೩೮ ಹಾವೇರಿ-ಧಾರವಾಡ ಜಿಲ್ಲೆ (೧೧೦೯)
೩೩. SII XX ೧೭೫ ಹಿರಿಯಬೇವನೂರ -ವಿಜಾಪುರ ಜಿಲ್ಲೆ (೧೧೯೦)
೩೪. ಶಾ.ಪ. ೫೦ ಕುಕ್ಕನೂರು- ರಾಯಚೂರ ಜಿಲ್ಲೆ (೧೧೭೦)

ಮಲ್ಲಿಕಾರ್ಜುನಾಚಾರ್ಯರ ಮಕ್ಕಳು ಬಾಯಣಾಚಾರ್ಯರಿಗೆ ಧಾರಾಪೂರ್ವಕವಾಗಿ ಕೊಟ್ಟುದು.
ಮಣುವಿನ ಯೆಂಟು ಕೊಳಗ ಗದ್ದೆ"[೩೫]

ಎಂಬ ಉಲ್ಲೇಖಗಳು ಶಾಸನಕವಿಗಳಿಗೆ ಸಂದ ಸಂಭಾವನೆಯನ್ನು ಸೂಚಿಸುತ್ತವೆ.

ಪ್ರಾಚೀನ ಶಾಸನಗಳಲ್ಲಿ ಕ್ವಚಿತ್ತಾಗಿ ಇಲ್ಲವೆ ನಿರಾಡಂಬರವಾಗಿ ಬರುತ್ತಿದ್ದ ಕವಿಯ ಉಲ್ಲೇಖಗಳು ಬರುಬರುತ್ತ ಆತ್ಮಪ್ರಶಂಸೆಯ ಆಡಂಬರದಿಂದ ಅಭಿವ್ಯಕ್ತಗೊಂಡವು. ಕನ್ನಡ ಶಾಸನಪ್ರಪಂಚದ 'ಸುವರ್ಣಯುಗ'ವೆನಿಸಿದ ಕಲ್ಯಾಣ ಚಾಲುಕ್ಯ ಮತ್ತು ದ್ವಾರಸಮುದ್ರ ಹೊಯ್ಸಳರ ಕಾಲದಲ್ಲಿ ಆತ್ಮಪ್ರಶಂಸೆ ಇನ್ನೂ ಬಣ್ಣ ಧರಿಸಿತು.

ಸೀಮಿತವಾದ ಕಲ್ಲಮೇಲೆ ತಮ್ಮ ವಿಷಯವಾಗಿ ಬರೆದುಕೊಳ್ಳಲು ಇವರಿಗೆ ಮೀಸಲಾಗಿರುವ ಸ್ಥಳವೆಂದರೆ ಶಾಸನದ ಕೊನೆಗೆ ಅರ್ಧ ಸಾಲು; ಬಹಳವೆಂದರೆ ಎರಡು ಮೂರು ಸಾಲುಗಳು. ಹೀಗಾಗಿ ಕೆಲವರು

'ಬಾಚಯ್ಯನು ಹೇಳ್ದ ಪದ್ಯ'[೩೬]
'ತ್ರಿವಿಕ್ರಮಪಂಡಿತರ ಕವಿತೆ'[೩೭]
'ಜಾವಣಿಪಂಡಿತರ ಕವಿತೆ'[೩೮]
'ಕವಿಚಂದನ ಕವಿತೆ'[೩೯]
'ಜೊಂಬಣಪಂಡಿತರ ಕವಿತೆ'[೪೦]
'ಶ್ರೀ ಮತ್ಕರ್ಣಾಟಕ ಸುಕವಿ ಮುಖ್ಯಪಂಡಿತರ ಕವಿತೆ'[೪೧]
'ನಾಗಾರ್ಜುನಪಣ್ಡಿತರು ಪೇಳ್ದ ಕಬ್ಬಂ'[೪೨]
'ಸೇನಬೋವ ಸಿಂಗಣನ ಕಬ್ಬಂ'[೪೩]
'ಶ್ರೀ ಕಂದರ್ಪನ ಕಾವ್ಯಂ'[೪೪]
'ಜಾವಗಲ್ಲ ಪುರಾಣದ ಕೇಶವಭಟ್ಟರ ಲಿಖಿತಂ"[೪೫]
'ಹೇಳಿದ ಕವಿ ಹಂಸದೇವ'[೪೬]

---

೩೫. EC XI ದಾವಣಗೆರೆ ೨೩ ಹರಿಹರ (೧೪೧೦)
೩೬. EC V-ii ಬೇಲೂರು ೧೪೦ ಮಾರೇನಹಳ್ಳಿ (೧೧೫೦)
೩೭. EC V-ii ಅರಸಿಕೆರೆ ೯೦ ಅರಸಿಕೆರೆ (೧೧೩೫)
೩೮. EC V-ii ಚನ್ನರಾಯಪಟ್ಟಣ ೧೫೨ ಚನ್ನರಾಯಪಟ್ಟಣ (೧೨೨೭)
೩೯. ARSIE ೧೯೫೭-೫೮ ನಂ. ೪೧೮. ಕಕಚ (೧೯೬೧) ಅನು. ೧ ಪು. ೨೭. ದೇಗಲ್ಮಡಿ (೧೨೦೦?)
೪೦. EC VI ತರಿಕೆರೆ ಜಾಗೀರ ೨೯ ತರೀಕೆರೆ (೧೧೮೫)
೪೧. EI XVI ಪು. ೪೬ ಲಕ್ಷ್ಮೇಶ್ವರ-ಧಾರವಾಡ ಜಿಲ್ಲೆ (೧೧೪೭)
೪೨. SII XI-ii ೧೭೭ ಮುಗದ (೧೧೨೫)
೪೩. MAR ೧೯೩೦ ನಂ. ೬೭ ಬೈರಾಪುರ (೧೧೪೬)
೪೪. ARSIE ೧೯೩೨-೩೩ Appendix D. ೧೨೪ ಕಕಚ (೧೯೬೧) ಅನು ೧ ಪು. ೨ ಕಳ್ಳಿಹಾಳ (೧೦೧೯)
೪೫. SII VIII ೫೬೫ ಪೆನುಕೊಂಡೆ (೧೩೯೨)
೪೬. EC VII-ii ಸೊರಬ ೧೮೪ ಕುಪ್ಪಗುಡ್ಡೆ (೧೦೩೩)
೪೭. EC XII ಚಿಕ್ಕನಾಯಕನಹಳ್ಳಿ ೩೨ ಸೀಗೆಬಾಗಿ (೧೧೬೧)

'ಈ ಶಾಸನಮಂ ಮಾರಮರಸಂ ಪೇಳ್ದಂ'[೪೮]

'ಬಮ್ಮರ ಹರಿಯಂಣ ಹೇಳ್ದ ಶಾಸನ'[೪೯]

' ಈ ಸಾಸನಗಬ್ಬವಂ ಪೇೞ್ದಂ ಹಬ್ಬಣಯ್ಯ ನಾಯಕಂ'[೫೦]

'ಶ್ರೀಮತ್ ಭುವನಚಂದ್ರಸಿದ್ಧಾನ್ತದೇವರ ಗುಡ್ಡಂ ಕಲಿದೇವಪಂಡಿತರು ಪೇಳ್ದರು'[೫೧]

'ಚಬ್ಬರಾಜನ ಪುತ್ರಂ ಶಾರದಿನಾಥಪಂಡಿತರು ಹೇಳ್ದ ಶಾಸನ'[೫೨]

'ಕವಿ ವೈಜನಾಥ ಬರೆದಂ'[೫೩]

'ಈ ಶಾಸನಮಂ ನಾಗಚಂದ್ರ ಕವೀಂದ್ರ ಬರೆದಂ'[೫೪]

'ಬರೆದೊಂ ಕಬ್ಬದ ನಾಗಮಯ್ಯಂ'[೫೫]

'ಕವಿ ಮಾದಿರಾಜ ಬರೆದಂ'[೫೬]

'ಸಹಜಕವಿ ಉಪಾಧ್ಯಾಯ ಮಹಾದೇವಭಟ್ಟನ ಬರೆಪಂ'[೫೭]

'ಶ್ರೀ[ಕವಿ]ಮುಖದರ್ಪಣಂ ಬರ್ಮದೇವಂ ಬರೆದಂ'[೫೮]

'ಸಾಸನಪದ್ಯವಂ ಹೇಳ್ದು ಪ್ರಶಸ್ತಿಯಂ ಬರೆದ ಸೇನಬೋವ ಬಾಚರಸ'[೫೯]

'ಯೀ ಷಾಸನವ ಬರುದ ವಾಶುದೇ[ವ]ರಾಜ ಪಂಡಿತ'[೬೦]

ಎಂದು ಮುಂತಾಗಿ, ಸಿಕ್ಕ ಅರ್ಧಸಾಲಿನಲ್ಲಿ ತಮ್ಮ ಬಗ್ಗೆ ಮೊಟಕು ಉಲ್ಲೇಖ ಮಾಡಿದರು; ಎರಡು ಮೂರು ಸಾಲುಗಳು ದೊರೆತರೆ ಮಾತ್ರ ಕೆಲವರು ಆತ್ಮಪ್ರಶಂಸೆಯನ್ನು, ಜೊತೆಗೆ ಜೀವನಚರಿತ್ರೆಯನ್ನು ಹೀಗೆ ವಿವರಿಸಿದರು:

ಹರಿಹರ ಮಾಯಿದೇವಿಗಳ ಪುತ್ರನನಿಂದಿತ ವಾಜಿವಂಶಶೇ।
ಖರನಕಳಂಕಕೀರ್ತಿ ಕಳಿಕಾಲಬೃಹಸ್ಪತಿ ಸೋಮನಾಥ ಶಂ।
ಕರರನುಜಂ ಬುಧಪ್ರೊರ್ಗಳೆ ನಿರ್ಮಿಸಿದಂ ಕವಿ ನಾಗದೇವನೀ।
ಸ್ಥಿರತರಮಪ್ಪ ಶಾಸನಮನುತ್ತಮ ಕಾಸ್ಯಪಗೋತ್ರವರ್ಧನಂ॥[೬೧]

---

೪೮. SII IX-i ೨೯೮ ನಾಗೇನಹಳ್ಳಿ (೧೧೯೬)

೪೯. EC VIII-i ಸೊರಬ ೨೬೨ ಕುಪ್ಪಟೂರ (೧೦೭೭)

೫೦. ಕಕಚ (೧೯೬೧) ೧೬೪ ಶಿರೂರ (೧೧೪೯)

೫೧. KI.I ನಂ. ೨೪ ಸಿರಸಂಗಿ (೧೧೪೮)

೫೨. EC V-ii ಅರಸಿಕೆರೆ ೧೧೨ ಕಲ್ಲಂಗೆರೆ (೧೧೪೨)

೫೩. SII XI-i ೧೧೬ ಕೊಪ್ಪ (೧೦೭೫)

೫೪. ARSIE ೫೩-೫೪ ನಂ. ೫೦; ಕಕಚ (೧೯೬೧) ಅನು. ೧ ಪು. ೫ ಪಂಚಲಿಂಗಾಲ (೧೦೬೮)

೫೫. EC X ಚಿಂತಾಮಣಿ ೪೩ ಕುರುಬೂರು (೯೩೧)

೫೬. EC XI ದಾವಣಗೆರೆ ೨ ದಾವಣಗೆರೆ (೧೧೨೪)

೫೭. EI V ೨೩೪ ಅಬ್ಬಲೂರು-ಧಾರವಾಡ ಜಿಲ್ಲೆ (೧೧೪೪)

೫೮. SII IX-i ೧೨೫ ಹಿರೇಮಗಲಗೇರಿ -ಬಳ್ಳಾರಿ ಜಿಲ್ಲೆ (೧೦೬೧)

೫೯. MAR ೧೯೨೦ ನಂ. ೩೪೫ ನೀಲೂರ-ಶಿವಮೊಗ್ಗ ಜಿಲ್ಲೆ (೧೨೧೫)

೬೦. EC VIII ಸೊರಬ ೩೦೦ ತೊರೆವಂದ (೧೨೫೨)

೬೧. EC VI ಕಡೂರ ೯೫ ಕೆರೆಸಂತೆ (೧೨೨೪)

ಭುವನನುತ ವಾಜಿವಂಶೋ।
ದ್ಭವಕರ ವಿಭು ಸೋಮನಾಥ ಪುತ್ರಂ ಪೇಳ್ದಂ।
ಕವಿರಾಜಂ ಕಾಸ್ಯಪಗೋ।
ತ್ರವರ್ಧನಂ ದೇವಾಪಾರ್ಯನೀ ಶಾಸನಮಂ॥[೬೨]

ಈ ದೇವಪಾರ್ಯ ಮೇಲಣ ಪದ್ಯದಲ್ಲಿಯ ಕವಿನಾಗದೇವನ ಸೋದರನ ಮಗನೆಂದು ತೋರುತ್ತದೆ. ಇದೇ ರೀತಿ.

'ಶ್ರೀ ಮನ್ಮಹಾಸಂಧಿವಿಗ್ರಹಿ ದಂಡನಾಯಕಂ ಕಾಳಿದಾಸಭಟ್ಟರಳಿಯಂ
ಕವಿತಾಮನೋಹರಂ ಕವಿತಳರ ಕರ್ಪೂರಸಂ ಬರೆದಂ'[೬೩]

ಕ್ಷಿತಿವಿನುತೆ ಸಬ್ಬ್ರದೇವ।
ಸುತೆ ಸಂನುತೆ ಸೋಮಿಯಕ್ಕನಣುಗಿನ ಪುತ್ರಂ ।
ಸತುಕವಿ ಶಾಂತಮಹಂತಂ।
ಸ್ತಿತಿಸಾರಂ ಪೇಳ್ದನಟ್ಟಿಯಿಂ ಸಾಶನಮಂ॥[೬೪]

ಧರೆ ಪೊಗಳೆ ಚಿದಾನನ್ದಂ ।
ವಿರಚಿಸಿದಂ ಸತ್ಕವೀಶ್ವರ ಶಾಸನವಂ।
ಪರಮಪ್ರಕಾಶಯೋಗೀ ।
ಶ್ವರತನಯಂ ಬ್ರಹ್ಮವಿದ್ಯೆಗಾಸ್ಪದ ರೂಪಂ ॥[೬೫]

ಇತ್ಯಾದಿ ಸಂಗತಿಗಳನ್ನು ಸಂಗ್ರಹಿಸಿ ಪ್ರತಿಯೊಬ್ಬ ಕವಿಯ ತಕ್ಕಮಟ್ಟಿನ ಚರಿತ್ರೆಯನ್ನು ರೂಪಿಸಲು ಸಾಧ್ಯವಿದೆ; ಅವರವರ ಕೌಟುಂಬಿಕ ಸಂಬಂಧವನ್ನು, ಗುರು-ಶಿಷ್ಯ ಸಂಬಂಧವನ್ನು ಗುರುತಿಸಲು ಶಕ್ಯವಿದೆ. ಶಾಸನಕವಿಗಳಲ್ಲಿ ಈ ಸಂಬಂಧ ವಂಶಪಾರಂಪರ್ಯ ಬೆಳೆದು ಬಂದುದಕ್ಕೆ ವಿಜಯನಗರ ಅರಸರ ಕಾಲದ ಅಪರೂಪ ಉದಾಹರಣೆ ಹೀಗೆ ಸಿಗುತ್ತದೆ.

೧. ಕೃಷ್ಣದೇವ ಮಹಾರಾಯ ಶಾಸನೇನ ಸಭಾಪತಿಃ।
ಅಭಾಣೀಂ ಮೃದಸಂದರ್ಭಂ ತದಿದಂ ತಾಂಮ್ರಶಾಸನಂ॥[೬೬]

೨. ಅಚ್ಯುತೇಂದ್ರ ಮಹಾರಾಯ ಶಾಸನೇನ ಸಭಾಪತಿ
ಅಭಾಣೀನ್ ಮೃದುಸಂದರ್ಭಂ ತದದಿಂ ತಾಮ್ರಶಾಸನಂ ॥[೬೭]

೩. ಮೃದುಪದಮಿತಿ ತಾಮ್ರ ಶಾಸನಾರ್ಥಂ ಸಹಿತಮಥಾಚ್ಯುತರಾಯ ಶಾಸನೇನ ।
ಅಭಣದನುಗುಣಂ ವಚೋಹಿಮ್ನಾ ಸರಸತರೇಣ ಪತಿಃ ಸ್ವಯಂಭೂಃ ॥[೬೮]

---

೬೨. EC V-ii ಅರಸಿಕೆರೆ ೭೧ ಅರಸಿಕೆರೆ (೧೧೧೭)

೬೩. ಕಕಚ (೧೯೬೧) ೧೦೬. ಹದಳಿ-ಧಾರವಾಡ ಜಿಲ್ಲೆ (೧೦೮೪)

೬೪. EC IV-ii ನಾಗಮಂಗಲ ೨೮ ಲಾಲನಕೆರೆ (೧೧೨೫)

೬೫. EC III-i ಮಂಡ್ಯ ೧೨೨ ಬಸುರಾಳು (೧೨೩೭)

೬೬. EC V-ii ಹಾಸನ ೬ ಹಾಸನ (೧೫೧೫)

೬೭. EC V-ii ಅರಸಿಕೆರೆ ೧೨೬ ಹಾರನಹಳ್ಳಿ (೧೫೩೫)

೬೮. EC X-ii ಚಿಂತಾಮಣಿ ೨೮-೨೯ ಮಿಂದಗಲ್ಲು.

೪. ಮೃದುಪದಮಿತಿ ತಾಂಮ್ರಶಾಸನಾರ್ಥಂ ಮಹಿತ ಸದಾಶಿವರಾಯ ಶಾಸನೇನ ।
ಅಭಣದನುಗುಣಂ ವಚೋಮಹಿಮ್ನಾ ಸರಸತರೇಣ ಸಭಾಪತಿ ಸ್ವಯಂಭುಃ ॥[೧೯]

೫. ತಿರುಮಲರಾಯಸ್ಯ ಗಿರಾಸ್ಥಿರಕೀರ್ತ್ತೆಸ್ತಾಮ್ರಶಾಸನ ಶ್ಲೋಕಾನ್।
ಕವಿಶಾಸನಸ್ಸ್ವಯಂಭೂಸ್ಸರಸಮಭಾಣೀಸಭಾಪತೇಸ್ಸೂನುಃ॥[೨೦]

೬. ವೆಂಕಟಪತಿರಾಯಕ್ಷ್ಮಾಪತಿ ದೇಶೇನ ಶಾಸನಶ್ಲೋಕಾನ್ ಕೃಷ್ಣ ।
ಕವಿ ಕಾಮಕೋಟಿಸ್ಸರಸಮಭಾಣೀತ್ಸ(ಭಾ)ಪತೇಃ ಪೌತ್ರಃ ॥[೨೧]

೭. ವೀರ ಶ್ರೀ ರಂಗರಾಯೋಕ್ತ್ಯಾಃ ಪ್ರಾಹಪಾತ್ರಸ್ಸಭಾಪತೇಃ ।
ಕಾಮಕೋಟಿ ಸುತೋ ರಾಮ ಕವಿಶ್ಯಾಸನೇ ವಾಙ್ಮಯಂ ॥[೨೨]

ಈ ಉದ್ಧರಣೆಗಳಿಂದ ಕೃಷ್ಣದೇವರಾಯ -ಅಚ್ಯುತರಾಯರ ಕಾಲದ ಸಭಾಪತಿ, ಅಚ್ಯುತರಾಯ -ಸದಾಶಿವರಾಯ-ತಿರುಮಲರಾಯರ ಕಾಲದ ಸ್ವಯಂಭೂ, ವೆಂಕಟಪತಿರಾಯನ ಕಾಲದ ಕಾಮಕೋಟಿ, ರಂಗರಾಯನ ಕಾಲದ ರಾಮ ಇವರು ಒಬ್ಬನ ಮಗ ಇನ್ನೊಬ್ಬನೆಂದು ತಿಳಿದುಬರುತ್ತದೆ. ಹೀಗೆ ನಾಲ್ಕು ತಲೆಮಾರುಗಳ ವರೆಗೆ ವಿಜಯನಗರ ಅರಸರ ಕೈಕೆಳಗೆ ಇವರು ಆನುವಂಶಿಕವಾಗಿ 'ಶಾಸನಕವಿವೃತ್ತಿ'ಯನ್ನು ನಡೆಸಿಕೊಂಡು ಬಂದಿರುವರು. ಇಂಥಲ್ಲಿ ಪ್ರವೃತ್ತಿಯು ವೃತ್ತಿಗೆ ಇಳಿದು ಕವಿತ್ವ ಕರಗಿಹೋಗಿದೆ.

ಈ 'ವೃತ್ತಿಕವಿ'ಗಳಲ್ಲದೆ ಕೇವಲ ಛಂದೋಯೋಜನೆ ಸಾಂಪ್ರದಾಯಿಕ ವರ್ಣನೆಗಳನ್ನು ರೂಢಿಸಿಕೊಂಡ ಬರಡುಕವಿಗಳೂ ಇದ್ದಾರೆ. ಹೀಗಾಗಿ ಎಷ್ಟೋ ಸುದೀರ್ಘ ಶಾಸನಗಳಲ್ಲಿ ಕವಿತ್ವಹೀನ ಪಾಂಡಿತ್ಯ, ಒಣ ಆಡಂಬರ ಕಿಕ್ಕಿರಿದು ತುಂಬಿದೆ. ದೇಶದ ಯಾವುದೋ ಮೂಲೆಯ ಶಾಸನಕ್ಕೆ ಸುಪ್ರಸಿದ್ಧ ಕವಿಗಳಿಂದ ಸಾಹಿತ್ಯವನ್ನು ದೊರಕಿಸುವುದು ಸಾಧ್ಯವಿಲ್ಲದಾಗ ಸಮೀಪದ ಅಕ್ಷರಜ್ಞರಿಂದ ಇಲ್ಲವೆ ಪಂಡಿತರಿಂದ ಪಾಠ ಪಡೆದ ಸಂದರ್ಭಗಳೇ ಹೆಚ್ಚೆಂದು ತೋರುತ್ತದೆ. ಇಂಥ ಅನುಕರಣಶೀಲರಿಂದ, ವರ್ಣನಾಚತುರರಿಂದ. ಛಂದೋಯೋಜಕರಿಂದ ಕೆಲವು ಶಾಸನಗಳು ಸಾಹಿತ್ಯ ವಿಹೀನವೆನಿಸಿದವು. ಹೀಗಿದ್ದೂ ಉನ್ನತ ಮಟ್ಟದ ಶಾಸನಕವಿಗಳಿಗೆ ಕೊರತೆಯಿಲ್ಲ.

ಆತಕೂರು ಶಾಸನ, ಮಾವನೂರ ಶಾಸನಗಳನ್ನು ಕ್ರಮವಾಗಿ ಪೊನ್ನ,[೨೩] ಹರಿಹರ;[೨೪] ಲಕ್ಕುಂಡಿ, ಬಿಜಾಪುರ-ಬೆಳ್ಗೊಳ-ಪಂಚಲಿಂಗಾಲ ಶಾಸನಗಳನ್ನು ಕ್ರಮವಾಗಿ ರನ್ನ,[೨೫] ನಾಗಚಂದ್ರ;[೨೬] ದಾನವುಲಪಾಡ,

೧೯. EC IX ಚನ್ನಪಟ್ಟಣ ೧೮೬ ಮಳೂರು (೧೫೫೮)

೨೦. EC XII ತುಮಕೂರು ೧ ತುಮಕೂರು (೧೫೭೧)

೨೧. EC XII ಚಿಕ್ಕನಾಯಕನಹಳ್ಳಿ ೩೯ ಜೋಡಿತಿರಮಲಾಪುರ (೧೫೮೯)

೨೨. EC X-ii ಮುಳಬಾಗಿಲ ೬೦ ಆವನಿ (೧೬೪೫)

೨೩. EI VI ಪು. ೧೨೧, ಆತಕೂರು ಶಾಸನ (೯೫೦)
("ಆತಗೂರು ಶಾಸನದೊಳಗಿನ ಪದ್ಯಗಳನ್ನು ಪೊನ್ನನೇ ಬರೆದಿರಬಹುದು" ಬೇಂದ್ರೆ - ಪೊನ್ನನ ಭುವನೈಕರಾಮಾಭ್ಯುದಯ: ಸಾಹಿತ್ಯಸಂಶೋಧನೆ ೧೨೩)

೨೪. EC XV ಹೊಳೆನರಸಿಪುರ ೧೧೨ ಮಾವನೂರ (೧೨೮೪)
ಗಿರಿಜಾಕಲ್ಯಾಣ ಮಹಾಪ್ರಬಂಧ (ಸಂಗ್ರಹ) ಪೀಠಿಕೆ XII ಅ.ಟಿ.

೨೫. SII XI-i ೫೨ ಮತ್ತು ೫೩ ('ಈ ಶಾಸನವನ್ನು ಕವಿ ರನ್ನನೇ ಬರೆದಿರಬಹುದಲ್ಲವೇ? 'ತೀ.ನಂ.ಶ್ರೀ. ಸಮಾಲೋಕನ(೧೫೪)

೨೬. ಕಕಚ (೯೬೧) ಪು. ೧೧೬ ಮತ್ತು ೧೨೧.

ಹೊಟ್ಟೂರ- ಕೋಟವುಮಚಗಿ, ಕಳ್ಳಿಹಾಳ, ನೆಲಮಂಗಲ ಶಾಸನಗಳನ್ನು ಕ್ರಮವಾಗಿ ಗುಣವರ್ಮ,[೭೭] ಚಂದ್ರಭಟ್ಟ,[೭೮] ಮನಸಿಜ[೭೯], ಮಲ್ಲಿಕಾರ್ಜುನರು ಬರೆದಿರಬಹುದೆಂಬ ಊಹೆ-ಅರೆಊಹೆಗಳನ್ನು ಬಿಟ್ಟರೆ ಸುಕುಮಾರಚರಿತೆಯ ಶಾಂತಿನಾಥನು ಬಳ್ಳಿಗಾವಿ ಶಾಸನ,[೮೧] ಯಶೋಧರಚರಿತೆಯ ಜನ್ನನು ಅಮೃತಾಪುರ ಮತ್ತು ಆನೆಕೆರೆ ಶಾಸನ,[೮೨] ಪಾರ್ಶ್ವನಾಥ ಪುರಾಣದ ಪಾರ್ಶ್ವಕವಿಯು ಕಲ್ಲಹಳ್ಳಿ ಶಾಸನ,[೮೩] ಧರ್ಮನಾಥಪುರಾಣದ ಮಧುರನು ಹಂಪೆಯ ಶಾಸನ,[೮೪] ಸುಜನೋತ್ತಂಸ ಬಿರುದಿನ ಬೊಪ್ಪಣಪಂಡಿತನು ಶ್ರವಣಬೊಳ್ಗೊಳ ಶಾಸನ[೮೫]ಗಳನ್ನು ಬರೆದಿರುವರು. ಇವರಲ್ಲದೆ

'ಹಸ್ತಿತಡಾಗ ನಿವಾಸಿನೋ ಜಾತವೇದಭಟ್ಟಾಧ್ಯಾಯ ಪುತ್ರಕಸ್ಯಾಭಿನವ
ಸರ್ವಜ್ಞಸೋಮೇಶ್ವರಭಟ್ಟಸ್ಯ ಕೃತೀ'[೮೫ಅ]

ಶ್ರೀ ರಾಮಾಯಣ ಭಾರತ ಪಾರಾಯಣ ವಿಹಿತವೃತ್ತಿನಾ ಕೃತಿನಾ ।
ಕವಿ ತಿರುಮಲೆಯಾಚಾರ್ಯೇಣೇದನ್ತಾಮ್ರಶಾಸನಂ ಲಿಖಿತಂ ॥[೮೫ಬ]

ಎಂದು ತಮ್ಮ ಘನತೆ-ಗೌರವಗಳನ್ನು ಘೋಷಿಸಿಕೊಂಡವರೂ ಖ್ಯಾತ ಕವಿಗಳಾಗಿರಬಹುದು. ಕೆಲವರು ಬೇರೆ ಕವಿಗಳಿಂದ ಪ್ರಭಾವಿತರಾದ ಪಾಠವನ್ನೂ ಒದಗಿಸಿರುವರು.[೮೬] ಹೀಗೆ ಬೇರೆ ಸಾಹಿತ್ಯಕೃತಿಗಳನ್ನು ಬರೆದ, ಬೇರೆ ಕೃತಿಗಳಿಂದ ಪ್ರಭಾವಿತರಾದ ಇವರನ್ನು ಬಿಟ್ಟರೆ ಕೇವಲ ಶಾಸನಗಳನ್ನು ಬರೆದ ಸುಪ್ರಸಿದ್ಧ ಕವಿಗಳ ಸಂಖ್ಯೆಯೂ ಗಣನೀಯವಾಗಿದೆ.

ವೇದವೇದಾಂಗ (ಮನೋದ)ದೆ ಶಾಸ್ತ್ರಮ।
ನಾದಿಮಧ್ಯಾಂತಮಱಿಯದೆ।ನಾರಣಂ।
ಗಾದುದು ಕವಿತೆ ಸಹಜಮೇ॥[೮೭]
'ವಿಚಸ್ಪತಿಗರಿದೆನೆ ಸಂಕೋಚದೆ ಶಾಸನಮನೀಶ್ವರಾರ್ಯಂ ಪೇಟ್ದಂ'[೮೮]

---

೭೭. MASI XIII ೩ ದಾನವುಲಪಾಡ (೯೧೫)

೭೮. ಕಕಚ (೧೯೬೧) ಪು. ೯೮ ಮತ್ತು ಅನು. ೨ ಪು.೧೧

೭೯. ಕಕಚ (೧೯೬೧) ಅನು. ೧ ಪು. ೨

೮೦. EC III-i ಮಂಡ್ಯ ೧೨೧ ಬಸುರಾಳು(೧೨೩೫) ಮಂಡ್ಯ ೧೨೨ ಬಸುರಾಳು(೧೨೩೭)

೮೧. EC VII-i ಷಿಕಾರಿಪುರ ೧೩೬ ಬಳ್ಳಿಗಾವಿ (೧೦೬೮)

೮೨. EC V-ii ಚೆನ್ನರಾಯಪಟ್ಟಣ ೧೭೯ ಆನೆಕೆರೆ (೧೧೯೦)
EC VI ತರಿಕೆರೆ ೪೫ ಅಮೃತಾಪುರ (೧೧೯೭)

೮೩. JBBRAS X ೨೨೦ ಕಲ್ಲಹಳ್ಳಿ-ಬೆಳಗಾವ ಜಿಲ್ಲೆ (೧೨೦೪)

೮೪. SII IV ೨೬೭ ಹಂಪೆ-ಬಳ್ಳಾರಿ ಜಿಲ್ಲೆ (೧೪೧೧)

೮೫. EC II ೨೩೪ ಶ್ರವಣಬೆಳ್ಗೊಳ (೧೧೮೧)

೮೫ಅ. EC V-ii ಚನ್ನರಾಯಪಟ್ಟಣ ೨೧೧ ನೌಲೆಗ್ರಾಮ

೮೫ಬ. EC iii ಶ್ರೀರಂಗಪಟ್ಟಣ ೬೪ ತೊಂಡನೂರು (೧೭೨೨). ಇದಲ್ಲದೆ EC III ಶ್ರೀರಂಗಪಟ್ಟಣ ೧೦೦ ಮೇಲುಕೋಟೆ (೧೭೨೪) ಶಾಸನದ ಪುಟ ೯೦ ಮತ್ತು ೯೩ ನೋಡಿರಿ.

೮೬. ಶಾಸನಸಾಹಿತ್ಯ ಪ್ರಕರಣ ನೋಡಿರಿ.

೮೭. SII XI-i ೪೨ ಸವಡಿ-ಧಾರವಾಡ ಜಿಲ್ಲೆ (೯೭೧)

೮೮. EC XI ದಾವಣಗೆರೆ ೩೯ ಭಾನುವಳ್ಳಿ (೧೨೭೫)

'ಸಕಳಚನ್ದ್ರ ಪಣ್ಡಿತದೇವರ ಗುಡ್ಡ ಮಲ್ಲಿನಾಥಂ ಬರೆದಂ'
ಸುಜನಜನಕುಮುದಚಂದ್ರನ।
ಸುಜನಜನಾನನವಿಲೋಕಮಣಿ ಮುಕುರನಾ।
ಸುಜನಜನವನಜಹಂಸನ।
ಸುಜನಂ ಜನಂ ಪೊಗಳೆ ಮಲ್ಲಿನಾಥಂ ನೆಗೞ್ದಂ॥[೮೯]
ಭರತಾಗಮಶಾಸ್ತ್ರಕಳಾ।
ಪರಿಣತಿಯೊಳ್ ವರ್ಣಕವಿತೆಯೊಳ್ ದಾನಗುಣೋ।
ತ್ಕರದೊಳ್ ಸರಿಯಾರ್ ವಂಕೇ।
ಶ್ವರದೇವರ ಅಪ್ಪಣೋಜನೊಳ್ ಭೂತಳದೊಳ್॥[೯೦]
ವಾಚಕವಾಚಸ್ಪತಿ ಕವಿ ।
ತಾಚಾತುರ್ಯಂ ಶ್ರವ್ಯಕಾವ್ಯಪದ್ಯಪದಾರ್ಥಾ।
ಳೋಚನಚಕ್ಷುಪರಾರ್ಥ।
XX ಪ್ರಿಯ ಹಿತಾರ್ಥವಾಚಂ ಬೂಚಂ॥[೯೧]
ಬುಧನಿಧಿ ವಿವೇಕನಿಧಿ ಗುಣ।
ನಿಧಿಯಾದಿತ್ಯಾನುಜಂ ತದಂತೇವಾಸಂ।
ಬುಧನಿಧಿ ವಿವೇಕನಿಧಿ ಗುಣ।
ನಿಧಿ ಬರೆದಂ ತ್ರಿಕ್ರಮಾಂಕನೀ ಶಾಸನಮಂ॥[೯೨]
ಪದ್ಯಂ ವಿರಚಿಸಿದಂ ನಿರ।
ವದ್ಯಂ ಸುಕವೀಂದ್ರಲಪನಮಣಿಮಯ ಮುಕುರಂ ।
ಮಾದ್ಯತ್ಕಂಠೀರವ ।
ಮದ್ಯತ್ತುಹಿನಾಂಶುಕಿರಣಕೀರ್ತಿ ನೃಸಿಂಹ ॥[೯೩]
ರಸದಿಂ ಶಬ್ದದಿನರ್ಥದಿ ।
ನೆಸೆದಿರೆ ಶಾಸನಪದ್ಯಮೆನಲು ಪೊಸ XX ।
ದೆಸೆ ಪಸರಿಸಲು ವಿರ।
ಚಿಸಿದಂ ಸರ್ವಜ್ಞಪಟ್ಟವರ್ಧನವಿಬುಧಂ॥[೯೪]
ಬರೆವರ ಮಿತ್ರಂ ಸುಬ್ಬಂ।
ವಿರಚಿಸಿ ಪೇ(ಳ್ದ)ಸೆವ ಗದ್ಯಪದ್ಯೋಕ್ತಿಗಳಿಂ ।
ಬರೆದಂ ಶಾಸನಮನಿದಂ ।
ಧರೆಯೊಳ್ ಬುಧರೊಲ್ದು ಪೊಗಳೆ ಲಲಿತಾಕ್ಷರದಿಂ॥[೯೫]

---

೮೯. EC VII-ii ನಗರ ೫೮ ಹುಮ್ಮಚ (೧೦೬೨)
೯೦. JBBRAS IX ೨೯೪ ಬೇಗಾವೆ-ಬೆಳಗಾವ ಜಿಲ್ಲೆ
೯೧. EC V-ii ಹಾಸನ ೧೧೦ ಸಾಲಗಾಮೆ (೧೧೭೩)
೯೨. EC V-ii ಅರಸಿಕೆರೆ ೨೨ ಬಾಣಾವರ (೧೧೮೮)
೯೩. EC III-i ಮಳವಳ್ಳಿ ೨೧ ಅರುವನಹಳ್ಳಿ (೧೩೮೨)
೯೪. ARSIE ೧೯೩೩-೩೪ ನಂ. ೭೨; ಕಕಚ (೧೯೬೧) ಅನು ೧. ಪು. ೧೭ ನರಗುಂದ (೧೧೪೭)
೯೫. ARSIE ೧೯೩೩-೩೫ ನಂ. ೮೯: ಕಕಚ (೧೯೬೧) ಅನು. ೧ ಪು. ೨೨ ಅಸುಂಡಿ (೧೧೮೦)

ಶಾಸನಮುಸಿರ್ವ ನೆವದಿಂ।
ಲೇಸೆನಿಸಿದ ರಿಶ್ಯಶೃಂಗ ಮಹಿಮೋನ್ನತಿಯಂ॥
ಭಾಸುರಮತಿ ಬಂಣಿಸಿದಂ।
ಶ್ರೀ ಸಜ್ಜನತಿಳಕನೊಸೆದು ಪೊಸಗಂನಡದಿಂ॥[೯೬]
ಉಚಿತಪದಾಳಂಕಾರಂ।
ಪ್ರಚುರ ರಸಂ ನೆಗಳಲಿನ್ನು ಜಿನಶಾಸನಮಂ।
ರಚಿಯಿಸಿದಂ ಹರಹಾಸ।
ದ್ರುಚಿರಯಶಂ ದೇವಭದ್ರಮುನಿಪೋತ್ತಂಸಂ॥[೯೭]
ಸರಸಕವಿತುಂಗನೆನಿಸಿದ।
ವರಕವಿ ಪದ್ಮ x x ನಿಷಿಧಿಗೆ ಪದ್ಯಂ।
ಬರೆದು ಪರೋಕ್ಷದ ಸದನಂ।
ವಿರಚಿಸಿ ಜಿನಸಭೆಯೊಳಗ್ರಪೂಜೆಯಂ ಪಡೆದಂ॥[೯೮]
ಕೊಟ್ಟ ಕುಱಿಪಿಂಗೆ ಬಗೆ ನೇ।
ರ್ವಟ್ಟಿರೆ ರಸಭಾವಮರ್ತ್ಥ ಗೌರವದೊಳೊಡಂ॥
ಬಟ್ಟಿರೆ ಪೇಳ್ದಂ ಮಾಧವ।
ಭಟ್ಟಂ ವಾಕ್‌ಶ್ರೀಲಲಾಟಮಣಿಮಯ ಪಟ್ಟಂ॥[೯೯]
ದೋಷವ್ಯತೀತಮರ್ಥ ವಿ।
ಶೇಷಮಿದೆನೆ ಪೇಳ್ದನೊಲ್ದು ಶಾಸನಮಂ ಪೀ।
ಯೂಷಸಮಸೂಕ್ತಿ ಚಾತು।
ರ್ಭ್ಯಾಷಾಕವಿಚಕ್ರವರ್ತ್ತಿ ಕವಿ ಕಂದರ್ಪಂ॥[೧೦೦]
ವರತರ್ಕ್ಕಾಲಂಕೃತಿ ವ್ಯಾಕರಣ ಪರಿಣತಂ ಶುದ್ಧಸಮ್ಯಕ್ತ್ವ ರತ್ನಾ।
ಭರಣ ಶ್ರೀಗೋಪಣಾತ್ಮೋದ್ಭವನುಭಯಕವೀಶಂ ದ್ವಿಜಂ ಶಂಕರಾರ್ಯ್ಯಂ ।
ಪರಮಾಹಚ್ಛಾಸನಕ್ಕೊಳ್ಪೆಸೆವ ಕೃತಿಯನಾಚಂದ್ರತಾರಂಬರಂ ಸು।
ಸ್ಥಿರಮಾಗಲ್ಪಾಳುವೀಂದ್ರಾ ಧಿಪನಭಿಮತದಿಂ ಸಜ್ಜನಮ್ಮೆಚ್ಚೆ ಪೇಳ್ದಂ॥[೧೦೧]
'ಶ್ರೀ (ಕವಿ)ಮುಖದರ್ಪ್ಪಣಂ ಬಮ್ಮದೇವ ಬರೆದಂ,[೧೦೨]

---

೯೬. KI-i ೨೫ ಸಿರಸಂಗಿ -ಬೆಳಗಾವ ಜಿಲ್ಲೆ (೧೧೮೬)
೯೭. EC XII ಚಿಕ್ಕನಾಯಕನಹಳ್ಳಿ ೨೧ ಹೆಗ್ಗೆರೆ (೧೧೬೦)
೯೮. EC. XV ಹಾಸನ ೩.೨೨, ಹಳೆಬೀಡು (೧೨೯೫)
೯೯. SII XI-ii ೧೩೭ ಸೊರಟೂರ -ಧಾರವಾಡ ಜಿಲ್ಲೆ (೧೦೯೨)
೧೦೦. EI XIII ೧೫ ಬೆಳಗಾವ (೧೨೦೪)
೧೦೧. KI-i ೬೫ ಕೈಕಿಣಿ -ಕಾರವಾರ ಜಿಲ್ಲೆ (೧೪೮೪)
೧೦೨. SII IX-i ೧೨೫ ಹಿರೇಮಗಲಗೇರಿ -ಬಳ್ಳಾರಿ ಜಿಲ್ಲೆ (೧೦೬೧)

'ಉದ್ದಂಡಕವಿಭಾಳನೇತ್ರಂ ಸುಕವಿಜನಮಿತ್ರಂ ಜನ್ನಯ್ಯನ ಕವಿತೆ'[೧೦೩]

ವಿನುತ ಮಧುರೋಕ್ತಿಯಿಂ ತಂ।
ನನತಿಶಯವಚೋವಿಭೂತಿಗಿದುವೆ ಯಶಶ್ಯಾ।
ಸನಮಾದುದೆಂಬಿನಂ ಶಾ।
ಸನಮನಿದ್ಧಂ ಬರದನಾಶುಕವಿ ನಿಟಿಲಾಕ್ಷಂ॥

ಪರಿಕಿಸೆ ಮಲ್ಲಿದೇವವಿಭುಗಾರ್ಸ್ಸಮನಿರ್ಬ್ಬರುಮಿರ್ಕ್ಕೆಲಂಗಳೊಳ್।
ಬರೆದುದನಂತ್ಯದಿಂ ಬರೆವ ಬಾಜಿಪ ಬಾಜಿಪ ಕಬ್ಬಮೆನ್ಸುಟ।
ನ್ತಿರೆ ಪೊಸಗಬ್ಬಮಂ ನುಡಿವ ಭಾವಿಸಿ ಕೇಟ್ವಿ ಕಥಾಚತುಷ್ಕಮಂ।
ಧರೆ ಪರಿಕಮ್ಮ್ರಮೆಂದಿನಿತುಮಂ ಗುಣಿಯಿಪ್ಪ ಮತಿಪ್ರಭಾವದೊಳ್॥

'ಶ್ರೀಮತ್ ಸಹಜಸಾರಸ್ವತ। ವಾಚಕವಾರಿಜಾಸನಂ। ನಾನಾವಿಧಾವ
ಧಾರಣ ಚಕ್ರವರ್ತಿ ಮಲ್ಲಿಕಾರ್ಜುನಭಟ್ಟಂ ಕವಿಕಂಜಸಂಭವಂ'[೧೦೪]

ಕವಿಸಾರಸ್ವತಮಹೋದಯನ ಕಿಂಕರನೀ।
ಶಿವಧಮ್ಮ್ರಶಾಸನವನಭಿ।
ನವಮಾಗಿರೆ ಮಲ್ಲಿಕಾರ್ಜ್ಜುನಾರ್ಯ್ಯಂ ಬರೆದಂ॥

ಗೊಬ್ಬೂರ ಧಾರಣಾಸಾರ್ವಭೌಮ ಮಲ್ಲಿಕಾರ್ಜುನಭಟ್ಟಂ ಸುಕವೀಂದ್ರ
ಷಣ್ಮುಖಂ'[೧೦೫]

'ಶ್ರೀ ಮನ್ಮಾಧವಚಂದ್ರ ತ್ರೈವಿದ್ಯಚಕ್ರವರ್ತ್ತಿ ವಾಕ್ಸುಧಾರಸನಾಭ್ಯುದಿತ
ನಿತ್ಯಸಾಹಿತ್ಯಮರಾಳಂ ಬಾಳಚಂದ್ರದೇವಂ ಪೇಳ್ದ ಶಾಸನಂ'[೧೦೬]

'ಚತುರ್ಬ್ಭಾಷಾ ಕವಿಚಕ್ರವರ್ತಿ ಕವಿಕಂದರ್ಪಂ'[೧೦೭]

ಈ ಒಂದೊಂದು ಹೇಳಿಕೆಗಳು ನಮ್ಮ ಶಾಸನಕವಿಗಳ ಸಿದ್ಧಿ-ಪ್ರಸಿದ್ಧಿಗಳನ್ನು ಸಾರುತ್ತವೆ. ಇವಲ್ಲದೆ ಕವಿರಾಜರಾಜ,[೧೦೮] ಶ್ರೀಮತ್ಕವಿರಾಜವಲ್ಲಭಂ,[೧೦೯] ಕವಿರಾಜಬಾಂಧವಂ,[೧೧೦] ಕವಿತಾಮನೋಹರಂ,[೧೧೧] ಸುಕರಕವಿ,[೧೧೨] ಸಹಜಕವಿ,[೧೧೩] ಸತ್ಕವೀದ್ರಸ್ತುತಂ,[೧೧೪] ಸರಸಕವೀಂದ್ರ,[೧೧೫] ಶ್ರೀಮತ್ ಕರ್ಣಾಟ ಸುಕವಿ,[೧೧೬]

---

೧೦೩. EC VI ತರಿಕೆರೆ ೪೫ ಅಮೃತಾಪುರ (೧೧೯೭)

೧೦೪. EC VIIಷಿಕಾರಿಪುರ ೯೮ ಬಳ್ಳಿಗಾವಿ (೧೧೦೩)

೧೦೫. EC VII ಷಿಕಾರಿಪುರ ೯೯ ಬಳ್ಳಿಗಾವಿ (೧೧೧೩)

೧೦೬. EI XIII ೧೮ ಬೆಳಗಾವ (೧೦೨೪)

೧೦೭. EI XIII ೧೫ ಬೆಳಗಾವ (೧೨೦೪)

೧೦೮. EI XIII ೩೨೬ ಕಳಸ (೯೩೦)

೧೦೯. EC VIII-ii ಸೊರಬ ೧೮೪ ಕುಪ್ಪಗಡ್ಡೆ (೧೦೩೩)

೧೧೦. EC IV-ii ಹೆಗ್ಗಡದೇವನಕೋಟೆ ೧೮ ಬೆಳತೂರ (೧೦೫೭)

೧೧೧. ಕಕಚ (೧೯೬೧) ೧೦೬ ಹದಳಿ-ಧಾರವಾಡ ಜಿಲ್ಲೆ (೧೦೮೪)

೧೧೨. EI V ೨೩೧ ಅಬ್ಬಲೂರ-ಧಾರವಾಡ ಜಿಲ್ಲೆ (ಅ.ಟಿ. ೧೧೦೪)

೧೧೩. EI V ೨೩೧ ಅಬ್ಬಲೂರು-ಧಾರವಾಡ ಜಿಲ್ಲೆ (ಅ.ಟಿ. ೧೧೦೪)

೧೧೪. ಕಕಚ(೧೯೬೧) ೧೩೮ ಹಾವೇರಿ-ಧಾರವಾಡ ಜಿಲ್ಲೆ (೧೧೧೯)

೧೧೫. MASI XIII ಪು. ೧೨ ಪಟ್ಟಚೆರುವು (೧೧೨೭)

೧೧೬. EI XVI ೪೬ ಲಕ್ಷ್ಮೇಶ್ವರ-ಧಾರವಾಡ ಜಿಲ್ಲೆ (೧೧೪೭)

ಕಡುಜಾಣಂ ಸತ್ಕವೀಂದ್ರಂ,[೧೧೭] ಕವಿರಾಜಂ,[೧೧೮] ಕುಕವಿಮುಖಮುದ್ರ -ಸುಕವಿ ಪದ್ಮಪ್ರಭಾಕರ,[೧೧೯] ಕವಿರಾಜಪಂಡಿತ,[೧೨೦] ಸುಕವಿಕಂಠಾಭರಣ,[೧೨೧] ಒಳ್ಗವಿತಿಳಕಂ,[೧೨೨] ಕವೀಂದ್ರ,[೧೨೩] ವಾಗ್ವಧೂಮಂಡನಂ[೧೨೪] - ಈ ಪ್ರತಿಯೊಂದು ಬಿರುದುಗಳಲ್ಲಿ ಕೆಲಮಟ್ಟಿನ ಪ್ರಶಂಸೆಯಿದೆಯೆಂದು ಒಪ್ಪಿಕೊಂಡರೂ ಇವರು ಬರೆದ ಶಾಸನಗಳಲ್ಲಿ ಕಾವ್ಯಾಂಶಕ್ಕೆ ಕೊರತೆಯಿಲ್ಲವೆಂದು ಹೇಳಬಹುದು. ಕೆಲವರಂತೂ

ವಿನಯನಿಧಿ ಪೇಳ್ದನೀ ಶಾ।
ಸನಕಬ್ಬನವತ್ತಿ ಹಂದಿಗೊಳ xxಜಿ ಹಿ।
ಟ್ಟಿನ ಸೇನಬೋವನೆನೆ ನೆಗ ॥
ಳ್ದನುಪಮ ಕಾಳಿದಾಸನುಚಿತವಿಳಾಸಂ॥[೧೨೪]
ದ್ರುಹಿಣಿ ವಿನಿರ್ಮಿತಮೆನೆ x ।
xಣಯತಂ ಬಾಣಗದ್ಯ (ವಾ)ಲಿಖಿತಪಿತಾ।
ಮಹನೆನ್ನೊರೆಯೊಳೊಪ್ಪಿರ।
ಲಹರ್ನ್ನಿಶಂ ಬರೆದನೆ x x x ಯ ಮಲ್ಲಂ॥[೧೨೫]

ಎಂಬ ವಾಕ್ಯಗಳಲ್ಲಿ ಒಬ್ಬನು ಕವಿತ್ವದಲ್ಲಿ ಕಾಳಿದಾಸನೆಂದು, ಇನ್ನೊಬ್ಬನು ಪದ್ಯದಲ್ಲಿ ದ್ರುಹಿಣಿ, ಗದ್ಯದಲ್ಲಿ ಬಾಣನೆಂದು ಹೇಳಿಕೊಂಡಿರುವರು. ಇದು ಶಾಸನ ಕವಿಗಳ ಸತ್ವಕ್ಕೆ ಉದಾಹರಣೆ.

ಇನ್ನು ಮೊತ್ತದೃಷ್ಟಿಯಿಂದ ವಿಚಾರಿಸಿದರೆ, ಈ ಒಬ್ಬೊಬ್ಬ ಕವಿ ಒಂದು ಇಲ್ಲವೆ ಹಲವು ಶಾಸನಗಳನ್ನು ಬರೆದಿರುವರು. ಅಂಥ ಶಾಸನಗಳನ್ನು ಗುಂಪುಗೊಳಿಸಿ ಅವರವರ ಶಾಸನಸಾಹಿತ್ಯ ಮೊತ್ತವನ್ನು ಗುರುತಿಸಬಹುದಾಗಿದೆ. ಕವಿ ಜನ್ನನು ಅಮೃತಾಪುರ ಮತ್ತು ಆನೆಕೆರೆ ಹೀಗೆ ೨ ಶಾಸನಗಳನ್ನು,[೧೨೭] ಚಿದಾನಂದ ಮಲ್ಲಿಕಾರ್ಜುನನು ಬಸುರಾಳಿನ ಎರಡು ಶಾಸನಗಳನ್ನು,[೧೨೮] ಬರೆದುದು ಸರ್ವಶ್ರುತ. ಶಾಂತಿನಾಥನೆಂಬವನು ಹಲವು ಶಾಸನಗಳನ್ನು ಬರೆದುದಾಗಿ ಕೆಳಗಣ ಉದಾಹರಣೆಗಳು ತಿಳಿಸುತ್ತವೆ.

---

೧೧೭. EC VII-ii ಸೊಬರ ೧೯ ಕೊಡಕಣಿ (೧೪೪೧)
೧೧೮. EC V-ii ಅರಸಿಕೆರೆ ೭೧ ಅರಸಿಕೆರೆ (೧೧೭೪)
೧೧೯. MASI XIII ೧೩ ನಂದವರ (೧೧೮೬)
೧೨೦. EC VII-i ಶಿಕಾರಿಪುರ ೧೦೫ ಬಳ್ಳಿಗಾವಿ (೧೧೮೯) (೧೧೯೩)
೧೨೧. EC V-ii ಅರಸಿಕೆರೆ ೧೨೩ ಹಾರನಹಳ್ಳಿ (೧೨೩೪)
೧೨೨. SII IV ೨೬೦ ಹಂಪೆ-ಬಳ್ಳಾರಿ ಜಿಲ್ಲೆ (೧೧೯೯)
೧೨೩. ARSIE ೧೯೫೩-೫೪ ನಂ. ೫೦; ಕಕಚ(೨೯೬೧) ಅನು. ೧ ಪು. ೫ ಪಂಚಲಿಂಗಾಲ (೧೦೬೮)
೧೨೪. JSI ೨೩೬-೩೯ ಇಂಗಳಗಿ-ಗುಲ್ಬರ್ಗಾ ಜಿಲ್ಲೆ (೧೦೯೪)
೧೨೫. SII XV ೧೨೮ ಚಿಕ್ಕಹಂದಿಗೋಳ-ಧಾರವಾಡ ಜಿಲ್ಲೆ (೧೧೭೪)
೧೨೬. SII XI-ii ೧೪೭ ಚಿಕ್ಕ ಹಂದಿಗೋಳ- ಧಾರವಾಡ ಜಿಲ್ಲೆ (೧೧೯೯)
೧೨೭. EC VI ತರಿಕೆರೆ ೪೫, ಅಮೃತಾಪುರ (೧೧೯೭) ಚನ್ನರಾಯಪಟ್ಟಣ ೧೭೯ ಆನೆಕೆರೆ (೧೧೯೦)
೧೨೮. EC III-i ಮಂಡ್ಯ ೧೨೧, ೧೨೨ ಬಸುರಾಳು (೧೨೩೬, ೧೨೩೭)

೧. ದಕ್ಷಿಣಸೋಮನ ಮಮ್ಮಂ।
ಲೊಕ್ಕಣಕವಿ ಶಾಂತಿನಾಥ ಕವಿಕುಳತಿಳಕಂ।
ದಾಕ್ಷಿಂಣ್ಯನಿಧಿಗುಣಾಕರ।
ಸಿಕ್ಷಾಗುರು ಹೇಳಿದನರ್ತಿಯಿಂ ಸಾಸನಮಂ॥[೧೨೯]

೨. ದಕ್ಷಿಣಹೇಂಮನ ಮಂಮಂ।
ಲಾಕ್ಷಣಗವಿ ಶಾಂತಿನಾಥ ಕವಿಕುಳತಿಳಕಂ।
ದಾಕ್ಷಿಣ್ಯನಿಧಿ ಗುಣೋತ್ಕರ।
ಸಿಕ್ಷಾಗುರು ಹೇಳ್ದನರ್ತಿಯಿಂ ಸಾಶನಮಂ॥[೧೩೦]

೩. ದಕ್ಷಿಣಸೋಮ ಮಂಮಂ।
ಲಾಕ್ಷಣಗವಿ ಶಾಂತಿನಾಥ ಕುವಿಕುಳತಿಳಕಂ।
ದಾಕ್ಷಿಣ್ಯನಿಧಿ ಗುಣೋತ್ಕರ।
ಸಿಕ್ಷಾಗುರು ಪೇಳ್ದನರ್ತಿಯಿಂದ ಸಾಸನಮಂ॥[೧೩೧]

ಇವು ಕ್ರಮವಾಗಿ ಕಣಿಕಟ್ಟೆ(1164), ಲಾಲನಕೆರೆ(1168), ಅರಸಿಕೆರೆ(1189) ಶಾಸನ ಪದ್ಯಗಳು. ಈ ಲಾಲನಕೆರೆ, ಅರಸಿಕೆರೆ ಶಾಸನಗಳಲ್ಲಿಯ "ಇದಿರಾದರಿ ಭೂಪಾಳರ" ಎಂಬ ಪದ್ಯ ಅರಸಿರೆಕೆ ತಾಲೂಕಿನ ಹಲ್ಲೂರ(1177),[೧೩೨] ಬೆಳೆಗುಂಬ (1195),[೧೩೩] ಹಿರಿಯೂರ(1206)[೧೩೪] ಶಾನಗಳಲ್ಲಿಯೂ ಇರುವುದರಿಂದ ಇವನ್ನೂ ಈತನೇ ಬರೆದಿರಬಹುದು. ಇದು ನಿಜವಿದ್ದಲ್ಲಿ ಶಾಂತಿನಾಥನು ಸುದೀರ್ಘವಾದ ಒಟ್ಟು ಆರು ಶಾಸನಗಳನ್ನು ಬರೆದನೆನ್ನಬೇಕಾಗುತ್ತದೆ. ಹೀಗೆಯೇ ತ್ರಿವಿವಿಕ್ರಮ ಪಂಡಿತನೆಂಬುವನು ಹಲವು ಶಾಸನಗಳನ್ನು ಬರೆದಿದ್ದಾನೆ.

೧. 'ತ್ರಿವಿಕ್ರಮಪಂಡಿತರ ಪದ್ಯ ತಲ್ಲಿಖಿತ। ಬೊಪ್ಪೊಜನ ಕಂಡರಣೆ'[೧೩೫]

೨. 'x x ಶಾಸನ ತ್ರಿವಿಕ್ರಮಪಂಡಿತರ ಪದ್ಯ ತಲ್ಲಿಖಿತ'[೧೩೬]

೩. ಬುಧನಿಧಿ ವಿವೇಕನಿಧಿ ಗುಣ।
ನಿಧಿಯಾದಿತ್ಯಾನುಜಂ ತದಂತೇವಾಸಂ।

---

೧೨೯. EC V-ii ಅರಸಿಕೆರೆ ೪೮ ಕಣಿಕಟ್ಟೆ (೧೧೮೯)

೧೩೦. EC IV-ii ನಾಗಮಂಗಲ ೩೦ ಲಾಲನೆಕೆರೆ (೧೧೬೪)

೧೩೧. KUJ. X ಅರಸಿಕೆರೆ ಶಾಸನ (೧೧೬೮)

೧೩೨. EC V-ii ಅರಸಿಕೆರೆ ೬೨ ಹಲ್ಲೂರ (೧೧೭೭)

೧೩೩. EC V-ii ಅರಸಿಕೆರೆ ೧೦೪ ಬೆಳಗುಂಬ (೧೧೯೬)

೧೩೪. EC V-ii ಅರಸಿಕೆರೆ ೧೦೬ ಹಿರಿಯೂರ (೧೨೦೭)
ಇವುಗಳಲ್ಲಿ ಕೊನೆಯ ಎರಡನ್ನು ನನ್ನ ಗಮನಸಕ್ಕೆ ತಂದವರು ಡಾ. ಎಸ್. ಶೆಟ್ಟರ್.

೧೩೫. MAR ೧೯೨೮ ನಂ. ೧೦ ಅರಸಿಕೆರೆ (೧೧೮೯?)

೧೩೬. EC V-ii ಅರಸಿಕೆರೆ ೯೦ ಅರಸಿಕೆರೆ (೧೧೮೮)

ಬುಧನಿಧಿ ವಿವೇಕನಿಧಿ ಗುಣ।
ನಿಧಿ ಬರೆದಂ ತ್ರಿವಿಕ್ರಮಾಂಕನೀ ಶಾಸನಮಂ॥[೧೩೭]

ಇವು ಕ್ರಮವಾಗಿ ಅರಸಿಕೆರೆ (೧೧೮೮), ಅರಸಿಕೆರೆ ೧೧೮೯), ಬಾಣಾವರ(೧೧೮೮) ಶಾಸನಗಳು. ಇವಲ್ಲದೆ ಅರಸಿಕೆರೆ ತಾಲೂಕಿನ ಕುರುವಂಕ(೧೧೮೫),[೧೩೮] ಬೆಂಡೆಕೆರೆ (೧೧೯೨)[೧೩೯] ಶಾಸನಗಳಲ್ಲಿಯೂ ಈತನ ಪದ್ಯಗಳಿರುವುದರಿಂದ ಇವನ್ನೂ ಈತನೇ ಬರೆದಿರಬಹುದು. ಸಾಲದುದಕ್ಕೆ ಅರಸಿಕೆರೆ ತಾಲೂಕಿನ ಬೊಮ್ಮೇನಹಳ್ಳಿಯ ಒಂದು ಶಾಸನ (೧೧೯೪)ದ ಕೊನೆಯಲ್ಲಿರುವ

ಹರಿಹರಸೂರಿ ಸೀಗುರಿಯ ಕಾವನ ತಮ್ಮನುಮೇಶದತ್ತ ವಾ।
ಗ್ವಿರಚಿಸಿದಂ, ತ್ರಿವಿಕ್ರಮಕವೀಶ್ವರನೂರ್ಜಿತವಾಣಿ ತಿಳ್ದಿ ತಾಂ।
ಬರೆದನುಪೇತ ಲಕ್ಷಣಗಣಂ, ಗುಣಿ ದಾಸಮನೊಪ್ಪುವನ್ನು ಕಂ।
ಡರಿಸಿದನಿನ್ನು ಶಾಸನದೊಳಾದುದಯಂ ಧರೆಗುತ್ತರೋತ್ತರಂ ॥[೧೪೦]

ಎಂಬ ಪದ್ಯದಿಂದ ಹರಿಹರಸೂರಿ ರಚಿತ ಶಾಸನಪಾಠವನ್ನು ಆತನು ಕಲ್ಲಮೇಲೆ ತೀಡಿದನೆಂದೂ ತಿಳಿದುಬರುತ್ತದೆ.

ಇವರಲ್ಲದೆ ಸಜ್ಜನತಿಲಕನೆಂಬುವನು ಸಿರಸಿಂಗಿ,[೧೪೧] ಕುಕನೂರು ಶಾಸನ;[೧೪೨] ಬಾಚನು ಕುಪ್ಪಗಡ್ಡೆ,[೧೪೩] ನೀಲೂರ ಶಾಸನ;[೧೪೪] ರಾಮದೇವನು ಹೊನ್ನಾಳಿಯ ೨೫ನೆಯ[೧೪೫] ಮತ್ತು ೫೦ನೆಯ ಶಾಸನ;[೧೪೬] ಮಲ್ಲಿಕಾರ್ಜುನ ಭಟ್ಟನು ಬಳ್ಳಿಗಾವಿಯ ಎರಡು ಶಾಸನ;[೧೪೭] ನಾಗದೇವನು ಕುರ್ತಕೋಟಿಯ ಎರಡು ಶಾಸನ;[೧೪೮] ಕಬ್ಬದ ನಾಗಮಯ್ಯನು ಕುರುಬೂರಿನ ಎರಡು ಶಾಸನ;[೧೪೯] ಮಧುಸೂದನದೇವನು ಹರಿಹರ, ಕೊಟ್ನಕಲ್ಲ ಶಾಸನ;[೧೫೦] ಮಾರಮರಸನು ಹಂಪೆ, ನಾಗೇನಹಳ್ಳಿ ಶಾಸನ;[೧೫೧] ಭಾಸ್ಕರನು ಪಟ್ಟಚೆರುವು, ನಂದವರ ಶಾಸನ;[೧೫೨] ಕಲಿದೇವಪಂಡಿತನು ಸಿರಸಂಗಿ, ಹುಲ್ಲತ್ತಿ ಶಾಸನ;[೧೫೩] ಮಲ್ಲಿನಾಥನು ಹುಮ್ಮಚದ ಎರಡು ಶಾಸನ[೧೫೪]ಗಳಿಗೆ

೧೩೭.EC V-iiಅರಸಿಕೆರೆ ೨೨ ಬಾಣಾವರ (೧೧೮೮)
೧೩೮.EC V-ii ಅರಸಿಕೆರೆ ೩೯ ಕುರುವಂಕ(೧೧೮೬)
೧೩೯.EC V-ii ಅರಸಿಕೆರೆ ೩೮ ಬೆಂಡೆಕೆರೆ (೧೨೦೦)
೧೪೦.EC V-ii ಅರಸಿಕೆರೆ ೧೧೮ ಬೊಮ್ಮೇನಹಳ್ಳಿ(೧೧೯೪)
೧೪೧.KI.I ನಂ. ೨೫ ಸಿರಸಂಗಿ-ಬೆಳಗಾವ ಜಿಲ್ಲೆ(೧೧೮೬)
೧೪೨.ಶಾಪ ೫೦ ಕುಕನೂರ-ರಾಯಚೂರು ಜಿಲ್ಲೆ (೧೧೭೦)
೧೪೩.ಕಕಚ(೧೯೬೧) ೫೩೧ ಕುಪ್ಪಗಡ್ಡೆ (೧೨೧೬)
೧೪೪.ಕಕಚ(೧೯೬೧) ಅನು ೨ ಪು ೯೩ ನೀಲೂರು(೧೨೧೫)
೧೪೫.ಕಕಚ(೧೯೬೧) ೩೦೬ (೧೨೦೮)
೧೪೬.ಕಕಚ(೧೯೬೧) ೩೦೬ (೧೧೮೦)
೧೪೭.EC VII ಷಿಕಾರಿಪುರ ೯೮ (೧೧೯೨) ಷಿಕಾರಿಪುರ ೯೯ (೧೧೧೨)
೧೪೮.ಕಕಚ(೧೯೬೧) ಅನು ೧ ಪು ೭ ಕುರ್ತಕೋಟಿ-ಧಾರವಾಡ ಜಿಲ್ಲೆ (೧೦೮೨, ೧೦೮೭)
೧೪೯. EC X ಚಿಂತಾಮಣಿ ೪೩, ೪೪ ಕುರುಬೂರು(೯೩೧)
೧೫೦. EC XI ದಾವಣಗೆರೆ ೪೧ ಹರಿಹರ (೧೧೪೭) MASI XIII ೧೦ (೧೧೪೦)
೧೫೧. SII IV ೨೬೦ ಹಂಪೆ (೧೧೯೯), SII IX-i ೨೯೮ ನಾಗೇನಹಳ್ಳಿ(೧೧೯೬)
೧೫೨. ಕಕಚ(೧೯೬೧) ೧೪೬ (೧೧೨೭) ಕಕಚ (೧೯೬೧) ೩೧೯ (೧೧೯೬)
೧೫೩. ಕಕಚ(೧೯೬೧) ಅನು ೧ ಪು ೧೮ (೧೧೪೮ ಮತ್ತು ೧೧೮೬)
೧೫೪. EC VIII-ii ನಗರ ೫೭ ಹುಮ್ಮಚ (೧೦೭೭) ಮತ್ತು ೫೮ ಹುಮ್ಮಚ (೧೦೬೨)

ಸಾಹಿತ್ಯಪಾಠವನ್ನು ಒದಗಿಸಿರುವರು. ಇದೇ ರೀತಿ ಒಬ್ಬೊಬ್ಬ ಕವಿಯ ಸಾಹಿತ್ಯ ಮೊತ್ತವನ್ನು ಒಂದು ಕಡೆ ಕಲೆಹಾಕಿ, ಅವರವರ ಸಾಹಿತ್ಯ ಪಾಲು ಮತ್ತು ಪ್ರಭಾವಗಳನ್ನು ನಿರ್ಣಯಿಸಿ ತನ್ಮೂಲಕ ಸಾಹಿತ್ಯಚರಿತ್ರೆಯಲ್ಲಿ ಅವರ ಒಟ್ಟು ಸ್ಥಾನವನ್ನು ಗುರುತಿಸಬೇಕು. ಆದರೆ ಕಲೆಹಾಕುವ ಭರದಲ್ಲಿ

ಅ. ೧. "ಶ್ರೀಕಂದರ್ಪನಂ ಕಾವ್ಯಂ"[೧೫೫]

೨. "ಚತುರ್ಭಾಷಾಕವಿ ಚಕ್ರವರ್ತ್ತಿ ಕವಿಕಂದರ್ಪಂ"[೧೫೬]

೩. ದೋಷವ್ಯತೀತಮರ್ಥವಿ।
ಶೇಷಮಿದೆನೆ ಪೇಳ್ದನೊಲ್ದು ಶಾಸನಮಂ ಪೀ।
ಯೂಷಸಮಸೂಕ್ತಿ ಚಾತು।
ರ್ಬ್ಭಾಷಾ ಕವಿಚಕ್ರವರ್ತಿ ಕವಿಕಂದರ್ಪಂ॥ [೧೫೭]

೪. "ಉಭಯಭಾಷಾಚಕ್ರವರ್ತಿ ಕಂಪರ್ದದೇವರ ಮದವಳಿಗೆ ಸೊನ್ನಾ
ದೇವಿಯರಮಗ ಕಾಣೂರ್ಗಣತಿಳಕನುಮಪ್ಪ ಬಾಳಚಂದ್ರದೇವರುಂ"[೧೫೮]

ಬ. ೧. "ವಾಗ್ವಧೂಮಂಡನಂ ಜಿನಪಾದಾಂಭೋಜಭೃಂಗಂ
ನಾಗಾರ್ಜುನ ಪಂಡಿತಂ ಬರೆದಂ"[೧೫೯]

೨. "ನಾರಾರ್ಜುನಪಂಡಿತರು ಪೇಳ್ದ ಕಬ್ಬಂ"[೧೬೦]

ಕ. ೧. ".......ಚಂದ್ರಭಟ್ಟಕವಿ ವಿರಚಿಸಿದಂ"[೧೬೧]

೨. ".......ವಿಸ್ತರಿಸಿ ತಿರ್ದಿದರ್ ವಾಕ್ಪತಿ ಚಂದ್ರಭಟ್ಟರುಂ ಗುರು
ಬಳಭದ್ರದೇವರು"[೧೬೨]

ನಾಮಸಾಮ್ಯರೂಪದ ಇಂಥ ಹೇಳಿಕೆಗಳಲ್ಲಿಯ ಪರಸ್ಪರ ಸಂಬಂಧವನ್ನು ಸಾವಧಾನ ಚಿತ್ತದಿಂದ ನಿರ್ಣಯಿಸಬೇಕು. ಇದಲ್ಲದೆ ಈ ನಾಗಾರ್ಜುನ, ಚಂದ್ರಭಟ್ಟ ಮೊದಲಾದವರ ಮತ್ತು ಇದೇ ಹೆಸರಿನ ಸುಪ್ರಸಿದ್ಧ ಕವಿಗಳ ಸಂಬಂಧದ ಸಾಧ್ಯತೆಯನ್ನೂ ನಾಮಸಾಮ್ಯಕ್ಕೆ ಮಾರು ಹೋಗದೆ ನಿರ್ಧರಿಸಿ ಹೇಳಬೇಕು. ಇಂಥ ಹಲವು ನಿರ್ಣಯಗಳಿಂದ ಕನ್ನಡ ಕವಿಚರಿತೆಯ ನೂರಾರು ತೊಡಕುಗಳು ಬಿಡುವ ಸಂಭವವಿದೆ.

---

೧೫೫. ಕಕಚ(೧೯೬೧) ಅನು ೧ ಪು. ೨ ಕಳ್ಳಿಹಾಳ-ಧಾರವಾಡ ಜಿಲ್ಲೆ (೧೭೧೯)
೧೫೬. ಶಾಪ ೨೨ ಕೌಲೂರು-ರಾಯಚೂರು ಜಿಲ್ಲೆ (೧೧೭೭ ?, ೧೧೮೮?)
೩೧೭. ಕಕಚ (೧೯೬೧) ೩೭೦ ಬೆಳಗಾವ. ಬೆಳಗಾವ ಜಿಲ್ಲೆ (೧೨೦೪)
೧೫೮. MAR ೧೯೪೭-೫೬ ಪು. ೯೧
೧೫೯. Jainism in South India ಪು. ೨೩೬-೩೯ ಇಂಗಳಗಿ-ಗುಲ್ಬರ್ಗಾ ಜಿಲ್ಲೆ (೧೦೯೪)
೧೬೦. SII XI-ii ೧೭೭ ಮುಗದ-ಧಾರವಾಡ ಜಿಲ್ಲೆ (೧೧೨೫)
೧೬೧. SII XI-ii ೧೪೬ ಕೋಟವುಮಚಗಿ -ಧಾವಾಡ ಜಿಲ್ಲೆ(೧೧೯೯)
೧೬೨. EI XI ೮೩ ಹೊಟ್ಟೂರು-ಧಾರವಾಡ ಜಿಲ್ಲೆ (೧೦೬೭)

ಆಕರ : ಮಾರ್ಗ ಸಂಪುಟ–೨

೪೬

ಶಾಸನ ಲಿಪಿಕಾರರು

'ಬಳಸಿ ಬರೆಯಲು ಕಂಟ ಪತ್ರದ ಉಲುಹುಗೆಡದಗ್ಗಳಿಕೆ' ಎಂಬುದು ಕವಿ ಕುಮಾರವ್ಯಾಸನು ವೀರನಾರಾಯಣನ 'ಲಿಪಿಕಾರ'ನಾಗಿ ಹೇಳಿದ ಒಂದು ಅರ್ಥವತ್ತಾದ ಮಾತು. ಕೆಲವು ಶಾಸನ ಲಿಪಿಕಾರರಿಂದಲೂ ಉದ್ಘೋಷಿಸಲ್ಪಟ್ಟ ಇಂತಹ ಉತ್ಕಟ ಅಗ್ಗಳಿಕೆಗಳನ್ನು ಗಮನಿಸಿ, ಶಾಸನನಿರ್ಮಾಣಕಾರ್ಯದಲ್ಲಿ ಅವರು ನಿರ್ವಹಿಸಿದ ಪಾತ್ರವನ್ನೂ ಅವರ ರೋಚಕ ಹಸ್ತಕೌಶಲ, ರೋಮಾಂಚಕ ಹಸ್ತಸಾಮರ್ಥ್ಯಗಳನ್ನೂ ಅರಿಯಬಹುದಾಗಿದೆ.

ಆನೆಕೆರೆ ಶಾಸನದ ಕೊನೆಯ 'ಜನ್ನಯ್ಯನ ಕವಿತೆ, ದಾವಣ್ಣನ ಬರಪ, ಮಲ್ಲೋಜನ ಕಂಡರಣೆ'[೧] ಎಂಬ ಮಾತಿನಿಂದ, ಒಂದು ತಾಮ್ರಫಲಕ ಇಲ್ಲವೆ ಶಿಲಾಫಲಕ ಶಾಸನವಾಗುವಲ್ಲಿ ಸಾಮಾನ್ಯವಾಗಿ ಕವಿ, ಲಿಪಿಕಾರ, ರೂವಾರಿಗಳು ಅವಶ್ಯವೆಂದು ತಿಳಿದುಬರುತ್ತದೆ. "ಪತ್ರಶಾಸನವ ನೋಡ ಬರದ ಆಚಾರಿ ಮನಸೋಜ"[೨]; "ಮೃದುರೇಖಾವಿಳಾಸ ಚಾವರಾಜ ಬಹಳದಲ್ಬರೆದುದ .... ಗಂಗಚರಿ ಕಂಡರಿಸಿದಂ"[೩] ಎಂಬ ಮಾತುಗಳಿಂದ ಎಲೆಯ ಮೇಲೆ ಬರೆದು ತಂದ ವಿಷಯವನ್ನು ಲಿಪಿಕಾರ ಬಳಪದಿಂದ ಶಿಲೆಯ ಮೇಲೆ ತೀಡಿದ ತರುವಾಯ, ರೂವಾರಿ ಅದನ್ನು ಕಂಡರಿಸುತ್ತಿದ್ದುದು ಸಾಮಾನ್ಯ ಪದ್ಧತಿಯೆಂದು ಗೊತ್ತಾಗುತ್ತದೆ. ಆದರೆ "ಕುಬ್ಜಂ ಸ್ವಕಾವ್ಯಮಿದಶ್ಮತಲೇ ಲಿಲೇಖ,"[೪] 'ಹುಲಿಗೆಜೆಯ ಬಮ್ಮೋಜ ತಾನೆ ಬರೆದು ತಾನೆ ಕಂಡರಿಸಿದ'[೫] ಎಂಬಲ್ಲಿ ಕವಿ ಕುಬ್ಜ ಮತ್ತು ರೂವಾರಿ ಬಮ್ಮೋಜರು ಲಿಪಿಕಾರನ ಕಾರ್ಯವನ್ನೂ ಮಾಡಿದ್ದಾರೆ. ಆದರೆ ಮೂರು ಕಾರ್ಯ ಒಬ್ಬನೇ ಮಾಡಿದ, ಕವಿಯೇ ಕಂಡರಿಸಿದ ಉಲ್ಲೇಖ ಮಾತ್ರ ಇನ್ನೂ ಗೊತ್ತಾಗಿಲ್ಲ.

ಶಾಸನಗಳಲ್ಲಿ 'ಬರೆದಂ', 'ಲಿಖಿಸಿದಂ' ಎಂಬ ಪದಗಳ ಬಳಕೆ ಕಟ್ಟುನಿಟ್ಟು ಇಲ್ಲದೆ ಒಮ್ಮೊಮ್ಮೆ ಕವಿ, ಲಿಪಿಕಾರ ಮತ್ತು ರೂವಾರಿಗಳೂ ಆರೋಪಿತವಾಗಿವೆ. ಹೀಗಾಗಿ ಶಾಸನಗಳಿಂದ ಲಿಪಿಕಾರನನ್ನು ಬೇರಳಿಟ್ಟು ಗುರುತಿಸುವುದು ಕಷ್ಟದ ಕಾರ್ಯ. ಅಂತಹ ಪ್ರಮಾದವಾಗದಂತೆ ಎಚ್ಚರವಹಿಸುವುದು ಅವಶ್ಯ.

---

೧. EC V -ii ಚನ್ನರಾಯಪಟ್ಟಣ ೧೭೮ ಆನೇಕೆರೆ (೧೧೯೦)

೨. EC III ಮಂಡ್ಯ ೭೦ ಬೂದನೂರ (೧೨೧೬) ("ಪೊಲದ ಸೀಮೆಯಲ್ಲಮಂ ಒ[ಓ]ಲೆಯೊಳ್ಬರೆಂದು....ನ್ನು ಕಲ್ಲಶಾಸನಮಾಗೆ ಬರೆದುಕೊಂಡೆಮು" - EC III ನಂಜನಗೂಡ ೧೩೯ - ಎಂಬ ವಾಕ್ಯವನ್ನೂ ಗಮನಿಸಬೇಕು.)

೩. EC II ೧೨೭ ಶ್ರವಣಬೆಳ್ಗೊಳ (೧೧೧೫)

೪. EI VIII ೨೪ ತಾಳಗುಂದ (೫ನೆಯ ಶತಮಾನ)

೫. SII XX ೭೬ ಬಾಳಂಬೀಡ -ಧಾರವಾಡ ಜಿಲ್ಲೆ (೧೧೧೮)

"ಶ್ರೀ ಜಿಡೆಯ ಸಂಕರದೇವರ ಮಲ್ಲಯ್ಯ ಬರದ,"[೬] "ಹೆಗ್ಗಡೆ ಬಮ್ಮದೇವನ ಅಳಿಯ ನಾಗದೇವನ ಬರಹ,"[೭] "ಜಕ್ಕಿಮಯ್ಯನ ಮರ್ಮ್ಮಂ ಮಹಾದೇವಯ್ಯನ ಬರಪ",[೮] "ಬರೆದಂ ಬೊಂಮಣಪಂಡಿತರ ವರತನಯಂ"[೯], "ಸಕಲಚನ್ದ್ರಪಣ್ಡಿತ ದೇವರ ಗುಡ್ಡ ಮಲ್ಲಣಂ ಬರೆದಂ"[೧೦], "ಕೊಳೂರ ಬಾಚಣ್ಣಂ ಬರೆದಂ,"[೧೧] "ಬರೆವರಾಚಾರ್ಯ ಸೂರ್ಯಣ್ಣಂಗಳ ಶಿಷ್ಯ ಬಾಚಯ್ಯನ ಬರಪ"[೧೨] ಎಂದು ಲಿಪಿಕಾರರು ತಮ್ಮ ಹೆಸರಿನೊಂದಿಗೆ ಆರಾಧ್ಯದೇವತೆ, ಧರ್ಮ್ಮಗುರು, ಲಿಪಿವಿದ್ಯಾಗುರು, ತಂದೆ, ಅಜ್ಜ, ಮಾವ, ಊರು ಇತ್ಯಾದಿ ಸಂಬಂಧಗಳನ್ನೂ ಹೇಳುತ್ತಾರೆ. ಇವರಲ್ಲಿ ಸಂಧಿವಿಗ್ರಹಿ, ಪಟ್ಟಣಸ್ವಾಮಿಗಳಂತಹ ಪ್ರತಿಷ್ಠಿತರು; ಕುಳಕರಣಿ, ಸೇನಬೋವ, ಶ್ರೀಕರಣ, ಕಾಯಸ್ಥ, ಗಾವುಂಡ, ಗಣಕರಂತಹ ಅಧಿಕಾರಿಗಳು, ಮಿಕ್ಕ ಸಾಮಾನ್ಯಪ್ರಜೆಗಳು -ಎಂಬ ಅಕ್ಷರಜ್ಞರೆಲ್ಲ ಕಂಡುಬರುತ್ತಾರೆ. ಆದರೆ ಲಿಪಿಕಾರ್ತಿಯರ ಉಲ್ಲೇಖ ಮಾತ್ರ ಎಲ್ಲಿಯೂ ಕಂಡುಬರುವುದಿಲ್ಲ. ಈ ಪ್ರಸಗಂದಲ್ಲಿ "ಕಚಿವಯ ಕಾಳಿಸೆಟಿ..................ಳಿಯ ಹದಿಸೆಟ್ಟಿಯಕವ್ವೆಯ ಬರಪ"[೧೩] ಎಂಬುದು ಗಮನಾರ್ಹ ಉಲ್ಲೇಖ. ಇದು ಅಪಪಾಠವಿರದ ಪಕ್ಷದಲ್ಲಿ ಈಗ ತಿಳಿದ ಮಟ್ಟಿಗೆ 'ಹದಿಸೆಟ್ಟಿಯಕವ್ವೆ' ಕಲ್ಲಮೇಲೆ ಅಕ್ಷರ ತೀಡಿದ ಏಕೈಕ ಮಹಿಳೆಯೆನ್ನಬೇಕಾಗುತ್ತದೆ.

ಪರಹಿತರಿನ್ನೂರ್ವ್ವರ ಪದ।
ಸರಸಿರುಹಾಮೋದಮಧುಕರ ಶಿವಭಕ್ತಂ।
ಕಚಿವತಿಶಯವಾಗಿರೆ ವಿ।
ಸ್ತರದಿಂ ಕುಳಕರಣಿ ಮಾಬಲಾರ್ಯಂ ಬರೆದಂ।[೧೪]

"ಅದಿಮಧ್ಯಾವಸಾನಂಬರಂ ನಿರ್ವಿಘ್ನದಿಂದ ಬರೆದಂ...... ನರಸಿಂಗದೇವ"[೧೫]

"ಶ್ರೀ ಮತ್ಪಣ್ಡರಂಗೇಸ್ವರ ದೇವರ್ಗ್ಗೆ ಮಹಾಭಕ್ತಿಯಿಂ ಶಾಸನಂ ಬರೆದಂ
ಸೇನಬೋವ ಅಪ್ಪಣಂ"[೧೬]

"ನ್ಯೂನಾಕ್ಷರಮಧಿಕಾಕ್ಷರೌ ವಾ ತತ್ಸರ್ವಂ ಪ್ರಮಾಣಮಿತಿ"[೧೭]

"ಪಂಡಿತರು ಗುಣದೊಷಂಗಳು ಕ್ಷಮಿಸುವುದು.....[೧೭ಅ]

---

೬. EC III ಮಂಡ್ಯ ೮೩ ಮರಡಿಪುರ (೧೩೦೫?)
೭. EC III ತಿರುಮಕೂಡ್ಲ ೧೦೬ ತುಂಬಲ (ಡಿ೧೧೮೦)
೮. SII XI-i ೮೪ ಹೊಂಬಳ-ಧಾರವಾಡ ಜಿಲ್ಲೆ (ಡಿ೧೦೪೯)
೯. EC IV-ii ಎಳಂದೂರ ೧ ಎಳಂದೂರ (೧೬೫೪)
೧೦. EC VIII ನಗರ ೫೮ ಹುಮ್ಮಚ (೧೦೬೨)
೧೧. SII IX-i ಡಿ೨೯೮ ನಾಗೇನಹಳ್ಳಿ-ಬಳ್ಳಾರಿ ಜಿಲ್ಲೆ (೧೧೯೬)
೧೨. EC VI ತರಿಕೆರೆ ೨೦ ಬಾಣಾವರ (೧೧೮೫)
೧೩. KI IV ೩೪ ನೂಲಗೇರಿ-ಧಾರವಾಡ ಜಿಲ್ಲೆ (೧೧೧೯)
೧೪. SII XI-ii ೧೨೭, ೧೩೩, ಡಿ೧೩೪ ಕುರ್ತಕೋಟಿ-ಧಾರವಾಡ ಜಿಲ್ಲೆ (ಡಿ೧೦೮೨, ೧೦೮೭)
೧೫. KI II ೧೬ ಅಕ್ಕಲಕೋಟೆ -ಸೊಲ್ಲಾಪುರ ಜಿಲ್ಲೆ (೧೧೨೨)
೧೬. KI IV ೩೨ ಬಾಳಂಬೀಡ-ಧಾರವಾಡ ಜಿಲ್ಲೆ (೧೦೮೮)
೧೭. KI IV ೪೮ ಮಡಲೂರ-ಧಾರವಾಡ ಜಿಲ್ಲೆ (೧೨೪೭)
೧೭ಅ. AP GOvt Ar Series XIII ಪು. ೧೦೭ ಅಲಂಪೂರ

ಎಂಬ ಮಾತುಗಳು ನಮ್ಮ ಲಿಪಿಕಾರರ ಭಕ್ತಿಭಾವ, ಪ್ರಾಮಾಣಿಕ ಪ್ರಜ್ಞೆ, ನಮ್ರಮನಸ್ಸುಗಳನ್ನು ವ್ಯಕ್ತಪಡಿಸುತ್ತವೆ. ಇಂತಹ ಮನೋಭಾವದಿಂದ ನಮ್ಮ ನಾಡಿನ ಸುಮಾರು ೨೫೦೦೦ ಶಾಸನಗಳನ್ನು ಬರೆದ ಲಿಪಿಕಾರರಲ್ಲಿ ದೈವದತ್ತವಾದ ಲಿಪಿಸೌಂದರ್ಯಸೌಭಾಗ್ಯವನ್ನು ಪಡೆದವರು ಕೆಲವರೇ. ಈ ಸೌಂದರ್ಯವನ್ನು ಸಾಧಿಸಬೇಕಾದರೆ ಕನ್ನಡ ಅಕ್ಷರಗಳ ಅವಯವಜ್ಞಾನ, ಅವಯವ ಪ್ರಮಾಣಜ್ಞಾನ ಅತ್ಯವಶ್ಯ.

ಪೊಕ್ಕಳು ತಲೆಕಟ್ಟುಮನ।
ನನ್ತರದವಯವಮನಱಿದು ಖಂಡರಿಸುಲುಕೀ।
ಇಕ್ಕುಡನೆ ಬಲ್ಲನಱಿಯ।
ರ್ಮಿಕ್ಕವರೆನ್ಸೊಸೆದು ಧರಣಿ ಬಣ್ನಿಸುತಿಕ್ಕುಂ॥[೧೮]

ಕನ್ನಡ ಅಕ್ಷರಗಳ ಅಂಗತ್ರಯಗಳನ್ನು ಪೊಕ್ಕಳು(=ಅಕ್ಷರದ ಮುಖ್ಯಭಾಗ), ತಲೆಕಟ್ಟು ಮತ್ತು ಅನಂತರದ ಅವಯವ ಎಂದು ಶಾಸ್ತ್ರೀಯವಾಗಿ ಬಿಡಿಸಿ ಹೇಳುತ್ತದೆ, ಈ ಪದ್ಯ. ಕನ್ನಡ ಅಕ್ಷರಗಳ ಶರೀರ ರಚನೆಯನ್ನು ಕುರಿತು ಈ ಬಗೆಯ ಶಾಸ್ತ್ರೀಯ ಹೇಳಿಕೆ ಮತ್ತೆಲ್ಲಿಯೂ ಕಂಡುಬರುವುದಿಲ್ಲ. ಇದು ಲಿಪಿಕಾರ ಅರಿಯಬೇಕಾದ ಮೊದಲ ತತ್ವ.

ಬಹುರೇಖೆಯಾಗಿ ಬಾರದೆ।
ಯತಿನಿಬಿಡಂ ನೋರ್ಪ(ನೇರ್ಪ)ಡೆಲ್ಲರುಂ ಹೊಗಳಲುಕೀ।
ವಸ್ಮತಿ (=ವಸುಮತಿಯೊಳು) ಕಣ್ಗೊಳಿಸಲು।
ಕತಿ ಬಲ್ಲಂ ದಾಸೋಜನಗ್ರತನಯಮ್ಮಸಣಂ ॥[೧೯]

ಬಹುರೇಖೆಯಾಗಿ ಬಾರದೆ ಅಂದರೆ ರೇಖೆ ಬಳಸಿಬರುವಂತೆ, ಯತಿನಿಬಿಡಂ ನೇರ್ಪಡೆ ಅಂದರೆ ಮಧ್ಯಮಧ್ಯ ಯೋಗ್ಯಸ್ಥಳವಿರುವಂತೆ, ಅಕ್ಷರಗಳನ್ನು ಬರೆಯಬೇಕು-ಎಂಬ ಈ ಮಾತು ಕನ್ನಡ ಅಕ್ಷರಗಳ ಆಕಾರಜ್ಞಾನ, ವಿನ್ಯಾಸವಿಧಾನಗಳನ್ನು ತಿಳಿಸಿಕೊಡುತ್ತದೆ. ಈ ಸಾಮಾನ್ಯತತ್ವಗಳಿಗೆ ಹೆಚ್ಚಿನದಾಗಿ ತಂತಮ್ಮ ವ್ಯಕ್ತಿವಿಶಿಷ್ಟ ಸೌಂದರ್ಯಪ್ರಜ್ಞೆಯನ್ನೂ ಪೂರೈಸಿ

"ಬಿಂದುವಿನೊಂದು ಶೋಭೆ, ತಲೆಕಟ್ಟಿನ ಪೊರ್ಕುಟಿ ಚೆಲ್ವು ಮಾತ್ರೆಯೊಳ್।
ನಿಂದ ಬೆಡಂಗು, ಬಳ್ಳಿಯಳೊಡಂಬುತಿರ್ಪ ನಯಂ, ವಿಸರ್ಗದೊ।
ಳ್ಪೊಂದಿರಲ್.................."[೨೦]

ನವಿಲ್ಗುಂದದ ಮಾದಿರಾಜನಂತೆ ಅಕ್ಷರಗಳನ್ನು ಅಂದಗೊಳಿಸಬೇಕು. ಇಷ್ಟು ಹಿನ್ನೆಲೆಯೊಂದಿಗೆ ಕರ್ನಾಟಕದ ಶಾಸನಲಿಪಿಕಾರರನ್ನು ಅಭ್ಯಸಿಸಬಹುದು.

---

೧೮. EC XI ದಾವಣಗೆರೆ ೧೪೯ ಕೊಡಗನೂರ (೧೧೧೩)

೧೯. EC V-ii ಅರಸಿಕೆರೆ ೧೨೭ ತಳಲೂರ (೧೧೮೫) (ಈ ಇಕ್ಕುಡ ಮತ್ತು ಮಸಣರು ಲಿಪಿಕಾರರಲ್ಲ, ರೂವಾರಿಗಳು. ಅಕ್ಷರದ ಶರೀರರಚನೆಯನ್ನು ಹೇಳಿದ ಕಾರಣ ಈ ಪದ್ಯಗಳನ್ನು ಸ್ವೀಕರಿಸಲಾಗಿದೆ.)

೨೦. ಕಕಚ (೧೯೬೧) ಪು. ೪೬೨

'ಅಕ್ಷಾರದ ಗೋಪಂಣನ ಬರಹ'[೨೧] ಎಂಬಲ್ಲಿ 'ಅಕ್ಷರ' ಗೋಪಣ್ಣನಿಗೆ ಅಡ್ಡ ಹೆಸರಿನಂತೆ ಶೋಭಿಸಿದೆ. ಅಕ್ಷರಜ್ಞನೆಂಬ ಸಾಮಾನ್ಯಾರ್ಥವಿರದೆ ಸುಂದರ ಅಕ್ಷರಜ್ಞನೆಂಬರ್ಥದಲ್ಲಿ ಈ ಹೆಸರು ಬಂದಿರಬೇಕು. "ಶಿಲಾಶಾಸನವಂ ಬರದಂ....... ಶಾಸನ ವಾಚಕ ಚಕ್ರವರ್ತಿ ಪುಣ್ಯಸಮ್ಮರ್ಂ"[೨೨] ಎಂಬ ಮಾತು ರಾಜಾಜ್ಞೆಯೋದುವವನೆಂದು ಅಥವಾ ಶಾಸನವೋದುವವನೆಂದು ಅರ್ಥಕೊಡುತ್ತದೆ. ಅದೇನೇ ಇದ್ದರೂ ಈ ಲಿಪಿಕಾರನೊಬ್ಬ 'ವಾಚಕಚಕ್ರವರ್ತಿ' ಎಂದು ಹೇಳಬಹುದು.

"ಘಂಟೆಯಂಮನ ಸುಹಸ್ತದ ಬರಹ"[೨೩]
"ಶಾನಭೋಗ ಲಕ್ಷ್ಮ್ರಪತ್ತಿ(ಲಕ್ಷ್ಮೀಪತಿ)ಶುಹಸ್ತಬರಹವು"[೨೪]
"ಸ್ವಸ್ತಿ ಶ್ರೀ ಭರತಯ್ಯನ ದಿವ್ಯಲಿಖಿತ"[೨೫]

ಎಂಬ ಮಾತುಗಳಿಂದ ಪವಿತ್ರಹಸ್ತದ ಬರಹವೆಂಬ ಇಲ್ಲವೆ ಸುಲಕ್ಷಣ ಬರಹವೆಂಬ ಅರ್ಥ ಹೊರಡುತ್ತದೆ. ಇಂತಹ ಲಿಪಿಕಾರರಲ್ಲಿ "ಶ್ರೀಮನ್ಮಲ್ಲಿನಾಥಂ ಬಿರುದ ಲೇಖಕ ಮದನ ಮಹೇಶ್ವರಂ ಬರದ"[೨೬] "ಕೊಮ್ಮರಾಜಂ ಬರೆವರ ಬದಗಂ ಭಾರತೀಕರ್ಣಪೂರಂ"[೨೭] ಎಂದು ಹೇಳಿಕೊಂಡ ಮಲ್ಲಿನಾಥ ಮತ್ತು ಕೊಮ್ಮರರಾಜರ ಬಿರುದುಗಳು ಇವರ ಲಿಪಿಸೌಂದರ್ಯಸಿದ್ಧಿಯನ್ನು ಸಾರುತ್ತವೆ. ಇಂತಹ ಇನ್ನೊಬ್ಬ ವ್ಯಕ್ತಿ ಸೂರ್ಯಣ. ಜಕ್ಕೇನಹಳ್ಳಿ, ಬೇಲೂರು, ವೀರದೇವನಹಳ್ಳಿ ಶಾಸನಗಳಿಗೆ ಲಿಪಿ ಒದಗಿಸಿದ ಈತನು

"ಬರವರಾಚಾರ್ಯ ಸೂಯ್ರ್ಯಗಣಂ ಬರದ"[೨೮]
"ಸೂಯ್ರ್ಯಣಂ ಬಿರುದು ಲೇಖಕ ಮದನಮಹೇಶ್ವರ"[೨೯]
"ಬರವರಾಚಯ್ರ್ಯಂ ಸೂಯ್ರ್ಯಣಂ ಬಿರುದಲೇಖಕ ಮದನಮಹೇಶ್ವರಂ"[೩೦]

ಎಂದು ಹೇಳಿಕೊಂಡಿದ್ದಾನೆ. 'ಬರವರಾಚಯ್ರ್ಯ', 'ಬಿರುಲೇಖಕ ಮದನಮಹೇಶ್ವರಂ' ಎಂಬಿವು ಈತನ ಅರ್ಥಪೂರ್ಣ ಬಿರುದುಗಳು. ಇವನ ಶಿಷ್ಯ ಬಾಚಯನು "ಬರವರಾಚಾರ್ಯ ಸೂಯ್ರ್ಯಣ್ಣಗಳ ಶಿಷ್ಯ ಬಾಚಯನ ಬರಪ"[೩೧] ಎಂದು ನುಡಿಯುತ್ತ ಗುರು ಸೂರ್ಯಣನನ್ನು ಅಭಿಮಾನದಿಂದ ಸ್ಮರಿಸಿದ್ದಾನೆ.

---

೨೧. EC IV-ii ಚಾಮರಾಜನಗರ ೬೪ ಹೊಮ್ಮಗ್ರಾಮ (೧೩೮೦)
೨೨. EC IX ನೆಲಮಂಗಲ ೧ ಸೋಲದೇವನಹಳ್ಳಿ (೧೦೨೯)
೨೩. EC VIII-ii ತೀರ್ಥಹಳ್ಳಿ ೯೮ ಕವಲೇದುರ್ಗ (೧೬೬೯)
೨೪. EC XI ಮೊಳಕಾಲ್ಮುರು ೨೫ ಸಂತೇಗೋವಿಗ್ರಾಮ(೧೬೬೫)
೨೫. EC VIII-ii ಸೊರಬ ೨೧೬ ಕೆರೆಹಳ್ಳಿ(?)
೨೬. EC VI ಮೂಡಗೆರೆ ೨೨ ಹಂತೂರ(೧೧೨೯)
೨೭. EC VII ಶಿಕಾರಿಪುರ ೨೯೩ ತುಂಬರಹೊಸೂರ (೧೦೮೦)
೨೮. EC V-ii ಬೇಲೂರ ೭೨ ಬೇಲೂರ (ಸು. ೧೨೦೦)
೨೯. EC VI ಕಡೂರ ೧೪೯ ಆಸಂದಿ (೧೨೦೫)
೩೦. EC V-ii ಬೇಲೂರ ೧೭೫ ವೀರದೇವನಹಳ್ಳಿ(೧೧೮೬)
೩೧. EC VI ತರೀಕೆರೆ ೨೦ ಬಾಣಾವರ (೧೦೮೫)

ಮದವದರಿ ಬಿರುದಲೇಖಿಕ।
ಮದಗಜಬಿದುವಿದಳನ ಸಿಂಹನ ತನಯಾ ವಿನಯಾ ॥
ಸ್ಪದ ಲಿಖಿತಜನಸುಮಿತ್ರಂ।
ಮೃದುಲಲಿತವಿಚಿತ್ರ ಲಿಖಿತಲೇಖಂ ಸುಬ್ಬಂ॥[೩೨]

ಇಲ್ಲಿ ತಂದೆ "ಮದವದರಿಬಿರುದುಲೇಖಿಕ ಮದಗಜಬಿದುವಿದಳನಸಿಂಹ" ಎಂದೂ, ಮಗ ಸುಬ್ಬ "ಲಿಖಿತಜನಸುಮಿತ್ರಂ ಮೃದುಲಲಿತವಿಚಿತ್ರಲಿಖಿತಂ"ಎಂದೂ ಕೀರ್ತಿತರಾಗಿದ್ದಾರೆ.

ಸುಲಲಿತಕೆಯೆನಲು ವಾ।
ಗ್ಲಲನೆಯ ಹಾರದವೊಲೊಪ್ಪಿ ಬರೆದಂ ಭೂದೇ॥
ವಲಲಾಮಂ ಕಿಸುವಾಯರ।
ಕುಳತಿಳಕಂ ರೂಪಝುಷಕಪತಾಕಂ ತೀಕಂ॥[೩೩]

ಈ ತೀಕನ ಮಗನಾಗಿರಬಹುದಾದ ರುದ್ರದೇವನು, "ಬರುವರ ಮಿತ್ರ ತೀಕನ ..... ಪುತ(ತ್ರ) ರುದ್ರದೇವನ ಬರಹ"[೩೪] ಎಂದು ಸುಂದರಲಿಪಿಜ್ಞನಾದ ತನ್ನ ತಂದೆಯ ಹೆಸರನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಹೀಗೆ ಗುರುವಿನಿಂದ ಶಿಷ್ಯ, ತಂದೆಯಿಂದ ಮಗ ಅಕ್ಷರಸೌಂದರ್ಯಕಲೆಯನ್ನು ಕಾಪಾಡಿಕೊಂಡುಬಂದುದು ಗಮನಾರ್ಹವಾಗಿದೆ.

ಮೇಲೆ ಹೇಳಿದ "ಮೃದುಲಲಿತವಿಚಿತ್ರಲಿಖಿತ"ನಾದ ಸುಬ್ಬ "ಮೃದುರೇಖಾವಿಳಾಸ"ನಾದ ಚಾವರಾಜರಂತೆ "ಲಿಖಿತಂ ರುಚಿರಾಕ್ಷರಂ"[೩೫] ಎಂದು ಹೇಳಿಕೊಂಡ ಇನ್ನೊಬ್ಬ ಅನಾಮಧೇಯ ಲಿಪಿಕಾರ,

ಸಮವೃತ್ತಶ್ಲೋಕತಂಗಳು।
ಸಮಸ್ತ ಸಂಪತ್ಕರಂಗಳತಿ ನಿಬಿಡಂಗಳು।
ಕಮನೀಯ ಮೃದುಸುರೇಖಾ।
ರಮಣಂಗಳು ನೆಗಟ್ದಿ ಬಸವರಾಜನ ಬರಪಂ।[೩೬]

ಎಂದು ಹೆಸರಾದ ಬಸವರಾಜ,

ಒನ್ದೊನ್ದಂ ಪೊರಟ್ಚಿರ್ಕಿ ಕರಂ।
ಮನ್ದ ಸಂಚ್ಛನ್ನವೆನಿಸಿ ಬರೆಯದೆ ಪಲರ್ಗಂ॥
ಸನ್ದೇಹಮಲ್ಲದನ್ತಿರೆ ।
ಜಿನಭಕ್ತ ಮುದ್ದಿಗಾಂಕಂ ಬರೆಗುಂ॥ [೩೭]

---

೩೨. ಕಕಚ (೧೯೬೧) ಅನು. ೧ ಪು. ೨೨ ಅಸುಂಡಿ -ಧಾರವಾಡ ಜಿಲ್ಲೆ (೧೧೮೦)
೩೩. KI V ೨೬ ನರಗುಂದ-ಧಾರವಾಡ ಜಿಲ್ಲೆ (೧೧೪೭)
೩೪. EC VI ಕಡೂರ ೪ ಕುಪ್ಪೆಹಾಳ (೧೧೭೩)
೩೫. MAR ೧೯೨೫ ನಂ. ೩೪ ಹೆರಗು-ಹಾಸನ ಜಿಲ್ಲೆ
೩೬. EC IV - ii ಅರಸಿಕೆರೆ ೭೧ ಅರಸಿಕೆರೆ (೧೧೭೪)
೩೭. EC XI ದಾವಣಗೆರೆ ೧೪೯ ಕೊಡಗನೂರ (೧೧೧೩)

ಎಂದು ಹೇಳಿಕೊಂಡ ಮುದ್ದಿಗಾಂಕ,

ಮುನ್ನೀರ್ಬಳಸಿರೆ ಧರಣಿಯೊ।
ಳಿ[ನ್ನುಂ] ಮಾಧುರ್ಯ ಸುಕರ ಚಾತುರ್ಯ್ಯಗುಣ ॥
ಪ್ರೋನ್ನತರಿಲ್ಲೆನೆ ಶಾಸನ ।
ಮನ್ನಿದೆ ಚೆಲ್ವಾಗೆ ಸಾಮಿಯಣ್ಣಂ ಬರೆದೊಂ॥[೩೮]

ಬರೆಪದ ಬಲ್ಮ(ಗೆ) ವಾದ್ಯದ।
ಪರಿಣತಿಕೆಗೆ ಕವಿತೆಗಿವನೊಳೀ xxx
xx ಯೆನಿಪ ಸಾಮಿಯಣ್ಣಂ ।
ಬರೆದೋಂ ಶಾಸನಮನೆಸೆವ ಜಸಸಾಸನಮಂ॥[೩೯]

ಎಂಬ ಅಗ್ಗಳಿಕೆಯ ಸಾಮಿಯಣ್ಣ,

ಅನುಪಮತರಾಕ್ಷರಂ ಬುಧ।
ಜನಮಂ ಜೀಯೆನಿಸೆ ಸಕಳವಿದ್ಯಾನಿಳಯಂ॥
ಮನುಮುನಿಚಾರಿತ್ರನೀ ಸಾ।
ಸನಮಂ ಮನ್ನೆಯರ ಬಸವಣ್ಣಯ್ಯಂ ಬರೆದಂ॥[೪೦]

ಎಂದು ಕೀರ್ತಿಪಡೆದ ಬಸವಣಯ್ಯ,

"ಬಮ್ಮಿಕನ ಬರಪಮುಮದೇನಪೂರ್ವಮೋ ಜಗದಲು"[೪೧]

ಎಂದು ಹೆಸರಾದ ಬಮ್ಮಿಕ ಮೊದಲಾದವರನ್ನು ನೆನೆದರೆ, ಅವರ ಬರವಣಿಗೆಯ ಲಿಪಿಸೂಕ್ಷ್ಮತೆ, ಲಿಪಿಸೌಂದರ್ಯ, ಚರಣವಿನ್ಯಾಸಗಳು ವೇದ್ಯವಾಗದಿರವು. ಇಂಥವರಿಂದಾಗಿ ಶಾಸನದಲ್ಲಿ ಅಕ್ಷರಮುತ್ತುಗಳು ಬಿತ್ತಿಬೆಳೆಯಲ್ಪಟ್ಟಿವೆ.

"ಬರೆದ..... ಮುತ್ತಿನ ಸರಮಂ ಸಮದನ್ತೆ ಶಾನ್ತನೊ[ಳ್ಳ]ಕ್ಕರಮಂ"[೪೨]

ಸರಸತರಮಾದುವೆನ್ದ ।
ಕ್ಕರಿಗರ್ಬಣ್ಣಿಪಿನಮೀ ಶಿಳಾಶಾಸನಮಂ ...।
..................ಮುತ್ತಿನ ।
ಸರಿಗೆಯನುಕರಿಸೆ ಕನ್ನಪಯ್ಯಂ ಬರೆದಂ ॥[೪೩]

---

೩೮. SII Xi-i ೪೧ ನಾಗಾವಿ. ಈತನು ಕವಿಯೆಂದು 'ಕನ್ನಡ ನಾಡಿನ ಕೆಲವು ಶಾಸನ ಕವಿಗಳು' ಎಂಬ ಗ್ರಂಥದಲ್ಲಿ ಹೇಳಲಾಗಿದೆ. ಈತನು ಲಿಪಿಕಾರನೂ ಹೌದು ಎಂದು ನಮ್ಮ ಭಾವನೆ.

೩೯. SII XV ೩೫೨ ಮುಳಗುಂದ

೪೦. SII XI-i ೯೭ ಮುಳಗುಂದ-ಧಾರವಾಡ ಜಿಲ್ಲೆ (೧೦೬೨) ('ಕನ್ನಡನಾಡಿನ ಕೆಲವು ಶಾಸನ ಕವಿಗಳು' ಗ್ರಂಥದಲ್ಲಿ ಕವಿಯೆಂದು ಹೇಳಿದೆ. ಈತ ಲಿಪಿಕಾರ.)

೪೧. EC XII ತಿಪಟೂರ ೧೧೫ ಬೆಳಗೆರೆ (೧೦೭೮)

೪೨. KI V ೩೮ ಚಿಕ್ಕಹಂದಿಗೋಳ -ಧಾರವಾಡ ಜಿಲ್ಲೆ (೧೧೭೪)

೪೩. SII XI-i ೧೧೧ ಸೊರಟೂರ -ಧಾರವಾಡ ಜಿಲ್ಲೆ (೧೦೭೧) ('ಕನ್ನಡ ನಾಡಿನ ಕೆಲವು ಶಾಸನ ಕವಿಗಳು' ಎಂಬ ಗ್ರಂಥದಲ್ಲಿ ಹೇಳಿದಂತೆ ಈತನು ಕವಿಯಲ್ಲ.)

"..........ನಿಗಿತ ಪೊಸ ಮುತ್ತುಗಳೊಂ ....ಸಮ.....
ಪರಿಣತೆಯಿಂ ದೇಪ ಬರೆದ ಪೊಸಲಕಿ....."[೪೪]

ಎಂಬ ಮಾತುಗಳಲ್ಲಿ ಹೇಳಲಾದ ಮುತ್ತಿನ ಸರ, ಮುತ್ತಿನ ಸರಿಗೆ, ಪೊಸಮುತ್ತು ಎಂಬ ಉಪಮೆಗಳು ಮುತ್ತಿನಂತಹ ಕನ್ನಡ ಅಕ್ಷರಗಳಿಗೆ ತುಂಬ ಒಪ್ಪುತ್ತವೆ. ಇನ್ನೂ ಕೆಲವರ,

"ಸರಸತಿಯ ಕೊರಳ ಮುತ್ತವೊ।
ಲಿರೆ ವೃತ್ತಂ ಕೋಮಲಂ ಸುಭದ್ರಂ......"[೪೫]

ಸುಲಲಿತಕೆಯೆನಲು ವಾ।
ಗ್ಲಲನೆಯ ಹಾರದವೊಲೊಪ್ಪಿ ಬರೆದಂ ಭೂದೇ ॥
ವಲಾಲಮಂ ಕಿಸುವಾಯರ।
ಕುಳತಿಳಕಂ ರೂಪರ್ಝುಷಕಪತಾಕಂ ತೀಕಂ॥[೪೬]

ಶರನಿಧಿಯೊಳ್ನೆಲೆ[ಸಿ]ದ[ದು?]ವಂ।
ಸರಸಿಜಭವನಾಯ್ದುಕೊಣ್ದು ವಾಗ್ದೇವಿಗೆ ಬಿ ॥
ತ್ತರದಿಂದ ಸಮೆದ ಮುತ್ತಿನ ।
ಸರಿಗೆಯನನುಕರಿಪುವಲ್ತೆ ಬಲ್ಲೆಯ ಲಿಖಿತಂ॥[೪೭]

ಓರಣವಾಗಿ ಬರೆದ ತಮ್ಮ ಅಕ್ಷರಗಳಿಗೆ ಇವರು ಹೇಳಿದ ಸರಸ್ವತಿಯ ಕೊರಳ ತೋರ ಮುತ್ತು, ವಾಗ್ಲಲನೆಯ ಹಾರ, ವಾಗ್ದೇವಿಯ ಮುತ್ತಿನ ಸರಿಗೆಯೆಂಬ ಉಪಮೆಗಳು ಅನುಪಮವಾಗಿವೆ. ಈ ಲಿಪಿಕಲಾಸಿದ್ಧಿ ಇನ್ನೂ ಮುಂದುವರಿದು ಕನ್ನಡ ಅಕ್ಷರಗಳು ಸುಳುವು ಹಿಡಿದು ಸುಳಿದಿವೆ.

ಆನೆಯು ಸಿಂಘದ ಗಿಳಿಗಳ।
ನಾನಾರೂಪಗಳನಕ್ಕರಂಗಳೊಳೆಸೆಯಲು।
ತಾನಳವಡಿಸುವನೆಂದಡದೇನ ....।
ಮರುಳೆ ತೊಡರ್ದಪ್ಪೆ ರೂವಣನೊಳ್॥[೪೮]

ದಿ.........ಳ್ ಹಸ್ತಿ ಸಿಂಗಂ ಹರಿಣೆಯ ರೂಹಗೆಯಕ್ಕರಾವಳಿಯಿಂದಂ।
ಬರೆಯ......ದಡೆ ಪುರುದಿ[ಡಿ]ಸವೇಡೆಲವೊ ರೇವಣಾರ್ಯ್ಯನೊಳೆಂದಂ॥

ದೆಂಟೆಣಿ........ನೆಲೆ ....।
ಸಕ್ಕ ನಿನ್ನಳವೊ ಚಿತ್ರದ ಕರದೊಳ್ಪಂ।

---

೪೪. EC XI ಹೊಳಲಕೆರೆ ೧೨೪ ಚಿಕ್ಕಯಗಟಿ (೧೨೦೮?)
೪೫. EC V-ii ಅರಸಿಕೆರೆ ೧೨೩ ಹಾರನಹಳ್ಳಿ (೧೨೩೭)
೪೬. KI V ೨೬ ನರಗುಂದ-ಧಾರವಾಡ ಜಿಲ್ಲೆ (೧೧೪೭)
೪೭. KI V ೮ ತಿಳವಳ್ಳಿ-ಧಾರವಾಡ ಜಿಲ್ಲೆ (೧೦೭೨)
೪೮. EC XI ಚಿತ್ರದುರ್ಗ ೪೭ ಭೀಮಸಮುದ್ರ (೧೦೬೭)

ಕಂಟ್ಕದೊಳ್ ಬರೆವ ರೇವನ ।
ಕಂಟ್ಕ ಕೆಳೆ..... ಣಸಿ ನೋಪ್ರ್ಪೊಡೆಂದೇಕೈಕಂ ॥[೪೯]

ಎಂಬ ಮಾತುಗಳಲ್ಲಿ ರೂವಣ ಮತ್ತು ರೇವಣರ ಹಸ್ತಕೌಶಲದ ಸಿದ್ಧಿ ವ್ಯಕ್ತಗೊಂಡಿದೆ. ಹೀಗೆ ಕೆಲವರಿಗೆ ಪ್ರಾಣಿ-ಪಕ್ಷಿಗಳನ್ನು ಅಳವಡಿಸಿ ಸಾಲಂಕೃತ ಅಕ್ಷರಗಳನ್ನು ಬರೆಯುವದು ಹೆಮ್ಮೆಯೆನಿಸಿದರೆ, ಇನ್ನು ಕೆಲವರಿಗೆ ತ್ವರಿತಲೇಖನವೂ ಒಂದು ಹೆಮ್ಮೆಯೆನಿಸಿದೆ:

"ಬಹುವೆಳ್ಳಂಘುನ ಶೀಘ್ರುಲಿಖಿತ"[೪೯ಅ]
"ಸುಜನಮಿತ್ರ ಪವಿತ್ರಂ ರೇಚಣನ ಶೀಘ್ರುಲಿಖಿತಂ"[೫೦]
"ಶ್ರೀರಂಗದೇವನ ಶೀಘ್ರುಲಿಖಿತಂ"[೫೧]
"ರಾಚೋಜನ ಸೀಘ್ರುಲಿಕಿತ"[೫೨]
"ಕಾವನ ಸೀಘ್ರುಲಿಕಿತಂ[೫೩]

ಹೀಗೆ ಅವರಸದ ಬರವಣಿಗೆಯೂ ನಮ್ಮ ಪ್ರಾಚೀನರ ದೃಷ್ಟಿಯಲ್ಲಿ ಒಂದು ಸಿದ್ಧಿಯೆನಿಸಿತ್ತು. ಹಸ್ತವೇಗದ ಲಿಪಿಕಾರರನ್ನು ನೆನೆದಾಗ ಈಗಣ ಶೀಘ್ರುಲಿಪಿಕಾರರ (Steno) ನೆನಪಾಗುತ್ತದೆ. ಬಹುಲಿಪಿ ಬರಹ ನಮ್ಮವರ ಇನ್ನೊಂದು ಹೆಮ್ಮೆ.

.................................ಪದ್ಮಗ।
ಭ್ರಾನುಮೇಂ ಬಲ್ಲನೆ ಪೇಳಿಮಿನ್ನು ಬರೆಯಲ್ಕೆಂಬನ್ನೆಗಂ ತಾನೆ ನೆ।
ಟ್ಟನೆ ಬಲ್ಲಂ ಬರೆಯಲ್ಕನೇಕಲಿಪಿಯಂ ಶ್ರೀ ವಿಪ್ರವಿದ್ಯಾಧರಂ॥[೫೪]

"ಛಪಂ(ಂ)ನ್ನ ದೇಶ ಚಿತ್ರಲಿಪಿರೇಖಕೋವಿದಂ..............
ರಾಯಸ್ತ ಕೊಂಡಮರಸಯ್ಯ."[೫೫]

ನಿಜಾಂಕಮಾಲೆಯಂ........................।
ಮಾನವಮನ್ಮಥಂ ಬರೆದನಾದರದಿಂ ವಿಟಚಕ್ರವರ್ತಿ ಧಾ ।
ತ್ರೀನುತಮಾಗಿ ತಿಲು ತಿವುಳ ಕಂನಡ ನಾಗರದಕ್ಕರಂಗಳಂ॥[೫೬]

---

೪೯. SII IX- i ೧೩೨ ಬಾಗಳಿ -ಬಳ್ಳಾರಿ ಜಿಲ್ಲೆ (೧೦೬೮)
೪೯ಅ. EC III ನಂಜನಗೂಡು ೧೮೩ ದೊಡ್ಡಹೊಮ್ಮ (೯೭೭)
೫೦. EC V- ii ಬೇಲೂರ ೨೦೦ ದಬ್ಬೆಗ್ರಾಮ (೧೦೭೩)
೫೧. EC V-ii ಅರಸಿಕೆರೆ ೧೩೦ ತಳಲೂರು (ಸು. ೧೨೦೦)
೫೨. SII XI-i ೪೨ ಸವಡಿ-ಧಾರವಾಡ ಜಿಲ್ಲೆ(೯೭೦)
೫೩. SII IX-i ೧೧೫ ನಂದಿಬೇವೂರ-ಬಳ್ಳಾರಿಜಿಲ್ಲೆ (೧೦೫೪)
೫೪. EC VII ಶಿಕಾರಿಪುರ ೧೧ ಗಾಮಗ್ರಾಮ(೧೦೬೪)
೫೫. EI XII ಪು. ೨೭೮ ಏವೂರ-ಗುಲ್ಬರ್ಗಾ ಜಿಲ್ಲೆ (೧೦೭೭)
೫೬. SII IX-ii ೫೦೭ ಚೋಳಸಮುದ್ರ -ಅನಂತಪುರ ಜಿಲ್ಲೆ (೧೫೧೭)
೫೭. SII IX-i ೧೧೮ ಹಿರೇಹಡಗಲಿ-ಬಳ್ಳಾರಿ ಜಿಲ್ಲೆ (೧೦೫೭)

ಚತುರ್ಭಾಷಾಲಿಖಿತ್ಥಕ ವಿದ್ಯಾಧರಂ।
ಸನ್ಧಿವಿಗ್ರಹಿ ಶ್ರೀಮನ್ನಕುಳಾರ್ಯ್ಯಂ ಬರದಂ॥[೫೮]

ಎಂಬ ಮಾತುಗಳು ನಮ್ಮ ಲಿಪಿಕಾರರ ಬಹುಲಿಪಿಜ್ಞಾನಕ್ಕೆ ಸಾಕ್ಷಿಯಾಗಿವೆ. ಇಲ್ಲಿ ಒಬ್ಬ ಅನೇಕ ಲಿಪಿಕೋವಿದ, ಇನ್ನೊಬ್ಬ ಛಪ್ಪನ್ನದೇಶ ಚಿತ್ರಲಿಪಿಕೋವಿದ;ಮತ್ತೊಬ್ಬ ತಿಲ್(=ತೆಲಗು), ತಮಿಳು, ಕನ್ನಡ, ಸಂಸ್ಕೃತಭಾಷೆಗಳ ಅಕ್ಷರ ಬಲ್ಲಿದ; ಕೊನೆಯಾತ ಚತುರ್ಭಾಷಾಲಿಪಿ ನಿಪುಣ. ಇವು ಇವರ ಬಹುಲಿಪಿವ್ಯಾಮೋಹವನ್ನು ವ್ಯಕ್ತಗೊಳಿಸುತ್ತವೆ. ಇವರಿಗಿಂತಲೂ ವಿಲಕ್ಷಣ ವ್ಯಕ್ತಿತ್ವದ ಹಲವು ಲಿಪಿಕಾರರು ಶಾಸನಗಳಲ್ಲಿ ದೃಷ್ಟಿಗೆ ಬಂದು ನಮ್ಮನ್ನು ದಿಗ್ಭ್ರಮೆಗೊಳಿಸುತ್ತಾರೆ. ಇವರಲ್ಲಿ ಶ್ರೀಕರಣದ ವಿಶ್ವನಾಥನನ್ನು ಕುರಿತು ಹೇಳಿದ "ಉಭಯ ಹಸ್ತಲೇಖನಕುಶಲವಧಾನಚಕ್ರವರ್ತಿ ಶ್ರೀಕರಣದ ವಿಶ್ವನಾಥ ಬರದ"[೫೯] ಎಂಬ ಮಾತು ಕೇವಲ ಆಶ್ಚರ್ಯಗೊಳಿಸುತ್ತದೆ. ಒಂದು ಕೈ ಸೋತಾಗ ಇನ್ನೊಂದು ಕೈಯನ್ನು ದುಡಿಸಿಕೊಳ್ಳುವ ಅನುಕೂಲಹಸ್ತವುಳ್ಳ ಇವನ ಶಕ್ತಿ ನಿಜಕ್ಕೂ ದೊಡ್ಡದು. ಇವನಿಗಿಂತಲೂ ದೊಡ್ಡಶಕ್ತಿಯ ವ್ಯಕ್ತಿ ಮಲ್ಲಿದೇವ.

ಪರಿಕಿಸೆ ಮಲ್ಲಿದೇವವಿಭುಗಾರ್ಸಮನಿರ್ಬರುಮಿರ್ಕೆಲಂಗಳೊ।
ಬರೆದುದನಂತ್ಯದಿಂ ಬರೆವ ....ಮತಿ ಪ್ರಭಾವದೊಳ್॥[೬೦]

ಉಭಯಹಸ್ತಗಳನ್ನು ಏಕಕಾಲಕ್ಕೆ ದುಡಿಸಿಕೊಳ್ಳುತ್ತ, ಅದೂ ಬಲದಿಂದ ಎಡಕ್ಕೆ ಬರೆಯುತ್ತ, ಒಂದೇ ಪಟ್ಟಿಗೆ ಎರಡು ಪ್ರತಿಗಳನ್ನು ಸಿದ್ಧಮಾಡಿಕೊಡುವ ಈತನ ವಿಪರೀತ ಸಾಮರ್ಥ್ಯ ನಿಜಕ್ಕೂ ಧೈರ್ಯಗೆಡಿಸುತ್ತದೆ. ಈತನು ಹೀಗೆ ಬರೆಯುತ್ತಿರುವುದು ಆ ಕಾಲದ ನೆರೆಹೊರೆಯ ಪ್ರದೇಶದವರಿಗೆ ಒಂದು ಪ್ರದರ್ಶನವೆನಿಸಿರಬೇಕು.

ಮೇಲಣ ಶಾಸನಗಳಲ್ಲದೆ ಲಿಪಿಕಾರರ ಹೆಸರಿಲ್ಲದ ಇನ್ನೂ ಅನೇಕ ನಯನ ಮನೋಹರ ಶಾಸನಗಳು ಲಭಿಸುತ್ತವೆ. ಕುರುಗೋಡ[೬೧] ಶಾಸನದಲ್ಲಿ ಅನುಸ್ವಾರಗಳಿಗೆ ಬದಲು ನಕ್ಷತ್ರಗಳನ್ನು ಮಿಕ್ಕೆಡೆಗಳಲ್ಲಿ ಅಲಂಕಾರಗಳನ್ನು ಬಿಡಿಸಲಾಗಿದೆ. ಬೇಲೂರು ಶಾಸನದಲ್ಲಿ ಹೂಗಳನ್ನು ಬಿಡಿಸಲಾಗಿದೆ. ಹೀಗೆ ಅಕ್ಷರಗಳೊಂದಿಗೆ ಪ್ರಾಣಿಲೋಕ, ಪಕ್ಷಿಲೋಕ, ಪುಷ್ಪರಾಶಿ, ನಕ್ಷತ್ರರಾಶಿಗಳು ಶಾಸನಗಳಲ್ಲಿ ನೆಲೆನಿಂತಿವೆ.

ಇಂತಹ ಶಾಸನ ಫೋಟೋಗಳನ್ನು ಒಂದೆಡೆ ಪುಸ್ತಕರೂಪದಲ್ಲಿ ತಂದರೆ, ನಮ್ಮ ಪ್ರಾಚೀನರ ಸುಂದರ ಮತ್ತು ಸಾಲಂಕೃತ ಲಿಪಿಗಳ ಮಾದರಿಯನ್ನು ಸಂಗ್ರಹಿಸಿದಂತಾಗುತ್ತದೆ. ಶಾಸನಕ್ಷೇತ್ರದಲ್ಲಿ ಮಾಡಬೇಕಾದ ಅನೇಕ ಕಾರ್ಯಗಳಲ್ಲಿ ಇದೂ ಒಂದು ಮುಖ್ಯವಾದುದು.

■■

೫೮. EC V-ii ಅರಕಲಗೂಡ ೯೯ ಸೋಮವಾರಗ್ರಾಮ (೧೦೭೯)
೫೯. EC V-ii ಅರಸಿಕೆರೆ ೧೨೩ ಹಾರನಹಳ್ಳಿ (೧೨೩೭)
೬೦. ಕಕಚ (೧೯೬೧) ೧೩೫ ಬಳ್ಳಿಗಾವಿ (೧೧೦೩)
೬೧. IA XV ಪು. ೩೬೪ ಕುರಗೋಡ-ಬಳ್ಳಾರಿ ಜಿಲ್ಲೆ.

ಆಕರ : ಮಾರ್ಗ ಸಂಪುಟ-೨

೪೭

ಶಾಸನ ರೂವಾರಿಗಳು

ಶಾಸನಗಳಿಗೆ ಬಳಸುವ ಫಲಕಗಳಲ್ಲಿ ಶಿಲೆ ಮತ್ತು ಲೋಹಗಳು ಪ್ರಮುಖವಾದುವು. ಕವಿ ರಚಿಸಿಕೊಟ್ಟ ಪಾಠವನ್ನು ಫಲಕಗಳ ಮೇಲೆ ಕೊರೆಯುವವರು ಶಿಲಾವಿದ್ಯಾಪ್ರವೀಣರಾದ ಕಲ್ಲುಕುಟಿಗರು ಮತ್ತು ಲೋಹ ಪ್ರವೀಣರಾದ ಅಕ್ಕಸಾಲಿಗರು. ಕೆಲವು ಸಲ ಬಡಿಗ, ಕಮ್ಮಾರ ಮತ್ತು ಕಂಚಗಾರರೂ ಈ ಕಾರ್ಯವನ್ನು ಮಾಡಿದುದುಂಟು. ಕರ್ನಾಟಕದ ಸುಮಾರು ೨೫೦೦೦ ಶಾಸನಗಳನ್ನು ಶ್ರಮವಹಿಸಿ ಕೆತ್ತಿದ ಈ ಅಕ್ಷರಶಿಲ್ಪಿಗಳನ್ನು ಶಾಸನ ಪರಿಭಾಷೆಯಲ್ಲಿ 'ರೂವಾರಿ'ಗಳೆಂದು ಕರೆಯಬಹುದು.

ಶಾಸನಗಳಲ್ಲಿ ಸಾಮಾನ್ಯವಾಗಿ ಇವರ ಉಲ್ಲೇಖ ಬರುವುದು ತೀರ ಕೊನೆಗೆ. ಈ ಉಲ್ಲೇಖಗಳನ್ನೆಲ್ಲ ಸಂಗ್ರಹಿಸಿ ಪ್ರಾಚೀನ ಕರ್ನಾಟಕದ ರೂವಾರಿಗಳ ಉಪಜೀವನ, ಕಲಾಜೀವನ, ಕೌಟುಂಬಿಕ ಸಂಬಂಧ, ಗುರುಪರಂಪರೆ, ಪಂಥ ಪರಂಪರೆ ಮತ್ತು ಜೀವನ ಚರಿತ್ರೆ ಮೊದಲಾದವುಗಳ ಅಭ್ಯಾಸ ಮಾಡುವುದು ಉಪಯುಕ್ತವೂ ಅವಶ್ಯಕವೂ ಆಗಿದೆ. ಆದರೆ ಇಂಥ ಉಲ್ಲೇಖಗಳನ್ನು ಎಲ್ಲ ಶಾಸನಗಳು ಒದಗಿಸುವುದಿಲ್ಲ. ಒದಗಿಸಿದ ಶಾಸನಗಳಲ್ಲಿ ನಾಮಮಾತ್ರ ಉಲ್ಲೇಖಗಳೇ ಹೆಚ್ಚು; ಚರಿತ್ರೆಯ ವಿವರಗಳು ಕಡಿಮೆ. ಹೀಗಿದ್ದರೂ, ಸಾಧ್ಯವಿದ್ದಷ್ಟನ್ನು ಸಂಗ್ರಹಿಸಬೇಕೆನ್ನುವವರು ಮಾಡಬೇಕಾದ ಪ್ರಥಮಕಾರ್ಯವೆಂದರೆ ಕವಿ, ಲಿಪಿಕಾರರಿಂದ ರೂವಾರಿಗಳನ್ನು ಬೇರ್ಪಡಿಸುವುದು.

ಸಾಮಾನ್ಯವಾಗಿ ರೂವಾರಿಗಳ ಹೆಸರಿನ ಹಿಂದೆ ಕಲ್ಕುಟಿಗ, ಕಲ್ಲಂ ಕಡಿದಾತ, ಕಂಡರಣೆಕಾಜಿ, ಸರಸ್ವತೀಗಣಗಾತ್ರ, ಸರಸ್ವತೀಗಣಪುತ್ರ, ಸರಸ್ವತೀಗಣವಾಸಿ, ಶಾಸನಾಚಾರ್ಯ, ಸೂತ್ರಧಾರಿ, ವಿಶ್ವಕರ್ಮ, ಅಕ್ಕಸಾಲಿ, ಬಿನ್ನಣಿ, ಬಡಗಿ, ಶಿಲ್ಪಿ, ಆಚಾರಿ, ಕಮ್ಮಾರ, ಕಂಚುಗಾರ ಗವುಂಡ ಮತ್ತು ರೂವಾರಿಯೆಂಬ ವಿಶೇಷಣಗಳು ಬರುತ್ತವೆ.

೧. 'ಕೆಜ಼ಿಯೂರ ಕಲ್ಕುಟಿಗ [ಸಾತೋ]ಜಂ ಕಣ್ಡರಿಸಿದ'[೧]

೨. 'ಇ ಇಲ್ಲ ಕಡಿದಾತನು ಸಿಂಗೋಜನ ಮಗ ಕಲುಕುಡೆ XXಬೀರೋಜ'[೨]

೩. 'ಬಿರುದ ಕಂಡರಣೆಕಾಜಿ ಕೋಳಾಹಳಂ ರೂವಾರಿ ಮಲ್ಲೋಜನ ಕಂಡರಣೆ'[೩]

---

೧. KI IV ೩೩ ಬಾಳಂಬೀಡ-ಧಾರವಾಡ ಜಿಲ್ಲೆ (೧೦೭೯)

೨. EC VIII-ii ಸಾಗರ ೧೦೨ ಸೀತೂರ (೧೨೯೩)

೩. EC VI ತರಿಕೆರೆ ೪೫ ಅಮೃತಾಪುರ (೧೧೯೬)

೪. 'ಶ್ರೀ ಸರಸ್ವತೀಗಣಭಾತ್ರ ಶ್ರೀ ಮಲ್ಲಿಯಣ್ಣನ ಬರಪಂ। ಖಣ್ಡರಿಸಿದನ್ನೋಜಂ'[೪]

೫. 'ಶ್ರೀ ಸರಸ್ವತೀಗಣಪುತ್ರ ಸುಮತಿಪಂಡಿತರ ಶಿಷ್ಯ ರೂವಾರಿ
ಸೋಮೋಜನ ಪುತ್ರ ದುರ್ಗ್ಗಯನ ಬೆಸ'[೫]

೬. 'ಸರಸ್ವತೀಗಣದಾಸಿ ಬೆಂಗೋಜನ ಪುತ್ರ ಇಕ್ಕುಡಾಚಾರಿ ಎರಡು
ದೇವಾಲೆಯಮಂ ಮಾಡಿ ಶಾನಮಂ ಬರೆದ'[೬]

೭. 'ಶಾಸನಾಚಾರ್ಯವರ್ಯೇಣ ನಾಗಿದೇವೇನ ಶಿಲ್ಪಿನಾ'[೭]

೮. 'ದಾಮೋಜರ ಮಗ ಸೂತ್ರಧಾರಿ ಚಿಣ್ಣೋಜ ಹೊಇದ ಶಾಸನ'[೮]

೯. 'ವಿಶ್ವಕರ್ಮ್ಮ ಸಮಾನೇನ ವಿಶ್ವಕರ್ಮ್ಮಚಾರ್ಯ್ಯೇಣೆದಂ ಶಾಸನ ಲಿಖಿತಂ'[೯]

೧೦. 'ಕರಿವಿಡಿಯಕ್ಕಸಾಲೆ ಹುಳಿಯಾಚಾರಿಯ ಪುತ್ರಂ ಜಕೋಜನ ಕೆಲಸ'[೧೦]

೧೧. 'ಯೀ ಕಲ್ಲಂ ಕಡಿದ ಬಿಂನಾಣಿ ಮಾರೋಜನ ತನೂಜ ಯದೋಜನು.....'[೧೧]

೧೨. 'ನರೆಯಂಗಲ್ಲ ಬಲ್ಲೋಜನ ಮಗ ಬಡಗಿ ಬರ್ಮ್ಮೋಜನ ಕಂಡರಣೆ'[೧೨]

೧೩. 'ಶಿಲ್ಪಿ ಬಸವನ ಮಗ ಮಲ್ಲಾಚಾರಿ'[೧೩]

೧೪. 'ಯಿ ಸಾಸನ ಮಾಡಿದ ಆಚಾರಿ ಬಬೋಜನ ಮಗ ಸೋಮೋಜ'[೧೪]

೧೫. 'ಕಂಮಾಜಿ ರಾಮೋಜನ ಮಕ್ಕಳು ನಾಗೋಜ ಹೊಯಿದ ಶಾಸನ'[೧೫]

೧೬. 'ಖಂಡರಿಸಿದಂ ಕಂಚಗಾಜಿ XXX ಜನ ಮಗ ದಾಸೋಜ'[೧೬]

---

೪. SII IX-i ೨೧೫ ದುಗ್ಗವತ್ತಿ-ಬಳ್ಳಾರಿ ಜಿಲ್ಲೆ (೧೧೨೬)
೫. EC VIII-ii ಸಾಗರ ೧೦೬ ಕೋಳೂರು
೬. EC XI ದಾವಣಗೆರೆ ೧೫೫ ಕಬ್ಬೂರ (೧೧೧೯)
೭. EC XII ತಿಪಟೂರ ೭. ತುರುವೇಕೆರೆ (೧೫೬೦)
೮. KI IV ೪೮ ಮಡಲೂರ-ಧಾರವಾಡ ಜಿಲ್ಲೆ (೧೨೪೭)
೯. EC III-i ಮಂಡ್ಯ ೧೧೩ ಹಳ್ಳೆಗೆರೆ (೭೧೩)
೧೦. EC XII ತಿಪಟೂರು ೧೦೪ ಕಿಬ್ಬನಹಳ್ಳಿ (೧೧೩೦)
೧೧. EC VIII ಸಾಗರ ೧೫೬ ಮಾಡದೂರು (೧೩೦೪)
೧೨. KI V ೩೮ ಚಿಕ್ಕಹಂದಿಗೋಳ-ಧಾರವಾಡ ಜಿಲ್ಲೆ (೧೧೭೪)
೧೩. EC X-ii ಕೋಲಾರ ೧೭೯ ವೇಲ್ಗಳ್‌ಬುರೆ
೧೪. EC Xi ಚಿತ್ರದುರ್ಗ ೪ ಚಿತ್ರದುರ್ಗ (೧೩೨೮)
೧೫. EC XII ಶಿರಾ ೧೦೩ ಕಾಳಾಪುರ (೧೪೯೫)
೧೬. SII IX-i ೧೮೪ ಹನ್ಸಿ-ಬಳ್ಳಾರಿ ಜಿಲ್ಲೆ (೧೧೧೧)

೧೭. 'ಕಂಬಯ್ಯಗವುಣ್ಡ ಕಡೆದ'[೧೭]

೧೮. 'ಅಗ್ಗಳೋಜನ ಮಗಂ ರೂವಾರಿ ಮುಚ್ಚೋಜಂ ಬೆಸಗೆಯ್ದ'[೧೮]

ಈ ವಿಶೇಷಣಗಳ ಮೂಲಕ ಅಕ್ಷರಶಿಲ್ಪಿಗಳನ್ನು ಅರಿಯಲು ಸಾಧ್ಯವಾಗುತ್ತದೆ. ಇದಲ್ಲದೆ ಇವರ ಹೆಸರುಗಳಿಗೆ -ಆಚಾರಿ, -ಓಜ, -ಶಿಲ್ಪಿ ಎಂಬ ಉಪಸರ್ಗಗಳಿರುತ್ತವೆ. ಉದಾ :

'ಕವಿ ಮಾದಿರಾಜ ಬರದಂ ಕಡಬಾಚಾರಿ ಕಂಡರಿಸಿದಂ'[೧೯]

'ಕಲುಕುಟ್ಟಿಗ ಮಳೋಜ ಹೊಯ್ದ'[೨೦]

'ಶಾಸನಾಚಾರ್ಯವರ್ಯೇಣ ನಾಗದೇವೇನ ಶಿಲ್ಪಿನಾ'[೨೧]

ಇದಲ್ಲದೆ ಕಂಡರಿಸು (ಕಂಡಳಿಸು, ಖಂಡರಿಸು), ಬೆಸಕೆಯ್, ಬೆಸ, ಹೊಯ್, ಪೊಯ್, ಕಲ್ವೆಸ, ಕಲ್ಲಂಕಡಿ, ಕಲ್ಲುಹೊಯಿ, ಕಲ್ಲಗೆಯಿ, ಶಿಲಾಕರ್ಮ, ತಿದ್ದು, ಸಮೆ, ಲಿಖಿತ, ಕೆಲಸ, ಶಿಲ್ಪ, ಬರೆಪ ಇತ್ಯಾದಿ ಪದಗಳು ಈ ಅಕ್ಷರಶಿಲ್ಪದ ಸೂಚನೆಗಳಾಗಿ ಕ್ರಿಯಾಪದದ ಸ್ಥಾನದಲ್ಲಿ ಬಳಸಲ್ಪಟ್ಟಿರುತ್ತವೆ.ಉದಾ :

೧. 'ದಾಸೋಜಂ ಕಣ್ಡರಿಸಿ[ದಂ]'[೨೨]

೨. 'ಕಂಡಳಿಸಿದ ರೂವಾರಿ ಬಯಿಬೋಜ'[೨೩]

೩. 'ಖಂಡರಿಸಿದ ಕಂಚಗಾಱ .... ಜನ ಮಗ ದಾಸೋಜ'[೨೪]

೪. 'ಈ ಶಾಸನಮಂ ... ಕಾಳೋಜಂ ಬೆಸಗೆಯ್ದ'[೨೫]

೫. 'ಮಸಣೋಜನ ಬೆಸ'[೨೬]

೬. 'ರೂವಾರಿ ಮಾದೆಯ ಹೊಯಿದ'[೨೭]

೭. 'ಇ ಕಲ್ಲ ಪೊಯ್ದ ಕಲ್ಕುಟಿಗ ಆಕೋಜ'[೨೮]

---

೧೭. EC XII ತಿಪಟೂರ ೧೦೩ ಕಿಬ್ಬನಹಳ್ಳಿ (೯೭೨)
೧೮. SII IX-i ೧೦೧ ಮೋರೆಗೆರೆ-ಬಳ್ಳಾರಿ ಜಿಲ್ಲೆ (೧೦೪೫)
೧೯. EC XI ದಾವಣಗೆರೆ ೨ ದಾವಣಗೆರೆ (೧೧೨೪)
೨೦. EC XI ದಾವಣಗೆರೆ ೮೬ ಗಂಗನರಸಿ (೧೧೭೭)
೨೧. EC X-ii ಬಾಗೆಪಲ್ಲಿ ೭೦ ಬೆಸ್ತರಪಲ್ಲಿ (೧೩೩೬)
೨೨. SII IX-iii ೧೫೩ ಅಂಬಲಿ-ಬಳ್ಳಾರಿ ಜಿಲ್ಲೆ (೧೦೮೩)
೨೩. EC VI ಚಿಕ್ಕಮಗಳೂರ ೪. ಚಿಕ್ಕಮಗಳೂರ (೧೧೪೦)
೨೪. SII IX-i ೧೮೪ ಹನ್ನಿ (೧೧೧೧)
೨೫. KII ೧೭ ಸಿಗ್ಗಾವ-ಧಾರವಾಡ ಜಿಲ್ಲೆ (೧೦೫೫)
೨೬. EC V-ii ಬೇಲೂರ ೨೦೦ ದಬ್ಬೆ (೧೦೭೩)
೨೭. EC VIII-ii ನಗರ ೩೭ ಹುಮ್ಮಚ (೧೧೪೭)
೨೮. EC III ಶ್ರೀರಂಗಪಟ್ಟಣ ೧೧೯ ಅರಕೆರೆ (೧೧೦೮)

೮. '.................ಯು ಕಲುವೆಸನವ ವ...... ಈ ಶಾಸನವ ಹೊಯಿದಾತನು
ಕಲುಕುಟ್ಟಿಗ ಜಡೆಯ ರಾಮೋಜನು'[೨೯]

೯. 'ಯಿ ಕಲ್ಲ ಕಡೆದಾತ ಸಂತೋಜ'[೩೦]

೧೦. 'ಕಲಗೆಯ್ದಾ ಬರಲಿಕೆಯ ಮಧುಕೋಜ'[೩೧]

೧೧. 'ಪುರಿಗೆಱೆಯಿಂ ಬನ್ದ ಪೊಲೆಯಣ್ಣನ ಶಿಲಾಕರ್ಮ್ಮ.....'[೩೨]

೧೨. 'ನಾಗೋಜಿ ತಿದ್ದಿದ ರೂಹು'[೩೩]

೧೩. 'ಇ ಕಲ್ಲಂ ದುಗ್ಗದಾಸಂ ಸಮೆದೊಮ್'[೩೪]

೧೪. 'ಚೆಂದೋಜನ ಪುತ್ರಂ ಹೊನ್ನೋಜರ ಲಿಖಿತಂ'[೩೫]

೧೫. 'ರೂವಾರಿ ಮಾರೋಜನ ಮಗ ಬಮ್ಮಯನ ಸಿಳಾಲಿಖಿತ '[೩೬]

೧೬. 'ರೂವಾರಿ ಚಟ್ಟೋಜನ ಕೆಲಸ'[೩೭]

೧೭. 'ಯೀ ಸಾಸನವ ಶಿಲ್ಪಿದಾತ ಕುಱುವಂಗಿಯ ಮಲೋಜನು'[೩೮]

೧೮. 'ಕುನ್ದಾಚಾ[ರಿ] ಬರೆಪಂ'[೩೯]

ಹೀಗೆ ಹೆಸರಿನ ಹಿಂದಿನ ವಿಶೇಷಣ, ಹೆಸರಿನ ಸ್ವರೂಪ ಮತ್ತು ಕ್ರಿಯಾಪದ - ಈ ಮೂರರ ಆಧಾರದಿಂದ ಶಾಸನಪಾಠವನ್ನು ಸಿದ್ಧಗೊಳಿಸಿಕೊಡುವ ಕವಿ, ಅಕ್ಷರಗಳನ್ನು ಮೂಡಿಸಿಕೊಡುವ ಲಿಪಿಕಾರರಿಂದ ರೂವಾರಿಯನ್ನು ಪ್ರತ್ಯೇಕಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಮೂರು ಬಗೆಯ ಪ್ರಯೋಗಗಳಿಗೆ ಹೊರತಾದ ಪ್ರಸಂಗಗಳಲ್ಲಿ ರೂವಾರಿಯನ್ನು ಗುರುತಿಸುವಲ್ಲಿ ಹೆಚ್ಚು ಎಚ್ಚರವಹಿಸಬೇಕಾಗುತ್ತದೆ.

---

೨೯. EC XI ಚಿತ್ರದುರ್ಗ ೩ ಚಿತ್ರದುರ್ಗ (೧೩೫೬)
೩೦. EC VII-ii ಸೊರಬ ೨೧೮ ತಾಳಗುಪ್ಪೆ (೧೨೮೨)
೩೧. EC VIII-ii ಸಾಗರ ೯೮ ನಾಡಮಡುವು (೧೩೦೦)
೩೨. SII XI-i ೧೧ ಮೇವುಂಡಿ -ಧಾರವಾಡ ಜಿಲ್ಲೆ (೮೬೫)
೩೩. EC IX ಕನಕನಹಳ್ಳಿ ೯೬ ಬೂದಿಕುಪ್ಪೆ (೧೬೫೩?)
೩೪. KII ೧೫ ಸಿಗ್ಗಾವ -ಧಾರವಾಡ ಜಿಲ್ಲೆ
೩೫. EC V-ii ಅರಸಿಕೆರೆ ೧೨೪ ಹಾರನಹಳ್ಳಿ (೧೧೩೮)
೩೬. EC VIII-ii ಸಾಗರ ೧೧೭ ತಂಗಲವಾಡಿ (೧೧೭೧)
೩೭. EC VI ಕಡೂರ ೧೦೦ ಸಂತೆಕೆರೆಹಳ್ಳಿ (೧೨೪೦)
೩೮. EC VI ಚಿಕ್ಕಮಮಗಳೂರ ೪೮ ಕುರುವಂಗಿ (೧೫೪೯)
೩೯. EC IV-ii ಅಡೆತೊರೆ ೬ ಲಾಳನಹಳ್ಳಿ (೧೧೧೬)

II

ಸಾಮಾನ್ಯವಾಗಿ ರೂವಾರಿಗಳು ನಿರಕ್ಷರಿಗಳು. ಕಂಡರಣೆಯ ಕಾರ್ಯದಲ್ಲಿ "ನ್ಯೂನಾಕ್ಷರಮಧಿಕಾಕ್ಷರಂ ವಾ ತತ್ಸರ್ವ್ವಂ ಪ್ರಮಾಣಮಿತಿ"[೪೦] ಎಂದು ಪ್ರಾಂಜಲ ಪ್ರಜ್ಞೆಯನ್ನು ತೋರಿದರೂ ಇವರ ಅಜ್ಞತೆಯಿಂದಾಗಿ ಅಕ್ಷರ ಅಂದಗೆಡಲು, ಭಾಷೆ ದೋಷಗೊಳ್ಳಲು ಅವಕಾಶವಿದೆ. ಇವರಿಗೆ ಹೊರತಾಗಿ ಕೆಲವು ಅಕ್ಷರಜ್ಞ ರೂವಾರಿಗಳು ಲಿಪಿಕಾರನ ಕಾರ್ಯವನ್ನೂ ಮಾಡಿದ ಉದಾಹರಣೆಗಳಿವೆ.

"ಹುಲಿಗೆಱೆಯ ಬಮ್ಮೋಜ ತಾನೆ ಬರೆದು ಕಂಡರಿಸಿದ ಸಾಸನ"[೪೧]

"ಈ ಸಾಸನಕ್ಷರಮಂ ಬರೆದು ಪೊಯ್ದಂ ಧರ್ಮೋಜ"[೪೨]

ಇಂಥ ಅಕ್ಷರಜ್ಞರಿಂದಾಗಿ ಬರವಣಿಗೆ ಅಂದಗೊಂಡು, ಭಾಷೆ ಶುದ್ಧಗೊಂಡು, ಶಾಸನ ಅಚ್ಚುಕಟ್ಟುಗೊಳ್ಳುತ್ತದೆ. ಹೀಗೆ ರೂವಾರಿಗೆ ಬರವಣಿಗೆ ಗೊತ್ತಿದ್ದಷ್ಟು ಲೇಸು. ಇದಕ್ಕಿಂತ ಅವಶ್ಯವಾದುದು ಕಲಾಪ್ರಜ್ಞೆ.

III

ಕನ್ನಡನಾಡಿನ ಶಿಲ್ಪಿಗಳದು ಶ್ರೀಮಂತ ಪರಂಪರೆ. ಅವಸ್ಥಾಭೇದ, ಪ್ರಾಂತಭೇದಗಳಿಂದ ಶೋಭಿಸುವ ಈ ಪರಂಪರೆ ಪಂಥಭೇದವನ್ನೂ ಪಡೆದಂತಿದೆ. ಇದರ ಸೂಚನೆಯೆನ್ನುವಂತೆ ಕೆಲವು ಶಿಲ್ಪಿಗಳ ಹೆಸರಿನ ಹಿಂದೆ 'ಸರಸ್ವತಿ' ಸೂಚಕ ಪದವನ್ನೊಳಗೊಂಡ ಉದ್ಧರಣೆಗಳು ಹೀಗೆ ಸಿಗುತ್ತವೆ.

೧. 'ಶ್ರೀ ಸರಸ್ವತೀದೇವಿ ವರಪ್ರಸಾದಂ ಹೋದಲ ರಾಮೋಜನ ಮಗಂ ರೇವೋಜಂ ಹೊಯ್ದ ಸಾಸನ'[೪೩]

೨. 'ಸರಸ್ವತೀಗಣದ ಸಿಭುಗೋಜನ ಪುತ್ರ ಇಕುಲೋಜ'[೪೪]

೩. 'ಶಿಲ್ಪಿಕ ಲಲಾಟಪಟ್ಟಂ ಸರಸ್ವತೀಗಣ ಪಾದಪಂಕಜಭ್ರುಮರಂ ಜಿನಪಾದಾರಾಧಕಂ ಪದ್ಮೋಜನ ಶಿಲ್ಪಿಕಾಕಮ್ರ್ಮ'[೪೫]

೪. 'ಪುರಿಕರನಗರದ ಬಮ್ಮಂ ಸರಸ್ವತೀಗಣದ ದಾಸಿ............'[೪೬]

೫. 'ಸರಸ್ವತೀಗಣದಾಸಿ ಬಮ್ಮೋಜ ಬೆಸಗೆಯ್ದ'[೪೭]

೬. 'ಸರಸ್ವತೀಗಣದಾಸಿ ಬೆಂಗೋಡನ ಪುತ್ರ ಇಕ್ಕುಡಾಚಾರಿ .....'[೪೮]

---

೪೦. EC XI ಚಿತ್ರದುರ್ಗ ೨ ಚಿತ್ರದುರ್ಗ (೧೩೫೫)

೪೧. xx ೬೬ ಬಾಳಂಬೀಡ-ಧಾರವಾಡ ಜಿಲ್ಲೆ (೧೧೧೮)

೪೨. Inscription Nanded from District .೩ ತದ್ದೇಲ (೧೦೪೭)

೪೩. Inscriptions in Northern Karnataka and the Kolhapur State-14 ಇಂಗಳೇಶ್ವರ (೧೧೭೬)

೪೪. EC XI ದಾವಣಗೆರೆ ೧೨೮ ಹುವ್ವಿನ ಮಡಗು (೧೧೦೭)

೪೫. EC VII ಶಿಕಾರಿಪುರ ೨೯೩ ತುಂಬರಹೊಸೂರು (೧೦೮೦)

೪೬. SII XI-i ೯೭ ಮುಳಗುಂದ-ಧಾರವಾಡ ಜಿಲ್ಲೆ (೧೦೬೨)

೪೭. SII XV ೫೩೦ ಮೊರಬ-ಧಾರವಾಡ ಜಿಲ್ಲೆ (೧೦೫೯)

೪೮. EC XI ದಾವಣಗೆರೆ ೧೫೫ ಕಬ್ಬೂರ (೧೧೨೪)

೭. 'ಸರಸ್ವತೀಗಣಪುತ್ರ ಸುಮತಿಪಂಡಿತರ ಶಿಸ್ಯ ರೂವಾರಿ ಸೋಮೋಜನ ಪುತ್ರ ದುರ್ಗೆಯನ ಬೆಸ'[೪೯]

೮. 'ಸರಸ್ವತೀಗಣಭಾತ್ರ ಶ್ರೀ ಮಲ್ಲಿಯಣ್ಣನ ಬರಪಂ । ಖಂಣ್ಡರಿಸಿದನ್ನೋಜ'[೫೦]

ಇಲ್ಲಿಯ ಸರಸ್ವತೀ, ಸರಸ್ವತೀಗಣಪುತ್ರ, ಸರಸ್ವತೀಗಣಭಾತ್ರ ಎಂಬ ಪದಗಳು ಕವಿ, ಲಿಪಿಕಾರರನ್ನು ಬಿಟ್ಟು ರೂವಾರಿಗಳ ಹಿಂದೆ ಮಾತ್ರ ಬರುವುದರಿಂದ 'ಸರಸ್ವತೀಗಣ'ವೆಂಬುದು ರೂವಾರಿವಿಶಿಷ್ಟವೆನಿಸುತ್ತದೆ. ಇದು ಅವರಲ್ಲಿಯ ಒಂದು ವಿಶಿಷ್ಟಪಂಥ (School)ದ ಸೂಚನೆಯೆಂದು ಹೇಳಲು ಬರುವಂತಿದೆ.

ಇದಲ್ಲದೆ "ನಾಗರಾದಿನಾಗರಿಕದ್ರಾವಿಳಸಮುದ್ಧರಣನಪ್ಪ ಮಾಣಿಮೋಜನ ಮಗಂ ಬಿರುದ ರೂವಾರಿವೇಶ್ಯಾಭುಜಂಗ ಬಲಕೋಜ ಕಣ್ಡರಿಸಿದಂ"[೫೧] ಎಂಬ ಮಾತಿನಿಂದ ಈ ಮಾಣಿಮೋಜನು ಶಿಲ್ಪಪಂಥವೊಂದರ ಪ್ರತಿಷ್ಠಾಪಕ ಅಥವಾ ಪರಿಷ್ಕರ್ತನೆಂದು ತಿಳಿದುಬರುತ್ತದೆ.

ಶ್ರೀ ಸೋಡಲ ಭಕ್ತಿ ಮಹಾ ।
ಪ್ರಾಸಾದಪ್ರಾಳಿ ತನಗೆ ನಿಜವೆನೆ ನೆಗರ್ದ್ದೀ ।
ಭಾಸುರಯಶಂಖ್ಯರೋಜಂ ।
ಲೇಸನೇ ಶಾಸನಮನರ್ತ್ತಿಯಿಂ ಟಂಕಿಸಿದಂ ॥[೫೨]

ಎಂಬ ಕಂದದಲ್ಲಿ ರೂವಾರಿಯೊಬ್ಬನು 'ಅಸಂಖ್ಯರೋಜಂ' ಎಂದು ಕರೆದುಕೊಂಡುದು ಅಸಂಖ್ಯ ಶಿಷ್ಯಸಮುದಾಯಕ್ಕೆ ಆತನು ಗುರುವಾದುದನ್ನು ಸೂಚಿಸುತ್ತದೆ. "ಪುರಿಕರನಗರದ ಬಮ್ಮಂ ಸರಸ್ವತೀಗಣದ ದಾಸಿ ಕ[ಣ್ಡ] xxxx ನಿರುತಯತಿ [ಸಟಂ] ಖಣ್ಡರಿಸಿದಂ ನಾಗವರ್ಮ್ಮನ ಚ್ಛಾ[ತಂ]"[೫೩] ಎಂಬ ಹೇಳಿಕೆಯೂ ಇಂಥ ಗುರು-ಶಿಷ್ಯ ಪರಂಪರೆಯನ್ನು ಪುಷ್ಟಿಗೊಳಿಸುತ್ತದೆ.[೫೪]

ಹೀಗೆ ವೈಭವಪೂರ್ಣ ಪಂಥ ಪರಂಪರೆಗಳನ್ನೊಳಗೊಂಡಿರಬಹುದಾದ ಪ್ರಾಚೀನ ಕರ್ನಾಟಕದ ಶಿಲ್ಪಕಲೆ, ಕಾಲಕಾಲಕ್ಕೆ ವಿಶಿಷ್ಟ ಘಟ್ಟಗಳನ್ನು ಕಲ್ಪಿಸಿಕೊಂಡು, ಒಂದು ಜೀವಂತಕಲೆಯಾಗಿ ಬೆಳೆದುಬಂದಿದೆ. ಕನ್ನಡಿಗರು ಈ ವೈಶಿಷ್ಟ್ಯ ಮತ್ತು ಜೀವಂತಿಕೆಗಳನ್ನು ಮುಂದುವರಿಸಿಕೊಂಡು ಬರಲು ಕೇವಲ ಪರಂಪರೆಯ ಪ್ರಮಾಣವನ್ನವಲಂಬಿಸಿದರೆ? ಅಥವಾ ಈ ಪರಂಪರಾಗತ ಅನುಭವವು ಕೃತಿಗಿಳಿದ ಶಾಸ್ತ್ರವನ್ನಲಂಬಿಸಿದರೆ?

---

೪೯. EC VIII-ii ಸಾಗರ ೧೦೬ ಕೋಳೂರ

೫೦. SII IX-i ೨೧೫ ದುಗ್ಗವತ್ತಿ -ಬಳ್ಳಾರಿ ಜಿಲ್ಲೆ (೧೧೨೬)

೫೧. EC Vi ಮೂಡಗೆರೆ, ೨೨ ಹಂತೂರು (೧೧೪೯)
"XXXದ್ರಿಯ ವಿಶ್ವಕರ್ಮ್ಮನಭವಂಗೆಂದೊಲಿದು ಸದ್ಭಕ್ತಿಯೊಳ್ಪರದಿಂ ಕಂಡರಿಸಿಟ್ಟನೆಂಬಿನೆಗನೇಕ ದ್ರಾವಿಡಂ ಭೂಮಿಜಂ ಪಿರಿದುಂ ನಾಗರಮೆಂಬ ಬಹುವಿಧ(ದ) ಭದ್ರೋಪೇತದಿಂ ಕಣ್ಗೆವಂದಿರೆ ಕೋಟೀಶಭವಾಲಯಂ ಸುಲಲಿತಂ ಸಾಮ್ಯಂ ಕರಂ ಸೌಷ್ಟವಂ" EC VIII ಸೊರಬ ೨೭೫ ಹಕ್ಕಲು ಗ್ರಾಮ (೧೨೩೧) ಗಮನಿಸಿರಿ.

೫೨. EC V-ii ಅರಸಿಕೆರೆ ೨೨ ಬಾಣಾವರ (೧೧೮೮)

೫೩. SII XI-i ೯೭ ಮುಳಗುಂದ -ಧಾರವಾಡ ಜಿಲ್ಲೆ (೧೦೬೨)

೫೪. "ಸ್ವಸ್ತಿ ಶ್ರೀ ಶಿಲೆಮುದ್ದರ ವರ್ಮನ್ ಸರ್ವಸಿಧಿ ಆಚಾರ್ಜ್ಜರ ಚಟ್ಟರ್ ಋೇವಡಿ ಒವಜ್ಜರ್ ತೆಂಕಣದಿಶೆ ಮಾಡಿದೊರ್" (ಪಟ್ಟದಕಲ್ಲು ಗುಡಿಗಳು ೯೧) ಸರ್ವಸಿದ್ಧಿಯಾಚಾರ್ಯನೊಬ್ಬ ಸುಪ್ರಸಿದ್ಧ ಶಿಲ್ಪಿ, ಈತನ ಶಿಷ್ಯ ರೇವಡಿ ಒವಜ್ಜನೆಂದು ಹೇಳಿದುದನ್ನು ಗಮನಿಸಬೇಕು.

ಎಂಬ ಪ್ರಶ್ನೆ ಎದುರಾಗುತ್ತದೆ. ಕನ್ನಡದಲ್ಲಿ ಶಿಲ್ಪವನ್ನು ಕುರಿತು ಬರೆದ ಒಂದೂ ಕೃತಿ ಈ ವರೆಗೆ ಲಭಿಸದಿರುವುದೂ, ಅಂಥ ಕೃತಿ ಇದ್ದ ಬಗ್ಗೆ ಖಚಿತ ಉಲ್ಲೇಖ ಸಿಗದುದೂ ಈ ಪ್ರಶ್ನೆಗೆ ಉತ್ತರಿಸುವಲ್ಲಿ ನಿರಾಸೆಯನ್ನು ಹುಟ್ಟಿಸುತ್ತದೆ. ಹೀಗಿದ್ದರೂ "ಸಾಸ್ತ್ರಕರ್ಮಿ ಚಾವುಣ್ಣೋಜ ಖಣ್ಡರಿಸಿದಂ"[೫೫] "..... ಬಮ್ಮನ ಪುತ್ರನಯ್ಯಣಂ.... ಶಾಸ್ತ್ರಯುಕ್ತಮಾಗಿರೆ ಬೆಸಗೆಯ್ದು ....[೫೬] ಎಂಬಲ್ಲಿರುವುದು ಶಾಸ್ತ್ರಶುದ್ಧ ರಚಕರೆಂಬ ಅರ್ಥವೋ ನಿರ್ದಿಷ್ಟ ಶಾಸ್ತ್ರವಿದರೆಂಬ ಅರ್ಥವೋ ಸ್ಪಷ್ಟವಾಗುವುದಿಲ್ಲ. ಇನ್ನು

ಗುಣಪಾ xxx ರ್ಯ್ಯ।
ಪ್ರಣೀತ ಶಾಸ್ತ್ರೋಕ್ತಿಯಿಂದೆ ಕಲುವೆಸನಂ ಲ ।
ಕ್ಷಣಯುಕ್ತಮಾಗಿರಲು ಧಾ ।
ರಣಿಯೊಳು ಗುಲುಗೋಜನಱಿವನೆಂದೆಳೆ ಪೊಗಳ್ಗುಂ ॥[೫೭]

ಎಂಬ ಶಾಸನದಲ್ಲಿ "ಗುಣಪಾxxxರ್ಯ ಪ್ರಣೀತ ಶಾಸ್ತ್ರ" ಸಮ್ಮತವಾಗಿ ಕಲುಗೆಲಸವನ್ನು ಮಾಡುವವನೆಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ, ಗುಲಗೋಜ. ಆ ಕಾಲದಲ್ಲಿ ಸರ್ವಸಮ್ಮತವಾಗಿರಬಹುದಾದ ಈ ಶಾಸ್ತ್ರಕೃತಿ ಸಿಗುವುದಿರಲಿ, ಇದರ ಸ್ವರೂಪವೂ ತಿಳಿದುಬಂದಿಲ್ಲ. ಇದು ಮತ್ತು ಇಂತಹ ಶಾಸ್ತ್ರಕೃತಿಗಳು ಲಭಿಸಿದ್ದರೆ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಜೊತೆ ಅಕ್ಷರಶಿಲ್ಪಕ್ಕೆ ಸಂಬಂಧಪಟ್ಟ ಅಕ್ಷರ ಕಂಡರಣೆಯ ಪರಿಕರ, ವಿಧಾನ ಇತ್ಯಾದಿ ಸಂಗತಿಗಳನ್ನರಿಯಲು ಅನುಕೂಲವಾಗುತ್ತಿತ್ತು.

ವಸ್ತುಸ್ಥಿತಿ ಹೀಗಿದ್ದರೂ ನಮ್ಮ ಒಬ್ಬಿಬ್ಬರು ರೂವಾರಿಗಳು ಕನ್ನಡ ಅಕ್ಷರಗಳನ್ನು ಕೊರೆಯುವಲ್ಲಿ ರೂವಾರಿ ಅರಿತಿರಬೇಕಾದ ಕೆಲವು ಸಂಗತಿಗಳನ್ನು ಹೀಗೆ ಹೇಳುತ್ತಾರೆ.

ಪೊಕ್ಕುಳು ತಲೆಕಟ್ಟುಮನ ।
ನ್ತಕ್ಕರದವಯವಮನಱಿದು ಖಣ್ಡರಿಸಲುಕೀ ।
ಇಕ್ಕುಡನೆ ಬಲ್ಲನಱಿಯ ।
ಮ್ಮಿರ್ಕ್ಕವರೆನ್ದೊಸೆದು ಧರಣಿ ಬಣ್ಣಿಸುತಿರ್ಕ್ಕುಂ॥[೫೮]

ಪೊಕ್ಕಳು ಅಂದರೆ ಅಕ್ಷರದ ಮುಖ್ಯಭಾಗ, ತಲೆಕಟ್ಟು ಮತ್ತು ಇತರ ಅವಯವ - ಇವು ಕನ್ನಡ ಅಕ್ಷರಗಳ ಅಂಗತ್ರಯ. ಅಕ್ಷರಗಳನ್ನು ಬಿಡಿಸುವಲ್ಲಿ ರೂವಾರಿ ಅವಶ್ಯ ಅರಿತಿರಬೇಕಾದ ಅಂಶಗಳಿವು ಎಂದು ಇಕ್ಕುಡನೆಂಬ ರೂವಾರಿಯ ಅಭಿಪ್ರಾಯ. ಕನ್ನಡ ನಾಡಿನ ಸುಪ್ರಸಿದ್ಧ ಶಿಲ್ಪಿಗಳಲ್ಲೊಬ್ಬನಾದ ಈತನ ಈ ಹೇಳಿಕೆ ಶಾಸ್ತ್ರಶುದ್ಧವಾಗಿದೆ.

ಬಹುರೇಖೆಯಾಗಿ ಬಾರದೆ ।
ಯತಿ ನಿಬಿಡಂ ನೇರ್ಪಡೆಲ್ಲರುಂ ಪೊಗಲುಕೀ ।

---

೫೫. EC VII ಶಿಕಾರಿಪುರ ೧೬೯ ಬಳ್ಳಿಗಾವಿ (೧೦೬೭)

೫೬. SII XI-ii ೧೨೭ ಕುರ್ತಕೋಟಿ - ಧಾರವಾಡ ಜಿಲ್ಲೆ (೧೦೮೨)

೫೭. SII IX-i ೧೬೫ ಕುರುವತ್ತಿ-ಧಾರವಾಡ ಜಿಲ್ಲೆ (೧೯೯)

೫೮. EC XI ದಾವಣಗೆರೆ ೧೪೯ ಕೊಡಗನೂರ (೧೧೧೩) ಈ ಶಾಸನದ ಲಿಪಿಕಾರ ಜಿನಭಕ್ತ ಮುದ್ದಿಗಾಂಕ).

ವಸ್ಮ ತಿಯೊಳು ಕಣ್ಗೊ ಳಿಸಲು
ಕತಿ ಬಲ್ಲಂ ದಾಸೋಜನಗ್ರತನಯಮ್ಮ ಸಣಂ ||[೫೯]

ಇನ್ನೊಬ್ಬ ರೂವಾರಿ, ದಾಸೋಜನ ಹಿರಿ ಮಗ ಮಸಣನ ಹೇಳಿಕೆಯಿದು. ಕನ್ನಡ ಅಕ್ಷರಗಳು ಬಹುರೇಖೆಯಾಗಿ ಬಾರದೆ ಅಂದರೆ ವರ್ತುಲಗೊಂಡು ಬರಬೇಕು, ಯತಿ ನಿಬಿಡಂ ನೇರ್ಪಡೆ ಅಂದರೆ ಅಕ್ಷರ ಮತ್ತು ಪದಗಳ ಮಧ್ಯ ಯೋಗ್ಯ ಸ್ಥಳವಿರಬೇಕು ಎಂದು ಹೇಳುತ್ತ ಕನ್ನಡದ ಅಕ್ಷರವಿನ್ಯಾಸ, ಪದವಿನ್ಯಾಸಗಳನ್ನು ಸ್ಪಷ್ಟಪಡಿಸಿರುವನು. ಇವು ಕನ್ನಡ ಲೇಖನ ಶಾಸ್ತ್ರಕ್ಕೆ (Calligraphy) ರೂವಾರಿಗಳು ನೀಡಿದ ಎರಡು ಅಪರೂಪ ಹೇಳಿಕೆಗಳಾಗಿವೆ.

IV

ರೂವಾರಿಗಳದು ವಂಶಪಾರಂಪರ್ಯ ವೃತ್ತಿ. ಈ ಪರಂಪರೆಯನ್ನು ಅವರು ಅಭಿಮಾನದಿಂದ ಹೇಳಿಕೊಂಡಿರುವರು.

೧. ಬಿರುದರೂವಾರಿ ಮುಖತಿಳಕ ಗಂಗಾಚಾರಿಯ ತಮ್ಮ ಕಾಂವಾಚಾರಿ ಕಂಡರಿಸಿದ'[೬೦]

೨. 'ಯಿ ಶಾಸವನವ ಬರದವನು ಚಿಂನಮಲ್ಲೋಜನ ಮಗನು ಲಿಂಗೋಜನು'[೬೧]

೩. 'ರೂವಾರಿವೈರಿಬಿರುದಭೇರುಂಡ ಚಾಉಡೋಜನ ಮರ್ಮ್ಮ ಸಾತೋಜನ ಬೆಸ'[೬೨]

೪. 'ಧರೆಯ ರೂವಾರಿ ಚಕ್ರವರ್ತಿ ಚಂದೋಜನ ಮಂಮಂ ಸಾತೋಜನ ಕಂಡರಣೆ'[೬೩]

೫. 'ಶ್ರೀಮತೆಬ್ಬರ ಗಣ್ಣನ ಮಗಂ ಮರುಳೋಜನಾತನ ಮಗ [ಜ]
ಕೋಜನಾತನ ಮಗಂ ರೂವಾರಿವೈರಿಭೇರುಣ್ಡ ಚಾವುಡಾಭರಣಗೋತ್ರ
ಪವಿತ್ರ ಚಾಣ್ಣೋಜನ ಮರ್ಮ್ಮ ಚನ್ನೋಜ ಮಾಡಿದ ಸಾಸನ'[೬೪]

೬. 'ಬೆಸಗೆಯ್ದ ಕಾವನಬನದ ಆ[ಯ್ಯ]ಮರ್ಮ್ಮೋಜನಳಿಯ ಜಕೋಜ[ಂ]'[೬೫]

೭. 'ಶ್ರೀಮತಿ ಸಿರಿವಳಿಗೆಯ ಹುಟ್ಟಿದ ಶಾಂನ್ತೋಜನಳಿಯ ಜಕ್ಕೋಜ.
ಜಕ್ಕೋಜನ ಪುತ್ರನು ಕಟ್ಕೋಜನಳಿಯ ಸೋಮೋಜ ಮಾಡಿದ.'[೬೬]

ಈ ಮಾತುಗಳು ನಮ್ಮ ರೂವಾರಿಗಳ ಕಲಾಪರಂಪರೆ ತಲೆಮಾರಿನಿಂದ ತಲೆಮಾರಿಗೆ ನಡೆದುಬಂದುದನ್ನು ವ್ಯಕ್ತಪಡಿಸುತ್ತವೆ. ಈ ಕಲಾಭಿಮಾನ ಮತ್ತು ಕುಲಾಭಿಮಾನಗಳನ್ನು ಕೆಲವರು ಐದಾರು ತಲೆಮಾರಿನಷ್ಟು ಹಿಂದೆ

---

೫೯. EC V-ii ಅರಸಿಕೆರೆ ೧೨೭ ತಳಲೂರ (೧೧೮೫)
೬೦. EC II ೧೪೩ ಶ್ರವಣಬೆಳ್ಗೊಳ (೧೧೩೧)
೬೧. EC VI ಶೃಂಗೇರಿಜಾಗೀರ್ ೧ ಶೃಂಗೇರಿ (೧೩೪೬)
೬೨. EC VIII-ii ಸಾಗರ ೮೦ ಆವಿನಹಳ್ಳಿ (೧೦೯೬)
೬೩. Inscriptions from Northern Karnataka & the Kolhapur State - 15 ಸಿರಸಂಗಿ-ಬೆಳಗಾಂವ ಜಿಲ್ಲೆ (೧೧೮೬)
೬೪. KI V ೧೩ ಅಗ್ಗೆರೆ-ಉತ್ತರಕನ್ನಡ ಜಿಲ್ಲೆ (೯೧೦೫)
೬೫. VI V ೭ ತಮಡಿಕಲ್ಲಾಳ, ಉತ್ತರಕನ್ನಡ ಜಿಲ್ಲೆ (೧೦೭೧ ಮತ್ತು ೧೦೭೨)
೬೬. EC VIII-ii ಸಾಗರ ೯೩ ಹೆಡತರಿಗ್ರಾಮ (೧೧೬೦)

ಹೇಳುವುದರಿಂದ ಇಂಥ ಹೇಳಿಕೆಗಳಲ್ಲಿಯ ಕೌಟುಂಬಿಕ ಸಂಬಂಧಗಳನ್ನು ಅಭ್ಯಸಿಸಿ ಪ್ರಾಚೀನ ರೂವಾರಿಗಳ ಒಂದೊಂದು ಕುಟುಂಬಗಳನ್ನು ಪುನರ್ರಚಿಸಬಹುದಾಗಿದೆ. ಸಾಲದಕ್ಕೆ ಪ್ರತಿಯೊಬ್ಬನು ಯಾವ ಯಾವ ಊರುಗಳ ಶಾಸನ ಬರೆದ? ಬದುಕಿದ ಅವಧಿಯೆಷ್ಟು? ಆತನ ಕಲಾಜೀವನದ ವೈಶಿಷ್ಟ್ಯಗಳೇನು? ಇತ್ಯಾದಿ ಅಂಶಗಳನ್ನು ಸಂಗ್ರಹಿಸಿ, ನಮ್ಮ ನಾಡ ಕಲೆಯನ್ನು ಉಳಿಸಿಕೊಟ್ಟು ಅಳಿದುಹೋದ ಈ ಶಿಲ್ಪಕಲಾವಿದರ ಇತಿಹಾಸವನ್ನು ಬರೆಯಬಹುದಾಗಿದೆ. ಉದಾಹರಣೆಗಾಗಿ ಬೀರೋಜನವೆಂಬ ರೂವಾರಿಯ ಚರಿತ್ರೆಯನ್ನು ನೋಡಬಹುದು.

ಬೀರೋಜನೆಂಬ ರೂವಾರಿ ಸಿಂಗೋಜನ ಮಗ. ಈತನಿದ್ದುದು ಸಾಂತರಸರ ಆಳಿಕೆಯ ಅವಧಿಯಲ್ಲಿ. ೧೩ ಮತ್ತು ೧೪ ನೆಯ ಶತಮಾನಗಳ ಮಧ್ಯ ಹೊಯ್ಸಳರಾಜ್ಯದ ನೈಋತ್ಯ ಭಾಗದಲ್ಲಿ ಎರಡು ದಶಕಗಳ ವರೆಗೆ ಶಿಲ್ಪಜೀವನ ಬದುಕಿದವ. ಕ್ರಿ.ಶ. ೧೨೮೬ರಿಂದ ೧೩೦೨ರ ಮಧ್ಯದ ೧೬ ವರುಷಗಳ ಅವಧಿಯಲ್ಲಿ ಈತನು ಕೆತ್ತಿರುವ ಶಾಸನಗಳು ಹಲವಾರು. ಬೈದೂರು ಬೊಪ್ಪೇಶ್ವರ ದೇವಾಲಯದ ಶಾಸನವೊಂದನ್ನು ಬಿಟ್ಟರೆ ಈತ ಕೆತ್ತಿದುವೆಲ್ಲ ವೀರಗಲ್ಲುಗಳು. ಈತನ ಶಾಸನಶಿಲ್ಪವ್ಯವಸಾಯ ಪ್ರಾರಂಭವಾದುದು ನಗರ ತಾಲೂಕಿನಲ್ಲಿ, ಈ ತಾಲೂಕಿನ ಗರಗೋಡ (ಕ್ರಿ.ಶ. ೧೩೮೬),[೬೭] ಮಾಸೂರು (ಕ್ರಿ.ಶ. ೧೨೯೦),[೬೮] ಹಾರಂಬಳ್ಳಿ (ಕ್ರಿ.ಶ. ೧೨೯೦)[೬೯] ವೀರಗಲ್ಲುಗಳನ್ನು, ತರುವಾಯ ಸಾಗರ ತಾಲೂಕಿನ ಕುಪ್ಪಳಲು (ಕ್ರಿ.ಶ. ೧೨೯೨)[೭೦] ನಾಡಮಡುವು (ಕ್ರಿ.ಶ. ೧೨೯೬),[೭೧] ಸೀತೂರ (ಕ್ರಿ.ಶ. ೧೨೯೩),[೭೨] ವೀರಗಲ್ಲುಗಳನ್ನು, ಕೊನೆಗೆ ಮತ್ತೆ ನಗರ ತಾಲೂಕಿನ ಬೈದೂರು (ಕ್ರಿ.ಶ.೧೨೯೪),[೭೩] ವರಕೋಡ (ಕ್ರಿ.ಶ.೧೨೯೨),[೭೪] ಸುತ್ತ (ಕ್ರಿ.ಶ. ೧೨೯೬),[೭೫] ಮಳಲೆ (ಕ್ರಿ.ಶ. ೧೩೦೨)[೭೬] ವೀರಗಲ್ಲುಗಳನ್ನು ಕೆತ್ತಿರುವನು. ಹೀಗಾಗಿ ೧೨೮೬-೧೨೯೦ರ ವರೆಗೆ ನಗರ ತಾಲೂಕು, ಕ್ರಿ.ಶ. ೧೨೯೨ರಿಂದ ೧೨೯೩ರ ವರೆಗೆ ಸಾಗರ ತಾಲೂಕು, ಕ್ರಿ.ಶ. ೧೨೯೪ರಿಂದ ಕ್ರಿ.ಶ. ೧೩೦೨ರ ವರೆಗೆ ಮತ್ತೆ ನಗರ ತಾಲೂಕಿನಲ್ಲಿ ಬದುಕು ನಡೆಸಿದ ಈತನು ಕ್ರಿ.ಶ. ೧೩೦೨ರ ತರುವಾಯ ತಿರಿಕೊಂಡಂತಿದೆ. ಈ ಹತ್ತು ಶಾಸನಗಳಲ್ಲಿ (೯ ವೀರಗಲ್ಲು ೧ ದಾನಶಾಸನ) ಕೊನೆಯದಾದ ಮಳಲಿ ಶಾಸನ (ಕ್ರಿ.ಶ. ೧೩೦೨)ದಲ್ಲಿ ಮಾತ್ರ "ಯಿ ಕಲ್ಲ ಮಾಡಿದಾತ ಕಲ್ಲುಕುಟಿಗ ಸಿಂಗೋಜನ ಮಗ ಬೀರೋಜ. ಆತನ ಬಿರುದು ಮಂತಣಿಸುವರ ಗಂಟಬಿಗಾಳ, ಮತ್ಸರಿಸುವರ ಮಂತಣಸೂಲ" ಎಂಬ ಮಾತುಗಳು ಕಂಡುಬರುವುದರಿಂದ, ಜೀವನದ ಕೊನೆಯ ಭಾಗದಲ್ಲಿ ಈತನ ಸೇವೆಗೆ ಪ್ರತಿಫಲವೆನ್ನುವಂತೆ ಈ ಬಿರುದು ಸಿಕ್ಕಿರಲು ಸಾಧ್ಯ.*

---

೬೭. MAR ೧೯೩೧, ೮೦ ಗರಗೋಡ (೧೨೮೬)

೬೮. EC VIII-ii ನಗರ ೩೩ ಮಾಸೂರ (೧೨೯೦)

೬೯. EC VIII-ii ನಗರ ೩೧ ಹಾರಂಬಳ್ಳಿ (೧೨೯೦)

೭೦. EC VIII-ii ನಗರ ೮೯ ಕುಪ್ಪಳಲು (೧೨೯೨)

೭೧. EC VIII-ii ನಗರ ೯೭ ನಾಡಮಡುವು (೧೨೯೨)

೭೨. EC VIII-ii ನಗರ ೧೦೨ ಸೀತೂರ (೧೨೯೩)

೭೩. EC VIII-ii ನಗರ ೧೮ ಬೈದೂರ(೧೨೯೪)

೭೪. MAR ೧೯೩೧, ೭೧ ವರಕೋಡ(೧೨೯೬)

೭೫. MAR ೧೯೩೧, ೭೩ ಸುತ್ತ (೧೨೯೬)

೭೬. EC VIII-ii ನಗರ ೨೭ ಮಳಲಿ (೧೩೦೨)

* ಬೀರೋಜನಿಗೆ ಸಂಬಂಧಿಸಿದ ಈ ವಿಷಯವನ್ನು ತಮ್ಮ ಅಪ್ರಕಟಿತ ಪಿಎಚ್.ಡಿ ಪ್ರಬಂಧದಿಂದ ಪೂರೈಸಿದ ಡಾ.ಎಸ್.ಸೆಟ್ಟರ್ ಅವರಿಗೆ ಕೃತಜ್ಞತೆಗಳು.

೭೮. ಶಾಪ ೫೦ ಕುಕನೂರ - ರಾಯಚೂರ ಜಿಲ್ಲೆ (೧೧೭೦)

ಇನ್ನು ಕೆಲವು ರೂವಾರಿಗಳು ತಮ್ಮ ಇಷ್ಟದೇವತೆ, ಗುರುಸನ್ನಿಧಿ, ರಾಜಾಶ್ರಯ ಮೊದಲಾದವುಗಳನ್ನು ಹೇಳಿರುವರು.

೧. 'ಸ್ವಸ್ತಿ ಶ್ರೀಮನ್ಮಹಾಗ್ರಹಾರ ಕುಕ್ಕನೂರ ಸಾಸಿರ್ವ್ವರ ವರಪುತ್ರನಚ್ಚಿನ ಕಮ್ಮಟದೊಡೆಯಂ ಚಣ್ಣೋಜನ ಮಗಂ ದಾಮೋಜಂ ಬೆಸಕೆಯ್ದು ಬರೆದ ಶಾಸನಂ'[೭೭]

೨. 'ಯೀ ಕಲ್ಲ ಮಾಡಿದಾತಂ ಈ ಊರ ಪೂರ್ವ್ವಿಕ ಮಾದೋಜನ ಮಗ ಬನದೋಜನು'[೭೮]

೩. 'ಬನವಾಸೆಯ ಕೋಟೆಯ ಮಧುಕೇಶ್ವರದೇವರ ಪಾದಾರಾಧಕ ಬೊಂಮ್ಮೋಜ ಕಲ್ಲು ಬೆಸಗೆಯ್ದ'[೭೯]

೪. 'ಶ್ರೀ ಪುಲಿಗೆಱೆಯ ವೀರಬಲ್ಲಾಳೇಸ್ವರದ ಆಚಾರಿ ಲಖೋಜನ ಮಗ ಬ್ರಮಪಂಡಿತರು ಮಾಡಿದರು'[೮೦]

೫. 'ಹೊಸವುರ ಮೊರಕೇಸ್ವರ ದೇವರ ಓಜನ ಮಗ ಸಿಂಗೋಜನ ಪುತ್ರ ಗಣಪೋಜನ ಬರೆಪಂ'[೮೧]

೬. 'ಸ್ವಯಂಭೂದೇವರ ಸೂತ್ರಧಾರಿ ಬಮ್ಮೋಜನ ಪುತ್ರಂ ಗೋತ್ರ ಪವಿತ್ರಂ ಸಾಸಿ[ರ್ವ]ರ [ಭ್ರಾ]ತಂ ಬಹುವಾ[ಕ್ಯ]ಸಂ[ತೋಸಂ]ಸರಸ್ವತೀxxದ್ಯಂ ಕಾಳೋಜಂಗೆ ಸರ್ವಬಾಧಾ ಪರಿಹಾರ'[೮೨]

೭. 'ಶ್ರೇಯಾಂಸಪಣ್ಡಿತರ ಗುಡ್ಡಂ ನನ್ನೋಜನ ಖಣ್ಡರಣೆಯ ಬೆಸ'[೮೩]

೮. 'ಸ್ವಸ್ತಿ ಶ್ರೀಚನ್ದ್ರಾ[ದಿತ್ಯನ] [ಶಿ]ಲ್ಪಿ [ಗೋಪಮ್ಮನ್]'[೮೪]

೯. 'ಕಲ್ಯಾಣದ ರಾಯರೂವಾರಿ ಬಲ್ಲೋಜ ಕಂಡರಸಿದ ಸಾಸನ'[೮೫]

೧೦. 'ಪಲ್ಲವಾಚಾರಿ ಲಿಕಿತಂ'[೮೬]

೧೧. 'ಇಮ್ಮಡಿ ಪೆಮ್ಮಡಿಯಾಚಾರಿ ಬಹುವೆಳ್ಳಂಗನ ಶೀಘ್ರಲಿಖ್ಖಿತಂ'[೮೭]

೧೨. 'ರೂವಾರಿ ಹೊಯ್ಸಳಾಚಾರಿಯ ಮಗಂ ವರ್ದ್ಧಮಾನಾಚಾರಿ ಬಿರುದ ರೂವಾರಿ ಮುಖತಿಳಕಂ ಕಣ್ಡರಿಸಿದ'[೮೮]

---

೭೮. EC VIII-ii ಸೊರಬ ೧೧೮ ಹಿರೇಆವಲಿ (೧೪೩೧)
೭೯. EC VIII-ii ಸೊರಬ ೨೬೭ ಕಲ್ಲೂರ (೧೧೬೩)
೮೦. EC V-ii ಚನ್ನರಾಯಪಟ್ಟಣ ೨೬೬ ಮೂಡಲಗೆರೆ
೮೧. SII XI-i ೫೦ ಎಲಿಶಿರೂರ (೧೧೩೮)
೮೨. SII XIX ೯೬ ಕುಂದಗೋಳ-ಧಾರವಾಡ ಜಿಲ್ಲೆ
೮೩. EC VIII-ii ನಗರ ೩೮ ಹುಮ್ಮಚ (೧೦೭೭)
೮೪. SII XI-i ೧೨ ಸೊರಟೂರ-ಧಾರವಾಡ ಜಿಲ್ಲೆ (೮೬೭)
೮೫. SII XX ೨೦೨ ಕಲಕೇರಿ-ವಿಜಾಪುರ ಜಿಲ್ಲೆ (೧೨೪೪)
೮೬. EC II ೨೧ ಶ್ರವಣಬೆಳಗೊಳ (೭೦೦)
೮೭. EC III ನಂಜನಗೂಡ ೧೮೩ ದೊಡ್ಡಹೊಮ್ಮಗ್ರಾಮ (೯೭೭)
೮೮. EC II ೧೧೮ ಶ್ರವಣಬೆಳ್ಗೊಳ (೧೧೨೦)

೧೩. 'ಶ್ರೀಮತ್ಕಲುಕುಟಿಗ ನಾಗೋಜಂ, ಕಂಡರಣ ವಿದ್ಯಾಧಿರಾಜಂ, ನಾರಣಯ್ಯ
ನಾಯಕ ಶ್ರೀಪಾದಪದ್ಮೋಪಜೀವಿತ ಭ್ರಮ(ರ) ಕಳಾಸೂತ್ರಧಾರಂ'[೮೯]

೧೪. 'ಬೂxxಗುಡನ ಮನೆಯ ಗೊರಬೋಜನ ಮಗ ಮಾದೋಜ
ನಾಗೋಜ ಮಾಡಿದ ನಿಶಿತಿಯ ಕಲ್ಲು'[೯೦]

ರೂವಾರಿಗಳ ಚರಿತ್ರೆ ಬರೆಯಲು ನೆರವಾಗುವ ಬೇರೆ ಕೆಲವು ಸಾಮಗ್ರಿಗಳಿವು. ದೇವಾಲಯ, ಅಧಿಕಾರಿ ಮತ್ತು ಅರಸರ ಸ್ಥಿರ ಆಶ್ರಯದಲ್ಲಿ ರೂವಾರಿಗಳಿದ್ದ ಸಂಗತಿ ಇವುಗಳಿಂದ ತಿಳಿದುಬರುತ್ತದೆ. ವಿಜಯನಗರದವರ ಆಶ್ರಯದಲ್ಲಿ ವಂಶ ಪರಂಪರೆಯಿಂದ ನೆಲೆಸಿದ ರೂವಾರಿ ಕುಟುಂಬವೊಂದನ್ನು ಇಲ್ಲಿ ನೋಡಬಹುದು.

೧. ಕೃಷ್ಣದೇವಮಹಾರಾಯ ಶಾಸನೇನ ಸಭಾಪತಿಃ।
ಅಭಾಣೀಂ ಮೃದುಸಂದರ್ಭಾಂ ತದಿದಂ ತಾಂಮ್ರಶಾಸನಂ।
ತ್ವಷ್ಟಾ ಶ್ರೀ ಮಲ್ಲಣಾಚಾರ್ಯ ವೀರಣಾಚಾರ್ಯನಂದನಃ।
ಆಕಲ್ಪ ಮಶ್ನುತೇತ್ರೈಕಾವೃತ್ತಿಂ ಶಾಸನಲೇಖನಃ॥[೯೧]

೨. ಕೃಷ್ಣದೇವಮಹಾರಾಯ ಶಾಸನೇನ ಸಭಾಪತಿಃ।
ಅಗ್ರಣೀವರಸಂದತ್ತಂ ತದಿದಂ ತಾಮ್ರಶಾಸನಂ।
ಅಪ್ಪಣಾಚಾರ್ಯವರ್ಯ ಶ್ರೀ ವೀರಣಾಚಾರ್ಯನಂದನಃ।
ಆಕಲ್ಪಮಶ್ನುತೇ ಕೀರ್ತಿ ಚಿರಂ ಶಾಸನ ಲೇಖಕಃ॥[೯೨]

೩. ಕೃಷ್ಣದೇವಮಹಾರಾಯ ಶಾಸನೇನ ಸಭಾಪತಿಃ ।
ಅಭಾಣೀನ್ಮೃದುಸಂದರ್ಭಂ ತದಿದಂ ತಾಮ್ರಶಾಸನಂ।
ಕೃಷ್ಣದೇವಮಹಾ[ರಾ]ಯ ಶಾಸನಾನ್ಮಲ್ಲಣಾತ್ಮಜಃ।
ತ್ವಷ್ಣಾ ಶ್ರೀವೀರಣಾಚಾರ್ಯೋವ್ಯಲಿಖಿತ್ತಾಮ್ರಶಾಸನಂ॥[೯೩]

೪. ಅಚ್ಯುತೇಂದ್ರ ಮಹಾರಾಯ ಶಾಸನೇನ ಸಭಾಪತಿ।
ಅಭಾಣೀನ್ ಮೃದು(ಸಂದ)ಸಂದರ್ಭಂ ತದಿದಂ ತಾಂಬ್ರಶಾಸನಂ ।
ಅಚ್ಚುತೇಂದ್ರ ಸಾಸನೇ ಮಲ್ಲಣಾತ್ಮ[ಜಃ]
ತ್ವಷ್ಟಾ ವೀರಣಾಚಾರ್ಯೋವ್ಯಲಿಖಿತ್ತಾಂಬ್ರಶಾಸನ॥[೯೪]

---

೮೯. AGAS III ೩ ನಾಗಾಯಿ-ಗುಲ್ಬರ್ಗಾ ಜಿಲ್ಲೆ

೯೦. EC VIII-ii ಸೊರಬ ೧೦೬ ಹಿರೇಆವಲಿ (೧೩೭೬)

೯೧. EC V-ii ಹಾಸನ ೬ ಹಾಸನ (೧೫೧೫)

೯೨. EC V-ii ಹಾಸನ ೯೪ ಕುದುರೆಗುಂಡಿ (೧೫೨೪)

೯೩. EC V-ii ಚನ್ನರಾಯಪಟ್ಟಣ ೧೬೭ ಚನ್ನರಾಯಪಟ್ಟಣ (೧೫೧೯)

೯೪. EC V-ii ಅರಸಿಕೆರೆ ೧೨೬ ಹಾರನಹಳ್ಳಿ (೧೫೩೫)

೫. .... ಮ[ಹಿ]ಥಾಚ್ಯುತರಾಯ ಶಾಸನೇನ ।
ಅಭಣದನುಗುಣಂ ವಚೋಮಹಿಮ್ನಾ ಸರಸತರೇಣ [ಸಭಾ]ಪತಿಃ ಸ್ವಯಂಭೂ
ತದಾಚ್ಯುತಮಹಾರಾಯ ಸಾಸನಾದ್ವೀರಣಾತ್ಮಜಃ ।
ತ್ವಷ್ಟಾ ಶ್ರೀ ವೀರಣಾಚಾರ್ಯ್ಯೋsವ್ಯಲಿಖಚ್ಚ ಶಿಲಾತಲೇ॥[೯೫]

೬. ಮೃದುಪದಮಿತಿ ತಾಂಮ್ರಶಾಸನಾರ್ಥಂ ಮಹಿತ ಸದಾಶಿವರಾಯ ಶಾಸನೇನ ।
ಅಭಣದನುಗುಣಂ ವಚೋಮಹಿಮ್ನ ಸರಸತರೇಣ ಸಭಾಪತಿ ಸ್ವಯಂಭುಃ।
ಸದಾಶಿವ ಮಹಾರಾಯ ಶಾಸನಾದ್ವೀರಣಾತ್ಮಜಃ ।
ತ್ವಷ್ಟಾ ಶ್ರೀ ವೀರಣಾಚಾರ್ಯೋsವ್ಯಲಿಖತ್ತಾಂಮ್ರ ಶಾಸನಂ ।[೯೬]

ಈ ಆರು ಉದ್ಧರಣೆಗಳ ಸೂಕ್ಷ್ಮ ಅಭ್ಯಾಸದಿಂದ ಕೃಷ್ಣದೇವರಾಯ, ಅಚ್ಯುತರಾಯ, ಸದಾಶಿವರಾಯರ ಆಶ್ರಯಪಡೆದ ರೂವಾರಿ ವೀರಣಾಚಾರ್ಯನ ವಂಶಾವಳಿಯನ್ನು ಹೀಗೆ ಗುರುತಿಸಬಹುದು.

ವೀರಣಾಚಾರ್ಯ
- ಮಲ್ಲಣಾಚಾರ್ಯ
  - ವೀರಣಾಚಾರ್ಯ(=ವೀರಣ)
    - ವೀರಣಾಚಾರ್ಯ
- ಅಪ್ಪಣಾಚಾರ್ಯ

ಇಂತಹ ಇನ್ನೊಂದು ವಂಶಪರಂಪರೆ ಶಾಸನಗಳಲ್ಲಿ ಹೀಗೆ ಸಿಗುತ್ತದೆ :

೭. ತಿರುಮಲರಾಯಸ್ಯ ಗಿರಾಸ್ಥಿರಕೀರ್ತೇಸ್ತಾಂಮ್ರ ಶಾಸನ ಶ್ಲೋಕಾನ್।
ಕವಿ ಶಾಸನ ಸ್ವಯಂಭೂಸ್ಸರಸಮಭಾಣೀತ್ಸಭಾಪತೇಸ್ಸೂನುಃ।
ಮಹಾ[ರಾ]ಜಸ್ತಿರುಮಲ ಮಹಾರಾಯಸ್ಯ ಶಾಸನಾತ್।
ವೀರಯ್ಯ ಗಣಪಾಚಾರ್ಯ್ಯೋsವ್ಯಲಿಖಿತ್ತಾಮ್ರ ಶಾಸನಂ॥[೯೭]

೮. ವೆಂಕಟಪತಿರಾಯ ಕ್ಷ್ಮಾಪತಿ ದೇಶೇನ ಶಾಸನಶ್ಲೋಕಾನ್।
ಕೃಷ್ಣ ಕವಿ ಕಾಮಕೋಟಿಸ್ಸರಸಮಭಾಣೀತ್ಸ[ಭಾ]ಪತೇಃ ಪೌತ್ರಃ।
ಶ್ರೀ ವೆಂಕಟಮಹಾರಾಯ ಸೂಕ್ತ್ಯಾ ಗಣಪತ್ಮಜಃ।
ಶ್ರೀ ವೀರಣಮಹಾಚಾರ್ಯ್ಯೋ ವ್ಯಲಿಖಿತ್ತಾಮ್ರ ಶಾಸನಂ।[೯೮]

---

೯೫. EC X-ii ಚಿಂತಾಮಣಿ ೨೮-೨೯ ಮಿಂಡಗಲ್ಲು (೧೫೬೫)
೯೬. EC IX ಚನ್ನಪಟ್ಟಣ ೧೮೬ ಮಳೂರ (೧೫೫೮)
೯೭. EC XII ತುಮಕೂರ ೧ ತುಮಕೂರ (೧೫೭೧)
೯೮. EC XI ಚಿಕ್ಕನಾಯಕನಹಳ್ಳಿ ೩೯ ತಿರುಮಲಾಪುರ (೧೫೮೯)

೯.	ವೀರ ಶ್ರೀ ರಂಗರಾಯೋಕ್ತ್ಯಾಃ ಪ್ರಾಹಪಾತ್ರಸ್ಸಭಾಪತೇಃ ।
ಕಾಮಕೋಟಿ ಸುತೋ ರಾಯ ಕವಿಶ್ಯುಸನವಾಙ್ಮಯಂ ।
ವೀರ ಶ್ರೀ ರಂಗರಾಯಕ್ಷ್ಮಾಪತಿ ದೇಶೇನ ಸೋಮನಾಥಾರ್ಯಃ।
ಶಾಸನಮಲಿಖತ್ಕಾಮಯ ಶ್ರೀ ಗಣಪಯಾರ್ಯ ಪಾತ್ರಮಣಿಃ।[೯೯]

ಈ ಮೂರು ಉದ್ಧರಣೆಗಳಿಂದ ತಿರುಮಲರಾಯ, ವೆಂಟಕಪತಿರಾಯ, ರಂಗರಾಯರ ಆಶ್ರಯ ಪಡೆದ ರೂವಾರಿ ವಂಶಾವಳಿಯನ್ನು ಹೀಗೆ ರೇಖಿಸಬಹುದು.

ವೀರಯ್ಯ

ಗಣಪಾಚಾರ್ಯ

ವೀರಣಾಚಾರ್ಯ

ಸೋಮನಾಥಾರ್ಯ

ಇಲ್ಲಿ ಮೊದಲಿನ ವಂಶಚಿತ್ರದ ಕೊನೆಯಲ್ಲಿ ಬರುವ ವೀರಣಾಚಾರ್ಯ, ಎರಡನೆಯ ವಂಶ ಚಿತ್ರದ ಮೊದಲಲ್ಲಿ ಬರುವ ವೀರಯ್ಯ ಒಬ್ಬನೇ ಆಗಿದ್ದ ಪಕ್ಷದಲ್ಲಿ, ಈ ಎರಡೂ ವಂಶಾವಳಿಗಳನ್ನು ಒಂದರ ಮುಂದುವರಿಕೆ ಇನ್ನೊಂದು ಎಂದು ಭಾವಿಸಬೇಕಾಗುತ್ತದೆ. ಆಗ ಈ ರೂವಾರಿಗಳು ವಿಜಯನಗರ ರಾಜರಲ್ಲಿ ತಲೆತಲಾಂತರ ಆಶ್ರಯಪಡೆದುದು ಸ್ಪಷ್ಟವಾಗುತ್ತದೆ.

V

ಈ ಜೀವನಚರಿತ್ರೆಯೊಂದಿಗೆ ಅವಶ್ಯ ತಿಳಿದುಕೊಳ್ಳಬೇಕಾದ ವಿಷಯ, ರೂವಾರಿಗಳ ಕಲಾಜೀವನದ ಚರಿತ್ರೆ. ಕಲಾಕ್ಷೇತ್ರದಲ್ಲಿ ಅವರು ಮರ್ತ್ಯಲೋಕದ ವಿಶ್ವಕರ್ಮರು. "ಸ್ವಸ್ತಿ ಸಮಸ್ತ ತ್ರಿಭುವನ ನಿರ್ಮಿತಾಧಾರ ವಿಶ್ವಂಖರ್ಮಕುಲೋದ್ಭವಂ ಜಗದ್ಗುರು ಎನಿಸುವ ವೊಡೆಯಪ್ಪಯ್ಯನ ಮಗ ಬಸವಾಚಾರಿಯ ಮಗ ವಿಶ್ವನಾಥ ಹೊಯಿದೆ"[೧೦೦] ಎಂಬ ಮಾತಿನಿಂದ ಈ ಅಂಶವನ್ನು ಅರಿಯಬಹುದು. ಈ ವಿಶ್ವಕರ್ಮಕುಲದ ಕಲಾಸಿದ್ಧಿಯ ವಿವಿಧ ಸಾಧ್ಯತೆಗಳಿಗೆ ಅನೇಕ ಶಾಸನಗಳು ಆಧಾರವನ್ನೊದಗಿಸುತ್ತವೆ.

೧.	'ವಿಶ್ವಕರ್ಮ್ಮಸಮಾನೇನ ವಿಶ್ವಕರ್ಮ್ಮಚಾರ್ಯ್ಯೇಣೇದಂ ಶಾಸನಂ ಲಿಖಿತಂ'[೧೦೧]

೨.	'ಬೆಸಗೆಯ್ದೊಂ ಕೊಯತೂರ ಕಾಸಿಗಂ ವಿಕ್ರಮಾದಿತ್ಯಂ ಬಹುಗುಣತೇಜನ್'[೧೦೨]

೩.	'ಬಿರುದ ರೂವಾರಿಮುಖತಿಳಕಂ ವರ್ದ್ಧಮಾನಾಚಾರಿ ಖಂಡರಿಸಿದಂ'[೧೦೩]

೯೯.	EC X-ii ಮುಳಬಾಗಿಲ ೬೦ ಆವನಿ (೧೬೪೫)
೧೦೦.	EC V-ii ಚನ್ನರಾಯಪಟ್ಟಣ ೧೮೮ ಗೊಲ್ಲರ ಹೊಸಹಳ್ಳಿ (೧೫೩೦)
೧೦೧.	EC III ಮಂಡ್ಯ ೧೧೩ ಹಳ್ಳೆಗೆರೆ (೭೧೩)
೧೦೨.	EC X-ii ಮುಳಬಾಗಿಲ ೧೬೨ ತಾವರಕೆರೆ
೧೦೩.	EC II ೭೩ ಶ್ರವಣಬೆಳ್ಗೊಳ (೧೧೧೮) ಮತ್ತು ೧೭ ಶ್ರವಣಬೆಳ್ಗೊಳ(೧೧೨೩)

೪. 'ಧರೆಯ ರೂವಾರಿಚಕ್ರವರ್ತಿ ಸಮತೋಜರ ಕಣ್ಡರಣೆ'[೧೦೪]

೫. 'ಮೂಱುಲೋಕದ ಬಿರುದ XXವಾರಿಗಳ್ಗೆ ಬಂಗಾಱ ಚವ್ವೋಜ'[೧೦೫]

೬. 'ಬಿರುದ ರೂವಾರಿ ಮುಖತಿಳಕಂ ಗಂಗಾಚಾರಿ ಕಂಡರಿಸಿದಂ'[೧೦೬]

೭. 'ಬಿರುದ ರೂವಾರಿಗಳಿಗೆ ಮಸ್ತಕಸಾರ್ಥxxವೋಜ'[೧೦೭]

೮. 'ಬಿರುದ ಕಂಡರಣೆಕಾಱ ಕೋಳಾಹಳಂ ರೂವಾರಿ ಮಲ್ಲೋಜನ ಕಂಡರಣೆ'[೧೦೮]

೯. 'ಬಿರುದ ರೂವಾರಿಗಳ ಗಂಡ xxಬಿಕ ಮಲ್ಲುಕ ನ ಕಂಡ xx'[೧೦೯]

೧೦. 'ರೂವಾರಿವೈರಿಬಿರುದಭೇರುಂಡ ಚಾಉಡೋಜನ ಮರ್ಮ್ಮ ಸಾತೋಜನ ಬೆಸ'[೧೧೦]

೧೧. 'ಶ್ರೀಮತು ಎಚ್ಚರಗಂಡ ಮರುಳೋಜನ ಮxxx'[೧೧೧]

೧೨. 'ಯಿ ಕಲ್ಲ ಮಾಡಿದಾತ ಕಲ್ಲುಕುಟಿಗ ಸಿಂಗೋಜನ ಮಗ ಬೀರೋಜ, ಆತನ ಬಿರುದು ಮಂಠಣಿಸುವರ ಗಂಟರಗಾಳ, ಮತ್ಸರಿಸುವರ ಮಂಠಣಸೂಲ'[೧೧೨]

೧೩. 'ಕೇತಳಿಯ ಪುತ್ರ ಸರಸತಿಗಣಂಗಳ xxಸಿ ಮಚ್ಚರಿಪ ಪ್ರಸಾದಿತರಿಗೆ
ಮಸ್ತಕಸುಲ, ಅರಿಬಿರುದಪ್ರಸದಿಗಳ ಗಂಡಗತರಿ, ತೊಡರ್ದರ ಅಂಕುಸ,
ಬಸದಿಯ ಮಲೋಜ ಮಡಿದ ಕಲು'[೧೧೩]

೧೪. ರೂವಾರಿ[ಕು]ಮುದಚಂದ್ರಂ ।
ಭಾವುಕ ರೂವಾರಿ ಜಕ್ಕಂ ಮತ್ತಂ ।
ರೂವಾರಿವಾರಿಜೋದ್ಭವ।
ನೀ ವಸುಮತಿಯೊಳಗತಿಪ್ರಚಣ್ಡಂ ಚೌಣ್ಡ ॥
ಸಲೆ ಮಂದೂರ ಗವುಣ್ಡನಾಕಣೆಯ ಚಾವುಣ್ಡಂಗೆ ಸತ್ಪುತ್ರನೀ ।
ಬಲದೇವಂ ಶಿವಪಾದಪದ್ಮಮಧುಪಂ ಮನ್ದೂರೊಳಂ ಶಂಭುವೀ ।
ಕಲಿದೇವಂಗತಿಭಕ್ತಿಯಿನ್ದಂ ಬೆಸಗೆಯ್ದೀ ಶಾಸನಂ ನಿಲ್ಕೆ ತಾಂ ।
ನೆಲನುಂ ನೇಸಱುಮುಳ್ಳಿಂ ತೊಲಗದಿನ್ನಾಚಂದ್ರತಾರಂಬರಂ ॥[೧೧೪]

---

೧೦೪. KII ೨೪ ಸಿರಸಂಗಿ-ಬೆಳಗಾವ ಜಿಲ್ಲೆ (೧೧೪೮)
೧೦೫. SII XI-i ೧೦೦ ಅಸುಂಡಿ-ಧಾರವಾಡ ಜಿಲ್ಲೆ (೧೦೬೪)
106. EC II ೬೭ ಶ್ರವಣಬೆಳ್ಗೊಳ (೧೧೨೯)
107. EC V-ii ಚನ್ನರಾಯಪಟ್ಟಣ ೨೬೫ ಗಿಡಗದವೂರು (೧೧೯೦)
108. EC VI ತರೀಕೆರೆ ೪೫ ಅಮೃತಾಪುರ (೧೧೯೬)
109. EC VI ಕಡೂರ ೫೩ ಬ್ರಹ್ಮಸಮುದ್ರ (೧೧೭೫)
110. EC VIII-ii ಸಾಗರ ೮೦ ಆವಿನಹಳ್ಳಿ (೧೧೯೫)
111. EC VIII-ii ಸಾಗರ ೧೦೩ ಬೇಸೂರ (೧೦೮೯)
112. EC VIII-ii ನಗರ ೨೭ ಮಳಲಿ (೧೩೦೨)
113. EC XII ತಿಪಟೂರ ೩೨ ತಂಡಗದ (೧೧೬೪)
114. SII XV ೧೬ ಮದನಭಾವಿ-ಧಾರವಾಡ ಜಿಲ್ಲೆ (೧೧೩೮)

೧೫.. ಕಲ್ಲ ಬೆಸಂಗಳನರಿವವ । ರೆಲ್ಲಂ ಕೈಕೊಣ್ಬು ಪೊಗ xxxx ।
xx ನೆ ಚಾವುಣ್ಣೋಜಂ।ಗಲದೆ ಪೆರಗೋ೯ವಜವೆಸರದೇನೊಪ್ಪುಗುಮೆ ॥[೧೧೫]

೧೬. 'ಸ್ವಸ್ತು ಶ್ರೀಮತು ಬಳ್ಳಿಗ್ರಾಮೆಯ ದಮ್ಮೇಸ್ವರದೇವರ ಪಾದಪಂಕಜ
ಭ್ರಮರ ದಾಸೋಜನ ಪುತ್ರ ಚಾವಣನ ಗೆಯ್ದ ನಿತ್ಯಸರಸ್ವತೀಗಣದಾಸಿ
ಮಚ್ಚರಿಫ ರುವಾರಿಸ್ವರಭಭೇರುಣ್ಡ'[೧೧೬]

ಈ ಬಿರುದು, ಆತ್ಮಪ್ರೌಢಿಮೆಗಳಲ್ಲಿಯ ಒಂದೊಂದು ಮಾತು ನಮ್ಮ ರೂವಾರಿಗಳ ಅಭಿಮಾನ, ಪ್ರತಿಷ್ಠೆಗಳನ್ನು ವ್ಯಕ್ತಪಡಿಸುತ್ತವೆ. ಇನ್ನು ಕೆಲವು ಸಲ ಅವರ ಕಲಾಸಿದ್ಧಿ ಹೀಗೆ ವ್ಯಕ್ತವಾಗಿದೆ.

೧. 'ಸರ್ವ್ವಕಲಾಧಾರಭೂತ ಚಿತ್ರಕಲಾಭಿಜ್ಞೇನ ವಿಶ್ವಕರ್ಮ್ಮಾಚಾರ್ಯ್ಯೇಣೇದಂ
ಶಾಸನಮ್ ಲಿಖಿತಮ್....'[೧೧೭]

೨. 'ಇ ಕಲ್ಲಂ ಬೆಸಗೆಯ್ದೊ ವಿನ್ನಾಣಿ ಚಾಮುಣ್ಡನೆಂಬೊ ರೂವಾರದೊಳಂ
ಶಿಲಾಕರ್ಮ್ಮದೊಳಂ ಪ್ರವೀಣಂ .....'[೧೧೮]

೩. 'ಸೈವೋಜ ರೂವಾರಿಭೈರವಂxxನರಕರಿಗೆ ನುರಾಗxxಣಿಪxx ಐದುಮನ್ದಿರ ಕೆಂಶೆ
ಸುರದೊರೆಯಲ್ಲxxದಚ್ಚರಿಸುವ ಶಿಳ[ಕಾಂಸ್ಯ]ವಿದ್ಯೆಯೊಳು ಸೈವುಗನುಂ'[೧೧೯]

೪. ಪುರಿಕರ ಪಟ್ಟಣೋದ್ಭವನ ಕಂಟದ ಬಮ್ಮನ ಪುತ್ರನಯ್ಯಣಂ।
ಮರವೆಸದೊಪ್ಪುವಿಟ್ಟಿಗೆಯ ದನ್ತದ ಚಿತ್ರದ ಶಾಸ್ತ್ರಯುಕ್ತಮಾ ।
ಗಿರೆ ಬೆಸಗೆಯ್ವ ಕಲುಭರಿವ ಕಮ್ಮ ಐವಿನ್ನಣದೋಜೆಗೆಲ್ಲಿಯುಂ ।
ಪರಿಕಿಸೆ ವಿಶ್ವಕರ್ಮ್ಮನಿನಿವಂ ಮಿಗಿಲೆಂಬುದಶೇಷಭೂತಳಂ ॥[೧೨೦]

೫. 'ಮರವೆಸದೊಳ್ ಕಲ್ವೆಸದೊಳ್ ।
ವರಪತ್ರಚ್ಛೇದ xxಮ್ಮಂಗಳೊಳುಂ ।
ದೊರೆ ವಿಶ್ವಕರ್ಮನುಳಿದ x ।
ಶ್ರೀ ಸೂತ್ರಧಾರಿ ಬಮ್ಮನೊಳೆನ್ತುಂ ॥
ಆತನ ಮಗನ ಮಗಂ ವಿ।

ಖ್ಯಾxx ಶ್ರೀ xxxxxxxರಿ।
ಜಾತಾವಲ್ಲಭ ಪದಸರೋಜಭೃಙ್ಗಂ ತೈಲಂ ॥
ಸ್ವಸ್ತಿ ಶ್ರೀಮದಗ್ರ xxಭಮಮ್ಮನೊಳ್ಪಿಂಗಾಮ್ಮ ಸರಸ್ವತಿಗಣ

115. SII IX-i ೧೦೨ ಮೈಲಾರ-ಧಾರವಾಡ ಜಿಲ್ಲೆ (೧೦೪೬)
೧೧೬. EC XV ಬೇಲೂರ ೨೫೭ ಬೇಲೂರ
೧೧೭. EC IV-ii ನಾಗಮಂಗಲ ೮೫ ದೇವರಹಳ್ಳಿ (೭೭೬)
೧೧೮. EC VIII-ii ಸೊರಬ ೪೦೫ ಹಂಚಿ
೧೧೯. SII Xi-i ೪೮ ಗದಗ-ಧಾರವಾಡ ಜಿಲ್ಲೆ (೧೦೦೨)
೧೨೦. SII XI-ii ೧೨೭ ಕುರ್ತಕೋಟಿ- ಧಾರವಾಡ ಜಿಲ್ಲೆ (೧೦೮೨)

ಮಿತ್ರ ಪರನಾರೀಪುತ್ರ xxxxಭಾಸ್ವನ್ತನೆಣ್ಭತ್ತನಾಲ್ವರ ವಿದ್ಯಾವನ್ತ
ಶ್ರೀ ಮತ್ಸೂತ್ರಧಾರಿ xxxx ||[೨೨೧]

೬. ಪದಕದ ಮಕುಟದ ಕೇಯೂ।
ರದ ಕೆಲಸದೊಳಕ್ಕಸಾಲಿ ಬಸವೋಜ ಸುತಂ ।
ಚದುರಂ ಕೇತೋಜಂ ಮ।
ತ್ತಿದೆಂತು ಕಂಡರಿಸಿ ಕಡದನೀ ಶಾಸನಮಂ||[೨೨೨]

೭. ಪುಟದೊಳು ಗೋಗ್ರಹಣಮ।
ನುತ್ಕಟಮಾಗಿರೆ ಬರೆದು ಮೆಚ್ಚಿಪುದಜಿಂ ಕಾಪಿಂ ।
ದಿಟದಿಂ ಮೂಜುಂ ರಾಯರ ।
ಕಟಕದ ಬಿರುದಗಲೇಖಕೋಪಾಧ್ಯಾಯ
ಇ ಶಾಸನಮಂ ಮಾಳೋಜನ ಮಗ ರೂವಾರಿ ಮಲ್ಲೋಜ ಖಣ್ಡರಿಸಿದ ||[೨೨೩]

೮. ರಾಯಸೂತ್ರಧಾರಿ ಗೋಪೋಜನ ತಮ್ಮ ಸೂರೋಜ ಕಂಡಳಿಸಿದ.
ಸರಸತಿಯ ಕೊರಳಮುತ್ತುವೋ ।
ಲಿರೆ ವೃತ್ತಂ ಕೋಮಲಂ ಸುಭದ್ರವೆನಿಪ
ಕರೆಮಂದರ xxx ।
x x x x x x x x x x x x x ||[೨೨೪]

೯. 'ಸರಸ್ವತೀಗಣದಾಸಿ ಬೆಂಗೋಜನ ಪುತ್ರ ಇಕ್ಕುಡಾಚಾರಿ ಎರಡು
ದೇವಾಲಯಂ ಮಾಡಿ ಸಾಸನಮಂ ಬರೆದ'[೨೨೫]

೧೦. 'ದೇವರ ವುಪ್ಪರಿಗೆ ಸಿಖರ ವುಯ್ಯಾಲ ಕೆಲವನೂಮಾಡಿ ಇ ಶಾಸನವ
ಹೊಯ್ದಾತನು ಕಲುಕುಟಿಗ XXXXಯ ರಾವೋಜ'[೨೨೬]

೧೧. 'ಕಲುಕಣಿ ನಾಡೋಜ ರೂವಾರಿ ಮಾಬೋಜ ಗೆಯ್ದ ಸಾಸನಮ,
ದೇವರು ನಂದಿಯಂ'[೨೨೭]

೧೨. ಕಟುಕೋಜಂ ನಾಲ್ಕು ಕಲ್ಲ ಬೆಸಗೆಯ್ದ[೨೨೮]

---

೨೨೧. SII XI-ii ೧೫೧ ಬೆಳವಣಿಕಿ-ಧಾರವಾಡ ಜಿಲ್ಲೆ (೧೧೦೨)
೨೨೨. SII IX-ii ೭೧೧ ಅಂಬಲಿ-ಬಳ್ಳಾರಿ ಜಿಲ್ಲೆ
೨೨೩. EC V-ii ಅರಸಿಕೆರೆ ೧೪೧ ಕರಗುಂದ (೧೧೫೮)
೨೨೪. EC V-ii ಅರಸಿಕೆರೆ ೧೨೩ ಹಾರನಹಳ್ಳಿ (೧೨೪೪)
೨೨೫. EC XI ದಾವಣಗೆರೆ ೧೫೫ ಕಬ್ಬೂರ (೧೧೨೪)
೨೨೬. EC XI ಚಿತ್ರದುರ್ಗ ೨ ಚಿತ್ರದುರ್ಗ (೧೩೫೫)
೨೨೭. EC XII ಗುಬ್ಬಿ ೧೪ ಬೆನಚಿಗೆರೆ (೧೧೪೦)
೨೨೮. EC VIII-ii ಸೊರಬ ೬೨ ಗುಡುವೆ (೧೦೩೨)

ಈ ಹೇಳಿಕೆಗಳಲ್ಲಿ ರೂವಾರಿಗಳ ಪರಿಶ್ರಮ, ಕಲಾಭಿಜ್ಞತೆ, ಕಲಾವೈವಿಧ್ಯ ಮತ್ತು ಸೂಕ್ಷ್ಮತೆಗಳು ಎದ್ದು ತೋರುತ್ತವೆ. ಇಲ್ಲಿ ಒಬ್ಬ ಪದಕ ಮಕುಟ ಕೇಯೂರ ರಚನೆಯಲ್ಲಿ ಪ್ರವೀಣ, ಇನ್ನೊಬ್ಬ ಪುಟದೊಳು ಇಡೀ ಗೋಗ್ರಹಣಕಥೆಯನ್ನು ಬಿಡಿಸುವ ಸೂಕ್ಷ್ಮಜ್ಞ, ಮತ್ತೊಬ್ಬ ಸರಸ್ವತಿಯ ಕೊರಳಮುತ್ತಿನಂತೆ ಕಲ್ಲಿನಲ್ಲಿ ಮುದ್ದಾದ ಅಕ್ಷರ ಬಿಡಿಸುವವ. ಪುಲಿಗೆರೆಯ ಅಯ್ಯಣನಂತೂ ಕಟ್ಟಿಗೆ, ಇಟ್ಟಿಗೆ, ದಂತಚಿತ್ರ ಇತ್ಯಾದಿ ಶಾಸ್ತ್ರಕೋವಿದ, ಕಾಷ್ಠ, ಶಿಲೆ ಮತ್ತು ಪತ್ರಚ್ಛೇದ ಕಲೆಗಳಲ್ಲಿ ಬಲ್ಲಿದನಾದ ಬರ್ಮನ ವಂಶಜನೊಬ್ಬ ಎಂಬತ್ತುನಾಲ್ಕರ(?) ವಿದ್ಯಾವಂತ. ಇಕ್ಕುಡಾಚಾರಿ, ರಾವೋಜ, ಮಾಬೋಜರು ವೈವಿಧ್ಯಪೂರ್ಣ ಶಿಲ್ಪಕಾರ್ಯ ಗೆಯ್ದುವರು. ಈ ಪ್ರಸಂಗದಲ್ಲಿ ಹಿಂದೆ ಹೇಳಿದ "ಪೊಕ್ಕುಳು ತಲೆಕಟ್ಟುಂ ...." ಮತ್ತು "ಬಹುರೇಖೆಯಾಗಿ ಬಾರದೆ......" ಎಂಬ ಪದ್ಯಗಳನ್ನೂ ಗಮನಿಸಬಹುದು.

VI

ಸಾಮಾನ್ಯವಾಗಿ ಒಂದು ಶಾಸನವನ್ನು ಆದ್ಯಂತ ಒಬ್ಬನೇ ಪೂರೈಸುತ್ತಿದ್ದರೂ ಕೆಲವು ಸಲ ಅನೇಕರು ಕೂಡಿ, ಇನ್ನು ಕೆಲವು ಸಲ ಶಾಸನನಿರ್ಮಾಣ ಕಾರ್ಯದ ಒಂದೊಂದು ಘಟ್ಟದಲ್ಲಿ ಒಬ್ಬೊಬ್ಬರು ನಿಂತು ದುಡಿದಿರುವರು.

೧. 'ಈ ಶಾಸನಮಂ ಮಣಿಗವಳ್ಳಿಯ ರೆಬ್ಬೋ[ಜನ] ಮಗ ಕಲ್ಲೋಜನು,
ಬೆಂಮೋಜನ ಮಗ ವಾಮೋಜನುಂ [ಕಂ]ಡಳಿಸಿದರು.'[೧೨೯]

೨. 'ಯಿ ಕಲ್ಲಮಾಡಿದಾತ ಕೇಶವ ಆಚಾರಿಯ ಮಗ ಯಿಸರಾಚಾರಿ,
ರಾಮಾಚಾರಿಯ ಮಗ ಮಾಣಿಯಾಚಾರಿ'[೧೩೦]

೩. 'ಬಳ್ಳಿಗಾವೆಯ ರಾಮೋಜ ಬರಮೋಜಂಗಳೆ ಬೆಸಗೆಯ್ದರು'[೧೩೧]

೪. 'ಕೇತೋಜಂ ಬಂಮೋಜಂ। ನೂತನಮನು ವಿಶ್ವಕಂಮ್ಮರೆಂಬರ್ಕ್ಕಡೆದರ್.......'[೧೩೨]

೫. 'ಕಡಿದಾತ ಕಲಿಸೆಯ ರಾಮೋಜನ ಮಗ ಮಧುಕೋಜ।
ಕಲ್ಲ ಬರದಾತ ಬರದವಳ್ಳಿಯ ಬೆಳಜೀಯನ ಮಗ ಮೆಚಿಜೀಯ'[೧೩೩]

೬. 'ಹಾನೋಜರ ಮಾಳೋಜರ ಚೆಂಗೋಜರ ಈಂತಿನಿಬ್ಬರ ಕೆಲಸ,
ಇಕ್ಕುಡೋಜನ ಬರಪ'[೧೩೪]

---

೧೨೯. SII XV ೯೫(೯೬) ಇಂಗಳೇಶ್ವರ-ವಿಜಾಪುರ ಜಿಲ್ಲೆ (೧೨೬೫)

೧೩೦. KII- ೪೬ ಹಾಡುವಳ್ಳಿ-ಉತ್ತರಕನ್ನಡಜಿಲ್ಲೆ (೧೪೨೩)

೧೩೧. EC VIII-ii ಸೊರಬ ೨೮೮ ಕಲ್ಲಾರ

೧೩೨. Inscriptions from northern Karnatak & the Kolhapur State-೧೭ ವಿಜಾಪುರ (೧೧೯೬)

೧೩೩. EC VIII-ii ಸಾಗರ ೪೫ ಬರದವಳಿ(೧೩೦೦)

೧೩೪. EC V-ii ಅರಸಿಕೆರೆ ೧೧೦ ಕೆಲ್ಲಂಗೆರೆ (೧೧೪೨)

೭. 'ಕೆಸಱುಕಲ್ಲಾದಿಯಾಗಿ ಕಲ್ಲೋೞ್ಧುರ ಕೆಲಸ।ಭರತೋಜನ ಕಣ್ಣಾರಣೆ.'[೧೩೫]

೮. 'ಪೊಯ್ದಂ ಸಾನೋಜನುಂ ಪದ್ಮನುಂ ಮಂಗಳಂ'[೧೩೫ಅ]

ಹೀಗೆ ಒಂದು ಶಾಸನವನ್ನು ಹಲವು ರೂವಾರಿಗಳು ಪೂರ್ಣಗೊಳಿಸಿರುವರು.

VI

ಕವಿ, ಲಿಪಿಕಾರ ಮತ್ತು ರೂವಾರಿಗಳಲ್ಲಿ ರೂವಾರಿಗಳು ಶ್ರಮಜೀವಿವರ್ಗಕ್ಕೆ ಸಂಬಂಧಿಸಿದವರು. ಶಾಸನರಚನೆಯ ತರುವಾಯ ಅವರಿಗೆ ಪ್ರತಿಫಲ ಸಿಗಬೇಕಾದುದು ಸಹಜ. ಈ ಮಾತಿಗೆ ಹಲವು ಉದಾಹರಣೆಗಳು ಸಿಗುತ್ತವೆ.

೧. 'ಯೀ ಶಿಲಾಶಾಸನವ ಬರದ ಅಕಸಾಲೆ ಸಿರಿಯಣಗೆ ವೊಕ್ಕುಳದ ಕಾಟಗಂಭದ ಮಾನ್ಯ'[೧೩೬]

೨. 'ಆಸಂದಿಯ ಸೋಮೋಜನ ಮಗ ಹರಿಯೋಜ ಸಾತೇಶ್ವರದೇವರ ದೇವಾಲ್ಯವಂ ಎರಡು ತಾಮಱಶಾಸನವುವಂ ಗೆಯ್ದು, ಹರಿಯೋಜಂಗೆ ಸಾತಮುದ್ರದ ಕೆಳಗೆ ಗದ್ದೆ ಕೊ೧೦'[೧೩೭]

೩. 'ಅಕ್ಕರಂಬೊಯ್ದ ಕೊವರಾಚಾರಿಯ ಮಗಂ ಮಾಣಿಕಾಚಾರಿಗೆ ಕಣ್ದುಗ ಗೆಟ್ದೆ ಕೊಡಂಗಗೊಟ್ಟರ್'[೧೩೮]

೪. 'ಶ್ರೀ ಹರಿಹರದೇವರ ಮನೆಯ ಅಕ್ಕಸಾಲೆ ನೀರವಿರೋಜನ ಮನಕರಿಯ
ತಿಪೋಜನು ಯೀ ಶಾಸನವ ತಿದ್ದಿದಕೆ ಬೆಳುವಡಿಯ ಗ್ರಾಮದಲ್ಲೂ ವೊಕ್ಕು
ಳದ ಎರೆಯ ಭೂಮಿಯನು ಕೊಟ್ಟೆಉ'[೧೩೯]

೫. 'ಸರ್ವಕಲಾನ್ತಜ್ಞೌತಿ ಚಿತ್ರಕಲಾಭಿಜ್ಞೇನ ವಿಶ್ವಕರ್ಮ್ಮಾಚಾರ್ಯೇಣೇದಂ
ಶಾಸನಂ ಲಿಖಿತಮ್ ಚತುಷ್ಕಣ್ದುಗ ವ್ರೀಹಿ ದ್ವಿಕಙ್ಗ ಕ್ಷೇತ್ರ ದತ್ತಃ'[೧೪೦]

೬. 'ತಿಂಮೊದನ ಬರಹಮಾಗಲು, ನಾಡಹರುವಿನ ಯಿಪ್ಪತ್ತು ಸಲಗೆ ಭತ್ತ'[೧೪೧]

೭. 'ಇ ಸಾಸನಮಂ ಹೊಯ್ದ ಕಲುಕುಟ್ಟಿಗ ಸಾನ್ತಾಚಾರಿಗೆ ತಂನXXಳಗೆ
ಗಟ್ದೆ ಹತ್ತು ಕೊಳಗವ ಕೊಟ್ಟ'[೧೪೨]

---

೧೩೫. SII XI-ii ೧೭೭ ಮುಗದ -ಧಾರವಾಡ ಜಿಲ್ಲೆ (೧೧೨೫)

೧೩೫ಅ. EC VIII-i ಶಿವಮೊಗ್ಗ ೧೦ ಬಸವನಗಂಗೂರ (೧೦೮೫)

೧೩೬. SII IX-ii ೬೪೭ ದೇವಲಾಪುರ-ಬಳ್ಳಾರಿ ಜಿಲ್ಲೆ (೧೫೫೨)

೧೩೭. EC V-ii ಚೆನ್ನರಾಯಪಟ್ಟಣ ೧೬೨ ಚೆನ್ನರಾಯಪಟ್ಟಣ(೧೧೮೧)

೧೩೮. EC IX ಹೊಸಕೋಟೆ ೧೧೧ ಕಮ್ಮಸಂದ್ರ (೯೯೭)

೧೩೯. EC XI ದಾವಣಗೆರೆ ೩೧ ಹರಿಹರ (೧೫೩೧)

೧೪೦. EC VI ಮೂಡಗೆರೆ ೩೬ ಚಾವಳಿ ಗ್ರಾಮ (೭೪೯)

೧೪೧. EC VI ಶೃಂಗೇರಿಜಾಗೀರ್ ೩೦ ಮಾಗಲುಗ್ರಾಮ (೧೪೫೮)

೧೪೨. EC XII ತಿಪಟೂರು ೧೦೫ ಬೆಳಗೆರೆ (೧೦೭೮)

೮. 'ಕಲುಕುಟಿಗ ಕೇತೋಜಂಗೆ ಸ್ಥಾನಿಕರಿಪ್ಪತ್ತು ಕಂಮ ಗದ್ದೆಯನುಂ ಬಳಿಯಂ ಸಲಿಸುವರು'[೧೪೩]

೯. 'ಸಿಡಿಯನೂರ[ಬ]ಟ್ಟಿನ ಕಮ್ಮಾಱ ಚಾವುಣ್ಡೋಜನಾತ [ನೂರ್ಬ್ಬಱ] ಗಟ್ಟಿ ಕಮ್ಮ ಅಯ್ವತ್ತು'[೧೪೪]

೧೦. 'ಸರ್ವಕಲಾಧಾರಭೂತ ಚಿತ್ರಕಲಾಭಿಜ್ಞೇಯ ವಿಶ್ವಕರ್ಮಾಚಾರ್ಯೈಣೇದಂ ಶಾಸನಂ ಲಿಖಿತಂ ಚತುಷ್ಕಂಡಕ ಬೃಹಿಬೀಜಾಬಾಪಕ್ಷೇತ್ರಂ ದ್ವಿಕಣ್ಡುಕ ಕಂಗುಕ್ಷೇತ್ರ, ತದಪಿ ದೇವಭೋಗಮಿತಿ ರಕ್ಷಣೀಯಃ '[೧೪೫]

೧೧. '.......... ಕಲುಕುಟಿಗ ಬೀರೋಜಂಗ ಸುರೋಜಂಗ ರಾಯಗಟ್ಟೆಯಿಂ ಬಡಗ ಮತ್ತರು ೧೨ ಸಿಡಿಲಹುಣಿಸೆಯಿಂ ಪಡುವ ಮತ್ತರು ೧೨ ತೋಂಟ ಮತ್ತರು ೨'[೧೪೬]

೧೨. 'ಯೀ ಸಾಸನಗಳು ಹೊಯಿದ ಕಲುಕುಟೆ ತಿರುಮಲಗೆ ವರದರಾಜದೇವರ ನಿರೂಪದಿಂ ಸೆಟ್ಟೆಹಳಿಯಲು ಗದೆ ೩ ಹೊಲನು ೩ ವನೂ ಕೊಟೆಲು'[೧೪೬ಅ]

೧೩. 'ಶ್ರೀಮತ್ ತಿಳಿವಳ್ಳಿಯ ಬೀರೋಜನ ಮಗಂ ಕಾಳೋಜ ಶಾಸನಮಂ ಮಾಡಿದ ಬೆಸಕ್ಕೆ ಸೋಮೇಶ್ವರ ಪಂಡಿತರ್ ವರ್ಷಂಪ್ರತಿ ಅವಲಕ್ಕಿಗೆ ಖಣ್ಡುಗ ಭತ್ತವಂ ಕೊಟ್ಟರ್'[೧೪೬ಬ]

ಶಾಸನ ಕೆತ್ತಿದ ಶ್ರಮಕ್ಕೆ ಪ್ರತಿಯಾಗಿ ಜನತೆ ರೂವಾರಿಗಳಿಗೆ ಸಂಭಾವನೆ ರೂಪದಲ್ಲಿ ಭೂಮಿ, ಧಾನ್ಯಗಳನ್ನು ಕೊಟ್ಟುದನ್ನು ಇಲ್ಲಿ ಗಮನಿಸಬೇಕು. ಇವರಲ್ಲಿ ಹಲವು ಸಲ ಸಂಭಾವನೆ ಪಡೆದ ವಿಶ್ವಕರ್ಮಾಚಾರ್ಯನೆಂಬವನು ಅದನ್ನು ದೇವಭೋಗ ಭಾವದಿಂದ ರಕ್ಷಿಸಬೇಕೆಂದು ಕೇಳಿರುವುದು ಉಲ್ಲೇಖಾರ್ಹವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ

೧. 'ರೂವಾರಿ ದೇವೋಜ ಸಾಸನವ ನಿಲಿಶಿದ'[೧೪೭]

೨. 'ಶಾಸನವ ಬರದ ಆಚಾರಿ ಯೇಚೋಜನ ಮಗ ಸಿದೋಜ ಸೋಮೋಜಂ ಗಳಿಗೆ ಮಂಗಳ ಮಹಾಶ್ರೀ'[೧೪೮]

ಎಂಬ ವಾಕ್ಯಗಳಲ್ಲಿ ಹೇಳಿರುವಂತೆ ಕೆಲವರು ನಿರಪೇಕ್ಷಭಾವದಿಂದ ಶಾಸನಗಳನ್ನು ನಿಲ್ಲಿಸಿದ್ದಾರೆ.

---

೧೪೩. EC VII ಶಿಕಾರಿಪುರ ೨೪೨ ಬಳ್ಳಿಗಾವಿ (೧೧೬೩)

೧೪೪. SII XX ೨೦ ಸಿಡೇನೂರು -ಧಾರವಾಡ ಜಿಲ್ಲೆ (೧೦೧೫)

೧೪೫. EC IX ನೆಲಮಂಗಲ ೬೦ ಮಂಣೆಗ್ರಾಮ(೭೯೭)

೧೪೬. SII XI-i ೧೧೬ ಕೊಪ್ಪ-ವಿಜಾಪುರ ಜಿಲ್ಲೆ (೧೦೭೫)

೧೪೬ಅ. EC X ಮಾಲೂರ ೨ ತೇಕಲ್ಲು

೧೪೬ಬ. EC VIII-ii ೨೯೯ ತೊರೆವಂದ (೧೦೭೪)

೧೪೭. EC V-ii ಹಾಸನ ೮೫ ಚಿಕ್ಕಕಡಲೂರು (೧೧೫೬)

೧೪೮. EC XI ಹೊಳಲ್ಕೆರೆ ೧೩೬ ಹೊನ್ನೇಕೆರೆ (೧೩೦೭)

ಶಿಲ್ಪಿಗಳ ಕಲಾವೈಭವವನ್ನು ಸಮಾಜ ನಿಬ್ಬೆರಗಿನಿಂದ ಮೆಚ್ಚುತ್ತಿದ್ದರೂ ಅವರನ್ನು ಕೆಳದರ್ಜೆಯ ಪ್ರಜಾವರ್ಗದಲ್ಲಿ ಭಾವಿಸಿದ್ದಿತೆಂದು ತೋರುತ್ತಿದೆ. ಹೀಗಿದ್ದರೂ ನರಸೊಬ್ಬ,[೧೪೯] ಸರ್ವಸಿದ್ಧಿ ಆಚಾರಿ, ತ್ರಿಭುವನಾಚಾರಿ, ಇಕ್ಕುಡಾಚಾರಿ, ಮಲ್ಲಿತಮ್ಮ ಮತ್ತು ಹೊಯ್ಸಳಾಚಾರಿ ಮೊದಲಾದವರು ಅತಿದೊಡ್ಡ ಹೆಸರುಗಳಿಸಿ, ರಾಜಮರ್ಯಾದೆಯಿಂದ ಮೆರೆದ ಶಿಲ್ಪಿಗಳಾಗಿದ್ದಾರೆ. ಕೆಲವರು ಸಮಾಜದ ಪುಣ್ಯಕಾರ್ಯಗಳಲ್ಲಿ ಪಾಲುಗಾರರಾದುದಕ್ಕೂ ಹೀಗೆ ನಿದರ್ಶನಗಳುಂಟು:

೧. ಸಿಲ್ಪಿಗಳತಿ ವಿಮಳಗುಣಾ।
ಕಲ್ಪರ್ಬ್ಬಾವಣನುಮೆಸೆವ ರಾವಣನುಂ ಸ।
ತ್ಕಲ್ಪರ್ದ್ಧರ್ಮ ಶ್ರವಣಾ।
ನಲ್ಪಸೋದರರುದಾತ್ತ ವಿಮಳ ಚರಿತ್ರರ್॥
ನಿಜತಾತಂ ಗಡ ರಾಘವಂ ಜನನಿ ತಾಂ ಬಲ್ಲವ್ವೆ ಗೌರೀಶ ದಾ।
ಸ ಜನಂಗಳ್ ತವಗಿಷ್ಟ ಬನ್ಧುನಿಕರಂ ಶ್ರೀ ಗೌತಮಾರ್ಯಂ ಮುನಿ ।
ಬ್ರಜವನ್ತಂ ಮೊದಲಾಗೆ ಕೋಡಿಯಮಠಕ್ಕಾಚಾರ್ಯ್ಯರಾಗಿರ್ದ್ದವ ।
ನ್ನಿಜ ಸತ್ಸ್ವಾಮಿಗಳೆನ್ದೊಡೇವೊಗಳ್ವುದೋ ತತ್ಕೀರ್ತ್ತಿಯಂ ಲೋಕದೊಳ್॥
ಎನಿಸಿದ ಬಾವಣನುಂ ರಾವಣನುಮಿರ್ಬ್ಬರುಂ ನಿಜಶಿಲ್ಪಿಕುಳಕಳಂಕಮಂ ಕಳೆಯ
ಲೆಂದು ಕುಸುಮೇಶ್ವರದೇವರ ಪ್ರತಿಷ್ಠೆಯಂ ಮಾಡಿ....[೧೫೦]

೨. ... ಸಕವರ್ಷ ಸಾಸಿರದ ಮೂವತ್ತೆಂಟನೆಯ ಹೇಮಳಂಬ ಸಂವತ್ಸರದ ಕಾರ್ತಿಕ ಸುದ್ದ ಪಞ್ಚಮೀ ಸನಿರೋಹಿಣಿಯೊಳು ದೇವರ ಪ್ರತಿಷ್ಟೆ ಮಾಡಿದಿಸಹೊಯ್ಸಳಾಚಾರಿ ॥ ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತರಪ್ಪ ಶ್ರೀ ಮನುಮಯಂ ವಿಸ್ವಕರ್ಮ ತೋಟಕಾಚಾರ್ಯರಪ್ಪ ಹಸ್ತಕುಸಳತೆಯೊಳು ಹೇಮಕರ್ಮ್ಮ, ಲೋಹಕರ್ಮ್ಮ, ಶಿಲಾಕರ್ಮ್ಮ, ರತ್ನಕರ್ಮ್ಮ, ಕಾಷ್ಟಕರ್ಮ್ಮ, ಚಿತ್ರಕರ್ಮ್ಮ, ಪತ್ರಕರ್ಮ್ಮ, ಪ್ರಿತಮಾಲಕ್ಷಣ ಸಮಸ್ತ ಹಸ್ತಕುಶಲೆಯುಳ್ಳ ವಿಸ್ವಕರ್ಮನಿರ್ಮಿತಮಪ್ಪ ಗವಚೌಚಾರ್ಯನಾತನ ಪುತ್ರಕುಲೋದ್ಭವನಪ್ಪ ಹೊಯ್ಸಳಾಚಾರ್ಯನಾತನಪುತ್ರಂ ಬಹುಕುಳಾನ್ವಯ ಗೋತ್ರಂXXXತ್ರನಪ್ಪ ಸೂರಾಚಾರ್ಯ್ಯನವರ ಪಿರಿಯಮ್ಮ ಕಾಳ್ಳಬೋಜ ಮಾಣಿಕಾಚಾರಿ ಮತ್ತು ಸೂರೋಜನಂ ಕಿಱಿಯೈಯಗಳು ಜಯಗೊಸ್ವಾಚರಿ ಸಿಱುವಗುನ್ದದ ಮಱಿಯಾನೆಗಳು ಕೇತೋಜ ಮಹಾಚಾರಿ ನಖರಾಚಾರಿ ವುಳ್ಳೋಜ ಅನ್ತು ಕುಲಾನ್ವಯ ಕೊತ್ತಳಿ ಸಹಿತ ಮಾಡಿಸಿದ ಧರ್ಮಪುರೋಭಿವೃದ್ಧಿಯನ್ತೆನ್ದಡೆ ॥[೧೫೧]

---

೧೪೯. ಸ್ವಸ್ತಿ॥ ಜಂಬೂದ್ವೀಪಾಂತರೇ ಕಶ್ಚಿತ್
ವಾಸ್ತು ಪ್ರಾಸಾದ ತದ್ಗತಃ
ನರಸೊಬ್ಬ ಸಮೋ ವಿದ್ವಾನ್
ನಭೂತೋ ನಭವಿಷ್ಯತಿ ॥ (IA IX ೭೪)

೧೫೦. EC VII ಶಿಕಾರಿಪುರ ೧೧೨ ಬಳ್ಳಿಗಾವಿ (೧೧೫೯)

೧೫೧. EC IV ಕೃಷ್ಣರಾಜಪೇಟೆ ೭೮ ಮಾಳಗುಂದ (೧೧೧೬)

ಇವು ದೈವೀಕಾರ್ಯದಲ್ಲಿ ಭಾಗವಹಿಸಿದ ನಮ್ಮ ರೂವಾರಿಗಳ ಔದಾರ್ಯಕ್ಕೆ ಉದಾಹರಣೆಗಳು. ಇದಲ್ಲದೆ ದಾನಧರ್ಮ ಕಾರ್ಯಗಳನ್ನೂ ನಿರ್ವಹಿಸಿ ಕೆಲವರು ತಮ್ಮ ಪರೋಪಕಾರ ಬುದ್ಧಿಯನ್ನು ಮೆರೆದಿದ್ದಾರೆ.

ಕಲಾಪ್ರಪಂಚದ ವಿವಿಧ ಮುಖಗಳಾದ ಕಾವ್ಯ, ಚಿತ್ರ, ನರ್ತನ, ಶಿಲ್ಪ ಸಂಗೀತಗಳಲ್ಲಿ ಕರ್ನಾಟಕದ ವೈಶಿಷ್ಟ್ಯವೆಂಬಂತೆ ಬೆಳೆದುಬಂದವು, ಸಂಗೀತ ಮತ್ತು ಶಿಲ್ಪ. ಇವುಗಳಲ್ಲಿ ಒಂದು ಶ್ರಾವಣ, ಇನ್ನೊಂದು ಚಾಕ್ಷುಷ. ಈ ಚಾಕ್ಷುಷ ಕಲೆಯನ್ನು ಶ್ರಮದಿಂದ ನಿರ್ವಹಿಸಿದ ಶಿಲ್ಪಿಗಳಿಂದಾಗಿ ಸಾವಿರ ಸಾವಿರ ಶಾಸನಗಳು ತಲೆಯೆತ್ತಿದವು. ಸಮಸ್ತ ಭಾರತದಲ್ಲಿ ಸಂಖ್ಯಾದೃಷ್ಟಿಯಿಂದ ಪ್ರಥಮಸ್ಥಾನ ತಮಿಳು ಶಾಸನಗಳಿಗೆ, ದ್ವಿತೀಯ ಸ್ಥಾನ ಕನ್ನಡ ಶಾಸನಗಳಿಗೆ ಸಿಗುತ್ತಿದ್ದರೂ ಕಲಾದೃಷ್ಟಿಯಿಂದ ಪ್ರಥಮಸ್ಥಾನ ಕನ್ನಡ ಶಾಸನಗಳಿಗೆ, ದ್ವಿತೀಯ ಸ್ಥಾನ ತಮಿಳುಶಾಸನಗಳಿಗೆ. ಇಂಥ ಕಲಾಗೌರವವನ್ನು ಕರ್ನಾಟಕಕ್ಕೆ ಗಳಿಸಿಕೊಟ್ಟವರು, ಈ ರೂವಾರಿಗಳು.

■■

ಆಕರ : ಮಾರ್ಗ ಸಂಪುಟ–೨

೪೮

ಶಾಸನ ಸಾಹಿತ್ಯ

ಕನ್ನಡ ಕವಿಕೃತಿಗಳ ಪರಿಷ್ಕರಣ, ಪ್ರಕಟನ ಮತ್ತು ಅಧ್ಯಯನ ಕಾರ್ಯ ವ್ಯಾಪಕವಾಗಿ ನಡೆದುಬರುತ್ತಲಿದೆ; ಶಾಸನಗಳ ಪರಿಷ್ಕರಣ, ಪ್ರಕಟನ ಮತ್ತು ಅಧ್ಯಯನಕಾರ್ಯ ಮಾತ್ರ ಸೀಮಿತವ್ಯಾಪ್ತಿಯಲ್ಲಿ ಸಾಗಿಬರುತ್ತಲಿದೆ. ಇದಕ್ಕೆ ಕೇವಲ ಸಹೃದಯನಾಗಿದ್ದರೆ ಸಾಲದು; ವಿಶಿಷ್ಟ ತರಬೇತಿ, ವಿಶಿಷ್ಟ ಮನೋಧರ್ಮದ ವ್ಯಕ್ತಿಗಳು ಬೇಕು. ಕರ್ನಾಟಕದಲ್ಲಿ ಇಂಥ ವ್ಯಕ್ತಿಗಳಾರೂ ಸಮಗ್ರ ಶಾಸನಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡು, ಅದರ ಸಾಹಿತ್ಯಿಕ ಗುಣಮೌಲ್ಯಗಳನ್ನು ನಿರ್ಧರಿಸಿ ಹೇಳುವ ಕಾರ್ಯದ ಕಡೆಗೆ ಕಣ್ಣೆತ್ತಿ ನೋಡಿಲ್ಲ. ಹೀಗಾಗಿ ಆ ಕಾರ್ಯ ಶಾಸನ ಪ್ರಪಂಚದ ಮುಖ್ಯ ಅಭ್ಯಾಸಗಳಲ್ಲಿ ಒಂದಾಗಿ ಉಳಿದಿದೆ.

ಜನತೆಯೊಂದಿಗಿನ ಪ್ರಗಾಢಸಂಪರ್ಕ ಕಾರಣವಾಗಿ ಕನ್ನಡ ಗ್ರಂಥಸಾಹಿತ್ಯ ಮೇಲಿಂದ ಮೇಲೆ ಅವಸ್ಥೆಗಳನ್ನು ಬದಲಿಸಿಕೊಂಡಿವೆ. ಆದರೆ ರಾಜಕೀಯ ದಾಖಲೆಗಳೆನಿಸಿದ, ಜನರ ನಿತ್ಯ ಓದಿನಿಂದ ದೂರವಿರುವ ಶಾಸನಗಳ ಜೀವನದಲ್ಲಿ ಅಷ್ಟರಮಟ್ಟಿನ ತೀವ್ರ ಬದಲಾವಣೆ ಉದ್ಭವಿಸಿಲ್ಲ. ಕವಿಸಾಹಿತ್ಯದಂತೆ ಜೈನ, (ವೀರ)ಶೈವ, ಬ್ರಾಹ್ಮಣ ಮತ್ತು ಇತರವೆಂದು; ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ*ವೆಂದು ವಿಭಜಿಸಬಹುದಾದರೂ ತನ್ನದೇ ಆದ ಒಂದು ಒಲವಿನಲ್ಲಿ ಬೆಳೆದು ಬಂದ ಇವುಗಳ ದೀರ್ಘಚರಿತ್ರೆಯನ್ನು ಸಾಹಿತ್ಯದ ಪರಂಪರೆ - ಪರಿವರ್ತನೆಗಳ ದೃಷ್ಟಿಯಿಂದ

೧. ನೃಪತುಂಗಪೂರ್ವಯುಗ
   ಅ. ಪ್ರಾಕೃತ ಶಾಸನಯುಗ
   ಬ. ಸಂಸ್ಕೃತ-ಕನ್ನಡ ಶಾಸನಯುಗ

೨. ನೃಪತುಂಗೋತ್ತರ ಯುಗ
   ಅ. ರಾಷ್ಟ್ರಕೂಟ ಯುಗ
   ಬ. ಕಲ್ಯಾಣ ಚಾಲುಕ್ಯ ಯುಗ

೩. ವಿಜಯನಗರ ಯುಗ

ಎಂದು ವಿಭಜಿಸಬೇಕಾಗುತ್ತದೆ. ಇವುಗಳಲ್ಲಿ ಮೊದಲನೆಯದು ಪ್ರಾರಂಭ ಯುಗ; ಎರಡನೆಯದು ಪ್ರೌಢಯುಗ; ಮೂರನೆಯದು ಪತನಯುಗ ಎಂದು ಕರೆಯಬಹುದು.

* ನಡುಗನ್ನಡ ಶಾಸನಗಳೆಂದು ವರ್ಗೀಕರಿಸುವುದು ತೀರ ಕಷ್ಟ.

೧. ನೃಪತುಂಗ ಪೂರ್ವಯುಗ : (ಕ್ರಿ.ಶ. ೮೫೦ರ ವರೆಗೆ)

ಸಾಮಾನ್ಯವಾಗಿ ಈ ಯುಗವನ್ನು ಅಶೋಕನ ಶಾಸನದಿಂದ ರಾಷ್ಟ್ರಕೂಟ ಗೋವಿಂದನ ವರೆಗೆ ಭಾವಿಸಬೇಕು. ಈ ಅವಧಿಯಲ್ಲಿ ಮೊದಮೊದಲು ಪ್ರಾಕೃತ ಶಾಸನ, ತರುವಾಯ ಒಂದೇ ಕಾಲಕ್ಕೆ ಸಂಸ್ಕೃತ ಮತ್ತು ಕನ್ನಡ ಶಾಸನಗಳು ಪ್ರಾರಂಭವಾಗಿವೆ. ಈ ಎರಡು ಘಟ್ಟಗಳ ಸಾಹಿತ್ಯಿಕ ಸೃಷ್ಟಿ-ಸ್ವರೂಪ ಹೀಗಿದೆ.

ಅ. **ಪ್ರಾಕೃತ ಶಾಸನಯುಗ :** ಕರ್ನಾಟಕದ ಪ್ರಾಚೀನತಮ ಶಾಸನಗಳಾದ ಇವು ಈ ವರೆಗೆ ಸುಮಾರು ೧೨ ಲಭಿಸಿವೆ. ಇವುಗಳಲ್ಲಿ ೬ ಅಶೋಕನಿಗೆ, ಮಿಕ್ಕವು ಬೇರೆಬೇರೆ ಅರಸರಿಗೆ ಸಂಬಂಧಿಸಿದುವು*. ರಾಯಚೂರು ಜಿಲ್ಲೆಯ ಮಸ್ಕಿ, ಪಾಲ್ಕಿಗುಂಡ, ಗವಿಮಠ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರಗಳಲ್ಲಿ ಸಿಗುವ ಅಶೋಕನ ಶಾಸನಗಳ ಕಾಲ ಕ್ರಿ.ಶ.ಪೂ. ೩೦೦. ಆಮೇಲೆ ಸಿಗುವ ಪ್ರಾಕೃತ ಶಾಸನಗಳೆಂದರೆ ಮಳವಳ್ಳಿ, ಮ್ಯಾಕದೋನಿ, ಬನವಾಸಿ, ಚಂದ್ರವಳ್ಳಿ, ಹಿರೇಹಡಗಲಿ, ಸನ್ನತಿ ಗ್ರಾಮಗಳಿಗೆ ಸಂಬಂಧಿಸಿದವು.

ಇವುಗಳಲ್ಲಿ ಅಶೋಕನ ಶಾಸನಗಳು "ದೇವಾನಾಂ ಪ್ರಿಯನು ಹೇಳುವನು; ತಾಯಿ ತಂದೆಯರಿಗೆ ಶುಶ್ರೂಷೆ ಮಾಡತಕ್ಕದ್ದು; ಹಾಗೆಯೇ ಗುರುಗಳಿಗೂ. ಪ್ರಜೆಗಳಲ್ಲಿ ದಯೆಯಿಡತಕ್ಕದ್ದು. ಸತ್ಯವನ್ನೇ ಆಡತಕ್ಕದ್ದು. ಇಂತಹ ಧರ್ಮಗುಣಗಳನ್ನೆ ಅವಲಂಬಿಸತಕ್ಕದ್ದು. ಶಿಷ್ಯರು ಗುರುಗಳನ್ನು ಗೌರವಿಸಬೇಕು; ಹಾಗೆಯೇ ಜ್ಞಾತಿಗಳನ್ನು. ಇದೇ ಪುರಾಣವಾದ ಪ್ರಕೃತಿ. ಇದು ದೀರ್ಘಾಯುಷ್ಯವನ್ನು ಕೊಡುತ್ತದೆ. ಇದನ್ನೇ ಮಾಡತಕ್ಕದ್ದು. ಇದೇ ದೇವಾನಾಂಪ್ರಿಯನ ಧರ್ಮ" ಎಂದು ನೀತಿಬೋಧೆಯನ್ನು ಆತ್ಮೀಯಶೈಲಿಯಲ್ಲಿ ನಿರೂಪಿಸುತ್ತವೆ.

ಕ್ರಿಸ್ತಶಕದ ತರುವಾಯ ಸಿಗುವ ಮಳವಳ್ಳಿ, ಮ್ಯಾಕದೋನಿ ಮೊದಲಾದ ಪ್ರಾಕೃತಶಾಸನಗಳು ಕೇವಲ ಘಟನೆಯನ್ನು ವಿವರಿಸುವವೇ ಹೊರತು ಸಾಹಿತ್ಯಮಯವಾಗಿಲ್ಲ. ಇಲ್ಲಿಗೆ ಮೌರ್ಯ, ಶಾತವಾಹನ ಮನೆತನಗಳು ಕೊನೆಗೊಂಡು ೩ನೆಯ ಶತಮಾನ ಮುಗಿಯುತ್ತದೆ.[೧]

ಬ. **ಸಂಸ್ಕೃತ-ಕನ್ನಡ ಶಾಸನಯುಗ :** ಮೌರ್ಯ ಶಾತವಾಹನರ ಆಳಿಕೆ ಮುಗಿದು ಕರ್ನಾಟಕದ ಉತ್ತರದಲ್ಲಿ ಚಾಲುಕ್ಯರು, ಮಧ್ಯದಲ್ಲಿ ಕದಂಬರು, ದಕ್ಷಿಣದಲ್ಲಿ ಗಂಗರು ರಾಜ್ಯ ನಡೆಸಿದರು. ಪ್ರಾಕೃತದ ಬದಲು ಸಂಸ್ಕೃತ ಮಾನ-ಮರ್ಯಾದೆ ಗಳಿಸಿತು. ಕ್ವಚಿತ್ತಾಗಿ ಕನ್ನಡವೂ ಸ್ಥಾನಪಡೆಯಿತು. ಹೀಗಾಗಿ ಈಗ ಸಂಸ್ಕೃತ ಮತ್ತು ಕನ್ನಡ ಶಾಸನಗಳು ಏಕಕಾಲಕ್ಕೆ ಬೆಳೆದುಬಂದವು. ಮಂಗಳೇಶ ಬರೆಯಿಸಿದ "ಮಂಗಲೀಸನಾ ಕಲ್ಮನೆಗೆ ಇತ್ತೊದು......."[೨] ಎಂಬ ಕನ್ನಡ ಶಾಸನದ ಜೊತೆ, ಅವನ ಅಣ್ಣನ ಮಗ ಪುಲಕೇಶಿ ಬರೆಯಿಸಿದ ರವಿಕೀರ್ತಿಯ ಸಂಸ್ಕೃತಶಾಸನ[೩]ವನ್ನೂ ಕಾಕುತ್ಸ್ಥವರ್ಮ ಬರೆಯಿಸಿದ ಹಲ್ಮಿಡಿಯ ಕನ್ನಡ ಶಾಸನ[೪]ದ ಜೊತೆ, ಅವನ ಮಗ

---

* ಇತ್ತೀಚೆ ಗುಲ್ಬರ್ಗಾ ಜಿಲ್ಲೆಯ ಸನ್ನತಿ ಗ್ರಾಮದಲ್ಲಿ ಕೆಲವು ಪ್ರಾಕೃತ ಬರಹಗಳು ಲಭಿಸಿವೆ.

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪು. ೧೨೮.

೨. IA X ೬೦ ಬಾದಾಮಿ-ಬಿಜಾಪುರ ಜಿಲ್ಲೆ (೫-೮)

೩. IA V ೭೦ ಐಹೊಳೆ-ಬಿಜಾಪೂರ ಜಿಲ್ಲೆ (೬೩೪)

೪. MAR ೧೯೩೬ ನಂ. ೧೬ ಹಲ್ಮಿಡಿ-ಹಾಸನ ಜಿಲ್ಲೆ (೪೫೦)

ಶಾಂತಿವರ್ಮ ಬರೆಯಿಸಿದ ತಾಳಗುಂದ ಸಂಸ್ಕೃತಶಾಸನ[೫]ವನ್ನೂ ಹೋಲಿಸಿದರೆ ಆ ಕಾಲದಲ್ಲಿ ಕನ್ನಡ-ಸಂಸ್ಕೃತಗಳು ಗಳಿಸಿದ್ದ ಮನ್ನಣೆಯ ಮಟ್ಟ, ಸಾಹಿತ್ಯದ ಸತ್ವ ಸುವೇದ್ಯವಾಗುತ್ತದೆ. ಈ ಅವಧಿಯಲ್ಲಿ ಕನ್ನಡ ಶಾಸನ ಕಡಿಮೆ, ಸಂಸ್ಕೃತ ಶಾಸನ ಹೆಚ್ಚು. ಕಡಿಮೆ ಸಂಖ್ಯೆಯ ಈ ಕನ್ನಡ ಶಾಸನಗಳು ಸಂಖ್ಯಾಪ್ರಮಾಣವನ್ನು ಹೆಚ್ಚಿಸಿಕೊಳ್ಳಲು ಪ್ರಾರಂಭಿಸಿದುದು ಗಂಗ ಶ್ರೀಪುರುಷನ ಕಾಲದಲ್ಲಿ. ಈ ಸಮಯದ ಕನ್ನಡ ಶಾಸನಗಳಲ್ಲಿ ಏಕರೂಪತೆ ಇಲ್ಲ. ಪ್ರಾರಂಭದ ಮಂಗಲ, ಕೊನೆಯ ಫಲಶ್ರುತಿ ಸಹಿತವಾಗಿ ಬಹಳಷ್ಟು ತಮತಮಗೆ ಬೇರೆ ಬೇರೆ ಸ್ವರೂಪದ ಒಂದು ತುಂಡುಗದ್ಯ ಇಲ್ಲವೆ ಬಿಡಿಪದ್ಯಗಳಾಗಿವೆ. ಇವುಗಳಲ್ಲಿ ಸಾಹಿತ್ಯಗುಣಕ್ಕಿಂತ ವಿಷಯ ನಿರೂಪಣೆಯತ್ತ ಒಲವೂ, ಭಾಷಾಬಳಕೆಯಲ್ಲಿ ಎಳಮೆಯೂ ಎದ್ದು ಕಾಣುತ್ತದೆ. ಜೊತೆಗೆ ಸಂಸ್ಕೃತವನ್ನು ಬೆನ್ನಿಗೆ ಕಟ್ಟಿಕೊಂಡೇ ಈಸುಬಿದ್ದ ಕಾರಣ ಶೈಲಿಯಲ್ಲಿ ಸಮಪಾಕ ತೋರುವುದಿಲ್ಲ.

ಉದಾ :

೧. "ಕುಲಾಮಲವ್ಯೋಮತಾರಾಧಿನಾಥನ್ ......ಮಾದಕ್ಷಿಣಾಪಥ ಬಹುಶತಹ
ವನಾಹವದುಳ್ ಪಶುಪ್ರದಾನ ಶೌರ್ಯೋದ್ಯಮ ಭರಿತೋನ್........ ಮೃಗೇಶ
ನಾಗೇನ್ದ್ರಾಭೀಳ ಭಟಹರಪ್ಪೋರ್ ಮೃಗೇಶನಾಗಾಹ್ವಯರಿರ್ವರ್"
"ಬಾಳ್ಗಟ್ಟು ಪಲ್ಮಡಿಉಂ ಮೂಱುವಳ್ಳಿಉಂ ಕೊಟ್ಟಾರ್....
ಭಟ್ಟರ್ಗ್ಗಿಗಟ್ಟಿ ಒಡ್ಡಲಿ ಆಪತ್ತತ್ತೊನ್ದಿ ವಿಟ್ಟಾರಕರ"[೬]

೨. "ಸ್ವಸ್ತಿ ಶ್ರೀಮತ್ ಪ್ರಿಥಿವೀವಲ್ಲಭ ಮಂಗಲೀಸನಾ
ಕಲ್ಮನೆಗೆ ಇತ್ತೊದು, ಲಂಜಿಗೇಸರಂ. ದೇವರ್ಕೆ ಪೂನಿಱುವ
ಮಾಲೆಕಾರನ್ಗೆ ಅರ್ಧವಿಸದಿ ಇತ್ತೊದಾನಱಿವೋನ್
ಪಞ್ಚಮಹಾಪಾತಕನಕುಂ"[೭]

೩. "ಸ್ವಸ್ತಿ ಶ್ರೀ ವಿಕ್ರಮಾದಿತ್ಯಭಟಾರಮ್ಮೂರ್ಮೆ ಕಚ್ಚಿಯಾನ್ ಮೂಮೆ
ಪರಾಜಿಸಿದೊರಾ ಶ್ರೀಲೋಕಮಹಾದೇವಿಯರಾ ಈ ಲೋಕೇಶ್ವರ ಮಾಡಿ
ದ ಸೂತ್ರಧಾರಿಗೆ ಮೂಮೆ ಪೆರ್ಜ್ಜೆಱುಪುಗೆಯ್ದುಬಱಿಕ್ಕೆ ಈ
ವಿಷಯದ ವಿನ್ನಾಣಿಗಳಾ ಬಳ್ಳಿಗವರ್ತ್ತೆಯನುಱಿಪಿದ ಆಚಾರಿಯ
ಪೆಸರಿವನಱಿಮಿ ಸ್ವಸ್ತಿ ಶ್ರೀ ಸರ್ವಸಿದ್ಧಿ ಆಚಾರಿ ಸಕಲಗುಣಾ
ಶ್ರಯ ಅನೇಕರಪು(ಪುರ)ವಾಸ್ತು ಪಿತಾಮಹನ್ ಸಕಲ ನಿಷ್ಕಲ
ಸೂಕ್ಷ್ಮಾತಿ ಭಾಷಿತನ್ ವ(ವಾ) ಸ್ತು ಪ್ರಾಸಾದಯಾನಾಸನ ಸ(ಶ)ಯನ
ಮಣಿಮುಕುಟ ರತ್ನ ಚೂಡಾಮಣಿ ತೆಂಕಣ ದಿಶೆಯಾ ಸೂತ್ರಧಾರಿ"[೮]

---

೫. EC VII ಶಿಕಾರಿಪುರ ೨೬೩-೬೪ ತಾಳಗುಂದ (೪೫೦)
೬. MAR ೧೯೩೬ ನಂ. ೧೬ ಹಲ್ಮಿಡಿ -ಹಾಸನ ಜಿಲ್ಲೆ (೪೫೦)
೭. IA X ಪು. ೬೦ ಬಾದಾಮಿ-ಬಿಜಾಪುರ ಜಿಲ್ಲೆ (೫೭೮)
೮. IA X ಪು. ೧೬೪-೬೫ ಪಟ್ಟದಕಲ್ಲು -ಬಿಜಾಪುರ ಜಿಲ್ಲೆ (೭೪೦)

ಮೇಲಣ ಶಾಸನಗಳನ್ನು ಬಿಟ್ಟರೂ

> "ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್ ಕಷ್ಟಜನವರ್ಜಿತನ್
> ಕಲಿಯುಗ ವಿಪರೀತನ್"[೯]

> "ಪಾಂಡ್ಯವಿಲ್ಲರಸರಾ ಮಗನ್ ದೇವು ಸಾಧುಪ್ರಿಯನ್ ಅಸಾಧುಜನವರ್ಜಿತನ್"[೧೦]

> "ಕಣೆಪಂಜರದೊಳೊಱಗಿ ಭೀಷ್ಮನ್ ಬಿಟ್ಟಂತೆ ನೆಲಮುಟ್ಟದೆ ಬಿಟ್ಟೊನ್"[೧೧]

ಇತ್ಯಾದಿ ಗದ್ಯಗಳಲ್ಲಿ, ಅನಿಸಿಕೆಯನ್ನು ಶಬ್ದಗಳಲ್ಲಿ ಸೆರೆಹಿಡಿವ ಪ್ರಯತ್ನವನ್ನು, ಜೊತೆಗೆ ಸಂಸ್ಕೃತದ ವಿಷಮ ನೆರವನ್ನೂ ಕಾಣಬಹುದು.

ಇನ್ನು ಪದ್ಯಕ್ಕೆ ಬಂದರೆ ಈ ಅವಧಿಯ ಶಾಸನಪ್ರಪಂಚದಲ್ಲಿ ಶ್ರವಣಬೆಳ್ಗೊಳದ ೨೫-೩೦ ವೃತ್ತಗಳು ಸಹಿತವಾಗಿ,[೧೨] ಒಟ್ಟು ೫೦-೬೦ ಬಿಡಿ ಪದ್ಯಗಳು ನಿಲೆನಿಂತಿವೆ.

> ಬಿಣಮಣಿಯನ್ನು ಭೋಗಿ ಬಿಣದುಳ್ಮಣಿ ವಿಲ್ಮನದೋನ್ ।
> ರಣಮುಖದುಳ್ ಕೋಲನೆರಿಕ್ಕುಮನಿಂದ್ಯಗುಣನ್ ।
> ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣ್ಣನವನ್ ।
> ಗುಣಮಧುರಾಂಕ್ಕ ದಿವ್ಯಪುರುಷನ್ಪುರುಷ ಪ್ರವರನ್ ॥[೧೩]

---

೯. IA X ಪು. ೬೧ ಬಾದಾಮಿ - ಬಿಜಾಪುರ ಜಿಲ್ಲೆ (೭೦೦)

೧೦. EI IX ಪು. ೧೯ ಉದಯಾವರ

೧೧. EC VIII ಸೊರಬ ೧೦ ಮಾವಳಿ (೮೦೦)

೧೨. ಮಹಾಸ್ರಗ್ಧರೆ ೨ (ನಂ. ೧೨, ೧೮)
ಶಾರ್ದೂಲ ವಿಕ್ರೀಡಿತ ೪ (ನಂ. ೧೩, ೨೨, ೨೭, ೧೧೬)
ಮತ್ತೇಭ ವಿಕ್ರೀಡಿತ ೫ (ನಂ. ೭೬, ೭೭, ೯೭, ೯೮, ೧೦೬)
ಉತ್ಪಲ ಮಾಲೆ ೨ (ನಂ. ೨೧, ೭೯)
ಚಂಪಕಮಾಲೆ ೧ (ನಂ. ೯೩)
ಮಲ್ಲಿಕಾ ಮಾಲೆ ೧ (ನಂ. ೩೧)
ವಸಂತ ತಿಲಕ ೧ (ನಂ. ೧೦೫)
ವಂಶಸ್ಥ ೧ (ನಂ. ೧೧೪)
ಮಂಗಳ ೨ (ನಂ. ೧೧೩, ೧೧೫)
ಮಹಾಸ್ರಗ್ಧರೆ (?) ೨ (ನಂ. ೮೪, ೧೧೧)
ಮಲ್ಲಿಕಾಮಾಲೆ (?) ೧ (ನಂ. ೯೫)
ಚಂಪಕಮಾಲೆ (?) ೨ (ನಂ. ೨೬, ೧೦೮)
ಹೆಸರು ಗೊತ್ತಾಗದ ವೃತ್ತ ೭ (ನಂ. ೨೯, ೩೪, ೮೦, ೯೯, ೧೦೨, ೧೦೭, ೧೯). ಇದಲ್ಲದೆ MAR ೧೯೨೦ ಪು. ೨೩ ರಲ್ಲಿ ಎರಡು ಕಂದ (೭೨೫, ೮೮). EC VIII ಸೊರಬ ೧ (ಕ್ರಿ.ಶ. ೭೯೭)ರಲ್ಲಿ ಒಂದು ಕಂದ, SII-I, ನಂ. ೩೯೨ ಮಂಗಳೂರು, EC III ಮೈಸೂರು ೬, ಬೆಲವತ್ತೆ (೭೫೦), ಕರ್ನಾಟಕ ಇತಿಹಾಸ (ಪ್ರ.ಸಂ.) ಸಾಂಸ್ಕೃತಿಕ ಚರಿತ್ರೆ ಪು. ೧೨೩, ೧೨೪- ಇಲ್ಲಿ ಕೆಲವು ವೃತ್ತಗಳು ಕಂಡುಬರುತ್ತವೆ.

೧೩. EC XI ಚಿತ್ರದುರ್ಗ ೪೩ ತಮಟಕಲ್ಲು (೫೦೦)

ಇದು ಕನ್ನಡದ ಪ್ರಥಮಪದ್ಯವೆಂದು ಪಂಡಿತರ ಮತ. ಈ ತರುವಾಯದ ಹೇಳಿಕೊಳ್ಳುವ ಪದ್ಯಗಳೆಂದರೆ ಬೆಳ್ಗೊಳ ಮೊದಲಾದ ಸ್ಥಳಗಳ ಕೆಲವು ಅಕ್ಷರವೃತ್ತ, ಕಂದ ಮತ್ತು ಬಾದಾಮಿ[೧೪] (ಕ್ರಿ.ಶ. ೭೦೦), ಹುಮ್ಮಚ[೧೫] (ಕ್ರಿಶ. ೮೦೦), ಸೊರಬ[೧೬] (ಕ್ರಿ.ಶ. ೮೦೦) ಶಾಸನಗಳ ತ್ರಿಪದಿಗಳು. ಈ ತ್ರಿಪದಿಗಳು ಒಂದಕ್ಕಿಂತ ಒಂದು ಮನೋಜ್ಞವಾಗಿದ್ದರೂ ಸಂಸ್ಕೃತದ ಕಾಟ ತಪ್ಪಿಲ್ಲ. ಇವಲ್ಲದೆ

> ಬಾಳಾಮೇಲ್ ಶಿಖಿಮೇಲೆ ಸರ್ಪ್ಪದ ಮಹಾದನ್ತಾಗ್ರದುಳ್ ಸಲ್ವವೋಲ್ ।
> ಸಾಲಾಮ್ನಾಲ ತಪೋಗ್ರದಿನ್ತು ನಡೆದೊಂ ನೂಱಿಣ್ಬು ಸಂವತ್ಸರಂ ।
> ಕೇಳೊಯ್ವಿನ್ ಕಟವಪ್ರಶೈಲಮಡಱ್ದೀನಮ್ಮಾ ಕಳನ್ತೂರನಂ ।
> ಬಾಲೇ ಪೆರ್ಗ್ಗೊರವಂ ಸಮಾಧಿ ನೆಱೆದೊನ್ ನೋನ್ತೆಯ್ದಿದೊಸ್ಸಿದ್ಧಿಯಾನ್ ॥[೧೭]

> ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ಮಂಜುವೋಲ್ತೋಱಿ ಬೇಗಂ ।
> ಪಿರಿಗುಂ ಶ್ರೀರೂಪಲೀಲಾಧನವಿಭವಮಹಾರಾಶಿಗಳ್ ನಿಲ್ಲವಾರ್ಗ್ಗಂ।
> ಪರಮಾರ್ತ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆನ್ದು ಸಂನ್ಯಾಸನಂಗೆ ।
> ಯ್ದುರುಸತ್ವನ್ನನ್ದಿಸೇವಪ್ರವರ ಮುನಿವನ್ದೇವಲೋಕಕ್ಕೆ ಸನ್ದಾನ್॥[೧೮]

ಮೊದಲಾದ ಬಿಡಿ ಪದ್ಯಗಳಲ್ಲಿ ಸಾಹಿತ್ಯದ ಕೆಚ್ಚು ಮೈದುಂಬಿಕೊಂಡಿದೆ. ಇವು ತಮತಮಗೆ ಮುಕ್ತಕದಷ್ಟು ಭಾವದ್ಯುತಿಯಿಂದ ಮಿಂಚುತ್ತವೆ. ಒಟ್ಟಿನಲ್ಲಿ ಈ ಯುಗದ ಶಾಸನಗಳ ಬಿಡಿಪದ್ಯದಲ್ಲಿ ಸತ್ವವಿದೆ; ಅದರೊಂದಿಗೆ ಭಾಷೆ, ಛಂದಸ್ಸಿನ ಗುಂಜೂ ಇದೆ; ಶಾಸನ ತುಂಡುರೂಪ ಬಿಟ್ಟು ಕ್ರಮಬದ್ಧ ನಿರೂಪಣಾತ್ಮಕವಾಗಲು ಗಂಗ ಶ್ರೀಪುರುಷನ ಕಾಲದಲ್ಲಿ ಮೊದಲ ಹೆಜ್ಜೆ ಇಟ್ಟರೂ ಪ್ರಮಾಣಭೂತ ಔಕಟ್ಟು ಇನ್ನೂ ಸಿದ್ಧವಾಗಿಲ್ಲವೆನ್ನಬಹುದು.

೨. ನೃಪತುಂಗೋತ್ತರ ಯುಗ : (ಕ್ರಿ.ಶ. ೮೫೦-೧೩೫೦)

ಬಾದಾಮಿ ಚಾಲುಕ್ಯರನ್ನು ಮುರಿದು ಕ್ರಿ.ಶ. ೭೫೦ರಲ್ಲಿ ರಾಷ್ಟ್ರಕೂಟರು ಪಟ್ಟಕ್ಕೆ ಬಂದರು. ಮೊದಮೊದಲಿನ ದಂತಿದುರ್ಗ, ಧ್ರುವ, ಕೃಷ್ಣ, ಮುಮ್ಮಡಿ ಗೋವಿಂದ ಚಕ್ರವರ್ತಿಗಳು ಖಡ್ಗಹಿಡಿದು ಸಾಮ್ರಾಜ್ಯದ ವಿಸ್ತರಣೆ ಮತ್ತು ಸುಭದ್ರತೆಗೆ ಗಮನ ಕೊಟ್ಟ ಕಾರಣ ಇವರ ಕಾಲದಲ್ಲಿ ಶಾಸನಗಳು, ಅದರಲ್ಲಿಯೂ ಕನ್ನಡ ಶಾಸನಗಳು ಅಷ್ಟಾಗಿ ಹುಟ್ಟಲಿಲ್ಲ. ತರುವಾಯ ನೃಪತುಂಗ ಪಟ್ಟವೇರಿದ. ಈತನೂ ಮತ್ತು ಈತನ ಸಾಮಂತರಾದ ಗಂಗಮಂಡಲದ ಗಂಗ ಶಿವಮಾರ, ವೆಂಗಿಮಂಡಲದ ಚಾಲುಕ್ಯ ಗುಣಕ ವಿಜಯಾದಿತ್ಯರೂ ಸಾಹಿತ್ಯಪ್ರಿಯರು. ಈ ಮೂವರ ಸಾಹಿತ್ಯಪುನರುಜ್ಜೀವನ ಪ್ರಜ್ಞೆಯಿಂದಾಗಿ ಕನ್ನಡ ಬರವಣಿಗೆಗೆ ಹೊಸ ಬಣ್ಣ ಬಂದಂತಿದೆ. ಈಗ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತೆರೆದ ನವಮನ್ವಂತರ ಶಾಸನಚರಿತ್ರೆಯಲ್ಲಿಯೂ ತೆರೆಯಿತು. ಇಷ್ಟೇ ಏಕೆ,

---

೧೪. IA X ಪು. ೬೧ ಬಾದಾಮಿ-ಬಿಜಾಪುರ ಜಿಲ್ಲೆ (೭೦೦)
೧೫. EC VIII ನಗರ ೬೨, ಹುಮ್ಮಚ (೮೦೦)
೧೬. EC VIII ಸೊರಬ ೨೨ ಸೊರಬ (೮೦೦)
೧೭. EC II ೨೨ ಶ್ರವಣಬೆಳ್ಗೊಳ (೭೫೦)
೧೮. EC II ೮೮ (೭೦೦)

ಕನ್ನಡ ವಾಙ್ಮಯ ಪ್ರಪಂಚದಲ್ಲಿ ಗ್ರಂಥಸಾಹಿತ್ಯ ಮತ್ತು ಶಾಸನಸಾಹಿತ್ಯ ಎರಡೂ ಒಂದೇ ವೇಳೆಗೆ ಬದಲಾವಣೆ ಹೊಂದಿದ ಸಂಕ್ರಮಣ ಸಮಯವಿದು. ಈ ಮುಂದೆ ಗ್ರಂಥ ಸಾಹಿತ್ಯ ಹಲವು ಪ್ರಕಾರಗಳಲ್ಲಿ ವ್ಯತ್ಯಾಸಗೊಳ್ಳುತ್ತ ಹೋದರೂ ಶಾಸನಸಾಹಿತ್ಯ ಮಾತ್ರ ವ್ಯತ್ಯಾಸಗೊಳ್ಳದೆ ಸಾಗಿಬಂದಿತು. ಅದಕ್ಕಾಗಿ ಸಾಹಿತ್ಯ ಶಿಲ್ಪ ದೃಷ್ಟಿಯಿಂದ ಕನ್ನಡ ಶಾಸನಗಳನ್ನು ನೃಪತುಂಗ ಪೂರ್ವಯುಗ, ನೃಪತುಂಗೋತ್ತರ ಯುಗವೆಂದು ಭಾವಿಸಬೇಕಾಗುತ್ತದೆ.

ನೃಪತುಂಗನ ಕಾಲದಲ್ಲಿ ಕನ್ನಡ ಶಾಸನಗಳ ಸಂಖ್ಯೆ ವೇಗದಿಂದ ಸಂವರ್ಧಿಸಲಾರಂಭಿಸಿತು. ಅವುಗಳಿಗೆ ನಿರ್ದಿಷ್ಟ ವಿಷಯಾನುಕ್ರಮಣಿಕೆ, ನಿಖರ ಕಾವ್ಯತೇಜ ಪ್ರಾಪ್ತವಾದವು. ಇದಕ್ಕೆ ತಂದೆ ಗೋವಿಂದನ ಮಾವಳಿಶಾಸನ[೧೯] ಮಗ ನೃಪತುಂಗನ ಶಿರೂರ ಶಾಸನ,[೨೦] ತಂದೆ ಗೋವಿಂದನ ಇನ್ನೊಂದು ಮಾವಳಿಶಾಸನ,[೨೧] ಮಗ ನೃಪತುಂಗನ ಶಿಶುವಿನಹಳ್ಳಿ ಶಾಸನ[೨೨]ಗಳನ್ನು ಹೋಲಿಸಿ ನೋಡಬೇಕು. ಒಟ್ಟಿನಲ್ಲಿ ನೃಪತುಂಗನ ಕಾಲಕ್ಕೆ ಕನ್ನಡ ಶಾಸನಗಳಿಗೆ ಒಂದು ಸ್ವರೂಪಸ್ಥಿರತೆ, ಸಾಹಿತ್ಯ ಸತ್ವಗಳ ಅಡಿಪಾಯ ಹಾಕಲ್ಪಟ್ಟಿತು. ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ- ಹೊಯ್ಸಳ ಶಾಸನಗಳು ಕೆಳಗಿನಂತೆ ಬೆಳೆದುಬಂದುದು ಈ ನೆಲಗಟ್ಟಿನ ಮೇಲೆ.

ಅ. ರಾಷ್ಟ್ರಕೂಟ ಯುಗ : ರಾಷ್ಟ್ರಕೂಟ ನೃಪತುಂಗನ ಆಳಿಕೆಯಿಂದ ಕಲ್ಯಾಣ ಚಾಲುಕ್ಯರ ಉಗಮದ ವರೆಗಿನ ಈ ಅವಧಿ ಕೆಲಮಟ್ಟಿಗೆ ವೈಶಿಷ್ಟ್ಯಪೂರ್ಣವೆನಿಸಿ, ಶಾಸನ ಪ್ರಪಂಚದಲ್ಲಿ ದ್ವೀಪದಂತೆ ತೋರುತ್ತದೆ. ನೃಪತುಂಗನ ಕಾಲದ ಧೋರಣೆಗಳು ಇನ್ನೂ ಸ್ಥಿರಗೊಳ್ಳದ ಸಂಕೀರ್ಣ ಸಮಯವಿದು. ಹೀಗಾಗಿ ಪ್ರಯೋಗಶೀಲತೆ ನಡೆದು ಅದೆಲಿದೆತನ, ಅನುಕರಣೆ ಇನ್ನೂ ಪ್ರವೇಶವಾಗದೆ ವೈವಿಧ್ಯತೆ ತುಂಬಿ ನಿಂತಿದೆ, ಈ ಕಾಲದಲ್ಲಿ ಶಿರೂರ,[೨೩] ಶಿಶುವಿನಹಳ್ಳಿ,[೨೪] ದಾನವುಲಪಾಡ,[೨೫] ಕಳಸ,[೨೬] ಗಂಗಾಧರ,[೨೭] ಆತಕೂರ[೨೮] ಶಾಸನಗಳು ಈ ಮಾತಿಗೆ ಉದಾಹರಣೆಯಾಗಿವೆ. ಈ ಕಾಲದ ಸುಪ್ರಸಿದ್ಧ ಶಾಸನಗಳಾದ ಇವು ತಮುತಮಗೆ ಸ್ವತಂತ್ರ ಸ್ವರೂಪಧಾರಣಮಾಡಿಕೊಂಡಿವೆ. ಸತ್ವದೃಷ್ಟಿಯಿಂದ ಇವೆಲ್ಲವೂ, ವಿಷಯಾನುಕ್ರಮಣಿಕೆ ದೃಷ್ಟಿಯಿಂದ ಶಿಶುವಿನಹಳ್ಳಿ, ಕಳಸ ಶಾಸನಗಳೂ ಮುಂದಣ ಶಾಸನಗಳಿಗೆ ಮಾದರಿಯಾಗಿ ನಿಂತವು. ಇಲ್ಲಿಯ ಸ್ತುತಿ, ಸಮುದ್ರ, ಅರಸು, ಗ್ರಾಮ, ದಾತೃ, ಭೋಕ್ತೃ, ದಾನ, ಫಲಶ್ರುತಿ ಎಂಬ ಕ್ರಮಗಳನ್ನು ಮುಂದಣ ಶಾಸನಗಳು ತಪ್ಪದೇ ಪಾಲಿಸಿದವು.

ಬ. ಕಲ್ಯಾಣ ಚಾಲುಕ್ಯ-ಹೊಯ್ಸಳ ಯುಗ : ರಾಷ್ಟ್ರಕೂಟರ ಆಳಿಕೆ ಮುಗಿದು ಕಲ್ಯಾಣ ಚಾಲುಕ್ಯರು, ಗಂಗರ ಆಳಿಕೆ ಮುಗಿದು ಹೊಯ್ಸಳರು ಪಟ್ಟವೇರಿದರು. ರಾಷ್ಟ್ರಕೂಟರ ಉತ್ತರ ಕಾಲದಲ್ಲಿ ಒಂದು ಸ್ಥಿರತೆಗೆ ಬಂದ ಶಾಸನ ಸ್ವರೂಪ, ಮಾದರಿಯಾಗಿ ನಿಂತು ಈ ಯುಗದ ಶಾಸನಗಳನ್ನು ಮುನ್ನಡೆಸಿತು. ಭಾಷೆ ಬರಹ,

---

೧೯. EC VIII ಸೊರಬ ೧೦ ಮಾವಳಿ (೮೦೦)

೨೦. EI VII ಪು. ೨೦೫ ಶಿರೂರ- ಧಾರವಾಡ ಜಿಲ್ಲೆ (೮೬೬)

೨೧. EC VIII ಸೊರಬ ೧ ಮಾವಳಿ (೮೦೦)

೨೨. SII XI-i ೧೪ ಶಿಶುವಿನಹಳ್ಳಿ-ಧಾರವಾಡ ಜಿಲ್ಲೆ (೮೭೨)

೨೩. EI VII ಪು. ೨೦೫ ಶಿರೂರ-ಧಾರವಾಡ ಜಿಲ್ಲೆ (೮೬೬)

೨೪. SII XI-i ೧೪ ಶಿಶುವಿನಹಳ್ಳಿ-ಧಾರವಾಡ ಜಿಲ್ಲೆ (೮೭೨)

೨೫. EI X ಪು. ೧೫೦-೧೫೨ ದಾನವುಲಪಾಡ-ಕಡಪಾ ಜಿಲ್ಲೆ (೯೧೫)

೨೬. EI XIII ಪು. ೩೨೯-೩೩೩ ಕಳಸ-ಧಾರವಾಡ ಜಿಲ್ಲೆ (೯೩೦)

೨೭. ಶಾಸನ ಸಂಪದ ಪು. ೧೫ ಗಂಗಾಧರಂ -ಕರೀಂನಗರ ಜಿಲ್ಲೆ (೯೫೦)

೨೮. EI II ಪು. ೧೭೧-೧೭೨ ಆತಕೂರ (೯೫೦)

ತಂತ್ರ ಇತ್ಯಾದಿಗಳಲ್ಲಿ ಖಚಿತ ರೂಪಧಾರಣ ಮಾಡಿಕೊಂಡು ಪರಮಾವಧಿ ಸಿದ್ಧಿ ಮುಟ್ಟಿದ್ದರೂ ಈ ಕಾಲದ ಪಡಿಯಚ್ಚಿನ ದಾರಿ ಹಿಡಿದವು. ಹೀಗಾಗಿ ಚಾಲುಕ್ಯ ಮತ್ತು ಹೊಯ್ಸಳರದು ನಮ್ಮ ಶಾಸನ ಪ್ರಪಂಚದಲ್ಲಿ ಸಂಖ್ಯೆ ಸತ್ವಗಳ ದೃಷ್ಟಿಯಿಂದ ವಸಂತ ಸಮಯವೆನಿಸದರೂ ವೈವಿಧ್ಯತೆ ಕಂಡುಬರಲಿಲ್ಲವೆಂಬುದು ಒಪ್ಪಬೇಕಾದ ಮಾತು. ಈ ಅವಧಿಯ ಯಾವುದೇ ಒಂದು ಶಾಸನ ತೆಗೆದುಕೊಂಡರೂ ಸುಂದರವಾಗಿದೆ. ಆದರೆ ಇನ್ನೊಂದರೊಂದಿಗೆ ಹೋಲಿಸಿದಾಗ ಪಡಿಯಚ್ಚುಯೆನಿಸುತ್ತದೆ. ಅದೇ ಯುದ್ಧ, ಅದೇ ಸಮುದ್ರ, ಅದೇ ಉಪಮೆ, ಅದೇ ಅತಿಶಯೋಕ್ತಿ ತುಂಬಿ ಭಾಷೆಯ ಧ್ವನಿಶಕ್ತಿ ಕಡಿಮೆಯಾಗುತ್ತ ನಡೆದಿದೆ. ಇದು ಶಾಸನಸಾಹಿತ್ಯದ ಬೆಳವಣಿಗೆ ನಿಂತುಬಿಟ್ಟುದನ್ನು ಸೂಚಿಸುತ್ತದೆ. ಈ ಕಾಲದಲ್ಲಿ ತ್ರಿಪದಿ, ಷಟ್ಪದಿ, ರಗಳೆ, ಪಿರಿಯಕ್ಕರ[೨೯] ಬಳಸಲ್ಪಟ್ಟರೂ ಅಕ್ಷರವೃತ್ತ, ಕಂದಗಳ ಮುಂದೆ ಅವುಗಳ ಸಂಖ್ಯೆ ಏನೂ ಅಲ್ಲ. ಹೀಗಿದ್ದೂ ಲಕ್ಕುಂಡಿ,[೩೦] ಚೌಡದಾನಪುರ,[೩೧] ಬಳ್ಳಿಗಾವಿ,[೩೨] ಬೆಳ್ಗೊಳ,[೩೩] ಅಮೃತಾಪುರ[೩೪] ಇತ್ಯಾದಿ ಶಾಸನಗಳು ಪುಟ್ಟ ಚಂಪೂಕಾವ್ಯವಾಗಿವೆ. ಈ ಕಾಲದಲ್ಲಿ ಕನ್ನಡ ಸಾಹಿತ್ಯ ಚಂಪುವಿನಿಂದ ವಚನ, ರಗಳೆ, ಷಟ್ಪದಿ ಪ್ರಕಾರಗಳಿಗೆ ತಿರುಗಿದ್ದರೂ ಶಾಸನಗಳು ಮಾತ್ರ ಚಂಪುವಿನ ರಾಜಮಾರ್ಗವನ್ನು ಕೊನೆಯ ವರೆಗೂ ಬಿಡಲಿಲ್ಲ. ಮುಂದೆ ಕೆಲವು ವರ್ಷಗಳಲ್ಲಿ ರಾಜಕೀಯರಂಗ ಪ್ರವೇಶಿಸಿದ ಯಾದವರು ಆಳುವಾಗ ಕರ್ನಾಟಕದ ತೀರ ಉತ್ತರಕ್ಕೆ ಆಗೊಂದು ಈಗೊಂದು ಮರಾಠಿ ಶಾಸನಗಳು ಹುಟ್ಟಿಕೊಳ್ಳಲಾರಂಭಿಸಿದವು. ಒಟ್ಟಿನಲ್ಲಿ ಈ ಮನೆತನಗಳ ಆಳಿಕೆ ಮುಗಿಯುವಷ್ಟರಲ್ಲಿ ನಮ್ಮ ಶಾಸನಗಳ ಮಧ್ಯಾಹ್ನ ಕಾಲ ಮುಗಿಯಿತು.

೩. ವಿಜಯನಗರ ಯುಗ : (ಕ್ರಿ.ಶ. ೧೩೫೦ ತರುವಾಯ)

ರಾಷ್ಟ್ರಕೂಟಯುಗದಲ್ಲಿ ಹೊಸದೃಷ್ಟಿ ಪಡೆದು, ಚಾಲುಕ್ಯ-ಹೊಯ್ಸಳ ಯುಗದಲ್ಲಿ ಬೆಳೆಬೆಳೆದು ಬೆಳವಣಿಗೆ ನಿಲ್ಲಿಸಿಕೊಂಡ ಶಾಸನಗಳು, ಈ ಯುಗದಲ್ಲಿ ಹಾಗೆಯೇ ಮುಂದುವರಿದುವಾದರೂ ಕನ್ನಡ ಶಾಸನ ಸ್ವಲ್ಪ ಕಡಿಮೆಯಾಗಿ ಸಂಸ್ಕೃತ ಶಾಸನ ಹೆಚ್ಚುಗೊಂಡವು. ಜೊತೆಗೆ ಅರವೀಡು ವಂಶದ ರಕ್ತಸಂಬಂಧ, ಮುಸಲ್ಮಾನ ರಾಜಮನೆತನಗಳ ಅಸ್ತಿತ್ವದಿಂದಾಗಿ ತೆಲುಗು, ಉರ್ದು ಶಾಸನಗಳು ದಕ್ಷಿಣಕ್ಕೆ ಇಳಿಯತೊಡಗಿದವು. ಅನ್ಯಭಾಷೆಯ ಈ ಶಾಸನಗಳ ಉದಯ ಮತ್ತು ಕನ್ನಡ ಶಾಸನಗಳ ಇಳಿಮುಖವಲ್ಲದೆ ಕನ್ನಡ ಲಿಪಿಸೌಂದರ್ಯದ ಅವನತಿಯಿಂದಾಗಿ ಈ ಯುಗಕ್ಕೆ ಸ್ವತಂತ್ರಸ್ಥಾನವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಮೇಲಾಗಿ ಶಾಸನಗಳೆಂದರೆ ರಾಜಕೀಯ ದಾಖಲೆಗಳೆಂಬ ಭಾವನೆ ಮೂಡಿ ಸಾಹಿತ್ಯಿಕ ಸೊಗಸನ್ನು ಕಳೆದುಕೊಂಡವು. ಶಾಸನದ ಸಾಹಿತ್ಯ ರಚನೆ ಪ್ರವೃತ್ತಿಯಾಗದೆ ವೃತ್ತಿಯಾಗಿಬಿಟ್ಟಿತು. ಶಾಸನಕ್ಕೆ ಸಾಹಿತ್ಯವನ್ನು ಪೂರೈಸುವವರು ಅಧಿಕಾರವರ್ಗದಲ್ಲಿ ನಿಯಮಿಸಲ್ಪಟ್ಟು, ಇವು ಕೇವಲ ಗದ್ಯ-ಪದ್ಯ ರೂಪದ ವರದಿಗಳಾಗಿ ನಿಂತವು. ಕಡತ, ಹಲಗೆ, ಕಾಗದಗಳ ಬಳಕೆ ಹೆಚ್ಚುಗೊಂಡಂತೆ, ರಾಜಕೀಯ ದಾಖಲೆಗಳಾದ ಈ ಪೂರ್ವದ ಶಾಸನಗಳಲ್ಲಿ ಸಾಹಿತ್ಯಿಕ ಸೊಬಗು ಇದ್ದಿತೆಂಬುದು ಮರೆಯುವಷ್ಟರ ಮಟ್ಟಿಗೆ ಇವು ನೀರಸವಾಗತೊಡಗಿದವು.

---

೨೯. ಶಾಸನ ಛಂದಸ್ಸು ಪ್ರಕರಣ ನೋಡಿರಿ.
೩೦. SII XI-i ೫೨ ಲಕ್ಕುಂಡಿ-ಧಾರವಾಡ ಜಿಲ್ಲೆ (೧೦೦೭)
೩೧. ಶಿವದೇವ ವಿಜಯಂ-ಅನುಬಂಧ ೧
೩೨. EC VII ಶಿಕಾರಿಪುರ ೧೩೬ ಬಳ್ಳಿಗಾವಿ (೧೦೬೮)
೩೩. EC II ೧೪೩ ಶ್ರವಣಬೊಳ್ಗೊಳ (೧೧೩೧)
೩೪. EC Vi ತರಿಕೆರೆ ೪೫ ಅಮೃತಾಪುರ (೧೧೯೬)

ಇದು ನಮ್ಮ ಶಾಸನಗಳು ನಡೆದುಬಂದ ರೀತಿ. ಈ ಪ್ರಯಾಣಪ್ರಸಂಗದಲ್ಲಿ ಅವು ಸಾಧಿಸಿದ ಸಾಹಿತ್ಯಸಿದ್ಧಿಯೂ ಅಷ್ಟೇ ಮೌಲಿಕವಾಗಿದೆ. ೫೦೦ದಷ್ಟು ಅನ್ಯಭಾಷಾ ಶಾಸನಗಳನ್ನು ಬಿಟ್ಟರೆ ಉಳಿಯುವ ಸುಮಾರು ೨೦ ಸಾವಿರ ಕನ್ನಡಶಾಸನಗಳಲ್ಲಿ ಸಾಹಿತ್ಯಗುಣದಿಂದ ಕೂಡಿದುವು ಸಾವಿರಾರು ಸಂಖ್ಯೆಯಲ್ಲಿವೆ. ಇವುಗಳಲ್ಲಿ ಮೊದಮೊದಲು ಗದ್ಯ ಹೆಚ್ಚು, ಬರಬರುತ್ತ ಸಮಾಸಯುಕ್ತ ಪದ್ಯ ಮತ್ತು ಗದ್ಯಪದ್ಯ ಮಿಶ್ರಣ ಹೆಚ್ಚು. ಗದ್ಯಪದ್ಯ ಮಿಶ್ರಣದಲ್ಲಿಯೇ ಪದ್ಯಗಳ, ಅದರಲ್ಲಿಯೂ ಕಂದ, ವೃತ್ತಗಳ ಬಳಕೆ ಅಧಿಕ. ಗದ್ಯ ಸಾಮಾನ್ಯವಾಗಿ

"ಓಂ ಸ್ವಸ್ತಿ ಸಮಸ್ತಭುವನವಿನುತ ಗಂಗಕುಳಗಗನನಿಮ್ಮ೯ಳತಾರಾಪತಿ ಜಳಧಿ ಜಳವಿಪುಳವಳಯ ಮೇಖಳಾಕಳಾಪಾಳಂಕೃತೈಳಾಧಿಪತ್ಯ ಲಕ್ಷ್ಮೀಸ್ವಯಂವೃತ ಪತಿತ್ವಾದ್ಯಗಣಿತ ಗುಣಗಣ ವಿಭೂಷಣವಿಭೂಷಿತ ವಿಭೂತಿ ಶ್ರೀಮದೆಱೆಯಪ್ಪರಸಂ....."[೩೫]

"ಸ್ವಸ್ತ್ಯನವರತ ಪರಮಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನಿ, ದ್ವಿತೀಯ ಲಕ್ಷ್ಮೀಸಮಾನೆ, ತ್ಯಾಗನಿಧಾನೆ, ಶೃಂಗಾರಗಂಗಾ ತರಂಗಿಣಿ, ದಾನಚಿಂತಾಮಣಿ, ಗಿರಿಲಬ್ಧವರ ಪ್ರಸಾದೆ, ಚಂಪಕಾಮೋದೆ, ವಿವೇಕವಿದ್ಯಾಧರಿ, ಸಕಳಕಳಾಧರಿ, ಗೋತ್ರಪವಿತ್ರೆ, ದೂರ್ವ್ವಾಂಕುರಶ್ಯಾಮಗಾತ್ರೆ, ಆಸ್ಥಾನರಂಜನೆ, ಸವತಿ ಮದಭಂಜನೆ, ಉಪ್ಪಟ್ಟವರ್ಷೆ, ಧರ್ಮ್ಮಸಂಕರ್ಷೆ, ಶ್ರೀಮಾನ್ ಹರಿಗಮನಸ್ಸರೋವರರಾಜಹಂಸಿ, ಸುಭಗವಿಳಾಸಿ, ಹರಿಗನರ್ಧಾಂಗಿ, ಪರಿವಾರಸುರಭಿಯರಪ್ಪ ಶ್ರೀಮಲ್ಲಚ್ಚಲದೇವಿಯರು....."[೩೬]

ಎಂದು ಮುಂತಾಗಿ ಶಾಸನಗಳಲ್ಲೆಲ್ಲ ಕಂಡುಬರುತ್ತದೆ. ಇದೇ ಧಾಟಿಯಲ್ಲಿ ಮಹಾಜನ, ಗ್ರಾಮ, ದೇವಾಲಯ, ಸ್ಥಾನಾಚಾರ್ಯ ಮತ್ತು ದೇವತೆಗಳ ವರ್ಣನೆ ವಿಜೃಂಭಿಸುತ್ತಲಿದೆ. ಇಂತಹ ಆಡಂಬರದ ಗದ್ಯವೇ ಶಾಸನಗಳಲ್ಲಿ ಹೆಚ್ಚು. ಆದರೆ

> "ಚಂದ್ರಂಗೆ ಬೆಳದಿಂಗಳಂ । ಬೆಳದಿಂಗಳಿಂಗೆ ಪರಿಮಳಂ। ಪರಿಮಳಕ್ಕೆ ಸವಿಯಂ। ಸವಿಗೆ ರೂಪಂ। ರೂಪಿಂಗೆ ಸೌಂದರ್ಯಮಂ ಕೊಡುವಂತೆ ವುಪದೇಶಂ ಮಾಡೆ। ಕೈಕೊಂಡಪ್ಪೆಯದೇವರಸರು ಪುಟವಿಟ್ಟ ಪುಣ್ಯ ಪುರುಷಾಕಾರವಾದಂತೆ, ಶಾಂತಿ ಸಾಕಾರವೆತ್ತಂತೆ। ಪರಮಾರ್ಥಂ ಶರೀರವಡೆದಂತೆ। ಭಕ್ತಿ ಜ್ಞಾನಂ ಸಂಸಾರವಂ ಸವಿದಂತೆ । ಮೆಱೆವುತ್ತೆ। ಲೋಭವಡಿಯಿಡದ ಕರಪಲ್ಲವಂಗಳ, ಅನೃತವಂಕುರಿಸದ ರಸನಾ ಪ್ರದೇಶದ । ಸಂಶ್ರುತಿ ಸರಸವಾಡದ ಚರಿತ ಸುದ್ದಿಯ। ಕಾಮನ ಡಾಮರಕೊಳಸೋರದ ಮನದ ಬಿನದದ। ಮಾಯಾಜ್ಞೆಯನ್ನುಲ್ಲಂಗಿಸಿದ ಚಿತ್ತವ್ರಿತ್ತಿಯ। ಸಬ್ದಸ್ಪರುಶರೂಪರಸಗಂಧಾದಿ ಭೋಗಕ್ಕೆಳಸದ ಕರಣಾವಳಿಯ ಮಹಾಮಹಿಮರೆನಿಸುವ ಅಪ್ಪೆಯ ದೇವರಸರು ತಿಲಮಧ್ಯದೊಳಿರ್ಪ ತೈಲದಂತೆ। ಕಾಷ್ಟಮಧ್ಯದೊಳಿಪ್ಪ ಅಗ್ನಿಯಂತೆ। ಜಲಮಧ್ಯದೊಳಿರ್ಪ ಕಮಳದಂತೆ ತಾವು ಮಾನುಷಚರಿತರಮಪ್ಪುದಱಿಂ ಸಂಸಾರಮಂ ಸೋಂಕದೆ"[೩೭]

---

೩೫. EI I ಪು. ೩೫೦ ಬೇಗೂರ -ಬೆಂಗಳೂರು ಜಿಲ್ಲೆ (೯ನೆಯ ಶತಮಾನ)

೩೬. KI I ೧೭ ಸಿಗ್ಗಾವಿ-ಧಾರವಾಡ ಜಿಲ್ಲೆ (೧೦೫೫)
ಈ ವರ್ಣನೆಯಲ್ಲಿ ಬರುವ "ದೂರ್ವಾಂಕುರ ಶ್ಯಾಮಗಾತ್ರೆ"ಯೊಂದಿಗೆ "ಕದಳೀಗರ್ಭ ಶ್ಯಾಮಂ" (ಆದಿಪು.೧-೨೯), "ಪೊಸವೆಸಱಗೆಯ ಬಣ್ಣದಂತೆ ಸೊಗಯಿಸುವ ಸಾಮಂತಚೂಡಾಮಣಿಯ ಮೆಯ್ಯಬಣ್ಣಂ" (ಪಂ. ಭಾ. ಪು. ೫೧), "ಬಣ್ಣಂ ಪಸುರ್ವೆಸರ ಬಣ್ಣಂ" (ಶೂದ್ರಕ-ಕಾವ್ಯಸಾರ ಪದ್ಯ ೨೮೧) ಹೋಲಿಸಿರಿ.

೩೭. EC XV ಹೊಳೆನರಸೀಪುರ ೧೧೨ ಮಾವನೂರ (೧೨೮೪)

ಎಂಬಂತಹ ಹರಿಹರನನ್ನು ನೆನಪಿಸುವ ತಿಳಿಗದ್ಯ ಕಡಿಮೆ.

"ಶ್ರೀಮದನಾದಿಯಗ್ರಹಾರಂ ಕುಪ್ಪಗಡೆಯ ಹಳ್ಳಿ ಕೊರಕೋಡನಿಱಿದು ತುಱುವಂ ಕೊಂಡುಡೆಯುಚ್ಚಿಹೋಹಾಗಳಲ್ಲಿ ಹುಟ್ಟಿದ ಬಾವಗಾವುಂಡನ ಮಗಂದಿರು ದೇವಗಾವುಂಡನುಂ ಮಲ್ಲಗಾವುಂಡನುಂ ಬಿಲ್ಲಮಂಬಮಂ ಕೊಂಡಿರ್ವ್ವರುಂ ಹೆಬ್ಬಾಗಿಲೊಳಡ್ಡಂ ನಿಂದು, ಗುಹೆಯ ಬಾಗಿಲೊಳು ಸಿಂಹನಿರ್ಪ್ಪಂತೆ ತಾಗಿ ತಳ್ದೆಸುವಾಗಳು, ಕಾರಮಳೆ ಕಱಿದಂತೆಯುಂ, ಕಡಂದುಱು ಹುಟ್ಟಿಯ ಕೆಣಕಿದಂತೆಯುಂ............ಜವನೊಕ್ಕಲಿಕ್ಕಿದಂತೆ ತೊತ್ತಳದುಳಿದವೊಲು .... ಕಟ್ಟಿದಲಗಂ ಕಿತ್ತು x x ಲ್ಯುಱಿ ಹಿಂಡಂ ತೋಳಂ ಪೊಕ್ಕಂತೆಯುಂ, ಕಬ್ಬುಂದೋಂಟವನಾನೆ ಪೊಕ್ಕಂತೆಯುಂ......"[೩೮]

ಎಂಬಂತಹ ದೇಶೀಯ ಗಟ್ಟಿ ಗದ್ಯವೂ ಕಡಿಮೆ. ಸಾಹಿತ್ಯಾಭಿಮುಖಿಯಾದ ಇಂಥ ಗದ್ಯವನ್ನು ಬಿಟ್ಟರೆ, ವಿದ್ವಾಂಸರಿಂದ ವಿದೂರವಾದ ಪ್ರದೇಶದ ಶಾಸನಗಳಲ್ಲಿ ಮತ್ತು ಯಾವುದೇ ಶಾಸನದ ದತ್ತಿವಿವರಣೆಯಲ್ಲಿ ಆಡುಮಾತಿನ ಗದ್ಯ ನಿಕ್ಷಿಪ್ತವಾಗಿದೆ. ಒಟ್ಟಿನಲ್ಲಿ ಕನ್ನಡ ಕವಿಸಾಹಿತ್ಯದಂತೆ ಶಾಸನಸಾಹಿತ್ಯವೂ ಗದ್ಯದ ದೃಷ್ಟಿಯಿಂದ ವೈವಿಧ್ಯರಹಿತ, ಬಡತನಯುಕ್ತವೆಂದೇ ಹೇಳಬೇಕು.

ಪದ್ಯಪ್ರಪಂಚದಲ್ಲಿ, ಹಿಂದೆಹೇಳಿದ ತಮಟಕಲ್ಲು ಶಾಸನ ಹಿಡಿದು ಸುಮಾರು ಒಂದು ಲಕ್ಷ ಪದ್ಯಗಳು ಶಾಸನಗಳಲ್ಲಿ ನೆಲೆನಿಂತಿವೆ. ಇವುಗಳಲ್ಲಿ ಕಂದ-ಅಕ್ಷರವೃತ್ತ ಹೆಚ್ಚು, ದೇಶೀವೃತ್ತಿ ಇಲ್ಲವೆನ್ನುವಷ್ಟು ಕಡಿಮೆ. ಕಾವ್ಯಗಳಲ್ಲಿಯಂತೆ ಶಾಸನಗಳಲ್ಲಿಯೂ ಗದ್ಯಕ್ಕಿಂತ ಪದ್ಯದ ಬಗೆಗೆ ಹೆಚ್ಚು ಒಲವು ಕಂಡುಬರುತ್ತಿದೆ. ಆದರೆ

ಪತ್ತಿರೆ ಗಂಗೆಯ ಪನಿಗಳ್ ।
ಮುತ್ತಿನ ಬಾಸಿಗಮಿದೆನಿಸಿ ವಾಸುಗಿ ಸುಖದಿಂ ।
ಸುತ್ತಿರ್ದ ಜೂಟದಾ ದೇ ।
ವೋತ್ತಮನೆಮಗೊಸೆದು ಕುಡುಗೆ ಸುಖಸಂಪದಮಂ ॥[೩೮ಅ]

ಇಟ್ಟಿಗೆಗೆಂದಗುಳ್ದ ಕುಳಿಗಳ್ಕೆಱೆಯಾದುವು ಕಲ್ಲುಗೆಗೊಂಡ ಪೆ।
ರ್ವೆಟ್ಟು ಧರಾತಳಕ್ಕೆ ಸರಿಯಾದುವು ಸುಣ್ಣದ ಭಂಡಿಬಂದ ಪೆ।
ರ್ವ್ವಟ್ಟೆಯೆ ಪಳ್ಳಮಾದುವೆನೆ ಮಾಡಿಸಿದಂ ಜಿನರಾಜಗೇಹಮಂ।
ನೆಟ್ಟನೆ ಪೊಯ್ಸಳೇಶನನೆ ಬಣ್ಣಿಪರಾಮ್ಮ್ರಲೆರಾಜರಾಜನಂ॥[೩೮ಬ]

ಅರಗಯ್ಯೊಂಡನೆ ಕಿತ್ತುನೋಡಿದನೆ ಕೂರ್ಪಿಂಗಳ್ಕಿ ಮೆಯ್ಯಾಯ್ದನೇ।
ಸೆರಗಂ ಪಾರ್ದ್ದನೆ ಬಾಳ್ಗೆ ಭಕ್ತರೆನುತಂ ಬಲ್ಲಾಳು ರಾಮಂ ಸ್ವಕಂ।
ಧರಮಂ ಚಕ್ಕನೆ ಹುಲ್ಲಕಟ್ಟನರಿವಂತಕ್ಲೇಶದಿಂದಾ ಗಳಂ।
ತರಿದೀಶಾಂಘ್ರೀಯೊಳಿಕ್ಕಿ ಶಂಕರಗಣಕ್ಕಾನಂದವಂ ಮಾಡಿದಂ॥[೩೮ಬ]

---

೩೮. EC VIII-ii ಸೊರಬ ೧೬೫ ಕೊರಕೋಡು(೧೧೯೫)

೩೮A. EC IV ನಾಗಮಂಗಲ ೨೮ ಲಾಲನಕೆರೆ (೧೧೩೭)

೩೮B. EC II ೧೪೩ ಶ್ರವಣಬೆಳ್ಗೊಳ (೧೧೩೧)

ಎಂಬಂತಹ ಕಲ್ಪನೆ, ಪ್ರತಿಭೆಗಳಿಂದ ಗರಿಬಿಚ್ಚಿಕುಣಿವ ಕಂದವೃತ್ತಗಳ ಸಂಖ್ಯೆ ಕಡಿಮೆಯೆಂದೇ ಹೇಳಬೇಕು. ಇಂಥವುಗಳನ್ನು ಬಿಟ್ಟರೆ ಕಾಣುವುವು ಕೇವಲ ಪದ್ಯವ್ಯಾಮೋಹಕ್ಕೆ ಕಟ್ಟುಬಿದ್ದು ಕಟ್ಟಿದ ಪದ್ಯಗಳು. ಅವು ಪಾಂಡಿತ್ಯದ ಅಟ್ಟಹಾಸ, ಅತಿಶಯೋಕ್ತಿಯ ಆಡಂಬರ, ಛಂದಸ್ಸಿನ ಹೊಂದಿಕೆ ಎನಿಸಿವೆ. ಬಹಳಷ್ಟು ಪದ್ಯಗಳಲ್ಲಿ ಭಾವ ಪುನರುಕ್ತಿ, ನುಡಿಗಟ್ಟು ಪುನರುಕ್ತಿಗಳೂ ಕಂಡುಬರುತ್ತವೆ. ಉದಾ:

ಸರಸತಿಗೆ ರತಿಗೆ ರಂಭೆಗೆ ।
ಗಿರಿಜೆಗರುಂಧತಿಗೆ ರಘುಕುಲೇಶನ ಸತಿಗಂ।
ದೊರೆ ಪಾಸಟಿ ಮಿಗಿಲೆಂದೀ।
ಧರೆ ಪೊಗೊಳ್ವುದು ನೆಗಟ್ದ ಸವತಿ ಗಜಕೇಸರಿಯಂ॥[೩೯]

ರತಿಗಮರುಂಧತಿಗಂ ಸರ।
ಸತಿಗಂ ರೇವತಿಗಮೆಸೆವ ಪಾರ್ವತಿಗಂ ಶ್ರೀ।
ಸತಿಗಂ ಸಮನೆನಿಸಿ ಮಹಾ ।
ಸತಿ ಬಮ್ಮಲದೇವಿ ತೊಳಗಿಬೆಳಗಿದಳಿಳೆಯಂ ॥[೪೦]

ಕೆಲವು ಸಲ ಒಬ್ಬ ವ್ಯಕ್ತಿ, ಒಂದು ಸ್ಥಳ ಇಲ್ಲವೆ ಒಂದು ಘಟನೆಗೆ ಸಂಬಂಧಿಸಿದ ಗದ್ಯ ಮತ್ತು ಪದ್ಯಗಳು ಬೇರೆ ಬೇರೆ ಶಾಸನಗಳಲ್ಲಿ ಕಾಣಿಸುತ್ತವೆ. 'ಇದಿರಾದರಿ ಭೂಪಾಳರ......." ಎಂಬ ಪೊಯ್ಸಳ ನರಸಿಂಹನ ವರ್ಣನೆಯ ಪದ್ಯ ೫ ಶಾಸನಗಳಲ್ಲಿ,[೪೧] "ದಕ್ಷಿಣ ಹೆಮ್ಮನ ಮಮ್ಮಂ..." ಎಂಬ ಶಾಂತಿನಾಥ ಕವಿವರ್ಣನೆಯ ಪದ್ಯ ೩ ಶಾಸನಗಳಲ್ಲಿ,[೪೨] "ಆದಿಯಾಗಿರ್ಪುದಾರ್ಹತ ಸಮಯಕ್ಕೆ", "ಗಂಗವಾಡಿಯ ಬಸದಿಗಳೆನಿತ" ಎಂಬ ಎರಡೂ ಪಿರಿಯಕ್ಕಗಳು ೫ ಶಾಸನಗಳಲ್ಲಿ[೪೩] ಕಂಡುಬರುತ್ತವೆ. ಶಾಸನಗಳಲ್ಲಿ ಪುನರುಕ್ತಗೊಂಡ ಇಂಥ ನೂರಾರು ಪದ್ಯಗಳನ್ನು ಕಾಣಬಹುದು.

೩೮C. EI V ಪು. ೨೪೫ ಅಬ್ಬಲೂರು-ಧಾರವಾಡ ಜಿಲ್ಲೆ (೧೨೦೦)
೩೯. EI XV ಪು. ೩೩೩ ಕುಳೇನೂರ್-ಧಾರವಾಡ ಜಿಲ್ಲೆ (೧೦೨೮)
೪೦. EC VI ಕಡೂರ ೯೬ ಸಂತೆಕೆರೆಹಳ್ಳಿ, (೧೧೪೧)
೪೧. EC IV-ii ನಾಗಮಂಗಲ ೩೦ ಲಾಲನಕೆರೆ (೧೧೬೪)
KuJ X ಅರಸಿಕೆರೆ ಶಾಸನ (೧೧೬೮)
EC V-ii ಅರಸಿಕೆರೆ ೬೨ ಹಲ್ಲೂರ (೧೧೭೭)
EC V-ii ಅರಸಿಕೆರೆ ೧೨೪ ಬೆಳಗುಂಬ(೧೧೯೬)
EC V-ii ಅರಸಿಕೆರೆ ೧೦೬ ಹಿರಿಯೂರ (೧೨೦೭)
೪೨. EC V-ii ಅರಸಿಕೆರೆ ೪೮ ಕಣಿಕಟ್ಟೆ (೧೧೮೯)
EC IV-ii ನಾಗಮಂಗಲ ೩೦ ಲಾಲನಕೆರೆ (೧೧೬೪)
KuJ X ಅರಸಿಕೆರೆ ಶಾಸನ (೧೧೬೮)
೪೩. EC II ಶ್ರವಣಬೆಳ್ಗೊಳ ೭೩ (೧೧೧೮); ೧೨೫ (೧೧೧೮); ೨೫೧ (೧೧೧೮); ೨೪೦(೧೧೭೫);೩೯೭(೧೧೭೯)

ಕೆಲವು ಶಾಸನಕವಿಗಳು ಕಾವ್ಯಗಳಿಂದಲೇ ನೇರವಾಗಿ ಪದ್ಯಗಳನ್ನು ಸ್ವೀಕರಿಸಿದ್ದಾರೆ. "ಮುನಿಜನದೋದಿಸಿ..." ಎಂಬ ಆದಿಪುರಾಣದ ಪದ್ಯ[೪೪] ಬೇಲೂರುಶಾಸನದಲ್ಲಿ,[೪೫] "ಗಂಭೀರಸ್ಫಾರ ...." ಎಂಬ ಶೂದ್ರಕ ಕಾವ್ಯದ ಪದ್ಯ ೪ ಶಾಸನಗಳಲ್ಲಿ,[೪೬] "ಉನ್ನತ ಕುಕ್ಕುಟೇಶ್ವರ...." "ಜಿನಪದ ಪಂಕಜಭ್ರಮರ...." ಎಂಬೆರಡು ಅಜಿತಪುರಾಣದ ಪದ್ಯಗಳು[೪೭] ಲಕ್ಕುಂಡಿ ಶಾಸನದಲ್ಲಿ,[೪೮] ನಾಗಚಂದ್ರನ ಹಲವು ಪದ್ಯಗಳು ಬೆಳ್ಗೊಳ,[೪೯] ವಿಜಾಪುರ ಶಾಸನಗಳಲ್ಲಿ ಎಡೆ ಪಡೆದುದು ಇದಕ್ಕೆ ನಿದರ್ಶನ.

ಈ ನೇರ ಸ್ವೀಕರಣವನ್ನು ಬಿಟ್ಟರೂ ಕವಿಸಾಹಿತ್ಯದಿಂದ ಪ್ರಭಾವಿತವಾದುದಕ್ಕೆ ಕೆಲವು ಉದಾಹರಣೆಗಳುಂಟು. ಮಾದರಿಗಾಗಿ ಇಲ್ಲಿ ರನ್ನನ ಪ್ರಭಾವವನ್ನು ಮಾತ್ರ ಸಂಗ್ರಹಿಸಬಹುದು.

೧. ಶ್ರೀಯುವತಿಗೆ ನಿಜವಿಜಯ।
ಶ್ರೀಯುವತಿಯೆ ಸವತಿಯಾಗೆ ರಿಪುನೃಪುರಂ ಶೌ।
ರ್ಯಾವಷ್ಟಂಭದೆ ಗೆಲ್ದ ಜ।
ಯಾವಸಥನಸಾಧ್ಯನಲ್ತೆ ಸಾಹಸಭೀಮಂ।।
ಶ್ರೀಯುವತಿಗೆ ನಿಜವಿಜಯ।
ಶ್ರೀಯುವತಿಯೆ ಸವತಿಯೆನಿಸಿ ರಣಮೂರ್ಖನೃಪಾ।
ಮ್ನಾಯದೊಳಾಯದ ಮೆಯ್ಗಲಿ।
ಬಾಯಿಕನೆಂಬಂ ನೆಗಱ್ತೆಯಂ ಪ್ರಕಟಿಸಿದನ್।।[೫೦]

೨. ಶ್ರಾವಕ ಧರ್ಮದೊಳ್ ದೊರೆಯೆನಲ್ ಪೆಱರಿಲ್ಲೆನೆ ಸಂದ ರೇವತೀ ।
ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ಶೀಲದೊಳ್।
ದೇವಕಿ ತಾನೆ ದಾನಗುಣದಿಂದೆ ಸುಲೋಚನೆ ತಾನೆಯೆಂದು ಭ।
ವ್ಯಾವಳಿ ಮೆಚ್ಚೆ ಬಣ್ಣಿಪುದು ಭವ್ಯಮನೋರಥ ಜನ್ಮಭೂಮಿಯಂ।।

---

೪೪. ಆದಿ ಪು. ೧-೧೫.
೪೫. EC XV ಹಾಸನ ೩೩೫ ಬೇಲೂರ (೧೧೩೮)
೪೬. SII IX-i ೩೩೩ ಮಗಲಗ್ರಾಮ-ಬಳ್ಳಾರಿ ಜಿಲ್ಲೆ (೧೨೧೪)
SII IX-i ೨೪೩ ಬೆಣ್ಣೆಕಲ್ಲು-ಬಳ್ಳಾರಿ ಜಿಲ್ಲೆ (೧೨೨೬)
SII IX-i ೩೬೦ ಸೋಗಿ-ಬಳ್ಳಾರಿ ಜಿಲ್ಲೆ
EC V-ii ಚೆನ್ನರಾಯಪಟ್ಟಣ ೧೯೭ ಶಿವರಗ್ರಾಮ
೪೭. ಅಜಿ ಪು. ೧-೬೦, ೬೮
೪೮. SII IX-i ೫೨ ಲಕ್ಕುಂಡಿ-ಧಾರವಾಡ ಜಿಲ್ಲೆ(೧೦೦೭)
೪೯. EC II ೬೪=ಪಂರಾ ೧-೨೪, ೨೫. EC II ೭೨=ಪಂರಾ ೧-೧೫
EC II ೧೨೭=ಪಂರಾ ೧-೨೦, EC II ೧೪೦=ಪಂರಾ ೧-೨೬, ೨೭
EC II ೧೪೦=ಪಂರಾ (=ಮಲ್ಲಿ ೧-೨೧) ೨೦
EC II ೧೫೮-ಪಂರಾ ೧-೧೮ (=ಮಲ್ಲಿ ೧-೨೦)
೫೦. ಜಕ ೮-೨
೫೧. ಗದಾ ೪-೧; EC II ಶ್ರವಣಬೆಳಗೊಳ ೧೩೯

ಶ್ರಾವಕ ಧರ್ಮದೊಳ್ ದೊರೆಯೆಲ್ ಪೆಱರಿಲ್ಲೆನೆ ಸನ್ದ ರೇವತಿ|
ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ರೂಪಿನೊಳ್ |
ದೇವಕಿ ತಾನೆ ಪೆಂಪಿನೊಳರುಂಧತಿ ತಾನೆ ಜಿನೇಂದ್ರ ಭಕ್ತಿ ಸ |
ದ್ಭಾವದೆ ಸಾವಿಯಬ್ಬೆ ಜಿನಶಾಸನ ದೇವತೆ ತಾನೆ ಕಾಣಿರೇ||[೫೨]

೩. ಕಲಿಯೆನೆ ನೆಗಟ್ದಳ್ ಕಸವರ
ಗಲಿಯೆನೆ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್|
ಮೊಲೆವೊತ್ತ ತೈಲಜನನಿಯ|
ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್ ||

[ಮೊಲೆ]ವೆತ್ತ ಸಾವಿಯಬ್ಬೆ ಸಾ|
ಯಲೆನ್ದು ಪೆಣ್ಡತಿಯೆ [ಮೀಸೆ]ವೊತ್ತಣ್ಣಳೊಗಳೆ|
ಪಲರುಂ ತೊಲಗಿದರಾಯದ |
ಚಲಮಸಬಳಗಿಗನ್ದಿನಿಪ್ಪೆಣ್ಡತಿಯನ್||[೫೩]

೪. 'ಜವನುಂಡು ಕಾಱಿದೊಲಾಯ್ತೆತ್ತಂ ಕುರುಕ್ಷೇತ್ರದೊಳ್'
'ಜವನುಂಡೊಯ್ಯನೆ ಕಾಱಿದನ್ತೆ'[೫೪]

೫. 'ಗುಣಕ್ಕೆ ಮಚ್ಚರಮುಂಟೆ'
'ಗುಣಕ್ಕೆ ಮಚ್ಚರಮುಂಟೆ'[೫೫]

೬. 'ಅರೆ ಮುಗಿದಿರ್ದ ಕಣ್ಗಳುಮಲರ್ದ ಮೊಗಂ'
'ಅರೆ ಮಗುಳ್ದಿರ್ದ ಕಣ್ಮಲರ್ಗಳೋದುವ ಪಂಚಪದಂ'[೫೬]

೭. ಗುರುಭಾರಕ್ಕಿರಿವಾಳ್ ರಣಕ್ಕೆ ತುಳಿಲಾಳ್ ಕಟ್ಟಾಯದೊಳ್ ಮೇಳದಾಳ್|
ಪರಿಹಾಸಕ್ಕೆನಿಸಿರ್ದನೆಂತು ಮಱಿವಂ ದುರ್ಯೋಧನಂ ಕರ್ಣನಂ||

ಅಣುಗಾಳ್ ಕಾರ್ಯದ ಶೌರ್ಯದಾಳ್ ವಿಜಯದಾಳ್ ಚಾಳುಕ್ಯ ರಾಜ್ಯಕ್ಕೆ ಕಾ|
ರಣಮಾದಾಳ್ ತುಳಿಲಾಳ್ತನಕ್ಕೆ ನೆಱದಾಳ್ ಕಟ್ಟಾಯದಾಳ್ ಮಿಕ್ಕ ಮ |
ನ್ನಣೆಯೊಳ್ ಮಾಂತನದಾಳ್ ನೆಗಟ್ತೆವಡೆದಾಳ್ ವಿಕ್ರಾಂತದಾಳ್ ಮೇಳದಾಳ್|
ರಣದಾಳಾಳ್ದನ ನಚ್ಚುವಾವೆಡೆಯೊಳಂ ವಿಶ್ವಾಸದಾಳ್ ಲಕ್ಷ್ಮಣಂ||[೫೭]

ಹೀಗೆ ಕೆಲವು ಪ್ರಸಿದ್ಧ ಕವಿಗಳ ಪ್ರಭಾವವನ್ನು ಶಾಸನಗಳಲ್ಲಿ ಗುರುತಿಸಬಹುದು.

---

೫೨. ಅಜಿ ಪು. ೧-೫೩; EC II ಶ್ರವಣಬೆಳಗೊಳ ೧೩೯

೫೩. ಅಜಿ. ಪು. ೧-೬೫; EC II ಶ್ರವಣಬೆಳಗೊಳ ೧೩೯

೫೪. ಗದಾ ೩-೨ EC VIII-ii ಸೊರಬ ೩, ೧೧ ಮತ್ತು ೧೨ ಮಾವಳಿ (೧೧೩೦, ೧೧೫೫)

೫೫. ಅಜಿ. ಪು. ೧೨-೧೪೦; EC VII ಶಿವಮೊಗ್ಗ ೧೦ ತಟ್ಟೆಕೆರೆ ಮತ್ತು MAR ೧೯೩೮ ಪು. ೯೮.

೫೬. ಗದಾ ೪-೫೪; EC II ಶ್ರವಣಬೆಳಗೊಳ ೧೪೩ (೧೧೩೧)

೫೭. ಗದಾ ೫-೩೫; EC VI ತರೀಕೆರೆ ೪೫ ಅಮೃತಾಪುರ (೧೧೯೬)

ಈ ಸ್ವೀಕರಣ, ಅನುಕರಣ, ಪುನರುಕ್ತಿಗಳಿದ್ದರೂ ಸ್ವತಂತ್ರಕಾವ್ಯದಂತೆ ಶೋಭಿಸುವ ಶಾಸನಗಳಿಗೆ ಕೊರತೆಯಿಲ್ಲ. ಬಾದಾಮಿ, ದಾನವುಲಪಾಡ, ಕೋಟೂರು, ಆತಕೂರು, ಗಂಗಾಧರಂ, ಮಾವನೂರ, ಅಬ್ಬಲೂರು, ಚೌಡದಾನಪುರ, ಲಕ್ಕುಂಡಿ, ಲಕ್ಷ್ಮೇಶ್ವರ, ಬಳ್ಳಿಗಾವಿ, ಹುಮ್ಮಚ, ಬೆಳ್ಗೊಳ, ಇಟ್ಟಿಗಿ, ಹರಿಹರ, ಶಾಂತಿಗ್ರಾಮ, ಹಂಪೆ ಶಾಸನಗಳು ಪುಟ್ಟ ಕಾವ್ಯಗಳಂತೆ ಪರಿಶೋಭಿಸುತ್ತವೆ.

ಇದು ಕರ್ನಾಟಕದ ಶಾಸನಗಳಲ್ಲಿ ನಿಕ್ಷಿಪ್ತವಾಗಿರುವ ಸಾಹಿತ್ಯಸ್ವರೂಪ. ಸುಮಾರು ೨೦೦೦ ವರ್ಷಗಳ ಇತಿಹಾಸವುಳ್ಳ ಈ ಸಾಹಿತ್ಯದ ಅಧ್ಯಯನ, ಕವಿ ಸಾಹಿತ್ಯಾಧ್ಯಯನಕ್ಕೆ ಪೂರಕವಾಗಿದೆ. ವಿವರವಾದ ಅಭ್ಯಾಸದಿಂದ ಈ ಕ್ಷೇತ್ರದಲ್ಲಿ ಮೂಡಿ, ಮರೆಯಾಗಿರುವ ಅನೇಕ ಹಾದಿಗಳು ಬೆಳಕಿಗೆ ಬಂದು, ನಮ್ಮ ಸಾಹಿತ್ಯಚರಿತ್ರೆಯ ತಿಳುವಳಿಕೆಯೂ ವಿಸ್ತಾರಗೊಳ್ಳುವ ಸಾಧ್ಯತೆಯಿದೆ.

■■

ಆಕರ : ಮಾರ್ಗ ಸಂಪುಟ-೨

೪೯

ಶಾಸನ ಛಂದಸ್ಸು

"ಗದ್ಯವೇ ತನಗೆ ಗದ್ದಿಯಾಗೆ। ವೃತ್ತವೇ ತನಗೆ ಕುಟಿಕುಚ ಪ್ರದೇಶವಾಗೆ। ಮಾಳಾವೃತ್ತವೇ ತನಗೆ ಮುಕುಟಮಣ್ಡಳವಾಗೆ। ಅಂಕಿತೆಯೆ ತನಗೆ ಸುಟಿ ಕುಂತಳವಾಗೆ। ಛಂದವೆ ತನಗಂದವೆನಿಪ ಲಲಾಟಪಟ್ಟವಾಗೆ।ರಾಗಂಗಳ ಸುಳಿವುಗಳೆ ತನಗೆ ಕುರುಳೋಳಿಗಳಾಗೆ।ರಾಗಂಗಳ ಕೊಂಕುಗಳೆ ತನಗೆ ಕಡುವುರ್ಬಗಳಾಗೆ। ನಾಟಿಯೆ ತನಗೆ ನೋಟವಾಗೆ। ಪಂಜಳವೆ ತನಗೆ ರಂಜಿಸುವಧರೋಷ್ಠವಾಗೆ।ಪದರಚನೆಯೇ ತನಗೆ ಮೃದುಪವನವಾಗೆ।ಅಂಬುವೆ ತನಗೆ ಕಂಬುಗ್ರೀವವಾಗೆ। ಪೂರ್ಣ್ಣರಾಗವೆ ತನಗೆ ಕರ್ಣ್ಣಾಭರಣವಾಗೆ। ದೌವಾಳವೇ ತನಗೆ ನೇವಾಳವಾಗೆ। ಅಕ್ಕರವೆ ತನಗೆ ಅರೆವಾಣಿಯಾಗೆ। ತಿವದಿಯೆ ತನಗೆ ತೆಳುವಸಿಜಾಗೆ। ದೋಹಳಮೆ ತನಗೆ ಬಾಹುಬಲವಾಗೆ। ಚವುಪದಿಯೆ ತನಗೆ ಮು[ರ]ಜವಾಗೆ। ಸಾಮತವೆ ತನಗೆ ವಿರದಪರಲ್ಗಳಾಗೆ। ರಾಗಂಗಳಣುಗುಗವಿತವೆ ತನಗೆ ಸೆಳ್ಳುಗುರ್ಗ್ಗಳಾಗೆ..........."[೧]

ಕೊಲ್ಹಾಪುರದ ಒಂದು ಶಾಸನ, ಸಂಗೀತ ಮತ್ತು ಛಂದೋಪರಿಭಾಷೆಯಲ್ಲಿ ಸಾಲಂಕೃತ ಸರಸ್ವತಿಯನ್ನು ವರ್ಣಿಸಿದ ರೀತಿಯಿದು. ಛಂದೋಭಿಮಾನಿಗಳಾದ ಇಂಥ ಶಾಸನಕವಿಗಳಿಂದ ವಿವಿಧ ಜಾತಿಯ ಪದ್ಯಗಳು ಶಾಸನಗಳಲ್ಲಿ ನಿಕ್ಷಿಪ್ತಗೊಂಡಿವೆ.

ಕರ್ನಾಟಕದಲ್ಲಿ ಲಭಿಸುವ ಅನ್ಯಭಾಷೆಯ ಶಾಸನಗಳನ್ನು ಬಿಟ್ಟು, ಒಂದೊಂದಕ್ಕೆ ಸರಾಸರಿ ೪ ಇಲ್ಲವೆ ೫ ಪದ್ಯಗಳನ್ನು ಹಿಡಿದರೆ ಶಾಸನಸ್ಥ ಕನ್ನಡ ಪದ್ಯಗಳ ಸಂಖ್ಯೆ ಸುಮಾರು ಒಂದು ಲಕ್ಷ ಎಂದು ತಿಳಿದುಬರುತ್ತದೆ. ಶಾಸನ ಪ್ರಪಂಚಕ್ಕೆ ಸಂಬಂಧಪಟ್ಟ ಅಭ್ಯಾಸಗಳಲ್ಲಿ ಈ ಪದ್ಯಭಾಂಡಾರದ ಛಂದೋವಿವೇಚನೆಯೂ ಒಂದು.

ಗದ್ಯ, ಚಂಪೂ, ನಾಟಕ ಮತ್ತು ವಚನಗಳನ್ನು ಬಿಟ್ಟರೆ ಸಾಮಾನ್ಯವಾಗಿ ನಮ್ಮ ಸಾಹಿತ್ಯಪ್ರಕಾರಗಳೆಂದರೆ ಛಂದೋಪ್ರಕಾರಗಳೇ. ಉದಾ. ಷಟ್ಪದಿಯು ಛಂದೋಪ್ರಕಾರವೂ ಹೌದು, ಸಾಹಿತ್ಯ ಪ್ರಕಾರವೂ ಹೌದು. ಕನ್ನಡ ಸಾಹಿತ್ಯ ಅಕ್ಷರಛಂದಸ್ಸು, ಮಾತ್ರಾಛಂದಸ್ಸು, ಅಂಶಛಂದಸ್ಸುಗಳಿಗೆ ಸಂಬಂಧಿಸಿದ ಬೇರೆ ಬೇರೆ ವೃತ್ತಿಗಳಲ್ಲಿ ತನ್ನ ಸಾಹಿತ್ಯಪ್ರಕಾರಗಳನ್ನು ಬದಲಿಸುತ್ತ ಬಂದರೂ ಗದ್ಯ ಇಲ್ಲವೆ ಬಿಡಿ ಪದ್ಯಮಯವಾಗಿದ್ದ ಕನ್ನಡ ಶಾಸನಗಳು, ಒಂಬತ್ತನೆಯ ಶತಮಾನದಲ್ಲಿ ಚಂಪೂಪ್ರಕಾರಕ್ಕೆ ತಿರುಗಿ ಕೊನೆಯ ವರೆಗೆ ಆ ದಾರಿಯಲ್ಲಿಯೇ ಮುನ್ನಡೆದವು.

---

೧. Inscriptions in Northern and Kolhapur State -ಶಾಸನ ನಂ. ೧.

ಹೀಗಾಗಿ ಗದ್ಯ-ವೃತ್ತ-ಕಂದಗಳ ವಿಪುಲತೆ ರಗಳೆ-ತ್ರಿಪದಿ-ಅಕ್ಕರ-ವಿಷಮವೃತ್ತಗಳ ವಿರಳತೆಯಿಂದ ಕೂಡಿರುವ ಚಂಪುವಿನ ಮಾದರಿ ಶಾಸನಗಳಲ್ಲಿ ಯಾವ ಕಾಲಕ್ಕೂ ನೆಲೆನಿಂತಿದೆ. ಇದರ ಅಭ್ಯಾಸಪ್ರಸಂಗದಲ್ಲಿ ಕೆಳಗಿನ ತೊಡಕುಗಳನ್ನು ಎದುರಿಸಬೇಕಾಗುತ್ತದೆ.

ಶಾಸನಗಳಲ್ಲಿ ಬಳಸಲಾದ ಉತ್ಪಲಮಾಲೆ-ಉ, ಕಂದ-ಕಂ, ತ್ರಿಪದಿ-ತ್ರಿ ಎಂಬಂಥ ವಿಶಿಷ್ಟ ಸೂಚನೆಗಳು ಪದ್ಯಗಳನ್ನು ಗುರುತಿಸಲು ನೆರವಾಗುತ್ತವೆ. ಆದರೆ ವೃತ್ತ-ವೃ(ವ್ರಿತ್ತ-ವ್ರಿ) ಎಂಬ ಸಾಮಾನ್ಯ ಸೂಚನೆ ಮತ್ತು ಮೇಲೆ ಒಂದು ವೃತ್ತದ ಹೆಸರು ಹೇಳಿ ಕೆಳಗೆ ಅನೇಕ ಬಗೆಯ ವೃತ್ತಗಳನ್ನು ಬರೆದ ಕ್ರಮಗಳು ಪದ್ಯವನ್ನು ಬೆರಳಿಟ್ಟು ಗುರುತಿಸುವಲ್ಲಿ ಅಡ್ಡಿನೀಡುತ್ತವೆ. ಶಾಸನ ಫಲಕದ ಪರಿಮಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಸ್ತಪ್ರತಿಗಳಲ್ಲಿಯಂತೆ ಪದ್ಯಗಳನ್ನು ಗದ್ಯದಂತೆ ಸಾಲುಗಟ್ಟಿ ಬರೆಯುವರೇನೋ ನಿಜ; ಆದರೆ ಹಸ್ತಪ್ರತಿಯಲ್ಲಿಯಂತೆ ಪದ್ಯದ ಕೊನೆಗೆ ಅಂಕಿಗಳನ್ನು ಹಾಕುವುದು ಹೋಗಲಿ, ದಂಡವನ್ನು ಕೂಡ ಹಾಕುವುದಿಲ್ಲ. ಇಂಥ ಪ್ರಸಂಗಗಳಲ್ಲಿಯಂತೂ ಪದ್ಯಗಳನ್ನು ಕಂಡುಹಿಡಿಯುವುದು ಕಷ್ಟಸಾಧ್ಯವೆಂದೇ ಹೇಳಬೇಕು. ಆಗ ಲಯವನ್ನವಲಂಬಿಸಿವುದೊಂದೇ ಮಾರ್ಗ. ವಸ್ತುಸ್ಥಿತಿ ಹೀಗಿರುವಾಗ ಶಾಸನಗಳ ಬರವಣಿಗೆಯಲ್ಲಿ ದೋಷ, ಪಾಠದಲ್ಲಿ ಸವಕಳಿ-ನಷ್ಟತೆಗಳು ತಲೆದೋರಿದರಂತೂ ಪದ್ಯಗಳನ್ನು ಪುನರ್ರಚಿಸುವುದು, ತನ್ಮೂಲಕ ಛಂದಸ್ಸನ್ನು ಗುರುತಿಸುವುದು ಇನ್ನೂ ಜಟಿಲವಾಗಿಬಿಡುತ್ತದೆ. ಈ ಎಲ್ಲ ಎಡರುಗಳನ್ನು ಅರ್ಥಮಾಡಿಕೊಂಡು, ಶಾಸನ ಪ್ರಪಂಚದ ಛಂದೋ ಅಭ್ಯಾಸಕ್ಕೆ ತೊಡಗಬೇಕಾಗುತ್ತದೆ.

ವರ್ಣವೃತ್ತ

ಗದ್ಯ ಮತ್ತು ಬಿಡಿಪದ್ಯರೂಪದ ಕೆಲವು ಶಾಸನಗಳನ್ನು ಬಿಟ್ಟರೆ, ಕನ್ನಡದ ಎಲ್ಲ ಶಾಸನಗಳು ಚಂಪುವಿನ ಚೌಕಟ್ಟನ್ನು ಯಾವ ಕಾಲಕ್ಕೂ ಬಿಡಲಿಲ್ಲ. ಹೀಗಾಗಿ ವರ್ಣವೃತ್ತಗಳಿಗೆ ಚಂಪೂಕಾವ್ಯಗಳಲ್ಲಿ ಲಭಿಸಿದ ಸ್ಥಾನ ಶಾಸನಗಳಲ್ಲಿಯೂ ಸಿಕ್ಕಿತು. ಈ ವರ್ಣವೃತ್ತಗಳು ಸಮ, ಅರ್ಧಸಮ, ಮತ್ತು ವಿಷಮವೆಂದು ಮೂರು ತೆರನಾಗಿವೆ. ಇವುಗಳಲ್ಲಿ ಚಂಪೂಕಾವ್ಯಗಳಲ್ಲಿಯಂತೆ ಶಾಸನಗಳಲ್ಲಿಯೂ ಸಮವೃತ್ತ ಸಮುದಾಯದ ಖ್ಯಾತಕರ್ಣಾಟಕಗಳ ಬಳಕೆ ಹೇರಳ; ದ್ರುತ ವಿಳಂಬಿತ, ಹರಿಣಿ, ಮತ್ತಕೋಕಿಲ, ಪೃಥ್ವಿ, ವಸಂತತಿಲಕ ಮೊದಲಾದವುಗಳ ಬಳಕೆ ವಿರಳ.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಹೆಗ್ಗೆರೆ ಶಾಸನದಲ್ಲಿ ಚಂಪಕಮಾಲೆಯನ್ನು 'ಚಿತ್ರಲತೆ'[೨]ಯೆಂದೂ ಗುಲ್ಬರ್ಗಾ ಜಿಲ್ಲೆಯ ಸೇಡಂ ಶಾಸನದಲ್ಲಿ ಉತ್ಪಲಮಾಲೆಯನ್ನು 'ಕಾಮಲತಿಕಾವೃತ್ತ'[೩]ವೆಂದೂ ಇದೇ ಗುಲ್ಬರ್ಗಾ ಜಿಲ್ಲೆಯ ಐವೂರ ಶಾಸನದಲ್ಲಿ 'ಮಾಲಿನಿವೃತ್ತ'ವನ್ನು ಅದರ ಛಂದಸ್ಸಿನ ಹೆಸರಾದ 'ಅತಿಶಕ್ವರಿವೃತ್ತ'[೪] ಎಂದೂ ಕರೆದರೆ, ಹೇಮಚಂದ್ರನು ಹೇಳುವ 'ನೃತ್ತ ಲಲಿತ' ಅಥವಾ ಜಯಕೀರ್ತಿ ಹೇಳುವ 'ವೃತ್ತ ಲಲಿತ'ವನ್ನು ಬೆಳತೂರ ಶಾಸನ 'ಲಲಿತವೃತ್ತ'[೫] ಎಂದು ಕರೆದಿದೆ. ಶಾಸನಗಳು ಬಳಸಿದ ಈ ವಿಭಿನ್ನ ಹೆಸರುಗಳು ಗಮನಾರ್ಹವಾಗಿವೆ.

---

೨. EC XII ಚಿಕ್ಕನಾಯಕನಹಳ್ಳಿ ೨೧ ಹೆಗ್ಗೆರೆ (೧೧೬೦)

೩. Jainism in South India and some Jain Epigraphs ಪು. ೨೬೯ (೧೯೬೪)

೪. EI XII ಐವೂರ-ಗುಲ್ಬರ್ಗಾ ಜಿಲ್ಲೆ (೧೦೯೦)

೫. EC IV ಹೆಗ್ಗಡದೇವನಕೋಟೆ ೧೮ ಬೆಳತೂರ (೧೦೫೭)

ವರ್ಣಛಂದಸ್ಸಿನ ಕೆಲವು ವೃತ್ತಗಳು, ಮಾತ್ರಾ ಛಂದಸ್ಸಿನಲ್ಲಿಯೂ ನಟಿಸುತ್ತವೆ. ಇದಕ್ಕೆ ಕವಿಯ ಕೌಶಲ್ಯ ಕೂಡಿದರೆ ಇಂಥ ಒಂದು ವೃತ್ತ ಹಲವು ಬಂಧಗಳಲ್ಲಿ ಮೈದೋರುತ್ತದೆ. ಮೇಲೆ ಹೇಳಿದ ಬೆಳತೂರ ಶಾಸನದ ಒಂದು ಲಲಿತವೃತ್ತ ಇದಕ್ಕೆ ಉದಾಹರಣೆಯಾಗಿದೆ:

ಶ್ರೀರಮಣಿಗೌರಿ ಸಚಿಧಾರಿಣಿಯ ಪುತ್ರಿ ರತಿ ಭೂರಮಣಿಯಂದದ ಸ್ವರೂಪವಳುವೊಳ್ಪಾ।
ಧಾರೆ ಜಯಧಾರೆ ಜಸಧಾರೆ ನಯಧಾರೆ ಭಯಹಾರೆ ಪತಿಭಕ್ತೆ ಧೃತಶಕ್ತಿಯೆನೆ ಸಂದೀ।
ವೀರನಿಧಿಯಂ ಚಲದ ವಾರಿನಿಧಿಯಂ ಗುಣದ ಚಾರುನಿಧಿಯಂ ನೆಗಳ್ದೀಚಲೆಯನಿಂತೀ।
ನಾರಿಜನರನ್ನಮನದಾರೊ ಮಱಿವರ್ ಸಕಳ ಧಾರಿಣಿಯೊಳಿಂತು ವರಕಾಂತೆ ದೊರೆಯಾದಳ್।

೩೦ ಅಕ್ಷರಗಳನ್ನೊಳಗೊಂಡ ಇದರ ಅಕ್ಷರಗಣ ಯೋಜನೆ ಭಜಸನ, ಭಜಸನ, ಭಜಸನ, ಭಯ. '-UUU'. ಈ ರೀತಿಯ ೫ ಮಾತ್ರಾಗಣದಲ್ಲಿ ಕ್ರಮವಾಗಿ ಮುಂದುವರಿವ ಇದನ್ನು ಮಾತ್ರಾ ಗಣದೃಷ್ಟಿಯಿಂದ ಪ್ರಾಸಯುಕ್ತವಾದ ೮ ಪಾದಗಳಲ್ಲಿಯೂ ಹೀಗೆ ಮುರಿದಿಡಬಹುದು.

ಶ್ರೀರಮಣಿಗೌರಿ ಸಚಿಧಾರಣಿಯ ಪುತ್ರಿ ರತಿ।
ಭೂರಮಣಿಯಂದದ ಸರೂಪವಟುವೊಳ್ಪಾ।
ಧಾರೆ ಜಯಧಾರೆ ಜಸಧಾರೆ ನಯಧಾರೆ ಭಯ।
ಹಾರೆ ಪತಿಭಕ್ತೆ ಧೃತಶಕ್ತಿಯೆನೆ ಸಂದೀ।
ವೀರನಿಧಿಯಂ ಚಲದ ವಾರಿನಿಧಿಯಂ ಗುಣದ।
ಚಾರುನಿಧಿಯಂ ನೆಗಳ್ದೀಚಲೆಯನೀಂತೀ।
ನಾರಿಜನರನ್ನಮನದಾರೋ ಮಱಿವರ್ ಸಕಳ।
ಧಾರಿಣಿಯೊಳಿಂತು ವರಕಾಂತೆ ದೊರೆಯಾದಳ್।

ಇಲ್ಲಿ ವಿಷಮ ಪಾದಗಳಿಗೆ ೫ ಮಾತ್ರೆಯ ೪ ಗಣ, ಸಮಪಾದಗಳಿಗೆ ೫ ಮಾತ್ರೆಯ ೩ ಗಣ ಮತ್ತು ೪ ಮಾತ್ರೆಯ ೧ ಗಣ ಹೊರಡುತ್ತವೆ. ಇನ್ನು ಇದರಿಂದ ಎರಡು ಕುಸುಮಷಟ್ಪದಿಗಳನ್ನೂ ಹೊರಡಿಸಬಹುದು.

ಭೂರಮಣಿ ಗೌರಿ ಸಚಿ।
ಧಾರಿಣಿಯ ಪುತ್ರಿ ರತಿ।
ಭೂರಮಣಿಯಂದದ ಸರೂಪವಟುವೊಳ್ಪಾ।
ದಾರೆ ಜಯಧಾರೆ ಜಸ।
ದಾರೆ ನಯಧಾರೆ ಭಯ।
ಹಾರೆ ಪತಿಭಕ್ತೆ ಧೃತಶಕ್ತೆಯೆನೆ ಸಂದೀ।

ವೀರನಿಧಿಯಂ ಚಲದ।
ವಾರಿನಿಧಿಯಂ ಗುಣದ।
ಚಾರುನಿಧಿಯಂ ನೆಗಳ್ದೀಚಲೆಯನಿಂತೀ।
ನಾರಿಜನರನ್ನಮನ।
ದಾರೊ ಮಱಿವರ್ ಸಕಳ।
ಧಾರಿಣಿಯೊಳಿಂತು ವರಕಾಂತೆ ದೊರೆಯಾದಳ್।

ಇವು ಎರಡು ಕುಸುಮ ಷಟ್ಪದಿಗಳಾಗಿದ್ದರೂ, ದೀರ್ಘಚರಣಗಳ ಕೊನೆಗೆ ಒಂದು ಗುರು ಹೆಚ್ಚು ಇರುವುದನ್ನು ಗಮನಿಸಬೇಕು. ಗದಾಯುದ್ಧ ಮತ್ತು ಪಂಪರಾಮಾಯಣಗಳಲ್ಲಿ ಒಂದೊಂದರಂತೆ ಬಳಕೆಗೊಂಡ ಈ ಅಪರೂಪವೃತ್ತವನ್ನು ಶಾಸನಕವಿ ಇಲ್ಲಿ ಬಳಸಿರುವನು.[೫೮]

ಕೆಲವು ಸಲ ಅಕ್ಷರವೃತ್ತಗಳನ್ನು ನಾಲ್ಕು ಚರಣಗಳಿಗೆ ನಿಲ್ಲಿಸದೆ ಐದು ಚರಣಗಳ ವರೆಗೂ ಬೆಳೆಸಿದ ಉದಾಹರಣೆಗಳು ಶಾಸನಗಳಲ್ಲಿ ಸಿಗುತ್ತವೆ.

ಧಾರವಾಡ ಜಿಲ್ಲೆಯ ಮುಳಗುಂದ ಶಾಸನ:[೬]

ಮುನಿಗಳೊಳಾ ಮಹಾಮುನಿ ಧ್ರುವೇಶ್ವರಪಂಡಿತರೀ ಜಗತ್ರಯಂ।
ಪೊಗಳೆ ತಪಃ ಪ್ರಭಾವನಿಧಿ -UU- ದೊರೆ ಪದ್ಮಸಂಭವಂ।
ದೊರೆ ಮುನಿಯಾ ವಶಿಷ್ಠಮುನಿಪಂ ಸಮನಾವನಗಸ್ತ್ಯನುತ್ತಮಂ।
ಸರಿಯೆನೆ ಬಣ್ಣಿಸಲ್ ತ್ರಿಭುವನಂ ಪೊಗಳುತ್ತಿರೆಯಾ ಮುನೀಸನು।
ತ್ತಮನಿರೆ ಪೂಜ್ಯಮಾಗಿ ನಗರೇಶ್ವರದೀ ಮಠವೊಪ್ಪುತೋರುಗುಂ।

ಪ್ರಾಸವನ್ನು ಕಾಯ್ದುಕೊಳ್ಳದ ಈ ಪದ್ಯ, ವೃತ್ತನಾಮದ ಸೂಚನೆಯಿಲ್ಲದೆ ಬರೆಯಲ್ಪಟ್ಟಿದೆ. ಚಂಪಕಮಾಲೆಯಾಗಿರುವ ಇದು ಐದು ಪಾದಗಳ ವೃತ್ತವಾಗಿದೆ.

ಚಿತ್ರದುರ್ಗ ಜಿಲ್ಲೆಯ ಗಂಗನರಸಿ ಶಾಸನ:[೭]

ಎಸಕದ ಸೋಮವಂಶಜದೊಳಾರ್ ದೊರೆ ತನ್ನೊಳೆನಿಪ್ಪುದೊಂದು ಸಾ।
ಹಸದ ನಿಮಿರ್ಕೆ ವರ್ಧಿಸುವ ರಾಜ್ಯದಮರ್ಕೆ ಸುಖಪ್ರಪಂಚಮಂ।
ಪಸರಿಪ ತೋರ್ಕೆ ವೈರಿಗಳ ರಾಜ್ಯದ ಸಾರ್ಕೆ ಕಡುರ್ಪಿನಿಂ ವಿಗು।
ರ್ವಿಸುವರ ಮೀಸೆಯಂ ಸುಡುವ ತೇಜದಳುರ್ಕೆ ಧರಿತ್ರಿಯೊಳ್ ವಿರಾ।
ಜಿಸುತಿರಲುತ್ತರೋತ್ತರಮಿಳಾಸ್ತುತಿವೆತ್ತುದು ವೀರಪಾಂಡ್ಯನಾ॥

ವನಧಿಪರೀತ ಭೂತಳದೊಳೆಂದುದನೊಲ್ಲದ ರಾಯರಿಲ್ಲ ತ।
ನ್ನನೆ ಶರಣೆಂದು ಜೀವಿಸಿದ ಭೂಭೂಜರಿಲ್ಲ ಸಮಸ್ತ ವಸ್ತುವಾ।

ಹನಮನೂನ ಕಾಂಚನಮನಿತ್ತಿರಮುದ್ಧತರಿಲ್ಲ ಜೀಯೆನು।
ತ್ತನುದಿನಮೆಯ್ದೆ ಬಿಟ್ಟಿವೆಸಗೆಯ್ಯದ ಜಟ್ಟಿಗರಿಲ್ಲ ನೋಜ್ಪೊಡೇ।
ನನುಪಮಮಾಯ್ತೊ ರಾಜವಿಭವಂ ಜಗದೊಳ್ ಜಗದೇಕಮಲ್ಲನಾ॥

---

೫೮. ರನ್ನನ ಲಲಿತ ವೃತ್ತ (ಜಯಂತಿ-೧೯೬೩ ಮಾರ್ಚ) ಮೇವುಂಡಿ ಮಲ್ಲಾರಿ

೬. SII IX-i ೯೭ ಮುಳಗುಂದ-ಧಾರವಾಡ ಜಿಲ್ಲೆ (೧೦೯೭)

೭. EC XI ದಾವಣಗೆರೆ ಅ೫ ಗಂಗನರಸಿ (೧೧೪೩)

ಈ ಶಾಸನದಲ್ಲಿ ಪಂಚಪಾದ ವೃತ್ತಗಳು ಎರಡು ಇವೆ. ವೃತ್ತನಾಮ ಸೂಚನೆಯಿಲ್ಲದಿದ್ದರೂ 'ಚಂಪಕಮಾಲೆ'ಯೆಂದು ತಿಳಿದುಬರುತ್ತದೆ.

ತುಮಕೂರ ಜಿಲ್ಲೆಯ ಕರಡಾಳು ಶಾಸನ:[೮]

ಏಱಿ ವಿಮಾನಮಂ ಬರೆ ಸುರಾಂಗನೆಯರ್ ನಳಿತೋಳ ನುಣ್ಬೊಗರ್।
ತೋಱುವಿನಂ ಮಹೋತ್ಸವದೆ ಸೇಸೆಯನಿಕ್ಕಿ ಸುರಾನಕಸ್ವನಂ।
ಮೀಱಿ ಘನಾಘನ ಧ್ವನಿಯನೆತ್ತಿದ ಸತ್ತಿಗೆ ಚಂದ್ರಬಿಂಬಮಂ।
ಬೀಱಿ ವಿಲಾಸದಿಂ ಪಿಡಿದು ಚಾಮರಮಿಕ್ಕಿ ಸಮಂತು ಪೊಕ್ಕಳಾ।
ನೀಱಿ ಮಹಾನುಭಾವೆ ಸತಿ ಹರ್ಯಿಲದೇವಿ ಸುರೇಂದ್ರಲೋಕಮಂ।

ಇದು ಪಂಚಪಾದಗಳನ್ನೊಳಗೊಂಡ ಉತ್ಪಲಮಾಲೆಯಾಗಿದ್ದು ಶಾಸನದಲ್ಲಿ ವೃತ್ತನಾಮ ಸೂಚನೆಯಿಲ್ಲ.

ವಿಜಾಪುರ ಜಿಲ್ಲೆಯ ತೇರದಾಳ ಶಾಸನ:[೯]

ಸಮದಾರಿಕ್ಷಿತ ಭೃತ್ಯದಂಬಕದೊಳತ್ಯಾಭೀಳವಜ್ರಾಗ್ನಿತೇ ।
ಜಮನುನ್ಮತ್ತಮಹೀಷ ವಂಶವನದೊಳ್ ದುರ್ವ್ವಾರದಾವಾಗ್ನಿತೇ।
ಜಮನನ್ಯೋರ್ವಿಪಸೈನ್ಯ ಸಾಗರದೊಳುದ್ಯದ್ಬಾಡಬೋಗ್ರಾಗ್ನಿತೇ।
ಜಮನೋರಂತಿರೆ ತೋಱಿ ವಿಶ್ವಧರೆಗಿಂತೀ ಗಂಡಪೆಂಡಾರನ।
ಶ್ರಮದಿಂದಮ್ ಮೆಱೆವಂ ನಿಜಪ್ರಬಳಬಾಹುತೇಜಮಮ್ ತೇಜಮನ್।

ಶಾಸನದಲ್ಲಿ ವೃತ್ತನಾಮವನ್ನು ಸೂಚಿಸದಿರುವ ಇದು ಐದುಪಾದಗಳ ಮತ್ತೇಭವಿಕ್ರೀಡಿತವೆಂದು ತಿಳಿದುಬರುತ್ತದೆ.

ಧಾರವಾಡ ಜಿಲ್ಲೆಯ ಕರಿಗುದರಿ ಶಾಸನ:[೧೦]

ಹಿಮವನ್ತ ಸ್ಫಟಿಕಶ್ಶಿಳಾತಳದ ಶುಂಭಸ್ತಂಭದೊಳ್ ಕಟ್ಟಿದಂ।
ಸಮದೇಭಂಗಳನಶ್ವಮೇಧಮೆನಿಪೀ ಯಜ್ಞಂಗಳಂ ಮಾಡಿದಂ।
ಕ್ರಮದಿಂದಂ ಪದಿನೆಂಟದಾ ದ್ವಿಜರುಮಂ ತಾನಂದಹಿಚ್ಛತ್ರದಿಂ।
ದಮೆ ತನ್ದೆಯ್ದೆ ಸಕುನ್ತಳಾವನಿಯೊಳಂ ಸಂಸ್ಥಾಪ್ಯಮಂ ಮಾಡಿ ವಿ।
ಕ್ರಮಮಂ ತಾಳ್ದಿ ಮಯೂರವರ್ಮ್ಮನೆಸೆದಂ ವಿಶ್ವಂಭರಾಭರದೊಳ್।

ಇದು ಐದು ಚರಣಗಳ ಮತ್ತೇಭವಿಕ್ರೀಡಿತ ವೃತ್ತವಾಗಿದ್ದು, ಶಾಸನ ಮಾತ್ರ ಪದ್ಯನಾಮದ ಬಗ್ಗೆ ಮೌನತಾಳಿದೆ.

---

೮. EC XII ತಿಪಟೂರ ೯೩ ಕರಡಾಳು (೧೧೭೪)

೯. IA XIV ಪು. ೧೫ ತೇರದಾಳ-ವಿಜಾಪುರ ಜಿಲ್ಲೆ (೧೧೨೩)

೧೦. IA X ಪು. ೨೫೧ ಕರಿಗುದರಿ-ಧಾರವಾಡ ಜಿಲ್ಲೆ (೧೧೦೮)

ಹೀಗೆ ಶಾಸನಗಳಲ್ಲಿ ಮೂರು ಚಂಪಕ, ಎರಡು ಮತ್ತೇಭವಿಕ್ರೀಡಿತ, ಒಂದು ಉತ್ಪಲಗಳು ಪಂಚಪದಿಯ ರೂಪದಲ್ಲಿ ಸಿಗುತ್ತವೆ. ಇವು ಕ್ರಿ.ಶ. ೧೦೬೨ರಿಂದ ೧೧೬೪ರ ವರೆಗಿನ ಕಾಲಾವಧಿಯಲ್ಲಿ ಹುಟ್ಟಿದುದನ್ನು ಗಮನಿಸಬೇಕು.

ಈ ಸಮವತ್ತಗಳನ್ನು ಬಿಟ್ಟರೆ ಮಿಕ್ಕ ಅರ್ಧಸಮ ಮತ್ತು ವಿಷಮವೃತ್ತಗಳಲ್ಲಿ ಶಾಸನಗಳು ಬಳಸಿಕೊಂಡುದು ವಿಷಮವೃತ್ತಗಳನ್ನು. ನಾಲ್ಕೂ ಚರಣಗಳು ಅಸಮವಿರುವುದು ಇದರ ವೈಶಿಷ್ಟ್ಯ.

ಭಯಮಂ ವಿದ್ವಿಷ್ಟ ಸೈನ್ಯಕ್ಕಭಯಮನತಿ ಭೀತರ್ಗ್ಗೆ ಬೇಳ್ಪರ್ಥಮಂ ಬೇ।
ಳ್ಪ ಯಶೋವಿಸ್ತಾರಮರ್ಥಿಪ ತತಿಗೆ ರತಿಸಮ್ಮೋಹಮಂ ಕಾನ್ತೆಯರ್ಗಿತ್ತು ಸೌಜನ್ಯಸದ್ಭ।
ತ್ತಿಯನಾಳ್ದೊಪ್ಪಿದ ವಯ್ಜರಸನ ತನಯಂ ಕ್ಷತ್ರವಂಷೇಂದುವಾಸಂ।
ದಿಯ ಬಮ್ಮಂ ಕೀತಿಧರ್ಮಂ ಕೀರ್ತಿಧರ್ಮಂ ಪದನತಿ ಜನತಾವರ್ಮನುದ್ದಾಮಶರ್ಮ॥

ಈ ವೃತ್ತ ಅಲಿಕನಾಳು ಶಾಸನದಲ್ಲಿ 'ವಿಷಮವೃತ್ತ'[೧೧]ವೆಂದೂ, ಆಸಂದಿಯ ಒಂದು ಶಾಸನದಲ್ಲಿ 'ವಿಷಮವೃತ್ತ'[೧೨]ವೆಂದೂ, ಇನ್ನೊಂದರಲ್ಲಿ 'ವಿಷಮ'[೧೩] ಎಂದೂ ಕರೆಯಲ್ಪಟ್ಟಿದೆ. ಅಂದರೆ ಒಂದೇ ವೃತ್ತ ಮೂರು ಶಾಸನಗಳಲ್ಲಿ ಪುನರಾವರ್ತನಗೊಂಡಿದೆ.

ಮಾತ್ರಾವೃತ್ತ

ಕಂದ: ಪ್ರಾಕೃತ ಛಂದಸ್ಸಿಗೆ ಸಂಬಂಧಪಟ್ಟ ಮಾತ್ರಾವೃತ್ತಗಳು ಬಹುಕಾಲದ ಹಿಂದೆಯೇ ಕನ್ನಡವನ್ನು ಪ್ರವೇಶಿಸಿವೆ. ಇವುಗಳಲ್ಲಿ ಪ್ರಮುಖವಾದುದು ಕಂದ. ಕನ್ನಡ ಕಾವ್ಯಪ್ರಪಂಚದಲ್ಲಿ ಪುನಃ ಪುನಃ ಕಾಣಸಿಗುವ ಇದು ಶಾಸನಗಳಲ್ಲಿಯೂ ಅಧಿಕ ಎಡೆವಡೆದಿದೆ. ಕಂದಕ್ಕೆ ಮೂಲವಾದುದು ಆರ್ಯೆ. ಪೂರ್ವಾರ್ಧಕ್ಕೆ ೩೦ ಉತ್ತರಾರ್ಧಕ್ಕೆ ೩೦ ಹೀಗೆ ೬೦ ಮಾತ್ರೆಗಳ ಇದು, ಪೂರ್ವಾರ್ಧ ಮತ್ತು ಉತ್ತರಾರ್ಧಗಳ ಕೊನೆಗೆ ಒಂದೊಂದು ಗುರುವನ್ನು ಮೈಗೂಡಿಸಿಕೊಂಡು ೬೪ ಮಾತ್ರೆಯ ಕಂದವಾಗಿದೆ. ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬಳ್ಳಿಗಾವಿ ಶಾಸನದಲ್ಲಿ[೧೪] ಬರುವ

ಸ್ವಸ್ತಿ ಛಲಮತ್ಥಿಗಂಡ ಪ
ರನ್ರಿಪ ಜೀವಾಪಹರಣಕರಯಮದಂಡ*॥
ಸದ್ಗುಣ ರತ್ನ ಕರಂಡಕ
ವಿಜನ ಶಿಷ್ಟೇಷ್ಟವನಜವನ ಮಾರ್ತಂಡ*॥

ಎಂಬ ಕಂದವನ್ನು 'ಆರಿಯೆ' ಎಂದು ಕರೆದುದು ಆರ್ಯೆ ಮತ್ತು ಕಂದಗಳ ಜನ್ಯಜನಕ ಸಂಬಂಧದ ಸಂಕೇತವೆನಿಸಿದೆ. ಮೇಲಾಗಿ ಈ ಕಂದ ಪ್ರಾಸರಹಿತವಾದುದನ್ನು ಗಮನಿಸಬೇಕು.

---

೧೧. EC VIII ಚೆನ್ನಗಿರಿ ೬೪ ಅಲಿಕನಾಳು (೧೨೧೪)
೧೨. EC VI ಕಡೂರ ೧೫೬ ಆಸಂದಿ (೧೯೯೬)
೧೩. EC VI ಕಡೂರ ೧೫೭ ಆಸಂದಿ(೯೯೧)
೧೪. EC VII ಶಿಕಾರಿಪುರ ೧೨೩ ಬಳ್ಳಿಗಾವಿ (೧೧೫೯)
*. ದಂಡಂ, ಮಾರ್ತಂಡಂ ಎಂದು ಬೇಕು.

'ಕನ್ದ' ಎಂಬ ಹೆಸರಿನಿಂದ "ಏನನೇನೆಲೆ ಪೇಳ್ವೆನಣ್ಣ ಸನ್ಮಾನದಾನಿಯ ಗುಣ ವ್ರತಂಗಳಂ ದಾನಶಕ್ತಿ ಅಭಿಮಾನಶಕ್ತಿ ವಿಜ್ಞಾನಶಕ್ತಿ ಸಲೆ ಗೋಪಣನ್ದಿಯ" ಎಂಬ ಪದ್ಯವೊಂದು ಸಿಗುತ್ತದೆ. ಶ್ರವಣಬೆಳ್ಗೊಳದ ಶಾಸನಕಾರ ಹೇಳಿರುವಂತೆ ಇದು ಕಂದವಲ್ಲ. ೧೧ನೆಯ ತ್ರಿಷ್ಟುಪ್ಪು ಛಂದಸ್ಸಿನ 'ರಥೋದ್ಧತ' ಎಂಬ ವೃತ್ತವಾಗಿದೆ. ಒಟ್ಟಿನಲ್ಲಿ ಕನ್ನಡ ಚಂಪೂ ಸಾಹಿತ್ಯದ ಮುಕ್ಕಾಲುಪಾಲು ಭಾಗವನ್ನು ಆಕ್ರಮಿಸಿದಂತೆ, ಶಾಸನ ಸಾಹಿತ್ಯಪ್ರಪಂಚವನ್ನೂ ಆಕ್ರಮಿಸಿದೆ, ಈ ಕಂದ.

ರಗಳೆ : ಪ್ರಾಕೃತದ 'ಪಜ್ಝಟಿಕೆ'ಯಿಂದ ಕನ್ನಡದ ರಗಳೆ ರೂಪಗೊಂಡಿದೆಯೆಂಬುದು ಈಗ ಎಲ್ಲ ವಿದ್ವಾಂಸರೂ ಒಪ್ಪಿಕೊಂಡ ಮಾತಾಗಿದೆ. ಹರಿಹರ, ತ್ರಿಭುವನತಾತ, ಶಂಕರದೇವ ಮೊದಲಾದವರನ್ನು ಬಿಟ್ಟರೆ, ಇದು ಕ್ವಚಿತ್ತಾಗಿ ಚಂಪೂಕಾವ್ಯಗಳಲ್ಲಿ ಕಂಡುಬರುವಂತೆ ಶಾಸನಗಳಲ್ಲಿಯೂ ಕೇವಲ ೫ ಸಲ ಕಂಡುಬಂದಿದೆ.

ಬಳ್ಳಾರಿ ಜಿಲ್ಲೆಯ ಕೋಗಳಿ ಶಾಸನ:[೧೫]

"ಶ್ರೀಮದರುಹಚ್ಚರಣ ಸರಸಿರುಹಭೃಂಗನಂ
ಭೂಮಿ ಕೀರ್ತಿಸೆ ನೆಗಳ್ದ ಗುಣಗಣೋತ್ತುಂಗನಂ

ಎಂದು ಪ್ರಾರಂಭವಾಗಿ

"ಕೇವಳಮೆ ನೆಗಳ್ದಿಂದ್ರಕೀರ್ತಿ ನೃಪ ಪೂಜಿತಂ
ಕೇವಳಮೆ ಸಕಳ ಗುಣಗಣ ಯಶೋರಾಜಿತಂ"

ಎಂದು ಮುಕ್ತಾಯಗೊಳ್ಳುತ್ತದೆ. ಇದು ೪೨ ಪಾದಗಳ ರಗಳೆ, (ಶಾಸನ ಸಂಪಾದಕರು 'ದೇಸಿಯಗಣ ಕುಮುದವನಸರಚ್ಚದ್ರನಂ' ಪಾದದ ತರುವಾಯದ 'ಭಾಸುರ ಗುಣಾಢ್ಯನಂ ಕೋಕಳಿಪುರೀನ್ದ್ರನಂ' ಎಂಬ ಪಾದವನ್ನು ಮರೆತುಬಿಟ್ಟು ೪೧ ಪಾದಗಳನ್ನು ಮಾತ್ರ ಪ್ರಕಟಿಸಿದ್ದಾರೆ.) ಶಾಸನದಲ್ಲಿ ಇದನ್ನು 'ತೋಮರ ರಗಳೆ'ಯೆಂದು ಕರೆಯಲಾಗಿದೆ. ನಿಯತವಾದ ಲಲಿತ, ಮಂದಾನಿಲ, ಉತ್ಸಾಹಗಳನ್ನು ಬಿಟ್ಟರೆ ಪಂಪನಲ್ಲಿ 'ಮಟ್ಟ ರಗಳೆ', ಪೊನ್ನನಲ್ಲಿ 'ತ್ವರಿತ ರಗಳೆ', ಶಾಂತಿನಾಥನಲ್ಲಿ 'ಪದ್ಧಳಿ', ದುರ್ಗಸಿಂಹನಲ್ಲಿ 'ಪದ್ಧಳಿ', ಚೌಂಡರಸನಲ್ಲಿ 'ಪಡ್ಡಳಿ', ನಾಗವರ್ಮನಲ್ಲಿ 'ಪದ್ಧತಿಕೆ' ಎಂಬ ಹೆಸರುಗಳು ಕಂಡುಬರುತ್ತಿದ್ದರೂ 'ತೋಮರ ರಗಳೆ' ಎಂಬ ಉಲ್ಲೇಖ ಮಾತ್ರ ಎಲ್ಲಿಯೂ ಸಿಗುವುದಿಲ್ಲ. 'ತೋಮರ' ಎಂಬ ಪದಕ್ಕೆ ೫ ಎಂಬ ಸಂಕೇತವಿರುವುದರಿಂದ ೫ ಮಾತ್ರೆಯ ಗಣದಲ್ಲಿ ಮುಂದುವರಿಯುವ ಲಲಿತ ರಗಳೆಯನ್ನು ಇಲ್ಲಿ 'ತೋಮರ ರಗಳೆ', ಎಂದು ಕರೆದಂತೆ ತೋರುತ್ತದೆ. ಈ ಶಾಸನದಲ್ಲಿ ದಂಡಗಳನ್ನು ಬಳಸಿದ್ದರೂ ಅವುಗಳಲ್ಲಿ ಒಂದು ವ್ಯವಸ್ಥೆ ಕಂಡುಬರುವುದಿಲ್ಲ. ಆದಿ ಮತ್ತು ಅಂತ್ಯ ಪ್ರಾಸಗಳನ್ನು ಇಲ್ಲಿ ತಪ್ಪದೇ ಪಾಲಿಸಲಾಗಿದೆ. ಇದರ ಕಾಲ ಕ್ರಿ.ಶ. ೧೦೫೫.

ಬಳ್ಳಾರಿ ಜಿಲ್ಲೆಯ ಕುರುಗೋಡ ಶಾಸನ:[೧೬]

"ಸ್ವಸ್ತಿ ಗವಜೀಶ ಪದಪದ್ಮಷಟ್ಚರಣರುಂ
ವಿಸ್ತೀರ್ಣ ವಸ್ತುಗುಣ ವಿನಿಹಿತಾಚರಣರುಂ"

ಎಂದು ಆರಂಭವಾಗಿ

---

೧೫. SII IX-i ೧೧ ಕೋಗಳಿ-ಬಳ್ಳಾರಿ ಜಿಲ್ಲೆ (೧೦೫೫)

೧೬. SII IX-i ೨೯೬ ಕುರಗೋಡ-ಬಳ್ಳಾರಿ ಜಿಲ್ಲೆ (೧೧೭೬)

"ಕುಱುಗೋಡ ತಳದೊಳಗೆ ತಳರದಯ್ಯೂರ್ವ್ವರುಂ
ನೆಱೆ ನೋರ್ಪ್ಪಡವರೊಳಗೆ ಪಗೆಗಂಜದೋರ್ವರುಂ"

ಎಂದು ಮುಕ್ತಾಯವಾಗುತ್ತದೆ. ರಗಳೆ ಎಂದು ಕರೆಯಲಾದ ೧೪ ಚರಣಗಳ ಈ ಬಂಧ 'ಲಲಿತ ರಗಳೆ'ಯಾಗಿದೆ. ಪಾದವಿಂಗಡಣೆಗೆ ಬಳಸಿದ ದಂಡಗಳಲ್ಲಿ ಒಂದು ಕ್ರಮವಿಲ್ಲ. ಈ ರಗಳೆಗಳಲ್ಲಿಯೂ ಆದಿ ಮತ್ತು ಅಂತ್ಯಪ್ರಾಸಗಳನ್ನು ತಪ್ಪದೇ ಪಾಲಿಸಲಾಗಿದೆ. ಇದರ ಕಾಲ ಕ್ರಿ.ಶ. ೧೧೭೬.

ಬಳ್ಳಾರಿ ಜಿಲ್ಲೆಯ ಇದೇ ಕುರುಗೋಡ ಗ್ರಾಮದ ಇನ್ನೊಂದು ಶಾಸನ :[೧೭]

"ಶ್ರೀಮದಾರ್ಯ್ಯಾನಾಮಪುರಮುಖ್ಯಭೂತರೆನಿ
ಪಯ್ನೂರ್ವರಿಂದೊದವಿದನ್ಯಯಾಯಾತರುಂ"

ಎಂದು ಪ್ರಾರಂಭವಾಗಿ

"ಅಭಿನವ ದ್ವಾರಾವತೀಪುರಮಿದೆನಿಸಿರ್ದ್ದ
ಕುಱುಗೋಡ ಪಟ್ಟಣಸ್ವಾಮಿಗಳ್ಕೂಡಿಟ್ಟು"

ಎಂದು ಮುಕ್ತಾಯವಾಗುತ್ತದೆ. ದಕ್ಷಿಣ ಭಾರತದ ಶಾಸನ ಸಂಪುಟದಲ್ಲಿ ಇಪ್ಪತ್ತುವರೆ ಪಾದಗಳ ಪಾಠ ಅಚ್ಚಾಗಿದ್ದು, ಮಿಕ್ಕ ಒಂದೂವರೆ ಪಾದವನ್ನು ಶಾಸನ ಸಂಪಾದಕರು ಇಲ್ಲವೆ ನಿರ್ಮಾತೃಗಳು ಮರೆತಿರಬೇಕು. ಶಾಸನದಲ್ಲಿ 'ರಗಳೆ' ಎಂದು ಕರೆಯಿಸಿಕೊಂಡ ಇದು 'ಲಲಿತ ರಗಳೆ'ಯಾಗಿದೆ. ದಂಡಗಳನ್ನು ಬಳಸಿದ್ದರೂ ಅವುಗಳಲ್ಲಿ ಒಂದು ಕ್ರಮವಿಲ್ಲ. ಅಂತ್ಯಪ್ರಾಸವನ್ನು ಕಾಯ್ದುಕೊಂಡ ಇದು, ಆದಿಪ್ರಾಸದ ಕಡೆಗೆ ವಿಶೇಷ ಗಮನವನ್ನು ಕೊಟ್ಟಿಲ್ಲ.

ಇದೇ ಶಾಸನದ ಇನ್ನೊಂದು ರಗಳೆ :

"ಉದ್ವೃತ್ತಮಂಡಲಿಕ ತಾರಕಷಡಾನನಂ
ವಿದ್ವಿಡ್ಬಳ ಧ್ವಂಸ ಸಬಳ ಪಂಚಾನನಂ"

ಎಂದು ಆರಂಭವಾಗಿ

"ಕಲಿದೇವ ದಿಬ್ಯಪದಪಂಕಜಾರಾಧಕಂ
ಬಲವದರಿಭೂಪಾಳಕುಳ ಸೈನ್ಯಸಾಧಕಂ"

ಎಂದು ಮುಕ್ತಾಯವಾಗುತ್ತದೆ. ಶಾಸನದಲ್ಲಿ ಹೆಸರು ಹೇಳದಿದ್ದರೂ ಇದು 'ಲಿಖಿತ ರಗಳೆ'ಯೆಂದು ತಿಳಿದು ಬರುತ್ತದೆ. ಎಂಟು ಪಾದಗಳ ಈ ರಗಳೆಯಲ್ಲಿ ದಂಡವನ್ನು ಸರಿಯಾಗಿ ಬಳಸಿಲ್ಲ. ಆದ್ಯಂತಪ್ರಾಸಗಳನ್ನು ಕಾಯ್ದುಕೊಳ್ಳಲಾಗಿದೆ. ಇದರ ಕಾಲ ಕ್ರಿ.ಶ. ೧೧೭೭.

---

೧೭. SII IX-i ೨೯೭ ಕುರಗೋಡ -ಬಳ್ಳಾರಿ ಜಿಲ್ಲೆ (೧೧೭೬)

ಆಂಧ್ರ ಪ್ರದೇಶದ ಕೋರಮಿಲ್ಲಿ ಶಾಸನ:[೧೮]

"ತಸ್ಮೈ ಸಮಸ್ತ ಜನತಾ ವಿಶೇಷ ಗುಣಾಯ
ರೈಸುತರ್ಪಿತ ಮಹೀದೇವ ದೇವ ಗಣಾಯ"

ಎಂದು ಪ್ರಾರಂಭವಾಗುವ ಈ ಸಂಸ್ಕೃತ ತಾಮ್ರಶಾಸನವನ್ನು ಮೊದಲು ಪ್ರಕಟಿಸಿದ ಫ್ಲೀಟ ಅವರು "The Passage is gadya of rhythemical aliterative prose" ಎಂದು ಹೇಳಿದರು. ಆದರೆ ಇದು 'ಲಲಿತ ರಗಳೆ' ಎಂದು ಸೂಚಿಸಿದವರು ಡಾ.ಪಿ.ಬಿ. ದೇಸಾಯಿ ಅವರು. ಸಂಸ್ಕೃತ ಭಾಷೆಯಲ್ಲಿ ಬರೆದ ಏಕೈಕ ರಗಳೆಗಳಾದ ಇದರ ಕರ್ತೃ ಭೀಮನಭಟ್ಟ. ಕಾಲ ಕ್ರಿ.ಶ. ೧೦೨೨.

ಹೀಗೆ ಕೋಗಳಿಯಲ್ಲಿ ೧, ಕುರಗೋಡದಲ್ಲಿ ೩, ಆಂಧ್ರಪ್ರದೇಶದ ಕೋರಮಿಲ್ಲಿಯಲ್ಲಿ ೧ ಅಂದರೆ ಒಟ್ಟು ೫ ರಗಳೆಗಳು ಈ ವರೆಗೆ ಶಾಸನದಲ್ಲಿ ಸಿಕ್ಕಿವೆ. ಇವೆಲ್ಲ ಲಲಿತ ರಗಳೆಗಳು. ಕೋರಮಿಲ್ಲಿ ಶಾಸನವನ್ನು ಬಿಟ್ಟರೆ ಮಿಕ್ಕ ೪ ರಗಳೆಗಳು ಕೋಗಳಿ ಕುರುಗೋಡ ಶಾಸನಗಳಲ್ಲಿ ಸಿಗುವುದರಿಂದ, ಇದು ಆ ಪ್ರದೇಶದ ಅಂದರೆ ಮಹಾಕವಿ ಹರಿಹರನ ಪ್ರದೇಶದ ಜನಪ್ರಿಯ ಬಂಧವಾಗಿದ್ದಿತೆಂದು ಹೇಳಬಹುದು.

೧೦೨೨ ರಿಂದ ೧೧೭೭ರ ವರೆಗಿನ ಕಾಲದಲ್ಲಿ ಅಂದರೆ ಸುಮಾರು ೧೫೦ ವರ್ಷಗಳ ಅವಧಿಯಲ್ಲಿ ಈ ೫ ರಗಳೆಗಳು ದೊರೆಯುತ್ತಿದ್ದು ಮುಂದಿನ ಶಾಸನಗಳಲ್ಲಿ ಕಾಣಸಿಗುವುದಿಲ್ಲ.

ಷಟ್ಪದಿ : ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಆರುನೂರು ವರ್ಷಗಳಷ್ಟು ದೀರ್ಘಕಾಲ ಬದುಕು ಮಾಡಿದ ಏಕೈಕ ಬಂಧವೆಂದರೆ ಮಾತ್ರಾಷಟ್ಪದಿ. ಕನ್ನಡ ಸಾಹಿತ್ಯದ ಬಹುಭಾಗವನ್ನು ವ್ಯಾಪಿಸಿದ ಈ ಬಂಧ ಶಾಸನಗಳಲ್ಲಿ ಎಡೆ ಪಡೆಯದುದು ತೀರ ವಿಸ್ಮಯ. ಹೀಗಿದ್ದರೂ ವಿಜಾಪೂರ ಜಿಲ್ಲೆಯ ಯಾಳವಾರ ಶಾಸನದಲ್ಲಿ[೧೯] ಗದ್ಯದಂತೆ ಬರೆದ

.... ಹರನ ಗಿರಿಜಾ
ವರನ ಕರುಣಾಕರನ ದುರಿತಾಂತರನ ಗಂಗಾಧರನ
ಫಣಿಯ ಕುಂಡಲನ ಹರನುಶಿಖರನ ನಿಲಗಣ
ನಿಗಮಸ್ವರೂಪದೆ ನೀಲಕಂಠಾಭರಣ ಭಸ್ಮ[ದಿ]ಧೂಳಿ
ತಾಂಗನ ಚಿತ್ರಕಾಯನ ಚಿನ್ಮಯಾಂಬರನನೊಲವಿ
............ರ [ಪಾಲಿಸಿರೆ ಭೂಹಿದಸೆ] ಭುಜದ ಗೌರಿಯ ಬಾಲನಂ
ಫ್ರಿಯ ಅರ್ಚಿಪು ವೀಜೆಯ[ಹುರ ಸಿಮಿ]ಯೊಳು................

ಎಂಬ ಭಾಗದ ಲಯವನ್ನವಲಂಬಿಸಿ, ಇದರಿಂದ ಒಂದೂವರೆ ಷಟ್ಪದಿಯನ್ನು ಹೊರತೆಗೆಯಬಹುದು.[೨೦] ಈ ವರೆಗೆ ಶಾಸನಪ್ರಪಂಚದಲ್ಲಿ ಉಲ್ಲೇಖಿತವಾದ ಮಾತ್ರಾಗಣಘಟಿತ ಏಕೈಕ ಷಟ್ಪದಿ ಇದಾಗಿದ್ದು, ಒಂದೂವರೆ ಷಟ್ಪದಿ ಇದ್ದುದು ಕುತೂಹಲಪೂರ್ಣ ವಿಷಯ. ಇದರ ಕಾಲ ೧೫೫೭.

---

೧೮. IA XIV ಪು. ೫೪, ೫೫ ಕೋರಮಿಲ್ಲಿ ತಾಮ್ರಶಾಸನ (೧೦೨೨)

೧೯. SII XV೬೯೧ ಯಾಳವಾರ-ವಿಜಾಪೂರ ಜಿಲ್ಲೆ (೧೫೫೭)

೨೦. ಕನ್ನಡನುಡಿ ಸಂ. ೩೦-೧೦(೧೯೬೭) ಶಾಸನದಲ್ಲಿ ಭಾಮಿನಿ.

ದ್ವಿಪದಿ : ದಾಸಸಾಹಿತ್ಯ, ಯಕ್ಷಗಾನಗಳನ್ನು ಬಿಟ್ಟರೆ ಕನ್ನಡಕೃತಿಗಳಲ್ಲಿ ದ್ವಿಪದಿ ಕಂಡುಬರುವುದು ವಿರಳ. ಶಾಸನ ಪ್ರಪಂಚದಲ್ಲಿ ಇದು ಎಡೆವಡೆದಿಲ್ಲ. ಆದರೆ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದ ತಲೆಯ ಮೇಲಿರುವ

"ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್
ಕಷ್ಟಜನವರ್ಜಿತನ್ ಕಲಿಯುಗವಿಪರೀತನ್"[೨೧]

ಎಂಬ ಸಾಲುಗಳಲ್ಲಿ ಕಂಡುಬರುವ ಅಂತ್ಯಪ್ರಾಸ ಮತ್ತು ಶಿಷ್ಟ-ಕಷ್ಟ ಎಂಬ ಒಳಪ್ರಾಸಗಳನ್ನು ಗಮನಿಸಿ ಶ್ರೀ ಎಂ.ಎನ್. ನರಸಿಂಹಯ್ಯನವರು[೨೧ಅ] ಇದನ್ನು ಪದ್ಯವೆಂದರೆ, ಎರಡು ಪಾದಗಳನ್ನು ಗಮನಿಸಿ ಶ್ರೀ ಆರ್.ಎಸ್. ಪಂಚಮುಖಿಯವರು[೨೧ಬ] ದ್ವಿಪದಿ ಎನ್ನುತ್ತಾರೆ. ಆದರೆ ಇದು "ಶ್ರೀ ಪಾಂಡ್ಯವಿಲ್ಲರಸರಾ ಮಗನ್ ದೇವ್ವ, ಸಾಧು ಪ್ರಿಯನ್ ಅಸಾಧುವರ್ಜಿತನ್" "ಪ್ರಿಯ ಚೆಲ್ವ ಚೆಲ್ವ ಸಂಪನ್ನಂ ಖಲಜನ ವರ್ಜಿತನ್" ಎಂಬಂತಹ ವಿಶೇಷಣ ಮಾಲೆಯಾಗಿರಬಹುದೇ ಹೊರತು, ಇವರು ಹೇಳುವಂತೆ ದ್ವಿಪದಿಯಾಗಿರಲಿಕ್ಕಿಲ್ಲ.

ಅಂಶವೃತ್ತಗಳು

ಅಂಶ ಛಂದಸ್ಸು ಕನ್ನಡ ಛಂದಸ್ಸಿನ ಹೊಕ್ಕಳ ಹುರಿ. ಕನ್ನಡಿಗರ ಸುಖ ದುಃಖಗಳ ಸುಳಿ ಬಿಚ್ಚಿದುದು, ಕೋಪತಾಪಗಳ ಕಿಡಿ ಕೆದರಿದುದು ಈ ಛಂದಸ್ಸಿನ ಬಂಧಗಳಲ್ಲಿ.

ಪಂಪಪೂರ್ವಯುಗದಲ್ಲಿ ಗ್ರಂಥಸ್ಥವಾಗಿರಬಹುದಾದ ಈ ಜಾತಿವೃತ್ತಗಳಲ್ಲಿ, ಕೆಲವು ಪಂಪ, ಪೊನ್ನರ ಕಾವ್ಯಗಳಲ್ಲಿ ಕ್ವಚಿತ್ ಮಿಂಚಿ, ಶರಣರ ಮೂಲಕ ಮತ್ತೆ ಕಾವ್ಯಕ್ಕೆ ಮಾಧ್ಯಮವಾಗತೊಡಗಿದವು. ನಾಗವರ್ಮನ ಪ್ರಕಾರ ಇವುಗಳ ಸಂಖ್ಯೆ ೧೦. ಜಯಕೀರ್ತಿಯ ಛಂದೋನುಶಾಸನ, ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ, ಶಾರ್ಙ್ಗದೇವನ ಸಂಗೀತ ರತ್ನಾಕರ[೨೨]ಗಳಲ್ಲಿ ವಿವೇಚಿಸಲ್ಪಟ್ಟ ಈ ಕೆಲವು ಅಂಶವೃತ್ತಗಳು ಶಾಸನಲೋಕದಲ್ಲಿ ಹೀಗೆ ಎಡೆಪಡೆದಿವೆ.

ಏಳೆ: ಕರ್ಣಾಟ ವಿಷಯಜಾತಿ ಸಮುದಾಯದಲ್ಲಿ ಇದು ತೀರ ಚಿಕ್ಕಬಂಧ. ತ್ರಿಪದಿಗೆ ಮಾತೆಯಾದ ಈ ಬಂಧ ಕನ್ನಡ ಕಾವ್ಯಗಳಲ್ಲಿ ಕಾಣಸಿಗುವುದಿಲ್ಲ. ಬಾಳೆಲೆ ಗ್ರಾಮದ ಒಂದು ಶಾಸನದಲ್ಲಿ ಬರುವ

೧. ಪಡುಬರ ಜೋಗಿ ಸಿಲಾಗೊಲಾ
೨. ಪಡುವ ರಾಯಸಿಲಾ
೩. ಪಡುಬರ ಜೋಗಿ ನಮಃ[೨೨ಅ]

ಎಂಬ ಮೂರು ಸಾಲು ಏಳೆಯಾಗಿದೆಯೆಂದು ವಿದ್ವಾಂಸರ ಅಭಿಪ್ರಾಯ ಸಂದೇಹದಲ್ಲಿ ನಿಂತಿದೆ.

---

೨೧. EI X ಪು. ೬೧ ಬಾದಾಮಿ-ವಿಜಾಪುರ ಜಿಲ್ಲೆ (೭೦೦)
೨೧ಅ. GOKI. ಪು. ೩೬೩
೨೧ಬ. ಕರ್ನಾಟಕದ ಇತಿಹಾಸ-ಪ್ರಥಮ ಸಂಪುಟ-ಸಾಂಸ್ಕೃತಿಕ ಚರಿತ್ರೆ ಪು. ೧೨೨
೨೨. EI IX ೧೯ ಉದಯಾವರ ಶಾಸನ ಮತ್ತು EI IX ೨೦ ಉದಯಾವರ ಶಾಸನ.
೨೨ಅ. EC I ೧೩ ಬಾಳೆಲೆ-ವೀರರಾಜಪೇಟೆ

ತ್ರಿಪದಿ: ಕರ್ಣಾಟಕ ವಿಷಯಜಾತಿ ಸಮುದಾಯದಲ್ಲಿ ತ್ರಿಪದಿ ಕನ್ನಡದ ಅಚ್ಚಮುತ್ತೈದೆ. ಕನ್ನಡಿಗರ ನಾಲಗೆಯ ಮೇಲೆ ಯಾವ ಕಾಲಕ್ಕೂ ಜೀವಂತವಾಗಿರುವ ಇದು, ಸಾರ್ವಭೌಮತ್ವವನ್ನು ಪಡೆದುದು ಸರ್ವಜ್ಞನನಲ್ಲಿ. ಜೋಗಿಮಾರಾ ಗುಹೆಯ ಪ್ರಾಕೃತ ಶಾಸನದಲ್ಲಿ

"ಶುತನುಕಾನಾಮ ದೇವದಾಶಿಕ್ಕೀ
ತಂ ಕಾಮಯಿತ್ಥ ಬಾಲಾನಶೇಯೇ
ದೇವದಿನ್ನೆ ನಾಮ ಲೂಪದಖ್ಖೇ"

ಎಂದು ೩ ಪಾದಗಳಲ್ಲಿ ಬರೆಯಲಾದ ಈ ಪದ್ಯವನ್ನು ಕುರಿತು, ಪ್ರತಿಪಾದದಲ್ಲಿ ೧೭ ಮಾತ್ರೆಗಳಿರುವ ಇದು 'ತ್ರಿಪದಿ' ಎಂದು ಡಾ. ಲೂಡರ್ಸ್ ಹೇಳುತ್ತಾರೆ. ಡಾ. ಎಂ.ವೆಂಕಟಸುಬ್ಬಯ್ಯನವರು ಇನ್ನೂ ಮುಂದೆ ಹೋಗಿ ೬ ಮತ್ತು ೧೦ನೆಯ ಸ್ಥಾನಗಳಲ್ಲಿ ಬ್ರಹ್ಮಗಣ ಬರುವುದರಿಂದ ಇದು ಅಂಶಗಣಘಟಿತ 'ತ್ರಿಪದಿ' ಎಂದು ಸಾಧಿಸುತ್ತಾರೆ.[೨೩] ಈ ಉಭಯ ವಿದ್ವಾಂಸರ ಮತಗಳು ಯಾವ ನೆಲೆಯನ್ನೂ ಮುಟ್ಟಿಲ್ಲ. ಇದನ್ನು ಬಿಟ್ಟರೆ ತ್ರಿಪದಿಗಳು ಕಂಡುಬರುವುದು ೧೨ ಶಾಸನಗಳಲ್ಲಿ. ಆಗಾಗ ಪಂಡಿತರು ಗುರುತಿಸಿದ್ದ ಹಾಗೂ ಹೊಸದಾಗಿ ತಾವು ಗುರುತಿಸಿದ ಒಟ್ಟು ೨೮ ತ್ರಿಪದಿಗಳನ್ನು ಯಾದಿಗೊಳಿಸಿದ್ದಾರೆ, ಡಾ. ಚಿದಾನಂದಮೂರ್ತಿಗಳು.[೨೪] "ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ" ಎಂಬ ಪ್ರಬಂಧದಲ್ಲಿ ಇನ್ನೂ ಐದು ತ್ರಿಪದಿಗಳು ಗುರುತಿಸಲ್ಪಟ್ಟು, ಈ ಸಂಖ್ಯೆ ೩೩ಕ್ಕೆ ಏರಿದೆ.[೨೫] ಈಗ ಮತ್ತೂ ಒಂದು ದೊರೆತು ಆ ಸಂಖ್ಯೆ ೩೪ನ್ನು ಮುಟ್ಟಿದೆ. ಒಟ್ಟು ೧೨ ಶಾಸನಗಳಲ್ಲಿ ಸಿಗುವ ಈ ೩೪ ತ್ರಿಪದಿಗಳ ಕಾಲಕ್ರಮ ವಿವರಣೆ ಕೆಳಗಿನಂತಿದೆ.

೧	ಬಾದಾಮಿ (IA X P ೬೧)	೩	೭೦೦
೨.	ಹುಮ್ಮಚ (EC VIII ನಗರ ೬೨)	೫	೮೦೦
೩.	ಸೊರಬ (EC VIII ಸೊರಬ ೨೨)	೫	೮೦೦
೪.	ಹೇಮಾವತಿ (SII IX-i ೩೮)	೫	೯೬೭
೫.	ಸವಡಿ (BKI-i ರೋಣ ೪೨)	೨	೯೭೦
೬.	ಹೂಲಿ (EI XVIII)	೧	೯೮೫
೭.	ಚಿತ್ತವಳ್ಳಿ (EC VI ಚಿಕ್ಕಮಗಳೂರು ೯೪)	೪	೧೦೬
೮.	ಬಳ್ಳಿಗಾವಿ (EC VII ಶಿಕಾರಿಪುರ ೧೨೯)	೪	೧೦೭೧
೯.	ಹುಮ್ಮಚ (EC VII ನಗರ ೩೫)	೧	೧೦೭೭
೧೦.	ನೀಲಗುಂದ (SII IX-i ೧೪೧)	೨	೧೦೭೯

೨೩. ಸಾಪಪ xx ಕರ್ನಾಟಕ ವಿಷಯಜಾತಿಛಂದಸ್ಸು-ಎ. ವೆಂಕಟಸುಬ್ಬಯ್ಯ
೨೪. ಸಂಶೋಧನ ತರಂಗ-ಸಂಪುಟ ೧ ಪು. ೩೧.
೨೫. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ಪು. ೧೩೩

೧೧. ತಾಳಗುಂದ (EC VII ಶಿಕಾರಿಪುರ ೧೮೫) ೧ ೧೧೮೫

೧೨. ಬೆಳ್ಳೂರ (EC IV-ii ನಾಗಮಂಗಲ ೪೭) ೧ ೧೧೯೯

ಈ ತ್ರಿಪದಿಗಳನ್ನು ಹೀಗೆ ಅಭ್ಯಸಿಸಬಹುದು.

೧. ಹೂಲಿ, ಹುಮ್ಮ ಚ (ನಗರ ೩೫), ಬೆಳ್ಳೂರ, ತಾಳಗುಂದ ಶಾಸನಗಳಲ್ಲಿ ಒಂದೊಂದರಂತೆ; ಸವಡಿ, ನೀಲಗುಂದ ಶಾಸನಗಳಲ್ಲಿ ಎರಡರಂತೆ; ಬಾದಾಮಿ ಶಾಸನದಲ್ಲಿ ಮೂರರಂತೆ; ಬಳ್ಳಿಗಾವಿ, ಚಿತ್ತವಳ್ಳಿ ಶಾಸನಗಳಲ್ಲಿ ನಾಲ್ಕರಂತೆ; ಹುಮ್ಮ ಚ (ನಗರ ೬೨), ಹೇಮಾವತಿ, ಸೊರಬ ಶಾಸನಗಳಲ್ಲಿ ಐದರಂತೆ ಹೀಗೆ ಶಾಸನಗಳಲ್ಲಿ ಒಂದರಿಂದ ಐದರ ವರೆಗೆ ತ್ರಿಪದಿಗಳು ಕಂಡುಬರುತ್ತವೆ.

೨. ಎಲ್ಲ ತ್ರಿಪದಿಗಳನ್ನು ಗದ್ಯದಂತೆ ಬರೆಯಲಾಗಿದೆ.

೩. ಬಳ್ಳಿಗಾವಿ, ತಾಳಗುಂದ, ಹುಮ್ಮ ಚ (ನಗರ ೩೫), ಹುಮ್ಮ ಚ(ನಗರ ೬೨), ಬೆಳ್ಳೂರ, ಚಿತ್ತವಳ್ಳಿ, ನೀಲಗುಂದ, ನಾಗಮಂಗಲ ಶಾಸನಗಳಲ್ಲಿ ಪದ್ಯಗಳನ್ನು ಪಿಂಗಡಿಸುವ ಗೆರೆಗಳಿವೆ. ಮಿಕ್ಕವುಗಳಲ್ಲಿ ಪದ್ಯವಿಂಗಡಿಸುವ ಗೆರೆಗಳಿಲ್ಲ.

೪. ಪಾದವಿಂಗಡಿಸುವ ಗೆರೆಗಳು ಯಾವುದರಲ್ಲಿಯೂ ಇಲ್ಲ.

೫. ತಾಳಗುಂದ ಮತ್ತು ಬಳ್ಳಿಗಾವಿ ಶಾಸನಗಳಲ್ಲಿ 'ತ್ರಿವದಿ' ಎಂದೂ, ನೀಲಗುಂದ ಶಾಸನದಲ್ಲಿ 'ತ್ರಿಪದಿ' ಎಂದೂ, ಬೆಳ್ಳೂರ ಶಾಸನದಲ್ಲಿ 'ತ್ರಪದಿ' ಎಂದೂ, ಹುಮ್ಮ ಚ ಶಾಸನದಲ್ಲಿ 'ತ್ರಿ' ಎಂದೂ ಸೂಚಿಸಲಾಗಿದೆ.

ಅಂಗನಷ್ಟತೆ, ಅಶುದ್ಧ ಬರವಣಿಗೆಯಿಂದಾಗಿ ಕೆಲವು ತ್ರಿಪದಿಗಳ ಛಂದಸ್ಸಿನ ಬಗೆಗೆ ಖಚಿತ ಹೇಳಿಕೆ ನೀಡಲು ಸಾಧ್ಯವಿಲ್ಲದಾಗಿದೆ. ಜಾತಿ ಛಂದಸ್ಸಿನಲ್ಲಿ ಗಣವ್ಯತ್ಯಾಸಕ್ಕೆ ಅವಕಾಶವಿರುವುದರಿಂದ ಇವುಗಳಲ್ಲಿ ಗಣಪಲ್ಲಟ ಕಂಡುಬರುತ್ತದೆ. ಇಂಥ ಪ್ರಸಂಗಗಳಲ್ಲಿ ದೋಷವನ್ನು ಗುಣವೆಂದು ಹೇಳಬಹುದಾದರೂ ಯಾವ ಕಾಲಕ್ಕೂ ವ್ಯತ್ಯಾಸಗೊಳ್ಳಬಾರದ ೬ ಮತ್ತು ೧೧ನೆಯ ಸ್ಥಾನಗಳಲ್ಲಿಯ ಬ್ರಹ್ಮ ಗಣಕ್ಕೆ ಕೆಲವು ಸಲ ಚ್ಯುತಿ ಬಂದು ತ್ರಿಪದಿಯ ಹೊಕ್ಕಳಹುರಿಗೆ ಧಕ್ಕೆ ಬಂದಿದ್ದರೆ, ಇನ್ನು ಕೆಲವು ಸಲ 'U-"ನಿಂದ ಗಣ ಪ್ರಾರಂಭವಾಗಿ ಅಂಶಛಂದಸ್ಸಿನ ಮೂಲತತ್ವವೇ ಮುರಿದು ಬಿದ್ದಿದೆ.

ಬಾದಾಮಿಯ ತಟ್ಟೆಕೋಟೆ ಬಳಿಯಲ್ಲಿರುವ ಕಪ್ಪೆ ಅರಭಟ್ಟನ ತ್ರಿಪದಿಗೆ ಸಮಾನವಾದ ಕೆಲವು ಭಾಗ ಸಮೀಪದ ಸಿಡಿಲ್ಪಡಿಯೆಂಬಲ್ಲಿಯೂ ದೊರಕುತ್ತದೆ. ಒಂದು ಶ್ಲೋಕ ಮತ್ತು ಎರಡು ಸಾಲುಗಳ ಗದ್ಯಗಳನ್ನು ಬಿಟ್ಟರೆ ಬಾದಾಮಿ ಶಾಸನ ಸಂಪೂರ್ಣ ತ್ರಿಪದಿರೂಪದಲ್ಲಿದೆ. ಹೂಲಿ ಶಾಸನದಲ್ಲಿ ಬರುವ ತ್ರಿಪದಿಯನ್ನು ಸಂಪಾದಕರಾದ ಡಾ. ಬಾರ್ನೆಟ್ ಅವರು ದ್ವಿಪದಿ ಎಂದು ಊಹಿಸಿದ್ದರು. ಹುಮ್ಮ ಚ (ನಗರ ೬೨) ಶಾಸನ ಸಂಪೂರ್ಣ ತ್ರಿಪದಿಯಲ್ಲಿದೆ. ಬಳ್ಳಿಗಾವಿ (ಶಿಕಾರಿಪುರ ೧೨೯) ಶಾಸನ ಕಂದ, ವೃತ್ತ, ತ್ರಿಪದಿ, ಅಕ್ಕರ, ತ್ರಿಪದಿಗಳ ವಿಶಿಷ್ಟ ಮಿಶ್ರಣವಾಗಿದೆ.

ಇಲ್ಲಿ ದೇಶೀಪದ ಅಧಿಕವಾಗಿರುವ, ಲಕ್ಷಣಕ್ಕೆ ಅನುಗುಣವಾಗಿರುವ ಕೆಲವು ತ್ರಿಪದಿಗಳು ಮಧುರವಾಗಿವೆ. ಸಂಸ್ಕೃತ ಪದ ಅಧಿಕವಾಗಿರುವ, ಲಕ್ಷಣವನ್ನು ಉಲ್ಲಂಘಿಸಿಕೊಂಡಿರುವ ಕೆಲವು ತ್ರಿಪದಿಗಳು ತಮ್ಮ ಮುಗ್ಧತೆಯನ್ನು ಹಾಳುಮಾಡಿಕೊಂಡಿವೆ. ಕ್ರಿ.ಶ. ೭೦೦ ರಿಂದ ೧೧೯೯ರ ಕಾಲದಲ್ಲಿ ಈ ಒಟ್ಟು ೩೪ ತ್ರಿಪದಿಗಳು ಲಭ್ಯವಾಗಿದ್ದು, ಮುಂದಿನ ಶಾಸನಗಳಲ್ಲಿ ಕಾಣದಿರುವುದು ಸೋಜಿಗದ ಸಂಗತಿ.

ಪಿರಿಯಕ್ಕರ : ಕನ್ನಡ ಶಾಸನಗಳಲ್ಲಿ ತ್ರಿಪದಿಯ ತರುವಾಯ ವಿಶೇಷ ಬಳಕೆಗೊಂಡ ವಿಷಯಜಾತಿ ಅಕ್ಕರ. ಈ ಅಕ್ಕರ ಪಂಚಕದಲ್ಲಿ ದೀರ್ಘ ಸಾಲುಗಳನ್ನೊಳಗೊಂಡಿರುವ ಪಿರಿಯಕ್ಕರ ಹೆಸರಿಗೆ ಸಾರ್ಥಕವಾದ ಬಂಧ, ಈಗ ತಿಳಿದ ಮಟ್ಟಿಗೆ ಒಟ್ಟು ಹದಿಮೂರು ಶಾಸನಗಳಲ್ಲಿ ಹನ್ನೆರಡು ಪಿರಿಯಕ್ಕರಗಳಿದ್ದು, ಕೆಲವು ಪುನರುಕ್ತಗೊಂಡು ಇವುಗಳ ಸಂಖ್ಯೆ ೨೦ಕ್ಕೆ ಏರಿದೆ. ಅದರ ವಿವರಣೆ ಹೀಗಿದೆ:

೧.	ಶ್ರವಣಬೊಳ್ಗೊಳ (EC II 133)	೧	೯೮೨
೨.	ಶಿರೂರ (BKI -i ೭೫)	೧	೧೦೪೨
೩.	ನರಗುಂದ (KI V II)	೧	೧೦೪೫
೪.	ಬೆಳತೂರ(EC IV-ii ಹೆಗ್ಗಡದೇವನಕೋಟೆ ೧೮)	೩	೧೦೫೭
೫.	ಬಳ್ಳಿಗಾವಿ(EC VIII ಶಿಕಾರಿಪುರ ೧೨೯)	೧	೧೦೭೧
೬.	ಹುಮ್ಮಚ(EC VIII ನಗರ ೩೫)	೧	೧೦೭೭
೭.	ಮುನಿರಾಬಾದ(APGAS III ೧೩)	೧	೧೦೮೮
೮.	ಶ್ರವಣಬೊಳ್ಗೊಳ(EC II ೭೩)	೨	೧೧೧೮
೯.	ಶ್ರವಣಬೆಳ್ಗೊಳ(EC II ೧೨೫)	೨	೧೧೧೮
೧೦.	ಶ್ರವಣಬೆಳ್ಗೊಳ(EC II ೨೫೧)	೨	೧೧೧೮
೧೧.	ಶ್ರವಣಬೆಳ್ಗೊಳ (EC II ೧೪೩)	೧	೧೧೩೧
೧೨.	ಶ್ರವಣಬೆಳ್ಗೊಳ(EC II ೨೪೦)	೨	೧೧೭೫
೧೩.	ಶ್ರವಣಬೆಳ್ಗೊಳ (EC II ೩೯೭)	೨	೧೧೭೯

೧. ಈ ೧೩ ಶಾಸನಗಳಲ್ಲಿ ೭ ಶಾಸನಗಳು ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿವೆ. ಈ ಏಳರಲ್ಲಿ ಪಿರಿಯಕ್ಕರ ೧೨. ಈ ೧೨ ಅಕ್ಕರಗಳಲ್ಲಿ ೨ ಶಾಸನಗಳಲ್ಲಿಯ (೧೩೩, ೧೪೩) ಎರಡು ಅಕ್ಕರಗಳೂ ಮತ್ತು ೫ ಶಾಸನಗಳಲ್ಲಿ ಪುನರುಕ್ತಗೊಂಡ "ಆದಿಯಾಗಿರ್ಪುದಾರ್ಹತ ಸಮಯಕ್ಕೆ" ಮತ್ತು "ಗಂಗವಾಡಿಯ ಬಸದಿಗಳೆನಿತೊಳವನಿತಂ ತಾನೆಯ್ದೆ ಪೊಸಯಿಸಿದಂ" ಎಂಬ ಎರಡು ಅಕ್ಕರಗಳೂ ಸಮಾವೇಶಗೊಳ್ಳುತ್ತವೆ.

೨. ಮುನಿರಾಬಾದ, ಶ್ರವಣಬೆಳ್ಗೊಳ ೧೩೩, ೧೪೩, ಬಳ್ಳಿಗಾವಿ, ಶಿರೂರ, ಹುಮ್ಮಚ, ನರಗುಂದ ಶಾಸನಗಳಲ್ಲಿ ಒಂದೊಂದರಂತೆ; ಶ್ರವಣಬೆಳ್ಗೊಳ ೭೩, ೧೨೫, ೨೪೦, ೨೫೧, ೩೯೭ ರ ಶಾಸನಗಳಲ್ಲಿ ಎರಡರಂತೆ ; ಬೆಳತೂರ ಶಾಸನದಲ್ಲಿ ೩ ರಂತೆ ಒಟ್ಟು ೨೦ ಅಕ್ಕರಗಳು ದೊರೆಯುತ್ತವೆ.

೩. ಎಲ್ಲ ಪದ್ಯಗಳನ್ನು ಗದ್ಯದಂತೆ ಬರೆಯಲಾಗಿದೆ.

೪. ಮುನಿರಾಬಾದ, ಶ್ರವಣಬೆಳ್ಗೊಳ ೧೨೫, ೨೪೦, ೨೫೧, ಬೆಳತೂರ, ಹುಮ್ಮಚ, ಬಳ್ಳಿಗಾವಿ, ನರಗುಂದ ಶಾಸನದಲ್ಲಿ ಪದ್ಯಗಳನ್ನು ಮಾತ್ರ ಪ್ರತ್ಯೇಕಿಸುವ ಗೆರೆಗಳಿವೆ.

೫. ಶ್ರವಣಬೆಳ್ಗೊಳ ೭೩, ೧೨೫, ೩೯೭ ಈ ಶಾಸನಗಳಲ್ಲಿ ಪದ್ಯ ಮತ್ತು ಪಾದಗಳನ್ನು ವಿಂಗಡಿಸುವ ಗೆರೆಗಳಿವೆ.

೬. ಈ ೨೦ರಲ್ಲಿ ಯಾವುದಕ್ಕೂ 'ಪಿರಿಯಕ್ಕರ' ಎಂದು ಹೆಸರಿಸದೆ ಬೆಳತೂರ ಶಾಸನದಲ್ಲಿ 'ಅಕ್ಕರಂ' ಎಂದೂ ಶ್ರವಣಬೆಳ್ಗೊಳ ೧೪೩, ೭೩, ೧೨೫, ೨೪೦, ೨೫೧, ಹುಮ್ಮಚ, ಬಳ್ಳಿಗಾವಿ, ಮುನಿರಾಬಾದ, ನರಗುಂದ ಶಾಸನದಲ್ಲಿ 'ಅಕ್ಕರ' ಎಂದೂ ಕರೆದಿದ್ದಾರೆ.

ಈ ಅಕ್ಕರಗಳು ಕ್ರಿ.ಶ. ೯೮೨ರಿಂದ ಕ್ರಿ.ಶ. ೧೧೭೯ರ ಕಾಲಾವಧಿಯ ಶಾಸನಗಳಲ್ಲಿ ಕಾಣಿಸಿಕೊಂಡಿದ್ದು, ಮುಂದಿನ ಶಾಸನಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ.[೨೬]

ಮೂಲಷಟ್ಪದಿ : ಜಾತಿಛಂದಸ್ಸಿಗೆ ತ್ರಿಪದಿ, ಪಿರಿಯಕ್ಕರಗಳ ತರುವಾಯ ಗೋಚರಿಸುವ ವೃತ್ತವೆಂದರೆ ಷಟ್ಪದ ಅಥವಾ ಮೂಲಷಟ್ಪದಿ. ನಾಗವರ್ಮ, ಜಯಕೀರ್ತಿ, ಸೋಮೇಶ್ವರರು ಹೇಳಿದ ಲಕ್ಷಣಕ್ಕನುಗುಣವಾಗಿ ಮದನತಿಲಕದಲ್ಲಿ ೩, ಸುಕುಮಾರ ಚರಿತ್ರೆಯಲ್ಲಿ ೧, ಮಾನಸೋಲ್ಲಾಸದಲ್ಲಿ ೧ - ಹೀಗೆ ೩ ಕಾವ್ಯಗಳಲ್ಲಿ ೫ ಷಟ್ಪದಿಗಳು ಕಂಡುಬಂದರೆ, ೪ ಶಾನಗಳಲ್ಲಿ ೬ ಷಟ್ಪದಿಗಳು ಕಂಡುಬರುತ್ತವೆ. ಅವು

೧.	ಭೀಮಸಮುದ್ರ (EC XI ಚಿತ್ರದುರ್ಗ ೪೭)	೧	೧೦೬೭
೨.	ಚಡಚಣ(SII XX ೧೪೪)	೩	೧೦೬೭
೩.	ಅಮ್ಮಿನಭಾವಿ(BKI-ii)	೧	೧೦೭೧
೪.	ಗಂಗಾಪುರ (APGI 52)	೧	೧೧೪೧

ಇವುಗಳಲ್ಲಿ ಡಾ. ಪಿ.ಬಿ. ದೇಸಾಯಿಯವರು ಅಮ್ಮಿನಭಾವಿ[೨೭] ಶಾಸನಸ್ಥ ಷಟ್ಪದಿಯನ್ನು 'ಅಪೂರ್ವಷಟ್ಪದಿ' ಎಂಬ ಹೆಸರಿನಲ್ಲಿ ಬೆಳಕಿಗೆ ತಂದರು. ಇದು ಅಪೂರ್ವ ಷಟ್ಪದಿಯಲ್ಲ. ಅಂಶಗಣಾನ್ವಿತವಾದ ಮೂಲಷಟ್ಪದಿಯೆಂದು ಮೊಟ್ಟ ಮೊದಲು ಹೇಳಿದವರು ಶ್ರೀ ಬೆಟಗೇರಿ ಕೃಷ್ಣಶರ್ಮರು.[೨೮] ತರುವಾಯ ಹೇಳಿದವರು ಶ್ರೀ ತೀ.ನಂ.ಶ್ರೀಯವರು.[೨೯] ಆಮೇಲೆ ಭೀಮಸಮುದ್ರ, ಚಡಚಣ ಶಾಸನಗಳಲ್ಲಿಯ ಮೂಲಷಟ್ಪದಿಗಳನ್ನು ಶ್ರೀ ಡಿ.ಎಲ್.ಎನ್ ಅವರೂ[೩೦] ಗಂಗಾಪೂಪುರ ಷಟ್ಪದಿಯನ್ನು ಡಾ. ಚಿದಾನಂದಮೂರ್ತಿಯವರೂ[೩೧] ಹುಡುಕಿ ಹೇಳಿದರು.

೧. ಅಮ್ಮಿನಭಾವಿ ಶಾಸನದಲ್ಲಿ ಮಾತ್ರ 'ಷಟ್ಪದ' ಎಂಬ ಸೂಚನೆ ಇದ್ದು, ಮಿಕ್ಕವುಗಳಲ್ಲಿ ಈ ಸೂಚನೆಯಿಲ್ಲ.

---

೨೬. ಇವುಗಳಲ್ಲಿ ಕೆಲವು ಪಿರಿಯಕ್ಕರಗಳನ್ನು ಹುಡುಕಿಕೊಟ್ಟವರು ೧೯೭೦-೭೧ನೆಯ ವರ್ಷದ ನನ್ನ ವಿದ್ಯಾರ್ಥಿಗಳು. ಅವರ ನೆರವನ್ನು ನೆನೆಯುತ್ತೇನೆ.

೨೭. ಕ. ನುಡಿ ೧೫-೨

೨೮. ಜಯಂತಿ ೧೯೫೨ ಜುಲೈ

೨೯. ಕ.ನುಡಿ ೧೫-೩

೩೦. ಪ್ರ.ಕ. ೪೯-೧

೩೧. ಪ್ರ. ಕ. ೫೦-೩

೨. ಭೀಮಸಮುದ್ರ, ಚಡಚಣ, ಗಂಗಾಪುರ ಶಾಸನಗಳಲ್ಲಿ ಮಾತ್ರ ಪದ್ಯಗಳನ್ನು ಪ್ರತ್ಯೇಕಿಸುವ ಗೆರೆಗಳಿವೆ.

೩. ಯಾವುದರಲ್ಲಿಯೂ ಪಾದವಿಂಗಡಿಸುವ ಗೆರೆಗಳಿಲ್ಲ. ೧೦೬೭ ರಿಂದ ೧೧೪೧ರ ವರೆಗಿನ ಶಾಸನಗಳಲ್ಲಿ ಈ ೬ ಮೂಲಷಟ್ಪದಿಗಳು ದೊರೆತಿದ್ದು; ಮುಂದಿನ ಸಾಹಿತ್ಯ ಪ್ರಪಂಚದಲ್ಲಿ ಸುಳುಹುದೋರುವುದಿಲ್ಲ.

ಉತ್ಸಾಹ : ಜಾತಿಛಂದಸ್ಸಿಗೆ ಸೇರಿದ ವೃತ್ತಗಳಲ್ಲಿ ೭ ಬ್ರಹ್ಮ ೧ ಗುರುವಿನಿಂದ ಕೂಡಿದ ಉತ್ಸಾಹವೂ ಒಂದು. ೩ ಮಾತ್ರೆಯ ೭ ಗಣ ಹಾಗೂ ೧ ಗುರುವನ್ನೊಳಗೊಂಡ ಇದು ಮಾತ್ರಾ ವೃತ್ತವೂ ಹೌದು. ಹೀಗೆ ಇಬ್ಬಗೆಯಲ್ಲಿ ನಟಿಸಿ ತೋರುವ ಇಂಥದೊಂದು ವೃತ್ತ ಕೇರಳದ ಕಾಸರಗೋಡ ತಾಲೂಕಿನ ತಾಳಗೇರ[೩೨] ಗ್ರಾಮದ ಶಾಸನದಲ್ಲಿ ಹೀಗೆ ಬರುತ್ತದೆ:

ಊರ ಕಡೆಯ ತೊಱೆಯ ತಡಿಯ ಕರಿಯ ಕಲ್ಲ ಮೋಱದಿಂ ಪು।
ತ್ತೂರ ಪೊಲೆಯರಿಪ್ಪ ಕೇರಿಯಾವಲು ನೀರ ಭೂಮಿಯಂ।
ಸಾರ ಭೂರುಹಂಗಳೋಳಿಯೊಳಗೆ ನೆಱೆದ ಕೆಱೆಯನಂ ।
ಭೋರುಹಾಕ್ಷಿ ತನ್ನ ಧನದಿನೊಪ್ಪೆ ಮಾಡಿಸಿಟ್ಟುದಂ॥

ಈವರೆಗೆ ವಿವೇಚಿಸಿದ ವರ್ಣವೃತ್ತ-ಮಾತ್ರಾವೃತ್ತ-ಅಂಶವೃತ್ತಗಳ ಜೊತೆ ಸಂಸ್ಕೃತ ಭಾಷೆಯಲ್ಲಿ ಬರೆಯಲಾದ ಚೂರ್ಣಿ(?), ಗ್ರಂಥ ಮತ್ತು ಶ್ಲೋಕಗಳೂ ಕನ್ನಡ ಭಾಷೆಯಲ್ಲಿ ಬರೆಯಲಾದ 'ಅಬ್ಯಾಡಿವಳಿ' ಹೆಸರಿನ ಒಂದು ಪದ್ಯವೂ ಶಾಸನದಲ್ಲಿದ್ದುದನ್ನು ಗಮನಿಸಬೇಕು.

ಇವಲ್ಲದೆ ಹಲವು ಶಾಸನಗಳಲ್ಲಿ ಕವಿತ್ವದ ಕಸರತ್ತಿನ ಪ್ರತೀಕವಾದ ಚಿತ್ರಬಂಧಗಳು ಗೋಚರಿಸುತ್ತವೆ. ಉದಾಹರಣೆಗಾಗಿ ಶಿಕಾರಿಪುರ ತಾಲೂಕಿನ ಬಂದಳಿಕೆ ಗ್ರಾಮದ ಶಾಂತೀಶ್ವರಬಸದಿಯ ನೈಋತ್ಯ, ವಾಯವ್ಯ, ಈಶಾನ್ಯ, ಆಗ್ನೇಯ ದಿಕ್ಕಿನ ಕಂಬಗಳ ಮೇಲೆ ಇಂಥ ಚಿತ್ರಬಂಧಗಳನ್ನು ನೋಡಬಹುದು.[೩೩] ಇಲ್ಲಿಯ "ಈ ಶ್ಲೋಕವನ್ನು ಚಿತ್ರಬಂಧದಲ್ಲಿ ಓದಿಕೊಂಬುದು. ಕರ್ನಿಕಾಮಧ್ಯ ಅಕ್ಷರದ ವಳೆಯವ ಮೊದಲುಗೊಂಡು ನಾಲ್ಕನೆಯ ವಳೆಯದಲ್ಲಿ 'ಜಿನಸ್ತುತಿರಿಯಂ'ಯೆಂಬ ಪ್ರಬಂಧದ ನಾಮವನೋದಿಕೊಂಬುದು. ಯೆಂಟನೆಯವಳೆಯದಲ್ಲಿ "ಸೂರಿ ವಿರಾಚಿತಾ" ಎಂದು ಕವಿನಾಮವನೋದಿಕೊಂಬುದು. 'ಜಿನಸ್ತುತಿರಿಯಂ'ಯೆಂಬ ಪ್ರಬಂಧದ ನಾಮವನೋದಿಕೊಂಬುದು. "ಈ ಪ್ರಕಾರದಲೆ ನಾಲ್ಕು ಚಕ್ರವನ್ನೂ ಓದಿಕೊಂಬುದು" ಎಂಬ ವಿವರಣೆ ಈ ಸೂರಿ ಕವಿಯ ಪ್ರಗಲ್ಭತೆಯನ್ನು ಪ್ರತಿಬಿಂಬಿಸುತ್ತದೆ. ಸಾಲದುದಕ್ಕೆ ಇಲ್ಲಿ ಅನುಲೋಮ ಪ್ರತಿಲೋಮಶ್ಲೋಕ, ಗತಪ್ರತ್ಯಾಗತಶ್ಲೋಕಗಳನ್ನು ಚಿತ್ರಸಹಿತ ಬಿಡಿಸಲಾಗಿದೆ. ಶಾಸನಗಳಲ್ಲಿ ನಿಕ್ಷಿಪ್ತವಾಗಿರುವ ಇಂತಹ ಹಲವಾರು ಚಕ್ರಬಂಧಗಳು ಶಾಸನಕವಿಗಳ ಛಂದೋಪರಿಣತಿಗೆ ಸಾಕ್ಷಿ ನುಡಿಯುತ್ತವೆ.

---

೩೨. EI XXIX ೨೦೩ ತಳಂಗೆರೆ-ಕೇರಳ ಪ್ರಾಂತ (೧೦ನೆಯ ಶತಮಾನ)

೩೩. EC VII ಶಿಕಾರಿಪುರ ೨೨೯ ಬಂದಳಿಕೆ (ಸು. ೧೧೦೦)

ಈ ವಿವಿಧ ವೃತ್ತಗಳಲ್ಲದೆ ಛಂದಸ್ಸಿನ ದೃಷ್ಟಿಯಿಂದ ಗಮನಿಸಬೇಕಾದ ಇನ್ನೂ ಕೆಲವು ಸಂಗತಿಗಳು ಶಾಸನಗಳಲ್ಲಿ ಮೈದೋರಿವೆ. ಅಕ್ಷರವೃತ್ತದ ಪ್ರತಿಯೊಂದು ಪಾದದ ಕೊನೆ ಮತ್ತು ಕಂದದ ದೀರ್ಘಪಾದದ ಕೊನೆಯಲ್ಲಿ ಗುರು ಅವಶ್ಯ ಬರಬೇಕು. ಎಷ್ಟೋ ಶಾಸನಗಳು ಈ ಮಾತನ್ನು ಪಾಲಿಸಲಿಕ್ಕಿಲ್ಲ. ವ್ಯಂಜನಾಂತ ಪದಗಳನ್ನೆಲ್ಲ ಸ್ವರಾಂತವಾಗಿ ಬರೆಯಲಾಗಿದೆ. ಇಂಥವುಗಳನ್ನು ವ್ಯಂಜನಾಂತಗಳೆಂದು ಭಾವಿಸಿಕೊಳ್ಳದೆ ಹೋದರೆ ವೃತ್ತದ ಸ್ವರೂಪವೇ ಅರಿತಕ್ಕೆ ಬರುವುದಿಲ್ಲ.

ಅಂಶವೃತ್ತಗಳಲ್ಲಿ ಗಣದ ಸ್ಥಿತಿಸ್ಥಾಪಕತ್ವ ನಿಯಮದಂತೆ ಬ್ರಹ್ಮ, ವಿಷ್ಣು, ರುದ್ರಗಳು ಆಗಾಗ ಸ್ಥಾನಪಲ್ಲಟಗೊಂಡಿವೆ. 'U-' ಹೀಗೆ ಪ್ರಾರಂಭವಾಗುವ ಅಂಶಗಣಗಳೂ ಅಲ್ಲಲ್ಲಿ ಬಂದಿವೆ.

ಆದಿಪ್ರಾಸ ಕನ್ನಡ ಪದ್ಯಗಳಿಗೆ ಅವಶ್ಯ. ನಮ್ಮ ಕಾವ್ಯಗಳು ತಪ್ಪದೇ ಪಾಲಿಸುತ್ತ ಬಂದ ಇದನ್ನು ಶಾಸನಗಳು ಅನೇಕ ಸಲ ಪಾಲಿಸಿಲ್ಲ. ರ-ಲ, ಡ-ರ, ಣ-ಳ, ನ-ಗ, ರ-ಮ, ಸ್ತ-ನ, ದ್ಗು-ಜ ಇತ್ಯಾದಿ ಪ್ರಾಸಜೋಡಣೆಗಳು ಇದಕ್ಕೆ ಉದಾಹರಣೆ. ಇಷ್ಟೇ ಏಕೆ? ಕನ್ನಡಿಗರ ಮನೆಮಾತಾಗಿರುವ 'ಸಾಧುಗೆ ಸಾಧು' ಎಂಬ ಶಾಸನೋಪಲಬ್ಧ ಪ್ರಥಮ ತ್ರಿಪದಿಯಲ್ಲಿ, ಪ್ರಾಸ ಉಲ್ಲಂಘನೆಯಾಗಿರುವುದನ್ನು ಲಕ್ಷಿಸಬೇಕು. ವಸ್ತುಸ್ಥಿತಿ ಹೀಗಿದ್ದರೂ ಕೆಲವು ಶಾಸನಗಳು ಸಂಸ್ಕೃತ ಪದ್ಯಗಳಿಗೆ ಆದಿಪ್ರಾಸವನ್ನು ಜೋಡಿಸಿವೆ. ಅದು ಆದಿಪ್ರಾಸಪ್ರಿಯತೆಯ ದ್ಯೋತಕವೆನ್ನಬಹುದು.

ಪದ್ಯದ ಪ್ರತಿಯೊಂದು ಪಾದದಲ್ಲಿಯೂ ಪ್ರಾಸಸ್ಥಾನದ ಹಿಂದೆ ಗುರು(-) ಇಲ್ಲವೆ ಲಘು (U) ಬರಬೇಕೆಂದು ಕನ್ನಡ ಛಂದಸ್ಸಿನ ಕಟ್ಟಳೆ. ಆದರೆ ಒಮ್ಮೆ ಗುರು, ಒಮ್ಮೆ ಲಘು ಬಂದು ಆಗಾಗ ಈ ನಿಮಯಕ್ಕೆ ಚ್ಯುತಿ ಬಂದಿದೆ.

ಧಾತು ಮತ್ತು ಪ್ರಾತಿಪದಿಕಗಳನ್ನು ಸೀಳಿ, ಯತಿ ಬರಬಾರದೆಂದು ಸಂಸ್ಕೃತ ಛಂದಸ್ಸಿನ ನಿಯಮ. ಆದರೆ ಇಂಥ ಯತಿವಿಲಂಘನೆ ಕನ್ನಡದ ವೈಶಿಷ್ಟ್ಯ. ಪ್ರತಿಯೊಂದು ಪಾದದ ಅಂತ್ಯದಲ್ಲಿ ಯತಿಯುಳ್ಳ ಈ ಅಕ್ಷರವೃತ್ತಗಳು, ಕನ್ನಡಕ್ಕೆ ಬಂದಾಗ ಪ್ರತಿಯೊಂದು ಪಾದದ ಆದಿಯಲ್ಲಿ ಪ್ರಾಸವನ್ನೂ ಪಾಲಿಸಬೇಕಾಯಿತು. ಈಗ ಪಾದದ ಕೊನೆಯ ಯತಿಯೊಂದಿಗೆ ಪಾದದ ಆದಿಯಲ್ಲಿ ಆದಿಪ್ರಾಸವನ್ನೂ ಪಾಲಿಸುವುದು ಕಠಿಣವಾಯಿತು. ಇಂಥ ಪ್ರಸಂಗದಲ್ಲಿ ಕನ್ನಡಿಗರು "ನಿಜಿಸಿ ಖಂಡಪ್ರಾಸಮಂ ಯತಿಯಂ ಮಿಕ್ಕರ್" ಅಂದರೆ ತಮ್ಮ ಪ್ರಾಣವಾದ ಪ್ರಾಸವನ್ನು ಇಟ್ಟುಕೊಂಡು ಯತಿಯನ್ನು ಕೈಬಿಡಲು ಪ್ರಾರಂಭಿಸಿದರು. ಮೊದಮೊದಲು ಪಾದಾಂತ್ಯದಲ್ಲಿ ಪ್ರಾರಂಭವಾದ ಈ ಕ್ರಿಯೆ, ಬರಬರುತ್ತ ಪಾದಮಧ್ಯದಲ್ಲಿಯೂ ಪ್ರವೇಶಿಸಿತು. ಈ ಯತಿವಿಲಂಘನೆಯ ಪ್ರಥಮ ಪ್ರಸ್ತಾಪ ಈಗ ತಿಳಿದ ಮಟ್ಟಿಗೆ ಕವಿರಾಜಮಾರ್ಗದಲ್ಲಿ ಬರುತ್ತಿದ್ದರೂ ೭ನೆಯ ಶತಮಾನದ ಶಾಸನಪದ್ಯಗಳಲ್ಲಿ ಇದಕ್ಕೆ ಉದಾಹರಣೆಗಳು ಸಿಗುವುದರಿಂದ, ಈ ಯತಿಭಂಗ ಕನಿಷ್ಟಪಕ್ಷ ಅಷ್ಟು, ಪ್ರಾಚೀನವೆನ್ನಬೇಕಾಗುತ್ತದೆ. ಉದಾ:

೧. ಪರಮಾರ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆನ್ದು ಸನ್ಯಸನಂಗೆ*
ಯ್ದುರು ಸತ್ವನ್ನನ್ದಿಸೇನ ಪ್ರವರಮುನಿವರನ್ದೇವಲೋಕಕ್ಕೆ ಸನ್ದಾನ್ ||[೩೪]

೩೪. EC II ಶ್ರವಣಬೆಳ್ಗೊಳ ೮೮ (೭೦೦)

೨.		"ಚಪಲಿಲ್ಲಾ ನವಿಲೂರ ಸಂಘದ ಮಹಾ*ನನ್ತಾಮತೀಗನ್ತಿಯಾರ್॥[೩೫]

೩.		"ಅವರುಂ ಸಾಧಿಸಿ ಸ್ವರ್ಗಲೋಕ ಸುಖಚಿ*ತ್ತಂ xxxಮಾಧಿಗಳ್"[೩೬]

ಪ್ರಕೃತಿಯನ್ನು ಭಗ್ನಗೊಳಿಸಿ ಯತಿ ಕಾಲೂರಿ ನಿಂತುದನ್ನು ಇಲ್ಲಿ ಲಕ್ಷಿಸಬೇಕು. ಕವಿರಾಜಮಾರ್ಗಪೂರ್ವದ ಕನ್ನಡ ಸಾಹಿತ್ಯ ಕಳೆದುಹೋಗಿರುವ ಈ ಪ್ರಸಂಗದಲ್ಲಿ ಇವು ಯತಿವಿಲಂಘನ ಪ್ರಕ್ರಿಯೆಯ ಪ್ರಾಚೀನತೆಯನ್ನು ತಿಳಿಸಿಕೊಡುವ ಅಳಿದುಳಿದ ಉದಾಹರಣೆಗಳಾಗಿವೆ.

ಹೀಗೆ ಬಹಳಷ್ಟು ಶಾಸನಗಳು ಹೊಸದೇನನ್ನು ಹೇಳದಿದ್ದರೂ ಕೆಲವು ಸಲ ಮಾತ್ರ ನವೀನ ಸಂಗತಿಗಳನ್ನು ಒದಗಿಸಿ, ನಮ್ಮ ಛಂದಸ್ಸಿನ ಪರಿಜ್ಞಾನವನ್ನು ವಿಸ್ತಾರಗೊಳಿಸುತ್ತವೆ.

■■

ಆಕರ : ಮಾರ್ಗ ಸಂಪುಟ–೨

---

೩೫. EC II ಶ್ರವಣಬೆಳ್ಗೊಳ ೯೮ (೭೦೦)

೩೬. EC II ಶ್ರವಣಬೆಳ್ಗೊಳ ೧೦೬ (೭೦೦)

೫೦

ಶಾಸನ ಭಾಷೆ

ಭಾರತದಲ್ಲಿ ಭಾಷೆಯ ಅಭ್ಯಾಸ ವೇದಗಳಷ್ಟು ಪ್ರಾಚೀನ. ಭಾರತೀಯರು ಅಂದಿನಿಂದ ಸಂಸ್ಕೃತ ಪ್ರಾಕೃತಗಳನ್ನು ಆಮೇಲೆ ಪ್ರಾಂತಭಾಷೆಗಳನ್ನು ನಿಷ್ಠೆಯಿಂದ ಅಧ್ಯಯನಗೈಯುವಲ್ಲಿ ಗ್ರಂಥಸ್ಥ ಭಾಷೆಯನ್ನು ಮಾತ್ರ ಗಮನಿಸಿ, ಆಡುಭಾಷೆ ಮತ್ತು ಶಾಸನಭಾಷೆಗಳನ್ನು ಅಲಕ್ಷಿಸಿದ್ದಾರೆ. ಶಬ್ದಮಣಿದರ್ಪಣದಲ್ಲಿ ಬರುವ 'ನುಡಿದನೆ ಕಾವುದನೆ'[೧] 'ಪಡೆಮಾತೇಂ ಬಂದು'[೨] ಎಂಬ ಒಂದೆರಡು ಶಾಸನ ಪದ್ಯಗಳನ್ನು ಬಿಟ್ಟರೆ ಕನ್ನಡಿಗರೂ ಭಾಷಾಧ್ಯಯನ ಪ್ರಸಂಗದಲ್ಲಿ ಶಾಸನಗಳನ್ನು ಕಡೆಗಣಿಸಿರುವರೆಂದೇ ಹೇಳಬೇಕು. ಇದಕ್ಕೆ ಮುಖ್ಯ ಕಾರಣ ವೈಯಾಕರಣಿಗೆ ಎಲೆಯ ಮೇಲಿನ ಸಾಹಿತ್ಯಕ್ಕಿಂತ ಶಿಲೆಯ ಮೇಲಿನ ಸಾಹಿತ್ಯವನ್ನು ದೊರಕಿಸುವುದು ದುಸ್ಸಾಧ್ಯವಾದುದು. ಆದರೆ ಇತ್ತೀಚೆ ಶಾಸನಗಳು ಅಚ್ಚುಗೊಂಡು ಸುಲಭ ಸಾಧ್ಯವಾಗಲು, ವಿದ್ವಾಂಸರ ಗಮನ ಅವುಗಳ ಅಧ್ಯಯನದತ್ತ ವಾಲಿದೆ. ಇದರ ಫಲವಾಗಿ ಈ ವರೆಗೆ ಕನ್ನಡದಲ್ಲಿ

೧. A Grammar of the oldest Kanarese inscriptipons.

೨. Historical Grammar of old Kannada.

ಎಂಬ ಎರಡು ಗ್ರಂಥಗಳು ಬೆಳಕು ಕಂಡಿವೆ.[೩] ಇವು ಕಾಲ್ಡವೆಲ್ ವ್ಯಾಕರಣ ಮಾದರಿಯಲ್ಲಿ ಬರೆದ ಕೃತಿಗಳಾದುದರಿಂದ ಆಧುನಿಕ ಭಾಷಾವಿಜ್ಞಾನದೃಷ್ಟಿಯಿಂದ ಶಾಸನಭಾಷೆಯ ಸಮಗ್ರವ್ಯಾಸಂಗ ನಡೆಯುವುದು ಈಗ ಅತ್ಯವಶ್ಯವಿದೆ.

ಪರಿವರ್ತನೆಯು ಭಾಷೆಯ ಜೀವಂತಿಕೆಯ ಲಕ್ಷಣ. ಕನಿಷ್ಠ ಪಕ್ಷ ೨೦೦೦ ವರ್ಷ ಬದುಕು ಮಾಡಿದ ಕನ್ನಡವನ್ನು ಅವಸ್ಥಾದೃಷ್ಟಿಯಿಂದ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು; ಪ್ರಾಂತಭೇದ ದೃಷ್ಟಿಯಿಂದ ಮುಖ್ಯವಾಗಿ ಮೈಸೂರ ಕನ್ನಡ, ಧಾರವಾಡ ಕನ್ನಡ ಎಂದು;ಬಳಕೆಯ ದೃಷ್ಟಿಯಿಂದ ಗ್ರಂಥಸ್ಥಕನ್ನಡ, ಕಂಠಸ್ಥಕನ್ನಡ ಎಂದು ವಿಭಜಿಸುತ್ತಾರೆ. ಇಷ್ಟು ಹಿನ್ನೆಲೆಯೊಂದಿಗೆ ಕನ್ನಡ ಶಾಸನಗಳನ್ನು

---

೧. ಶಬ್ದಮಣಿದರ್ಪಣ ಸೂತ್ರ-೬೬

೨. ಶಬ್ದಮಣಿದರ್ಪಣ ಸೂತ್ರ -೧೭೧

೩. ಇವು ಕ್ರಮವಾಗಿ ಡಾ. ಎ.ಎನ್. ನರಸಿಂಹಯ್ಯ ಮತ್ತು ಡಾ. ಜಿ.ಎಸ್.ಗಾಯಿ ಅವರ ಕೃತಿಗಳು. ಇತ್ತೀಚೆ ಆಧುನಿಕ ಭಾಷಾವಿಜ್ಞಾನದೃಷ್ಟಿಯಿಂದ ಶಾಸನಗಳನ್ನಾಧರಿಸಿ ಬರೆದ ಡಾ. ಕೆ. ಕುಶಾಲಪ್ಪಗೌಡರ 'A Grammar of Kannada' ಕೃತಿ ಪ್ರಕಟವಾಗಿದೆ.

೧. ಶಾಸನಸ್ಥ ವಿವಿಧ ಭಾಷೆಗಳು

೨. ಶಾಸನಸ್ಥ ಕನ್ನಡ ಭಾಷೆಯ ಸ್ವರೂಪ

ಎಂದು ಎರಡು ರೀತಿಯಲ್ಲಿ ಅಭ್ಯಾಸ ಮಾಡಬಹುದು.

ಮೌರ್ಯ ಮತ್ತು ಶಾತವಾಹನರ ಕಾಲದಲ್ಲಿ ಈ ನಾಡಿನ ಶಾಸನಗಳಿಗೆ ಬಳಸಿದ ಭಾಷೆ ಪ್ರಾಕೃತ. ಈ ಶಾಸನಗಳ ಸಂಖ್ಯೆ ಬೆರಳ ಮೇಲೆ ಎಣಿಸುವಷ್ಟು. ಆಮೇಲೆ ಕದಂಬರು ಪಟ್ಟಕ್ಕೆ ಬರುತ್ತಲೇ ಏಕಕಾಲಕ್ಕೆ ಸಂಸ್ಕೃತ ಮತ್ತು ಕನ್ನಡಗಳು ಶಾಸನಕ್ಕೆ ಬಳಕೆಗೊಂಡವು. ಇವುಗಳಲ್ಲಿ ಮೊದಮೊದಲು ಸಂಸ್ಕೃತ ಹೆಚ್ಚು, ಕನ್ನಡ ಕಡಿಮೆ, ಬಾದಾಮಿ ಚಾಲುಕ್ಯರ ಕಾಲಕ್ಕೆ ಎರಡೂ ಸಮ. ಮುಂದೆ ಕನ್ನಡ ಹೆಚ್ಚು, ಸಂಸ್ಕೃತ ಕಡಿಮೆ. ಯಾದವರ ಕಾಲದಲ್ಲಿ ಉತ್ತರದ ಸೀಮೆಗುಂಟ ಆಗೊಂದು ಈಗೊಂದು ಮೂಡಿದ ಮರಾಠಿ ಶಾಸನಗಳು ತರುವಾಯ ಒಳಪ್ರದೇಶದೊಳಗೆ ಅಲ್ಲೊಂದು ಇಲ್ಲೊಂದು ಹುಟ್ಟಿದವು. ಆದಿಪಂಪನನ್ನು ಕುರಿತ ಆಂಧ್ರಪ್ರದೇಶದ ಗಂಗಾಧರಂ ಶಾಸನದಲ್ಲಿ ಮೂರು ತೆಲುಗು ಪದ್ಯಗಳಿದ್ದರೂ ಕರ್ನಾಟಕದ ಶಾಸನಗಳಿಗೆ ಉದ್ದೇಶಪೂರ್ವಕವಾಗಿ ತೆಲುಗು ಬಳಕೆಗೊಂಡವು ವಿಜಯನಗರ ಕಾಲದಲ್ಲಿ. ಮುಸಲ್ಮಾನ್ ಆಳಿಕೆಯಲ್ಲಿ ಉರ್ದು, ಪರ್ಶಿಯನ್ ತಲೆಚಾಚಿದವು; ತಮಿಳು, ಮಲೆಯಾಳಂ ಆಗಾಗ ಕಾಲು ಚಾಚಿದವು.

ಸಾಮಾನ್ಯವಾಗಿ ಒಂದು ಶಾಸನಕ್ಕೆ ಒಂದೇ ಭಾಷೆಯನ್ನು ಬಳಸುತ್ತಿದ್ದರೂ ಒಮ್ಮೊಮ್ಮೆ ಹಲವು ಭಾಷೆಗಳನ್ನು ಬಳಸುವುದುಂಟು.[೪] ಪಂಪನ ಗಂಗಾಧರಂ ಶಾಸನ ಭಾರತೀಯ ಭಾಷೆಯೆಂದು ಸಂಸ್ಕೃತವನ್ನು, ಆಡಳಿತ ಭಾಷೆಯೆಂದು ಕನ್ನಡವನ್ನು, ಪ್ರಾಂತ ಭಾಷೆಯೆಂದು ತೆಲುಗನ್ನು ಬಳಸಿದುದು ಕಾಲದೃಷ್ಟಿಯಿಂದ ತೀವ್ರ ಲಕ್ಷಿಸಬೇಕಾದ ಸಂಗತಿ. ಶಾಸನಭಾಷೆ ಯಾವುದೇ ಇರಲಿ ಪ್ರಾರಂಭದ ಸ್ತುತಿಪದ್ಯ, ಅಂತ್ಯದ ಫಲಶ್ರುತಿಪದ್ಯ ಸಾಮಾನ್ಯವಾಗಿ ಸಂಸ್ಕೃತ. ಅದರಲ್ಲಿಯೂ 'ನಮಸ್ತುಂಗ ಶಿರಶ್ಚುಂಬಿ' ಎಂಬ ಸ್ತುತಿಪದ್ಯ, 'ಸ್ವದತ್ತಂ ಪರದತ್ತಂ......' ಎಂಬ ಫಲಶ್ರುತಿಪದ್ಯಗಳ ಬಳಕೆ ಅಧಿಕ. ಸಂಸ್ಕೃತ ಶಾಸನಗಳಿದ್ದರೆ ಬಹುಭಾಗವನ್ನು ಸಂಸ್ಕೃತದಲ್ಲಿ ಬರೆದು ಸರ್ವರಿಗೂ ವೇದ್ಯವಾಗಲೆಂದು ಮುಖ್ಯ ವಿಷಯವಾದ ದತ್ತಿವಿವರಣೆಯನ್ನು ಕೆಲವು ಸಲ ಕನ್ನಡದಲ್ಲಿ ಬರೆಯುವುದುಂಟು. "ಅಸ್ಯ ಸೀಮಾ ಕನ್ನಾಟಕೇ ಪ್ರವಕ್ಷ್ಯಾಮಿ" ಎಂಬ ಭೂವಿಕ್ರಮನ ಶಾಸನ,[೫] "ಪ್ರಾಕೃತ ವರ್ಣ್ಯಾನ್ಯೇತಾನಿ ದತ್ತಾನಿ" ಎಂದು ಹೇಳಿ ಕನ್ನಡವನ್ನು ಪ್ರಾಕೃತವೆಂದು ಕರೆದ ಚಾಲುಕ್ಯ ವಿಜಯಾದಿತ್ಯನ[೬] ಶಾಸನಗಳನ್ನು ಇಲ್ಲಿ ನೋಡಬೇಕು.[೭]

* * *

೪. EC X ಕೋಲಾರ ೧೫೮ ಮುದವಾಡಿ (೧೪೮೨). ಇಲ್ಲಿ ಕನ್ನಡ ಮತ್ತು ತೆಲುಗು ಭಾಷೆ ಬಳಸಲಾಗಿದೆ.

೫. ಕನ್ನಡದ ನೆಲೆ ಪು. ೫೦

೬. KI I ನಂ. ೨ ಬಾದಾಮಿ -ವಿಜಾಪುರ ಜಿಲ್ಲೆ (೬೯೯)

೭. ಇದಕ್ಕೆ ವಿರುದ್ಧವಾಗಿ ಹೂವಿನ ಹಿಪ್ಪರಗಿ ಶಾಸನದಲ್ಲಿ ಎಲ್ಲ ವಿಷಯವನ್ನು ಕನ್ನಡದಲ್ಲಿ, ದತ್ತಿ ವಿಷಯವನ್ನು ಸಂಸ್ಕೃತದಲ್ಲಿ ಬರೆಯಲಾಗಿದೆ. SII XI-i ೮ ಹೂವಿನಹಿಪ್ಪರಗಿ-ವಿಜಾಪುರ ಜಿಲ್ಲೆ (೮೬೨)

ಕವಿ ಸಾಹಿತ್ಯದಲ್ಲಿ ದೇಸಿ, ಮಾರ್ಗಗಳ ಸೀಳು ಉದ್ದಕ್ಕೂ ಕಂಡುಬರುವಂತೆ ಶಾಸನ ಸಾಹಿತ್ಯದಲ್ಲಿ ಯಾವ ಕಾಲಕ್ಕೂ ಗ್ರಂಥಸ್ಥಭಾಷೆ, ಕಂಠಸ್ಥಭಾಷೆ ಎಂಬ ಎರಡು ಪ್ರವಾಹಗಳು ಗಮನಕ್ಕೆ ಬರುತ್ತವೆ. ಪ್ರಥಮ ಕನ್ನಡ ಶಾಸನವಾದ ಹಲ್ಮಿಡಿಶಾಸನದಲ್ಲಿ ಬಹುಪಾಲು ಗ್ರಂಥಸ್ಥಭಾಷೆಯಿದ್ದರೆ, ಇದು ಸಿಗುವುದಕ್ಕೆ ಮೊದಲು ಪ್ರಥಮ ಕನ್ನಡಶಾಸನವೆಂದು ಹೆಸರುಪಡೆದಿದ್ದ ಮಂಗಳೀಶನ ಬಾದಾಮಿಶಾಸನದಲ್ಲಿ ಬಹುಪಾಲು ಕಂಠಸ್ಥ ಭಾಷೆಯಿದ್ದುದು ಇದಕ್ಕೆ ಉದಾಹರಣೆ. ಇದೇ ರೀತಿ ಕನ್ನಡದ ಎಲ್ಲ ಶಾಸನಗಳನ್ನು ಸ್ಥೂಲವಾಗಿ ಗ್ರಂಥಭಾಷೆಯ ಶಾಸನ ಮತ್ತು ಕಂಠಸ್ಥಭಾಷೆಯ ಶಾಸನ ಎಂದು ವರ್ಗೀಕರಿಸಲು ಬರುವಂತಿದೆ.

ಶಾಸನದಲ್ಲಿ ನೆಲೆನಿಂತ ಗ್ರಂಥಸ್ಥಭಾಷೆಯನ್ನಷ್ಟೇ ಅವಲೋಕಿಸಿದರೆ ಸ್ಪಷ್ಟವಾಗಿ ಕಾಣುವುವು, ಪೂರ್ವದ ಹಳಗನ್ನಡ ಮತ್ತು ಹಳಗನ್ನಡ ಎಂಬ ಪ್ರಭೇದಗಳು. ಒಂದು ನೃಪತುಂಗನಿಗೆ ಮೊದಲು; ಇನ್ನೊಂದು ನೃಪತುಂಗನಿಗೆ ತರುವಾಯ.

ಮಾಸೇನರ್ ಪರಮ ಪ್ರಭಾವ ರಿಷಿಯರ್ಕಟ್ವಪ್ಪಿನಾ ವೆಟ್ಟದುಳ್।
ಶ್ರೀ ಸಂಗಂಗಳ ಪೇಟ್ದಿ ಸಿದ್ಧಸಮಯನ್ತಪ್ಪಾದೆ ನೋನ್ತಿಮ್ಬಿನಿನ್।
ಪ್ರಾಸಾದಾನ್ತರಮಾನ್ವಿಚಿತ್ರ ಕನಕಪ್ರಜ್ವಲ್ಯದಿನ್ಮಿಕ್ಕುದಾನ್।
ಸಾಸಿರ್ವ್ವರ್ವರ ಪೂಜೆದನ್ದುಯೆ ಅವರ್ಸ್ವರ್ಗಾಗ್ರಮಾನೇಱಿದಾರ್॥[೮]

ಈ ಪದ್ಯದ ವೆಟ್ಟದುಳ್, ತಪ್ಪಾದೆ, ಪ್ರಾಸಾದಾನ್ತರಮಾನ್, ಮಿಕ್ಕುದಾನ್ ಪೂಜೆದನ್ದುಯೆ, ಸ್ವರ್ಗಾಗ್ರಮಾನೇಱಿದಾರ್ ಪದಗಳಲ್ಲಿ ಪೂರ್ವದ ಹಳಗನ್ನಡ ಮೂಡಿನಿಂತಿದೆ.

ಶ್ರೀಮತಿಗಂತಿಯರ್ಜ್ಜಿತಕಷಾಯಿಗಳುಗ್ರತಪಂಗಳಿಂದಮಿಂ।
ತೀಮಹಿಯೊಳ್ ಪೊಗರ್ತ್ತೆ ನೆಗರ್ತ್ತೆಗೆ ನೋನ್ತು ಸಮಾಧಿಯಿಂ ಜಗ।
ತ್ಸ್ವಾಮಿಯೆನಿಪ್ಪ ಪೆಂಪಿನ ಜಿನೇಂದ್ರನ ಪಾದಪಯೋಜನಯುಗ್ಮಮಂ।
ಪ್ರೇಮದೆ ಚಿತ್ತದೊಳ್ನಿಲಿಸಿ ದೇವನಿವಾಸ ವಿಭೂತಿಯೆಯ್ದಿದಳ್॥[೯]

ಈ ಪದ್ಯವೂ ಸಮಾಧಿಮರಣವನ್ನು ಕಥಿಸುತ್ತಿದ್ದು, ಇಲ್ಲಿಯ ಪ್ರತಿಯೊಂದು ಪದ ಪೂರ್ವದ ಹಳಗನ್ನಡದಿಂದ ಹೊರಗಾಗಿ ಹಳಗನ್ನಡಕ್ಕೆ ಒಳಗಾಗಿದೆ. ನಮ್ಮ ಶಾಸನಗಳೆಲ್ಲ ಕೊನೆಯ ವರೆಗೆ ಚಂಪೂ ಪ್ರಕಾರವನ್ನೇ ಅನುಸರಿಸಿದ ಕಾರಣ, ಚಂಪುವಿಗೆ ಅವಶ್ಯವೆನಿಸುವ ಅಕ್ಷರವೃತ್ತ ಮತ್ತು ಕಂದಗಳಿಗೆ ಯೋಗ್ಯವಲ್ಲದ ನಡುಗನ್ನಡ, ಹೊಸಗನ್ನಡಗಳನ್ನು ಬಹುಮಟ್ಟಿಗೆ ಕಡೆಗಣಿಸಿ, ಅವು ಒಂದು ಕಾಲಕ್ಕೆ ಪೂರ್ವದ ಹಳಗನ್ನಡ, ಇನ್ನೊಂದು ಕಾಲಕ್ಕೆ ಹಳಗನ್ನಡ ಹೀಗೆ ಎರಡೇ ಭಾಷಾಭೇದಗಳನ್ನು ಅನುಸರಿಸುತ್ತ ನಡೆದವು.

ಕವಿ ಬಳಸುವ ಗ್ರಂಥಸ್ಥಭಾಷೆ ಆ ಕಾಲದ ಕಂಠಸ್ಥಭಾಷೆಯ ಪರಿಷ್ಕೃತ ರೂಪವಿದ್ದಂತೆ, ಆ ಕಾಲಕ್ಕೆ ಪ್ರಾಚೀನವಾದ ರೂಪವೂ ಆಗಿರುತ್ತದೆ. ಕಂಠಸ್ಥಭಾಷೆ ಮಾತ್ರ ಈ ಸೂತಕದಿಂದ ಮುಕ್ತವಾಗಿ ಸಮಕಾಲೀನ ಧ್ವನಿಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಪ್ರತಿಸ್ಪಂದಿಸುತ್ತದೆ. ಹೀಗಾಗಿ ಒಂದೇ ಕಾಲದ ಗ್ರಂಥಸ್ಥಭಾಷೆಯ ಕಾವ್ಯ,

---

೮. EC II ಶ್ರವಣಬೆಳ್ಗೊಳ ೨೭ (೭೦೦)
೯. EC II ಶ್ರವಣಬೆಳ್ಗೊಳ ೩೫೧ (೭೦೦)

ಕಂಠಸ್ಥ ಭಾಷೆಯ ಶಾಸನಗಳನ್ನು ಹೋಲಿಸಿದರೆ ಅವುಗಳ ಭಾಷಾರೂಪ ತೀರ ಭಿನ್ನವಾಗಿ ತೋರುತ್ತದೆ; ಕಾವ್ಯಗಳನ್ನು ನೋಡಿ ಹೇಳಲಾಗುತ್ತಿರುವ ಹಳಗನ್ನಡ ಕಾಲದಲ್ಲಿಯೇ ನಡುಗನ್ನಡ, ನಡುಗನ್ನಡ ಕಾಲದಲ್ಲಿಯೇ ಹೊಸಗನ್ನಡ ಹಣಿಕಿಹಾಕಿದುದು ಶಾಸನಗಳಿಂದ ತಿಳಿದುಬರುತ್ತದೆ. ಉದಾ:

"ಹಾಡುವ ಕಾಮವೆ ನಾಗವೆಯ ಮಗಳುಂ, ಶ್ರೀ ಕಲಿದೇವರ ತೊತ್ತು ಪಾತ್ರದ ಸಿರಿಯವೆ, ಕಲ್ಲಕೇರಿಯ ತನ್ನ ಮನೆಯನಾ ದೇವರಿಗೆ ಕೊಟ್ಟು, ಆ ಮನೆಯೊಳಗೆ ತಾನುಂ ತನ್ನ ವಂಶಜರಾರಿರ್ದೊಡಂ ಆಚಂದ್ರಾರ್ಕತಾರಂಬರಂ ದೇವರ ನಂದಾದೀವಿಗೆಗೆ ವರ್ಷಂಪ್ರತಿ ಪಣವೆರಡುಂ ಕೊಟ್ಟು ಮನೆಯೊಳಗೆ ಸುಖದಿನಿಪ್ಪುದು'[೧೦]

ಹರಪನಹಳ್ಳಿ ತಾಲೂಕಿನ ಬಾಗಳಿಗ್ರಾಮಕ್ಕೆ ಸಂಬಂಧಪಟ್ಟ ಈ ಶಾಸನದ ಕಾಲ ೧೦೩೫. ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಇದು ಹಳಗನ್ನಡ ಕಾಲ; ಆದರೆ ಶಾಸನದ ಭಾಷಾ ಪ್ರಯೋಗ ತೀರ ನಡುಗನ್ನಡ.

"ಸೋಮೆಯ ದಣ್ಣಾಯಕರು ಬೆಂಮತೂರದುರ್ಗವನಾಳುವನಲ್ಲಿ ಸೇವಣರಣೆಯ ನಾಯ್ಕ ಕಂಪಿಲದೇವನು ಹೊಳಲಕೆಱೆಗೆ ಯ(ಎ)ತ್ತಿ ಬಂದಲ್ಲಿ ಆ ಬೆಮತೂರಕಲ್ಲಿಂದೆತ್ತಿ ಹೋಗಿ ಆ ಕಂಪಿಲನೊಡನೆ ಹೊಯ್ದು ಹೋಕು......ಟ್ಟಾಡಿ ಬಿದ್ದ ವೀರಗಲ್ಲು."[೧೧]

ಇದು ಬಾಗವಾಳ ಗ್ರಾಮದ ಕ್ರಿ.ಶ.ಸು. ೧೩೦೩ರ ಶಾಸನ. ಸಾಹಿತ್ಯ ಚರಿತ್ರೆಯ ಅಭ್ಯಾಸದಿಂದ ಹೇಳುವುದಾದರೆ ಇದು ನಡುಗನ್ನಡ ಕಾಲ. ಆದರೆ ಮೇಲಿನ ಬಾಗಳಿ ಶಾಸನದಲ್ಲಿ ಕಾಣುವ ಅಂತ್ಯಾನುಸ್ವಾರಗಳೆಲ್ಲ ಉದುರಿಹೋಗಿ ಹೊಸಗನ್ನಡದತ್ತ ಮುನ್ನಡೆದಿದೆ, ಈ ಶಾಸನ. ಕೆಳಗಿನ ೧೬ನೆಯ ಶತಮಾನದ ಇನ್ನೊಂದು ಶಾಸನ ಈ ದೃಷ್ಟಿಯಿಂದದ ಇನ್ನೂ ಆಶ್ಚರ್ಯವನ್ನುಂಟುಮಾಡುತ್ತದೆ.

"ಭೈರವಭೂಪಾಲನು ಜಾವಗಲಿನಲಿ ಸುಖಸಂಕಥಾವಿನೋದಿಂದ ರಾಜ್ಯವನ್ನು ಪರಿಪಾಲಿಸುತಲು ತಮಗೆ ನಿರವಧಿಕವಾಗಿದ್ದ ಧರ್ಮಕೀರ್ತಿಗಳಾಗಬೇಕೆಂದು ಆ ಚಂದ್ರಾರ್ಕಸ್ಥಾಯಿಯಾಗಿರೂ ಹಾಗೆ ಜಾವಗಲ್ಲ ದಕ್ಷಿಣಭಾಗದಲ್ಲೂ ಬಯಿರ ಸಮುದ್ರವೆಂಬ ಮಹಾತಟಾಕನು ನೇಮಿಸಿ, ಆ ತಟಾಕದ ನಂದನವನಕೆ ಗತಿಯಾಗಿದ್ದ ಕ್ಷೇತ್ರ ಪ್ರತಿಷ್ಠೆಯನ್ನು ಮಾಡಿ, ಜಾವಗಲ್ಲ ಪೂರ್ವದ ಕೆರೆಗ ಸಾಲುವನ ಅಳಗವೆಂಬ ಕಾಲುವೆಯನ್ನು ಹೊಸತಾಗಿ ತೆಗಿಸಿ ಕೆಱೆಗಳೂ ದೃಢವಹ ಹಾಗೆ ಮಾಡಿಸ್ತರು."[೧೨]

ಇದು ೧೬ನೆಯ ಶತಮಾನದ್ದೆಂದು ನಂಬುವುದೇ ಕಷ್ಟವೆನಿಸುವಷ್ಟು ಭಾಷೆಯ ರೂಪ ಹೊಸಗನ್ನಡವಾಗಿದೆ. ಹೀಗೆ ಆಡುಭಾಷೆಯ ದೃಷ್ಟಿಯಿಂದ ಗಮನಿಸಿದಲ್ಲಿ, ಕನ್ನಡಭಾಷೆಯ ಅವಸ್ಥಾಭೇದಗಳ ಕಾಲಮರ್ಯಾದೆಯ ಬಗೆಗಿರುವ ನಮ್ಮ ತಿಳಿವಳಿಕೆಯನ್ನು ತಿದ್ದಿಕೊಳ್ಳಬೇಕೆನಿಸುತ್ತದೆ. ಅಂದರೆ ಈಗ ಭಾವಿಸಿರುವ ಹೊಸಗನ್ನಡ, ನಡುಗನ್ನಡ, ಹಳಗನ್ನಡ ಅವಧಿಗಳನ್ನು ಕೊಂಚ ಹಿಂದೆ ಒಯ್ಯಬೇಕಾಗುತ್ತದೆ. ಆದರೆ ಕಾವ್ಯಗಳನ್ನು ಉಪಲಬ್ಧವಿಲ್ಲದ ಪೂರ್ವದ ಹಳಗನ್ನಡಕ್ಕೆ ಈ ಅಭಿಪ್ರಾಯವನ್ನು ಅನ್ವಯಿಸಲು ಧೈರ್ಯ ಬರುವುದಿಲ್ಲ. ಹೀಗಿದ್ದರೂ

---

೧೦. SII IX-i ಬಾಗಳಿ-ಬಳ್ಳಾರಿ ಜಿಲ್ಲೆ (೧೦೩೫)

೧೧. EC XV ಹೊಳೆನರಸಿಪುರ ೮೩ ಬಾಗವಾಳ (೧೩೦೩)

೧೨. EC V-ii ಅರಸಿಕೆರೆ ೨ ಜಾವಗಲ್ಲು (ಸು. ಶ. ೧೬)

"ಸ್ವಸ್ತಿ ಶ್ರೀಮತ್ ಪ್ರಿಥಿವೀವಲ್ಲಭ ಮಂಗಲೀಸನಾ
ಕಲ್ಮನೆಗೆ ಇತ್ತೊದು ಲಂಜಿಗೇಸರಂ, ದೇವರ್ಕೆ ಪೂನಿಱುವ
ಮಾಲಕಾರನ್ಗೆ ಅರ್ಧ ವಿಸದಿ ಇತ್ತೊದಾಟಿವೋನ್
ಪಞ್ಚಮಹಾಪಾತಕನಕುಂ
ಏೞನೆಯಾ ನರಕದಾ ಪುೞು ಅಕುಂ"[೧೩]

ಎಂಬಲ್ಲಿಯ ಬಂಧದ ಅಪ್ರಬುದ್ಧತೆಯನ್ನು ಗಮನಿಸಿದರೆ, ಬಹುಶಃ ಪೂರ್ವದ ಹಳಗನ್ನಡಕಾಲದ ಗ್ರಾಂಥಿಕ ಭಾಷೆಗಿಂತ, ಇದು ಆಡುಭಾಷೆಗೆ ಹತ್ತಿರವಾಗಿರಬಹುದೆನಿಸುತ್ತದೆ.

ಹೀಗೆ ಕಂಠಸ್ಥ ಭಾಷೆ ನಮ್ಮ ಶಾಸನಗಳ ಇತಿಹಾಸದುದ್ದಕ್ಕೂ ಬಳಕೆಯಾಗುತ್ತ ಬಂದಿರುವ ಕಾರಣ, ಅವುಗಳನ್ನು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಶಾಸನಗಳೆಂದು ಗುರುತಿಸಿ ಹೇಳಲು ಸಾಧ್ಯವಿದೆ; ಅದೂ ಗದ್ಯದಲ್ಲಿ. ಇಂತಹ ಭಾಷಾಸ್ವರೂಪ ಸಾಮಾನ್ಯವಾಗಿ ಪಾಮರಲೋಕದ ಹಳ್ಳಿಗಳ ಶಾಸನಗಳಲ್ಲಿ ಮತ್ತು ಯಾವುದೇ ಶಾಸನದ ದತ್ತಿವಿವರಣೆಯಲ್ಲಿ ಹೆಚ್ಚು ಕಂಡುಬರುತ್ತದೆ. ಹೀಗಾಗಿ ನಮ್ಮ ಕವಿಗಳು, ವೈಯಾಕರಣಿಗಳು ಕಡೆಗಣಿಸಿದ ಪ್ರಾಚೀನ ಕರ್ನಾಟಕ ಆಡುಭಾಷೆಯನ್ನು ಅರಿಯಬಯಸುವವರಿಗೆ, ಅಧ್ಯಯನಗೆಯ್ಯಬಯಸುವವರಿಗೆ ಶಾಸನಗಳೇ ತಕ್ಕಮಟ್ಟಿನ ಆಕರಗಳಾಗಿ ನಿಲ್ಲುತ್ತವೆ.

* * *

ಕನ್ನಡಭಾಷೆಯ ನಾಲ್ಕೂ ಘಟ್ಟಗಳನ್ನು ತುಲನಾತ್ಮಕ ಮತ್ತು ಐತಿಹಾಸಿಕವಾಗಿ ಅಭ್ಯಸಿಸುವುದು ಇಂದಿಗೂ ಪೂರೈಸದ ಕಾರ್ಯವಾಗಿ ಉಳಿದಿದೆ. ಈ ಪ್ರಸಂಗದಲ್ಲಿ ಗ್ರಂಥಸ್ಥ ಹೊಸಗನ್ನಡ ಮತ್ತು ಹಳಗನ್ನಡ ಸಾಮಗ್ರಿಯನ್ನು ಬೇರೆ ಮೂಲಗಳಿಂದ ಸಂಗ್ರಹಿಸಬಹುದಾದ ನಾವು, ಪೂರ್ವದ ಹಳಗನ್ನಡದ ಸಾಮಗ್ರಿಗಾಗಿ ಶಾಸನಗಳನ್ನು ಮಾತ್ರ ಮೊರೆಹೋಗಬೇಕಾಗುತ್ತದೆ. ಇದೇ ರೀತಿ ಕಂಠಸ್ಥ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಭಾಷೆಯನ್ನು ಅಭ್ಯಾಸಗೈಯ್ಯಬಯಸುವವರಿಗೆ ಆ ಕಾಲದ ಪಾಠಗಳನ್ನು ಹೊತ್ತುನಿಂತ ಶಾಸನಗಳನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲ. ಕೆಲವು ಉದಾಹರಣೆಗಳ ಮೂಲಕ ಈ ಹೇಳಿಕೆಯನ್ನು ಖಚಿತಪಡಿಸಿಕೊಳ್ಳಬಹುದು. "ಕೇಕಯ ಪಲ್ಲವರಂ ಕಾದೆಱಿದು ಪೆತ್ತಜಯನ್"[೧೪] ದೇಶಾಧಿಪತಿಗಳಪ್ಪೊರ್ಗೆ ಕುಡುವ ತೆಱಿ"[೧೫] ಇತ್ಯಾದಿ ವಾಕ್ಯಗಳಲ್ಲಿ ಇ-ಎ, ಉ-ಒ-ಪರಿವರ್ತನೆ, "ಸಿರಿಗಾವುಂಡನ ಎಟ್ಟು ಪುದಿದುದು"[೧೬] "ಸಾಸಿರ ಕವಿಲೆಯನ್ ಕೊನ್ದೋನ ಲೋಕಕ್ಕೆ ಸನ್ದೋನುಮಕ್ಕುಮ್"[೧೭] "ನೆಲನುಂ ವೆಳೆಗೆ"[೧೮] ಇತ್ಯಾದಿ ಮಾತುಗಳಲ್ಲಿಯ ಮ-ವ, ಪ-ವ ವ್ಯತ್ಯಾಸಗಳನ್ನು ಅರಿಯಬೇಕು.

ಲಿಪಿಕಾರರ ಮೂಲಕ ಹಸ್ತಪ್ರತಿಗಳಲ್ಲಿ ಸುಷ್ಠ, ದುಷ್ಟ ಪಾಠಗಳನ್ನು ತಾಳುತ್ತ ಬಂದ 'ಳ'ತ್ರಯದ ಬಗ್ಗೆ ಮೊದಲು ಬಂಡಾಯ ಹೂಡಿದ ಕವಿ ಹರಿಹರ. ಆದರೆ ಶಾಸನಗಳಲ್ಲಿ ಈ ಪ್ರಕ್ರಿಯೆ ಬಹಳ ಹಿಂದೆಯೇ ತೋರಿಬರುತ್ತದೆ. ಕ್ರಿ.ಶ. ೧೧೨೦ರ ಶಾಸನವೊಂದರಲ್ಲಿ ಬರುವ

---

೧೩. IA X ಪು. ೬೦ ಬಾದಾಮಿ-ವಿಜಾಪುರ ಜಿಲ್ಲೆ (೫೬೮)

೧೪. MAR ೧೯೩೬ ನಂ. ೧೬ ಹಲ್ಮಿಡಿ-ಹಾಸನ ಜಿಲ್ಲೆ (೪೫೦)

೧೫. ಕನ್ನಡ ಕೈಪಿಡಿ ಪು. ೩೧೧ (೭೨೫)

೧೬. EI VII ಪು. ೨೦೫ ಶಿರೂರ-ಧಾರವಾಡ ಜಿಲ್ಲೆ(೮೬೬)

೧೭. EC VIII ಸೊರಬ ೧೦ ಮಾವಳಿ (೮೦೦)

೧೮. IA XIX ಪು. ೧೪೩ (ಸು. ೬೮೫)

ಚೋಱಿಕುಱಿ ವಿಱಿಯಕಾಱಿಂ
ಕಾಳಾಮುಖ ಪ್ರಾಹಿತೋದ್ಧತಾಹಿತಮಾಱಿಂ।
ಮಾಱಿವರಾಜಕ ಸೂಱಿಂ
ಸೂಱೆಯುವ ಚರಣಕಮಲಱಿಬ್ರಿಂಗಂ ಸಿಂಗ॥[೧೯]

ಎಂಬ ಪ್ರಯೋಗ, ಇಷ್ಟು ಪೂರ್ವದಲ್ಲಿಯೇ ಈ ಅಕ್ಷರಗಳನ್ನು ಕೈಗೆ ಸಿಕ್ಕಹಾಗೆ ಬಳಸುತ್ತಿದ್ದರೆಂದು ಸ್ಪಷ್ಟಪಡಿಸುತ್ತದೆ. ಕಾವ್ಯಗಳಿಗೆ ಬಂದರೆ ಪ-ಹ ಪರಿವರ್ತನೆ ಮೊದಲು ಒಡೆದುಕಾಣುವದು ವಚನಕಾರರಲ್ಲಿ. ಆದರೆ,

'ಹಡಗಿಲೆ ನಾಮಗ್ರಾಮಂ' (ಕ್ರಿ.ಶ.೬೮೩)
'ಜೋತಿಷ ಶಕುನ ನಿಮಿತ್ತಂಗಳ ಬಲ್ಲಹಗೆ' (ಕ್ರಿ.ಶ ೮೬೨)
'ಸಿಸುಳಹಾಳಯ್ಯದಿಂಬರು'(ಕ್ರಿ.ಶ.೮೭೨)
'ಸಂದ ಲೋಕಕ್ಕೆ ಹೋಹಾನ್ '(ಕ್ರಿ.ಶ.೯೧೦)
'ಪನ್ನೋರ್ಮತ್ತರ್ಹಾಡುವೊಜ್ಜೆ'(ಕ್ರಿ.ಶ. ೯೩೧)
'ಊರಱಿವಿನೊಳ್ ಹೊಗೆನೆಂದು'(ಕ್ರಿ.ಶ. ೯೩೧-೩೨)
'ಹನ್ನಿರ್ವಱು ಗದ್ಯಾಣಂ' (ಕ್ರಿ.ಶ. ೯೭೨)

ಎಂಬ ಶಾಸನವಾಕ್ಯಗಳ[೨೦] ಪ್ರಕಾರ ಈ ಪ್ರಕ್ರಿಯೆ ೭-೮ ಶತಮಾನಗಳಷ್ಟು ಹಿಂದೆಯೇ ಗೋಚರಿಸುತ್ತದೆ.

ಇಂತಹ ಇನ್ನೊಂದು ಪ್ರಕ್ರಿಯೆ ಬಿಂದುವಿನ ಪ್ರಯೋಗ. ಸಂಸ್ಕೃತ ಮತ್ತು ಕನ್ನಡದ ವರ್ಗೀಯವ್ಯಂಜನಘಟಿತ ಪದಗಳಲ್ಲಿ ಅನುನಾಸಿಕ (ಚಮ್ಪಕ, ಕಮ್ಬು) ಪ್ರಯೋಗವಾಗುತ್ತಿದ್ದರೆ, ಅನುಸ್ವಾರ ಬಳಕೆಯಾಗುವುದು ಸಂಸ್ಕೃತದ ಅವರ್ಗೀಯ ವ್ಯಂಜನಘಟಿತ ಪದಗಳಲ್ಲಿ (ಅಂಶ) ಮಾತ್ರ. ಈ ಅನುಸ್ವಾರ ಸಂಸ್ಕೃತದ ಅವರ್ಗೀಯ ವ್ಯಂಜನಘಟಿತ ಪದಗಳ ಮೂಲಕ ಕನ್ನಡಭಾಷೆಯನ್ನು ಪ್ರವೇಶಿಸಿ, ತರುವಾಯ ಇಲ್ಲಿಯ ವರ್ಗೀಯ ವ್ಯಂಜನಘಟಿತ ಪದಗಳಲ್ಲಿಯ ಅನುನಾಸಿಕವನ್ನು ತಳ್ಳಿಹಾಕಿ, ಅದರ ಸ್ಥಾನವನ್ನು ಆಕ್ರಮಿಸಿತು. ಈ ಇತಿಹಾಸ ಬರೆಯುವವರಿಗೆ ಪ್ರಾಚೀನ ಶಾಸನಗಳಲ್ಲಿ ಸಿಗುವ 'ಪಞ್ಚಮಹಾಪಾತಕ', 'ಕೊನ್ದೋನ್' ಮೊದಲಾದ ಪ್ರಯೋಗಗಳು ಆಕರವಾಗಿ ಸಿಗುತ್ತವೆ.

ಭಾಷೆ ಬೆಳೆದಂತೆ ಪ್ರಕೃತಿ-ಪ್ರತ್ಯಯಗಳಲ್ಲಿ ಸಾಂದ್ರತೆ ಹೆಚ್ಚುತ್ತ ಬಂದಂತಿದೆ. ಆರಂಭದ ಅವಸ್ಥೆಯಲ್ಲಿ ಅದು ವಿಸಂಧಿರೂಪದಲ್ಲಿಯೇ ವ್ಯವಹರಿಸುತ್ತಿರಬಹುದೆನ್ನಲು "ಪಲ್ಮಡಿಉಂ ಮೂಱಿವಳ್ಳಿಉಂ ಕೊಟ್ಟಾರ್,"[೨೧] "ಎಳನೆಯಾ ನರಕದಾ ಪುೞು ಅಕುಂ"[೨೨] ಎಂಬ ಪ್ರಯೋಗಗಳನ್ನು ನೋಡಬಹುದು.

---

೧೯. SII XX ೮೦ ವಿಜಾಪುರ (೧೧೨೦)
೨೦. ವಡ್ಡಾರಾಧನೆ (೧೯೭೨)ಪೀಠಿಕೆ XXIV
೨೧ MAR ೧೯೩೬ ನಂ. ೧೬ ಹಲ್ಮಿಡಿ-ಹಾಸನ ಜಿಲ್ಲೆ (೪೫೦)
೨೨. IA X ಪು. ೧೦. ಬಾದಾಮಿ-ವಿಜಾಪುರ ಜಿಲ್ಲೆ (೫೯೮)

ಪೂರ್ವದ ಹಳಗನ್ನಡ ನಾಮಾಖ್ಯಾತ ಪ್ರತ್ಯಯಗಳಲ್ಲಿ ದೀರ್ಘೀಕರಣ ಕಾಣುವುದು ಇನ್ನೊಂದು ಸಾಮಾನ್ಯ ಪ್ರಕ್ರಿಯೆ. ಉದಾ :

"ಇದನ್ ಕೆಡಿಪೋನುಂ ಕೆಡೆ ಬಾಳ್ವೋನುಂ, ಪಞ್ಚಮಹಾಪಾತಕ ಸಂಯುಕ್ತನಕ್ಕುಂ,
ಬಾರಾಣಾಸಿಯೊಳ್ ಸಾಸಿರ ಕವಿಲೆಯನ್ ಕೋನ್ದೋನ ಲೋಕಕ್ಕೆ ಸನ್ದೋನುಮಕ್ಕು"[೨೩]

"ಇದಾನ್ ಕೊಳೆ ಈರೆಪ್ಪಿತ್ತುಖುಳಂ ಒಕ್ಕಲ್ತನಂ ಕೆಯ್ವೋನಾ
ವಿತ್ತಿದಲ್ಲಿ ವೆಳೆಯಾದೆ ಕೆಡುಗೆ, ಇದಾನ್ ಕಾದು ಸಲ್ವೋನ್
ಪರಮಕಲ್ಯಾಣ ಭಾಗಿಗಳಾಪ್ಪೋರ್, ನೆಲನುಂ ವೆಳೆಗೆ, ಆ
ಪಾರ್ವರುಂ ಪ್ರಜೆಯುಂ ತಣಿಗೆ"[೨೪]

ಇದಲ್ಲದೆ 'ಇಟ್ಟೊನ್, ವರ್ಣ್ಣ, ಪುಟ್ಟಿಕ, ಅರಾಸನ್ (ರಾಜನ್>ಅರಾಜನ್>ಅರಾಸನ್>ಅರಸನ್) ಮೊದಲಾದ ರೂಪಗಳ ಇಂಗಿತವನ್ನು ಅರಿಯಬಹುದು.

ಹೀಗೆ ಶಾಸನಗಳಿಂದ ಭಾಷೆಯ ಅವಸ್ಥಾಭೇದಗಳ ಸೂಕ್ಷ್ಮ ಅಭ್ಯಾಸ ನಡೆಸಿ, ಆ ಕಾಲದ ಪ್ರಾಂತಭೇದಗಳನ್ನು ಅರಿಯಬಹುದಾಗಿವೆ. ಕಾರವಾರ ಜಿಲ್ಲೆಯ ಶಾಸನಗಳನ್ನು ಪ್ರಕಟಿಸುತ್ತ ಶ್ರೀ ಪಂಚಮುಖಿಯವರು "These lithic records presents a Vocabulary that is peculiar to the area and helps to demarcate the different dialects in Kannada language"[೨೫] ಎಂದು ಹೇಳಿದುದು ಆ ಅಭಿಪ್ರಾಯವನ್ನು ಪೋಷಿಸುತ್ತದೆ. ಹೈದರಾಲಿ ಕಾಲದ ಮೈಸೂರು ಕಡೆಯ ಶಾಸನಗಳನ್ನು ಅದೇ ಕಾಲದ ಉತ್ತರಕರ್ನಾಟಕದ ಶಾಸನಗಳನ್ನು ಈ ಪ್ರಸಂಗದಲ್ಲಿ ಹೋಲಿಸಬಹುದು. ಇದಲ್ಲದೆ ಬೇರೆಡೆಗೆ ಸಿಗದ ಕುತೂಹಲಪೂರ್ಣ ಪದಗಳು ಶಾಸನಗಳಲ್ಲಿ ಸಿಗುತ್ತವೆ. ಉದಾ:

ಎಟುತ್ತು, ಅರ್ಚಿಕೆಯ್ಯ, ಅರುಳಮ್, ಅಸಂತಳಿ, ಇಟ್ಟಿರ್, ಉಣೆಯ, ಎನೆಬರು, ಕಿಳ್ಳುಮ್, ಪೆಜ್ಜಿದೊರ್, ಪಿರಿಗುಂ, ಪೆಟಿನ್‌ಕೊತ್ತಳಿ, ಮುಮ್ಮುರಿದಂಡ, ವಿಸದಿ, ಉಞ್ಚಿನೀರ್, ಬಾಲವಣ, ಪತ್ತೊನ್ದಿ, ಬಾಳ್ಗಟ್ಟು, ಮುಪ್ಪಯಿಂದು, ಕಟನಿ, ಬಿತ್ತುವಟ, ಏಕಭೋಗ, ತ್ರಿಭೋಗಾಭ್ಯನ್ತರ ಸಿದ್ಧಿ, ಉಭಯಸಮಯ, ಅಣುಗಜೀವಿತ, ಬೀಳವೃತ್ತಿ, ಅಚ್ಚಳವೃತ್ತಿ ಇತ್ಯಾದಿ. ಇಲ್ಲಿಯ ಪದಗಳು ಅನ್ಯಭಾಷಾ ಪ್ರಭಾವವನ್ನು, ಕುತೂಹಲಪೂರ್ಣ ಸಂಗತಿಗಳನ್ನು ಹೊರಗೆಡಹುತ್ತವೆ.

* * *

ಗ್ರಂಥಸ್ಥವಿರಲಿ, ಕಂಠಸ್ಥವಿರಲಿ ಶಾಸನಗಳಲ್ಲಿ ಬಳಸಲಾದ ಭಾಷೆ ಅಶುದ್ಧವಾಗಿರುವುದು ಹೆಚ್ಚು. ಇದಕ್ಕೆ ದೀರ್ಘ, ಮಹಾಪ್ರಾಣಗಳಿಗೆ ಸಂಕೇತಗಳ ಬಳಕೆಯಿಲ್ಲದ ನಮ್ಮ ಬರವಣಿಗೆ ಪದ್ಧತಿ ಮತ್ತು ಲಿಪಿಕಾರನ, ಇವನಿಗಿಂತ ರೂವಾರಿಯ ಅಜ್ಞಾನ ಕಾರಣ. ಹೀಗಾಗಿ ಪಾಠಪೂರೈಸಿದವ ವಿದ್ವಾಂಸವ್ಯಕ್ತಿಯಾಗಿದ್ದರೂ ಅಪಪಾಠಗಳು

---

೨೩. EC VIII ಸೊರಬ ೧೦ ಮಾವಳಿ (೮೦೦)

೨೪. IA XIX ಪು. ೧೪೩ (ಸು ೬೮೫)

೨೫. K-I Introduction p. XI

೨೬. EC VI ತರಿಕೆರೆ ೪೫. ಅಮೃತಾಪುರ (೧೧೯೬)

ಶಾಸನಗಳಲ್ಲಿ ಹೇರಳ. ಜನ್ನನಂತಹ ಮಹಾಕವಿ ಬರೆದ ಶಾಸನದಲ್ಲಿಯ "ಶಾಶನವುಪ್ಪಂತು, ನೃಪಶಚೀವಾಕಾರರಿಂದೆ, ಸಂಶ್ರೆಯದ್ವೈದೀ ಭಾವಭಾವಿತ, ಕಳ್ಪವ್ರಿಕ್ಷನುಂ, ಸಹಶ್ರಕಿರಣನುಂ, ವಾರಣಾಶಿಯೊಳ್, ಕೊಂನ್ದು'[೨೬] ಎಂಬ ಮಾತುಗಳನ್ನು ಇಲ್ಲಿ ಉದಾಹರಿಸಬಹುದು. ಪದ್ಯರೂಪದಲ್ಲಿಯೂ ವ್ಯಂಜನರಹಿತ ಪ್ರಯೋಗಗಳು ಅನೇಕ. ಶಾಸನಭಾಷೆಯನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳುವವನು ಈ ಅನಿವಾರ್ಯದೋಷಗಳ ಬಗೆಗೆ ಎಚ್ಚರವಹಿಸಬೇಕು.

* * *

ಹೀಗೆ ಶಾಸನಭಾಷೆಯು ಪ್ರತಿಯೊಂದು ಅವಸ್ಥೆಯ ಜಾಯಮಾನದ ಅರಿತಕ್ಕಲ್ಲದೆ, ಶಾಸನಗಳ ಕಾಲನಿರ್ಣಯಕ್ಕೂ ನೆರವಾಗುತ್ತದೆ. ಬೆಳ್ಗೊಳದ ನಿಷಧಿ ಶಾಸನಗಳ ಕಾಲನಿರ್ಣಯದಲ್ಲಿ ವಿದ್ವಾಂಸರು ಆಧಾರವಾಗಿ ಹಿಡಿದ ಅಂಶಗಳಲ್ಲಿ ಭಾಷೆಯೂ ಒಂದೆಂಬುದನ್ನು ಸ್ಮರಿಸಬೇಕು. ಹೀಗೆ ಹಲವು ಪ್ರಯೋಜನಗಳಿಗಾಗಿ ಶಾಸನಭಾಷೆ ಅಭ್ಯಾಸಯೋಗ್ಯವೆನಿಸಿದೆ.

■■

ಆಕರ : ಮಾರ್ಗ ಸಂಪುಟ–೨

೫೧

ಶಾಸನ ಪರಿಭಾಷೆ

ಕಾವ್ಯ ಜನಜೀವನದ ಸಂಭವನೀಯ ಘಟನೆಗಳ ಕಲಾತ್ಮಕ ಅಭಿವ್ಯಕ್ತಿಯಾದರೆ, ಶಾಸನ ಸಂಭವಿಸಿದ ಘಟನೆಗಳ ದಾಖಲೆಯಾಗಿದೆ. ಇಂಥ ಬೇರೆ ಬೇರೆ ಘಟನೆಗಳ ದಾಖಲಾತಿ ಪ್ರಸಂಗದಲ್ಲಿ ಅವುಗಳಿಗೆ ವಿಶಿಷ್ಟವಾದ ಪದಗಳು ಶಾಸನಗಳಲ್ಲಿ ನೇರವಾಗಿ ಇಳಿದುಬಂದವು. ಈ ಕ್ರಮ ಬೆಳೆಬೆಳೆದು ಬರವಣಿಗೆಯಲ್ಲಿ ಒಂದು ಪಡಿಯಚ್ಚು ನಿರ್ಮಾಣವಾಗಿ, ಆ ಸಂದರ್ಭಗಳಲ್ಲಿ ಆ ಪದಗಳನ್ನು ಬಳಸುವುದು ಶಾಸನಗಳಿಗೆ ಅನಿವಾರ್ಯವಾಯಿತು. ಇವು ಶಾಸನ ಪರಿಭಾಷೆ ಎನಿಸಿಕೊಳ್ಳುತ್ತವೆ.

ಆನುಷಂಗಿಕವಾಗಿ ಮಾಡಿದ ಇಂಥ ಶಬ್ದಗಳ ಚರ್ಚೆಯನ್ನು ಬಿಟ್ಟರೆ, ಈ ಕ್ಷೇತ್ರದ ವ್ಯವಸ್ಥಿತ ಅಭ್ಯಾಸ ಕನ್ನಡದಲ್ಲಿ ಇನ್ನೂ ನಡೆದಿಲ್ಲ. ಇಲ್ಲಿ ಅದರ ವ್ಯಾಪ್ತಿ ಸ್ವರೂಪಗಳ ಒಂದು ಪರಿಮಿತ ಚಿತ್ರವನ್ನು ನೋಡಬಹುದು.

ಘಟನೆಗಳನ್ನು ರಾಜಕೀಯ ಹಿನ್ನೆಲೆಯಲ್ಲಿ ದಾಖಲಿಸಬೇಕಾದುದು ಶಾಸನಬರವಣಿಗೆಯ ಅಧಿಕೃತ ಪದ್ಧತಿ. ಒಂದು ವೇಳೆ ಘಟನೆಗಳು ರಾಜ ಇಲ್ಲವೆ ರಾಜಕೀಯ ವ್ಯಕ್ತಿಗಳಿಗೆ ನೇರವಾಗಿ ಸಂಬಂಧಿದ್ದರೆ ಈ ಹಿನ್ನೆಲೆ ಇನ್ನೂ ದಟ್ಟಗೊಳ್ಳುತ್ತದೆ. ಹೀಗಾಗಿ ಪ್ರಸಂಗ ಯಾವುದೇ ಇದ್ದರೂ ಆಡಳಿತ ಭಾಷೆಯನ್ನು ಬಳಸುವುದು ಶಾಸನಕ್ಷೇತ್ರದ ಅನಿವಾರ್ಯ ಪದ್ಧತಿಯಾಗಿಬಿಟ್ಟಿದೆ. ಅಲ್ಲಿ ಬರುವ ಚಕ್ರವರ್ತಿ, ಸಾರ್ವಭೌಮಗಳನ್ನು ಬಿಟ್ಟರೆ ಸಾಮಂತ-ಮಹಾಸಾಮಂತ, ಮಂಡಲೇಶ್ವರ-ಮಹಾಮಂಡಲೇಶ್ವರ, ದಂಡನಾಯಕ -ಮಹಾದಂಡನಾಯಕ, ಅಮಾತ್ಯ-ಮಹಾಮಾತ್ಯ, ಅಕ್ಷಪಟಲಾಧಿಕರಣ (=ಅಕ್ಷಪಟಲಾಧಿಪತಿ)- ಮಹಾಕ್ಷಪಟಲಾಧಿಕರಣ, ಸಂಧಿವಿಗ್ರಹಿ-ಮಹಾಸಂಧಿ ವಿಗ್ರಹಿ, (ಕನ್ನಡ ಸಂಧಿವಿಗ್ರಹಿ), ಲಾಳ ಸಂಧಿವಿಗ್ರಹಿ- ಹೇರಿಲಾಳ ಸಂಧಿವಿಗ್ರಹಿ ಎಂಬ ಪದಗಳೂ ಇವೆ. (ಪುರ) ಪ್ರಭು - ನಾಳ್ಪ್ರಭು, ಗಾವುಂಡ -ನಾಲ್ಗಾವುಂಡ, ಕರಣ- ಶ್ರೀಕರಣ (ಕುಳಕರಣಿ -ಸೇನ ಬೋವ) ಪದಗಳು ಒಂದು ವರ್ಗದ ಸಣ್ಣ ಮತ್ತು ದೊಡ್ಡ ಅಧಿಕಾರಿಗಳನ್ನು ಸೂಚಿಸುತ್ತವೆ. ಜೊತೆಗೆ ತಂತ್ರಪಾಳ, ಕಟಕಾಚಾರ್ಯ, ಪಸಾಯಿತ, ಕಡಿತವೆರ್ಗಡೆ, ಸುಂಕವೆರ್ಗಡೆ, ಬಾಣಸವೆರ್ಗಡೆ, ಮಹತ್ತರ, ತಳಾರ ಮುಂತಾದ ಅಧಿಕಾರಿಗಳೂ ಅಲ್ಲಲ್ಲಿ ಕಂಡುಬರುತ್ತಾರೆ.

ಈ ಆಡಳಿತಗಾರರಲ್ಲಿ ಕೆಲವರ ಅಧಿಕಾರ ಸೀಮಿತ ಇಲ್ಲವೆ ವಿಶಿಷ್ಟವಾಗಿದ್ದಿತು. ಶಾಸನಗಳಲ್ಲಿ ಬರುವ ಅಣುಗವೃತ್ತಿ, ಕುಮಾರವೃತ್ತಿ, ಅಚಳವೃತ್ತಿ, ಬೀಳವೃತ್ತಿ, ಏಕಭೋಗ,ತ್ರಿಭೋಗ, ಬತ್ತಗಾವೆ - ಈ ಅಂಶವನ್ನು ಸೂಚಿಸುವ ಪದಗಳಾಗಿವೆ. ಇವರೆಲ್ಲ ಆಳುವುದು "ಸುಖಸಂಕಥಾ ವಿನೋದದಿಂದ" ಮತ್ತು "ದುಷ್ಟನಿಗ್ರಹ ಶಿಷ್ಟಪ್ರತಿಪಾಲನ" ಧೋರಣೆಯಿಂದ.

ಅರಸರಾಗಲೀ ಸಾಮಂತರಾಗಲೀ ಒಂದೆಡೆ ನೆಲೆನಿಂತು ಆಳುವ ಮತ್ತು ಪರ್ಯಟನ ಪ್ರಸಂಗದಲ್ಲಿ ನೆಲೆನಿಲ್ಲುವ ಸ್ಥಳಗಳಿಗೆ ಶಾಸನಗಳು ಬೇರೆ ಬೇರೆ ಪದಗಳನ್ನು ಬಳಸಿವೆ. ಇವುಗಳಲ್ಲಿ ನೆಲೆವೀಡು, ಅಧಿಷ್ಠಾನಗಳು ರಾಜಧಾನಿಯನ್ನು, ವಿಜಯಸ್ಕಂಧವಾರ ಮೊದಲಾದುವು ಬಿಡಾರವನ್ನು ಸೂಚಿಸುತ್ತವೆ. ಅಪ್ಪಯಣ, ಉಪ್ಪಯಣಗಳೂ ಇಂಥ ಪದಗಳಾಗಿವೆ.

ಧವಳಛತ್ರ, ಪಂಚಮಮಹಾಶಬ್ದಗಳ ಗೌರವ ರಾಜರಿಗೆ, ಕೆಲವು ಸಲ ರಾಜಮಾನ್ಯರಿಗೆ ಸಲ್ಲುತ್ತಿದ್ದಿತು. ಕದಂಬರ ಶಾಸನಗಳಲ್ಲಿ ಪೆರ್ಮ್ಮಟ್ಟಿತೂರ್ಯ; ರಾಷ್ಟ್ರಕೂಟರ ಶಾಸನಗಳಲ್ಲಿ ತಿವಳಿಪಱೆ, ಢಕ್ಕಾವಾದ್ಯ; ಕಲಚೂರ್ಯರಲ್ಲಿ ಡಮರುಗತೂರ್ಯ, ಬಾಣ ಮತ್ತು ನಾಗರ ಶಾಸನಗಳಲ್ಲಿ ಕ್ರಮವಾಗಿ ಪೈಶಾಚಿಪಟಹ, ವಿಜಯಪಱೆಗಳ ಉಲ್ಲೇಖಗಳಿವೆ. 'ಪಾಳಿಧ್ವಜ'ವೆಂಬ ಧ್ವಜಸ್ತೋಮದ ವಿಷಯ ಬದಾಮಿ ಚಾಲುಕ್ಯ, ರಾಷ್ಟ್ರಕೂಟ ಶಾಸನಗಳಲ್ಲಿ ವಿಶೇಷ. ಪಂಚಮಹಾವಾದ್ಯ, ಬೆಳ್ಗೊಡೆ, ಮದನಾವತಾರ, ಗುಡಿ, ಶಂಖ, ಚಾಮರ, ಘಳಿಗೆ, ಆನೆ, ಸೌಧ, ಚಿತ್ರದಂಡ, ಪಳಿ, ಝುಳಂಬ, ನಡೆಮಾಡ, ಮಹಾತೂರ್ಯ, ಚೌಕ, ಬರುಹಿ, ಪಿಂಛಾತಪತ್ರ, ವೀರಭೇರಿ ಮೊದಲಾದವು ರಾಜಮಾನ್ಯರಿಗೆ ರಾಜನಿಂದ ಸಲ್ಲುತ್ತಿದ್ದ ಗೌರವಗಳು.

ಅರಸರು, ಸಾಮಂತರು, ಆಳುವ ಪ್ರದೇಶಗಳಲ್ಲಿ ಭಾಗ, ವಿಭಾಗಗಳನ್ನು ಕಲ್ಪಿಸಲಾಗಿದ್ದಿತು. ರಟ್ಟ, ರಾಷ್ಟ್ರ, ರಾಜ್ಯ, ದೇಶ, ನಾಡ, ನಾಡು, ನಾಟ್ಟ, ನಾಟ್ಟು, ಸೀಮೆ, ಪಾಡಿ, ವಾಡಿ, ಮಂಡಲ, ಜನಪದ, ವಿಷಯ, ಆಹಾರ, ಭೋಗ, ಭುಕ್ತಿ, ಕಂಪಣ, ವೇಂಠೆ, ವೇಂಠಕ- ಇವು ಇಂಥ ವಿಭಾಗಗಳ ಹೆಸರು. ಭೌಗೋಲಿಕ ಸ್ಥಿತಿ (ಬೆಳ್ವೊಲನಾಡು, ಕಿಸುಕಾಡುನಾಡು, ಎಡತೊರೆನಾಡು), ರಾಜಮನೆತನದ ಹೆಸರು (ರಟ್ಟಪಾಡಿ, ಗಂಗಮಂಡಲ, ಸೇವುಣದೇಶ), ಪಟ್ಟಣದ (ಹೆಸರು ಬನವಾಸೆ ನಾಡು, ತರ್ದವಾಡಿ ನಾಡು)ಗಳಿಂದ ಈ ಘಟಕಗಳನ್ನು ಕರೆಯುತ್ತಿದ್ದರು. ಬರಬರುತ್ತ ಈ ವಿಭಾಗಗಳ ಮುಂದೆ (ಕಿಸುಕಾಡು--೭೦) ಮತ್ತು ಈ ವಿಭಾಗದ ಮುಖ್ಯಪಟ್ಟಣದ ಮುಂದೆ (ಪುಲಿಗೆರೆ-೩೦೦) ಅಂಕಿ ಹೇಳುವುದು ರೂಢವಾಯಿತು. ಈ ಅಂಕಿ ಬಹುಶಃ ಆ ಪ್ರಾಂತದ ಗ್ರಾಮಸಂಖ್ಯೆಯನ್ನು ಸೂಚಿಸುತ್ತಿರಬೇಕು. ಯಾವುದೇ ಪ್ರಾಂತದ ಗ್ರಾಮವನ್ನು ಬಾಡ, ಬಟಿಯ ಬಾಡ, ಮೊದಲ ಬಾಡ, ಮಧ್ಯಗ್ರಾಮ ಎಂದು ಕರೆಯುವುದುಂಟು.

ಶಾಸನಗಳಲ್ಲಿ ಬಹಳಸಲ ಶಕೆ, ಸಂವತ್ಸರ, ಅಯನ, ಮಾಸ, ತಿಥಿ, ವಾರ, ನಕ್ಷತ್ರ ಯೋಗಸಹಿತ ಮಿತಿ ಕಾಣಿಸಿಕೊಳ್ಳುತ್ತದೆ. ಇವುಗಳಲ್ಲಿ ಶಾಲಿವಾಹನಶಕೆ ವಿಶೇಷ; ವಿಕ್ರಮ ಮತ್ತು ಕಲಿ ಶಕೆಗಳು ವಿರಳ. ಅರಸನ ಆಳಿಕೆಯ ವರ್ಷದ ಉಲ್ಲೇಖವೂ ಅನೇಕಬಾರಿ ತೋರುತ್ತದೆ. ದಾನಶಾಸನಗಳಲ್ಲಿ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣಗಳ ಉಲ್ಲೇಖವೇ ಹೆಚ್ಚು.

ನಮ್ಮ ಬಹುಪಾಲು ಶಾಸನಗಳು ಯುದ್ಧಕ್ಕೆ ಸಂಬಂಧಿಸಿದವು. ಈ ಪ್ರಸಂಗದ ಲೆಂಕ, ಅಂಕ, ಜೋಳವಾಳಿ, ವೇಳೆವಾಳಿ, ಕಿಲ್ಗುಂಟೆ, ಗರುಡ- ಇವು ರಾಜನಿಷ್ಠ ಯೋಧರಿಗಾಗಿ ಬಳಸಿದ ಪದಗಳು. ಇವುಗಳಲ್ಲಿ 'ಅಂಕ' (ಮಲ್ಲ)ಯುದ್ಧ ಪ್ರವೀಣ, 'ಲೆಂಕ' (ಪ್ರತಿಜ್ಞಾಬದ್ಧ)ಯೋಧ, 'ಜೋಳವಾಳಿ' ಅರಸನ ಅನ್ನದ ಋಣಪ್ರಜ್ಞೆಯಿದ್ದವ (ಸೈನಿಕ), ಯುದ್ಧದಲ್ಲಿ ಜಯಶಾಲಿಯಾಗಿ ಬಂದರೆ ಇವನ ರಕ್ತಸಿಕ್ತ ಖಡ್ಗವನ್ನು ತೊಳೆದು ಉಂಬಳಿ ನೀಡುವುದು 'ಬಾಳ್ಗಚ್ಚು' ಸಮಾರಂಭ, ವೀರಮರಣವನ್ನಪ್ಪಿದರೆ ಸಮಾಧಿಯ ಮೇಲೆ ನಿಲ್ಲಿಸುವ ಸ್ಮರಣಶಿಲೆ 'ವೀರಗಲ್ಲು'. ಯಾವುದೇ ಕಾರಣದಿಂದ ಅರಸನು ಮಡಿದರೆ ತಾವೂ ಮರಣವನ್ನಪ್ಪುವವರು 'ವೇಳೆವಾಳಿ'ಗಳು. 'ಕೀಲ್ಗುಂಟೆ'ಯೆಂಬುದೂ ಇದೇ ಅರ್ಥದ ಪದ.

ಹೊಯ್ಸಳರ ಕಾಲದಲ್ಲಿ ಇವುಗಳಿಗೆ ಪ್ರತಿಯಾಗಿ 'ಗರುಡ'ಪದ ಬಳಕೆಗೊಂಡಂತಿವೆ. 'ಲೆಂಕವಾಳಿ'ಗೆ ಇದೇ ಅರ್ಥವಿದ್ದರೂ ಇವರದು ವಂಶಪಾರಂಪರ್ಯ ಬಲಿದಾನ. ಈ ಬಲಿದಾನ 'ಅಗ್ನಿಪ್ರವೇಶ', 'ಸಿಡಿದಲೆ' ಎಂದು ಎರಡು ತೆರನಾಗಿದೆ. 'ಜೋಳವಾಳಿ, ವೇಳೆವಾಳಿ(=ಕಿಬ್ಬುಂಟೆ, ಗರುಡ) ಮತ್ತು ಲೆಂಕವಾಳಿಗಳಾಗಲೀ ಯಾವನೇ ವ್ಯಕ್ತಿಯಾಗಲೀ ತೀರಿಕೊಂಡರೆ ಅವರವರ ಧರ್ಮಪತ್ನಿಯರು ಶವದ ಜೊತೆ ಇಲ್ಲವೆ ಬೇರೆಯಾಗಿ ಅಗ್ನಿಪ್ರವೇಶ ಮಾಡುವುದು 'ಸಹಗಮನ'; ಇವರು 'ಮಹಾಸತಿ'ಯರು; ಇವರ ಸ್ಮರಣಶಿಲೆ 'ಮಾಸ್ತಿಗಲ್ಲು'.

ಕರ್ನಾಟಕದಲ್ಲಿ ಯುದ್ಧವೀರರಂತೆ ಧರ್ಮವೀರರ ಶಾಸನಸಂಖ್ಯೆಯೂ ವೆಗ್ಗಳವಾಗಿದೆ. ದೇವಾಲಯದ ನಿರ್ಮಾಣ, ವ್ಯವಸ್ಥೆ, ಜೀರ್ಣೋದ್ಧಾರಗಳಿಗೆ ಸಂಬಂಧಿಸಿದ ಕೆಸಱಿಗಲ್ಲು, ಮಾನಸ್ತಂಭ, ಗರುಡಗಂಬ, ನಂದಿ, ಮಕರತೋರಣ, ಖಂಡಸ್ಫುಟಿತ ಜೀರ್ಣೋದ್ಧಾರ, ಸುಧಾಕರ್ಮ, ಅಂಗಭೋಗ, ರಂಗಭೋಗ, ಚೈತ್ರಪವಿತ್ರ, (ಪವಿತ್ರಾರೋಪಣ, ನೂಲಪರ್ವ), ಆಚಾರ್ಯ, ಸ್ಥಾನಾಚಾರ್ಯ, ಅಂತೇವಾಸಿ, ಸಧರ್ಮಿ, ಪಾತ್ರ, ಪಾತ್ರಸೂಳೆ, ಕಂಬದ ಸೂಳೆ ಪದಗಳು ಇಲ್ಲಿ ಬಳಕೆಯಾಗಿವೆ. ಧರ್ಮಕಾರ್ಯಕ್ಕೆ ಸಂಬಂಧಿಸಿದ ಇತರ ಪದಗಳೆಂದರೆ ಬಾವಿ, ಕೆರೆ, ತಟಾಕ, ಏಱಿ, ತೂಬು, ಗುಯ್ಯಲ್, ಕಾಲುವೆ, ಸತ್ರ, ಅರವಂಟಿಗೆ, ಅರವೆ ಇತ್ಯಾದಿ.

ಶಾಸನಗಳು ಜೈನಪರವಾಗಿದ್ದರೆ ಆಚಾರ್ಯರ ಹೆಸರಿನ ಹಿಂದೆ ಸಂಘ, ಗಣ, ಗಚ್ಛ ಅನ್ವಯಗಳ ಉಲ್ಲೇಖ ತಪ್ಪದೇ ಬರುತ್ತದೆ. ಇವು ಮೂಲ, ನಂದಿ, ದ್ರಾವಿಡ, ಶ್ರೀ. ಕಿತ್ತೂರ ಸಂಘವೆಂದೂ ದೇವ, ಸೇನ, ಬಲಾತ್ಕಾರ (ಬಳಗಾಱ), ದೇಶೀಯ, ಪುನ್ನಾಗವೃಕ್ಷಮೂಲ, ಚಂದ್ರಿಕಾವಾಟ, ಸೂರಸ್ತ, ಕಾಣೂರ್, ಕಾರೆಯ, ಆಜಿಗಣವೆಂದೂ ಪೊಗರಿ, ಪುಸ್ತಕ, ತಗರಿಗಲ್, ಸರಸ್ವತಿ, ಕೌಱೂರ್, ಚಿತ್ರಕೂಟ, ತಿಂತ್ರಿಣೀಕ, ಮೇಘಪಾಷಾಣಗಚ್ಛವೆಂದೂ ಪೊರಳ್, ಪಾಷಾಣ, ಕೊಂಡಕುಂದ, ಆರುಂಗಳ, ಕೀರ್ತ್ಯಾಚಾರ್ಯ, ಹನಸೋಗೆ, ಮೈಲಾಪ, ಇಂಗುಳೇಶ್ವರಾನ್ವಯವೆಂದೂ ಶಾಸನಗಳಲ್ಲಿ ಕಂಡುಬರುತ್ತವೆ.

ಇವಲ್ಲದೆ ಮರಣಕ್ಕೆ ಸಂಬಂಧಿಸಿದ ಸಮಾಧಿ, ಸಲ್ಲೇಖನ, ಇಂಗಿಣಿ, ನೋಂಪಿ, ಮುಡಿಪು, ನಿಷಧಿಪದಗಳ; ಜೀವದಯಾಷ್ಟಮಿ, ನಂದೀಶ್ವರದಷ್ಟಮಿ ವ್ರತಗಳ; ಬಸದಿ ಚೈತ್ಯಾಲಯ, ನಖರಜಿನಾಲಯ, ತ್ರಿಕೂಟಜಿನಾಲಯ, ಬ್ರಹ್ಮಜಿನಾಲಯ, ಎಕ್ಕೋಟಿಜಿನಾಲಯ ಹೆಸರಿನ ಜೈನಮಂದಿರಗಳ ಪ್ರಸ್ತಾಪ ಅನೇಕ ಶಾಸನಗಳಲ್ಲಿದೆ.

ಜೈನದಷ್ಟೇ ಪ್ರಸಿದ್ಧವಾದುದು ವೈದಿಕಧರ್ಮ. ದಾನಶಾಸನಗಳಲ್ಲಿ ಈ ಮತೀಯರ ಉಲ್ಲೇಖ ಅಧಿಕ. ಕ್ರಮಿತ, ಷಡಂಗಿ, ಘೈಸಾಸ, ಭಟ್ಟ, ಭಟ್ಟೋಪಾಧ್ಯಾಯವೆಂಬ ಉಪಸರ್ಗೋಪೇತ ಬ್ರಾಹ್ಮಣವ್ಯಕ್ತಿಗಳ ಹೆಸರಿನ ಹಿಂದೆ ಅವರ ಗೋತ್ರ, ಅನ್ವಯ ಹೇಳಲ್ಪಟ್ಟಿರುತ್ತವೆ. ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ, ಮಹಾಜನ, ಷಟ್ಕರ್ಮ ಮೊದಲಾದವು ಇವರಿಗಾಗಿ ಬಳಸಲ್ಪಟ್ಟ ಪರಭಾಷೆಗಳು. ಉಪಭೋಗಕ್ಕಾಗಿ ಒಬ್ಬ ಬ್ರಾಹ್ಮಣನಿಗೆ ನೀಡಿದ ಗ್ರಾಮ 'ಅಗ್ರಹಾರ'. ಈ ಊರ ಉಪಭೋಗವನ್ನು ಅವನು ಕೆಲವು ಬ್ರಾಹ್ಮಣರಿಗೆ ಹಂಚುತ್ತಾನೆ. ಇವರೇ ಆ ಅಗ್ರಹಾರದ ಮಹಾಜನರು. ಕರ್ನಾಟಕದಲ್ಲಿ ಅತಿ ಹೆಚ್ಚೆಂದರೆ ೩೨,೦೦೦ ಮಹಾಜನರಿದ್ದ ಉಲ್ಲೇಖ ಒಂದು ಶಾಸನದಲ್ಲಿದೆ. 'ಪದಿನೆಂಟಗ್ರಹಾರ'ಗಳು ಬೆಳ್ವೊಲದಲ್ಲಿ ಸುಪ್ರಸಿದ್ಧವೆಂದು ಹಲವು ಶಾಸನಗಳು ಸಾರುತ್ತವೆ. 'ಬ್ರಹ್ಮಪುರಿ' ಬ್ರಾಹ್ಮಣರ ಓಣಿ, 'ಘಟಿಕಾಸ್ಥಾನ' ಇವರ ಪ್ರೌಢವಿದ್ಯಾಸ್ಥಳ. ಈ ಘಟಿಕಾಸ್ಥಾನಗಳಿಗೆ ಹೊಂದಿ ತ್ರೈಪುರುಷ ದೇವಾಲಯವಿರುವುದು ಸಾಮಾನ್ಯಪದ್ಧತಿ. ಇಲ್ಲಿ ಬಳಕೆಯಾಗಿರುವ ಪದಗಳು ಓಜ, ಮಾಣಿ, ವಿದ್ಯಾರ್ಥಿ,

ತಪೋಧನ, ಚಟ್ಟವೃತ್ತಿ. ಭಟ್ಟವೃತ್ತಿ ಮತ್ತು ಬಾಲಶಿಕ್ಷೆ. ಮಠ, ಶಾಲೆಗಳು ಶೈವ ಪರಿಸರದ ಪದಗಳೆಂದು ತೋರುತ್ತವೆ.

ಶೈವಶಾಸನಗಳಲ್ಲಿ ಲಕುಳೀಶ (ಕಾಳಾಮುಖ) ಪಾಶುಪತ ಪಂಥದ ಉಲ್ಲೇಖ ಬರುವುದು ಹೆಚ್ಚು. ಇವರ ಹೆಸರುಗಳು ಹಿಂದೆ ಸಿಂಹಪರ್ಷೆ-ಶಕ್ತಿಪರ್ಷೆ, ಪರ್ವತಾವಳಿ-ಭುಜಂಗಾವಳಿ, ಮೂವರಕೋಣೆಯಸಂತತಿ-ಇಟ್ಟಿಗೆ ಸಂತತಿಯೆಂಬ ಪರ್ಷೆ, ಆವಳಿ, ಸಂತತಿಗಳ ಸೂಚನೆ ದೊರೆಯುತ್ತವೆ. ಏಕ್ಕೋಟಿ, ಗೊರವ, ಜೀಯ, ಮಾಹೇಶ್ವರ, ಸ್ಥಾನಿಕ, ಸ್ಥಾನಪತಿ, ನೈಷ್ಠಿಕ, ಬ್ರಹ್ಮಚಾರಿ-ಇವು ಸಂಬಂಧಿಸಿದ ಇತರ ಪರಿಭಾಷೆಗಳು.

ಜೀವನಕ್ಕೆ ಸಂಬಂಧಪಟ್ಟ ಮುಖ್ಯ ಉದ್ಯೋಗಗಳಲ್ಲಿ ವಾಣಿಜ್ಯ ಹೆಚ್ಚು ಕ್ರಿಯಾಶೀಲವಾದುದು. ಶಾಸನಗಳಲ್ಲಿ ಇದಕ್ಕೆ ಸಂಬಂಧಿಸಿದ ವಿಶಿಷ್ಟ ಪರಿಭಾಷೆ ತುಂಬಿನಿಂತಿದೆ. ಅಯ್ಯಾವೊಳೆಯ ಐನೂರ್ವರು, ಮುಮ್ಮುರಿದಂಡಗಳು, ಗವರೆ, ಗಾತ್ರಿಗ, ವಣಿಗ, ಬೀರವಣಿಗ, ಸೆಟ್ಟಿ, ಸೆಟ್ಟಿಗುತ್ತ, ಪಟ್ಟಣಸ್ವಾಮಿ, ಬಣಂಜು, ವೀರಬಣಂಜು, ನಖರ, ವೇಟಿಕಾಱ, ವಡ್ಡವ್ಯವಹಾರಿ, ಉಭಯ ನಾನಾದೇಶಿ ಇವು ವ್ಯಾಪಾರಿಜನಾಂಗ ಸೂಚನೆಗಳು. ಇವರು ಭಗವತೀಲಬ್ಧ ವರಪ್ರಸಾದರು. ಪದ್ಮಾವತೀಲಬ್ಧವರಪ್ರಸಾದರು ಇಲ್ಲವೆ ಕಾಳಿಕಾದೇವಿಲಬ್ಧ ವರಪ್ರಸಾದರು. ಗುಡ್ಡಧ್ವಜ, ಭಲ್ಲುಂಕಿದಂಡ ಇವರ ಗೌರವಚಿಹ್ನೆಗಳು, ಗುಡ್ಡಶಾಸ್ತ್ರ ಇವರ ಶಾಸ್ತ್ರವಾಗಿರಬಹುದು. ಈ ವ್ಯಾಪಾರಿಶ್ರೇಣಿಗಳಲ್ಲದೆ ಉಗುರು ಮೂನ್ನೂರ್ವರು (=ಎಲೆಗಾರರು), ತೆಲ್ಲಿಗರ ಎಪ್ಪತ್ತೊಕ್ಕಲು, (ರೈತರ) ಅರುವತ್ತೊಕ್ಕಲು ಎಂಬ ಒಕ್ಕಲುಗಳ ಉಲ್ಲೇಖ ಸರ್ವಸಾಮಾನ್ಯ. ಇಲ್ಲಿಯ ೫೦೦, ೩೦೦, ೭೦, ೬೦ ಪ್ರಥಮಸಲ ಅಸ್ತಿತ್ವಕ್ಕೆ ಬಂದ ಆ ಆ ಶ್ರೇಣಿಗಳ ಸದಸ್ಯರ ಸಂಖ್ಯೆಯಾಗಿವೆ. ಊರುಗಳ ಗಾತ್ರಕ್ಕನುಸರಿಸಿ ಈ ಸಂಖ್ಯೆ ಹೆಚ್ಚು ಕಡಿಮೆಯಾದರೂ ಈ ಶ್ರೇಣಿಗಳು ತಮ್ಮನ್ನು ಮೂಲಸಂಖ್ಯೆಯಿಂದಲೇ ಕರೆದುಕೊಂಡಂತೆ ತೋರುತ್ತವೆ.

ವ್ಯಾಪಾರದ ಮಾಧ್ಯಮ ಹಣಕಾಸು. ಶಾಸನಗಳು ಪ್ರಾಚೀನ ಕರ್ನಾಟಕದ ನಾಣ್ಯ ಪ್ರಪಂಚದ ವಿವರಗಳನ್ನು ಒದಗಿಸುತ್ತವೆ. ಕಮ್ಮಟ, ಅಚ್ಚಿನ ಕಮ್ಮಟ, ಪಿರಿಯ ಕಮ್ಮಟ, ಟಂಕಸಾಲೆ ಎಂಬ ಅಚ್ಚುಮನೆಗಳ;ಪಣ, ಹಾಗ, ಅಡ್ಡ, ದ್ರಮ್ಮ, ವೀಸ, ಬೇಳೆ, ಕಾಕಿಣಿ, ಧರಣ, ಗದ್ಯಾಣ, ಲೊಕ್ಕಿಗದ್ಯಾಣ, ಲೊಕ್ಕೆಯ ಗದ್ಯಾಣ, ಬೃಹತ್ ಭೈರವಗದ್ಯಾಣ, ಆನೆಯಪೊನ್, ನವಿಲಪೊನ್, ನವಿಲಚ್ಚಿನಪೊನ್ನು-ಹೆಸರಿನ ನಾಣ್ಯಗಳ ವಿಷಯವೂ ಶಾಸನಗಳಲ್ಲಿದೆ.

ರಾಜಕೀಯವೇ ಇರಲಿ, ಧಾಮಿಕವೇ ಇರಲಿ, ಬಹಳಷ್ಟು ಶಾಸನಗಳ ವಿಷಯ ದಾನ. ಇಲ್ಲಿ ಹಣರೂಪದ ದಾನಕ್ಕಿಂತ ಭೂಮಿರೂಪದ ದಾನ ವಿಶೇಷ. ಆಗ ಬಳಸುವ ಪ್ರಮಾಣಗಳೆಂದರೆ ಕೋಲು, ಮತ್ತರ, ಗಳೆ. ಇವು ಇರ್ಪ್ಪತ್ತೆಂಟು ಗೇಣು ಗಳೆ, ಐವತ್ತೆರಡು ಗೇಣು ಗಳೆ, ಪದಿನಱುಗೇಣ ಕೋಲ್ ಎಂದು ಗೇಣ ಸೂಚಿಯಾಗಿ; ಕೋಗಳಿಯ ಗಡಿಂಬ, ಕುಱುತಕೋಂಟೆಯ ಕೋಲ್, ಮಾಣಿಕೇಶ್ವರದ ಕೋಲ್, ಕತ್ಸವಿಯ ಗಳೆ, ಎಳುರಾವೆಯತೀರ್ಥದ ಗಡಿಂಬ ಎಂದು ಗ್ರಾಮಸೂಚಿಯಾಗಿ; ನಗರೇಶ್ವರದ ಗಡಿಂಬದಕೋಲ್, ಭೇರುಂಡ ಗಳೆಯೆಂದು ದೇವತಾಸೂಚಿಯಾಗಿ; ಬಂಟರಭಾವನ ಕೋಲ್, ಮಲೆಪರ ಮಾರಿಯ ಕೋಲ್, ಮುಳಗುಂದದ ಮಲಹರಮಾರಿಯ ಕೋಲ್, ದಾನವಿನೋದಗಳೆ, ಶಿವಚಿತ್ತಗೋಲ್, ದಾನಚಿಂತಾಮಣಿಯ ಕೋಲ್ ಎಂದು ವ್ಯಕ್ತಿನಾಮಸೂಚಿಯಾಗಿ ಬರುತ್ತವೆ. ಇವುಗಳ ಮೂಲಕ ಅಳೆದು ಕಮ್ಮ(ಕಂ), ಮತ್ತುರು(ಮತ್ತ), ನಿವರ್ತನ ಪ್ರಮಾಣದಲ್ಲಿ ಬೂದಾನ ನೀಡುತ್ತಿದ್ದರು. ಖಂಡುಗವೂ ಇಂಥ ಒಂದು ಪ್ರಮಾಣವಾಗಿ ಕೆಲವು ಸಲ ಕಂಡುಬರುತ್ತದೆ.

ದಾನವಾಗಿ ಕೊಡುವ ಭೂಮಿಯು ಬಯಲು ಇಲ್ಲವೆ ನೀರಾವರಿ ಇರಬಹುದು. ಶಾಸನಗಳಲ್ಲಿ ಬರುವ ಬೆದ್ದಲೆ, ಗದ್ದೆ ಇವುಗಳ ಪರ್ಯಾಯ ಪದಗಳು. ಕೆಲವು ಸಲ ಕೆಯಿ, ಕರಿಯಕೆಯಿ, ಕರಿಯನೆಲ, ಕಿಸುಕಾಡ, ಹರಳಕೆಯಿ; ತೋಂಟ, ಹೂದೋಟ, ಕೌಂಗುದೋಟ, ಕರ್ಬುದೋಟ, ಎಲೆದೋಟಗಳ ಉಲ್ಲೇಖವೂ ಬರುತ್ತದೆ. ಈ ಭೂಮಿಯ ಮೇರೆಯನ್ನು ಗುರುತಿಸಲು ನೆರೆಹೊರೆಯ ಹೊಲ, ಹೊಳೆ, ಹಳ್ಳಗಳನ್ನು ಹೇಳುವಂತೆ, ನಾಲ್ಕೂ ಮೂಲೆಗೆ ಕವಿಲೆಕಲ್, ಆದಿತ್ಯನ ಕಲ್, ಚಂದ್ರನಕಲ್, ಪದ್ಮಾವತಿಯ ಕಲ್, ನಾಗರ ಕಲ್ ಇತ್ಯಾದಿ ಕಲ್ಲುಗಳನ್ನು ನಿಲ್ಲಿಸುತ್ತಿದ್ದರು. ಆಗಾಗ ನಿವೇಶನ, ಮನೆ, ಅಂಗಡಿಗಳನ್ನು ದಾನ ನೀಡಿದುದುಂಟು.

ದಾನಕ್ಕೆ ಉಪಯೋಗಿಸುವ ಇತರ ವಸ್ತುಗಳಲ್ಲಿ ಆಹಾರಧಾನ್ಯ, ಎಣ್ಣೆ ಮುಖ್ಯವಾದವು. ಈ ಸಂದರ್ಭದ ಅಳತೆಯ ಸಾಧನಗಳೆಂದರೆ ಕೊಳಗ, ಮಾನ, ಖಂಡುಗ, ಸೊಲ್ಲಿಗೆ. ಇವು ದೇವದೊಳಗ, ದಮಗೊಳಗವೆಂದು ವಿಶಿಷ್ಟವಾಗಿಯೂ ಇದ್ದುವು. ನಂದಾದೀವಿಗೆಗೆ ಗಾಣ ಇಲ್ಲವೆ ಸೊಂಟಿಗೆ ಪ್ರಮಾಣದ ಎಣ್ಣೆ ದಾನವಾಗಿ ಸಲ್ಲುತ್ತಿದ್ದವು.

ಇವುಗಳಿಗೆ ಹೊರತಾಗಿ ಸುಂಕ, ತೆರಿಗೆಗಳನ್ನು ದಾನವಾಗಿ ಕೊಡುತ್ತಿದ್ದರು. ಇವು ತೆರೆ, ಪಣ, ಸುಂಕ ಎಂಬ ಉಪಸರ್ಗಗಳೊಂದಿಗೆ ಅಟ್ಟದೆಱೆ, ಅಡ್ಡದೆಱೆ, ಆಯಿಲದೆಱೆ, ಉಟ್ಟಸಾಮಂತದೆಱೆ, ಕಾಱುದೆಱೆ, ಕಿಱುದೆಱೆ, ಕುಱುಂಬದೆಱೆ, ಗಾಣದತೆಱೆ, ತುಪ್ಪದೆಱೆ, ದೇವಿದೆಱೆ, ಮನೆದೆಱೆ, ಮನ್ನೆಯದೆಱೆ, ಮದುವದೆಱೆ, ಹೊಲೆದೆಱೆಯೆಂಬ; ಕೊಡತಿವಣ, ಬಾಲವಣ, ಬೀರವಣ, ಅಡಕಲುವಣ, ಅರುವಣ, ಕತ್ತರಿವಣ, ಕನ್ನಡಿವಣವೆಂಬ; ಕುಳಿಯಸುಂಕ, ತಳಭಂಡದ ಸುಂಕ, ತಳವಱಸುಂಕ, ತಿಪ್ಪೆಸುಂಕ, ಪೆರ್ಜುಂಕ, ಹರಿಕಾಯ ಸುಂಕವೆಂಬ ಹೆಸರಿನಿಂದ ರೂಢಿಯಲ್ಲಿದ್ದವು. ಇಲ್ಲಿ ಸಿದ್ಧಾಯ, ಬಿಲ್ಕೊಡೆ, ಪನ್ನಾಸು, ಪನ್ನಾಯ, ಅಚ್ಚುಪನ್ನಾಯ, ಕರವಂದ, ತಳಭೋಗ, ಕಿರುಕುಳ ಎಂಬಿವುಗಳನ್ನೂ ಗಮನಿಸಬೇಕು. ಈ ಸುಂಕ ಸಾಮಾನ್ಯವಾಗಿ ದಸವಂದ(=ಪತ್ತೊಂದಿ) ಪ್ರಮಾಣವುಳ್ಳದು. ಕೆಲವುಸಲ ಊರಿಗೆ ಬಂದ ಬಂಡಿ ಹೇರು, ಎತ್ತಿನ ಹೇರು, ಕತ್ತೆಯ ಹೇರು, ಕೋಣನ ಹೇರುಗಳಿಂದಲೂ ದೇವಾಲಯಕ್ಕೆ ನಿರ್ದಿಷ್ಟ ಸುಂಕದಾನ ಸಲ್ಲುತ್ತಿದ್ದಿತು. ಒಂದು ಉದಾಹರಣೆಯಿಂದ ಈ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬಹುದು.

"ಶಾನ್ತಿನಾಥದೇವರ ಬಸದಿಗೆ ಬಿಟ್ಟಾಯವೆಂತೆಂದೊಡೆ:ಬಡಗಣಿಂ ಬಂದ ಕುದುರೆಗೆ ನೆಲೆಮೆಟ್ಟು ಹಾಗವೊಂದು, ತೆಂಕಲ್ ನಡೆವವರ್ಕ್ಕೆ ಸುಂಕ ಹಾಗವೊಂದು, ಮಲೆಯಾಳರ ಕುದುರೆಗೆ ಹಾಗವೊಂದು. ಅಱುವತ್ತಯ್ದಿತ್ತು ಕೋಣಂಗಳೊಳೇನಂ ಪೇಱಿದೊಡಂ ಸರ್ವಬಾಧಾಪರಿಹಾರಂ, ಚಿನ್ನಗೆಯಿಕದ ಚೀರಕ್ಕೆ, ದೂಸರಿಗವಸರಕ್ಕೆ, ಹತ್ತಿವಸರಕ್ಕೆ, ಮಣಿಗಾರವಸರಕ್ಕೆ, ಗಂಧವಣವಸರಕ್ಕೆ, ಗಂಧವಣಿಗರಂಗಡಿಗೆ, ಅಕ್ಕಸಾಲೆಗಮಟಕ್ಕೆ, ಬೇಱೆವೇಱೆ ಬರಿಸದೆಱೆ ಹಿರಿಯ ಹಾಗವೊಂದು, ಹೊಱಗಣಿಂ ಬಂದ ಸೀರೆಯ ಕಡಗೆಗೆ ವೀಸವೊಂದು, ಹೊಱಗಣಿಂ ಬಂದ ಗಂಧವಣಕ್ಕೆ ಕಕ್ಷಭಂಡಕ್ಕೆ ಆ ಭಂಡಂ ಗದ್ಯಾಣಂ ತೂಕವಯ್ದು, ಹತ್ತಿಯ ಭಂಡಿಗೆ ತಾಱಂ ಮೂರು, ಆ ಪೇಱೆಂಗೆ ಕಾಣೆಯೊಂದು, ಭತ್ತದ ಭಂಡಿಗೆ ಭತ್ತವೊರ್ವ್ವಳಂ, ಭತ್ತವಸರದಂಗಡಿಗೆ ಭತ್ತ ನಿಚ್ಚಸೊಲ್ಲಿಗೆ, ಅಕ್ಕಿವಸರಕ್ಕೆ ಅಕ್ಕಿಯದ್ದಂ, ಮೆಳಸಿನ ಹೇಱಿಂಗೆ ಮೆಳಸೊರ್ಮಾನಂ, ಆ ಜವಳಕ್ಕೆ ಅರೆವಾನಂ, ಇಂಗಿನ ಪೆಟ್ಟಿಗೆಗೆ ಇಂಗು ಗದ್ಯಾಣಂ ತೂಕವಾಱು, ಅಲ್ಲ ಅರಿಸಿನದ ಜವಳಕ್ಕೆ ಆ ಭಂಡಂ ಪಲವಯ್ದು, ಆ ಹೇಱಿಂಗೆ ಅಲ್ಲ ಅರಿಸಿನಂ ಪಲ್ಲಂ ಹತ್ತು, ಗಾಣಕ್ಕೆ ನಿಚ್ಚಟೆಣ್ಣೆಯದ್ದಂ, ಅಡಕೆಯ ಹೇಱಿಂಗೆ ಅಡಕೆಯಿಪ್ಪತ್ತೈದು ಆ ಜವಳಕ್ಕೆ ಅಡಕೆ ಹನ್ನೆರಡು, ಎಲೆಯ

ಹೇರ್ಜುಂಗೆಲೆ ನೂಱು ಹೋಱಿಗೆಲೆಯಯ್ವತ್ತು, ತೆಂಗಿನಕಾಯ ಹೇಱಿಂಗಾಕಾಯೊಂದು, ಓಲೆಯ ಹೇಱಿಂಗೆ ಓಲೆಯ ಸೊಡೆರಡು, ಆ ಹೋಱಿಗೆ ಸೂಡೊಂದು, ಹೋಱಗಣಿಂ ಬಂದ ಬೆಲ್ಲದ ಭಂಡಿಗೆ ಬೆಲ್ಲದಚ್ಚು ಹದಿನೈದು, ಆ ಹೋಱಿಗೆ ಅಚ್ಚೊಂದು, ಬಾಳೆಯ ಹೇಱಿಂಗಾಕಾಯಾರು ಆ ಹೋಱಿಗೆ ಕಾಯ್ಮೂರು, ನೆಲ್ಲಿಯ ಕಾಯ ಹೇಱಿಂಗಾ ಕಾಯ್ಬಳ್ಳವಂದು, ಕರ್ವಿನ ಹಗರಕ್ಕೆ ಬಂದು ಕರ್ವು, ಬಳಹದ ಹೇಱಿಂಗಾ ಬಳಹವೊಪ್ಪಲಂ.....[1]

ಈ ಗದ್ಯಭಾಗ ಶಾಸನದ ಸುಂಕರೀತಿಯನ್ನು, ಪರಿಭಾಷೆಯನ್ನು ಕಣ್ಣಿಗೆ ಕಟ್ಟುತ್ತದೆ. 'ಕಾಲಂಕರ್ಚಿ' ಇಲ್ಲವೆ ಹಸ್ತೋದಕವನ್ನು ನೆರವೇರಿಸಿ ಈ ದಾನಗಳನ್ನು ನೀಡುತ್ತಿದ್ದರು. ಮುಕ್ತಮನಸ್ಸಿನ ಕೊಡುಗೆಗಳು ಸರ್ವಸಾಮಾನ್ಯವಾಗಿ, ಧಾರಾಪೂರ್ವಕವಾಗಿ, ಸರ್ವಬಾಧಾಪರಿಹಾರವಾಗಿ ನೀಡಲ್ಪಡುತ್ತಿದ್ದವು.

ಶಾಸನದ ಕೊನೆಗೆ ಇದನ್ನು ಕಾಪಾಡಿದವನಿಗೆ ಪುಣ್ಯ, ಕೆಡಿಸಿದವನಿಗೆ ಪಾಪ ಪ್ರಾಪ್ತವಾದುವುದೆಂಬ ಧ್ವನಿಯ ಫಲಶ್ರುತಿ ಹೇಳಿಕೆಗಳು ಬರುತ್ತವೆ. ಉಭಯಮುಖಿ, ಇಕ್ಕತ್ತಿಗೆ ಕವಿಲೆ, ಸಾಸಿರ ಕವಿಲೆ ದಾನದ ಪುಣ್ಯವನ್ನು, ಮಹಾಪಾತಕ, ರೌರವನರಕಗಳ ಪಾಪವನ್ನು ಸಾರುತ್ತವೆ, ಈ ಮಾತುಗಳು. ಕುರುಕ್ಷೇತ್ರ, ಪ್ರಯಾಗ, ವಾರಣಾಸಿ, ಶ್ರೀಶೈಲ ಕ್ಷೇತ್ರಗಳ ಉಲ್ಲೇಖವೂ ಇಲ್ಲಿ ಕಾಣುತ್ತದೆ.

ಕವಿ, ಲಿಪಿಕಾರ, ರೂವಾರಿಗಳ ನಿರ್ದೇಶನದಲ್ಲಿ ಲಿಖಿತಂ, [illegible], ಬರೆಪಂ ಮೊದಲಾದ ವಿಶಿಷ್ಟಪದಗಳು ಬಳಕೆಗೊಂಡಿವೆ. ಕವಿಗಳಿಗೆ ಸುಕವಿ, ಒಳ್ಗವಿ ಇತ್ಯಾದಿ ಬಿರುದುಗಳೂ ಲಿಪಿಕಾರರಿಗೆ ಬರವರಾಚಾರ್ಯ, ಬಿರುದುಲೇಖಕಮದನ ಮಹೇಶ್ವರ ಇತ್ಯಾದಿ ಬಿರುದುಗಳೂ ಸಾಮಾನ್ಯ. ನಿಯೋಗಪ್ರಭು, ಸಂಧಿವಿಗ್ರಹಿ, ಕುಳಕರಣಿ, ಸೇನಬೋವ, ಶ್ರೀಕರಣ, ಕಾಯಸ್ಥ, ಗಣಕರು ಲೇಖನಕಾರ್ಯವನ್ನು ನಿರ್ವಹಿಸಿದ್ದಾರೆ. ರೂವಾರಿಗಳದು ವಂಶಪರಂಪರೆಯಾಗಿ ಬಂದ ವೃತ್ತಿ. ಅಕ್ಕಸಾಲಿ, ಕಮ್ಮಾರ, ಕಂಚಗಾರ, ಬಡಿಗ ವರ್ಗದವರು ಈ ಕಾರ್ಯ ಮಾಡಿದ್ದರೂ ಮೂಲತಃ ಈ ವೃತ್ತಿ ಕಲ್ಲುಕುಟಿಗರದು. ಇವರ ಹೆಸರಿನ ಹಿಂದೆ ಸರಸ್ವತೀಗಣಭಾತ್ರ, ಸರಸ್ವತೀಗಣಪುತ್ರ, ಸರಸ್ವತೀಗಣದಾಸಿ, ಕಂಡಕರಣೆಕಾರ, ಶಾಸನಾಚಾರ, ಸೂತ್ರಧಾರಿ, ವಿಶ್ವಕರ್ಮ, ಅಕ್ಕಸಾಲಿ, ಬಿನ್ನಣಿ, ಬಡಗಿ, ಶಿಲ್ಪಿ, ಆಚಾರಿ, ಕಮ್ಮಾರ, ಕಂಚಗಾರ, ಗವುಂಡ, ರೂವಾರಿಯೆಂಬ ವಿಶೇಷಣಗಳೂ ಹೆಸರಿನ ಮುಂದೆ ಓಜ, ಆಚಾರಿ, ಶಿಲ್ಪಿ ಎಂಬ ಉಪಸರ್ಗಗಳೂ ವಿಶೇಷ ಕ್ರಿಯಾಪದ ಸ್ಥಾನದಲ್ಲಿ ಕಂಡರಿಸು (ಕಂಡಳಿಸು), ಬೆಸಕೆಯ್, ಬೆಸ, ಹೊಯ್, ಪೊಯ್, ಕಲ್ವೆಸ, ಕಲ್ಲಂಕಡಿ, ಕಲ್ಲಹೊಯಿ, ಕಲ್ಲುಗೆಯಿ, ಶಿಲಾಕರ್ಮ, ತಿದ್ದು, ಸಮೆ, ಲಿಖಿತ, ಕೆಲಸ, ಶಿಲ್ಪ ಬರೆಪ ಮೊದಲಾದ ಪದಗಳು ಬರುತ್ತವೆ.

ಕೆಲವು ಕಡೆಗೆ ಮಾತ್ರ ಒಪ್ಪ, ಸಾಕ್ಷಿಗಳು ಬಂದು ಶಾಸನದ ಪ್ರಾಮಾಣಿಕತೆಯನ್ನು ದೃಢಪಡಿಸುತ್ತವೆ.

ಹೀಗೆ ಹತ್ತುಮುಖಗಳಲ್ಲಿ ಹಬ್ಬಿನಿಂತ ಈ ಪರಿಭಾಷೆಗಳಿಂದ ಸಮಕಾಲೀನ ಸಮಾಜದ ಎಲ್ಲ ಕ್ಷೇತ್ರಗಳ ಪರಿಚಯ ಸಾಧ್ಯವಾಗುತ್ತದೆ. ಆದರ್ಶ ಬದುಕನ್ನು ರೇಖಿಸುವ ಕಾವ್ಯಸಾಹಿತ್ಯದಲ್ಲಿ ಕಂಡುಬಾರದ ಈ ವಿವರ, ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಅಧ್ಯಯನಕ್ಕೆ ಬೇಕಾಗುವ ವಿಶೇಷ ಸಂಪತ್ತು ಎನಿಸಿದೆ.

■■

೧. EI XIII ಪು. ೨೮. ಬೆಳಗಾವಿ-ಬೆಳಗಾವಿ ಜಿಲ್ಲೆ (೧೨೦೪)

ಆಕರ : ಮಾರ್ಗ ಸಂಪುಟ–೨


೫೨

ಶಾಸನ ಲಿಪಿ

ಮಾನವನ ಜೀವನವಿಕಾಸ ಕ್ರಮದಲ್ಲಿ 'ಮಾತು' ಒಂದು ಸಿದ್ಧಿಯಾದರೆ, ಈ ಮಾತಿಗೆ ಬಳಸಿಕೊಂಡ 'ಲಿಪಿ' ಇನ್ನೊಂದು ಸಿದ್ಧಿ. ಈ ದೃಷ್ಟಿಯಿಂದ ಲಿಪಿ ಉಗಮದ ಹಿಂದಿನ ಕಾಲವನ್ನು ಇತಿಹಾಸ ಪೂರ್ವಯುಗ, ತರುವಾಯದ ಕಾಲವನ್ನು ಇತಿಹಾಸ ಯುಗವೆಂದು ವಿದ್ವಾಂಸರು ಭಾವಿಸುತ್ತಾರೆ. ಭಾರತೀಯ ಲಿಪಿಗಳ ಉಗಮ, ಆಗಮಗಳ ಬಗ್ಗೆ ಇನ್ನೂ ಚರ್ಚೆಗಳಿದ್ದರೂ ಬ್ರಾಹ್ಮಿ ಮತ್ತು ಖರೋಷ್ಠಿಗಳು ಈ ದೇಶದ ಪ್ರಾಚೀನತಮ ಲಿಪಿಗಳೆಂದು ಎಲ್ಲರೂ ಒಪ್ಪಿದ್ದಾರೆ. ಎಡದಿಂದ ಬಲಕ್ಕೆ ಬರೆಯುವುದು ಬ್ರಾಹ್ಮಿ, ಬಲದಿಂದ ಎಡಕ್ಕೆ ಬರೆಯುವುದು ಖರೋಷ್ಠಿ. ಇವುಗಳಲ್ಲಿ ಈಗಿನ ಭಾರತೀಯ ಲಿಪಿಗಳಿಗೆಲ್ಲ ಮೂಲವಾದುದು ಬ್ರಾಹ್ಮೀ.

ಬ್ರಾಹ್ಮಿಯ ಉಗಮ ಇನ್ನೂ ಚರ್ಚೆಯ ವಿಷಯವಾಗಿ ಉಳಿದಿದೆ. ಹಣೆಯ ಬರಹವನ್ನು ಬರೆಯುವ ಬ್ರಹ್ಮನೇ ಬ್ರಾಹ್ಮಿಲಿಪಿಯ ಜನಕನೆಂದು ಹಿಂದುಗಳ ಮತ. ತೀರ್ಥಂಕರನು ಮಗಳಾದ ಬ್ರಾಹ್ಮಿಗೆ ಹೇಳಿಕೊಟ್ಟುದೇ ಬ್ರಾಹ್ಮಿಲಿಪಿಯೆಂದು ಜೈನರ ಮತ. ಈ ಅಲೌಕಿಕ ಹೇಳಿಕೆಗಳನ್ನು ಬಿಟ್ಟರೆ ಈ ಲಿಪಿ ವಿದೇಶದಿಂದ ಬಂದುದೊ, ಸ್ವದೇಶದಲ್ಲಿ ತಲೆಯೆತ್ತಿದುದೊ ಎಂಬ ಸಂದೇಹವಂತೂ ಇದ್ದೇಯಿದೆ. ವಿದೇಶಗಳಲ್ಲಿ ಗ್ರೀಕ್, ಸೆಮೆಟಿಕ್, ಫಿನಿಶಿಯನ್, ಕ್ಯುನಿಫಾರ್ಮ, ಸೆಮೆಟಿಕ್ ವರ್ಗದ ಅರಮೆಯಿಕ್ ಮೊದಲಾದವುಗಳಿಂದ ಇದರ ಮೂಲವನ್ನು ಕೆಲವರು ವಾದಿಸುತ್ತಾರೆ. ಭಾರತದಲ್ಲಿಯೇ ದ್ರಾವಿಡರೊ, ಆರ್ಯರೊ ಇಲ್ಲವೆ ಸಾಲದುದಕ್ಕೆ ತಾಂತ್ರಿಕ ಗ್ರಂಥಗಳ ಆಧಾರದಿಂದಲೋ ರೂಪಗೊಂಡಿತೆಂಬ ಅಭಿಪ್ರಾಯದವರೂ ಇದ್ದಾರೆ.

ಅಶೋಕನಿಗೆ ಹಿಂದೆ ಕೇವಲ ಬೆರಳಮೇಲೆ ಎಣಿಸುವಷ್ಟು ತುಣುಕು ಬರವಣಿಗೆಗಳು ಸಿಗುವ ಕಾರಣ, ಲಿಪಿಚರಿತ್ರೆಯ ಸ್ಥಿರ ಇತಿಹಾಸವನ್ನು ಅಶೋಕನಿಂದಲೇ ಭಾವಿಸಬೇಕಾಗುತ್ತದೆ. ಅಂದಿನಿಂದ ಇಂದಿನ ವರೆಗೆ ಭಾರತೀಯ ಎಲ್ಲ ಪ್ರಾಂತಗಳಲ್ಲಿ ಬ್ರಾಹ್ಮಿ ಹಲವು ಹಂತಗಳನ್ನು ರೂಪಿಸಿಕೊಂಡು ಬೆಳೆದುಬಂದಿದೆ. ಈ ಹಂತಗಳನ್ನು ಡಾ. ಪಿ.ಬಿ. ದೇಸಾಯಿಯವರು



ಎಂದು ಕ್ರಮಗೊಳಿಸಿ ಹೇಳುತ್ತಾರೆ.[೧] ಹೀಗೆ ಮೂಲದಲ್ಲಿ ಒಂದೇ ಆಗಿದ್ದು ಕಾಲಕ್ರಮದಲ್ಲಿ ವಿವಿಧರೂಪಗಳನ್ನು ಧರಿಸುತ್ತ ಸಾಗಿಬಂತು, ಬ್ರಾಹ್ಮಿಲಿಪಿ. ಪರಿವರ್ತನೆ ಜೀವಂತಿಕೆಯ ಲಕ್ಷಣ. ಆದರೆ ಈ ಪರಿವರ್ತನೆ ಉದ್ದೇಶಪೂರ್ವಕವಾದುದದಲ್ಲ; ಬರವಣಿಗೆಯ ಸಾಧನ, ಸೌಂದರ್ಯ ಪ್ರಜ್ಞೆ, ಸೌಲಭ್ಯಾಕಾಂಕ್ಷೆ ಮತ್ತು ವ್ಯಕ್ತಿವಿಶಿಷ್ಟಶೈಲಿಗಳೆಂಬ ಅನುದ್ದೇಶಪೂರಿತವಾದುದು.

ಶಿಲೆ, ಪತ್ರ, ಮತ್ತು ಕಾಗದಗಳ ಮೇಲೆ ಬರವಣಿಗೆ ಬೆಳೆದು ಬಂದಂತೆಲ್ಲ ಈ ವಸ್ತುಗಳ ಗುಣಧರ್ಮ ಮತ್ತು ಉಳಿ, ಕಂಟ, ಲೆಕ್ಕಣಿಕೆಗಳ ಸ್ವರೂಪಗಳಿಗನುಸರಿಸಿ ಅಕ್ಷರದ ವಿನ್ಯಾಸ ವ್ಯತ್ಯಾಸಗೊಳ್ಳುವುದು ಸಹಜ. ಮಸಿಯಿಂದ ಬರೆಯುವಾಗಲಂತೂ, ಊರಿದ ಮೊನಚು ಭಾಗದ ಮೂಲಕ ಪ್ರಾರಂಭದಲ್ಲಿಯೇ ಬಿಂದು, ತ್ರಿಕೋನ ಇಲ್ಲವೆ ಚೌಕೋನ ಆಕಾರವಾಗಿ ಮಸಿ ಪಸರಿಸುವುದುಂಟು. ಗಲಗಿನಂತಹ ಸಾಧನ ಬಳಸಿದಾಗ ಗೆರೆ ಸ್ಥೂಲ, ಸೂಕ್ಷ್ಮವಾಗುವುದು ಸಹಜ. ಈ ಆಕಾರಗಳನ್ನು ಅಕ್ಷರದ ಮೂಲಗಳೆಂದು ಭ್ರಾಂತಿಸಲು ಸಾಧ್ಯವಿದೆ.

ಸೌಂದರ್ಯಪ್ರಜ್ಞೆ ಮಾನವನ ಮೂಲಪ್ರವೃತ್ತಿಗಳಲ್ಲಿ ಬಹುಮುಖ್ಯವಾದುದು. ತಾನು ಮಾಡುವ ಪ್ರತಿಯೊಂದು ಕಾರ್ಯ ಆಕರ್ಷಕವಾಗಬೇಕೆಂದು ಮನುಷ್ಯ ಬಯಸುವುದು ಸಹಜ. ಲಿಪಿವ್ಯತ್ಯಾಸದ ಕಾರಣಗಳಲ್ಲಿ ಇಂಥ ಬಯಕೆಯೂ ಪ್ರಮುಖ ಪಾತ್ರವಹಿಸಿರಬೇಕು.

---

೧. ಕನ್ನಡ ನಾಡಿನ ಶಾಸನಗಳು ಪು. ೧೦. (೧೯೬೮)

ಸೌಂದರ್ಯಪ್ರಜ್ಞೆಯಂತೆ ಮಾನವನ ಕ್ರಿಯಾಕಲಾಪಗಳನ್ನು ಪರಿವರ್ತನೆಗೊಳಿಸುವುದು ಸೌಲಭ್ಯಾಕಾಂಕ್ಷೆ. ಅರ್ಥ ಅಭಿವ್ಯಕ್ತವಾದರೆ ಸಾಕು; ಶ್ರಮ ಉಳಿಯಬೇಕು ಎಂದು ಅಕ್ಷರಗಳನ್ನು ಅನುಕೂಲಕ್ಕೆ ತಕ್ಕಂತೆ ಪರಿವರ್ತಿಸಿಕೊಳ್ಳುವುದು ಯಾವ ಕಾಲಕ್ಕೂ ಕಂಡುಬರುವ ಗುಣವಿಶೇಷ. ಇದಕ್ಕೆ ಹೆಚ್ಚಿನದಾಗಿ ಶೈಲಿಮುದ್ರೆ ಸೇರಿದರಂತೂ ಅಕ್ಷರಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತ ಹೋಗುತ್ತದೆ.

ಪ್ರಾಚೀನ ಭಾರತದ ಏಕೈಕ ಲಿಪಿಯಾದ ಬ್ರಾಹ್ಮಿ ಹಲವು ಹತ್ತು ಪ್ರಾದೇಶಿಕ ರೂಪಧರಿಸಲು ಪ್ರಬಲ ಕಾರಣ ಪ್ರಾಂತಭೇದ. ನದಿ, ಅರಣ್ಯ, ಪರ್ವತ ಕಾರಣವಾಗಿ ಈ ಮೂಲಲಿಪಿ ಒಂದು ಪ್ರದೇಶದಲ್ಲಿ ಒಂದು ಬಗೆಯಾಗಿ, ಇನ್ನೊಂದು ಪ್ರದೇಶದಲ್ಲಿ ಇನ್ನೊಂದು ಬಗೆಯಾಗಿ ಬೆಳೆದು ಬಂದಿತು. ಬ್ರಾಹ್ಮಿಯನ್ನೇ ಕುರಿತು ಹೇಳುವುದಾದರೆ ಅಶೋಕನ ಪೂರ್ವದಲ್ಲಿಯೇ ಔತ್ತರೇಯ ಬ್ರಾಹ್ಮಿ, ದಾಕ್ಷಿಣಾತ್ಯ ಬ್ರಾಹ್ಮಿ ಎಂಬ ವ್ಯತ್ಯಾಸ, ಇವುಗಳಲ್ಲಿಯೇ ಮತ್ತೆ ಪ್ರಾದೇಶಿಕ ಭಿನ್ನತೆ ಎದ್ದು ಕಾಣುತ್ತದೆ. ಈ ದಾಕ್ಷಿಣಾತ್ಯ ಬ್ರಾಹ್ಮಿಯಿಂದಲೇ ಕಾಲಕಾಲಕ್ಕೆ ರೂಪ ಬದಲಿಸಿಕೊಳ್ಳುತ್ತ ಕನ್ನಡಲಿಪಿ ಈಗಿನ ಸ್ವರೂಪವನ್ನು ಧಾರಣ ಮಾಡಿಕೊಂಡಿದೆ.

ಭಾರತದ ತುಂಬ ಬ್ರಾಹ್ಮಿಬಳ್ಳಿ ನೂರು ಕುಡಿ, ನೂರು ಮಿಡಿಗಳಾಗಿ ಹಬ್ಬಿದೆ. ಋತುಧರ್ಮಕ್ಕನುಗುಣವಾಗಿ ಮರದಲ್ಲಿಯ ಹಳೆಯ ಎಲೆ ಉದುರುವುದೂ ಹೊಸ ಎಲೆ ಚಿಗುರುವುದೂ ಒಮ್ಮೊಮ್ಮೆ ಹಳೆ ಹೊಸ ಎಲೆ ಒಮ್ಮೆಲೆ ಕಾಣುವುದೂ ನಡೆದಿರುವಂತೆ ಈ ಲಿಪಿಯ ಬದುಕು ಸಾಗಿಬಂದಿರುತ್ತದೆ. ಇದೇ ರೀತಿ ಬ್ರಾಹ್ಮಿಲಿಪಿ ಕರ್ನಾಟಕದ ಶಾಸನಗಳಲ್ಲಿ ಅವಸ್ಥಾಂತರಗೊಳ್ಳುತ್ತ ಹೀಗೆ ಸಾಗಿಬಂದಿತು :

ರಾಯಚೂರು ಜಿಲ್ಲೆಯ ಪಾಲ್ಕಿಗುಂಡ, ಗವಿಮಠ, ಮಸ್ಕಿ, ಚಿತ್ರದುರ್ಗ ಜಿಲ್ಲೆಯ ಸಿದ್ಧಾಪುರ, ಜಟಿಂಗರಾಮೇಶ್ವರ, ಬ್ರಹ್ಮಗಿರಿಗಳಲ್ಲಿ ಕರ್ನಾಟಕದ ಪ್ರಥಮ ಬರವಣಿಗೆಯಾದ ಅಶೋಕನ ಬ್ರಾಹ್ಮಿಲಿಪಿಯ ಶಾಸನಗಳು ಸಿಕ್ಕಿವೆ. ಇವುಗಳಿಗೆ ತಲೆ ಕಟ್ಟು ಇಲ್ಲ. ಕೆಲವು ವರ್ತುಲ ಭಾಗಗಳನ್ನು ಬಿಟ್ಟರೆ ಈ ಲಿಪಿಗಳೆಲ್ಲ ಕೋನ ಮತ್ತು ರೇಖಾ ರೂಪದವು. ಹ್ರಸ್ವಗಳನ್ನು ಕಾಗುಣಿತ ಮಾಡುವಲ್ಲಿ ಇವುಗಳಿಗೆ ಮೇಲೆ ಕೆಳಗೆ ರೇಖೆಗಳನ್ನು ಜೋಡಿಸುತ್ತಾರೆ. ಈ ಕಾಗುಣಿತಗಳಿಗೆ ಇನ್ನೊಂದು ಗೆರೆಯನ್ನು ಹೆಚ್ಚಿಗೆ ಜೋಡಿಸಿದರೆ ದೀರ್ಘಾಕ್ಷರಗಳಾಗುತ್ತವೆ. ಹೀಗೆ ಸಿದ್ಧವಾದ ಈ ಅಕ್ಷರಗಳಲ್ಲಿ ಕೆಲವು ಪ್ರಾದೇಶಿಕತೆ ಇಲ್ಲವೆ ವ್ಯಕ್ತಿವೈಶಿಷ್ಟ್ಯ ಕಾರಣವಾಗಿ ಆ ಕಾಲದಲ್ಲಿಯೇ ಅವು ರೂಪವ್ಯತ್ಯಾಸ ಹೊಂದಿವೆ. ಇದು ಈ ಲಿಪಿಯ ಪ್ರಬುದ್ಧ ಅವಸ್ಥೆಯ ಕುರುಹು. ಒಟ್ಟಿನಲ್ಲಿ ಅಶೋಕನ ಶಾಸನಗಳ ಅಕ್ಷರ ಸಹಜ, ಸರಳ ಮತ್ತು ಸ್ಪಷ್ಟವಾಗಿವೆ.

ಮೌರ್ಯರ ತರುವಾಯ ಈ ನಾಡನ್ನಾಳಿದವರು ಶಾತವಾಹನರು. ಈ ಕಾಲದ ಲಿಪಿಗೆ ಇನ್ನೂ ತಲೆಕಟ್ಟು ಮೂಡಿಲ್ಲ. ಆದರೆ ಮೇಲ್ಭಾಗ ತ್ರಿಕೋನಾಕಾರವಾಗಿ ಅಕ್ಷರ ವರ್ತುಲದತ್ತ ವಾಲಿವೆ. ಇದಕ್ಕೆ ಕಾರಣ ಬರವಣಿಗೆಯ ರೀತಿಯೆಂದು ತೋರುತ್ತದೆ. ಎಲೆಯ ಮೇಲೆ ಕಂಟದ ಮೊನೆಯನ್ನು ಊರಿದಾಗ ಮಸಿ ರಹಡಿ ತ್ರಿಕೋನರೂಪದಲ್ಲಿ ನಿಲ್ಲುವುದೂ, ಎಲೆಯ ಉರುಟತನದಿಂದಾಗಿ ಎಳೆದ ಗೆರೆ ತರಂಗ ಇಲ್ಲವೆ ವಕ್ರಗೊಳ್ಳುವದೂ ಸ್ವಾಭಾವಿಕ. ಶಾಸನಪಾಠವನ್ನು ಮೊದಲು ಎಲೆಯ ಮೇಲೆ ಬರೆದು ತರುತ್ತಿದ್ದರು. ಎಲೆಯ ಮೇಲಣ ಇಂಥ ತ್ರಿಕೋನ ತಲೆಕಟ್ಟು ಮತ್ತು ವಕ್ರಗೆರೆಗಳು ಅಕ್ಷರದ ಮೂಲಭೂತ ಅಂಗಗಳೆಂದು ಶಾಸನದ ಲಿಪಿಕಾರ ಭ್ರಾಂತಿಸಿಕೊಂಡಿರಬೇಕು. ಮುಂದೆ ಇದೇ ಕ್ರಮ ಬೆಳೆದು ಅಕ್ಷರ ಬೇರೊಂದು ರೂಪ ಪಡೆದಿರುವ ಸಂಭವವಿದೆ; ಕಲಾಪ್ರಜ್ಞೆಯೂ ಇದಕ್ಕೆ ಪೂರಕವಾಗಿರಬೇಕು.

ಶಾತವಾಹನರ ತರುವಾಯ ಕದಂಬರು ಅಧಿಕಾರಕ್ಕೆ ಬಂದರು. ಭಾಷಾದೃಷ್ಟಿಯಿಂದ ಪ್ರಾಕೃತ ನಿಂತು ಸಂಸ್ಕೃತ ಪ್ರಸಾರಗೊಂಡ ಕಾಲವಿದು. ಇದರೊಂದಿಗೆ ಲಿಪಿಯೂ ಕೊಂಚ ಪರಿಷ್ಕಾರಗೊಂಡಿತು. ಕನ್ನಡ ಲಿಪಿಯ

ಪ್ರಾಚೀನತಮ ರೂಪವಿದು ಎಂಬ ಬ್ಯೂಲರ ಮೊದಲಾದ ವಿದ್ವಾಂಸರ ಅಭಿಪ್ರಾಯವನ್ನು ಇಲ್ಲಿ ನೆನೆಯಬಹುದು. ಲಿಪಿಯ ಮೇಲೆ ಕಾಣುವ ಚೌರಸತಲೆಕಟ್ಟಿನ (Box head) ದೃಷ್ಟಿಯಿಂದ ಇವರ ಶಾಸನಗಳಿಗೂ ಗುಪ್ತರ ಶಾಸನಗಳಿಗೂ ಹೋಲಿಕೆ ತೋರಿಬರುವುದು ಗಮನಾರ್ಹ ಸಂಗತಿಯೆನಿಸಿದೆ. ಆದರೆ ಮಯೂರವರ್ಮನ ಚಂದ್ರವಳ್ಳಿಶಾಸನ, ಕಾಕುತ್ಸವರ್ಮನ ಹಲ್ಮಿಡಿ ಶಾಸನಗಳಲ್ಲಿ ಚೌಕ ತಲೆಕಟ್ಟು ಕಾಣದೆ ಅಲ್ಪಮಟ್ಟಿನ ರೇಖಾರೂಪದ ತಲೆಕಟ್ಟು ತೋರಿಬರುವುದು, ಕನ್ನಡ ಲಿಪಿಯ ವಿಕಾಸಕ್ರಮದಲ್ಲಿ ಒಡೆದು ಕಾಣುವ ಸಂಗತಿಯಾಗಿದೆ. ಕದಂಬರ ಶಾಸನಗಳಲ್ಲಿ ಅಷ್ಟಮುಖ ಸ್ತಂಭದ ಮೇಲೆ ಚೌಕತಲೆಕಟ್ಟಿನ ಅಕ್ಷರಗಳಿಂದ ಬರೆದ ತಾಳಗುಂದ ಶಾಸನ ಭಾರತೀಯ ಸುಂದರಶಾಸನಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ.

ಕದಂಬರ ಜೊತೆಗೆ ಹೆಸರಿಸಬೇಕಾದ ಇನ್ನೊಂದು ಪ್ರಮುಖ ಅರಸು ಮನೆತನ ಗಂಗರದು. ಕದಂಬರ ಶಾಸನಗಳ ಚೌಕತಲೆಕಟ್ಟು ಇಲ್ಲಿ ಮಾಯವಾಗಿದೆ. ಅಕ್ಷರಗಳು ಗೆರೆ ತಲೆಕಟ್ಟು ಪಡೆದಿವೆ. ಸ್ವರೂಪದಲ್ಲಿ ಕೆಲವು ಅಕ್ಷರಗಳ ಅಗಲ ಹೆಚ್ಚುತ್ತ ನಡೆದಿದೆ. ಗಂಗರವು ಬಹಳಷ್ಟು ತಾಮ್ರಶಾಸನಗಳು. ಇವುಗಳಲ್ಲಿ ಎರಡು ಮೂರು ಬಗೆಯ ಅಕ್ಷರಗಳು ತೋರಿಬರುವ ಕಾರಣ ಕೆಲವು ಮಾತ್ರ ಕೃತಕ ಭ್ರಾಂತಿಯನ್ನು ಹುಟ್ಟಿಸಿವೆ.

ಗಂಗರ ಉದಯದ ಒಂದೆರಡು ಶತಮಾನಗಳ ತರುವಾಯ ತಲೆಯೆತ್ತಿದವರು ಚಾಲುಕ್ಯರು. ಇವರ ಶಾಸನಗಳಲ್ಲಿ ಮೂಡಿದ ಸ್ಪಷ್ಟ ಕಲೆಕಟ್ಟು, ಗಂಗರ ಶಾಸನಗಳಿಗಿಂತ ಸಣ್ಣವಾಗಿಯೂ ಕೆಲವೊಮ್ಮೆ ಕೊಂಚ ದೀರ್ಘವಾಗಿಯೂ ಇವೆ. ಅಕ್ಷರದ ಉದ್ದ ಕಡಿಮೆಯಾಗಿ; ಅಗಲ ಹೆಚ್ಚಾಗುತ್ತ ನಡೆದಿದೆ. ಸ್ವರೂಪ ದೃಷ್ಟಿಯಿಂದ ಅಕ್ಷರಗಳಿಗೆ ಅಸ್ಥಿರತೆ ಕಡಿಮೆಯಾಗಿ ಸ್ಥಿರತೆ ಸಂಪ್ರಾಪ್ತವಾಗತೊಡಗಿದೆ.

ಬಾದಾಮಿ ಚಾಲುಕ್ಯರನ್ನು ಮುರಿದು ಮಳಖೇಡದ ರಾಷ್ಟ್ರಕೂಟರು ಈ ನಾಡಿನ ಅಧಿಕಾರವನ್ನು ನಿರ್ವಹಿಸಿಕೊಂಡರು. ಚಾಲುಕ್ಯರ ಕಾಲದ ಅಕ್ಷರಗಳು ಈ ಅವಧಿಯಲ್ಲಿ ಹೆಚ್ಚು ಪರಿಷ್ಕಾರಗೊಂಡು ವರ್ತುಲದತ್ತ ಮತ್ತೂ ಒಲಿದು ಒಂದು ಸ್ಥಿರರೂಪ ಪಡೆಯಲಾರಂಭಿಸಿದವು. ತಲೆಕಟ್ಟು, ಅರ್ಧವರ್ತುಲ ರೂಪದಲ್ಲಿ ಸ್ಪಷ್ಟವಾಗಿ ಮೂಡಿತು. ಶಾಸನಪ್ರಪಂಚದಲ್ಲಿ ಭಾಷೆ-ಸಾಹಿತ್ಯ ದೃಷ್ಟಿಯಿಂದ ಸಂಕ್ರಮಣ ಯುಗವೆನಿಸಿದ ಈ ಕಾಲ ಲಿಪಿದೃಷ್ಟಿಯಿಂದಲೂ ಒಡೆದು ಕಾಣುವ ಪ್ರಗತಿ ತೋರಿತು.

ರಾಷ್ಟ್ರಕೂಟರನ್ನು ಮುರಿದು ಕಲ್ಯಾಣ ಚಾಲುಕ್ಯರು, ಗಂಗರನ್ನು ಮುರಿದು ಹೊಯ್ಸಳರು ಪಟ್ಟಕ್ಕೆ ಬರುವಲ್ಲಿ ನಮ್ಮ ಲಿಪಿಯ ಶರೀರ, ಸೌಂದರ್ಯದಿಂದ ಶೋಭಿಸಿತು. ಪೊಕ್ಕಳು, ತಲೆಕಟ್ಟು ಮಿಕ್ಕ ಅವಯವಗಳೆಲ್ಲ ತೊಡಕು ಬಿಡಿಸಿಕೊಂಡು ಅಂದವಡೆದವು. ಸಾಲು ನೇರಗೊಂಡು ಅಕ್ಷರಗಳು ಮುತ್ತಿನಂತೆ ಮುನ್ನಡೆದವು.

ಸುಲಲಿತಕೆಯೆನಲು ವಾ।
ಗ್ಲಲನೆಯ ಹಾರದವೊಲೊಪ್ಪಿ ಬರೆದಂ ಭೂದೇ।
ವಲಲಾಮಂ ಕಿಸುವಾಯುರ।
ಕುಳತಿಳಕಂ ರೂಪರುಘುಷಕ ಪತಾಕ ತೀಕಂ ॥

ಶರನಿಧಿಯೊಳ್ನೆಲೆ[ಸಿ]ದ[ದು?]ವಂ ।
ಸರಸಿಜಭವನಾಯ್ದುಕೊಣ್ಡು ವಾಗ್ದೇವಿಗೆ ಬಿ।
ತ್ತರದಿಂದ ಸಮೆದ ಮುತ್ತಿನ।
ಸರಿಗೆಯನನುಕರಿಪುವಲ್ತೆ ಬಲ್ಲೆಯ ಲಿಖಿತಂ ॥

ಎಂಬಂತಹ ಮಾತುಗಳು ಈ ಮನೆತನಗಳ ಕಾಲದಲ್ಲಿ ಕನ್ನಡ ಅಕ್ಷರ ಗಳಿಸಿದ ಲಾವಣ್ಯಕ್ಕೆ ನಿದರ್ಶನವೆನಿಸಿವೆ. ಹೊಯ್ಸಳರ ಕಾಲಕ್ಕಂತೂ ಈ ಸೌಂದರ್ಯಪ್ರಜ್ಞೆ ಇನ್ನೂ ಬೆಳೆದು ಪ್ರಾಣಿ, ಪಕ್ಷಿ, ಪುಷ್ಪ ಮೊದಲಾದವುಗಳನ್ನು ಅಕ್ಷರಗಳಲ್ಲಿ ಸಮಾವೇಶಗೊಳಿಸುವ ಕಲಾತ್ಮಕತೆ ರೂಢಗೊಂಡಿತು.

ಆನೆಯ ಸಿಂಘದ ಗಿಳಿಗಳ।
ನಾನಾರೂಪುಗಳನಕ್ಕರಂಗಳೊಳೆಸೆಯಲುಂ।
ತಾನಳವಡಿಸುವನೆಂದಡೆ।
ನೆ...... ಮರುಳೆ ತೊಡರ್ದಪ್ಪೆ ರೂವಣನೊಳ್॥

ಎಂಬ ಮೊದಲಾದ ಹೇಳಿಕೆಗಳನ್ನೂ, ಅಲ್ಲಲ್ಲಿ ಸಿಗುವ ಇಂಥ ಹಲವಾರು ಶಾಸನಗಳನ್ನೂ ಇಲ್ಲಿ ಉದಾಹರಿಸಬಹುದು. ಹೀಗೆ ಅಕ್ಷರಗಳು ಸಹಜ ಸೊಬಗಿನಿಂದ ಅಧಿಕ ಅಲಂಕಾರದ ಹಂತವನ್ನು ಮುಟ್ಟಿದುದು ಈ ಕಾಲದಲ್ಲಿ. ಅದಕ್ಕಾಗಿ ಕನ್ನಡ ಲಿಪಿಸೌಂದರ್ಯದೃಷ್ಟಿಯಿಂದ ಈ ಅವಧಿಯನ್ನು 'ವಸಂತಯುಗ'ವೆಂದು ಕರೆಯಬಹುದು.

ಮುಂದೆ ಬಂದ ಕಲಚೂರಿ, ಯಾದವರಲ್ಲಿ ಈ ಮಾದರಿ ತಕ್ಕಮಟ್ಟಿಗೆ ಮುಂದುವರಿಯಿತು. ತರುವಾಯ ವಿಜಯನಗರದವರು ರಾಜ್ಯಸೂತ್ರ ವಹಿಸಿಕೊಂಡರು. ಇಷ್ಟರಲ್ಲಿ ಕನ್ನಡದ ಮೇಲೆ ಅನ್ಯಭಾಷೆಗಳ ಪ್ರಭಾವ ನಡೆಯಿತು. ಭಾಷೆ ಸಾಹಿತ್ಯಗಳಲ್ಲಿ ಕಂಡುಬಂದ ಮಿಶ್ರಣ; ಲೇಖನಕಲೆಯಲ್ಲಿಯೂ ತಲೆಹಾಕಿ ಉರ್ದು, ತೆಲುಗು, ಮಲಯಾಳ, ತಮಿಳು, ಮರಾಠಿ ಮೋಡಿಲಿಪಿಗಳನ್ನು ಬರೆಯಲಾರಂಭಿಸಿದ ಕೈಯಿಂದ ಕನ್ನಡಲಿಪಿ ಸ್ವರೂಪ ನಾಶಮಾಡಿಕೊಳ್ಳತೊಡಗಿತು. ಇವುಗಳಿಗಿಂತ ಹೆಚ್ಚಾಗಿ ಕಡತ-ಕಾಗದಗಳ ಬಳಕೆ ಬೆಳೆದು ಶಾಸನಗಳ ಮೇಲೆ ಬರೆಯುವ ರೂಢಿಯೂ ತಪ್ಪಿಹೋಗಹತ್ತಿತು. ಅದಕ್ಕಾಗಿ ವಿಜಯನಗರ ಕಾಲವನ್ನು ಲಿಪಿ ದೃಷ್ಟಿಯಿಂದ ಅವನತಿಯ ಕಾಲವೆನ್ನಬೇಕಾಗುತ್ತದೆ. ಆದರೆ ಮಹಾಪ್ರಾಣಗಳಿಗಾಗಿ ಹೊಟ್ಟೆಸೀಳುವ ಗೆರೆ ಈ ಕಾಲದಲ್ಲಿ ಪ್ರಾರಂಭವಾಗಿ ಇಂದಿನ ಅಕ್ಷರಗಳಿಗೆ ತೀರಾ ಸಮೀಪವಾದ ರೂಪಗಳು ರೂಢಗೊಂಡುದು ಗಮನಿಸಬೇಕಾದ ಸಂಗತಿ.

ಮೈಸೂರ ಅರಸರ ಕಾಲದಲ್ಲಿ ಹೊಸ ಅಕ್ಷರಗಳು ಕಾಣುತ್ತಿದ್ದರೂ ಕೆಲವು ಮಾತ್ರ ಹಳೆಯ ಲಕ್ಷಣಗಳನ್ನು ಇನ್ನೂ ಉಳಿಸಿಕೊಂಡವು. ಬ್ರಿಟಿಷರಿಂದಾಗಿ ಮುದ್ರಣಕಾರ್ಯ ಪ್ರಸಾರಗೊಳ್ಳಲು ಕರ್ನಾಟಕದ ಲಿಪಿಯಲ್ಲಿ ಅನೇಕತೆ ಕಡಿಮೆಯಾಗಿ, ಏಕತೆ ತಲೆದೋರಲಾರಂಭಿಸಿತು. ಆದರೂ ಕೈಬರಹ ದೃಷ್ಟಿಯಿಂದ ಮೈಸೂರು, ಧಾರವಾಡ ಪಶ್ಚಿಮ ಕರಾವಳಿಯ ಜನತೆಯ ಅಕ್ಷರಗಳು ತಮತಮಗೆ ಇನ್ನೂ ವೈಶಿಷ್ಟ್ಯ ಪಡೆದಿವೆ. ಹೀಗೆ ಕನ್ನಡ ಲಿಪಿ ಹಲವು ಅವಸ್ಥೆಗಳನ್ನು ಅನುಭವಿಸುತ್ತ ಈ ವರೆಗೆ ಬೆಳೆದು ಬಂದಿದೆ.

ಈ ಲಿಪಿಪ್ರಪಂಚವನ್ನು ಕಣ್ಣಲ್ಲಿ ಕಣ್ಣಿಟ್ಟು ಅವಲೋಕಿಸಿದರೆ ಅವಸ್ಥಾಭೇದಗಳಂತೆ ಪ್ರಾಂತಭೇದಗಳೂ ಕಂಡುಬರುವ ಸಂಭವವಿದೆ. ಭೌಗೋಲಿಕ ಪ್ರತಿಬಂಧನ, ಅನ್ಯಲಿಪಿಗಳ ಸಂಪರ್ಕಗಳಿಂದಾಗಿ ಇಂಥ ಕುಟುಂಬಗಳು ರೂಪಗೊಳ್ಳುತ್ತವೆ. ಒಂದೇ ಕಾಲದಲ್ಲಿ ಹುಟ್ಟಿದ ಚಾಲುಕ್ಯರ ಮತ್ತು ಗಂಗರ ಶಾಸನಗಳನ್ನು ಹೋಲಿಸಿ ಈ ಪ್ರಾಂತಭೇದದ ವ್ಯತ್ಯಾಸವನ್ನು ಅರಿಯಬಹುದು. ಹೀಗೆ ಬೇರೆ ಬೇರೆ ಪ್ರದೇಶದ ಶಾಸನಗಳ ಸಮೀಕ್ಷೆಯಿಂದ ಇಂಥ ವ್ಯತ್ಯಾಸಗಳು ಗಮನಕ್ಕೆ ಬರುವ ಸಾಧ್ಯತೆಯಿದೆ. ಈ ಲಿಪಿ ಪ್ರಾಂತಭೇದದ ಅಭ್ಯಾಸ ಶಾಸನಕ್ಷೇತ್ರದ ಅವಶ್ಯ ಕಾರ್ಯಗಳಲ್ಲಿ ಒಂದು.

* * * * *

ಸಾಮಾನ್ಯವಾಗಿ ಕರ್ನಾಟಕದ ಲಿಪಿಗಳು ಕನಿಷ್ಠ ೩ ಶತಮಾನಗಳಿಗೊಮ್ಮೆ ತಮ್ಮ ಸ್ವರೂಪವನ್ನು ಬದಲಿಸಿಕೊಂಡಿವೆ. ಇದರ ಸೂಕ್ಷ್ಮ ಅಭ್ಯಾಸದಿಂದಾಗಿ ಮಿತಿ ಉಲ್ಲೇಖವಿಲ್ಲದ ಶಾಸನಗಳ ಕಾಲನಿರ್ಣಯ ಸಾಧ್ಯವಾಗುತ್ತದೆ. ಕಪ್ಪೆ ಅರಭಟ್ಟನಿಗೆ ಸಂಬಂಧಿಸಿದ ಬಾದಾಮಿ ಶಾಸನ, ಪಂಪನಿಗೆ ಸಂಬಂಧಿಸಿದ ಗಂಗಾಧರಂ ಶಾಸನಗಳನ್ನು ಇಲ್ಲಿ ಉದಾಹರಿಸಬಹುದು. ಇದಲ್ಲದೆ ಕನ್ನಡ ಜನತೆಯ ಸೌಂದರ್ಯಪ್ರಜ್ಞೆಯ ಆದರ, ಅನಾದರಗಳ ಇತಿಹಾಸವನ್ನೂ ಅರಿಯಬಹುದು. ಹೀಗೆ ನಮ್ಮ ಲಿಪಿಗಳ ಅಧ್ಯಯನ ಹಲವು ದೃಷ್ಟಿಯಿಂದ ಪ್ರಯೋಜಕವೆನಿಸಿದೆ.

■■

ಆಕರ : ಮಾರ್ಗ ಸಂಪುಟ–೨

೫೩

ಶಾಸನಾಧ್ಯಯನದ ಇತಿಹಾಸ

ಪಶ್ಚಿಮಪಂಡಿತರು ನಮ್ಮ ಗಮನಕ್ಕೆ ತಂದ ಭಾರತೀಯ ಜ್ಞಾನಶಾಖೆಗಳಲ್ಲಿ ಶಾಸನಾಧ್ಯಯನ ಮಹತ್ವಪೂರ್ಣವಾದುದು. ಕರ್ನಾಟಕದಲ್ಲಿಯ ಪ್ರಕಟಿತ ಮತ್ತು ಅಪ್ರಕಟಿತ ೨೫೦೦೦ ಶಾಸನಗಳು ಈ ಅಧ್ಯಯನದ ಸಾಮಗ್ರಿ. ಇವುಗಳಲ್ಲಿ ಬಹಳಷ್ಟು ಶಾಸನಗಳನ್ನು ಪೂರ್ವ ಮತ್ತು ಪಶ್ಚಿಮ ಪಂಡಿತರು ಕಷ್ಟಪಟ್ಟು ಸಂಗ್ರಹಿಸಿದರು. ಪ್ರಯಾಸದಿಂದ ಓದಿದರು, ಪ್ರಾಮಾಣಿಕತೆಯಿಂದ ಅರ್ಥೈಸಿದರು. ಸುಮಾರು ೧೭೫ ವರ್ಷಗಳ ಈ ಇತಿಹಾಸ ರೋಮಾಂಚಕವೆನಿಸಿದೆ, ರೋಚಕವೆನಿಸಿದೆ. ಅಭ್ಯಾಸದ ಅನುಕೂಲತೆಗಾಗಿ ಈ ಸುದೀರ್ಘ ಅವಧಿಯಲ್ಲಿ

೧. ಕರ್ನಲ್ ಮೆಕೆಂಝಿ ಯುಗ : ೧೭೯೧ -೧೮೩೭

೨. ಸರ್ ವಾಲ್ಟರ್ ಇಲಿಯಟ್ ಯುಗ : ೧೮೩೭-೧೮೭೦

೩. ಡಾ. ಫ್ಲೀಟ್ ಮತ್ತು ರೈಸ್ ಯುಗ : ೧೮೭೦ ರ ತರುವಾಯ

ಎಂಬ ಮೂರು ಘಟ್ಟಗಳನ್ನು ಕಲ್ಪಿಸಬಹುದು.

೧. ಕರ್ನಲ್ ಮೆಕೆಂಝಿ ಯುಗ : ಸರ್ ವಿಲಿಯಂ ಜೋನ್ಸ ಎಂಬ ನ್ಯಾಯಾಧೀಶನು ಏಸಿಯಾಟಿಕ್ ಸೊಸಾಯಿಟಿ ಆಫ್ ಬೆಂಗಾಲ್ ಎಂಬ ಸಂಸ್ಥೆಯನ್ನು ೧೭೮೪ರಂದು ಕಲ್ಕತ್ತೆಯಲ್ಲಿ ಸ್ಥಾಪಿಸಿದನು. ಇದರ ಉದ್ದೇಶ ಭಾರತೀಯತ್ವದ ಅಧ್ಯಯನ. ಈ ಸಂಸ್ಥೆಯ ಪರವಾಗಿ ೧೭೮೮ರಲ್ಲಿ 'ಏಸಿಯಾಟಿಕ್ ರಿಸರ್ಚಿಸ್' ಹೆಸರಿನ ಪತ್ರಿಕೆ ಪ್ರಾರಂಭವಾಯಿತು. ಇದರ ಮೂರನೆಯ (೧೭೯೧) ಸಂಪುಟದಲ್ಲಿ ಸರ್ ವಿಲಿಯಂ ಜೋನ್ಸನಿಂದ ಒಂದು ತಾಮ್ರಶಾಸನ "A royal grant of land in Carnata" ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಯಿತು. ಈ ಶಾಸನವನ್ನು ಬರೆಯಿಸಿದವರು ವಿಜಯನಗರದರಸರು. ತಮಿಳುನಾಡಿನ ಕಂಚಿ ದೇವಾಲಯಕ್ಕೆ ದತ್ತಿಕೊಟ್ಟುದು ಇದರ ವಿಷಯ. ಭಾಷೆ ಸಂಸ್ಕೃತ. ಈ ಶಾಸನ ಕಂಚಿಯಲ್ಲಿ ಸಿಕ್ಕಿದ್ದರೂ ನಮ್ಮ ಅರಸರಿಗೆ ಸಂಬಂಧಪಟ್ಟುದೆಂಬ ಕಾರಣದಿಂದ ಇದನ್ನೇ ಕರ್ನಾಟಕ ಪ್ರಕಟಿತ ಪ್ರಥಮ (ಸಂಸ್ಕೃತ) ಶಾಸನವೆನ್ನಬಹುದು. ಇಲ್ಲಿಂದ ಮುಂದೆ ನಮ್ಮ ಶಾಸನದ ಅಧ್ಯಯನ ಆರಂಭವಾಯಿತು. ಈ ಪ್ರಸಂಗದಲ್ಲಿ ನೆನೆಯಬೇಕಾದ ವ್ಯಕ್ತಿ, ಶಾಸನಾಧ್ಯಯನದ ಯುಗಪುರುಷ ಕರ್ನಲ್ ಮೆಕೆಂಝಿ. ಟೀಪುವಿನ ಮರಣದ ತರುವಾಯ ಆಂಗ್ಲರ ಕೈವಶವಾದ ಮೈಸೂರು

ಪ್ರದೇಶದ ಭೌಗೋಲಿಕ ಪರಿವೀಕ್ಷಣಾಧಿಕಾರಿಯೆಂದು ಈತನು ನೇಮಕಗೊಂಡನು. ೧೭೯೯ ರಿಂದ ೧೮೦೯ ರ ವರೆಗೆ ಅಧಿಕಾರವನ್ನು ವಹಿಸಿಕೊಂಡಿದ್ದ ಇವನ ಅಭಿರುಚಿ ಶಿಲ್ಪ, ಶಾಸನ ಮತ್ತು ಹಳೆಯ ಗ್ರಂಥಗಳ ಸಂಗ್ರಹದ ಕಡೆಗೆ ಮುಂದುವರಿಯಿತು. ಈ ಲೋಕೋತ್ತರ ಸಂಗ್ರಹ ಕಾರ್ಯದಲ್ಲಿ ಮೆಕೆಂಝಿಗೆ ಬಹುದೊಡ್ಡ ನೆರವು

ನೀಡಿದವ ಭಾರತೀಯ ಪಂಡಿತ ಕವೆಲ್ಲಿ ಬೋರಯ್ಯ. ಬಹುಭಾಷಾ ಬಲ್ಲಿದ, ತೀಕ್ಷ್ಣಮತಿ, ಆಶುಕವಿಯಾಗಿದ್ದ ಇವನ ನೆರವು ಇಲ್ಲದಿದ್ದರೆ ಮೆಕೆಂಝಿ ಇಂಥ ಘನಕೀರ್ತಿ ಗಳಿಸುತ್ತಿರಲಿಲ್ಲ. ಆದರೆ ಈತನ ಕಾರ್ಯ, ಅಧಿಕಾರಿಯ (ಮೆಕೆಂಝಿ) ಹೆಸರಿನಲ್ಲಿ ಮುಳುಗಿಹೋಯಿತು. ಬೋರಯ್ಯನನ್ನು ಕುರಿತು ಹೇಳಿದ "When he deciphered the Halakanada Characters, inscribed on the tablet found at Dodare, whcih is now deposited in the Museum of the Asiatic Society, his master was highly gratified and put his name on it."[೧] ಎಂಬ ಮಾತನ್ನು ನೋಡಿದರೆ, ಕನ್ನಡ ಶಾಸನವನ್ನು ಮೊದಲು ಓದಿದ ಕೀರ್ತಿ ಬೋರಯ್ಯನಿಗೆ ಸಲ್ಲುವಂತೆ ಕಾಣುತ್ತದೆ. ಈತನು ೧೮೦೭ರ ಏಸಿಯಾಟಿಕ್ ರಿಸರ್ಚಿಸ್ ಪತ್ರಿಕೆಯ ಒಂಬತ್ತನೆಯ ಸಂಪುಟದಲ್ಲಿ ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ಬುಕ್ಕರಾಯನ ಧರ್ಮಶಾಸನವನ್ನು ಪ್ರಕಟಿಸಿದ (ಪು.೨೭೦). ಬಹುಶಃ ಇದು ಕನ್ನಡ ಭಾಷೆಯ ಪ್ರಥಮ ಪ್ರಕಟಿತ ಶಾಸನ.

ಇದೇ ಸಂಪುಟದ ೨೭೮ನೆಯ ಪುಟದ ಮೇಲೆ ಮೆಕೆಂಝಿ ಸಂಗ್ರಹಿಸಿದ ಶಾಸನದ ಚಿತ್ರವಿದ್ದು, ಅದರ ಕೆಳಗೆ "Ancient Sculpture and inscription Sravanagoodya near Madagasee" ಎಂದು ಬರೆಯಲಾಗಿದೆ. ಬ್ರೌನ್ಸ ಎಂಬಾತನು ಕನ್ನಡ ಶಾಸನಗಳನ್ನು ಸಂಗ್ರಹಿಸಿದ್ದನೆಂದು ಇದೇ ಸಂಪುಟದ ೨೭೫ನೆಯ ಪುಟದ ಅಡಿಯಿಂದ ತಿಳಿದುಬರುತ್ತದೆ. ಇಲ್ಲಿಯೇ ಮೆಕೆಂಝಿ ಕಳಿಸಿದ ಕನ್ನಡ ಶಾಸನಗಳನ್ನು ಕುರಿತು ಕೋಲ್‌ಬ್ರುಕ್ ಲೇಖನ ಬರೆದಿದ್ದಾರೆ. (ಪು. ೪೧೨, ೪೨೧, ೪೨೨)

೧೮೩೫ರ JRAS ದ ಎರಡನೆಯ ಸಂಪುಟ (ಪು. ೩೭೮-೯೯) ದಲ್ಲಿ ಹೆನ್ರಿ ಎಂಬುವನು ಕರ್ನಾಟಕದ ಹನ್ನೆರಡು ಶಾಸನಗಳನ್ನು ಕುರಿತು ಅಭ್ಯಾಸ ಮಾಡಿದ್ದಾನೆ.[೨] ಪ್ರೊ. ವಿಲ್ಸನ್ ಎಂಬವನು ಇವುಗಳಿಗೆ ಅಲ್ಲಿಯೇ ಟಿಪ್ಪಣಿ ಬರೆದಿದ್ದಾನೆ. (ಮೂರನೆಯ ಸಂಪುಟದ ಪು. ೯೪ ಮತ್ತು ೨೫೮, ನಾಲ್ಕನೆಯ ಸಂಪುಟದ ಪು. ೨೮೦. ಐದನೆಯ ಸಂಪುಟದ ಪು. ೧೭೩ರ ಮೇಲೆ ಇವುಗಳ ಪಾಠ ಮತ್ತು ಭಾಷಾಂತರಗಳನ್ನು ವಥೆನ್ ನೀಡಿದ್ದಾನೆ.)

೧೮೩೭ರ JASB ಯ ಆರನೆಯ ಸಂಪುಟದಲ್ಲಿ ಕವೆಲ್ಲಿ ಬೋರಯ್ಯ ಕಳಿಸಿದ ಒಂದು ಶಾಸನದ ನಕಲು ಮತ್ತು ಸಾರಾಂಶಗಳನ್ನು ಜೇಮ್ಸ್ ಪ್ರಿನ್ಸೆಪ್ ಪ್ರಕಟಿಸಿದ್ದಾರೆ. ಹೀಗೆ ಪ್ರಾರಂಭಕಾಲದಲ್ಲಿ ಹಲವು ವಿದ್ವಾಂಸರು ದುಡಿದಿದ್ದರೂ ಇವರಲ್ಲಿ ಕನ್ನಡ ಶಾಸನಾಧ್ಯಯನಕ್ಕೆ ಶ್ರದ್ಧೆಯ ಹಿನ್ನೆಲೆ ಹಾಕಿದ ಕೀರ್ತಿ ಮೆಕೆಂಝಿಗೆ ಸಲ್ಲುತ್ತದೆ. ೧೮೦೦-೧೮೧೭ರ ಅವಧಿಯಲ್ಲಿ ಇವನು ಸಂಗ್ರಹಿಸಿದ ಶಾಸನಗಳ ಸಂಖ್ಯೆ ಸುಮಾರು ೩೦೦. ಮುಂದೆ ಈತನ ಮರಣಕಾಲವಾದ ೧೮೨೧ರ ಹೊತ್ತಿಗೆ ಈ ಸಂಖ್ಯೆ ೬೦೦೦ಕ್ಕೆ ಮುಟ್ಟಿತು. ಇವುಗಳಲ್ಲಿ ಕರ್ನಾಟಕಕ್ಕೆ ಸಂಬಂಧಪಟ್ಟವು. ೧೦೦ಕ್ಕೆ ೯೮. ಈತನ ಶಕ್ತಿಯೆಲ್ಲ ಶಾಸನಸಂಗ್ರಹದಲ್ಲಿ ವ್ಯಯವಾದ ಕಾರಣ ಪ್ರಕಟನ ಕಾರ್ಯ ಹೇಳಿಕೊಳ್ಳುವಷ್ಟು ನಡೆಯಲಿಲ್ಲ.

ಒಟ್ಟಿನಲ್ಲಿ ೧೭೯೧ ರಿಂದ ೧೮೩೭ ರ ವರೆಗೆ ಸರ್ ವಿಲಿಯಂ ಜೋನ್ಸ್, ಕರ್ನಲ್ ಮೆಕೆಂಝಿ, ಕವೆಲ್ಲಿ ವೆಂಕಟ ಬೋರಯ್ಯ, ಬ್ರೌನ್ಸ, ಕೋಲ್‌ಬ್ರುಕ್, ಹೆನ್ರಿ ವಥೆನ್, ವಿಲ್ಸನ್, ಪ್ರಿನ್ಸೆಪ್ ಇವರಂಥ ಕೆಲವೇ

---

೧. Journal of the Royal Asiatic Society of Great Britan and Ireland vol. [illegible] (1834) p. 144

೨. "Ten ancient inscriptions on stone and copper found on the western side of India...." ಎಂದು ಮಾತ್ರ ಶಿರೋನಾಮೆಯಿದೆ.

ಕನ್ನಡ ಶಾಸನಗಳು ಪ್ರಕಟಗೊಂಡವು. ಈ ಕಾರ್ಯಕ್ಕೆ ವೇದಿಕೆಯಾದ ಪತ್ರಿಕೆಗಳೆಂದರೆ ಏಸಿಯಾಟಿಕ್ ರಿಸರ್ಚಿಸ್, JRAS ಮತ್ತು JASB.

೨. ಸರ್ ವಾಲ್ಟರ್ ಇಲಿಯಟ್ ಯುಗ : ಇಲಿಯಟ್ ಮದ್ರಾಸ ಸಿವಿಲ್ ಸರ್ವೀಸಿನಲ್ಲಿ ಅಧಿಕಾರಿಯಾಗಿದ್ದ. ಈತನಿಂದ ಕನ್ನಡ ಶಾಸನಗಳ ವ್ಯವಸ್ಥಿತ ಅಭ್ಯಾಸ ಆರಂಭವಾಯಿತು. ಮುಂಬೈ ಕರ್ನಾಟಕ, ನಿಜಾಂ ಕರ್ನಾಟಕದ ಪಶ್ಚಿಮಭಾಗ, ಹಳೆಯ ಮೈಸೂರು ಪ್ರಾಂತದ ಉತ್ತರ ಭಾಗಗಳಿಂದ ಇವನು ಸಂಗ್ರಹಿಸಿದ ಶಾಸನಗಳ ಸಂಖ್ಯೆ ೧೩೦೦. ಇವುಗಳಲ್ಲಿ ೫೯೪ ಶಾಸನಗಳನ್ನು ಆರಿಸಿಕೊಂಡು " Karnatak Desh Inscription" ಎಂಬ ಹೆಸರಿನಲ್ಲಿ ಕೈಬರಹದ ನಾಲ್ಕು ಪ್ರತಿಗಳನ್ನು ಸಿದ್ಧಪಡಿಸಿದನು. ಅವುಗಳನ್ನು ಕುರಿತು ಫ್ಲೀಟನು 'ಎಡಿನ್‌ಬರ್ಗ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಒಂದು ಪ್ರತಿ ನನ್ನ ಕೈಯಲ್ಲಿದೆ. ಇನ್ನೊಂದು ಪ್ರತಿ ಲಂಡನ್ನಿನ ರಾಯಲ್ ಏಸಿಯಾಟಿಕ್ ಸೊಸಾಯಿಟಿಯಲ್ಲಿದೆ. ಮಿಕ್ಕೆರಡು ಎಲ್ಲಿವೆ ನನಗೆ ಗೊತ್ತಿಲ್ಲ" ಎಂದಿದ್ದಾನೆ. ಉತ್ತರ ಕರ್ನಾಟಕದ ಚರಿತ್ರೆಯ ಅಧ್ಯಯನಕ್ಕೆ ಅಗತ್ಯವಾದ ಶಾಸನಗಳನ್ನೊಳಗೊಂಡ ಬೆಲೆಯುಳ್ಳ ಸಂಪುಟವಿದು. ಇವನು ತಮ್ಮ ಶಾಸನಾಧ್ಯಯನದ ಸಮಗ್ರ ಕೃಷಿಯನ್ನು "Hindu inscriptions" ಎಂಬ ಅಭ್ಯಾಸಪೂರ್ಣ ಲೇಖನದಲ್ಲಿ (JRAS -IV, p 1-14, 1837) ವ್ಯಕ್ತಪಡಿಸಿರುವನು. ಈ ಲೇಖನದ ಪರಿಷ್ಕೃತ ರೂಪ Madras Journal of the Literature and Science-VII p. ೧೯೩ದಲ್ಲಿ ಪ್ರಕಟವಾಯಿತು.

೧೮೩೯ರ JRAS ದ ಸಂಪುಟ ೫ರ ಮೇಲೆ ಹೆನ್ರಿ ವಥೆನ್ ಬೆಳಗಾವಿಯ ಕೆಲವು ಕನ್ನಡ -ಸಂಸ್ಕೃತ ಶಾಸನಗಳನ್ನು ಪ್ರಕಟಿಸಿದ. ಇದೇ ಸುಮಾರಿಗೆ ಭಾರತೀಯರಾದ ಬಾಲಗಂಗಾಧರ ಶಾಸ್ತ್ರಿಯವರು ಕೊಲ್ಲಾಪುರ ಪ್ರದೇಶದ ಏಳು ಶಾಸನಗಳನ್ನು (JBBRASI-II p. ೨೬೩-೭೨, ೧೮೪೫) ಪ್ರಕಟಿಸಿದರು.

ಮೇಜರ್ ಡಿಕ್ಸನ್ ಎಂಬುವನು ತೆಗೆದುಕೊಂಡ ಚಿತ್ರದುರ್ಗ, ಬಳ್ಳಿಗಾವಿ, ಹರಿಹರ ಪ್ರದೇಶಗಳ ಸುಮಾರು ೯೦ ಶಾಸನಫೋಟೊಗಳನ್ನು ಮೈಸೂರು ಸರ್ಕಾರ ೧೮೬೫ರಲ್ಲಿ ಪ್ರಕಟಿಸಿತು. ಡಾ. ಪಿಗು ಮತ್ತು ಕರ್ನಲ್ ಬ್ರಿಗ್ಸ್ ಮೈಸೂರು, ಧಾರವಾಡ ಮುಂತಾದ ಪ್ರದೇಶಗಳಿಗೆ ಸಂಬಂಧಿಸಿದ ೬೦ ಶಾಸನಗಳ ಫೋಟೋ ತೆಗೆದುಕೊಂಡರು. ಇವುಗಳನ್ನು ಆಧರಿಸಿ ಮಿ. ಹೋಪ್ ಎಂಬವನು "Inscriptions in Dharwar and Mysore" ಎಂಬ ಹೆಸರಿನಿಂದ ೬೪ ಶಾಸನಚಿತ್ರಗಳನ್ನೊಳಗೊಂಡ ಒಂದು ಸಂಪುಟವನ್ನು ಸಿದ್ಧಗೊಳಿಸಿ ಇದರ ಹತ್ತು ಪ್ರತಿಗಳನ್ನು ಮಾಡಿಸಿದನು. ಇವುಗಳಲ್ಲಿ ೧. ರಾಯಲ್ ಏಸಿಯಾಟಿಕ್ ಲೈಬ್ರರಿ ಲಂಡನ್. ೨. ಸೊಸೈಟಿ ಏಸಿಯಾಟಿಕ್ ಪ್ಯಾರಿಸ್. ೩. ರಾಯಲ್ ಓರಿಯಂಟಲ್ ಸೊಸೈಟಿ ಲೀಪ್ಜಿಕ್. ೪. ಇಂಡಿಯಾ ಆಫೀಸ ಲೈಬ್ರರಿ ಲಂಡನ್. ೫. ಮಿಸ್ ಥಾಮಸ್ - ಹೀಗೆ ಇವರ ವಶದಲ್ಲಿ ಐದು ಪ್ರತಿಗಳಿದ್ದು ಮಿಕ್ಕ ಐದು ಪ್ರತಿಗಳ ಇರುವಿಕೆ ತಿಳಿದುಬಂದಿಲ್ಲ. ಈ ಕಾಲದಲ್ಲಿ ಡಾ. ಭಾವೂದಾಜಿಯವರು ಕರ್ನಾಟಕದಲ್ಲಿ ಸಂಗ್ರಹಿಸಿದ ಕೆಲವು ಶಾಸನಭಾವಚಿತ್ರಗಳ ಬಗೆಗೆ ವಿವೇಚಿಸಿರುವರು (JBBRAS IX p, ೩೧೪, ೧೮೬೭-೭೦). ಹೀಗೆ ಈ ಅವಧಿಯಲ್ಲಿ ಕೆಲವು ಶಾಸನಗಳ ಫೋಟೋ ಸಂಗ್ರಹ ಮತ್ತು ವಿವರಣೆಗಳೂ JARS, JBBRAS ಇವುಗಳ ಮೂಲಕ ಲೇಖನಗಳೂ ಬೆಳಕಿಗೆ ಬಂದವು. ೧೮೩೬ರಲ್ಲಿ ಲ್ಯಾಸೆನ್, ೧೮೩೭ -೩೮ರಲ್ಲಿ ಜೇಮ್ಸ್ ಪ್ರಿನ್ಸೆಪ್ ಇವರು ಬ್ರಾಹ್ಮಿಲಿಪಿಯನ್ನು ಸಮರ್ಪಕವಾಗಿ ಓದಿದ್ದರಿಂದ ಕನ್ನಡ ಶಾಸನ ಓದುವ ಕಾರ್ಯ ಈ ಯುಗದಲ್ಲಿ ತೃಪ್ತಿಕರವಾಗಿ ನಡೆಯಿತು.

೩. ಫ್ಲೀಟ್ ಮತ್ತು ರೈಸ್ ಯುಗ : ಜಾನ್ ಫೇತಫುಲ್ ಫ್ಲೀಟ್ ಮತ್ತು ಬೆಂಝಿಮಿನ್ ಲೂಯಿ ರೈಸ್ ಅವರು ಕರ್ನಾಟಕ ಶಾಸನಾಧ್ಯಯನವನ್ನು ಶ್ರೀಮಂತಗೊಳಿಸಿದ ಅಶ್ವಿನಿದೇವತೆಗಳು. ಇವರಿಂದ ನಮ್ಮ ಶಾಸನಗಳ ವ್ಯವಸ್ಥಿತ ಅಧ್ಯಯನ ಆರಂಭವಾಯಿತು. JBBRAS IX (೧೮೬೭-೭೦) ದಲ್ಲಿ ಡಾ. ಫ್ಲೀಟರು ಕದಂಬರ ಕನ್ನಡ ಮತ್ತು ಸಂಸ್ಕೃತ ಶಾಸನಗಳನ್ನು ಪ್ರಕಟಿಸಿದ್ದಾರೆ. ಇದೇ ಪತ್ರಿಕೆಯ ಪುಟ ೨೯೯ರ ಮೇಲಿನ "On some Sanskrit copper plates found in Belgaum collectorate" ಎಂಬ ಇವರ ಲೇಖನ ಗಮನಾರ್ಹವಾಗಿದೆ. ಈ ಪತ್ರಿಕೆಯ ೧೦ನೆಯ ಸಂಪುಟದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷೆಯ ಎಂಟು ಶಾಸನಗಳನ್ನು ವೆಂಕಟ ರಂಗೋ ಕಟ್ಟಿ, ಗಂಗಾಧರ ಮಡಿವಾಳೇಶ್ವರ ತೂರಮರಿಯವರ ಸಹಾಯ ಪಡೆದು ಪ್ರಕಟಿಸಿದ್ದಾರೆ.

೧೮೭೨ರಲ್ಲಿ ಡಾ. ಬರ್ಗೆಸ್‌ರ ಸಂಪಾದಕತ್ವದಲ್ಲಿ "Indian Antiquary" ಎಂಬ ಪತ್ರಿಕೆ ಅಸ್ತಿತ್ವದಲ್ಲಿ ಬಂದಿತು. ಇದರ ಒಂದನೆಯ ಸಂಪುಟದಿಂದಲೇ ರೈಸ್, ಫ್ಲೀಟ್. ಕಿಟೆಲ್‌ರ ಲೇಖನಗಳು ಪ್ರಾರಂಭವಾಗಿವೆ. ಇಲ್ಲಿ ರೈಸ್‌ರಿಗಿಂತ ಕಿಟೆಲ್, ಕಿಟೆಲ್‌ರಿಗಿಂತ ಫ್ಲೀಟ್ ಹೆಚ್ಚು ಲೇಖನ ನೀಡಿರುವರು. ಫ್ಲೀಟ್‌ರಂತೂ ನಾಲ್ಕನೆಯ ಸಂಪುಟದಿಂದ "Sanskrit and old Canarese inscriptions" ಎಂಬ ಶೀರ್ಷಿಕೆಯಲ್ಲಿ ಶಾಸನಗಳನ್ನು ಪ್ರಕಟಿಸಲು ಪ್ರಾರಂಭಿಸಿ, ಒಟ್ಟು ೧೯೬ ಶಾಸನಗಳನ್ನು ಬೆಳಕಿಗೆ ತಂದಿದ್ದಾರೆ. ಈ ಧಾರವಾಹಿಯು ಉತ್ತರ ಕರ್ನಾಟಕದ ಇತಿಹಾಸ ಬರೆಯುವವರಿಗೆ ಬೆಲೆಯುಳ್ಳ ಸಂಗ್ರಹವಾಗಿದೆ. ಈವರೆಗೆ ವಿದ್ವಾಂಸರಿಂದ ಅಲ್ಲಲ್ಲಿ ಪ್ರಕಟವಾದ ಶಾಸನಗಳನ್ನು ಸಕ್ರಮವಾಗಿ ಜೋಡಿಸಿ, ಕೆಲವು ಹೊಸ ಶಾಸನಗಳನ್ನು ಸೇರಿಸಿ ಡಾ. ಫ್ಲೀಟರು ಹೊಸದೊಂದು ಸಂಪುಟವನ್ನು ಹೊರತಂದರು, ೧೯೭೮ರಲ್ಲಿ. ಅದರ ಹೆಸರು "Pali Sankrit and old canarese inscriptions from Bombay Presidency and part of Madras presidency and Mysore." ಇಂಡಿಯಾ ಆಫೀಸಿನವರ ಅಲ್ಪ ಧನಸಹಾಯ ಕಾರಣವಾಗಿ ಇದರ ಒಂಬತ್ತು ಸಂಪುಟಗಳು ಮಾತ್ರ ಸಿದ್ಧವಾದವು. ಇವು: ೧. ಇಂಡಿಯಾ ಆಫೀಸ್ ಲಂಡನ್. ೨. ಬ್ರಿಟಿಷ್ ಮ್ಯೂಜಿಯಂ ಲಂಡನ್. ೩. ರಾಯಲ್ ಏಸಿಯಾಟಿಕ್ ಸೊಸೈಟಿ ಲಂಡನ್. ೪. ಮುಂಬೈ ಸೆಕ್ರೆಟರಿಯೆಟ್. ೫. ರಾಯಲ್ ಏಸಿಯಾಟಿಕ್ ಸೊಸೈಟಿಯ ಮುಂಬೈ ಶಾಖೆ. ೬. ಮಿ. ಗಿಬ್ಸ ೭. ಡಾ. ಬರ್ಗೆಸ್. ೮. ಡಾ. ಫ್ಲೀಟ್. ೯. ಬಾಡ್ಲಿಯನ್ ಲೈಬ್ರರಿ ಹೀಗೆ ಒಂಬತ್ತು ಕಡೆಗೆ ಉಳಿದವು.

೧೮೮೮ "Epigraphia Indica" ಎಂಬ ಪತ್ರಿಕೆ ಆರಂಭವಾಯಿತು. ಮಹತ್ವಪೂರ್ಣ ಪತ್ರಿಕೆಯಾದ ಇದರಲ್ಲಿ ರೈಸ್, ಕಿಟೆಲ್ ಒಂದೊಂದು ಶಾಸನಗಳನ್ನು ಪ್ರಕಟಿಸಿದ್ದಾರೆ. ಫ್ಲೀಟರು ಮಾತ್ರ "Some records of the Rastrakuta kings of malakhed" ಎಂಬ ಶಿರೋನಾಮೆಯಲ್ಲಿ ಸುಮಾರು ೨೦ ಶಾಸನಗಳನ್ನು ಸಂಪಾದಿಸಿದ್ದಾರೆ.

ಇದೇ ಸುಮಾರಿಗೆ ಕಾಶಿನಾಥ ತ್ರಿಂಬಕ್ ತೆಲಂಗ ಎಂಬವರು ಕದಂಬರ ಕೆಲವು ತಾಮ್ರ ಶಾಸನಗಳನ್ನು (JBBRAS XII P. ೩೦೦, ೧೮೭೬) ಪ್ರಕಟಿಸಿದ್ದಾರೆ.

ಈ ಪ್ರಸಂಗದಲ್ಲಿ ನೆನೆಯಬೇಕಾದ ಇನ್ನೊಬ್ಬ ವ್ಯಕ್ತಿ ಬಿ.ಎಲ್.ರೈಸ್. ಇವರಿಂದ ೧೮೭೯ರಲ್ಲಿ "Mysore Inscriprions" ಬೆಳಕು ಕಂಡಿತು. ಇದರಲ್ಲಿ ಮೇಜರ್ ಡಿಕ್ಸನ್ ಅವರ ಸಂಗ್ರಹವೂ ಸೇರಿಕೊಂಡಿದೆ. ೧೮೮೬ರಲ್ಲಿ ಇವರು ಪ್ರಕಟಿಸಿದ "Coorg Inscriptions"

ಎಂಬುದು "Epigraphia Carnatica" ದ ಪ್ರಥಮ ಸಂಪುಟ. (ಇದರ ಪರಿಷ್ಕೃತ ಆವೃತ್ತಿ ೧೯೧೪ರಲ್ಲಿ ಪ್ರಕಟವಾಯಿತು). ಇವರಿಂದ

EC II	-	ಶ್ರವಣಬೆಳ್ಗೊಳ (೧೮೮೯)
EC III-i	-	ಮೈಸೂರು ಜಿಲ್ಲೆ (೧೮೯೪)
EC IV-ii	-	ಮೈಸೂರು ಜಿಲ್ಲೆ (೧೮೯೮)
EC V-i	-	ಹಾಸನ ಜಿಲ್ಲೆ -ಪ್ರಸ್ತಾವನೆ, ರೋಮನ್ ಲಿಪಿಪಾಠ, ಭಾಷಾಂತರ (೧೯೦೨)
EC V-ii	-	ಹಾಸನ ಜಿಲ್ಲೆ - ಶಾಸನಗಳ ಕನ್ನಡ ಪಾಠ (೧೯೦೨)
EC VI	-	ಕಡೂರ ಜಿಲ್ಲೆ (೧೯೦೧)
EC VII-i	-	ಶಿವಮೊಗ್ಗಾ ಜಿಲ್ಲೆ (೧೯೦೨)
EC VIII-ii	-	ಶಿವಮೊಗ್ಗಾ ಜಿಲ್ಲೆ (೧೯೦೪)
EC IX	-	ಬೆಂಗಳೂರು ಜಿಲ್ಲೆ (೧೯೦೫)
EC X-i	-	ಕೋಲಾರ ಜಿಲ್ಲೆ-ಪ್ರಸ್ತಾವನೆ, ರೋಮನ್ ಲಿಪಿಪಾಠ, ಭಾಷಾಂತರ (೧೯೦೫)
XI-ii	-	ಕೋಲಾರ ಜಿಲ್ಲೆ- ಶಾಸನಗಳ ಕನ್ನಡ ಪಾಠ (೧೯೦೫)
EC XI	-	ಚಿತ್ರದುರ್ಗ ಜಿಲ್ಲೆ (೧೯೦೩)
EC XII	-	ತುಮಕೂರು ಜಿಲ್ಲೆ (೧೯೦೪)

ಸಂಪುಟಗಳು ಬೆಳಕುಕಂಡವು.[೧] ಮೈಸೂರಿನ ಪುರಾತತ್ವ ಇಲಾಖೆಯ ಪ್ರಥಮ ಡೈರೆಕ್ಟರರಾಗಿ ಹೊರತಂದ ಈ ಎಲ್ಲ ಸಂಪುಟಗಳ ಒಟ್ಟು ಶಾಸನ ಹೆಚ್ಚು ಕಡಿಮೆ ೮೮೬೯. ತುಂಗಭದ್ರೆಯ ದಕ್ಷಿಣದ ಸುಮಾರು ಎಲ್ಲ ಶಾಸನಗಳನ್ನು ಜಿಲ್ಲಾವಾರು ಹೊಂದಿಸಿದ ಇದೊಂದು ವ್ಯವಸ್ಥಿತ ಕಾರ್ಯ. ಪ್ರತಿಯೊಂದು ಸಂಪುಟಗಳು ದೀರ್ಘ ಪ್ರಸ್ತಾವನೆ, ಶಾಸನಗಳ ರೋಮನ್‌ಲಿಪಿ, ಇಂಗ್ಲೀಷ ಭಾಷಾಂತರ, ಮೂಲಪಾಠ -ಹೀಗೆ ನಾಲ್ಕು ವಿಭಾಗಗಳನ್ನೊಳಗೊಂಡಿವೆ.

ಒಟ್ಟಿನಲ್ಲಿ ಶಾಸನಕ್ಷೇತ್ರದಲ್ಲಿ ಕಿಟೆಲ್‌ರ ಸೇವೆ ಇಲ್ಲವೆನ್ನುವಷ್ಟು ಕಡಿಮೆ. ಫ್ಲೀಟರದು ಬಿಡಿ ಲೇಖನ ಹೆಚ್ಚು, ಗ್ರಂಥ ಕಡಿಮೆ. ರೈಸ್‌ರ ಸೇವೆಗಿಂತ ಫ್ಲೀಟರ ಸೇವೆ ವೈವಿಧ್ಯಮಯ; ಫ್ಲೀಟರ ಸೇವೆಗಿಂತ ರೈಸ್‌ರದು ವಿಸ್ತಾರಮಯ. ಫ್ಲೀಟರ್ ಕ್ಷೇತ್ರ ಹೆಚ್ಚಾಗಿ ತುಂಗಭದ್ರೆಯ ಉತ್ತರ ;ರೈಸ್‌ರದು ಕೇವಲ ತುಂಗಭದ್ರೆಯ ದಕ್ಷಿಣ. ರೈಸ್‌ರ ಅಭ್ಯಾಸದ ಫಲ "Mysore Gazetteer" ಮತ್ತು "Mysore and Coorg from inscriptions" ಗ್ರಂಥಗಳು. ಫ್ಲೀಟರ ಅಭ್ಯಾಸದ ಫಲ "The Dyanasties of the Kanarese Districts," (Bombay Gazetteer -I-ii) ಮತ್ತು "Epigraphy" (Imperial Gazetteer of India-II). ಒಟ್ಟಿನಲ್ಲಿ ಫ್ಲೀಟ್ ಮತ್ತು ರೈಸ್‌ರು ಕನ್ನಡ ಶಾಸನಪ್ರಪಂಚವನ್ನು ಬೆಳಗಿಸಿದ ಸೂರ್ಯಚಂದ್ರರು. ಇವರಲ್ಲದೆ ಮೋರೆಸ್, ಬಾರ್ನೆಟ್, ಕೀಲನಾರ್ಹ ಮೊದಲಾದವರು ಕೆಲವು ಶಾಸನಗಳನ್ನು ಪ್ರಕಟಿಸಿದ್ದರೂ ಈ ತರುವಾಯ ಕನ್ನಡ ಶಾಸನಪ್ರಪಂಚಕ್ಕೆ ಕ್ರೈಸ್ತ ವಿದ್ವಾಂಸರ ಸೇವೆ ಸಲ್ಲಲಿಲ್ಲವೆಂದೇ ಹೇಳಬೇಕು.

---

೧. ಈ ಸಂಪುಟಗಳ ಪುನರ್ಮುದ್ರಣ ಕಾರ್ಯವನ್ನು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ ಈಗ ಕೈಗೆತ್ತಿಕೊಂಡಿದೆ.

ಕನ್ನಡ ಶಾಸನಾಧ್ಯಯನ ಕ್ಷೇತ್ರದಲ್ಲಿ ಈ ಕ್ರೈಸ್ತರಂತೆ ಹಿಂದೆ ಹೇಳಿದ ಭಾವುದಾಜಿ, ತೆಲಂಗರಲ್ಲದೆ ಆರ್. ರಾಮಾರಾವ್, ಎಸ್.ಸಿ. ನಂದಿಮಠ, ರಾಜಪುರೋಹಿತ, ಕೆ.ಜಿ. ಕುಂದಣಗಾರ, ಪಂಚಮುಖಿ, ಲಕ್ಷ್ಮೀನಾರಾಯಣರಾಯ, ಪಿ.ಬಿ.ದೇಸಾಯಿ ಮತ್ತು ಜಿ.ಎಸ್. ಗಾಯಿ ಮೊದಲಾದ ಭಾರತೀಯನ್ನು ಹೆಸರಿಸಬೇಕಾಗುತ್ತದೆ. ಇವರಲ್ಲಿ ಎದ್ದುಕಾಣುವ ವ್ಯಕ್ತಿ ಆರ್.ನರಸಿಂಹಾಚಾರ್. ೧೮೯೯ರಂದು ಬಿ.ಎಲ್. ರೈಸ್‌ರ ಅಸಿಸ್ಟಂಟರೆಂದು ನೇಮಕಗೊಂಡು ೭ ವರ್ಷ ಸೇವೆ ಸಲ್ಲಿಸಿದರು. ರೈಸ್‌ರ ತರುವಾಯ ೧೯೦೬ರಲ್ಲಿ ಡೈರೆಕ್ಟರ್ ಪದವಿಗೇರಿ ೧೯೨೨ರಂದು ನಿವೃತ್ತರಾದರು. ವ್ಯಾಕರಣ, ಕಾವ್ಯ, ಛಂದಸ್ಸು, ಶಾಸನ, ಇತಿಹಾಸಗಳಲ್ಲಿ ಬಲ್ಲಿದರಾದ ಇವರು 'Mysore Archaeological Report' ಹೆಸರಿನಲ್ಲಿ ೧೬ ವರ್ಷಗಳ ವರದಿಗಳನ್ನು ಪ್ರಕಟಿಸಿದರು (೧೯೦೬ -೧೯೨೨). ಬಿ.ಎಲ್. ರೈಸ್ ಪ್ರಕಟಸಿದ EC II ಇವರಿಂದ ಪರಿಷ್ಕರಣಗೊಂಡಿತು. ಶಾಸನ ಪದ್ಯಮಂಜರಿ, ಗಂಗರ ಚರಿತ್ರೆ, ಬೇಲೂರ ಸೋಮನಾಥಪುರ ಮತ್ತು ದೊಡ್ಡಗದ್ದವಳ್ಳಿಯ ಹೊಯ್ಸಳದೇವಸ್ಥಾನ ಇವು ಇವರ ಕೃತಿಗಳು.

ನರಸಿಂಹಾಚಾರ್ ಅವರ ತರುವಾಯ ಆ ಸ್ಥಾನಕ್ಕೆ ಬಂದವರು ಆರ್. ಶ್ಯಾಮಾಶಾಸ್ತ್ರಿಗಳು. ಬಳಿಕ ಬಂದವರು ಡಾ. ಎಂ.ಎಚ್. ಕೃಷ್ಣ. 'ಎಪಿಗ್ರಾಫಿಯ ಕರ್ನಾಟಿಕ' ಸಂಪಾದನೆಯ ಕಾರ್ಯವನ್ನು ಮುಂದುವರಿಸಿದ ಇವರಿಂದ

EC XIII - A-k ವರೆಗೆ ಪದಸೂಚೀ (೧೯೩೪)

EC XIV - ಮೈಸೂರು ಜಿಲ್ಲೆಯ ಶಾಸನಗಳ ಅನುಬಂಧ (೧೯೪೩)

EC XV - ಹಾಸನ ಜಿಲ್ಲೆಯ ಶಾಸನಗಳ ಅನುಬಂಧ (೧೯೪೩)

ಸಂಪುಟಗಳು ಪ್ರಕಟಗೊಂಡವು. ಎಂ. ಎಚ್. ಕೃಷ್ಣರ ತರುವಾಯ ಡೈರೆಕ್ಟರರಾಗಿ ಬಂದವರು ಶ್ರೀ ನೀಲಕಂಠಶಾಸ್ತ್ರಿಗಳು. ಇವರ ಕಾಲಾವಧಿಯಲ್ಲಿ EC XVI- ತುಮಕೂರು ಜಿಲ್ಲೆಯ ಶಾಸನಗಳ ಅನುಬಂಧ (೧೯೫೬) ಪ್ರಕಟವಾಯಿತು. ಆಮೇಲೆ ಬಂದ ಶ್ರೀ ಶೇಷಾದ್ರಿ ಅವರಿಂದ EC VII & VIII (ಶಿವಮೊಗ್ಗ ಜಿಲ್ಲೆಯ ಶಾಸನಗಳ ಅನುಬಂಧ ೧೯೫೫), EC XVII (ಕೋಲಾರ ಜಿಲ್ಲೆಯ ಶಾಸನಗಳ ಅನುಬಂಧ-೧೯೬೫) ಪ್ರಕಟಗೊಂಡವು.

"Archaeological Survey of India" ಇಲಾಖೆಯವರು ದಕ್ಷಿಣ ಭಾರತದ ಶಾಸನಗಳನ್ನು "South Indian Inscriptions" ಹೆಸರಿನಿಂದ ೨೦ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಎಪಿಗ್ರಾಫಿಯಾ ಕರ್ನಾಟಿಕಾಗಳಲ್ಲಿ ಪ್ರಾದೇಶಿಕ ವರ್ಗೀಕರಣವಿದ್ದರೆ, ಕಾಲಕ್ರಮ ವರ್ಗೀಕರಣ ಇವುಗಳ ವೈಶಿಷ್ಟ್ಯ. ದಕ್ಷಿಣ ಭಾರತದ ಎಲ್ಲ ಭಾಷೆಗಳ ಶಾಸನಗಳನ್ನೊಳಗೊಂಡ ಈ ಮಾಲೆಯ ಕೆಲವು ಸಂಪುಟಗಳಲ್ಲಿ ಒಂದಿಷ್ಟು ಕನ್ನಡ ಶಾಸನಗಳನ್ನು ಸೇರಿಸಿದ್ದಾರೆ; ಕೆಲವು ಸಂಪುಟಗಳು ಕೇವಲ ಕನ್ನಡಕ್ಕೆ ಮೀಸಲಾಗಿವೆ. ಅವು :

೧. SII. IV (೧೯೨೩)ಎಚ್.ಕೃಷ್ಣಶಾಸ್ತ್ರಿ.
ಹೊಸಪೇಟ, ಚಂದ್ರಗಿರಿ, ತಾಡಪತ್ರಿ, ಗುಂಟೂರ ತಾಲೂಕಿನ ೨೭ ಕನ್ನಡ ಶಾಸನಗಳಿವೆ.

೨. SII. V. (೧೯೨೬)ಎಚ್. ಕೃಷ್ಣಶಾಸ್ತ್ರಿ.
ಸವದತ್ತಿ ಮತ್ತು ಕಂಬತ್ತೂರ ತಾಲೂಕಿನ ೮ ಕನ್ನಡ ಶಾಸನಗಳಿವೆ.

೩. SII. VI (೧೯೨೮)ಕೆ.ವ್ಹಿ. ಸುಬ್ರಹ್ಮಣ್ಯ ಅಯ್ಯರ.
ಬಾಪಟ್ಲಾ, ಮಡಕಶಿರಾ, ಹರಪನಹಳ್ಳಿ ತಾಲೂಕಿನ ೧೭ ಕನ್ನಡ ಶಾಸನಗಳಿವೆ.

೪. SII. VII(೧೯೩೩)ಕೆ.ವ್ಹಿ. ಸುಬ್ರಹ್ಮಣ್ಯ ಅಯ್ಯರ.
ವಾಂಡಿವಾಶ ಮಂಗಳೂರು, ಕಾರ್ಕಳ, ಗೂಟಿ, ಉಡುಪಿ, ಧರ್ಮಪುರಿ, ಪೆನುಕೊಂಡ, ಹೈದರಾಬಾದ್, ಕುಡ್ಡಲೋರ ತಾಲೂಕುಗಳ ೨೧೪ ಕನ್ನಡ ಶಾಸನಗಳಿವೆ.

೫. SII. VIII (೧೯೩೭) ಕೆ.ವ್ಹಿ. ಸುಬ್ರಹ್ಮಣ್ಯ ಅಯ್ಯರ.
ಗೂಟಿ ತಾಲೂಕಿನ ೧೪ ಕನ್ನಡ ಶಾಸನಗಳಿವೆ.

೬. SII. IX-i (೧೯೩೯)ಆರ್. ಶಾಮಾಶಾಸ್ತ್ರಿ ಮತ್ತು ಎನ್. ಲಕ್ಷ್ಮೀನಾರಾಯಣರಾಯ.
SII. IX-ii (೧೯೪೧) ಆರ್. ಶಾಮಾಶಾಸ್ತ್ರಿ.
ಈ ಎರಡೂ ಬಳ್ಳಾರಿ ಜಿಲ್ಲೆಯ ಕನ್ನಡ ಶಾಸನಗಳನ್ನೊಳಗೊಂಡ ಸಂಪುಟಗಳು.

೭. SII. XI-i (೧೯೪೦) ಪಂಚಮುಖಿ ಮತ್ತು ಲಕ್ಷ್ಮೀನಾರಾಯಣರಾಯ.
SII. XI-ii (೧೯೫೩) ಲಕ್ಷ್ಮೀನಾರಾಯಣರಾಯ
ಮುಂಬೈ ಕರ್ನಾಟಕ ಪ್ರದೇಶದ ಕನ್ನಡ ಶಾಸನಗಳನ್ನೊಳಗೊಂಡ ಈ ಎರಡು ಸಂಪುಟಗಳನ್ನು Bombay Karnataka inscriptions Vol. I and II ಎಂದು ಕರೆದಿದ್ದಾರೆ.

೮. SII. XV (೧೯೬೪)ಪಿ.ಬಿ.ದೇಸಾಯಿ ಕೇವಲ ಕನ್ನಡ ಶಾಸನಗಳಗಳನ್ನೊಳಗೊಂಡ ಸಂಪುಟ.

೯. SII. XVII (೧೯೬೪)ಕೆ.ಜಿ. ಕೃಷ್ಣನ್
ಹಡಗಲಿ, ಬಳ್ಳಾರಿ, ಕುಡತಿನಿ, ಹರಪನಹಳ್ಳಿ, ಜಿಂಜಿ ತಾಲೂಕಿನ ೧೪ ಕನ್ನಡ ಶಾಸನಗಳು.

೧೦. SII. XX (೧೯೬೫)ಜಿ.ಎಸ್.ಗಾಯಿ.
ಕೇವಲ ಕನ್ನಡ ಶಾಸನಗಳನ್ನೊಳಗೊಂಡ ಸಂಪುಟ.

ಹೀಗೆ ಈವರೆಗೆ ಹೊರಬಂದ ಈ ಸಂಪುಟಗಳು ಉತ್ತರ ಕರ್ನಾಟಕದ ಇತಿಹಾಸ ರಚನೆಗೆ ಹೆಚ್ಚು ಉಪಯುಕ್ತವೆನಿಸಿವೆ.

೧೯೩೯ರಂದು ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆ (Kannada Research Institutre) ಸ್ಥಾಪನೆಗೊಂಡಿತು. ಇದರ ಮೂಲಕ ಈ ವರೆಗೆ ಆರು ಸಂಪುಟಗಳು ಹೊರಬಂದಿವೆ. ಮೊದಲಿನ ನಾಲ್ಕು ಸಂಪುಟಗಳ ಸಂಪಾದಕರು ಶ್ರೀ ಪಂಚಮುಖಿ, (ನಾಲ್ಕೂ ಸಂಪುಟಗಳಲ್ಲಿ ಅಚ್ಚಾದ ಶಾಸನಗಳು ೧೮೩ ಮಾತ್ರ) ಐದನೆಯ ಹಾಗೂ ಆರನೆಯ ಸಂಪುಟಗಳ ಸಂಪಾದಕರು. ಡಾ.ಬಿ.ಆರ್.ಗೋಪಾಲ.

ಹೈದರಾಬಾದ ಪುರಾತತ್ವ ಇಲಾಖೆಯವರು ಆಗಾಗ ಕನ್ನಡ ಶಾಸನಗಳನ್ನು ಪ್ರಕಟಿಸುತ್ತಿದ್ದಾರೆ. ಇವು ಗಾತ್ರದಲ್ಲಿ ಸಣ್ಣ ಸಂಪುಟಗಳು. "ತೆಲಂಗಾಣ ಶಾಸನಮುಲು" ಹೆಸರಿನ ಎರಡು ಸಂಪುಟಗಳಲ್ಲಿ ಕನ್ನಡ ಶಾಸನಗಳಿವೆ.

ವೈಯಕ್ತಿಕ ಸಂಪುಟಗಳಲ್ಲಿ ಪ್ರೊ. ಕುಂದಣಗಾರರ ಅವರರ "Inscriptions in Northern Karnataka and Kolhapur State" ಮತ್ತು ಪಿ.ಬಿ. ದೇಸಾಯಿ ಅವರ "ಶಾಸನ ಪರಿಚಯ" ಮತ್ತು ೫೩ ಶಾಸನಗಳನ್ನೊಳಗೊಂಡ "Jainism in South India some Laina and Epigraps" ಮುಖ್ಯವಾದವು. ಇತ್ತೀಚೆಗೆ ಡಾ. ಶ್ರೀನಿವಾಸ ರಿತ್ತಿಯವರ "Inscriptions from Nanded Distrist" ಪ್ರಕಟವಾಗಿದೆ. ಡಾ.

ಶೆಟ್ಟರ್ ಅವರು ತನ್ನ "Sravanabelgol Monuments" ಪ್ರಬಂಧದ ಅನುಬಂಧದಲ್ಲಿ ಬೆಳ್ಗೊಳಕ್ಕೆ ಸಂಬಂಧಿಸಿದ ೩೬ ಹೊಸ ಶಾಸನಗಳನ್ನು ಶೋಧಿಸಿಕೊಟ್ಟಿದ್ದಾರೆ.

ಇದು ಕನ್ನಡ ಶಾಸನಗಳ ಪ್ರಕಟನ ಕಾರ್ಯ ಇಂದಿನ ವರೆಗೆ ನಡೆದುಬಂದ ದಾರಿ. ಹಳೆಯ ಮೈಸೂರು ಪ್ರದೇಶದಲ್ಲಿ ಬಹುಮಟ್ಟಿಗೆ ತೃಪ್ತಿಕರವಾಗಿ ನಡೆದ ಈ ಶಾಸನಾನ್ವೇಷಣ ಕಾರ್ಯ ಉತ್ತರ ಕರ್ನಾಟಕದಲ್ಲಿ ಕುಂಟುತ್ತ ಸಾಗಿದೆ. ಹೊರ ನಾಡುಗಳಲ್ಲಿಯ ಪರಿವೀಕ್ಷಣಾಕಾರ್ಯವಂತೂ ತೀರ ಅಲಕ್ಷಿಸಲ್ಪಟ್ಟಿದೆ. ಶ್ರದ್ಧೆಯ ಸಂಶೋಧನೆ ನಡೆದರೆ ಮಾತ್ರ ನಮ್ಮ ಶಾಸನ ಪ್ರಪಂಚದ ಪ್ರಕಟನ ಕಾರ್ಯ ಪೂರ್ಣಗೊಳ್ಳುತ್ತದೆ.

ಹೀಗೆ ಪುಸ್ತಕರೂಪದಲ್ಲಲ್ಲದೆ ಪತ್ರಿಕೆಗಳ ಮೂಲಕವೂ ಹಲವು ಪ್ರಮುಖ ಶಾಸನಗಳು ಪ್ರಕಟಗೊಂಡಿವೆ. ಬಸವಣ್ಣನವರನ್ನು ಕುರಿತ ಅರ್ಜುನವಾಡ ಶಾಸನ, ಪಂಪನಿಗೆ ಸಂಬಂಧಿಸಿದ ಗಂಗಾಧರಂ ಶಾಸನ, ಹುಳಿಯಮೇಶ್ವರ ಚಿಕ್ಕಯ್ಯನನ್ನು ಕುರಿತ ದೇವರಗುಡಿ ಶಾಸನ ಮೊದಲಾದವುಗಳನ್ನು ಇಲ್ಲಿ ಹೆಸರಿಸಬಹುದು. ಹೀಗೆ ಸುಮಾರು ಒಂದು ಶತಮಾನದಿಂದ ನಡೆದರೂ ನಮ್ಮ ಶಾಸನ ಪರಿವೀಕ್ಷಣಾ ಕಾರ್ಯ ಸಂಪೂರ್ಣವಾಗಿಲ್ಲ, ಸಮರ್ಪಕವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

* * *

ಶಾಸನಗಳ ಪ್ರಕಟನೆಯಷ್ಟೇ ಮುಖ್ಯವಾದುದು ಅವುಗಳಲ್ಲಿ ಅಡಕವಾಗಿರುವ ವಿಷಯಗಳ ಅಭ್ಯಾಸ. ಪ್ರತ್ಯಕ್ಷ-ಪರೋಕ್ಷವಾಗಿ, ಲೇಖನ -ಗ್ರಂಥರೂಪದಲ್ಲಿ ಕೆಲವರು ಈ ಕೃಷಿಗೆಯ್ದಿರುವರು, ಅಲ್ಪ ಪ್ರಮಾಣದಲ್ಲಿ. ಇವುಗಳಲ್ಲಿ ಹೆಸರಿಸಬೇಕಾದ ಕೃತಿಗಳೆಂದರೆ ಎ.ಎನ್. ನರಸಿಂಹಯ್ಯನವರ A Grammar of the Kanarese Inscriptions", ಜಿ.ಎಸ್.ಗಾಯಿಯವರ "Historical Grammar of old Kannada", ಕೆ. ಕುಶಾಲಪ್ಪಗೌಡರ "A Grammar of old Kannada", ಮತ್ತು ಚಿದಾನಂದಮೂರ್ತಿಗಳ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'. ಫ್ಲೀಟ್, ರೈಸ್ ರಾಮರಾವ್, ನಾ.ಭಾ. ಶಾಸ್ತ್ರಿ, ಪಿ.ಬಿ. ದೇಸಾಯಿ, ನೀಲಕಂಠ ಶಾಸ್ತ್ರಿ, ಡಾ. ಆರ್.ಎನ್. ಗುರವ. ಬಿ.ಆರ್ ಗೋಪಾಲ, ಶ್ರೀನಿವಾಸ ರಿತ್ತಿ , ಕೊ. ವ್ಯಾ. ರಮೇಶ ಮೊದಲಾದ ವಿದ್ವಾಂಸರು ಶಾಸನೋಕ್ತ ಕೆಲವು ಸಮಸ್ಯೆಗಳನ್ನು, ಪರಿಭಾಷೆಗಳನ್ನು ಕುರಿತು ಆಗಾಗ ಲೇಖನ ಬರೆದಿದ್ದಾರೆ. ಹೀಗಿದ್ದರೂ ಕರ್ನಾಟಕದಲ್ಲಿ ಈ ಕೆಲಸ ಕಾಲಿಗೆ ಕಲ್ಲುಕಟ್ಟಿಕೊಂಡು ಸಾಗಿದೆಯೆಂದೇ ಹೇಳಬೇಕು.

■■

ಆಕರ : ಮಾರ್ಗ ಸಂಪುಟ-೨

೫೪

ಕಾವ್ಯದಲ್ಲಿ ಬಾಚರಸನ ವಚನ - ಶಾಸನದಲ್ಲಿ ಸಿದ್ಧರಾಮನ ವಚನ

೧೨ನೆಯ ಶತಮಾನದ ತರುವಾಯ ಲಿಂಗಾಯತಸಾಹಿತ್ಯವು ವಚನಗಳ ಪ್ರತ್ಯಕ್ಷ-ಪರೋಕ್ಷ ಪ್ರಭಾವಕ್ಕೆ ಒಳಗಾಗುತ್ತ ಬೆಳೆದಿದೆ. ಸ್ತ್ರೀಯಾದ ಮಹಾದೇವಿಯಕ್ಕ, ಅಸ್ಪೃಶ್ಯನಾದ ಮಾದಾರ ಚೆನ್ನಯ್ಯ ಕಥಾನಾಯಕರಾದುದು ವಚನ ಚಳುವಳಿಯ ಒಂದು ಬಗೆಯ ಪ್ರಭಾವವೆನಿಸಿದರೆ, ಕಾವ್ಯಗಳಲ್ಲಿ ವಚನ-ವಚನವಾಕ್ಯ-ವಚನಭಾಷೆ ಬಳಕೆಯಾದುದು ಇನ್ನೊಂದು ಬಗೆಯ ಪ್ರಭಾವವೆನಿಸಿದೆ. ಶಾಸನಗಳಲ್ಲಿಯೂ ಇಂಥ ಪ್ರಭಾವ ಆಗಾಗ ಮಿಂಚಿದೆ. ಈ ಹಿನ್ನೆಲೆಯಲ್ಲಿ ಸೊಡ್ಡಳ ಬಾಚರಸನ ವಚನನನ್ನು ರಾಘವಾಂಕನ 'ಸಿದ್ಧರಾಮ ಚರಿತೆ'ಯಲ್ಲಿ, ಸಿದ್ಧರಾಮನ ವಚನವನ್ನು ಶಾಸನದಲ್ಲಿ ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

ರಾಘವಾಂಕ ಕನ್ನಡದ ಮಹತ್ವದ ಕವಿ. ಸಿದ್ಧರಾಮ ಚರಿತೆಯ ಅಲ್ಲಮ-ಸಿದ್ಧರಾಮರ ಸಂದರ್ಶನ ಸಂದರ್ಭದಲ್ಲಿ ವಚನ ಸಿದ್ಧಾಂತವನ್ನು ಬಳಸಿದ ಇವನು, ಸೊಡ್ಡಳ ಬಾಚರಸ-ಸಿದ್ಧರಾಮರ ಸಂದರ್ಶನ ಸಂದರ್ಭದಲ್ಲಿ ನೇರವಾಗಿ ವಚನವನ್ನೇ ಬಳಸಿದ್ದಾನೆ.

ಶರಣ ಸಮುದಾಯದಲ್ಲಿ ಸೊಡ್ಡಳ ಬಾಚರಸ ಗಮನಾರ್ಹ ವ್ಯಕ್ತಿಯೆನಿಸಿದ್ದಾನೆ. ಮಂಗಳವಾಡಕ್ಕೆ ಹೋದ ಹೊಸದರಲ್ಲಿ ಬಸವಣ್ಣನಿಗೆ ಈತ ಆಶ್ರಯ ನೀಡಿದುದು ಇದಕ್ಕೆ ಉದಾಹರಣೆಯಾಗಿದೆ. ಇದೇ ರೀತಿ ಸಿದ್ಧರಾಮನ ವಿಷಯದಲ್ಲಿಯೂ ಈತ ಗಮನಾರ್ಹ ಪಾತ್ರವಹಿಸಿದ ಒಂದು ಘಟನೆ ಸಿದ್ಧರಾಮ ಚಾರಿತ್ರದ ೯ನೆಯ ಸಂಧಿಯಲ್ಲಿ ಹೀಗೆ ಕಂಡುಬರುತ್ತದೆ :

ಕಲ್ಯಾಣಕ್ರಾಂತಿ ಪ್ರಸಂಗದಲ್ಲಿ ಭೂಪ ಬಿಜ್ಜಳ ಅಳಿಯುತ್ತಾನೆ. ಆಗ ಅವನ ತಮ್ಮ ಕರ್ಣದೇವ ಪಟ್ಟವೇರ ಬಯಸಿ, ಅದನ್ನು ಪೂರೈಸಿಕೊಡಲು ಆಗಮಿಸಬೇಕೆಂದು ಸಿದ್ಧರಾಮನಲ್ಲಿಗೆ ದೂತರನ್ನು ಕಳಿಸುತ್ತಾನೆ. ಸೊಲ್ಲಾಪುರಕ್ಕೆ ಬಂದ ದೂತರ ಬಿನ್ನಹವನ್ನು ಸಿದ್ಧರಾಮನು ನಿರಾಕರಿಸಿದನಾದರೂ ಅವರ ಒತ್ತಾಯಕ್ಕೆ ಒಳಗಾಗಿ ಒಪ್ಪಿಗೆ ಸೂಚಿಸುತ್ತಾನೆ. ದೂತರು ದಂಡಿಗೆಯಲ್ಲಿ ಕುಳ್ಳಿರಿಸಿಕೊಂಡು ರಾಜಧಾನಿ ಕಲ್ಯಾಣಕ್ಕೆ ಬಂದು, ಅರಸನ ಮುಂದೆ ದಂಡಿಗೆಯ ತೆರೆ ಸರಿಸಲಾಗಿ, ಒಳಗೆ ಸಿದ್ಧರಾಮನಿರಲಿಲ್ಲ. ಎರಡನೆಯ ಸಲ ಪ್ರಯತ್ನಿಸಿದರೂ, ದಂಡಿಗೆಯಲ್ಲಿ ಸಿದ್ಧರಾಮ ಕಾಣಿಸಲಿಲ್ಲ. ಎಲ್ಲರೂ ಬೆರಗಾಗಿ ನಿಲ್ಲಲು ಕರಣಶಾಲೆಯ ಸೊಡ್ಡಳ ಬಾಚರಸನು ಬಂದು "ಏಂ ನಿರುಪಾಧಿಕ ಜ್ಯೋತಿ ವಶವಹುದೇ? ವಾಗ್ಜಾಲದಾ ಹಿರಿಯರೆಂದು ಭಾವಿಸುವರೇ? ಗುರು ದೈವ ಶರಧಿಕರಿಗಳನು ಬಲುಹಿಂ ನೀಲಿಸಬಹುದೇ? (೯-೧೧) ಎಂದು ನುಡಿಯಲು ಕರ್ಣದೇವ"ನೀವೇ ಹೋಗಿ ಕರೆ ತರುವುದು" ಎಂದು ಬಿನ್ನವಿಸಿದ ಮೇರೆಗೆ ಸೊಡ್ಡಳ ಬಾಚರಸ ಸೊಲ್ಲಾಪುರಕ್ಕೆ ಹೋಗಿ "ವಿಭೂತಿ ಕಾಣ್ಕೆ" ಇಟ್ಟು ನಮಸ್ಕರಿಸಿ, ಸಿದ್ಧರಾಮನ ದಿವ್ಯವ್ಯಕ್ತಿತ್ವಕ್ಕೆ ಬೆರಗಾಗಿ

. . . . ಉಂಡುಂಡು ಜರೆವವಂ ಯೋಗಿಯೇ?
ಬಾಲೆಯರ ಕಂಡೆಳಸುತಿರ್ಪ ಯೋಗಿಯ ಮೂಗ
ಬೀಳಲಿರಿವ ಶಿವಂ ಯೋಗಿಪಂಚಾನನಂ ಸೊಡ್ಡಳಂ " (೯- ೧೮)

ಎಂದು ಸ್ತುತಿಸಿದನು. ಈ ನುಡಿ ಗಡಣ, ಭಾಷಾಲಯ ಇತ್ಯಾದಿಗಳನ್ನು ಓದುತ್ತಲೇ ಇದು ವಚನವೆಂದು ಯಾರಾದರೂ ಪರಿಭಾವಿಸುತ್ತಾರೆ. ಈ ಷಟ್ಪದಿಯಲ್ಲಿ ಸೊಡ್ಡಳ ಬಾಚರಸನ ವಚನವೊಂದು (೧೧) ಅಡಕವಾಗಿದ್ದು, ಅದು ಹೀಗಿದೆ:

ಉಂಡುಂಡು ಜರಿದವನು ಯೋಗಿಯೇ?
ಅಶನಕ್ಕೆ ಅಳುವವನು ಯೋಗಿಯೇ?
ವ್ಯಸನಕ್ಕೆ ಮರುಗುವವ[ನು] ಯೋಗಿಯೇ?
ಆಧಿ ವ್ಯಾಧಿಯುಳ್ಳವ[ನು] ಯೋಗಿಯೇ?
ಯೋಗಗಿಗಳೆಂದಡೆ ಮೂಗನಾಗಳೆ ಕೊಯಿವೆ,
ಯೋಗಿಗಳ ಯೋಗಿ ಶಿವಯೋಗಿ
ಸೊಡ್ಡಳಾ, ಸಿದ್ಧರಾಮನೊಬ್ಬನೇ ಶಿವಯೋಗಿ.

ಇದನ್ನು ನೋಡಿದರೆ ರಾಘವಾಂಕ ವಚನಸಾಹಿತ್ಯವನ್ನು ಅಭ್ಯಸಿಸಿ, ಸಿದ್ಧರಾಮ ಚರಿತೆ ಸೃಷ್ಟಿಸಿರುವನೆನಿಸುತ್ತದೆ. ಇಂಥ ಕೃತಿ ಬರೆಯಬೇಕಾದರೆ ಕಥಾನಾಯಕನ ಪರಿಸರ, ಸಾಹಿತ್ಯ ಇತ್ಯಾದಿಗಳ ಅಭ್ಯಾಸ ಅಗತ್ಯ. ರಾಘವಾಂಕ ಸೊಲ್ಲಾಪುರಕ್ಕೆ ಹೋಗಿ ಕ್ಷೇತ್ರಕಾರ್ಯ ಪೂರೈಸಿ ಸಿದ್ಧರಾಮ ಚಾರಿತ್ರ ಬರೆದುದಕ್ಕೆ ಹತ್ತಾರು ನಿದರ್ಶನಗಳು ಆ ಕಾವ್ಯದಲ್ಲಿ ಸಿಗುತ್ತವೆ. ವಚನಸಾಹಿತ್ಯವನ್ನೂ ಅಭ್ಯಸಿಸಿದುದಕ್ಕೆ ಮೇಲಿನ ಪ್ರಸಂಗ ನೇರ ಸಾಕ್ಷಿಯಾಗಿದೆ.

* * *

ಕಳೆದ ಅನೇಕ ವರ್ಷಗಳಿಂದ ಸೊಲ್ಲಾಪುರದ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ನೀಡಿದ ದಾನವನ್ನು ಕುರಿತ ಶಾಸನಗಳ ಶೋಧಕಾರ್ಯ ವರ್ಧಿಸುತ್ತ ನಡೆದು, ಈ ಸಂಖ್ಯೆ ಈಗ ಸುಮಾರು ೩೦ಕ್ಕೆ ಮುಟ್ಟಿದೆ. ಕರ್ನಾಟಕದ ಶಾಸನಗಳಲ್ಲಿ ೮-೧೦ ರೀತಿಯ ಫಲಶ್ರುತಿ ಪದ್ಯ ಕಂಡುಬರುತ್ತದೆ. ಸಾಮಾನ್ಯವಾಗಿ ಇವೇ ಪದ್ಯಗಳು ಶಾಸನಗಳಲ್ಲಿ ಮತ್ತೆ ಮತ್ತೆ ಬಳಕೆಯಾಗಿವೆ. ಆದರೆ ಕಪಿಲಸಿದ್ಧಮಲ್ಲಿಕಾರ್ಜುನನನ್ನು ಕುರಿತು ಹುಟ್ಟಿದ ಸುಮಾರು ೩೦ ಶಾಸನಗಳಲ್ಲಿ ಮಾತ್ರ ಬೇರೆ ರೀತಿಯ ಎರಡು ಫಲಶ್ರುತಿ ಪದ್ಯಗಳು ತೋರಿಬರುತ್ತದೆ. ಈ ಎರಡೂ ಪದ್ಯಗಳ ಕೊನೆಗೆ ಸಾಮಾನ್ಯವಾಗಿ "ಯೆಂದುದು ಶ್ರೀ ಸಿದ್ಧರಾಮನಾಥ ದೇವರ ವಚನ" ಎಂಬ ವಾಕ್ಯ ಕಂಡುಬರುತ್ತದೆ. ಇಲ್ಲಿಯ 'ವಚನ' ಎಂಬ ಶಬ್ದವನ್ನು ನೋಡಿ, ಇವು ಸಿದ್ಧರಾಮನ ವಚನಗಳಾಗಿರಬಹುದೆಂದು ನಾನೂ ಒಳಗೊಂಡಂತೆ ಬೇರೆ ವಿದ್ವಾಂಸರೂ ಅನುಮಾನಿಸಿದ್ದೆವು. ಆದರೆ ವಚನ ಹಸ್ತಪ್ರತಿಗಳಲ್ಲಿ ಈ ರಚನೆ ಕಂಡುಬಂದಿರಲಿಲ್ಲ.

ಇತ್ತೀಚೆ ತಿಪಟೂರು ತಾಲೂಕಿನ ಹೊನ್ನವಳ್ಳಿ ಕರಿಸಿದ್ಧದೇವರ ಮಠದಲ್ಲಿ ೬೦೦೦ ವಚನಗಳ ಹಸ್ತಪ್ರತಿ ಕಟ್ಟು ಲಭ್ಯವಾಗಿದೆ. ಇವರಲ್ಲಿ ಸಿದ್ಧರಾಮನ ೧೩೨೫ ವಚನ (ಸ್ವರವಚನ ಸೇರಿ)ಗಳಿದ್ದು, ಇವುಗಳಲ್ಲಿ ಅನೇಕ ಹೊಸ ವಚನಗಳಿವೆ. ಅಂಥ ಒಂದು ವಚನ (೨೮) ಹೀಗಿದೆ:

ಓಂ ಜಯ ಪರಮೇಶ್ವರಂ ಪರಮಾತ್ಮಂ
ಈಶ್ವರನುರ್ವಿಪರ್ವಿ ಅಡಗಿಕೊಂಡಿಪ್ಪನು.

ಒಬ್ಬ್ರಣಿಗೆಯಾಗಿ ಯೋಗಿಗಳ ಮನದ
ಸಂಸಾರ ತೆಪ್ಪದೊಳಗೆ ಆನೀಗ ಅದ್ದು ಅಳಲುತಿಪ್ಪೆನಯ್ಯಾ.
ಬೇಗ ಬಾರಾ ಬಾರಯ್ಯ ಬಾರಾ
ವಜ್ರಲೇಪದಲ್ಲಿ ಬಿದ್ದಿದ್ದೇನೆ.
ಬೇಗ ಬಂದೆತ್ತಯ್ಯಾ, ಎತ್ತಯ್ಯ ಕಪಿಲಸಿದ್ಧ ಮಲ್ಲಿನಾಥಯ್ಯಾ ||*

ಮೂರನೆಯ ಪಾದದ ಬಳಿಕ ಈ ವಚನದ ಅರ್ಥಗತಿ ಬೇರೆ ದಾರಿ ಹಿಡಿದಿರುವ ಕಾರಣ, ಲಿಪಿಕಾರನ ಮರವೆಯಿಂದಾಗಿ ಎರಡು ವಚನಗಳು ಇಲ್ಲಿ ಸೇರಿಕೊಂಡಂತೆ ಕಾಣುತ್ತದೆ. ಅದೇನೇ ಇರಲಿ, ಈ ವಚನವನ್ನು ಹೋಲುವ ಸಿದ್ಧರಾಮನ ಶಾಸನೋಕ್ತ ಒಂದು ಫಲಶ್ರುತಿ ಪಠ್ಯ ಹೀಗಿದೆ:

೧. ಸ್ವಸ್ತಿ ಶ್ರೀ ಓಂ ಜಯ ಪರಮಾತ್ಮ
೨. ಈಶ್ವರನುರ್ವ್ವೀ ಪರ್ವಿಯಡಂಗಿಕೊಂಡಿಪ್ಪನು.
೩. ಓಬ್ಬ್ರಂಗಣಿಗೆಯಾಗಿ ಯೋಗಿಗಳ ಮನದ
೪. ಕೊನೆಯ ಜ್ಯೋತೀಶ್ವರನುಂ ವೃಷಭನ
೫. ರೂಪಾಗಿ ಯಜಮಾನನುಂ ಆಚಾರ್ಯನುಂ
೬. ತಾನೆಯಾಗಿ ಯೋಗಾದಿ ಸಂಪನ್ನ ಖಿಳೆಯಂಗಳೆಲ್ಲವಂ
೭. ಸಂಪಾದಿಸಿ ಯೋಗರಮಣೀಯಕ್ಷೇತ್ರಮನೆ ಸ್ಥಲವಿಟ್ಟು
೮. ಸಲಾಖೆವಿಡಿದು ಅಭಿನವ ಶ್ರೀಶೈಲವನೆ ಮಾಡಿ
೯. ಕಪಿಲಸಿದ್ಧ ಮಲ್ಲಿಕಾರ್ಜುನದೇವನೆ ನೆಲಸಿ ನಿಂದು
೧೦. ಪೂಣ್ಯಪಾಪಂಗಳಂ ಬರವೇಳ್ದು ಬೆಸಂ ಪೇಳುತ್ತಿರಲು
೧೧. ಏಂ ಬೆಸಂ ದೇವಾಯೆನಲು
೧೨. ಈ ಸ್ಥಾನದಲು ಮಾನ್ಯವಾಗಿದ್ದ ಊರುಗಳಂ ಭೂಮಿಗಳಂ
೧೩. ಧನಂಗಳಂ ಲಿಂಗಕ್ಕೆ ಹಸ್ತೋದಕಂ ಮಾಡಿಕೊಟ್ಟುದುವಂ
೧೪. ಮನಂ ಪೇಸದೆ ಕಳದುಕೊಂಡಪನೆಂಬಾತನ
೧೫. ಮಾತಾಪಿತೃಗಳೆಲ್ಲವಂ ಎಪ್ಪತ್ತೇಳು ಕೋಟಿ ವರುಷಂಬರಂ
೧೬. ಪುಳುಗೊಂಡದ ನರಕದೊಳಿಕ್ಕಿ ನೀನಾಹುತಿಗೊಳು ಕಂಡಾ ಎಲೆ ಪಾಪವೇ.
೧೭. ಈ ದೇವನ ಭೂಮಿಧನಕ್ಕಾನಂಜುವೆನೆಂದು
೧೮. ಪಂದೆಯಂ ಪಾವಡರ್ದಂತೆ ಮನಂ ಬೆದಱೆವೊಡವಟ್ಟನಂ
೧೯. ಬೇಗ ಶೀಘ್ರಂ ಕೊಂಡು ಬಾ ಎಲೆ ಪುಣ್ಯವೇ ಕವಿಳಾಸಕ್ಕೆ ||
೨೦. ಇಂತೆಱಡಱ ಬೆಂಗೆ ಪುಣ್ಯಪಾಪಂಗಳು ಪಾರ್ದುಕೊಂಡೊಯ್ವುದು
೨೧. ತಪ್ಪದು ದಿಶದಿಶ ಸತ್ಯಂಗಂಡಿರೇ||

ಇಲ್ಲಿ ವಚನದ ಮೊದಲಿನ ಸಾಲುಗಳನ್ನು ಎತ್ತಿಕೊಂಡು ಮುಂದೆ ಶಾಸನಪಠ್ಯ ಬೇರೊಂದು ರೀತಿಯಲ್ಲಿ ಬೆಳೆದುದು ವ್ಯಕ್ತವಾಗಿಯೇ ಇದೆ. ಒಟ್ಟಿನಲ್ಲಿ ಶಾಸನದಲ್ಲಿ ಬರುವ "ಓಂ ಜಯ ಪರಮೇಶ್ವರ . . . . . . "

---

* ಸಿದ್ಧರಾಮಯ್ಯದೇವರ ವಚನಗಳು : ಸಂ. ಎಂ. ಎಂ. ಕಲಬುರ್ಗಿ, ಸಾ. ಶಿ. ಮರುಳಯ್ಯ.

ಎಂದು ಆರಂಭವಾಗಿ ".....ಯೆಂಬುದು ಗುರು ಸಿದ್ಧರಾಮನಾಥದೇವರ ವಚನ" ಎಂದು ಅಂತ್ಯಗೊಳ್ಳುವ ಶಾಸನ ಪಠ್ಯ, ಈ ವರೆಗೆ ಭಾವಿಸಿರುವಂತೆ ಶಾಸನ ರಚಕನೊಬ್ಬನ ಬರೆವಣಿಗೆಯಲ್ಲ, ಬೆಳೆದು ನಿಂತ ಸಿದ್ಧರಾಮನ ವಚನವೇ ಆಗಿದೆಯೆಂದು ಹೇಳಬೇಕಾಗುತ್ತದೆ.

ಶಾಸನೋಕ್ತ ಇನ್ನೊಂದು ಫಲಶ್ರುತಿಪಠ್ಯ "ಇರುಳಂ ಪಗಲುಂ ಪರಿವ . . . . ." ಎಂದು ಆರಂಭವಾಗಿ, "ಇಂತಿದು ಗುರು ಸಿದ್ಧರಾಮನಾಥದೇವರ ವಚನ" ಎಂದು ಮುಗಿಯುತ್ತಿದ್ದು, ಬಹುಶಃ ಇದೂ ಸಿದ್ಧರಾಮನ ಅನುಪಲಬ್ಧ ವಚನವಾಗಿರಬಹುದಾಗಿದೆ.

■■

ಆಕರ : ಮಾರ್ಗ ಸಂಪುಟ-೩

೫೫

ಅತ್ತಿಮಬ್ಬೆಯ ಶಾಸನ ಮತ್ತು ಬುಕ್ಕರಾಯನ ಶಾಸನ

ಕನ್ನಡ ಶಾಸನಪ್ರಪಂಚದಲ್ಲಿ ಅತ್ತಿಮಬ್ಬೆಯ ಲಕ್ಕುಂಡಿ ಶಾಸನ (೧೦೦೭) ಮತ್ತು ಬುಕ್ಕರಾಯನ ಬೆಳ್ಗೊಳ ಶಾಸನ(೧೩೬೮)ಗಳು ವಿಶಿಷ್ಟ ಕಾರಣಗಳಿಂದಾಗಿ ವಿದ್ವಾಂಸರ ತೀವ್ರ ಗಮನವನ್ನು ಸೆಳೆದಿವೆ. ಅತ್ತಿಮಬ್ಬೆಯ ಘನತೆಯ ಮೇಲೆ ಒತ್ತುಕೊಟ್ಟು ಲಕ್ಕುಂಡಿ ಶಾಸನವನ್ನು, ಬುಕ್ಕರಾಯನ ಧರ್ಮಸಮನ್ವಯ ದೃಷ್ಟಿಯ ಮೇಲೆ ಒತ್ತು ಕೊಟ್ಟು ಬೆಳ್ಗೊಳ ಶಾಸನವನ್ನು ವಿದ್ವಾಂಸರು ಈವರೆಗೆ ಅಭ್ಯಸಿಸಿದ್ದಾರೆ. ಇತ್ತೀಚೆ ಡಾ. ಹಂಪನಾ ಲಕ್ಕುಂಡಿ ಶಾಸನವನ್ನು ಕುರಿತು,[೧] ಡಾ. ಎಂ. ಚಿದಾನಂದಮೂರ್ತಿ ಬೆಳ್ಗೊಳ ಶಾಸನವನ್ನು ಕುರಿತು[೨] ವಿವೇಚಿಸಿದ್ದರೂ, ಹೇಳಬೇಕಾದ ಇನ್ನೂ ಕೆಲವು ಅಂಶಗಳು ಹೊರಗೆ ಉಳಿದುಕೊಂಡಿವೆ. ಈ ಶಾಸನಗಳೆರಡೂ ಧಾರ್ಮಿಕ ಸಂಘರ್ಷದಲ್ಲಿ ಹುಟ್ಟಿದುದು, ಮತ್ತು ಈ ಕಾರಣಕ್ಕಾಗಿ ದ್ವಿಪ್ರತಿಯಲ್ಲಿ ಸಿಗುವುದು ಇವುಗಳ ವಿಶೇಷ ಹೋಲಿಕೆಯಾಗಿದೆ. ಲಕ್ಕುಂಡಿಯಲ್ಲಿ ವೈಷ್ಣವರಿಂದಲೂ (ಆಮೇಲೆ ಬಹುಶಃ ಶೈವರಿಂದಲೂ), ಬೆಳ್ಗೊಳದಲ್ಲಿ ಶ್ರೀವೈಷ್ಣವರಿಂದಲೂ ಮತೀಯ ದಾಳಿ ಜರುಗಿ, ಎರಡೂ ಸಂದರ್ಭಗಳಲ್ಲಿ ಹಾನಿಗೆ ಗುರಿಯಾದುದು ಜೈನಧರ್ಮವೆನ್ನುವುದು, ಇನ್ನೂ ವಿಶೇಷ ಹೋಲಿಕೆಯಾಗಿದೆ.

ಅತ್ತಿಮಬ್ಬೆ ಬದುಕಿದುದ್ದು ೧೦ನೆಯ ಶತಮಾನದ ಅಂತ್ಯ, ೧೧ನೆಯ ಶತಮಾನದ ಆದಿ ಭಾಗದಲ್ಲಿ, ಇದು ಜೈನಧರ್ಮದ ವಿರೋಧಿಗಳಾಗಿದ್ದ ವೈಷ್ಣವ-ಶೈವಗಳ ಉನ್ನತಿ ಮತ್ತು ಜೈನರಿಗೆ ಆಶ್ರಯ ನೀಡಿದ್ದ ರಾಷ್ಟ್ರಕೂಟ-ಗಂಗರ ಅವನತಿಗಳ ಸಂಧಿಕಾಲ. ಹೀಗಾಗಿ ಈ ಕಾಲಾವಧಿಯ ಜೈನಸಮಾಜ ಸಹಜವಾಗಿಯೇ ವೈಭವ-ವಿಪತ್ತುಗಳೆರಡನ್ನೂ ಅನುಭವಿಸಿತು. ಇದಕ್ಕೆ ಅತ್ತಿಮಬ್ಬೆಯೂ ಗುರಿಯಾಗಿರುವ ಸಾಧ್ಯತೆಯಿದೆ.

ಬಹುಶಃ ಮೊದಲಿನಿಂದಲೂ ಸಂಸಾರಮುಖಿಯಾಗಿದ್ದ ಅತ್ತಿಮಬ್ಬೆ, ಜಿನಧರ್ಮಮುಖಿಯಾದುದು ಗಂಡನ ಮರಣದ ತರುವಾಯವೆಂದು ಕಾಣುತ್ತದೆ. ಗಂಡ ಬದುಕಿದ್ದರೆ, ಅವನ ನೆರಳಿನಲ್ಲಿ ಒಬ್ಬ ಆದರ್ಶ ಗೃಹಿಣಿಯಾಗಿ ಬೆಳೆದು, ಇತಿಹಾಸಪುಟಗಳಿಂದ ಅವಳು ಹೊರಗೆ ಉಳಿಯುತ್ತಿದ್ದಳೇನೋ. ಆದರೆ ಗಂಡನ ಮರಣ ಕಾರಣವಾಗಿ ಅವಳು ಹೊಸ ವ್ಯಕ್ತಿಯಾಗಿ ಮರುಹುಟ್ಟು ಪಡೆದಳು.

---

೧. ಸಾಧನೆ ೨೨-೩ ಮತ್ತು ೪.

೨. ಹೊಸತು-ಹೊಸತು, ಪು. ೨೩೦-೨೩೮.

ಭಾರತೀಯ ಪರಿಸರದಲ್ಲಿ ಹೆಣ್ಣಿಗೆ ವೈಧವ್ಯವೆನ್ನುವುದು ಒಂದು ಮುಖ್ಯ ತಿರುಪು. ಈ ಸಂದರ್ಭದಲ್ಲಿ ಚಿತಾಮುಖಿಯಾಗುವುದು ಇಲ್ಲವೆ ಧರ್ಮಮುಖಿಯಾಗುವುದು ಇವೆರಡೇ ಅವಳು ತುಳಿಯಬೇಕಾದ ದಾರಿಗಳು. ತಂಗಿ ಗುಂಡಮಬ್ಬೆ ಚಿತಾಪ್ರವೇಶವನ್ನು ಆಯ್ದುಕೊಂಡರೆ, ಅಕ್ಕ ಅತ್ತಿಮಬ್ಬೆ ಧರ್ಮವನ್ನು ಆಯ್ದುಕೊಂಡಳು. ಈವರೆಗೆ ಅಪ್ರಸಿದ್ಧ ಗೃಹಿಣಿಯಾಗಿದ್ದ ಅತ್ತಿಮಬ್ಬೆ, ಇಲ್ಲಿಂದ ಪ್ರಸಿದ್ಧ 'ಜಿನಧರ್ಮಪತಾಕೆ'ಯಾಗಿ ಬೆಳೆಯತೊಡಗಿದಳು.

ವಿಧವೆಯಾಗುತ್ತಲೇ ಅತ್ತಿಮಬ್ಬೆಯು 'ಅಜ್ಜಿಕೆ'ಯಾಗಿ, ವ್ರತ-ಉಪವಾಸಗಳಲ್ಲಿ ಜೀವವನ್ನು ಕೊರಗಿಸಿ, ಹತ್ತರೊಂದಿಗೆ ಹನ್ನೊಂದು ಆಗಬಹುದಾದುದನ್ನು ತಡೆಹಿಡಿದುದು, ಅವಳ ಎರಡೂ ಮನೆತನಗಳ ಐಶ್ವರ್ಯ. ಆದುದರಿಂದ "ಗಂಡನ ಮರಣ"ದಂತೆ "ಮನೆತನಗಳ ಐಶ್ವರ್ಯ"ವೂ ಅವಳನ್ನು ಇತಿಹಾಸಪ್ರಸಿದ್ಧಿಗೆ ತಂದ ಇನ್ನೊಂದು ಮುಖ್ಯ ಕಾರಣವೆಂದು ಹೇಳಬಹುದು. ಅಂದರೆ 'ವೈಧವ್ಯ' ಅವಳನ್ನು ಆತ್ಮಮುಖಿಯನ್ನಾಗಿಸಿತು. 'ಐಶ್ವರ್ಯ' ಅವಳನ್ನು ಸಮಾಜಮುಖಿಯನ್ನಾಗಿಸಿತು.

ಮಹಾವ್ಯಕ್ತಿಗಳ ಜೀವನ ಏಕಕಾಲಕ್ಕೆ ಹೀಗೆ ಆತ್ಮಮುಖಿ, ಸಮಾಜಮುಖಿಗಳಲ್ಲಿ ಬೆಳೆಯಬೇಕಾಗುತ್ತದೆ. ೧೧ನೆಯ ಶತಮಾನ ಆತ್ಮಮುಖಿಯಾಗಿ ಬೆಳೆಯುವುದಕ್ಕೆ ಅನುಕೂಲವಾಗಿದ್ದ ಕಾಲ. ಹೀಗಿದ್ದೂ ಅತ್ತಿಮಬ್ಬೆ-ಹೆಣ್ಣಾಗಿಯೂ-ಸಮಾಜಮುಖಿಯಾಗಿ ಬೆಳೆದುದು ಆ ಕಾಲದ ಒಂದು ಅಪವಾದಾತ್ಮಕ ಸಾಧನೆ. ಈ ಅಪವಾದಾತ್ಮಕ ಸಾಧನೆಯಿಂದಾಗಿ ಅವಳು ಅಂದಿನ ಸ್ತ್ರೀಪಾರತಂತ್ರ್ಯ ಸಂದರ್ಭದಲ್ಲಿ ಇನ್ನೂ ದೊಡ್ಡವಳಾಗಿ ಕಾಣಿಸಿಕೊಂಡಳು.

ಕೊಪ್ಪಳ, ಕರ್ನಾಟಕದ ಪ್ರಥಮ ಜೈನಕ್ಷೇತ್ರ. ಶಾಸನಗಳಲ್ಲಿ ಅದನ್ನು 'ಆದಿತೀರ್ಥ'ವೆಂದೂ ಕರೆಯಲಾಗಿದೆ. ರನ್ನ ಅಜಿತಪುರಾಣ(೯೯೩)ದಲ್ಲಿ 'ನೆಗಳ್ದ ಕೊಪಣಾಚಳ' ಎಂದು ಕರೆಯಿಸಿಕೊಂಡಿರುವುದರಿಂದ ಅಜಿತಪುರಾಣದ ರಚನೆಯ ಕಾಲದಲ್ಲಿಯೂ ಅದು ಪ್ರಸಿದ್ಧ ಕ್ಷೇತ್ರವಾಗಿಯೇ ಇದ್ದಿರಬಹುದು. ಮುಂದೆ ಇಂಥ ಮಾತುಗಳು ಕೇಳಿಬರುವುದಿಲ್ಲವಾಗಿ, ಇಲ್ಲಿಂದ ತಕ್ಷಣ ಅದರ ಜೈನವೈಭವ ಸರ್ವನಾಶವಾದಂತಿದೆ. ಲಕ್ಕುಂಡಿಯಲ್ಲಿ ಅತ್ತಿಮಬ್ಬೆ ಸ್ಥಾಪಿಸಿದ ಜಿನನ ಬಗೆಗೆ ಅಲ್ಲಿಯ ೨ನೆಯ ಶಾಸನದಲ್ಲಿ "ಕುಪಣದ ದೇವರ ವಲ್ಲಭನ ತೇಜಮನಿತುಂ ನಡೆಗುಂ" ಎಂಬ ವಾಕ್ಯವಿದೆ. ಕೊಪ್ಪಳದಲ್ಲಿ ಜಿನದೇವತೆಯ ತೇಜನಾಶವಾಯಿತೆಂದೂ, ಆ ತೇಜ ಇಲ್ಲಿ ಮತ್ತೆ ಸ್ಥಾಪನೆಯಾಯಿತೆಂದೂ ಇದಕ್ಕೆ ಅರ್ಥ ಹಚ್ಚಲು ಮನಸ್ಸಾಗುತ್ತದೆ. ಇದು ನಿಜವಿದ್ದರೆ ಕೊಪ್ಪಳದ ಗತವೈಭವವನ್ನು ಮತ್ತೆ ಸ್ಥಾಪಿಸುವ ಛಲದಿಂದ ಅತ್ತಿಮಬ್ಬೆ ಲಕ್ಕುಂಡಿಯನ್ನು ಆಯ್ದುಕೊಂಡು, ಅಲ್ಲಿ ಅತ್ಯುನ್ನತ ಜೈನಬಸದಿಯನ್ನು ನಿರ್ಮಿಸಿರಬಹುದೆನಿಸುತ್ತದೆ.

ಲಕ್ಕುಂಡಿಯಲ್ಲಿ ಅತ್ತಿಮಬ್ಬೆಗೆ ಸಂಬಂಧಿಸಿ, ಒಂದರ ವಿಸ್ತೃತಪಾಠ ಇನ್ನೊಂದು ಎಂಬಂತೆ, ಬೇರೆ ಬೇರೆ ಕಾಲದ ಎರಡು ಶಾಸನಗಳಿವೆ. ಮೊದಲನೆಯ ಶಾಸನದಲ್ಲಿ ೫೬ ಚರಣಗಳಿವೆ, ಎರಡನೆಯದರಲ್ಲಿ ೮೮ ಚರಣಗಳಿವೆ. ಎರಡನ್ನೂ ಮಗ್ಗುಲಲ್ಲಿಟ್ಟು ನೋಡಿದರೆ ಹೋಲಿಕೆ-ವ್ಯತ್ಯಾಸಗಳು ಹೀಗೆ ಕಾಣಿಸಿಕೊಳ್ಳುತ್ತವೆ: (೧) ಮೊದಲನೆಯ ಶಾಸನದ "ಕ್ಷಮೆಯುಂ ಮುಳಿಸುಂ. . . " ಎಂಬ ನಾಗದೇವನ ವರ್ಣನೆಯ ಪದ್ಯವನ್ನು ಎರಡನೆಯ ಶಾಸನದಲ್ಲಿ ಕೈಬಿಡಲಾಗಿದೆ. (೨) ಮೊದಲನೆಯ ಶಾಸನಕ್ಕಿಂತ ಎರಡನೆಯ ಶಾಸನದಲ್ಲಿ ಅವಳ ಪವಾಡ ಸಂಖ್ಯೆ ವರ್ಧಿಸಿರುವಂತಿದೆ. ಮೊದಲನೆಯ ಶಾಸನದ ಮಧ್ಯಭಾಗ ಒಡೆದುಹೋಗಿರುವುದರಿಂದ ಈ ಬಗ್ಗೆ ಸ್ಪಷ್ಟವಾಗಿ ಹೇಳುವಂತಿಲ್ಲ. (೩)

ಮೊದಲನೆಯ ಶಾಸನದ "ಪರಮಶ್ರೀ ಜಿನನಾಥ. . " ಎಂಬ ಪದ್ಯ ಎರಡನೆಯ ಶಾಸನದಲ್ಲಿ ಸ್ಥಾನಪಲ್ಲಟವಾಗಿದೆ. (೪) ಎರಡನೆಯ ಶಾಸನ ಎರಡು ಸಂದರ್ಭಗಳಲ್ಲಿ ಅಂದರೆ ೩೭-೫೨ನೆಯ ಚರಣಗಳ ನಡುವೆ ಮತ್ತು ೬೨ನೆಯ ಚರಣದಿಂದ ಕೊನೆಯವರೆಗೆ ಹೊಸ ವಿಷಯಗಳನ್ನು ಸೇರಿಸಿಕೊಂಡಿದೆ. ಅಂದರೆ ಇಲ್ಲಿಯ ೩೭-೫೨ನೆಯ ಚರಣಗಳ ನಡುವೆ ಲಕ್ಕುಂಡಿಯ ವೈಷ್ಣವ ಬ್ರಾಹ್ಮಣರ ವರ್ಣನೆ, ಅತ್ತಿಮಬ್ಬೆ ಕಟ್ಟಿಸಿದ ಬಸದಿ ವರ್ಣನೆ, ಅತ್ತಿಮಬ್ಬೆಯ ಪ್ರಶಸ್ತಿಗಳು ಹೆಚ್ಚಿನದಾಗಿ ಸೇರಿಕೊಂಡಿವೆ. ೬೨ನೆಯ ಚರಣದ ಬಳಿಕ ಜಿನಾಲಯವನ್ನು 'ಬ್ರಹ್ಮಜಿನಾಲಯ'ವಾಗಿಸಿದ ವಿಷಯ, ಗ್ರಾಮಾಧಿಪನು ಜಿನಾಲಯಕ್ಕೆ ಬಂದು ನಮಿಸಿದ ವಿಷಯ, ಬಸದಿಯ ಸೂಳೆಗೆ ಸಂದ ದಾನ, ಅರ್ಚಕರಿಗೆ-ದೇವರಿಗೆ ಸಂದ ಉಪಕರಣ, ಸಂಸ್ಕೃತ ಫಲಶ್ರುತಿ, ಸಿರಿಪಾಳ (ಸೆಟ್ಟಿ)ಯ ಮಗ ಬಾಹುಬಲಿ 'ಸವಿಸ್ತರ'ದಿಂದ ಈ ಶಾಸನವನ್ನು ಬರೆದ ವಿಷಯ ಹೆಚ್ಚಿನದಾಗಿ ಸೇರಿಕೊಂಡಿವೆ. (೫) ಶಾಸನದ ವಿಷಯಾನುಕ್ರಮದ ಹಿನ್ನೆಲೆಯಲ್ಲಿ ಹೇಳುವುದಾದರೆ, ಶಾಸನಕವಿ ಬಾಹುಬಲಿಯ ಪ್ರಸ್ತಾಪದೊಂದಿಗೇ ಎರಡನೆಯ ಶಾಸನದ ಬರಹ ಮುಕ್ತಾಯಗೊಂಡಿದೆ. ಆದರೆ ಇದರ ಕೆಳಗೆ ದೆಯ್ವ ಭರತಾರ್ಯನಿಂದ ಒಮ್ಮೆ, ನಾಕಿ ಮತ್ತು ಶಾಸನಕವಿ ಬಾಹುಬಲಿಯ ತಂದೆ ಸಿರಿಪಾಳಸೆಟ್ಟಿಯಿಂದ ಒಮ್ಮೆ-ಹೀಗೆ ಬಸದಿ ಎರಡು ಸಲ ಜೀರ್ಣೋದ್ಧಾರಗೊಂಡ ವಿಷಯವನ್ನು, ಘಟಾಂತಿಕೆ ಬಸದಿಯ ಪಾರ್ಶ್ವನಾಥನಿಗೆ ಹೂದೋಟ ನೀಡಿದ ವಿಷಯವನ್ನು ಮೂರು ನಾಲ್ಕು ಸಾಲುಗಳಲ್ಲಿ ಬರೆಯಲಾಗಿದೆ. ಈ ಮೂರು ನಾಲ್ಕು ಸಾಲುಗಳ ಮತ್ತು ಆರಂಭದ ಎಲ್ಲ ಸಾಲುಗಳ ಅಕ್ಷರ ಒಂದೇ ರೀತಿಯಲ್ಲಿರುವುದರಿಂದ, ಒಬ್ಬನಿಂದಲೇ (ಕವಿ ಬಾಹುಬಲಿಯಿಂದಲೇ) ಒಂದೇ ಕಾಲಕ್ಕೆ ಎರಡನೆಯ ಶಾಸನ ಇಡಿಯಾಗಿ ಬರೆಯಲ್ಪಟ್ಟಿದೆ.

ಒಟ್ಟಾರೆ, ಮೊದಲನೆಯ ಶಾಸನವು, ಬಸದಿಗೆ ಅಹವಮಲ್ಲ ಚಕ್ರವರ್ತಿಯಿಂದ ಅತ್ತಿಮಬ್ಬೆ ಪಡೆದ ದಾನ ದಾಖಲೆಗೋಸುಗ ಹುಟ್ಟಿದೆ. ಇದನ್ನು ಬರೆದವನು ಬಹುಶಃ ರನ್ನನಾಗಿರಬಹುದು. ಈ ಶಾಸನಪಾಠದ ಬಹುಪಾಲನ್ನು ಅನಾಮತ್ತು ಬಳಸಿಕೊಂಡು, ವೈಷ್ಣವರಿಂದ ಅತ್ತಿಮಬ್ಬೆ ಪಡೆದ ದಾನದಾಖಲೆಯನ್ನೂ ಅಳವಡಿಸಿಕೊಂಡು ಎರಡನೆಯ ಶಾಸನ ಹುಟ್ಟಿಕೊಂಡಿದೆ. ಈ ಎರಡನೆಯ ಶಾಸನವನ್ನು ಬರೆದವನು ಸಿರಿಪಾಳಶೆಟ್ಟಿಯ ಮಗ ಕವಿ ಬಾಹುಬಲಿ. ಇದರಿಂದ ಎರಡನೆಯ ಶಾಸನದ ನಿರ್ಮಾಣಪ್ರಸಂಗದಲ್ಲಿ ಅತ್ತಿಮಬ್ಬೆ ಬದುಕಿದ್ದಳೆಂದೂ ಶಾಸನಕವಿ ಬಾಹುಬಲಿ ಬಹುಶಃ ಅವಳ ಕಿರಿಯ ಸಮಕಾಲೀನನೆಂದೂ ಸ್ಪಷ್ಟವಾಗುತ್ತದೆ. ಇಲ್ಲಿ ಉದ್ಭವಿಸುವ ಮೂರು ಪ್ರಶ್ನೆಗಳಿಗೆ ಹೀಗೆ ಸಮಾಧಾನ ಹೇಳಬಹುದು.

೧. ಎರಡನೆಯ ಶಾಸನ ಏಕೆ ಹುಟ್ಟಿತು? :

ಅತ್ತಿಮಬ್ಬೆ ಬಸದಿ ಕಟ್ಟಿಸಿದ ಸಂದರ್ಭದಲ್ಲಿ, ಅಂದರೆ ಮೊದಲನೆಯ ಶಾಸನ ಹುಟ್ಟಿದ ಸಂದರ್ಭದಲ್ಲಿ ಬ್ರಾಹ್ಮಣರು ಬಸದಿಗೆ ದಾನ ಕೊಟ್ಟಿದ್ದರೆ ಅದನ್ನು ಅವನ ಔದಾರ್ಯವೆಂದು ಹೇಳಬಹುದಿದ್ದಿತು. ಹಾಗೆ ಮಾಡದೆ, ಕೆಲವು ವರ್ಷಗಳು ಸಂದ ಬಳಿಕ ಅವರು ಭೂದಾನ ಕೊಡುವಲ್ಲಿ ಎರಡನೆಯ ಶಾಸನ ಹುಟ್ಟಿದೆ. ಈ ಸಂದರ್ಭದಲ್ಲಿ ಜೈನರ ಮೇಲೆ ಬ್ರಾಹ್ಮಣರ ಪ್ರಭುತ್ವವೆಂಬಂತೆ "ಬ್ರಹ್ಮಜಿನಾಲಯ"ವೆಂದು ಬಸದಿಯ ನಾಮ ಬದಲಾಗುವಂತೆ ನೋಡಿಕೊಂಡಿದ್ದಾರೆ. ಇದಲ್ಲದೆ, ಬಸದಿಯಲ್ಲಿ ತಮ್ಮ ಚತುರ್ಮುಖ ಬ್ರಹ್ಮನ ವಿಗ್ರಹವನ್ನೂ ನಿಲ್ಲಿಸಿದರೆಂದು ತೋರುತ್ತದೆ. ಬಸದಿಯ ರಂಗಭೋಗ ಮಂಟಪದಲ್ಲಿ ಈಗಲೂ ಆ ವಿಗ್ರಹವನ್ನು ಕಾಣಬಹುದು. ಇದು ಅತ್ತಿಮಬ್ಬೆಗೆ ಒದಗಿಬಂದ

ಅನಿವಾರ್ಯ ಪರಿಸ್ಥಿತಿಯನ್ನು, ಅಂದರೆ ಅವಳು ಬ್ರಾಹ್ಮಣರೊಂದಿಗೆ ರಾಜೀ ಮಾಡಿಕೊಂಡುದನ್ನು ಸೂಚಿಸುವಂತಿದೆ. ಈ ರಾಜಿಯ ದಾಖಲೆಯೆನ್ನುವಂತೆ ಎರಡನೆಯ ಶಾಸನ ಹುಟ್ಟಿಕೊಂಡಿತು.

೨. ಒಂದನೆಯ ಶಾಸನ ಎಂದು ಒಡೆಯಿತು? :

ಎರಡನೆಯ ಶಾಸನವು ಬ್ರಾಹ್ಮಣರು ಅತ್ತಿಮಬ್ಬೆಗೆ ನೀಡಿದ ದತ್ತಿಯನ್ನಷ್ಟೇ ದಾಖಲಿಸದೆ, ಮೊದಲನೆಯ ಶಾಸನದಲ್ಲಿಯ ಪಾಠವನ್ನೂ ಬಹುಮಟ್ಟಿಗೆ ಅನಾಮತ್ತಾಗಿ ಎತ್ತಿಕೊಂಡಿದೆ. ಬಹುಶಃ ಈ ಹೊತ್ತಿಗಾಗಲೇ ಮೊದಲನೆಯ ಶಾಸನ ಒಡೆದುಹೋಗಿದ್ದು, ಆ ವಿಷಯದ ಮರುದಾಖಲೆಯೂ ಅವಶ್ಯವೆಂಬ ಕಾರಣದಿಂದ ಹೀಗೆ ಮಾಡಿರಬೇಕು. ಆದುದರಿಂದ ಅತ್ತಿಮಬ್ಬೆ ಜೀವಂತವಿರುವಾಗಲೇ ಅಂದರೆ ಎರಡನೆಯ ಶಾಸನ ಹುಟ್ಟುವ ಹೊತ್ತಿಗೇ ಅವಳು ಬರೆಯಿಸಿದ್ದ ಮೊದಲನೆಯ ಶಾಸನ ಒಡೆದುಹೋಗಿದ್ದಿತೆಂದು ಹೇಳಬಹುದು.

೩. ಒಂದನೆಯ ಶಾಸನ ಒಡೆಯಲು ಕಾರಣವೇನು? :

ಈ ಎರಡು ಶಾಸನಗಳಲ್ಲಿ ಬ್ರಾಹ್ಮಣನಿಷ್ಠ ಎರಡನೆಯ ಶಾಸನ ಬಿಟ್ಟು, ಜೈನನಿಷ್ಠ ಮೊದಲನೆಯ ಶಾಸನ ಒಡೆದುದನ್ನು ನೋಡಿದರೆ, ಇದಕ್ಕೆ ಮತೀಯ ಘರ್ಷಣೆಯೇ ಕಾರಣವೆಂಬ ಅನುಮಾನ ಹುಟ್ಟುತ್ತದೆ. ಅಂದರೆ ಮತೀಯ ಘರ್ಷಣೆ, ಈ ಘರ್ಷಣೆಯಲ್ಲಿ ಮೊದಲನೆಯ ಶಾಸನದ ಭಗ್ನತೆ, ಬ್ರಾಹ್ಮಣರೊಂದಿಗಿನ ಅತ್ತಿಮಬ್ಬೆಯ ರಾಜೀಘಟನೆ, ಈ ರಾಜೀಘಟನೆಯನ್ನು ಧ್ವನಿಸುವ ಎರಡನೆಯ ಶಾಸನ ಬರವಣಿಗೆ-ಇವೆಲ್ಲ ಅತ್ತಿಮಬ್ಬೆಯ ಜೀವನದಲ್ಲಿ ನಡೆದ ದುರ್ಘಟನೆಗಳೆಂದು ತೋರುತ್ತವೆ. ಮೊದಲನೆಯ ಶಾಸನನಾಶಕ್ಕೆ ಕಾರಣವಾದ ಈ ಮತೀಯ ಘರ್ಷಣೆಯ ಕಾಲ ಮತ್ತು ಸ್ವರೂಪಗಳ ಬಗೆಗೆ ಹೀಗೆ ಹೇಳಬಹುದು.

ಎರಡನೆಯ ಶಾಸನದ ಮುಕ್ತಾಯವನ್ನು ಸೂಚಿಸುವ ಕವಿ ನಿರ್ದೇಶನದ ಬಳಿಕ ಕಾಣುವ ಒಂದು ಪದ್ಯ ಬಹಳ ಮಹತ್ವದ್ದಾಗಿದೆ. ಅದರಲ್ಲಿ ಅತ್ತಿಮಬ್ಬೆ ನಿರ್ಮಿಸಿದ ಜಿನಾಲಯ ಬೀಳಲಾಗಿ ಭರತಾರ್ಯ ಕಟ್ಟಿಸಿದ, ಬಳಿಕ ಅದು ಬೆಂಕಿಗೆ ಬಲಿಯಾಗಲು ನಾಕಿ ಮತ್ತು ಸಿರಿಪಾಳರು ಜೀರ್ಣೋದ್ಧಾರ ಮಾಡಿದರು ಎಂಬ ಎರಡು ಘಟನೆಗಳ ಉಲ್ಲೇಖವಿದೆ. ಈ ಸಿರಿಪಾಳನ ಮಗ ಕವಿ ಬಾಹುಬಲಿ ಅತ್ತಿಮಬ್ಬೆಯ ಕಿರಿಯ ಸಮಕಾಲೀನನಾಗಿರುವ ಕಾರಣ, ಈ ಹೊತ್ತಿಗಾಗಲೇ ಅಂದರೆ ಅತ್ತಿಮಬ್ಬೆ ಜೀವಿಸಿರುವಾಗಲೇ ಬಸದಿ ಎರಡು ಸಲ ಹಾನಿಗೊಳಗಾಗಿರಬಹುದು. ಕೊನೆಯ ಪಕ್ಷ ಅತ್ತಿಮಬ್ಬೆಯ ಕಾಲದಲ್ಲಿ ಒಮ್ಮೆ, ಕವಿ ಬಾಹುಬಲಿಯ ಕಾಲದಲ್ಲಿ ಇನ್ನೊಮ್ಮೆ ಅದು ನಾಶವಾಗಿರಬಹುದು. ಬಹುಶಃ ಅತ್ತಿಮಬ್ಬೆಯ ಕಾಲದಲ್ಲಿ ಜರುಗಿದ ಘರ್ಷಣೆಯಲ್ಲಿ ಬಸದಿಯ ನಾಶದೊಂದಿಗೆ, ದಾಖಲೆಯನ್ನೂ ನಾಶಮಾಡುವಂತೆ ಮೊದಲನೆಯ ಶಾಸನದ ನಾಶಕ್ರಿಯೆಯೂ ಜರುಗಿರಬಹುದು. ಅತ್ತಿಮಬ್ಬೆ ಕಲಿಯೂ ಆಗಿದ್ದಳೆಂದು ಅಜಿತಪುರಾಣ (೧-೬೫, ೧೨-೧೫) ತಿಳಿಸುವುದನ್ನು ಇಲ್ಲಿ ಸ್ಮರಿಸಬಹುದು.

ಅತ್ತಿಮಬ್ಬೆ ಕಟ್ಟಿಸಿದ ಬಸದಿಯ ಗರ್ಭಗೃಹದಲ್ಲಿ ಇಂದು ನೇಮಿನಾಥ ತೀರ್ಥಂತರನ ವಿಗ್ರಹವಿದೆ. ಹಿಂದಿನ ಪ್ರಭಾವಳಿಗೂ ಈ ವಿಗ್ರಹಕ್ಕೂ ಹೊಂದಿಕೆ ಕಂಡುಬರುವುದಿಲ್ಲವಾಗಿ, ಇದು ಮೂಲವಿಗ್ರಹವನ್ನು ಕಿತ್ತಿಹಾಕಿ, ಆಮೇಲೆ ಸ್ಥಾಪಿಸಿದುದೆಂದು ಸ್ಪಷ್ಟವಾಗುತ್ತದೆ. "ಆದಿಬ್ರಹ್ಮ ಜಿನಾಲಯ" ಎಂದು ಈ ಬಸದಿಯನ್ನು ಕರೆದಿರುವುದರಿಂದ ಮೂಲತಃ ಇಲ್ಲಿ ಆದಿನಾಥ ತೀರ್ಥಂಕರನ ವಿಗ್ರಹವೇ ಇದ್ದಿರಬೇಕು. ಬಸದಿಯ ಎಡಭಾಗದ ಬಯಲಿನಲ್ಲಿ ಭಗ್ನ, ಬೃಹತ್ ಆದಿತೀರ್ಥಂಕರ ವಿಗ್ರಹವೊಂದು

ಂತುಬರುತ್ತದೆ. ಇದು ಪ್ರಭಾವಳಿಗೆ ಸರಿಯಾಗಿ ಹೊಂದಿಕೊಳ್ಳುತ್ತಿದ್ದು, ಅತ್ತಿಮಬ್ಬೆಯು ಗರ್ಭಗೃಹದಲ್ಲಿ ಸ್ಥಾಪಿಸಿದ್ದ ಆದಿನಾಥನ ಮೂಲವಿಗ್ರಹ ಇದೇ ಆಗಿರಬೇಕು.

ಇನ್ನೊಂದು ವಿಷಯ : ಎರಡು ಸಲ ಈ ಆದಿನಾಥ ಬಸದಿಯ ನಾಶಕಾರ್ಯ ಜರುಗಿದರೂ ಇಲ್ಲಿಯ ಘಟಾಂತಿಕೆ ಬಸದಿ ಮಾತ್ರ ಇಂಥ ನಾಶಕ್ಕೆ ಬಲಿಯಾಗಲಿಲ್ಲವೆಂದು ಎರಡನೆಯ ಶಾಸನದ ಕೊನೆಗೆ ಬರುವ "ಆ ಬಸದಿಯ ಪ್ರತಿಬದ್ಧಮಪ್ಪ ತೋಂಟದ ಘಟಾಂತಿಕೆಯ ಬಸದಿಯ ಪಾರ್ಶ್ವದೇವರ್ಗ್ಗೆ ನಡೆವ (ಪುಜ್ಪ) ಮುನೂರು. . ." ಎಂಬ ವಾಕ್ಯ ತಿಳಿಸುತ್ತದೆ. ಆದರೆ ಇಂದು ಘಟಾಂತಿಕೆ ಬಸದಿಯ ಪಾರ್ಶ್ವನಾಥನ ತಲೆಯ ಮೇಲಿನ ಸರ್ಪ ಮಾತ್ರ ಉಳಿದು, ವಿಗ್ರಹ ನಾಶವಾಗಿದೆ. ೧೧ಲಳರಲ್ಲಿ ಬರೆಯಲಾದ ಅಣ್ಣಿಗೆರೆ ಶಾಸನ ವೀರಗೊಗ್ಗಿದೇವನನ್ನು "ಅಗ್ಗದ ಘಟಾಂತಿಕೆಯಂ ಅದೆ ನುರ್ಗಾಗಿರೆಯೊಡೆದು. . . ಜಿನನಂ . . . ದುರ್ಗತಿಯೊಳಿಕ್ಕಿ ಮೆಟ್ಟಿದ" ಎಂದು ಹೇಳುವುದರಿಂದ, ಬಹುಶಃ ಅಣ್ಣಿಗೆರೆಯ ವೀರಗೊಗ್ಗಿದೇವನೇ ಸಮೀಪದ ಲಕ್ಕುಂಡಿಯ ಈ ಘಟಾಂತಿಕೆ ಬಸದಿಯನ್ನು ಅತ್ತಿಮಬ್ಬೆಯ ತರುವಾಯದ ಕಾಲದಲ್ಲಿ ನಾಶಪಡಿಸಿರಬಹುದು. ಘಟಾಂತಿಕೆಯೆಂದರೆ ಪದ್ಮಾವತಿ. ಇವಳು ಪಾರ್ಶ್ವಮಾಥ ತೀರ್ಥಂಕರನ ಯಕ್ಷಿ. ಸಾರ್ವಜನಿಕರ ದೃಷ್ಟಿಯಲ್ಲಿ ಇವಳು ತೀರ್ಥಂಕರನಿಗಿಂತ ಮುಖ್ಯದೇವತೆ. ಆದುದರಿಂದ ಈ ಶಾಸನ "ಘಟಾಂತಿಕೆಯ (=ಪದ್ಮಾವತಿಯ) ಬಸದಿಯ ಪಾರ್ಶ್ವನಾಥ" ಎಂದು ಕರೆದಿದೆ.

ಹೀಗೆ ಜೈನ ಸಮಾಜದ ಹೆಮ್ಮೆಯ ನಿರ್ಮಾಣವಾದ ಅತ್ತಿಮಬ್ಬೆಯ ಬಸದಿ ಮತೀಯ ವಿರಸ ಕಾರಣವಾಗಿ ವೈಷ್ಣವ ಮತ್ತು ಶೈವ (?)ಗಳಿಂದ ಭಗ್ನಗೊಳ್ಳುತ್ತ, ಬೆಂಕಿಗೆ ಆಹುತಿಯಾಗುತ್ತ ಬಂದಿತು. ಇವುಗಳಲ್ಲಿ ಕನಿಷ್ಠಪಕ್ಷ ಒಂದು ನಾಶಘಟನೆಯಾದರೂ ಅತ್ತಿಮಬ್ಬೆ ಜೀವಂತವಿರುವಾಗಲೇ ಜರುಗಿರಬೇಕು. ಈ ವಿರೋಧವನ್ನು ಎದುರಿಸುವುದು ಅಶಕ್ಯವೆನಿಸಿದಾಗ ಅತ್ತಿಮಬ್ಬೆ ಬ್ರಾಹ್ಮಣರೊಂದಿಗೆ ರಾಜೀ ಮಾಡಿಕೊಂಡಳೆಂದೂ, ತನ್ನ ಜಿನಾಲಯಕ್ಕೆ 'ಬ್ರಹ್ಮಜಿನಾಲಯ'ವೆಂದು ಮರುನಾಮಕರಣ ಮಾಡಿಸಿಕೊಂಡಳೆಂದೂ ಹೇಳಬಹುದಾಗಿದೆ.

* * *

ಉತ್ತರದ ಪ್ರಸಿದ್ಧ ಜೈನಕ್ಷೇತ್ರವಾದ ಲಕ್ಕುಂಡಿಯಂತೆ, ದಕ್ಷಿಣದ ಪ್ರಸಿದ್ಧ ಜೈನಕ್ಷೇತ್ರವಾದ ಬೆಳ್ಗೊಳವೂ ಇಂಥ ದಾಳಿಗೆ ಗುರಿಯಾದುದು ಒಂದು ಐತಿಹಾಸಿಕ ಘಟನೆ. ಇದರ ಪರಿಣಾಮವಾಗಿ ಲಕ್ಕುಂಡಿಯಲ್ಲಿ ಒಂದು ಮೂಲಶಾಸನ, ಅಲ್ಲಿಯೇ ಅದರ ವಿಸ್ತೃತ ಪಾಠದ ಇನ್ನೊಂದು ಶಾಸನವಿರುವಂತೆ, ಕಲ್ಯದಲ್ಲಿ ಒಂದು ಶಾಸನ, ಬೆಳ್ಗೊಳದಲ್ಲಿ ಅದರ ವಿಸ್ತೃತ ಪಾಠದ ಇನ್ನೊಂದು ಶಾಸನವಿರುವುದು ಎತ್ತಿಹೇಳಬೇಕಾದ ಹೋಲಿಕೆಯಾಗಿದೆ. ಲಕ್ಕುಂಡಿಯ ಜೈನಶಾಸನ ಹುಟ್ಟಿದ ಬಳಿಕ ಅಲ್ಲಿಯ ರಾಜಿಶಾಸನ ಎಂದು ಹುಟ್ಟಿತು? ಎಂಬುದು ಸ್ಪಷ್ಟವಿಲ್ಲ. ಆದರೆ ಬೆಂಗಳೂರು ಜಿಲ್ಲೆಯ ಮಾಗಡಿ ತಾಲೂಕಿನ ಕಲ್ಯಶಾಸನ ಹುಟ್ಟಿದ ೫ ವಾರಗಳ ಬಳಿಕ ಹಾಸನ ಜಿಲ್ಲೆಯ ಬೆಳ್ಗೊಳ ಶಾಸನ ಹುಟ್ಟಿದೆ. ಲಕ್ಕುಂಡಿ ಶಾಸನಗಳ ಜೈನ ಮುಖ್ಯವ್ಯಕ್ತಿ ಅತ್ತಿಮಬ್ಬೆಯಾದರೆ, ಕಲ್ಯ-ಬೆಳ್ಗೊಳ ಶಾಸನಗಳ ಜೈನ ಮುಖ್ಯವ್ಯಕ್ತಿ ಕಲ್ಯ ಗ್ರಾಮದ ಬುಸವಿಶೆಟ್ಟಿಯಾಗಿದ್ದಾನೆ. ಲಕ್ಕುಂಡಿ ಬಸದಿಯ ಮೇಲೆ ಅಲ್ಲಿಯ ವೈಷ್ಣವರು, ಬಳಿಕ ಅಣ್ಣಿಗೆರೆಯ ಶೈವ ವೀರಗೊಗ್ಗಿದೇವ(?) ಆಕ್ರಮಣ ಕೈಕೊಂಡರೆ, ಬೆಳ್ಗೊಳ ಬಸದಿಯ ಮೇಲೆ ಶ್ರೀವೈಷ್ಣವರು ಆಕ್ರಮಣ ಕೈಕೊಂಡಿದ್ದಾರೆ.

ಕಲ್ಯ-ಬೆಳ್ಗೊಳ ಶಾಸನಗಳು ಸೂಚಿಸುವ ಈ ಮತೀಯ ಕಲಹದ ವಿವರಗಳನ್ನು ದೇವಚಂದ್ರನ "ರಾಜಾವಳಿ ಕಥಾಸಾರ" ಹೀಗೆ ಕೊಡುತ್ತದೆ.[೩] ಬೆಳ್ಗೊಳ ಬೆಟ್ಟದ ಜೈನಸ್ಮಾರಕಗಳನ್ನು ಶ್ರೀವೈಷ್ಣವರು ನಾಶಮಾಡುತ್ತಿರುವುದನ್ನು ಜೈನರು ಬುಸವಿಶೆಟ್ಟಿಗೆ ನಿವೇದಿಸುತ್ತಾರೆ. "ಈ ಅನ್ಯಾಯವನ್ನು ನಿಲ್ಲಿಸಲು ನಿಮ್ಮ ಜನರಿಗೆ ಹೇಳಬೇಕು" ಎಂದು ಬುಸವಿಶೆಟ್ಟಿ ಶ್ರೀವೈಷ್ಣವ ಸಿಂಗಾಚಾರಿಗೆ ಹೇಳುತ್ತಾನೆ. ಅಹಂಕಾರದ ಯುವಕ ಸಿಂಗಾಚ್ಘಾರಿ ಕುಹಕದ ಉತ್ತರ ಕೊಡುತ್ತಾನೆ. ಆಗ ಬುಸವಿಶೆಟ್ಟಿ ಸ್ಮಾರಕಗಳ ರಕ್ಷಣೆಗಾಗಿ ಬೆಳ್ಗೊಳ ಬೆಟ್ಟದಲ್ಲಿ ಮಲಗುತ್ತಾನೆ. ಸಿಂಗಾಚಾರಿ ಮೊದಲಾದವರು, ಮಲಗಿದ್ದ ಬುಸವಿಶೆಟ್ಟಿಯನ್ನು ಕೊಲ್ಲಲು ವಿಫಲಪ್ರಯತ್ನ ಮಾಡುತ್ತಾರೆ. ಮರುದಿವಸ ಬುಸವಿಶೆಟ್ಟಿ ತನ್ನ ಕೆಲವು ಜನರೊಂದಿಗೆ ಸಿಂಗಾಚಾರಿಯಲ್ಲಿಗೆ ಹೋಗಿ ತಿಳಿಹೇಳುತ್ತಾನೆ. ಸಿಂಗಾಚಾರಿ ಮತ್ತೆಯೂ ಉನ್ಮತ್ತನಂತೆ ಉತ್ತರಿಸುತ್ತಾನೆ. ಮಾತಿಗೆ ಮಾತು ಬೆಳೆದು "ಜೈನಶಾಸ್ತ್ರವೇ ಸತ್ಯ, ಮಿಕ್ಕ ಶಾಸ್ತ್ರಗಳು ಮಿಥ್ಯ" ಎಂಬುದನ್ನು ನಾನು ದಿವ್ಯ ಹಿಡಿದು ತೋರಿಸುವುದಾಗಿ ಬುಸವಿಶೆಟ್ಟಿ ನುಡಿಯಲು, ಶ್ರೀವೈಷ್ಣವರೂ ಜೈನರೂ ಬುಕ್ಕರಾಯನಲ್ಲಿ ಹೋಗುತ್ತಾರೆ. ಅಲ್ಲಿ ಬುಸವಿಶೆಟ್ಟಿ, ಕಾಯ್ದ ಲೋಹದ ಗುಂಡನ್ನುಎತ್ತಿ ಹೆಗಲಮೇಲಿಟ್ಟುಕೊಂಡು ಮೈತುಂಬ ಆಡಿಸಿ, ನೆಲದ ಮೇಲಿಡುತ್ತಾನೆ. ಆಗ ಬುಕ್ಕರಾಯನು ಶ್ರೀವೈಷ್ಣವಗುರು ತಿರುಮಲೆ ತಾತಾಚಾರ್ಯರನ್ನು ಕರೆಯಿಸಿ, ಜೈನರಿಗೆ ಆಗುತ್ತಲಿರುವ ಅನ್ಯಾಯವನ್ನು ತಿಳಿಸುತ್ತಾನೆ. ಶ್ರೀವೈಷ್ಣವರು ವಿಷಣ್ಣಚಿತ್ತರಾಗಿ, ಜೈನಸಮಾಜದೊಂದಿಗೆ ಆತ್ಮೀಯತೆಯಿಂದ ನಡೆದುಕೊಳ್ಳುವುದಾಗಿ ಹೇಳಿ, ಶಾಸನ ಬರೆಯಿಸಿ, ಬೆಳ್ಗೊಳದ ಭಂಡಾರ ಬಸದಿಯ ಬಲಗಡೆ ನಿಲ್ಲಿಸುತ್ತಾರೆ. ಇಷ್ಟು ವಿವರಗಳನ್ನು ಕೊಟ್ಟು, ರಾಜಾವಳಿ ಕಥೆ, ಆ ಶಾಸನದ ಪಾಠವನ್ನೂ ಉದ್ಧರಿಸಿದೆ. ರಾಜಾವಳಿ ಕಥೆ ಶಾಸನಪಾಠ ಕೊಟ್ಟುದು, ಅದಕ್ಕಿಂತ ಜಗಳದ ವಿವರಗಳನ್ನು ಒದಗಿಸಿದುದು ಮುಖ್ಯವಾಗಿದೆ. ಬೆಳ್ಗೊಳದ ಶಾಸನದಲ್ಲಿ ಬುಸವಿಶೆಟ್ಟಿಯು "ಕಲ್ಲೆಹದ ಹುರ್ವಿಶೆಟ್ಟಿಯ ಮಗ"ನೆಂಬ ಉಲ್ಲೇಖವಿದ್ದರೂ ದೇವಚಂದ್ರನು ಕಲ್ಲೆಹದ ಬಗ್ಗೆ, ಅಲ್ಲಿ ಶಾಸನ ನಿಲ್ಲಿಸಿದ ಬಗ್ಗೆ ಮೌನತಾಳಿದ್ದಾನೆ.

ದೇವಚಂದ್ರ ಕೊಡುವ ಬೆಳ್ಗೊಳ ಶಾಸನಪಾಠಕ್ಕೂ, ಎಪಿಗ್ರಾಫಿಯ ಕರ್ನಾಟಕ II ಸಂಪುಟದಲ್ಲಿ ಪ್ರಕಟವಾಗಿರುವ ಬೆಳ್ಗೊಳ ಶಾಸನಪಾಠಕ್ಕೂ ಅಲ್ಪಸ್ವಲ್ಪ ವ್ಯತ್ಯಾಸವಿದೆ. ಎಪಿಗ್ರಾಫಿಯ ಕರ್ನಾಟಕದಲ್ಲಿ ಬಿ. ಎಲ್. ರೈಸ್ ಅವರು "ಈ ಶಾಸನ ಈಚೆಗೆ ಹೊಸದಾಗಿ ಬರೆಯಿಸಿದ್ದಾರೆ" ಎಂದು ಸೂಚಿಸಿರುವುದರಿಂದ, ಈ ಕಾರಣದಿಂದಾಗಿ ಅಲ್ಲಲ್ಲಿ ಪಾಠವ್ಯತ್ಯಾಸವಾಗಿದೆ ಎಂದು ಊಹಿಸಬಹುದಾಗಿದೆ. ಕಲ್ಲೆಹದ ಪಾಠ ಬೆಳ್ಗೊಳದ ಪಾಠಕ್ಕಿಂತ ಸ್ವಲ್ಪ ಭಿನ್ನವಾಗಿರುವುದನ್ನೂ ಇಲ್ಲಿ ನೆನೆಯಬಹುದಾಗಿದೆ.

ಜೈನರಿಗೆ "ಪಂಚಮಹಾವಾದ್ಯಗಳುಂ ಕಳಸಕನ್ನಡಿ ಶ್ವೇತಚ್ಛತ್ರಚಾಮರಗಳ್ ಮೊದಲಾದ ಬಿರುದುಗಳು" ಸಲ್ಲುವುದಿಲ್ಲವೆಂದು ಶ್ರೀ ವೈಷ್ಣವರು ಕಾಲುಕೆದರಿ ಜಗಳ ತೆಗೆದು, ಬೆಳ್ಗೊಳ ಸ್ಮಾರಕಗಳನ್ನು ನಾಶಪಡಿಸುತ್ತಿದ್ದುದ್ದನ್ನು ಬುಕ್ಕರಾಯ ತಡೆಹಿಡಿದು, ಈ ಗೌರವಗಳು ಜೈನರಿಗೂ ಸಲ್ಲುವವೆಂದು ತೀರ್ಪುನೀಡಿದನು, ಮತ್ತು ರಾಜ್ಯದಲ್ಲಿಯ ಶ್ರೀವೈಷ್ಣವರು ಪ್ರತಿವರ್ಷ ಪ್ರತಿಯೊಂದು ಮನೆಗೆ ಒಂದು ಹಣವನ್ನು ಕೊಡಬೇಕು, ಆ ಹಣದಿಂದ ೨೦ ಆಳುಗಳನ್ನು ಬೆಳ್ಗೊಳದ ಸ್ಮಾರಕಗಳ ರಕ್ಷಣೆಗಾಗಿ

---

೩. ರಾಜಾವಳಿ ಕಥಾಸಾರ (ಸಂ: ವೈ. ಸಿ. ಭಾನುಮತಿ) ಪು. ೧೯೭-೯೯.

ನಿಯಮಿಸಬೇಕು, ಮಿಕ್ಕ ಹಣದಿಂದ ಜೈನ ಕಟ್ಟಡಗಳು ಜೀರ್ಣೋದ್ಧಾರ ಕಾರ್ಯ ಕೈಕೊಳ್ಳಬೇಕು, ಶ್ರೀವೈಷ್ಣವ ಮುಖಂಡರಾದ ತಿರುಮಲೆ ತಾತಯ್ಯನವರು ಈ ಕೆಲಸಗಳನ್ನು ನಡೆಸಿಕೊಡಬೇಕು-ಎಂದು ನಿರ್ಣಯಿಸಿದನು. ಬುಸವಿಶೆಟ್ಟಿ ಮತ್ತು ತಾತಯ್ಯಗಳನ್ನು ಬೆಳ್ಗೊಳಕ್ಕೆ ಕರೆಯಿಸಿ, ಸ್ಮಾರಕಗಳನ್ನು ಜೀರ್ಣೋದ್ಧಾರ ಮಾಡಿಸಿದನು, ಈಗ ಬುಸವಿಶೆಟ್ಟಿಗೆ ಈ ಒಪ್ಪಂದ ಸಮಿತಿಯ ಮುಖ್ಯಸ್ಥನನ್ನಾಗಿ ಮಾಡಲಾಯಿತು.[೪]

ಈ ಎಲ್ಲ ವಿವರಗಳನ್ನು ನೋಡಿದರೆ, ಬೆಳ್ಗೊಳದ ಜೈನನಿರ್ಮಾಣಗಳು ೧೪ನೆಯ ಶತಮಾನದ ಹೊತ್ತಿಗೆ ಶ್ರೀವೈಷ್ಣವರ ತೀವ್ರ ಹಾನಿಗೆ ಗುರಿಯಾಗಿದ್ದುವೆ[illegible], ಆಮೇಲೆ ಜೀರ್ಣೋದ್ಧಾರ ಗೊಂಡಿವೆಯೆಂದೂ ವೇದ್ಯವಾಗುತ್ತದೆ. ರಕ್ಷಿಸಲು ೨೦ ಆಳುಗಳನ್ನು [illegible]ತ ನಿಯಮಿಸಿದುದೂ, ಇದು ಕಾಲಕಾಲಕ್ಕೆ ಮುಂದುವರೆಯಬೇಕೆಂದು ತೀರ್ಪು ನೀಡಿದುದೂ, ಬೆಳ್ಗೊಳದಂಥ ಮಹತ್ವಪೂರ್ಣ ಜೈನಕೇಂದ್ರ ಅಂದು ಎಷ್ಟು ಅರಕ್ಷಿತ ಸ್ಥಿತಿಯಲ್ಲಿದ್ದಿತೆಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಭಯ ಕಾರಣವಾಗಿಯೇ ಭಂಡಾರ ಬಸದಿಯ ಮುಂದೆ ನಿಂತ ಬುಕ್ಕರಾಯನ ಈ ಶಾಸನವನ್ನು ರಾಮಾನುಜ ಸ್ತುತಿಯಿಂದ ಪ್ರಾರಂಭ ಮಾಡಲು, ಶಾಸನದ ಮೇಲೆ ಜೈನ ಲಾಂಛನಗಳನ್ನಲ್ಲದೆ ಶ್ರೀವೈಷ್ಣವ ಲಾಂಛನಗಳಾದ ಶಂಖ, ಚಕ್ರ, ತಿರುನಾಮಗಳನ್ನೂ ಕೆತ್ತಲು ಜೈನರು ಸಮ್ಮತಿಸಿದರೆಂದು ಕಾಣುತ್ತದೆ. ಇಷ್ಟೇ ಏಕೆ, ಗಲಭೆಗೆ ಗುರಿಯಾದ ಬೆಳ್ಗೊಳ ಪ್ರದೇಶದಲ್ಲಿ ಶಾಸನ (ದಾಖಲೆ) ಸುರಕ್ಷಿತ ಉಳಿಯಲಾರದೆಂಬ ಭಯ ಕಾರಣವಾಗಿ, ಇದರ ಇನ್ನೊಂದು ಪ್ರತಿಯನ್ನು ಬುಸವಿಶೆಟ್ಟಿಯ ಗ್ರಾಮವಾದ ಕಲ್ಯದಲ್ಲಿ ನಿಲ್ಲಿಸಲಾಯಿತೆಂದು ಊಹಿಸಬಹುದಾಗಿದೆ.

ಈ ಬಗೆಯ ಅರಕ್ಷಿತ ಸ್ಥಿತಿ ಬೆಳ್ಗೊಳಕ್ಕೆ ಬಹಳ ಹಿಂದಿನಿಂದಲೇ ಆರಂಭವಾಗಿರಬೇಕು. ಬಹುಶಃ ಈ ಕಾರಣಕ್ಕಾಗಿಯೇ ೧೧ನೆಯ ಶತಮಾನದಷ್ಟು ಪೂರ್ವದಲ್ಲಿ ಗಂಗರಾಜನು ಗೊಮ್ಮಟ ವಿಗ್ರಹಕ್ಕೆ ಸುರಕ್ಷಿತತೆಯ ದೃಷ್ಟಿಯಿಂದ ಕೋಟೆ ಸದೃಶ ಸುತ್ತಾಲಯವನ್ನು ಕಟ್ಟಿಸಿದನೆಂದು ಕಾಣುತ್ತದೆ. ಹೊರಗಿನಿಂದ ಮಾರಕಾಸ್ತ್ರ ಎಸೆದರೂ ವಿಗ್ರಹಕ್ಕೆ ಮುಟ್ಟದಷ್ಟು ಈ ಸುತ್ತಾಲಯ ವಿಸ್ತಾರವಾಗಿದೆಯೆಂಬುದನ್ನು ಇಲ್ಲಿ ಗಮನಿಸಬೇಕು. ೧೨ನೆಯ ಶತಮಾನದ ನಯಕೀರ್ತಿ ಸಿದ್ಧಾಂತ ಚಕ್ರವರ್ತಿಗಳ ಗುಡ್ಡ "ಶ್ರೀ ಬಸವಿಶೆಟ್ಟಿ ಸುತ್ತಾಲಯದ ಭಿತ್ತಿಯ ಮಾಡಿಸಿ"ದ ಉಲ್ಲೇಖ ಬೆಳ್ಗೊಳ ಶಾಸನದಲ್ಲಿದೆ (ಹೊಸ ನಂ. ೨೭೯). ಆದುದರಿಂದ ಈ ಸುತ್ತಾಲಯ ನಿರ್ಮಿತಿಯಲ್ಲಿ ಗಂಗರಾಜ ಮತ್ತು ಬಸವಿಶೆಟ್ಟಿ (ಕಲ್ಯದ ಬುಸವಿಶೆಟ್ಟಿಯಿಂದ ಈತ ಭಿನ್ನ) ಇವರ ಸೇವೆ ಸಂದಿದೆಯೆಂದು ಹೇಳಬೇಕಾಗುತ್ತದೆ.

■■

---

೪. ಡಾ. ಎಸ್. ಶೆಟ್ಟರ್ ಮತ್ತು ಡಾ. ಎಂ. ಚಿದಾನಂದಮೂರ್ತಿಗಳು ಶಾಸನೋಕ್ತ ಒಪ್ಪಂದದ ಸ್ವರೂಪವನ್ನು ದೇವಚಂದ್ರನಿಗೆ ತೀರ ಭಿನ್ನವಾಗಿ ವ್ಯಾಖ್ಯಾನಿಸುತ್ತಾರೆ. ದೇವಚಂದ್ರನ ಈ ವಿವರ ಅವರ ಗಮನಕ್ಕೆ ಬಂದಿಲ್ಲವೆಂದೂ, ಮತ್ತು ಅವರ ಊಹೆ ಒಪ್ಪಿತವೆನಿಸುವುದಿಲ್ಲವೆಂದೂ ಹೇಳಬಹುದು. (ನೋಡಿ : Inviting Death, P. 73-75 ಮತ್ತು ಹೊಸತು-ಹೊಸತು ಪು. ೨೩೦-೨೩೮).

ಆಕರ : ಮಾರ್ಗ ಸಂಪುಟ–೩

೫೬

ಅಣ್ಣಿಗೆರೆ ಶಾಸನೋಕ್ತ ವೀರಗೊಗ್ಗಿದೇವ

೧೨ನೆಯ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಸ್ಥಿತ್ಯಂತರದ ಕಾಲ. ಧಾರ್ಮಿಕ ಪಂಥಗಳ ಉಗಮ-ಆಗಮ-ಸಂಗಮ ಮತ್ತು ಸಂಘರ್ಷಗಳ ಸಂದರ್ಭ. ಈಗ ಒಂದೆಡೆ ಉತ್ತರದಲ್ಲಿ ಬಸವಣ್ಣನವರಿಂದ ಲಿಂಗಾಯತ, ದಕ್ಷಿಣದಲ್ಲಿ ರಾಮಾನುಜರಿಂದ ಶ್ರೀವೈಷ್ಣವ ಹೆಸರಿನ ಹೊಸಧರ್ಮಗಳು ತಲೆಯೆತ್ತಿದವು. ಇದೇ ಕಾಲಕ್ಕೆ ಆಗಮಿಕ ಶೈವದ ನಾಲ್ಕು ಪ್ರಕಾರಗಳಾದ ನಕುಲೀಶ, ಪಾಶುಪತ, ಕಾಪಾಲಿಕ, ಶುದ್ಧಶೈವಗಳು ಬಸವಣ್ಣನ ಲಿಂಗಾಯತದಲ್ಲಿ ಲೀನವಾಗಲಾರಂಭಿಸಿದ್ದವು.

ಈಗ ಜೈನಧರ್ಮವು ಬ್ರಾಹ್ಮಣರನ್ನು ಎದುರಿಸಲಾರದೆ ತಮ್ಮ ಬಸದಿಗೆ 'ಬ್ರಹ್ಮಜಿನಾಲಯ'ವೆಂದು, ನಕುಲೀಶರನ್ನು ಎದುರಿಸಲಾರದೆ 'ಏಕ್ಕೋಟಿಜಿನಾಲಯ'ವೆಂದು ಹೆಸರಿಟ್ಟುಕೊಂಡು ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾರಂಭಿಸಿದ್ದಿತು. ಇದೇ ಸಂದರ್ಭದಲ್ಲಿ ಶ್ರೀವೈಷ್ಣವವು 'ವೀರವೈಷ್ಣವ' ಹೆಸರಿನಿಂದ ದಕ್ಷಿಣದಲ್ಲಿ, ಶುದ್ಧಶೈವವು 'ವೀರಮಾಹೇಶ್ವರ' ಹೆಸರಿನಿಂದ ಉತ್ತರದಲ್ಲಿ ಜೈನಧರ್ಮದ ಮೇಲೆ ದೊಡ್ಡ ದಾಳಿಯನ್ನು ನಡೆಸಿದ್ದವು.

ಇಂಥ ಪ್ರಕ್ಷುಬ್ಧ ವಾತಾವರಣದಲ್ಲಿ "ಜೈನಮೃಗಬೇಂಟೆಕಾರ"ನೆನಿಸಿದ ವೀರಗೊಗ್ಗಿದೇವನಿಂದ ಅಣ್ಣಿಗೇರಿ ಪ್ರದೇಶದಲ್ಲಿ ಜೈನಸ್ಮಾರಕಗಳನ್ನು ಭಗ್ನಗೊಳಿಸಿದ ಘಟನೆ ಜರುಗಿತು. ಈ ಘಟನೆಯನ್ನೊಳಗೊಂಡ ಅಣ್ಣಿಗೆರೆ ಶಾಸನ (೧೧೮೪)* ದಲ್ಲಿ ಕಂಡುಬರುವ ಮಾಹೇಶ್ವರ, ಅಸಂಖ್ಯಾತರ ಪುತ್ರ, ಬ್ರತವೀರ, ವೀರಗೊಗ್ಗರಸ ಇತ್ಯಾದಿ ಪದಗಳೂ, ಈ ಶಾಸನ ಪುರದ ವೀರಭದ್ರನ ಗುಡಿ ಆವರಣದಲ್ಲಿ ಲಭಿಸಿದುದೂ, ಈತನು ಮೂಲತಃ ನಾಲ್ಕು ಆಗಮಿಕ ಶೈವಗಳಲ್ಲಿ ಶುದ್ಧಶೈವ (ಶ್ರೋತ್ರೀಯಶೈವ, ಸಿದ್ಧಾಂತಶೈವ)ನಾಗಿರಬಹುದೆಂಬ ಸೂಚನೆ ನೀಡುತ್ತವೆ. ಈ ಶುದ್ಧಶೈವರಿಗೆ ಮಾಹೇಶ್ವರ, ವೀರಮಾಹೇಶ್ವರರೆಂದೂ ಕರೆಯುತ್ತಿದ್ದರು. ಈ ವೀರಮಾಹೇಶ್ವರ ಪಂಥ ಮುಂದಿನ ದಿನಗಳಲ್ಲಿ (೧೩೬೮ ರ ಬಳಿಕ) ವೀರಶೈವ ಹೆಸರಿನಿಂದ ಲಿಂಗಾಯತದಲ್ಲಿ ಲೀನವಾದ ಕಾರಣ, ೧೨ನೆಯ ಶತಮಾನದ ಲಿಂಗಾಯತ ಶರಣರೇ ಜೈನಬಸದಿಗಳನ್ನು ನಾಶಮಾಡಿದರೆಂದು ವಿದ್ವಾಂಸರು ಭ್ರಮಿಸಿದ್ದಾರೆ. ನಿಜ ಸಂಗತಿಯೆಂದರೆ ಬಸದಿಗಲನ್ನು ನಾಶಮಾಡಿದವರು ಲಿಂಗಾಯತ ಶರಣರಲ್ಲ. ಈ ವೀರಮಾಹೇಶ್ವರನು (ವೀರಶೈವರು).

* ಎಸ್. ಆಯ್. ಆಯ್. XV 59.

ಭಾರತದ ಇತಿಹಾಸದಲ್ಲಿ ದೇವಾಲಯ ನಿರ್ಮಾಣ, ನಾಶ ಕಾರ್ಯಗಳು ಉದ್ದಕ್ಕೂ ಜರುಗುತ್ತ ಬಂದಿವೆ. ಲಿಂಗಾಯತ ಶರಣರು ದೇವಾಲಯದ ನಿರ್ಮಾಣ, ನಾಶ-ಈ ಎರಡೂ ಧೋರಣೆಗೆ ಬದಲು, ಅದರ ನಿರಾಕರಣೆಗೆ ಬದ್ಧರಾದವರು. ಮೇಲಾಗಿ ಮಾದಾರ ಚೆನ್ನಯ್ಯನಂಥ ದಲಿತರು, ಅಯ್ದಕ್ಕಿ ಮಾರಯ್ಯನಂಥ ಬಡವರು, ಶಿವಯೋಗ-ಕಾಯಕ-ದಾಸೋಹಗಳ ಆದರ್ಶದಲ್ಲಿ ಬದುಕುವವರು ದೇವಾಲಯದಂಥ ರಾಜಪೋಷಿತ ದೊಡ್ಡ ಧಾರ್ಮಿಕ ಸಂಸ್ಥೆಗಳನ್ನು ಬಹಿರಂಗವಾಗಿ ನಾಶಮಾಡುವುದು ಹೇಗೆ ಸಾಧ್ಯ? ಇವರ ವಚನಗಳಲ್ಲಿ ದೇವಾಲಯ 'ನಿರಾಕರಣೆ' ಪ್ರತಿಪಾದನೆಯಿದೆಯೇ ಹೊರತು ತಪ್ಪಿಯೂ 'ನಾಶ'ದ ಪ್ರಸ್ತಾಪ ಕಂಡುಬರುವುದಿಲ್ಲ. ಹೀಗಾಗಿ ಬಸದಿಗಳ ನಾಶಕ್ಕೆ ಕಾರಣರಾದವರು ಲಿಂಗಾಯತ ಶರಣರಲ್ಲ. ಲಿಂಗಾಯತರಲ್ಲಿ ಲೀನರಾದ ಶೈವಪಂಥೀಯ ವೀರಮಾಹೇಶ್ವರರೆಂದು ಖಂಡಿತವಾಗಿ ಹೇಳಬಹುದು. ಇಂಥ ವೀರಮಾಹೇಶ್ವರರಾದ ಆದಯ್ಯ, ಏಕಾಂತ ರಾಮಯ್ಯ ಮೊದಲಾದವರ ಸಾಲಿನಲ್ಲಿ ಈ ವೀರಗೊಗ್ಗಿದೇವನನ್ನು ಪರಿಗಣಿಸಬಹುದಾಗಿದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ಪ್ರಾಚೀನ ಕಾಲದಲ್ಲಿ ಜೈನಧರ್ಮವು ಬ್ರಾಹ್ಮಣರಿಗೆ ಮತಾಂತರದೀಕ್ಷೆ, ಅಬ್ರಾಹ್ಮಣರಿಗೆ ಮಂತ್ರದೀಕ್ಷೆ ನೀಡುತ್ತಿದ್ದಿತು. ಇದರಿಂದಾಗಿ ಬಹುಸಂಖ್ಯೆ ಅಬ್ರಾಹ್ಮಣರು ಕೇವಲ ಪಂಚನಮನಸ್ಕಾರವೆಂಬ ಮಂತ್ರ ಪಡೆದು ಜೈನಧರ್ಮದ ಅನುಯಾಯಿಗಳಾಗಿ ಹೊರಗೆ ನಿಂತವರಾಗಿದ್ದರು. ಈ ಸಂದರ್ಭದಲ್ಲಿ ಹುಟ್ಟಿದ ಬಸವಣ್ಣನು ಬ್ರಾಹ್ಮಣ-ಅಬ್ರಾಹ್ಮಣರೆನ್ನದೆ ಎಲ್ಲರಿಗೂ ಮತಾಂತರದೀಕ್ಷೆ ನೀಡುವ ಹೊಸಪದ್ಧತಿಯನ್ನು ಅಸ್ತಿತ್ವಕ್ಕೆ ತರುತ್ತಲೇ, ಜೈನಧರ್ಮದ ಅನುಯಾಯಿಗಳಾಗಿ ಹೊರಗೆ ನಿಂತಿದ್ದ ಬಹುಸಂಖ್ಯೆ ಅಬ್ರಾಹ್ಮಣರು ಲಿಂಗಾಯತದ ಒಳಗೆ ಬಂದರು. ಇದರಿಂದ ಜೈನಬೆಂಬಲಿಗರ ಸಂಖ್ಯೆ ತಟ್ಟನೇ ಇಳಿಮುಖವಾಗುವಲ್ಲಿ, ಆ ಧರ್ಮ ದುರ್ಬಲವಾಯಿತು. ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳುವ ರೀತಿಯಲ್ಲಿ ದಕ್ಷಿಣದ ಶ್ರೀವೈಷ್ಣವರು ವೀರವೈಷ್ಣವ ಹೆಸರಿನಿಂದ, ಉತ್ತರದ ಶೈವರು ವೀರಮಾಹೇಶ್ವರ ಹೆಸರಿನಿಂದ ಜೈನಧರ್ಮದ ಮೇಲೆ ಬಹುದೊಡ್ಡ ಆಕ್ರಮಣ ಆರಂಭಿಸಿದರು. ಇವರಲ್ಲಿ ಒಬ್ಬನಾಗಿದ್ದಾನೆ, "ಜೈನಮೃಗಬೇಂಟೆಕಾರ" ವೀರಗೊಗ್ಗಿದೇವ. ಅಣ್ಣಿಗೆರೆಯ ಇಂದಿನ ಪುರದ ವೀರಪ್ಪನ (ವೀರಭದ್ರನ) ಗುಡಿಯ ಆವರಣದಲ್ಲಿ ಈ ಗೊಗ್ಗಿದೇವನನ್ನು ಕುರಿತ ಪ್ರಸ್ತುತ ಶಾಸನವಿದೆ. ಇಲ್ಲಿ 'ಪುರದ ವೀರಭದ್ರ' ಶಬ್ದದ ಬಗ್ಗೆ ಚರ್ಚೆ ಅವಶ್ಯವೆನಿಸಿತ್ತದೆ. ಪ್ರಾಚೀನ ಕಾಲದಲ್ಲಿ ವೈದಿಕ ಶೈವಬ್ರಾಹ್ಮಣರಿಂದ ಭಿನ್ನವಾಗಿ ಮೇಲೆ ಹೇಳಿದ ಆಗಮಿಕ (ಶುದ್ಧ) ಶೈವ ಬ್ರಾಹ್ಮಣರ ಸಂಪ್ರದಾಯವೊಂದು ಅಸ್ತಿತ್ವದಲ್ಲಿದ್ದಿತು. ಈ ಬ್ರಾಹ್ಮಣರ ಮುಂದುವರಿದ ಸಮಾಜವೇ ಇಂದಿನ ಆರಾಧ್ಯಜಂಗಮರು. ಇವರು ೧೫ನೇ ಶತಮಾನದ ಸುಮಾರಿಗೆ ಕಲ್ಪಿಸಿದ ಆಚಾರ್ಯರೇ ಇಂದಿನ ಪಂಚಾಚಾರ್ಯರು. ಬಸವಣ್ಣನ ತಂದೆ ಮಾದಿರಾಜ ಈ ಆಗಮಿಕ (ಶುದ್ಧ)ಶೈವ ಬ್ರಾಹ್ಮಣನಾಗಿದ್ದಾನೆ. ಈ ಬ್ರಾಹ್ಮಣರು ವಾಸಿಸುತ್ತಿದ್ದ ಬಡಾವಣೆಗಳಿಗೆ 'ಪುರ' ಎಂದು ಕರೆಯುತ್ತಿದ್ದರು. ಹಾವೇರಿಯಲ್ಲಿ 'ಪುರದ ಸಿದ್ದೇಶ್ವರ' ಬಡಾವಣೆ ಇರುವುದನ್ನು, ಅನೇಕ ಕಡೆ 'ಪುರ' ಹೆಸರಿನ ಗ್ರಾಮಗಳಿರುವುದನ್ನು, ಈಗಲೂ ಪುರದಮಠ ಅಡ್ಡಹೆಸರಿನ ಜಂಗಮ ಮನೆತನಗಳಿರುವುದನ್ನು, ಅಣ್ಣಿಗೆರೆ ಶಾಸನವು ಪುರದ ವೀರಭದ್ರನ ಗುಡಿ ಪರಿಸರದಲ್ಲಿ ಲಭ್ಯವಾದುದನ್ನು ಇಲ್ಲಿ ನೆನೆಯಬಹುದು. ಈ 'ಪುರ' ಬಡಾವಣೆಯ ಪ್ರಮುಖವನ್ನು 'ಪುರವರಾಧೀಶ್ವರ' ಎನ್ನುತ್ತಿದ್ದರು. ಬಸವಣ್ಣನ ತಂದೆ ಮಾದಿರಾಜನನ್ನು ಅರ್ಜುನವಾಡ ಶಾಸನ 'ಬಾಗವಾಡಿ ಪುರವರಾಧೀಶ್ವರ' ಎಂದು ಕರೆದುದು ಈ ಅರ್ಥದಲ್ಲಿ. ಶುದ್ಧಶೈವ ಬ್ರಾಹ್ಮಣರು ವಾಸಿಸುತ್ತಿದ್ದ ಈ 'ಪುರ' ಬಡಾವಣೆಯಲ್ಲಿ ೧೩ನೆಯ ಶತಮಾನದ ಬಳಿಕ ವೀರಭದ್ರನನ್ನು ಸ್ಥಾಪಿಸುವುದು

ಆರಂಭವಾಯಿತು. (ಈ ಮೊದಲು ವೀರಭದ್ರನ ದೇವಾಲಯವಾಗಲೀ, ವೀರಭದ್ರ ವಿಗ್ರಹದ ಪೂಜೆಯಾಗಲೀ ಕರ್ನಾಟಕದಲ್ಲಿ ಕಂಡುಬರುವುದಿಲ್ಲ). ಈ 'ಪುರ'ದಲ್ಲಿಯ ವೀರಭದ್ರನ ವಿಶಿಷ್ಟ ಆರಾಧಕರಾದ ಉಗ್ರಭಕ್ತರೇ ಪುರವಂತರು. ಪರವಾದಿಗಳನ್ನು ನಿಗ್ರಹಿಸುವುದೂ ಬಸದಿ ಇತ್ಯಾದಿಗಳನ್ನು ಧ್ವಂಸಗೊಳಿಸುವುದೂ ಇವರ ಕಾರ್ಯವಾಗಿದ್ದಿತು. ಈ 'ಪುರ' ಪರಿಕಲ್ಪನೆಯ ಬಗ್ಗೆ ವಿಶೇಷ ಅಭ್ಯಾಸ ನಡೆಯುವುದು ಅವಶ್ಯವಿದೆ.

ಈ ಉಗ್ರ ಆಚರಣೆಯ (ವೀರ) ಮಾಹೇಶ್ವರನನ್ನು 'ಅಸಂಖ್ಯಾತ'ರೆಂದೂ ಕರೆಯುತ್ತಿದ್ದರು. ಪ್ರಸ್ತುತ ಅಣ್ಣಿಗೆರೆ ಶಾಸನದಲ್ಲಿ ವೀರಗೊಗ್ಗಿದೇವನನ್ನು"ಅಸಂಖ್ಯಾತರ ಪುತ್ರ"ನೆಂದು ಸೂಚಿಸಲಾಗಿದೆ. ತಾಳಿಕೋಟಿ ಶಾಸನವು (೧೧೮೪) ಪರಿಯಳಿಗೆ, ಅಣಿಲೆವಾಡ, ಉಣಕಲ್ಲ, ಸಂಪಗಾವಿ, ಅಬ್ಬಲೂರು, ಮಾರುಡಿಗೆ, ಅಣಂಪುರ, ಕರಹಾಡ, ಕೆಂಭಾವಿ, ಬಮ್ಮಕೂರು ಮೊದಲಾದ ಗ್ರಾಮಗಳಲ್ಲಿ ಅನ್ಯಮತೀಯ ದೇವಾಲಯ ನಾಶ ಮಾಡಿದವರನ್ನು "ಅಸಂಖ್ಯಾತ"ರೆಂದೇ ಕರೆಯಲಾಗಿದೆ. ಶ್ರೀಶೈಲದಲ್ಲಿ ಅರಸುಮಠದ ಈಶ್ವರಶಿವಾಚಾರ್ಯರಿಂದ ಮಲ್ಲಿಕಾರ್ಜುನ ದೇವಾಲಯದ ಸಮಸ್ತ ಆಸ್ತಿ, ಪೂಜಾವ್ಯವಸ್ಥೆ ಕಸಿದುಕೊಂಡವರನ್ನು (ವೀರ ಭಿಕ್ಷಾವೃತ್ತಿ ಮಠದವರು?) ಅಲ್ಲಿಯ ತೆಲಗು ಶಾಸನ (೧೩೧೩) 'ಅಸಂಖ್ಯಾತ ಮಾಹೇಶ್ವರ'ರೆಂದೇ ಕರೆದಿದೆ. ಬಳ್ಳಾರಿ ಜಿಲ್ಲೆಯ ಕುಡುತಿನಿ ಗ್ರಾಮದ ಮೂರು ಶಾಸನಗಳಲ್ಲಿ "ಅಸಂಖ್ಯಾತಗಣ", "ಅಸಂಖ್ಯಾತ ಭಕ್ತ"ರನ್ನು 'ಶಿವದೂಷಕನಂ ಜವನೊಕ್ಕಲಿಕ್ಕುವರ್' ಎಂದು ವರ್ಣಿಸಲಾಗಿದೆ. ಈ "ಅಸಂಖ್ಯಾತ"ರ ಬಗ್ಗೆ ವಿಶೇಷ ಅಭ್ಯಾಸ ನಡೆಯಬೇಕಿದೆ.

'ಅಸಂಖ್ಯಾತರ ಪುತ್ರ'ನೆಂದು, 'ಜೈನ ಕುಠಾರ'ನೆಂದು ಅಣ್ಣಿಗೆರೆ ಶಾಸನದಲ್ಲಿ ವರ್ಣಿತನಾದ ಈ ವೀರಗೊಗ್ಗಿದೇವನ ಚರಿತ್ರೆಯ ಬಗ್ಗೆ ಈವರೆಗೆ ಯಾರೂ ಆಸಕ್ತಿ ವಹಿಸಿಲ್ಲ ಮತ್ತು ಈ ಶಾಸನೋಕ್ತ ಅಂಶಗಳನ್ನು ವಿವರವಾಗಿ ಬಿಡಿಸಿನೋಡಿಲ್ಲ. ಈಗ ಈ ಶಾಸನವನ್ನು ವಿವರವಾಗಿ ಚರ್ಚಿಸಿ, ಪೂರಕ ಮಾಹಿತಿಯನ್ನು ಸಂಗ್ರಹಿಸಿ, ಈತನ ಒಂದು ಸಮಗ್ರ ಚಿತ್ರವನ್ನು ತಕ್ಕಮಟ್ಟಿಗೆ ಬಿಡಿಸಬಹುದಾಗಿದೆ.

ಕಳಚೂರ್ಯರನ್ನು ನಾಶಮಾಡಿ, ಚಾಲುಕ್ಯ ಸೋಮೇಶ್ವರನನ್ನು ಪಟ್ಟಕ್ಕೆ ಕುಳ್ಳಿರಿಸಿದ ಸೇನಾಪತಿ ವೀರಬೊಮ್ಮದೇವನ ಪರಾಕ್ರಮದ ವರ್ಣನೆಯೊಂದಿಗೆ ಆರಂಭವಾಗುವ ಈ ಅಣ್ಣಿಗೆರೆ ಶಾಸನದ ಕಾಲ ಕ್ರಿ.ಶ. ೧೧೮೪. ಇಲ್ಲಿ ಗೊಗ್ಗಿದೇವನ ವಂಶಾವಳಿಯನ್ನು ಹೀಗೆ ಹೇಳಲಾಗಿದೆ: ಇವನ ಪೂರ್ವಜರು ಗಂಗಾತೀರ ಪಾರಿಯಾತ್ರ ಮಧ್ಯದೇಶದ ಪ್ರದೇಶಕ್ಕೆ ಅಧೀಶ್ವರರಾಗಿದ್ದರು. (ಈ ಮಧ್ಯದೇಶದ ರಾಜಧಾನಿ ಮಾಹಿಷ್ಮತೀಪುರವೆಂದು ಅನ್ಯಶಾಸನಗಳಿಂದ ತಿಳಿದುಬರುತ್ತದೆ). ಇವರದು ಅಹಿ[ಹೈ]ಹಯ ವಂಶ. ಅಯ್ಯಣಾನ್ವಯ, ಕಾರ್ತವೀರ್ಯ ಪರಂಪರೆ. ಈ ವಂಶದ ಮೊದಲಿಗ ಸಗರಚಕ್ರವರ್ತಿ; ಬಳಿಕ ಈಶ್ವರ ಚರಣಕಮಲಸೇವಕನಾದ ಸಹಸ್ರಬಾಹು; ಆಮೇಲೆ ಅನೇಕರು ಆಳಿದರು. ತರುವಾಯದವ ದೇ(ರೇ?)ವರಸ. ಇವನ ಪತ್ನಿ ಮಹಾದೇವಿ. ಇವರ ಮಗ ವೀರಗೊಗ್ಗಿದೇವ. ಪರಾಕ್ರಮಶಾಲಿಯಾದ ಈ ಗೊಗ್ಗಿದೇವನ ಹೆಂಡತಿ ಸೋಮಲದೇವಿ. ಇವರ ಮಗ ರಾಮದೇವಕುಮಾರ. ಇಷ್ಟು ಈ ಶಾಸನದಿಂದ ತಿಳಿದು ಬರುವ ಕುಟುಂಬ ವಿವರಗಳು.[೧]

ಗೊಗ್ಗರಸನನ್ನು ಇಲ್ಲಿ ಮಂಡಳಿಕಾಗ್ರಣಿ, ಗಣಿಕಗಣಾಗ್ರಣಿ, ವೀರಗೊಗ್ಗಿದೇವ, ಗೊಗ್ಗಿನೃಪಾಳ, ಗೊಗ್ಗಿಭೂಪ, ಗೊಗ್ಗಿಭೂಭುಜ, ಗೊಗ್ಗಿದೇವ, ವೀರಗೊಗ್ಗಿ ದೇವರಸ, ಸಗರದ ವೀರಗೊಗ್ಗರಸ, ಗೊಗ್ಗ

---

೧. ಈ ವಂಶಾವಳಿ ಕೆಲವು ಶಾಸನಗಳಲ್ಲಿ ಒಂದಿಷ್ಟು ಬೇರೆಯಾಗಿದೆ.

ಸಗರಾಧಿಪ ಎಂದೂ ಕರೆಯಲಾಗಿದೆ. ಈ ವಿವರಣೆಯಿಂದ ಈತ ಹೈಹಯವಂಶದವ, ಸಗರ ನಾಡಿನ ರಾಜಪರಿವಾರದವ, ಮಂಡಲೇಶ್ವರ, ಗಣಕಾಗ್ರಣಿಯೆಂದು ತಿಳಿದುಬರುತ್ತದೆ. ಈ ಹೈಹಯ ವಂಶದವರ ವಿವರ ಗುಲಬರ್ಗಾ ಜಿಲ್ಲೆಯ ಚಿತಾಪುರ, ಜೇವರಗಿ, ಶಹಪುರ, ಸೇಡಂ ತಾಲೂಕಿನ ಶಾಸನಗಳಲ್ಲಿಯೂ, ರಾಯಚೂರು ಜಿಲ್ಲೆಯ ಶಾಸನಗಳಲ್ಲಿಯೂ ಕಂಡುಬರುತ್ತದೆ. ಇವರು ಸಗರ (ಇದು ನೆರೆಯ ಶಹಪುರ ಪಟ್ಟಣದಲ್ಲಿ ಲೀನವಾಗಿದೆ) ರಾಜಧಾನಿಯಿಂದ ಸಗರ-೩೦೦ (ಕೆಲವು ಶಾಸನಗಳಲ್ಲಿ ಸಗರ-೫೦೦ ಎಂದೂ ದಾಖಲಾಗಿದೆ) ನಾಡನ್ನು ಆಳುತ್ತಲಿದ್ದರು.[೨]

ಅಣ್ಣಿಗೆರೆ ಶಾಸನದ ಪ್ರಕಾರ ಮೇಲೆ ಹೇಳಿದ ಚಾಲುಕ್ಯರ ಸೇನಾಪತಿ ವೀರಬೊಮ್ಮರಸ (ಕುಮಾರ ಬೊಮ್ಮರಸ, ವೀರಬ್ರಹ್ಮದಂಡೇಶ, ಬೊಮ್ಮಿದೇವ ಇತರ ಹೆಸರುಗಳು)ನು ಗದುಗಿನ ತ್ರಿಕೂಟೇಶ್ವರ ದೇವಾಲಯಕ್ಕೆ 'ಪುರ'(ಬಡಾವಣೆ)ವನ್ನು ನಿರ್ಮಿಸುವ ಸಂದರ್ಭದಲ್ಲಿ ಅಣ್ಣಿಗೆರೆಯ ವೀರಬ್ರಹ್ಮೇಶ್ವರದೇವರ ಅಂಗಭೋಗ, ರಂಗಭೋಗ, ಖಂಡಸ್ಫುಟಿತ, ಜೀರ್ಣೋದ್ಧಾರ, ಸಕಲ ಮಾಹೇಶ್ವರರ ಆಹಾರಕ್ಕೋಸುಗ "ಸಗರದ ವೀರಗೊಗ್ಗಿದೇವರಸಂಗೆ" ಭೂಮಿಯನ್ನು ದಾನವಾಗಿ ಕೊಟ್ಟನು. ಬಹುಶಃ ಈ ವೀರಬ್ರಹ್ಮೇಶ್ವರ ದೇವಾಲಯವನ್ನು ಶಾಸನೋಕ್ತ ವೀರಬೊಮ್ಮ ದಂಡಾಧಿಪತಿಯೇ ಕಟ್ಟಿಸಿ, ತನ್ನ ಹೆಸರಿನ ಶಿವಲಿಂಗ ಸ್ಥಾಪಿಸಿರಬೇಕು. ತರುವಾಯದ ದಿನಗಳಲ್ಲಿ ಇಲ್ಲಿಯ ಈಶ್ವರಲಿಂಗವನ್ನು ತೆಗೆದುಹಾಕಿ, (ಎದುರಿನ ನಂದಿ ಮಾತ್ರ ಉಳಿದುಕೊಂಡಿದೆ) ವೀರಭದ್ರನನ್ನು ಸ್ಥಾಪಿಸುವಲ್ಲಿ ಇದನ್ನು ಪುರದ ವೀರಭದ್ರನ, ಪುರದ ವೀರಪ್ಪನ ದೇವಾಲಯವೆಂದು ಕರೆಯತೊಡಗಿದರೆಂದು ತೋರುತ್ತದೆ. ಅದೇನೇ ಇದ್ದರೂ ಗೊಗ್ಗರಸನು ದೂರದ ಸಗರನಾಡಿನಿಂದ ಅಣ್ಣಿಗೆರೆಗೆ ಬಂದು ನೆಲೆಸಿದ ಕಾರಣ ಸ್ಪಷ್ಟವಾಗುವುದಿಲ್ಲ. ಒಮ್ಮೆ ಮಂಡಳಿಕಾಗ್ರಣಿಯೆಂದೂ, ಇನ್ನೊಮ್ಮೆ ಗಣಕಗಣಾಗ್ರಣಿಯೆಂದೂ ಕರೆದುದರ ಉದ್ದೇಶವೂ ಸ್ಪಷ್ಟವಾಗುವುದಿಲ್ಲ. ಹೀಗೆ ಮಂಡಳಿಕಾಗ್ರಣಿಯಾಗಿರುವ ಈತನು ಮಠದ ಆಚಾರ್ಯ ಇಲ್ಲವೆ ದೇವಾಲಯದ ಅರ್ಚಕನಂತೆ ದಾನ ಸ್ವೀಕರಿಸಿದುದೂ ಸಹಜವೆನಿಸುವುದಿಲ್ಲ. ಇದಕ್ಕೆ ನಾವು ಉತ್ತರ ಹುಡುಕಬೇಕಾಗಿದೆ.

ಈ ಶಾಸನದಲ್ಲಿ ಈತನನ್ನು ವೀರಗೊಗ್ಗರಸನೆಂದೂ ಬ್ರತವೀರ ಗೊಗ್ಗರಸನೆಂದೂ ಉಲ್ಲೇಖಿಸಲಾಗಿದೆ. ಬಹುಶಃ ಈತ ವೀರವ್ರತವೆಂಬ ವಿಶಿಷ್ಟ ವ್ರತಧಾರಿಯಾಗಿರಬಹುದು. ಈ ವ್ರತವೇ ವೀರಮಾಹೇಶ್ವರ, ವೀರಶೈವಗಳಿಗೆ ದಾರಿಮಾಡಿಕೊಟ್ಟಿರಬಹುದು. ಈ ವ್ರತವೀರನಾದ ಗೊಗ್ಗಿದೇವನು ಪೂರೈಸಿದ ಜೈನಧ್ವಂಸಕಾರ್ಯಗಳನ್ನು ಇಲ್ಲಿ ಹೀಗೆ ಹೇಳಲಾಗಿದೆ:

ಜಯಿನಮ್ರಿಗ ಬೇಂಟೆಕಾರಂ
ಜಯಿನಾಗಮ ಧೂಮಕೇತು ಜಯಿನಕು[ಠಾ]ರಂ ।
ಜಯಿನಫಣಿ ವೈನತೇಯಂ
ಜಯಿನಾನ್ತಕನೆನಿಸಿ ನೆಗಳ್ದನೀ ಗೊಗ್ಗರಸಂ॥
ಅಗ್ಗದ ಘಟಾಂತಿಕೆಯಂ ಅದೆ
ನುಗ್ಗಾಗಿರೆಯೊಡೆದು ಕಳೆದು ಜಿನನಂ ತಾ ಗೆಲೆ
ದುರ್ಗ್ಗತಿಯೊಳಿಕ್ಕಿ ಮೆಟ್ಟಿದ
ಗೊಗ್ಗರಸಾಗ್ರಣಿ ಕೊಮಾರ ಆಹವಧೀರಂ॥

---

೨. ಈ ವಂಶದವರ ಶಾಸನಗಳಿಗೆ 'ಗುಲಬರ್ಗಾ ಜಿಲ್ಲೆಯ ಶಾಸನಗಳು' (ಸಂ. ಹನುಮಾಕ್ಷಿ ಗೋಗಿ) ನೋಡಿರಿ.

ಈ ಪದ್ಯಗಳಲ್ಲಿ ಹೇಳಲಾದ ಜೈನ ತೀರ್ಥಂಕರ, ಪದ್ಮಾವತಿ (ಘಟಾಂತಿಕೆ) ವಿಗ್ರಹಗಳನ್ನು ನಾಶಮಾಡಿದ ಇವನ ಆಕ್ರಮಣಕಾರಿ ಘಟನೆಯು ಯಾವ ಊರಿನಲ್ಲಿ ಜರುಗಿತೆಂಬುದು ಸ್ಪಷ್ಟವಿಲ್ಲ. ಬಹುಶಃ ಅಣ್ಣಿಗೆರೆ (ಇಲ್ಲವೆ ಪದ್ಮಾವತಿ=ಲೊಕ್ಕಿ ಪ್ರಸಿದ್ಧಿಯ ಲಕ್ಕುಂಡಿ)ಯಲ್ಲಿ ಜರುಗಿರಬೇಕು. ಇದಲ್ಲದೆ ಇನ್ನೂ ಮೂರು ಪದ್ಯಗಳಲ್ಲಿ ಈತನ ಸಾಮರ್ಥ್ಯವನ್ನು ವಿವರಿಸಲಾಗಿದ್ದು, ಅವುಗಳಲ್ಲಿ ಒಂದು, ಈತನು ಭಾರವಾದ ಚೀಲವನ್ನೆತ್ತಿದುದಾಗಿದೆ. ವೀರಶೈವಾಮೃತ ಪುರಾಣದಲ್ಲಿ 'ಒಡನೆ ಭವಿಗಳು ನೆಗಪಲಾರದ ಹಸುಂಬೆಯಂI ಜಡರೀಕ್ಷಿಸಲ್ಕೆತ್ತಿ ಲೊಕ್ಕೆಯೆಂಬೂರೊಳಗೆ ಮೆರೆದ ಚೀಲಾಳದೇವಂ' (೮-೪-೩೯) ಎಂಬ ಉಲ್ಲೇಖವಿದ್ದು, ಅಣ್ಣಿಗೆರೆಗೆ ಸಮೀಪದ ಲಕ್ಕುಂಡಿ(=ಲೊಕ್ಕಿ)ಯಲ್ಲಿ ಚೀಲಾಳದೇವನಿಂದ ಜರುಗಿದ ಚೀಲ (ಹಸುಂಬೆ) ಎತ್ತಿದ ಈ ಘಟನೆಗೂ ವೀರಗೊಗ್ಗಿದೇವನು ಚೀಲಯೆತ್ತಿದ ಘಟನೆಗಳಿಗೂ ಇರಬಹುದಾದ ಸಂಬಂಧ ಶೋಧನೀಯವಾಗಿದೆ.

ಮುಸಲ್ಮಾನರಿಂದಾಗಿ ಹಿಂದೂದೇವಾಲಯಗಳೂ, ಹಿಂದೂಗಳಿಂದಾಗಿ ಜೈನಬಸದಿ (ಬೌದ್ಧವಿಹಾರ)ಗಳೂ ನಾಶವಾಗುತ್ತ ಬಂದ ಇತಿಹಾಸ ಸುದೀರ್ಘವಾದುದು. ಜಾತಿಯ ವಿಷಯವಾಗಿ ಶ್ರೀವೈಷ್ಣವರದು ಒಂದಿಷ್ಟು ತೆರೆದ ಮುಕ್ತಮಾರ್ಗ, ಲಿಂಗಾಯತರದು ತೆರೆದ ಅತಿಮುಕ್ತಮಾರ್ಗ ಕಾರಣವಾಗಿ, ಜೈನಕ್ಕೆ ಒಕ್ಕಲು (ಅನುಯಾಯಿ) ಆಗಿದ್ದ ಅಬ್ರಾಹ್ಮಣರು ಅದಕ್ಕೆ ವಿಮುಖರಾದರು. ತಾವು ಮತಾಂತರವಾಗುವುದರೊಂದಿಗೆ ತಾವೇ ಕಟ್ಟಿಸಿಕೊಟ್ಟಿದ್ದ ಬಸದಿಗಳನ್ನು ಮತಾಂತರಗೊಳಿಸಿದರು. ಸಾಲದುದಕ್ಕೆ ಜೈನಸಮಾಜದ ಮೇಲೆ ಶ್ರೀವೈಷ್ಣವ, ಶೈವ (ವೀರಮಾಹೇಶ್ವರ)ರ ದಾಳಿ ನಿರಂತರ ಜರುಗಿತು. ಇದರ ಪರಿಣಾಮವಾಗಿ ಕರ್ನಾಟಕದ ಬಹಳಷ್ಟು ಜೈನಬಸದಿಗಳು ಹಾಳಾದವು. ಶೈವ, ವೈಷ್ಣವ ದೇವಾಲಯಗಳಾಗಿ ಮಾರ್ಪಟ್ಟವು.

ಈ ಮಾಲಿಕೆಯಲ್ಲಿ ವೀರಗೊಗ್ಗಿದೇವನ ಈ ಶಾಸನೋಕ್ತ ಘಟನೆಯು (ಇಂದಿನ ಪಂಚಾಚಾರ್ಯರ ಮೂಲನೆಲೆಯಾದ) ಶುದ್ಧಶೈವದ ಇತಿಹಾಸದಲ್ಲಿ ಚರಿತ್ರಾರ್ಹವೆನಿಸಿತು. ಕೇವಲ ಶಾಸನಗಳಲ್ಲಲ್ಲದೆ, ಶುದ್ಧಶೈವಮೂಲದ ಲಿಂಗಾಯತ ಕವಿಗಳಾದ ಹರಿಹರ, ರಾಘವಾಂಕಾದಿಗಳ ಪುರಾಣಗಳಲ್ಲಿಯೂ ಇಂಥ ಉಗ್ರ ಘಟನೆಗಳು ದಾಖಲಾದವು.

ಆಕರ : ಮಾರ್ಗ ಸಂಪುಟ–೩

೫೭

ವಿಜ್ಞಾನೇಶ್ವರನ ಮರ್ತೂರು ಶಾಸನ : ಮೂರು ಸಂದೇಹಗಳು

ಭಾರತೀಯ ನ್ಯಾಯಶಾಸ್ತ್ರದ ಇತಿಹಾಸದಲ್ಲಿ 'ಮಿತಾಕ್ಷರ' ಗ್ರಂಥಕ್ಕೆ ಗಣ್ಯಸ್ಥಾನವಿದೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯ(೧೦೭೬-೧೧೨೬)ನ ಕಾಲಾವಧಿಯಲ್ಲಿ ಹುಟ್ಟಿದ ಇದು ಯಾಜ್ಞವಲ್ಕ್ಯಸ್ಮೃತಿಗೆ ಬರೆದ ಸಂಸ್ಕೃತ ವ್ಯಾಖ್ಯಾನವಾಗಿದ್ದು, ಇದರ ಕರ್ತೃ ವಿಜ್ಞಾನೇಶ್ವರನು ಗುಲ್ಬರ್ಗಾ ಜಿಲ್ಲೆಯ ಮರ್ತೂರು ಗ್ರಾಮದವನೆಂದು ಅಲ್ಲಿಯ ಶಾಸನ (ಕ್ರಿ.ಶ. ೧೧೨೩) ತಿಳಿಸುವುದೆಂದು ವಿದ್ವಾಂಸರ ಅಭಿಮತ. ಇದರ ಚರ್ಚೆ ಈ ಲೇಖನದ ಉದ್ದೇಶವಾಗಿದೆ.

ಡಾ. ಪಿ. ಬಿ. ದೇಸಾಯಿಯವರು ಈ ಶಾಸನವನ್ನು ೧೯೩೨ರಲ್ಲಿ ಶೋಧಿಸಿ 'ಪ್ರಾಚೀನ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟಿಸಿದರು. ಆಮೇಲೆ ಡಾII ವಿ. ಎಸ್. ಕುಲಕರ್ಣಿ, ಶ್ರೀ ಸೀತಾರಾಮ್ ಜಾಗೀರ್‌ದಾರ್, ಡಾ. ಜೆ. ಎಂ. ನಾಗಯ್ಯ ಮೊದಲಾದವರು ಹೆಚ್ಚಿನ ವಿವರಗಳೊಂದಿಗೆ ಲೇಖನ ಬರೆದರು. ಇದೆಲ್ಲವನ್ನು ಗಮನಿಸಿ ಜಸ್ಟಿಸ್ ಶ್ರೀ ಎಂ. ರಾಮಾಜೋಯಿಸ್ ಅವರು ೧೯೯೦ರಲ್ಲಿ ಮರ್ತೂರನ್ನು ಸಂದರ್ಶಿಸಿ, "ರಾಷ್ಟ್ರೀಯ ವಿಜ್ಞಾನೇಶ್ವರ ಸ್ಮಾರಕ ಭವನ ಮತ್ತು ಸಂಶೋಧನ ಕೇಂದ್ರ" ಸ್ಥಾಪಿಸಿದರು. ಗುಲ್ಬರ್ಗಾ ವಿಶ್ವವಿದ್ಯಾಲಯವೂ ಇಲ್ಲಿ "ವಿಜ್ಞಾನೇಶ್ವರ ಅಧ್ಯಯನ ಪೀಠ"ವನ್ನು ಸ್ಥಾಪಿಸಿತು. ಇತ್ತೀಚೆ ಶ್ರೀ ಶ್ರೀನಿವಾಸ್ ಸಿರನೂರಕರ್ ಅವರು 'ವಿಜ್ಞಾನೇಶ್ವರ-ಮಿತಾಕ್ಷರ' ಹೆಸರಿನ ಗ್ರಂಥ ಬರೆದು, ಗುಲ್ಬರ್ಗಾ ವಿಶ್ವವಿದ್ಯಾಲಯದ ಮೂಲಕ ಪ್ರಕಟಿಸಿದರು. ಈ ಎಲ್ಲ ಶೋಧ, ಬರವಣಿಗೆ, ಸ್ಮಾರಕ ನಿರ್ಮಾಣ, ಅಧ್ಯಯನ ವ್ಯವಸ್ಥೆಗಳಿಗೆ ಮೂಲಪ್ರೇರಣೆ ವಿಜ್ಞಾನೇಶ್ವರನ ಹೆಸರನ್ನು ಪ್ರಸ್ತಾಪಿಸುವ ಮರ್ತೂರು ಶಾಸನ. ಈಗ ಈ ಶಾಸನವನ್ನು ಪುನಃಪರಿಶೀಲಿಸಿ ೧. ಶಾಸನೋಕ್ತ ವಿಜ್ಞಾನೇಶ್ವರನು ವೈದಿಕ ಶೈವಬ್ರಾಹ್ಮಣನಲ್ಲ. ಆಗಮಿಕ ಶೈವಬ್ರಾಹ್ಮಣ, ೨. ಶಾಸನೋಕ್ತ ವಿಜ್ಞಾನೇಶ್ವರನು ಮಿತಾಕ್ಷರದ ವಿಜ್ಞಾನೇಶ್ವರನಲ್ಲ, ಮತ್ತು ೩. ಶಾಸನೋಕ್ತ ವಿಜ್ಞಾನೇಶ್ವರನ ಗ್ರಾಮ ಮರ್ತೂರು ಅಲ್ಲ - ಎಂಬ ಸಂದೇಹಗಳನ್ನು ಇಲ್ಲಿ ಮಂಡಿಸಬಹುದಾಗಿದೆ.

ಶಾಸನೋಕ್ತ ವಿಜ್ಞಾನೇಶ್ವರನು ವೈದಿಕ ಶೈವಬ್ರಾಹ್ಮಣನಲ್ಲ, ಆಗಮಿಕ ಶೈವಬ್ರಾಹ್ಮಣ:

ಕರ್ನಾಟಕದ ಸಂದರ್ಭದಲ್ಲಿ ಬ್ರಾಹ್ಮಣ ಎಂದಾಕ್ಷಣ ಎಲ್ಲ ವಿದ್ವಾಂಸರು ವೈದಿಕ ಪರಂಪರೆಯ ಶಂಕರನ ಅದ್ವೈತ, ರಾಮಾನುಜನ ವಿಶಿಷ್ಟಾದ್ವೈತ, ಮಧ್ವಾಚಾರ್ಯನ ದ್ವೈತಗಳನ್ನು ಮಾತ್ರ ನೆನಪಿಸಿಕೊಳ್ಳುತ್ತಾರೆ. ಇವರಲ್ಲಿ ಅದ್ವೈತವು ಶಿವಪರ, ವಿಶಿಷ್ಟಾದ್ವೈತ - ದ್ವೈತಗಳು ವಿಷ್ಣುಪರ. ಮರ್ತೂರು ಶಾಸನವು ಶಿವಸ್ತುತಿಯೊಂದಿಗೆ ಆರಂಭವಾಗಿ ಅಲ್ಲಲ್ಲಿ ಶೈವ ವಾತಾವರಣವನ್ನು ಪ್ರಕಟಿಸುವುದರಿಂದ, ಇಲ್ಲಿಯ ವಿಜ್ಞಾನೇಶ್ವರನು ಶಂಕರನ ವೈದಿಕ ಶೈವಬ್ರಾಹ್ಮಣನೆಂದು ವಿದ್ವಾಂಸರು ಭಾವಿಸಿದಂತಿದೆ, ಭಾವಿಸಿದ್ದಾರೆ. ಆದರೆ ಶಾಸನದ ಆಂತರಿಕ ಆಧಾರಗಳಿಂದ ಇವನು ಆಗಮಿಕ ಶೈವಬ್ರಾಹ್ಮಣನೆಂದು ಹೀಗೆ ವಿವರಿಸಬಹುದಾಗಿದೆ:

೧. ಪ್ರಾಚೀನ ಕರ್ನಾಟಕದಲ್ಲಿ ವೈದಿಕ ಶೈವಬ್ರಾಹ್ಮಣದಂತೆ ಆಗಮಿಕ ಶೈವಬ್ರಾಹ್ಮಣವು ಅಸ್ತಿತ್ವದಲ್ಲಿದ್ದಿತು. ಬಸವಣ್ಣನ ತಂದೆ ಮಂಡಗೆಯ ಮಾದಿರಾಜ, ಕವಿ ಹರಿಹರ ಮೊದಲಾದವರು ಈ ಆಗಮಿಕ ಶೈವಬ್ರಾಹ್ಮಣರು. ಇವರಿಗೆ ಶುದ್ಧಶೈವಬ್ರಾಹ್ಮಣರೆಂದು ಕರೆಯುತ್ತಿದ್ದರು. ಮಹೇಶ್ವರ (ಶಿವ)ನ ಅನುಯಾಯಿಗಳಾದುದರಿಂದ ಈ ಸಮಾಜದವರಿಗೆ ಮಾಹೇಶ್ವರರೆಂಬುದು ಪರ್ಯಾಯನಾಮವಾಗಿದ್ದಿತು. ಮರ್ತೂರು ಶಾಸನವು ಈ ಆಗಮಿಕ ಬ್ರಾಹ್ಮಣಕ್ಕೆ ಸಂಬಂಧಿಸಿದುದೆಂಬುದನ್ನು ಅದರ ಆರಂಭದ ಸ್ತುತಿಪದ್ಯ ಹೀಗೆ ಸ್ಪಷ್ಟಪಡಿಸುತ್ತದೆ:

ಶ್ರೀಯಂ ಶ್ರೀಪದ್ಮನಾಭಂಗಖಿಳ ಭುವನಸ್ತುತೆಯಾಗಿಳ್ದ ವಾಣಿ
ಶ್ರೀಯಂ ಶ್ರೀಪದ್ಮಗರ್ಭಂಗಮರ ಪರಿವ್ರಿಢಶ್ರೀಯನಿಂದ್ರಂಗೆ, ವೀರ
ಶ್ರೀಯಂ ಶ್ರೀನಂದಿಕೇಶ ಪ್ರಮಥ ಸಮಿತಿಗೀಶಾಂಘ್ರಿ ಪಂಕೇಜಭಕ್ತಿ
ಶ್ರೀಯಂ ಮಾಹೇಶ್ವರರ್ಗ್ಗಿತ್ತನುಪಮನೆಸೆದಂ ಪಾರ್ವ್ವತೀಶಂ ಮಹೇಶಂ ||

ಶಿವನು ವೈದಿಕ ಶೈವ-ಆಗಮಿಕ ಶೈವಗಳೆರಡಕ್ಕೂ ಆರಾಧ್ಯನಾಗಿದ್ದರೂ, ಇಲ್ಲಿಯ 'ನಂದಿಕೇಶ ಪ್ರಮಥ ಸಮಿತಿ', 'ಮಾಹೇಶ್ವರರ್' ಪದಗಳು ಆಗಮಿಕ ಶೈವ ಪರಿಭಾಷೆಗಳಾಗಿವೆ. ಶಿವನ ಕೈಲಾಸದಲ್ಲಿ ನಂದಿಕೇಶ, ಭೃಂಗಿ ಮೊದಲಾದ ಪ್ರಮಥಗಣಗಳ ಪರಿಕಲ್ಪನೆ ಆಗಮಿಕ ಶೈವರಲ್ಲಿದೆಯೇ ಹೊರತು ವೈದಿಕ ಶೈವರಲ್ಲಿಲ್ಲ. 'ಅಂಘ್ರಿ ಪಂಕೇಜಭಕ್ತಿಶ್ರೀಯಂ ಮಾಹೇಶ್ವರರ್ಗೆ' ಶಿವನು ದಯಪಾಲಿಸಲೆಂಬ ಇಲ್ಲಿಯ ಹೇಳಿಕೆಯು 'ಮಾಹೇಶ್ವರ' ಹೆಸರಿನ ಜನವರ್ಗವನ್ನು ಅಂದರೆ ಆಗಮಿಕ ಶೈವಮಾರ್ಗಾನುಯಾಯಿಗಳನ್ನು ಸೂಚಿಸುತ್ತದೆ. ಒಟ್ಟಾರೆ ಆರಂಭದ ಸ್ತುತಿಪದ್ಯದಿಂದಲೇ ಇದು ಆಗಮಿಕ ಶೈವಶಾಸನವೆಂದು ಹೇಳಬಹುದಾಗಿದೆ.

೨. ಈ ಶಾಸನೋಕ್ತ ವಿಜ್ಞಾನೇಶ್ವರನ ಕುಟುಂಬದ ನಾಮುಗಳು ವೈದಿಕ ಶೈವಬ್ರಾಹ್ಮಣರ ನಾಮಗಳಂತಿರದೆ, ಆಗಮಿಕ ಶೈವಬ್ರಾಹ್ಮಣರ ನಾಮಗಳಂತಿವೆ. ಉದಾ:

ಸೋಮ (=ಸೋಮರಾಜ) + ಭಾಗ್ಯವತಿ
|
ಕಂಚ (=ವಿಜ್ಞಾನೇಶ್ವರ)+ ಕೇತಿಕಬ್ಬೆ
|
ಕಾಮದೇವ | ಸೋಮ | ಮಾರಸಿಂಗ | ಬೀಚಿರಾಜ + ಚಾಮಲದೇವಿ

ವೈದಿಕ ಬ್ರಾಹ್ಮಣರಲ್ಲಿ ಕಂಚ, ಮಾರಸಿಂಗ, ಬೀಚ, ಕೇತಿಕಬ್ಬೆ, - ಇಂಥ ಹೆಸರುಗಳು ಕಾಣಸಿಗುವುದಿಲ್ಲವೆಂದೇ ಹೇಳಬೇಕು.

೩. ಅಟ್ಟಳೆ ನಾಡಿನ ಮಾಸೆಯಮಡು ಗ್ರಾಮದ ಈ (ವಿಜ್ಞಾನೇಶ್ವರನ) ಮನೆತನಕ್ಕೆ ಸಂಬಂಧಿಸಿದ ಬೀಚಿ ರಾಜನು, ಅಲಂದೆ ಸಾಸಿರದ ಗೊಂಕನಾಡಿನ ಮರಿತೂರಿನಲ್ಲಿ ಮಹಾದೇವ, ಕೇಶವದೇವ ಹೆಸರಿನ ದೇವಾಲಯ ಕಟ್ಟಿಸಿದ್ದನು. ಈ ದೇವಾಲಯಗಳಿಗೂ, ಇಲ್ಲಿಯ ಬಿಬ್ಬೇಶ್ವರ, ಸೂರ್ಯನಾರಾಯಣ ದೇವಾಲಯಗಳಿಗೂ ಅಲಂದೆವಡಂಗೆ ಬಿರುದಿನ ಗೊಂಕರಾಜ, ಬಿಬ್ಬರಾಜ ಮತ್ತು ಗ್ರಾಮಸ್ಥರು ದಾನ ನೀಡಿದರೆಂದು ಈ ಶಾಸನ ತಿಳಿಸುತ್ತದೆ. ಈ ಶಾಸನದ ಒಳ ವಿವರಗಳಲ್ಲಿ ಆಗಮಿಕ ಶೈವ ವಾತಾವರಣವಿದೆಯೇ ಹೊರತು ವೈದಿಕ ಶೈವ ವಾತಾವರಣವಿಲ್ಲ. ಕೇಶವ ದೇವರ ಉಲ್ಲೇಖ ಒಂದಿಷ್ಟು ಸಂದೇಹ ಹುಟ್ಟಿಸುತ್ತಿದ್ದರೂ, ಆಗಮಿಕ ಶೈವರು ಕೇಶವ ದೇವಾಲಯಕ್ಕೆ

ನಡೆದುಕೊಳ್ಳುತ್ತಿದ್ದರೆಂದು ಕುರಬೆಟ್ಟ ಮೊದಲಾದ ಗ್ರಾಮಗಳ ಶಾಸನ ತಿಳಿಸುವುದನ್ನು ಇಲ್ಲಿ ನೆನೆಯಬಹುದು. ವೈದಿಕ ಬ್ರಾಹ್ಮಣರ 'ಅಗ್ರಹಾರ' ಇತ್ಯಾದಿ ವ್ಯವಸ್ಥೆಗಳೂ 'ಮಹಾಜನ' ಇತ್ಯಾದಿ ಪರಿಭಾಷೆಗಳೂ ಇಲ್ಲಿ ತಪ್ಪಿಯೂ ಕಂಡು ಬರುವುದಿಲ್ಲ.

ಈ ಮೂರು ಆಧಾರಗಳಿಂದ ಶಾಸನೋಕ್ತ ಈ ಮನೆತನ ವೈದಿಕ ಶೈವಬ್ರಾಹ್ಮಣವಲ್ಲ, ಆಗಮಿಕ ಶೈವಬ್ರಾಹ್ಮಣವೆಂದು ಹೇಳಲು ಮನಸ್ಸಾಗುತ್ತದೆ.

ಶಾಸನೋಕ್ತ ವಿಜ್ಞಾನೇಶ್ವರನು 'ಮಿತಾಕ್ಷರ'ದ ವಿಜ್ಞಾನೇಶ್ವರನಲ್ಲ :

೧. ಶಾಸನದಲ್ಲಿ ತಂದೆ ಸೋಮರಾಜನನ್ನು 'ಪೊಣದ್ದರ್ತ್ಯುಗ್ರ [illegible] ಘನಸಮೀರಮುದಗ್ರ ಯಶಂ ಸೋಮರಾಜನೂರ್ಜ್ಜಿತ ತೇಜಂ' ಎಂದೂ, ಮಗ ಕಂಚ (ವಿಜ್ಞಾನೇಶ್ವರ)ನನ್ನು "ಉಜ್ವಳ ಯಶೋನಿಧಿ ಕಂಚನತರ್ಕ್ಯ ವಿಕ್ರಮಂ" ಎಂದೂ, ಕಂಚನ (ವಿಜ್ಞಾನೇಶ್ವರ) ನಾಲ್ಕು ಜನ ಮಕ್ಕಳನ್ನು "ಅನತಾರಾತಿಯನಿಕ್ಕಲುಂ, ಮರೆಗೆವಂದಿದ್ರ್ದಾತನಂ ಕಾಯಲುಂ" ಸಮರ್ಥರೆಂದೂ ವರ್ಣಿಸಲಾಗಿದೆ. ಸಾಲು ೧೨ರಿಂದ ೧೯ರ ವರೆಗೆ ಈ ನಾಲ್ವರ ಶೌರ್ಯ ಔದಾರ್ಯಗಳು ಚಿತ್ರಿತವಾಗಿವೆ. ಮರ್ತೂರಿನಲ್ಲಿ ದೇವಾಲಯ ನಿರ್ಮಿಸಿದ್ದ ನಾಲ್ಕನೆಯ ಮಗ ಬೀಚನಂತೂ ಸಾಲು ೨೯ರಿಂದ ೩೮ರ ವರೆಗೆ ತುಂಬ ವೈಭವದಿಂದ ವರ್ಣಿತನಾಗಿದ್ದಾನೆ. ಈ ವರ್ಣನೆಯನ್ನು ನೋಡಿದರೆ ಈ ಮೂರು ತಲೆಮಾರಿನವರು ರಾಜ್ಯಾಡಳಿತದ ಮುಖ್ಯ ಭಾಗವಾಗಿದ್ದರೆನಿಸುತ್ತದೆ. ನಾಲ್ವರು ಮಕ್ಕಳಲ್ಲಿ ಬೀಚ ಮತ್ತು ಸೋಮರನ್ನು ಪೆರ್ಗ್ಗಡೆಯೆಂದು ಕರೆಯಲಾಗಿದೆ. ಇದಕ್ಕೆ ಪಿರಿಯ ಗಾವುಂಡ-ಪಿರಿಯಗೌಡ ಎಂಬ ಸಾಮಾನ್ಯ ಅರ್ಥವಿದ್ದರೂ, ಶಾಸನೋಕ್ತ ವರ್ಣನೆ ಇವರು ಇನ್ನೂ ದೊಡ್ಡ ಸ್ಥಾನವನ್ನಲಂಕರಿಸಿರಬಹುದೆಂದು ತಿಳಿಸುತ್ತದೆ. ಪರಿಷತ್ತಿನ ನಿಘಂಟುವಿನಲ್ಲಿ ಪೆರ್ಗ್ಗಡೆ ಶಬ್ದಕ್ಕೆ ರಾಯಭಾರಿ, ದೂತ, ಮಂತ್ರಿ, ಪ್ರಧಾನಿ ಇತ್ಯಾದಿ ಅರ್ಥಗಳಿವೆ. ಸೋಮದೇವ ಸೂರಿಯ ನೀತಿವಾಕ್ಯಾಮೃತದಲ್ಲಿ ಸಚಿವ ಪದಕ್ಕೆ ಪೆರ್ಗಡೆ ಅರ್ಥ ಹೇಳಲಾಗಿದೆ (೧೦-೯). ಇದೆಲ್ಲವನ್ನು ಮನದಂದರೆ ಈ ಎಲ್ಲ ತಲೆಮಾರಿನವರು ಸಾಮಾನ್ಯ ಪೆರ್ಗಡೆಗಳಾಗಿರದೆ, ಅತಿಮುಖ್ಯ ರಾಜಕೀಯ ವ್ಯಕ್ತಿಗಳಾಗಿರಬಹುದೆನಿಸುತ್ತದೆ. 'ಮಿತಾಕ್ಷರ' ಕೃತಿಯಲ್ಲಿ ವಿಜ್ಞಾನೇಶ್ವರನ ಬಗ್ಗೆ ಈ ಯಾವ ರಾಜಕೀಯ ಸೂಚನೆಗಳು ಕಂಡುಬರುವುದಿಲ್ಲವಾಗಿ ಇಬ್ಬರೂ ಭಿನ್ನವ್ಯಕ್ತಿಗಳೆಂಬ ಅನುಮಾನ ಮೂಡುತ್ತದೆ.

೨. ಈ ರಾಜಕೀಯ ವಿಚಾರಗಳನ್ನು ಬಿಟ್ಟರೂ ಶಾಸನದಲ್ಲಿ ವಿಜ್ಞಾನೇಶ್ವರನು "ಅರಿಮಕುಟ ತಾಡಿತ ಚರಣನೆನಲು ನೆಗಳ್ದ ವಿಕ್ರಮಾದಿತ್ಯನ ರತ್ನೋತ್ಕರ ನಿಚಿತ ಮುಕುಟತಾಡಿತ ಚರಣಂ ವಿಜ್ಞಾನೇಶ್ವರದೇವರ್", "ನೀರಜಭವ ನಿಭರುದಿತ ಗಭೀರರ್ ವಿಜ್ಞಾನದೇವರ್", "ಕೌಶಿಕಗೋತ್ರಲಲಾಮಂ ಅಂಬುಜೋದ್ಭವ ಕುಲದೀಪಂ ಬುಧನಿಕಾಯ ವಿಪತ್ತಿ ತಿಮಿರಾರಿ ಪಾರ್ವತೀಧವ ಪಾದಪಂಕಭಜ್ರಮರಂ ಇಷ್ಟ ವಿಶಿಷ್ಟ ಜನಾಳಿನೇತ್ರಕೈರವವನ ಚಂದ್ರಂ ಉಜ್ವಳಯಶೋನಿಧಿ ಕಂಚಂ (=ವಿಜ್ಞಾನೇಶ್ವರ) ಅತರ್ಕ್ಯ ವಿಕ್ರಮಂ", "ಸ್ವಸ್ತಿ ಯಮ ನಿಯಮಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಜಪ ಸಮಾಧಿಶೀಲಸಂಪನ್ನರುಂ ಶ್ರೀಮತ್ ತ್ರಿಭುವನಮಲ್ಲದೇವರ ಪರಮಾರಾಧ್ಯರುಮಪ್ಪ ಶ್ರೀಮತ್ ವಿಜ್ಞಾನೇಶ್ವರದೇವರು" ಎಂದು ವರ್ಣಿತನಾಗಿದ್ದಾನೆ.

ಈಗ 'ಮಿತಾಕ್ಷರ'ದಲ್ಲಿ ವಿಜ್ಞಾನೇಶ್ವರನು ತನ್ನ ಬಗ್ಗೆ ನೀಡುವ ವಿವರಗಳನ್ನು ಗಮನಿಸಬಹುದಾಗಿದ್ದು, ಅವು ಹೀಗಿವೆ:

"ಇತಿ ಶ್ರೀಪದ್ಮನಾಭಭಟ್ಟೋಪಾಧ್ಯಾಯಾತ್ಮಜಸ್ಯ ಶ್ರೀಮತ್ಪರಮಹಂಸ ಪರಿವ್ರಾಜಕ ವಿಜ್ಞಾನೇಶ್ವರ ಭಟ್ಟಾರಕಸ್ಯ ಕೃತೌ", "ಧರ್ಮಶಾಸ್ತ್ರಸ್ಯ ವಿವೃತಿರ್ವಿಜ್ಞಾನೇಶ್ವರಯೋಗಿನಃ"

- ಪ್ರಥಮ ಅಧ್ಯಾಯದ ಅಂತ್ಯಪ್ರಶಸ್ತಿ

"ಇತಿ ಶ್ರೀಮತ್ಪದ್ಮನಾಭಭಟ್ಟೋಪಾಧ್ಯಾಯಾತ್ಮಜಸ್ಯ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ವಿಜ್ಞಾನೇಶ್ವರ ಭಟ್ಟಾರಕಸ್ಯ ಕೃತೌ", "ಧರ್ಮಶಾಸ್ತ್ರಸ್ಯ ವಿವೃತಿರ್ವಿಜ್ಞಾನೇಶ್ವರಯೋಗಿನಃ"

- ದ್ವಿತೀಯ ಅಧ್ಯಾಯದ ಅಂತ್ಯಪ್ರಶಸ್ತಿ

"ಇತಿ ಶ್ರೀ ಭಾರದ್ವಾಜ ಪದ್ಮನಾಭಭಟ್ಟೋಪಾಧ್ಯಾಯಾತ್ಮಜಸ್ಯ ಶ್ರೀಮತ್ಪರಮಹಂಸ ಪರಿವ್ರಾಜಕ ವಿಜ್ಞಾನೇಶ್ವರ ಭಟ್ಟಾರಕಸ್ಯ ಕೃತೌ ಋಜುಮಿತಾಕ್ಷರಾಯಾಂ ಯಾಜ್ಞವಲ್ಕ್ಯ ಧರ್ಮಶಾಸ್ತ್ರವಿವೃತೌ ಪ್ರಾಯಶ್ಚಿತ್ತಾಧ್ಯಾಯಸ್ತೃತೀಯಃ ಸಮಾಪ್ತಃ", "ಧರ್ಮಶಾಸ್ತ್ರಸ್ಯ ವಿವೃತಿ ವಿಜ್ಞಾನೇಶ್ವರಯೋಗಿನಃ"

- ತೃತೀಯ ಅಧ್ಯಾಯದ ಅಂತ್ಯಪ್ರಶಸ್ತಿ

ಮೂರೂ ಆಶ್ವಾಸಗಳ ಕೊನೆಗೆ ಬರುವ ಈ ಸಾಮಾನ್ಯ ಪ್ರಶಸ್ತಿಗಳನ್ನು ಬಿಟ್ಟರೂ, ಮೂರನೆಯದರ ಇನ್ನೂ ಕೊನೆಗೆ ಈ ವಿವರಗಳಿವೆ.

ನಾಸೀದಸ್ತಿಭವಿಷ್ಯತೀ ಕ್ಷಿತಿತಲೇ ಕಲ್ಯಾಣ ಕಲ್ಪಂ ಪುರಂ
ನೋ ದೃಷ್ಟಃ ಶ್ರುತ ಏವ ವಾ ಕ್ಷಿತಿಪತೀಃ ಶ್ರೀ ವಿಕ್ರಮಾರ್ಕೋಪಮಃ ।
ವಿಜ್ಞಾನೇಶ್ವರ ಪಣ್ಡಿತೋ ನ ಭಜತೇ ಕಿಂಚಾನ್ಯದನ್ಯೋಪಮು
ಶ್ಯಾಕಲ್ಪಂ ಸ್ಥಿರಮಸ್ತು ಕಲ್ಪ ಲತಿಕಾಕಲ್ಪಂ ತದೇತತ್ರಯಮ್ ॥೪॥

ಸೃಷ್ಟಾವಾಚಾಂ ಮಧುರ ವಪುಷಾಂ ವಿದ್ವದಾಶ್ಚರ್ಯ ಸೀಮ್ನಾಂ
ದಾತಾರ್ಥಿನಾಮತಿಶಯ ಜುಷಾಮರ್ಥಿ ಸಾರ್ಥಾರ್ಥನಾಯಾಃ
ಧ್ಯಾತಾ ಮೂರ್ತೇಃ ಮುರವಿಜಯಿನೋ ಜೀವಿತಾದಾರ್ಕಚಂದ್ರಂ
ಜೇತಾರೀಣಾಂ ತನುಸಹಭುವಾಂ ತತ್ತ್ವ ವಿಜ್ಞಾನನಾಥಃ ॥೫॥

ಆಸೇತೋಃ ಕೀರ್ತಿರಾಶೇಃ ರಘುಕುಲತಿಲಕಸ್ಯಾ ಚ ಶೈಲಾಧಿರಾಜಾ
ದಾಚಪ್ರತ್ಯಕ್ಷಯೋದೇಃ ಚಟುಲ ತಿಮಿಕುಲೋತ್ತುಂಗ ರಂಗತ್ತರಂಗಾತ್
ಆ ಚ ಪ್ರಾಚಸ್ಸಮುದ್ರಾತ್ ನತ ನೃಪತಿಶಿರೋರತ್ನಭಾ ಭಾಸುರಾಂಘ್ರಿಃ
ಪಾಯಾದಾಚಂದ್ರತಾರಂ ಜಗದಿದಮಖಿಲಂ ವಿಕ್ರಮಾದಿತ್ಯದೇವಃ ॥೬॥

ಅನ್ತರ್ಮುಖಾನಿ ಯದಿ ರವಾನಿ ತಪಸ್ತತಃ ಕಿಂ
ನಾನ್ತರ್ಮುಖಾನಿ ಯದಿ ರವಾನಿ ತಪಸ್ತತಃ ಕಿಂ
ಅನ್ತರ್ಬಹಿರ್ಯದಿ ಹರಿಶ್ಚತಪಸ್ತತಃ ಕಿಂ
ಅನ್ತರ್ಬಹಿರ್ಯದಿ ಹರಿಶ್ಚತಪಸ್ತತಃ ಕಿಂ
ನಾನ್ತರ್ಬಹಿರ್ಯದಿ ಹರಿಶ್ಚತಪಸ್ತತಃ ಕಿಂ
ನಾನ್ತರ್ಬಹಿರ್ಯದಿ ಹರಿಶ್ಚ ತಪಸ್ತತಃ ಕಿಂ ॥೭॥

(ಕಲ್ಯಾಣದಂತಹ ನಗರ ಹಿಂದೆ ಇರಲಿಲ್ಲ, ಇಂದು ಇಲ್ಲ, ಮುಂದೆ ಇರುವುದಿಲ್ಲ. ಶ್ರೀ ವಿಕ್ರಮಾದಿತ್ಯನಿಗೆ ಸಮನಾದ ಕ್ಷಿತಿಪತಿಯನ್ನು ಕಂಡಿಲ್ಲ ಕೇಳಿಲ್ಲ. ಇದಕ್ಕಿಂತ ಭಿನ್ನ ಉಪಮೆಯುಳ್ಳ ಯಾವುದನ್ನೂ ವಿಜ್ಞಾನೇಶ್ವರ ಪಂಡಿತ ಭಜಿಸುವುದಿಲ್ಲ. ಕಲ್ಪವಲ್ಲಿಯಂತಹ ಈ ಮೂರು, ಕಲ್ಪ(ಕಾಲ) ದುದ್ದಕ್ಕೂ ಸ್ಥಿರವಾಗಿರಲಿ ॥೪॥ ವಿದ್ವಾಂಸರ ಆಶ್ಚರ್ಯದ ಸೀಮೆಯಾಗಿರುವ, ಮಧುರಕಾಯವುಳ್ಳ ಮಾತುಗಳ ಸೃಷ್ಟಿಕರ್ತನಾಗಿರುವ, ಯಾಚಿಸುವವರಿಗೆ ಅತಿಶಯ ಸಂತೋಷಗೊಳಿಸುತ್ತ ಅರ್ಥಗಳನ್ನು ಕೊಡುವ, ಮುರವಿಜಯಿಯ (ಮುರಾರಿಯ) ಮೂರ್ತಿಯನ್ನು ಆಚಂದ್ರಾರ್ಕ ಧ್ಯಾನಿಸುವ ದೇಹೇಂದ್ರಿಯ ವೈರಿಗಳನ್ನು ಗೆದ್ದ, ತತ್ವಜ್ಞಾನಗಳ ಅಧಿಪತಿಯಾದ(ನಾನು) ॥೫॥ ರಘು ಕುಲತಿಲಕ (ವಿಕ್ರಮಾದಿತ್ಯ)ನಿಗೆ ಆಸೇತು ಹಿಮಾಲಯದ ವರೆಗೆ ಕೀರ್ತಿಯನ್ನು ಹಾರೈಸುತ್ತೇನೆ. ಪಶ್ಚಿಮ ಸಮುದ್ರದಿಂದ ತಿಮಿಂಗಿಲಗಳು ತೇವಳುವ ಉತ್ತುಂಗ ತರಂಗದಿಂದ ಪೂರ್ವಸಮುದ್ರದವರೆಗಿನ ಅರಸರ ಬಾಗಿದ ಶಿರೋರತ್ನಗಳಿಂದ ಪ್ರಕಾಶಿಸುವ ಪಾದಗಳುಳ್ಳ ವಿಕ್ರಮಾದಿತ್ಯದೇವನು ಅಖಿಲ ಜಗತ್ತನ್ನು ಆಚಂದ್ರಾರ್ಕ ಕಾಪಾಡಲಿ ॥೬॥ ಗಣಿಗಳು, ತಪಸ್ಸು ಅಂತರ್ಮುಖಿಯಾಗಿವೆ, ಅಲ್ಲವೇನು? ಗಣಿಗಳು, ತಪಸ್ಸು ಅಂತರ್ಮುಖಿ ಗಳಾಗಿಲ್ಲವಾದರೆ ಅದರಿಂದೇನು (ಫಲ)? ಹರಿಯು ಮತ್ತು ತಪಸ್ಸು ಒಳಗೂ ಹೊರಗೂ ಇದ್ದಾರೆ, ಅಲ್ಲವೇನು? ಹರಿಯು ಮತ್ತು ತಪಸ್ಸು ಒಳಹೊರಗೆ ಇಲ್ಲವಾದರೆ ಅದರಿಂದೇನು (ಫಲ?) ॥೭॥)

ಈ ಪ್ರಶಸ್ತಿಗಳನ್ನು ಬಿಟ್ಟರೆ ಪ್ರಸ್ತುತ ಗ್ರಂಥದಲ್ಲಿ ತನ್ನ ಬಗ್ಗೆ ಬೇರೆ ವಿವರಗಳೇನನ್ನೂ ವಿಜ್ಞಾನೇಶ್ವರ ನೀಡಿಲ್ಲ. ವಿಜ್ಞಾನೇಶ್ವರನೆಂಬ ಹೆಸರು, ವಿಕ್ರಮಾದಿತ್ಯನ ಸಂಬಂಧ- ಇವುಗಳನ್ನು ಬಿಟ್ಟರೆ, ಮಿಕ್ಕಂತೆ ಶಾಸನೋಕ್ತ ಮತ್ತು ಮಿತಾಕ್ಷರೋಕ್ತ ವಿಜ್ಞಾನೇಶ್ವರರು ಭಿನ್ನರೆಂದು ಹೇಳಬಹುದಾದಷ್ಟು ಇಬ್ಬರಲ್ಲಿಯೂ ವ್ಯತ್ಯಾಸವಿದೆ. ೫೦ ವರ್ಷಗಳನ್ನು ದೀರ್ಘಕಾಲ ಆಳಿದ ಅರಸನೊಬ್ಬನ ಅವಧಿಯಲ್ಲಿ ಒಂದೇ ಹೆಸರಿನ ಇಬ್ಬರು ಮಹತ್ವದ ವ್ಯಕ್ತಿಗಳು ಆಗಿಹೋಗುವುದು ಅಸಂಭವವೇನಲ್ಲ. ಇದನ್ನು ಒಪ್ಪಿಕೊಂಡು ಕೆಳಗಿನ ವಿವರಣೆಯಿಂದ ಇವರಿಬ್ಬರೂ ಭಿನ್ನರೆಂದು ಹೇಳಬಹುದಾಗಿದೆ.

ಅ. ಮಿತಾಕ್ಷರದ ವಿಜ್ಞಾನೇಶ್ವರನು ಭಾರಧ್ವಾಜ(ಗೋತ್ರ)ದ ಪದ್ಮನಾಭಭಟ್ಟೋಪಾಧ್ಯಾಯನ ಮಗ. ಶಾಸನೋಕ್ತ ವಿಜ್ಞಾನೇಶ್ವರನು ಕೌಶಿಕಗೋತ್ರದ ಸೋಮರಾಜನ ಮಗ. ಒಂದು ವೇಳೆ ಈ ವೈರುಧ್ಯವನ್ನು ತಪ್ಪಿಸಲು ವಿದ್ವಾಂಸರು "ಈ ಪದ್ಮನಾಭನು ವಿಜ್ಞಾನೇಶ್ವರನ ಗುರುವಾಗಿರಬಹುದು. ತುಂಬ ಗೌರವ ಕೊಡುವ ಉದ್ದೇಶದಿಂದ ತಾನು ಈತನ ಮಗನೆಂದು (ಆತ್ಮಜ) ಹೇಳಿರಬಹುದು" ಎಂದು ವಾದಿಸಿದರೆ, ಅದು ಸಮಸ್ಯೆಯಿಂದ ಜಾರಿಕೊಳ್ಳಲು ಮಾಡಿದ ಊಹೆಯೆನಿಸುತ್ತದೆ. ಮಿತಾಕ್ಷರ ಗ್ರಂಥದಲ್ಲಿಯ ಹೆಸರೇ ತಿಳಿಸುವಂತೆ ವಿಜ್ಞಾನೇಶ್ವರನ ತಂದೆ ಪದ್ಮನಾಭ ವೈಷ್ಣವ, ಶಾಸನ ಹೇಳುವಂತೆ ಸೋಮರಾಜನ ಮಗ ವಿಜ್ಞಾನೇಶ್ವರನು ಶೈವ. ಆದುದರಿಂದ ಇಬ್ಬರಲ್ಲಿ ಗುರು-ಶಿಷ್ಯ ಸಂಬಂಧ ಕಲ್ಪಿಸುವುದೂ ಸರಿಯೆನಿಸುವುದಿಲ್ಲ.

ಆ. ಶಾಸನದಲ್ಲಿ ವಿಜ್ಞಾನೇಶ್ವರದೇವರ್, ವಿಜ್ಞಾನೇಶ್ವರ ಭಟ್ಟಾರಕ ದೇವರ್ ಎಂದು, ಮಿತಾಕ್ಷರದಲ್ಲಿ ವಿಜ್ಞಾನೇಶ್ವರ ಭಟ್ಟಾರಕ, ವಿಜ್ಞಾನೇಶ್ವರಯೋಗಿ, ವಿಜ್ಞಾನೇಶ್ವರ ಪಂಡಿತ, (ತತ್ವ)ವಿಜ್ಞಾನನಾಥ ಎಂಬ ಹೆಸರುಗಳಿವೆ. ಈ ಎರಡು ಬಗೆಯ ಹೆಸರುಗಳಲ್ಲಿ ಹೋಲಿಕೆಯಿದ್ದರೂ ಮಿತಾಕ್ಷರದಲ್ಲಿಯ ಯೋಗಿ, ಪಂಡಿತ, ನಾಥ ಎಂಬ ವಿಶೇಷಣಗಳು ಶಾಸನದಲ್ಲಿ ತೋರಿಬರುವುದಿಲ್ಲ. ಶಾಸನದಲ್ಲಿ ತಪ್ಪದೇ ಕಂಡು ಬರುವ 'ದೇವರ್' ಎಂಬ ವಿಶೇಷಣ ಮಿತಾಕ್ಷರದಲ್ಲಿ ತಪ್ಪಿಯೂ ಕಂಡುಬರುವುದಿಲ್ಲ.

ಇ. ಮಿತಾಕ್ಷರದಲ್ಲಿ ಮತ್ತೆಮತ್ತೆ ತೋರಿಬರುವ ಶ್ರೀಮತ್ಪರಮಹಂಸ ಪರಿವ್ರಾಜಕ, ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ, ವಿಜ್ಞಾನೇಶ್ವರಯೋಗಿ ಎಂಬ ದೈವೀವ್ಯಕ್ತಿತ್ವ ಸೂಚಕ ಬಿರುದುಗಳು ಶಾಸನದಲ್ಲಿ ಇಲ್ಲವೇ ಇಲ್ಲ.

ಈ. ವಿಜ್ಞಾನೇಶ್ವರನ ಪ್ರಸಿದ್ಧಿಗೆ ಕಾರಣವಾದ 'ಮಿತಾಕ್ಷರ'ದ ಕರ್ತೃತ್ವವು, ಏನೆಲ್ಲ ಘನತೆಗಳನ್ನು ಹೇಳುವ ಶಾಸನದಲ್ಲಿ ಕಂಡುಬರದಿರುವುದು ಆಶ್ಚರ್ಯ ಹುಟ್ಟಿಸುತ್ತದೆ.

ಉ. ಶಾಸನೋಕ್ತ ವಿಜ್ಞಾನೇಶ್ವರನು ಶೈವಬ್ರಾಹ್ಮಣ. ಅದರಲ್ಲಿಯೂ ಆಗಮಿಕ ಶೈವಬ್ರಾಹ್ಮಣ. ಮಿತಾಕ್ಷರದಲ್ಲಿ ಬರುವ -

"ಧರ್ಮಾಧರ್ಮೌ ತದ್ವಿಪಾಕಾಸ್ತ್ರಯೋऽಪಿ ಕ್ಲೇಶಾ ಪಂಚಪ್ರಾಣಿನಾಮಾಯತಂತೇ।
ಯಸ್ಮಿನ್ನೇತೈರ್ನೋಪರಾಮೃಷ್ಟ ಈಶೋ ಯಸ್ತಂ ವಂದೇ ವಿಷ್ಣುಮೋಂಕಾರವಾಚ್ಯಮ್॥"

- ಕೃತಿ ಆರಂಭದ ಸ್ತುತಿ ಶ್ಲೋಕ

(ಧರ್ಮ, ಅಧರ್ಮಗಳ ವಿಪಾಕ (=ಜಾತಿ, ಆಯುಃ, ಭೋಗ), ಪಂಚಕ್ಲೇಶ
(=ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ)ಗಳು ಜೀವಿಗಳಿಗೆ ಬರುತ್ತವೆ.
ಇವುಗಳಿಂದ ವಿದೂರನಾದ ಒಡೆಯನಾದ ಓಂಕಾರವಾಚ್ಯ ವಿಷ್ಣುವನ್ನು ವಂದಿಸುತ್ತೇನೆ.)

"ಧ್ಯಾತಾ ಮೂರ್ತೇರ್ಮುರವಿಜಯಿತೋ ಜೀವತಾದಾರ್ಕಚಂದ್ರಂ" I
"ಅಂತರ್ಬಹಿರ್ಯದಿ ಹರಿಶ್ಚ ತಲಸ್ತತಃ ಕಂ ನಾಂತರ್ಬಹಿರ್ಯದಿ ಹರಿಶ್ಚ ತತಸ್ತತಃ ಕಿಮ್II"

- ಕೃತಿ ಅಂತ್ಯದ ಶ್ಲೋಕ

("ಸೂರ್ಯ ಚಂದ್ರರಿರುವ ವರೆಗೂ (ನಾನು) ವಿಷ್ಣುವನ್ನು ಧ್ಯಾನಿಸುವವನು. (ಲೋಕದ) ಒಳಗೂ ಹೊರಗೂ ಕೆಳಗೂ ಹರಿ ಇದ್ದಾನೆಯೆಂದರೆ (ನಮ್ಮ) ಒಳಗೂ ಹೊರಗೂ ಕೆಳಗೂ ಅವನು ವಿಸ್ತರಿಸಿರುವನಲ್ಲವೇ?")

ಈ ಪದ್ಯಗಳು ಗ್ರಂಥಕರ್ತೃವನ್ನು ವೈಷ್ಣವ ಬ್ರಾಹ್ಮಣನೆಂದು ಸೂಚಿಸುತ್ತವೆ. ತಂದೆಯ ಪದ್ಮನಾಭ ಭಟ್ಟೋಪಾಧ್ಯಾಯನೆಂಬ ಹೆಸರೂ ವೈಷ್ಣವ ಪರವಾಗಿರುವುದನ್ನು ಇಲ್ಲಿ ನೆನೆದರೆ, ಶೈವನಾದ ಶಾಸನೋಕ್ತ ವಿಜ್ಞಾನೇಶ್ವರನಿಂದ ಈ ವೈಷ್ಣವ ವಿಜ್ಞಾನೇಶ್ವರನು ಭಿನ್ನನೆನಿಸುತ್ತಾನೆ.

ಶಾಸನೋಕ್ತ ವಿಜ್ಞಾನೇಶ್ವರನ ಗ್ರಾಮ ಮರ್ತೂರು ಅಲ್ಲ :

ಮರ್ತೂರು, ಶಾಸನೋಕ್ತ ವಿಜ್ಞಾನೇಶ್ವರನ ಗ್ರಾಮವೇ? ಎಂಬ ವಿಷಯವನ್ನು ಕುರಿತು ಈಗ ಚರ್ಚಿಸಬಹುದು. ಅಟ್ಟಳೆ ನಾಡಿನ ಮಾಸೆಯಮಡು ಊರಿನ ಪೆರ್ಗಡೆಯಾಗಿದ್ದ ಬೀಚರಸನು ಅಲಂದೆ ಸಾಸಿರದ ಗೊಂಕನಾಡಿನ ಮರ್ತೂರಿನಲ್ಲಿ ದೇವಾಲಯ ಕಟ್ಟಿಸಿದ್ದನು. ಈ ದೇವಾಲಯಕ್ಕೆ ಈ ಗೊಂಕನಾಡನ್ನು ಆಳುತ್ತಿದ್ದ ಮಂಡಳೇಶ್ವರರಾದ ಬಿಬ್ಬರಸ, ಗೊಂಕರಸರು ದಾನ ನೀಡಿದರು. ಇದು ಶಾಸನದ ವಿಷಯ. ಹೀಗೆ ಒಂದು ವಿಭಾಗದ ಆಳರಸರು ಇನ್ನೊಂದು ವಿಭಾಗದಲ್ಲಿ ದೇವಾಲಯ ಕಟ್ಟಿಸಿದುದಕ್ಕೆ, ಸ್ಥಳೀಯ ವಿಭಾಗದ ಆಳರಸರು ಆ ದೇವಾಲಯಕ್ಕೆ ದಾನನೀಡಿದುದಕ್ಕೆ ಕರ್ನಾಟಕದಲ್ಲಿ ನೂರಾರು ಉದಾಹರಣೆಗಳಿವೆ. ವಸ್ತುಸ್ಥಿತಿ ಹೀಗಿರುವುದರಿಂದ, ಬೀಚರಸನು ಮರ್ತೂರಿನಲ್ಲಿ ದೇವಾಲಯ ಕಟ್ಟಿಸಿದ ಮಾತ್ರಕ್ಕೆ ಅದು ಅವನ ಸ್ವಗ್ರಾಮವಾಗಿರಬೇಕಿಲ್ಲ. ಇಷ್ಟೇ ಏಕೆ ಈ ಶಾಸನದಲ್ಲಿ ವ್ಯಕ್ತವಾಗಿಯೇ "ಏನೆ ನೆಗಳ್ದ ವರನಯವೆಂತೆನೆ ಅಟ್ಟಳೆ ನಾಡೊಳೆಸೆವ ಮಾಸೆಯಮಡು. . . " ಎಂದು ಮುಂತಾಗಿ

ಹೇಳುತ್ತ,ಅವನ ಗ್ರಾಮದತ್ತ ಬೆರಳು ನೀಡಲಾಗಿದೆ. ಆದುದರಿಂದ ಮರ್ತೂರಿನಲ್ಲಿ ದೇವಾಲಯ ಕಟ್ಟಿಸಿದ ಬೀಚರಸನ ಗ್ರಾಮ, ಇದೇ ರೀತಿ ಇವನ ತಂದೆಯ ಗ್ರಾಮ ಮಾಸೆಯಮಡು ಎಂದು ಹೇಳಬಹುದು. ಹೀಗಿದ್ದೂ ಮಾಸೆಯಮಡು ಗ್ರಾಮದ ಬೀಚಿರಾಜ ಮರ್ತೂರಿನಲ್ಲಿ ದೇವಾಲಯ ಕಟ್ಟಿಸಿದುದನ್ನು ಗಮನಿಸಿ, ಇದೇ ಅವನ ಮತ್ತು ಅವನ ತಂದೆ ವಿಜ್ಞಾನೇಶ್ವರನ ಗ್ರಾಮವೆಂದು ವಿದ್ವಾಂಸರು ಭಾವಿಸಿದುದು ತಪ್ಪು. ಶಾಸನೋಕ್ತ ವಿಜ್ಞಾನೇಶ್ವರನೇ ಮಿತಾಕ್ಷರದ ವಿಜ್ಞಾನೇಶ್ವರನೆಂದು ಭ್ರಮಿಸಿ, ಗುಲ್ಬರ್ಗಾ ಜಿಲ್ಲೆಯ ಮರ್ತೂರಿನಲ್ಲಿ ಸ್ಮಾರಕ ನಿರ್ಮಿಸಿದುದು ಅವಸರದ ನಿರ್ಣಯ. ಒಂದು ವೇಳೆ ಇಬ್ಬರೂ ವಿಜ್ಞಾನೇಶ್ವರರು ಒಬ್ಬನೇ ಎಂದು ಸಿದ್ಧವಾದಲ್ಲಿ, ಸ್ಮಾರಕವನ್ನು ಬೀದರ ಜಿಲ್ಲೆಯ ಮಾಸೆಯಮಡುವಿನಲ್ಲಿ ನಿರ್ಮಿಸುವುದು ನ್ಯಾಯವೆನಿಸುತ್ತದೆ.

ಈ ಎಲ್ಲ ಅಂಶಗಳ ಆಧಾರದಿಂದ 'ಮಿತಾಕ್ಷರ'ದ ವಿಜ್ಞಾನೇಶ್ವರನು ವೈದಿಕ ವೈಷ್ಣವ ಬ್ರಾಹ್ಮಣನಾಗಿದ್ದರೆ, ಶಾಸನೋಕ್ತ ವಿಜ್ಞಾನೇಶ್ವರನು ಆಗಮಿಕ ಶೈವಬ್ರಾಹ್ಮಣನಾಗಿದ್ದಾನೆ. ಒಟ್ಟಾರೆ, ಶಾಸನೋಕ್ತ ವಿಜ್ಞಾನೇಶ್ವರನು 'ಮಿತಾಕ್ಷರ'ದ ವಿಜ್ಞಾನೇಶ್ವರನಲ್ಲ, ಶಾಸನೋಕ್ತ ವಿಜ್ಞಾನೇಶ್ವರನ ಗ್ರಾಮ ಮರ್ತೂರು ಅಲ್ಲ- ಎಂದು ಹೇಳಬಹುದಾಗಿದೆ.

■■

ಆಕರ : ಮಾರ್ಗ ಸಂಪುಟ-೩

೫೮

ಚೌಡದಾನಪುರ ಶಾಸನಗಳು : ಇನ್ನಷ್ಟು ವಿವರಣೆ

ಶಾಸನಗಳ ಮಡಿಲಲ್ಲಿರುವ ವ್ಯಕ್ತಿಗಳ ಚರಿತ್ರೆ, ಘಟನೆಗಳ ನಿಜಸ್ವರೂಪ, ಶಬ್ದಗಳ ಅರ್ಥ–ಇವುಗಳನ್ನು ಕಂಡುಹಿಡಿಯುವುದು ಒಂದು ನಿರಂತರ ಕ್ರಿಯೆ. ಹೊಸ ಹೊಸ ಆಧಾರ ಸಿಕ್ಕ ಹಾಗೆಲ್ಲ ಇವು ನಿಧಾನವಾಗಿ ಬೆಳಕಿಗೆ ಬರುತ್ತವೆ. ಹೀಗೆ ಬೆಳಕಿಗೆ ಬರುತ್ತಲಿರುವ ಒಬ್ಬ ವ್ಯಕ್ತಿ ಚೌಡದಾನಪುರ ಶಿವದೇವ.

ಚೌಡದಾನಪುರ (ರಾಣೆಬೆನ್ನೂರು ತಾಲೂಕು) ಶಾಸನಗಳು ಶೈವಸಂಪ್ರದಾಯ, ಶರಣ ಸಂಪ್ರದಾಯಗಳ ದೃಷ್ಟಿಯಿಂದ ತುಂಬ ಮಹತ್ವ ಪಡೆದಿವೆ. ಇಲ್ಲಿ ಒಟ್ಟು ೮ ಶಾಸನಗಳಿದ್ದು ಎಸ್.ಆಯ್.ಆಯ್. xviii ೧೧೨, ೨೪೪, ೨೪೫, ೨೪೬, ೨೪೭, ೨೬೫, ೨೬೮, ೨೯೯ರಲ್ಲಿ ಪ್ರಕಟವಾಗಿವೆ. ಇವುಗಳಿಂದ ವ್ಯಕ್ತವಾಗುವ ಹೊಸ ವಿಷಯಗಳನ್ನು ಹೀಗೆ ಸಂಗ್ರಹಿಸಬಹುದು.

ಗೊಪೆ-ಚೌಡದಾನಪುರ :

ಇಂದು ರೂಢಿಯಲ್ಲಿರುವ ಚೌಡದಾನಪುರವೆಂಬ ಹೆಸರು ಈ ಗ್ರಾಮದ ಒಂದೂ ಶಾಸನದಲ್ಲಿ ಕಂಡುಬರುವುದಿಲ್ಲ. ಪ್ರಕಟಿತ ೨೪೪, ೨೪೬, ೨೬೫, ೨೬೮, ೨೯೯ನೆಯ ಶಾಸನ ಪಠ್ಯಗಳಲ್ಲಿ ಗ್ರಾಮನಾಮವಾಗಿ ಗೊಪೆ, ಗೋಪೆ ಎರಡೂ ಪ್ರಯೋಗಗಳು ಸಿಗುತ್ತವೆ. ಪ್ರಾಚೀನಕಾಲದಲ್ಲಿ ಲಿಪಿಕಾರರು ದೀರ್ಘಪ್ರಸಂಗದಲ್ಲಿಯೂ ಹ್ರಸ್ವವನ್ನೇ ಬರೆಯುತ್ತಿದ್ದು, ಸಂದರ್ಭ ನೋಡಿ ಅಲ್ಲಿಯ ದೀರ್ಘತೆಗಳನ್ನು ಓದುಗರು ನಿರ್ಧರಿಸಿಕೊಳ್ಳುತ್ತಲಿದ್ದರು. ಇದು ಗೊತ್ತಿರದ ಕಾರಣ ಶಾಸನ ಸಂಪಾದಕರು ಇಲ್ಲಿ ಕೆಲವೊಮ್ಮೆ ಹ್ರಸ್ವವನ್ನೇ ದೀರ್ಘವೆಂದು ತಪ್ಪು ಭಾವಿಸಿದಂತಿದೆ. ಹೀಗಾಗಿ, ಇಲ್ಲಿಯ ಶುದ್ಧರೂಪ ಗೊಪೆಯೆಂದು ಇಟ್ಟುಕೊಳ್ಳಬಹುದಾಗಿದ್ದು, ಇದು ಗುಹೆಯ ತದ್ಭವ ರೂಪ. ಬಹುಶಃ ಅಲ್ಲಿದ್ದಿರಬಹುದಾದ ಗವಿ ಕಾರಣವಾಗಿ ಗೊಪೆ ಹೆಸರು ಈ ಗ್ರಾಮಕ್ಕೆ ರೂಢವಾಗಿರಬಹುದು. ಈ ಹಳೆಯ ಹೆಸರು ಕಾಲಾಂತರದಲ್ಲಿ ಚೌಡದಾನಪುರವೆಂದು ಬದಲಾದಂತಿದೆ. ಶರಣ ಅಂಬಿಗರ ಚೌಡಯ್ಯನು ಶಿವದೇವರಿಗೆ ಈ ಗ್ರಾಮವನ್ನು ದಾನವಾಗಿ ನೀಡಿದ್ದೇ ಈ ಬದಲಾವಣೆಗೆ ಕಾರಣವೆಂದು ಸ್ಥಳೀಯರು ಹೇಳುತ್ತಾರೆ. ಆದರೆ ಒಬ್ಬ ಸಾಮಾನ್ಯ ಅಂಬಿಗ ಒಂದು ಊರನ್ನು ದಾನವಾಗಿ ಕೊಡುವುದು ಅಸಮಂಜಸವೆನಿಸುವುದರಿಂದ ಮತ್ತು ದಾನ ನೀಡುವುದು ಶರಣ ಸಿದ್ಧಾಂತಕ್ಕೆ ಬಾಹಿರವೆನಿಸುವುದರಿಂದ ದಾನ ನೀಡಿದವನು ಅಂಬಿಗರ ಚೌಡಯ್ಯನಲ್ಲವೆಂದೇ ಹೇಳಬೇಕು.

೨೪೪ರ ಶಾಸನದ ಅಂತ್ಯದಲ್ಲಿ ''ಸಿದ್ಧಾರ್ಥಿ ಸಂವತ್ಸರದ ಚೈತ್ರ ಬಹುಳ ೧೫ ಸೋ ಸೂರ್ಯಗ್ರಹಣದ ಸಮಯದಲ್ಲಿ ಚವುಡಸೆಟ್ಟಿಯರ ಕರಣದ ನಾಗರಸರ ತಂಮ ಭಾನುದೇವ''ನು ನೀಡಿದ ದಾನದ ಉಲ್ಲೇಖವಿದೆ. ಇಲ್ಲಿಯಾದವಮಂತ್ರಿ ಚೌಡಿಶೆಟ್ಟಿಯ ಉಲ್ಲೇಖವಿದ್ದು, ಈತ ನೀಡಿರಬಹುದಾದ ಬೇರೊಂದು ದಾನದಿಂದಾಗಿ ಗೊಪೆ ಹೆಸರು ಚೌಡದಾನಪುರವೆಂದು ಬದಲಾಗಿರಬೇಕು. ಇಲ್ಲಿ (೨೪೪) ದಾನ ನೀಡಿದ

ಭಾನುದೇವ, ಉಲ್ಲೇಖಿತನಾದ ಚೌಡಿಶೆಟ್ಟಿ ಮೊದಲಾದವರು ಬಸವಣ್ಣನವರ ವಂಶಜನಾದ ಹಾಲಬಸವಿ ದೇವನಿಗೂ ದಾನ ನೀಡಿದ ವಿಷಯ ಅರ್ಜುನವಾಡ ಶಾಸನ (೧೨೨)ದಲ್ಲಿಯೂ ಕಂಡು ಬರುತ್ತಿದ್ದು, ಈ ಎರಡೂ ಶಾಸನಗಳು ಒಂದೇ ದಿನ ಹುಟ್ಟಿವೆ. ಇದರಿಂದ ಚೌಡಿಸೆಟ್ಟಿಯು ಶಿವದೇವ ಮತ್ತು ಹಾಲಬಸವಿದೇವ ಇಬ್ಬರ ವಿಷಯದಲ್ಲಿಯೂ ಭಕ್ತಿತಾಳಿದವನಾಗಿರಬಹುದೆನಿಸುತ್ತದೆ. ಚೌಡದಾನಪುರದ ಎರಡು ಶಾಸನಗಳಲ್ಲಿ ಈ ಶಿವದೇವನು ಬಸವಣ್ಣನನ್ನು ತುಂಬ ಭಕ್ತಿಯಿಂದ ಕಂಡದ್ದನ್ನೂ ಇಲ್ಲಿ ಸ್ಮರಿಸಬಹುದು. ಒಟ್ಟಾರೆ, ಈ ಗ್ರಾಮದ ಮೂಲ ಹೆಸರು ಗೋಪೆ ಅಲ್ಲ, ಗೊಪೆ. ಇದು ಚೌಡಿಸೆಟ್ಟಿಯ ದಾನ ಸಂಬಂಧವಾಗಿ ಚೌಡದಾನಪುರವೆಂದು ಬದಲಾಯಿತು. ಇಲ್ಲಿಯ ಶಿವದೇವ ಮತ್ತು ಅರ್ಜುನವಾಡ ಶಾಸನದ ಹಾಲಬಸವಿದೇವ ಒಂದೇ ಸಂಪ್ರದಾಯ (ಶುದ್ಧಶೈವ)ದವರಾಗಿದ್ದಾರೆ.

ಶಿವಮುದ್ದದೇವ-ಶಿವದೇವ-ಜ್ಯೋತಿರ್ನಾಥ :

ಶಿವದೇವನು ಅವತಾರ ಪುರುಷನೆಂಬಂತೆ ಇಲ್ಲಿಯ ಎರಡು ಶಾಸನಗಳಲ್ಲಿ (೨೪೪, ೨೪೬) ಚಿತ್ರಿತನಾಗಿದ್ದಾನೆ. ಭೂಲೋಕದಲ್ಲಿ ನಾಶವಾಗಿರುವ ಧರ್ಮವನ್ನು ಉದ್ಧರಿಸಬೇಕೆಂಬ ಅಮರಗಣಂಗಳ ಬಿನ್ನಹದ ಮೇರೆಗೆ ಶಿವನು ಮುಕ್ತಿಕ್ಷೇತ್ರ (ಗೊಪೆಯ ಇನ್ನೊಂದು ಹೆಸರು)ದಲ್ಲಿ ಮುಕ್ತೇಶ್ವರಲಿಂಗವಾಗಿ ಉದ್ಭವಿಸಿದ. ಈ ಅಮರಗಣಗಳ ಆಜ್ಞೆಯ ಮೇರೆಗೆ ಶಿವದೇವನೂ ಅವತರಿಸಿದ–ಇಷ್ಟು ೨೪೬ನೆಯ ಶಾಸನ ತಿಳಿಸುತ್ತದೆ. ೨೪೪ನೆಯ ಶಾಸನ ಈ ಅವತಾರವನ್ನು ಒಂದಿಷ್ಟು ವಿವರವಾಗಿ ಹೀಗೆ ನೀಡುತ್ತದೆ :

ಕೈಲಾಸದಲ್ಲಿ ''ನಂದಿ ನಂದಿನಾಥ ವೀರಭದ್ರ ಭದ್ರಕಾಳ ಭೃಂಗೀಶ ಪ್ರಮುಖಾ ಸಂಖ್ಯಾತಗಣಂ''ಗಳನ್ನೊಳಗೊಂಡ ಶಿವನ ಒಡ್ಡೋಲಗ; ಶಿವನು ಈ ಗಣಂಗಳಿಗೆ ''ಶ್ರೀ ಜ್ಯೋತಿರ್ಲಿಂಗಾಮರ ಕರುಣೋತ್ಪನ್ನ ಭಕ್ತಿಪ್ರಸಾದ''ದ ಮಹತ್ವವನ್ನು ವಿವರಿಸಿದ.

ಎನೆ ಕೇಳ್ದದ್ರಿಜೆ ಬಿನ್ನಪಂ ಶಿವ ಜಗಕ್ಕೀಮಾರ್ಗಮನ್ನೋಱಬೇ
ಳ್ಕೆನಲನ್ದಾ ಪ್ರಭು ನನ್ದಿನಾಥನ ಮೊಗನ್ನೋಡಲ್ಕೆ ಶ್ರೀ ಸಂಗಮೇ
ಶನ ಪುತ್ರಂ ಬಸವಯ್ಯ ಬಂಕನದಱಿಂ ಶಿವಮುದ್ದದೇವಂ ಜಗ
ಕ್ಕನಿಮಿತ್ತಂ ಶಿವದೇವನಾಗಿಯು ಗಣ ಶ್ರೀ ಪಾದಮಂ ತೋರುವೆಂ ॥

ಅದೆಂತೆನೆ,

ಕಂ॥ ಅವನತ ಕಂಧರರಾಗಿಯೆ
ದಿವಿಜರ್ಶಿವರಾತ್ರಿ ಮಾಡಿದಾ ತತ್ಪದದೊಳ್
ಧವಳೇಶ್ವರಾಖ್ಯ ಲಿಂಗದೊ
ಳವಿರಳ ಶಿವಮುದ್ದದೇವ ಮುನಿಪತಿಯಿಪ್ಪನು ॥

ಅಬ್ಯಕ್ತಶಂಕರನನತಿ ಸು
ಬ್ಯಕ್ತಂ ಮಾಡಿ ತೋರ್ಪ್ಪೆನೆನುತೀ ಜಗದೊಳ್
ದಿಬ್ಯ ಧವಳೇಶಲಿಂಗವ
ನಬ್ಯಯ ಶಿವಮುದ್ದುಮುನಿವರಂ ಭಾವಿಸುವನು ॥

ಶಿವಮುದ್ದು ಬ್ರತಿಪತಿಗೀ
ದಿವಿಜೇಂದ್ರ ಪದಗಳೆಂಬವೇಂ ಪಾಸಟಿಯಾ
ಭವನೆ ಕಲಿಕಾಲ ಕಲುಷವ
ತವಿಸುವ ನೆವದಿಂದ ಮೂರ್ತಿಯನ್ತಾಳ್ದಿರ್ದನು ॥

ಕೇಶವ ಜಿನ ಬೌದ್ಧಾದಿಗ
ಳೀಶನ ಕಿಂಕರರು (ಬೇ)ಱ ದೇವತೆಯಲ್ಲೆಂ
ದಾ ಶಿವಮುದ್ದು ಬ್ರತಿಪ ಮ
ಹೇಶನನೊಲಿ(ದೊ)ಲಿಸಿದಂ ಜಗತ್ರಯವರಿಯಲು ॥

ಅಮರಗಣ ಚರಣಕೋಮಳ
ವಿಮಳದಳೋ(ತ್ಫು)ಲ್ಲ ಕಮಳಯುಗಳ ಪರಾಗ
ಪ್ರಮುದಿತ ಮನದ್ವಿರೇಫೋ
ಪಮೆಯಿಂ ಶಿವಮುದ್ದುದೇವ ಮುನಿಪತಿಯಿಪ್ಪಂ ॥

ವ॥ ಅನನ್ತರವು ಶ್ರೀಗಿರಿ ನಿವಾಸನಾಜ್ಞೆಯಿಂ ಬಂದ ವೀರವ್ರತಿಯಂ ನೋಡಿ ॥

ಹವಣಿಸಬಾರದಗ್ರಕು(ಲದು)ದ್ಭವನಾಗಿ ವಿಧಾತ್ರನಿಂದ ಸಂ
ಭವಿಸಿದ ನಾಲ್ಕು ಸ್ರುಷ್ಟಿಯೊಳು ಪುಟ್ಟಿದನೆಂಬಡೆ ಜಾಯತೇಸ್ತಿಯೆಂ
ಬವು ಮೊದಲಾದ (ಷಡ್ವಿ)ಕೃತಿಯೊಳ್ಸಲೆ ಕೂಡಿದನಲ್ಲ ಭಾವಿಸ
ಲ್ಭವನೊಲವಿನ್ದ ವೀರ ಶಿವದೇವ ಗಣೇಶ್ವರನಾಗಿ ತೋಱಿದನ್ ॥

ವ॥ ಎನ್ದು ತನ್ನೊಳ್ಪರಿಭಾವಿಸಿ ಯಿಂತೆನ್ದಂ ॥

ಸುರನದಿಯೆ ತುಂಗಭದ್ರಾ
ವರನದಿ ಸುರಸಮಿತಿ ವಿಪ್ರಗಣ ನಿಕರವು ಆ
ಸುರಗಿರಿ ಮಹೇಶಭವನವು
ಧರೆಯೊಳ್ಕವಿಳಾಸವೆನಿಪ ಮುಕ್ತಿಕ್ಷೇತ್ರವು ॥*

ಆ ಮುಕ್ತಿಕ್ಷೇತ್ರದೊಳಿರ್ದ್ದ
ಮ್ಮೈಮೆಯ ಮೆಱೆಯಬೇಕೆನುತ ಗುರು ನುಡಿಯಲ್
ಸ್ವಾಮಿ ಮುಕುತೇಶನೆ ಪರ(ಂ)
ಧಾಮ ಶ್ರೀ ಜ್ಯೋತಿ(ಲಿಂಗ)ನೆಂದೊಲವಿನ್ದಂ ॥

---

* ಕವಿಳಾಸ (=ಕೈಲಾಸ) ಎಂಬುದು ವಿಶಿಷ್ಟ ಪ್ರಯೋಗ. ಅರ್ಜುನವಾಡ ಶಾಸನದ ಬಸವಣ್ಣನ ವಂಶಜ ಹಾಲಬಸವಿದೇವ ''ಕವಿಳಾಸಪುರವರಾಧೀಶ್ವರ'', ಬಸವಣ್ಣನಿಗೆ ಸಂಬಂಧಿಸಿದ್ದೆಂದು ಭ್ರಮಿಸಲಾಗಿದ್ದ ಮನಗೂಳಿ ಶಾಸನದಲ್ಲಿಯೂ ಈ ಪ್ರಯೋಗವಿದೆ. ಪ್ರಸ್ತುತ ಚೌಡದಾನಪುರದ ೨ ಶಾಸನಗಳು ಬಸವಣ್ಣನನ್ನು ಹೆಸರಿಸುವುದನ್ನು ಇಲ್ಲಿ ನೆನೆಯಬಹುದು.

ವ॥ ಶಕವರ್ಷ ೧೧೪೮ನೆಯ ಪಾರ್ಥಿವ ಸಂವತ್ಸರದ ಭಾದ್ರಪ(ದ) ಶುದ್ಧ ೧೫ ಸೋಮವಾರ ಚಂದ್ರೋಪರಾಗ ಪುಣ್ಯತಿಥಿಯ ಮಧ್ಯಾಹ್ನ ಸಮಯದೊಳ್ ಬಂದು ಮುಕ್ತಿಕ್ಷೇತ್ರಮಂ ಪೊಕ್ಕು

ಕಂ॥ ವಿರಚಿಸಿದಂ ಕೈಳಾಸದ
ಚರಿತ್ರಮಂ ವೀರಭದ್ರನ ಶ್ರೀಪದಮಂ
ಸ್ಮರಿಸುತ ವೀರಬ್ರತಮಂ
ಧರಿಸಿದನತುಳಬಳ ವಿಕ್ರಮಂ ಶಿವ(ದೇವ)ನು॥

ಎಂಬ ಶಾಸನಭಾಗ ಪರಿಶೀಲನಾರ್ಹವೆನಿಸಿದೆ. ಇಲ್ಲಿ 'ಬಸವಯ್ಯ ಬಂಕ' ಎಂಬ ಪಾಠ ಮತ್ತು ಶಿವಮುದ್ದುಮುನಿ– ಧವಳೇಶ್ವರಲಿಂಗ–ಶಿವದೇವ ಇವರ ಸಂಬಂಧ ಅಸ್ಪಷ್ಟವಾಗಿವೆ. ಹೀಗಿದ್ದೂ 'ಭಕ್ತಿಪ್ರಸಾದ'ದ ಮಹತ್ವವನ್ನು ಲೋಕಕ್ಕೆ ತೋರಬೇಕೆಂಬ ಪಾರ್ವತಿಯ ಬಿನ್ನಹವನ್ನು ಕೇಳಿ ಶಿವನು, ''ಈ ಮೊದಲು ನಂದಿನಾಥನ ಮುಖವನ್ನು ನೋಡಲು, ಅವನು ಶ್ರೀ ಸಂಗಮೇಶನ ಪುತ್ರ ಬಸವಯ್ಯನಾಗಿ (ಲೋಕಕ್ಕೆ) ಬಂದಂತೆ, ಶಿವಮುದ್ದುದೇವನ ಪುತ್ರ(ಭಕ್ತ)ನಾದ ಶಿವದೇವನನ್ನು ಲೋಕಕ್ಕೆ ತೋರಿಸುತ್ತೇನೆ''– ಎಂದು ಪಾರ್ವತಿಗೆ ನುಡಿದನೆಂದು ಇಲ್ಲಿಯ ಆರಂಭದ ಪದ್ಯಕ್ಕೆ ಅರ್ಥ ಹೇಳಬಹುದು. ಆದರೆ ಶಿವಮುದ್ದುಮುನಿ ಯಾರು? ಎಲ್ಲಿಯವನು? ಚೌಡದಾನಪುರ ಗ್ರಾಮದಲ್ಲಿ ಕಂಡುಬಾರದ ಧವಳೇಶ್ವರಲಿಂಗದ ಪ್ರಸ್ತಾಪ ಇಲ್ಲಿಯ ಶಾಸನದಲ್ಲಿ ಏಕೆ? ಎಂಬ ಪ್ರಶ್ನೆಗಳಿಗೆ ಮತ್ತು ಇಲ್ಲಿಯ ಮಿಕ್ಕ ಶಾಸನಪಾಠಕ್ಕೆ ಹೀಗೆ ಅರ್ಥ ವಿವರಣೆ ನೀಡಬಹುದು :

ದೇವತೆಗಳಿಂದ ಪೂಜಿಸಲ್ಪಡುವ ಧವಳೇಶ್ವರಲಿಂಗವನ್ನು ಶಿವಮುದ್ದುಮುನಿ ಭಜಿಸುತ್ತಿದ್ದನು. ಈ ಮುನಿಗೆ ದೇವಪದವಿಗಳು ಸಮಬಾರವು. ಇವನು ಶಿವನೇ ಕಲಿಕಾಲದೋಷ ನಿರ್ಮೂಲನೆಗಾಗಿ ವ್ಯಕ್ತಿರೂಪ ಪಡೆದಂತಿದ್ದನು. ಕೇಶವ, ಜಿನ, ಬುದ್ಧ ಮೊದಲಾದವರಿಂದ ಸೇವಿಸಲ್ಪಡುವ ಶಿವನನ್ನು ಈತನು ಪೂಜಿಸುತ್ತಿದ್ದನು. ಹೀಗೆ ಶಿವನ ಪಾದಕಮಲಭೃಂಗನಾಗಿ ಶಿವಮುದ್ದುದೇವ ಮುನಿಪತಿ ಇರುತ್ತಿರಲು, ಶ್ರೀಗಿರೀಶ (ಶ್ರೀಶೈಲ ಮಲ್ಲಿಕಾರ್ಜುನ)ನ ಆಜ್ಞೆಯಿಂದ ಬಂದ ವೀರವ್ರತಿ(ಶಿವದೇವ) ಯನ್ನು ನೋಡಿ. ''ಈತನು ಉತ್ತಮಜಾತಿಯಲ್ಲಿ ಹುಟ್ಟಿದವನಾಗಿದ್ದಾನೆ. ಬ್ರಹ್ಮನಿಂದ ಹುಟ್ಟಿದವನಾದರೂ ಷಟ್‌ವಿಕಾರಗಳಿಂದ ವಿದೂರನಾಗಿದ್ದಾನೆ. ಶಿವನೇ ಶಿವದೇವನ ರೂಪದಲ್ಲಿ ಅವತರಿಸಿದ್ದಾನೆ''ಎಂದು ಭಾವಿಸಿ, ಅವನಿಗೆ ಹೀಗೆ ನುಡಿದನು: ''ದೇವಗಂಗೆಗೆ ಸಮಾನವಾದ ತುಂಗಭದ್ರಾನದಿ, ದೇವತೆಗಳಿಗೆ ಸಮಾನರಾದ (ಶುದ್ಧಶೈವ) ಬ್ರಾಹ್ಮಣರು, ಕೈಲಾಸಕ್ಕೆ ಸಮಾನವಾದ ಶಿವದೇವಾಲಯ–ಇವುಗಳಿಂದ ಕೂಡಿದ ಮುಕ್ತಿಕ್ಷೇತ್ರ (ಗೊಪೆ, .ಚೌಡದಾನಪುರ) ಹೆಸರಿನ ಸ್ಥಳವುಂಟು. ಆ ಮುಕ್ತಿಕ್ಷೇತ್ರದಲ್ಲಿದ್ದು ನೀನು ಮಹಿಮೆಯನ್ನು ತೋರಬೇಕು''. ಈ ಮಾತನ್ನು ಕೇಳಿ, ''ಅಲ್ಲಿರುವ ಮುಕ್ತೇಶ್ವನೇ ಪರಂಧಾಮ ಶ್ರೀಜ್ಯೋತಿ'' ಎಂದು ನಂಬಿ, ಶಿವದೇವನು ಶಕವರ್ಷ ೧೧೪೮ನೆಯ ಪಾರ್ಥಿವ ಸಂವತ್ಸರದ ಭಾದ್ರಪ(ದ) ಶುದ್ಧ ೧೫ ಸೋಮವಾರ ಚಂದ್ರೋಪರಾಗ ಪುಣ್ಯತಿಥಿಯ ಮಧ್ಯಾಹ್ನ ಸಮಯದೊಳು (ಕ್ರಿ.ಶ. ೧೨೨೬) ಮುಕ್ತಿಕ್ಷೇತ್ರವನ್ನು ಪ್ರವೇಶಿಸಿದನು. ಇದು ಮೇಲೆ ಉದ್ಧರಿಸಿದ ಚೌಡದಾನಪುರ ಶಾಸನಪದ್ಯದ ಭಾವಾನುವಾದ.

ಇದರಿಂದ ಶಿವದೇವನು ಶ್ರೀಶೈಲ ಕಡೆಯಿಂದ ಬಂದವನೆಂಬ ಸೂಚನೆ ಸಿಗುತ್ತದೆ. ಇದಕ್ಕೆ ಪೋಷಕವಾಗಿ ''ಮಲ್ಲಿಕಾರ್ಜುನಂ ॥ಕಂ॥ ಸಿರಿಗಿರಿಯೊಳಿದ್ದು ತಂನಯ ಚರಣವನೆ ಶರಣೆಂಬ ವೀರ

ಶಿವದೇವ(ಗಾ)ಶ್ಚರಿಯಮೆನಿಪ್ಪ ಪಶ್ಚಿಮವಾಹಿನಿ ತುಂಗಭದ್ರೆಯಂ ತೋರುತ್ತ॥ ಆದೇಶಿಸಿದಂ ನಡೆ ನೀನಾ ದೇಶಕ್ಕಾಗಿ, ಅಲ್ಲಿ ಮುಕ್ತಿನಾಥನೊಳೆಂದುಮುಮಾದೇವಿ ಸಹಿತವಿಹೆನು ಸಮಾಧಾನದೊಳರ್ಚಿಸುವುದೆನಲು ನಡೆತಂದಂ'' ಎಂಬ ೨೪೫ನೆಯ ಶಾಸನ (ಕ್ರಿ.ಶ. ೧೨೮೨)ವೂ ಈತನು ಶ್ರೀಶೈಲದಿಂದ ಬಂದನೆಂಬುದಕ್ಕೆ ಇನ್ನೊಂದು ಆಧಾರ ನೀಡುತ್ತದೆ.

ಇಲ್ಲಿ(ಶಾಸನ ೨೪೫) ಮುಕ್ತಿಕ್ಷೇತ್ರಕ್ಕೆ ಹೋಗಲು ಶಿವದೇವನಿಗೆ ಹೇಳಿದ ಶಿವಮುದ್ದುಮುನಿ ಯಾರು ? ಅವನು ಪೂಜಿಸುತ್ತಿದ್ದ ಧವಳೇಶ್ವರಲಿಂಗ ಎಲ್ಲಿಯದು ? ಎಂಬಿವು ಮುಖ್ಯ ಪ್ರಶ್ನೆಯಾಗಿವೆ. ಈ ಪ್ರಶ್ನೆಗಳಿಗೆ ಈ ಕೆಳಗಿನ ಮೂರು ಶಾಸನಗಳು ಉತ್ತರ ನೀಡುತ್ತವೆ.

೧. ಚಿಕ್ಕಮಲ್ಲೂರ (ಸಿಗ್ಗಾಂವ ತಾ.) (೧೨೨೪) ಸಿಂಘಣ

೨. ಕಾರಡಗಿ (ಸಿಗ್ಗಾಂವ ತಾ.) ಸಿಂಘಣ

೩. ಛಬ್ಬಿ (ಹುಬ್ಬಳ್ಳಿ ತಾ.) ಹಾನಗಲ್ಲ ಕದಂಬ ಕಾಮದೇವ

ಇವುಗಳಲ್ಲಿ ಚಿಕ್ಕಮಲ್ಲೂರ, ಛಬ್ಬಿಯವು ನಂದಿಯ ಕಂಬದ ಮೇಲಿವೆ. ಕಾರಡಗಿಯದೂ ಕಂಬದ ಮೇಲಿದೆಯೆಂದು ಶಾಸನ ವರದಿ ತಿಳಿಸುತ್ತಿದ್ದು, ಈಗ ಈ ಕಂಬ ಕಳೆದುಹೋಗಿದೆ. ಬಹುಶಃ ಇದೂ ನಂದಿ ಕಂಬದ ಮೇಲಿರಬಹುದು. ಹಾಗಿದ್ದಲ್ಲಿ ಮೂರೂ ನಂದಿಕಂಬದ ಶಾಸನಗಳಾಗಿರುವುದು ಗಮನಿಸಬೇಕಾದ ಅಂಶವಾಗಿದೆ. ಈ ಮೂರೂ ಅಪ್ರಕಟಿತ ಶಾಸನಗಳಾಗಿದ್ದು, ಶಾಸನ ವರದಿಗಳಲ್ಲಿ ಮಾತ್ರ ಒಂದಿಷ್ಟು ಮಾಹಿತಿ ಹೀಗೆ ಸಿಗುತ್ತದೆ.

ಚಿಕ್ಕಮಲ್ಲೂರ ಶಾಸನ(೧೨೨೪)ದ ವರದಿಯು ಹೊನ್ನಬೊಮ್ಮಿಸೆಟ್ಟಿಯಿಂದ ಧವಳೇಶ್ವರ ದೇವಾಲಯಕ್ಕೆ ಎಳಬಳ್ಳಿ ಗ್ರಾಮ ನೀಡಲಾಯಿತೆಂದು ತಿಳಿಸುತ್ತದೆ. ಕಾರಡಗಿ ಶಾಸನದ ವರದಿಯಲ್ಲಿ ತಪಚಕ್ರವರ್ತಿ ಹಾಗೂ ವೀರವ್ರತಿ ಎಂಬ ಬಿರುದುಗಳುಳ್ಳ ಆಚಾರ್ಯ ಲಕ್ಷ್ಮೀದೇವನ ಉಲ್ಲೇಖವಿದೆ. ಛಬ್ಬಿ ಶಾಸನದಲ್ಲಿ ''ಶಿವಮುದ್ದುದೇವನ ಶಿಷ್ಯ ಹಾಗೂ ಕಾರಡಗಿಯ ಧವಳೇಶ್ವರದೇವರ ಅರ್ಚಕನಾದ ರಾಜಗುರು ಲಕ್ಷ್ಮೀದೇವನಿಗೆ ಬಿಟ್ಟ ದಾನ'' ಎಂಬ ವಿವರಣೆಯಿದೆ.

ಮೇಲಿನ ಮೂರೂ ಶಾಸನಗಳಿಂದ ತಿಳಿದು ಬರುವುದು ಇಷ್ಟು; ಇಲ್ಲಿಯ ಹೊನ್ನಬೊಮ್ಮಿಶೆಟ್ಟಿ ಈ ಕಾಲದ ಸುಪ್ರಸಿದ್ಧ ರಾಜಕೀಯ ವ್ಯಕ್ತಿ, ಈತನ ಉಲ್ಲೇಖ ಚೌಡದಾನಪುರ ಶಾಸನದಲ್ಲಿಯೂ (೨೪೫) ಬರುತ್ತದೆ. ಕಾಲಡಿಯ ಅಂದರೆ ಈಗಿನ ಕಾರಡಗಿಯ ಧವಳೇಶ್ವರ ದೇವಾಲಯಕ್ಕೆ ಈ ಹೊನ್ನಬೊಮ್ಮಿಸೆಟ್ಟಿ ಎಳಬಳ್ಳಿ ಗ್ರಾಮವನ್ನು ದಾನ ನೀಡಿದ್ದನು. ಇಲ್ಲಿದ್ದ ಶಿವಮುದ್ದುದೇವನ ಶಿಷ್ಯ ಲಕ್ಷ್ಮೀದೇವನು ತಪಚಕ್ರವರ್ತಿ, ವೀರವ್ರತಿಯೆಂದು ಖ್ಯಾತನಾಗಿದ್ದನು. ಮುಖ್ಯ ವಿಷಯವೆಂದರೆ, ಇಂದು ಕಾರಡಗಿ (ಹಳೆಯ ಕಾಲಡಿ)ಯಲ್ಲಿ ಅರ್ಧಭೂಗತವಾಗಿರುವ ತ್ರಿಕೂಟ ಧವಳೇಶ್ವರ ದೇವಾಲಯವಿದೆ. ಲಿಂಗ ಕಾಣೆಯಾಗಿವೆ, ಭಿನ್ನವಾಗಿವೆ, ಪೂಜೆಯಿಲ್ಲ. ಜನ ಇದನ್ನು ಡೊಳ್ಳೇಶ್ವರ (ಧವಳೇಶ್ವರ) ದೇವಾಲಯವೆಂದು ಕರೆಯುತ್ತಾರೆ. ಹೀಗಾಗಿ ಚೌಡದಾನಪುರ ಶಾಸನೋಕ್ತ ಶಿವಮುದ್ದುದೇವ ಮತ್ತು ಧವಳೇಶ್ವರಲಿಂಗಗಳು ಇಂದಿನ ಕಾರಡಗಿಯನ್ನು ಸೂಚಿಸುತ್ತವೆಯೆಂದು ಸ್ಪಷ್ಟವಾಗಿ ಹೇಳಬಹುದು. ಒಟ್ಟಾರೆ, ಶಿವದೇವನು ಶ್ರೀಶೈಲದಿಂದ ಕಾರಡಗಿಗೆ ಬಂದು, ಅಲ್ಲಿ ಧವಳೇಶ್ವರಲಿಂಗ ಪೂಜಿಸುತ್ತಿದ್ದ ಶಿವಮುದ್ದುಮುನಿಯ ಆದೇಶದ ಮೇರೆಗೆ ಮುಕ್ತಿಕ್ಷೇತ್ರ (ಗೊಪೆ, ಚೌಡದಾನಪುರ)ಕ್ಕೆ ಹೋಗಿ ನೆಲೆನಿಂತನೆಂದು ತೋರುತ್ತದೆ.

ಕಾರಡಗಿ, ಛಬ್ಬಿ ಶಾಸನೋಕ್ತ ಲಕ್ಷ್ಮೀದೇವ ಯಾರು ? ಎಂಬ ವಿಷಯವೂ ಇಲ್ಲಿ ಮುಖ್ಯವಾದುದು. ಕೆರೆಯ ಪದ್ಮರಸನ ಸಮಕಾಲೀನನಾದ ನೀಲಕಂಠ ನಾಗನಾಥಾಚಾರ್ಯನ 'ವೀರಮಾಹೇಶ್ವರಾಚಾರ ಸಂಗ್ರಹ'ದಲ್ಲಿ ಬರುವ–

ವೇದಶಾಸ್ತ್ರಪುರಾಣೇಷು ಸಾರಮುದ ೃತ್ಯ ಶಾಂಕರಮ್
ಸಾರೋದಾರಃ ಕೃತೋಯೇನ ಲಕ್ಷ್ಮೀದೇವಗುರುಂ ಭಜೇ ॥ ೧-೧೫॥

ಎಂಬ ಶ್ಲೋಕದಲ್ಲಿ ಲಕ್ಷ್ಮೀದೇವನೆಂಬವನ ಸ್ತುತಿಯಿದೆ. ಪದ್ಮಣಾಂಕನ (೧೪೨೦) ಪದ್ಮರಾಜ ಪುರಾಣದ ಪೀಠಿಕೆಯಲ್ಲಿ ಹೇಳಿದ ''ಚಾರು ಸಾರೋದ್ಧಾರಮಂ ಬರೆದ ಲಕ್ಷ್ಮೀಧರಾರಾಧ್ಯ'' ಎಂಬವನು ಮತ್ತು ಅನ್ನದಾನಿ ಮಲ್ಲಿಕಾರ್ಜುನನ ಗಂಗೋದಯ ಕಾವ್ಯಮ್'ದ ಪೀಠಿಕಾ ಭಾಗದಲ್ಲಿ ಸುತ್ತ್ಯನಾದವನು ಇವನೇ ಆಗಿದ್ದಾನೆ. ಇಲ್ಲಿಯ ಮೊದಲಿನ ಎರಡೂ ಕೃತಿಗಳು ಹೇಳುವ ಇವನ ''ಸಾರೋದ್ಧಾರ'' ಹೆಸರಿನ ಕೃತಿ ಲಭ್ಯವಾಗಿಲ್ಲ. ಇದರ ಕರ್ತೃವು ಕಾರಡಗಿ, ಛಬ್ಬಿ ಶಾಸನೋಕ್ತ ಲಕ್ಷ್ಮೀದೇವನೇ ಆಗಿರಬಹುದೆ ? ಏಕೆಂದರೆ ಇಬ್ಬರೂ ಒಂದೇ ಕಾಲದವರಾಗಿದ್ದಾರೆ. ಇದಲ್ಲದೆ ಕಾರಡಗಿ ಶಾಸನೋಕ್ತ ಲಕ್ಷ್ಮೀದೇವನಿಗಿರುವ ತಪಚಕ್ರವರ್ತಿ, ವೀರವ್ರತಿ ಬಿರುದುಗಳು ಚೌಡದಾನಪುರ ಶಾಸನದಲ್ಲಿ ಶಿವದೇವನಿಗೂ ಇರುವುದರಿಂದ ಇವರಿಬ್ಬರೂ ಒಂದೇ ಸಂಪ್ರದಾಯ (ಶುದ್ಧಶೈವ) ದವರಾಗಿರಬಹುದು.

* * *

ಶಿವದೇವನು ಶ್ರೀಶೈಲದಿಂದ ಬಂದವನೆಂದು ಚೌಡದಾನಪುರ ಶಾಸನಗಳು (೨೪೪, ೨೪೬) ತಿಳಿಸುತ್ತವೆ. ಆದರೆ ಮೂಲತಃ ಶ್ರೀಶೈಲದವನೋ, ಬೇರೆ ಸ್ಥಳದಿಂದ ಅಲ್ಲಿಗೆ ಬಂದಿದ್ದವನೋ ಗೊತ್ತಾಗುವುದಿಲ್ಲ. ಈ ಪ್ರಸಂಗದಲ್ಲಿ ನಮಗೆ ಓರಂಗಲ್ಲ ಪ್ರತಾಪರುದ್ರನ ರಾಜಗುರು ಗೋಳಕಿಮಠದ ಶಿವದೇವ ನೆನಪಾಗುತ್ತಾನೆ. ಕಾಕತೀಯರ ಪತನದ ತರುವಾಯ ರಾಜಧಾನಿ ಓರಂಗಲ್ಲದಿಂದ ಕಣ್ಮರೆಯಾದ ಶಿವದೇವನಿಗೆ ಸಂಬಂಧಿಸಿದ ಕೊನೆಯ ಶಾಸನದ ಕಾಲ ಕ್ರಿ.ಶ. ೧೨೬೨ (ಎಸ್.ಎಸ್.ಆಯ್ x ೪೯). ಆದರೆ ಚೌಡದಾನಪುರ ಶಾಸನದಲ್ಲಿ (೨೪೪) ಶಿವದೇವನು ಈ ಕ್ಷೇತ್ರಕ್ಕೆ ಶಕೆ ೧೧೪೮ರಲ್ಲಿ ಅಂದರೆ ಕ್ರಿ.ಶ. ೧೨೨೬ರಷ್ಟು ಪೂರ್ವದಲ್ಲಿಯೇ ಬಂದನೆಂದು ಹೇಳಿದುದು ಇವರಿಬ್ಬರೂ ಒಬ್ಬನೇ ಎನ್ನಲು ತೊಡಕಾಗುತ್ತದೆ. ಶಾಸನ ಸಂಪಾದಕರು ಈ ಶಾಸನ ಮಿತಿಯನ್ನು ತಪ್ಪಾಗಿ ಓದಿರಲೂ ಸಾಧ್ಯವಿದೆ. ಅದೇನೇ ಇರಲಿ, ಇವರಿಬ್ಬರ ಘನವ್ಯಕ್ತಿತ್ವಗಳು ಈ ಸಮೀಕರಣಕ್ಕೆ ಒತ್ತಾಯಿಸುತ್ತವೆ. ಹೆಚ್ಚಿನದಾಗಿ, ಶಿವದೇವನು ಚೌಡದಾನಪುರಕ್ಕೆ ಓರಂಗಲ್ಲಿನಿಂದ ಬಂದನೆಂಬ ಸ್ಥಳೀಯರ ಹೇಳಿಕೆಯೂ ಇಲ್ಲಿ ಬೆಂಬಲ ನೀಡುತ್ತದೆ. ಹೀಗಿದ್ದೂ ಈ ಚೌಡದಾನಪುರ ಶಿವದೇವ ಮತ್ತು ಕಾಕತೀಯರ ರಾಜಗುರು ಶಿವದೇವರ ಸಮೀಕರಣವು ಹೆಚ್ಚಿನ ಆಧಾರಗಳನ್ನು ಬಯಸುತ್ತದೆ.

ಸಕಲೇಶ ಮಾದರಸನು ಕಲ್ಯಾಣದಿಂದ ಶ್ರೀಶೈಲಕ್ಕೆ ಹೊರಟು ದಾರಿಯಲ್ಲಿ ಗೊಪೆಯ ಶಿವದೇವನಿಗೆ ಲಿಂಗೈಕ್ಯ ಕರುಣಿಸಿದನೆಂಬ ವಿಷಯ ಪದ್ಮಣಾಂಕನ ಪದ್ಮರಾಜ ಪುರಾಣದಲ್ಲಿ ಬರುತ್ತದೆ. ಇದಲ್ಲದೆ ಬೇಲೂರು ತಾಲೂಕಿನ ಗಿರಿಸಿದ್ಧಾಪುರ ಶಾಸನದಲ್ಲಿ (ಎಪಿ.ಕೆ. v ಬೇಲೂರ ೨೨೪ ಕ್ರಿ.ಶ. ೧೨೮೪) ಗೊಪೆಯ ಶಿವದೇವರ ಮಗ ಶಿವಶರಣನ ಉಲ್ಲೇಖವಿದೆ. ಈ ನಾಲ್ಕು ಜನ ಶಿವದೇವರ (ಓರಂಗಲ್ಲ ಶಿವದೇವ, ಚೌಡದಾನಪುರ ಶಾಸನೋಕ್ತ ಶಿವದೇವ, ಪದ್ಮರಾಜ ಪುರಾಣೋಕ್ತ ಶಿವದೇವ, ಗಿರಿಯಾಪುರ ಶಾಸನೋಕ್ತ ಶಿವದೇವ) ಸಂಬಂಧ ಕಲ್ಪಿಸುವುದು ಸಂದೇಹದಲ್ಲಿಯೇ ನಿಂತಿದೆ.

ಜ್ಯೋತಿರ್ನಾಥನ ಶೈವರತ್ನಾಕರದಲ್ಲಿ ಅವನ ಪೂರ್ವಜರ ವಿವರ ಹೀಗೆ ಬರುತ್ತದೆ. ಸೌರಾಷ್ಟ್ರ ಸೋಮನಾಥನಿಗೆ ನಿತ್ಯವೂ ಗುಗ್ಗಳ ಅರ್ಪಿಸುವ ಓಹಿಲಾರಾಧ್ಯನು ಈತನ ಮೂಲಪುರುಷ. ಈ ಸಂಪ್ರದಾಯದಲ್ಲಿ ಬಂದ ಶಿವದೇವನು ಶ್ರೀಶೈಲೋತ್ತರ ದಿಕ್ತಟದ ಮಹಾಶಿಲೆಯೊಳಗೆ ಸಮಾಧಿ ಹೊಂದಿದನು. ಇವನ ಶಿಷ್ಯನಾದ ಧರಣೀಧರ ಮುನಿಯು ಶಿವದೇವನ ಈ ಸಮಾಧಿಸ್ಥಳದಲ್ಲಿ ಶಿವಪುರ ನಿರ್ಮಿಸಿದನು. ಈ ಧರಣೀಧರಮುನಿಯ ಮಗ ಅಪ್ಪಯ್ಯ ಸುಧೀಮಣಿ, ಈತನ ಮಕ್ಕಳು ಮಲ್ಲಿನಾಥ ಮತ್ತು ಶಿವದೇವಗುರು. ಮಲ್ಲಿನಾಥ ಮಕ್ಕಳು ಧರಣೀಧರಯೋಗೀಂದ್ರ ಮತ್ತು ಜ್ಯೋತಿರ್ನಾಥ(ಶೈವರತ್ನಾಕರದ ಕರ್ತೃ). ಇನ್ನೊಂದು ವಿಷಯ : ಈ ಜ್ಯೋತಿರ್ನಾಥನನ್ನು ಕೆರೆಯ ಪದ್ಮರಸನ ಸಮಕಾಲೀನ ನೀಲಕಂಠ ನಾಗನಾಥಾಚಾರ್ಯನು ತನ್ನ 'ವೀರಮಾಹೇಶ್ವರಾಚಾರ ಸಂಗ್ರಹ'ದಲ್ಲಿ

> ಶೈವರತ್ನಾಕರಂ ನಾಮ ಗ್ರಂಥಂ ಯಃ ಕೃತವಾನ್ ಪುರಾ
> ಜಗದ್ಧಿತಾರ್ಥಂ ಕೃಪಯಾ ಜ್ಯೋತಿರ್ನಾಥಂ ನಮಾಮಿ ತಮ್ ॥(1–18)

ಎಂದು ಸ್ತುತಿಸಿರುವನು. ಈಗ, ಶೈವರತ್ನಾಕರದಲ್ಲಿ ಹೇಳಿದ ಜ್ಯೋತಿರ್ನಾಥನ ವಂಶಾವಳಿ ಮತ್ತು ಪದ್ಮರಾಜ ಪುರಾಣದಲ್ಲಿ ಹೆಳಿದ ಕೆರೆಯ ಪದ್ಮರಸನ ವಂಶಾವಳಿಗಳನ್ನು ಜೊತೆಜೊತೆಯಲ್ಲಿಟ್ಟು ಹೀಗೆ ರೇಖಿಸಬಹುದು.

(ಶೈವರತ್ನಾಕರ) — (ಪದ್ಮರಾಜ ಪುರಾಣ)

ಓಹಿಲಾರಾಧ್ಯ — ಶಿವಯೋಗಿ ಮಲ್ಲರಸ

|

(ಈತನ ವಂಶದವನು)
ಶಿವದೇವ.................................... — ಸಕಲೇಶ ಮಾದರಸ
(ಶ್ರೀಶೈಲ ಶಿಲೆಯಲ್ಲಿ ಸಮಾಧಿಸ್ಥ) — ಗೋಪೆ ಶಿವದೇವನಿಗೆ ಸಮಾಧಿ ಕರುಣಿಸಿದವನು

|

ಶಿಷ್ಯ ಧರಣೀಧರಮನಿ

|

ಮಗ ಅಪ್ಪಯ್ಯ ಸುಧೀಮಣಿ

|

ಮಕ್ಕಳು

ಮಲ್ಲಿನಾಥ — ಶಿವದೇವ

ಮಲ್ಲಿನಾಥ: ಧರಣೀಧರ — ಜ್ಯೋತಿರ್ನಾಥ......................................ಕೆರೆಯ ಪದ್ಮರಸ

(ಶೈವರತ್ನಾಕರ ಕರ್ತೃ.
ಈತನನ್ನು ಕೆರೆಯ ಪದ್ಮರಸ,
ಕುಮಾರ ಪದ್ಮರಸನ ಸಮಕಾಲೀನನಾದ
ನೀಲಕಂಠ ನಾಗನಾಥಾಚಾರ್ಯನು
ತನ್ನ "ವೀರ ಮಾಹೇಶ್ವರಾಚಾರ
ಸಂಗ್ರಹ"ದಲ್ಲಿ ಸ್ತುತಿಸಿದ್ದಾನೆ)

ಕೆರೆಯ ಪದ್ಮರಸ
|
ಕುಮಾರ ಪದ್ಮರಸ
(ಕೊನೆಯ ಇಬ್ಬರೂ "ವೀರ
ಮಾಹೇಶ್ವರಾಚಾರ
ಸಂಗ್ರಹ"ದ ಕರ್ತೃ ನೀಲಕಂಠ
ನಾಗನಾಥಾಚಾರ್ಯನ ಸಮಕಾಲೀನ)

ಇಲ್ಲಿ ಕಾಲಮಾನವೂ ಸ್ವಲ್ಪ ಹೆಚ್ಚು ಕಡಿಮೆ ಸರಿ ಹೊಂದುವುದರಿಂದ ಬಹುಶಃ ಜ್ಯೋತಿರ್ನಾಥನ ಅಜ್ಜನ ಅಜ್ಜ ಒಂದನೆಯ ಶಿವದೇವನು ಚೌಡದಾನಪುರದ ಶಿವದೇವನಾಗಿರಬಹುದು.(ಇದರ ಚರ್ಚೆಗೆ ಮೈಸೂರು ಓ.ಆರ್.ಆಯ್. ಪ್ರಕಟಿಸಿದ ವೀರಮಾಹೇಶ್ವರಾಚಾರ ಸಂಗ್ರಹದ ಪ್ರಸ್ತಾವನೆ, ಪು. 21–24 ನೋಡಿರಿ)

ಜ್ಯೋತಿನಾರ್ಥನು ಚೌಡದಾನಪುರ ಶಿವದೇವನ ಪರಂಪರೆಯವನೆಂದು ಈ ವರೆಗಿನ ಚರ್ಚೆಯಲ್ಲಿ ಊಹಿಸಲಾಗಿದೆ. ಇದಕ್ಕೆ ಪೋಷಕವಾದ ಇನ್ನೊಂದು ಆಧಾರ ಹೀಗಿದೆ. ಇವನ ಹೆಸರು ಜ್ಯೋತಿರ್ನಾಥ. ಚೌಡದಾನಪುರ ಶಾಸನಗಳಲ್ಲಿ "ಜ್ಯೋತಿರ್ಲಿಂಗಾಮರಗಣ ಕರುಣೋತ್ತಂನ ಭಕ್ತಿ ಪ್ರಸಾದ" "ಮುಕುತೇಶನೆ ಪರ(ಂ)ಧಾಮ ಶ್ರೀ ಜ್ಯೋತಿ"(244), "ಶಿವದೇವಂ ಶ್ರೀ ಜ್ಯೋತಿನಾಥನೆ ಮುಕ್ತಿನಾಥನೆಂದರಿದು"(246) ಎಂಬ ಮಾತುಗಳು ಕಾಣಸಿಕೊಂಡಿವೆ. ಇದಲ್ಲದೆ ಶಿವದೇವನನ್ನು ಆರಾಧಿಸುತ್ತಿದ್ದ ಗುತ್ತ ಅರಸುಮನೆತನದಲ್ಲಿ ಮತ್ತೆ ಮತ್ತೆ ಬರುವ ಜೋಯಿದೇವ ಹೆಸರು ಜ್ಯೋತಿದೇವ ಎಂಬುದರ ತದ್ಭವವೇ ಆಗಿದೆ. ಹೀಗೆ ಈ ಪ್ರದೇಶದಲ್ಲಿ ಜ್ಯೋತಿಸೂಚಕ ದೈವತ ಪ್ರಚಾರದಲ್ಲಿದ್ದು ಇದು ನಾವು ಅಪೇಕ್ಷಿಸುವ ಸಂಬಂಧವನ್ನು ಇನ್ನೂ ಸ್ಪಷ್ಟಪಡಿಸುತ್ತದೆ. ಒಟ್ಟಾರೆ ಶಿವಮುದ್ದ ಶಿವದೇವ, ಲಕ್ಷ್ಮೀದೇವ, ಜ್ಯೋತಿರ್ನಾಥರಲ್ಲಿ ಪರಸ್ಪರ ಸಂಬಂಧವಿರುವ ಸಾಧ್ಯತೆಯಿದೆ.

ಇನ್ನೊಂದು ವಿಷಯ : ಚೌಡದಾನಪುರದ ಬೇರೊಂದು ಶಾಸನದಲ್ಲಿ(1191) ಮುಕ್ತನಾಥಲಿಂಗ ಮತ್ತು ಮುಕ್ತಜೀಯ ಯತಿಗಳ ಉಲ್ಲೇಖ ಬರುತ್ತಿದ್ದು, ಇಲ್ಲಿಯ ಜೀಯ ಎಂಬುದು ಕಾಳಾಮುಖರ ಹೆಸರನ್ನು ಸೂಚಿಸುತ್ತದೆ. ಹೀಗಾಗಿ ಇದು ಮೂಲತಃ ನಕುಲೀಶ(ಕಾಳಾಮುಖ)ಪರಂಪರೆಯ ಕ್ಷೇತ್ರವಾಗಿದ್ದಿತೆಂದೂ, ಶಿವದೇವನಿಂದಾಗಿ(ಶುದ್ಧ)ಶೈವ ಕ್ಷೇತ್ರವಾಗಿ ಪರಿವರ್ತನೆ ಹೊಂದಿತೆಂದೂ ಹೇಳಬಹುದು.

ಕಾರಡಗಿ, ಛಬ್ಬಿ, ಚಿಕ್ಕಮಲ್ಲೂರ ಶಾಸನ ಪ್ರಕಟವಾದರೆ ಮೇಲಿನ ಕೆಲವು ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ಹೊಸ ವಿಷಯಗಳೂ ಸಿಗಬಹುದು. ವಿದ್ವಾಂಸರು ಈ ಶಾಸನಗಳ ಪೂರ್ಣಪಾಠದ ಅಧ್ಯಯನದತ್ತ ಗಮನಹರಿಸುವುದು ಅವಶ್ಯವಿದೆ.

■■

ಆಕರ : ಮಾರ್ಗ ಸಂಪುಟ–೩

೫೨
ಬಸವನಬಾಗೇವಾಡಿಯ ಕಳೆದು ಹೋದ ಶಾಸನ

ಬಸವಣ್ಣನವರನ್ನು ಕುರಿತು ಈವರೆಗೆ ೧೩ ಶಾಸನಗಳು ಲಭಿಸಿವೆ. ನನ್ನ "ಶಾಸನಗಳಲ್ಲಿ ಶಿವಶರಣರು" ಕೃತಿಯಲ್ಲಿ ಈ ವಿವರವನ್ನು ನೋಡಬಹುದು. ಇವುಗಳಲ್ಲಿ ಅರ್ಜುನವಾಡದ ಎರಡು ಶಾಸನಗಳು(ನಾ. ಶ್ರೀ. ರಾಜಪುರೋಹಿತರು ಹುಡುಕಿದ ಸುದೀರ್ಘ ಶಾಸನ, ನಾನು ಹುಡುಕಿದ ಸೀಮೆಕಲ್ಲು ಶಾಸನ)ಮುಖ್ಯವಾದುವು. ಬಳಿಕ ಹೆಸರಿಸಲೇ ಬೇಕಾದುವು ಚೌಡದಾನಪುರದ ಎರಡು ಶಾಸನಗಳು. ಮಿಕ್ಕುವು ಬಸವಣ್ಣನ ಹೆಸರನ್ನು ಮಾತ್ರ ಸೂಚಿಸುತ್ತವೆ.

ಇಂಥ ಸಂದರ್ಭದಲ್ಲಿ ಬಾಗೇವಾಡಿ ಶಾಸನಗಳಲ್ಲಿ ಒಂದಿಷ್ಟು ಮಾಹಿತಿ ಸಿಗಬಹುದೆ? ಎಂಬ ಕುತೂಹಲ ಹುಟ್ಟವುದು ಸ್ವಾಭಾವಿಕ. ಈವರೆಗೆ ಬಾಗೇವಾಡಿಯಲ್ಲಿ ೧೦ ಪ್ರಕಟಿತ, ೧ ಅಪ್ರಕಟಿತ–ಹೀಗೆ ೧೧ ಶಾಸನಗಳು ಸಿಕ್ಕಿದ್ದು, ಅವುಗಳ ವಿವರ ಹೀಗಿದೆ.

1. ಸಾರಂಗಮಠದ ಹತ್ತಿರ–ಕ್ರಿ.ಶ. 1049. ಎಸ್. ಆಯ್. ಆಯ್. xi-i- 83
2. ಸಾರಂಗಮಠದ ಹತ್ತಿರ–ಕ್ರಿ.ಶ. 1069. ಎಸ್. ಆಯ್. ಆಯ್. xv-i- 112
3. ತಾಲೂಕ ಕಚೇರಿ ಹತ್ತಿರ–ಕ್ರಿ.ಶ. 1170. ಎಸ್. ಆಯ್. ಆಯ್. xv- 113
4. ಬಸವೇಶ್ವರ ದೇವಾಲಯದ ಕಂಬ–ಕ್ರಿ.ಶ.1178. ಕರ್ನಾಟಕ ಭಾರತಿ 27–2(ಎಸ್. ಕೆ. ಕೊಪ್ಪ)
5. ಬಸವೇಶ್ವರ ದೇವಾಲಯದ ಕಂಬ–ಕ್ರಿ.ಶ.1199. ಕರ್ನಾಟಕ ಭಾರತಿ 27–2(ಎಸ್. ಕೆ. ಕೊಪ್ಪ)
6. ಬಸವೇಶ್ವರ ದೇವಾಲಯದ ಕಂಬ–13ನೆಯ ಶತಮಾನ. ಕರ್ನಾಟಕ ಭಾರತಿ 27–2(ಎಸ್. ಕೆ. ಕೊಪ್ಪ)
7. ತೆಗ್ಗಿನ ಮಠದ ಹತ್ತಿರ–13ನೆಯ ಶತಮಾನ. ಎಸ್. ಆಯ್. ಆಯ್. xv- 640.
8. ಲಕ್ಕವ್ವನ ಕೆರೆ ಹೊಲ–14 ನೆಯ ಶತಮಾನ.ಎಸ್. ಆಯ್. ಆಯ್. xv- 641.

ಇವುಗಳಲ್ಲಿ ಇಂದಿನ ಬಸವೇಶ್ವರ ದೇವಾಲಯದ ಕಂಬದ ಮೇಲಿನ ಮೂರೂ ಶಾಸನಗಳು ಬೊಂತೇಶ್ವರದೇವರನ್ನು ಪ್ರಸ್ತಾಪಿಸುವುದರಿಂದ, ಇದರ ಪ್ರಾಚೀನ ಹೆಸರು ಬೊಂತೇಶ್ವರ ದೇವಾಲಯವೆಂದು ಸ್ಪಷ್ಟವಾಗುತ್ತದೆ. ಇದು ಕಲ್ಯಾಣ ಚಾಲುಕ್ಯ ಇಮ್ಮಡಿ ತೈಲಪನ ತಾಯಿ ಬೊಂತಾದೇವಿಯ ಹೆಸರಿನಲ್ಲಿ ಅಥವಾ ಇಲ್ಲಿಯ ೧೦೪೫ರ ಶಾಸನದಲ್ಲಿ ಬರುವ ಪ್ರಧಾನಿ (?) ಬೊಂಥಾದೇವನ ಹೆಸರಿನಲ್ಲಿ ಕಟ್ಟಿಸಿದ ದೇವಾಲಯವಾಗಿರಬಹುದೆಂದು ಡಾ. ಎಸ್. ಕೆ. ಕೊಪ್ಪ ಸರಿಯಾಗಿಯೇ ಊಹಿಸಿದ್ದಾರೆ. ಈ ದೇವಾಲಯವಲ್ಲದೆ, ಇದಕ್ಕೆ ಸಂಬಂಧಪಟ್ಟ ಬೊಂತೇಶ್ವರದೇವರ ಮಠವೊಂದು ಇಲ್ಲಿ ಇದ್ದಿತೆಂದೂ, ಇದರ ಆಚಾರ್ಯರು ದೇವರಾಸಿ ಪಂಡಿತನೆಂದೂ ೧೧೪೭ರ ಶಾಸನ ತಿಳಿಸುತ್ತದೆ. ರಾಸಿ ಅಂತ್ಯದ ಹೆಸರು ನಕುಲೀಶ (ಕಾಳಾಮುಖ)ರಲ್ಲಿಯೂ, ಪಾಶುಪತರಲ್ಲಿಯೂ ಕಂಡುಬರುವುದರಿಂದ ಈತನು ಈ ಎರಡು ಪಂಥಗಳಲ್ಲಿ ಒಂದಕ್ಕೆ ಸಂಬಂಧಪಟ್ಟವನಿರಬೇಕು. ೧೦೪೫ರ ಶಾಸನವು ಇಲ್ಲಿಯ ಸೋಮೇಶ್ವರ ದೇವಾಲಯದ ಜ್ಞಾನರಾಸಿ ಪಂಡಿತನು ಪಾಶುಪತ ಪಂಥದವನೆಂದು ತಿಳಿಸುವುದರಿಂದ, ಈ ಬೊಂತೇಶ್ವರ ದೇವಾಲಯದ ದೇವರಾಸಿಯು ನಕುಲೀಶ (=ಕಾಳಾಮುಖ) ಪಂಥದವನಾಗಿರಬಹುದು. ಹೊಂಬಳ ಶಾಸನದಲ್ಲಿ ಬೊಂತೆಮುನಿ ಹೆಸರಿನ ನಕುಲೀಶ (ಕಾಳಾಮುಖ) ವ್ಯಕ್ತಿ ಕಂಡುಬರುವುದನ್ನು ಇಲ್ಲಿ ನೆನೆಯಬಹುದು. ಇದು ನಿಜವಿದ್ದರೆ ಬೊಂತೇಶ್ವರ ದೇವಾಲಯ (ಈಗಿನ ಬಸವೇಶ್ವರ ದೇವಾಲಯ)ವು ನಕುಲೀಶ (ಕಾಳಾಮುಖ) ಪಂಥಕ್ಕೆ ಸೇರಿದುದೆಂದು ಹೇಳಬೇಕಾಗುತ್ತದೆ.

ಈ ಬೊಂತೇಶ್ವರ ದೇವಾಲಯವಲ್ಲದೆ ಈ ಊರಿನಲ್ಲಿ ಸೋಮೇಶ್ವರ (೧೦೪೫, ೧೧೪೯), ಮಲ್ಲಿಕಾರ್ಜುನ (೧೧೯೬), ಗೌಜಿ(ಜೆ?)ದೇವ (೧೧೯೬), ಚೆನ್ನಕೇಶವ ದೇವ (೧೧೭೦), ಬಕುಳೇಶ್ವರ ದೇವ (೧೧೭೦) ಹೆಸರಿನ ದೇವಾಲಯಗಳಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ ಇಲ್ಲಿಯ ಬಹಳಷ್ಟು ಶಾಸನಗಳು ಇದು ೫೦೦ ಜನರ ಅಗ್ರಹಾರವಾಗಿದ್ದಿತೆಂದೂ ಸೂಚಿಸುತ್ತವೆ.

ಇಷ್ಟು ವಿಷಯವನ್ನು ಬಿಟ್ಟರೆ ಬೇರೆ ಯಾವ ವಿಷಯಗಳೂ ಈ ಶಾಸನಗಳಲ್ಲಿಲ್ಲ. ಬಸವಣ್ಣ ಹೋಗಲಿ, ಆ ಊರಿನ ಮುಖ್ಯವ್ಯಕ್ತಿಯೆಂದು ಅರ್ಜುನವಾಡ ಶಾಸನ ಮತ್ತು ಕಾವ್ಯಗಳು ತಿಳಿಸುವ ಅವನ ತಂದೆ ಮಾದಿರಾಜನ ಪ್ರಸ್ತಾಪವೂ ಇಲ್ಲಿಲ್ಲ. ಇಂಥ ನಿರಾಶೆಯ ಪ್ರಸಂಗದಲ್ಲಿ ಡಾ. ಫ. ಗು. ಹಳಕಟ್ಟಿಯವರು ಸೂಚಿಸುವ ಬೇರೊಂದು ಶಾಸನ ನಮ್ಮ ಗಮನ ಸೆಳೆಯುತ್ತದೆ. ಇವರು 'ಶಿವಾನುಭವ' ಪತ್ರಿಕೆಯಲ್ಲಿ ಬರೆದ 'ಬಸವೇಶ್ವರನ ಚರಿತ್ರೆ' ಹೆಸರಿನ ಧಾರಾವಾಹಿ ಲೇಖನದಲ್ಲಿ ಬಸವೇಶ್ವರ ದೇವಾಲಯವನ್ನು ಕುರಿತು "(ಈ) ದೇವಾಲಯವು ಪುರಾತನವೆಂಬುದಕ್ಕೆ ಇನ್ನೊಂದು ಕಾರಣವಿದೆ. ಬಾಗೇವಾಡಿಯಲ್ಲಿ ಒಂದು ಶಿಲಾಶಾಸನವಿದೆ. ಅದು ದೇವಗಿರಿಯ ಪ್ರಸಿದ್ಧ ಅರಸನಾದ ಕನ್ನರನ ಸೇನಾಪತಿಯೂ ಅವನ ಮಾಂಡಲೀಕನೂ ಆದ ಮಲ್ಲ ಅಥವಾ ಮಲ್ಲಿಶೆಟ್ಟಿ ಈತನದು ಇದೆ (ಅರ್ಜುನವಾಡ ಶಿಲಾಶಾಸನದ ನಮ್ಮ ವಿವರಣೆ ನೋಡಿರಿ). ಈ ಮಲ್ಲನು ಮುದಗಲ್ಲಿನಲ್ಲಿದ್ದು ಕರ್ನಾಟಕದ ಪೂರ್ವಭಾಗವನ್ನೆಲ್ಲ ಆಳುತ್ತಿದ್ದನು. ಈತನು ಆಳುತ್ತಿದ್ದುದು ೧೩ನೆಯ ಶತಮಾನದ ಆದಿಭಾಗದಲ್ಲಿ. ಈ ಶಿಲಾಶಾಸನದಲ್ಲಿ ಈ ದೇವಾಲಯದ ಉಲ್ಲೇಖವಿದೆ. ಅದು ಈಗ ಮಾಮಲೇದಾರ ಕಛೇರಿಯ ಸಮೀಪದಲ್ಲಿ ಬಿದ್ದುಬಿಟ್ಟಿರುತ್ತದೆ. ಇದರ ಮೇಲಿಂದಲೂ ಈ ದೇವಾಲಯವು ಪುರಾತನವೆಂದು ಕಂಡುಬರುತ್ತದೆ. ಈ ಮಲ್ಲ ಸೇನಾಪತಿಯ ಮಗನ ಹೆಸರು ಚಾವುಂಡನು. ಈ ಚಾವುಂಡನು ಅರ್ಜುನವಾಡ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ. ಈ ಮಲ್ಲನೂ

ಅವನ ಈ ಮಗನೂ ಬಾಗೇವಾಡಿ ಮತ್ತು ಅರ್ಜುನವಾಡಗಳಲ್ಲಿ ಇದ್ದ ಬಸವನ ವಂಶಜರ ಮೇಲೆ ಭಕ್ತಿಯನ್ನು ತಾಳಿ ಈ ದೇಣಿಗೆಗಳನ್ನು ಕೊಟ್ಟಂತೆ ನಮಗೆ ತೋರುತ್ತದೆ.'' (ಶಿವಾನುಭವ ೧೬-೨) ಎಂದು ಹೇಳಿದ್ದಾರೆ.

ಇಲ್ಲಿ ಪ್ರಸ್ತಾಪ ಮಾಡಿದ ಶಾಸನ ಎಲ್ಲಿಯೂ ಪ್ರಕಟವಾಗಿಲ್ಲ. ಮಾಮಲೇದಾರ ಕಚೇರಿ ಹತ್ತಿರದ ಒಂದು ಶಾಸನ (೧೧೭೦) ಪ್ರಕಟವಾಗಿದ್ದರೂ, ಇದರಿಂದ ಅದು ಭಿನ್ನವಾಗಿರುತ್ತದೆ. ಬಹುಶಃ ಅದು ಈಗ ಬಾಗೇವಾಡಿಯಲ್ಲಿಯೂ ಕಂಡುಬರುತ್ತಿಲ್ಲ ವೆನಿಸುತ್ತದೆ. ಆಸಕ್ತರು ಆ ಶಾಸನವನ್ನು ಹುಡುಕುವುದು ಅವಶ್ಯವಿದೆ. ಏಕೆಂದರೆ ಡಾ. ಹಳಕಟ್ಟಿಯವರು ಹೇಳುವಂತೆ ಆ ಶಾಸನಕ್ಕೂ ಅರ್ಜುನವಾಡ ಶಾಸನಕ್ಕೂ ಸಂಬಂಧವಿದೆ.

ಹುಕ್ಕೇರಿ ಹತ್ತಿರದ ಅರ್ಜುನವಾಡ ಶಾಸನ (೧೨೬೦)ದಲ್ಲಿ ಬಸವಣ್ಣನ ಅಣ್ಣನ ಮೊಮ್ಮಗನಾದ ಹಾಲಬಸವಿದೇವನಿಗೆ ಯಾದವರ ಮಂತ್ರಿ ಚೌಡಿಸೆಟ್ಟಿಯು ಕವಿಳಾಸಪುರ ಗ್ರಾಮ (ಅರ್ಜುನವಾಡ ನೆರೆಯ ಈ ಗ್ರಾಮ ಈಗ ನಾಶವಾಗಿದೆ)ವನ್ನು ದಾನ ನೀಡಿದ ವಿಷಯವಿದೆ. ಮಮದಾಪುರ (ಕುರುಂಬೆಟ್ಟ) ಶಾಸನದ ಪ್ರಕಾರ ಈ ಚೌಡಿಸೆಟ್ಟಿಯು ಲಕ್ಷ್ಮೇಶ್ವರದವನಾಗಿದ್ದಾನೆ. ಈತನು ಶಿವದೇವ ಒಡೆಯರಿಗೆ ದಾನವಾಗಿ ಕೊಟ್ಟ ಗ್ರಾಮವೇ ಇಂದಿನ ರಾಣೇಬೆನ್ನೂರ ತಾಲೂಕಿನ ಚೌಡದಾನಪುರ; ಇಲ್ಲಿಯ ಶಾಸನಗಳು ಬಸವಣ್ಣನನ್ನು ಭಕ್ತಿಯಿಂದ ಸ್ಮರಿಸಿವೆ. ಮಮದಾಪುರ ಶಾಸನದಲ್ಲಿ ಚೌಡಿಶೆಟ್ಟಿಯು ಶುದ್ಧಶೈವ ಪರಂಪರೆಯ ವಿಮಳಶಂಭುದೇಶಿಕನಿಗೆ ದಾನ ನೀಡಿದ ವಿಷಯವಿದೆ. ಇದರಿಂದಲೂ ಬೇರೆ ಆಧಾರಗಳಿಂದಲೂ ಈ ಚೌಡಿಶೆಟ್ಟಿ ಶುದ್ಧಶೈವ ಪರಂಪರೆಯ ಗೋಳಕಿಮಠ ಅಥವಾ ಗೋಲಗೇರಿ ಮಠ ಸಂಪ್ರದಾಯದ ಭಕ್ತನೆಂದು ತಿಳಿದುಬರುತ್ತದೆ. ಲಕ್ಷ್ಮೇಶ್ವರದಲ್ಲಿ ಈ ಗೋಲಗೇರಿಮಠ ಇನ್ನೂ ಇದೆ. ಈ ಚೌಡಿಸೆಟ್ಟಿಯಿಂದ ದಾನ ಪಡೆದ ಹಾಲಬಸವಿದೇವನು ತಾನು ಬಸವಣ್ಣನ ವಂಶಜನೆಂದು, (ಶುದ್ಧಶೈವೀಯ)ತೇಸಟ್ಟಿ ಪುರಾತ ಪಾದಾರ್ಚಕನೆಂದೂ ಹೆಮ್ಮೆಪಟ್ಟುಕೊಂಡಿರುವನೇ ಹೊರತು, ಲಿಂಗಾಯತನೆಂದು ಹೇಳಿಕೊಂಡಿಲ್ಲ. ಹೀಗಾಗಿ ಈ ಶಾಸನ ಲಿಂಗಾಯತ ಪರವಾಗಿರದೆ, ಶುದ್ಧಶೈವಪರ ಇರುವಂತೆ ತೋರುತ್ತದೆ. ಒಟ್ಟಾರೆ ಶುದ್ಧಶೈವ ಭಕ್ತನಾದ ಚೌಡಿಸೆಟ್ಟಿ ಇಲ್ಲಿ ಶುದ್ಧಶೈವನಾದ ಹಾಲಬಸವಿದೇವನಿಗೆ ದಾನ ನೀಡಿದ್ದಾನೆ.

ಈ ಚೌಡಸೆಟ್ಟಿಯ ತಂದೆ ಮಲ್ಲಿಸೆಟ್ಟಿ ನೀಡಿದ ದಾನಶಾಸನವನ್ನೇ ಡಾ. ಹಳಕಟ್ಟಿಯವರು ಸೂಚಿಸಿದ್ದಾರೆ. ಅವರ ಪ್ರಕಾರ ಮಲ್ಲಿಸೆಟ್ಟಿ ಮುದಗಲ್ಲ ಕೇಂದ್ರದಿಂದ ಆಳುತ್ತಿದ್ದುದನ್ನೂ ಇಂದಿನ ಬಸವೇಶ್ವರ ದೇವಾಲಯದ ಪ್ರಸ್ತಾಪವನ್ನೂ ಈ ಶಾಸನ ಒಳಗೊಂಡಿದೆ. ಇದೆಲ್ಲವನ್ನು ಗಮನಿಸಿದರೆ ತಂದೆ ಮಲ್ಲಿಸೆಟ್ಟಿಯ ಈ ಶಾಸನವೂ ಮಗ ಚೌಡಿಸೆಟ್ಟಿಯ ಅರ್ಜುನವಾಡ ಶಾಸನದಂತೆ ಶುದ್ಧಶೈವ (ಬ್ರಾಹ್ಮಣ)ವನ್ನು ಅದರಲ್ಲಿಯೂ ಶುದ್ಧಶೈವ (ಬ್ರಾಹ್ಮಣ)ರಾದ ಬಸವಣ್ಣನ ವಂಶಜನ ಸೂಚನೆಯನ್ನು ಒಳಗೊಂಡಿರಬೇಕು. ಇದು ನಿಜವಿದ್ದರೆ, ಈ ಶಾಸನ ಬಸವಣ್ಣನ ವಂಶಜರ ಒಂದು ಮಹತ್ವದ ದಾಖಲೆಯೆನಿಸುತ್ತದೆ. ಕಾರಣ, ಆಸಕ್ತ ಸಂಸ್ಥೆಗಳಾಗಲೀ, ವಿದ್ವಾಂಸರಾಗಲೀ ಇದರ ಶೋಧದತ್ತ ಗಮನಕೊಡುವರೆಂದು ಆಶಿಸುತ್ತೇನೆ.

■■

ಆಕರ : ಮಾರ್ಗ ಸಂಪುಟ-೩

೬೦

ಚಾಗದ ಕಂಬ-ಬೀರದ ಶಾಸನ

ರೂಪವ್ಯತ್ಯಾಸದಂತೆ ಅರ್ಥವ್ಯತ್ಯಾಸ ಪಡೆಯುವುದೂ ಶಬ್ದಗಳ ಸಹಜ ಸ್ವಭಾವ. ವ್ಯಾವಹಾರಿಕ ಶಬ್ದಗಳಿಗಿಂತ ಪಾರಿಭಾಷಿಕ ಶಬ್ದಗಳು ಈ ಪ್ರಕ್ರಿಯೆಗೆ ಗುರಿಯಾದಲ್ಲಿ ಸಂಸ್ಕೃತಿಯ ತಿಳಿವಳಿಕೆಯು ತೀವ್ರ ವ್ಯತ್ಯಾಸಕ್ಕೆ ದಾರಿಮಾಡಿಕೊಡುತ್ತದೆ. ಹೀಗೆ ತಿಳಿವಳಿಕೆ ವ್ಯತ್ಯಾಸಕ್ಕೆ ದಾರಿಮಾಡಿಕೊಟ್ಟ ಎರಡು ಶಬ್ದಗಳ ಸಮಾಲೋಚನೆ ಇಲ್ಲಿದೆ.

ಪಂಪಭಾರತದಲ್ಲಿ ಅರಿಕೇಸರಿಯ ತ್ಯಾಗ ಮತ್ತು ಶೌರ್ಯಗಳನ್ನು ಕೀರ್ತಿಸುತ್ತ ಅವನು "ಚಾಗದ ಕಂಬಮಂ ನಿರಿಸಿ, ಬೀರದ ಶಾಸನಮಂ ನೆಗಳ್ಚಿ" ಪ್ರಸಿದ್ಧಿಯನ್ನು ಪಡೆದನೆಂದು ಹೇಳುತ್ತಾನೆ, ಪಂಪ. ಇಲ್ಲಿ ತ್ಯಾಗವನ್ನು ಸಾರಲು ಕಂಬವನ್ನು ನಿಲ್ಲಿಸಿದ ಅರಿಕೇಸರಿ, ವೀರವನ್ನು ಪ್ರಕಟಿಸಲು 'ಶಾಸನ'ವನ್ನು ಬರೆಯಿಸಿದನೆಂದು ಹೇಳಲಾಗಿದೆ. ನಮಗೆ ಗೊತ್ತಿರುವಂತೆ ಸಾಮಾನ್ಯವಾಗಿ ಪ್ರಾಚೀನ ಕಾಲದಲ್ಲಿ ತ್ಯಾಗ ವೀರಗಳೆಂಬ ಎರಡೂ ಕ್ರಿಯೆಗಳಿಗಾಗಿ ಶಾಸನಗಳನ್ನು ಬರೆಯಿಸಿದ್ದಾರೆ. ಆದರೆ ಪಂಪನ ಈ ಹೇಳಿಕೆಯನ್ನು ನೋಡಿದರೆ ಮೂಲತಃ ದಾನಸಂದರ್ಭದ ಸ್ಮಾರಕವಾಗಿ 'ಶಿಲಾಸ್ತಂಭ'ಗಳನ್ನು ಸ್ಥಾಪಿಸಿದರೆ, ವೀರ ಸಂದರ್ಭದ ಸ್ಮಾರಕವಾಗಿ 'ಶಿಲಾಶಾಸನ'ವನ್ನು ಬರೆಯಿಸುವ ಸಂಪ್ರದಾಯ ರೂಢಿಯಲ್ಲಿರಬೇಕೆನಿಸುತ್ತದೆ. ಈ ಅಭಿಪ್ರಾಯವನ್ನು ಪೋಷಿಸುವ ಒಂದೆರಡು ಉದಾಹಣೆಗಳನ್ನು ಇಲ್ಲಿ ಕೊಡಬಹುದಾಗಿದೆ.

ಪ್ರಾಚೀನ ಕಾಲದಲ್ಲಿ 'ಗೋಸಾಸ' ಹೆಸರಿನ ದಾನಪದ್ಧತಿ ಆಚರಣೆಯಲ್ಲಿದ್ದಿತು. ಸಾವಿರ ಗೋವುಗಳ ದಾನಕ್ರಿಯೆಯೆಂದು ಸಾಮಾನ್ಯವಾಗಿ ಇದನ್ನು ಅರ್ಥೈಸುತ್ತಲಿದ್ದಾರೆ. ಈ ದಾನಕ್ರಿಯಾಸ್ಮಾರಕವಾಗಿ ನಿಲ್ಲಿಸಿದವು ಸ್ತಂಭಾಕೃತಿಯಲ್ಲಿರುವುದು ಗಮನಿಸಬೇಕಾದ ಸಂಗತಿಯಾಗಿದೆ, ಇವುಗಳನ್ನು "ಮೇಂಟೆ" ಎಂದು ಅವುಗಳ ಮೇಲಿನ ಬರವಣಿಗೆಯಲ್ಲಿ ಕರೆಯಲಾಗಿದೆ. "ಇಂದಮ್ಮನ ಗೋಸಾಸದ ಮೇಂಟೆ" ಇತ್ಯಾದಿ ಮಾತುಗಳು ಇದಕ್ಕೆ ನಿದರ್ಶನವೆನಿಸಿವೆ. ಮೇಂಟೆ (ಮೇಟಿ) ಎಂದರೆ ಕಂಬ. ನಾಲ್ಕು ಮುಖಗಳುಳ್ಳ ಈ ಕಂಬದ ಎತ್ತರ ಸುಮಾರು ೪-೫ ಅಡಿ. ಮೇಲ್ಭಾಗ ಕಮಾನಿನಂತಿದ್ದು, ಇಲ್ಲಿ ಕಲಶ ಮತ್ತು ಮೀನುಗಳನ್ನು ಬಿಡಿಸಲಾಗಿರುತ್ತದೆ. ಕೆಲವೊಮ್ಮೆ ಬೇರೆ ಚಿತ್ರಗಳನ್ನು ಬಿಡಿಸಿದ್ದರೂ ಈ ದಾನಸ್ಮಾರಕ ಮಾತ್ರ ಸ್ತಂಭರೂಪದಲ್ಲಿ ಇರುವುದು ಕಡ್ಡಾಯ. ತ್ಯಾಗಸಂದರ್ಭದಲ್ಲಿ ಕಂಬ ನಿಲ್ಲಿಸುತ್ತಿದ್ದರೆಂಬ ಪಂಪನ ಹೇಳಿಕೆ ಇಲ್ಲಿ ಸಮರ್ಥನೆ ಪಡೆಯುತ್ತಿದೆ. ಈ ಸ್ಮಾರಕಗಳು ಬಾದಾಮಿ ಚಾಲುಕ್ಯರ, ಅದಕ್ಕಿಂತ ಅರಿಕೇಸರಿಯ ಸಾಮ್ರಾಟರಾಗಿದ್ದ ರಾಷ್ಟ್ರಕೂಟರ ಕಾಲದಲ್ಲಿ ವಿಪುಲವಾಗಿದ್ದು, ಆ ತರುವಾಯ ಕಂಡುಬರುವುದಿಲ್ಲ.

ಶ್ರವಣಬೆಳ್ಗೊಳದಲ್ಲಿ "ತ್ಯಾಗದ ಬ್ರಹ್ಮದೇವರ ಕಂಬ" ಹೆಸರಿನ ಪ್ರಸಿದ್ಧ ಕಂಬವಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇದರ ಒಂದು ಮಗ್ಗುಲಿನ ಮೇಲೆ ಚಾವುಂಡರಾಯನ ಶೌರ್ಯಸಾಹಸಗಳನ್ನು ಬರೆಯಲಾಗಿದೆ. ೧೨ನೆಯ ಶತಮಾನದಲ್ಲಿ ಈ ಕಂಬಕ್ಕೆ ಬ್ರಹ್ಮ(ಯಕ್ಷ)ನ ವಿಗ್ರಹವನ್ನು ಕೆತ್ತಿಸಿದ ಹೆಗ್ಗಡೆ ಕಣ್ಣನೆಂಬುವನು, ತನ್ನ ಈ ಘಟನೆಯನ್ನು ಬರೆಯಿಸುವುದಕ್ಕಾಗಿ ಕಂಬದ ಮಿಕ್ಕ ಮಗ್ಗಲುಗಳ ಮೇಲಿದ್ದ ಮೂಲ ಬರವಣಿಗೆಯನ್ನು ಅಳಿಸಿಹಾಕಿದ್ದಾನೆ. ಅಳಿದುಹೋದ ಈ ಭಾಗದಲ್ಲಿ ಚಾವುಂಡರಾಯನ ತ್ಯಾಗವನ್ನು ಸೂಚಿಸುವ ಬರವಣಿಗೆ ಇದ್ದಿತೆಂದು ಕಾಣುತ್ತದೆ. ಬರವಣಿಗೆಯನ್ನು ಅಳಿಸಿಹಾಕಿದರೂ 'ತ್ಯಾಗದ ಕಂಬ' ಎಂಬ ಹೆಸರು ಈಗಲೂ ಬಳಕೆಯಲ್ಲಿರುವುದೂ ಇಲ್ಲಿ ಕುಳಿತು ಚಾವುಂಡರಾಯನು ದಾನಮಾಡುತ್ತಿದ್ದ ಎಂಬ ಜನವದಂತಿ ಕೇಳಿ ಬರುವುದೂ, ಇದು ಮುಖ್ಯವಾಗಿ ತ್ಯಾಗಸ್ಮಾರಕವೇ ಹೊರತು ವೀರಸ್ಮಾರಕವಲ್ಲವೆಂದು ಸ್ಪಷ್ಟಪಡಿಸುತ್ತದೆ.

ಹೀಗೆ ಗೋಶಾಸನದ ಕಂಬ, ಬೆಳ್ಗೊಳದ ತ್ಯಾಗದ ಕಂಬಗಳು ತ್ಯಾಗಸಂದರ್ಭದಲ್ಲಿ ಮೂಲತಃ ಕಂಬ ನಿಲ್ಲಿಸುತ್ತಿದ್ದರೆಂಬ ಪಂಪನ ಹೇಳಿಕೆಯನ್ನು ಸಮರ್ಥಿಸುತ್ತವೆ. ಇದಲ್ಲದೆ ಶಿಶುವಿನಹಳ್ಳಿಯ ದಾನಶಾಸನ (ಎಸ್. ಆಯ್. ಆಯ್. xi-i ೧೪ ಕ್ರಿ. ಶ. ೮೭೨)ವನ್ನು 'ಶಾಸನದ ಶಿಲಾಸ್ತಂಭ' ಎಂದು ಕರೆದುದನ್ನು ಇಲ್ಲಿ ಸ್ಮರಿಸಬಹುದು.

ಇಲ್ಲಿ ಒಂದು ಪ್ರಶ್ನೆ: ಹೀಗೆ ನಿಲ್ಲಿಸಿದ ಕಂಬದ ಮೇಲೆ ಮೂಲತಃ ಅಕ್ಷರ ಬರೆಯುತ್ತಿದ್ದರೇ? ಎಂಬುದು. ಏನೇ ಹಾಳಾಗಿದ್ದರೂ ೧೧ನೇ ಶತಮಾನದ ತ್ಯಾಗದ ಬ್ರಹ್ಮನ ಕಂಬದ ಮೇಲೆ ವಿಸ್ತಾರವಾದ ಸಂಸ್ಕೃತ ಬರವಣಿಗೆ ಇದೆ. ಆದರೆ ಆ ಪೂರ್ವದ ಗೋಸಾಸ ಕಂಬಗಳ ಮೇಲೆ ಬಹಳವೆಂದರೆ ಎರಡು ಮೂರು ಸಾಲುಗಳ ಬರವಣಿಗೆಯಿದ್ದು ಕಂಬವೇ ಪ್ರಧಾನವಾಗಿದೆ. ಬಹುಶಃ ಇನ್ನೂ ಹಿಂದಿನ ಕಾಲದಲ್ಲಿ ಕೇವಲ ಕಲ್ಲಿನ ಕಂಬಗಳನ್ನೇ ನಿಲ್ಲಿಸುತ್ತಿದ್ದರೇನೋ. ಇದು ನಿಜವಿದ್ದರೆ ನಮ್ಮ ಪ್ರಾಚೀನರ ವ್ಯಕ್ತಿನಿರಪೇಕ್ಷದಾನದ ಪ್ರಜ್ಞೆ ಇಲ್ಲಿ ಧ್ವನಿತವಾಗುತ್ತದೆ. ಅದೇನೇ ಇರಲಿ, ಕರ್ನಾಟಕದಲ್ಲಿ ವಿಶಿಷ್ಟ ಚಿತ್ರವಿರುವ ತೀರ ಪ್ರಾಚೀನ ಕಂಬಗಳು ಕಂಡುಬಂದಲ್ಲಿ ಅವು ದಾನಸ್ಮಾರಕಗಳೆಂದು ಭಾವಿಸಬಹುದಾಗಿದೆ.

ಹೀಗೆ ಮೂಲತಃ ಈ 'ಕಂಬ'ದ ಪರಿಕಲ್ಪನೆಯೇ ಬೇರೆ, 'ಶಾಸನ'ದ ಪರಿಕಲ್ಪನೆಯೇ ಬೇರೆಯಾಗಿದ್ದು, ಕಾಲಕ್ರಮದಲ್ಲಿ ದಾನ ಪ್ರಸಂಗಗಳಿಗಾಗಿಯೂ ಶಾಸನ ಬರವಣಿಗೆ ಬೆಳೆದು ಬಂದಂತೆ, ಕಂಬದ ಪರಿಕಲ್ಪನೆಯು ಶಾಸನದ ಪರಿಕಲ್ಪನೆಯಲ್ಲಿ ಲೀನವಾಯಿತೆಂದು ತೋರುತ್ತದೆ.

■■

ಆಕರ : ಮಾರ್ಗ ಸಂಪುಟ–೩

೬೧

ಶಾಸನಗಳಲ್ಲಿ ಬಸವಪೂರ್ವ-ಬಸವೋತ್ತರ ಕಾಲದ ಶೈವಸ್ವರೂಪ

ಪರಿವರ್ತನೆ ಶರಣ ಚಳುವಳಿಯ ಮುಖ್ಯಲಕ್ಷಣ. ಭಾಷಿಕ, ಸಾಹಿತ್ಯಿಕ, ಸಾಮಾಜಿಕ, ಆರ್ಥಿಕ ಇತ್ಯಾದಿಗಳಿಗಿಂತ ಧಾರ್ಮಿಕ ಪರಿವರ್ತನೆಯೇ ಇದರ ಮುಖ್ಯಲಕ್ಷಣವಾಗಿದೆ. ಹೀಗಾಗಿ ಶಿವಪ್ರಜ್ಞೆಯ ಈ ಧರ್ಮದಿಂದಾಗಿ, ಆ ಕಾಲದ ಇತರ ಶಿವಪ್ರಜ್ಞೆಯ ಧರ್ಮಗಳಲ್ಲಿ ಸಹಜವಾಗಿಯೇ ಮಹತ್ತರ ಪರಿವರ್ತನೆ ಘಟಿಸಿತು. ಕರ್ನಾಟಕದಲ್ಲಿ ಇತರ ಶಿವಪ್ರಜ್ಞೆಯ ಪ್ರಸಿದ್ಧಧರ್ಮಗಳು ನಾಲ್ಕು : ನಕುಲೀಶ, ಪಾಶುಪತ, ಮಹಾವ್ರತಿ, ಶೈವ. ಇವುಗಳನ್ನು ಕುರಿತು ಸಾವಿರಾರು ಶಾಸನಗಳು, ಬಸವಪೂರ್ವ ಮತ್ತು ಬಸವೋತ್ತರ ಕಾಲದಲ್ಲಿ ಸಿಗುತ್ತವೆ. ಬಸವಪೂರ್ವ ಕಾಲದಲ್ಲಿ ವೈದಿಕಸಿದ್ಧಾಂತಮುಖಿಯಾಗಿದ್ದ ಇವು, ಬಸವೋತ್ತರ ಕಾಲದಲ್ಲಿ ಶರಣಸಿದ್ಧಾಂತ ಮುಖಿಯಾಗುತ್ತಲಿರುವ ಹೆಜ್ಜೆ ಗುರುತುಗಳು ಶಾಸನಗಳಲ್ಲಿ ಕಂಡುಬರುತ್ತವೆ. ಇಂಥ ಒಂದು ಸ್ಥೂಲ ಚಿತ್ರವನ್ನು ಇಲ್ಲಿ ಬಿಡಿಸಬಹುದು.

ಬಸವಪೂರ್ವಯುಗ :

ಮೇಲೆ ಹೇಳಿದ ನಾಲ್ಕು ಶಾಖೆಗಳಲ್ಲಿ ಶಕ್ತಿಪರ್ಷೆಯ ನಕುಲೀಶ (ಕಾಳಾಮುಖ) ಧರ್ಮದ ಪ್ರಸ್ತಾಪವೇ ಶಾಸನಗಳಲ್ಲಿ ವಿಶೇಷವೆಂಬಂತೆ ಬರುವುದರಿಂದ, ಇದರ ಸೈದ್ಧಾಂತಿಕ ಅಂಶಗಳು ಮುಖ್ಯವಾಗಿ, ಮಿಕ್ಕವುಗಳ ಸೈದ್ಧಾಂತಿಕ ಅಂಶಗಳು ಗೌಣವಾಗಿ ಸಿಗುತ್ತವೆ.

ಯಾವುದೇ ಧರ್ಮ ನಿರ್ದಿಷ್ಟ ದರ್ಶನದ ಚೌಕಟ್ಟಿನಲ್ಲಿ ಅಳವಟ್ಟಿರುತ್ತದೆ. ಭಾರತದಲ್ಲಿ ಇಂಥ ದರ್ಶನಗಳು ಆರು: ಸಾಂಖ್ಯ (ಕಪಿಲ), ಯೋಗ (ಪಾತಂಜಲಿ), ನ್ಯಾಯ(ಗೌತಮ), ವೈಶೇಷಿಕ(ಕಣಾದ), ಪೂರ್ವಮೀಮಾಂಸೆ (ಜೈಮಿನಿ) ಮತ್ತು ಉತ್ತರ ಮೀಮಾಂಸೆ (ಬಾದರಾಯಣ/ವ್ಯಾಸ). ನಕುಲೀಶಧರ್ಮವು ಇವುಗಳಲ್ಲಿ ನ್ಯಾಯದರ್ಶನಕ್ಕೆ ಸಂಬಂಧಿಸಿದಂತಿದೆ. ಏಕೆಂದರೆ ಸಾಮಾನ್ಯವಾಗಿ ಈ ಧರ್ಮದ ಆಚಾರ್ಯರು ಶಾಸನಗಳಲ್ಲಿ 'ನೈಯಾಯಿಕ ನಳಿನೀಭಾಸ್ಕರ' ಎಂಬ ವಿಶೇಷಣಗಳಿಂದ ಗುರುತಿಸಿಕೊಂಡಿದ್ದಾರೆ. ಲಕುಲೀಶ್ವರ ಹೆಸರಿನ ಆಚಾರ್ಯನನ್ನು ಶಾಸನವೊಂದು "ನೈಯಾಯಿಕಸಂರಕ್ಷಣೈಕದಕ್ಷಂ" ಎಂದು ಕರೆದಿದೆ. ನೈಯಾಯಿಕವು ತರ್ಕದ ಆಧಾರದ ಮೇಲೆ ನಿಂತುದಾಗಿದೆ. ಸೋಮೇಶ್ವರ ಹೆಸರಿನ ಆಚಾರ್ಯನನ್ನು ಮೀಮಾಂಸಕ ಗೋತ್ರತ್ರಾಸಿ ಎಂದೂ ವಿದ್ಯಾಭರಣ ಯತಿಯನ್ನು "ಮೀಮಾಂಸಾಮತ ಕುಂಭಿಕುಂಭದಳನ ಪ್ರೋದ್ಯನ್ಮೃಗಾಧೀಶ"ನೆಂದೂ

ಶಾಸನಗಳು ಕರೆಯುವ ಮೂಲಕ, ಈ ಧರ್ಮವು ಮೀಮಾಂಸಕ ದರ್ಶನ ವಿರೋಧಿಯೆಂದು ತಿಳಿದುಬರುತ್ತದೆ.

ಶಾಸನಗಳಲ್ಲಿ ಸಿಗುವ ಇನ್ನೊಂದು ಅಂಶವೆಂದರೆ ಈ ನಕುಲೀಶವು ಆಗಮ ಪ್ರಧಾನವಾಗಿದೆ.

ಆವಾವಾಗಮದೊಳಗಂ।
ಭಾವಿಸಿ ನೋಡೆ ತಾವೆ ಪರಿಣತರೆನಿಪ।
ರ್ಕ್ಕೇವಳಮೆ ಸೋವರಾಸಿಗ।
ಳೀ ವಸುಮತಿಯೊಳಗೆ ನೆಗಟ್ದಿರಮಳಚರಿತ್ರರು॥

(ಎಸ್. ಆಯ್. ಆಯ್ XVIII ೭೮ ಅಸುಂಡಿ ೧೧೭೪)

ಇಲ್ಲಿ ಸೋವರಾಸಿ ಹೆಸರಿನ ಆಚಾರ್ಯನು ಎಲ್ಲ ಆಗಮಗಳಲ್ಲಿ ಪರಿಣತನಾಗಿದ್ದನೆಂದು ಹೇಳಲಾಗಿದೆ. ಆದರೆ ಇವರು ಅವಲಂಬಿಸಿದ್ದ ಈ ಆಗಮಗಳು ಯಾವುವು? ಎಂಬುದು ಸ್ಪಷ್ಟವಿಲ್ಲ. ಈ ನಕುಲೀಶಶೈವರ ವಿಷಯದಲ್ಲಿ "ಶ್ರೀಮಲ್ಲಕುಳೀಶ್ವರದೇವ ಮುಖಕಮಳ ವಿನಿರ್ಗತ ಸಕಳಶಾಸ್ತ್ರ" ಬಲ್ಲಿದರೆಂದು ಅನೇಕ ಶಾಸನಗಳು ತಿಳಿಸುತ್ತವೆ. ಬಹುಶಃ ಇದನ್ನೇ ಕೆಲವು ಶಾಸನಗಳು ಲಾಕುಳಾಗಮ, ಲಾಕುಳದೇವಾಗಮವೆಂಬ ಪರ್ಯಾಯನಾಮಗಳಿಂದ ಕರೆದಿವೆ. ಈ ಹೆಸರಿನ ಆಗಮವೊಂದು ಇವರ ಮುಖ್ಯಗ್ರಂಥವಾಗಿದ್ದಿತೆಂದು ಇದರಿಂದ ತಿಳಿದುಬರುತ್ತದೆ. ಅನೇಕ ಶಾಸನಗಳು ಈ ಆಚಾರ್ಯರು "ಋಗ್ಯಜುಸ್ಸಾಮಾಥರ್ವಣ ಪಕ್ಷಪಾತಿ"ಗಳೆಂದೂ ತಿಳಿಸುತ್ತವೆ. "ವೇದಾಗಮ ಸೋಮಶಂಭು ಲಾಕುಳಸಿದ್ಧಾಂತಾದಿ ಸಕಳಾಗಮಜ್ಞರ್" (ಎಸ್. ಆಯ್. ಆಯ್ XX-1 ೧೭೬ ಸಾಲೊಟಗಿ), "ನಂದಿಕೇಶ್ವರ ಲಾಕುಳಾಗಮ" (ಸುರಪುರ ತಾಲೂಕಿನ ಶಾಸನಗಳು–೮೪ ಹಗರಟಗಿ)ಎಂಬ ಉದ್ಧರಣೆಗಳು ಇವರು ಅನುಸರಿಸುತ್ತಿದ್ದ ಇತರ ಗ್ರಂಥಗಳ ಕಡೆಗೆ ಬೆರಳುನೀಡುತ್ತವೆ.

ಸಾಮಾನ್ಯವಾಗಿ ಎಲ್ಲ ಶಾಸನಗಳು ಈ ಆಚಾರ್ಯರನ್ನು "ಯಮ ನಿಯಮ ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ ಧಾರಣ ಸಮಾಧಿ ಸಂಪನ್ನರ್" ಎಂದು ಕರೆಯುವ ಮೂಲಕ ಇವರು ಅಷ್ಟಾಂಗಯೋಗನಿರತರೆಂದೂ ತಿಳಿಸುತ್ತವೆ. "ಮಾಂತ್ರಿಕನೆನೆ ತಾಂತ್ರಿಕನೆನೆ ಯಾಂತ್ರಿಕನೆನೆ ಧರೆ ಸೊಗಯಿಪಂ ಕಳೇಶ್ವರದೇವಂ" ಎಂದು ಹೇಳುವ ಮೂಲಕ ಇವರು ಯಂತ್ರ ತಂತ್ರಗಳಲ್ಲಿ ನಿಷ್ಠೆಯುಳ್ಳವರೆಂದೂ ಕುಕನೂರು ಶಾಸನ(೧೧೭೮) ತಿಳಿಸಿದೆ. "ಕ್ರಮಘಟಿತ ವರ್ಣಾಶ್ರಮವಿಧಿ"[೧] ಎಂದು ಶಾಸನವೊಂದು ತಿಳಿಸುವುದರಿಂದ ಇವರು ವರ್ಣಾಶ್ರಮ ಪಾಲಕರೆಂದೂ ಹೇಳಬಹುದಾಗಿದೆ.

ಶಕ್ತಿಪರ್ಷೆಯ ಈ ನಕುಲೀಶವನ್ನು ಬಿಟ್ಟರೆ, ಎರಡನೆಯ ಶಾಖೆಯಾಗಿರುವ ಸಿಂಹಪರ್ಷೆಯ "ಪಾಶುಪತ"ದ ಶಾಸನಗಳು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿದ್ದು, "ನಕುಲೀಶ"ದಿಂದ ಇವುಗಳನ್ನು ಬೇರ್ಪಡಿಸಿ ತೋರಿಸುವುದು ಅಷ್ಟು ಸುಲಭವಲ್ಲ.

ಮೂರನೆಯ ಶಾಖೆಯಾಗಿರುವ "ಮಹಾವ್ರತಿ"ಗಳ ಶಾಸನ ತೀರ ಕಡಿಮೆ. ಲಕ್ಷ್ಮೇಶ್ವರಶಾಸನದಲ್ಲಿ ಈ ಸಂಪ್ರದಾಯದವರನ್ನು "ದಶಧರ್ಮ..........ವಜ್ರನಿಯುಕ್ತ"ರೆಂದು ಕರೆಯಲಾಗಿದೆ. ಮುಳಗುಂದಶಾಸನದಲ್ಲಿ ದಶಕುಳಧರ್ಮ, ದಶಧರ್ಮ ಪದಗಳು "ನಕುಲೀಶ"

---

೧. ಎಪಿ. ಕೆ. VII ಶಿಕಾರಿಪುರ ೧೨೬, ಕ್ರಿ. ಶ. ೧೦೩೬.

ಶೈವರಿಗೂ ಕಂಡುಬರುತ್ತವೆ. ಮುಳಗುಂದದ ಇನ್ನೊಂದು ಶಾಸನದಲ್ಲಿ "ದಶಪ್ರತ್ಯಯ ಜ್ಞಾನಿ" ಎಂಬುದೂ ಬಳಕೆಯಾಗಿದೆ. ಹೀಗಾಗಿ ದಶಧರ್ಮ, ದಶಕುಳಧರ್ಮ, ದಶಪ್ರತ್ಯಯಜ್ಞಾನಿ-ಇವೆಲ್ಲ ಮಹಾವ್ರತಿಗಳಂತೆ ಮಿಕ್ಕವರಿಗೂ ಬಳಕೆಯಾಗುತ್ತಿರಬಹುದು.

ನಾಲ್ಕನೆಯ ಶಾಖೆಯಾಗಿರುವ "ಶೈವ"ರು ಅಂದರೆ ಶ್ರೋತ್ರೀಯ ಶೈವರು ವೇದಾಗಮಮಾರ್ಗಾನುಯಾಯಿಗಳಾಗಿದ್ದು, ಬಹುಶ: ಇವರು ಕರ್ನಾಟಕಾಂಧ್ರ ಗಡಿಯಲ್ಲಿ, ಅದಕ್ಕಿಂತಲೂ ಹೆಚ್ಚು ಆಂಧ್ರಪ್ರದೇಶದಲ್ಲಿದ್ದಂತೆ ಕಾಣುತ್ತದೆ. ಬಸವಣ್ಣನ ತಂದೆ ಈ ಶೈವಧರ್ಮೀಯನಾಗಿದ್ದು, ಇಂದಿನ ಪಂಚಾಚಾರ್ಯರು ಇದರ ಮುಂದುವರಿಕೆಯಾಗಿದ್ದಾರೆ.

ಮೇಲೆ ಹೇಳಿದ ತತ್ವ, ಪಥ್ಯಗಳ ಮಾರ್ಗದರ್ಶನದಲ್ಲಿ ಈ ಶೈವಗಳು ವಿಜೃಂಭಿಸುತ್ತಿದ್ದಂತೆಯೇ ಬಸವ ಚಳುವಳಿ ಕರ್ನಾಟಕದಲ್ಲಿ ಉದ್ಭವಿಸಿತು. ಮೇಲಿನ ವಿವರಗಳನ್ನು ವಚನಗಳ ಜೊತೆಗಿಟ್ಟು ನೋಡಿದರೆ, ಈ ಶೈವಗಳ ಸಿದ್ಧಾಂತದಿಂದ ಶರಣರು ಏನೂ ಪ್ರಭಾವಿತರಾಗಿಲ್ಲವೆನಿಸುತ್ತದೆ. ಅದಕ್ಕಾಗಿಯೇ ಶರಣಸಿದ್ಧಾಂತ ಸ್ವತಂತ್ರಸೃಷ್ಟಿಯೆಂದು ಹೇಳುವುದು.

ಬಸವೋತ್ತರಯುಗ:

೧೨ನೆಯ ಶತಮಾನದಲ್ಲಿ ವ್ಯಕ್ತಿಸಿದ್ಧಿ, ಸಮಾಜಶುದ್ಧಿ, ಸಮಾಜಸಮೃದ್ಧಿ ಗುರಿಯಿಟ್ಟು ಉದ್ಭವಿಸಿದ ಶರಣಧರ್ಮದ ಎದುರು ಈ ಶೈವಗಳು ತತ್ತರಿಸಿ, ಕ್ರಮೇಣ ಅದರಲ್ಲಿ ಲೀನವಾಗುತ್ತ ನಡೆದವು. ಶ್ರೀ ಕಪಟ್ರಾಳ ಅವರು ಹೇಳುವಂತೆ, ಈ ಧರ್ಮಗುರುಗಳಿಗೆ ಸಂಬಂಧಪಟ್ಟಂತೆ ಶಿವಮೊಗ್ಗೆ, ಚಿತ್ರದುರ್ಗ, ಹಾಸನ, ತುಮಕೂರು, ಮೈಸೂರು ಜಿಲ್ಲೆಗಳ ಶಾಸನಗಳಲ್ಲಿ "ಕ್ರಿ.ಶ. ೧೦ನೆಯ ಶತಮಾನದಲ್ಲಿ ೧೩ ಹೆಸರುಗಳಿದ್ದು, ಕ್ರಿ. ಶ. ೧೧ನೆಯ ಶತಮಾನದಲ್ಲಿ ೬೯ರ ವರೆಗೆ ಹೋಗಿ, ೧೨ನೆಯ ಶತಮಾನದಲ್ಲಿ ೧೭೨ರ ವರೆಗೆ ಹೋಗಿ, ೧೩ನೆಯ ಶತಮಾನದಲ್ಲಿ ೮೦ಕ್ಕೆ ಇಳಿದಿದೆ. ಅನಂತರ ಕ್ರಿ.ಶ. ೧೪ನೆಯ ಶತಮಾನಕ್ಕೆ ೧೧ಕ್ಕೆ ಬಂದು, ಆ ಮುಂದೆ ಇಳಿಯುತ್ತ ಜಂಗಮರ ಹೆಸರುಗಳು ಕಾಣಿಸಿಕೊಳ್ಳುತ್ತವೆ".[೨] ಇದರ ಪರಿಣಾಮವಾಗಿ ಶರಣ ಚಳುವಳಿಯ ತರುವಾಯ ಹುಟ್ಟಿದ ಈ ಶೈವಶಾಸನಗಳ ಪಥ್ಯದಲ್ಲಿ ಕವಲು ಕಾಣಿಸಿಕೊಂಡಿದೆ. ಅಂದರೆ ಹಳೆಯ ಪಥ್ಯದ ಮುಂದುವರಿಕೆಯೊಂದಿಗೆ ಹೊಸ ಪರಿಭಾಷೆಯನ್ನೊಳಗೊಂಡ ಹೊಸಪಥ್ಯವೂ ತೋರಿಬರುತ್ತಲಿದೆ. ಈ ಹೊಸ ಪಥ್ಯವೆಂಬುದು, ಶರಣ ಸಂಪ್ರದಾಯದ ಪ್ರಭಾವವೇ ಆಗಿದೆ. ಈ ಸಂದರ್ಭದಲ್ಲಿ ಅವಶ್ಯ ಗಮನ ಸೆಳೆಯುತ್ತದೆ, ಅಬ್ಬಲೂರು ಶಾಸನ (ಸುಮಾರು ೧೧೬೫-೧೨೦೦). ಅಬ್ಬಲೂರಿನ ಬ್ರಹ್ಮೇಶ್ವರದೇವಾಲಯವು ನಕುಲೀಶ ಶೈವಪಂಥದ ಮೂವರ ಕೋಣೆಗೆ ಸಂಬಂಧಿಸಿದುದು. ಈ ದೇವಾಲಯದಲ್ಲಿ ಏಕಾಂತರಾಮಯ್ಯನು ಶಿರಚ್ಛೇದ ಪವಾಡ ಮೆರೆದು, ಜೈನರನ್ನು ಧ್ವಂಸಗೊಳಿಸಿ, ಜಿನದೇವಾಲಯವನ್ನು ಸೋಮೇಶ್ವರದೇವಾಲಯವನ್ನಾಗಿ ಪರಿವರ್ತಿಸಿ, ಬಿಜ್ಜಳ, ಚಾಲುಕ್ಯ ಸೋಮೇಶ್ವರ IV, ಕದಂಬ ಕಾಮರಸರಿಂದ ದತ್ತಿ ಪಡೆಯುತ್ತಾನೆ. ಈ ಶಾಸನದ ಪ್ರಕಾರ ಶಿವನ ಒಡ್ಡೋಲಗಕ್ಕೆ ಬಂದ ನಾರದನು ಹೀಗೆ ಬಿನ್ನವಿಸುತ್ತಾನೆ.

ಒಹಿಲ ದಾಸ ಚೆನ್ನ ಸಿರಿಯಾಳ ಹಳಾಯುಧ ಬಾಣನುದ್ಭಟ।
ದೇಹದೊಳೊಂದಿ ಬಂದ ಮಳಯೇಶ್ವರ ಕೇಶವರಾಜರಾದಿಯಾ।
ಗೈಹಿಕ ಸೌಖ್ಯಮಂ ಬಿಸುಟಸಂಖ್ಯಗಣಂ ನಿಜವಾದ ಭಕ್ತಿ ಸ।

---

೨. ಕರ್ನಾಟಕದ ಲಾಕುಳಶೈವರ ಇತಿಹಾಸ. ಪು ೧೦೦.

ದ್ಗೇಹದೊಳಿಲ್ಲಿರಲ್ ಸಮಯಮುತ್ಕಟಮಾದುದು ಜೈನಬೌದ್ಧರೊಳ್॥

ಈ ಬಿನ್ನಹವನ್ನು ಕೇಳಿ ಶಿವನು, ವೀರಭದ್ರನನ್ನೇ ಏಕಾಂತರಾಮಯ್ಯ ಹೆಸರಿನಿಂದ ಮರ್ತ್ಯಕ್ಕೆ ಕಳಿಸುತ್ತಾನೆ. ಈ ಶೈವಶಾಸನದಲ್ಲಿ ಮೊಟ್ಟಮೊದಲು ಹಿರಿಯ ತಲೆಮಾರಿನ ಕಲ್ಯಾಣದ ಶರಣರು(ದಾಸ, ಚೆನ್ನ, ಕೊಂಡಗುಳಿ ಕೇಶಿರಾಜ) ಮಾತ್ರ ದಾಖಲಾಗಿದ್ದಾರೆ.[೩] ಶೈವಧರ್ಮ, ಶರಣಧರ್ಮಗಳ ಸಮನ್ವಯವೆಂಬಂತೆ ಈ ಪದ್ಯ ಆಕಾರಗೊಂಡಿದೆ. ಇದೇ ದೇವಾಲಯದಲ್ಲಿ ಕುಂಬಾರಗುಂಡ, ಸಿರಿಯಾಳಸೆಟ್ಟಿ, ಜೇಡರದಾಸಿಮಯ್ಯಗಳ ಹೆಸರನ್ನೊಳಗೊಂಡ ಶಿಲ್ಪಗಳೂ ಇರುವುದನ್ನು ಇಲ್ಲಿ ಸ್ಮರಿಸಬಹುದು.

೧೨೩೮ರ ರಟ್ಟಿಹಳ್ಳಿಶಾಸನ ಕಾಳಾಮುಖ ಗುರುಪರಂಪರೆಯನ್ನು ವಾಮಶಕ್ತಿ–ರುದ್ರಶಕ್ತಿ–ಶ್ರೀಕಂಠದೇವ–ಕ್ರಿಯಾಶಕ್ತಿ–ಸರ್ವೇಶ್ವರಾಚಾರ್ಯ–ಕಲ್ಯಾಣಶಕ್ತಿ–ಮೂರುಜಾವಿದೇವ–ಲಕುಳೀಶ್ವರ–ಮೂರುಜಾವಿದೇವ ಹೀಗೆ ಹೇಳುತ್ತ, ದಾನನೀಡಿದ ಯಾದವರ ಅಧಿಕಾರಿ ಹೊನ್ನಬೊಮ್ಮಶೆಟ್ಟಿಯನ್ನು

ಜಂಗಮ ದಿಬ್ಯ ಜಂಗಮದ ನಚ್ಚಿಕೆ ಜಂಗಮ ಮಚ್ಚು ಮತ್ತವಾ।
ಜಂಗಮದಾಟ ಜಂಗಮದ ನೋಟಮೆ ಜಂಗಮ ಕೂಟವಾಗಳುಂ।
ಜಂಗಮದಾಸೆ ಜಂಗಮದ ಭಾಷೆಯೊಳುದ್ಘ ವಿಕಾಸೆ ರಾಜಿಸಿ।
ಪ್ಪಂ ಗಡನೆಂದು ಬಣ್ಣಿಪುದು ಭೂವಳೆವೆನ್ನೆವೆ ಹೊಂನಬೊಂಮನಂ।

ಎಂದು ವರ್ಣಿಸುತ್ತದೆ. ಜಂಗಮ ಶಬ್ದ ಇಷ್ಟು ನಿಬಿಡವಾಗಿ ಈ ಶಾಸನದಲ್ಲಿ ಸೇರ್ಪಡೆಯಾಗಲು ಮುಖ್ಯ ಕಾರಣ, ಶೈವರು ಶರಣಪ್ರಭಾವಕ್ಕೆ ಒಳಗಾದುದು.

ಮುನವಳ್ಳಿ ಶಾಸನ(೧೨೫೨)ದಲ್ಲಿ ಕಾಳಾಮುಖ ಸರ್ವೇಶ್ವರಯತಿಯನ್ನು "ಜಂಗಮಲಿಂಗಾವತಾರ"ನೆಂದು ಕರೆಯಲಾಗಿದೆ.

೧೨೬೫ರ ಹಿರಿಯೂರ (ಅರಸಿಕೆರೆ ತಾಲೂಕು)ಶೈವಶಾಸನದ ಆರಂಭದಲ್ಲಿ ಶರಣರನ್ನು ಭಕ್ತಿಯಿಂದ ಸ್ತುತಿಸಿದ ಪದ್ಯ ಹೀಗಿದೆ:

ಸಿರಿಯಾಳ್ವಂ ಬಸವಯ್ಯನೊಳ್ಪೆಸೆವ ××× ಮಂ ಬಾಣನುಂ।
ಧರಭೋಗಂ ಸಲೆ ಚೋಳನುದ್ಭಟನತರ್ಕ್ಯಂ ಸಿಂಧುಬಲ್ಲಾಳನೀ।
ಧರೆ ಕೊಂಡಾಡುವ ದಾಸಿಮಯ್ಯನೆನಿಸಿರ್ದೀ ಭಕ್ತಸಂದೋಹವಾ।
ದರದಿಂ ಕಾಕರ ಕಂಡನಂಬಿ ನಿನಗೀಗುದ್ಬೋಧ ಸಂಪತ್ತಿಯಂ।

ಈ ಕಂಡನಂಬಿಯ ಮಗ ಕುಂಜಸೆಟ್ಟಿ. ಎಳೆವಯಸ್ಸಿನಲ್ಲಿ ತೀರಿಕೊಂಡ ಈತನ ವರ್ಣನೆ ಹೀಗಿದೆ.

ಹರಪದಪೂಜೆಯೊಳು ಹರಕಥೋಚಿತ ತತ್ವಸುಖಾನುಸೇವೆಯೊಳು।
ಹರಸಮಯ ಪ್ರಭಾವ ಪರಿವರ್ತನದೊಳು ಹರಭಕ್ತಿಯೊಳು ಹರ।
ಸ್ಮರಣದೊಳಾವಗಂ ತನು ಧನಂ ಮನಮೆಂಬಿವನೆಯ್ದೆ ಕೂಡಿ ಸು।

---

೩. ಏಕಾಂತರಾಮಯ್ಯ ಹುಟ್ಟುವ ಹೊತ್ತಿಗೆ ಬಸವಣ್ಣ ಇನ್ನೂ ಜೀವಂತವಾಗಿದ್ದ ಕಾರಣ, ಅವನ ಹೆಸರನ್ನು ಶಿವನ ಸಭೆಯಲ್ಲಿ ಈ ಶಾಸನ ಹೇಳುವುದಿಲ್ಲ.

ಸ್ಥಿರಮೆನಿಸಿರ್ದನೇಂ ಸುಕೃತಪುಂಜನೊ ಕುಂಜನಿಳಾತಳಾಗ್ರದೊಳ್॥
ತನುವಂ ಜಂಗಮದೆಡೆಯೊಳು।
ಮನಮಂ ಶ್ರೀ ಸೋಮನಾಥ ಪದಪಂಕಜದೊಳು॥
ವಿನಿಯೋಗಿಸಿ ಕುಂಜಂ ನೆ
ಟ್ಟನೆ ಪಡೆದಂ ಪುಣ್ಯಪದಮನಾ ಶಿವಪದಮಂ॥

ಶರಣಧರ್ಮದ ಪರಿಭಾಷೆಯುನ್ನೊಳಗೊಂಡ ಇಂಥ ಬರವಣಿಗೆ ಬಸವಪೂರ್ವದಲ್ಲಿ ಕಂಡುಬರುವುದಿಲ್ಲವೆಂದೇ ಹೇಳಬೇಕು.

ನೇರವಾಗಿ ಬಸವಣ್ಣನ ವಂಶಸ್ಥರಿಗೆ ಸಂಬಂಧಿಸಿದ ಅರ್ಜುನವಾಡ ಶಾಸನ(೧೨೬೦) ಅನೇಕ ದೃಷ್ಟಿಯಿಂದ ಮಹತ್ವಪೂರ್ಣವೆನಿಸಿದ್ದು,

ಮಂಗಳಕೀರ್ತಿ ಪುರಾತನ
ಜಂಗಮ ಲಿಂಗೈಕ ಭಕ್ತಿ ನಿರ್ಬ್ಭರ ಲೀಲಾ।
ಸಂಗಂ ಸಂಗನ ಬಸವಂ
ಸಂಗತಿಯಂ ಮಾಳ್ಕೆ ಭಕ್ತಿಯೊಳನವರತಂ॥

ಎಂದು ಆರಂಭದಲ್ಲಿ ಕಲಿದೇವನನ್ನಲ್ಲದೆ ಬಸವಣ್ಣನನ್ನೂ ಸ್ತುತಿಸಿದುದು ಶಾಸನ ಪ್ರಪಂಚದಲ್ಲಿಯೇ ಹೊಸದು. ಇಲ್ಲಿಯ ಪುರಾತನ, ಜಂಗಮ, ಲಿಂಗ ಪರಿಭಾಷೆಗಳು ನಮ್ಮ ಗಮನ ಸೆಳೆಯುತ್ತವೆ.

ಚೌಡದಾನಪುರ ಶಾಸನ(೧೨೬೩)ವು ಇವುಗಳಿಗಿಂತ ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಶಿವದೇವಮುನಿಪನನ್ನು

ಲಿಂಗಕ್ಕೆ ಜಂಗಮಕ್ಕಂ
ಹಿಂಗದೆ ದಾಸತ್ವ ಮಾಳ್ಪುದೇ ಬೆಸನೆಂದಾ।
ಸಂಗನಬಸವಂ ಬೆಸಸೆ ಮ।
ನಂಗೊಂಡರ್ಚಿಸುವನುಭಯ ಲಿಂಗವ ಮುದದಿಂ॥
ಮೃಡಗಣ ವರಪ್ರಸಾದಮ।
ಪಡೆದಂ ಜಗವರಿಯಲಂದು ಸಂಗನ ಬಸವಂ।
ಪಡೆದಾ ಪ್ರಸಾದಸಿದ್ಧಿಯ।
ಕಡು ವೀರಬ್ರತದಿ ಪಡೆದನೀ ಶಿವದೇವಂ॥

ಎಂದು ವರ್ಣಿಸಿದುದು, ಈ ಹಿಂದಿನ ಶೈವಶಾಸನೋಕ್ತ ಹೇಳಿಕೆಗಳಿಂದ ತುಂಬ ಭಿನ್ನವೆನಿಸಿದೆ. ಬಸವಣ್ಣನ ಲಿಂಗ, ಜಂಗಮ ದಾಸೋಹ ಸಮಾಜದ ಮೇಲೆ ದಟ್ಟ ಪರಿಣಾಮ ಬೀರಿದುದಕ್ಕೆ ಇದು ನಿದರ್ಶನವೆನಿಸಿದೆ.

ಕಲ್ಲೇದೇವರಪುರ ಶಾಸನ (೧೨೭೮) ಬಹುಶಃ ಶೈವ ನಾಥಪಂಥಕ್ಕೆ ಸಂಬಂಧಿಸಿದುದಾಗಿದೆ. ಇಲ್ಲಿ ಯೋಗಿಚಕ್ರವರ್ತಿ ಪ್ರಸಾದದೇವನನ್ನು ಚೇರ, ಚೋಳ, ನಂ[ನಿಂ]ಬಿ, ನಂಬಿ, ಚಿಕ್ಕ, ಕಕ್ಕ, ಚೆನ್ನ, ಹೊನ್ನ, ಬಂಕ, ಬಸವರಾಜ, ಭೋಜ ಮೊದಲಾದ "ಮರ್ತ್ಯಲೋಕದ ಮಹಾಗಣ"ದ ಆದರ್ಶವನ್ನೊಳಗೊಂಡವನೆಂದು ಹೀಗೆ ಸುದೀರ್ಘವಾಗಿ ವರ್ಣಿಸಲಾಗಿದೆ.

"....ಭಕ್ತಿ ಸಕ್ತಿವದನ ಪದ್ಮಪರಿಮಳ ರೋರಂಬನುಂ। ಸೈವಸಮಯಸಂವರ್ದ್ಧನ ಸಕಳಸಮಯ ಸಮುದ್ಧರಣ ಸರ್ಬಾಗಮ ಸಾರ್ವ್ವಭೌಮನುಂ। ಪಂಚಮುದ್ರಾಧರ ವರತಪೋನಿಷ್ಠನಿಕಾಯನುಂ।.... ಬಾಣ ಬಾಣಾಸುರ ವೀರ ಕಲಿಗಚಂದ್ರ। ಭದ್ರಕಾಳ ಮಹಾಕಾಳ ಕಾಳ ಕಾಳಕಂಠ। ನಂದಿನಾಥ ಹರಿ........ಗುಹ........ರಾಮ ಭೀಮ ನಾರಾಯಣಾದಿ ದೇವಗಣ ಗುಣಕೀರ್ತ್ತಿ। ಕರ್ಣ್ನಾವತಂಸನುಂ। ಸರಣಜನ ಮನಸ್ಸರೋಜ ರಾಜಹಂಸನುಂ। ಚೇರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ ಚೆಂನ ಹೊಂನ ಬಂಕ ಬಸವರಾಜ ಭೋಜಾದಿ ಮರ್ತ್ಯಲೋಕದ ಮಹಾಗಣಾಚಾರ। ಧರಾಭಾರಧೌರೇಯ ದಿಕ್ಕುಂಜರನುಂ.... ಹೊಂಗೆ ಹೆಂಗೆ ಮಂಗೆ ಮಱದೆಱಗದ ಮಾನವದೇವನುಂ ಕಕ್ಷಕಂಠಕರವಕ್ಸೋತ್ತಮಾಂಗ ಲಿಂಗೈಕ್ಯಸಂಗ ಸದ್ಭಾವನುಂ।.... ನಿಸ್ಪಂನ ನಿತ್ಯಾತ್ಮತತ್ವಸ್ವರೂಪನುಂ।........ ರಸರಸಾಯನ ಘುಟಿಕಾಂಜನ ಮುಖಾಂಜನ ಮೂಳಿಕಾನಿಕಾಯ। ವಸ್ಯವಾದ X X ಯಸ್ತಂಭ। ವೊಡ್ಡಾಮರ ಮಹೇಂದ್ರಜಾಲ ಹರಮೇಖಳಾ।ದಿ ಪ್ರಂಪಂಚ ವಿದ್ಯಾಸಿದ್ಧಸವಿತ।ಸಂತ ಪದ್ಮನುಂ। ಆದಿಗದೆ ಎದುನಾಥ।ಚತುರಂಗಿನಾಥ। ಗೋರಕನಾಥ। ವಿಸ್ತರಾದೇವಿ........ನಾಥ। ಕಾಹಳಿನಾಥ। ಸುರ್ಪ್ಪಾಣಿನಾಥ। ಲೋಕನಾಥ। ನಗನಾಥ। ಪಂಥ ಪಮಾಣ ಘೋಷನುಂ। ಮಂತ್ರತಂತ್ರಯಂತ್ರಸ್ವತಂತ್ರ ನಿದರ್ಶನಂ। ಕಂಡ[illegible]ಪಾಯ ಕಂಬಳಿಪಾಯ ಭೂಧರಪಾಯ ಮಾಹಲುಪಾಯ ತಂತ್ರಿಪಾಯ ಗುಪ್ತಪಾಯ ನಾಡಪಾಯ ಪೂಜಪಾಯಾದಿ ಸಾಮಗ್ರಿಯ ಸಾಮರ್ಥಕಳಾವಲ್ಲಭನುಂ। ....ಸ್ಪಷ್ಟಾಷ್ಟಾದಸಯೋಗಪೀಠಾಚಾರ್ಯ್ಯ ಚಕ್ರಚಕ್ರಧರ ಸಿದ್ಧ ಸಿಂಹ್ವಾಸನಾಸನಾವಷ್ಟಿತ ಯೋಗಪಟ್ಟ ಯೋಗದಂಡ। ಯೋಗಪಾದುಕ ಯೋಗಮುದ್ರಭದ್ರಕನುಂ।.... ಜನಿಸಿದ ಕಾಯಸಂಪುಟ ಸ್ಫುಟ ಸಹಜಲಿಂಗ। ಮಂಗಳನಿಳಯ ಜಂಗಮಾವತಾರ ಶ್ರೀಸಯದ ಮಲ್ಲಿನಾಥನುಂ।.... ಭೂಚರಕಲಿನಾಥನುಂ.... ವರಗುರು ಸಿವಯೋಗಿ ಶ್ರೀಮತು ಯೋಗಿಚಕ್ರವರ್ತಿ ಪ್ರಸಾದದೇವರಿಗೆ......" (ದತ್ತಿ ನೀಡಿದ ವಿಷಯವಿದೆ).

೧೨೮೦ರ ಮರಡಿಪುರ ಶಾಸನವೂ ಶೈವಪರವಾಗಿದ್ದು, ಶರಣಸಂಪ್ರದಾಯದ ಛಾಯೆಯನ್ನೂ ಒಳಗೊಂಡಿದೆ. ಇಲ್ಲಿ ಶಿವನ(ಕಲಿದೇವನ) ವರ್ಣನೆ ಹೀಗಿದೆ.

"......ಭಸ್ಮೋದ್ಧೂಳಿತ ಸುದ್ದಗಾತ್ರ ಕಟ್ವಾಂಗದಾರಿ ತ್ರಿಸೂಳಧರ ಗಂಗಾಧರ ಜಾಹ್ನವೀಜಟಾಜೂಟಕೋಟೀರಭಾರ ಪಂಚವಕ್ತ್ರ ಪರಮೇಶ್ವರ ತ್ರಿಯಂಬಕ ತ್ರಿಲೋಚನ ತ್ರಿಸೂಳಧರ ಕಟ್ವಾಂಧರ ಕಪಾಳಧರ ಕಱಕೊರಳ ಹೆಱನೊಸಲ ತುಱಗಿದ ಕೆಂಜೆಡೆಯ ನವಿಲೆಯ ಜಡೆಯ ಶಂಕರದೇವರ ಪಡಿಹಾರ ದಾಸಯ್ಯ ಸದ್ಯೋಜಾತನ ಮನಮೂರ್ತ್ತಿ ಭಕ್ತಜನವರ್ತ್ತಿ.... ಉಚ್ಚರಿಸಿತೇ ಮಂತ್ರ ಉದ್ಧರಿಸಿತೇ ತಂತ್ರ ಶಿವಾಚಾರವೇ ಪಥವಾಗಿ ನಡಪ ರಿಷಿಗಣಂಗಳು, ಪ್ರಿಯ ದಕ್ಷಯ........ನಾಸನ ಭಾಳಾಕ್ಷ ಹರ ಅಕ್ಷೇಶ್ವರ ನಂದಿನಾಥ ನಂದಿ ಮಹಾಕಾಳ ವೀರಭದ್ರ ಬ್ರಂಗಿನಾಥ ಅಂಗಜ ಅ ತಗ್ರೀವ ಮಯಗ್ರೀವ ಘಂಟಾಕರ್ಣ್ನ ಅಗ್ಗಳಗಣ್ನ ಧಾರುಕ ರೇಣುಕ ಸಾರೂಪ್ಯ ಸಾಯುಜ್ಯ ಸಾಮ್ರಾಜ್ಯಪದವಿಯಂ ಹಡೆದ ಗಂಗಾವಾಳುಕ ಸಮಾರುದ್ರ ಸಕಳಗಣ ಪರಿವೇಷ್ಟಿತ, ಯೆಕ್ಕೋಟಿಗಳು ಪೂಜಿತ, ಮತ್ತಂ ಮರ್ತ್ಯಲೋಕದ ಗಣಂಗಪ ಸ್ರಿರಿಯಾಳುವ ದಾಸ ದಸವರ್ಮ್ಮದಿಹಿಲ ಉದ್ಭಟ ನಂಬಿ ಕುಂಬಾರಗುಂಡ ಆಂಡವಲ ಕರಿಕಾಲಚೋಳ ಭೋಗದೇವ ಬಾಣ ಮಯೂರ ಕಾಳಿದಾಸ ಕೇಶಿರಾಜದಣ್ನಾಯಕ ಸುರಿಗೆಯ ಚಲ್ವಡರಾಯ ಸಂಗನಬಸವಯ್ಯ

ಲಿನಿಮಿತಿಕೇಶವರಾಜ ಜಗದೇವದಣ್ಣಾಯಕ ಏಕಾನ್ತದ ರಾಮಯ್ಯ ಸೊನಲಿಗೆಯುರಾಮಯ್ಯ ಹುಲಿಗೆಱೆಯಪೊನ್ನಯ ನೆಲುವಿಗೆಯಸಾಂತಯ್ಯ ಸಕಳಗಣ ಪರಿವೇಷ್ಟಿತ ಶ್ರೀ ಪ್ರಶಸ್ತಿ ಮಂಗಳಂ".

ಇಲ್ಲಿ ಕಲಿದೇವ(ಶಿವ)ನು "ಮರ್ತ್ಯಲೋಕದ ಗಣಂ"ಗಳಾದ ದಾಸ, ದಶವರ್ಮ, ಓಹಿಲ, ಉದ್ಭಟ, ನಂಬಿ, ಕುಂಬಾರಗುಂಡ, ಆಂಡವಲ, ಕರಿಕಾಲಚೋಳ, ಭೋಗದೇವ, ಬಾಣ, ಮಯೂರ, ಕಾಳಿದಾಸ, ಕೇಶಿರಾಜ ದಣ್ಣಾಯಕ, ಸುರಿಗೆಯ ಚೆಲ್ವಡರಾಯ, ಸಂಗನ ಬಸವಯ್ಯ, ಲಿನಿಮಿತಿ ಕೇಶವರಾಜ, ಜಗದೇವದಣ್ಣಾಯಕ, ಏಕಾಂತದ ರಾಮಯ್ಯ, ಸೊನ್ನಲಿಗೆಯ ರಾಮಯ್ಯ, ಹುಲಿಗೆರೆಯ ಪೊನ್ನಯ್ಯ, ನೆಲುವಿಗೆಯ ಶಾಂತಯ್ಯರಿಂದ ಪರಿವೇಷ್ಟಿತನಾಗಿರುವನೆಂದು ಹೇಳಲಾಗಿದೆ. ಬಸವಪೂರ್ವದ ಶೈವಶಾಸನಗಳಲ್ಲಿ ಈ ರೀತಿಯ ಪಠ್ಯವೇ ಕಂಡುಬರುವುದಿಲ್ಲ.

ಇನ್ನೂ ಮುಂದೆ ಬಂದರೆ ಹೊಳೆನರಸೀಪುರ ತಾಲೂಕಿನ ಮಾವನೂರು ಶಾಸನ(೧೨೮೪)ದಲ್ಲಿ ಪರ್ವತಯ್ಯನು ಅಪ್ಪಯ್ಯ ಮತ್ತು ದೇವರಸರಿಗೆ ನೀಡಿದ ದೀಕ್ಷೆಯ ವರ್ಣನೆಯಲ್ಲಿ, ಈ ಮೊದಲು ಕಾಣದ ಶರಣಧರ್ಮದ ಮುದ್ರೆ ಢಾಳವಾಗಿ ಹೀಗೆ ತೋರುತ್ತದೆ.

"ಚಂದ್ರಂಗೆ ಬೆಳುದಿಂಗಳಂ। ಬೆಳುದಿಂಗಳಿಂಗೆ ಪರಿಮಳವುಂ। ಪರಿಮಳಕ್ಕೆ ಸವಿಯುಂ। ಸವಿಗೆ ರೂಪಂ। ರೂಪಿಂಗೆ ಸೌಂದರ್ಯಮಂ ಕೊಡುವಂತೆ" ಪರ್ವತಯ್ಯ ಉಪದೇಶ ನೀಡುತ್ತಾನೆ. ಈ ಉಪದೇಶದಿಂದ ಅಪ್ಪಯ್ಯ ದೇವರಸರು "ಪುಟವಿಟ್ಟಪುಣ್ಯಂ ಪುರುಷರೂಪಾಕಾರವಾದಂತೆ। ಶಾಂತಿ ಸಾಕಾರವೆತ್ತಂತೆ। ಪರಮಾರ್ಥಂ ಶರೀರವಡೆದಂತೆ। ಭಕ್ತಿ ಜ್ಞಾನಂ ಸಂಸಾರವಂ ಸವಿದಂತೆ" ಶೋಭಿಸಿದರು. ಬಳಿಕ "ತಿಲಮಧ್ಯದೊಳಿರ್ಪ ತೈಲದಂತೆ। ಕಾಷ್ಟ ಮಧ್ಯದೊಳಿಪ್ಪ ಅಗ್ನಿಯಂತೆ। ಜಲಮಧ್ಯದೊಳಿಪ್ಪ ಕಮಲದಂತ" ಸಂಸಾರ ಭೋಗದಲ್ಲಿದ್ದರೂ "ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ"ಯುಳ್ಳ ಶಿವಭಕ್ತರೆನಿಸಿದರು.

ಈ ಹೊತ್ತಿಗೆ ಶೈವಶಾಸನಗಳ ಅಬ್ಬರ ಇಳಿಮುಖವಾದುದು, ವಿನ್ಯಾಸದಲ್ಲಿ ಹೊಸತನ ತಲೆದೋರಿರುವುದು, ಪಠ್ಯದಲ್ಲಿ ಶರಣಧರ್ಮದ ಪರಿಭಾಷೆ-ಪ್ರಭಾವಗಳು ದಟ್ಟವಾಗುತ್ತ ನಡೆದುದು, ಅವಶ್ಯ ಗಮನಿಸುವ ಸಂಗತಿಯೆನಿಸಿವೆ.

ಶಾಸನ ಬರೆವಣಿಗೆ ಶರಣಧರ್ಮಕ್ಕೆ ಬಾಹಿರ. ಈ ಕಾರಣಕ್ಕಾಗಿಯೇ ೧೨ನೆಯ ಶತಮಾನದ ಶರಣರಾಗಲಿ, ಆಮೇಲೆ ೧೯ನೆಯ ಶತಮಾನದ ವರೆಗಿನ ಶರಣರಾಗಲಿ ತಾವಾಗಿ ಶಾಸನ ಬರೆಯಿಸಲೇ ಇಲ್ಲ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಮೇಲೆ ಉದಾಹರಿಸಿರುವವೆಲ್ಲ ಶೈವಶಾಸನಗಳೇ ಆಗಿವೆ. ಅದರೆ ಇವು ಬಸವಪೂರ್ವಯುಗದ ಶಾಸನಗಳಲ್ಲಿ ಬಳಸುತ್ತಲಿದ್ದ ತನ್ನ ಸೈದ್ಧಾಂತಿಕ ನಿರೂಪಣೆಯನ್ನು ಕೈಬಿಟ್ಟು, ಕ್ರಮೇಣ ಶರಣರನ್ನೂ, ಅವರ ಗುರುಲಿಂಗಜಂಗಮ ತತ್ವಗಳ ನಿರೂಪಣೆಯನ್ನೊಳಗೊಂಡು ಮುಂದುವರಿದವು.

೧೨ನೆಯ ಶತಮಾನದಲ್ಲಿ ಶರಣರಿಂದ ನಿರಾಕರಿಸಲ್ಪಟ್ಟ ಪುರೋಹಿತಶಾಹಿ ಶೈವವು, ಅವರ ಲಿಂಗಾಯತ ಸಂಪ್ರದಾಯದಲ್ಲಿ ಸೇರಿಹೋದರೂ ಮತ್ತೆ ಹೀಗೆ ತನ್ನ ಬಾಹುಗಳಲ್ಲಿ ಬಂಧಿಸಿಕೊಂಡಿತು.

■■

ಆಕರ : ಮಾರ್ಗ ಸಂಪುಟ-೪

೬೨

ಶಾಸನೋಕ್ತ ಶೈವಪ್ರಶಸ್ತಿ ಪಠ್ಯಗಳು

"ಶರಣಧರ್ಮ" ಕರ್ನಾಟಕದ ಒಂದು ಮಹತ್ವಪೂರ್ಣ ಸೃಷ್ಟಿ. ಉದಾರಧೋರಣೆಯ ಈ ಧರ್ಮದಲ್ಲಿ, ಆ ಕಾಲದ ಸಣ್ಣಪುಟ್ಟ ಶೈವ "ಸಂಪ್ರದಾಯ"ಗಳನ್ನು ಬಿಟ್ಟರೂ ಇಡಿಯಾಗಿ ಲೀನವಾದ ಶೈವ"ಧರ್ಮ"ಗಳು ಯಾವುವೆಂಬುದು ಇನ್ನೂ ಅಸ್ಪಷ್ಟವಾಗಿಯೇ ಉಳಿದಿದೆ. ಇದನ್ನು ಸ್ಪಷ್ಟಪಡಿಸುವಲ್ಲಿ ಪಾಠಾಂತರ-ಪ್ರಕ್ಷೇಪಗಳಿಗೆ ಗುರಿಯಾಗುತ್ತ ಬಂದ ಸಮಕಾಲೀನ ವಚನಸಾಹಿತ್ಯ, ಕಲ್ಪಿತ ಅಂಶಗಳಿಂದ ಕೂಡಿದ ಉತ್ತರಕಾಲೀನ ಕಾವ್ಯ-ಶಾಸ್ತ್ರಸಾಹಿತ್ಯಗಳಿಗಿಂತ, ಅಂದಂದಿನ ಬದುಕಿನ ದಾಖಲೆಗಳಾದ ಶಾಸನಗಳು ತುಂಬ ವಿಶ್ವಾಸಾರ್ಹವೆನಿಸುತ್ತವೆ.

ಧರ್ಮಗಳಿಗೆ ತಮ್ಮದೇ ಆದ ಪರಿಭಾಷೆ ಇರುತ್ತಿದ್ದು, ಅವು ಸಾಮಾನ್ಯವಾಗಿ ಆ ಪರಿಭಾಷೆಯನ್ನೊಳಗೊಂಡ ಸಿದ್ಧಪ್ರಶಸ್ತಿ(Eulogy)ಗಳನ್ನು ಬಳಸುತ್ತವೆ. ಪ್ರಾಚೀನ ಶಾಸನಗಳಲ್ಲಿ ನಮೂದುಗೊಂಡಿರುವ ಇಂಥ ಶೈವಪ್ರಶಸ್ತಿಗಳನ್ನು ಸಂಗ್ರಹಿಸಿ, ವರ್ಗೀಕರಿಸಿ, ಆ ಬೆಳಕಿನಲ್ಲಿ ಆಯಾ ಧರ್ಮಗಳ ಸಿದ್ಧಾಂತದ ಸ್ವರೂಪ, ಭೌಗೋಲಿಕ ವ್ಯಾಪ್ತಿ, ಐತಿಹಾಸಿಕ ಪ್ರಗತಿ-ವಿಗತಿಗಳನ್ನು ಅರಿಯಬಹುದಾಗಿದೆ.

ಶೈವಧರ್ಮಗಳು

ಪ್ರಾಚೀನ ಕರ್ನಾಟಕದಲ್ಲಿ ಕೆಲವು ಶೈವಧರ್ಮಗಳು ಅಸ್ತಿತ್ವದಲ್ಲಿದ್ದವು. ಶರಣಧರ್ಮದಲ್ಲಿ ಲೀನವಾಗುತ್ತ ಬಂದ ಇವುಗಳ ಬಗ್ಗೆ ವಚನ, ಕಾವ್ಯ, ಶಾಸ್ತ್ರ, ಶಾಸನಗಳು ಹೀಗೆ ಮಾಹಿತಿ ನೀಡುತ್ತವೆ. ಚೆನ್ನಬಸವಣ್ಣನವರು

> ಶೈವ ಸೈವೆರಗಾದ, ಪಾಶುಪತಿ ಪಥವನರಿಯ,
> ಕಾಳಾಮುಖ ಕಂಗೆಟ್ಟ, ಮಹಾವ್ರತಿ ಮದವೇರಿದ,
> ಸನ್ಯಾಸಿ ಪಾಷಂಡಿಯಾದ, ಜೋಗಿ ಮರುಳಾಗಿ ತಿರುಗಿದ......

ಎನ್ನುತ್ತ, ಶೈವ-ಪಾಶುಪತ-ಕಾಳಾಮುಖ- ಮಹಾವ್ರತವೆಂಬ ನಾಲ್ಕು ಮುಖ್ಯಶೈವಗಳೂ ಸನ್ಯಾಸಿ, ಜೋಗಿಗಳೆಂಬ ಎರಡು ಗೌಣ ಸಂಪ್ರದಾಯಗಳೂ ಭಕ್ತಿಸ್ಥಲಕ್ಕೆ ಸಲ್ಲುವುದಿಲ್ಲವೆಂದು ಸಾರಿ, ಇವುಗಳನ್ನು ನಿರಾಕರಿಸುತ್ತಾರೆ. ಬ್ರಹ್ಮಶಿವನು

ಕ್ರಮದಿಂ ವರ್ತಿಸುವಾ ಕಾ
ಳಾಮುಖಾಖ್ಯ, ಕಪಾಳಿ, ಪಾಶುಪತ, ಶೈವರೊಳೊ।
ರ್ವ ಮಹಾವ್ರತಿ ಗೊರವನ್ ರು
ದ್ರಮಾರ್ಗದಿಂ ನಡೆವನುಳಿದ ಮೂವರ್ ನಡೆಯರ್॥

ಎನ್ನುತ್ತ ಚೆನ್ನಬಸವಣ್ಣ ಹೇಳುವ ಮೊದಲಿನ ನಾಲ್ಕು ಮುಖ್ಯಶೈವಗಳನ್ನೇ ಪ್ರಸ್ತಾಪಿಸುತ್ತಾನೆ (ಕಪಾಳಿಯನ್ನೇ ಮಹಾವ್ರತಿಯೆಂದು ಕರೆದು ಅವನು ರುದ್ರಮಾರ್ಗಿ ಎಂದು ಸೂಚಿಸುತ್ತಾನೆ).

ಇವಲ್ಲದೆ ಕನ್ನಡದ ಶಿವತತ್ವ ಚಿಂತಾಮಣಿ(೩೩-೧೧), [illegible]ರಾಜ ಪುರಾಣ(೨೭-೨೩) ಗಳಲ್ಲಿಯೂ, ಸಂಸ್ಕೃತದ ಪಾರಮೇಶ್ವರಾಗಮ(೧-೨೪), ಸಿದ್ಧಾಂತ ಶಿಖಾಮಣಿ(೫-೯), ಶಾಂಕರಭಾಷ್ಯಕ್ಕೆ ಬರೆದ ಎರಡು ಟೀಕೆ, ತರ್ಕರಹಸ್ಯಪ್ರದೀಪಿಕಾ ಹೆಸರಿನ ಕೃತಿಗಳಲ್ಲಿಯೂ ಈ ನಾಲ್ಕು ಶೈವಪ್ರಭೇದಗಳನ್ನು ಹೇಳಲಾಗಿದೆ. ಹೀಗೆ ಸಾಹಿತ್ಯಕೃತಿಗಳಲ್ಲದೆ ಕೆಳಗಿನ ಶಾಸನಗಳೂ ಪ್ರಸ್ತಾಪಿಸುತ್ತಿರುವುದರಿಂದ ಈ ನಾಲ್ಕು ಕೇವಲ ಗ್ರಂಥಸ್ಥ ಹೆಸರುಗಳಲ್ಲ, ಆ ಕಾಲದ ಸಮಾಜಸ್ಥ ಪಂಥಗಳೆಂದೂ ಸ್ಪಷ್ಟವಾಗುತ್ತದೆ. ಸಗರದ ಶಾಸನ(೧೦೭೧), ಅಲ್ಲಿಯ ನಗರೇಶ್ವರದೇವಾಯದ ಅನಂತಶಕ್ತಿಯತಿಯನ್ನು "ಲಾಕುಳಸಿದ್ಧಾಂತ ಶಾಸ್ತ್ರಾರ್ಥ ಸಮುದ್ಧರಣರ್" ಎಂದು ಹೇಳುತ್ತ, ಮುಂದುವರಿದು "ಕಾಳಾಮುಖ, ಮಹಾವ್ರತ, ಪಾಶುಪತ, ಶೈವಸಮಯ ಸಮಾನ ಪಕ್ಷಪಾತರ್" ಎಂದು ಕೀರ್ತಿಸಿದೆ. ಸಿರಸಂಗಿ ಶಾಸನ(೧೧೪೮), ನೇಸರಗಿ ಶಾಸನ(೧೨೧೯)ಗಳಲ್ಲಿ ಬರುವ ಕೆಳಗಿನ ಪದ್ಯ

ನೆಗರ್ದ್ದ ಮಹಾಬ್ರತಿಗಳೊಳಂ
ನೆಗರ್ದ್ದ ಮಹಾಪಾಶುಪತದೊಳ್ ಸ್ರೋತ್ರಿಯದೊಳಂ।
ನೆಗರ್ದ್ದುದಗಣಿತಮೆನಲ್ಕೆ
ನೆಗರ್ದ್ದ ಕಾಳಾಮುಖಂ ಸುಧರ್ಮಂ ಪ್ರಮುಖಂ॥

ಮಹಾವ್ರತಿ(=ಕಪಾಳಿ), ಪಾಶುಪತ, ಸ್ರೋತ್ರಿ(=ಶೈವ), ಕಾಳಾಮುಖ (=ಲಾಕುಳ>ನಕುಲೀಶ) ಎಂದು, ಮೇಲೆ ಉಲ್ಲೇಖಿಸಿದ ನಾಲ್ಕು ಶೈವಗಳನ್ನೇ ಪ್ರಸ್ತಾಪಿಸುತ್ತ, ಇವುಗಳಲ್ಲಿ ಕಾಳಾಮುಖವು ಶ್ರೇಷ್ಠವೆಂದು ಹೇಳುತ್ತದೆ. ಇವೆಲ್ಲವನ್ನು ಸಮೀಕರಿಸಿದರೆ ನಕುಲೀಶ(ಲಾಕುಳ>ಕಾಳಾಮುಖ), ಪಾಶುಪತ, ಶೈವ(ಸಿದ್ಧಾಂತ, ಮಾಹೇಶ್ವರ, ಶ್ರೋತ್ರಿ), ಮಹಾವ್ರತಿ(ಕಾಪಾಳಿ)-ಈ ನಾಲ್ಕು ಶೈವಧರ್ಮಗಳು ಕರ್ನಾಟಕದಲ್ಲಿ ಹರಡಿಕೊಂಡಿದ್ದವೆಂದು ಗೊತ್ತಾಗುತ್ತಿದ್ದು, ಇವುಗಳ ನಿರ್ದಿಷ್ಟ ಪ್ರಶಸ್ತಿಗಳನ್ನು ಕುರಿತು ವಿವೇಚಿಸಬಹುದು.

ನಕುಲೀಶಶೈವ ಮತ್ತು ಪಾಶುಪತಶೈವ ಪ್ರಶಸ್ತಿಪದ್ಯಗಳು

ಕಾವ್ಯ-ಶಾಸ್ತ್ರ ಮತ್ತು ಶಾಸನಗಳು ಈ ನಕುಲೀಶಶೈವ ಮತ್ತು ಪಾಶುಪತ ಶೈವಗಳನ್ನು ಪ್ರತ್ಯೇಕಿಸಿ ಹೇಳಿದ್ದರೂ, ಶಾಸನಗಳಲ್ಲಿ ಸಿಗುವ ಹೋಲಿಕೆ ರೂಪದ ವಿವರಗಳಿಂದಾಗಿ ಇವೆರಡರಲ್ಲಿ ಇರಬಹುದಾದ ವ್ಯತ್ಯಾಸ ಖಚಿತವಾಗುತ್ತಿಲ್ಲ. ಹೀಗಾಗಿ ವಿದ್ವಾಂಸರು ಈ ವರೆಗೆ ಈ ಎರಡನ್ನೂ ಸೇರಿಸಿ ನಕುಲೀಶ ಪಾಶುಪತವೆಂದು ಕರೆದಿದ್ದಾರೆ ಮತ್ತು ಅಭ್ಯಾಸಮಾಡಿದ್ದಾರೆ. ಎರಡೂ ಶಾಖೆಗಳು ಲಕುಲೀಶ(ನಕುಳೀಶ)ನನ್ನು ಭಕ್ತಿಯಿಂದ ಸ್ತುತಿಸುತ್ತ ಬಂದಿವೆ. ೨೮ಜನ ಯೋಗಾಚಾರ್ಯರಲ್ಲಿ

ಈ ನಕುಲೀಶನೂ ಒಬ್ಬ. (ಇವನಲ್ಲ್ಲ ಈ ೨೮ಜನರಲ್ಲಿ ಪರಿಗಣಿತರಾಗಿರುವ ದಂಡಿ, ಮುಂಡಿ, ಚಾರಿ, ಭೂರಿ ಹೆಸರುಗಳು ತಿಳಿವಳ್ಳಿ ಶಾಸನದಲ್ಲಿ, ಅಟ್ಟಹಾಸನೆಂಬವನ ಹೆಸರು ಎಮ್ಮಿಗನೂರ ಶಾಸನದಲ್ಲಿ ಕಂಡುಬರುತ್ತವೆ). ಇದಲ್ಲದೆ ಈ ಲಕುಳೀಶನು ಪ್ರತಿಪಾದಿಸಿದ "ಲಾಕುಳ ಸಿದ್ಧಾಂತ"ವನ್ನು ಎರಡೂ ಶಾಖೆಗಳು ಹೆಸರಿಸಿವೆ (ಪಾಶುಪತರು ಪಾಶುಪತಾಗಮವನ್ನೂ ಗೌರವಿಸುತ್ತಾರೆ).[೧] "ಏಕ್ಕೋಟಿ ಮುನಿಪ" "ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಜಪಸಮಾಧಿಶೀಲಗುಣ ಸಂಪನ್ನ" ಎಂಬ ವಿಶೇಷಗಳನ್ನು ಇಬ್ಬರೂ ಬಳಸುತ್ತಾರೆ. ಹೀಗಿರುವುದರಿಂದ ಇವುಗಳ ವ್ಯತ್ಯಾಸವನ್ನು ಬಿಡಿಸಿ ಹೇಳುವುದು ಸಾಧ್ಯವಾಗುತ್ತಿಲ್ಲ. ಹೀಗಿದ್ದೂ ಇವುಗಳ ವ್ಯತ್ಯಾಸವನ್ನು ಈ ರೀತಿ ಹೇಳಬಹುದು: (೧)ಬಹಳಷ್ಟು ಶಾಸನಗಳು ನಕುಲೀಶರನ್ನು ನೈಯಾಯಿಕರೆಂದು ಕರೆದಿವೆ. ಗುಣರತ್ನಸೂರಿಯು ಷಡ್ದರ್ಶನ ಸಮುಚ್ಚಯ ವ್ಯಾಖ್ಯಾನದಲ್ಲಿ ಪಾಶುಪತರನ್ನು ವೈಶೇಷಿಕರೆಂದು ಕರೆದಿದ್ದಾನೆ. ಆದುದರಿಂದ ನಕುಲೀಶರು ನ್ಯಾಯದರ್ಶನದ ಕಡೆಗೆ, ಪಾಶುಪತರು ವೈಶೇಷಿಕ ದರ್ಶನದ ಕಡೆಗೆ ಹೆಚ್ಚು ವಾಲಿರುವ ಸಾಧ್ಯತೆಯಿದೆ. ಬಸವಣ್ಣ ವೈಶೇಷಿಕ ಪಕ್ಷಪಾತಿಯೆಂದು ತೋರುತ್ತದೆ (ನೋಡಿ, ವಚನ ೭೪೭) (೨) ಕಾಳಾಮುಖವೆನ್ನುವುದು ದೀಕ್ಷೆ, ಪಾಶುಪತವೆನ್ನುವುದು ವ್ರತ ("ಸಿಂಹಪರ್ಷೆಯ ಪಾಶುಪತ ಸುಬ್ರತಾಭರಣರುಮಪ್ಪ" ಈ ಪಠ್ಯದಲ್ಲಿಯ ವ್ರತ ಶಬ್ದವನ್ನು ಗಮನಿಸಿರಿ). ಶಕ್ತಿಪರ್ಷೆಯವರು ಕಾಳಾಮುಖ ದೀಕ್ಷೆಯನ್ನೂ, ಸಿಂಹಪರ್ಷೆಯವರು ಪಾಶುಪತ ವ್ರತವನ್ನೂ ಸ್ವೀಕರಿಸುತ್ತಿದ್ದರು. (೩) ನಕುಲೀಶರದು ಶಕ್ತಿಪರ್ಷೆ, ಪಾಶುಪತರದು ಸಿಂಹಪರ್ಷೆ. ಸಿಂಹಪರ್ಷೆಯಲ್ಲಿ ಅಭಿನವಪಾಶುಪತ ಎಂಬ ಉಪಶಾಖೆ ಕಂಡುಬರುತ್ತದೆ. ಈ ಸಿಂಹಪರ್ಷೆಯ ಪೂರ್ಣ ಹೆಸರು ಎಳಮೇಲ ಸಿಂಹಪರ್ಷೆ. ಇಂದಿಗೂ ಎಳಮೇಲಿ(ಸಿಂದಗಿ ತಾಲೂಕು)ಯಲ್ಲಿ ಇವರ ಪಶುಪತಿಮಠ ಹೆಸರಿನ ವೀರಶೈವಮಠವಿದೆ. ಇದಲ್ಲದೆ ತೆಲುಗುನಾಡಿನ ೧೧ನೆಯ ಶತಮಾನದ ತಾಂಡಿಕೊಂಡ್ಯೆಶಾಸನದ ಸಿಂಹಪರ್ಷೆಯ ಮುನಿವಂಶಾವಳಿಯಲ್ಲಿ ಪಶುಪತಿ ಹೆಸರಿನ ಮೂವರು ಯತಿಗಳು ಕಂಡುಬರುತ್ತಾರೆ. (ಇ. ಆಯ್. XXiii 161-170) ಇಂಥ ಹೆಸರು ಶಕ್ತಿಪರ್ಷೆಯಲ್ಲಿ ಕಾಣಸಿಗುವುದಿಲ್ಲ. (೪) ಶಕ್ತಿಪರ್ಷೆಯವರ ಕೇಂದ್ರ ಬಳ್ಳಿಗಾವಿ, ಸಿಂಹಪರ್ಷೆಯವರ ಕೇಂದ್ರ ಮುದನೂರು. ಶಕ್ತಿಪರ್ಷೆಯವರು ವಿಶೇಷವಾಗಿ ಶಿವಮೊಗ್ಗೆ, ಧಾರವಾಡ ಜಿಲ್ಲೆಗಳಿಗೆ ಸೀಮಿತ. ಸಿಂಹಪರ್ಷೆಯವರು ಉತ್ತರ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶಗಳ ಕೆಲವು ಭಾಗಗಳಿಗೆ ಸೀಮಿತ. (೫) ಸಿಂಹಪರ್ಷೆಯವರು ಶ್ರೀಶೈಲ ಪರ್ವತಾವಳಿಯವರು, ಶಕ್ತಿಪರ್ಷೆಯವರು ಬಹುಶ: ಕೇದಾರ ಪರ್ವತಾವಳಿಯವರು. ಇಷ್ಟು ಹಿನ್ನೆಲೆಯೊಂದಿಗೆ ಈ ಎರಡು ಶೈವಗಳ ಸಾಮಾನ್ಯ ಪ್ರಶಸ್ತಿಗಳನ್ನು ಇಲ್ಲಿ ಉಲ್ಲೇಖಿಸಬಹುದು.

೧. "ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ಪ್ರಾಣಾಯಾಮ ಪ್ರತ್ಯಾಹಾರ ಮೋನಾನುಷ್ಠಾನ ಜಪತಪಸಮಾಧಿ ಶೀಳಸಂಪನ್ನ"– ಅಷ್ಟಾಂಗಯೋಗವನ್ನು ಸೂಚಿಸುವ ಈ ಪ್ರಶಸ್ತಿಪಠ್ಯ ಎರಡೂ ಶೈವಗಳ ಆಚಾರ್ಯರಿಗೆ ಕಡ್ಡಾಯವಾಗಿ ಬಳಕೆಯಾದುದಲ್ಲದೆ, ಕೆಲವೊಮ್ಮೆ ಇದಕ್ಕೆ ಸಂಬಂಧಪಟ್ಟ ಯತಿಯ ಪರ್ಷೆ, ಆವಳಿ, ಸಂತತಿ, ದರ್ಶನ(ನೈಯಾಯಿಕ ಇತ್ಯಾದಿ)ಗಳು ಸೇರಿಕೊಳ್ಳುತ್ತವೆ. ಶಕ್ತಿ, ಪಂಡಿತ, ಸಿಂಗಿ, ರಾಸಿ, ಜೀಯಗಳನ್ನು ಅಂತ್ಯದಲ್ಲಿ ಅಂಟಿಸಿಕೊಂಡ ಯತಿಗಳ

೧. ಮಿರಿಂಜೆಯ ಶಾಸನ (ಮಹಾರಾಷ್ಟ್ರದ ಕನ್ನಡ ಶಾಸನಗಳು. ಪು ೧೭೬)ದಲ್ಲಿಯ "ಶ್ರೀಸಿಂಹಪರ್ಷಾರ್ಜಿತ ಪಾಶುಪತಾಗಮ ಕೃತಾಭಿನವ ಭುವನಾರ್ಘ್ಯಾವಾಸಿತ ಮುದಿನೀರೆಳಮೇಲೀಶಾರ್ಪಿತ ಸಂತತಿ ಪ್ರಕಾಶ ಮನೀಶ:" ಎಂಬುದನ್ನು ಗಮನಿಸಿರಿ.

ಹೆಸರುಗಳನ್ನು ಇಲ್ಲಿ ಕಾಣಬಹುದಾಗಿದೆ. ಇನ್ನೂ ಕೆಲವೊಮ್ಮೆ ಇವರ ವಿದ್ವತ್ತನ್ನು ಸೂಚಿಸುವ ವಿವರಗಳನ್ನು ಜೋಡಿಸಲಾಗಿರುತ್ತದೆ. ಹೀಗಾಗಿ ಇಂಥ ಪಠ್ಯವನ್ನು ನೋಡುತ್ತಲೇ ಇದು ನಕುಲೀಶ ಇಲ್ಲವೆ ಪಾಶುಪತ ಶೈವಕ್ಕೆ ಸಂಬಂಧಿಸಿದ ಶಾಸನವೆಂದು ತಟ್ಟನೇ ಹೇಳಬಹುದು.

ಹೀಗಿದ್ದೂ ಕೇವಲ ಪಾಶುಪತರಿಗೇ ಸಂಬಂಧಿಸಿರಬಹುದಾದ ನಿರ್ದಿಷ್ಟ ಪ್ರಶಸ್ತಿಪಠ್ಯ ಶಾಸನಗಳಲ್ಲಿ ಕ್ವಚಿತ್ತಾಗಿ ಹೀಗೆ ಕಂಡುಬರುತ್ತದೆ. "ಯಮ ನಿಯಮಾಸನ ಪಾ[ಣಾ]ಯಾಮ ಪ್ರತ್ಯಾಹಾರ ಧ್ಯಾನಧಾರಣ ಜಪಸಮಾಧಿ ಸಂಪನ್ನರಪ್ಪ ಪಾಸುಪತಾಯೋಗಾಚಾರ್ಯ್ಯ ಜ್ಞಾನರಾಸಿ ವ್ಯಾಖ್ಯಾನದೇವರ......" -ಬಸವನ ಬಾಗೇವಾಡಿ ಶಾಸನದ(ಎಸ್. ಆಯ್. ಆಯ್ IX-೧-೮೩ ಬಾಗೇವಾಡಿ ೧೦೪೨)ಈ ಪ್ರಶಸ್ತಿಪಠ್ಯವನ್ನು ಸಿಂದಗಿ ತಾಲೂಕಿನ ಎಳಮೇಲ ಮತ್ತು ದೇವೂರ ಶಾಸನಗಳಲ್ಲಿಯೂ ಬಳಸಲಾಗಿದೆ. ಇಲ್ಲಿ ಹೆಚ್ಚಿನದಾಗಿ "ಪಾಶುಪತಯೋಗಾಚಾರ್ಯರ್" ಸೇರಿಕೊಂಡುದು ಗಮನಾರ್ಹವೆನಿಸಿದೆ. ಶಕ್ತಿಪರ್ಷೆಯವರಿಗೆ ಮಾತ್ರ "ಸಪ್ತಾಹತ್ತರಿ ಸ್ಥಾನಾಚಾರ್ಯ" ಎಂಬ ವಿಶೇಷಣ ಬರುತ್ತದೆ.

ಮಹಾವ್ರತಿಶೈವರ ಪ್ರಶಸ್ತಿಪಠ್ಯ

ಮಹಾವ್ರತಿಯ ಬಗ್ಗೆ ತಿಳಿಸುವ ಏಕೈಕ ಮುಖ್ಯ ಆಕರವೆಂದರೆ ಲಕ್ಷ್ಮೇಶ್ವರ ಶಾಸನ. ಇಲ್ಲಿ ದೇವಸೋಮವ್ರತಿ> ಮಹೇಂದ್ರಸೋಮವ್ರತಿ> ಜ್ಞಾನಸೋಮವ್ರತಿ ಎಂದು ಸ್ಥಾನಾಚಾರ್ಯರ ಹೆಸರು ಹೇಳಿದ್ದು, ಎಲ್ಲರ ಹೆಸರಿನ ಮುಂದೆ ವ್ರತಿ ಉಪಾಧಿ ಅಂಟಿರುವುದು ಗಮನಾರ್ಹವೆನಿಸಿದೆ. ಇಲ್ಲಿ "ಇಂತೆನಿಸಿದ ಮಹಾಸ್ವಯಂಭೂ ಸೋಮನಾಥದೇವರ ಸ್ಥಾನಾಚಾರ್ಯಂ॥ ಸುವ್ರತನಿಳಯಂ ಸಕಳ ಮಹಾವ್ರತಿಸಂತಾನ ಕಲ್ಪಭೂಜಂ ದಶಧರ್ಮ ವಜ್ರನಿಯುಕ್ತನೆಸೆದಂ ಪ್ರವ್ರಾಜ್ಯ ಮಹೇಂದ್ರಸೋಮ ಪಂಡಿತದೇವಂ॥ ಇಂತು ಶಮದಮ ಯಮ ನಿಯುಮ ನಿಷ್ಠಾಗರಿಷ್ಠರಪ್ಪ ಮಹೇಂದ್ರಸೋಮಪಂಡಿತದೇವರ್"[೨] ಎಂದು ಆಚಾರ್ಯರ ವರ್ಣನೆ ಬರುತ್ತದೆ. ಇದು ಎಲ್ಲ ಆಚಾರ್ಯರಿಗೂ ಅನ್ವಯವಾಗುವ ನಿರ್ದಿಷ್ಟ ಪ್ರಶಸ್ತಿಪಠ್ಯವಾಗಿರದೆ, ಮಹೇಂದ್ರಸೋಮಪಂಡಿತರನ್ನು ಕುರಿತು ಬರೆದುದಾಗಿದೆ. ಇಲ್ಲಿಯ "ದಶಧರ್ಮ ವಜ್ರನಿಯುಕ್ತ" ಎಂಬುದು ಈ ಮತದ ಸ್ವರೂಪವನ್ನು ಸೂಚಿಸುವಂತಿದೆ.

ಹೀಗಿದ್ದೂ ದಶಕುಳಧರ್ಮ, ದಶಧರ್ಮ ಪದಪ್ರಯೋಗ ಮುಳಗುಂದ ಶಾಸನದಲ್ಲಿ ಪರ್ವತಾವಳಿ ಪದದೊಂದಿಗೆ ಕಂಡುಬರುತ್ತದೆ. (ಎಸ್. ಆಯ್. ಆಯ್ XI-ii-೧೯೮ ಕ್ರಿ. ಶ. ೧೧೨೩) ಇದಲ್ಲದೆ ಮುಳಗುಂದದ ಇನ್ನೊಂದು ಶಾಸನದಲ್ಲಿ (ಎಸ್. ಆಯ್. ಆಯ್. XI-i-೬೪. ಕ್ರಿ. ಶ. ೧೦೨೮) "ದಶಪ್ರತ್ಯಯ ಜ್ಞಾನಿ" ಎಂಬ ವಿಶೇಷಣ ಮಹಾಜನರಿಗೂ ಬಳಕೆಯಾಗಿದೆ. ಹೀಗಾಗಿ ಈ ಪದಗಳ ನಿರ್ದಿಷ್ಟ ಅರ್ಥ ಮತ್ತು ಇವು ಯಾವ ಶಾಖೆಗೆ ಸಂಬಂಧಿಸಿವೆಯೆಂಬ ಬಗ್ಗೆ ವಿಚಾರಿಸಬೇಕಾಗಿದೆ. ಮೇವುಂಡಿಯ ಶಾಸನ (ಎಸ್. ಆಯ್. ಆಯ್ XI-i-೨೨ ಮೇವುಂಡಿ ಕ್ರಿ. ಶ. ೮೯೭)ದಲ್ಲಿಯ ಒಂದು ಪಠ್ಯ ಹೀಗಿದೆ:

---

೨. Three inscriptions of Lakshmeswar-EI-XVI

"ಯಮನಿಯಮ ಸ್ವಾಧ್ಯಾಯಧ್ಯಾನಧಾರಣ (ಜ)ಪಸಮಾಧಿ [ಶಡ]ಸೋಪಪಹಾರಾದಿ ಸಂಪನ್ನರೀಶ್ವರವರ......ಮಹಾ......ರ್ ವೈಶೇ[ಷಿ]ಕ ಕುಮುದವನಚಂದ್ರರ್ ।ಜ್ನಾಯ ಮಹಾರ್ಣ್ಣವ....ಸರೋವರರಾಜಹಂಸರ್। ಮೀಮಾಂಸಾಕಳಂಕ[ರ್] ಬೌದ್ಧ ಲೋಕಾಯತ ಮದಾಂಧ ಸಿ.... ಭಪಂಚಾನನರ್ ಸ..... ಸ್ತವೇದಾನ್ತಶ್ರಿತೋತ್ತರಿಯರ್। ಪಾತಾಂಜಲಾದಿ ಯ್ಯೋಗ....ರಂಜಿತರ್। ಸೋಮ ಸಿದ್ಧಾಸ್ತಾಚ್ಛಾನಾಚ್ಛನ್ನರ್....". ಇಲ್ಲಿಯ ವೈಶೇಷಿಕ-ನ್ಯಾಯ(ಜ್ನಾಯ)-ಮೀಮಾಂಸಕ-ಪಾತಂಜಲಿಗಳಿಗೆ ಪರ, ಬೌದ್ಧ- ಲೋಕಾಯತಗಳಿಗೆ ಇವರು ವಿರೋಧಿಗಳೆಂಬುದನ್ನು ಗಮನಿಸಬೇಕು. ಇವುಗಳಿಗಿಂತ ಮುಖ್ಯವಾದುದು "ಸೋಮ ಸಿದ್ಧಾಂತ"ದ ಪ್ರಸ್ತಾಪ.

ಮಹಾವ್ರತಿಯೆನ್ನುವುದು ಕಾಪಾಲಿಕದ ಪರ್ಯಾಯ ನಾಮವೆಂದು ಬ್ರಹ್ಮಶಿವ ಹೇಳುವಂತಿದೆ. ಈ "ಮಹಾವ್ರತಿ ಗೊರವನ್ ರುದ್ರಮಾರ್ಗದಿಂ ನಡೆವನ್" ಎಂದು ಅವನು ತಿಳಿಸುತ್ತಾನೆ. ಲಕ್ಷ್ಮೇಶ್ವರದಲ್ಲಿ ಆದಯ್ಯನು ತೀರ್ಥಂಕರನ ವಿಗ್ರಹ ನಾಶಮಾಡಿ, ಸೋಮೇಶ್ವರನನ್ನು ಸ್ಥಾಪಿಸಿದುದು ರುದ್ರಮಾರ್ಗವೇ ಆಗಿದೆಯೆಂಬುದನ್ನು ಇಲ್ಲಿ ಸ್ಮರಿಸಬಹುದು.

ಇಲ್ಲಿ ಸ್ಥಾಪಿಸಿದ ದೇವತೆ ಸೋಮ. ಸ+ಉಮಾ ಸಿದ್ಧಾಂತಿಗಳಿವರು. ಬಹುಶ: ಮೇಲೆ ಹೇಳಿದ ಮೇವುಂಡಿ ಶಾಸನೋಕ್ತ ಸೋಮಸಿದ್ಧಾಂತಿಗಳು ಇವರೇ ಆಗಿರಬೇಕು. ಒಟ್ಟಾರೆ ಕಾಪಾಲಿಕ=ಮಹಾವ್ರತಿ=ಸೋಮಸಿದ್ಧಾಂತಿ ಎಂದೂ, ಇದು ಶೈವದ ನಾಲ್ಕು ಪ್ರಕಾರಗಳಲ್ಲಿ ಒಂದೆಂದೂ, ಬಹುಶ: ೧೨ನೆಯ ಶತಮಾನದ ಹೊತ್ತಿಗೆ ಮದ್ಯ, ಮಾಂಸ ಬಿಟ್ಟು ಸೌಮ್ಯಕ್ಕೆ ತಿರುಗಿದ್ದರೂ, ಮತೀಯ ಆವೇಶದ ಬ್ರಹ್ಮಶಿವ ಅದನ್ನು ರುದ್ರಮಾರ್ಗಿ(ದೇವಾಲಯ ನಾಶದಂಥ ರುದ್ರಮಾರ್ಗ ಅಸ್ತಿತ್ವದಲ್ಲಿರಬಹುದು)ಎಂದು ಕರೆದಿರುವನೆಂದೂ ಇಟ್ಟುಕೊಳ್ಳಬಹುದು.

ಕರ್ನಾಟಕದಲ್ಲಿ ವಿಪುಲಸಂಖ್ಯೆಯಲ್ಲಿ ಕಂಡುಬರುತ್ತಿರುವ ಸೋಮೇಶ್ವರ ದೇವಾಲಯಗಳು ಈ ಕಾಲಾವಧಿಯಲ್ಲಿ ಒಂದಿಷ್ಟು ಸೌಮ್ಯಕ್ಕೆ ಹೊರಳಿದುವಾಗಿರಬೇಕು.

ಶ್ರೋತ್ರೀಯ ಶೈವ ಪ್ರಶಸ್ತಿಪಠ್ಯ

ಲಾಕುಳ(ಕಾಳಾಮುಖ), ಪಾಶುಪತ, ಮಹಾವ್ರತಿ, ಶೈವಗಳೆಂಬ ನಾಲ್ಕು ಪ್ರಕಾರಗಳಲ್ಲಿ ಬಹುಶಃ (ಶ್ರೋತ್ರೀಯ)ಶೈವವು ಆಂಧ್ರಪ್ರದೇಶದಿಂದ ಬಂದುದಾಗಿದೆ. ಮೂರು ಧರ್ಮಗಳ ಪ್ರಶಸ್ತಿ ಪಠ್ಯಗಳಿಗಿಂತ ಇದರ ಪ್ರಶಸ್ತಿಪಠ್ಯ ತುಂಬ ಭಿನ್ನವಾಗಿದೆ. ವಿಜಯನಗರದ ಮಲ್ಲಿಕಾರ್ಜುನ ದೊರೆಯ ಕಾಲದ ಅಲಂಪುರ ಶಾಸನದ (೧೪೬೮)ತೆಲುಗು ಭಾಷೆಯ ಈ ಪ್ರಶಸ್ತಿಪಠ್ಯ ಹೀಗಿದೆ:[೩]

"ಶ್ರೀಮತ್ಸಜ್ಜನ ಶುದ್ಧ ಶಿವಾಚಾರ ಸಂಪನ್ನಲುನ್ನು ಶ್ರೀ ನಂದಿನಾಥ ಭೃಂಗಿನಾಥ ವೀರಭದ್ರದೇವರ ಪ್ರಮುಖ ಪ್ರಮಥಗಣ ಮಾರ್ಗ ಪ್ರವರ್ತಕುಲುನ್ನೈನ ಸಾರಂಗೇಶ್ವರಮಠಮು ಪೆದ್ದ ಕುಪ್ಪಸಕಂಥೆದೇವರ ಮುಖ್ಯಮ್ಮೈನ ದ್ಯಾವಾಪೃಥಿವೀ ಮಹಾಮಹತ್ತುಕು ಶ್ರೀಮತು ಪೆದ್ದ ಕಾಚಪ್ಪೊಡೆಯಲುಂಗಾರು ಶ್ರೀಮಲ್ಲಿಕಾರ್ಜುನ ಮಹಾರಾಯುಲು ಆನತಿಸಿ ಸಮರ್ಪ್ಪಿಂಚಿನ

---

೩. ಕನ್ನಡ ಇನ್‌ಸ್ಕ್ರಿಪ್ಶನ್ಸ ಆಫ್ ಆಂಧ್ರಪ್ರದೇಶ: ಎ. ಪಿ. ಗವರ್ನಮೆಂಟ ಆರ್ಕಿಯಾಲಾಜಿಕಲ್ ಸೀರೀಜ್-೩

ಭೂದಾನ......" ಎಂಬ ಪಠ್ಯದಲ್ಲಿಯ "ಸಜ್ಜನ ಶುದ್ಧ ಶಿವಾಚಾರ", "ಶ್ರೀ ನಂದಿನಾಥ, ಭೃಂಗಿನಾಥ ವೀರಭದ್ರ ಪ್ರಮುಖ ಗಣಮಾರ್ಗ", "ದ್ಯಾವಾಪೃಥಿವೀ ಮಹಾಮಹತ್ತು" ಪ್ರಯೋಗಗಳು ಇವರ ಪ್ರಶಸ್ತಿತ ವೈಶಿಷ್ಟ್ಯವೆನಿಸಿವೆ. ಸುಮಾರು ಇದೇ ಕಾಲದ (೧೪೫೦)ಶಿವತತ್ವ ಚಿಂತಾಮಣಿಯಲ್ಲಿ (೩೮-೫೧) "ಸಜ್ಜನ ಶುದ್ಧಶೈವ" ಎಂಬ, ಕಡಪಾ ಜಿಲ್ಲೆಯ ಜಮ್ಮಲಮಡಗು ತಾಲೂಕಿನ ಸಾಲೆವಾರಿ ಉಪ್ಪಲಪಾಡು ಗ್ರಾಮದ ತೆಲುಗು ಶಾಸನದಲ್ಲಿ (೧೪೪೨) "ದ್ಯಾವಾ ಪೃಥ್ವಿ ಮಹಾಮಹಂತು" ಎಂಬ ಪಠ್ಯಗಳೂ ಕಾಣಿಸಿಕೊಂಡಿವೆ. ಈ ಉಪ್ಪಲಪಾಡು ಮೊದಲಾದ ತೆಲುಗು ಶಾಸನಗಳಲ್ಲಿ ಹೆಚ್ಚಿನದಾಗಿ "ವೀರಶೈವ"ಪದವೂ ಕಾಣಿಸಿಕೊಳ್ಳುತ್ತಲಿರುವುದು ಇನ್ನೂ ವಿಶೇಷವೆನಿಸಿದೆ.

ಈ ಪಠ್ಯ ಕೆಳದಿ ಅರಸರ ಕಾಲದಲ್ಲಿ ಆಂಧ್ರದಿಂದ ದಕ್ಷಿಣಕರ್ನಾಟಕವನ್ನು ಪ್ರವೇಶಿಸಿ, ವ್ಯಾಪಕವಾಗಿ ಬೆಳೆಯಿತು. ಈ ಪಠ್ಯವನ್ನೊಳಗೊಂಡ ಕರ್ನಾಟಕದ ಪ್ರಥಮ ಶಾಸನ* ಹಿರಿಯ ವೆಂಕಟಪ್ಪನಾಯಕನ ಕಾಲದ (ಕೆಳದಿ ಅರಸರ ಶಾಸನ ಸಂಪುಟ. ನಂ ೪೪. ತಾಮ್ರ ಶಾಸನ ಕ್ರಿ. ಶ. ೧೬೦೭)ಸಾಗರ ತಾಲೂಕಿನ ಯಡೇಹಳ್ಳಿಗೆ ಸಂಬಂಧಿಸಿದ್ದು ಹೀಗಿದೆ:

"ಶ್ರೀಮದ್ಬನೇಕ ಬ್ರಂಹಾಂಡಭಾಂಡಗರ್ಭಗರ್ಭೀಕೃತ ವಿಧಿ ಮಧುಸೂದನ ತ್ರಿದಶಾಧೀಶ್ವರಾಧ್ಯನೇಕ ದೇವತಾ ಮಕುಟಮಣಿಗಣ ಕಿರಣದೀಪ್ತಾದೀಪ್ತ ಪಾದಪಯೋಜ ಪರಶಿವ ಲೀಲಾಸ್ವೀಕೃತ ಕಳೇವರರುಮಪ್ಪ, ಶ್ರೀ ನಂದಿನಾಥ ಶ್ರೀ ಭೃಂಗಿನಾಥ ಶ್ರೀ ವೀರಭದ್ರದೇವರು ಮುಖ್ಯರಾದ ಸಜನಶುಧ ಶಿವಾಚಾರ ಸಂಪಂನದ ದ್ಯಾವಾಪೃಥ್ವೀ ಮಹಾಮಹತ್ತಿನೊಳಗಾದ ಆನಂದಪುರದ ಚಂಪ್ಪಕಾಸರಸಿ ಮಹತ್ತಿನಮಠ ಧರ್ಮಕೆ...."

ಈ ಒಕ್ಕಣಿಕೆಯ ಸುಮಾರು ೮೫ ಶಾಸನಗಳು ಕೆಳದಿಯವರ ಆಳಿಕೆಯಲ್ಲಿ ಹುಟ್ಟಿವೆ. ಇವೆಲ್ಲ ಮಹತ್ತಿನಮಠವನ್ನು ಪ್ರಸ್ತಾಪಿಸುತ್ತವೆ. ಒಂದೆರಡು ಶಾಸನಗಳು "ಮಹಾಮಹತ್ತಿನೊಳಗಾದ ಮಳೆ ಬಗೆಯ ಶಾಂತದೇವರಿಗೆ " (ಕೆಳದಿ ಅರಸರ ಶಾಸನ ಸಂಪುಟ ೧೪೪ ಕವಲೇದುರ್ಗ. ೧೬೬೬), "ಮಳೆ ಬಗೆ ರುದ್ರಮುನಿದೇವರಿಗೆ" (ಕೆಳದಿ ಅರಸರ ಶಾಸನ ಸಂಪುಟ, ೧೮೫- ಕವಲೇದುರ್ಗ ೧೬೭೪) ಎಂದು ಮಹತ್ತಿನ ಮಠದ ಜೊತೆಗೆ ಮಳೆಯ ಬಗೆಯನ್ನು ಹೇಳುತ್ತಿದ್ದು, "ಬಗೆ" ಅಂಟಿಸುವುದೂ ಈ ಪರಂಪರೆಯವರಿಂದಲೇ ಆರಂಭವಾಗಿರಬಹುದೆನಿಸುತ್ತದೆ.

೧೬೭೪ರ ಶಾಸನವು(ಕೆಳದಿ ಅರಸರ ಶಾಸನ ಸಂಪುಟ ೧೮೩ ಕೌಲೇದುರ್ಗ) "ರೇವಣಸಿದ್ಧೇಶ್ವರದೇವರ ಸಂಪ್ರದಾಯದ ಸಿದ್ಧಬಸವಾರಾಧ್ಯರಿಗೆ" ನೀಡಿದ ದಾನವನ್ನು ಸೂಚಿಸುತ್ತದೆ. ೧೬೮೨ರ ಶಾಸನವು (ಕೆಳದಿ ಅರಸರ ಶಾಸನ ಸಂಪುಟ ೧೯೪ ಚೆನ್ನಾಪುರ)"ಮಹಾಮಹತ್ತಿನ ವಳಗಾದ ಹುಲಿಕಟ್ಟೆ ರೇವಣಸಿದ್ಧದೇವರ ಶಿಷ್ಯರು ರೇವಣಸಿದ್ಧದೇವರ ಸಿದ್ಧಗಿರಿಯ ಮಠದ ಧರ್ಮಕೆ " ಕೆಳದಿ ಸದಾಶಿವರಾಯ ದಾನನೀಡಿದುದನ್ನು ಹೇಳುತ್ತದೆ. ೧೭೨೪ರ ಶಾಸನ(ಕೆಳದಿ ಅರಸರ ಶಾಸನ ಸಂಪುಟ ೨೪೭ ಹೊಳೆಹೊನ್ನೂರು)ದಲ್ಲಿ ಸಿದ್ಧಗಿರಿ ಸಿಂಹಾಸನದ

---

* ಕ್ರಿ.ಶ ೧೪೩೩ರ ಮೇಗರವಳ್ಳಿ, ಹಿರೇ ಆವಳಿ ಶಾಸನಗಳಲ್ಲಿ ಮೊದಲು ಕಂಡುಬರುತ್ತದೆ. (ಪ್ರೌಢದೇವರಾಯನ ಶಾಸನಗಳು ೧೧೬, ೧೧೮)

ಹುಚ್ಚವೀರಪ್ಪವೊಡೆಯರ ಉಲ್ಲೇಖವಿದೆ. ಇದರಿಂದ ಮಳೆಯ ಬಗೆ, ರೇವಣಸಿದ್ಧೇಶ್ವರ ಸಂಪ್ರದಾಯ, ಬಾಳೆ ಹೊನ್ನೂರುಮಠ, ಮಹತ್ತಿನಮಠ, (ಕಾಡಸಿದ್ಧ ಸಂಪ್ರದಾಯದ) ಸಿದ್ಧಗಿರಿಮಠ, ಸಜ್ಜನಶುದ್ಧ ಶಿವಾಚಾರ ಪ್ರಶಸ್ತಿಪತ್ಯ–ಇವೆಲ್ಲ ಒಂದಕ್ಕೊಂದು ಸಂಬಂಧಿಸಿವೆಯೆಂದು ಹೇಳಬಹುದಾಗಿದೆ.

ಮೇಲೆ ಹೇಳಿದಂತೆ ಶಾಸನಗಳಲ್ಲಿ ಪದೇ ಪದೇ ಬರುವ "ಶ್ರೀ ನಂದಿನಾಥ ಭೃಂಗಿನಾಥ ವೀರಭದ್ರದೇವರ ಪ್ರಮುಖ ಪ್ರಮಥಗಣ ಮಾರ್ಗ" ಎಂಬ ವಾಕ್ಯದಲ್ಲಿಯ ಹೆಸರುಗಳು ಮುಂದೆ ಇಂದಿನ ಚತುರಾಚಾರ್ಯರ ಗೋತ್ರಗಳಾಗಿ ಪ್ರಸಿದ್ಧಿ ಪಡೆದವು. ಒಂದು ಕಾಲಕ್ಕೆ ಕರ್ನಾಟಕದ ಭಾಗವಾಗಿದ್ದು, ಇಂದು ತಮಿಳುನಾಡಿನ ಸೀಮೆಯಲ್ಲಿರುವ ಗುಮ್ಮಳಾಪುರ ಶಾಸನ (ತಮಿಳುನಾಡಿನ ಕನ್ನಡ ಶಾಸನಗಳು ೬೦. ಕ್ರಿ. ಶ. ೧೬೦೬)ದಲ್ಲಿ "ಭಾರದ್ವಾಜಗೋತ್ರದ ಪಡಿವಿಡಿವರ್ಗದ ಕೊಲ್ಲಿಪಾಕೆ ರೇವಣಸಿದ್ಧೇಶ್ವರನ ಸಂಪ್ರದಾಯದ ಗುಮ್ಮಳಾಪುರ ಸಿಂಹಾಸನ ಕರ್ತರಾದ" ಎಂಬ ಮಾತು ಬರುತ್ತಿದ್ದು, ಆರಂಭದಲ್ಲಿ ಭಾರದ್ವಾಜ ಇತ್ಯಾದಿ ವೈದಿಕಗೋತ್ರ ಹೇಳಿಕೊಳ್ಳುತ್ತಲಿದ್ದ ಇವರು, ಮುಂದಿನ ದಿನಗಳಲ್ಲಿ ನಂದಿ, ನಂದಿನಾಥ, ಭೃಂಗಿ, ವೀರಭದ್ರ ಗೋತ್ರಗಳನ್ನು ಒಪ್ಪಿಕೊಂಡರೆನಿಸುತ್ತದೆ.

ಚಿಕ್ಕಮಗಳೂರು ತಾಲೂಕಿನ ಹಲಸುಬಾಳು ಗ್ರಾಮದ ಎರಡು ತಾಮ್ರಶಾಸನ (ಎ. ಪಿ. ಕ. XI (ಹೊಸ) ೬೧, ೬೨ ಕ್ರಿ. ಶ. ೧೭೦೨, ೧೭೧೭)ಗಳಲ್ಲಿ "ಚತುರ್ರಾಚಾರ್ಯ ಪಿಟ್ಟ ಸಿಂಹಾವಸನ ರೂಢರಾದ" ಎಂಬ ಮಾತು ಬರುತ್ತದೆ. ಇಲ್ಲಿಯೂ "ದ್ಯಾವಾಪೃಥ್ವಿ ಮಹಾಮಹತ್ತು", "ಶ್ರೀ ಭೃಂಗಿನಾಥ ನಂದಿನಾಥ" ಒಕ್ಕಣಿಕೆಗಳಿವೆ.

ಈ ಒಕ್ಕಣಿಕೆಯ ಶಾಸನಗಳು ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷವಾಗಿ, ಚಿಕ್ಕಮಗಳೂರು, ಮೈಸೂರು ಇತ್ಯಾದಿ ದಕ್ಷಿಣ ಕರ್ನಾಟಕ ಜಿಲ್ಲೆಗಳಲ್ಲಿ ಕ್ವಚಿತ್ತಾಗಿ ಸಿಗುತ್ತವೆ. ಉತ್ತರ ಕರ್ನಾಟಕದಲ್ಲಿ ತುಂಬಾ ಕ್ವಚಿತ್, ಅದೂ ಇತ್ತೀಚೆಗೆ ಸಿಗುತ್ತವೆ.(ಕೆ. ಆಯ್–೫–೧೩೧ ತಿಳುವಳ್ಳಿ, ೧೬ನೆಯ ಶತಮಾನ).

ಒಟ್ಟಾರೆ ಚತುರಾಚಾರ್ಯ ಪರಿಕಲ್ಪನೆಯ ಮೂಲ ಆಂಧ್ರಪ್ರದೇಶದ ಶ್ರೋತ್ರೀಯ ಶೈವವಾಗಿದ್ದು, ಇದು ದಕ್ಷಿಣಕರ್ನಾಟಕದಲ್ಲಿ ತಲೆಯೆತ್ತಿ, ಕೆಳದಿ ಅರಸರ ಕಾಲದಲ್ಲಿ ಸಬಲವಾಗಿ, ಬಳಿಕ ಉತ್ತರ ಕರ್ನಾಟಕದಲ್ಲಿಯೂ ಪಸರಿಸಿತೆಂದು ಹೇಳಬಹುದಾಗಿದೆ.

■■

ಆಕರ : ಮಾರ್ಗ ಸಂಪುಟ–೪

೬೩

ಶಾಸನೋಕ್ತ ಶೈವರ ವ್ಯಾಸಂಗ : ಸಿದ್ಧಾಂತ ಮತ್ತು ಪಥ್ಯ

ಪ್ರಾಚೀನ ಕರ್ನಾಟಕದಲ್ಲಿ ಬಸವಪೂರ್ವಕಾಲದಿಂದಲೂ ನಕುಲೀಶ, ಪಾಶುಪತ, ಮಹಾವ್ರತ, ಶೈವ-ಎಂಬ ನಾಲ್ಕು ಶೈವಧರ್ಮಗಳು ಅಸ್ತಿತ್ವದಲ್ಲಿದ್ದುದು ನೇಸರಗಿ, ಸಿರಸಂಗಿ, ಸಗರ ಶಾಸನಗಳಿಂದ ಕನ್ನಡ ಸಮಯಪರೀಕ್ಷೆ, ಸಂಸ್ಕೃತ ಸಿದ್ಧಾಂತ ಶಿಖಾಮಣಿ ಮೊದಲಾದ ಸಾಹಿತ್ಯಕೃತಿಗಳಿಂದ ತಿಳಿದುಬರುತ್ತದೆ. ವ್ಯಸನದ ಸಂಗತಿಯೆಂದರೆ ಇವುಗಳ ಸಿದ್ಧಾಂತದ ನಿಜಸ್ವರೂಪ, ಪರಸ್ಪರ ಸಂಬಂಧ-ವ್ಯತ್ಯಾಸಗಳೂ, ಇವು ಅನುಸರಿಸುತ್ತಲಿದ್ದ ಧಾರ್ಮಿಕ ಪಥ್ಯದ ಹೆಸರುಗಳೂ ಅಸ್ಪಷ್ಟವಾಗಿ ಉಳಿದಿವೆ. ಹೀಗಾಗಿ ಸಾಧ್ಯವಿದ್ದಲ್ಲೆಲ್ಲ ವ್ಯತ್ಯಾಸ ತಿಳಿಸುತ್ತ ಇವರ ವ್ಯಾಸಂಗದ ವಿಸ್ತಾರ, ಸಿದ್ಧಾಂತದ ಸ್ವರೂಪ, ಪಥ್ಯಗಳ ಹೆಸರನ್ನು ಕುರಿತು ಇಲ್ಲಿ ಚರ್ಚಿಸಬಹುದು.

ವ್ಯಾಸಂಗ :

ಸತ್ಯಘಟನೆಯನ್ನು ದಾಖಲಿಸುತ್ತಿದ್ದರೂ ಅದನ್ನು ವೈಭವೀಕರಿಸುವುದು ಶಾಸನಗಳ ಲಕ್ಷಣ. ಯುದ್ಧವೀರ, ಧರ್ಮವೀರ, ದಾನವೀರರನ್ನು ಉನ್ನತೀಕರಿಸಿ ಬರೆದ ಉದಾಹರಣೆಗಳಿಗೆ ಇಲ್ಲಿ ಲೆಕ್ಕವಿಲ್ಲ. ಇಂಥ ಮನೋಧರ್ಮ ಕಾರಣವಾಗಿ ಶಾಸನಗಳು ಈ ಶೈವ ಧಾರ್ಮಿಕ ಧುರೀಣರ ವ್ಯಾಸಂಗವನ್ನು ಒಂದಿಷ್ಟು ವಿಸ್ತಾರವಾಗಿಯೇ ಚಿತ್ರಿಸಿವೆ. ಈ ವಿಸ್ತೃತ ಚಿತ್ರಗಳು ಸ್ವಲ್ಪ ಹೆಚ್ಚು ಕಡಿಮೆ ಸಿದ್ಧಮಾದರಿಗಳಂತೆ ಕಂಡುಬರುತ್ತವೆ. ಈಗ ಶಕ್ತಿಪರ್ಷೆಯ ನಕುಲೀಶ, ಸಿಂಹಪರ್ಷೆಯ ಪಾಶುಪತರ ವಿಷಯವಾಗಿ ಒಂದು ಸಿದ್ಧಮಾದರಿಯನ್ನು ಬಳ್ಳಿಗಾವಿ ಶಾಸನದಿಂದ ಇಲ್ಲಿ ಕೊಡಬಹುದು.

ಋಗ್ಯಜುಸ್ಸಾಮಾಥರ್ವ ಚತುರ್ವೇದ ಸ್ವಾಧ್ಯಾಯಸ್ಥಾನಮುಂ,
ಕೌಮಾರ ಪಾಣಿನೀಯ ಶಾಕಟಾಯನಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನಸ್ಥಾನಮುಂ,
ನ್ಯಾಯ ವೈಶೇಷಿಕ ಮೀಮಾಂಸ ಸಾಂಖ್ಯಬೌದ್ಧಾದಿ ಷಡ್ದರ್ಶನ ವ್ಯಾಖ್ಯಾನಸ್ಥಾನಮುಂ,
ಲಕುಲಸಿದ್ಧಾಂತ ಪಾತಂಜಲಾದಿ ಯೋಗಶಾಸ್ತ್ರ ವ್ಯಾಖ್ಯಾನಸ್ಥಾನಮುಂ,
ಅಷ್ಟಾದಶ ಪುರಾಣ ಧರ್ಮಶಾಸ್ತ್ರ ಸಕಲ ಕಾವ್ಯ ನಾಟಕ ನಾಟಿಕಾದಿ ವಿವಿಧ ವಿದ್ಯಾಸ್ಥಾನಮುಂ,

ಬಳ್ಳಿಗಾವಿಯ ಶಕ್ತಿಪರ್ಷೆಯ ಪರ್ವತಾವಳಿಯ ಕೇದಾರೇಶ್ವರದೇವಾಲಯದ ಕೋಡಿಮಠದಲ್ಲಿ ಜರುಗುತ್ತಲಿದ್ದ ವಿದ್ಯಾವ್ಯಾಸಂಗದ ವರ್ಣನೆಯಿದು.

ಸಕಳೋರ್ವ್ವರೆ ಮೆಚ್ಚಲು ಮಾಂ।
ತ್ರಿಕ ತಾಂತ್ರಿಕ ಯಾಂತ್ರಿಕರ್ಕ್ಕಳಂ ಮೆಚ್ಚಿಸಿ ಮಾಂ।

ತ್ರಿಕನೆನೆ ತಾಂತ್ರಿಕನೆನೆ ಯಾಂ।
ತ್ರಿಕನೆನೆ ಧರೆ ಸೊಗಯಿಪಂ ಕಳೇಶ್ವರದೇವಂ॥

(ಕೊಪ್ಪಳ ಜಿಲ್ಲೆಯ ಶಾಸನಗಳು–ಯಲಬುರ್ಗಾ–೫೨ ಕುಕನೂರ ಕ್ರಿ. ಶ. ೧೧೭೪) ಎಂಬ ಪದ್ಯ ಈ ಯತಿಗಳ ಯಂತ್ರ, ಮಂತ್ರ, ತಂತ್ರ ವಿದ್ಯೆಗಳ ಪರಿಣತಿಯ ಕಡೆಗೆ ಬೆರಳುನೀಡುತ್ತದೆ.

ಅತ್ಯುಕ್ತಿಯೆನಿಸಿದರೂ ನಂಬಬೇಕಾದ ಅನೇಕ ಅಂಶಗಳು ಇಲ್ಲಿವೆ. ಇವೆಲ್ಲ ಅವರ ಧರ್ಮದ ಭಾಗವೇನಲ್ಲ. ಇಹ–ಪರಗಳ, ಪರ–ವಿರೋಧಿಧರ್ಮಗಳ ಸಮಗ್ರ ತಿಳಿವಳಿಕೆಗಾಗಿ ಇವುಗಳನ್ನು, ಇಂಥವುಗಳನ್ನು ಇವರು ತಿಳಿದುಕೊಂಡವರಾಗಿರುತ್ತಿದ್ದರು. ಈ ವಿದ್ಯೆಗಳನ್ನಲ್ಲದೆ

ವ್ರತದೀಕ್ಷಾವಿಧಿ, ಕುಂಡಮಂಡಳವಿಧಾನಂ, ಲಿಂಗಪೀಠಕ್ರಮಂ
ಪ್ರತಿಮಾದೂಷಣ ಪೋಷಣಂ, ಭುವನಕೋಶಂ, ವಾಸ್ತುಭೂದೇವ ಸಂ
ಸ್ಮೃತಿ, ಭೂಭೇದ ಪರೀಕ್ಷೆ, ದೇವನಿವಹ ಪ್ರಾಸಾದಮೆಂಬಾಗಮ
ಸ್ಥಿತಿ ವಿದ್ಯಾವಳಿ ವಾಮಶಕ್ತಿಮುನಿಯಿಂ ವಿಖ್ಯಾತಮಾಯ್ತುರ್ವಿಯೊಳ್॥

ಹೀಗೆ ವಾಸ್ತುಶಿಲ್ಪ, ಪ್ರತಿಮಾಶಿಲ್ಪಗಳನ್ನು ಆಗಮಶಿಸ್ತಿನಿಂದ ಅರಿತ[illegible]ಗಿದ್ದರೆಂದು ಹೊಂಬಳ ಶಾಸನ (ಎಸ್. ಆಯ್. ಆಯ್. XV–೭೩. ಕ್ರಿ. ಶ. ೧೧೮೯) [illegible]ಸುತ್ತದೆ. ದೇವಾಲಯ ನಿರ್ಮಾಣವೇ ಇವರ ಮುಖ್ಯ ಉದ್ದೇಶವಾಗಿದ್ದುದರಿಂದ ಇಂಥ ತಿಳಿವಳಿಕೆ ಅಪೇಕ್ಷಣೀಯವಾಗಿದ್ದಿರಬಹುದೆನಿಸುತ್ತದೆ. ಈ ಸಂದರ್ಭದಲ್ಲಿ ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನ ಹಗರಟಗಿ ಗ್ರಾಮದ ಶಾಸನ (ಸುರಪುರ ತಾಲೂಕಿನ ಶಾಸನಗಳು ೮೪) ಗಮನಾರ್ಹವೆನಿಸಿದೆ. ಇದರ ಕಾಲ ಸುಮಾರು ೧೨ನೆಯ ಶತಮಾನ. ವಿಶಿಷ್ಟವಾಗಿರುವ ಈ ಶಾಸನದ ಮುಖ್ಯ ಪಾಠ ಹೀಗಿದೆ.

೧. x x x ದ ಬ್ರಾಹ್ಮಣರ x x
೨. ಣಯುಕ್ತರುಂ ಎನಿಪ x x
೩. ರುಂ ಪ್ರತಿಮಾಲಕ್ಷಣ ಲಿ x x
೪. ವಿಸ್ವಾಂಬರಯೇಕಮಂ ಚತುರಾಶ್ರ ವ್ರಿತ್ತಿ x x
೫. ನಮಾನ ನವರಸಭಾವ ಉಪಲಕ್ಷಣ ಚಿತ್ರ ಚೂ x x
೬. ಮರುರಂ ನಂದಿಕೇಸ್ವರ ಲಾಕುಳಾಗಮ ರಂಜ ಕೊ x x
೭. ಶೊ ಷಕಲ ಸ್ವಸ್ತಿಕ ವರ್ದ್ಧಮಾನ ಸರ್ವ್ವಲೋ x x
೮. ರುಂ। ಲೋಕವಿಖ್ಯಾತರುಂ ಮುತ್ತೋರಣ x x
೯. ಯಾಂತರಮುದಿತ ಗುಣಕರ್ಮ್ಮ ರತ್ನಕಂ x x
೧೦. ರ್ಮ್ಮ ಪತ್ರಭೇದ ಚಿತ್ರಕಂರ್ಮ್ಮಂ ಕಾಷ್ಟಕರ್ಮ್ಮ x x
೧೧. ಕ್ತಮುಂ ಮಕುಟಕಂದಳ ಮಖರಿಕಾಪತ್ರ x x
೧೨. ಮೆ ದಶಬಂಧನ ಬ್ರಹ್ಮಸೂತ್ರ ಪ್ರಣಂಬಸೂತ್ರ x x
೧೩. ಣಯರುಂ ಆಸ್ರಿತಜನಕಲ್ಪವ್ರಿಕ್ಷರುಂ।ಮತ್ತಂ x x
೧೪. ಸಿ ಮಲ್ಲಿಕಾರ್ಜ್ಜುನದೇವರೊಳುಮಮಾಶ್ರಿತಮಪ್ಪ ಸ್ವಸ್ತಿಯಮ x x

೧೫. ಮಪ್ಪ ಸಂಸಾರಭೀತ ಮದಕೋಟಿ ಮೋಕ್ಷಾಭರಣರುಂ ಮರೊದ x x

೧೬. ಪ್ರಸಸ್ತಿ ವೊಗಳೆಲೆಹಂ..............

ಸಮೀಪದ ಇನ್ನೊಂದು ತುಂಡು ಶಾಸನ

೧. ಮಂಟಪ ಸಿಕ್ಷ x x

೨. ಚಂದ್ರನಾಥ ರುದ್ರದೆ x x

೩. ದೊ ನಿರ್ಮ್ಮಿತಮು x x

೪. ರ್ಮ್ಮ ಸಿಳಾಕಂರ್ಮ್ಮಂಗಳ

೫. (ಯೂ)ಪಕಂರ್ಮ್ಮ ಲೇಪಕಂರ್ಮ್ಮ

೬. ರ ಕಂಠಾಭರಣಬಾಹುಪೂ x x

೭. ರಾವವೆಳೆಯ ನೂಪುರ ಪಾದಂ

ಇಲ್ಲಿಯ "ನಂದಿಕೇಸ್ವರ ಲಾಕುಳಾಗಮ" ಎಂಬುದು ಒಂದೇ ಗ್ರಂಥವೋ, ನಂದಿಕೇಸ್ವರ ಬೇರೆ ಲಾಕುಳಾಗಮ ಬೇರೆಯೋ ಗೊತ್ತಾಗುವುದಿಲ್ಲ. ಬಹುಶಃ ಒಂದೇ ಗ್ರಂಥವಿರಬಹುದು. ದುರ್ದೈವದ ಸಂಗತಿಯೆಂದರೆ ಈ ಹೆಸರಿನ ಆಗಮ ಲಭ್ಯವಿಲ್ಲ. ಈಗ ಲಭ್ಯವಿರುವ ನಂದಿಕೇಶ್ವರಕಾರಿಕೆ ಹೆಸರಿನ ಗ್ರಂಥದಿಂದ ಇದು ಭಿನ್ನವೆನಿಸುತ್ತದೆ.

ಆಗಮಗಳಲ್ಲಿ ಪೂರ್ವಭಾಗ, ಉತ್ತರಭಾಗವೆಂದು ಎರಡು ಭಾಗಗಳಿದ್ದು, ಪೂರ್ವಭಾಗದಲ್ಲಿ ಕ್ರಿಯಾಪಾದ, ಚರ್ಯಾಪಾದವೆಂದೂ, ಉತ್ತರ ಭಾಗದಲ್ಲಿ ಯೋಗಪಾದ, ಜ್ಞಾನಪಾದವೆಂದೂ ಉಪವಿಭಾಗಗಳಿರುತ್ತವೆ. ಇವುಗಳಲ್ಲಿ ಚರ್ಯಾಪಾದವು ದೇವತೆಗಳ ವಿಗ್ರಹಲಕ್ಷಣ, ಪ್ರತಿಷ್ಠಾಪನೆ ಇತ್ಯಾದಿಗಳನ್ನು ವಿವರಿಸುತ್ತದೆ. ಬಹುಶಃ ಈ ಶಾಸನ "ನಂದಿಕೇಶ್ವರ ಲಾಕುಳಾಗಮ" ಹೆಸರಿನ ಆಗಮವೊಂದರ ಚರ್ಯಾಪಾದದ ವಿಷಯವನ್ನು ಸೂಚಿಸುವಂತಿದೆ. ಏಕೆಂದರೆ ಇಲ್ಲಿಯ ಪ್ರತಿಮಾಲಕ್ಷಣ, ಚಿತ್ರ, ಪತ್ರಭೇದ, ಚಿತ್ರಕರ್ಮ, ಕಾಷ್ಟಕರ್ಮ, ಮಕುಟಕಂದಳ, ಮಖ(ಕ)ರಿಕಾಪತ್ರ, ದಶಬಂಧನ, ಬ್ರಹ್ಮಸೂತ್ರ, ಪ್ರಣಂಬ(ಪ್ರಣವ)ಸೂತ್ರ, ಸಿಳಾಕಂರ್ಮ್ಮ, ಲೇಪಕಂರ್ಮ್ಮ ಇತ್ಯಾದಿ ಪದಗಳು ವಿಗ್ರಹ-ಶಿಲ್ಪಕಲೆಯನ್ನು ನೆನಪಿಸುತ್ತವೆ. ಅದೇನೇ ಇದ್ದರೂ ಈ ಹೆಸರಿನ ಒಂದು ಗ್ರಂಥವನ್ನು ಪ್ರಸ್ತುತ ಶಾಸನ ಮೊದಲ ಬಾರಿ ಹೆಸರಿಸಿ, ನಮ್ಮೆಲ್ಲರ ಗಮನವನ್ನು ಅದರೆಡೆಗೆ ಎಳೆದಿದೆ.

ಸಿದ್ಧಾಂತ :

ಮೇಲೆ ಹೇಳಿದ ವ್ಯಾಸಂಗ ಇವರ ಸಾಮಾನ್ಯ(General)ಜ್ಞಾನವಾಗಿದ್ದರೆ, ಸಿದ್ಧಾಂತವು ನಿರ್ದಿಷ್ಟ (Particular)ಜ್ಞಾನವಾಗಿದೆ. ಶಾಸನಗಳಲ್ಲಿ ಕಡಿಮೆ ಪ್ರಮಾಣದಲ್ಲಾದರೂ ಸಿಗುವ ಈ ಸಿದ್ಧಾಂತದ ತಾತ್ವಿಕ ಮತ್ತು ಆಚರಣಾತ್ಮಕ ಸೂಚನೆಗಳನ್ನು ಇಲ್ಲಿ ಸಂಗ್ರಹಿಸಬಹುದು. ಮೇಲೆ ಹೇಳಿದ ನಾಲ್ಕು ಶೈವಗಳಲ್ಲಿ ನಕುಲೀಶ, ಪಾಶುಪತಗಳ ಸಿದ್ಧಾಂತದ ವ್ಯತ್ಯಾಸ ಶಾಸನಗಳಿಂದ ಸ್ಪಷ್ಟವಾಗುವುದಿಲ್ಲ. ನಕುಲೀಶರದು ಶಕ್ತಿಪರ್ಷೆ, ಪಾಶುಪತರದು ಸಿಂಹಪರ್ಷೆ. ಸಿಂಹಪರ್ಷೆಯಲ್ಲಿ "ಅಭಿನವ ಪಾಶುಪತ" ಎಂಬ ಉಪಶಾಖೆ ಬೆಳೆದಿದ್ದಿತು. "ಪಾಶುಪತಯೋಗಾಚಾರ್ಯ"ಯೆಂಬ ವಿಶೇಷಣವೂ ಇವರಿಗೆ ಬಳಸಲಾಗುತ್ತಿದ್ದಿತು. ಈ ಸಿಂಹಪರ್ಷೆಯವರ ಮುಖ್ಯಕೇಂದ್ರ ಮುದನೂರು, ಶಕ್ತಿಪರ್ಷೆಯವರ ಮುಖ್ಯಕೇಂದ್ರ ಬಳ್ಳಿಗಾವಿ.

ಸಿದ್ಧಾಂತದೃಷ್ಟಿಯಿಂದ ಹೇಳುವುದಾದರೆ "ಬೌದ್ಧಾಬ್ಧಿ ಬಾಡಬಾಮುಖಂ, ಮೀಮಾಂಸಕ ಧಾತ್ರೀಧರವಜ್ರಂ, ಲೋಕಾಯತ ಮಹಾತರು ವಿದಾರಣಕ್ರಕಚಂ, ಸಾಂಖ್ಯಾಹೀಂದ್ರ ರುಂದ್ರವೈನತೇಯಂ, ಅದ್ವೈತವಾದಿ ಕುಜಕುಠಾರಂ" ಬಳ್ಳಿಗಾವಿ ಶಾಸನೋಕ್ತ ಇಂಥ ಪ್ರಶಸ್ತಿಗಳು ಇವರಿಗೆ ಅಮಾನ್ಯವೆನಿಸಿದ್ದ ಧರ್ಮ-ದರ್ಶನಗಳನ್ನು ತಿಳಿಸಿಕೊಡುತ್ತವೆ. ಅದರಲ್ಲಿಯೂ ದರ್ಶನಗಳಲ್ಲಿ ಪೂರ್ವಮೀಮಾಂಸೆ, ಉತ್ತರ ಮೀಮಾಂಸೆ, ಸಾಂಖ್ಯಗಳು ಇವರಿಗೆ ಸಮ್ಮತವಿರಲಿಲ್ಲವೆನಿಸುತ್ತವೆ. ಆದರೆ "ನೈಯಾಯಿಕಾಗ್ರೇಸರಂ", ("ನೈಯಾಯಿಕ ಸಂರಕ್ಷಣೈಕದಕ್ಷಂ", "ನ್ಯಾಯಶಾಸ್ತ್ರ ವಿಸ್ತೃತ ಸರೋಜವನದಿವಾಕರಂ"), "ವೈಶೇಷಿಕವಾರ್ಧಿ ವರ್ಧನ ಶರತ್ಸುಧಾರಕಂ" ಎಂಬಂಥ ಬಳ್ಳಿಗಾವಿ ಶಾಸನೋಕ್ತ ಹೇಳಿಕೆಗಳು ಇವರು ನ್ಯಾಯ, ವೈಶೇಷಿಕ ದರ್ಶನಗಳ ಪಕ್ಷಪಾತಿಗಳೆಂದು ತಿಳಿಸುತ್ತವೆ. ಈ ಎರಡೂ ಶಾಖೆಗಳು ಆಗಮ ಸಿದ್ಧಾಂತವನ್ನನುಸರಿಸುತ್ತಿದ್ದವು.

ಆವಾವಾಗಮದೊಳಗಂ।
ಭಾವಿಸಿ ನೋಡುವಡೆ ತಾವೆ ಪರಿಣತರೆನಿಪ।
ರ್ಕ್ಕೇವಳಮೆ ಸೋವರಾಸಿಗ।
ಳೀ ವಸುಮತಿಯೊಳಗೆ ನೆಗಳ್ದಿರಮಳಿನ ಚರಿತ್ರರು॥

(ಎಸ್. ಆಯ್. ಆಯ್ ೧೮-೭೮ ಅಸುಂಡಿ ೧೦೭೪)

ರಾಣೆಬೆನ್ನೂರ ತಾಲೂಕಿನ ಅಸುಂಡಿ ಗ್ರಾಮದ ಸಿಂಹಪರ್ಷೆಯ ಮಠದ ಆಚಾರ್ಯನಾದ ಸೋಮರಾಸಿಯು ಹೀಗೆ ಎಲ್ಲ ಆಗಮಗಳಲ್ಲಿ ತಜ್ಞನೆನಿಸಿದ್ದನು. ಹೀಗಿದ್ದೂ "ಶ್ರೀಮಲ್ಲಕುಳೀಶ್ವರದೇವ ಮುಖಕಮಳವಿನಿರ್ಗತ ಸಕಳಶಾಸ್ತ್ರ"ಗಳು, ಅದರಲ್ಲಿಯೂ "ಲಾಕುಳಾಗಮ" "ಲಾಕುಳದೇವಾಗಮ" ವೆನಿಸಿದ ಆಗಮ ಇವರಿಗೆ ಪೂಜ್ಯವೆನಿಸಿದ್ದಿತು. ಅನುಪಲಬ್ಧವಾಗಿರುವ ಇದು ಒಂದು ಗ್ರಂಥವೋ, ಗ್ರಂಥಸಮುದಾಯವೋ ಸ್ಪಷ್ಟವಿಲ್ಲ. ಒಟ್ಟಾರೆ ದರ್ಶನಗಳಲ್ಲಿ ವೈಶೇಷಿಕ, ನ್ಯಾಯಗಳು, ಸಿದ್ಧಾಂತಗಳಲ್ಲಿ ಲಾಕುಳಾಗಮ ಇವರ ಆದರ್ಶಗಳಾಗಿದ್ದವು.

ಬಾಗೇವಾಡಿ ತಾಲೂಕಿನ ಸಾಲವಾಡಗಿ ಶಾಸನದಲ್ಲಿ ಕಾಶ್ಮೀರಬ್ರತಿ ಮೂರುಜಾವಿದೇವನ್ನು ಕುರಿತು "ದಶಧರ್ಮ ನಿರ್ಮ್ಮಳ ತಪ:ಶ್ರೀ ಸತ್ಕುಲಶ್ರೀ ನಿರಂತರಿತಂ" ಎಂಬ ಮಾತು(ಎಸ್. ಆಯ್. ಆಯ್ ೫-೪೬ ಸಾಲವಾಡಗಿ)ಬರುತ್ತದೆ. ಮುಳಗುಂದ ಶಾಸನದಲ್ಲಿ (ಎಸ್. ಆಯ್. ಆಯ್. ೧೧-೨-೧೯೮ ಕ್ರಿ. ಶ. ೧೧೦೩) "ದಶಧರ್ಮ", "ದಶಕುಳಧರ್ಮ" ಮತ್ತು ಇನ್ನೊಂದು ಶಾಸನದಲ್ಲಿ (ಎಸ್. ಆಯ್. ಆಯ್. XI-i-೬೪. ಕ್ರಿ. ಶ. ೧೦೨೮) "ದಶಪ್ರತ್ಯಯಜ್ಞಾನಿ" ಎಂಬ ಮೂರು ಶಬ್ದಗಳು ಪರ್ವತಾವಳಿಯ ಯತಿಗಳನ್ನು ಕುರಿತು ಕಾಣಿಸಿಕೊಂಡಿವೆ. ಇವು ಕಾಳಾಮುಖರ ದಶಾಂಗಗಳಾದ ಬ್ರಹ್ಮಚರ್ಯೆ, ದಯೆ, ಸತ್ಯ, ಅಕ್ರೋಧ, ಶಾಂತಿ, ಆರ್ಜವ, ಶಿವಭಕ್ತಿ, ತಪಸ್ಸು, ಗುರುಶುಶ್ರೂಷಾ, ಜಪಗಳೆಂದು ಪಂಪಾಮಹಾತ್ಮೆಯ ಆಧಾರದಿಂದ ಶ್ರೀಮತಿ ವಸುಂಧರಾ ಫಿಲಿಯೋಜ ಹೇಳುತ್ತಾರೆ.[೧]

---

೧. ಕರ್ನಾಟಕದಲ್ಲಿ ಲಕುಳಶೈವ ಜಕ್ಕಣಾರ್ಯರು-ವಸುಂಧರಾ ಫಿಲಿಯೋಜ. ಪು ೨೬ ಮತ್ತು ೩೪.

ಇವೆಲ್ಲವುಗಳಿಗಿಂತ ಮುಖ್ಯವಾದುದೆಂದರೆ ಇವರು ತಮ್ಮನ್ನು "ಕರ್ತೃವಾದಿ" ಎಂದು ಕರೆದುಕೊಂಡುದು. ಹೊಂಬಳ ಶಾಸನದಲ್ಲಿ (ಎಸ್. ಆಯ್. ಆಯ್. ೧೫-೭೩ ಕ್ರಿ.ಶ.೧೧೯೬)ಕಾಳಾಮುಖ ಪರ್ವತಾವಳಿಯ ಬೆಳ್ಳಿ ಸಂತಾನದ "ಕಲಿಯುಗ ಸಿದ್ಧಲಕುಳೀಶ್ವರಾಪರನಾಮಧೇಯ"ದ ಬೊಂತೆಮುನಿಯ ವರ್ಣನೆ ಹೀಗೆ ಬರುತ್ತದೆ: ಶ್ರೀಶೈಲದಲ್ಲಿ ಸುಡು ಬಿಸಿಲಿನಲ್ಲಿ ನಿಂತು ಸೂರ್ಯನನ್ನು ಆರಾಧಿಸಿ, ಅವನಿಂದ ಸಕಳಜ್ಞತೆಯನ್ನು ಪಡೆದು, ಸಂಚರಿಸುತ್ತ ಈತ ಕಲ್ಯಾಣ ಚಾಲುಕ್ಯ ಜಯಸಿಂಹನ (೧೦೧೫-೪೨)ಆಸ್ಥಾನಕ್ಕೆ ಬಂದು, ಅಲ್ಲಿ ಪರಸಮಯಿಗಳೊಂದಿಗೆ ವಾದಕ್ಕೆ ನಿಂತ ಸಂದರ್ಭದ ವರ್ಣನೆ ಹೀಗಿದೆ.

> ಪರಸಮಯಂಗಳೊಳ್ನೆಗಳ್ದ ತಾರ್ಕಿಕರೆಲ್ಲರುಮಿರ್ದು ನೀಂ ನರೇ
> ಶ್ವರ ಸಭೆಯೊಳ್ ಸಮರ್ಥಿಸುವ ಕರ್ತೃವರೂಪಮದೆಂತುಟೆಂದ ನೂ
> ರ್ವರೊಳಮನಿತ್ತ ರೂಪೆನಿಸಿ ನಿನ್ದು ನಿರುತ್ತರರಾಗಿ ಮಾಡಿ ಬಿ
> ತ್ತರಿಸಿದನಲ್ತೆ ಬೊಂತೆಯಮುನೀಶ್ವರನೀಶ್ವರ ಕರ್ತೃವಾದಮಂ॥

ಹೀಗೆ ಈಶ್ವರನ "ಕರ್ತೃವಾದ"ದಲ್ಲಿ ಗೆದ್ದು "ಕರ್ತೃವಾದಿ ಚಕ್ರವರ್ತಿ" ಬಿರುದನ್ನು ಈತ ಪಡೆಯುತ್ತಾನೆ. ಲಕ್ಷ್ಮೇಶ್ವರದ ಶಾಸನಕ್ಕೆ ಪದ್ಯ ಒದಗಿಸಿದ ಚಟ್ಟಪಾರ್ಯನನ್ನು "[ಪೊಂಬೊಳಲ] ಕರ್ತೃವಾದಿ ಚೂಡಾಮಣಿ ಕನ್ಥೆಯದೇವರ ಪುತ್ರಂ" ಎಂದು ಉಲ್ಲೇಖಿಸಲಾಗಿದೆ. ಕಾಳಾಮುಖರದು ಕರ್ತೃವಾದ ಸಿದ್ಧಾಂತವೆಂದು ಇದರಿಂದ ತಿಳಿದುಬರುತ್ತದೆ. ಈ ಬಗ್ಗೆ ಶ್ರೀಮತಿ॥ ವಸುಂಧರಾ ಫಿಲಿಯೋಜ ನೀಡುವ ವಿವರಣೆ ಹೀಗಿದೆ.[೨] ಅಂಧಕಾರದಿಂದ ರುದ್ರತತ್ವ>ಶಿವತತ್ವ>ಸದಾಶಿವತತ್ವಗಳೂ, ಈ ಸದಾಶಿವನ ಪಂಚಮುಖಗಳಿಂದ ಪಂಚಶಕ್ತಿ, ಪಂಚಕಲೆ, ಪಂಚಸಾದಾಖ್ಯಗಳು ಹೀಗೆ ಹುಟ್ಟಿದವು.

ಈಶಾನ	–	ಪರಾಶಕ್ತಿ	–	ಶಾಂತ್ಯತೀತಕಲೆ	–	ಶಿವಸಾದಾಖ್ಯ
ವಾಮ	–	ಆದಿಶಕ್ತಿ	–	ಶಾಂತಿಕಲೆ	–	ಅಮೂರ್ತಸಾದಾಖ್ಯ
ಸದ್ಯೋಜಾತ	–	ಇಚ್ಛಾಶಕ್ತಿ	–	ವಿದ್ಯಾಕಲೆ	–	ಮೂರ್ತಸಾದಾಖ್ಯ
ಅಘೋರ	–	ಜ್ಞಾನಶಕ್ತಿ	–	ಪ್ರತಿಷ್ಠಾಕಲೆ	–	ಕರ್ತೃಸಾದಾಖ್ಯ
ತತ್ಪುರುಷ	–	ಕ್ರಿಯಾಶಕ್ತಿ	–	ನಿವೃತ್ತಿಕಲೆ	–	ಕರ್ಮಸಾದಾಖ್ಯ

ಇವುಗಳಲ್ಲಿ ಅಘೋರಶಿವನ ಕರ್ತೃಸಾದಾಖ್ಯದ ಆರಾಧಕರೆಂಬ ಅರ್ಥದಲ್ಲಿ "ಕರ್ತೃವಾದಿ"ಗಳೆಂದೂ; ಶಿವನ ಈ ಐದು ಕಲಾಮುಖಗಳ ಆರಾಧಕರೆಂಬ ಅರ್ಥದಲ್ಲಿ "ಕಾಲಾಮುಖರು> ಕಾಳಾಮುಖ"ರೆಂದೂ ಇವರು ಕರೆಯಿಸಿಕೊಳ್ಳುತ್ತಿದ್ದರೆಂದು ಡಾ॥ ವಸುಂಧರಾ ಅವರ ಅಭಿಪ್ರಾಯ. ಕೆಲವು ವಿದ್ವಾಂಸರು ಹೇಳುವಂತೆ ಮುಖದ ತುಂಬ (ಕಪ್ಪು=ಕಾಲ) ವಿಭೂತಿ, ಇಲ್ಲವೆ ಹಣೆಯ ಮೇಲೆ ಕಪ್ಪುಗೆರೆ ಬರೆದುಕೊಳ್ಳುವ ಕಾರಣ ಈ ಹೆಸರು ಬಂದಿದ್ದರೆ, ಕಾಲಮುಖರು>ಕಾಳಮುಖರು ಎಂಬ ಹೆಸರು ಇವರಿಗೆ ಬಳಕೆಯಲ್ಲಿರಬೇಕಿತ್ತು. ಹಾಗಿಲ್ಲವಾಗಿ

---

೨. ಕರ್ನಾಟಕ ಲಾಕುಳ ಶೈವ ಜಕ್ಕಣಾರ್ಯರು –ವಸುಂಧರಾ ಫಿಲಿಯೋಜ ಪು ೨೦ರಿಂದ ೨೪, ೫೦.

ಶ್ರೀಮತಿ ವಸುಂಧರಾ ಹೇಳುವ ಅರ್ಥವೇ ನಿಜವಿರಬಹುದೆನಿಸುತ್ತದೆ. ಆದರೆ ಕಾಲಾಮುಖರೂಪವು "ಕಲಾ" ಮೂಲದಿಂದ ಬಂದಿದೆಯೆಂಬುದು ಗೊತ್ತಾಗದೆ, "ಕಾಲ" (ಕಪ್ಪು)ಮೂಲವನ್ನು ಭ್ರಮಿಸಿ ಕೆಲವೊಮ್ಮೆ "ಕಾಲಮುಖ", "ಅಸಿತವಕ್ತ್ರ"ವೆಂಬ ತಪ್ಪು ರೂಪಗಳನ್ನು ಶಾಸನಗಳು ಬಳಸಿದವು.

"ಪರಿಹರಿಸಲ್ಕೆಬಾರದು ಶುಭಾಶುಭಕರ್ಮಮನುಂಡಡಲ್ಲದೆ" ಎಂದು ಇವರು ನಂಬಿದ್ದರು. ರಸವರ್ಗತ್ಯಾಗ ಇವರ ಭೋಜನವ್ರತವಾಗಿದ್ದಿತು. ಏಕಾಂತದಲ್ಲಿ ಮೂರು ತುತ್ತು, ಅದರಲ್ಲಿಯೂ ಭೂತಸಮೂಹಕ್ಕೊಂದು ಭಾಗ ಬಲಿನೀಡಿ ಸೇವಿಸುತ್ತಿದ್ದರು–ಇವೆಲ್ಲ ವಿವರಗಳು ಇದೇ ಹೊಂಬಳ ಶಾಸನದಲ್ಲಿ ಸಿಗುತ್ತವೆ. ಇಲ್ಲಿಯೇ ಶಿಷ್ಯ(ಸಾಲು ೨೮, ೩೨), ಅನುಜರ್ (ಸಾಲು ೩೦), ಔರಸಪುತ್ರ (ಸಾಲು ೩೭), ಅಗ್ರಿಮಸುತ (ಸಾಲು ೩೮), ಶಿಶ್ಯೆಯ ಮಕ್ಕಳು (ಸಾಲು ೬೧) ಈ ಪದಗಳು ಬಳಕೆಯಾಗಿವೆ. ಇವು ಇವರ ಧಾರ್ಮಿಕ–ಮತ್ತು ಕೌಟುಂಬಿಕ ಬದುಕನ್ನು ಸೂಚಿಸುತ್ತವೆ. ಈ ನಕುಲೀಶರಾಗಲೀ, ಪಾಶುಪತರಾಗಲೀ ವರ್ಣಾಶ್ರಮಧರ್ಮ ಪ್ರತಿಪಾಲಕರಿದ್ದಂತೆ ತೋರುತ್ತದೆ. ಮನಗೂಳಿ ಶಾಸನದಲ್ಲಿ ಭುಜಂಗಾವಳಿಯ ಕಾಳಾಮುಖ ನೈಷ್ಠಿಕ ಪರಮತಪೋನಿಷ್ಠನಾದ ಸದ್ಯೋಜಾತದೇವನನ್ನು "ಬ್ರಾಹ್ಮಕುಳ ಬಾಳಬ್ರಹ್ಮಚಾರಿ"[೩] ಎಂದು ಹೇಳಿದರೆ, ಬಳ್ಳಿಗಾವಿಯ ಕಾಳಾಮುಖ ಶಾಸನವೊಂದು "ತ್ರಯೀ ಪ್ರೋಕ್ತೋ ಧರ್ಮ: ಕ್ರಮಘಟಿತ ವರ್ಣಾಶ್ರಮ ವಿಧಿ:"[೪] ಎನ್ನುವ ಮೂಲಕ ಮೂರು ವೇದಗಳಲ್ಲಿ ಹೇಳಲಾದ ವರ್ಣಾಶ್ರಮಪದ್ಧತಿಯನ್ನು ಒಪ್ಪಿದವರೆಂದು ತಿಳಿಸುತ್ತದೆ. ಈ ವಾಕ್ಯವನ್ನೊಳಗೊಂಡ ಶ್ಲೋಕವು ಕುಮಾರಿಲಭಟ್ಟನದೆಂದು ಶ್ರೀ ಬಿ. ಎಲ್. ರೈಸ್. ಸೂಚಿಸಿದ್ದಾರೆ. ಸಿಂಹಪರ್ಷೆ ಮತ್ತು ಶಕ್ತಿಪರ್ಷೆಯ ಶೈವರ ಸಿದ್ಧಾಂತದಲ್ಲಿ ಭೇದ ಅಸ್ಪಷ್ಟವಾಗಿರುವುದರಿಂದ ಅವೆರಡನ್ನೂ ಗಮನಿಸಿ ಈ ವರೆಗೆ ವಿವರಿಸಲಾಗಿದೆ.

*****

ಇವರನ್ನು ಬಿಟ್ಟರೆ ಸೋಮಸಿದ್ಧಾಂತಿ(ಮಹಾವ್ರತಿ)ಗಳ ಬಗ್ಗೆ ತಿಳಿದು ಬರುವುದು ಅಲ್ಪ. ಕಾಪಾಲಿಕರ ಪರಿಷ್ಕೃತ ರೂಪವಾಗಿರುವ ಇವರನ್ನು ಮೇಲೆ ಹೇಳಿದ ಶಕ್ತಿಪರ್ಷೆಯ ನಕುಲೀಶ, ಸಿಂಹಪರ್ಷೆಯ ಪಾಶುಪತಗಳಿಂದ ಪ್ರತ್ಯೇಕಿಸಿ ವಿವೇಚಿಸುವುದೇ ನ್ಯಾಯಯುತವಾದುದು. ಗಳಗನಾಥ ಗ್ರಾಮದ ಶಾಸನದಲ್ಲಿ "ಸ್ವಸ್ತಿ ಯಮನಿಯಮಾಸನ ಪ್ರಾಣಾಯಾಮ ಪ್ರಕೃಷ್ಟ ತಪೋಪಯ್ಯೋಗ ಕಪಾಲ ತ್ರಿಶೂಲಾಸ್ತಿಮಾಲಾ ವಿಭೂಷಣ ಸೋಮಾಭಿದಾನ ಮಹಾವ್ರತಸ್ಥಾನವಿದು" ಎಂಬ ವಾಕ್ಯ ಕಾಪಾಲಿಕ, ಸೋಮ, ಮಹಾವ್ರತ ಸಮಾನಾರ್ಥದ ಪದಗಳೆಂದು ತಿಳಿಸುತ್ತದೆ. ಈ ದೇವಾಲಯದ ಸ್ಥಾನಾಚಾರ್ಯ ಕಂಬಳಿ ಸೋಮ, ಇವನ ಶಿಷ್ಯ ಬ್ರಹ್ಮಸೋಮ.[೫] ಮೇವುಂಡಿ ಶಾಸನದಲ್ಲಿ (ಎಸ್. ಆಯ್. ಆಯ್. ೧೧–೧–೨೨ ಕ್ರಿ.ಶ. ೮೯೭)ಒಬ್ಬ ಯತಿಯನ್ನು "ವೈಶೇಷಿಕ ಕುಮುದಚಂದ್ರರ್।ಜ್ಞಾಯ(ನ್ಯಾಯ) ಮಹಾರ್ಣವ....... ಸರೋವರ ರಾಜಹಂಸರ್। ಮೀಮಾಂಸಾಕಳಂಕರ್। ಬೌದ್ಧ ಲೋಕಾಯತ ಮದಾಂಧ ಸಿ....ಭ ಪಂಚಾನನರ್। ಸಮಸ್ತ ವೇದಾಂತ ಶ್ರಿತೋತ್ತರಿಯರ್। ಪಾತಂಜಲಾದಿ ಯೋಗ....ರಂಜಿತರ್। ಸೋಮಸಿದ್ಧಾಂತಾಚ್ಛಾದನಾಚ್ಛನ್ನರ್।"

---

೩. ಇ. ಆಯ್. V ಪು. ೨೯. ಕ್ರಿ. ಶ. ೧೧೬೧.

೪. ಎಪಿ. ಕ. VII ಶಿಕಾರಿಪುರ ೧೨೬. ಬಳ್ಳಿಗಾವಿ ೧೦೩೬.

೫. ವಸುಂಧರಾ ಫಿಲಿಯೋಜ. ಫಿಲಿಯೋಜ ಅವರು ಎಲಿಯಟ್ ಸಂಗ್ರಹದಿಂದ ನನಗೆ ಒದಗಿಸಿದ ಪತ್ರ.

ಎಂದು ಕರೆಯಲಾಗಿದೆ. ಈ ಸಂಪ್ರದಾಯದ ಬಹುದೊಡ್ಡ ಕೇಂದ್ರವೆಂದರೆ ಪುಲಿಗೆರೆ. ಇಲ್ಲಿಯ ಸೋಮೇಶ್ವರ ದೇವಾಲಯ ಸೋಮಸಿದ್ಧಾಂತಿಗಳಿಗೆ ಸಂಬಂಧಿಸಿದೆ. (ಇದೇ ಊರಲ್ಲಿ ನಕುಲೀಶರ ಶಕ್ತಿಪರ್ಷೆಯ ಬೆಳ್ಳಿಸಂತಾನ, ಮೂವರಕೋಣೆ ಸಂತಾನ, ಕಿಟ್ಟಗಾವೆ ಸಂತಾನ?ಗಳ ಸ್ಥಾನಾಚಾರ್ಯರೂ ಇದ್ದರು). ಸೋಮೇಶ್ವರದೇವಾಲಯದ ಸ್ಥಾನಾಚಾರ್ಯರನ್ನು "ಮಹಾವ್ರತಿಸಂತಾನ ಕಲ್ಪಭೂಜಂ" ಎಂದು ಇಲ್ಲಿಯ ಶಾಸನ[೬] ಕರೆದುದೂ, ಇವರದು ಮಹಾವ್ರತಿಸಂಪ್ರದಾಯವೆಂಬುದನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿಯೇ ಈ ಸ್ಥಾನಪತಿಗಳನ್ನು ದೇವಸೋಮವ್ರತಿ> ಮಹೇಂದ್ರಸೋಮವ್ರತಿ> ಜ್ಞಾನಸೋಮವ್ರತಿ ಎಂದು "ಸೋಮ" ಮತ್ತು "ವ್ರತಿ" ಪದಗಳಿಂದ ಸೂಚಿಸಲಾದುದೂ ಗಮನಿಸಬೇಕಾದ ವಿಷಯ. ಇಲ್ಲಿಯ "ದಶಕುಳಧರ್ಮ ವಜ್ರನಿಯುಕ್ತರ್" ಎಂಬ ವಿಶೇಷಣ ಈ ಹಿಂದೆ ನಕುಲೀಶರಿಗೆ ಹೇಳಿದ ದಶಧರ್ಮವನ್ನು ನೆನಪಿಸುತ್ತದೆ. "ಮಹಾವ್ರತಿ ಗೊರವನ್ ರುದ್ರಮಾರ್ಗದಿಂ ನಡೆವನ್" ಎಂಬ ಬ್ರಹ್ಮಶಿವನ (ಸಮಯಪರೀಕ್ಷೆ ೧೪-೫೦) ಮಾತು ಇವರ ಕಾಪಾಲಿಕತ್ವವನ್ನೇ ಸೂಚಿಸುವಂತಿದೆ. ಆದಯ್ಯ ರುದ್ರಮಾರ್ಗದಿಂದ ವರ್ತಿಸಿ, ಲಕ್ಷ್ಮೇಶ್ವರದಲ್ಲಿ ಸೋಮೇಶ್ವರನನ್ನು ಸ್ಥಾಪಿಸಿದುದನ್ನು ಇಲ್ಲಿ ಸ್ಮರಿಸಬಹುದು.

*****

ಕೊನೆಯದಾಗಿ, ನಾಲ್ಕನೆಯದಾದ (ಶ್ರೋತ್ರೀಯ) ಶೈವದ ಬಗ್ಗೆ ಇನ್ನೂ ಕಡಿಮೆ ಮಾಹಿತಿ ಸಿಗುತ್ತದೆ. ಮೂಲತಃ ಇದು ಆಂಧ್ರಪ್ರದೇಶದಲ್ಲಿ ವಿಶೇಷವಾಗಿದ್ದು, ಪ್ರಾಚೀನ ಕರ್ನಾಟಕದಲ್ಲಿ ಕಡಿಮೆ ಪ್ರಚಾರದಲ್ಲಿರುವುದೇ ಇದಕ್ಕೆ ಕಾರಣವಾಗಿರಬಹುದು. ಕರ್ನಾಟಕದಲ್ಲಿ ಶರಣರ ಚಳುವಳಿಯಿಂದಾಗಿ ನಕುಲೀಶ, ಪಾಶುಪತ, ಸೋಮಗಳ ಶಕ್ತಿ ಉಡುಗುತ್ತ ಹೋದಂತೆ, ಇದು ಕರ್ನಾಟಕದಲ್ಲಿ ದಟ್ಟಗೊಳ್ಳಲಾರಂಭಿಸಿ, ಮುಂದೆ ಚತುರಾಚಾರ್ಯ ಪರಂಪರೆಯನ್ನು ಹುಟ್ಟುಹಾಕಿದಂತಿದೆ. ಇದಕ್ಕೆ ಶ್ರೋತ್ರಿ, ಸಿದ್ಧಾಂತಿ, ಮಾಹೇಶ್ವರ ಎಂಬ ಪರ್ಯಾಯನಾಮಗಳಿರಬಹುದೆನಿಸುತ್ತದೆ. ಶ್ರೀಪತಿಪಂಡಿತ, ಪಂಡಿತಾರಾಧ್ಯ, ಶಿವಲೆಂಕ ಮಂಚಣ್ಣಪಂಡಿತ, ನೀಲಕಂಠಶಿವಾಚಾರ್ಯ ಮೊದಲಾದವರ ಸಂಪ್ರದಾಯ ಈ ಶ್ರೋತ್ರೀಯವಾಗಿದ್ದು, ವೇದಮಾರ್ಗೀಯ ನಿಲವನ್ನು ಹೊಂದಿದೆ. ಇಂದಿನ ಪಂಚಾಚಾರ್ಯ(ಚತುರಾಚಾರ್ಯ)ರ ಸಿದ್ಧಾಂತದಲ್ಲಿ ಇದರ ಛಾಯೆಯನ್ನು ಕಾಣಬಹುದು.

ಬಹುಶ: ಇದೇ ಪರಂಪರೆಯ ಚೌಡದಾನಪುರದ ಶಿವದೇವನು "ಅತ್ಯಾಶ್ರಮಮಂ ಧರಿಸಿದ್ದನು. ಇವನದು ಲಿಂಗವನಪ್ಪಿದ ತೋಳ್" ಅಂದರೆ ಇವನು ಲಿಂಗವನ್ನು ಅಪ್ಪುವ ವ್ರತಧರಿಸಿದ್ದನು. ಇದನ್ನು ಬೆಂಬಲಿಸುವಂತೆ ಇಲ್ಲಿಯ ಶಾಸನದ ಮೇಲೆ ಲಿಂಗವನ್ನು ಅಪ್ಪಿದ ಚಿತ್ರವನ್ನು ಬಿಡಿಸಲಾಗಿದೆ. ೧೮ ತರದ ಸ್ನಾನಗಳಲ್ಲಿ ಶ್ರೇಷ್ಠವಾದ ಭಸ್ಮ ಸ್ನಾನವನ್ನು ಮಾಡುತ್ತಿದ್ದನು. ಸ್ವರ್ಗಮುಕ್ತಿಯ ಫಲವನ್ನು ಅಪೇಕ್ಷಿಸದವನಾಗಿದ್ದನು. ಪುಣ್ಯಾಪಾಪದ ಫಲದಿಂದ ನಿರ್ಲಿಪ್ತನಾಗಿ ದೇವರನ್ನು ಪೂಜಿಸುತ್ತಿದ್ದನು. ತನುಗುಣಗಳನ್ನು ಮರೆದು ಆವರಣ ತೊರೆದವನಾಗಿದ್ದನು (ಎಸ್. ಆಯ್. ಆಯ್ ೧೮-೨೪೬ ಕ್ರಿ.ಶ.೧೨೬೩). "ಸೀಮೆಯನುಲ್ಲಂಘಿಸದುದೆ ನೇಮಂ ಧರೆಗೊರಗದಿಪ್ಪುದೆ ನೇಮಂ" ಇತ್ಯಾದಿ

---

೬. Three inscriptiona of Lakshmeswar –E. I. XVI.

ವ್ರತಗಳನ್ನು ಹಿಡಿದು "ವೀರವ್ರತಿ" ಎಂದು ಖ್ಯಾತನಾಗಿದ್ದನು. "ಸೀಮೆಯನುಲ್ಲಂಘಿಸದುದೆ ನೇಮ"ಕಾರಣವಾಗಿ ಕ್ಷೇತ್ರಸನ್ಯಾಸಿಯೆನಿಸಿದ್ದನು. (ಇಲ್ಲಿಯೇ ಬರುವ ಬಸಣ್ಣನವರ ಪ್ರಭಾವಕ್ಕೊಳಗಾದ ಹೇಳಿಕೆಗಳು ಈ ಹೊತ್ತಿಗಾಗಲೇ ಕಾಳಾಮುಖರು ಶರಣಧರ್ಮದಲ್ಲಿ ಲೀನವಾಗುತ್ತಿದ್ದುದನ್ನು ಸೂಚಿಸುತ್ತವೆ -ಎಸ್. ಆಯ್. ಆಯ್. ೧೮-೨೪೪ ಕ್ರಿ. ಶ. ೧೨೬೨).

ಈ ಸಂದರ್ಭದಲ್ಲಿ ಗಮನಿಸಬಹುದಾದ ಇನ್ನೊಂದು ವಿಷಯವೆಂದರೆ, ಕಾಳಾಮುಖದೀಕ್ಷೆ, ಪಾಶುಪತವ್ರತ (ಪಾಶುಪತ ಸುಬ್ರತಾಭರಣರ್), ಮಹಾವ್ರತ, ಮಾಹೇಶ್ವರದೀಕ್ಷೆ ಎಂಬ ಪದಗಳು ಶಾಸನಗಳಲ್ಲಿ ಕಂಡುಬರುತ್ತವೆ. ಇವು ಕ್ರಮವಾಗಿ ನಕುಲೀಶ, ಪಾಶುಪತ, ಸೋಮ, (ಶ್ರೋತ್ರೀಯ)ಶೈವ ಆಚಾರ್ಯರು ಸ್ವೀಕರಿಸುತ್ತಲಿದ್ದ ವಿಶೇಷ ದೀಕ್ಷೆ/ವ್ರತಗಳಾಗಿರಬಹುದು. ಅನ್ಯಮತೀಯರೂ ದೀಕ್ಷೆ (ಮತಾಂತರದೀಕ್ಷೆ ? ಮಂತ್ರದೀಕ್ಷೆ ?) ಪಡೆಯುತ್ತಲಿದ್ದು, ಶಾಸನಗಳಲ್ಲಿ "ಮಾಹೇಶ್ವರದೀಕ್ಷೆ" "ಶೈವದೀಕ್ಷೆ" ಪದಗಳಿಂದ ಈ ಘಟನೆಗಳನ್ನು ಕರೆಯಲಾಗಿದೆ. ಬಾಸವೂರ ೧೪೦ನ್ನಾಳುತ್ತಲಿದ್ದ ಕಲಿಯಮರಸ ಮತ್ತು ಈತನ ವಂಶಜನಾದ ಹೆಮ್ಮಾಡಿಯರಸರು ಕ್ರಮವಾಗಿ ವರುಣಶಿವಪಂಡಿತ(?) ಮತ್ತು ತ್ರಿಭುವನಸಿಂಗಿಪಂಡಿತರಿಂದ "ಮಾಹೇಶ್ವರದೀಕ್ಷೆ" ಪಡೆದ ವಿಷಯ ಶಾಸನಗಳಲ್ಲಿದೆ.[೭] ಗೊಟ್ಟೆಯಹಳ್ಳಿಯ ಬಮ್ಮನಗೌಡನು ತೇಜೋನಿಧಿ ಬ್ರತೀಶ್ವರರಿಂದ "ಶಿವದೀಕ್ಷೆ" ಪಡೆದ ವಿಷಯ ಗೊಡಚಿಕೊಂಡ ಶಾಸನ(೧೨೦೩-೪)ದಲ್ಲಿದೆ (ನಾಗರಖಂಡ-೭೦: ಒಂದು ಅಧ್ಯಯನ ಪು. ೩೦೧).

ಪಠ್ಯ:

ಈವರೆಗೆ ಚರ್ಚಿಸಿರುವ ನಾಲ್ಕೂ ಶೈವಗಳ ಧಾರ್ಮಿಕಪಠ್ಯವನ್ನು ಬೇರಳಿಟ್ಟು ಗುರುತಿಸುವುದು ಕಠಿಣ. ಬಹಳಷ್ಟು ಶಾಸನಗಳು ಶಕ್ತಿಪರ್ಷೆಯ ನಕುಲೀಶ, ಸಿಂಹಪರ್ಷೆಯ ಪಾಶುಪತ-ಇಬ್ಬರಿಗೂ "ಲಾಕುಳಾಗಮ"ವು ಪಠ್ಯವೆಂಬಂತೆ ಹೇಳುತ್ತವೆ. ಆದರೆ ಈ ಆಗಮ ಇನ್ನೂ ಸಿಕ್ಕಿಲ್ಲ. ಮೇಲೆ ಹೇಳಿದ ಹಗರಟಗಿ ಶಾಸನೋಕ್ತ "ನಂದಿಕೇಶ್ವರ ಲಾಕುಳಾಗಮ" ಕೃತಿಯನ್ನು ಇವರು ಮನ್ನಿಸುತ್ತಿರಬಹುದು. ಈ ಸಂದರ್ಭದಲ್ಲಿ ಯಾದವ ಭಿಲ್ಲಮನ ಕಾಲದ ಸಾಲೊಟಗಿ ಶಾಸನವು (ಎಸ್. ಆಯ್. ಆಯ್ XX -೧೬೯) ಅಲ್ಲಿಯ ಭೋಗೇಶ್ವರದೇವರಿಗಾಗಿ ದತ್ತಿಸ್ವೀಕರಿಸಿದ ಅಮರೇಶ್ವರಮುನಿಯನ್ನು "ಆ ದೇವಗ್ಗಾರ್ಗಚಾರ್ಯರ್ವ್ವೇದಾಗಮ ಸೋಮಶಂಭು ಲಾಕುಳಸಿದ್ಧಾನ್ತಾದಿ ಸಕಳಾಗಮ[ಜ]ರ್ಮ್ಮೇದಿನಿ ಸಂಸ್ತುತ್ಯನೆನಿಪ ಮುನಿಯಮರೇಶಂ" ಎಂದು ವರ್ಣಿಸುತ್ತದೆ. ಇದರಿಂದ ಲಾಕುಳ ಸಿದ್ಧಾಂತದವನಾಗಿರುವ ಇವನು, ಸೋಮಶಂಭು ಕೃತಿಯ ಅನುಯಾಯಿಯೆಂದೂ ತಿಳಿದುಬರುತ್ತದೆ. ಈ ಕೃತಿಯ ನಿಜನಾಮ ಸೋಮಶಂಭುಪದ್ಧತಿ. ಕರ್ತೃನಾಮದಿಂದಲೇ ಪ್ರಚಾರದಲ್ಲಿರುವ ಇದರ ಕಾಲ ಸುಮಾರು ೧೧ನೆಯ ಶತಮಾನವೆಂದು ವಿದ್ವಾಂಸರ ಊಹೆ. ಏಕೋತ್ತರ ಶತಸ್ಥಲದ ಮಹಾಲಿಂಗದೇವ ಮತ್ತು ಕನ್ನಡ ಆರಾಧ್ಯಚರಿತೆಯ ಕರ್ತೃ ನೀಲಕಂಠಾಚಾರ್ಯರ (೧೪೮೫) ಗುರುಪರಂಪರೆಯ ಪ್ರಾಚೀನ ವ್ಯಕ್ತಿ, ಈ ಸೋಮಶಂಭು. ಶರಣರ ಸಮಕಾಲೀನನಾದ ಶಿವಲೆಂಕ ಮಂಚಣ್ಣನಿಗಿಂತ ಇವನು ಎರಡು ತಲೆಮಾರು ಹಿರಿಯನೆಂದು

---

೭. EI XIX -(೧೪೦....... ಕ್ರಿ. ಶ. ೧೦೬೫) ೧೯೨. ದೇವಗಿರಿ ಕ್ರಿ. ಶ. ೧೧೨೧

ಮಹಾಲಿಂಗದೇವನ ಏಕೋತ್ತರ ಶತಸ್ಥಲ, ಆರಾಧ್ಯಚರಿತ್ರೆಗಳು ತಿಳಿಸುತ್ತವೆ. ಆರಾಧ್ಯಚರಿತೆಯಲ್ಲಿ ಇವನನ್ನು

ನತಜನ ಕಿರೀಟಮಂಡಿತ ಪಾದನಖರ ಸಂ
ತತಿ ಕಾಂತಿವಿಸರ ಚಂದ್ರಾತಪಂ ಭವತಾಪ
ವಿತತಿಯೊಳ್ಬೆಂದು ಮಮ್ಮಲನೆ ಮರುಗುವ ಲೋಕಕೊಲ್ದು ಮಿಗೆ ತಂಪನೀಯೆ।
ವಿತತ ದುರ್ಮತಕುಮುದ ಚಂಡಹರಿದಶ್ವನೆನಿ
ಪತಿ ವಿಶದಕೀರ್ತಿ ವಿಶ್ರುತಮಾಗೆ ವಿಶ್ವದೊಳ್
ನುತಿವಡೆದು ಶೋಭಿಸುವ ಶ್ರೀ ಸೋಮಶಂಭುದೇಶಿಕನೆಮ್ಮ ಸಲಹುತಿರ್ಕೆ॥

ಎಂದು ಸ್ತುತಿಸಲಾಗಿದೆ. ಈತನ ಸೋಮಶಂಭುಪದ್ಧಯಿಂದ ಸಾನಂದಚರಿತೆ (ಪುಟ ೭೫, ೧೫೬) ಮತ್ತು ಗಣಭಾಷಿತ ರತ್ನಮಾಲೆ(ಪುಟ ೧೪೩)ಗಳು ಶ್ಲೋಕಗಳನ್ನು ಉದ್ಧರಿಸಿವೆ. ರಥೋದ್ಧರಣೆ ವಾಚ್ಯ(ಕರ್ತೃ ಸಂಗನಬಸವ)ಹೆಸರಿನ ಕನ್ನಡ ಕೃತಿಯು ಪ್ರಾಚೀನಕಾಲದಲ್ಲಿ ಆಗಮಗಳನ್ನು ಸಂಗ್ರಹಿಸಿದ ಜಕ್ಕಣಾರ್ಯ, ಮಾಯಿದೇವ, ಕೆರೆಯ ಪದ್ಮರಸ, ಗುಬ್ಬಿಯ ಮಲ್ಲಣ್ಣ, ಪಾಲ್ಕುರಿಕೆ ಸೋಮೇಶ್ವರರ ಸಾಲಿನಲ್ಲಿ ಈ ಸೋಮಶಂಭುವಿನ ಹೆಸರನ್ನೂ ಪ್ರಸ್ತಾಪಿಸುತ್ತಾನೆ. ಇಷ್ಟನ್ನು ಬಿಟ್ಟರೆ ಇವರ ಬೇರೆ ಯಾವುದೇ ಗ್ರಂಥದ ಹೆಸರಾಗಲೀ ಸೂಚನೆಯಾಗಲೀ ಕಂಡುಬರುವುದಿಲ್ಲ.

ಇನ್ನುಳಿದ ಸೋಮಸಿದ್ಧಾಂತಿ ಮತ್ತು (ಶ್ರೋತ್ರೀಯ)ಶೈವರಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಸಾಮಾನ್ಯವೆಂಬಂತೆ ವೇದವೇದಾಂತದ ಉಲ್ಲೇಖ ಬರುತ್ತಿದ್ದರೂ ನಿರ್ದಿಷ್ಟ ಪಠ್ಯದ ಸೂಚನೆ ಸಿಗುವುದಿಲ್ಲ.

■■

ಆಕರ : ಮಾರ್ಗ ಸಂಪುಟ-೪

೬೪

ಕೊಲ್ಲಿಪಾಕೆಯ ಕನ್ನಡ ಶಾಸನಗಳು : ಧಾರ್ಮಿಕತೆ

ಆಂಧ್ರಪ್ರದೇಶದ ನಲ್ಗೊಂಡ ಜಿಲ್ಲೆಯ ಭುವನಗಿರಿ ತಾಲೂಕಿನ ಗ್ರಾಮವಾಗಿರುವ ಇಂದಿನ ಕೊನಲುಪಾಕ (ಕೊಲ್ಲಿಪಾಕೆ) ಪ್ರಾಚೀನಕಾಲದಲ್ಲಿ ರಾಜಕೀಯ, ಧಾರ್ಮಿಕ ದೃಷ್ಟಿಯಿಂದ ಮಹತ್ವದ ಸ್ಥಳವಾಗಿದ್ದಿತು. ವೀರಶೈವ ಪಂಚಾಚಾರ್ಯರಲ್ಲೊಬ್ಬರಾದ ರೇವಣಸಿದ್ಧೇಶ್ವರನು ಇಲ್ಲಿಯ ಸೋಮೇಶ್ವರಲಿಂಗದಿಂದ ಉದ್ಭವವಾದರೆಂಬ ಪ್ರತೀತಿ ಕಾರಣವಾಗಿ ಈಗಲೂ ಈ ಧರ್ಮೀಯರ ಗಮನ ಸೆಳೆಯುವ ಸ್ಥಳವಾಗಿ ಪರಿಣಮಿಸಿದೆ. ಈ ಗ್ರಾಮದಲ್ಲಿ ೩೬ ಕನ್ನಡ ಶಾಸನಗಳಿದ್ದು, ಹಂಪಿಯ ಕನ್ನಡ–ವಿಶ್ವವಿದ್ಯಾಲಯದ ಆಂಧ್ರಪ್ರದೇಶದ ಕನ್ನಡ ಶಾಸನಗಳು ಹೆಸರಿನ ಎರಡನೆಯ ಸಂಪುಟದಲ್ಲಿ ಅಚ್ಚಾಗಿವೆ. ಇವಲ್ಲದೆ ಆಂಧ್ರಪ್ರದೇಶದ ಚರ್ದ(ನಂ ೫೩೪), ಚಂದುಪಟ್ಲ (೫೮೧), ಅಕನೂರು (೪೧೮), ಚಿಲ್ಕೂರು (೫೨೮, ೫೩೦), ಪಾನುಗಲ್ಲ (೫೩೫), ಗೂಡೂರು (೪೧೯), ಸೈದಾಪುರ (೫೯೪), ಕನ್ನಡ ಶಾಸನಗಳಲ್ಲಿಯೂ ಈ ಊರು ಪ್ರಸ್ತಾಪವಾಗಿದೆ.

ಧಾರ್ಮಿಕವಾಗಿ ಹೇಳುವುದಾದರೆ ಇಲ್ಲಿ ಜೈನ, ಶೈವ, ವೈಷ್ಣವ–ಈ ಮೂರು ಧರ್ಮಗಳು ಬೆಳೆದು ಬಂದಿವೆ. ಬಹುಶ: ಜೈನ ಹಳೆಯದು, ಶೈವ ಆಮೇಲಿನದಾದರೂ ಹೆಚ್ಚು ಪ್ರಸಿದ್ಧ, ವೈಷ್ಣವ ಅಷ್ಟೇನೂ ಪ್ರಸಿದ್ಧಿ ಪಡೆದಿಲ್ಲ.

ಜೈನ ಶಾಸನಗಳು ಒಂಬತ್ತು. (೫೪೬,೫೪೭,೫೪೮,೫೪೯,೫೫೦,೫೪೯,೫೭೧, ೫೭೫, ೫೯೯) ಇದ್ದು, ೧೦ನೆಯ ಶತಮಾನದ ಅಂತ್ಯದಿಂದ ೧೧ನೆಯ ಶತಮಾನದ ಅಂತ್ಯದ ವರೆಗೆ ಹರಡಿಕೊಂಡಿವೆ.

ರಾಷ್ಟ್ರಕೂಟ ಮೂರನೆಯ ಕೃಷ್ಣನ ಸಾಮಂತನಾದ ದ್ವಿತೀಯ ಶಂಕರಗಂಡನು ಕೊಲ್ಲಿಪಾಕೆಯಲ್ಲಿ ಮಾಣಿಕ್ಯಜಿನವನ್ನು ಸ್ಥಾಪಿಸಿದ ವಿಷಯ "ಮಾಣಿಕ್ಯ ಜಿನಚರಿತೆ"ಯಲ್ಲಿ ಬರುತ್ತದೆ. ಪಂಪನು ಆದಿತೀರ್ಥಂಕರನನ್ನು ಮಾಣಿಕ್ಯಜಿನನೆಂದು ಕರೆಯುವಲ್ಲಿ ಈ ಕೊಲ್ಲಿಪಾಕೆ ದೈವತವೇ ಪ್ರೇರಣೆ ನೀಡಿರಬಹುದು. ಈ ಮಾಣಿಕ್ಯತೀರ್ಥೇಶ್ವರನ ಉಲ್ಲೇಖ ಕಾಕತೀಯ ಪ್ರತಾಪರುದ್ರ ಬರೆಯಿಸಿದ ಇಲ್ಲಿಯ ತೇದಿಯಿಲ್ಲದ ಶಾಸನದಲ್ಲಿ (ನಂ ೫೪೮) ಕಾಣಸಿಗುತ್ತದೆ. ನಂ ೫೪೯ನೆಯ ಶಾಸನದಲ್ಲಿ ಬರುವ "ರಾಷ್ಟ್ರಕೂಟೋನ್ನತಿ ಸ...... ನ್ನುತ ಜೈನಗೇಹ" ಎಂಬ ಮಾತು ಈ ಬಸದಿಯನ್ನೇ ಸೂಚಿಸಿತ್ತಿರಬಹುದು. ನಂ ೫೫೦ನೆಯ ಶಾಸನವು (೯೫೮)ವರ್ತಕ ಸಂಘವೊಂದು

ಬಸದಿಗೆ ದಾನನೀಡಿದುದನ್ನು ಸೂಚಿಸುತ್ತಿದ್ದು, ಅದು ಇದೇ ಬಸದಿಯಾಗಿರಬಹುದು. ನಂ ೫೯ನೆಯ ಶಾಸನದಲ್ಲಿ (೧೧೯೩) ಬಹುಶಃ ಶಂಕರಗಂಡನ ವಂಶದ ಮಾಂಡಳಿಕ ಗೋವುರಸನು ವಿಟ್ಟುಕುಲತಿಲಕಜಿನಾಲಯಕ್ಕೆ ದಾನನೀಡಿದ ವಿವರವಿದೆ. ಇದರ ಸರಿಯಾದ ಪಾಠ ಜಿಟ್ಟುಕುಲತಿಲಕಜಿನಾಲಯವಿದ್ದರೆ, ಇದೂ ಮಾಣಿಕ್ಯಜಿನನನ್ನೇ ಸೂಚಿಸುವುದೆಂದು ಇಟ್ಟುಕೊಳ್ಳಬಹುದು. ಅಕನೂರ ಶಾಸನ (೪೧೮)ರಲ್ಲಿ ಜೈನ ಶಂಕರಗಂಡನಿಗೆ "ಜಿಟ್ಟನಾರಾಯಣ" ಎಂಬ ಬಿರುದು ಬಳಸಿರುವದರಿಂದ ಹೀಗೆ ಊಹಿಸಬಹುದಾಗಿದೆ.

ನಂ ೫೪೬ನೆಯ ಶಾಸನದಲ್ಲಿ ಪಾರ್ಶ್ವನಾಥತೀರ್ಥಂಕರನ ಉಲ್ಲೇಖವಿದೆ; ತೇದಿ ನಮೂದಿಸಿಲ್ಲ. ೫೪೭ನೆಯ ಶಾಸನ ಪುಷ್ಪಸೇನ ಹೆಸರಿನ ಮುನಿಯನ್ನು ಉಲ್ಲೇಖಿಸುತ್ತದೆ. ೫೯೯, ೫೭೧ನೆಯ ಶಾಸನಗಳು ಜೈನದತ್ತಿಯನ್ನೊಳಗೊಂಡಿದೆ. ೫೭೫ನೆಯ ಶಾಸನ ನಾಲ್ಕು ಬಸದಿಗಳನ್ನು ಉಲ್ಲೇಖಿಸುತ್ತದೆ. ಇದಲ್ಲದೆ ದ್ವಿತೀಯ ಶಂಕರಗಂಡನು ರೇವುಂಡಿ, ನೇರಿಲಗಳಲ್ಲಿ ಕಟ್ಟಿಸಿ ನೀಡಿದ್ದ ದಾನಗಳು ನಾಶವಾಗಿದ್ದವೆಂದೂ, ತೃತೀಯ ಶಂಕರಗಂಡ ಇವುಗಳನ್ನು ಪುನರುಜ್ಜೀವನಗೊಳಿಸಿದನೆಂದೂ ತಿಳಿಸುತ್ತದೆ.

ಕಾಲದೃಷ್ಟಿಯಿಂದ ಈ ಗ್ರಾಮದಲ್ಲಿ ಜೈನ ಚಟುವಟಿಕೆ ಪ್ರಾಚೀನವಾದರೂ, ಹೆಚ್ಚು ವೈಭವದಿಂದ ಮೆರೆದುದು (ವೀರ)ಶೈವ ಚಟುವಟಿಕೆ. ಪಂಚಮಠದ ಉಲ್ಲೇಖ ೫೫೬ ಮತ್ತು ೫೭೧ನೆಯ ಶಾಸನಗಳಲ್ಲಿದೆ (ಈ ಪಂಚಮಠಗಳಿಗೂ ಪಂಚಪೀಠಗಳಿಗೂ ಸಂಬಂಧವಿಲ್ಲ). ಉತ್ತರೇಶ್ವರ, ಮಲ್ಲಿಕಾರ್ಜುನ, ಸೋಮೇಶ್ವರ-ಹೀಗೆ ಮೂರು (ವೀರ)ಶೈವ ದೇವಾಲಯಗಳ ಪ್ರಸ್ತಾಪವಿಲ್ಲಿದೆ. ಇವೆಲ್ಲ ೧೧ನೆಯ ಶತಮಾನದವು. ಉತ್ತರೇಶ್ವರದೇವರಿಗಾಗಿ ಕಾಳಾಮುಖ ರಾಮೇಶ್ವರಪಂಡಿತರಿಗೆ (ನಂ ೫೪೫, ಕ್ರಿ. ಶ. ೧೦೮೮) ದಾನನೀಡಲಾಗಿದ್ದು, ಇಲ್ಲಿ ವಿದ್ಯಾಭ್ಯಾಸ, ಅನ್ನಸತ್ರ ವ್ಯವಸ್ಥೆಯಿದ್ದಿತು. ಈ ದಾನನೀಡಿದವ ಕೊಲ್ಲಿಪಾಕೆ ಏಳುಸಾವಿರವನ್ನು ಆಳುತ್ತಲಿದ್ದ ಕಂದೂರ ತೊಂಡರಸ ಚೋಳಮಹಾರಾಜ. ಪೊಟ್ಟಲಕೆರೆಯಲ್ಲಿ ಜಯಸಿಂಹನ (೧೦೧೫-೪೨)ಆಸ್ಥಾನದಲ್ಲಿ ದೇವರದಾಸಿಮಯ್ಯನು ಜೈನರನ್ನು ವಾದದಲ್ಲಿ ಸೋಲಿಸಿ ೭೦೦ ಬಸದಿಗಳನ್ನು ನಾಶಮಾಡಿ ಉತ್ತರೇಶ್ವರದೇವರನ್ನು ಸ್ಥಾಪಿಸಿದನೆಂದು ವೀರಶೈವ ಕಾವ್ಯಗಳು ಹೇಳುತ್ತವೆ. ಈ ದೇವರ ಉಲ್ಲೇಖ ಪೊಟ್ಟಲಕೆರೆ ಶಾಸನಗಳಲ್ಲಿ ಇಲ್ಲವಾದರೂ ಕರ್ನಾಟಕಾಂಧ್ರ ಪ್ರದೇಶದ ೧೦-೧೨ ಕಡೆಗಳಲ್ಲಿ ಹಾಗೂ ಕೊಲ್ಲಿಪಾಕೆಯಲ್ಲಿ ಕಂಡುಬರುವುದು ವಿಶೇಷವೆನಿಸಿದೆ.

ಈ ಗ್ರಾಮದಲ್ಲಿ ಮಲ್ಲಿಕಾರ್ಜುನ ದೇವಾಲಯವಿದ್ದ ಉಲ್ಲೇಖ (ನಂ ೫೬೨, ಕ್ರಿ.ಶ. ೧೧೧೧, ನಂ ೫೭೩. ಕ್ರಿ. ಶ. ೧೦೮೧)ಎರಡು ಶಾಸನಗಳಲ್ಲಿದೆ. ಮೊದಲಿನದನ್ನು ಮಲ್ಲಿಕಾರ್ಜುನನನೆಂದೂ, ಎರಡನೆಯದನ್ನು ಚಡೆಯ ಮಲ್ಲೇಶ್ವರನೆಂದೂ ಕರೆಯಲಾಗಿದೆ. ಇವೆರಡೂ ಒಂದೇ ಎಂದು ನಾವು ಭಾವಿಸಿದ್ದೇವೆ. ಚಾಲುಕ್ಯಗಂಗಪೆರ್ಮಾಡಿ ಮಂಡಳೇಶ್ವರ ಕುಮಾರ ಸೋಮೇಶ್ವರನು ಕೊಲ್ಲಿಪಾಕಿಯನ್ನು ಆಳುತ್ತಲಿದ್ದ ಸಂದರ್ಭದಲ್ಲಿ ಕಾಳಿಮಯ್ಯ ದಂಡನಾಯಕ ದಾನನೀಡಿದುದು ಮೊದಲನೆಯ ಶಾಸನದ ವಿಷಯವಾಗಿದೆ. ಈ ದೇವಾಲಯ ಮಾಡಿಸಿದವನು ತಿಕ್ಕಪಯ್ಯನೆನ್ನಲಾಗಿದೆ. ಎರಡನೆಯ ಶಾಸನವು ಮಂಡಳೇಶ್ವರ ಕೊಲ್ಲಿಪಾಕಿಪುರವರೇಶ್ವರ ಕಾಮರಸನು ಸಾವಂತಿಕೆ ಪಡೆದು ಭುಜಂಗಾವಳಿಯ ಶ್ರೀಕಂಠಪಂಡಿತದೇವರಿಗೆ ಚಡೆಯ ಮಲ್ಲೇಶ್ವರದೇವರಿಗಾಗಿ ದಾನ ನೀಡಿದುದನ್ನು

ತಿಳಿಸುತ್ತದೆ. ಇಲ್ಲಿ ವಿದ್ಯಾಭ್ಯಾಸದ ವ್ಯವಸ್ಥೆಯೂ ಇದ್ದುದಾಗಿ ತಿಳಿದುಬರುತ್ತದೆ.

ಪ್ರಸ್ತುತ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ, ಮೇಲೆ ಹೇಳಿದ ಉತ್ತರೇಶ್ವರ ದೇವಾಲಯದಲ್ಲಿ ಕಾಳಾಮುಖ ರಾಮೇಶ್ವರಪಂಡಿತರು (ಕ್ರಿ.ಶ. ೧೦೮೮), ಈ ಮಲ್ಲೇಶ್ವರದೇವಾಲಯದಲ್ಲಿ ಭುಂಜಂಗಾವಳಿಯ ಶ್ರೀಕಂಠಪಂಡಿತರು (೧೦೮೧) ಆಚಾರ್ಯರಾಗಿರುವುದು. ಇವರಿಬ್ಬರೂ ಲಾಕುಳ ಶೈವರಾಗಿರುವುದರಿಂದ ಕೊಲ್ಲಿಪಾಕಿಯು ಲಾಕುಳಶೈವರ ಕೇಂದ್ರವಾಗಿದ್ದಿತೆನ್ನುವುದು ಅವಶ್ಯ ಗಮನಿಸಬೇಕಾದ ಸಂಗತಿಯಾಗಿದೆ.

ಈ ಗ್ರಾಮದ (ವೀರ)ಶೈವ ದೈವತಗಳಲ್ಲಿ ನಮ್ಮ ತೀವ್ರ ಗಮನ ಸೆಳೆಯುವುದೆಂದರೆ ಸೋಮೇಶ್ವರ. ೫೫೩(೧೦೬೭), ೫೫೪(೧೦೭೭), ೫೬೩(೧೧೦೮), ೫೬೪ (೧೯೮೮), ೫೬೫(೧೧೯೯), ೫೬೬(೧೦೮೭), ೫೬೭(೧೯೯೧)ನೆಯ ಶಾಸನಗಳು ಈ ದೇವರ ದಾನವನ್ನೊಳಗೊಂಡಿವೆ. ಕೊಲ್ಲಿಪಾಕೆ ೭೦೦೦ ಆಳುತ್ತಲಿದ್ದ ಮಹಾಮಂಡಳೇಶ್ವರ ಕೋಟೆಯ ಭೀಮರಸನು (ನಂ ೫೫೩)ಕ್ರಿ. ಶ. ೧೦೬೭ರಲ್ಲಿ ದಾನನೀಡಿದ್ದಾನೆ. ದಂಡನಾಯಕ ಚಿದ್ದರಸನು ಸೋಮೇಶ್ವರನಿಗೆ ದಾನನೀಡಿದುದನ್ನು ೫೬೪ನೆಯ (ಕ್ರಿ. ಶ. ೧೯೮೮) ನಂಬರಿನ ಶಾಸನ ತಿಳಿಸುತ್ತದೆ. ನಂ ೫೬೩ನೆಯ (ಕ್ರಿ. ಶ. ೧೧೦೮) ಶಾಸನವು ಅನಂತಪಾಲನ ಆಜ್ಞೆಯಂತೆ ಪೆರ್ಗಡೆ ಗೋಪತಿಯಯ್ಯನು ಸೋಮೇಶ್ವರದೇವರಿಗೆ ನೀಡಿದ ದಾನವನ್ನೊಳಗೊಂಡಿದೆ. ನಂ ೫೬೫ನೆಯ ಶಾಸನವು (ಕ್ರಿ. ಶ. ೧೧೯೯) ಚಾಲುಕ್ಯ ಗಂಗಪೆರ್ಮಾಡಿ ಮಂಡಳೇಶ್ವರ ಕುಮಾರ ಸೋಮೇಶ್ವರನು ಕೊಲ್ಲಿಪಾಕೆಯನ್ನು ಆಳುತ್ತಲಿರುವಾಗ ಸೋಮೇಶ್ವರದೇವರಿಗೆ ಬಿಟ್ಟ ದಾನವನ್ನು ಸೂಚಿಸುತ್ತದೆ. ಇಲ್ಲಿ ನಂ ೫೫೪, ೫೬೬, ೫೬೭- ಈ ಮೂರು ಶಾಸನಗಳು ತುಂಬ ಮಹತ್ವದ್ದಾಗಿವೆ. ಏಕೆಂದರೆ ಸೋಮೇಶ್ವರದೇವರಿಗೆ ಸಂದ ಈ ಮೂರು ದತ್ತಿಗಳು ತೊಂಡಯ ಚೋಳನ ಸಂದರ್ಭದಲ್ಲಿ ಹುಟ್ಟಿವೆ. ಇಲ್ಲಿ ಇವನನ್ನು "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರನುದಾರಮಹೇಶ್ವರ ಸೂರ್ಯವಂಶೋದ್ಭವ ಕುಳತಿಲಕ ಕಾಸ್ಯಪಗೋತ್ರ ಕರಿಕಾಲಾನ್ವಯ ನಾಮಾದಿ ಪ್ರಶಸ್ತಿ ಸಹಿತಂ ಶ್ರೀಮನ್ಮಹಾ ಮಣ್ಡಳೇಸ್ವರನೇಱುವಯ ತೊಣ್ಡರಸ"(ನಂ ೫೫೪, ಕ್ರಿ. ಶ. ೧೦೭೭), "ಕನ್ದೂರ ತೊಣ್ಡಯಚೋಳ ಮಹಾರಾಜಕ್ಕೊಲ್ಲಿಪಾಕೆ ಎಚ್ಛಾಸಿರಮುಮಂ ಸುಖದಿನಾಳುತ್ತಿ ಮಿಂಟ್ದು......" (ನಂ ೫೬೬,ಕ್ರಿ. ಶ. ೧೦೮೭), "ಸಮಧಿಗತ ಪಂಚಮಹಾಬ್ದ ಮಹಾಮಂಡಳೇಶ್ವರಂ ವೀರಮಹೇಶ್ವರಂ ಕೋಡೂರ್ಪುರವರೇಶ್ವರಂ ಸೂರ್ಯ ವಂಸೋದ್ಭವಕುಳತಿಳಕಂ ಕಾಸ್ಯಪಗೋತ್ರ ಕರಿಕಾಲಾನ್ವಯ ನಾಮಾದಿ ಸಮಸ್ತ ಪ್ರಸಸ್ತಿ ಸಹಿತಂ ಶ್ರೀಮನ್ಮಹಾಮಣ್ಡಳೇಶ್ವರಂ ಕನ್ದೂರ ತೊಣ್ಡಯಚೋಳ ಮಹಾರಾಜಂ ಕೊಳ್ಳಿಪಾಕೆ ಎಚ್ಛಾಸಿರಮುಮಂ ಸುಖದಿನಾಳುತ್ತಮಿಂಟ್ದು......"(ನಂ ೫೬೭, ಕ್ರಿ.ಶ. ೧೯೯೧) ಎಂದು ಕರೆಯಲಾಗಿದೆ.

ಈ ಮೂರು ಪ್ರಶಸ್ತಿಗಳು ಹೆಚ್ಚು ಕಡಿಮೆ ಒಂದೇ ಇವೆ. ಆದರೆ ಮೂರರಲ್ಲಿಯೂ ತಪ್ಪದೇ ಬಂದ ಕರಿಕಾಲಾನ್ವಯ ಎಂಬುದು, ಈತನು ಕರಿಕಾಲಚೋಳನ ವಂಶಪರಂಪರೆಯವನೆಂದು ಸೂಚಿಸುತ್ತದೆ. "ಕೋಡೂರ್ಪುರವರೇಶ್ವರ" ಎನ್ನುವಲ್ಲಿ ಈ ಮನೆತನ ಮೂಲತಃ ಕೋಡೂರು ಗ್ರಾಮಕ್ಕೆ ಸಂಬಂಧಿಸಿದುದೆಂದು ತಿಳಿದುಬರುತ್ತದೆ. ಇವನ ಹೆಸರಿನ ಹಿಂದಿರುವ ಕಂದೂರ ಎಂಬುದೂ ಆ ಗ್ರಾಮವನ್ನೇ ಸೂಚಿಸಿತ್ತಿರಬಹುದು. ಇದೇನೇ ಇರಲಿ. ಇವನು ಕೊಳ್ಳಿಪಾಕೆ ರಾಜಧಾನಿಯಿಂದ

ಕೊಳ್ಳಿಪಾಕೆ ೭೦೦೦ವನ್ನು ಮಂಡಳೇಶ್ವರನಾಗಿ ಆಳುತ್ತಿದ್ದನೆಂದು ವ್ಯಕ್ತವಾಗುತ್ತದೆ. ಇವನ ಬಗ್ಗೆ ನಾವು ಸುದೀರ್ಘ ವಾಗಿ ಚರ್ಚಿಸಲು ಒಂದು ಕಾರಣವಿದೆ. ಅದು: ಈ ಗ್ರಾಮದ ಸೋಮೇಶ್ವರದೇವರಲ್ಲಿ ಉದ್ಭವಿಸಿದನೆನ್ನಲಾದ ರೇವಣಸಿದ್ಧೇಶ್ವರನು ಕಂಚಿಯ ಚೋಳ ಅರಸನ ಆಸ್ಥಾನಕ್ಕೆ ಹೋಗಿದ್ದ ವಿಷಯ ಕಾವ್ಯಗಳಲ್ಲಿದೆ. ಆ ಅರಸನು ಈ ಕೊಲ್ಲಿಪಾಕಿಯ ಚೋಳನೇ ಆಗಿರುವ ಸಾಧ್ಯತೆಯಿದೆ. ೧೧೬೭ರಲ್ಲಿ ಇದೇ ಸೋಮೇಶ್ವರನಿಗೆ ದಾನನೀಡಿದವನೂ ಕೊಲ್ಲಿಪಾಕೆ ೭೦೦೦ವನ್ನು ಮಹಾಮಂಡಳೇಶ್ವರನಾಗಿ ಆಳುತ್ತಿದ್ದವನೂ ಆದ ಕೋಟೆಯ ಭೀಮರಸನು ಚೋಳಸಾಮನ್ತ ಬೃಕೋದರಂ, ಚೋಳ ಮ್ರಿಗಸಾರ್ದೂಳಂ, ಮಲ್ಲಚೋಳ ಮಸ್ತಕಸೂಳಂ ಎಂದು ತನ್ನನ್ನು ಕರೆದುಕೊಂಡಿದ್ದಾನೆ (ನಂ ೫೫೩). ಬಹುಶ: ಮೇಲೆ ಹೇಳಿದ ಚೋಳವಂಶಕ್ಕೂ ಇವನಿಗೂ ವೈರತ್ವವಿರಬೇಕೆನಿಸುತ್ತದೆ. ಕೊಲ್ಲಿಪಾಕೆಯ ಪ್ರಸಿದ್ಧ ಶೈವದೇವಾಲಯಗಳಲ್ಲಿ ಉತ್ತರೇಶ್ವರ, ಮಲ್ಲಿಕಾರ್ಜುನ (ಮಲ್ಲೇಶ್ವರ)ದೇವಾಲಯಗಳ ವಿಷಯವಾಗಿ ಕಾಳಾಮುಖ ಆಚಾರ್ಯರ ಉಲ್ಲೇಖ ಬಂದರೆ, ಸೋಮೇಶ್ವರ ದೇವಾಲಯಕ್ಕೆ ಸಂಬಂಧಿಸಿದುವು ಏಳು ಶಾಸನಗಳಿದ್ದರೂ ಒಂದರಲ್ಲಿಯೂ ಆಚಾರ್ಯರ ಹೆಸರು ಬರದಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ಸೋಮೇಶ್ವರದೇವಾಲಯದ ಪರಿಸೂತ್ರದಲ್ಲಿ ನನ್ನಿನಾರಾಯಣ ವಿಷ್ಣುದೇವರ ಗುಡಿ ಇದ್ದಿತೆಂದೂ ನಂ ೫೫೩ರ ಶಾಸನ (೧೧೬೭)ತಿಳಿಸುತ್ತದೆ. ಮಲ್ಲಿಕಾರ್ಜುನ, ಉತ್ತರೇಶ್ವರ ದೇವಾಲಯಗಳಲ್ಲಿ ವಿದ್ಯಾಭ್ಯಾಸದ ವ್ಯವಸ್ಥೆಯಿದ್ದಿತು. ಸೋಮೇಶ್ವರ ದೇವಾಲಯದ ಸಂದರ್ಭದಲ್ಲಿ ಅಂಥ ಉಲ್ಲೇಖವೇ ಇಲ್ಲ. ಒಂದು ವೇಳೆ ರಾಜನ ಹೆಸರಿನಲ್ಲಿ ಸ್ಥಾಪಿತವಾಗಿದ್ದರೆ ಇದು ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಅಣ್ಣ ಸೋಮೇಶ್ವರ II ನ(೧೦೬೮–೭೬) ಇಲ್ಲವೆ ತಂದೆ ಸೋಮೇಶ್ವರ Iನ (೧೦೪೩–೬೮) ಹೆಸರಿನ ಶಿವಲಿಂಗವಾಗಿರಬಹುದು. ಹೀಗೆ ಕೊಲ್ಲಿಪಾಕೆಯ ಸೋಮೇಶ್ವರಲಿಂಗ ಬಹಳ ಪ್ರಾಚೀನವೆಂದರೆ ೧೦೪೩–೬೮ರ ಮಧ್ಯ ಸ್ಥಾಪಿತವಾಗಿದ್ದರೆ ಈ ಲಿಂಗದಲ್ಲಿ ಹುಟ್ಟಿದನೆನ್ನಲಾದ ಪಂಚಾಚಾರ್ಯರಲ್ಲೊಬ್ಬನಾದ ರೇವಣಸಿದ್ಧನು ಈ ಮಿತಿಗೆ ಹಿಂದೆ ಹೋಗಲಾರ. ಈ ದೇವರ ಪ್ರಥಮ ಉಲ್ಲೇಖ ಕ್ರಿ.ಶ. ೧೧೬೭ರಲ್ಲಿ (ನಂ ೫೫೩) ಬರುವುದನ್ನು ಇಲ್ಲಿ ನೆನೆಯಬೇಕು. ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಎಲ್ಲಿಯೂ ರೇವಣಸಿದ್ಧನ ನೇರ ಉಲ್ಲೇಖವಾಗಲೀ, ಪರೋಕ್ಷ ಪ್ರಸ್ತಾಪವಾಗಲೀ ಕಂಡುಬರುವುದಿಲ್ಲ.

(ವೀರ)ಶೈವವನ್ನು ಕುರಿತು ಇನ್ನಷ್ಟು ಚರ್ಚೆ: ದ್ವಿತೀಯ ಶಂಕರಗಂಡ ಈ ಕೊಲ್ಲಿಪಾಕೆಯಲ್ಲಿ ಸಾಮಂತನಾಗಿ ಆಳುತ್ತಿದ್ದನು. ಈ ಮನೆತನದ ಮೂರನೆಯ ಶಂಕರಗಂಡನು ತನ್ನನ್ನು ಮೈಲಾರದೇವ ಲಬ್ಧವರ ಪ್ರಸಾದಂ (ನಂ ೫೬೦, ಕ್ರಿ.ಶ. ೧೦೭೭)ಎಂದು ಕರೆದುಕೊಂಡಿದ್ದಾನೆ. ಇದೇ ವಂಶದ ಅಸಗನು ಚಿಲ್ಕೂರಿನಲ್ಲಿ ಅಸಗೇಶ್ವರ ಶಿವಲಿಂಗ ಸ್ಥಾಪಿಸಿದುದನ್ನು ಅಲ್ಲಿಯ ಮೂರು ಶಾಸನಗಳು (ನಂ ೫೨೭, ೫೨೮, ೫೨೯)ಸೂಚಿಸುತ್ತವೆ. ಪರಮಮಾಹೇಶ್ವರ ವೆಂದೂ ಕರೆದಿವೆ (ನಂ ೫೨೯, ೫೭೨). ಆದುದರಿಂದ ಕೊಲ್ಲಿಪಾಕೆ ೭೦೦೦ದ ಮಹಾಮಂಡಳೇಶ್ವರರಾಗಿರುವ ಇವರಿಬ್ಬರೂ ಜೈನದಿಂದ ಶೈವಕ್ಕೆ ಹೊರಳಿರಬಹುದೇ? ಎನಿಸುತ್ತದೆ.

ವೈಷ್ಣವ ಧರ್ಮಕ್ಕೆ ಇಲ್ಲಿ ಆಶ್ರಯ ಲಭಿಸಿದ್ದಿತು. ನಂ ೫೪೪ ಶಾಸನವು ಅನಂತಪಾಳನು ಜಗದ್ದೇವ ನಾರಾಯಣದೇವರಿಗೆ ದಾನಬಿಟ್ಟುದನ್ನು (೧೧೦೭)ಹೇಳುತ್ತದೆ. ನಂ ೫೫೩ರ ಶಾಸನವು

ಮಹಾಮಂಡಳೇಶ್ವರ ಕೋಟೆಯ ಭೀಮರಸನು ಸೋಮೇಶ್ವರದೇವಾಲಯದ ಪರಿಸೂತ್ರದ ನನ್ನಿನಾರಾಯಣದೇವತೆಗೆ ನೀಡಿದ ದಾನವನ್ನು (೧೦೬೭)ಸೂಚಿಸುತ್ತದೆ. ಕೊಲ್ಲಿಪಾಕೆಯ ಮಾಂಡಲಿಕ ಅಸಗಮರಸನು ಬ್ರಾಹ್ಮಣರಿಗೆ ದಾನನೀಡಿದ ವಿಷಯ ಇಲ್ಲಿಯ ಶಾಸನ (೧೦೭೪)ದಲ್ಲಿ ಬರುತ್ತದೆ. ನಂ ೫೬೧ರ ಶಾಸನ ಆದಿತ್ಯಭಟ್ಟ ಸೋಮಯಾಜಿಗೆ ಸಂದ ದಾನವನ್ನು ಸೂಚಿಸುತ್ತದೆ (೧೧೧೦). ಕರಿಕಾಲಾನ್ವಯ ಕಂಡೂರ ತೊಂಡಯ ಚೋಳನು ವಿಷ್ಣುದೇವರಿಗೆ ನೀಡಿದ ದಾನ (೧೯೭೨)ವು ನಂ ೫೬೮ರ ಶಾಸನದಲ್ಲಿದೆ. ಇವೆಲ್ಲ ಇಲ್ಲಿಯ ಒಂದಿಷ್ಟು ವೈಷ್ಣವ ಚಟುವಟಿಕೆಗಳು. ಸೋಮಸಿದ್ಧಾಂತಿ/ಮಹಾವ್ರತಿಯಾಗಿದ್ದ ವಿಪ್ರ ಸೋಮಿಭಟ್ಟಾರಕರು ಕೆರೆಕಟ್ಟಿಸಿದುದನ್ನು (೧೦೫೦) ನಂ ೫೫೭ರ ಶಾಸನ ತಿಳಿಸುತ್ತದೆ.

ಹೀಗೆ ಸುಮಾರು ೧೦೦ ವರ್ಷಗಳ ಅವಧಿಯಲ್ಲಿ ಮೇಲೆ ಹೇಳಿದ ಧರ್ಮಗಳ ಚಟುವಟಿಕೆಗಳು ಕೊಲ್ಲಿಪಾಕಿಯ ಕನ್ನಡ ಶಾಸನಗಳಲ್ಲಿ ಕಂಡುಬರುತ್ತವೆ. ಮಿಕ್ಕ ತೆಲುಗು ಇತ್ಯಾದಿ ಭಾಷೆಗಳ ಶಾಸನಗಳನ್ನು ಸಂಗ್ರಹಿಸಿ, ವಿದ್ವಾಂಸರು ಈ ಅಧ್ಯಯನವನ್ನು ಪೂರ್ಣಗೊಳಿಸುವರೆಂದು ಆಶಿಸುತ್ತೇನೆ.

■■

ಆಕರ : ಮಾರ್ಗ ಸಂಪುಟ–೪

೬೫

ಶಾಸನಗಳಲ್ಲಿ ಬಾದುಬ್ಬೆ: ಇನ್ನಷ್ಟು ವಿಚಾರಗಳು

ಬಾದುಬ್ಬೆ, ಬಾಡುಂಬೆ, ಬಾಳುಬೆ, ಬಾದುಂಬೆ, ಬಾದುಮೆ, ಬಾದಮಯ್ಯ ಇತ್ಯಾದಿರೂಪಗಳಲ್ಲಿ ಉಲ್ಲೇಖಿತವಾದ ಈ ದೇವತೆಯೇ ಬನಶಂಕರಿಯೆಂಬ, ಬನದಹುಣ್ಣಿವೆಗೂ ಈ ದೇವತೆಗೂ ಸಂಬಂಧವಿದೆಯೆಂಬ ಚರ್ಚೆ ಕನ್ನಡದಲ್ಲಿ (ಪಿ. ಬಿ. ದೇಸಾಯಿ, ಡಿ. ಎಲ್. ಎನ್, ಬೆಟಗೇರಿ ಕೃಷ್ಣಶರ್ಮ, ಎಂ. ಚಿದಾನಂದಮೂರ್ತಿ) ಆರಂಭವಾಯಿತು. ಆಮೇಲೆ ಇದು ಸೀಮೆ ಲಕ್ಕವ್ವ ಆಗಿರಬಹುದೆಂದು ಡಾ॥ ಗುರವ ತಮ್ಮ ವಾದ ಮಂಡಿಸಿದರು. ಇತ್ತೀಚೆ ನನ್ನ ಎರಡು ಲೇಖನಗಳಲ್ಲಿ (ಮಾರ್ಗ II–೫೬, ಮಾರ್ಗ III–೩೫) ಇದು ಬನದ ಹುಣ್ಣಿಮೆಯ ಬನಶಂಕರಿ ದೇವತೆಯಲ್ಲ, ಬಾದಾಮಿ ಅಮಾವಾಸ್ಯೆಯ (ಚೌಡಮ್ಮ?)ದೇವತೆಯಾಗಿರುವ ಸಾಧ್ಯತೆಯಿದೆಯೆಂದೂ, ಬಾದುಬ್ಬೆ ಪದ್ಮಾ>ಪದುಮಾ>ಪದುಮಾಂಬಾ> ಬಾದುಂಬೆ>ಬಾದುಬ್ಬೆ ಅಂದರೆ ಲಕ್ಷ್ಮಿಯೊಂದಿಗೆ (ಶ್ರೀ ಗುರವ ಅವರು ಸೀಮೆಯ ಲಕ್ಕವ್ವಯೆಂದು ಸೂಚಿಸಿದ್ದಾರೆ) ಸಮೀಕರಿಸಬಹುದೆಂದೂ ಸೂಚಿಸಿದ್ದೆನು.

ಮೇಲೆ ಹೇಳಿದ ಲೇಖನಗಳಲ್ಲಿ ಉಲ್ಲೇಖಿಸಿದವುಗಳಲ್ಲದೆ, ಇನ್ನೂ ಅನೇಕ ಶಾಸನಗಳಲ್ಲಿ ದತ್ತಿನೀಡಿ, ಹೊಲದ ಸೀಮೆ ಹೇಳುವಾಗ ಈ ದೇವತೆಯ ಪ್ರಸ್ತಾಪ ಹೀಗೆ ಬಂದಿದೆ.

೧. "ಅಲ್ಲಿಯ ಬಾದುಂಬೆಯನಿಂ ಬಡಗಣ ಗದ್ದೆ ಕಟ್ಟಿ ೫"[೧]

೨. "ಬಾದುಂಬೆಯ ಹಳ್ಳದಿಂ ಮೂಡಲು ಮಳವದ ಮಕ್ಕಿಗುಣಿಗನ ಮತ್ತರ ೧"[೨]

೩. "ಬಾದುಂಬೆಯ ಕಟ್ಟೆಯಿಂ ಮೂಡ ಹಿರಿಯೋಣಿಯಿಂ ಬಡಗ ಕೆಂಗಾಡು ಮತ್ತರ ೨"[೩]

೪. "ತೆಂಕಣ ಮೇರೆ ಬಾದುಂಬೆ"[೪]

ಇದು ಸ್ತ್ರೀದೇವತೆಯೆಂದು ಪ್ರತೀತಿಯಿದ್ದರೂ, ಪುರುಷನೂ ಹೌದು ಎಂದು ವಿದ್ವಾಂಸರು ಈಗಾಗಲೇ ಊಹಿಸಿದ್ದಾರೆ. ಇದಕ್ಕೆ ಪೋಷಕವೆಂಬಂತೆ ಮೇಲಿನ ಒಂದನೆಯ ಉದಾಹರಣೆಯಲ್ಲಿ "ಬಾದುಂಬೆಯನಿಂ" ಎಂದು ಪುಲ್ಲಿಂಗರೂಪ ಬಳಸಿರುವುದು ವಿಶೇಷವೇ ಸರಿ.

---

೧. ಬಳ್ಳಾರಿ ಜಿಲ್ಲೆಯ ಶಾಸನಗಳು– ಬಳ್ಳಾರಿ ೧೮, ಕುರುಗೋಡು ೧೧೭೩

೨. ಬಳ್ಳಾರಿ ಜಿಲ್ಲೆಯ ಶಾಸನಗಳು– ಹಡಗಲಿ ೧೮, ಕುರುವತ್ತಿ ೧೧೯೯

೩. ಬಳ್ಳಾರಿ ಜಿಲ್ಲೆಯ ಶಾಸನಗಳು– ಹಡಗಲಿ ೬೭, ಮಾಗಳ ೧೨೦೯

೪. ಎಸ್. ಆಯ್. ಆಯ್. –XVIII– ೧೫೧. ನೀರಲಗಿ ೧೧೪೮

ಇವುಗಳಲ್ಲದೆ ಬಾದಿಸೆಟ್ಟಿ, ಬಾದೆಯನಾಯಕ ಇತ್ಯಾದಿ ವ್ಯಕ್ತಿನಾಮಗಳೂ ಶಾಸನಗಳಲ್ಲಿ ಕಂಡುಬರುತ್ತವೆ. ಇವುಗಳನ್ನು ಹೊರತುಪಡಿಸಿ ಶಾಸನೋಕ್ತ ಇನ್ನಷ್ಟು ಉಲ್ಲೇಖಗಳನ್ನು ಇಲ್ಲಿ ಚರ್ಚಿಸಬಹುದು.

(ಅ) ಹರಪನಹಳ್ಳಿ ತಾಲೂಕಿನ "ಬಾಗಳಿಯ ಮಳೆಮಲ್ಲಪ್ಪನ ದೇವಾಲಯದ ಶಿಲಾಶಾಸನದಲ್ಲಿ"[೫೫] ನೀಲೇಶ್ವರದೇವರಿಗೆ "ಶ್ರೀಮಚ್ಚಾಳುಕ್ಯ ವಿಕ್ರಮವರ್ಷದ ೪೪ನೆ[ಯ] ವಿಕಾರಿ ಸಂವತ್ಸರದ ಬಾದುಮೆಯಮಾವಾಸ್ಯೆಯಾದಿವಾರಂ ಸೂರ್ಯ್ಯಗ್ರಹಣದಂದು" ದಾನಕೊಟ್ಟುದನ್ನು ಹೇಳಲಾಗಿದೆ. ಇದೇ ರೀತಿ ಮುಂಡರಗಿ ತಾಲೂಕಿನ ತಾಂಬರಗುಂಡಿ ಶಾಸನ (ಎಸ್. ಆಯ್. ಆಯ್ XI-೧-೯೨ ಕ್ರಿ. ಶ. ೧೦೫೮)ದಲ್ಲಿ "ಸಕನೃಪಕಾಳಾತೀತ ಸಂವತ್ಸರ ಶತಂಗಳ್ ೯೭೬ನೆಯ ಜಯ ಸಂವತ್ಸರದ ಬಾದುಬ್ಬೆಯಮಾವಾಸ್ಯೆ ಸೂರ್ಯ್ಯಗ್ರಹಣದನ್ದು" ಎಂದು ಹೇಳಲಾದ ಕಾಲನಿರ್ದೇಶನವಿದೆ.

ನಾನು ಬೇರೆಡೆ ಚರ್ಚಿಸಿದಂತೆ ಬಾದಮಿ ಅಮಾವಾಸ್ಯೆಯೇ ಬಾದು[illegible] ಅಮಾವಾಸ್ಯೆಯೆಂಬುದಕ್ಕೆ ಮೇಲಿನ ಉದ್ಧರಣೆಗಳು ಆಧಾರವಾಗಿ ನಿಲ್ಲುತ್ತದೆ. ಬಾದ[illegible] ವಿಚಾರವನ್ನು ಬಾದಮಿ ಅಮಾವಾಸ್ಯೆಯ ಹಿನ್ನೆಲೆಯಲ್ಲಿ ಶೋಧಿಸಬೇಕೆಂದು ಇದರಿಂ[illegible] ಖಚಿತವಾಗುತ್ತದೆ.

(ಆ) ಬಾಳೂರ ಮತ್ತು ಕಂದಲಿ ಗ್ರಾಮಗಳಲ್ಲಿ ನೆಲದ ಮೇಲಿರುವ ಗಜಲಕ್ಷ್ಮಿಶಿಲ್ಪ ಮತ್ತು ಅದರ ಕೆಳಗೆ ಬರೆದ ವಾಕ್ಯ ಗಮನಿಸಿ ಇದು ಬಾದುಬ್ಬೆ=ಲಕ್ಷ್ಮಿ=ಸೀಮೆ ಲಕ್ಕವ್ವಯೆಂದು ಶ್ರೀ॥ಗುರವ ಅವರು ಹೇಳುವ ಮೂಲಕ ಈ ಶೋಧಕ್ಕೆ ಹೊಸತಿರುವು ನೀಡಿದ್ದರು. ಇದನ್ನು ಪೋಷಿಸುವಂತೆ ನಾನು "ಪದ್ಮಾ"(=ಲಕ್ಷ್ಮಿ)ಶಬ್ದದಿಂದ ಬಾದುಬ್ಬೆ ರೂಪ ಸಾಧಿಸಬಹುದೆಂದು ಹೇಳಿದ್ದೆನು. ಈ ಅಭಿಪ್ರಾಯವನ್ನು ಬೆಂಬಲಿಸುವಂತೆ ಹಿರೇಕೆರೂರ ತಾಲೂಕಿನ ಗೊಡಚಿಕೊಂಡ ಊರಿನ ಕಲ್ಲೇಶ್ವರದೇವಾಲಯದ ಗರ್ಭಗೃಹದ ಬಾಗಿಲಮೇಲೆ ಗಜಲಕ್ಷ್ಮಿವಿಗ್ರಹದಡಿಯಲ್ಲಿ "ಶ್ರೀ ಚಂಗೌವೆ ಮಾಡಿಸಿದ ಶ್ರೀಯದೇವಿ" ಎಂಬ ಬರೆವಣಿಗೆಯಿದೆ (ನಾಗರಖಂಡ-೭೦ ಒಂದು ಅಧ್ಯಯನ. ಪು. ೨೯೯). ಶ್ರೀಯದೇವಿಯೆಂದರೆ ಲಕ್ಷ್ಮಿಯೆಂದು ಬೇರೆ ಹೇಳಬೇಕಿಲ್ಲ. ಇದು ಗಜಲಕ್ಷ್ಮಿ ವಿಗ್ರಹದ ಕೆಳಗೆ ಬರೆದುದೂ ಗಮನಿಸಬೇಕಾದ ಸಂಗತಿ.

(ಇ) ಬಾದುಬ್ಬೆಯ ಪರ್ವದಂದು ಪಗರಣವಾಡುವುದರ ಉಲ್ಲೇಖ ವಡ್ಡಾರಾಧನೆಯಲ್ಲಿರುವುದು ತಿಳಿದಿರುವ ವಿಷಯವೇ ಆಗಿದೆ. ರಾಷ್ಟ್ರಕೂಟ ಅಮೋಘವರ್ಷನ ಕಾಲದ ಆಂಧ್ರಪ್ರದೇಶದ ವಾರಂಗಲ್ ತಾಲೂಕಿನ ಕಾಜಿಪೇಟ್ ಶಾಸನದಲ್ಲಿ (ಕ್ರಿ. ಶ. ೮೨೭) ಗ್ರಾಮದ ಮುಖ್ಯಸ್ಥರಿಗೆ ಪ್ರತಿವರ್ಷ ಸಲ್ಲಬೇಕಾದ ಹಣದ ಮೊತ್ತ ಮತ್ತು ಅಪರಾಧಿಗಳಿಂದ ವಸೂಲ ಮಾಡಬೇಕಾದ ಹಣದ ಮೊತ್ತಗಳನ್ನು ಹೀಗೆ ದಾಖಲಿಸಲಾಗಿದೆ.

---

೫೫. ಬಳ್ಳಾರಿ ಜಿಲ್ಲೆಯ ಶಾಸನಗಳು- ಹರಪನಹಳ್ಳಿ ೧೭೯, ಬಾಗಳಿ ೧೧೧೯

"ಬಾದುಬ್ಬೆಯ ಪರ್ವದನ್ದು
ಪೆರ್ಗ್ಗಡೆಗೆ ಪಗರಣದ ದ್ರಮ್ಮಮೆಣ್ಬತ್ತು
ಕರಣಕ್ಕೆ ಇಪ್ಪತ್ನಾಲ್ಕು ದ್ರಮ್ಮ
ತಳರ ಇಪ್ಪತ್ತ ನಾಲ್ಕು ದ್ರಮ್ಮ
ದೀವಳಿಗೆಯ ಪರ್ವ್ವದನ್ದು
ಕರಣಕ್ಕೆ ಇಪ್ಪತ್ತ ನಾಲ್ಕುದ್ರಮ್ಮ
ತಳಾರ ಇಪ್ಪತ್ತನಾಲ್ಕು ದ್ರಮ್ಮ......"

ಇಲ್ಲಿಂದ ಮುಂದೆ ಇರಿದೊಡೆ, ವ್ಯಭಿಚಾರಮಾಡಿದೊಡೆ, ಮೈನೆರೆದೊಡೆ ಇತ್ಯಾದಿಗಳಿಗೆ ಹಣದ ಮೊತ್ತ ನಿಗದಿಪಡಿಸಲಾಗಿದೆ. ಇವುಗಳನ್ನು ಬಿಟ್ಟರೂ ಬಾದುಬ್ಬೆಯ ಪರ್ವ, ದೀಪಾವಳಿ ಪರ್ವಗಳಂದು ಪೆರ್ಗಡೆ, ಕರಣ, ತಳವಾರ ಇವರಿಗೆ ಸಲ್ಲಬೇಕಾದ ಹಣದ ಮೊತ್ತವನ್ನು ಈ ಶಾಸನ ಸೂಚಿಸುತ್ತದೆ. ಬಹುಶಃ ಈ ಹಬ್ಬವನ್ನು ಆಚರಿಸಲು ತಗಲುವ ವೆಚ್ಚಕ್ಕಾಗಿ ಈ ಮೊತ್ತವನ್ನು ಕೊಡಬೇಕಿದ್ದಿತೆಂದು ಕಾಣುತ್ತದೆ. ಇಲ್ಲಿ ದೀಪಾವಳಿ ಹಬ್ಬಕ್ಕಾಗಿ ೨೪+೨೪=೪೮ ದ್ರಮ್ಮ ಕೊಡುವುದನ್ನೂ, ಬಾದುಬ್ಬೆಯ ಪರ್ವದ ಪಗರಣಕ್ಕಾಗಿ ೮೦+೨೪+೨೪=೧೨೮ ದ್ರಮ್ಮ ಕೊಡುವುದನ್ನೂ ಗಮನಿಸಬೇಕು. ಇದರಿಂದ ಬಾದುಮೆ ಪರ್ವದ ಖರ್ಚು-ವೆಚ್ಚ ಒಂದಿಷ್ಟು ಅಧಿಕವಾಗಿದ್ದಿತೆಂದು ತೋರುತ್ತದೆ. ಇದಲ್ಲದೆ ವಡ್ಡಾರಾಧನೆ ಹೇಳುವ ಬಾದುಬ್ಬೆ ಪಗರಣ ಕೇವಲ ಗ್ರಂಥಸ್ಥವಲ್ಲ, ಸಮಕಾಲೀನ ಈ ಶಾಸನ ಹೇಳುವಂತೆ, ಆ ಕಾಲದಲ್ಲಿ ಆಚರಣೆಯಲ್ಲಿಯೂ ಇದ್ದಿತೆಂದು ಸ್ಪಷ್ಟವಾಗುತ್ತದೆ.

(ಈ) ಡಾ। ಸಿ. ಎಸ್. ಪಾಟಿಲ ಪ್ರಕಟಿತ ಆನೆಗೊಂದಿ ತಾಮ್ರಪಟದ (೧೩ ನೆಯ ಶತಮಾನ)[೬] ಜಾನಪದೀಯ ಮತ್ತು ಸಾಂಸ್ಕೃತಿಕ ಮಹತ್ವವನ್ನು ಡಾ। ಎಂ. ಚಿದಾನಂದಮೂರ್ತಿ ಅವರು ಲೇಖನವೊಂದರಲ್ಲಿ ಚರ್ಚಿಸಿದ್ದಾರೆ.[೭] ಈ ತಾಮ್ರಪಟಲದಲ್ಲಿ ಶಿವ-ಗಿರಿಜೆಯರ ವಿವಾಹ ಪುರಾಣ, ಸಮಯಶಾಸನ ಪುರಾಣ, ಅಮೃತಮಥನ ಪುರಾಣ - ಇವುಗಳ ಹಿನ್ನೆಲೆಯಲ್ಲಿ ಕುಂಬಾರರ ವೃತ್ತಿ, ಉತ್ಪತ್ತಿ, ಅವರ ಸಾಮಾಜಿಕ ಗೌರವ ಸಂಕೇತಗಳನ್ನು ವಿವರಿಸಲಾಗಿದೆ. ಇಲ್ಲಿಯ ಅಮೃತ ಮಥನ ಪುರಾಣದ ಕೊನೆಯ ಭಾಗದಲ್ಲಿ

೨೫೩ .... ದೇವಿಯ ತಮ್ಮಂ ಬಾಡು
೨೫೪ ಬೇಸತ್ತಡೆ ಸುರರೆಲ್ಲಂ ನೆರೆದು ಬಾದುಮೆಯಂ ಮಾಡಿದೊಡಾತನ ನೋಡಲುಂ ಹ
೨೫೫ ಗರಣಮನಾಡಲುಂ ಗಳತಿಗೆಯ ಪಿಡಿಯಲುಂ ರಿ(ಖು)ಷಿಯೆಂದು ಗಿರಿರಾಜಂಗೆ ದೇವಾದಿ
೨೫೬ ದೇವನಿತ್ತು..

ಎಂಬ ಪಠ್ಯವಿದೆ. ಇದಕ್ಕೆ "ಗಿರಿಜೆಯ ತಮ್ಮನಿಗೆ (ಮೈನಾಕನಿಗೆ?)ಬಾಳು ಬೇಸರವಾಯಿತು. ಆಗ ಎಲ್ಲ ದೇವತೆಗಳು ಸೇರಿ ಬಾದುಮೆ ಪ್ರತಿಮೆಯನ್ನು ಮಾಡಿದರು. ಶಿವನು ಬಾದುಮೆಯ ಪ್ರತಿಮೆಯನ್ನು ಗಿರಿರಾಜನಿಗೆ ನೋಡುವ ಅವಕಾಶವನ್ನು ಕಲ್ಪಿಸಿಕೊಟ್ಟುದಲ್ಲದೆ, ಹಗರಣವನ್ನಾಡುವ, ಗಳತಿಗೆ ಪಾತ್ರೆಯನ್ನು (ಕಮಂಡಲು, ಚಿಕ್ಕಮೂತಿ ಇರುವ ಪಾತ್ರೆ) ಹಿಡಿಯುವ ಹಕ್ಕನ್ನೂ ಕೊಟ್ಟು" ಎಂದು

---

೬. ಕೊಪ್ಪಳಜಿಲ್ಲೆಯ ಶಾಸನಗಳು-ಕೊಪ್ಪಳ ೧೮. ಆನೆಗೊಂದಿ.(ಈ ಸಂಪುಟದಲ್ಲಿಯೂ ಈ ಶಾಸನ ಪ್ರಕಟವಾಗಿದೆ).
೭. ಹೊಸತು ಹೊಸತು-ಪು ೩೪೧-೩೫೫

ಡಾ। ಚಿದಾನಂದಮೂರ್ತಿಯವರು ಅರ್ಥ ನೀಡಿದ್ದಾನೆ. ಆದರೆ ಇಲ್ಲಿಯ "ದೇವಿಯ ತಮ್ಮಂ ಬಾಡು ಬೇಸತ್ತಡೆ" ಎಂಬುದರಿಂದ ಡಾ। ಮೂರ್ತಿಯವರು ಹೇಳುವ ಅರ್ಥ ಹೊರಡುವುದಿಲ್ಲ. ಬಾಡು=ಬಾಳು ಅರ್ಥ ಸರಿಯಲ್ಲ. ಆದುದರಿಂದ ಶಾಸನಪಾಠಕ್ಕೆ ನಿಷ್ಠವಾಗಿ ಹೇಳುವುದಾದರೆ, ದೇವಿಯ ತಮ್ಮನಾದ ಬಾಡು ಎಂಬವನು ಬೇಸತ್ತಡೆ ಎಂದೋ ದೇವಿಯ ತಮ್ಮನಾದ ಬಾಡುಬೆ ಎಂಬವನು ಸತ್ತಡೆ ಎಂದೋ ಇದರಿಂದ ಅರ್ಥ ಹೊರಡುತ್ತದೆ. ಬಹುಶ: ಎರಡನೆಯ ಅರ್ಥವೇ ಸರಿ ಎನಿಸುತ್ತದೆ. ಏಕೆಂದರೆ ವಡ್ಡಾರಾಧನೆಯ ಬಾದುಬ್ಬೆ ಪಗರಣ ಪ್ರಸಂಗದಲ್ಲಿ ರಾಣಿ ವೀರಶ್ರೀಯ ತಮ್ಮ ಕಾರ್ತಿಕಋಷಿ ಸತ್ತ ವಿಷಯವಿದೆ. ಆದುದರಿಂದ ಇಲ್ಲಿಯೂ "ದೇವಿಯ ತಮ್ಮಂ ಬಾಡು ಬೇಸತ್ತಡೆ" ಎಂಬುದಕ್ಕೆ ಬದಲು "ದೇವಿಯ ತಮ್ಮಂ ಬಾಡುಬೆ ಸತ್ತಡೆ"[೮] ಎಂದೇ ಪದಗಳನ್ನು ಬಿಡಿಸಿಕೊಳ್ಳಬೇಕೆನಿಸುತ್ತದೆ. ಇದರಿಂದ ಬಾಡುಬೆ ಎಂಬ ವ್ಯಕ್ತಿನಾಮ ರೂಪಗೊಂಡು (ಬಾಡುಬೆ, ಬಾದುಮೆ ಪರ್ಯಾಯ ಪಾಠಗಳೆಂಬುದನ್ನು ಗಮನಿಸಬೇಕು), ಇವನು ಪಾರ್ವತಿಯ ತಮ್ಮನೆಂಬ ಹೊಸ ಅರ್ಥ ಹೊರಡುತ್ತದೆ. ಬಹುಶಃ ಅವನು ಸತ್ತ ಸಂದರ್ಭದಲ್ಲಿ ಬಾದುಮೆಯಂ ಮಾಡಿದರೆಂದು ಅಂದರೆ ಬಾದುಮೆ ಉತ್ಸವವನ್ನಾಚರಿಸಿ, ಈ ಉತ್ಸವದ ಅಂಗವಾಗಿ ಪಗರಣ ಜರುಗಿಸಿದರೆಂದು ಇಲ್ಲಿ ಹೇಳಬೇಕೆನಿಸುತ್ತದೆ.

ಇಷ್ಟಾಗಿಯೂ "ಗಳತಿಗೆಯ ಪಿಡಿಯಲು ರಿ(ಋ)ಷಿಯೆಂದು ಗಿರಿರಾಜಂಗೆ ದೇವಾದಿದೇವನಿತ್ತು" ಎಂಬುದಕ್ಕೆ ಡಾ। ಚಿದಾನಂದಮೂರ್ತಿಯವರು ಹೇಳುವ ಅರ್ಥದಲ್ಲಿ ಒಂದಿಷ್ಟು ದೋಷವಿದೆಯೆನಿಸುತ್ತದೆ. ಶಾಸನದ "ಗಳತಿಗೆಯಂ ಪಿಡಿಯಲುಂ", ವಡ್ಡಾರಾಧನೆಯ ಗುಂಡಿಗೆಯಮಂ ಪಿಡಿದು ಇವುಗಳಲ್ಲಿ ಸಂಬಂಧವಿರುವಂತೆ ಕಾಣುತ್ತದೆ. ಅದೇನೇ ಇರಲಿ, ಈ ಶಾಸನ ಭಾಗವನ್ನು ಇನ್ನೊಮ್ಮೆ ಓದಿ ನಿಜಪಠ್ಯವನ್ನು ಕಂಡುಹಿಡಿಯಬೇಕಾಗಿದೆ.

ರಾಘವಾಂಕನ ಸಿದ್ಧರಾಮ ಪುರಾಣದಲ್ಲಿ ಬಾದುಮೆಯ ಉಲ್ಲೇಖ ಬರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಅಲ್ಲಿ ವೈಶಾಖ ಪೂರ್ಣಿಮೆ (ಅಗೆ ಹುಣ್ಣಿಮೆ)ಯ ಹಿಂದಿನ ದಿನ ಕ್ಷೇತ್ರಪೂಜೆ ಆರಂಭಿಸುವಾಗ ಮಲ್ಲಿಕಾರ್ಜುನನಿಗೆ ಅಷ್ಟಪೂಜೆ ನೆರವೇರಿಸಿ, "ಪರಿಸೂತ್ರದೊಳಗಿರ್ದ ಬಾದುಮೆಯ ಕಟ್ಟಿ" ಎಂದು ಹೇಳಲಾಗಿದೆ. ಪರಿಸೂತ್ರವೆಂದರೆ ದೇವಾಲಯದ ಪರಿಸರ. ಅಲ್ಲಿ ಇದ್ದ ಬಾದುಮೆಯ ಕಟ್ಟಿ ಎಂದರೆ ಏನು? ಪರಿಷತ್ತಿನ ಸಿದ್ಧರಾಮಪುರಾಣದ ಆವೃತ್ತಿಯ ಸರಳಾನುವಾದದಲ್ಲಿ "ಅಂಗಳದಲ್ಲಿದ್ದ ಬೊಂಬೆಯನ್ನು ಕಟ್ಟಿ" ಎಂದು ಹೇಳಿದ ಅರ್ಥ ಅಪ್ರಯೋಜಕ. ಸಿದ್ಧರಾಮಪುರಾಣದಲ್ಲಿ ಈ ಸಂದರ್ಭದ ಅಂಗವಾಗಿ ಸಾವಿರ ಮದುವೆಮಾಡುವ ಪೂರ್ವಸಿದ್ಧತೆಯ ವಿಷಯ ಬರುತ್ತದೆ. ಹೀಗಾಗಿ ಎಲ್. ಬಸವರಾಜು ಅವರು ತಮ್ಮ "ಸರಳ ಸಿದ್ಧರಾಮಚರಿತೆ"ಯಲ್ಲಿ ಬಾದುಮೆಗೆ "ಮದುವೆ ಸಂಕೇತದ ಗೊಂಬೆ" ಎಂದು ಅರ್ಥ ಹೇಳಿದ್ದಾರೆ. ಇದೂ ಸಮಂಜಸವೆನಿಸುವುದಿಲ್ಲ. ಈ ಬಗ್ಗೆ ವಿದ್ವಾಂಸರ ಚಿಂತನೆ ಅಗತ್ಯ.

---

೮. ಬಾಡು ಬೇಸತ್ತಡೆ>ಬಾಡುಬೆ ಸತ್ತಡೆ ಎಂದು ನಾವು ಪಾಠ ಸರಿಪಡಿಸಿಕೊಂಡಿದ್ದೇವೆ. ಪ್ರಾಚೀನ ಹಸ್ತಪ್ರತಿಯಲ್ಲಿ ದೀರ್ಘ ಬರೆಯುತ್ತಿರಲಿಲ್ಲ. ಸಂದರ್ಭಾನುಸಾರಿಯಾಗಿ ಅದನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ಈ ಶಾಸನದಲ್ಲಿಯೂ ದೀರ್ಘ ಚಿಹ್ನೆ ಇರಲಿಕ್ಕಿಲ್ಲ. ಅರ್ಥ ಹೊರಡಿಸಿಕೊಳ್ಳುವುದಕ್ಕಾಗಿ ಶಾಸನ ಸಂಪಾದಕರು ದೀರ್ಘವನ್ನು ಕಲ್ಪಿಸಿಕೊಂಡಂತಿದೆ.

ಆಕರ : ಮಾರ್ಗ ಸಂಪುಟ–೪

೬೬

ಶಾಸನ ಬರೆವಣಿಗೆ: ತರತಮ ಧೋರಣೆ

ಕರ್ನಾಟಕದ ಶಾಸನಗಳಿಗೆ ಕ್ರಿ. ಶ. ಪೂ. ೩೦೦ ವರ್ಷಗಳಷ್ಟು ಪ್ರಾಚೀನತೆಯಿದೆ. ಅಲ್ಲಿಂದ ಇಂಗ್ಲಿಷ್‌ರು ಬರುವ ವರೆಗೆ ಸೃಷ್ಟಿಯಾಗುತ್ತ ಬಂದ ಇವುಗಳ ಸಂಖ್ಯೆ ಸುಮಾರು ೨೫ ಸಾವಿರ. ಇವುಗಳನ್ನು ಪ್ರಶಸ್ತಿಶಾಸನ, ದಾನಶಾಸನ, ಸ್ಮಾರಕಶಾಸನವೆಂದು ವರ್ಗೀಕರಿಸಬಹುದಾಗಿದೆ. ಭಾಷಿಕ, ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಇತ್ಯಾದಿಯಾಗಿಯೂ ಅಭ್ಯಸಿಸಬಹುದಾಗಿದೆ. ಶಾಸನಗಳ ಮೇಲೆ ಬಿಡಿಸಿರುವ ಶಿಲ್ಪಗಳ ಅಧ್ಯಯನವನ್ನೂ ಇತ್ತೀಚೆ ಪೂರೈಸಲಾಗುತ್ತಿದೆ. ಈ ಅಭ್ಯಾಸಗಳನ್ನು ಹೊರತುಪಡಿಸಿ, ಇವುಗಳ ಬರೆವಣಿಗೆಯ ಹಿಂದಿರುವ ಧೋರಣೆಯನ್ನು ಬಿಡಿಸಿ ನೋಡುವುದೂ ಇಂದು ಉಪಯುಕ್ತವೆನಿಸಿದೆ.

ಕರ್ನಾಟಕದ ತೀರ ಹಳೆಯ ಶಾಸನಗಳು ಬೆಟ್ಟದಲ್ಲಿ, ಆಮೇಲಿನವು ಗ್ರಾಮಗಳಲ್ಲಿ ಸಿಗುತ್ತವೆ. ತಾಮ್ರಶಾಸನ- ಶಿಲಾಶಾಸನಗಳೂ, ಶಿಲಾಶಾಸನ-ಶಿಲ್ಪಶಾಸನಗಳೂ ಸಿಗುತ್ತವೆ. ಈ ಭೌಗೋಲಿಕತೆ, ಐತಿಹಾಸಿಕತೆ, ವೈವಿಧ್ಯತೆಯ ಹಿಂದೆ ಪಾತ್ರವಾಡಿದ ಮನೋಧರ್ಮ ಅಭ್ಯಾಸಯೋಗ್ಯವೆನಿಸಿದೆ.

ಶಾಸನಗಳು-ಬೆಟ್ಟದಿಂದ ಗ್ರಾಮಕ್ಕೆ:

ಕರ್ನಾಟಕದಲ್ಲಿ ಸಿಗುವ ತೀರ ಪ್ರಾಚೀನಶಾಸನಗಳೆಂದರೆ ಅಶೋಕ ಬರೆಯಿಸಿದುವು. ಧರ್ಮಲಿಪಿಯೆಂದು ಪ್ರಖ್ಯಾತವಾಗಿರುವ ಇವು ನಮ್ಮ ನಾಡಿನ ಗುಡ್ಡ-ಬೆಟ್ಟಗಳಲ್ಲಿ ಮಾತ್ರ ಸಿಗುತ್ತವೆ. ಯಾವುದೇ ಶಾಸನದ ಉದ್ದೇಶ ಜನರಿಗೆ ವಿಷಯ ತಿಳಿಸುವುದು. ಹೀಗಿದ್ದೂ ಅಶೋಕ ಇವುಗಳನ್ನು ಜನರಿಂದ ದೂರವಾಗಿರುವ ಗುಡ್ಡ-ಬೆಟ್ಟಗಳಲ್ಲಿ ಏಕೆ ಬರೆಯಿಸಿದ? ಕೃಷಿಸಂಸ್ಕೃತಿಯ ಪೂರ್ವದಲ್ಲಿ ಬೇಟೆಸಂಸ್ಕೃತಿಯ ಜನ ಆಹಾರ ಸಂಗ್ರಹಿಸುತ್ತ ಗುಡ್ಡ-ಬೆಟ್ಟಗಳಲ್ಲಿ ವಾಸಿಸುತ್ತಿದ್ದರು. ಇವರ ಅನುಕೂಲತೆಗಾಗಿ ಇವುಗಳನ್ನು ಅಲ್ಲಿ ಬರೆಯಿಸಿದನೇ? ಎಂಬ ಊಹೆ ಮಾಡಲು ಮನಸ್ಸಾಗುತ್ತದೆ. ಆದರೆ ಕ್ರಿ. ಶ. ಪೂ ೩೦೦ರ ಹೊತ್ತಿಗೆ ಬೇಟೆಸಂಸ್ಕೃತಿ ಮುಗಿದು ಕರ್ನಾಟಕದಲ್ಲಿ ಕೃಷಿಸಂಸ್ಕೃತಿ ಬೆಳೆಯುತ್ತಲಿದ್ದಿತು. ಅಂದರೆ ಜನರು ಕಾಡು ಬೆಟ್ಟಗಳನ್ನು ಬಿಟ್ಟು ಗ್ರಾಮಗಳಲ್ಲಿ ನೆಲೆಯೂರಿದ್ದರು. ಎರಡನೆಯದಾಗಿ ಕಾಡು-ಬೆಟ್ಟಗಳಲ್ಲಿ ವಾಸಿಸುತ್ತಿದ್ದರೂ ಆ ಕಾಲದ ಕನ್ನಡಿಗರು, ಅದರಲ್ಲಿಯೂ ಬೇಟೆಯಿಂದ ಜೀವನ ಸಾಗಿಸುತ್ತಿದ್ದ ಕಾಲಘಟ್ಟದವರು ಓದುವ-ಬರೆಯುವ ಸಾಕ್ಷರಿಗಳಾಗಿರಲಿಲ್ಲ. ಹೀಗಿರುವಾಗ ಇವರು ಕನ್ನಡನಾಡಿಗೆ ಪರಕೀಯವಾಗಿರುವ ಪ್ರಾಕೃತಭಾಷೆ-ಬ್ರಾಹ್ಮೀಲಿಪಿಯ ಬರೆಹವನ್ನು ಓದುಬಲ್ಲವರಾಗಿರುವುದಂತೂ ದೂರದ ವಿಷಯ. ಹೀಗಾಗಿ ಬೇರೊಂದು ಊಹೆ

ಮಾಡಬೇಕಾಗುತ್ತದೆ. ಅದು: ಬೌದ್ಧಧರ್ಮ ಕರ್ನಾಟಕಕ್ಕೆ ಉತ್ತರಭಾರತದಿಂದ ಬಂದುದು. ಇದರ ಉಗಮ ಕ್ರಿ. ಶ. ಪೂ ೪೦೦. ಅಶೋಕನ ಈ ಧರ್ಮಶಾಸನಗಳ ಕಾಲ ಕ್ರಿ. ಶ. ಪೂ ೩೦೦. ಅಂದರೆ ೧೦೦ ವರ್ಷಗಳ ಅಂತರದಲ್ಲಿ ಈ ಶಾಸನ ಬರೆಯಿಸುವ ಹೊತ್ತಿಗೆ ಕರ್ನಾಟಕದ ಸ್ಥಳೀಯ ಜನವರ್ಗ ಅಷ್ಟಾಗಿ ಬೌದ್ಧಧರ್ಮಕ್ಕೆ ಮತಾಂತರವಾಗಿರಲಿಕ್ಕಿಲ್ಲ. ಈಗ ಉತ್ತರದಿಂದ ಬಂದ ಧರ್ಮಪ್ರಚಾರಕ ಭಿಕ್ಷುಗಳೇ ಈ ಪ್ರದೇಶಗಳಲ್ಲಿ ಮುಖ್ಯರೆನಿಸಿರಬೇಕು. ಈ ಧರ್ಮದ ಸಂಹಿತೆಯ ಪ್ರಕಾರ ಇವರು ವಾಸಿಸುತ್ತಿದ್ದುದು ಗ್ರಾಮಗಳಲ್ಲಲ್ಲ, ಗುಡ್ಡ-ಬೆಟ್ಟಗಳಲ್ಲಿ ರಚಿಸಿಕೊಂಡಿದ್ದ ಲೇಣ(ಗವಿ/ ಗವಿಯಾಕಾರದ ಕಟ್ಟಡ)ಗಳಲ್ಲಿ. ಇವರು ಪ್ರಚಾರಕ್ಕಾಗಿ ಮಾತ್ರ ಆಗಾಗ ಜನವಸತಿಯ ಗ್ರಾಮಗಳಿಗೆ ಬಂದು, ಮತ್ತೆ ತಮ್ಮ ಶಾಶ್ವತ ನೆಲೆಗಳಾದ ಲೇಣಗಳಿಗೆ ಮರಳುತ್ತಿದ್ದರು. ಔತ್ತರೇಯರೇ ಆಗಿದ್ದ ಈ ಭಿಕ್ಷುಗಳಿಗೆ ಆ ಭಾಷೆ-ಲಿಪಿಗಳು ಪರಿಚಿತ. ಕಾರಣ ಇವರ ಪ್ರಯೋಜನದೃಷ್ಟಿಯಿಂದ ಅಶೋಕ ತನ್ನ ಧರ್ಮಶಾಸನಗಳನ್ನು ಇವರ ವಸತಿಪ್ರದೇಶಗಳಾದ ಗುಡ್ಡ ಬೆಟ್ಟಗಳಲ್ಲಿ ಬರೆಯಿಸಿದ; ಬಹುಕಾಲ ನಿಲ್ಲುವ ಉದ್ದೇಶದಿಂದ ನಿಶ್ಚಲವಾಗಿರುವ ಬಂಡೆಗಳ ಮೇಲೆ ಕೊರೆಯಿಸಿದ. ಇದಲ್ಲದೆ ಈ ಧರ್ಮಶಾಸನಗಳನ್ನು ತಿಸ್ಸ ನಕ್ಷತ್ರ (ಪುಷ್ಯನಕ್ಷತ್ರ)ದಿವಸ ಮಹಾಮಾತ್ರರು ಓದಿ, ಜನರಿಗೆ ತಿಳಿಸಬೇಕೆಂದು ಅಶೋಕನೇ ಕಟ್ಟಳೆ ಮಾಡಿದುದನ್ನು ನೋಡಿದರೆ, ಸುರಕ್ಷಿತ ಲಿಪಿಯೆಂಬಂತೆ ಇದನ್ನು ಜನ ವಿದೂರ ಗುಡ್ಡಬೆಟ್ಟದಲ್ಲಿ, ಬಹುಕಾಲ ಉಳಿಯುವ ಕಲ್ಲುಬಂಡೆಯ ಮೇಲೆ ಬರೆಯಿಸುವುದು ಅರಸನಿಗೆ ಸರಿ ಎನಿಸಿರಬಹುದು.

ತಾಮ್ರ ಶಾಸನ (ಸಂಸ್ಕೃತ)-ಶಿಲಾಶಾಸನ (ಕನ್ನಡ):

ಕಾಲ ಗತಿಸಿದಂತೆ ಕರ್ನಾಟಕದಲ್ಲಿ ಮೌರ್ಯರ ಸಾಮಂತರಾಗಿ ಚುಟು, ಶಾತವಾಹನ ಇತ್ಯಾದಿ ರಾಜವಂಶಗಳು ಅಸ್ತಿತ್ವಕ್ಕೆ ಬಂದವು. ಬಳಿಕ ಕದಂಬರು ಕರ್ನಾಟಕದ ಸ್ವತಂತ್ರ ರಾಜರೆನಿಸಿದರು. ಬ್ರಾಹ್ಮಣರಾಗಿರುವ ಇವರು ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆತಂದು ಅಗ್ರಹಾರ ಸಂಸ್ಕೃತಿಯನ್ನು ಆರಂಭಿಸಿದರು. ಅಗ್ರಹಾರಗಳು ಬ್ರಾಹ್ಮಣರ ಉಪಭೋಗಕ್ಕಾಗಿ ಕೊಡಮಾಡಿದ ಗ್ರಾಮಗಳು. ಅಂದರೆ ಇಂಥ ಗ್ರಾಮಗಳು ಅವರ ವೈಯಕ್ತಿಕ ಆಸ್ತಿಗಳೇ ಹೊರತು ಸಾರ್ವಜನಿಕ ಆಸ್ತಿಗಳಲ್ಲ. ಇವುಗಳನ್ನು ಪಡೆದುದಕ್ಕಾಗಿ, ರಕ್ಷಿಸಿಕೊಳ್ಳುವುದಕ್ಕಾಗಿ ಇವರಿಗೆ ವ್ಯಕ್ತಿನೆಲೆಯಲ್ಲಿ ದಾಖಲೆ ಅಗತ್ಯವೆನಿಸಿರುವುದು ಸಹಜ. ಆದುದರಿಂದ ಶಿಲಾಶಾಸನಗಳಿಗೆ ಬದಲು ಮನೆಯಲ್ಲಿ ಸುರಕ್ಷಿತ ಮಡಗಲು ಸಾಧ್ಯವಿರುವ ತಾಮ್ರಶಾಸನಗಳನ್ನು ಬರೆಯಿಸಿಕೊಂಡರು. ಮುಂದೆ ಈ ಅಗ್ರಹಾರ-ತಾಮ್ರಶಾಸನ ಪರಂಪರೆ ವಿಪುಲ ಪ್ರಮಾಣದಲ್ಲಿ ಬೆಳೆಯಲಾಗಿ, ಇವುಗಳನ್ನು ಲಿಪಿಸುವುದಕ್ಕಾಗಿಯೇ ರಾಜಾಸ್ಥಾನದಲ್ಲಿ ಸಂಧಿವಿಗ್ರಹಿ ಮೊದಲಾದವರು ನಿಯಮಿಸಲ್ಪಟ್ಟರೆಂದು ತೋರುತ್ತದೆ.

ಈ ಅಗ್ರಹಾರಗಳನ್ನು ಪಡೆದವರು ಬ್ರಾಹ್ಮಣರು. ಇವರಿಗೆ ಕನ್ನಡ ಅಸ್ಪೃಶ್ಯಭಾಷೆಯಾಗಿದ್ದುದರಿಂದ ಸಂಸ್ಕೃತಭಾಷೆಯಲ್ಲಿಯೇ ಶಾಸನ ಬರೆಯಿಸಿಕೊಂಡರು. ಹೀಗಾಗಿ ಅಗ್ರಹಾರಸಂಸ್ಕೃತಿ ಪರಿಸರದಲ್ಲಿ ತಾಮ್ರಶಾಸನಗಳು ಹೆಚ್ಚು ಹುಟ್ಟಿಕೊಂಡವು, ಅವು ಸಾಮಾನ್ಯವಾಗಿ ಸಂಸ್ಕೃತಭಾಷೆಯನ್ನೊಳಗೊಂಡವು-ಎಂಬ ನಿರ್ಣಯಕ್ಕೆ ಬರಬಹುದು. ಕದಂಬರು ಬ್ರಾಹ್ಮಣ ಪಕ್ಷಪಾತಿಗಳಾದುದರಿಂದ ಇವರ ಶಾಸನಗಳು ಸಾಮಾನ್ಯವಾಗಿ ತಾಮ್ರಪಟದ ಮೇಲೆ ಬರೆಯುವ, ಸಂಸ್ಕೃತ ಭಾಷೆ ಬಳಸುವ ಧೋರಣೆಯನ್ನೊಳಗೊಂಡಿವೆ. ಕದಂಬರನ್ನು ಸೋಲಿಸಿ ರಾಜ್ಯವನ್ನಾಳಿದ

ಬಾದಾಮಿ ಚಾಲುಕ್ಯರ ಕಾಲಾವಧಿಯಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆ ಇದೇ ಪದ್ಧತಿ ಮುಂದುವರಿಯಿತು. ಒಂದಿಷ್ಟು ಕನ್ನಡಭಾಷೆಯ ಶಾಸನ ಹುಟ್ಟಿದರೂ ಅವುಗಳ ಪ್ರಮಾಣ ಕಡಿಮೆಯೆಂದೇ ಹೇಳಬೇಕು. ಒಂದು ಅಂದಾಜಿನ ಪ್ರಕಾರ ಈ ಚಾಲುಕ್ಯರು ನೇರವಾಗಿ ಹೊರಡಿಸಿದ ಸಂಸ್ಕೃತ ಶಾಸನಗಳು ೯೮, ಕನ್ನಡ ಶಾಸನಗಳು ೩೩. ಸಾಮಾನ್ಯವಾಗಿ ಈ ಸಂಸ್ಕೃತ ಶಾಸನಗಳು ತಾಮ್ರಪಟಗಳಾಗಿದ್ದು ಅಗ್ರಹಾರಕ್ಕೆ ನೀಡಿದ ದತ್ತಿಗಳಾಗಿವೆ.

ರಾಷ್ಟ್ರಕೂಟ, ಗಂಗರ ಅವಧಿಯ ಮಧ್ಯಭಾಗದಿಂದ ಕನ್ನಡ ಬರೆವಣಿಗೆಯ ಸಂಖ್ಯೆ ವರ್ಧಿಸುತ್ತ ನಡೆಯಿತು. ಬಾದಾಮಿ ಚಾಲುಕ್ಯರ ಕಾಲದಲ್ಲಿ ಅಗ್ರಹಾರ ಸಂಸ್ಕೃತಿ ಜೊತೆಗೆ ದೇವಾಲಯ ಸಂಸ್ಕೃತಿ ಕಣ್ಣು ತೆರೆದು, ರಾಷ್ಟ್ರಕೂಟರ ಕಾಲದಲ್ಲಿ ಬೆಳೆದು, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪ್ರೌಢಸ್ಥಿತಿಗೆ ಬಂದಿತು. ದೇವಾಲಯಗಳು ಅಗ್ರಹಾರಗಳಂತೆ ವೈಯಕ್ತಿಕ ಆಸ್ತಿಗಳಲ್ಲ; ಸಾರ್ವಜನಿಕ ಆಸ್ತಿ. ಅಂದರೆ ಅಗ್ರಹಾರಗಳು ಕೆಲವೇ ಜನ ಬ್ರಾಹ್ಮಣ ಕುಟುಂಬಗಳ ಒಡೆತನಕ್ಕೆ ಸಂಬಂಧಪಟ್ಟರೆ, ದೇವಾಲಯಗಳು ಗ್ರಾಮದ ಎಲ್ಲ ಜನರಿಗೂ ಸಂಬಂಧಪಟ್ಟವು. ಹೀಗಾಗಿ ಇವುಗಳಿಗೆ ನೀಡಿದ ದಾನ-ದತ್ತಿಗಳನ್ನು ಕೆಲವರಿಗೆ ಮಾತ್ರ ತಿಳಿಯುವ ಸಂಸ್ಕೃತದಲ್ಲಿ ಬಿಟ್ಟು ಎಲ್ಲರಿಗೂ ತಿಳಿಯುವ ಸ್ಥಳೀಯ ಕನ್ನಡದಲ್ಲಿ ಬರೆಯುವ, ಮನೆಯಲ್ಲಿ ಮುಚ್ಚಿಡುವ ತಾಮ್ರಪಟಕ್ಕೆ ಬದಲು ಎಲ್ಲರಿಗೂ ಕಾಣುವ ಸಾರ್ವಜನಿಕ ಸ್ಥಳದಲ್ಲಿ ಶಿಲಾಶಾಸನಗಳನ್ನು ನಿಲ್ಲಿಸುವ ಒಂದು ಅಪೂರ್ವ ಪ್ರಕ್ರಿಯೆ ಬೆಳೆದು ಬಂದಿತು. ಅಶೋಕನ ಶಾಸನಗಳು ದೂರದ ಗುಡ್ಡ-ಬೆಟ್ಟಗಳ ದೊಡ್ಡ ಬಂಡೆಯ ಮೇಲೆ ಬರೆಯುತ್ತಿದ್ದರೆ, ಈಗ ಬಂಡೆಗಳನ್ನು ಒಡೆದು, ಫಲಕಮಾಡಿ, ಅಲ್ಲಿಂದ ಊರಿಗೆ ತರುವುದೂ, ಊರ ಮಧ್ಯದಲ್ಲಿ ನಿಲ್ಲಿಸಿ ಶಾಸನಪಠ್ಯ ಕೊರೆಯಿಸುವುದೂ ಆರಂಭವಾಯಿತು. ಇದೆಲ್ಲವನ್ನು ನೋಡಿದರೆ ಅಗ್ರಹಾರಸಂಸ್ಕೃತಿಯಲ್ಲಿ ತಾಮ್ರಶಾಸನ-ಸಂಸ್ಕೃತಭಾಷೆ, ದೇವಾಲಯಸಂಸ್ಕೃತಿಯಲ್ಲಿ ಶಿಲಾಶಾಸನ-ಕನ್ನಡಭಾಷೆಗಳು ಕಾಣಿಸಿ ಕೊಳ್ಳುವುದು ಇವುಗಳ ಪ್ರಮುಖಲಕ್ಷಣವೆಂದು ಹೇಳಬಹುದು.

ಪಠ್ಯಶಾಸನ-ಶಿಲ್ಪಶಾಸನ

ಯಾವ ಕಾಲಕ್ಕೂ ಸಮಾಜದಲ್ಲಿ ಮೇಲು-ಕೀಳು ಸ್ತರಗಳು ಉಳಿದುಕೊಂಡು ಬಂದಿವೆ, ಬರುತ್ತಲಿವೆ. ಮೇಲು ವರ್ಗದವರಾದ ಬ್ರಾಹ್ಮಣ-ಪುರೋಹಿತರು ದಾನ ಸ್ವೀಕರಣೆಗಾಗಿ, ಅರಸು-ಆಡಳಿತಗಾರರು ಯುದ್ಧನಿರ್ವಹಣೆಗಾಗಿ ಸೃಷ್ಟಿಸಿದ ಈ ಶಾಸನಗಳು ಸಂಖ್ಯಾತ್ಮಕವಾಗಿ ಗಣನೀಯವಾಗಿವೆ. ಭಾಷೆ-ಸಾಹಿತ್ಯ-ಶಿಲ್ಪ ದೃಷ್ಟಿಯಿಂದಲೂ ಶ್ರೇಷ್ಠವೆನಿಸಿವೆ. ಈ ಮೇಲುವರ್ಗದವರಿಗಾಗಿ ಹುಟ್ಟಿದ ಕಾರಣ ಇವುಳಲ್ಲಿ ಇವೆಲ್ಲ ಶ್ರೇಷ್ಠತೆಗಳು ಮೇಳವಿಸಿವೆ. ಇನ್ನೊಬ್ಬರು(ವೈಶ್ಯ, ಶೂದ್ರ) ಉತ್ಪಾದಿಸುವ ಸಂಪತ್ತನ್ನು ಬೇರೆ ಬೇರೆ ವಿಧಾನಗಳಿಂದ ಬಾಚಿಕೊಂಡು ಭೋಗಿಸುವ ಈ ಶೋಷಕರ ಶಾಸನಗಳು, ಮೇಲೆ ಹೇಳಿದಂತೆ ಆಕಾರದಲ್ಲಿ ವಿಸ್ತಾರ, ಕಂಡರಣೆಯಲ್ಲಿ ನಯ, ಭಾಷೆ-ಸಾಹಿತ್ಯ ದೃಷ್ಟಿಯಿಂದ ಮಾರ್ಗೀಯವೆನಿಸಿವೆ. ಒಟ್ಟಾರೆ ಇಲ್ಲಿಯದು ವೈಭವೀಕರಿಸಿದ ಪಠ್ಯ, ವೈಭವೀಕರಿಸಿದ ಶಿಲ್ಪವಾಗಿರುತ್ತದೆ.

ಇವುಗಳಿಗೆ ವಿರುದ್ಧವೆಂಬಂತೆ ನಿಲ್ಲಿಸಲ್ಪಟ್ಟಿವೆ, ಕೆಳವರ್ಗದವರ ಸ್ಮಾರಕಗಳಾದ ವೀರಗಲ್ಲುಗಳು, ಇವರ ಹೆಂಡಿರ ಮಾಸ್ತಿಕಲ್ಲುಗಳು. ಇವು ಶಿಲ್ಪಪ್ರಧಾನ-ಪಠ್ಯ ಅಪ್ರಧಾನವಾಗಿರುತ್ತವೆ. ಈ ಉಪೇಕ್ಷೆಗೆ ಕಾರಣ ಹೋರಾಡುವವರು ಕೆಳಸ್ತರದವರು. ನಿರಕ್ಷರಿಗಳಾದ ಇವರನ್ನು ಆಕರ್ಷಿಸಲು

ಸಾಕ್ಷರ ಶಾಸನಗಳು ಅನವಶ್ಯ. ಇವರ ಕಣ್ಣು ಅರ್ಥಮಾಡಿಕೊಳ್ಳಲು ಶಿಲ್ಪ ಅವಶ್ಯ. ಹೀಗಾಗಿ ಇವರ ಹೆಸರಿನಲ್ಲಿ ನಿಲ್ಲಿಸಿದ ಸ್ಮಾರಕಗಳಲ್ಲಿ ಕಣ್ಣು ಓದುವ ಅಕ್ಷರಕ್ಕೆ ಗೌಣಸ್ಥಾನ, ಕಣ್ಣು ನೋಡುವ ಶಿಲ್ಪಕ್ಕೆ ಪ್ರಧಾನ ಸ್ಥಾನ. ಇದರ ಫಲವೆಂಬಂತೆ ವೀರಗಲ್ಲುಗಳ ಕೆಳಸ್ತರದಲ್ಲಿ ಹೋರಾಟದ ಚಿತ್ರ, ಇದರ ಮೇಲಿನ ಸ್ತರದಲ್ಲಿ ಮಡಿದ ವೀರನನ್ನು ವಿಮಾನದ ಮೂಲಕ ದೇವಗಣಿಕೆಯರು ಸ್ವರ್ಗಕ್ಕೆ ಒಯ್ಯುವ ಚಿತ್ರ, ಇನ್ನೂ ಮೇಲಿನ ಸ್ತರದಲ್ಲಿ ಮಡಿದ ವೀರನು ಶಿವಲಿಂಗದ ಹತ್ತಿರ ಸ್ವರ್ಗದಲ್ಲಿ ವಾಸವಾಗಿರುವ ಚಿತ್ರಗಳು ಬಿಡಿಸಲ್ಪಟ್ಟವು. ಇಲ್ಲಿ ಕ್ವಚಿತ್ತಾಗಿ ಬರುವ ವೀರನ ಉಲ್ಲೇಖವು ಅವನ ಹೆಸರಿನ ಮತ್ತು ಯುದ್ಧದ ದಾಖಲೆ ಮಟ್ಟದ್ದೇ ಹೊರತು, ಬ್ರಾಹ್ಮಣ ಕ್ಷತ್ರಿಯರ ಶಾಸನಗಳಲ್ಲಿಯಂತೆ ವರ್ಣನೆ ಮಟ್ಟದ್ದಲ್ಲವೆಂಬುದನ್ನು ಗಮನಿಸಬೇಕು. ಇನ್ನೂ ನಿಕೃಷ್ಟವೆಂಬಂತೆ ಇಷ್ಟೂ ದಾಖಲೆಗಳಿಲ್ಲದೆ, ಕೇವಲ ಯೋಧನ ಚಿತ್ರ ಬಿಡಿಸಿದ ವೀರಗಲ್ಲುಗಳೇ ಹೆಚ್ಚು. ಈ ಎರಡು ಬಗೆಯ (ಶಿಲ್ಪ+ಪಠ್ಯ, ಶಿಲ್ಪ)ವೀರಗಲ್ಲುಗಳಲ್ಲಿ ಬ್ರಾಹ್ಮಣರ ದಾನ-ರಾಜರ ಯುದ್ಧಗಳಂತೆ ವಿವರವಾದ ನಿರೂಪಣೆಯಾಗಲೀ, ಸುಂದರ ಶಿಲ್ಪವಾಗಲೀ ಇಲ್ಲದಿರುವುದು ವಿಷಾದನೀಯವೆನಿಸುತ್ತದೆ. ಯಾರು ಬದುಕುವುದರ ಸಲುವಾಗಿ ಯಾರು ಹೋರಾಡಿದರೋ, ಹೋರಾಡಿ ಮಡಿದರೋ ಅವರ ವಿಷಯದಲ್ಲಿ ತೋರಿಸಿದ ಉಪೇಕ್ಷೆ ಇದಾಗಿದೆ.

ಇದಕ್ಕಿಂತ ಉಪೇಕ್ಷೆಗೆ ಗುರಿಯಾದುವು ಮಹಿಳೆಯರಿಗಾಗಿ ನಿಲ್ಲಿಸಿದ ಮಾಸ್ತಿಕಲ್ಲುಗಳು. ಇವುಗಳಲ್ಲಿ ಬೆಳತೂರಿನ ದೇಕಬ್ಬೆಯ ಶಾಸನ ಬಿಟ್ಟರೆ ಯಾವುದೇ ಮಾಸ್ತಿಶಿಲ್ಪದ ಮೇಲೆ ಬರವಣಿಗೆ ಇಲ್ಲ. ಕ್ವಚಿತ್ತಾಗಿ ಇದ್ದರೂ ಸಾಹಿತ್ಯಿಕವಾಗಿರದೆ, ಕೇವಲ ದಾಖಲಾತ್ಮಕವಾಗಿರುತ್ತದೆ. ಇದು ಮಹಿಳೆ ಸಮಾಜದಲ್ಲಿ ಪಡೆದಿದ್ದ ಕೊನೆಯ ಸ್ಥಾನವನ್ನು ಸೂಚಿಸುತ್ತದೆ. ಇವಳೂ ನಿರಕ್ಷರಿಯಾದುದರಿಂದ ಅಕ್ಷರರೂಪಿ ಶಾಸನಗಳಿಗಿಂತ ವಿಗ್ರಹರೂಪಿ ಶಾಸನಗಳೇ ಅವಳಿಗೆ ಸ್ಫೂರ್ತಿನಿಡುವವೆಂಬ ಉದ್ದೇಶ ಇಲ್ಲಿದೆಯೆಂದು ಬೇರೆ ಹೇಳಬೇಕಿಲ್ಲ. ಅದೇನೇ ಇದ್ದರೂ ಅವಳ ಬಗೆಗಿನ ಸಾಮಾಜಿಕ ಉಪೇಕ್ಷೆ ಶಾಸನ ಬರೆವಣಿಗೆಯಲ್ಲಿಯೂ ತಲೆಹಾಕಿದೆ. ಬಹಳಷ್ಟು ಸಲ ಕಣ್ಣು ಮೂಗು ಬಿಡಿಸದ ಮಾಸ್ತಿ ವಿಗ್ರಹಗಳಿರುವುದು, ಇನ್ನೂ ಬಹಳಷ್ಟು ಸಲ ಕೇವಲ ಎತ್ತಿದ ಕೈ ಇರುವುದು ಈ ಮಾತನ್ನು ಬೆಂಬಲಿಸುತ್ತದೆ. ವೀರಗಲ್ಲು ಮಾಸ್ತಿಕಲ್ಲುಗಳಂತೆ ಜೈನ ನಿಷಧಿಕಲ್ಲುಗಳು ಸ್ಮಾರಕವಾಗಿದ್ದರೂ ಅವು ಲೌಕಿಕಕ್ಕೆ, ಇವು ಧಾರ್ಮಿಕಕ್ಕೆ ಸಂಬಂಧಿಸಿವೆ. ಧಾರ್ಮಿಕವಾಗಿರುವುದರಿಂದ ಇವುಗಳ ಶಿಲ್ಪ-ಬರೆವಣಿಗೆ ಅಷ್ಟೇನೂ ಉಪೇಕ್ಷಿತವಾಗಿರುವುದಿಲ್ಲವೆಂದೇ ಹೇಳಬೇಕು. ಗಾತ್ರ-ಪಾತ್ರದೃಷ್ಟಿಯಿಂದ ಅತ್ಯುತ್ತಮ ನಿಷಧಿಕಲ್ಲುಗಳನ್ನು ಬೆಳ್ಗೊಳ ಮುಂತಾದ ಕ್ಷೇತ್ರಗಳಲ್ಲಿ ಕಾಣಬಹುದಾಗಿದೆ. ಕೆಲವೊಮ್ಮೆ ಈ ಸ್ಮಾರಕಗಳಿಗೆ ಮಂಟಪ ಕಟ್ಟಿದುದೂ ಉಂಟು.

ಹೀಗೆ ಸಾಮಾಜಿಕ ಶ್ರೇಣಿಯ ಹಿಂದಿರುವ ತರತಮ ಭಾವವು ಶಾಸನಗಳ ಭಾಷೆ-ಪಠ್ಯ-ಶಿಲ್ಪಗಳಲ್ಲಿಯೂ ಕಂಡುಬರುವುದು ಗಮನಾರ್ಹವೆನಿಸುತ್ತದೆ.

■■

ಆಕರ : ಮಾರ್ಗ ಸಂಪುಟ-೪

೬೭

ನಿಂಬಣದಂಡನಾಥ : ಇನ್ನಷ್ಟು ಶಾಸನಗಳು

ರಾಜಕೀಯ ಕ್ಷೇತ್ರದ ವ್ಯಕ್ತಿಯಾಗಿದ್ದರೂ ನಿಂಬಣದಂಡನಾಥನು ಕೊಂಡಗುಳಿ ಕೇಶಿರಾಜನ ತಂದೆಯೆಂಬ ಕಾರಣದಿಂದ ವೀರಶೈವ ಧಾರ್ಮಿಕ ಅಭ್ಯಾಸಿಗಳ ಗಮನ ಸೆಳೆದಿದ್ದಾನೆ. ಕೊಂಡಗುಳಿ ಕೇಶಿರಾಜನ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸುತ್ತ(೧೯೭೮) ಈ ನಿಂಬಣದಂಡನಾಥನ ಎರಡು ಶಾಸನಗಳನ್ನು ನಾನು ಸಂಗ್ರಹಿಸಿಕೊಟ್ಟಿದ್ದೆನು. ಅವು : ವಿಜಾಪುರ ಜಿಲ್ಲೆಯ ಬೀಳಗಿ ತಾಲೂಕಿನ ಕೊಪ್ಪ (೧೦೭೫), ಮುದ್ದೇಬಿಹಾಳ ತಾಲೂಕಿನ ತುಂಬಗಿ (೧೦೮೬)ಶಾಸನಗಳು. ಈತನು ಭುವನೈಕಮಲ್ಲ (ಸೋಮೇಶ್ವರ II), ತ್ರಿಭುವನ ಮಲ್ಲ (ವಿಕ್ರಮಾದಿತ್ಯ VI)–ಹೀಗೆ ಇಬ್ಬರ ಆಳಿಕೆಯಲ್ಲಿಯೂ ಅಧಿಕಾರಿಯಾಗಿದ್ದನೆಂದು ಈ ಶಾಸನಗಳು ತಿಳಿಸುತ್ತವೆ. ಇವುಗಳಲ್ಲಿ ನಿಂಬಣನ ಬಿನ್ನಪದ ಮೇರೆಗೆ ಕಾಳಾಮುಖ ತತ್ಪುರುಷಪಂಡಿತನಿಗೆ ಕಿಸುಕಾಡು ೭೦ರ ಬಾದುಬ್ಬೆಯಪಾಳು ಗ್ರಾಮವನ್ನು ದಾನ ನೀಡಿದುದನ್ನು ಕೊಪ್ಪಶಾಸನ ತಿಳಿಸಿದರೆ, ತುಂಬಗಿ ಶಾಸನವು ನೇರವಾಗಿ ನಿಂಬಣದಂಡನಾಥನೇ ಅಲ್ಲಿಯ ಶಾಲೆಯ ತ್ರೈಪುರುಷದೇವರಿಗೆ ದತ್ತಿಕೊಟ್ಟುದನ್ನು ಹೇಳುತ್ತದೆ. ಈ ಎರಡು ಶಾಸನಗಳಲ್ಲದೆ ಇನ್ನೂ ಕೆಲವು ಶಾಸನಗಳು ಇತ್ತೀಚೆ ಗಮನಕ್ಕೆ ಬಂದಿವೆ. ಅವು: ಬಿಜಾಪುರ ಮತ್ತು ಮಾನ್ವಿ ತಾಲೂಕಿನ ಕುರಡಿ ಗ್ರಾಮದ ಶಾಸನಗಳು.

ಬಿಜಾಪುರ ಶಾಸನ (ಎಸ್. ಆಯ್. ಆಯ್. XVIII–೧೦೭ ವಿಜಾಪುರ ಕ್ರಿ. ಶ. ೧೧೦೪)ವು ವಿಕ್ರಮಾದಿತ್ಯVIನ ಕಾಲಕ್ಕೆ ಸಂಬಂಧಿಸಿದೆ. ಇಲ್ಲಿ ದಂಡನಾಯಕನಾದ ದೇಹಾರದ ಪದ್ಮರಸನು ನಿಂಬಣದಂಡನಾಯಕನಿಗೂ ಎಳಮೇಲ ಮನ್ನೆಯನಾದ ಮಂಡಳೇಶ್ವರ ವಿಕ್ರಮಾದಿತ್ಯನಿಗೂ ಶ್ರೇಯಸ್ಸಾಗಲಿ ಎಂದು ಅನ್ನದಾನಕ್ಕೆ ೧೦೦ ಮತ್ತರು ಭೂಮಿ ದಾನನೀಡುತ್ತಾನೆ.

ಮಾನ್ವಿ ತಾಲೂಕಿನ ಕುರುಡಿ ಗ್ರಾಮದ ಈಶ್ವರ ದೇವಾಲಯದಲ್ಲಿರುವ ಮೂರು ಶಾಸನಗಳಲ್ಲಿ (ರಾಯಚೂರು ಜಿಲ್ಲೆಯ ಶಾಸನಗಳು, ಮಾನ್ವಿ–೪೨, ಕ್ರಿ. ಶ. ೧೧೨೩. ೪೩, ಕ್ರಿ. ಶ ೧೧೨೩ ಮತ್ತು ೪೪ ಕ್ರಿ. ಶ. ೧೧೩೭) ಇವನ ಉಲ್ಲೇಖ ಬರುತ್ತದೆ.

೪೨ನೆಯ ಶಾಸನದ ಪ್ರಕಾರ ನಿಂಬಣಯ್ಯ ದಂಡನಾಯಕನು ನಿಂಬಣೇಶ್ವರ ದೇವರಿಗಾಗಿ ಈ ಮೊದಲು ತಾನು ಚಂದ್ರಶೇಖರಭಟ್ಟರಿಗೆ ಕ್ರಯವಾಗಿ ಕೊಟ್ಟಿದ್ದ ಅರ್ಥ ವೃತ್ತಿಯನ್ನು ತಿರುಗಿ ಖರೀದಿಸಿ, ದೇವರಿಗಾಗಿ ದಾನನೀಡಿದನು.

ವಿಕ್ರಮಾದಿತ್ಯVIನು ಬನವಾಸಿಯಲ್ಲಿ ಬೀಡುಬಿಟ್ಟಿದ್ದ ಸಂದರ್ಭದಲ್ಲಿ ಹುಟ್ಟಿದ ೪೨ನೆಯ ಶಾಸನದ ದಿನವೇ (೨೫-೧೨-೧೧೨೩) ೪೩ನೆಯ ಶಾಸನ ಹುಟ್ಟಿದೆ. ಮೇಲಿನ ಶಾಸನನದ ದಾನ ವಿಷಯವನ್ನಲ್ಲದೆ, ನಿಂಬಣನು ತನ್ನ ಪುಷ್ಕರಣಿ ಇತ್ಯಾದಿಗಳಿಗೂ ದಾನಬಿಟ್ಟ ವಿಷಯವೂ ಇಲ್ಲಿದೆ.

ಈ ಎರ್ಡೂ ಶಾಸನಗಳಿಂದ ನಿಂಬಣನ ಹೆಸರಿನಲ್ಲಿ ಜೀವಂತವಿರುವಾಗಲೇ ಕುರುಡಿಗ್ರಾಮದಲ್ಲಿ ನಿಂಬಣೇಶ್ವರದೇವಾಲಯ ನಿರ್ಮಿಸಲ್ಪಟ್ಟಿದ್ದಿತೆಂದು ಹೇಳಬಹುದಾಗಿದೆ. ೪೩ನೆಯ ಶಾಸನವು ಬಹುಶಃ ನಿಂಬರಸನು ನಾಲಿಕಬ್ಬೆ, ಮಲ್ಲಿದೇವರ ಮಗನೆಂದು ಸೂಚಿಸುವಂತಿದೆ. ಇವನಿಗೆ ಇಲ್ಲಿ "ಶಸ್ತ್ರಶಾಸ್ತ್ರ ಸಾಹಿತ್ಯ ಕಳಾಜ್ಞಾನನಿಧಿ" ಎಂದು ಕರೆಯಲಾಗಿದೆ. ಒಟ್ಟಾರೆ, ೧೦೭೫ರದು ನಿಂಬಣನ ಮೊದಲನೆಯ ಶಾಸನ, ೧೧೨೩ರದು ಕೊನೆಯ ಶಾಸನ. ಹೀಗಾಗಿ ಇವನು ಕನಿಷ್ಠ ೪೮ ವರ್ಷ ರಾಜಕೀಯದಲ್ಲಿದ್ದನೆಂದು ಹೇಳಬಹುದು.

೪೪ನೆಯ ಶಾಸನವು ನಿಂಬಣನ ಹೆಣ್ಣು ಮಕ್ಕಳ ಮನೆತನಕ್ಕೆ ಸಂಬಂಧಿಸಿದೆ. ಶ್ರೀವತ್ಸಗೋತ್ರದ ಸೋಮೇಶ್ವರನಿಗೆ ದೇವರಸ ಪರ್ಯಾಯನಾಮದ ಶಂಕರಾರ್ಯ ಮತ್ತು ಮಹಾದೇವನೆಂಬ ಮಕ್ಕಳಿದ್ದರು. ಬಹುಶ: ಇವರು ದ್ರವಿಳವಿಪ್ರರು. ನಿಂಬಪ್ರಭುವಿನ ಒಬ್ಬ ಮಗಳು ನಾಗಲದೇವಿಯನ್ನು ಶಂಕರಾರ್ಯನಿಗೆ, ಇನ್ನೊಬ್ಬ ಮಗಳು ಗಂಗಣಬ್ಬೆಯನ್ನು ಮಹಾದೇವನಿಗೆ ಕೊಡಲಾಗಿದ್ದಿತು. ಚಾಲುಕ್ಯ ಸೋಮೇಶ್ವರIIIನು ರಾಜ್ಯವಾಳುವಾಗ, ಅವನ ಮಗ ಕುಮಾರ ತೈಲಪದೇವನು ಈ ನಾಗಲದೇವಿಗೆ ಅಗ್ರಹಾರ ರಾರಾವಿಯಲ್ಲಿ ಒಂದು ವೃತ್ತಿಯನ್ನು ನೀಡಿದನು. ಈಕೆ ಈ ವೃತ್ತಿಯ ಅರ್ಧಭಾಗವನ್ನು ಅಲ್ಲಿಯ ಶಂಕರೇಶ್ವರ ನಾಗೇಶ್ವರ ದೇವರಿಗೆ ದಾನನೀಡಿದಳು.

ಈ ಮೂರೂ ಶಾಸನಗಳಲ್ಲಿ ಕಂಡುಬರುವ ನಿಂಬಣನು ಕೊಂಡಗುಳಿ ಕೇಶಿರಾಜನ ತಂದೆಯೆಂದೇ ನಾವು ಭಾವಿಸಿದ್ದೇವೆ. ಕಾಲ, ರಾಜಾಶ್ರಯಗಳು ಹೊಂದಿಕೆಯಾಗುವುವಲ್ಲದೆ, ನೆಂಟಸ್ತಿಕೆ ಬೆಳೆಸಿದವರು ವತ್ಸಗೋತ್ರದ ದ್ರವಿಡವಿಪ್ರರು. ನಿಂಬಣಯ್ಯನು ತುಂಬಗಿ ಶಾಸನದಲ್ಲಿ "ವಿಪ್ರವರದಾಯಕಂ" ಎಂದೇ ಕರೆಯಿಸಿಕೊಂಡಿದ್ದಾನೆ. ಈತನು ವಕ್ಖಾಣಭಟ್ಟರಿಗೆ, ಮಗ ಕೇಶಿರಾಜನು ಮಹಾಜನರಿಗೆ ದಾನನೀಡಿದ ವಿಷಯ ಕ್ರಮವಾಗಿ ಕೊಪ್ಪ ಮತ್ತು ಕೊಂಡಗುಳಿ ಶಾಸನಗಳಲ್ಲಿದೆ. ಇದೆಲ್ಲ ಹೊಂದಿಕೆಯಾಗುವುದರಿಂದ

ಮಲ್ಲಿದೇವ-ನಾಲಿಕಬ್ಬೆ

ನಿಂಬಣದಂಡನಾಥ

[ಕೊಂಡಗುಳಿ ಕೇಶಿರಾಜ]   ನಾಗಲದೇವಿ   ಗಂಗಣಬ್ಬೆ

ಹೀಗೆ ವಂಶಾವಳಿಯನ್ನು ರೇಖಿಸಬಹುದಾಗಿದೆ. ನನ್ನ ಇನ್ನೊಂದು ಲೇಖನದಲ್ಲಿ ಕೇಶವ(ವಿಷ್ಣು) ಹೆಸರಿನ ಸುಧಾರಿಸಿದ ರೂಪ (ಕೊಂಡಗುಳಿಯ)ಕೇಶಿರಾಜ ಇರಲಿಕ್ಕಿಲ್ಲ. ಕೇತಿರಾಜವೆನ್ನುವುದೇ ಇದರ ಮೂಲರೂಪವಿರಬಹುದೆಂದು ಚರ್ಚಿಸಿದ್ದೇನೆ. ಇದರಿಂದ ಈತ ವೈಷ್ಣವ ಪರಿಸರದಿಂದ

ಬೇರೆಯಾಗುತ್ತಾನೆ. ಇವನ ತಂಗಿ ನಾಗಲದೇವಿ, ಗಂಗಣಬ್ಬೆ, ಇವರ ಮಾವ ಸೋಮೇಶ್ವರ, ಗಂಡಂದಿರು ಶಂಕರ, ಮಹಾದೇವ-ಇವೆಲ್ಲ ಹೆಸರುಗಳು ಶೈವವಾಗಿರುವುದೂ ನಮ್ಮ ಊಹೆಗೆ ಬೆಂಬಲವಾಗಿ ನಿಲ್ಲುತ್ತದೆ. ಒಟ್ಟಿನಲ್ಲಿ, ಒಂದಿಷ್ಟು ಸಂದೇಹವಿಟ್ಟುಕೊಂಡು ಈ ಇಬ್ಬರೂ ನಿಂಬಣದಂಡನಾಥರು ಒಬ್ಬನೇ ಎಂದು ಹೇಳಬಹುದಾಗಿದೆ.

■■

ಆಕರ : ಮಾರ್ಗ ಸಂಪುಟ-೪

೬೮

ಶಾಸನಗಳಿಂದ ಬಸವಣ್ಣನ ಬಗ್ಗೆ ಇನ್ನಷ್ಟು ಸಂಗತಿಗಳು

"ಶಾಸನಗಳಲ್ಲಿ ಶಿವಶರಣರು"(೧೯೭೮ ದ್ವಿ.ಆ) ಕೃತಿಪ್ರಕಟವಾದ ಬಳಿಕ, ತೆಲುಗುಶಾಸನ ವನ್ನವಲಂಬಿಸಿ ಕಾಲವಿಚಾರವಾಗಿ ಡಾ|| ಜಿ.ಎಸ್. ದೀಕ್ಷಿತರು ಬರೆದ[೧] ಲೇಖನವನ್ನು ಬಿಟ್ಟರೆ ಬಸವಣ್ಣನ ಬಗ್ಗೆ ನೇರ ಇಲ್ಲವೆ ಪರ್ಯಾಯ ಶಾಸನಸಂಗತಿಗಳು ಬಹುಶಃ ಪ್ರಕಟವಾಗಲೇ ಇಲ್ಲವೆನಿಸುತ್ತದೆ. ಈಗ ಎರಡು ಸಣ್ಣ ಸಂಗತಿಗಳನ್ನು ವಿದ್ವಾಂಸರ ಮುಂದೆ ಮಂಡಿಸುತ್ತೇನೆ.

ಡಂಣ್ಣನಾಯಕ ಬಸವಿದೇವ:


ಬಸವಣ್ಣನನ್ನು ಕುರಿತ ಅರ್ಜುನವಾಡ ಶಾಸನವು (೧೨೬೦)ತುಂಬ ಮಹತ್ವ ಪೂರ್ಣವಾದುದು. ಅಲ್ಲಿಯ

ಸಂಗನಬಸವನ ಅ x x
ಲಿಂಗೈಕಂ ದೇವರಾಜಮುನಿಪನ ತನಯಂ।
ಜಂಗಮ ಪರುಸಂ ಕಾವರ
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ॥
ಕಲಿದೇವಮುನಿಪನಾತ್ಮಜ
ಸಲೆ ಮೂಜಗದೊಳಗೆ ಮೆರೆದ ಮಾನವದೇವಂ।
ಗೆಲಿದಂ ಅಶನ ಬೆಸೆನವ
ಛಲರಧಿಕಂ ಹಾಲಬಸವಿದೇವ ಮುನೀಶಂ॥

ಎಂಬ ಪದ್ಯಗಳು ಅರ್ಥ ಸಂದೇಹ ಹುಟ್ಟಿಸಿವೆ. ಇವುಗಳಲ್ಲಿ ಮೊದಲನೆಯ ಪದ್ಯದ ತ್ರುಟಿತಭಾಗ ಅ[ಗ್ರಜ] ಇರಬೇಕೆಂದು ಬಹುಶಃ ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಈ ಪದ್ಯಕ್ಕೆ ಎಲ್ಲರೂ ಹೇಳಿದ ಅರ್ಥ ದೋಷಪೂರ್ಣವೆಂದು ಸಕಾರಣ ಚರ್ಚಿಸಿ, ಎರಡೂ ಪದ್ಯಗಳಿಂದ ಹೊರಡುವ ಸರಿಯಾದ ವಂಶಾವಳಿಯನ್ನು ನಾನು ಬೇರೊಂದೆಡೆ ಹೀಗೆ ಕೊಟ್ಟಿದ್ದೇನೆ.

---

೧. ಬಸವಣ್ಣನವರ ಜೀವನದ ಕಾಲ – ಜಿ.ಎಸ್. ದೀಕ್ಷಿತ (ಅಧ್ಯಯನ – ೬೨೭)



ಹಿಂದು ಮುಂದು ಯಾವ ಅನ್ಯ ಆಧಾರಗಳೂ ಇಲ್ಲದ ವಂಶಾವಳಿಯಿದು. ಅಂದರೆ ಬಸವಣ್ಣನಿಗೆ ದೇವರಾಜ ಹೆಸರಿನ ಅಣ್ಣನಿದ್ದನೆಂಬುದಕ್ಕಾಗಲೀ, ಹಾಲಬಸವಿದೇವನ ಸಂತಾನ ಮುಂದೆ ಏನಾಯಿತೆಂಬುದಕ್ಕಾಗಲೀ ನಮಗೆ ದಾಖಲೆಗಳಿಲ್ಲ. ಈ ಕಾರಣದಿಂದಾಗಿ ಇದು ಒಂದಿಷ್ಟು ಪ್ರಶ್ನೆಯಾಗಿಯೇ ಉಳಿದುಕೊಂಡಿದೆ. ಈ ಶಾಸನದ ತರುವಾಯ ಶಿವತತ್ವಚಿಂತಾಮಣಿ, ವೀರಶೈವಾಮೃತ ಮಹಾಪುರಾಣಗಳಂಥ ಮಾಹಿತಿ ಕೋಶಗಳಲ್ಲಿಯೂ ಈ ಹೆಸರು-ಸಂಬಂಧಗಳ ಬಗ್ಗೆ ಸೂಚನೆ ಇಲ್ಲದುದು ಆಶ್ಚರ್ಯವೆನಿಸಿದೆ.

ಇಂಥ ಸಂದರ್ಭದಲ್ಲಿ ಸಣ್ಣ ಆಶಾಕಿರಣವಾಗಿ, ನಮ್ಮ ಗಮನ ಸೆಳೆಯುತ್ತದೆ, ಮುನವಳ್ಳಿಯ ಕಾಳಾಮುಖ ಶಾಸನ(ಕೆ. ಆಯ್. I-೩೧). ಈ ಗ್ರಾಮದ ಕ್ರಿ. ಶ. ೧೨೫೨ನೆಯ ಶಾಸನವು ಜಗದೀಶ್ವರದೇವರನ್ನು ಕುರಿತುದಾಗಿದೆ. ಸರ್ವೇಶ್ವರಯತಿಯ ಮಗ ಕ್ರಿಯಾಶಕ್ತಿ, ಕ್ರಿಯಾಶಕ್ತಿಯ ಮಗ ಸೋಮೇಶ್ವರನನ್ನು ಉಲ್ಲೇಖಿಸಿ, ಯಮನಿಯಮಾದಿಗಳಲ್ಲಿ-ಯಜನ ಯಾಜನಾದಿ ಷಟ್ಕರ್ಮಗಳಲ್ಲಿ ನಿರತನಾದ, ವೇದ ತರ್ಕ ವ್ಯಾಕರಣಗಳಲ್ಲಿ ಬಲ್ಲಿದನಾದ, ವ್ಯಾಸ ಅಗಸ್ತ್ಯ ದೂರ್ವಾಸ ವಿಶ್ವಾಮಿತ್ರ ನಾರದ ಮೊದಲಾದ ಮುನಿಚಾರಿತ್ರನಾದ, ಕೌಪೀನ-ಭಸ್ಮ-ರುದ್ರಾಕ್ಷಿ ಧಾರಕನಾದ "ಲಾಕುಳಾಗಮ ಸಮಯ ಸಮುದ್ಧರರುಂ ಜಂಗಮ ಲಿಂಗಾವತಾ[ರ]ರುಂ, ಉಭಯಕುಲಸುದ್ದಮಪ್ಪ ಶ್ರೀ ಕಾಳಾಮುಖ ಮಸಿಯ[೨] ಸಂಮಂಧ"ನಾದ ಸರ್ವೇಶ್ವರದೇವರ ಕೈಯಲ್ಲಿ ಜಗದೀಶ್ವರದೇವರಿಗಾಗಿ ದಾನನೀಡಿದ ವಿಷಯವಿಲ್ಲಿದೆ. ಈ ದೇವಾಲಯ(ಮಠ)ವು ವೇಳುಗ್ರಾಮಿಯ ಮಲ್ಲೇಶ್ವರ, ನೇಸರಗಿಯ ಕಲಿದೇವ, ಗೋಕಾಗೆಯ ಬಲ್ಲೇಶ್ವರ, ಕೊಟಬಾಗಿಯ ವಿಜಯಮೇಶ್ವರ, ಗೋಳಿಯ ಹಳ್ಳಿಯ ಕಲಿದೇವರ ಮಠಗಳಿಗೆ ಗುರುಪೀಠವೆಂದೂ ಇಲ್ಲಿ ಹೇಳಲಾಗಿದೆ.

ಈ ಶಾಸನ ಬರೆದವನು "ಶ್ರೀಮತು ಪರಮಮಾಹೇಶ್ವರ ದಂಣ್ಡನಾಯಕ ಬಸವಿದೇವನ [ಮು]ದ್ದು ಶ್ರೀ ಕಲಿದೇವರ ದಾಸ ಬೊಮ್ಮರಸ" ಎಂದು ಹೇಳಲಾಗಿದೆ. ಇಲ್ಲಿಯ ಶ್ರೀಮತು, ಪರಮಮಾಹೇಶ್ವರ, ದಂಣ್ಡನಾಯಕ ವಿಶೇಷಣಗಳು ವಚನಕಾರ ಬಸವಣ್ಣನನ್ನೇ ನೆನಪಿಸುತ್ತವೆ.

---

೨. ಮಸಿಯ ಎಂದರೇನು? ಸ್ಪಷ್ಟವಾಗುವುದಿಲ್ಲ. ಶಿಲೆಯ ಮೇಲೆ ಇದೇ ಪಾಠವಿದೆ. ಕಣ್ಣಾರೆ ಓದಲಾಗಿದೆ.

ಅರ್ಜುನವಾಡದ ಸೀಮೆಯ ಕಲ್ಲು ಶಾಸನದ "ಶ್ರೀ ಬಸವಣದಂಣಾಯಕರ ಕೆಯ್" ಎಂಬಲ್ಲಿಯಂತೆ ಇಲ್ಲಿಯೂ ದಂಡನಾಯಕ ಬಸವಿದೇವ ಎಂದು ಕರೆಯಲಾಗಿದೆ. ಅಲ್ಲಿ ಬಸವಣ್ಣನ ವಂಶದ ಹಾಲಬಸವಿದೇವನನ್ನು "ಮಹಾಮಹೇಶ್ವರಂ" ಎಂದು ಕರೆದಂತೆ ಇಲ್ಲಿ "ಪರಮ ಮಾಹೇಶ್ವರಂ" ಎಂದು ಬಸವಣ್ಣನನ್ನು ಕರೆಯಲಾಗಿದೆ. ಈ ಶಾಸನದ ಕಾಲಮಾನ ಅರ್ಜುರ್ನವಾಡ ಶಾಸನದ ಬಸವಣ್ಣನ ವಂಶಪರಂಪರೆಗೆ ಹೊಂದಿಕೆಯಾಗುತ್ತದೆ.

ಇಲ್ಲಿ ಬಸವಿದೇವನಿಗೆ ಏಕವಚನ, ಕಲಿದೇವನಿಗೆ ಬಹುವಚನ ಬಳಸಿರುವುದರಿಂದ ಕಲಿದೇವನು ವ್ಯಕ್ತಿಯಾಗಿರದೆ ದೈವತವೇ ಆಗಿರಬಹುದು. ಅರ್ಜುನವಾಡ ಶಾಸನ ಆರಂಭವಾಗುವುದೇ ಕಲಿದೇವರ ಸ್ತುತಿಯಿಂದ. ಹೀಗಾಗಿ ವ್ಯಕ್ತಿ ಬಸವಿದೇವನ ಮುದ್ದು ಆಗಿರುವ ಮತ್ತು ದೈವತ ಕಲಿದೇವರ ದಾಸನಾಗಿರುವ ವ್ಯಕ್ತಿಯಾಗಿದ್ದಾನೆ, ಬೊಮ್ಮರಸ. ಇದೆಲ್ಲಕ್ಕಿಂತ ಮಿಗಿಲಾಗಿ ಅರ್ಜುನವಾಡ ಶಾಸನದಂತೆ ದಾನಸ್ವೀಕರಿಸಿದ ಸೋಮೇಶ್ವರದೇವನನ್ನು "ಜಂಗಮ ಲಿಂಗಾವತಾರ"ವೆಂದು ಈ ಶಾಸನವು ಕರೆದುದು ಬಸವ ಚಳುವಳಿಯ ವಾತಾವರಣವನ್ನೇ ನೆನಪಿಸುತ್ತದೆ. ಆದುದರಿಂದ ಶಾಸನ ಬರೆದ ಬೊಮ್ಮರಸನು ದೈವತ ಕಲಿದೇವನನ್ನು, ವಚನಕಾರ ಬಸವಣ್ಣನನ್ನು ಹೆಮ್ಮೆಯಿಂದ ಸ್ಮರಿಸಿರುವನೆಂದು ಹೇಳಬಹುದಾಗಿದೆ.

ಒಂದು ವೇಳೆ ಇಲ್ಲಿ ಬರುವ ಕಲಿದೇವನು ದೈವತವಾಗಿರದೆ ವ್ಯಕ್ತಿಯಾಗಿದ್ದರೆ ಈತನು ಅರ್ಜುನವಾಡ ಶಾಸನೋಕ್ತ ಬಸವಣ್ಣನ ಅಣ್ಣನ ಮಗ ಕಲಿದೇವನೇ ಎನಿಸುವುದರಿಂದ, ಬೊಮ್ಮರಸನೂ ಬಸವಣ್ಣನ ರಕ್ತಸಂಬಂಧಿ ಎನಿಸುತ್ತಾನೆ. ಅರ್ಜುನವಾಡ ಶಾಸನದಲ್ಲಿ ದೇವರಾಜ (ಮುನಿಪ), ಮಗ ಕಲಿದೇವ (ಮುನಿಪ), ಮಗ ಹಾಲಬಸವಿದೇವ (ಮುನೀಶ)ರಿಗಾಗಿ ತಪ್ಪದೇ "ಮುನಿ" ಪದವನ್ನು ಬಳಸಲಾಗಿದೆ. ಪ್ರಸ್ತುತ ಗ್ರಾಮದ ಪ್ರಾಚೀನ ಹೆಸರು ಮುನಿವಳ್ಳಿ. ಇವುಗಳಿಗೆ ಏನಾದರೂ ಸಂಬಂಧವಿದೆಯೇ? ವಿಚಾರಿಸಬೇಕು. (ಶಾಸನದಲ್ಲಿಯ ವ್ಯಾಸ, ಅಗಸ್ತ್ಯ ಇತ್ಯಾದಿ ಮುನಿಗಳ ಹೆಸರು ಕೇವಲ ಗ್ರಾಮವೈಭವದ ಸೂಚನೆಯೆಂದು ಬೇರೆ ಹೇಳಬೇಕಿಲ್ಲ). ಅರ್ಜುನವಾಡ ಶಾಸನದಲ್ಲಿ ಹಾಲಬಸವಿದೇವ ಮುನೀಶನನ್ನು "ಸಮಯಭಕ್ತಿ ಸಂಪನ್ನ......ತಪಚಕ್ರವರ್ತಿ" ಎಂಬ, ಈ ಶಾಸನದಲ್ಲಿ "ಸಮಯ ಚಕ್ರವರ್ತಿ ಅಯ್ಯೂರ್ವರು" ಎಂಬ ಪದಗಳು ಕಾಣಿಸಿಕೊಂಡಿವೆ. ಅರ್ಜುನವಾಡ ಶಾಸನದಂತೆ ಈ ಶಾಸನವೂ ದಾನ ಪಡೆಯುವಿಕೆ ಇತ್ಯಾದಿ ಸಾಂಪ್ರದಾಯಿಕ ಚಟುವಟಿಕೆಗಳನ್ನು ಒಳಗೊಂಡಿರುವುದನ್ನು ಇಲ್ಲಿ ಸ್ಮರಿಸಬೇಕು.

ಬಸವಣ್ಣನ ಜೀವನದ ಕೊನೆಯ ವರ್ಷ:

ಬಸವಣ್ಣನ ಜನನಕಾಲವಾಗಲೀ, ಅಂತ್ಯಕಾಲವಾಗಲೀ, ಕೊನೆಯ ಪಕ್ಷ ಬದುಕಿದ ಒಟ್ಟು ಅವಧಿಯಾಗಲೀ ಇನ್ನೂ ನಿಶ್ಚಿತವಾಗಿಲ್ಲ. ಅವನ ಜನನ ೧೧೧೬ ಇಲ್ಲವೆ ೧೧೩೦ ಎಂಬ, ನಿಧನ ೧೧೬೮ ಇಲ್ಲವೆ ೧೧೮೫ ಇಲ್ಲವೆ ೧೧೯೫ ಎಂಬ ವಾದ ಇನ್ನೂ ಜೀವಂತವಾಗಿದೆ. ಅವನು ಬದುಕಿದುದು ೩೬ ವರ್ಷವೆಂದು ಕೆಲವರು, ೬೦ವರ್ಷವೆಂದು ಕೆಲವರು, ೮೦ವರ್ಷವೆಂದು ಕೆಲವರು ಹೇಳುತ್ತಲಿದ್ದಾರೆ.

ಬಸವಣ್ಣನವರ ನಿಧನಕಾಲ ಸುಮಾರು ೧೧೮೫ ಎಂದು ಡಾ॥ ಜಿ. ಎಸ್. ದೀಕ್ಷಿತ ಮಂಡಿಸಿದುದೇ ತೀರ ಇತ್ತೀಚಿನ ವಾದವಾಗಿದೆ (ಅಧ್ಯಯನ-ಪು ೬೭೭-ಶಂಬಾ ಅಭಿನಂದನ ಗ್ರಂಥ-೯೮೦). ಇದಕ್ಕೆ ಇವರು ಪಂಡಿತಾರಾಧ್ಯನನ್ನು ಉಲ್ಲೇಖಿಸುವ ಆಂಧ್ರಪ್ರದೇಶದ ಕೂಡಲಸಂಗಮದ ತೆಲುಗು ಶಾಸನವನ್ನು ಮುಖ್ಯ ಆಧಾರವಾಗಿ ಹಿಡಿಯುತ್ತಾರೆ. ೧೧೮೫ರ ಈ ಶಾಸನದಲ್ಲಿ ಪಂಡಿತಾರಾಧ್ಯರಿಗೆ ದಾನನೀಡಿದ ವಿಷಯವಿದೆ. ಬಸವಣ್ಣ ನಿಧನ ಹೊಂದಿದ ಕೆಲವೇ ದಿನಗಳಲ್ಲಿ ಪಂಡಿತಾರಾಧ್ಯನೂ ನಿಧನ ಹೊಂದಿದ ಸಂಗತಿ ಕನ್ನಡ ಕಾವ್ಯಗಳಲ್ಲಿ ಬರುವುದರಿಂದ, ಇದು ಬಸವಣ್ಣನ ನಿಧನ ಕಾಲವೂ ಆಗಿದೆಯೆಂದು ಅವರು ಹೇಳುತ್ತಾರೆ.

ಈ ಬಳಿಕ ಡಾ॥ ಬಿ. ವಿ. ಶಿರೂರ ಅವರು ಮೊಲ್ಲೆಬೊಮ್ಮಯ್ಯನ ಕಾವ್ಯ ಪ್ರಕಟಿಸಿದರು. ಡಾ॥ ಜಿ. ಎಸ್. ದೀಕ್ಷಿತ ಡಾ॥ ಬಿ. ವಿ. ಶಿರೂರ ಅವರು ಕೋಡಿಕೊಪ್ಪದ ಎರಡು ಶಾಸನ (೧೧೨೧, ೧೧೪೪) ಗಳತ್ತ, ಡಾ॥ ದೇವರ ಕೊಂಡಾರೆಡ್ಡಿ ಅವರು ಕಲ್ಲೂರಿನ ಎರಡು ಶಾಸನ (೧೧೫೪, ೧೧೮೬)ಗಳತ್ತ ಅಭ್ಯಾಸಿಗಳ ಗಮನ ಸೆಳೆದರು. ಈ ಎರಡೂ ಗ್ರಾಮಗಳ (ಕೋಡಿಕೊಪ್ಪ, ಕಲ್ಲೂರು) ಶಾಸನಗಳಲ್ಲಿ ಬರುವ ಮೊಲ್ಲೆಬೊಮ್ಮಯ್ಯ ಹೆಸರಿನ ಇಬ್ಬರೂ ವ್ಯಕ್ತಿಗಳು ಒಬ್ಬನೇ ಎಂದು ಡಾ॥ಶಿರೂರ ಹೇಳುತ್ತಾರೆ. ಆದರೆ ೧೧೨೧ರಲ್ಲಿ ಶಾಸನಸ್ಥನಾಗುವಷ್ಟು ದೊಡ್ಡವನಾಗಿದ್ದವನು ೧೧೮೬ ಬಳಿಕ ಬಿಜ್ಜಳನನ್ನು ಕೊಲ್ಲುವುದು ಕಾಲವ್ಯಾಪ್ತಿ ದೃಷ್ಟಿಯಿಂದ ಅಸಂಭವ ಎನಿಸುವುದರಿಂದ ಕೋಡಿಕೊಪ್ಪ ಮೊಲ್ಲೆಬೊಮ್ಮಯ್ಯನೆ ಬೇರೆ, ಕಲ್ಲೂರ ಮೊಲ್ಲೆಬೊಮ್ಮಯ್ಯನೆ ಬೇರೆ. ಕಲ್ಲೂರ ಬೊಮ್ಮಯ್ಯನು ಬಿಜ್ಜಳನನ್ನು ಕೊಂದವನೆಂದು ನಮ್ಮ ಅಭಿಪ್ರಾಯ. ಹಾಗಿದ್ದರೆ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ ನಿಧನರಾಗಿರುವ ಬಸವಣ್ಣ, ಬಿಜ್ಜಳ, ಮೊಲ್ಲೆ ಬೊಮ್ಮಯ್ಯರಲ್ಲಿ ಮೊಲ್ಲೆಬೊಮ್ಮಣ್ಣನು ೧೧೮೬ರ ವರೆಗೂ ಜೀವಂತವಾಗಿರುವುದರಿಂದ, ಬಿಜ್ಜಳ, ಬಸವಣ್ಣನವರೂ ಕನಿಷ್ಠ ಈ ಅವಧಿಯವರೆಗೂ ಜೀವಿಸಿರಬೇಕಾಗುತ್ತದೆ.

ಒಟ್ಟಾರೆ, ಡಾ॥ ದೀಕ್ಷಿತರು ಪಂಡಿತಾರಾಧ್ಯನ ಜೀವಾವಧಿಯ ಕೊನೆಯ ಕಾಲವನ್ನು ಆಧಾರವಾಗಿ ಹಿಡಿದರೆ, ನಾವು ಮೊಲ್ಲೆ ಬೊಮ್ಮಯ್ಯನ ಜೀವಾವಧಿಯ ಕೊನೆಯ ಕಾಲವನ್ನು ಆಧಾರವಾಗಿ ಹಿಡಿಯುವ ಮೂಲಕ ಬಸವಣ್ಣನ ಜೀವಿತದ ಕೊನೆಯ ಕಾಲಾವಧಿಯ ವಿಷಯವಾಗಿ ಸರಿಸುಮಾರು ಒಂದೇ ಅಭಿಪ್ರಾಯಕ್ಕೆ ಬಂದಂತಾಗಿದೆ. ಶರಣರನ್ನು ಉಳವಿಯ ವರೆಗೆ ಬೆನ್ನಟ್ಟಿದ ಬಿಜ್ಜಳನ ತಂಗಿ ಸಿರಿಯಾದೇವಿಯ ಮಗನೂ ಯಲಬುರ್ಗಿ ಸಿಂದವಂಶೀಯನೂ ಆಗಿದ್ದ ಈ ವೀರಬಿಜ್ಜಳನ ಕೊನೆಯ ಶಾಸನೋಲ್ಲೇಖ ೧೧೮೬ ಎಂಬುದನ್ನೂ ಇಲ್ಲಿ ನೆನೆಯಬಹುದು. ಒಟ್ಟಾರೆ ಬಸವಣ್ಣನು ೧೧೮೬ರ ಸುಮಾರಿಗೆ ಲಿಂಗೈಕ್ಯನಾಗಿದ್ದಾನೆ.

■■

---

೩. ಡಾ। ದೀಕ್ಷಿತ : ಬಿಜ್ಜಳನ ಸಾವಿನ ಬಗೆಗಿನ ಕಾಲ (ಇತಿಹಾಸ ದರ್ಶನ-೧೪)
ಡಾ। ಶಿರೂರ : ಮೊಲ್ಲೆಬೊಮ್ಮಯ್ಯನ ಕಾವ್ಯ (ಪ್ರಸ್ತಾವನೆ)
ಸೂರ್ಯಕೀರ್ತಿ (ಡಾ। ಸೂರ್ಯನಾಥ ಕಾಮತ ಅವರ ಅಭಿನಂದನ ಸಂಪುಟ)
ಡಾ। ದೇವರಕೊಂಡಾರೆಡ್ಡಿ : ರಾಯಚೂರ ಜಿಲ್ಲೆಯ ಶಾಸನಗಳು

ಆಕರ : ಮಾರ್ಗ ಸಂಪುಟ-೪

೬೯

ಮೊಲ್ಲೆ ಬೊಮ್ಮಯ್ಯಗಳ ಕಾವ್ಯ ಮತ್ತು ಶಾಸನಗಳು

ಕನ್ನಡ ಕೃತಿಗಳಲ್ಲಿ ಕೆಲವು ಸಾಹಿತ್ಯದೃಷ್ಟಿಯಿಂದ, ಇನ್ನು ಕೆಲವು ಚರಿತ್ರೆ ದೃಷ್ಟಿಯಿಂದ ತುಂಬ ಮುಖ್ಯವಾದುವು. ಇವುಗಳಲ್ಲಿ ಚಾರಿತ್ರಿಕ ಮಹತ್ವದ ಕೃತಿಗಳನ್ನು ಶಾಸನಗಳೊಂದಿಗೆ ಮುಖಾಮುಖಿಯಾಗಿಟ್ಟು ನೋಡುವುದು ಅವಶ್ಯವಿದೆ. ಈ ಪ್ರಸಂಗದಲ್ಲಿ ಒಂದರ ಹೇಳಿಕೆಯನ್ನು ಇನ್ನೊಂದರಿಂದ ಸಮರ್ಥಿಸುವ, ಒಂದರ ಕೊರತೆಯನ್ನು ಇನ್ನೊಂದರಿಂದ ತುಂಬಿಕೊಳ್ಳುವ, ಆ ಮೂಲಕ ಚರಿತ್ರೆಗೆ ಅಧಿಕೃತತೆ ತಂದುಕೊಡುವ ಕೆಲಸ ಇಲ್ಲಿ ನಡೆಯುತ್ತದೆ. ಇಂಥ ಒಂದು ಮಹತ್ವದ ಕೃತಿಯಾಗಿದೆ, ಮೊಲ್ಲೆ ಬೊಮ್ಮಯ್ಯಗಳ ಕಾವ್ಯ. ಕವಿಚರಿತೆಕಾರರಿಗೂ, ಆಮೇಲಿನ ಸಂಶೋಧಕರಿಗೂ ಲಭ್ಯವಾಗದಿದ್ದ ಈ ಕೃತಿಯನ್ನು ಡಾ॥ಬಿ. ವಿ. ಶಿರೂರ ಅವರು ೧೯೮೭ರಲ್ಲಿ ಗದುಗಿನ ಶ್ರೀ॥ ತೋಂಟದಾರ್ಯ ಮಠದ ಮೂಲಕ ಪ್ರಕಟಿಸಿದರು. ಇದನ್ನು ಈ ವರೆಗೆ ಚರಿತ್ರೆಯ ಅಭ್ಯಾಸಿಗಳು ಗಂಭೀರವಾಗಿ ಗಣಿಸದಿರುವುದು ವಿಷಾದದ ಸಂಗತಿಯಾಗಿದೆ. ಅದೇನೇ ಇರಲಿ, ಈ ಆವೃತ್ತಿಯಲ್ಲಿ ಡಾ॥ ಶಿರೂರ ಅವರು ಇನ್ನಷ್ಟು ಗಮನಿಸಬೇಕಿದ್ದ ಸಂಗತಿಗಳನ್ನು, ಆಮೇಲೆ ಬೆಳಕಿಗೆ ಬಂದ ಅಂಶಗಳನ್ನು ಸಂಗ್ರಹಿಸಿ, ಈ ಕೃತಿಯ ಮಹತ್ವವನ್ನು ಇನ್ನೂ ಸ್ಫುಟಗೊಳಿಸುವುದು ಪ್ರಸ್ತುತ ಲೇಖನದ ವಿಷಯವಾಗಿದೆ.

ಕರ್ತೃ ಧೂಪದ ರಾಚೇಶ ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲೂಕಿನ ಕಲ್ಲೂರು ಗ್ರಾಮದವ. ಇಲ್ಲಿಯ ಕಲ್ಲಿನಾಥದೇವರ ಭಕ್ತ, ವೀರಶೈವ ಪಡಿವಿಡಿ ಬಗಿಯ ಸಿದ್ಧೇಶನ ಶಿಷ್ಯ. ಕೃತಿರಚನೆಯ ಕಾಲ, ಸಂಪಾದಕರ ಪ್ರಕಾರ ಸುಮಾರು ಕ್ರಿ. ಶ. ೧೬೦೦.

ವೀರಶೈವ ಕೃತಿಗಳು ಮೊಲ್ಲೆ ಬೊಮ್ಮಯ್ಯನ ಬಗ್ಗೆ, ಬಿಜ್ಜಳನನ್ನು ಸಂಹರಿಸುವಲ್ಲಿ ಜಗದೇವನೊಂದಿಗೆ ಕೈಜೋಡಿಸಿದವ ಎಂದು ಮಾತ್ರ ಹೇಳಿ ಮುಗಿಸಿದ್ದವು. ಬೊಮ್ಮಯ್ಯನ ಆರಾಧ್ಯ ದೇವತೆಯ ಗ್ರಾಮ(ಕಲ್ಲೂರ)ದವನಾಗಿರುವ ಈ ಕವಿಗೆ ಗೊತ್ತಿದ್ದ ಅನೇಕ ಹೊಸ ವಿಷಯಗಳು, ಪ್ರಸ್ತುತ ಕಾವ್ಯದಿಂದ ತಿಳಿದುಬರುತ್ತವೆ. ಈಗ ಈ ಕಾವ್ಯ ಮತ್ತು ಶಾಸನಗಳನ್ನು ಅವಲಂಬಿಸಿ ಹೀಗೆ ಚರ್ಚೆ ನಡೆಸಬಹುದು.

೧. ಮೊಲ್ಲೆ ಬೊಮ್ಮಯ್ಯ ಯಲಬುರ್ಗಾ ತಾಲೂಕಿನ ಕಲ್ಲೂರಿಗೆ ಸಮೀಪದ ರಾವಣಕಿ (ಇಂದಿನ ರ್‍ಯಾವಣಕಿ) ಗ್ರಾಮದವ. ಇಲ್ಲಿಯ ಬೊಮ್ಮಣಗೌಡ, ಕಲ್ಲಮ್ಮ ದಂಪತಿಗಳ ಮಗ. ಈ ಗ್ರಾಮದ ಬಗ್ಗೆ ತಂದೆ-ತಾಯಿಗಳ ಬಗ್ಗೆ ಬೇರೆ ಕಾವ್ಯಗಳಲ್ಲಾಗಲೀ, ಶಾಸನಗಳಲ್ಲಾಗಲೀ ಉಲ್ಲೇಖ, ವಿವರಗಳು ಸಿಗುವುದಿಲ್ಲ.

೨.   ಮೊಲ್ಲೆಬೊಮ್ಮಯ್ಯನು ನೆರೆಯ ಕಲ್ಲೂರು ಗ್ರಾಮದ ಕಲ್ಲಿನಾಥದೇವರ ಆಶೀರ್ವಾದದಿಂದ ಹುಟ್ಟಿದವ. ಈ ದೇವರ ಪರಮಭಕ್ತ. ಈ ಊರಿನಲ್ಲಿ ೧೩ ಶಾಸನಗಳಿದ್ದು, ಇವೆಲ್ಲ ಈ ಕಲ್ಲಿನಾಥ ದೇವಾಲಯದಲ್ಲಿ, ಇದರ ಆವರಣದಲ್ಲಿವೆ (ಕೊಪ್ಪಳಜಿಲ್ಲೆಯ ಶಾಸನಸಂಪುಟ, ಯಲಬುರ್ಗಾ ೮-೨೧). ಇವುಗಳಲ್ಲಿ ನಂ ೧೭ (೧೦೯೮, ೧೧೨೫, ೧೧೫೪), ೧೬ (೧೧೩೨), ೧೩ (೧೧೮೫), ೧೨(೧೧೮೬), ೧೮ (೧೪೭೨), ೧೪ (೧೫೩೭)ನೇರವಾಗಿ ಕಲ್ಲಿನಾಥನನ್ನು ಹೆಸರಿಸುತ್ತವೆ. ಈಗ ಈ ಆರು ಶಾಸನಗಳಲ್ಲಿ ದಾಖಲಾಗಿರುವ ಎಂಟು ದತ್ತಿಗಳನ್ನು ಕುರಿತು ಚರ್ಚಿಸಬಹುದು. ಇವು ೧೦೯೮ರಿಂದ ೧೫೩೭ರ ವರೆಗೆ ಹುಟ್ಟಿವೆ. ಮೊದಲಿನ ೬ ದತ್ತಿಗಳು ಕಲ್ಯಾಣಚಾಲುಕ್ಯರ, ಅವರ ಸಾಮಂತರಾದ ಯಲಬುರ್ಗಸಿಂದರ ಮತ್ತು ಅವರ ಅಧಿಕಾರಿಗಳ ಕಾಲದಲ್ಲಿ, ಕೊನೆಯ ಎರಡು ದತ್ತಿಗಳು ವಿಜಯನಗರದ ಅರಸುಗಳ ಕಾಲದಲ್ಲಿ ಹುಟ್ಟಿದ್ದು, ಇವುಗಳಲ್ಲಿ ಎರಡು ನೇರವಾಗಿ ಮೊಲ್ಲೆಬೊಮ್ಮಯ್ಯನಿಗೆ ಸಂಬಂಧಿಸಿದ್ದು, ಇವುಗಳ ವಿವರ ಹೀಗಿದೆ.

ಅರಸರು	ದಾನಿ	ಕಾಲ	ಸ್ವೀಕರಿಸಿದ ವ್ಯಕ್ತಿ
೧. ಕಲ್ಯಾಣಚಾಲುಕ್ಯ ವಿಕ್ರಮಾದಿತ್ಯVI	ಸಿಂದಚಾವುಂಡ I	೧೦೯೮	ಕಾಳಾಮುಖ ಶಿವಶಕ್ತಿಪಂಡಿತ.
೨. ಕಲ್ಯಾಣಚಾಲುಕ್ಯ ವಿಕ್ರಮಾದಿತ್ಯVI	ಮನೆವೆಗ್ಗಡೆ ಮಹಾ ದೇವಯ್ಯನ ಸುಂಕಾಧಿಕಾರಿ ಬಮ್ಮದೇವಯ್ಯ	೧೧೨೫	ರುದ್ರಶಕ್ತಿಪಂಡಿತ
೩. ಕಲ್ಯಾಣಚಾಲುಕ್ಯ ಸೋಮೇಶ್ವರIII	ಸಿಂದ ಪೆರ್ಮಾಡಿದೇವನ ಅಧಿಕಾರಿ(?) ಮಹೇಶ್ವರಯ್ಯ	೧೧೩೫	–
೪. ಕಲ್ಯಾಣಚಾಲುಕ್ಯ ತೈಲIII	ಕಲ್ಲೂರನ್ನಾಳುತ್ತಲಿದ್ದ ಸಿಂದ ಚಾವುಂಡIIನ ರಾಣಿ ಮಹಾದೇವಿ	೧೧೫೪	ಮೊಲ್ಲೆಯ ಬೊಮ್ಮಯ್ಯ
೫. ಕಲ್ಯಾಣಚಾಲುಕ್ಯ ಸೋಮೇಶ್ವರIV	ಕಲಚುರಿ ಬಿಜ್ಜಳನ ಮಗಳು ಸಿರಿಯಾದೇವಿ ಮತ್ತು ಸಿಂದ ಚಾವುಂಡII ಇವರ ಮಕ್ಕಳಾದ ವೀರಬಿಜ್ಜಳ, ವಿಕ್ರಮಾದಿತ್ಯರ ಆದೇಶದಂತೆ ಪಸಾಯಿತ ಸಣ್ಣಗೇತೆಯ ನಾಯಕ	೧೧೮೫	ಸೋಮೇಶ್ವರ ಪಂಡಿತ
೬. ಸೋಮೇಶ್ವರIV	ಸಿಂದ ವೀರಬಲ್ಲಾಳ	೧೧೮೬	ಮೊಲ್ಲೆಬೊಮ್ಮಯ್ಯ
೭. –	–	೧೪೭೨	ಕಲ್ಲಯ್ಯದೇವರ ಅಂಗಭೋಗ ಮಂಟಪನಿರ್ಮಾಣ
೮. ವಿಜಯನಗರದ ಅಚ್ಯುತರಾಯ	ಗುಜ್ಜಲವಂಶದ ಅರಸರು	೧೫೩೭	–

ಈ ಎಂಟು ದಾನಗಳಲ್ಲಿ ಕೆಲವು ತುಂಬ ಗಣ್ಯವಾದುವು. ಮೊದಲನೆಯ ದಾನ ಸಿಂದ ಚಾವುಂಡ I ನು ನೀಡಿದುದು. ಚಾವುಂಡ II ನು ದಾನನೀಡಿ ಶಾಸನ ನಿಲ್ಲಿಸಿದನೆಂದು ಈ ಕಾವ್ಯ ಹೇಳುತ್ತಲಿದ್ದು (೧೨-೧೯), ಅದು ಈಗ ಲಭ್ಯವಿಲ್ಲ. ಈ ಎಲ್ಲ ಶಾಸನಗಳು ಈ ದೇವಾಲಯವು ಕಾಳಾಮುಖ ಪರಂಪರೆಗೆ ಸೇರಿದುದೆಂದು ಹೇಳುತ್ತವೆ.

ಮೊಲ್ಲೆ ಬೊಮ್ಮಯ್ಯನು ಈ ದೇವರ ಭಕ್ತನೆಂದು ಈ ಕೃತಿ ಹೇಳುವುದನ್ನು ಕೆಳಗಿನ ಎರಡು ಶಾಸನಗಳು ಸಮರ್ಥಿಸುತ್ತವೆ. ೧೧೫೪ರ ಶಾಸನವು "ಶ್ರೀ ಮನುಮಹಾಮಂಡಳೇಶ್ವರಂ

ಚಾವುಂಡರಸದೇವನರ್ದ್ಧಾಂಗಿ ಮಹಾದೇವಿಯರು ಕಲ್ಲೂರನಾಳುತ್ತ ಶ್ರೀ ಸ್ವಯಂಭು ಕಲಿದೇವಸ್ವಾಮಿಯ ಪಾದಾರಾಧಕಂ ಮೊಲ್ಲೆಯ ಬಂಮ್ಮೆಯಂಗೆ ದೇಹಾತ ವ್ರಿತ್ತಿಯಾಗಿ" ಭೂಮಿ ಕೊಟ್ಟುದನ್ನು ತಿಳಿಸುತ್ತದೆ. ಚಾಲುಕ್ಯ ಸೋಮೇಶ್ವರ IVನ ಕಾಲದ ಇನ್ನೊಂದು ಶಾಸನದಲ್ಲಿ "ಶ್ರೀಮನ್ಮಹಾಮಂಡಳೇಶ್ವರಂ ಚಾಉಂಡರಸದೇವನ ಕುಮಾರಂ ವೀರಬಿಜ್ಜಲದೇವರಸರು ಕಲ್ಲೂರ ಶ್ರೀ ಸ್ವಯಂಭು ಕಲಿದೇವಸ್ವಾಮಿಯ ಪಾದಾರಾಧಕಂ ಮೊಲ್ಲೆಯ ಬಮ್ಮಯ್ಯಂಗೆ ಪ್ರಥಮವೃತ್ತಿಯಾಗಿ ಗಣಮಠಕ್ಕೆ" ಇನ್ನೂರು ಮತ್ತರು ಭೂಮಿ ನೀಡಿದುದನ್ನು ಹೇಳಲಾಗಿದೆ. ಈ ಶಾಸನಗಳಿಂದ ತಿಳಿದುಬರುವ ಮುಖ್ಯ ವಿಷಯವೆಂದರೆ ಕಲ್ಲಿನಾಥ ದೇವಾಲಯದ ಆಚಾರ್ಯರು ಶಿವಶಕ್ತಿಪಂಡಿತ, ರುದ್ರಶಕ್ತಿ ಪಂಡಿತರು, ಸೋಮೇಶ್ವರ ಪಂಡಿತರಾಗಿದ್ದು, ಮೊಲ್ಲೆ ಬೊಮ್ಮಯ್ಯನು ಇವರ ಕಾಳಾಮುಖ ಸಂಪ್ರದಾಯದವನಾಗಿದ್ದರೂ, ಆಚಾರ್ಯನಾಗಿರದೆ, ಭಕ್ತನಾಗಿರಬಹುದು.

ಈ ಎರಡು ಶಾಸನಗಳಲ್ಲದೆ ಕೋಡಿಕೊಪ್ಪದ ಎರಡು ಶಾಸನಗಳನ್ನು ವಿದ್ವಾಂಸರು ಗಮನಿಸಿದ್ದಾರೆ. ಇವುಗಳಲ್ಲಿ ಒಂದು ಶಾಸನ (೧೧೨೧) ಮೊಲ್ಲೇಶ್ವರ ದೇವರಿಗೆ ಮೊಲ್ಲೆಬೊಮ್ಮಯ್ಯನು ೧೨ ಮತ್ತರು ಭೂಮಿ ನೀಡಿದುದನ್ನು ತಿಳಿಸುತ್ತದೆ. ಇಲ್ಲಿ ಈತನನ್ನು ಕುರಿತ ಪದ್ಯಗಳು ಹೀಗಿವೆ.

ಅಂಗನೆ ಸಂಗಜನರ್ಥಿ
ನಂಗಳ್ಗಂಗಾಧಿರಾಜನೂರ್ಜಿತ ತೇಜಂ।
ತುಂಗಯಶನೆಡಹಿದರ್ಗಾ
ಸಿಂಗಂ ಜಗದೊಳಗೆ ನೆಗರ್ದ ಮೊಲ್ಲೆಯ ಬಮ್ಮಂ॥
ಮತ್ತವಾತನ ಮಹಿಮೆಯೆಂತೆಂದೆಡೆ–
ಎಡೆಯಾಡಿ ವಂದಿಬೃಂದಂ
ಬಡವಾದಪುದೆಂದು ಮನದೊಳಾಲೋಚಿಸಿ ಬಾ।
ಪಿಡಿಯೆಂದು ಕುಡುವ ಬಮ್ಮನ
ಪಡೆದರ್ಥಂ ಸೂಳೆಯಂತೆ ಕೆಯ್ಗೆಯ್ದಿಕ್ಕುಂ॥

ಅಂಕಕಾರಹಕ್ಕಧಿಷ್ಠಾಯಕಂ ಮೊಲ್ಲೆಯ ಬಮ್ಮರ್ಣ್ಣಂ ಮಾಡಿದ ಧರ್ಮವೆಂತೆದೆಡೆ–

ವಿದಿತಂ ಖ್ಯಾತಿಗೆ ನೆಲೆಯಾ
ಗುದಿತೋದಿತಯೆನಿಸಿ ನೆಗರ್ದ ಮೊಲ್ಲೇಶ್ವರದೊಳ್।
ಸದಮಲಭಕ್ತಂ ಬಮ್ಮರ್ಣ
ನಿದು ಶಾಶ್ವತಮೆಂದು ಬಿಟ್ಟದೇವರ್ಗಾಗಳ್॥
ಮನ್ನಿಸಿ ದಯೆಯಿಂದರಸಂ
ತನ್ನಂ ನಡಸುತ್ತಮಿರ್ದು ಬೇಡೆತನೀಯಲ್।
ಹನ್ನಿರ್ಮತ್ತರ್ ಕೆಯ್ಯಂ
ಪನ್ನಗಭೂಷಣಂಗೆ ಬಿಟ್ಟನಾಗಳೆ ಬರ್ಮಂ॥

---

೧. ಜೆ.ಬಿ.ಬಿ. ಆರ್.ಎ.ಎಸ್. XI ಪುಟ ೨೪೭–೫೧

ಕೋಡಿಕೊಪ್ಪದ ಇನ್ನೊಂದು ಶಾಸನವು (ಎಸ್. ಆಯ್. ಆಯ್. XV- ೨೮ ಕ್ರಿ. ಶ. ೧೧೪೪)ಮೂಲಸ್ಥಾನ ಬ್ರಹ್ಮೇಶ್ವರ ದೇವರಿಗಾಗಿ ಉಗುರು ಮುನ್ನೂರ್ವರು, ತಂಬುಲಿಗ ಸಾಸಿರ್ವರು ವಾಮಶಕ್ತಿಬ್ರತೀಶ್ವರನಿಗೆ ದಾನನೀಡಿದರೆಂದು, ಮೊಲ್ಲೆಬೊಮ್ಮಯ್ಯನೂ ಉಮ್ಮಚಗಿಯ ಮಹಾಜನರಿಂದ ೬ ಮತ್ತರು ಭೂಮಿ ಖರೀದಿಸಿ ಈ ದೇವರಿಗೆ ದಾನನೀಡಿದನೆಂದು ತಿಳಿಸುತ್ತದೆ. ಇಲ್ಲಿ ಮೊಲ್ಲೆ ಬೊಮ್ಮನನ್ನು ಕುರಿತ ಪದ್ಯ ಹೀಗಿದೆ :

> ಪೊರೆದಾ XXXXXXXXX ನಭವಂ ಬ್ರಹ್ಮೇಶ್ವರಂ ನಿಚ್ಚವಾ।
> ದರದಿಂದರ್ಚಿಸುತಿರ್ಪ ತನ್ನ ಕುಲದೆಯ್ವಂ ವಾ... ಬ್ರತೀ।
> ಶ್ವರರಾರಾಧ್ಯನೆನಲ್ಕೆ ಪೆಂಪನನಿನ್ನೇವಣ್ಣಿಪಂ ಬಣ್ಣಿಪಂ।
> ನರನೀ ಮೊಲ್ಲೆಯ XXX ಯಾಚಂಣನಂ ಧರ್ಮಾತ್ಮನಂ ಬರ್ಮನಂ॥

ಈ ವರೆಗೆ ಕೋಡಿಕೊಪ್ಪದ ಈ ದೇವರಿಬ್ಬರೂ ಒಬ್ಬನೇ ಎಂದು ಡಾ॥ ದೀಕ್ಷಿತ, ಡಾ॥ ಶಿರೂರ ಭಾವಿಸಿದ್ದಾರೆ. ಆದರೆ ಇವೆರಡೂ ಭಿನ್ನವಾಗಿದ್ದು ಒಂದು ಮೊಲ್ಲೇಶ್ವರ, ಇನ್ನೊಂದು ಮೂಲಬ್ರಹ್ಮೇಶ್ವರ ಅಥವಾ ಬ್ರಹ್ಮೇಶ್ವರ. ಇವೆರಡಕ್ಕೂ ದಾನನೀಡಿದವ ಒಬ್ಬನೇ.

ಇನ್ನೊಂದು ವಿಷಯ: ಕೋಡಿಕೊಪ್ಪ ಶಾಸನಗಳ ಮೊಲ್ಲೆಬೊಮ್ಮಯ್ಯನೇ ಶರಣ ಬೊಮ್ಮಯ್ಯನೆಂದು ಡಾ॥ ದೀಕ್ಷಿತ, ಕೋಡಿಕೊಪ್ಪ ಕಲ್ಲೂರ ಶಾಸನಗಳ ಮೊಲ್ಲೆಬೊಮ್ಮಯ್ಯನೇ ಶರಣ ಬೊಮ್ಮಯ್ಯನೆಂದು ಡಾ॥ ಶಿರೂರ ಭಾವಿಸಿದ್ದಾರೆ. ಆದರೆ ೧೧೨೧ರಲ್ಲಿ ಕೋಡಿಕೊಪ್ಪ ಶಾಸನಸ್ಥನೆನಿಸುವಷ್ಟು ಪ್ರತಿಷ್ಠಿತನಾಗಿದ್ದವನು ೧೧೮೬ರ ಕಲ್ಲೂರ ಶಾಸನದ ವರೆಗೆ ಬಾಳುವುದು, ಅದರಲ್ಲಿಯೂ ಒಬ್ಬ ಚಕ್ರವರ್ತಿಯನ್ನು ಕೊಲ್ಲುವಷ್ಟು ಗಟ್ಟಿಯಾಗಿ ಬದುಕುವುದು ಅಸಂಭವ. ಆದುದರಿಂದ ಕೋಡಿಕೊಪ್ಪ ಶಾಸನಗಳ (೧೧೨೧, ೧೧೪೪) ಮೊಲ್ಲೆಬೊಮ್ಮಯ್ಯನೇ ಬೇರೆ, ಕಲ್ಲೂರ ಶಾಸನಗಳ ಮೊಲ್ಲೆಬೊಮ್ಮಯ್ಯನೇ ಬೇರೆ ಎನಿಸುತ್ತದೆ. ಕೋಡಿಕೊಪ್ಪ ಶಾಸನಸ್ಥ ವ್ಯಕ್ತಿ ಒಂದಿಷ್ಟು ಹೆಚ್ಚು ಲೌಕಿಕ, ಕಲ್ಲೂರ ಶಾಸನಸ್ಥ ವ್ಯಕ್ತಿ ಒಂದಿಷ್ಟು ಹೆಚ್ಚು ಧಾರ್ಮಿಕನಾಗಿದ್ದಾನೆ. ಇವರಲ್ಲಿ ಬಿಜ್ಜಳನನ್ನು ಕೊಂದವ ಕಲ್ಲೂರ ಶಾಸನಸ್ಥ (೧೧೫೪, ೧೧೮೬)ಮೊಲ್ಲೆಬೊಮ್ಮಯ್ಯನಾಗಿದ್ದಾನೆ. ಅದೇನೇ ಇರಲಿ, ಮೊಲ್ಲೆಬೊಮ್ಮಯ್ಯನು ೧೧೬೮ರಲ್ಲಿ ಬಿಜ್ಜಳನನ್ನು ಕೊಂದು, ಮುಂದೆ ೧೧೮೬ರ ವರೆಗೆ ಅಂದರೆ ಬಿಜ್ಜಳ, ಬಸವಣ್ಣನವರ ನಿಧನದ ಬಳಿಕ ೧೮ ವರ್ಷ ಬದುಕಿದ್ದನೆಂದು ಡಾ॥ ಶಿರೂರ ಹೇಳುತ್ತಾರೆ. ನಿಜ ಸಂಗತಿಯೆಂದರೆ ಬಸವಣ್ಣ, ಬಿಜ್ಜಳ, ಮೊಲ್ಲೆಬೊಮ್ಮಯ್ಯ ಸರಿಸುಮಾರು ಒಂದೇ ಕಾಲದಲ್ಲಿ ನಿಧನ ಹೊಂದಿರುವರೆಂದು ಕಾವ್ಯಗಳು ಹೇಳುವುದರಿಂದ, ಕನಿಷ್ಠ, ಮೊಲ್ಲೆಬೊಮ್ಮಯ್ಯ ಜೀವಂತವಾಗಿದ್ದ ೧೧೮೬ರ ವರೆಗಾದರೂ ಬಸವಣ್ಣ ಬಿಜ್ಜಳ ಜೀವಂತವಾಗಿದ್ದರೆಂದು ನಾವು ಹೇಳಬಹುದಾಗಿದೆ. ಮೊಲ್ಲೆಬೊಮ್ಮಯ್ಯನ ಕಾವ್ಯದ ಪ್ರಕಾರ ಜಗದೇವನೊಂದಿಗೆ ಕೈಕೂಡಿಸಿ ಬಿಜ್ಜಳನನ್ನು ಕೊಂದು, ಮರುಕ್ಷಣದಲ್ಲಿಯೇ ಅವರಿಬ್ಬರೂ ಅಸುನೀಗಿದರೆಂಬ ಮೊಲ್ಲೆಬೊಮ್ಮಯ್ಯಗಳ ಕಾವ್ಯದ ವಿವರವೂ ನಮ್ಮ ಅಭಿಪ್ರಾಯವನ್ನು ಬೆಂಬಲಿಸುತ್ತದೆ.

*****

ಶರಣ ಮೊಲ್ಲೆಬೊಮ್ಮಯ್ಯನಿಗೆ ಈ ಹೆಸರಿಡಲು ಕಾರಣವೇನೆಂಬುದನ್ನು ಹೀಗೆ ಚರ್ಚಿಸಬಹುದು. ಕಿರುನರೆಯಂಗಲ್ಲು (ಇಂದಿನ ಕೋಡಿಕೊಪ್ಪ?) ಗ್ರಾಮದಲ್ಲಿ ಶಾಸನಗಳ ಪ್ರಕಾರ ಮೊಲ್ಲೇಶ್ವರ (೧೧೨೧), ಮೂಲಬ್ರಹ್ಮೇಶ್ವರ/ಬ್ರಹ್ಮೇಶ್ವರ (೧೧೪೪)–ಹೀಗೆ ಎರಡು ದೇವತೆಗಳಿವೆ. ಇವುಗಳಲ್ಲಿ ಬ್ರಹ್ಮೇಶ್ವರ ದೇವರ ಹೆಸರನ್ನೇ ಈತನಿಗೆ ಇಟ್ಟಂತಿದೆ. ಕಿರುನರೆಯಂಗಲ್ಲು > ಕಿರುಗಲ್ಲು > ಕರುಗಲ್ಲು ಆಗಿರಬಹುದು. ಬ್ರಹ್ಮೇಶ್ವರ>ಬೊಮ್ಮಯ್ಯ ಸಹಜ. ಇವೆರಡನ್ನೂ ಸೇರಿಸಿ ಕರುಗಲ್ಲು ಬೊಮ್ಮಯ್ಯ ಎಂದು ಈ ದೇವರನ್ನು ಕರೆಯುತ್ತಿರಬಹುದು. ಶರಣ ಬೊಮ್ಮಯ್ಯನಿಗೆ ಕರುಗಲ್ಲು ಬೊಮ್ಮಯ್ಯನೆಂದು ಹೆಸರಿಟ್ಟರೆಂಬ ಕಾವ್ಯದ ಹೇಳಿಕೆಯನ್ನು ಇದು ಬೆಂಬಲಿಸುತ್ತದೆ. ವಿಕ್ರಮಾದಿತ್ಯನ ಕಾಲದ (೧೦೭೬–೧೧೨೬) ನೆರೆಯ ಸೂಡಿ ಶಾಸನದಲ್ಲಿ ಮೊಲ್ಲೆಯ ಸಂಕಗಾವುಂಡ ಎಂಬಂಥ ಹೆಸರು ಕಂಡುಬರುವುದರಿಂದ ಈ ಪ್ರದೇಶದಲ್ಲಿ ಮೊಲ್ಲೆ ಹೆಸರಿನ ಪ್ರಸಿದ್ಧ ಕುಟುಂಬ(ಗಳು) ಇದ್ದಿರಬಹುದು. ಈ ಕುಟುಂಬದ ಯಾವನೋ ವ್ಯಕ್ತಿ ೧೧೨೧ಕ್ಕೆ ಮೊದಲು ಕಿರುನರೆಯಂಗಲ್ಲದಲ್ಲಿ ಮೊಲ್ಲೇಶ್ವರ ದೇವಾಲಯ ಕಟ್ಟಿಸಿರಬಹುದು. ಪಿರಿಯ ನರೆಯಂಗಲ್ಲು (ಇಂದಿನ ನರೇಗಲ್ಲು) ಚಾವಡಿಯಲ್ಲಿಯ ಶಾಸನ (ಎಸ್. ಆಯ್. ಆಯ್. XI-ii–೧೫೫–ಕ್ರಿ. ಶ ೧೧೦೪) ದಲ್ಲಿ "ತೆಂಕಣಭಾಗದೂರ ನಡುವಣ ಶ್ರೀಬ್ರಹ್ಮೇಶ್ವರಮಂ ಶ್ರೀಮನ್ಮಹಾ[illegible]ಳೇಶ್ವರಂ ಬಮ್ಮರಸರ್ ಮಾಡಿಸಿ" ಎಂದು ಬರುತ್ತಿದ್ದು, ಈ ಬ್ರಹ್ಮೇಶ್ವರದೇವತೆಯೇ ಕೋಡಿಕೊಪ್ಪ (ಕಿರುನರೆಯಂಗಲ್ಲ?) ಬ್ರಹ್ಮೇಶ್ವರ/ ಮೂಲಬ್ರಹ್ಮೇಶ್ವರ ಆಗಿರಬಹುದು.

ಇವನಿಗೆ ಮೊಲ್ಲೆ ಬೊಮ್ಮಯ್ಯನೆಂಬುದು ಪ್ರಚಲಿತ ಹೆಸರು. ಈ ಮೊಲ್ಲೆ ವಿಶೇಷಣದ ಬಗ್ಗೆ ಮೂರು ಸಾಧ್ಯತೆಗಳಿವೆ. ಕವಿ ಧೂಪದ ರಾಚಯ್ಯನ ಪ್ರಕಾರ ಬೊಮ್ಮಯ್ಯನು ಕಲ್ಲೂರಿನ ಕಲಿದೇವರನ್ನು ಮೊಲ್ಲೆ ಹೂಗಳಿಂದ ಪೂಜಿಸುತ್ತಿದ್ದ ಕಾರಣ ಅವನಿಗೆ ಈ ಹೆಸರು ರೂಢವಾಯಿತು. ಎರಡನೆಯದಾಗಿ ಕೋಡಿಕೊಪ್ಪಗ್ರಾಮದ ಮೂಲಬ್ರಹ್ಮೇಶ್ವರವೇ ಜನ ಬಳಕೆಯಲ್ಲಿ ಮೊಲ್ಲೆ ಬೊಮ್ಮಯ್ಯ ಆಗಿ, ಅದೇ ಹೆಸರನ್ನು ಇವನಿಗೆ ಇಟ್ಟಿರಬಹುದು. ಮೂರನೆಯದಾಗಿ ಮೇಲೆ ಹೇಳಿದ ಮೊಲ್ಲೆಯ ಅಡ್ಡಹೆಸರಿನ ಕುಟುಂಬಗಳು ಆ ಪ್ರದೇಶದಲ್ಲಿದ್ದು, ಈ ಕುಟುಂಬದ ಹೆಸರು (ಮೊಲ್ಲೆ) ಮತ್ತು ಕೋಡಿಕೊಪ್ಪದ ದೇವರ ಹೆಸರು (ಬ್ರಹ್ಮಯ್ಯ) ಸೇರಿ ಇವನ ಮೊಲ್ಲೆಬೊಮ್ಮಯ್ಯ ಹೆಸರು ರೂಪಗೊಂಡಿರಬಹುದು.

*****

ಮಲ್ಲೆಬೊಮ್ಮಯ್ಯ ಯಾರಿಗೆ ಸೇರಬೇಕೆಂಬ ವಿಷಯವಾಗಿ ತಂದೆ ಬೊಮ್ಮಣಗೌಡನಿಗೂ ಜಂಗಮರೂಪಿ ಕಲ್ಲೂರಿನ ಕಲ್ಲಿನಾಥದೈವಕ್ಕೂ ಜಗಳ ಏರ್ಪಡುತ್ತದೆ. ಆಗ ನರೇಗಲ್ಲದ ಕಟ್ಟೆಯ ಕಲ್ಮೇಶ್ವರ ದೇವರ ಕಟ್ಟೆಯ ಮೇಲೆ ಸ್ಥಳೀಯ ಪ್ರಭುಗಳು ಮಧ್ಯಸ್ಥಿಕೆಯಿಂದ ಈ ಜಗಳ ಬಗೆಹರಿಸಿದರೆಂದು ಕಾವ್ಯ ಉಲ್ಲೇಖಿಸುತ್ತದೆ. ನರೇಗಲ್ಲದ ಕಲ್ಮೇಶ್ವರ ದೇವಾಲಯದ ಎದುರು ಈಗಲೂ ಆ ಕಟ್ಟೆಗಳಿವೆ. ಇದೇ ರೀತಿ ಕೋಡಿಕೊಪ್ಪ (ಕಿರುನರೆಯಂಗಲ್ಲು), ಪಿರಿಯ ನರೆಯಂಗಲ್ಲು, ಕಲ್ಲೂರು, ರ್‍ಯಾವಣಕಿ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಕೈಕೊಂಡರೆ ಬೇರೆ ಅವಶೇಷ, ವದಂತಿ ಸಿಗಬಹುದಾಗಿದೆ. ಮೊಲ್ಲೆ ಬೊಮ್ಮಯ್ಯನ ಹೆಂಡತಿ ಪಂಪಾಯಿ, ಇವಳು ಮೈಗುಂಡಿ (ಆಧುನಿಕ ಮೇವುಂಡಿಯಾಗಿರಬಹುದೆಂದು ಸಂಪಾದಕರು ಊಹಿಸಿದ್ದಾರೆ)ಯನ್ನಾಳುತ್ತಿದ್ದ ಕಾಮರಾಜನ ಮಗಳು. ಮೊಲ್ಲೆ ಬೊಮ್ಮಯ್ಯನಿಗೆ ಕಲ್ಲಿನಾಥ ಹೆಸರಿನ ಮಗನಿದ್ದನು. ಈ ಬಗ್ಗೆ ಕ್ಷೇತ್ರಕಾರ್ಯ ನಡೆಯಬೇಕು.

ಕಲ್ಲೂರಿಗೆ ಬಂದು, ದೇವತೆಗೆ ವೀಣೆ ಕೇಳಿಸುವುದರಲ್ಲಿ ಮಗ್ನನಾಗಿದ್ದ ಬೊಮ್ಮಯ್ಯನನ್ನು ಭಕ್ತಿಯಿಂದ ಕಂಡವನು, ದೇವರಿಗೆ ದತ್ತಿನೀಡಿ "ಶಾಸನವ ಬರೆಸಿದವನು" (೧೨–೧೯)ಯಲಬುರಗಿಯ (ಕಾವ್ಯದಲ್ಲಿ ಅನೇಕ ಸಲ ಬರುವ ಈ ಶಬ್ದವನ್ನು ಸಂಪಾದಕರು ಮೊಲಬುರಿಗೆ ಎಂದು ಓದಿದ್ದಾರೆ) ಚಾವುಂಡನೆಂದು ಕಾವ್ಯ ಹೇಳುತ್ತದೆ. ಈತ ಬೇರೆ ಶಾಸನಗಳಲ್ಲಿ ಬರುವ ಸಿಂದವಂಶದ ಚಾವುಂಡII ಆಗಿದ್ದಾನೆ. ಈ "ಚೌಂಡರಸದೇವನರ್ದ್ಧಾಂಗಿ ಮಹಾದೇವಿಯರು ಕಲ್ಲೂರನಾಳುತ್ತ ಶ್ರೀ ಸ್ವಯಂಭೂ ಕಲಿದೇವಸ್ವಾಮಿಯ ಪಾದಾರಾಧಕಂ ಮೊಲ್ಲೆಯ ಬೊಮ್ಮಯ್ಯಂಗೆ" ದಾನನೀಡಿದ ವಿಷಯ ಕಲ್ಲೂರಿನ ಒಂದು ಶಾಸನ (೧೧೫೪)ದಲ್ಲಿದೆ. ಈ ಚೌಂಡರಸII ಮತ್ತು ಇವನ ಇನ್ನೊಬ್ಬ ಪತ್ನಿ ಸಿರಿಯಾದೇವಿ (ಕಲಚುರಿ ಬಿಜ್ಜಳನ ತಂಗಿ)ಯರ ಮಗ "ವೀರಬಿಜ್ಜಲದೇವರಸರು ಕಲ್ಲೂರ ಶ್ರೀ ಸ್ವಯಂಭು ಕಲಿದೇವಸ್ವಾಮಿಯ ಪಾದಾರಾಧಕಂ ಮೊಲ್ಲೆಯ ಬೊಮ್ಮಯ್ಯಂಗೆ ಪ್ರಥಮ ವ್ರಿತ್ತಿಯಾಗಿ ಗಣಮಠಕ್ಕೆ" ದಾನನೀಡಿದ ವಿಷಯ ಕಲ್ಲೂರಿನ ಇನ್ನೊಂದು ಶಾಸನ(೧೧೮೬)ದಲ್ಲಿದೆ. ಇದರಿಂದ ಮೊಲ್ಲೆ ಬೊಮ್ಮಯ್ಯನ ವಿಷಯದಲ್ಲಿ ಸಿಂದ ಅರಸುಮನೆತನಕ್ಕೆ ಇದ್ದ ಗೌರವ ಸ್ಪಷ್ಟವಾಗುತ್ತದೆ. (ಈ ವೀರಬಿಜ್ಜಳನ ಸೋದರಮಾವ ಕಲಚುರಿ ಬಿಜ್ಜಳನನ್ನೇ ಮೊಲ್ಲೆಬೊಮ್ಮಯ್ಯ ಸಂಹರಿಸಿದ). ಈ ವೀರಬಿಜ್ಜಳನನ್ನು ಬೆಣಚಮಟ್ಟಿ ಶಾಸನ "ನಂಬಿಯ ತೆರದಿಂ ಶಿವನಂ ನಂಬಿದ ಓಹಿಲನ ತೆರದಿನೋಹಿಲ್ಲದ ಭಕ್ತಂ ಬಾಣನಂತೆ ಜಾಣಂ" ಎಂದು ಕೀರ್ತಿಸಿದೆ(EI XX-12 ಕ್ರಿ. ಶ. ೧೧೮೨). ವೀರಶೈವಪುರಾಣಗಳು ಹೇಳುವಂತೆ ಬಿಜ್ಜಳನ ಸೈನ್ಯದ ನೇತೃತ್ವವಹಿಸಿ ಶರಣರನ್ನು ಉಳಿವೆಯ ವರೆಗೆ ಬೆನ್ನಟ್ಟಿದ ಅಳಿಯಬಿಜ್ಜಳ (ವೀರಬಿಜ್ಜಳ)ನು ಇವನೇ ಆಗಿರಬಹುದು. ಈ ಕಾವ್ಯ ತಿಳಿಸುವ ಇನ್ನಷ್ಟು ಮುಖ್ಯ ಸಂಗತಿಗಳು ಹೀಗಿವೆ:

ಕಣ್ಣು ತೆರೆಯದ ಶಿಶು ಬಸವನಿಗೆ, ಶಿವನೇ ಕಪ್ಪಡಿಯ ಸಂಗಮೇಶ್ವರನಾಮದ ಜಂಗಮನಾಗಿ ಬಾಗೆವಾಡಿಗೆ ಬಂದು, ದೀಕ್ಷೆನೀಡಿದ.

ಮೊಲ್ಲೆಬೊಮ್ಮಯ್ಯನ ಕಾವ್ಯ ಮಂಗಳವಾಡ ಮತ್ತು ಕಲ್ಯಾಣ ಹೆಸರುಗಳನ್ನು ಪರ್ಯಾಯವಾಗಿ ಬಳಸುತ್ತ ಹೋಗಿದೆ(ಇದು ಸಿಂಗಿರಾಜಪುರಾಣದ ಅನುಕರಣೆ). ಬಿಜ್ಜಳನು ಈ ಮಂಗಳವಾಡವನ್ನಾಳುತ್ತಲಿದ್ದ ಪೆರ್ಮಾಡಿ, ಚಂದಲದೇವಿಯವರ ಮಗನೆಂದು ತಿಳಿಸುತ್ತದೆ. ಆದರೆ ಬಿಜ್ಜಳನು ವಿಕ್ರಮಾದಿತ್ಯ ಚಂದಲದೇವಿಯರ ಮಗಳ ಮಗನೆಂದು ಶಾಸನ ಹೇಳುತ್ತವೆ. ಹಾಗಿದ್ದರೆ ವಿಕ್ರಮಾದಿತ್ಯ ಚಂದಲದೇವಿಗೆ ಚಂದಲದೇವಿ ಹೆಸರಿನ ಮಗಳಿದ್ದಳೇ? ವಿಚಾರಿಸಬೇಕು.

ಅಪುತ್ರಕನಾಗಿದ್ದ ಭಂಡಾರಿ ಸಿದ್ಧರಸನ ಮನೆಯಲ್ಲಿದ್ದ ಬಸವಣ್ಣ, ಮರಣದ ತರುವಾಯ ಅವನ ಅಧಿಕಾರಕ್ಕೆ, ಆಸ್ತಿಗೆ ವಾರಸುದಾರನಾದ. ಬಲದೇವನ ಮಗಳು ನೀಲಾಂಬಿಕೆಯನ್ನು ಮದುವೆಯಾಗಿ, ಕೂಡಲಸಂಗಮದಲ್ಲಿ ಸಂಗಮೇಶ್ವರನಿಂದ ದೀಕ್ಷೆ ಕೊಡಿಸಿದ ಎಂದು ಈ ಕಾವ್ಯ ಹೇಳುತ್ತದೆ. ಈ ಕಾರಣಕ್ಕಾಗಿಯೇ ಅವಳು ಕೇವಲ ಸಂಗಯ್ಯ ಎಂಬ ಮುದ್ರಿಕೆಯಿಟ್ಟುಕೊಂಡಂತಿದೆ. ಗಂಗಾಂಬಿಕೆಯ ಹೆಸರನ್ನೆತ್ತದೆ, ಬಸವಣ್ಣನಿಗೆ ನೀಲಾಂಬಿಕೆಯೊಬ್ಬಳೇ ಹೆಂಡತಿ ಇದ್ದಳೆಂದು ಇವಳು ಬಲದೇವನ ಮಗಳೆಂದು ಉದ್ದಕ್ಕೂ ಸೂಚಿಸುತ್ತ ಹೋಗುವ ಏಕೈಕ ಕೃತಿಯಿದು. ನೀಲಗಂಗಾ ಎಂಬ ಒಂದು ಹೆಸರನ್ನೇ ಇಬ್ಬರನ್ನಾಗಿ ನಮ್ಮ ಕವಿಗಳು ಭ್ರಮಿಸಿದ್ದಾರೆಂದು ಒಬ್ಬಿಬ್ಬರು ಆಧುನಿಕ ವಿದ್ವಾಂಸರು ಊಹಿಸಿದುದನ್ನು ಇಲ್ಲಿ ನೆನೆಯಬಹುದು.

ಈ ಕೃತಿಯಲ್ಲಿ ಇನ್ನೂ ಕೆಲವು ಮಹತ್ವದ ಅಂಶಗಳು ಅಡಗಿವೆ. ಭವಿಷ್ಯತ್ತಿನಲ್ಲಿ ಶರಣರನ್ನು ಬಿಜ್ಜಳನು ವಧಿಸುತ್ತಿದ್ದು, "ಆ ಕೊಲೆಯು ನಿಲ್ಲದೆತ್ತು" ಎಂದು ಬಸವಣ್ಣ ಹಿಂದೊಮ್ಮೆ ಕಾಲಜ್ಞಾನದಂತೆ ಜಗದೇವನಿಗೆ ಹೇಳಿದ್ದನು. ಹೀಗಿದ್ದೂ "ಶರಣರನ್ನು ಕೊಲ್ಲಿಸಿದ ಬಿಜ್ಜಳನನ್ನು ಕೊಲ್ಲುವುದು ಅಪರಾಧ" ವೆನ್ನುವುದು ಬಸವಣ್ಣನ ಅಭಿಪ್ರಾಯವಾಗಿತ್ತು(೧೭-೫). ಈ ಹತ್ಯೆಗೆ ಚನ್ನಬಸವಣ್ಣನ ಸಮ್ಮತಿ ಇದ್ದಿತು (೧೭-೩೮,೩೯).

ಕಲ್ಲೂರಿನಲ್ಲಿ ಕಲಿದೇವನ ಎದುರು ವೀಣೆ ನುಡಿಸಿ, ಪ್ರತಿದಿನ ಅವನಿಂದ ಒಂದು ಹಾಗ ಪಡೆಯುವ ಕಾಯಕದ ಮಲ್ಲೆಬೊಮ್ಮಯ್ಯನು, ಕಲ್ಯಾಣದಲ್ಲಿ ಹಸುಬೆ ಕಾಯಕ (?) ಕೈಕೊಂಡಿದ್ದನು.

ಶರಣರ ಎಳಹೂಟೆಯ ಬಳಿಕ, ಕಲಿದೇವನ ಆಜ್ಞೆಯಂತೆ ಬಿಜ್ಜಳನ ಹತ್ಯೆಗಾಗಿಯೇ ಮೊಲ್ಲೆಬೊಮ್ಮಯ್ಯ ಕಲ್ಲೂರಿನಿಂದ ಕಲ್ಯಾಣಕ್ಕೆ ಹೋದನು. ಬಿಜ್ಜಳನ ಕೊಲೆಗೆ ನೆರವಾಗುವುದಾಗಿ ಬೊಮ್ಮಣ್ಣ ಹೇಳಲು, ಜಗದೇವನು "ಬೇಡ ಮೊಲ್ಲೆ ಬೊಮ್ಮಯ್ಯ ನೀನು ಭಕ್ತರ ಕೊಲೆಯ ನೋಡಿದಾತನಲ್ಲು, ಮೇಣು ಪುರದೊಳಗಿರ್ದು ನಾಡರಿಯೆ ಕೇಳಿದಾತನುಮಲ್ಲು" (೧೭-೧೫)ಎಂದು ನುಡಿದುದನ್ನು ಇಲ್ಲಿ ನೆನೆಯಬೇಕು. ಹೀಗಾಗಿ ಮೊಲ್ಲೆಬೊಮ್ಮಯ್ಯ ಕಲ್ಯಾಣಕ್ಕೆ ಹೋದುದು ಎಳೆಹೂಟೆ ಪ್ರಸಂಗದ ಬಳಿಕ, ಅಲ್ಲಿ ಕಾಲ ಕಳೆದುದು ಬಹಳೆಂದರೆ ಮೂರು ತಿಂಗಳು ಮಾತ್ರ, ಈ ಅವಧಿಯಲ್ಲಿ ಜರುಗಿದುದು ಬಿಜ್ಜಳನ ಹತ್ಯೆಯೆಂದು ಈ ಕಾವ್ಯ ತಿಳಿಸುತ್ತದೆ.

ಬಸವಣ್ಣನ ಜೊತೆ ಕಪ್ಪಡಿಗೆ ಹೋಗಿದ್ದ ಸೊಡ್ಡಳ ಬಾಚರಸ, ಮೋಳಿಗೆ ಮಾರಯ್ಯ, ಮಡಿವಾಳ ಮಾಚಯ್ಯ, ಚನ್ನಬಸವಣ್ಣ ಅವನು ಐಕ್ಯವಾದುದನ್ನು ಕಣ್ಮುಟ್ಟ ಕಂಡು, ಕಲ್ಯಾಣಕ್ಕೆ ಮರಳಿದರು. ಕಪ್ಪಡಿಗೆ ಹೊರಟಿದ್ದ ನೀಲಮ್ಮ ಇವರಿಗೆ ದಾರಿಯಲ್ಲಿ ಕೃಷ್ಣಾನದಿಯ ತೀರದಲ್ಲಿ ಭೆಟ್ಟಿಯಾದಳು. ಅವಳಿಗೆ ಇವರು ಬಸವಣ್ಣನ ನಿಧನದ ಸುದ್ದಿ ತಿಳಿಸಿದರು.

ಬಿಜ್ಜಳನನ್ನು ಕೊಂದುದು ಬೀದಿಯಲ್ಲಲ್ಲ, ಒಳಚಾವಡಿಯಲ್ಲಿ. ನೆಲದ ಮೇಲೆ ಮಂಡೆಯೂರಿ ಜಗದೇವನ ಜೊತೆ (ಒಂದೇ ತಟ್ಟೆಯಲ್ಲಿ?) ಮೊಲ್ಲೆಬೊಮ್ಮಯ್ಯ ಊಟ ಮಾಡಿದುದು ವೇಳೆವಾಳಿ ಬದ್ಧತೆಯ ಕುರುಹಾಗಿದೆ. ಹೀಗೆ ಅನೇಕ ಹೊಸ ಸಂಗತಿಗಳನ್ನು ಪ್ರಕಟಿಸುವ ಈ ಕೃತಿಯನ್ನು ಶಾಸನ, ಅವಶೇಷ, ವದಂತಿಗಳ ಜೊತೆಗಿಟ್ಟು ಇನ್ನೂ ಸಮಗ್ರವಾಗಿ ಅಭ್ಯಸಿಸುವುದು ಅಗತ್ಯವಿದೆ. ಈ ಅಭ್ಯಾಸದ ಅಂಗವಾಗಿ ರ‍್ಯಾವಣಕಿ, ಕಲ್ಲೂರು, ನರೇಗಲ್ಲ, ಕೋಡಿಕೊಪ್ಪ ಇತ್ಯಾದಿ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಕೈಕೊಳ್ಳುವುದೂ ಅಗತ್ಯವಿದೆ.

■■

ಆಕರ : ಮಾರ್ಗ ಸಂಪುಟ-೪

೭೦

ಕೃಷ್ಣದೇವರಾಯನ ಹಂಪಿ ಶಾಸನಗಳು

ಕೃಷ್ಣದೇವರಾಯ, ಕನ್ನಡಿಗರು ಹೆಮ್ಮೆಪಡುವ ಸುಪ್ರಸಿದ್ಧ ರಾಜನೆಂಬಂತೆ ಇತಿಹಾಸದಲ್ಲಿ ಚಿತ್ರಿತನಾಗಿದ್ದಾನೆ. ನಾಲ್ಕಾರು ಯುದ್ಧವಿಜಯ, ಹತ್ತಾರು ದೇವಾಲಯ ನಿರ್ಮಾಣ, ಹತ್ತಿಪ್ಪತ್ತು ದಾನಕಾರ್ಯ-ಇವು ಒಬ್ಬ ಅರಸು ಸರ್ವಶ್ರೇಷ್ಠನೆನಿಸಿಕೊಳ್ಳಲು ಪ್ರಾಚೀನರು ಇಟ್ಟುಕೊಂಡಿದ್ದ ಮಾನದಂಡಗಳು. ಯುದ್ಧವಿಜಯವನ್ನೇ ಪ್ರಭಾವಳಿಯನ್ನಾಗಿ ಬಳಸಿ, ದಾನ-ಧರ್ಮ ಕಾರ್ಯಗಳನ್ನು ಉತ್ಪ್ರೇಕ್ಷಿಸುವುದು ನಮ್ಮ ಶಾಸನಗಳ ಪದ್ಧತಿಯಾಗಿದ್ದಿತು. ನಮ್ಮ ಇತಿಹಾಸಕಾರರೂ ಇದೇ ದೊಡ್ಡ ಸಾಧನೆಯೆಂದು ಭ್ರಮಿಸಿ, ಅತಿರಂಜಿತ ಇತಿಹಾಸ ಬರೆಯುತ್ತ ಬಂದರು. ಆದರೆ ಶಾಸನಗಳ ಮುಖಬೆಲೆಯನ್ನು ದಾಖಲಿಸುವುದಕ್ಕಿಂತ, ಅವುಗಳ ಹಿಂದಿನ ಮನಸ್ಸನ್ನು, ಅದರಿಂದ ಪ್ರತ್ಯಕ್ಷ-ಪರೋಕ್ಷವಾಗಿ ಸಮಾಜ-ಸಂಸ್ಕೃತಿಗಳ ಮೇಲಾದ ಸತ್ಪರಿಣಾಮ-ದುಷ್ಪರಿಣಾಮಗಳನ್ನು ಚಿತ್ರಿಸುವುದು ಮಾತ್ರ ನಿಜವಾದ ಚರಿತ್ರೆಯೆನಿಸುತ್ತದೆ. ಕೃಷ್ಣದೇವರಾಯನ ವಿಷಯವಾಗಿ ಈ ವರೆಗೆ ಬರೆದಿರುವ ಚರಿತ್ರೆಯನ್ನು ಈ ದೃಷ್ಟಿಕೋನದಿಂದ ಪುನರ್‌ಮೌಲ್ಯಮಾಪನ ಮಾಡುವುದು ಇಂದು ಅಗತ್ಯವೆನಿಸುತ್ತದೆ.

ಸಂಗಮವಂಶದವರನ್ನು ಕೊನೆಗೊಳಿಸಿ ಸಾಳುವರು, ಸಾಳುವರನ್ನು ಕೊನೆಗೊಳಿಸಿ ತುಳುವರು ಸಿಂಹಾಸನವೇರುವಲ್ಲಿ ಕ್ಷತ್ರಿಯ ಸಹಜ ನೇರಸ್ಪರ್ಧೆ, ಹೋರಾಟಗಳಿವೆ. ಆದರೆ ತನ್ನ ಮನೆತನದಲ್ಲಿಯೇ ಕೃಷ್ಣದೇವರಾಯನು (೧೫೧೦-೧೫೨೯) ಪಟ್ಟವಹಿಸಿಕೊಳ್ಳುವಲ್ಲಿ ಸಂಭವಿಸಿದ ಅಣ್ಣ ವೀರನರಸಿಂಹನ ಮತ್ತು ಪಟ್ಟವಹಿಸಿಕೊಡುವಲ್ಲಿ ಸಂಭವಿಸಿದ ಮಗ ತಿರುಮಲನ ಅಸಹಜ ಮರಣಗಳನ್ನು ನೋಡಿದರೆ, ಅವನ ರಾಜಕೀಯ ಪ್ರವೇಶದ ಬಗ್ಗೆ ರಾಜ್ಯದಲ್ಲಿ ಅಂದು ಮೌನ ಅಸಂತೋಷವಿದ್ದಿತೆಂಬ ಅನುಮಾನ ಹುಟ್ಟುತ್ತದೆ. ಬಹುಶ: ತೆಲುಗು (ದಾಸಿ) ತಾಯಿಯ ಮಗನಾಗಿರಬಹುದಾದ ಅವನು ಕರ್ನಾಟಕ ಸಿಂಹಾಸನವನ್ನು, ಅದೂ ಸಂಶಯ ಬರುವ ರೀತಿಯಲ್ಲಿ ಹಿಡಿದುಕೊಂಡುದೇ ಈ ಅಸಂತೋಷಕ್ಕೆ ಕಾರಣವಾಗಿರಬಹುದು. ಸಾಲದುದಕ್ಕೆ ತೆಲುಗು ಪ್ರಜೆಗಳಿಗೆ ರಾಜ್ಯದಲ್ಲಿ, ತೆಲುಗು ಅಧಿಕಾರಿಗಳಿಗೆ ಆಸ್ಥಾನದಲ್ಲಿ ಅತಿಯೆನ್ನುವಷ್ಟು ಸವಲತ್ತು ನೀಡಿದುದು, ವಿರೂಪಾಕ್ಷನ ಧಾರ್ಮಿಕ ಕ್ಷೇತ್ರದಲ್ಲಿ ಉಡುಪಿಯ ಕೃಷ್ಣಸಂಸ್ಕೃತಿ -ತಿರುಪತಿಯ ವೆಂಕಟೇಶ ಸಂಸ್ಕೃತಿಗಳಿಗೆ ಹೆಚ್ಚು ಅವಕಾಶ ಮಾಡಿಕೊಟ್ಟುದು ಇನ್ನೂ ಹೆಚ್ಚಿನ ಅಸಂತೋಷಕ್ಕೆ ಕಾರಣವಾಗಿರಬಹುದು. ಈಗ ತೆಲುಗು ಪ್ರಜೆಗಳಿಗೆ-ಅಧಿಕಾರಿಗಳಿಗೆ ನೀಡಿದ ಸಾಮಾಜಿಕ-ರಾಜಕೀಯ

ಅವಕಾಶಗಳನ್ನು ಬದಿಗಿಟ್ಟು, ಧಾರ್ಮಿಕ ವಿಷಯವಾಗಿ ಅವನು ತೂಕತಪ್ಪಿ ನಡೆದುಕೊಂಡುದನ್ನು, ಹಂಪಿಯಲ್ಲಿ ಸಿಗುವ ಅವನ ಶಾಸನಗಳನ್ನಾಧರಿಸಿ, ಇಲ್ಲಿ ಚರ್ಚಿಸಬಹುದು.

ರಾಜ್ಯವೆಂದರೆ ಒಂದರ್ಥದಲ್ಲಿ ರಾಜಧಾನಿ. ಅದು ರಾಜ್ಯದ ಸೂಕ್ಷ್ಮಸ್ಥಾನ. ಅಲ್ಲಿ ರಾಜನು ನಡೆದುಕೊಳ್ಳುವ ರೀತಿ-ನೀತಿಗಳನ್ನು ಗಮನಿಸಿ, ಅಲ್ಲಿಯ ಜನ ಅವನ ವಿಷಯದಲ್ಲಿ ತಳೆಯುವ ಅಭಿಪ್ರಾಯಗಳು ಮುಖ್ಯವೆನಿಸುತ್ತವೆ. ಧಾರ್ಮಿಕ ಅಭಿಪ್ರಾಯ ಇನ್ನೂ ಮುಖ್ಯವೆನಿಸುತ್ತದೆ. ಇಂಥ ಅಭಿಪ್ರಾಯದೃಷ್ಟಿಯಿಂದ ರಾಜಧಾನಿ ಹಂಪಿಯ ಶಾಸನಗಳನ್ನು ಇಲ್ಲಿ ಅಭ್ಯಸಿಸಬಹುದು.

ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ "ಹಂಪಿಯ ಕನ್ನಡ ಶಾಸನಗಳು" ಹೆಸರಿನ ಕೃತಿಯಲ್ಲಿ ಒಟ್ಟು ೩೯೯ ಶಾಸನಗಳಿದ್ದು, ಇವುಗಳಲ್ಲಿ ವಿಜಯನಗರ ಅರಸರಿಗೆ ಸಂಬಂಧಿಸಿದುವು ೯೯. ಇವುಗಳಲ್ಲಿ ಕೃಷ್ಣದೇವರಾಯನ ಕಾಲದವು ೨೩. ಇವುಗಳಲ್ಲಿ ೩ ಶಾಸನಗಳು (೨೩೦, ೭೯, ೨೫೩) ಕೃಷ್ಣದೇವರಾಯನ ಕಾಲದಲ್ಲಿ ಹುಟ್ಟಿವೆಯೇ ಹೊರತು, ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಇವನಿಗೆ ಸಂಬಂಧಿಸಿಲ್ಲ. ಇವುಗಳನ್ನು ತೆಗೆದುಹಾಕಿದರೆ ಉಳಿಯುವ ಶಾಸನಗಳು ೨೦. ಪಟ್ಟವೇರಿದ ವರ್ಷದಿಂದ(೧೫೧೦) ಮರಣ ವರ್ಷದ (೧೫೨೯)ವರೆಗೆ ವ್ಯಾಪಿಸಿರುವ ಹಂಪಿಯ ಇವುಗಳನ್ನು ದೇವರಿಗೆ ಸಂಬಂಧಿಸಿದಂತೆ ಹೀಗೆ ಹೊಂದಿಸಬಹುದು.

	ಇಸ್ವಿ	ಶಾಸನ ಸಂಖ್ಯೆ	ದೇವರು
೧.	೧೫೧೦	–೩೪, ೫೧, ೩೯೭	–ವಿರೂಪಾಕ್ಷ
	೧೫೧೩	–೩೩	–ವಿರೂಪಾಕ್ಷ
೨.	೧೫೧೩	–೨೩೫, ೨೫೦	–ಪ್ರಸನ್ನ ವಿರೂಪಾಕ್ಷ
೩.	೧೫೧೩	–೨೬೫	–ರಾಮಚಂದ್ರ
	೧೫೨೧	–೨೫೭	–ರಾಮಚಂದ್ರ
೪.	೧೫೧೩	–೧೮೧, ೧೮೨, ೨೦೮	–ವಿಜಯ ವಿಠ್ಠಲ
	೧೫೧೬	–೨೦೬, ೨೦೭, ೨೨೩	–ವಿಜಯ ವಿಠ್ಠಲ
೫.	೧೫೧೩	–೭೩	–ಕೃಷ್ಣ
	೧೫೧೫(>೧೫೨೧)	–೭೪	–ಕೃಷ್ಣ
೬.	೧೫೧೮	–೩೨೦	–ತಿರುವೆಂಗಳನಾಥ
	೧೫೨೩	–೩೨೧	–ತಿರುವೆಂಗಳನಾಥ
೭.	೧೫೨೪	–೨೨೯	–ರಘುನಾಥ
೮.	೧೫೨೯	–೮೧	–ಲಕ್ಷ್ಮೀನರಸಿಂಹ(ಉಗ್ರನರಸಿಂಹ)

ಹೀಗೆ ೧೯ ವರ್ಷಗಳಲ್ಲಿ ೮ ದೇವತೆಗಳ ವಿಷಯವಾಗಿ ೨೦ ಶಾಸನಗಳನ್ನು ಹೊರಡಿಸಿದ್ದಾನೆ. ಇಲ್ಲಿ ಒಂದಿಷ್ಟು ಶಾಸನಗಳು ದ್ವಿಪ್ರತಿ, ತ್ರಿಪ್ರತಿಗಳಲ್ಲಿವೆ. ಇವುಗಳನ್ನು ಕಳೆದರೆ ಉಳಿದವುಗಳಲ್ಲಿ ಕೆಲವು ದೇವತೆಗಳಿಗೆ ಕಡಿಮೆ, ಕೆಲವು ದೇವತೆಗಳಿಗೆ ಹೆಚ್ಚು ಶಾಸನಗಳಿವೆ. ಕೆಲವು ದೇವತೆಗಳಿಗೆ ಹೆಚ್ಚು ಪ್ರಮಾಣದಲ್ಲಿ ಕೆಲವು ದೇವತೆಗಳಿಗೆ ಕಡಿಮೆ ಪ್ರಮಾಣದಲ್ಲಿ ಕಾಣಿಕೆ ನೀಡಲಾಗಿದೆ. ಈಗ ಈ ಬಗ್ಗೆ ವಿವರವಾಗಿ ನೋಡಬಹುದು.

ಹಂಪಿ ಪರಿಸರದ ಮೂಲದೇವತೆಯಾಗಿರುವ ವಿರೂಪಾಕ್ಷ, ವಿಜಯನಗರ ಸಾಮ್ರಾಜ್ಯದ ಮುಖ್ಯದೇವತೆಯೂ ಆಗಿದ್ದಾನೆ. ಈ ಸಾಮ್ರಾಜ್ಯದ ಪರಿಕಲ್ಪನೆಯೂ ಮಿಕ್ಕವುಗಳಿಗಿಂತ ಭಿನ್ನವಾದುದು. ಇಲ್ಲಿ ವಿರೂಪಾಕ್ಷನೇ ಆಳುವವ, ರಾಜರು ಅವನ ಪ್ರತಿನಿಧಿಗಳು ಮಾತ್ರ. ಹೀಗಾಗಿ ಇಲ್ಲಿಯ ರಾಜರಿಂದ ಪ್ರಥಮ ಗೌರವ, ಪರಮಭಕ್ತಿ ಅವನಿಗೆ ಸಲ್ಲಬೇಕಾದುದು ಸಹಜ.

೩೪ನೆಯ ಸಂಖ್ಯೆಯದು ಕೃಷ್ಣದೇವರಾಯನ ಪ್ರಥಮ ಶಾಸನವಾಗಿದ್ದು, ಇವನ ಪಟ್ಟಾಭಿಷೇಕವು ೨೪-೧-೧೫೧೦ (ಶಕೆ ೧೪೩೦ ಶುಕ್ಲಸಂವತ್ಸರ ಮಾಘ ಶುದ್ಧ ೧೪) ರಂದು ಜರುಗಿದುದನ್ನು ತಿಳಿಸುತ್ತದೆ. "ಪಟ್ಟಾಭಿಷೇಕೋತ್ಸವ ಪುಣ್ಯಕಾಲದಲು ಸಿಂಗನಾಯಕನ ಹಳ್ಳಿಯನ್ನು ವಿರೂಪಾಕ್ಷನಿಗೆ ಅರ್ಪಿಸಿ, ದೇವರ ಸಂಮುಖದ ಮಹಾರಂಗಮಂಟಪವನು ಆ ಮುಂದಣ ಗೋಪುರವನು ಕಟ್ಟಿಸಿ, ಆ ಮುಂದಣ ಹಿರಿಯ ಗೋಪುರವನೂ ಜೀರ್ನೋದ್ಧಾರವನೂ ಮಾಡಿಸಿ" ರತ್ನಖಚಿತ ಸುವರ್ಣಕಮಲ, ನಾಗಾಭರಣ, ದೇವರ ಆರತಿಗಾಗಿ ಚಿನ್ನದ ಹರಿವಾಣ ೧, ಆರತಿ ೨, ಬೆಳ್ಳಿಯ ಆರತಿ ೨೪ ಅರ್ಪಿಸಿದುದನ್ನು ಇಲ್ಲಿ ಹೇಳಲಾಗಿದೆ. ೫೧ನೆಯ ಶಾಸನ ಇದರ ಮರುಪ್ರತಿಯಾಗಿದೆ. ಈ ಎರಡೂ ಶಾಸನಗಳ ವಿಷಯವನ್ನೇ ಸಿಂಗನಾಯಕನಹಳ್ಳಿಯ ೩೯೭ನೆಯ ಶಾಸನ ಇನ್ನೊಂದು ರೀತಿಯಲ್ಲಿ ಹೀಗೆ ಹೇಳುತ್ತದೆ. ಈ ಹಳ್ಳಿಯ ಉತ್ಪನ್ನವನ್ನು "ಅಮ್ರುತಪಡಿ ನಯಿವೇದ್ಯಕ್ಕೆ ಅಂಗರಂಗಭೋಗ ಚಯಿತ್ರ ಮಾಸದ ರಥ ಉತ್ಸಾಹ, ಮಕರಸಂಕ್ರಾಂತಿಯ ರಥೋತ್ಸಾಹ, ನಿತ್ಯೋತ್ಸಾಹ, ಪಕ್ಷೋತ್ಸಾಹ, ಮಾಸೋತ್ಸಾಹ, ಸಂವತ್ಸರೋತ್ಸಾಹ, ನಿತ್ಯ ನೈಮಿತ್ತಿಕ ದೀಪಾರಾಧನೆ ಮೊದಲಾದ ಪುಂಣ್ಯತಿಥಿಗಳು ಮಹಾಪೂಜೆ ನೈವೇದ್ಯಕು" ಬಳಸಬೇಕೆಬುಂದು ಇಲ್ಲಿಯ ವಿವರ. ಹೀಗೆ ಈ ಶಾಸನಗಳ ಸಂಖ್ಯೆ ಮೂರಾಗಿದ್ದರೂ ದಾನ ಮಾತ್ರ ಒಂದೇ.[೧]

ಮುಂದೆ ಮೂರು ವರ್ಷಗಳಲ್ಲಿ (೧೫೧೩) ೩೩ನೆಯ ಸಂಖ್ಯೆಯ ಶಾಸನ ಹೊರಡಿಸಿದ್ದು, ತನ್ನ ತಂದೆ ನರಸಣನಾಯಕನಿಗೂ ತಾಯಿ ನಾಗಾಜಿ ಅಮ್ಮನಿಗೂ ಪುಣ್ಯ ಲಭಿಸಲೆಂದು ವಿರೂಪಾಕ್ಷನಿಗೆ ಚಿನ್ನಿನಾಯಕನಹಳ್ಳಿಯನ್ನು (ಈ ಹಿಂದೆ ರಾಜರು ದಾನವಾಗಿ ಕೊಟ್ಟಿದ್ದ ೧೪ ಗ್ರಾಮ ವೃತ್ತಿಮಾನ್ಯ ತೋಟ ಸಹ)ದಾನನೀಡಿದ ವಿಷಯ ಇದರಲ್ಲಿದೆ.

ಒಟ್ಟಾರೆ ಇವು ನೋಡಲಿಕ್ಕೆ ನಾಲ್ಕು ಶಾಸನಗಳಾಗಿದ್ದರೂ ಮೂರು ವರ್ಷಗಳ ವ್ಯಾಪ್ತಿಯಲ್ಲಿ ವಿರೂಪಾಕ್ಷನಿಗೆ ನೀಡಿದ ಎರಡು ದಾನ ಶಾಸನಗಳಾಗಿವೆ. ಈ ಹೊತ್ತಿಗಾಗಲೇ ಹಂಪಿಯಲ್ಲಿ ನರಸಿಂಹ, ಜಡೆಯ ಶಂಕರಲಿಂಗ, ಕಡಲೆಕಾಳು ಗಣಪತಿ, ರಾಚಮಲ್ಲೇಶ್ವರ, ಕುಂಥು ಜಿನಾಲಯ, ಪಾರ್ಶ್ವಜಿನಾಲಯಗಳಿದ್ದರೂ ಇವುಗಳನ್ನು ಉಪೇಕ್ಷಿಸಿ ಸ್ಥಳೀಯ ಬಹುಜನಸಮಾಜದ ಮನಸ್ಸನ್ನು ಗೆದೆಯಲು ವಿರೂಪಾಕ್ಷನಿಗೆ ಮಾತ್ರ ಈ ದಾನಗಳನ್ನು ನೀಡಿದಂತಿದೆ.

ಪಟ್ಟವೇರಿ ಮೂರು ವರ್ಷ ಗತಿಸುವಲ್ಲಿ, ಒಮ್ಮೆಲೇ ಒಂದೇ ವರ್ಷದಲ್ಲಿ (೧೫೧೩) ಪ್ರಸನ್ನ ವಿರೂಪಾಕ್ಷ, ರಾಮಚಂದ್ರ (ಹಜಾರರಾಮ), ವಿಜಯವಿಠ್ಠಲ, ಕೃಷ್ಣ- ಈ ನಾಲ್ಕು

---

೧. ಈ ಮೂರು ಶಾಸನಗಳಲ್ಲಿ ಶ್ರೀಕೃಷ್ಣದೇವರಾಯನ ಸಿಂಹಾಸನಾರೋಹಣ ಕಾಲವನ್ನು ೩೪ನೆಯ ಮತ್ತು ೫೧ನೆಯ ನಂಬರಿನ ಶಾಸನಗಳು ಶಕೆ ೧೪೩೦ ಎಂದು, ೩೯೭ನೆಯ ನಂಬರಿನ ಶಾಸನ ಶಕೆ ೧೪೩೧ ಎಂದು ತಿಳಿಸುತ್ತವೆ. ಸಂಪಾದಕರು ಈ ಎರಡೂ ಕಡೆಗೆ ಕ್ರಿ. ಶ. ೧೫೧೦ ಎಂದೇ ಬರೆದಿದ್ದಾರೆ.

ಹೊಸದೇವಾಲಯುಗಳು ಕಾಣಿಸಿಕೊಳ್ಳುತ್ತವೆ. ಪಟ್ಟವೇರುವಾಗ ಇಲ್ಲದ ಈ ದೇವಾಲಯುಗಳು ಕೃಷ್ಣದೇವರಾಯನ ಕಾಲದ ನಿರ್ಮಾಣಗಳೇ ಆಗಿರಬಹುದು.

ಪ್ರಸನ್ನವಿರೂಪಾಕ್ಷನಿಗೂ ಕೃಷ್ಣದೇವರಾಯನಿಗೂ ಸಂಬಂಧಿಸಿದುವು ೨೩೫(೧೨-೩-೧೫೧೩) ಮತ್ತು ೨೫೦ (೧೨-೩-೧೫೧೩)ನೆಯ ಸಂಖ್ಯೆಯ ಶಾಸನಗಳು. ಇವುಗಳಲ್ಲಿ ೨೩೫ನೆಯ ಶಾಸನ ಕನ್ನಕಿಯ ಕಟ್ಟೆ ಗ್ರಾಮದಾನವನ್ನು ಹೇಳುತ್ತದೆ. ೨೫೦ನೆಯ ಸಂಖ್ಯೆಯ ಶಾಸನದಲ್ಲಿ ಇದೇ ಮಿತಿಯಿದ್ದು, ಕನ್ನಕಿಯಕಟ್ಟೆ ಗ್ರಾಮವನ್ನಲ್ಲದೆ ಈ ಮೊದಲು (ಪ್ರಾಕು) ದಾನವಾಗಿ ಕೊಟ್ಟ ೩ ಗ್ರಾಮ, ೩ ತೋಟ, ೩ ಮಾನ್ಯ, ೨ ವೃತ್ತಿಗಳನ್ನು ಹೇಳುತ್ತದೆ. ಎರಡೂ ಶಾಸನಗಳನ್ನು ನರಸಣ ನಾಯಕ, ನಾಗಾಜಿ ಅಮ್ಮನವರಿಗೆ ಪುಣ್ಯಪ್ರಾಪ್ತಿಯಾಗಲೆಂದು ನೀಡಲಾಗಿದೆ. ಇಲ್ಲಿ ಪ್ರಾಕು ದಾನಗಳ ಉಲ್ಲೇಖವಿರುವುದರಿಂದ ಇದು ೧೫೧೩ರ ಹಿಂದಿನ (೧೫೧೦ರ ತರುವಾಯಲದ?)ದೇವಾಲಯವಾಗಿರಬಹುದು.

ರಾಮಚಂದ್ರ (ಹಜಾರರಾಮ) ದೇವಾಲಯದ ನೆಲಗಟ್ಟಿನಲ್ಲಿರುವ "ಪಂಪಾದೇವಿಯು ದೇವರಾಯನೃಪನನ್ನು ಆಶೀರ್ವದಿಸಲಿ" ಎಂಬ ವಿಷಯವುಳ್ಳ ಒಂದೇ ಒಂದು ಸಂಸ್ಕೃತ ಶ್ಲೋಕವನ್ನೊಳಗೊಂಡ ಶಾಸನಪಠ್ಯ,[೨] ಈ ದೇವಾಲಯಕ್ಕೆ ಎಳ್ಳಷ್ಟೂ ಹೊಂದಿಕೆಯಾಗುವುದಿಲ್ಲ. ಇದನ್ನು ಎಲ್ಲಿಂದಲೋ ತಂದು ನೆಲಗಟ್ಟಿಗೆ ಜೋಡಿಸಿರುವ ಸಾಧ್ಯತೆಯಿರುವುದರಿಂದ, ಈ ದೇವಾಲಯ ಖಂಡಿತವಾಗಿಯೂ ದೇವರಾಯನ ಕಾಲದ್ದಲ್ಲ. ಬಹುಶ: ಮೇಲೆ ಹೇಳಿದಂತೆ ಕೃಷ್ಣದೇವರಾಯನ ಕಾಲದ್ದೇ ಆಗಿರಬೇಕು.

ರಾಮಚಂದ್ರದೇವಾಲಯಕ್ಕೆ ಕೃಷ್ಣದೇವರಾಯ ನೀಡಿದ ದಾನವನ್ನೊಳಗೊಂಡುವು ೨೬೫ (ಕ್ರಿ. ಶ. ೧೫೧೩), ೨೩೭ (ಕ್ರಿ. ಶ. ೧೫೨೧)ನೆಯ ಶಾಸನಗಳು. ೨೬೫ನೆಯ ಶಾಸನವು ರಾಮಚಂದ್ರದೇವರಿಗೆ ಒಳಕೋಟೆ, ತಾಳೂರು ಗ್ರಾಮ ನೀಡಿದುದನ್ನಲ್ಲದೆ, ಈ ಮೊದಲು ದಾನವಾಗಿ ಬಂದಿದ್ದ (ಪ್ರಾಕು) ೪ ಗ್ರಾಮಗಳನ್ನು ಮುಂದುವರಿಸಿದುದನ್ನು ತಿಳಿಸುತ್ತದೆ. ಹಳೆಯ ದಾನವನ್ನು ಪ್ರಸ್ತಾಪಿಸುವುದರಿಂದ ಈ ದೇವಾಲಯವೂ ೧೫೧೩ಕ್ಕೆ ಮೊದಲು (೧೫೧೦ಕ್ಕೆ ತರುವಾಯ?) ಹುಟ್ಟಿರಬಹುದು. ೨೫೭ನೆಯ ಶಾಸನವು ಈ ಮೊದಲು ಕೃಷ್ಣದೇವರಾಯನು ದಾನವಾಗಿ ಕೊಟ್ಟ ತಾಳೂರನ್ನು ಪ್ರಸ್ತಾಪಿಸಿ, ಒಡೆದುಹೋದ ಅಲ್ಲಿಯ ಕೆರೆಯನ್ನು ಚಿಕ್ಕತಿಮ್ಮಯದೇವ ಅರಸರ ಮಗ ತಿಮ್ಮರಾಜನು ಕಟ್ಟಿಸಿದುದನ್ನು ಹೇಳುವ ಕಾರಣ, ಇದು ನೇರವಾಗಿ ಕೃಷ್ಣದೇವರಾಯನಿಗೆ ಸಂಬಂಧಿಸಿಲ್ಲ.

ಒಟ್ಟಾರೆ ಮೇಲೆ ಚರ್ಚಿಸಿದಂತೆ ಪ್ರಸನ್ನವಿರೂಪಾಕ್ಷ (೧೫೧೩), ರಾಮಚಂದ್ರ ದೇವರ ಶಾಸನ (೧೫೧೩)ಗಳಲ್ಲಿ "ಪ್ರಾಕು" ದಾನ ನೀಡಿದ ಗ್ರಾಮಗಳ ಉಲ್ಲೇಖ ಬರುವುದರಿಂದ ಇವೆರಡೂ ದೇವಾಲಯಗಳು ೧೫೧೦-೧೫೧೩ ನಡುವೆ ಹುಟ್ಟಿವೆಯೆನಿಸುತ್ತದೆ.

---

೨. ಹಂಪಿ ಶಾಸನಗಳು-೨೬೧.

ವಿಠ್ಠಲದೇವಾಲಯುದ ವಿಷಯದಲ್ಲಿ ೧೨-೩-೧೫೧೩ರಂದು ಮೂರು ಶಾಸನ ಹೊರಡಿಸಿದ್ದಾನೆ. (೧೮೧, ೧೮೨, ೨೦೮ರ ಪೂರ್ವಾರ್ಧ). ಇವುಗಳಲ್ಲಿ ೧೮೧, ೧೮೨ ನೆಯ ಶಾಸನಗಳು ಒಂದರ ಪ್ರತಿ ಇನ್ನೊಂದಾಗಿವೆ. ತಂದೆ ತಾಯಿಗಳಿಗೆ ಪುಣ್ಯಲಭಿಸಲೆಂದು, ವಿಠ್ಠಲದೇವರ "ಅಮೃತಪಡಿ ನೈವೇದ್ಯಕ್ಕೂ ಅಂಗರಂಗ ವಯಿಭೋಗ ಫಾಲ್ಗುಣ ಮಾಸದ ರಥ ಉಛ್ಚಾಹ ವಯಿಶಾಖ ಮಾಸದ ರಥಉಛ(೦)ಹ ನಿತ್ಯೋತ್ಸಾಹ ಪಕ್ಷ ಉಛ್ಚಾಹ ಮಾಸ ಉಛ್ಚಾಹ ಸಂವಛರೋಛ್ಚಾಹ ನಿತ್ಯನೈಮಿತಿಕ ದೀಪಾರಾಧನೆ ಮೊದಲಾದ [ಪು](೦)ಣ್ಯತಿಥಿಗಳು ಮಹಾಪೂಜೆ ಮಹಾನೈವೇದ್ಯಕೂ" ಕೃಷ್ಣದೇವರಾಯ ೩ ಗ್ರಾಮ ನೀಡಿದ್ದಾನೆ. ಇಲ್ಲಿಯೇ ಮುಂದಿನ ಭಾಗದಲ್ಲಿ ದೇವರಗೋಪುರ ಕಟ್ಟಿಸಿ, ದೇವರ ಆರೋಗಣೆಗೆಂದು ಚಿನ್ನದ ಹರಿವಾಣ, ಬೆಳ್ಳಿಯ ನೀರಾಂಜನದ ಹಲಗೆ ೯, ಹಿರಿಯ ಆರತಿ ೮, ಪುರುಷಾಮೃಗದ ಆರತಿ ೩, ನಾಗಾರತಿ ೧, ಧೂಪಾರತಿ [೧], ಖಡಿಬತಿ ೨, ಪ್ರತುಮೆ ಆರತಿ ೧ ಹೀಗೆ ಒಟ್ಟು ೨೫ ಆರತಿ, ನೀರಾಂಜನ ದೀಪಾರಾಧನೆಗೆ ೩೦ ಹಸುವು-ಇಷ್ಟನ್ನು ರಾಣಿಯರಾದ ಚಿನ್ನಾದೇವಿ ತಿರುಮಲದೇವಿಯುವರು ನೀಡಿದ ಉಲ್ಲೇಖವಿದೆ. ಏಕಕಾಲಕ್ಕೆ ೩ ಗ್ರಾಮ, ಅನೇಕ ಪೂಜಾಪರಿಕರ, ಗೋಪುರನಿರ್ಮಾಣ ಇತ್ಯಾದಿ ಇಲ್ಲಿಯ ದೊಡ್ಡ ಪ್ರಮಾಣದ ದಾನವನ್ನು ನೋಡಿದರೆ, ರಾಜ-ರಾಣಿ ಇಬ್ಬರೂ ಭಾಗವಹಿಸಿದುದನ್ನು ಗಮನಿಸಿದರೆ ಇದು ವಿಠ್ಠಲ ದೇವಾಲಯದ ಉದ್ಘಾಟನೆಯ ಸಮಾರಂಭವಾಗಿರಬಹುದೆನಿಸುತ್ತದೆ. ವಿಠ್ಠಲದೇವರಿಗೆ ಸಂಬಂಧಿಸಿದಂತೆ ಇದು ಮೊದಲನೆಯ ಶಾಸನವಾಗಿರುವುದೂ, ದ್ವಿಪ್ರತಿಯುಲ್ಲಿರುವುದೂ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ೨೦೮ನೆಯ ಶಾಸನವು ೧೮೧, ೧೮೨ನೆಯ ಶಾಸನಗಳ ತೇದಿ (ಶ್ರೀಮುಖ)ಯನ್ನೂ ಅಲ್ಲಿಯ ಘಟನೆಗಳನ್ನೂ ಉದ್ಧರಿಸಿ, ತರುವಾಯ ಬೇರೆ ಬೇರೆ ಕಾಲಗಳಲ್ಲಿಯ (ಭಾವ, ಪ್ರಮಾಥಿ, ವ್ಯಯ)ದಾನ ಘಟನೆಗಳನ್ನು ಹೇಳುತ್ತದೆ. ಹೀಗಾಗಿ ಇದು ಕ್ರಿ. ಶ. ೧೫೧೩ರ (ಶ್ರೀಮುಖ) ಶಾಸನವಾಗಿರದೆ ಕೊನೆಯಲ್ಲಿಯ ವ್ಯಯನಾಮ ಸಂವತ್ಸರ(೧೫೨೬)ದ್ದಾಗಿದೆ. ಇಲ್ಲಿಯ ವ್ಯಯಸಂವತ್ಸರದ ಪಠ್ಯದಲ್ಲಿ "ಗುರುವುಗಳು ವ್ಯಾಸರಾಯರಿಗೆ ಪಾಲು[೩]" ಎಂದೂ ಹೇಳಲಾಗಿದೆ. ಇಲ್ಲಿಯೇ ತಿರುನಾಳ, ತಿರುವೆಳಗಿ ಪದಗಳಿರುವುದರಿಂದ ಈ ದೇವಾಲಯ ಶ್ರೀವೈಷ್ಣವಕ್ಕೆ ಸಂಬಂಧಿಸಿರಬೇಕೆನಿಸುತ್ತದೆ.

ಇವುಗಳನ್ನು ಬಿಟ್ಟರೆ ೨೦೬, ೨೦೭, ೨೨೩ನೆಯ ನಂಬರಿನ ಶಾಸನಗಳ ಪಠ್ಯ ಒಂದೇ ಆಗಿದ್ದು, ತೆಲುಗು, ಕನ್ನಡ, ತಮಿಳು ಭಾಷೆಯಲ್ಲಿವೆ. ಕೃಷ್ಣದೇವರಾಯನು ವಿಠ್ಠಲ ದೇವರಿಗೆ ನೂರು ಕಂಬಗಳ ಮಂಟಪ ಕಟ್ಟಿಸಿದುದನ್ನು ಇವು ದಾಖಲಿಸಿವೆ.

ಕೃಷ್ಣದೇವಾಲಯಕ್ಕೆ ಸಂಬಂಧಿಸಿದ ೧೪೩೫ ಭಾವಸಂವತ್ಸರ ಫಾಲ್ಗುಣ ಶು ೩ ಶುಕ್ರವಾರ (೧೬-೨-೧೫೧೩)ದ ೭೩ನೆಯ ಶಾಸನವು "ಉದಯಗಿರಿಯಿಂದ ಬಿಜಯ ಮಾಡಿಸಿಕೊಂಡು ಬಂದಂಥಾ ಶ್ರೀ ಬಾಲಕೃಷ್ಣದೇವರ" ಪ್ರತಿಷ್ಠಾಪನೆಯನ್ನು ತಿಳಿಸುತ್ತದೆ. "ದೇವರಿಗೆ ನವರತ್ನಖಚಿತ ನಾನಾವಿಧ ಆಭರಣಗಳನೂ ಸುವರ್ನ ರಜತಾದ್ಯುಪಕರಣಗಳನೂ" "ದೇವರ ಶ್ರೀಕಾರ್ಯಕೆ ದೀಪಾರಾಧನೆ ಫಲಪೂಜಾದಿ ನಿತ್ಯನೈವೇದ್ಯಗಳಿಗೆ ನೈಮಿತ್ತಿಕ ಪಂಚಪರ್ವ ರಥ ಮಹೋತ್ಸವ ಬ್ರಾಹ್ಮಣ ವಿನಿಯೋಗ ಅಂಗರಂಗ ವೈಭೋಗ"ಗಳಿಗಾಗಿ ಅತ್ತಿವಟಿ, ಮುದಲಾಪುರ, ದೇವಲಾಪುರ, ಹರಿಯಸಮುದ್ರ, ತೊಗಲಗಲ್ಲು, ಬಾದನಹಟ್ಟಿ, ರುದ್ರಪಾದ ಮತ್ತು ಕೃಷ್ಣಾಪುರದ ಸ್ಥಳಸುಂಕ

ಬಿಟ್ಟುದನ್ನೂ ಸೂಚಿಸುತ್ತದೆ. ಮುಂದುವರಿದು ಹತ್ತಾರು ದೇವತಾಕಾರ್ಯಗಳಿಗೆ ಹತ್ತಾರು ಬಗೆಯ ದಾನನೀಡಿದುದನ್ನು ಹೇಳುತ್ತದೆ.

೭೪ನೆಯ ಶಾಸನವು ಭಾವ ಸಂವತ್ಸರದಲ್ಲಿ ದೇವರನ್ನು ಪ್ರತಿಷ್ಠಾಪಿಸಿದುದನ್ನಲ್ಲದೆ, ಮುಂದುವರಿದು ಈಶ್ವರ ಪ್ರಮಾಥಿ ಪಾರ್ಥಿವ ಚಿತ್ರಭಾನು ಸಂವತ್ಸರಗಳಲ್ಲಿ ನೀಡಿದ ಅನೇಕ ದಾನವನ್ನೂ ಹೇಳುವುದರಿಂದ ಈ ಶಾಸನವು ಚಿತ್ರಭಾನು ಸಂವತ್ಸರದಲ್ಲಿ ಅಂದರೆ ಕ್ರಿ. ಶ. ೧೫೨೧ರಲ್ಲಿ ಬರೆದುದಾಗಿದೆ.

ಕೃಷ್ಣದೇವರಾಯನು ತಿರುವೆಂಗಳನಾಥನಿಗೆ ನೀಡಿದ ದಾನಗಳನ್ನು ೩೨೦(೧೫೧೮), ೩೨೧(೧೫೨೩)ನೆಯ ಶಾಸನಗಳು ತಿಳಿಸುತ್ತವೆ. ಇಲ್ಲಿ ೩೨೦ನೆಯ ಶಾಸನ ಕೃಷ್ಣದೇವರಾಯನ ರಾಣಿ ತಿರುಮಲದೇವಿ ಕುಮ್ಮರಕುಂಟೆ ಗ್ರಾಮವನ್ನು ತಿರುವೆಂಗಳನಾಥನಿಗೆ ದಾನವಾಗಿ ನೀಡಿದುದನ್ನು (ತಿರುಮಲರಾಯನಿಗೆ ಪುಣ್ಯ ಪ್ರಾಪ್ತವಾಗಲೆಂದು)ತಿಳಿಸುತ್ತದೆ. ಇದರಲ್ಲಿ ರಾಮಾನುಜಸ್ತುತಿಯಿದೆ. ೩೨೧ನೆಯ ಶಾಸನ ಕೃಷ್ಣದೇವರಾಯನು ಈ ದೇವರಿಗೆ ಒಂದು ಗ್ರಾಮನೀಡಿದ ವಿಷಯವನ್ನೊಳಗೊಂಡಿದೆ.

ರಘುನಾಥ ದೇವಾಲಯಕ್ಕೆ ಕೃಷ್ಣದೇವರಾಯನು ದಾನನೀಡಿದುದನ್ನು ೨೪೯ನೆಯ ಶಾಸನ (ಕ್ರಿ.ಶ. ೧೫೨೪)ಸೂಚಿಸುತ್ತದೆ.

ಕೃಷ್ಣದೇವರಾಯನಿಗೆ ಸಂಬಂಧಿಸಿದ ಹಂಪಿಯ ಶಾಸನಗಳಲ್ಲಿ ಕೊನೆಯದಾಗಿದೆ, ೮೧ (೧೫೨೯)ನೆಯದು. "ಶ್ರೀಕೃಷ್ಣದೇವ ಮಹಾರಾಯರು ಆರ್ಯ ಕೃಷ್ಣಭಟ್ಟರ ಕೈಯಲು ಕೃಷ್ಣಾಪುರದಲು ಪ್ರತಿಷ್ಠೆ ಮಾಡಿಸಿದ ಶ್ರೀ ಲಕ್ಷ್ಮೀನರಸಿಂಹದೇವರ ಅಮ್ರುತಪಡಿಗೆ" ಎರಡು ಗ್ರಾಮ ನೀಡಿದ ಉಲ್ಲೇಖ ಇಲ್ಲಿವೆ. ಇದೇ ವರ್ಷ ಕೃಷ್ಣದೇವರಾಯನೂ ತೀರಿಕೊಂಡಿದ್ದಾನೆ.

*****

ಮೇಲೆ ವಿವರಿಸಿದ ಮಾಹಿತಿಯಿಂದ ಕೆಲವು ಸಂಭವನೀಯ ನಿರ್ಣಯಕ್ಕೆ ಬರಬಹುದು. ಕೃಷ್ಣದೇವರಾಯನು ಪಟ್ಟಬಂಧೋತ್ಸವ ಸಂದರ್ಭ (೨೪-೧-೧೫೧೦, ಶಕೆ ೧೪೩೦ ಶುಕ್ಲಸಂವತ್ಸರ ಮಾಘ ಶುದ್ಧ ೧೪)ದಲ್ಲಿ ಒಮ್ಮೆ ತಂದೆತಾಯಿಗಳ ಪುಣ್ಯಯಾಚಿಸಿ, ೩ ವರ್ಷದ ಬಳಿಕ (೧೫೧೩) ಇನ್ನೊಮ್ಮೆ-ಹೀಗೆ ಎರಡು ಸಲ ದಾನ ನೀಡಿದವನು, ಮುಂದೆ ೧೫೨೯ರ ವರೆಗೆ ಬದುಕಿದ್ದರೂ ವಿರೂಪಾಕ್ಷನ ಕಡೆಗೆ ಮತ್ತೆ ಹೊರಳಿ ನೋಡಲಿಲ್ಲ. "ಪಂಪಾನಗರ" ಬಡಾವಣೆಯಲ್ಲಿ (ವಿರೂಪಾಕ್ಷ ದೇವಾಲಯ ಬಡಾವಣೆಯಲ್ಲಿ) ಪ್ರಸಿದ್ಧ ವಿರೂಪಾಕ್ಷ ದೇವಾಲಯವಿದ್ದರೂ "ವಿಜಯನಗರ" ಬಡಾವಣೆಯಲ್ಲಿ (ರಾಜಧಾನಿ ಬಡಾವಣೆಯಲ್ಲಿ) ಪ್ರಸನ್ನವಿರೂಪಾಕ್ಷ ದೇವಾಲಯವನ್ನು ಕಟ್ಟಲಾಯಿತು. ಇದರ ಪ್ರಥಮ ಉಲ್ಲೇಖವೇ ಕೃಷ್ಣದೇವರಾಯನ ದಾನ ಶಾಸನ (೧೫೧೩)ವಾಗಿರುವುದರಿಂದ, ಇದು ಇವನಿಂದಲೇ ೧೫೧೦-೧೩ರ ಮಧ್ಯ ನಿರ್ಮಾಣಗೊಂಡಿರುವ ಸಾಧ್ಯತೆಯಿದೆ. ಈ ನಿರ್ಮಾಣದಿಂದಾಗಿ ಈ ವರೆಗೆ ಏಕಮುಖಿಯಾಗಿದ್ದ ಜನರ ವಿರೂಪಾಕ್ಷಭಕ್ತಿ ಈಗ ಕವಲೊಡೆಯಿತು. ವಿರೂಪಾಕ್ಷನ ಪರಂಪರಾಗತ ಭಕ್ತರಿಗೆ ರಾಜನ ಈ ಕೆಲಸ ಮನಸ್ಸಿಗೆ ಬಾರದ ಕಾರಣಕ್ಕಾಗಿಯೇ ತಾಳಿಕೋಟೆಯುದ್ಧದಲ್ಲಿ ವೈಷ್ಣವದೇವಾಲಯಗಳೊಂದಿಗೆ ಏಕೈಕ ಉದಾಹರಣೆಯೆಂಬಂತೆ ಈ ಶೈವದೇವಾಲಯವನ್ನೂ ನಾಶಮಾಡಿದರೆಂದು ಊಹಿಸಬಹುದಾಗಿದೆ.

ಪ್ರಸನ್ನ ವಿರೂಪಾಕ್ಷ, ರಾಮಚಂದ್ರ, ವಿಜಯವಿಠ್ಠಲ–ಈ ಮೂರೂ ದೇವರಿಗೆ ಏಕಕಾಲಕ್ಕೆ ಅಂದರೆ ೧೫೧೩ ಮಾರ್ಚ ೧೧ (೧೪೩೫ ಶ್ರೀಮುಖ ಸಂವತ್ಸರ ಚೈತ್ರ ಶುದ್ಧ ೫)ರಂದು ದತ್ತಿನೀಡಿದ್ದಾನೆ. ಇವು ಈ ಮೂರೂ ದೇವರನ್ನು ಉಲ್ಲೇಖಿಸುವ ಪ್ರಥಮ ಶಾಸನಗಳಾಗಿವೆ. ಮತ್ತು ಮೂರರಲ್ಲಿಯೂ ತನ್ನ ತಂದೆತಾಯಿಗಳಿಗೆ ಪುಣ್ಯಲಭಿಸಲೆಂದು ಹಾರೈಸಿದ್ದಾನೆ. ಮೇಲೆ ಚರ್ಚಿಸಿದಂತೆ ಇವುಗಳಲ್ಲಿ ಪ್ರಸನ್ನವಿರೂಪಾಕ್ಷ, ರಾಮಚಂದ್ರ ದೇವಾಲಯ ೧೫೧೦–೧೫೧೩ರ ಮಧ್ಯ ಹುಟ್ಟಿರಬಹುದಾದರೂ, ವಿಠ್ಠಲ ದೇವಾಲಯ ಮಾತ್ರ ಈ ಶಾಸನದ ಕಾಲವಾದ ೧೫೧೩ ಮಾರ್ಚ ೧೧ರಂದು ಉದ್ಘಾಟನೆಗೊಂಡಿರಬಹುದು.

ಕೃಷ್ಣದೇವಾಲಯ ಇದೇ ವರ್ಷ ಅಂದರೆ ೧೫೧೩ ಫೆಬ್ರುವರಿ ೧೬ (೧೪೩೫ ಭಾವಸಂವತ್ಸರ ಫಾಲ್ಗುಣ ಶುದ್ಧ ೩ ಶುಕ್ರವಾರ)ರಂದು ಉದ್ಘಾಟಿಸಲ್ಪಟ್ಟಿದೆಯೆಂದು ೭೩ನೆಯ ಶಾಸನ ಸ್ಪಷ್ಟಪಡಿಸುತ್ತದೆ. ಒಂದೇ ವರ್ಷದಲ್ಲಿ ಈ ನಾಲ್ಕೂ ದೇವರಿಗಲ್ಲದೆ, ತನ್ನ ತಂದೆತಾಯಿಗಳಿಗೆ ಪುಣ್ಯಲಭಿಸಲೆಂದು ಐದನೆಯದಾಗಿ ವಿರೂಪಾಕ್ಷನಿಗೂ (ಶಾಸನ ಸಂಖ್ಯೆ ೩೩) ದಾನ ನೀಡಿದ್ದಾನೆ. ಹೀಗೆ ದಾನನೀಡಿದ್ದರೂ ಅವನಿಗೆ ವಿರೂಪಾಕ್ಷ, ಪ್ರಸನ್ನ ವಿರೂಪಾಕ್ಷರಿಗಿಂತ ರಾಮಚಂದ್ರನ ಬಗ್ಗೆ, ಇವರೆಲ್ಲರಿಗಿಂತ ವಿಜಯವಿಠ್ಠಲ, ಬಾಲಕೃಷ್ಣರ ಬಗ್ಗೆ ಹೆಚ್ಚು ಭಕ್ತಿ. ಈ ದೇವತೆಗಳಿಗೆ ನೀಡಿದ ದಾನ ಪ್ರಮಾಣವೂ ಅಧಿಕ. ಹೆಚ್ಚಿನದಾಗಿ ತಿರುವೆಂಗಳನಾಥ, ರಘುನಾಥ, ಲಕ್ಷ್ಮೀನರಸಿಂಹ (ಉಗ್ರನರಸಿಂಹ)ದೇವರಿಗೆ ವಿಶೇಷಭಕ್ತಿ ತೋರಿಸಿದನು.

ಒಟ್ಟಾರೆ, ೧೫೧೩ರ ಬಳಿಕ ಪ್ರಸಿದ್ಧ ವಿರೂಪಾಕ್ಷನಿಗಾಗಲೀ, ಪ್ರಸನ್ನ ವಿರೂಪಾಕ್ಷನಿಗಾಗಲೀ ಒಂದೂ ದಾನ ನೀಡಲಿಲ್ಲ. ಅಂದರೆ ೧೬ ವರ್ಷ ಈ ದೇವರನ್ನು ಅಲಕ್ಷಿಸಿ, ವೈಷ್ಣವ ದೇವರತ್ತ ಏಕಮುಖಿಯಾಗಿ ಮುನ್ನಡೆದ. ಮೇಲಿಂದ ಮೇಲೆ ಅವುಗಳಿಗೆ ದಾನ ನೀಡಿದ. ವಿಠ್ಠಲನಿಗೆ ಶ್ರೀಮುಖ, ಭಾವ, ಪ್ರಮಾಥಿ, ವ್ಯಯ ಸಂವತ್ಸರಗಳಲ್ಲಿ, ಬಾಲಕೃಷ್ಣನಿಗೆ ಭಾವ, ಈಶ್ವರ, ಪ್ರಮಾಥಿ, ಪಾರ್ಥಿವ, ಚಿತ್ರಭಾನು ಸಂವತ್ಸರಗಳಲ್ಲಿ ದಾನ ನೀಡಿದ. ರಾಮಚಂದ್ರನಿಗೆ ೧೫೧೩ರಲ್ಲಿ ಎರಡು ಗ್ರಾಮನೀಡಿದವನು, ಹಳೆಯ ನಾಲ್ಕು ಊರುಗಳ ದಾನವನ್ನು ಮುಂದುವರಿಸಿದ. ಲಕ್ಷ್ಮೀನರಸಿಂಹನಿಗೆ ಏಕಕಾಲಕ್ಕೆ ಎರಡು ಗ್ರಾಮ ನೀಡಿದ. ತಿರುವೆಂಗಳದೇವರಿಗೆ ಹೆಂಡತಿಯ ಮೂಲಕ ಒಂದು ಗ್ರಾಮ, ತಾನೇ ನೇರವಾಗಿ ಒಂದು ಗ್ರಾಮ ನೀಡಿದ. ರಘುನಾಥ ದೇವಾಲಯಕ್ಕೂ ಕಾಣಿಕೆ ಸಲ್ಲಿಸಿದ.

ಹೀಗೆ ಸ್ಥಳೀಯ ಮೂಲದೈವವನ್ನು ಉಪೇಕ್ಷಿಸಿ, ಬರುಬರುತ್ತ ಆಮೇಲೆ ಅನ್ಯಪ್ರಾಂತಗಳಿಂದ ಬಂದ ದೈವಗಳತ್ತ ಒಲವು ತೋರಿಸಿದ್ದಲ್ಲದೆ, ಕರ್ನಾಟಕದ ಹಂಪಿಗಿಂತ ಆಂಧ್ರಪ್ರದೇಶದ ತಿರುಪತಿ ಈತನಿಗೆ ತುಂಬ ಮುಖ್ಯವಾಯಿತು. ರಾಜಧಾನಿಯ ದೈವವಾದ ಹಂಪಿಯ ವಿರೂಪಾಕ್ಷನಿಗೆ ಕೇವಲ ಎರಡು ಸಲ ಭಕ್ತಿ ಸಲ್ಲಿಸಿದರೆ, ದೂರದ ತಿರುಪತಿಯ ವೆಂಕಟೇಶ್ವರನಿಗೆ ಏಳು ಸಲ ಹೋಗಿ ಭಕ್ತಿ ಸಲ್ಲಿಸಿದ. ವಿರೂಪಾಕ್ಷನಿಗೆ ನೀಡಿದ ಕಾಣಿಕೆಗೆ ಹೋಲಿಸಬಾರದಷ್ಟು ದೊಡ್ಡ ಮೊತ್ತದ ಕಾಣಿಕೆಯನ್ನು ವೆಂಕಟೇಶನಿಗೆ ಸುರಿದು ಬಂದ.

ವಿರೂಪಾಕ್ಷನನ್ನು ಮೀರಿಸುವಂತೆ ಸ್ಥಳೀಯ ಹಂಪೆಯಲ್ಲಿಯೇ ವಿಠ್ಠಲನ ವೈಭವವನ್ನು ಬೆಳೆಸಿದ. ಇವನು ವಿಜಯವಿರೂಪಾಕ್ಷನಾದರೆ ಅವನು ವಿಜಯವಿಠ್ಠಲನಾದ. ಇವನ ರಥಬೀದಿ ಭಕ್ತಿಯಿಂದ ತುಂಬಿದರೆ, ಅವನ (ರಥ)ಬೀದಿ ವೈಭವದಿಂದ ತುಂಬಿತುಳುಕಿತು. ವಿರೂಪಾಕ್ಷನ

ಪಂಚಕ್ರೋಶ ಭೂಮಿಯ ಆಕ್ರಮಣವೆಂಬಂತೆ ಮಗ್ಗುಲಲ್ಲಿಯೇ ಬೃಹತ್ ಕೃಷ್ಣದೇವಾಲಯ, ಅದರ ಮಗ್ಗುಲಲ್ಲಿಯೇ ಈ ಮೊದಲಿನ ಏಕಶಿಲಾ ಗಣೇಶನೊಂದಿಗೆ ಸ್ಪರ್ಧಿಸುವಂತೆ ಏಕಶಿಲಾ ಲಕ್ಷ್ಮೀನರಸಿಂಹ (ಉಗ್ರ ನರಸಿಂಹ)ನನ್ನು ಸ್ಥಾಪಿಸಿದ. "ಪಂಪಾಪುರ" ಬಡಾವಣೆಯಲ್ಲಿಯೇ "ಕೃಷ್ಣಪುರ" ಎಂದು ಅಧಿಕೃತ ಹೊಸ ಬಡಾವಣೆಯನ್ನು ಘೋಷಿಸಿದ.

ಒಟ್ಟಾರೆ, ಪ್ರಸನ್ನ ವಿರೂಪಾಕ್ಷನನ್ನು ಸ್ಥಾಪಿಸುವ ಮೂಲಕ ಪ್ರಸಿದ್ಧ ವಿರೂಪಾಕ್ಷನ ಮೇಲಿನ ಭಕ್ತಿ ಕವಲೊಡೆಯುವಂತೆ ಮಾಡಿದ. ಶೈವನಿಷ್ಠವಾಗಿದ್ದ ಹಂಪಿಯು ಮಾಧ್ವ ಅದರಲ್ಲಿಯೂ ಶ್ರೀವೈಷ್ಣವನಿಷ್ಠೆಗೆ ಹೊರಳಿತು. ಹಂಪಿಗಿಂತ ತಿರುಪತಿಯತ್ತ ರಾಜ್ಯದ ಭಕ್ತಿವಾಹಿನಿ ಹೆಚ್ಚು ಪ್ರವಹಿಸತೊಡಗಿತು. ಸ್ಥಳೀಯ ವೈಷ್ಣವ-ಶ್ರೀವೈಷ್ಣವಗಳ, ದೂರದ ತಿರುಪತಿಯ ಪ್ರಸಿದ್ಧಿ ಅಂದರೆ ಪರಕೀಯ ಪ್ರಸಿದ್ಧಿ ಹಂಪಿಯಲ್ಲಿ ಬೆಳೆದಂತೆಲ್ಲ ವಿರೂಪಾಕ್ಷನ ಭಕ್ತರು ಕೃಷ್ಣದೇವರಾಯನನ್ನು ಅನುಮಾನದಿಂದ ನೋಡತೊಡಗಿದರು. ರಾಮಚಂದ್ರ ದೇವಾಲಯದ ಮೇಲೆ ಕಡಿಮೆ, ವಿಜಯವಿಠ್ಠಲ-ಬಾಲಕೃಷ್ಣ-ಲಕ್ಷ್ಮೀನರಸಿಂಹ ದೇವಾಲಯಗಳ ಮೇಲೆ ಅಧಿಕ ಸಿಟ್ಟು ತೋರಿಸುವ ರೀತಿಯಲ್ಲಿ ಮುಸಲ್ಮಾನರ ಜೊತೆಗೂಡಿ ಆ ಒಂದು ದೇವಾಲಯವನ್ನು ಸುರಕ್ಷಿತ ಉಳಿಸಿ, ಈ ಮೂರು ದೇವಾಲಯಗಳನ್ನು ದೊಡ್ಡ ಪ್ರಮಾಣದಲ್ಲಿ ನಾಶಮಾಡಿದರು.

■■

ಆಕರ : ಮಾರ್ಗ ಸಂಪುಟ-೪

೭೧

ಅಮೃತಮಥನ ಪುರಾಣ : ಶಾಸನೋಕ್ತ ಷಟ್ಪದ ಕಾವ್ಯ

ಡಾ। ಎಸ್. ಎಚ್. ರಿತ್ತಿ, ಶ್ರೀ। ಆನಂದ ಕುಂಬಾರ ಪ್ರಕಟಿಸಿರುವ Inscriptions from solapur district ಕೃತಿಯಲ್ಲಿಯ ಒಂದು ಶಿಲಾಶಾಸನ (ನಂ. ೪೦)ವನ್ನು ಆಧರಿಸಿ "ಕನ್ನಡದ ಮೊತ್ತಮೊದಲ ಷಟ್ಪದಕಾವ್ಯ" ಹೆಸರಿನ ಲೇಖನವನ್ನೂ, ಡಾ। ಸಿ. ಎಸ್. ಪಾಟೀಲ ಅವರು Anegundi copper plates ಹೆಸರಿನಲ್ಲಿ ಪ್ರಕಟಿಸಿದ[೧] ಒಂದು ತಾಮ್ರಶಾಸನವನ್ನು ಆಧರಿಸಿ "ವಿವಾಹಪುರಾಣ-ಕನ್ನಡದ ಅತ್ಯಂತ ಪ್ರಾಚೀನ ಶಾಸನಸ್ಥ ಜಾನಪದಕೃತಿ" ಹೆಸರಿನ ಲೇಖನವನ್ನೂ ಡಾ॥ ಚಿದಾನಂದಮೂರ್ತಿ ಅವರು ಬರೆದು ಪ್ರಕಟಿಸಿದ್ದಾರೆ. ಈ ಎರಡನೆಯ ಲೇಖನದಲ್ಲಿ ಎರಡೂ ಶಾಸನ (ಶಿಲಾ, ತಾಮ್ರ)ಗಳನ್ನು ತುಲನಾತ್ಮಕವಾಗಿ ಚರ್ಚಿಸಿದ್ದಾರೆ. ಈ ಚರ್ಚೆಯನ್ನು ಇನ್ನಷ್ಟು ಮುಂದುವರಿಸಬಹುದಾಗಿದೆ.

೧. ಶಿಲಾಶಾಸನದಲ್ಲಿ (ಶಿವ, ಪಾರ್ವತಿಯರ) "ವಿವಾಹಪುರಾಣ" ಮಾತ್ರವಿದ್ದರೆ, ತಾಮ್ರಶಾಸನದಲ್ಲಿ ಕ್ರಮವಾಗಿ "ವಿವಾಹಪುರಾಣ", "ಸಮಯಶಾಸನಪುರಾಣ" ಮತ್ತು "ಅಮೃತಮಥನಪುರಾಣ"ಗಳೆಂಬ ಮೂರು ಪುರಾಣಗಳಿರುವುದರಿಂದ ತಾಮ್ರಶಾಸನದ ಪಠ್ಯವನ್ನು ಇಡಿಯಾಗಿ "ವಿವಾಹಪುರಾಣ" ಶೀರ್ಷಿಕೆಯಿಂದ ಡಾ॥ ಚಿದಾನಂದಮೂರ್ತಿ ಅವರು ಕರೆದುದು ಸರಿಯಲ್ಲ. ಅವರೇ ಸೂಚಿಸಿರುವಂತೆ "ಸಮಯಶಾಸನಪುರಾಣ"ವೆಂದು ಕರೆಯಬಹುದು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಮೂರೂ ಪುರಾಣಗಳು ಕುಂಬಾರರಿಗೇ ಸಂಬಂಧಿಸಿರುವುದರಿಂದ "ಕುಂಭಕಾರ ಸಮಯಪುರಾಣ"ವೆಂದೋ, ಶಾಸನದಲ್ಲಿಯ ಸೂಚನೆಯನ್ನಾಧರಿಸಿ "ಸಾಲೆ ಸಾಸಿರ್ವರ ಪುರಾಣ" ಇಲ್ಲವೆ "ಐಸಾವಂತರ ಪುರಾಣ"ವೆಂದೋ ಇದನ್ನು ಹೊಸ ಹೆಸರಿನಿಂದ ಕರೆಯಬಹುದು.

೨. ಇವೆರಡೂ ಶಾಸನಗಳಲ್ಲಿಯ ವಿವಾಹಪುರಾಣ ಪಠ್ಯಗಳ ಬಗ್ಗೆ ಡಾ। ಮೂರ್ತಿಯವರು ಇನ್ನಷ್ಟು ಸ್ಪಷ್ಟನೆ ನೀಡಬಹುದಿತ್ತು. ಅಂದರೆ ಶಿಲಾಶಾಸನವನ್ನು ಇಡಿಯಾಗಿ ವ್ಯಾಪಿಸಿರುವ ವಿವಾಹಪುರಾಣ ಮತ್ತು ತಾಮ್ರಶಾಸನದ ಆರಂಭದಲ್ಲಿ ಬರುವ ವಿವಾಹಪುರಾಣಗಳಲ್ಲಿ ಒಂದಿಷ್ಟು ಶಾಬ್ದಿಕ ಹೋಲಿಕೆಯಿದ್ದರೂ ಎರಡೂ ಭಿನ್ನ ಪಾಠಗಳಾಗಿವೆ. ಶಿಲಾಶಾಸನದ ವಿವಾಹಪುರಾಣ ಪಾಠ ಗದ್ಯ-ಪದ್ಯಗಳನ್ನೊಳಗೊಂಡಿದ್ದರೆ, ತಾಮ್ರ ಶಾಸನದ ವಿವಾಹಪುರಾಣ ಪಾಠ ಕೇವಲ ಗದ್ಯರೂಪದ್ದಾಗಿದೆ.

---

೧. Vijayanagara progress of Research-1987-88. p. 17

೩. ಇವೆರಡಕ್ಕಿಂತ ಮುಖ್ಯವಾದುದೆಂದರೆ "ಶಿಲಾಶಾಸನದಲ್ಲಿ ಗದ್ಯ ಮತ್ತು ಷಟ್ಪದ ಪದ್ಯಗಳಿದ್ದರೆ, ತಾಮ್ರಶಾಸನದಲ್ಲಿ ಗದ್ಯ ಮಾತ್ರವಿದೆ" ಎಂದು ಡಾ। ಚಿದಾನಂದಮೂರ್ತಿ ಹೇಳುತ್ತಾರೆ. ಆದರೆ ಶಿಲಾಶಾಸನದ "ವಿವಾಹಪುರಾಣ"ದಂತೆ ತಾಮ್ರಶಾಸನದ ಉತ್ತರಾರ್ಧದಲ್ಲಿ ಬರುವ "ಅಮೃತಮಥನಪುರಾಣ"ವೂ ಷಟ್ಪದ ಪದ್ಯಗಳನ್ನೊಳಗೊಂಡಿದೆ. ಇಷ್ಟೇ ಏಕೆ ಅದು ೧೬ ಪದ್ಯಗಳನ್ನೊಳಗೊಂಡಿದ್ದರೆ, ಇದು ೨೩ ಪದ್ಯಗಳನ್ನೊಳಗೊಳ್ಳುವ ಮೂಲಕ, ಅದಕ್ಕಿಂತಲೂ ದೊಡ್ಡದಾಗಿದೆ. ಮತ್ತು ಆ ಪುರಾಣ ಗದ್ಯದಿಂದ ಆರಂಭಗೊಂಡು ಪದ್ಯದಲ್ಲಿ ಮುಂದುವರಿದು ಮತ್ತೆ ಗದ್ಯದಿಂದ ಮುಗಿಯುತ್ತಿದ್ದರೆ, ಈ ಪುರಾಣ ಪದ್ಯದಿಂದಲೇ ಆರಂಭವಾಗಿ (ಸಾಲು ೧೮೩)ಗದ್ಯಪದ್ಯಗಳಿಂದ ಮುಗಿಯುವ ಸಣ್ಣ ಚಂಪೂಕೃತಿಯೆನಿಸಿದೆ.

*****

ಈಗ ಅಮೃತಮಥನ ಪುರಾಣದ ಷಟ್ಪದಿ (ಮೂಲಷಟ್ಪದಿ) ಪದ್ಯಗಳ ಬಗ್ಗೆ ಚರ್ಚಿಸಬಹುದು. ಕನ್ನಡ ಕವಿಸಾಹಿತ್ಯ ಅಕ್ಷರವೃತ್ತ, ಮಾತ್ರಾವೃತ್ತಗಳನ್ನು ಬಳಸಿ, ಅಂಶವೃತ್ತವನ್ನು ಕಡೆಗಣಿಸಿತು. ಶಾಸನಸಾಹಿತ್ಯ ಕೇವಲ ಅಕ್ಷರವೃತ್ತನ್ನು ಬಳಸಿ (ಕಂದವನ್ನೂ ಬಳಸಿದೆ)ಮಾತ್ರಾಛಂದಸ್ಸು, ಅಂಶಛಂದಸ್ಸುಗಳೆರಡನ್ನೂ ಕಡೆಗಣಿಸಿತು. ಹೀಗಾಗಿ ಶಾಸನಗಳಲ್ಲಿ ಕ್ವಚಿತ್ತಾಗಿ ಕಂಡುಬರುವ ಮಾತ್ರಾವೃತ್ತ, ಅಂಶವೃತ್ತಗಳು ತಮ್ಮ ಅಪರೂಪತೆ ಕಾರಣವಾಗಿ ಸಂಶೋಧನೆಯ ವಸ್ತುವೆನಿಸಿವೆ. ಇವುಗಳಲ್ಲಿ ಶಾಸನೋಕ್ತ ಅಂಶಘಟಿತ ಷಟ್ಪದಿ(ಮೂಲಷಟ್ಪದಿ)ಗಳು ಈ ವರೆಗೆ ವಿದ್ವಾಂಸರಿಂದ ಈ ಕೆಳಗಿನಂತೆ ಬೆಳಕಿಗೆ ಬಂದಿವೆ.

ಅಮ್ಮಿನಭಾವಿ ಶಾಸನದ ೧ ಷಟ್ಪದವನ್ನು ಡಾ। ಪಿ. ಬಿ. ದೇಸಾಯಿ, ಭೀಮಸಮುದ್ರ ಶಾಸನದ ೧ ಷಟ್ಪದವನ್ನು ತೀ ನಂ ಶ್ರೀ, ಚಡಚಣದ ಶಾಸನದ ೩ ಷಟ್ಪದಗಳನ್ನು ಡಿ. ಎಲ್. ಎನ್. ಆಂಧ್ರಪ್ರದೇಶದ ಗಂಗಾಪುರ ಶಾಸನದ ೧ ಷಟ್ಪದವನ್ನು ಚಿದಾನಂದ ಮೂರ್ತಿ, ಆಂಧ್ರಪ್ರದೇಶದ ಪೂದೂರಿನ ಶಾಸನದ ೧ ಷಟ್ಪದವನ್ನು ಸೀತಾರಾಮ್ ಜಾಗೀರದಾರ್, ಸೊಲ್ಲಾಪುರ ಶಾಸನದ ೧೬ ಷಟ್ಪದಗಳನ್ನು ಚಿದಾನಂದಮೂರ್ತಿ–ಹೀಗೆ ಈ ವರೆಗೆ ಒಟ್ಟು ೨೩ ಷಟ್ಪದ (ಮೂಲಷಟ್ಪದಿ)ಗಳನ್ನು ವಿದ್ವಾಂಸರು ಶಾಸನಗಳಲ್ಲಿ ಶೋಧಿಸಿದ್ದಾರೆ. ಈಗ ಆನೆಗೊಂದಿ ತಾಮ್ರಶಾಸನ ಒಂದರಿಂದಲೇ ೨೩ ಷಟ್ಪದ (ಮೂಲಷಟ್ಪದಿ)ಗಳು ಈ ಲೇಖನದ ಮೂಲಕ ಬೆಳಕಿಗೆ ಬರುತ್ತಲಿವೆ. ಈವರೆಗೆ ಶಿವ–ಪಾರ್ವತಿಯರ ವಿವಾಹವನ್ನು ವರ್ಣಿಸುವ ೧೬ ಪದ್ಯಗಳದು ಮಾತ್ರ ಕಥಾತ್ಮಕ ಕೃತಿಯೆನಿಸಿದ್ದಿತು. ಈಗ ಸುರಾಸುರರ ಅಮೃತಮಥನವನ್ನು ವರ್ಣಿಸುವ ೨೩ ಪದ್ಯಗಳದು ಇನ್ನೊಂದು ಕಥಾತ್ಮಕ ಕೃತಿಯೆನಿಸಿದೆ.

ಅಕ್ಷರದ ಸ್ವರೂಪವನ್ನವಲಂಬಿಸಿ ಶಿಲಾಶಾಸನದ ಕಾಲ ೧೨ನೆಯ ಶತಮಾನವೆಂದು, ತಾಮ್ರಶಾಸನದ ಕಾಲ ೧೩ನೆಯ ಶತಮಾನವೆಂದು ಅವುಗಳ ಸಂಪಾದಕರು ಊಹಿಸಿದ್ದಾರೆ. ಎರಡೂ ೧೨ನೆಯ ಶತಮಾನಕ್ಕೆ ಸಂಬಂಧಿಸಿರುವ ಸಾಧ್ಯತೆಯಿದೆ. ಹಾಗಿದ್ದರೆ ವಿವಾಹಪುರಾಣದಂತೆ ಅಮೃತಮಥನಪುರಾಣವೂ ಅಂಶಛಂದಸ್ಸಿನ ಅತ್ಯಂತ ಪ್ರಾಚೀನ ಶಾಸನಸ್ಥ ಜಾನಪದಕೃತಿಯೆನಿಸಿಕೊಳ್ಳುತ್ತದೆ. ಅಂದು ಘಟಿಸಿರಬಹುದಾದ ಪ್ರಾಚೀನ ಲಿಪಿಕಾರನ ಲೇಖನ ದೋಷ, ಆಧುನಿಕ ಸಂಪಾದಕರ ವಾಚನದೋಷ, ಬಹುಶಃ ಸಂಭವಿಸಿರಬಹುದಾದ ಮುದ್ರಣದೋಷ

ಇತ್ಯಾದಿಗಳಿಂದಾಗಿ ಶಾಸನಪಾಠ ತುಂಬ ಅಶುದ್ಧವಾಗಿದೆ. ತಕ್ಕಮಟ್ಟಿಗೆ ಇದರ ಶುದ್ಧರೂಪವನ್ನು ಹೀಗೆ ಕೊಡಬಹುದು ಪರಿಷ್ಕರಿಸಬಹುದು.

೧. ಮೂಲಪಾಠ: "ಶ್ರೀಪರಮೇಸ್ವ(ಶ್ವ)ರಂ ಪಾಪರ್ವಿಸ(ಶ)ನಂ ಸಾಪಲ್ಯ ಸುರತರು ಭಕ್ತಜನಕ್ಕು ಗೋಪತಿವಾಹನನಾ ಪಾರ್ವ್ವತೀಶ ವಿರುಪಾಕ್ಷನಕ್ಷಯಂ ಸಾ(ಶಾ)ಸ್ವತ್ತೆರಂ"

ಶ್ರೀ ಪರಮೇಶ್ವರಂ
ಪಾಪವಿನಾಶನಂ
ಸಾಫಲ್ಯ ಸುರತರು ಭಕ್ತಜನಂ।
ಗೋಪತಿವಾಹನ
ನಾ ಪಾರ್ವತೀಶ ವಿ
ರೂಪಾಕ್ಷನಕ್ಷಯ ಶಾಶ್ವತರಂ॥

೨. ಮೂಲಪಾಠ: "ಸುರರಾಜಪೂಜಿತ ಚರಣಾ(ಣ)ದ್ವಯಂ ಸ(ಶ)ಂಭು ಗಿರಿಜೇಶನಕ್ಷಯಂ ದೇವದೇವಂ ಹರಿಬ್ರಹ್ಮವಂದಿತಂ ಇಕರ ವಿದ್ಯಾಧರಗ್ರ್ಗೊರದಪಂ ಸಾ(ಶಾ)ಸನ ಮರಿಯಾದೆಯಿಂ"

ಸುರರಾಜಪೂಜಿತ
ಚರಣದ್ವಯಂ ಶಂಭು
ಗಿರಿಜೇಶನಕ್ಷಯ ದೇವದೇವಂ।
ಹರಿಬ್ರಹ್ಮ ವಂದಿತ
ಕರಗ ವಿದ್ಯಾಧರ
ಗರ್ೊರೆದಪ ಶಾಸನ ಮರಿಯಾದೆಯಿಂ॥

೩. ಮೂಲಪಾಠ: "ಕರಗವಿದ್ಯಾದರ್ನ್ನೆರದೆಲ್ಲವೊಂದಾಗಿ ಪಿರಿದೊಲವಿನಿಂ ಕೇಳಿ ಸಾ(ಶಾ)ಸನಮನುಂ ಗಿರಿಜೆಯೊಳು ಸಂಕರಂ ನೆರೆದು ಪೋಪಂದತಾಂ ಗಿರಿರಾಜಂಗಿತ್ತನೀ ಸಾ(ಶಾ)ಸನಮನು"

ಕರಗ ವಿದ್ಯಾಧರ
ನೆ್ರೆದೆಲ್ಲವೊಂದಾಗಿ
ಪಿರಿದೊಲವಿಂ ಕೇಳಿ ಶಾಸನಮಂ।
ಗಿರಿಜೆಯೊಳ್ ಶಂಕರಂ
ನೆರೆದು ಪೋಪಂದು ತಾಂ
ಗಿರಿರಾಜಗಿತ್ತನೀ ಶಾಸನಮಂ॥

೪. ಮೂಲಪಾಠ: "ಗಿರಿರಾಜ ನಿಂಮ್ಮಯಿವರಮೆನೆ ನಿಂಮ್ಮವ್ವ ಗಿರಿಸುತೆ ನಿಂಮ್ಮೊಡವುಟ್ಟಿದಕ್ಕಂ ಪರಮೇಸ(ಶ) ಭಾವನಾ ಗೊರವಂಗಿರಳಿಯಂದಿರ್ಕ್ಕರಗ ವಿದ್ಯಾಧರರ ಕುಲವಿಂತುಟು"

ಗಿರಿರಾಜ ನಿಮ್ಮಯ್ಯ
ವರ ಮೇನೆ ನಿಮ್ಮವ್ವ

ಗಿರಿಸುತೆ ನಿಮ್ಮೊಡವುಟ್ಟಿದಕ್ಕಂ।
ಪರಮೇಶ ಭಾವನಾ
ಗೊರವಂಗಿರಳಿಯಂದಿ
ರ್ಕರಗ ವಿದ್ಯಾಧರರ ಕುಲಮಿಂತುಟು॥

೫. ಮೂಲಪಾಠ: "ಮಿ(ಮೃ)ಗಧರಭೂಷಣಂ ಸೊಗಯ(ಯಿ)ಪ ಭಸ್ಮಾಂಗಿ ನಗರಾಜಸುತೆ ಯೀಸ(ಶ)ನ ಪುತ್ರ ತಗುರಿಯ ಪಣಿಯ ಮೇಗಗ ಅದೆನಿಂದಿರು ಜಗವಂದ್ಯನಪ್ಪೆಲೆ ವಿಘ್ನೇಸ್ವ(ಶ್ವ)ರಾ"

ಮೃಗಧರ ಭೂಷಣ
ಸೊಗಯಿಪ ಭಸ್ಮಾಂಗಿ
ನಗರಾಜಸುತೆ ಈಶನ ಪುತ್ರ।
ತಗುರಿಯ ಪಣಿಯ ಮೇ
ಗಗಲದೆ ನಿಂದಿರು
ಜಗವಂದ್ಯನಪ್ಪೆಲೆ ವಿಘ್ನೇಶ್ವರ॥

೬. ಮೂಲಪಾಠ: "ಆದಿಪೊರಗೊದತೊಳುವಗರು ಮತ್ತಾರು ದರಿಸನಮಾಮಂ ಬಲ್ಲನೆನಿಪಂ। ಮೂರುದುವೆದಂ।ಪರಿನಾರು ಸಾ(ಶಾ)ಸ್ತ್ರದಿಂದ ಕುಂಬಾರರಂ ರಕ್ಷಿಸುಗೆ ನದುವೆನಿಂದಂ"

ಆದಿಪೊರಗದತೊ
ಳುವಗರು ಮತ್ತಾರು
ದರಿಸನಮಾಮಂ ಬಲ್ಲನೆನಿಪಂ।
ಮೂರುದು ವೇದಂ ಶಾ
ಸ್ತ್ರದಿಂದ ಕುಂಬಾರರಂ
ರಕ್ಷಿಸುಗೆ ನಡುವೆ ನಿಂದಂ॥

೭. ಮೂಲಪಾಠ: "ಗೊರವಂದಿಗೆ ಮಾವಂದಿರಿಗೆ ಕರಿಯನೆರಿದರ್ಗ್ಗಜ ಪರಿವ ಚಕ್ರಮಲತಂ ಮತಳದಲೊತ್ತಿ ತಿರಿಪಿ ತಾಂ। ಬೆಸಕೆಯ್ದು ಕರಗವಿದ್ಯಾಧರಗ್ಗೊರವರುಂ ಸಾ(ಶಾ)ಸನ ಮರಿಯಾದೆಯಂ"

ಗೊರವ ಮಾವಂದಿರಿಗೆ
ಕರಿಯ ನೇರಿದರ್ಗ್ಗಜ
ಪರಿವ ಚಕ್ರಮಲ ತಮ್ಮ ತಳದಲೊತ್ತಿ।
ತಿರಿಪಿ ತಾಂ ಬೆಸಕೆಯ್ದು
ಕರಗ ವಿದ್ಯಾಧರ
ಗ್ಗೊರವರು ಶಾಸನ ಮರಿಯಾದೆಯಂ॥

೮. ಮೂಲಪಾಠ: "ಸುರರಸುರರಮ್ರು(ಮೃ)ತಮಂ। ಭರದಿಂದೆ ಕಡೆಯಲಾದರದಿಂದ ಮಾಳೋ [ಚಿ] ಸಿದರೆಲ್ಲಂ। ಸುರಸೈ(ಶೈ)ಳಂ ಕಡಗೋಲು ವುರಗರಾಜಂ ನೇಣು ಹರಿಯನಮ್ರಿ(ಮೃ)ತವ ತರಲು ಪೇರ್ವಟ್ಟುವಂ"

ಸುರರಸುರಮೃತವ
ಭರದಿಂದೆ ಕಡೆಯಲಾ
ದರದಿಂದಮಾಳೋಚಿಸಿದರೆಲ್ಲಂ।
ಸುರಶೈಳ ಕಡಗೋಲು
ಉರಗರಾಜಂ ನೇಣು
ಹರಿಯನಮೃತ ತರಲು ಪೇಳ್ದಟ್ಟುವಂ॥

ಮೂಲಪಾಠ: ಗದ್ಯ। "ಅಂತು ಸುರ(ರಾ)ಸುರರು ತಂತಂಮ ಮಂತ್ರಿಯಪ್ಪ ಬ್ರಿ(ಬೃ)ಹಸ್ಪತಿಯುಮಂ ಸು(ಶು)ಕ್ರನುಮಂ ಕರದಮ್ರಿ(ಮೃ)ತ ಮಥನಮಂ। ಮಾಳ್ಪವೆಂ ದಾಳೋಚಿಸುವುದು॥ ದಿ(ಇ)ರ್ವ್ವರ್ಮಂತ್ರಿಗಳುಂ ತಂತ[ಂ]ಮವರ್ಗ್ಗಿಂತೆಂದಪ ಸಕಳೇಸ್ವ(ಶ್ವ)ರನಪ್ಪೀಸ್ವ(ಶ್ವ)ರನಿಲ್ಲದಮ್ರಿ(ಮೃ)ತ ಮಥನಮಂ। ಮಾಡಲಾಗದೆಂದು ಪೇಳ್ದುದುಂ ಯಿದು ಮಂತ್ರವಪ್ಪುದೆಂದುಸುರಾಸುರರೆಲ್ಲಂ ಕೈಳಾಸವಾಸಿಯಲ್ಲಿಗೆ ವೋಗಿ ಹರಿಬ್ರಹ್ಮದೇವೇಂದ್ರಾದ್ಯಷ್ಟಲೋಕಾಪಾಳಕ ಸಮಸ್ತ ದೇವರ್ಕ್ಕಳುಂ ಸು(ಶು)ಂಭ ನಿಸು(ಶುಂ)ಭ ಸಾಲದ ಕೈಟಭ ಸಿಂಹಾಸುರ ಗಜಾಸುರ ಬ್ಯಾಘ್ರಾಸುರ ಮಯಿಸಾಸುರಾದ್ಯಾದಿ ಸಮಸ್ತ ದೈತ್ಯರೆಲ್ಲರು ಬರೆ ಸಿಂಹಾಸನದ ಮೇಲೆ ಕ(ಕು)ಳ್ಳಿರ್ದ[ರ್ಧನಾರೀಶ(ಶ್ವ)]ರನಂ। ದೂರದಿಂ ನೋಡಿ ಕಂಡು".

ಅಂತು ಸುರಾಸುರರು ತಂತಮ್ಮ ಮಂತ್ರಿಯಪ್ಪ ಬೃಹಸ್ಪತಿಯುಮಂ ಶುಕ್ರನುಮಂ ಕರೆದಮೃತಮಥನಮಂ ಮಾಳ್ಪವೆಂದಾಳೋಚಿಸುವುದು. ಇರ್ವರ್ಮಂತ್ರಿಗಳುಂ ತಂತಮ್ಮ ವರ್ಗಿಂತೆಂದಪ[ರ್]. ಸಕಳೇಶ್ವರನಪ್ಪೀಶ್ವರನಿಲ್ಲದಮೃತ ಮಥನಮಂ ಮಾಡಲಾಗದೆಂದು ಪೇಳ್ವುದುಂ. ಇದು ಮಂತ್ರವಪ್ಪುದೆಂದು ಸುರಾಸುರರೆಲ್ಲಂ ಕೈಳಾಸವಾಸಿಯಲ್ಲಿಗೆ ವೋಗೆ, ಹರಿಬ್ರಹ್ಮ ದೇವೇಂದ್ರಾದ್ಯಷ್ಟಲೋಕಪಾಳಕಸಮಸ್ತ ದೇವರ್ಕಳುಂ ಶುಂಭ ನಿಶುಂಭ ಸಾಲದ ಕೈಟಭ ಸಿಂಹಾಸುರ ಗಜಾಸುರ ವ್ಯಾಘ್ರಾಸುರ ಮಹಿಷಾಸುರಾದ್ಯಾದಿ ಸಮಸ್ತ ದೈತ್ಯರೆಲ್ಲರುಂ ಬರೆ, ಸಿಂಹಾಸನದ ಮೇಲೆ ಕುಳ್ಳಿರ್ದರ್ಧನಾರೀಶ್ವರನಂ ದೂರದಿಂ ನೋಡಿ ಕಂಡು–

೬. ಮೂಲಪಾಠ: "ಜಯ ಜಯ ಸರ್ವಜ್ಞಂ ಜಯಜಯ ಸಕಳ.... ಜಯಜಯ ಪಾರ್ವ್ವತಿ ಪ್ರಾಣನಾಥ ಜಯಜಯ ದೇವೇಸ(ಶ) ಜಯಜಯ ಕಂದರ್ಪ ದ([ರ್ಪ್ಪ]ಳನಂ॥"

ಜಯಜಯ ಸರ್ವಜ್ಞ
ಜಯಜಯ ಸಕಳ....
ಜಯಜಯ ಪಾರ್ವತಿ ಪ್ರಾಣನಾಥ।
ಜಯಜಯದೇವೇಶ
..........................[೧]
ಜಯಜಯ ಕಂದರ್ಪದರ್ಪಾಳನಂ॥

ಮೂಲಪಾಠ: ಗದ್ಯ॥ "ಅಂತನೇಕ ಪ್ರಾ(ಪ್ರ)ಕಾರದ ಜಯಾ(ಯ)ಜಯಾಕಾರಂಗಳಿಂದೆ ಮಾಡಿ

---

೧. ಲಿಪಿಕಾರನ ವಿಸ್ಮೃತಿಯಿಂದಾಗಿ ಇಲ್ಲಿ ಒಂದಿಷ್ಟು ಪಾಠ ಕೈತಪ್ಪಿಹೋದಂತಿದೆ.

ದೇವ ದೇವದಾನವರೆಲ್ಲರುಂ ಸ್ತುತಿಸುತ್ತ। ಸಾಷ್ಟಾಂಗವೆರಗಿ ಪೊಡವಡುತ್ತಂ ಬಂ[ದು ಕರಕೋ]ಮಳ ಮುಕುಳಿತರಾಗಿ ಭಯಾಭಕ್ತಿಯಿಂ ನಿಂದಿರಲಾದೇವಾದಿ ದೇವಂ ಬಂದಿರೆಂಬುದಂ ದೇವಾ ಅಮ್ರಿ(ಮೃ)ತಮಥನಮಂ। ಮಾಳ್ಪಮೆಂದಾಳೋಚಿಸಿ ದೇವರಲ್ಲಿಗೆ ಬಂದೆವೆಂದು ಬಿನ(ನ್ನ)ಪಂಗೆಯ್ವುದುಂ॥"

ಅಂತನೇಕ ಪ್ರಕಾರದ ಜಯಜಯಾಕಾರಂಗಳಂ ಮಾಡಿ ದೇವದಾನವರೆಲ್ಲರುಂ ಸ್ತುತಿಯಿಸುತ್ತ ಸಾಷ್ಟಾಂಗವೆರಗಿ ಪೊಡವಡುತ್ತಂ ಎರ್ದು ಕರಕಮಳ ಮುಕುಳಿತರಾಗಿ ಭಯಭಕ್ತಿಯಿಂ ನಿಂದಿರಲಾ ದೇವಾದಿದೇವಂ ಏವಂದಿರೆಂಬುದುಂ, ದೇವಾ ಅಮೃತ ಮಥನಮಂ ಮಾಳ್ಪಮೆಂದಾಳೋಚಿಸಿ ದೇವರಲ್ಲಿಗೆ ಬಂದೆವೆಂದು ಬಿನ್ನಪಂಗೆಯ್ವುದುಂ.

೧೦. ಮೂಲಪಾಠ: "ಗಿರಿರಾಜಂಗೆಂದರ್ವಿರನನೊಲವಿನಂ ಹರಿಯ ಮ್ರಿ(ಮೃ)ತಮಂ ತಂದೊಡಂ ಪೊಯ್ವಂತುಟಂ ಪಿರಿದಪ್ಪ ಕುಂಭಮಂ ಚರಿತದಿಂದಿತು ಸುರಾಸುರರ್ಗ್ಗುಪಕರಂ ಮಾಡೆಂಬುದುಂ"

ಗಿರಿರಾಜಗೆಂದನೀ
ಶ್ವರನೊಲೆದೊಲವಿನಿಂ
ಹರಿಯಮೃತಮಂ ತರೆ ಪೊಯ್ವಂತುಟಂ।
ಪಿರಿದಪ್ಪ ಕುಂಭಮಂ
ಚರಿತದಿಂ ತಂದಿತ್ತು
ಸುರರ್ಗುಪಕಾರಮಂ ಮಾಡೆಂಬುದುಂ॥

೧೧. ಮೂಲಪಾಠ: "ಗಿರಿಜಂ ಕುಂಬಮಂ ಚರಿತದಿಂ ತಂದು ಸುರಾಸುರರ ಮುಂದೆ ತಂದಿಳಿಪಿರಲು, ಹರಿತಂದಾ॥ ಅಮ್ರಿ(ಮೃ)ತಮಂ ಪಿರಿದೊಲವಿನಿಂ ಪೊಯ್ದು ಸುರಾಸುರ[ರೆ]ಲ್ಲರುಂ ಕಡೆಯಲೆಂದು॥"

ಗಿರಿರಾಜ ಕುಂಭಮಂ
ಚರಿತದಿಂ ತಂದು ಸುರಾ
ಸುರರ ಮುಂದೆ ತಂದಿಳಿಪಿರಲು॥
ಹರಿ ತಂದ ಅಮೃತಮಂ
ಪಿರಿದೊಲವಿನಿಂ ಪೊಯ್ದು
ಸುರಾಸುರರೆಲ್ಲರುಂ ಕಡೆಯಲೆಂದು॥

೧೨. ಮೂಲಪಾಠ: "ಗಿರಿರಾಜಂ ಕುಂಭಮಂ ಚರಿತದಿಂದಿತ(ತ್ತು)ತಾ ಪರಮಂಗೆ ಬಿಂನಪಂಗೆಯ್ದು ನಾಗಾಪಿರಿದೊಲವಿನಿಂದಮಿವರ ಕುಂಭದೊಪುಮಂ ಗಿರಿಜೇಸಾ(ಶಾ) ಎನಗೆ ಕಾರುಣ್ಯಮಂ ಮಾ॥ ಎಂಬುದುಂ ಗಿರಿಜೇಸಂ(ಶಂ)ಗಿವೆನೆನೆಂಬೇಳ್ಪಿವೆಂತುಟಂ ನಿಲಲೆನಲು"

ಗಿರಿರಾಜ ಕುಂಭಮಂ
ಚರಿತದಿ ತಂದಿತ್ತು
ಪರಮಂಗೆ ಬಿನ್ನಪಂಗೆಯ್ದನಾಗ।
ಪಿರಿದೊಲವಿಂದಮಿ

ವರ ಕುಂಭದೊಪ್ಪಮಂ
ಗಿರಿಜೇಶ ಎನಗೆ ಮಾಡೆಂಬುದುಂ॥

೧೩. ಮೂಲಪಾಠ: "ಹರಿಸರಸಿಜೋದ್ಭವಂ ಸುರರಾಜ ದೇವರ್ಕ್ಕಳು ನೆರೆದಮ್ರಿ(ಮೃ)ತ ಮಥನಕುದ್ಯುಕ್ತರಾಗಿ ಭರದಿಂದೆ ವಾಸುಗಿಯ ಸಿರದ ದೆಸೆಯಂ ಪಿಡಿದು ಸುರರೆಲ್ಲವೊಂದಾಗಿ ನಿಂದಿರ್ಪ್ಪುದುಂ"

ಹರಿ ಸರಸಿಜೋದ್ಭವ
ಸುರರಾಜ ದೇವರ್ಕಳ್
ನೆರೆದಮೃತ ಮಥನುದ್ಯುಕ್ತರಾಗಿ।
ಭರದಿಂದೆ ವಾಸುಗಿಯ
ಶಿರದ ದೆಸೆಯಂ ಪಿಡಿದು
ಸುರರೆಲ್ಲ ಒಂದಾಗಿ ನಿಂದಿರ್ಪ್ಪುದುಂ॥

೧೪. ಮೂಲಪಾಠ: "ಕೇಸರಿಮುಖನುಂ ಗಜಾಸುರನುಂ ಬ್ಯಾಘ್ರಾಸುರ ಮಯ್ಸಸಾಸುರ ರಾದ್ಯಸುರರು ವಾಸುಗಿಯ ತಲದೆಸೆಯನಾಸುರ ಪಿಡಿದಿರೆ ಆ ಸುರಂ ಮಸಗಿದದ್ದೈರ್ತ್ಯರೆಲ್ಲಂ॥"

ಕೇಸರಿಮುಖನು ಗ
ಗಜಾಸುರ[ಸುರ]ನುಂ ವ್ಯಾ
ಘ್ರಾಸುರ ಮಹಿಷಾಸುರಾದ್ಯಸುರ।
ವಾಸುಗಿ ತಲೆದೆಸೆ
ಯಾಸುರ ಪಿಡಿದಿರೆ
ಆಸುರಂ ಮಸಗಿದರ್ ದೈತ್ಯರೆಲ್ಲಂ॥

೧೫. ಮೂಲಪಾಠ: "ತಲದೆಸೆಯೆಂಮದು ಸಲೆ ಬಾಲ ನಿಂಮ್ಮದು ತೊಲವಿಂದ ಅಮ್ರಿ(ಮೃ)ತ ಮಂ ಕಡವಮೆನಲು ಎಂದರಸುರರ್ಗ್ಗ(ರ್ಗ್ಗೆ) ತಲದೆಸೆಯಂ ಕೊಟ್ಟು ಸಲೆ ಬಾಲಮಂ ಸುರರು ಪಿಡಿದುಕೊಂಡು"

ತಲೆ ದೆಸೆಯೆಮ್ಮದು
ಸಲೆ ಬಾಲ ನಿಮ್ಮದು
ಒಲವಿಂದ ಅಮೃತಮಂ ಕಡೆವಮೆನಲು।
ಎನಲಸುರಸುರರ್ಗೆ
ತಲೆ ದೆಸೆಯಂ ಕೊಟ್ಟು
ಸಲೆ ಬಾಲಮಂ ಸುರರು ಪಿಡಿದುಕೊಂಡು॥

೧೬. ಮೂಲಪಾಠ: "ಪಿರಿದೊಲವಿನಿಂ ಕಡಿಯೆ ಸಿರಿ ವಾಣಿ ರಂಭೆಯುಂ ಸುರಭಿ ಕಳ್ಪದ್ರುಮಂ ಪಾಂಚಜನ್ಯಂ ಸುರಗಜೆ ಚಕ್ರ ತಾವರೆ ಸಾರಂಗಂ ಚ......ವರ ಚಂದ್ರಹಾಸಮಂತೆಸೆವ ವಜ್ರಂ"

ಪಿರಿದೊಲವಿನಿಂ ಕಡೆಯೆ
ಸಿರಿವಾಣಿ ರಂಭೆಯುಂ
ಸುರಭಿ ಕಳ್ಪದ್ರುಮ ಪಾಂಚಜನ್ಯಂ।
ಸುರಗಜ ಚಕ್ರ ತಾ
ವತೆ ಸಾರಂಗಂ ಚಂದ್ರ
ವರ ಚಂದ್ರಹಾಸಮಂತೆಸೆವ ವಜ್ರಂ॥

೧೭. ಶಾಸನಪಾಠ: "ಕರಿತಗರು ಕೋಣನುಂ ತುರಗ....ಂ ಮಕರಮುಂ ಹರಿಣನುಂ ದ(ಅ)ಸುರನುಂ ನಂದಿನಾಥಂ ವರ ವಾಸವಂಕುಶಂ[ಪಿ]....ಪ್ಪ ಹಸ್ತಕಂಕರಿಯ ಮಾದಂಡಮ ಪಡೆದವಾಗ"

ಕರಿ ತಗರು ಕೋಣನುಂ
ತುರಗ[ನು] ಮಕರಮುಂ
ಹರಿಣನುಂ [ನ]ರನುಂ ನಂದಿನಾಥಂ।
ವರ ಪಾಶವಂಕುಶ
ಪಿರಿದಪ್ಪ ಹಸ್ತಕಂ
ಕರಿ ಯಮದಂಡವು ಪಡೆದವಾಗ॥[೩]

೧೮. ಶಾಸನಪಾಠ: "ಪದಿನೆಂಟು ಪಟ್ಟಣಂ ಪದಿ[ನೆಂಟು] ಜ(ಜಾ)ತಿಯುಂ ಪದಿನೆಂಟು ಜಾತಿಯ ನಿಸ್ತಾರಮುಂ ಪುಟ್ಟಿದುದಿತ ವಾಕುಡಿಯನನೊದವಿದ ಥ್ಯಾನಮಂ ಮುದದಿಂದ ಪದೆದವು ಅಮ್ರಿ(ಮೃ)ತದಲ್ಲಿ"

ಪದಿನೆಂಟು ಪಟ್ಟಣಂ
ಪದೆನೆಂಟು ಜಾತಿಯುಂ
ಪದಿನೆಂಟು ಜಾತಿ ನಿಸ್ತಾರ ಪುಟ್ಟಿ।
ದುದಿತಮಾ ಕುಡಿಯನ
ನೊದವಿದ ಥಾನ್ಯಮಂ
ಮುದದಿಂದ ಪಡೆದವು ಅಮೃತದಲ್ಲಿ॥

೧೯. ಶಾಸನಪಾಠ: "ಪಿಡಿವ ಬಲುಂಕೆಗೋಲು ಮಡಕೆ ಬೆಲ್ಲಂ ಕಾಜ ತುಡುವ ಕಂಚುಳಿಕೆ ಮೂವತ್ತಾರು ಭಂಡ ಗುರಿಹಾರೆಯ ಕೋಲು ವಾತುಡುಗೆ ಹೂಬಾಸಿನಂ ಪೊಡವಿಯಲು ವರ್ತ್ತಿಸುವ ಪಂಚಲೋಹಂ"

ಪಿಡಿವ ಬಲ್ಲುಂಕೆಗೋಲು
ಮಡಕೆ ಬೆಲ್ಲಂ ಕಾಜ
ತುಡುವ ಕಂಚುಳಿಕೆ ಮೂವತ್ತಾರು ಭಂಡ।

೩. ಈ ಪದ್ಯದಲ್ಲಿ ೮ ಜನ ದಿಕ್ಪಾಲಕರ ವಾಹನ ಮತ್ತು ಆಯುಧ ಹೇಳಲಾಗಿದೆ.

ಗುಡಿ ಹಾರೆಯ ಕೋಲು
ತುಡುಗೆ ಹೂ ಬಾಸಿಗಂ
ಪೊಡವಿಯುಲು ವರ್ತಿಸುವ ಪಂಚಲೋಹಂ॥

೨೦. ಶಾಸನಪಾಠ: "ಹಡೆಯೆ ಹರನಾ ಕುಂಭದೊಡೆಯನೊಪ್ಪುವ ಬೇಡೆ ಮ್ರಿ(ಮೃ)ಡನೊಪ್ಪುಮೆನಲು ಕೋಣನೆನಲೂ ಮ್ರಿ(ಮೃ)ಡನಮ್ರಿ(ಮೃ)ತ ಕುಂಭದಲು ಪಡೆದಿತನಾಗಳೆ ಕಡೆ ಕೋಣನಿದನೊಯ್ದು ಪೆರಿವೆಂದಂ"

ಹಡೆಯೆ ಹರನಾ ಕುಂಭ
ದೊಡೆಯನೊಪ್ಪುವ ಬೇಡೆ
ಮೃಡನೊಪ್ಪುಯೆನಲು ಕೋಣನೆನಲು।
ಮೃಡನಮೃತಕುಂಭದಲು
ಪಡೆದಿತ್ತನಾಗಳೆ
ಕಡೆ ಕೋಣನಿದನೆಯ್ದೆ ಪೆರಿವೆಂದಂ॥

ಶಾಸನಪಾಠ: ಗದ್ಯ "ಅಂತಮ್ರಿ(ಮೃ)ತ ಮಥನದಿಂ ಪುಟ್ಟಿದ ವಸ್ತುವಾಹನ ಧಾನ್ಯಮಾಯುಧಗಳಂ ಸುರರ್ಗ್ಗಂ ನರರ್ಗ್ಗಂ ಕುಡಲೆಂದು ದೇವಾದಿದೇವಂ ನಿಂದಿರ್ದ್ದು ನಾರಾಯಣದೇವಂಗೆ ಲ್ಲಕ್ಷ್ಮಿಯುಂ ಪಾಂಚಜನ್ಯವೆಂಬ ಸಂ(ಶಂ)ಖಮಂ ಸುದರ್ಶನಮೆಂಬ ಚಕ್ರಮಂ ಶ್ರೀ ಶ್ರೀ ಕಾ(ಕೌ)ಮೋದಕಿ ಎಂಬ ಗಜೆ(ದೆ)ಯುಂಮಂ ಸಾರಂಗವೆಂಬ ಬಿಲ್ಲುಮಂ ಕೊಟ್ಟು, ಬ್ರಹ್ಮಂಗೆ ನಿನಿವಾಸಮಂ ಜಗಕ್ಕಿಕ್ಕಿಮಂಕುಸದಿಂ ತೆಗೆ ಎಂದು ಪೇಳ್ದಂತೆ ಸರಸ್ವತಿಯಂ ಪಾಶಾಂಕುಶ ಪೊಸ್ತಕಮಂ ಕೊಟ್ಟು, ದೇವೇಂದ್ರಂಗೆ ರಂಭೆಯುಮನ್ನೈರಾವತ ವೆಂಬಾನೆಯುಮಂ ಜೈತ್ರರಥಮೆಂಬ ಕುದುರೆಯುಮಂ ವಜ್ರಮಂ ಕೊಟ್ಟು, ಅಗ್ನಿದೇವಂಗೆ ತಗರನಿತ್ತು, ಯಮಂಗೆ ಕಾಳದಂಡಮಂ ಜಗವಂ ದಂಡಿಸೆಂದು ಪೇಳ್ದಂತೆ ಕಾಲದಂಡಮಂ ಕೋಣನಂ ಕೊಟ್ಟು, ನೈರಿ(ಋ)ತಿ(ತ್ಯಂ)ಗೆ ದೇವರ್ಕ್ಕಳಸುರರನಿಮಾಳಿಯಂದ ಬಂದವರೆಂಬುದಂ ಪೇಳ್ದಂತೆ। ನೈರಿ(ಋ)ತ್ಯಂಗೆ ರಾಕ್ಷಸನಂ ಕೊಟ್ಟು, ವರುಣಂಗೆ ಮಕರಮಂ ಕೊಟ್ಟು, ವಾಯುದೇವಂಗೆ ಎರಳೆಯಂ ಕೊಟ್ಟು, ಕುಬೇರಂಗೆ ಕುದುರೆಯಂ ಕೊಟ್ಟು, ಯೀಶಾನ್ಯಂಗೆ ನಂದಿಯಂ ಕೊಟ್ಟು, ಸೂರ್ಯ್ಯದೇವಂಗಿ(ಗೆ) ತಾವರೆಯಂ ಚಂದ್ರಹಾಸಮಂ ಕೊಟ್ಟು, ಪದಿನೆಂಟು ಪಟ್ಟಣಮುಂ ಭೂಯೊಳು ನಿಲಿಸಿ, ಕುಡಿಯಂಗೆ ಗುಡಿ ಹಾರೆಗೋಲು ಪಣಿಬ ಬಿತ್ತಾದಿಯಾಗಿ [ಸಕಳ]ಧಾಂನ್ಯಂಗಳಂ ಕೊಟ್ಟು, ಪದಿನೆಂಟು ಜತಿಯ ನಿಸ್ತಾರ ನಿಮಿತ್ತಮಾಗಿ ಪುಟ್ಟಿದರ್ವುಟ್ಟಂ ಪದಿನೆಂಟು ಜತಿಗೆ ಕೊಟ್ಟು, ಗಿರಿರಾಜಂ ಕುಂಭಮಂ ಕೊಟ್ಟಂದಿನೊಪಮಂ ಬೇಡಲೇನಂ ಕುಡುವುದೆಂದೆನಲು ಕಂಚುಳಿಕೆ ಬಲ್ಲುಂಕೆಗೋಲು ಮೂವತ್ತಾರು ಭಂಡಮಂ ಕೋಣನೊಲು ಪೇರುವುದುಂ ಕುಡುವುದೆಂಬುದಂ ಕೊಟ್ಟು ದೇವಿಯ ತಂಮ್ಮಂ ಬಾಡು ಬೇಸತ್ತಡೆ ಸುರರೆಲ್ಲಂ ನೆರೆದು ಬಾದುಮೆಯಂ ಮಾಡಿದೊಡಾತನ ನೋಡಲುಂ ಹರಗಣವನಾಡಲುಂ ಗಳತಿಗೆಯ ಪಿಡಿಯಲುಂ ರಿ(ಋ)ಷಿಯಂದು ಗಿರಿರಾಜಂಗೆ ದೇವಾದಿದೇವನಿತ್ತು ಕೈಳಾಸದಲು ದೇವಿಯುಂ ತಾವುಂ ಗಂಗಾವಾಳುಕ ಸರ್ವೋರುದ್ರರ್ವ್ವ ಸಿರ್ದ್ದರಿತ್ತ ದೇವರ್ಕ್ಕಳುಂ ತಂತಮ್ಮ ಲೋಕಕ್ಕೆ ಪೋದರು॥ ಗಿರಿರಾಜಂ ಪಡದ ಸಂತಾ(ತೋ)ಸದಿಂ ಗಿರಿಪುರಕ್ಕೆ ವಂದು ಗುಡಿಯ

ತೋರಣಂಗಟ್ಟಿ ದೇವದುಂದುಬಿ(ಭಿ)ಯಂ ಪೊಯ್ಸುತ್ತಂ ಬಂದು ಅಯ್ಸಾವಂತರ್ಗ್ಗೆ ಕೊಟ್ಟಂ ಅಮ್ರಿ(ಮೃ)ತ ಮಥನಪುರಾಣಂ ಸಮಾಪ್ತಂ"

ಅಂತಮೃತಮಥನದಿಂ ಪುಟ್ಟಿದ ವಸ್ತುವಾಹನ ಧಾನ್ಯಮಾಯುಧಗಳಂ ಸುರರ್ಗಂ ನರರ್ಗಂ ಕೊಡಲೆಂದು ದೇವಾಧಿದೇವಂ ನಿಂದಿರ್ದು, ನಾರಾಯಣದೇವಂಗೆ ಲಕ್ಷ್ಮಿಯಂ ಪಾಂಚಜನ್ಯಮೆಂಬ ಶಂಖಮಂ ಸುದರ್ಶನಮೆಂಬ ಚಕ್ರಮಂ ಕೌಮೋದಕಿಎಂಬ ಗದೆಯುಮಂ ಶಾರ್ಙ್ಗಮೆಂಬ ಬಿಲ್ಲುಮಂ ಕೊಟ್ಟು, ಬ್ರಹ್ಮಂಗೆ ನಿನಿವಾಸಮಂ ಜಗಕ್ಕಿಕ್ಕಿ ಯಂಕುಶದಿಂ ತೆಗೆ ಎಂದು ಪೇಳ್ದಂತೆ ಸರಸ್ವತಿಯಂ ಪಾಶಾಂಕುಶ ಪೊಸ್ತಕಮಂ ಕೊಟ್ಟು, ದೇವೇಂದ್ರಂಗೆ ರಂಭೆಯುಮನೈರಾವತಮೆಂಬಾನೆಯುಮಂ ಜೈತ್ರರಥಮೆಂಬ ಕುದುರೆಯುಮಂ ವಜ್ರಮಂ ಕೊಟ್ಟು, ಅಗ್ನಿದೇವಂಗೆ ತಗರನಿತ್ತು, ಯಮಂಗೆ ಕಾಳದಂಡಮಂ ಜಗಮಂ ದಂಡಿಸೆಂದು ಪೇಳ್ದಂತೆ ಕಾಲದಂಡಮಂ ಕೋಣನಂ ಕೊಟ್ಟು, ನೈಋತ್ಯಂಗೆ ದೇವರ್ಕಳಸುರರ ನಿಮಾಳಿಯಂದ ಬಂದವರೆಂಬುದಂ ಪೇಳ್ದಂತೆ ನೈರುತ್ಯಂಗೆ ರಾಕ್ಷಸನಂ ಕೊಟ್ಟು, ವರುಣಂಗೆ ಮಕರಮಂ ಕೊಟ್ಟು, ವಾಯುದೇವಂಗೆ ಎರಳೆಯಂ ಕೊಟ್ಟು, ಕುಬೇರಂಗೆ ಕುದುರೆಯಂ ಕೊಟ್ಟು, ಈಶಾನ್ಯಂಗೆ ನಂದಿಯಂ ಕೊಟ್ಟು, ದೇವರ್ಕಳಿಗೆ ಕಾಮಧೇನು ಕಳ್ಪವೃಕ್ಷಮಂ ಕೊಟ್ಟು, ಸೂರ್ಯದೇವಂಗೆ ತಾವರೆಯಂ ಚಂದ್ರಹಾಸಮುಮಂ ಕೊಟ್ಟು, ಪದಿನೆಂಟು ಪಟ್ಟಣಮಂ ಭೂಮಿಯೊಳು ನಿಲಿಸಿ, ಕುಡಿಯಂಗೆ ಗುಡಿ ಹಾರೆಗೋಲು ಪಣಿಬ ಬಿತ್ತಾದಿಯಾಗಿ ಸಕಳ ಧಾನ್ಯಂಗಳಂ ಕೊಟ್ಟು, ಪದಿನೆಂಟು ಜಾತಿಯ ನಿಸ್ತಾರ ನಿಮಿತ್ತಮಾಗಿ ಪುಟ್ಟಿದರ್ವುಟ್ಟಂ ಪದಿನೆಂಟು ಜಾತಿಗೆ ಕೊಟ್ಟು, ಗಿರಿರಾಜಂ ಕುಂಭಮಂ ಕೊಟ್ಟಂದಿನೊಪಮಂ ಬೇಡಲೇನಂ ಕುಡುವುದೆಂದೆನಲು ಕಂಚುಳಿಕೆ ಬಲ್ಲುಂಕೆಗೋಲು ಮೂವತ್ತಾರು ಭಂಡಮಂ ಕೋಣನಲು ಪೇರುವುದಂ ಕುಡುವುದೆಂಬುದಂ ಕೊಟ್ಟು, ದೇವಿಯ ತಮ್ಮಂ ಬಾಡುಬೆ ಸತ್ತಡೆ ಸುರರೆಲ್ಲಂ ನೆರೆದು ಬಾದುಮೆಯಂ ಮಾಡಿದೊಡಾತನ ನೋಡಲು ಹಗರಣವನಾಡಲುಂ ಗಳತಿಗೆಯ ಪಿಡಿಯಲುಂ ಋಷಿಯಂದು ಗಿರಿರಾಜಂಗೆ ದೇವಾಧಿದೇವನಿತ್ತು ಕೈಲಾಸದಲು ಗಂಗೆಯುಂ ತಾವುಂ ಗಂಗಾವಾಳುಕ ಸಮಾರುದ್ರರ್ವಸಿದ್ದರಿತ್ತ ದೇವರ್ಕಳುಂ ತಂತಮ್ಮ ಲೋಕಕ್ಕೆ ಪೋದರು. ಗಿರಿರಾಜಂ ಪಡೆದ ಸಂತೋಷದಿಂ ಗಿರಿಪುರಕ್ಕೆವಂದು ಗುಡಿಯ ತೋರಣಂಗಟ್ಟಿ ದೇವದುಂದುಭಿಯಂ ಪೊಯ್ಸುತ್ತಂ ಬಂದು ಐಸಾವಂತರ್ಗೆ ಕೊಟ್ಟಂ. ಅಮೃತಮಥನ ಪುರಾಣಂ ಸಮಾಪ್ತಂ.

೨೧. ಶಾಸನಪಾಠ: "ಗಿರಿಜ(ಜೆ)ಯ ಸಂ(ಶಂ)ಭುವಂ ನೆರಪಿದ ಬಳಿಯುವಾಪರಮಂಗೆ ಪರ್ವ್ವತರಾಜನೆಂದ ಪಿರಿದೊಲವಿನಿಂದೆ ಕೋವರ ಕುಲಕ್ಕೆ ಸಾ(ಶಾ)ಸನಮನೊರೆಯೆಂದು ಬಿಂನಪರಿಗೆಯ್ದನಾಗಂ"

ಗಿರಿಜೆಯುಂ ಶಂಭುವುಂ
ನೆರಪಿದ ಬಳಿಯುವಾ
ಪರಮಂಗೆ ಪರ್ವತರಾಜನೆಂದಂ।
ಪಿರಿದೊಲವಿಂದೆ ಕೋ
ವರ ಕುಲಕೆ ಶಾಸನಮ
ನೊರೆಯೆಂದು ಬಿನ್ನಪಂಗೆಯ್ದನಾಗಂ॥

೨೨. ಶಾಸನಪಾಠ: "ಗಿರಿಜೇಸ(ಶ) ಪೇಳ್ದನಾ ವರಮುನಿ ಸ್ರ(ಶ್ರೆ)ಷ್ಟನಾದರದಿಂದೆ ಬರದ ವಿಸ್ವ(ಶ್ವ)ಮಿತ್ರನೆ ಪಿರಿದೊಲವಿನಿಂದ ಕುಡವೇಳ್ದು ಗಿರಿರಾಜಗಿತ್ತನೀ ಸಾ(ಶಾ)ಸ[ನ]ವನು"

ಗಿರಿಜೇಶ ಪೇಳ್ದನಾ
ವರ ಮುನಿಶ್ರೇಷ್ಠನಾ
ದರದಿಂದೆ ಬರೆದ ವಿಶ್ವಾಮಿತ್ರನೆ।
ಪಿರಿದೊಲವಿಂದ ಕೋ
ವರ ಕುಲಕೆ ಕುಡವೇಳ್ದು
ಗಿರಿರಾಜಗಿತ್ತನೀ ಶಾಸನಮಂ॥

೨೩. ಶಾಸನಪಾಠ: "ಪಸವುಂ ಮಾರಿಯ ಬರನಸದಳಂ ಪಿಂಗುಗೆ ಸಸಿಗಳು ಬೆಳಗೆ....ನುಗಳು ಕರಗೆ ವಸುಧೆಯೋಳು ಗಿರಿರಾಜವೆಸರ ಸಾ(ಶಾ)ಸನ ಮೆಚ್ಚಿ ಬೆಸ....ಯ್ದುತಿರ್ಕ್ಕ ಅಯ್ಯಾವಂತೆ(ತ)ಗ್ಗೆ"

ಪಸವುಂ ಮಾರಿಯ ಬರ
ನಸದಳಂ ಪಿಂಗುಗೆ
ಸಸಿಗಳು ಬೆಳೆಗೆ ಹಯನು ಕರೆಗೆ।
ವಸುಧೆಯೊಳು ಗಿರಿರಾಜ
ವೆಸರ ಶಾಸನ ಮೆಚ್ಚಿ
ಬೆಸಗೆಯ್ವುತಿರ್ಕೆ ಅಯ್ಯಾವಂತರ್ಗೆ॥

"ದೇವರು ಕೊಟ್ಟ ವಿದ್ಯ ಮಾನವರ ಕೈಯಲು ಹಡೆಯವು ಗಳೆವುಂಟು ಕಂಚುಳಿಕೆವುಂಟು ವಂ(ಮಂ)ಗ[ಳ] ಮಹಾಶ್ರೀ ಇ ಸಾ(ಶಾ)ಸನಾರ್ತ್ಥಂ ಸ್ರೂಣೋಯೆರ್ತ್ಥಂ ಗಂಗಾಸ್ನಾನ ಸತಂ ಫಳಂ॥ ಯಿದಂ ಸಾ(ಶಾ)ಸನಮತಿಕ್ರಮ್ಯಂ ಸ್ವಾ(ಶ್ವಾ)ನಯೋನ್ಯನ ಜಾಯತೇ॥"

ದೇವರು ಕೊಟ್ಟ ವಿದ್ಯೆ, ಮಾನವರ ಕೈಯಲು ಹಡೆಯವು. ಗಳೆವುಂಟು ಕಂಚುಳಿಕೆವುಂಟು ಮಂಗಳ ಮಹಾಶ್ರೀ (ಇಲ್ಲಿಂದ ಮುಂದಿರುವ ಫಲಶ್ರುತಿ ವಾಕ್ಯವನ್ನು ಪರಿಷ್ಕರಿಸಿಲ್ಲ).

*****

ಮೇಲಿನ ಪರಿಷ್ಕೃತ ಪಾಠದಲ್ಲಿ ದೋಷಗಳು ಉಳಿದುಕೊಂಡಿವೆ. ಮೂಲಶಾಸನವನ್ನೇ ಇಡಿಯಾಗಿ ಕಣ್ಮುಟ್ಟ ಓದಿ, ಅದರ ಪಾಠವನ್ನು ಇನ್ನೂ ಉತ್ತಮಗೊಳಿಸಬೇಕಾಗಿದೆ. ಇದು ಕುಂಬಾರ ಸಮಾಜ ಮತ್ತು ಕನ್ನಡ ದೇಶೀಸಾಹಿತ್ಯದೃಷ್ಟಿಯಿಂದ ಗಮನಾರ್ಹವೆನಿಸಿದೆ. ಪ್ರಾಚೀನ ಕರ್ನಾಟಕದಲ್ಲಿ ಕಲ್ಯಾಣ ಚಾಲುಕ್ಯ, ಕಲಚುರಿ, ಹೊಯ್ಸಳರ ಕಾಲದಲ್ಲಿ ಉತ್ಪಾದಕವೃತ್ತಿ, ವಿನಿಮಯವೃತ್ತಿ, ಉತ್ಪಾದಕ-ವಿನಿಮಯ ವೃತ್ತಿಗಳಿಗೆ ಸಂಬಂಧಪಟ್ಟಂತೆ ಬಹುಸಂಖ್ಯೆ ವೃತ್ತಿಸಂಘಗಳು ಒಮ್ಮೆಲೇ ಬೆಳೆದುಬಂದವು. ಇವುಗಳಲ್ಲಿ ತೆಲ್ಲಿಗರೈವತ್ತೊಕ್ಕಲು, ಉಗುರು ಮುನ್ನೂರ್ವರು (ಎಲೆಯ ವೃತ್ತಿಯವರು) ಮೊದಲಾದ ಸಂಘಗಳನ್ನು ಹೆಸರಿಸಬಹುದು. ಇವರು ತೆಲ್ಲಿಗೇಶ್ವರ, ಉಗುರೇಶ್ವರ ಇತ್ಯಾದಿ ದೇವಾಲಯಗಳನ್ನು ಕಟ್ಟಿಸಿ, ದತ್ತಿ ಬಿಟ್ಟಿದ್ದಾರೆ. ಇದೇ ರೀತಿ ಶಾಸನಗಳಲ್ಲಿ ಕುಂಬಾರರು ತಮ್ಮನ್ನು "ಸಾಲೆಸಾಸಿರ್ವರು" ಎಂದು ಕರೆದುಕೊಂಡು "ಕುಂಭೇಶ್ವರ" ದೇವಾಲಯಗಳನ್ನು

ಕಟ್ಟಿಸಿದ್ದಾರೆ. ಇದಕ್ಕೆ ಅಮ್ಮಿನಭಾವಿ ಶಾಸನ(ಎಸ್. ಆಯ್. ಆಯ್. XI-ii-೧೨೧. ಕ್ರಿ. ಶ. ೧೦೭೧)ವನ್ನು ಆಧಾರವಾಗಿ ಕೊಡಬಹುದು. ಇಲ್ಲಿ ದೇಹಾರದ ನಾಗಣ್ಣ, ಅವನ ಮಗ ಆಯ್ತುವರ್ಮ, ಬಿಬ್ಬಣ್ಣ, ಆತನ ಮಗ(?), ಕಾಳಿಮಯ್ಯ, ಬೀರಣ್ಣ, ಮಾಚಿಯಣ್ಣ, ಈ ಏಳು ಜನ (ಈ ಪೇಳ್ದೇರ್ವ್ವರುಂ)ಕುಂಬಾರರು ಸೇರಿ ಕುಂಭೇಶ್ವರದೇವಾಲಯವನ್ನು ಕಟ್ಟಿಸಿದ ಉಲ್ಲೇಖವಿದ್ದು, ತಾವು "ಸಾಲೆ ಸಾಸಿರ್ವರು" ಸಂಘದವರೆಂದು ಕರೆದುಕೊಂಡಿದ್ದಾರೆ. ಇದೇ ರೀತಿ ಈ ಆನೆಗೊಂದಿ ತಾಮ್ರಶಾಸನದಲ್ಲಿ ಕುಂಬಾರರು ತಮ್ಮನ್ನು ಕುಂಭೇಶ್ವರದೇವರ ಪಾದಪದ್ಮಾರಾಧಕರು ಎಂದೂ "ಸಾಲೆಸಾಸಿರ್ವರು" ಎಂದೂ ಕರೆದುಕೊಂಡಿದ್ದಾರೆ. ಆದರೆ ಶಾಸನಗಳಲ್ಲಿ "ಸಾಲೆಸಾಸಿರ್ವರು" ಎಂಬುದು ಕೆಲವೊಮ್ಮೆ ನೇಕಾರ ವೃತ್ತಿಸಂಘದ ಹೆಸರಾಗಿ ಕಾಣಿಸಿಕೊಳ್ಳುತ್ತಿದ್ದು, ಇವರು "ಸಾಲೇಶ್ವರ" ಹೆಸರಿನ ದೇವಾಲಯ ಸ್ಥಾಪಿಸಿದ ಉಲ್ಲೇಖಗಳಿವೆ. ಈ ದೇವಾಲಯಗಳು ಈಗಲೂ ಈ ಸಮಾಜದವರಿಂದ ಪೂಜೆಗೊಳ್ಳುತ್ತಲಿವೆ. ಸಾಲೆ=ಬಟ್ಟೆ, ಸಾಲಿಗ=ನೇಕಾರ. ಈ ಹಿನ್ನೆಲೆಯಲ್ಲಿ "ಸಾಲೆ ಸಾಸಿರ್ವರು" ಎಂಬುದು ನೇಕಾರರಿಗೆ ಹೊಂದಿಕೆಯಾಗುತ್ತದೆ. ಆದರೆ ಕುಂಬಾರರು ಗಡಿಗೆ-ಮಡಕೆ ಮಾಡುವ ಸ್ಥಳಕ್ಕೆ ಕುಂಬಾರಸಾಲೆ ಎನ್ನುವುದನ್ನು ನೆನಪಿಸಿಕೊಂಡರೆ ಇವರೂ ಇಲ್ಲಿ "ಸಾಲೆಸಾಸಿರ್ವರು" ಪದ ಬಳಸಿಕೊಂಡುದು ಸರಿಯೆನಿಸುತ್ತದೆ.

ತಾಮ್ರಶಾಸನದಲ್ಲಿ ಐಯ್ಯಾವಂತರು ಎಂದೂ ಕುಂಬಾರರು ಕರೆದುಕೊಂಡಿದ್ದಾರೆ. ಇದಕ್ಕೆ ಏನು ಅರ್ಥ ಹೇಳಬೇಕೋ ಗೊತ್ತಾಗುವುದಿಲ್ಲ. ಇಲ್ಲಿ "ಸಾಮಂತರ್ಗಂ, ಸಮಸ್ತ ಸಮಯಕ್ಕಂ" ಎಂದು (ಸಾಲು ೧೩೪) ಸಾವಂತರನ್ನು ಬಿಡಿಸಿ ಹೇಳಿರುವುದರಿಂದ ಐಯ್ಯಾವಂತರು ಇವರಲ್ಲಿಯೇ ಮುಖ್ಯರಾಗಿರ(ಐ=ಐದು, ಪಂಚ>ಪಂಚರು)ಬಹುದೆನಿಸುತ್ತದೆ.

ಶಾಸನಗಳಲ್ಲಿ ತಮ್ಮ ಸದ್ಗುಣ, ಶೌರ್ಯಗಳನ್ನು, ಆತ್ಮಪ್ರಶಂಸೆಯ ಮಾತುಗಳನ್ನು ಬೇರೆ ಬೇರೆ ವೃತ್ತಿಸಂಘದವರು ಆರೋಪಿಸಿಕೊಂಡುದಕ್ಕೆ ಬಹಳಷ್ಟು ಉದಾಹರಣೆಗಳು ಶಾಸನಗಳಲ್ಲಿ ಸಿಗುತ್ತವೆ. ಮೇಲೆ ಹೇಳಿದ ಅಮ್ಮಿನಭಾವಿ ಶಾಸನದಲ್ಲಿ ಕುಂಬಾರರು

ಅಜನೆನ್ನನ್ತೆ ಮತಪ್ರಯುಕ್ತರಿನನಂತೆಂತುಜ್ವಳರ್ ಶಂಕರಾ
ತ್ಮಜನೆಂತನ್ತಿರೆ ದಾನಿಗಳ್ ಧನದನೆಂತನ್ತರ್ತ್ಥಸಂಯುಕ್ತರಂ
ಗಜನೆನ್ತನ್ತೆ ಸುರೂಪಿಗಳ್ ಶಿವಪದಾಂಭೋಜಾತ ಷಟ್ಪಾದರೆಂ
ದು ಜನ ಬಣ್ಣಿಸುಗುಂ ಗುಣಾಗ್ರಣಿಗಳಂ ಶ್ರೀ ಸಾ[ಲೆ ಸಾಸಿ]ರ್ವರಂ॥

ಎಂದು ಪ್ರಶಂಸೆ ಮಾಡಿಕೊಂಡುದನ್ನು ಇಲ್ಲಿ ನೆನೆಯಬಹುದು. ಇದೇ ರೀತಿ ಈ ಆನೆಗೊಂದಿ ತಾಮ್ರಪಟದಲ್ಲಿಯೂ ಇವರು ಪುರಾಣಶೈಲಿಯಲ್ಲಿ ತಮ್ಮ ಬಗ್ಗೆ ಪ್ರಶಂಸೆಯ ಮಾತುಗಳನ್ನು ಹೇಳಿಕೊಂಡಿದ್ದಾರೆ.

■■

ಆಕರ : ಮಾರ್ಗ ಸಂಪುಟ-೪

೭೨

ಶಾಸನಗಳಲ್ಲಿ ಇನ್ನಷ್ಟು ಅಂಶವೃತ್ತ-ಮಾತ್ರಾವೃತ್ತಗಳು

ಕರ್ನಾಟಕದ ಶಾಸನಗಳ ಸಂಖ್ಯೆ ಸುಮಾರು ೨೫ ಸಾವಿರ. ಸರಾಸರಿ ೪ರಂತೆ ಹಿಡಿದರೆ ಇವುಗಳಲ್ಲಿ ನಿಕ್ಷಿಪ್ತವಾಗಿರುವ ಒಟ್ಟು ಪದ್ಯ ಸಂಖ್ಯೆ ೧ ಲಕ್ಷ. ಕನ್ನಡ ಕವಿಸಾಹಿತ್ಯ ಹರಿಹರನ ಕಾಲಕ್ಕೆ ಅಕ್ಷರಛಂದಸ್ಸಿನಿಂದ ಮಾತ್ರಾಛಂದಸ್ಸಿಗೆ ತಿರುಗಿದರೂ ಶಾಸನಸಾಹಿತ್ಯ ಮಾತ್ರ ಉದ್ದಕ್ಕೂ ಅಕ್ಷರಛಂದಸ್ಸನ್ನೇ ಬಳಸುತ್ತ ಬಂದಿತು. ಇದಕ್ಕೆ ಕಾರಣ, ಪ್ರಾಚೀನ ಸಮಾಜ ರಾಜಸತ್ತೆ-ಪುರೋಹಿತಸತ್ತೆ ಪ್ರಧಾನವಾದುದು. ಈ ಸತ್ತೆಗಳ ವೈಭವ- ಘನತೆಗಳನ್ನು ಅಭಿವ್ಯಕ್ತಿಸಲು ಅಕ್ಷರಛಂದಸ್ಸೇ ಸೂಕ್ತಮಾಧ್ಯಮವಾದುದರಿಂದ, ಅದನ್ನೇ ಉದ್ದಕ್ಕೂ ಬಳಸುತ್ತ ಬಂದರೆಂದು ತೋರುತ್ತದೆ. ಹೀಗಾಗಿ ಕ್ವಚಿತ್ ಎಂಬಂತೆ ಸಿಗುವ ಶಾಸನಸ್ಥ ಅಂಶವೃತ್ತ, ಮಾತ್ರಾವೃತ್ತಗಳ ಅನ್ವೇಷಣೆಗೆ ಮಹತ್ವ ಪ್ರಾಪ್ತವಾಗಿದೆ.

ಈ ದೃಷ್ಟಿಯಿಂದ ಈ ವರೆಗೆ ಅನೇಕ ವಿದ್ವಾಂಸರು ಶಾಸನಗಳಲ್ಲಿ ಅಂಶಛಂದಸ್ಸಿನ ತ್ರಿಪದಿ-ಮೂಲಷಟ್ಪದಿ-ಪಿರಿಯಕ್ಕರ, ಮಾತ್ರಾ ಛಂದಸ್ಸಿನ ರಗಳೆ-ಷಟ್ಪದಿಗಳನ್ನು ಕೆಲವು ಸಂಖ್ಯೆಯಲ್ಲಿ ಹುಡುಕಿದ್ದಾರೆ. ಈ ಪ್ರಯತ್ನಕ್ಕೆ ಹೊಸ ಸೇರ್ಪಡೆ ಎಂಬಂತೆ ಅಂಥ ಕೆಲವು ವೃತ್ತಗಳ ಬಗ್ಗೆ ಇಲ್ಲಿ ಚರ್ಚಿಸಬಹುದಾಗಿದೆ.

ಮೂಲಷಟ್ಪದಿ:

ಈ ವರೆಗೆ ಅಮ್ಮಿನಭಾವಿ-೧, ಭೀಮಸಮುದ್ರ-೧, ಚಡಚಣ-೩, ಆಂಧ್ರಪ್ರದೇಶದ ಪೂಡೂರು-೧ ಮತ್ತು ಗಂಗಾಪುರ-೧, ಸೊಲ್ಲಾಪುರ-೧೬ ಹೀಗೆ ೨೩ ಅಂಶಷಟ್ಪದಿಗಳನ್ನು ವಿದ್ವಾಂಸರು ಶೋಧಿಸಿದ್ದಾರೆ. ಇದಕ್ಕೆ ಆನೆಗೊಂದಿ ತಾಮ್ರ ಶಾಸನದ ಉತ್ತರಾರ್ಧದ "ಅಮೃತಮಥನ ಪುರಾಣ"ಕ್ಕೆ ಬಳಸಿರುವ ೨೩. ಅಂಶಷಟ್ಪದಿಗಳನ್ನು ಶೋಧಿಸುವ ಮೂಲಕ ನಾನು ಈ ಸಂಖ್ಯೆಯನ್ನು ೪೬ಕ್ಕೆ ಮುಟ್ಟಿಸಿದ್ದೆನು. (ನೋಡಿ: ಇದೇ ಗ್ರಂಥದ "ಅಮೃತಮಥನ ಪುರಾಣ : ಶಾಸನೋಕ್ತ ಷಟ್ಪದ ಕಾವ್ಯ").

ಹಾನಗಲ್ಲ ತಾಲೂಕಿನ ಆಡೂರು ಗ್ರಾಮದ ಪಶ್ಚಿಮದ ಹೊಲವೊಂದರಲ್ಲಿ ನಿಂತಿರುವ ಶಾಸನ (ಎಸ್. ಆಯ್. ಆಯ್ XX-೨೪ ಆಡೂರ)ಕಲ್ಯಾಣ ಚಾಲುಕ್ಯ ಇಮ್ಮಡಿ ಜಯಸಿಂಹನ ಕಾಲಕ್ಕೆ, ಅಂದರೆ ೧೦೩೪-೩೫ರ ಸುಮಾರಿಗೆ ಬರೆದುದಾಗಿದೆ. ಮಾದಿಮಯ್ಯನು ಸಾಂತಳಿಗೆ ಸಾವಿರ,

ಬನವಾಸಿ ಹನ್ನೆರಡುಸಾವಿರಗಳ ಪೆರ್ಗಡೆತನಗೆಯ್ಯುತ್ತಲಿದ್ದ, ಮಯೂರವರ್ಮದೇವನು ಹಾನುಗಲ್ಲ ಐನೂರರ ಅರಸುತನ ಗೆಯ್ಯುತ್ತಲಿದ್ದ ಸಂದರ್ಭದಲ್ಲಿ ಬರ್ಮನೆಂಬವನು ಶೌರ್ಯ ಪ್ರದರ್ಶಿಸಿ, ಕುಪ್ಪಗಡೆ ಮತ್ತು ಲೋಕಪಾಂಡಿಯೂರುಗಳನ್ನು ಪಡೆದನು. ಈ ಬರ್ಮ ಮತ್ತು ಕಾಳಿಯಬ್ಬೆಯರ ಮಗ ಕಾಳಿಗನು ಮಹಾದಾನಿಯಾಗಿದ್ದನು. ಇವನ ತಮ್ಮ ಜಕ್ಕಿಗ ಯಶೋವಂತನಾಗಿದ್ದನು. ಈ ಸಂದರ್ಭದಲ್ಲಿ ಸ್ವಯಂಭುದೇವರ ಸ್ಥಾನಪತಿಯಾದ ದೇವರಾಸಿಜೀಯರ ಶಿಷ್ಯ ವಾಮದೇವ ಸುಪ್ರಸಿದ್ದನೆನಿಸಿದ್ದನು. ಆತನ ವರ್ಣನೆಯ ಭಾಗವಾಗಿ ಈ ಅಂಶಷಟ್ಪದಿಯ ಪಾಠ ಹೀಗೆ ಬರುತ್ತದೆ.

೨೩ .... ॥ ಭಂಗಿಯಿನ್ದೊಳಗುಳ್ಳಂಗನೆಯರ ಪು

೨೪ ತ್ರಂ ಗಂಗೆಯಂಗೆರಡಲ್ತಾಳ್ದೀ ಜಿನದಾಸಿ। ತುಂಗಪರಾಕ್ರಮಂ ಪಿಂಗದು ಮನದಿಂ ತ್ರಿಪುರಂಗ

೨೫ ಳನಿಚ್ಚಾತನಭಯವಕ್ಕೆ ಪಾಂಗಿ ಮಾರ್ಮಲೆಬರ್ಗ್ಗೆಯಂಗಜವೈರಿ ತಾಂ ಭಂಗಿಯ[ಲ್ತ]

೨೬ ಪದಂಕಕಾಱ ವಾಮದೇವಂ॥..........

ಈ ಪದ್ಯದ ಹಿಂದೆ ಜಕ್ಕಿಗನ ವರ್ಣನೆ ಇದೆ. ಮುಂದೆ ಈ ವಾಮದೇವನು ೬೦ ದಿನಗಳ ಉಪವಾಸ ಹಿಡಿದು ಶ್ರೀಶೈಲಕ್ಕೆ ಹೋಗಿ, ದೇವರ ದರ್ಶನ ಪಡೆದು ಮರಳಿದ ಸಂಗತಿಯನ್ನೊಳಗೊಂಡ ಕಂದಪದ್ಯಗಳಿವೆ. ಇವುಗಳ ನಡುವಿನ ಪದ್ಯ (ಚರಣ೨೩, ೨೪, ೨೫, ೨೬)ವನ್ನು ಪರೀಕ್ಷೆಗೆ ಗುರಿಪಡಿಸಿ, ಛಂದೋಸ್ವರೂಪವನ್ನು ನಿರ್ಧರಿಸಬಹುದಾಗಿದೆ. ಈ ಪದ್ಯದ ಒಳಪ್ರಾಸ, ಲಯಗತಿಯು ತ್ರಿಪದಿ ಇಲ್ಲವೆ ಅಂಶಷಟ್ಪದಿಯದಾಗಿದೆ. ತ್ರಿಪದಿಗಿಂತ ಅಂಶಷಟ್ಪದಿಗೇ ಹೆಚ್ಚು ಸಮೀಪವಾಗಿರುವುದರಿಂದ ಇದನ್ನು ಒಂದೂವರೆ ಅಂಶಷಟ್ಪದಿಯಲ್ಲಿ ಹೀಗೆ ಬಿಡಿಸಿ ಇಡಬಹುದು.

ಭಂಗಿಯಿನ್ದೊಳಗು
ಳ್ಳಂಗನೆಯರ ಪುತ್ರಂ
ಗಂಗೆಯಂಗೆರಡಲ್ತಾಳ್ದೀ ಜಿನದಾಸಿ।
ತುಂಗಪರಾಕ್ರಮಂ
ಪಿಂಗದು ಮನದಿಂ ತ್ರಿಪು
ರಂಗಳನಿಚ್ಚಾತನಭಯವಕ್ಕೆ॥
ಪಾಂಗಿ ಮಾರ್ಮಲೆವರ್ಗ್ಗೆ
ಯಂಗಜವೈರಿ ತಾಂ
ಭಂಗಿಯಲ್ತಪದಂಕಕಾಱ ವಾಮದೇವಂ।

ಇಲ್ಲಿ ಛಂದಸ್ಸಿಗೆ, ಅರ್ಥಕ್ಕೆ ಅಲ್ಲಲ್ಲಿ ಭಂಗ ಬಂದಿದೆ. ಬ್ರಹ್ಮಚಾರಿಯಾದ ಈತನು ಅಂಗನೆಯರಿಗೆ ಪುತ್ರನೋ, ಎರಡನೆಯ ಗಾಂಗೇಯನೋ ಎನಿಸಿದ್ದನು. (ಜಿನದಾಸಿ ಎನ್ನುವಲ್ಲಿ ಪಾಠ ಕೆಟ್ಟಿರುವಂತಿದೆ). ತುಂಗಪರಾಕ್ರನೂ ಆಗಿರುವ ಇವನು ಶಿವನನ್ನು ಮನದಿಂದ ಹಿಂಗುತ್ತಿರಲಿಲ್ಲ. ಸೊಕ್ಕಿನಿಂದ (ಪಾಂಗಿ>ಪೊಂಗಿ) ಮಲೆಯುವವರಿಗೆ ಅಂಗಜವೈರಿಯಾದ ಶಿವನೇ ಆಗಿದ್ದ. ತಪಸ್ಸಿನಲ್ಲಿ ಸುಪ್ರಸಿದ್ಧನೆನಿಸಿದ್ದ–ಎಂದು ಸ್ಥೂಲವಾಗಿ ಈ ಪದ್ಯಕ್ಕೆ ಅರ್ಥ ಹೇಳಬಹುದು.

ಈ ಶಾಸನದ ಕಾಲ ೧೦೩೪. ಈ ಹೊತ್ತಿಗೆ ಜಯಕೀರ್ತಿ, ನಾಗವರ್ಮರ ಛಂದೋನುಶಾಸನ, ಛಂದೋಂಬುಧಿಗಳಲ್ಲಿ ಮೂಲ ಷಟ್ಪದಿಯನ್ನು ಲಕ್ಷ್ಯ-ಲಕ್ಷಣಸಹಿತ ಸ್ಥಾಪಿಸಲಾಗಿದ್ದಿತು. ಈ ಎರಡೂ ಛಂದೋಕೃತಿಗಳನ್ನು ಬಿಟ್ಟರೆ ಕಾವ್ಯದಲ್ಲಿ ಬಳಕೆಯಾದ ಮೊದಲ ಷಟ್ಪದಿಯೆಂದರೆ ೧೦೧೫-೪೨ರ ಮಧ್ಯದವನೆಂದು ಕರ್ನಾಟಕ ಕವಿಚರಿತೆಕಾರರು ಹೇಳುವ, ೧೦೨೪-೪೨ರ ಮಧ್ಯದವನೆಂದು ವೆಂಕಟಸುಬ್ಬಯ್ಯನವರು ಹೇಳುವ ಚಂದ್ರರಾಜನ ಮದನತಿಲಕದ್ದು ಎಂದು ಭಾವಿಸಲಾಗಿದ್ದಿತು. ಶಾಸನದಲ್ಲಿ ಬಳಕೆಯಾದ ಮೊದಲ ಷಟ್ಪದಿ ಎಂದರೆ ಭೀಮಸಮುದ್ರದ್ದು(EC XI-ಚಿತ್ರದುರ್ಗ ೪೭. ಕ್ರಿ. ಶ. ೧೦೬೭) ಎಂದು ಹೇಳಲಾಗುತ್ತಿತ್ತು. ಆದರೆ ಮದನತಿಲಕದ ಕಾಲ ೧೦೪೨ರ ವರೆಗೂ ಸರಿಯುವ ಸಾಧ್ಯತೆಯಿರುವುದರಿಂದ, ಶಾಸನ ಮತ್ತು ಕಾವ್ಯಗಳಲ್ಲಿ ದಾಖಲಾದ ಷಟ್ಪದಿಗಳಲ್ಲಿ ಮೊದಲಿನದೆಂಬ ಕೀರ್ತಿ, ಈ ಆಡೂರು ಶಾಸನಸ್ಥ (೧೦೩೪) ಅಂಶಷಟ್ಪದಿಗೆ ಸಲ್ಲುತ್ತದೆ.

ಈ ಒಂದೂವರೆ ಷಟ್ಪದಿಯ ಶೋಧದಿಂದ ಶಾಸನಸ್ಥ ಅಂಶಷಟ್ಪದಿಗಳ ಸಂಖ್ಯೆಯನ್ನು ನಲವತ್ತೇಳುವರೆ ವರೆಗೆ ಮುಟ್ಟಿಸಿದಂತಾಗಿದೆ.

ಪಿರಿಯಕ್ಕರ:

ಅಂಶಛಂದಸ್ಸಿನ ಪಿರಿಯಕ್ಕರಗಳು ಶಾಸನದಲ್ಲಿ ಕ್ವಚಿತ್ತಾಗಿ ಕಾಣುತ್ತಿದ್ದು, ಈ ವರೆಗೆ ಅಲ್ಲಿ ಲಭ್ಯವಾಗಿರುವವುಗಳನ್ನು ಕುರಿತು "ಹದಿನಾರು ಶಾಸನಗಳಲ್ಲಿ ಹದಿನೆಂಟು ಪಿರಿಯಕ್ಕರಗಳಿದ್ದು, ಕೆಲವು ಪುನರುಕ್ತಗೊಂಡು ಇವುಗಳ ಸಂಖ್ಯೆ ೩ಂಕ್ಕೆ" ಏರಿದೆಯೆಂದು ಶ್ರೀಮತಿ ಹನುಮಾಕ್ಷಿ ಗೋಗಿ ತಿಳಿಸುತ್ತಾರೆ(ಅನುಶಾಸನ I. ಪು. ೧೬).

ಈ ಮಾಲಿಕೆಗೆ ಇನ್ನೂ ಎರಡು ಪಿರಿಯಕ್ಕರಗಳನ್ನು ಈಗ ಸೇರಿಸಬಹುದಾಗಿದೆ. ಮುಂಡರಗಿ ತಾಲೂಕಿನ ಶಿರೂರ ಗ್ರಾಮದ ಒಂದು ಶಾಸನದಲ್ಲಿ (SII XI-i ೭೫ ಶಿರೂರ ಕ್ರಿ. ಶ. ೧೦೪೨) ಪಡೆವಳ ದಾಸನೆಂಬ ಯುದ್ಧವೀರ, ದಾನವೀರನ ವರ್ಣನೆ ಹೀಗೆ ಬರುತ್ತದೆ.

೨೭ ಅಕ್ಕರ। ಸಿಂದವಂಸಕ್ಕೆ ತಿಳಕವಾಗಿಟ್ಟಾತನಿನ್ದುನಿ
೨೮ ಭಾನನೆ ಚಾವುಣ್ಡಕಬ್ಬೆ। ಸನ್ದಜನನಿ ಕೇಳೆಱೆಗಾ
೨೯ ತಿಂಗಂ ಪಿತ್ರುವೆನ್ದುದಿನ್ನೇವೇಳ್ವುದೊಳ್ಪುಗಳಂ। ಮಂದರಾ
೩೦ ದ್ರಿಯಿಂ ದಕ್ಷಿಣಭಾಗದೊಳ್ ಸಂದಿಟ್ಟುದರಕೆ
೩೧ ಱೆ ಜನ್ಮಭೂಮಿ। ಕಂದಮಿತ್ರನಿಭಂ ದಾಸನನ್ದಡೇ
೩೨ ನೆನ್ದಪ್ಪೈ ಸುಜನಜನಾಶ್ರಯನಂ।

"ಅಕ್ಕರ" ಎಂಬ ಸೂಚನೆಯೊಂದಿಗೆ, ಪ್ರತಿಚರಣದ ಕೊನೆಗೆ ದಂಡ ಹಾಕುವುದರೊಂದಿಗೆ ಈ ಪದ್ಯ ೬ ಚರಣಗಳಲ್ಲಿ ಪೂರ್ಣಗೊಂಡಿದೆ. ಅಕ್ಕರದ ಒಂದು ಪ್ರಕಾರವಾಗಿರುವ ಈ ಪಿರಿಯಕ್ಕರವನ್ನು ನಾಲ್ಕು ಸಾಲುಗಳಲ್ಲಿ ಹೀಗೆ ಜೋಡಿಸಬಹುದಾಗಿದೆ.

ಅಕ್ಕರ। ಸಿಂದವಂಸಕ್ಕೆ ತಿಳಕವಾಗಿಟ್ಟಾತನಿನ್ದುನಿಭಾನನೆ ಚಾವುಣ್ಡಕಬ್ಬೆ।
ಸನ್ದ ಜನನಿ ಕೇಳೆಱೆಗಾತಿಂಗಂ ಪಿತ್ರುವೆನ್ದುದಿನ್ನೇವೇಳ್ವುದೊಳ್ಪುಗಳಂ।

ಮಂದರಾದ್ರಿಯಿಂ ದಕ್ಷಿಣಭಾಗದೊಳ್ ಸಂದಿಟ್ಟುದರಕಱೆ ಜನ್ಮಭೂಮಿ।
ಕಂದಮಿತ್ರನಿಭಂ ದಾಸನೆನ್ದಡೇನೆನ್ದಪ್ಪೆ ಸುಜನಜನಾಶ್ರಯನಂ।

ಇದೇ ರೀತಿ ಕೊಪ್ಪಳ ತಾಲೂಕಿನ ಹುಲಿಗಿ ಶಾಸನದಲ್ಲಿ(ಕೊಪ್ಪಳ ಜಿಲ್ಲೆಯ ಶಾಸನಗಳು, ಕೊಪ್ಪಳ-೧೪೮ ಹುಲಿಗಿ ಕ್ರಿ. ಶ. ೧೦೮೮) ಇನ್ನೊಂದು ಪಿರಿಯಕ್ಕರ ಕಂಡುಬರುತ್ತದೆ. ಕಲ್ಯಾಣ ಚಾಲುಕ್ಯ VIನೆಯ ವಿಕ್ರಮಾದಿತ್ಯನಿಂದ ಚೌವೇದಿಭಟ್ಟನು ಹುಲಿಗೆ ಗ್ರಾಮವನ್ನು ದತ್ತಿಯಾಗಿ ಪಡೆದನು. ಇವನ ಮಕ್ಕಳಲ್ಲೊಬ್ಬನಾದ ಸೋಮನಾಥನು ಈ ಗ್ರಾಮದಲ್ಲಿ ಕಟ್ಟಿಸಿದ ದೇವಾಲಯದ ಪರಿಸರವನ್ನು ಹೀಗೆ ವರ್ಣಿಸಲಾಗಿದೆ.

೧೯ ....॥ಅಕ್ಕರ॥ ಮೂ
೨೦ ಡ ರಿಷ್ಯಮೂಕಾಚಳಂ ತೆಂಕಲು ಗ[ನ್ಧ]ಮಾದನಗಿರಿ ಪಶ್ಚಿಮದಲು ನೋಡ ಶ್ರೀಕೂಟಂ
ಬಡಗಲ್ಕಿ:ಕಿನ್ಧಮಿನ್ತೀ ನಗೇಂದ್ರಂಗಳ್ಸಕ್ಕಿಯಾಗಲು
೨೧ ಗಾಡಿ ಮಿಕ್ಕಿರೆ ತುಂಗಭದ್ರಾನದಿಯೊಡಗೊಡಲು ಸೋಮೇಶಂ ಬಂದು ನಿಲ್ಲಲು
[ರೂಡಿ] ಪುಲಿ[ಗೆ]ಯೂರೊಡೆಯ ಸೋಮಮಂ ಕಣ್ದುಮಾಡಿದ ದೇವಾಲ್ಲ್ಯಂ ಸೋಬಿ
೨೨ ಸುಗು॥

ಗದ್ಯದಂತೆ ಬರೆದ ಈ ಪಠ್ಯವನ್ನು ಪ್ರಾಸವನ್ನು ಅವಲಂಬಿಸಿ ನಾಲ್ಕು ಸಾಲುಗಳಲ್ಲಿ ಹೀಗೆ ಸಂಯೋಜಿಸಬಹುದು.

ಅಕ್ಕರ॥ ಮೂಡ ರಿಷ್ಯಮೂಕಾಚಳಂ ತೆಂಕಲು ಗ[ನ್ಧ]ಮಾದನಗಿರಿ ಪಶ್ಚಿಮದಲು
ನೋಡ ಶ್ರೀಕೂಟಂ ಬಡಗಲ್ಕಿ:ಕಿನ್ಧಮಿನ್ತೀ ನಗೇಂದ್ರಂಗಳ್ಸಕ್ಕಿಯಾಗಲು
ಗಾಡಿ ಮಿಕ್ಕಿರೆ ತುಂಗಭದ್ರಾನದಿಯೊಡಗೊಡಲು ಸೋಮೇಶಂ ಬಂದು ನಿಲ್ಲಲು
[ರೂಡಿ] ಪುಲಿ[ಗೆ]ಯೂರೊಡೆಯ ಸೋಮಮಂ ಕಣ್ದು ಮಾಡಿದ ದೇವಾಲ್ಲ್ಯಂ ಸೋಭಿಸುಗು॥

ಈ ಪದ್ಯದಿಂದಾಗಿ ೧೮ ಶಾಸನಗಳಲ್ಲಿ ಪಿರಿಯಕ್ಕರಗಳ ಸಂಖ್ಯೆ ೨೦ಕ್ಕೆ ಏರಿದಂತಾಗುತ್ತದೆ. ಕೆಲವು ಪುನರುಕ್ತಗೊಂಡು ಇವುಗಳ ಸಂಖ್ಯೆ ೩೨ಕ್ಕೆ ಏರಿದಂತಾಗುತ್ತದೆ. ಇಲ್ಲಿ "ಪಿರಿಯಕ್ಕರ" ಹೆಸರಿಗೆ ಬದಲು ಅದನ್ನು ಸಾಮಾನ್ಯ ನಾಮದಿಂದ "ಅಕ್ಕರ"ವೆಂದು ಕರೆಯಲಾಗಿದೆ.

ರಗಳೆ:

ಕನ್ನಡ ಸಾಹಿತ್ಯದಲ್ಲಿ ಅಕ್ಷರಛಂದಸ್ಸನ್ನು ತಡೆದು, ರಗಳೆ ಮಾಧ್ಯಮದಿಂದ ಮಾತ್ರಾಛಂದಸ್ಸಿಗೆ ನಾಂದಿಹಾಡಿದವ, ಮಹಾಕವಿ ಹರಿಹರ. ಅತಿಯಾದ ಬಳಕೆಯಿಂದಾಗಿ ಅವನ ಕೈಯಲ್ಲಿ ಹುಟ್ಟಿದ ರಗಳೆ ಅವನ ಕೈಯಲ್ಲಿಯೇ ಜೀರ್ಣವಾಯಿತು. ಹೀಗಾಗಿ ಮುಂದಿನ ಯಾವ ಕವಿಯೂ ಸಾಮಾನ್ಯವಾಗಿ ಇದನ್ನು ಬಳಸಲಿಲ್ಲ. ಇಂಥ ಪ್ರಸಂಗದಲ್ಲಿ ಶಾಸನಗಳಲ್ಲಿ ಕ್ವಚಿತ್ ಎಂಬಂತೆ ಕೆಲವು ಪ್ರಯೋಗಗಳು ಸಿಗುತ್ತವೆ. ಈಗ ಕೊಪ್ಪಳ ಶಾಸನೋಕ್ತ ಒಂದು ಪ್ರಯೋಗವನ್ನು ಇಲ್ಲಿ ಸೂಚಿಸಬಹುದು.

"ಕೊಪ್ಪಳ ಜಿಲ್ಲೆಯ ಶಾಸನ ಸಂಪುಟ"ದ ಕೊಪ್ಪಳ ತಾಲೂಕಿನ ೫೧ನೆಯ ನಂಬರಿನ ಶಾಸನವು (೧೧ನೆಯ ಶತಮಾನ) ಕದಂಬವಂಶದ ಅಜವರ್ಮನ ಮಗ ಬಾಚರಸ, ಬಾಚರಸನ

ಮಕ್ಕಳು ದ್ರೋಣ, ಪಂಪರನ್ನು ಹೆಸರಿಸುತ್ತ, ಬಾಚರಸನು ಚಕ್ರವರ್ತಿ ತೈಲಪನಿಗೆ ಜಯಗಳಿಸಿ ಕೊಟ್ಟನೆಂದು ಹೇಳುವ ಈ ಜೈನಶಾಸನದ ೩೦ನೆಯ ಸಾಲಿನಿಂದ ಲಲಿತರಗಳೆ ಹೀಗೆ ಆರಂಭವಾಗುತ್ತದೆ.

೩೦ .... ।ಲಲಿತರ[ಗಳೆ]॥ ಪ....ಳ....ಂನ್ನಳವೊ ನಿನ್ನಳವೊ ಪೆಂಪನೊಳಕೊಣ್ಡಳೀ

೩೧ ....ಮುಂನಯ....ಮವಾನು ಅನ್ಯೊದವಿಪು

೩೨ ಮುಂ.........................ಪಯೋದನೆ.. ದ.... ದರಿಷಡ್ವರ್ಗಮರಿವರ್ಗ್ಗ।

ಶಾಸನದಲ್ಲಿ "ಲಲಿತರಗಳೆ" ಎಂದು ವ್ಯಕ್ತವಾಗಿಯೇ ಹೇಳಲಾಗಿದೆ. ಬಹಳಷ್ಟು ತ್ರುಟಿತವಾಗಿರುವುದರಿಂದ ಪಾಠವನ್ನು ರಗಳೆರೂಪದಲ್ಲಿ ಹೊಂದಿಸಲು ಸಾಧ್ಯವಾಗುವುದಿಲ್ಲ. ಹರಿಹರನ ಹಂಪಿ ಸಮೀಪದ ಕೊಪ್ಪಳದಲ್ಲಿ ಈ ರಗಳೆ ಬಳಕೆಯಾದುದೂ, ಹರಿಹರನಿಗಿಂತ ಪ್ರಾಚೀನವಾಗಿರುವುದೂ ಇಲ್ಲಿ ಗಮನಿಸಬೇಕಾದ ಅಂಶವಾಗಿವೆ.

ವಾರ್ಧಕ ಷಟ್ಪದಿ-ಸಾಂಗತ್ಯ:

ಕನ್ನಡ ಸಾಹಿತ್ಯದಲ್ಲಿ ಮಾತ್ರಾಛಂದಸ್ಸಿನ ರಗಳೆಯ ಬಳಿಕ ಕಾಣಿಸಿಕೊಂಡುದು, ವಾರ್ಧಕ ಷಟ್ಪದಿ. ಈ ವಾರ್ಧಕ ಷಟ್ಪದಿಯ ಬಳಿಕ ಕಾಣಿಸಿಕೊಂಡುದು ಅಂಶಛಂದಸ್ಸಿನ ಸಾಂಗತ್ಯ. ಈ ವರೆಗೆ ಶಾಸನಗಳಿಂದ ಮಾತ್ರಾಛಂದಸ್ಸಿನ ಒಂದೂವರೆ ಭಾಮಿನಿಯನ್ನು ಶೋಧಿಸಿ ನಾನು ಪ್ರಕಟಿಸಿದ್ದೇನೆ(ಮಾರ್ಗ II ದ್ವಿ. ಪು. ೧೭೦). ಶ್ರೀಮತಿ ಗೋಗಿ ಅವರು ಒಂದು ಭೋಗ ಷಟ್ಪದಿಯನ್ನು ಗುರುತಿಸಿದ್ದಾರೆ(ಅನುಶಾಸನ I. ಪು. ೧೭). ಈಗ ಶಾಸನೋಕ್ತ ವಾರ್ಧಕ ಷಟ್ಪದಿ ಮತ್ತು ಸಾಂಗತ್ಯಗಳನ್ನು ಗುರುತಿಸಿಕೊಡಲಾಗಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಇತ್ತೀಚೆ "ರಾಯಚೂರ ಜಿಲ್ಲೆಯ ಶಾಸನ ಸಂಪುಟ"ವನ್ನು ಪ್ರಕಟಿಸಿದೆ. ಇಲ್ಲಿಯ ದೇವದುರ್ಗ ಗ್ರಾಮದ ಈರಣ್ಣನ ಗುಡ್ಡದ ಮೇಲಿನ ಶಾಸನದ ಕಾಲ ೧೬೯೦(ದೇವದುರ್ಗ ೪೬). ನಾರದನು ಕೃಷ್ಣನಿಗೆ ದೇವದುರ್ಗದ ನಿರ್ಮಾಣವನ್ನು ವಿವರಿಸಿದ ಶೈಲಿಯಲ್ಲಿ ಈ ಶಾಸನಪಾಠವಿದೆ. ಚಿಕ್ಕಸಲ್ಯೆಯ ಗೌಡ, ಕೇಶವಯ್ಯಗೌಡರು ೧೬೭೭ರಲ್ಲಿ ದೇವದುರ್ಗದಲ್ಲಿ ಕೆರೆ, ಗೋವರ್ಧನ ಗೋಪಾಲಕೃಷ್ಣ ದೇವಾಲಯಗಳನ್ನು ನಿರ್ಮಿಸಿದ ವಿಷಯವನ್ನು ಇಲ್ಲಿ ವಿವರಿಸಲಾಗಿದೆ. ಗದ್ಯದಂತೆ ಬರೆದ ಇಲ್ಲಿಯ ಸಾಂಗತ್ಯ ಮತ್ತು ವಾರ್ಧಕಷಟ್ಪದಿಗಳನ್ನು ಹೀಗೆ ಬಿಡಿಸಿ ಇಡಬಹುದಾಗಿದೆ.

(ಸಾಲು ೫-೬: ಸಾಂಗತ್ಯ)

ಬಲ್ಲಿದ ವಾಚಾಳಿ ನಾರದ ಮುನಿ ನಿನ್ನ
ಬೊಲ್ಲೆಯ ಮಾತದಂತಿರಲಿ ।
ಯೆಲ್ಲಿದ ಬಂದೆ ಶುದ್ಧಿಯ ಪೇಳೆನಲಾಲಿ
ಸೋಲೇ[ಸೊಲ್ಲಿ]ಸಿದನು ಕೃಷ್ಣಣನೊಡನೆ॥

(ಸಾಲು ೧೦-೧೫: ವಾರ್ಧಕ ಷಟ್ಪದಿ)

ಸುರಪುರದ ವಿಸ್ತಾರ ಯೀ ದೇವದುರ್ಗ ಸುಂ
ಧರ ಪ್ರಾಕಾರ ಮುಗಿಲಟ್ಟಣೆಯ ಹುಲಿಮುಖಂ
ಸರುವರುದ ರಾಜಗೃಹದ ಶೃಂಗಾರಮಂ ಶೋಭಾಯಮಾನಮಾದಾ।
ಹರಿಯ ಮೂಡಣ ತಟಾಕದ ಹಿಂದೆ ವುಪವನಂ
ಮೆರೆವ ಬಾಜಾರ ವೃಂದಾರ ಕಾದ್ರಿಯಮರ
ರರಮನೆಯ ದುರ್ಗವಳಕಾನಗರಮಂ ಪೋಲ್ವ ಸೊಗಸಿಂದ ಚೆಲ್ವೆನಿಸಿದಾ॥
ಮಲ್ಲೆದೇವರದುರ್ಗದಿರವ ವಿಸ್ತಾರಗೈವ
ರಲ್ಲಗಲ್ಲಿಗೆ ಬೆಂಚಿಕೆರೆ ಬಾವಿ ಡೊಣೆಗಳಂ
ಸಲ್ಲಲಿತ ವುಪಜಲದ ಸಾಧ ಸವುಖ್ಯದ ನೃಪಾಲಯದ ಪರಭಾಗಮೆಸೆವಾ।
ಪಲ್ಲವಿತ ವನ ಕೊಳ್ಳ ಪಾಸರಿಗಳಿಂದೆಸೆವ
ಪುಲ್ಲ ತರು ಗೂಲ್ಮ ಲತೆ ಗುಹೆಗಳಂ ಮಿಗೆ ಬಲಿದು
ಬಲ್ಲಿದ ನೃಪಾಲ ಚಿಕಾಸಲೇಂದ್ರನು ಗಿರಿತ್ರಯವ ದುರ್ಗವ ರಚಿಸಿದಾ॥
ಧ್ರುವನಂ ವಿಹಗ್ರದಿ ತ್ರಿಕೂಟಾದ್ರಿಂ ಯಳ್ದಷ
ಗ್ರೀವನನುಜನಂ (ರ)ಸಾತಳದ ಮಧ್ಯದಲಿ ನಿಜ
ಭವನಮಂ ಬಲಿಗೆ ಸಂಪದ ಚಿರಾಯುವನಿಲದೀವಿಯರೆ ಯನನುಜನಾದಾ।
ಅವಿರಗನಿಮಿಷ ಜನದನಾಥ ಸ್ವೇತಾಚಲದ
ಕವಿಯ ದೀಕ್ಷಿತ ಮಥನ ಗೋಪಾಲ ಶ್ರೀಕೃಷ್ಣ
ರವಿ ಸೋಮ ತಾರೆಯುಗ್ಗನ್ನೆವರ ಚಿಕಕಾಸಲೇಂದ್ರನನ್ವನೇ ರಕ್ಷಕಾ॥

(ಸಾಲು ೧೫-೧೮: ಸಾಂಗತ್ಯ)

ಹರ ದರುಷನ ತಾತ್ಪರಿಯದಿ ಶ್ರೋಣಿತ
ಪುರದೆಡೆಗಾನ್ಯೆದಲಾಗಿ।
ಮುರಮರ್ಧನನಿನ್ನು ಮೊಮ್ಮನ ಸುಧಿ ವಿ
ಸ್ತರಪಾದುದೇನ ಪೇಳುವೆನೂ॥
ಸ್ಮರತನಯನ ಪವುರುಷನನತ್ಯಧಿಕ ನಾ
ಲಿಸಲೊಳ ದೈತ್ಯನಾತ್ಮಜೆಯಾ।
ಸುರತಲಂಪಟವಾಂತು ತಿರುಗದೆ ಸುಖ ಬಿಟು
ನಿರುನಾಗಿರ್ಧ ಗೋಪುರದಿ॥
ಗಚ್ಚಿತನದಲಾತ ವೋಕೆರ್ದುದ ಕಂಡು
ತುಬಿಸಿ ಕೊಟ್ಟವರ್ನಾವು।
ಕೊಬ್ಬಿದ ದಡಿಗ ದೈತ್ಯರು ಜಡು ಹಿಡಿಯ
ಲ್ಕೆಬ್ಬಿದಾವರೊಡಲುಗಳಾ॥
ಲೆಕ್ಕವಿಲ್ಲದೆ ಕೊಂದನದುಟಳ ದೈತ್ಯರ

ವಿಕ್ರಮ ವಿರೋತಮರಾ।
ರಕ್ಕಸರಾಯ ಬಾಣಾಸುರ ಹಿಡಿದನು
ಮುಕ್ಕಂಣ ಕೊಟ್ಟ ಶಕ್ತಿಯಲಿ॥

ಲಯ ಮತ್ತು ಪ್ರಾಸಗಳನ್ನು ಅನುಸರಿಸಿ ನೋಡಿದಲ್ಲಿ ಮೊದಲಿನ ಒಂದು ಪದ್ಯ ಮತ್ತು ಕೊನೆಯ ನಾಲ್ಕು ಪದ್ಯಗಳು ಸಾಂಗತ್ಯವೆಂದೂ, ಮಧ್ಯದ ಮೂರು ಪದ್ಯಗಳು ವಾರ್ಧಕ ಷಟ್ಪದಿಯೆಂದೂ ತಿಳಿದುಬರುತ್ತದೆ. ಭಾಷೆ ಮತ್ತು ಛಂದಸ್ಸು ತುಂಬಾ ಅಶುದ್ಧವಾಗಿದೆ. ಈ ಶಾಸನದ ಕಾಲವಾದ ೧೬೯೦ಕ್ಕೆ ವಾರ್ಧಕ ಷಟ್ಪದಿಯ ಯೌವನಕಾಲ ಮುಗಿಯುತ್ತ ಬಂದಿದ್ದಿತು. ಸಾಂಗತ್ಯ ಬಳಕೆಯಲ್ಲಿದ್ದಿತು. ಯಾವನೋ ಸ್ಥಳೀಯ ಸಾಮಾನ್ಯಕವಿ ಈ ಪದ್ಯಗಳನ್ನು ರಚಿಸಿದಂತಿದೆ, ಸಾಮಾನ್ಯ ಲಿಪಿಕಾರ ಬರೆದಂತಿದೆ.

■■

ಆಕರ : ಮಾರ್ಗ ಸಂಪುಟ-೪

೭೩

ಉರಿಯ ಉಯ್ಯಲೆ

ಜನ್ನನ ಯಶೋಧರ ಚರಿತೆಯ ಪ್ರಾರಂಭದಲ್ಲಿ ಬರುವ ಮಾರಿದೇವತೆಯ ವರ್ಣನೆಯು, ಸಾಹಿತ್ಯಿಕದಂತೆ ಸಾಹಿತ್ಯೇತರ ದೃಷ್ಟಿಯಿಂದಲೂ ಅಭ್ಯಾಸಯೋಗ್ಯವೆನಿಸಿದೆ. ಅಲ್ಲಿ ಬರುವ "ಆ ದೇವಿಯ ಜಾತ್ರೆಗೆ . . ." ಎಂಬ ಪದ್ಯ (೧-೩೬)ವನ್ನಾಧರಿಸಿ ನಾನು "ಸಿರದ ಗಾಳ, ಉರಿಯ ಉಯ್ಯಲೆ, ಮೂದಲೆಯ ಉಲಿ" ಹೆಸರಿನ ಲೇಖನವನ್ನು (ಕರ್ನಾಟಕ ಭಾರತಿ ೧೫-೧, ೩) ಬರೆದಿದ್ದೆನು. ಅಲ್ಲಿ ಉರಿಯ ಉಯ್ಯಲೆಯನ್ನು ಕುರಿತು "ಈ ಆಚರಣೆ ಇಂದು ಜರುಗುತ್ತಿರುವ ಪ್ರದೇಶವಾಗಲೀ, ಇದರ ಸ್ವರೂಪವಾಗಲೀ ನಮಗೆ ತಿಳಿದುಬಂದಿಲ್ಲ. ಬಹುಶಃ ನೆಲದ ಮೇಲೆ ಉರಿಯನ್ನುಂಟುಮಾಡಿ, ಮರಕ್ಕೆ ಕಟ್ಟಿದ ಜೋಕಾಲಿಯಿಂದ ಆ ಉರಿಯಲ್ಲಿ ಜೀಕಿ ಹೋಗುವ ಸಂಪ್ರದಾಯವಿದಾಗಿರಬೇಕು- ಎಂದು ಊಹಿಸಬಹುದಾಗಿದೆ" ಎಂದು ಹೇಳಿ,ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ತೊಣಚಿ ಗ್ರಾಮದ ಶಾಸನದಲ್ಲಿ "ಉರಿಯ ಉಯ್ಯಲೆ" ಎಂಬುದರ ಉಲ್ಲೇಖವಿರುವುದನ್ನು ತೋರಿಸಿಕೊಟ್ಟಿದ್ದೆನು. ಹೀಗೆ ಅಸ್ಪಷ್ಟವಾಗಿಯೇ ಉಳಿದಿದ್ದ ಈ ಆಚರಣೆಯ ಸ್ವರೂಪವನ್ನು ಸ್ಪಷ್ಟಪಡಿಸುವುದು ಈ ಲೇಖನದ ಉದ್ದೇಶವಾಗಿದೆ.

ನಮ್ಮ ಪ್ರಾಚೀನ ಸಂಸ್ಕೃತಿ ಸಂದರ್ಭದಲ್ಲಿ ಅಗ್ನಿಪ್ರವೇಶ ಎರಡು ಬಗೆಯಾಗಿದೆ. ಕೆಂಡ ತುಳಿಯುವುದು ಇತ್ಯಾದಿ ವಿಧಾನಗಳ ಮೂಲಕ ಅಗ್ನಿಯ ಮುಖಾಂತರ ಪಾರಾಗುವುದು ಒಂದು ಬಗೆಯಾದರೆ, ಅಗ್ನಿಗೆ ದೇಹವನ್ನು ಸಮರ್ಪಿಸಿ ಸಾಯುವುದು ಇನ್ನೊಂದು ಬಗೆಯಾಗಿದೆ. ಇವುಗಳಲ್ಲಿ ಸಾಯುವುದು ಒಡೆಯನ ವಿಷಯದಲ್ಲಿ ಜರುಗುತ್ತಿದ್ದರೆ, ಸಾಯುವುದು ಮತ್ತು ಪಾರಾಗುವುದು ದೇವತೆಯ ವಿಷಯದಲ್ಲಿ ಜರುಗುತ್ತವೆ. ನನ್ನ ಲೇಖನದಲ್ಲಿ "ಉರಿಯ ಉಯ್ಯಲೆ" ಎಂಬುದಕ್ಕೆ ದೇವತೆಯ ಮುಂದೆ ಉರಿಯಲ್ಲಿ ಜೀಕಿ ಪಾರಾಗುವುದು ಎಂಬ ಅರ್ಥವನ್ನು ಊಹಿಸಿದ್ದೆನು. ಆದರೆ ಇದು ಉಯ್ಯಾಲೆಯ ಮೂಲಕ ಬೆಂಕಿಯಲ್ಲಿ ಬಿದ್ದು ಸಾಯುವ ಕ್ರಿಯೆಯನ್ನು ಸೂಚಿಸುವುದೆಂದು ಕೆಳಗಿನ ವಿವರಣೆ ಸ್ಪಷ್ಟಪಡಿಸುತ್ತದೆ.

ಸೂರ್ಯಗ್ರಹಣ ಸಂದರ್ಭದಲ್ಲಿ ಸೂರ್ಯನ ಭಕ್ತರು ಅಗ್ನಿಪ್ರವೇಶಮಾಡಿ ಸಾಯುತ್ತಿದ್ದುದಕ್ಕೆ ನಮ್ಮಲ್ಲಿ ಅನೇಕ ಶಾಸನೋಲ್ಲೇಖಗಳಿವೆ. ಆದರೆ ಈ ಉಲ್ಲೇಖಗಳು ಅಗ್ನಿಪ್ರವೇಶ ಸಂದರ್ಭದಲ್ಲಿ ಅನುಸರಿಸುತ್ತಿದ್ದ ವಿಧಾನಗಳನ್ನು ಸೂಚಿಸುವುದಿಲ್ಲ. ಇದಕ್ಕಾಗಿ ಶಿಲ್ಪ ಚಿತ್ರಗಳನ್ನೇ ಶೋಧಿಸಬೇಕಾಗುತ್ತದೆ. ಸೂರ್ಯನಿಗಾಗಿ ಅಗ್ನಿಪ್ರವೇಶ ಮಾಡಿದ ವಿಷಯವನ್ನೊಳಗೊಂಡ ಹಾನಗಲ್ಲ ತಾಲೂಕಿನ ತಿಳವಳ್ಳಿ ಶಾಸನ (೧೧೪೧), ಬಾಳೂರು ಶಾಸನ (೧೧೩೦)ಗಳ ಮೇಲೆ ಕೆಲವು ಶಿಲ್ಪಚಿತ್ರಗಳು ಕಂಡುಬರುತ್ತವೆ. ಇವುಗಳಲ್ಲಿ

"ಹಾವು ಸೂರ್ಯನನ್ನು ನುಂಗಲು ಧಾವಿಸುವ ಚಿತ್ರ"ವು ಗ್ರಹಣವನ್ನು ಸಂಕೇತಿಸುವುದೆಂಬುದನ್ನು ಬಿಟ್ಟರೆ, ಉಳಿದ ಚಿತ್ರಗಳನ್ನು ಅರ್ಥೈಸುವುದು ಕಠಿಣವಾಗಿದೆ.

ಇವುಗಳನ್ನು ಬಿಟ್ಟರೆ, ರೋಣ ತಾಲೂಕಿನ ಕೌಜಗೇರಿಯಲ್ಲಿರುವ ಇಂಥ ಇನ್ನೊಂದು ಶಾಸನಚಿತ್ರವನ್ನು ಕುರಿತು ಇತ್ತೀಚೆ ಶ್ರೀ ರಾಜೇಂದ್ರಪ್ಪ ಅವರು "ಸತ್ಯಶುದ್ಧಕಾಯಕ" ಪತ್ರಿಕೆ (೧-೪)ಯಲ್ಲಿ ಲೇಖನವೊಂದನ್ನು ಬರೆದಿದ್ದಾರೆ. ಈ ಶಾಸನದ ಪಾಠ ಓದಲು ಬಾರದಂತೆ ತ್ರುಟಿತವಾಗಿದ್ದರೂ ಶಿಲ್ಪಚಿತ್ರಗಳು ಮಾತ್ರ ಸ್ಫುಟವಾಗಿದ್ದೂ, ತುಂಬ ಮಹತ್ವದವುಗಳಾಗಿವೆ. ಇಲ್ಲಿ ನಾಲ್ಕು ಪಟ್ಟಿಕೆಗಳಿದ್ದು, ಮೇಲ್ಭಾಗದ ಪಟ್ಟಿಕೆಯಲ್ಲಿ ಸೂರ್ಯವಿಗ್ರಹ, ಎಡ ಬಲಗಳಲ್ಲಿ ಅವನ ಹೆಂಡಿರಾದ ಉಷೆ-ಪ್ರತ್ಯುಷೆಯರ ಚಿತ್ರವಿದೆ. ಇದರ ಕೆಳಗಿನ ಪಟ್ಟಿಕೆಯಲ್ಲಿ ಸೂರ್ಯನ ಸಾರಥಿ, ಸಪ್ತಾಶ್ವ ಚಿತ್ರವಿದೆ. ಇದರ ಕೆಳಗಿನ ಪಟ್ಟಿಕೆಯಲ್ಲಿ ತೀರಿಕೊಂಡ ಭಕ್ತನ ಸ್ವರ್ಗಾರೋಹಣ ಮತ್ತು ಸ್ವರ್ಗವಾಸ ಇತ್ಯಾದಿ ಚಿತ್ರಗಳನ್ನು ಬಿಡಿಸಲಾಗಿದೆ. ತೀರ ಕೆಳಭಾಗದ ಪಟ್ಟಿಕೆಯಲ್ಲಿ "ಮಂಟಪದಲ್ಲಿರುವ ತೂಗುಯ್ಯಾಲೆಯಲ್ಲಿ ವ್ಯಕ್ತಿಯೊರ್ವ ಚಿತೆಗೆ ಹಾರುವ ಸಿದ್ಧತೆಯಲ್ಲಿರುವಂತೆ ತೋರುತ್ತದೆ. ಬುಡದಲ್ಲಿ ಚಿತೆ ದಗಧಗಿಸಿ ಉರಿಯುತ್ತಿದೆ" ಎಂಬ ವಿವರಣೆಯನ್ನು ಶ್ರೀ ರಾಜೇಂದ್ರಪ್ಪ ಅವರು ಕೊಟ್ಟಿದ್ದಾರೆ.

ಈ ವಿವರಣೆಯನ್ನು ನೋಡಿದರೆ ಬೆಂಕಿಗೆ ಬೀಳಬೇಕಾದವರು ಉಯ್ಯಾಲೆಯ ಮೂಲಕ ಜೀಕುತ್ತಿದ್ದರೆಂದು ತಿಳಿದು ಬರುತ್ತದೆ. ಹೀಗಾಗಿ ಜನ್ನ ಹೇಳುವ 'ಉರಿಯ ಉಯ್ಯಲೆ' ಎನ್ನುವುದು ಉಯ್ಯಲೆಯ ಮೂಲಕ ಉರಿಯಲ್ಲಿ ಜೀಕಿ ಪಾರಾಗುವುದನ್ನಲ್ಲ, ಉಯ್ಯಲೆಯ ಮೂಲಕ ಜೀಕಿ ಬೆಂಕಿಯಲ್ಲಿ ಬೀಳುವುದನ್ನು ಸೂಚಿಸುವುದೆಂದೂ ಈಗ ಹೇಳಬಹುದಾಗಿದೆ. ಕೌಜಗೇರಿ ಶಾಸನ ಸೂರ್ಯನಿಗಾಗಿ ಅಗ್ನಿಪ್ರವೇಶ ಮಾಡುವುದನ್ನು ಸೂಚಿಸಿದರೆ, ಯಶೋಧರ ಚರಿತೆ ಮಾರಿದೇವತೆಗಾಗಿ ಅಗ್ನಿಪ್ರವೇಶ ಮಾಡುವುದನ್ನು ಸೂಚಿಸುತ್ತದೆ. ಆದರೆ ಎರಡೂ ಸಂದರ್ಭಗಳಲ್ಲಿ ಅಗ್ನಿಪ್ರವೇಶಕ್ಕಾಗಿ "ಉಯ್ಯಲೆ"ಯನ್ನೇ ಬಳಸುತ್ತಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ. ಹೀಗೆ ಸಾಯುವ ಆಚರಣೆಗೆ 'ಉರಿಯ ಉಯ್ಯಲೆ' ಎಂಬ ಪದವನ್ನು ಪಾರಿಭಾಷಿಕವೆಂಬಂತೆ ಬಳಸುತ್ತಿದ್ದರೆಂದೂ ಸ್ಪಷ್ಟವಾಗುತ್ತದೆ.

■■

ಆಕರ : ಮಾರ್ಗ ಸಂಪುಟ-೩

೭೪

ಶಂಕರಗಂಡ

ಕವಿಸಾಹಿತ್ಯ ಮತ್ತು ಶಾಸನಸಾಹಿತ್ಯಗಳ ಬಲದಿಂದ ಪ್ರಾಚೀನ ಕರ್ನಾಟಕದ ಅನೇಕ ಘಟನೆಗಳನ್ನು, ಘಟ್ಟಗಳನ್ನು ಪುನರ್ರಚಿಸ ಬಯಸುವ ವಿದ್ವಾಂಸರಿಗೆ ೧೦ನೆಯ ಶತಮಾನದ ಶಂಕರಗಂಡನ ಚರಿತ್ರೆ ಆಳವಾದ ಕುತೂಹಲವನ್ನು ಹುಟ್ಟಿಸುತ್ತದೆ.

'ಶಂಕರಗಂಡ' ಎಂಬುದು ತುಂಬ ಅಪರೂಪದ ಹೆಸರು. ಜೋಳ ಅರ್ಥದ ಶಂಕರಗಂಡ ಶಬ್ದಕ್ಕಾಗಲೀ, ಉತ್ತರ ಭಾರತದ ಕಲಚುರಿ ವಂಶದ ಅರಸು ಶಂಕರಗಣ[1] ಹೆಸರಿಗಾಗಲೀ ಇದರೊಂದಿಗೆ ಅರ್ಥ ಸಂಬಂಧವಿರಲಿಕ್ಕಿಲ್ಲ. ಕೊತ್ತತ್ತಿ ಗ್ರಾಮದ ಶಾಸನ[2]ದಲ್ಲಿ ಬರುವ ಈಸರಗಂಡ ಎಂಬ ಹೆಸರನ್ನು ಬಿಟ್ಟರೆ, ಗಂಡ ಉತ್ತರಪದದ ಶಂಕರಗಂಡ ಹೆಸರಿನ ಮೂವರು ವ್ಯಕ್ತಿಗಳು ಪ್ರಸ್ತುತ ಶಂಕರಗಂಡನ ವಂಶದಲ್ಲಿ ಕಂಡುಬರುತ್ತಾರೆ. ಇವರನ್ನು ಪ್ರಥಮ ಶಂಕರಗಂಡ, ದ್ವಿತೀಯ ಶಂಕರಗಂಡ, ತೃತೀಯ ಶಂಕರಗಂಡ ಎಂದು ಕರೆಯಬಹುದು. ಇವರಲ್ಲಿ ನಮಗೆ ಪ್ರಸ್ತುತನಾದವ ದ್ವಿತೀಯ ಶಂಕರಗಂಡ. ಬಹುಶಃ ಇದರ ಮೂಲರೂಪ ಶಂಕರಗಾವುಂಡ. ೧೦ನೆಯ ಶತಮಾನಕ್ಕಾಗಲೇ ಈ ಶಂಕರಗಾವುಂಡ ಎಂಬುದು ಶಂಕರಗೌಂಡ> ಶಂಕರಗೊಂಡ>ಶಂಕರಗಂಡ ಎಂದು ಉಚ್ಚಾರ ವ್ಯತ್ಯಾಸಗೊಂಡಿದ್ದಿತೋ, ಲಿಪಿಕಾರರು ಶಂಕರಗಂಡ ಎಂದು ತಪ್ಪು ಓದಿ ಬರೆಯುವುದರ ಮೂಲಕ ಹೀಗೆ ಪ್ರಚಾರ ಪಡೆದಿದ್ದಿತೋ ಹೇಳುವುದು ಕಷ್ಟ.

ಶಾಸನಗಳಲ್ಲಿ ಕೆಲವೇ ಸಲ ಕಂಡುಬಂದರೂ ತುಂಬ ಗಂಭೀರವಾಗಿ ಗೋಚರಿಸುವ ವ್ಯಕ್ತಿ. ಈ ದ್ವಿತಿಯ ಶಂಕರಗಂಡ. ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಸಿಗುವ ಶಾಸನಗಳೂ ಪಂಪನ ಆದಿಪುರಾಣ, ರನ್ನನ ಅಜಿತಪುರಾಣ, ನಾಗವರ್ಮನ ಕಾವ್ಯಾವಲೋಕನ, ಬ್ರಹ್ಮಶಿವನ ಸಮಯಪರೀಕ್ಷೆ. ಕೇಶಿರಾಜನ ಶಬ್ದಮಣಿದರ್ಪಣ, ನಾಗಣ್ಣನ ಮಾಣಿಕಜಿನಚರಿತ್ರೆ, ಜಿನಪ್ರಭಸೂರಿಯ ಮಾಣಿಕ್ಯಜಿನಕಲ್ಪ ಮೊದಲಾದ ಸಾಹಿತ್ಯ ಕೃತಿಗಳೂ ಈತನ ಚರಿತ್ರೆಯನ್ನು ಪುನರ್ರಚಿಸುವಲ್ಲಿ ತುಂಬ ನೆರವನ್ನು ನೀಡುತ್ತವೆ.

ಈ ವರೆಗೆ ದ್ವಿತಿಯ ಶಂಕರಗಂಡನನ್ನು ಸೂಚಿಸುವ ಒಂಭತ್ತು, ತೃತೀಯ ಶಂಕರಗಂಡನನ್ನು ಸೂಚಿಸುವ ಒಂದು - ಹೀಗೆ ಒಟ್ಟು ಹತ್ತ ಶಾಸನಗಳು ಲಭಿಸಿವೆ. ಅವು:

---

೧. I. A. VII ಪುಟ ೧೬೧. ರಾಷ್ಟ್ರಕೂಟ ೩ನೆಯ ಗೋವಿಂದನ ಅಣ್ಣ ಕಂಭರಾಜನಿಗೆ 'ಶಂಕರಗಣ್ಣ' ಹೆಸರಿನ ಮಗನಿದ್ದನೆಂದು ದೇವನೂರ ಶಾಸನ (EC. III. ನಂಜನಗೂಡು ೨೭೮. ಕನ್ನಡ ಅಧ್ಯಯನ ಸಂಸ್ಥೆ ಪ್ರಕಟನೆ)ದಿಂದ ತಿಳಿದುಬರುತ್ತದೆ.

೨. E. C. III ಮಂಡ್ಯ ೧೦೭ ಕೊತ್ತತ್ತಿ, ಕ್ರಿ.ಶ. ೯೯೭.

೧.	ಖಂಡೇಬಾಗೂರ[3]	-	ಹಿರೇಕೆರೂರ ತಾ - ಇಂದ್ರ III-೯೨೪
೨.	ಲಕ್ಷ್ಮೇಪುರ[4]	-	ಹಾನಗಲ್ಲು ತಾ-ಇಂದ್ರ III - ೯೨೫
೩.	ಹಾವಣಗಿ[5]	-	ಹಾನಗಲ್ಲು ತಾ- ಇಂದ್ರ III
೪.	ಹಾವಣಗಿ[6]	-	ಹಾನಗಲ್ಲು ತಾ- ಇಂದ್ರ III
೫.	ಕ್ಯಾಸನೂರ[7]	-	ಹಾನಗಲ್ಲು ತಾ - ಅಮೋಘವರ್ಷ
೬.	ಕ್ಯಾಸನೂರ[8]	-	ಹಾನಗಲ್ಲು ತಾ - ಕೃಷ್ಣ III
೭.	ತಾಳಗುಂದ[9]	-	ಶಿಕಾರಿಪುರ ತಾ - ಕೃಷ್ಣ III
೮.	ಉಪ್ಪಿನ ಬೆಟಗೇರಿ[10]	-	ಕೊಪ್ಪಳ ತಾ-ಕೃಷ್ಣ III -೯೬೪
೯.	ಕೊಲ್ಲಿಪಾಕಿ[11]	-	ಭುವನಗಿರಿ ತಾ- ವಿಕ್ರಮಾದಿತ್ಯ VI-೧೦೬೭
೧೦.	ಕೊಲ್ಲಿಪಾಕಿ[12]	-	ಭುವನಗಿರಿ ತಾ- ವಿಕ್ರಮಾದಿತ್ಯ VI-೧೦೭೭

ಮೇಲಿನ ೧೦ ಶಾಸನಗಳಲ್ಲಿ ಕೊನೆಯದು ಮಾತ್ರ ತೃತೀಯ ಶಂಕರಗಂಡನಿಗೆ ಸಂಬಂಧಿಸಿದ್ದು, ಆರು ಪ್ರಕಟಿತ, ನಾಲ್ಕು (ಲಕ್ಷ್ಮೇಪುರ, ಹಾವಣಿಗೆ I ಮತ್ತು II. ಕೊಲ್ಲಿಪಾಕಿ I) ಅಪ್ರಕಟಿತ. ಈ ಶಾಸನಗಳಿಂದ ತಿಳಿದುಬರುವ ಸಂಗತಿ ಇಷ್ಟು.

ಉಪ್ಪಿನ ಬೆಟಗೇರಿಶಾಸನ "ಯಾದವವಂಶದೊಳ್ಪಾಣ್ಮ(ಣ)ರ ರಾಜನಾತನ ಮಗಂ ಶಂಕರಗಂಡನಾತನ ಮಗಂ ಬೈಚರಾಜ (ಮಗನಪ್ಪುವರಾಜನ) ನಾತನ ಮಗಂ ಶಂಖಪಯನಾತನ ಮಗಂ ಗೊಮ್ಮರಸನಾತನ ಮಗನಸಗಮರಸನಾತನ ಮಗಂ.... ಶ್ರೀಮತ್ ಶಂಕರಗಂಡಂರಸಂ"[13] ಎಂದು ವಂಶಾವಳಿಯನ್ನು ಕೊಡುತ್ತಿದ್ದು,

---

೩. KI. VI. No. ೪.

೪. ARIE ೧೯೪೭-೪೮, ನಂ. ೨೦೩.

೫-೬. ARIE ೧೯೪೯-೫೪, ನಂ. ೮೬, ೯೦.

೭-೮. EI. XVI. ೨೮೪-೨೮೫; ಕ್ಯಾಸನೂರಿನ ೨ ಶಾಸನಗಳಲ್ಲಿ ಒಂದು ಅಮೋಘವರ್ಷನ ಕಾಲಕ್ಕೆ ಸಂಬಂಧಿಸಿದೆ. ಈತನು ೩ನೆಯ ಕೃಷ್ಣನ ತರುವಾಯ ಆಳಿದ ಕರ್ಕನೆಂದು ಶ್ರೀ ಗೋವಿಂದ ಪೈ (ಮೂರು ಉಪನ್ಯಾಸಗಳು ಪು. ೩೫). ಡಾ. ಪಿ. ಬಿ. ದೇಸಾಯಿ (Jainism in South India and Some Jaina Epigraphs. P. ೩೬೯) ಹೇಳುತ್ತಾರೆ. ಆದರೆ ಈತನು ೨ನೆಯ ಇಲ್ಲವೆ ೩ನೆಯ ಅಮೋಘವರ್ಷನಾಗಿರುವ ಸಂಭವವಿದೆ.

೯. E.C. VII ಶಿಕಾರಿಪುರ. ೧೮೩ ತಾಳಗುಂದ.

೧೦. ಶಾಸನ ಪರಿಚಯ, ಡಾ. ಪಿ. ಬಿ. ದೇಸಾಯಿ, ಪು.೫.

೧೧-೧೨. ARIE ೧೯೬೧-೬೨ ನಂ. ೮೪, ೯೩ ಈ ಶಾಸನಗಳು ೧೧ನೆಯ ಶತಮಾನದಲ್ಲಿ ಹುಟ್ಟಿವೆ. ಇವುಗಳಲ್ಲಿ ಮೊದಲಿನದು ೧೦ನೆಯ ಶತಮಾನದಲ್ಲಿ ಆಗಿಹೋದ ಪ್ರಸ್ತುತ ಶಂಕರಗಂಡನನ್ನು ಪ್ರಸ್ತಾಪಿಸುತ್ತದೆ. ಎರಡನೆಯದು ಬಹುಶಃ ವಿಕ್ರಮಾದಿತ್ಯನ ಕಾಲದ ಮಾಂಡಲಿಕನಾಗಿರಬಹುದಾದ ಇದೇ ವಂಶದ ಬೇರೊಬ್ಬ ಶಂಕರಗಂಡನನ್ನು ಸೂಚಿಸುತ್ತಿರಬಹುದು.

೧೩. ಕಂಸಿನಲ್ಲಿಯ ಪಾಠಗಳು Jainism in South India (ಡಾ. ಪಿ. ಬಿ. ದೇಸಾಯಿ, ಪು, ೩೭೨) ದಲ್ಲಿಯವು.

ಇಲ್ಲಿಯ ಮೊದಲಿನ ಆರು ಜನರ ಬಗೆಗೂ ಏನೂ ತಿಳಿದುಬರುವುದಿಲ್ಲ. ನಮಗೆ ಪ್ರಸ್ತುತನಾದವನು ಈ ವಶಂದ ದ್ವಿತೀಯ ಶಂಕರಗಂಡ. ಈತನದು ಯಾದವವಂಶವೆಂದು ಗೊತ್ತಾಗುತ್ತದೆ. ಯಾದವವಂಶವೆಂಬುದು ರಾಷ್ಟ್ರಕೂಟ ವಂಶದ ಪರ್ಯಾಯನಾಮ. ಕಾರಣ ಈತನದು ರಾಷ್ಟ್ರಕೂಟವಂಶವೆಂದು ಸ್ಪಷ್ಟವಾಗುತ್ತದೆ. ಉಪ್ಪಿನಬೆಟಗೇರಿ, ಹಾವಣಗಿ ಶಾಸನಗಳು "ರಟ್ಟರಮೇರು" ಎಂದೂ, ಕೊಲ್ಲಿಪಾಕಿ ಶಾಸನI "ರಾಷ್ಟ್ರಕೂಟಕುಳತಿಳಕೆಂ" ಎಂದೂ. ಶಾಸನII "ಲತ್ತಲೂರ್ಪುರವರೇಶ್ವರಂ, ರತ್ತಮಾರ್ತಂಡಂ" ಎಂದೂ ಕರೆದು, ಈತನ ರಾಷ್ಟ್ರಕೂಟವಂಶ ಸಂಬಂಧವನ್ನು ಇನ್ನೂ ಖಚಿತಪಡಿಸುತ್ತವೆ.

ಕೊಲ್ಲಿಪಾಕಿಯ ೨ ಶಾಸನಗಳನ್ನು ಬಿಟ್ಟರೆ ಉಳಿಯುವ ಆರಲ್ಲಿ ಖಂಡೇಬಾಗೂರ, ಲಕ್ಷ್ಮೀಪುರ, ಹಾವಣಗಿI, ಹಾವಣಗಿII. ಈ ನಾಲ್ಕೂ ಮೂರನೆಯ ಇಂದ್ರನ; ಕ್ಯಾಸನೂರ I ಎರಡನೆಯ ಅಥವಾ ಮೂರನೆಯ ಅಮೋಘವರ್ಷನ, ಕ್ಯಾಸನೂರ II, ತಾಳಗುಂದ, ಉಪ್ಪಿನ ಬೆಟಗೇರಿ - ಈ ಮೂರು ಮೂರನೆಯ ಕೃಷ್ಣನ ಆಳಿಕೆಯಲ್ಲಿ ಹುಟ್ಟಿವೆ. ಹೀಗೆ ೩ ಜನ ಚಕ್ರವರ್ತಿಗಳ ಕೈಕೆಳಗೆ ರಾಜ್ಯಭಾರ ಮಾಡಿದ ಈತನ ಪ್ರಥಮಶಾಸನವಾದ ಖಂಡೇಬಾಗೂರ ಶಾಸನದ ಕಾಲ ೯೨೪, ಕೊನೆಯದಾದ ಉಪ್ಪಿನಬೆಟಗೇರಿ ಶಾಸನದ ಕಾಲ ೯೬೪. ಈತನು ಕನಿಷ್ಠ ಪಕ್ಷ ೪೦ ವರ್ಷ ರಾಜ್ಯಭಾರ ಮಾಡಿದವನೆಂದು ಇದರಿಂದ ವ್ಯಕ್ತವಾಗುತ್ತದೆ.

ಲಕ್ಷ್ಮೀಪುರ, ಕ್ಯಾಸನೂರು, ತಾಳಗುಂದ ಶಾಸನಗಳಲ್ಲಿ ಒಂದೂ ಬಿರುದಿಲ್ಲ. ಖಂಡೇಬಾಗೂರ, ಕ್ಯಾಸನೂರ ಶಾಸನಗಳು ಕ್ರಮವಾಗಿ "ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಂ", "ಮಹಾಸಾಮಂತಾಧಿಪತಿ" ಎಂದು ಅಧಿಕಾರವನ್ನು ಮಾತ್ರ ಸೂಚಿಸುತ್ತವೆ. ಹಾವಣಗಿಯ ಎರಡೂ ಶಾಸನಗಳು 'ಮಹಾಸಾಮಂತಾಧಿಪತಿ', 'ಜಯಧೀರ', 'ಭುವನೈಕರಾಮ' 'ಅಭಿಮಾನಧವಳ' ಎಂಬ ಬಿರುದುಗಳನ್ನು ಪ್ರಥಮ ಬಾರಿ ಆರೋಪಿಸಿದರೆ, ಇವುಗಳಲ್ಲಿ ಒಂದು ಶಾಸನ 'ರಟ್ಟರಮೇರು' ಎಂಬ ಬಿರುದನ್ನು ಹೆಚ್ಚಿಗೆ ಉಲ್ಲೇಖಿಸಿದೆ. ಉಪ್ಪಿನಬೆಟಗೇರಿ ಶಾಸನ ಸುದೀರ್ಘ ವಂಶಾವಳಿಯೊಂದಿಗೆ "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಾಧಿಪತಿ ಜಯಧೀರ ಭುವನೈಕರಾಮನಭಿಮಾನಧವಳಂ ರಟ್ಟರಮೇರು ರಾಜಭೂರಿಸ್ರವ ವಿದ್ವಿಷ್ಟನಾರಾಯಣ ಸತ್ಯಾರ್ಣವಂ ಧರ್ಮರತ್ನಾಕರಂ " ಎಂಬ ಬಿರುದುಗಳನ್ನು ಹೇಳುತ್ತದೆ.

ಇಂದ್ರನ ಆಳಿಕೆಯಲ್ಲಿ ಹುಟ್ಟಿದ ಖಂಡೇಬಾಗೂರ ಶಾಸನ "ಬನವಾಸಿ ಪನ್ನಿರ್ಚ್ಛಾಸಿರದ ಭಾಗಮನಾಳುತ್ತಮಿರೆ" ಎಂದು ಹೇಳಿದರೆ, ಲಕ್ಷ್ಮೀಪುರ ಶಾಸನ ಆ ಬನವಾಸಿ ಪನ್ನಿರ್ಚ್ಛಾಸಿರ ಪ್ರಾಂತವನ್ನು ಶಂಕರಗಂಡ ಮತ್ತು ಬಂಕೆಯ II ರು ಆಳುತ್ತಿದ್ದರೆನ್ನುತ್ತ, ಆ ಪ್ರಾಂತವನ್ನಾಳುತ್ತಿದ್ದ ಇನ್ನೊಬ್ಬ ಭಾಗಿ ಬಂಕೇಯನೆಂದು ಸ್ಪಷ್ಟಪಡಿಸುತ್ತದೆ. ಆದರೆ ಇದೇ ಇಂದ್ರನ ಕಾಲದ ಹಾವಣಗಿಯ ಎರಡೂ ಶಾಸನಗಳು ಸಮಗ್ರ ಬನವಾಸಿನಾಡನ್ನು ಶಂಕರಗಂಡನೊಬ್ಬನೇ ಆಳುತ್ತಿದ್ದನೆಂದು ಹೇಳುವುದರಿಂದ, ಈಗ ಬಂಕೇಯನ ಭಾಗವೂ ಇವನ ಕೈಕೆಳಗೆ ಬಂದುದು ಸ್ಪಷ್ಟವಾಗುತ್ತದೆ. ಅಮೋಘವರ್ಷನ ಕಾಲಕ್ಕೆ ಹುಟ್ಟಿದ ಕ್ಯಾಸನೂರ ಶಾಸನ, ಕೃಷ್ಣIIIನ ಕಾಲಕ್ಕೆ ಹುಟ್ಟಿದ ಕ್ಯಾಸನೂರ ಮತ್ತು ತಾಳಗುಂದಶಾಸನ ಇವು ಈತನ ಬನವಾಸಿ ಮಂಡಳದ ಆಳಿಕೆಯನ್ನು ಬಿಟ್ಟರೆ ಏನನ್ನೂ ಹೇಳುವುದಿಲ್ಲ. ಉಪ್ಪಿನ ಬೆಟಗೇರಿಶಾಸನ ಮಾತ್ರ ಈತನ ಹೆಚ್ಚಿನ ವಿವರಗಳನ್ನು ಒದಗಿಸುತ್ತದೆ. ಅಂದರೆ ಎಲ್ಲ ಶಾಸನಗಳಲ್ಲಿ ಬೇರೊಬ್ಬರು ಗೈದ ಘಟನೆ, ರಾಜನೆಂಬ ಕಾರಣದಿಂದ ಈತನ ಉಲ್ಲೇಖ ಬಂದಿದ್ದರೆ, ಈ ಉಪ್ಪಿನ ಬೆಟಗೇರಿ ಶಾಸನ ಮಾತ್ರ ನೇರವಾಗಿ ಶಂಕರಗಂಡನ ಧರ್ಮಕಾರ್ಯವನ್ನೂ, ಈತನು ಕೊಪ್ಪಳದಲ್ಲಿ ತನ್ನ ಬಿರುದಿನ ಜಯಧೀರ ಜಿನಾಲಯವನ್ನು ಕಟ್ಟಿಸಿ, ಅದರ ತಳವೃತ್ತಿಗಾಗಿ ಮುನ್ನೂರು ಮತ್ತರು ಭೂಮಿಯನ್ನು ಚಾಳುಕ್ಯ ವಂಶದ ರಾಟ್ಟಯ್ಯನಿಂದ ಪಡೆದು, ದಾನವಾಗಿ ಬಿಟ್ಟನೆಂಬುದನ್ನೂ ಹೇಳುತ್ತದೆ.[೧೪]

ಈ ವರೆಗೆ ನಮ್ಮ ವಿದ್ವಾಂಸರ ಗಮನಕ್ಕೆ ಬಂದಂತೆ ಈತನು ಕಟ್ಟಿಸಿದ ಬಸದಿ, ಬಿಟ್ಟದಾನ ಇದೊಂದೇ. ಆದರೆ ಈ ಒಂದೇ ಒಂದು ಕಾರ್ಯಕ್ಕಾಗಿಯೇ ಪ್ರಸ್ತುತ ಶಾಸನ ಇವನನ್ನು "ಧರ್ಮರತ್ನಾಕರಂ" ಎಂದು ಕರೆಯಿತೇ? ಇಷ್ಟರಿಂದಲೇ ರನ್ನನು ಅಜಿತಪುರಾಣದಲ್ಲಿ

ಪಿರಿಯಂ ಬೂತಗನಾತನಿಂ ಮರುಳನಾತಂಗಂ ನೊಳಂಬಾಂತಕಂ ।
ಪಿರಿಯಂ, ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂ ಕರಂ ।
ಪಿರಿಯಂ, ಶಂಕರಗಂಡನಲ್ತೆ ಪಿರಿಯಂ, ತದ್ಭಾರಮಂ ಪೊತ್ತು ನಿ।
ತ್ತರಸುತ್ತಿಪುರ್ದರಿಂದೆ ನೀನೆ ಪಿರಿಯೈ ಶ್ರೀದಾನಚಿಂತಾಮಣೀ। [೧೫]

ಎಂದು ಆ ಶತಮಾನದ ಅಗ್ರದಾನಿಗಳ ಸಾಲಿನಲ್ಲಿ ಈತನನ್ನು ನಿಲ್ಲಿಸಿದನೇ? ಎಂಬ ಪ್ರಶ್ನೆಗಳು ಏಳುತ್ತವೆ. ಬ್ರಹ್ಮಶಿವನ ಸಮಯಪರೀಕ್ಷೆಯಲ್ಲಿ ಬರುವ

ಪಟ್ಟಣದ ನಡುವೆ ಬೆಳ್ಳಿಯ
ಬೆಟ್ಟಂಗಳನಿಟೆಪ ಜೈನನಿಳಯಂಗಳನೀ ।
ಸೃಷ್ಟಿಯೊಳೆ ಕೂಡೆ ಮಾಡಿದ
ರಟ್ಟಂ ಶಂಖಾವನೀಶನನೆನೆ ಪೊಗಳದರಾರ್ ॥ [೧೬]

ಎಂಬ ಪದ್ಯದಲ್ಲಿಯ ರಟ್ಟ ಶಂಖಾವನೀಶ ಈ ಶಂಕರಗಂಡನೇ ಆಗಿದ್ದ ಪಕ್ಷದಲ್ಲಿ, ಈತನು ಪಟ್ಟಣದ ನಡುವೆ ಬೆಳ್ಳಿಯ ಬೆಟ್ಟಂಗಳನಿಳಿಪ ಜೈನನಿಲಯಗಳನ್ನು ಕಟ್ಟಿಸಿದನೆಂಬ ಸೂಚನೆ ದೊರೆಯುತ್ತದೆಯೇ ಹೊರತು, ಯಾವ ಪಟ್ಟಣದಲ್ಲಿ? ಅಥವಾ ಯಾವ ಪಟ್ಟಣಗಳಲ್ಲಿ? ಎಂಬ ವಿವರ ಸಿಗುವುದಿಲ್ಲ.

ಈ ಪ್ರಶ್ನೆಗಳಿಗೆ ಸಮಾಧಾನವನ್ನು ಸೂಚಿಸುವ ಎರಡು ಶಾಸನಗಳು ಆಂಧ್ರಪ್ರದೇಶದ ಕೊಲ್ಲಿಪಾಕಿಯಲ್ಲಿ ಲಭಿಸುವುದು ತುಂಬಾ ಗಮನಾರ್ಹವಾಗಿದೆ. ಇವುಗಳ ಕಾಲ ಕಲ್ಯಾಣಿಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಳಿಕೆಯ ಕ್ರಿ.ಶ. ೧೦೬೭ ರಿಂದ ೧೦೭೭.

ಮೊದಲನೆಯ ಶಾಸನದ ವಿಷಯ ಹೀಗಿದೆ: ರಾಷ್ಟ್ರಕೂಟವಂಶದ ಪ್ರಸ್ತುತ ಶಂಕರಗಂಡನು ರೇವುಂಡಿ ಮತ್ತು ನೇರಿಲಗಳಲ್ಲಿ ತಾನು ಕಟ್ಟಿಸಿದ್ದ ಬಸದಿಗಳಿಗೆ ಜವ್ವಿಕುಂಟೆ ಮತ್ತು ನಿಡುಂಗಲೂರುಗಳನ್ನು ತಾಮ್ರಶಾಸನಪೂರ್ವಕವಾಗಿ ದಾನನೀಡಿದ್ದನು. ಕಾಲಕ್ರಮದಲ್ಲಿ ಈ ದಾನಗಳು ರದ್ದಾಗಿರಲು ಮತ್ತೆ ಅವನ್ನು ಪುನರುದ್ಧಾರ ಮಾಡಲಾಯಿತು. ಈಗ ಕೊಲ್ಲಿಪಾಕಿ ೭೦೦೦ ನ್ನು ಆಳುತ್ತಿದ್ದವನು, ಮಹಾಸಾಮಂತನಾದ ಮೇಳರಸ.

ಎರಡನೆಯ ಶಾಸನದ ವಿಷಯ ಹೀಗಿದೆ: ಕೊಲ್ಲಿಪಾಕಿ - ೭೦೦೦ ನ್ನಾಳುತ್ತಿದ್ದ ಲತ್ತಲೂರುಪುರವರೇಶ್ವರನಾದ ಮಹಾಮಂಡಲೇಶ್ವರ ಶಂಕರಗಂಡನು, ಕೊಲ್ಲಿಪಾಕಿಯ ನಖರಂಗಗಳು ಅಂಗಡಿಗೆ ಒಂದರಂತೆ ಪ್ರತಿವರ್ಷ ಒಂದು ಪೊನ್ನ ಗದ್ಯಾಣ ಸುಂಕವನ್ನು ಕೊಡಬೇಕೆಂದು ನಿರ್ಣಯಿಸಿದನು. ಈ ಎರಡನೆಯ ಶಾಸನ ೧೧ನೆಯ ಶತಮಾನದ ತೃತೀಯ ಶಂಕರಗಂಡನನ್ನು ಸೂಚಿಸುತ್ತಿದೆ.

---

೧೪. ಈ ರಾಟ್ಟಯ್ಯನ ವಂಶಾವಳಿಯನ್ನು ಸೂಚಿಸುವ ಇನ್ನೊಂದು ಶಾಸನ EC XI ಚಿತ್ರದುರ್ಗ ೭೪, ಬೇವಿನಹಳ್ಳಿಯದಾಗಿದೆ.

೧೫. ಅಜಿತಪುರಾಣ ೧೨-೯.

೧೬. ಸಮಯಪರೀಕ್ಷೆ ೧-೩೭.

ಮೊದಲನೆಯ ಶಾಸನ ನಮಗೆ ಪ್ರಸ್ತುತವಾದ ದ್ವಿತಿಯ ಶಂಕರಗಂಡನನ್ನೇ ಬಹುಶಃ ಸೂಚಿಸುವುದರಿಂದ ಈ ವರೆಗೆ ತಿಳಿದು ಬಂದಂತೆ ಈತನು ಬನವಾಸಿ ಮಂಡಲದಲ್ಲಲ್ಲದೆ, ಕೊಲ್ಲಿಪಾಕಿ-೭೦೦೦ ದಲ್ಲಿಯೂ ಅಧಿಕಾರ ನಡೆಸಿದನೆಂದು ಸ್ಪಷ್ಟವಾಗುತ್ತದೆ. ಆದರೆ ಯಾವ ಅವಧಿಯಲ್ಲಿ ಆಳಿದನೆಂಬುದು ಸಂಶೋಧನಾರ್ಹ ವಿಷಯವಾಗಿದೆ.

ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಅಂದರೆ ಕೊಪ್ಪಳ, ರೇವುಂಡಿ ಮತ್ತು ನೇಲರಿಗಳಲ್ಲಿ ಜಿನಮಂದಿರ ಕಟ್ಟಿಸಿದ ಈತನು ಅಥವಾ ತೃತೀಯ ಶಂಕರಗಂಡನು ರಾಜಧಾನಿ ಕೊಲ್ಲಿಪಾಕಿಯಲ್ಲಿಯೂ ಬಸವದಿಯನ್ನು ನಿರ್ಮಿಸಿರಬಹುದೆ? ಎಂದು ಏಳಬಹುದಾದ ಪ್ರಶ್ನೆಗೆ ಉತ್ತರ ಹೇಳುತ್ತವೆ, ನಾಗಣ್ಣ ಕೃತ ಮಾಣಿಕ ಜಿನೇಶಚರಿತೆ (ಕನ್ನಡ) ಮತ್ತು ಜಿನಪ್ರಭಸೂರಿ ವಿರಚಿತ ಮಾಣಿಕ್ಯಜಿನಕಲ್ಪ.[೧೭]

ಭಾಮಿನಿ ಷಟ್ಪದಿಯಲ್ಲಿ ಬರೆದ ಮಾಣಿಕಜಿನೇಶ ಚರಿತೆ ಸುಮಾರು ೧೭ನೆಯ ಶತಮಾನಕ್ಕೆ ಸಂಬಂಧಿಸಿರಬಹುದು. ಇದರ ಕಥೆ ಹೀಗಿದೆ:

ರಾವಣನ ಪಟ್ಟದರಸಿ ಮಂಡೋದರಿಗೆ ದೇವೇಂದ್ರನು ಮಾಣಿಕ್ಯಜಿನ ಪ್ರತಿಮೆಯನ್ನು ದಯಪಾಲಿಸುತ್ತಾನೆ. ರಾಮಾಯಣ ಯುದ್ಧಪ್ರಸಂಗದಲ್ಲಿ ರಾವಣ ಮಡಿದು ಹೋಗಲು ವೈರಿಗಳ ದಾಳಿಗೆ ಭಯಪಟ್ಟು, ತಾನು ಪ್ರತಿನಿತ್ಯ ಪೂಜಿಸುತ್ತಿದ್ದ ಆ ಪ್ರತಿಮೆಯನ್ನು ಅವಳು ಸಮುದ್ರದಲ್ಲಿ ಮುಚ್ಚಿಡುತ್ತಾಳೆ. ಎಷ್ಟೋ ಶತಮಾನಗಳು ಉರುಳುತ್ತವೆ. ಸಾಗರದಲ್ಲಿ ಮುಳುಗುತ್ತ ಏಳುತ್ತಲಿದ್ದ ಆ ಜಿನಬಿಂಬವನ್ನು[೧೮] ಒಮ್ಮೆ ಬೇಡನೊಬ್ಬನು ನೋಡಿ, ಓರಂಗಲ್ಲು ಪಟ್ಟಣವನ್ನಾಳುತ್ತಲಿದ್ದ ಶಂಕರಗಂಡ ಮಹಾರಾಜನಿಗೆ ಹೇಳುತ್ತಾನೆ. ಮರುದಿನ ಪ್ರತ್ಯಕ್ಷ ಕಂಡ ಶಂಕರಗಂಡ ಅದನ್ನು ರಾಜಧಾನಿಗೆ ತರುವ ಬಗ್ಗೆ ಚಿಂತಿಸುತ್ತಿರಲು, ಒಂದು ರಾತ್ರಿ ಯಕ್ಷದೇವತೆ ಕನಸಿನಲ್ಲಿ ಬಂದು, ಹಿಟ್ಟಿನ ಗಾಲಿ ಜೋಡಿಸಿದ ದಂಟಿನ ಬಂಡಿಯ ಮೇಲೆ ಪತಿವ್ರತೆಯ ಮೂಲಕ ಮಾತ್ರ ಅದನ್ನು ತರಲು ಸಾಧ್ಯವೆಂದು ಹೇಳುತ್ತದೆ. ಮರುದಿನ ಡಂಗುರವನ್ನು ಸಾರುತ್ತಾರೆ. ಆ ಪುರದ ವರ್ತಕನ ಹೆಂಡತಿ ಗುಣವತಿದೇವಿಯ ಪಾತಿವ್ರತ್ಯ ಬಲದಿಂದ ರಾಜಧಾನಿಗೆ ವಿಗ್ರಹವನ್ನು ಹೊತ್ತು ನಡೆದ ಬಂಡಿ, ಕೊಲ್ಲಿಪಾಕಿಯ ಹತ್ತಿರ ಬರುತ್ತದೆ. ಅಷ್ಟರಲ್ಲಿ ಗಗನದೊಳಗೆ ಪಂಚಮಹಾವಾದ್ಯ ಭೋರಿಡಲು, ಶಂಕರಗಂಡ ಚಕಿತನಾಗಿ ಹಿಂತಿರುಗಿ ನೋಡುವುದೇ ತಡ.

"ಮುಂದೆ ನೀ ನಡೆಯಲ್ಕೆ ಬಪ್ಪುದು
ಹಿಂದೆ ನೋಡಿದರಲ್ಲಿ ನಿಲ್ವುದು...."

---

೧೭. ಈ ಹಸ್ತಪ್ರತಿ ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನಭಟ್ಟಾರಕ ಜೈನಬಸದಿಯಲ್ಲಿ ನನಗೆ ಲಭಿಸಿತು. ಇನ್ನೊಂದು ಪ್ರತಿ ಮೈಸೂರು ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿದೆ. ನೋಡಿ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ-೩ ಪು. ೨೮೭.

೧೮. ಪಡುವಣ ವಾರ್ಧಿಯಲ್ಲಿ ಧನು ಪಂಚಶತೋನ್ನತ ಜೈನಬಿಂಬ ವಿ ।
ರ್ದೆಡೆಯ ಜಳಂ ಸುಧಾಸಮಮೆ ಯೋಜನ ವಿಸ್ತೃತಮಲ್ಲಿ ಭಾವಿಸಲ್ ।
ಜಳಚರಮಿಲ್ಲ ತತ್ಪ್ರತಿಮೆ ಪಚ್ಚೆಯ ಬಣ್ಣದಿನುರ್ವಿಗಾವಗಂ।
ತುಡಿಗೆಯೊಲಿರ್ಪುದೆಂದೊಡೆಲೆ ಬಣ್ಣಿಸಲಾರ್ಪರೆ ತೀರ್ಥದಂದಮಂ॥ (ಸಮಯ ಪರೀಕ್ಷೆ ೨-೪೮)
ಈ ಪದ್ಯ ಮಂಡೋದರಿ ಸಮುದ್ರದಲ್ಲಿ ಮುಚ್ಚಿಟ್ಟಿದ್ದ ಮಾಣಿಕಜಿನನನ್ನು ಸೂಚಿಸುತ್ತಿರಬಹುದೆ? ವಿಚಾರಿಸಬೇಕು.

ಎಂದು ಯಕ್ಷದೇವತೆ ನೀಡಿದ್ದ ಸೂಚನೆಯ ಮೇರೆಗೆ ಬಂಡಿ ಗಕ್ಕನೇ ನಿಂತುಬಿಟ್ಟಿತು. ಅನಿವಾರ್ಯವಾಗಿ ಆ ಕೊಲ್ಲಿಪಾಕಿಯಲ್ಲಿಯೇ ಮೂರ್ತಿಯನ್ನು ಪ್ರತಿಷ್ಠಾಪಿಸಿ -

ಸುತ್ತಲಿಹ ಪ್ರಾಕಾರದೊಳಗೆಯು
ಮತ್ತೆ ಗೋಪುರವೆಂಟುಮಾಡಿಸಿ
ವಿಸ್ತರದಿ ಮಧ್ಯದೊಳುವೊಪ್ಪಿರೆ ಜಿನರ ಮಣಿಮಾಡ।
ಹತ್ತಿಸಿದ ಮೇಲ್ಕಟ್ಟು ಚಿತ್ರದಿ
ತೆತ್ತಿಸಿದ ಹೊಂಗಳಸ ಛತ್ರದಿ
ಉತ್ತುಂಗ ಗುಡಿ ಧ್ವಜಪತಾಕೆಯ ನೃಪತಿ ರಚಿಸಿದನು ॥
ಅಲ್ಲಿ ಸ್ಥಾಪಿತಮಾಡಿ ದೇವರ
ಕೊಲ್ಲಿಪಾಕ್ಷವುಯೆಂಬ ಪುರವನು
ಸಲ್ಲೀಲೆಯಿಂದ ರಚಿಸಿದ ಶಂಕರಗಂಡ ಮಹಾರಾಜ ।
ಫುಲ್ಲಲತೆ ಪೂಗೊಳವನಂಗಳು
ಎಲ್ಲ ಠಾವಿನ ವೃತ್ತಿಗ್ರಾಮದ
ಕಲ್ಲಲಕ್ಷರಗಳನೆ ಹೊಯಿಸಿಯೆ ಕೊಟ್ಟ ದೇವರಿಗೆ ॥

ಈ ಪದ್ಯಗಳಲ್ಲಿ ಬಂದ ವರ್ಣನೆಯನ್ನು ಕೊಲ್ಲಿಪಾಕಿಯೊಳಗೆ ಈಗಲೂ ಇರಬಹುದಾದ (ಬಹುಶಃ ಹಿಂದೂ ದೇವಾಲಯವಾಗಿ ಮಾರ್ಪಟ್ಟಿರಬಹುದಾದ ಇಲ್ಲವೆ ಸಂಪೂರ್ಣ ನಾಶವಾಗಿರಬಹುದಾದ) ಮಾಣಿಕ್ಯಜಿನ ಬಸದಿಯೊಂದಿಗೆ ಹೋಲಿಸಿ ನೋಡಬೇಕು. "ಕಲ್ಲಲಕ್ಷರಗಳನೆ ಹೊಯಿಸಿದ"ನೆಂಬ ಮಾತನ್ನು ಪ್ರತಿನಿಧಿಸುವ ಶಿಲಾಶಾಸನಗಳನ್ನು ಹುಡುಕಬೇಕು. ಮತ್ತು ಶಂಕರಗಂಡನು ಓರಂಗಲ್ಲು ರಾಜಧಾನಿಯಿಂದಲೂ ಆಳುತ್ತಿದ್ದನೆಂಬುದಕ್ಕೆ ಆದಾರವನ್ನು ಪತ್ತೆಹಚ್ಚಬೇಕು.[೧೯]

ಇನ್ನೊಂದು ಮಾತು: ಜೈನಮತದ ಭೂತ, ವರ್ತಮಾನ ಮತ್ತು ಭವಿಷ್ಯತ್‌ಕಾಲಗಳಿಗೆ ಸಂಬಂಧಿಸಿದ 72 ಜನ ತೀರ್ಥಂಕರರಲ್ಲಿ ಮಾಣಿಕ್ಯಜಿನ ಎಂಬ ಹೆಸರು ಕಂಡುಬರುವುದಿಲ್ಲವಾದ್ದರಿಂದ, ಶಂಕರಗಂಡ ಸ್ಥಾಪಿಸಿದ ಮಾಣಿಕ್ಯಜಿನ ಯಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮಾಣಿಕ್ಯಜಿನ ಚರಿತೆಯಲ್ಲಿ ಬರುವ

ಮರಕತದ ಸೆಲ್ಲಿಯಿಂದಲೊಪ್ಪುವ
ಎರಡು ಕಡೆಯಲಿ ಚಾಮರ ಮುಕ್ಕೊಡೆ
ಹರಿಪೀಠದಿಂ ಮೇಲೆ ಚತುರಂಗುಲವ ಬಿಟ್ಟಿರ್ಪ
ನಿರುತದಿಂ ತ್ರೈವರ್ಣಮಾಗಿಯೆ
ಧರೆಯೊಳಗೆ ಚೋದ್ಯವನು ತೋರುವ
ಪರಮಮಾಣಿಕಜಿನ . . . . . ॥[೨೦]

---

೧೯. ಈತನು ಬನವಾಸಿ ಮಂಡಲವನ್ನಾಳುವ ಅವಧಿಯಲ್ಲಿ ಆ ಪ್ರದೇಶದಲ್ಲಿಯೂ ಜಿನಮಂದಿರಗಳನ್ನು ಕಟ್ಟಿಸಿರುವ ಸಾಧ್ಯತೆಯಿದೆ.

೨೦. ಮಾಣಿಕ ಜಿನಚರಿತೆ, ೧-೩೮.

ಎಂಬ ಪದ್ಯದಲ್ಲಿಯ 'ಹರಿಪೀಠ' (ಸಿಂಹಪೀಠ) ಎಂಬುದು ಮಹಾವೀರರನ್ನು ಸೂಚಿಸುತ್ತಿದ್ದರೂ ಇದು ಅಷ್ಟು ನೇರವಾದ ಹೇಳಿಕೆಯಿಲ್ಲ. ಕಾರಣ ಈ ತೀರ್ಥಂಕರ ಯಾರೆಂಬ ಬಗೆಗೆ ಕೆಲವು ಊಹೆಗಳನ್ನು ಮಾಡಬಹುದು.

೧. ಜೈನಶಾಸ್ತ್ರದ ಪ್ರಕಾರ ತೀರ್ಥಂಕರರಲ್ಲಿ ಪದ್ಮಪ್ರಭ, ವಾಸುಪೂಜ್ಯರು ಮಾಣಿಕ್ಯವರ್ಣದವರು. ಇವರಲ್ಲಿ ಒಬ್ಬನನ್ನು ಪ್ರತಿಷ್ಠಾಪಿಸಿ, ಮಾಣಿಕಜಿನ ಎಂದು ಇಲ್ಲಿ ಕರೆದಿರುವ ಸಾಧ್ಯತೆಯಿದೆ.

೨.ಸ್ಥಾಪಿಸಿದ ವಿಗ್ರಹ ಜಿನರಲ್ಲಿ ಶ್ರೇಷ್ಠವೆಂದೋ, ಮಾಣಿಕ್ಯದಿಂದ ರಚಿತವಾದುದೆಂದೋ ಮಾಣಿಕಜಿನ ಎಂದು ಅದನ್ನು ಇಲ್ಲಿ ಕರೆದಿರಬಹುದು.

೩. ಅಭಿಧಾನರಾಜೇಂದ್ರ ಹೆಸರಿನ ಜೈನವಿಶ್ವಕೋಶ (ಸಂಪುಟ ೬, ಪು. ೧೪೫)ದಲ್ಲಿ "ಕೋಲಪಾಕಪತ್ತನೇ ಮನ್ನೋದರಿದೇವತಾವಸರೇ ಶ್ರೀವೃಷಭದೇವೆ" ಎಂಬ ಮಾತನ್ನು 'ಮಾಣಿಕ್ಯಜಿನಕಲ್ಪ'ದಿಂದ ಉದ್ಧರಿಸಿರುವುದರಿಂದ ಈ 'ಮಾಣಿಕಜಿನ'ನು ಆದಿತೀರ್ಥಂಕರನಾಗಿರಬಹುದೆಂಬ[೨೧] ಭಾವನೆಯುಂಟಾಗುತ್ತದೆ.

೪. ಈ ಪ್ರಸಂಗದಲ್ಲಿ ಪಂಪನ ಆದಿಪುರಾಣ ನಮಗೆ ಕುತೂಹಲಕಾರಿ ಸಂಗತಿಯನ್ನು ಹೀಗೆ ಹೇಳುತ್ತದೆ:

ಭರತಚಕ್ರವರ್ತಿಯು "ತನ್ನ ಮಾಡಿಸಿದ ಚೈತ್ಯಾಲಯಂಗಳೊಳಾದಿ ಭಟ್ಟಾರಕರಾದಿಯಾಗಿ ಭವಿಷ್ಯತ್ತೀರ್ಥಂಕರ[೨೨] ಪ್ರತಿಕೃತಿಗಳಂ ಮಾಡಿಸಿ ಮಾಣಿಕ್ಯದೇವರೆಂದು ಕೊಂಡಾಡಿ"[೨೩] ದನೆಂಬ ಹೇಳಿಕೆಯೊಂದಿಗೆ ಮಾಣಿಕ್ಯಜಿನ ಸ್ತುತಿಪರ ಪದ್ಯಗಳ ಒಂದು ಅಷ್ಟಕಗುಚ್ಛ, ಆದಿಪುರಾಣದ ೧೬ನೆಯ ಆಶ್ವಾಸದ ಪ್ರಾರಂಭದಲ್ಲಿ ಬರುತ್ತದೆ. ೨೪ ತೀರ್ಥಂಕರರ ಪ್ರತಿಮೆಗಳ ಸ್ತೋಮಕ್ಕೆ ಇಲ್ಲಿ ಮಾಣಿಕ್ಯಜಿನ ಎಂದು ಕರೆಯಲಾಗಿದೆ.ತಾನು ಆಧಾರವಾಗಿಟ್ಟುಕೊಂಡಿರುವ ಜಿನಸೇನರ ಪೂರ್ವಪುರಾಣದಲ್ಲಿ ಇಲ್ಲದ ಈ ಸಂದರ್ಭವನ್ನೂ, ಈ ಹೆಸರಿನ ಜಿನನನ್ನೂ ತನ್ನ ಆದಿಪುರಾಣದಲ್ಲಿ ಹೊಸದಾಗಿ ಕಲ್ಪಿಸಿಕೊಳ್ಳಲು ಕೊಲ್ಲಿಪಾಕಿಯ ಮಾಣಿಕ್ಯಜಿನನೇ ಪಂಪನಿಗೆ ಸ್ಫೂರ್ತಿನೀಡಿರಬಹುದೆ? ಎನಿಸುತ್ತದೆ. ಸಮಕಾಲೀನ ಶಂಕರಗಂಡನಿಂದ ಸ್ಥಾಪಿತವಾದ ಮತ್ತು ತನ್ನ ನೆಲೆಗಳಾದ ಬೋಧನ-ಧರ್ಮಪುರಗಳಿಗೆ ಹತ್ತಿರವಿರುವ ಕೊಲ್ಲಿಪಾಕಿಯ ಈ ಜಿನನಿಂದ ಪಂಪನು ಪ್ರಭಾವಿತನಾಗಿದ್ದುದು

---

೨೧. ಪ್ರಾಕೃತ ವಿದ್ವಾಂಸರು 'ಮಾಣಿಕಜಿನಕಲ್ಪ'ವನ್ನು ಅಭ್ಯಸಿಸುವುದು ಅವಶ್ಯವಾಗಿದೆ.

೨೨. ಪ್ರಥಮ ತೀರ್ಥಂಕರನ ಸಮಕಾಲೀನನಾದ ಭರತನಿಗೆ, ಅಜಿತ ಮೊದಲುಗೊಂಡು ಮಹಾವೀರ ಪರ್ಯಂತ ೨೩ ಜಿನರು ಭವಿಷತ್ ತೀರ್ಥಂಕರರು ಎಂಬುದನ್ನು ಗಮನಿಸಬೇಕು.

೨೩. ಆದಿಪುರಾಣಂ ೧೬-೧ ರಿಂದ ೩೭ ಇಲ್ಲಿಯ
ಪರಿಪೂರ್ಣೋಜ್ವಲ ಚಂದ್ರಬಿಂಬರುಚಿಯಿಂ ಚಂದ್ರಪ್ರಭಂ ಪುಷ್ಪದಂ ।
ತರೆನಲ್ ಗಾರುಡನೀಲಶೋಣಮಣಿಹೇಮಾಚ್ಛಾಯೆಯಿಂದಿರ್ಪತಿ ।
ರ್ವರೆನಲ್ ಸಾಲ್ದೊಡಮೇಕರೂಪಮೆ ಜಗಕ್ಕಾಶ್ಚರ್ಯಮಂ ಪುಟ್ಟಿಸು।
ತ್ತಿರೆ ಮಾಣಿಕ್ಯಜಿನೇಂದ್ರ ಬಿಂಬಮೆ ಜಯಂ ಭದ್ರಂ ಶುಭಂ ಮಂಗಳಂ ।।
ಈ ಪದ್ಯವನ್ನು ಪರಿಭಾವಿಸಬೇಕು.

ನಿಜವಿದ್ದರೆ, ಆದಿಪುರಾಣದ ಕಾಲವಾದ ಕ್ರಿ.ಶ. ೯೪೧ ಕ್ಕೆ ಪೂರ್ವದಲ್ಲಿಯೇ ಶಂಕರಗಂಡನು ಕೊಲ್ಲಿಪಾಕಿಯಲ್ಲಿ ಮಾಣಿಕ್ಯಜಿನಾಲಯ ಕಟ್ಟಿಸಿದುದು ಸಹಜವಾಗುತ್ತದೆ.[೨೪]

ಈ ಎಲ್ಲ ಸಂಗತಿಗಳು ಶಂಕರಗಂಡನ ಬಗ್ಗೆ ನಮಗಿರುವ ತಿಳುವಳಿಕೆಯನ್ನು ಹಿಗ್ಗಿಸುತ್ತವೆ. ಆತನು ಆ ಶತಮಾನದ ಅಗ್ರಮಾನ್ಯ ವ್ಯಕ್ತಿಗಳಲ್ಲೊಬ್ಬನೆಂದು ಸ್ಪಷ್ಟಪಡಿಸುತ್ತವೆ. ಕಾವ್ಯಾವಲೋಕನದಲ್ಲಿ

ಬಲ್ವೆಣನುರ್ಚಿ ಕೋಡೊಳಿರೆ ನೆತ್ತರುರೋಮಣಿಯಿಂ ನೆಲಕ್ಕೆ ಬಾ ।
ನಲ್ವರಿವನ್ನೆಗಂ ಪ್ರಹತದಿಂದಿಜಿದೆತ್ತಿದೊಡಗ್ರಹಸ್ತದೊಳ್ ।
ನೆಲ್ವ ಪೆಣಕ್ಕೆ ಪರ್ದೆಜಿಗೆ ವೈರಿಯ ನಾಲ್ಕು ಬಲಕ್ಕಮೊಂದೆ ಬಂ।
ಬಲ್ವರಿಯುತ್ತಮಿರ್ದುದು ಜಯದ್ವಿರದಂ ಜಯಧೀರ[೨೫] ಭೂಪನಾ ॥[೨೬]

ಎಂಬ ಪದ್ಯವೊಂದು ಬರುತ್ತದೆ. 'ಜಯಧೀರ' ಎಂಬುದು ಶಂಕರಗಂಡನ ಬಿರುದೆಂದು ಉಪ್ಪಿನಬೆಟಗೇರಿ ಹಾಗೂ ಹಾವಣಗಿಯ ಶಾಸನಗಳು ಸ್ಪಷ್ಟಪಡಿಸುತ್ತವೆ. ಕಾರಣ ಜಯಧೀರಭೂಪನ ಗಜಯುದ್ಧವನ್ನು ವರ್ಣಿಸುವ ಈ ಪದ್ಯ ಶಂಕರಗಂಡನನ್ನು ಕುರಿತ ಯಾವುದೋ ಒಂದು ಕಾವ್ಯಕ್ಕೆ ಸಂಬಂಧಿಸಿರಬಹುದು.

ಅವಿಹಿತವೇಗಂ+ಏಟ್ಗೆಯ ಜವಂ, ವ್ರಣಂ+ಅಕ್ಷತಕಾಯಂ, ಎತ್ತಿಕ ।
ಟ್ಟುವಮದಂ+ಉಣ್ಮೆ ಸೋರ್ವ ಸೊನೆ, ಬೀಟ್ಟ ಗಜಧ್ವಜಂ+ಅಂಬರಕ್ಕೆ ನಿ।
ಟ್ಟುವ ಜಯಕೇತು-ಸಂದೆಯದ ದುಂದುಗಮಂ ಕಿಡಿಸಿತ್ತು ಮುಂದಣೋ।
ಡುವ ರಿಪುದಂತಿಗಂ, ಪೆರಗಣಟ್ಟುವ ಜಟ್ಟರಮೇರು ದಂತಿಗಂ॥[೨೭]

ಈ ಪದ್ಯವನ್ನು ಕುರಿತು ಆರ್. ನರಸಿಂಹಾಚಾರ್ಯರು "Some king or chief is also referred to by the title Rattrameru, where elephant is described as chasing the elephant of the enemy. Singandeva, a tributary chief under Trilokya Malla had the title Rattarameru"[೨೮] ಎಂದು ಬರೆದಿದ್ದಾರೆ, ಆದರೆ ಇದು "ರಟ್ಟರಮೇರು" ಬಿರುದಾಂಕಿತನಾದ ಶಂಕರಗಂಡನಿಗೂ ಅನ್ವಯಿಸುತ್ತದೆ.[೨೯] ಇದೇ ರೀತಿ

---

೨೪. ಹುಣಸಿಕಟ್ಟಿ ಶಾಸನದಲ್ಲಿ ಬರುವ ಮುಗುಟಖಾನ ಹುಬ್ಬಳ್ಳಿಯ ಮಾಣಿಕ್ಯಜಿನನನ್ನು ಕುರಿತು ಡಾ. ಪಿ. ಬಿ. ದೇಸಾಯಿ ಅವರು "He at any rate could not have been Parsvanath.... However it is not unlikely that this Manikyadeva Stands for Vardhamana" ಎಂದು ಊಹಿಸುತ್ತಾರೆ. ಇಂಗಳಗಿ ಶಾಸನದಲ್ಲಿ ಬರುವ ಮಹುಮಾಣಿಕ್ಯದೇವ ಮತ್ತು ಮಹುಮಾಣಿಕ್ಯ ಜಿನೇಶ್ವರ ಪದಗಳನ್ನು ಮಹಾಮಾಣಿಕ್ಯ ಎಂದು ತಿದ್ದಿಕೊಂಡು "Such a Jewel or the best among the Tirthankars might be Mahavira" ಎಂದು ಊಹಿಸುತ್ತಾರೆ.

೨೫. 'ಜಯಸಿಂಹ' ಎಂಬ ಪಾಠಾಂತರವಿದೆ.

೨೬. ಕಾವ್ಯಾವಲೋಕನಂ. ೬೮ (ಮೈ. ವಿ. ವಿ. ೧೯೬೭).

೨೭. ಕಾವ್ಯಾವಲೋಕನಂ. ೬೨೦ (ಮೈ. ವಿ. ೧೯೬೭).

೨೮. ಕಾವ್ಯಾವಲೋಕನಂ. Introduction XXII.

೨೯. "ರಟ್ಟರ ಮೇರು" ಎಂಬುದು ರಾಷ್ಟ್ರಕೂಟರ ಆನೆಯ ಹೆಸರೆಂದು ಡಾ. ದ. ರಾ. ಬೇಂದ್ರೆಯವರ ಊಹೆ. ಸಾಹಿತ್ಯ ಸಂಶೋಧನೆ (೧೯೪೦) ಪು. ೧೨೫.

೧. "....ಆನೆಯ ಮೇಲೆಯುಂ ಆಳ ಮೇಲೆಯುಂ
ಕುದುರೆಯ ಮೇಲೆಯುಂ ಪರಿದುದೊಂದು ಗಜಂ ಭುವನೈಕರಾಮನಾ"[೩೦]

೨. "....ಪೆಡಂ ಮೆಟ್ಟದೆ ಸೂಟಿಜೆದುದೇಜೆದಿಭಂ ಭುವನೈಕರಾಮನಾ"[೩೧]

೩. "....ಜವನೇಜೆದೊಂದು ಜ।
ಕ್ಕಂದೊಟಲಂತೆ ಕಣ್ಗೆಸೆದುದೇಜೆಧಿಭಂ ಭುವನೈಕರಾಮನಾ"[೩೨]

೪. ಉದಯಾಸ್ತೋನ್ನತಶೈಲ ಸೇತುಹಿಮವತ್ಕುತ್ಕೀಲ ಪರ್ಯಂತ ಸಂ।
ಪದೆಯಂ, ಪಾರ್ಥಿತರತ್ತರಂಗ ನಿನದತ್ಕಾಂಚೀಕಳಾಪಾಂಚಿತಾ।]
ಸ್ಪದೆಯಂ, ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ।
ರ್ಚಿದ ಗೆಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆರರ್ಗಕ್ಕುಮೇ॥[೩೩]

ಬಹುಶಃ ಪೊನ್ನನ "ಭವನೈಕರಾಮಾಭ್ಯುದಯಂ" ಕಾವ್ಯಕ್ಕೆ ಸಂಬಂಧಿಸಿದ ಈ ಪದ್ಯಗಳು "ಭುವನೈಕರಾಮ" ಬಿರುದಾಂಕಿತರಾದ ರಾಷ್ಟ್ರಕೂಟ ಚಕ್ರವರ್ತಿ ಕೃಷ್ಣ III ಮತ್ತು ರಾಷ್ಟ್ರಕೂಟ ಮಹಾಸಾಮಂತ ಶಂಕರಗಂಡ ಇಬ್ಬರಿಗೂ ಅನ್ವಯಿಸುತ್ತವೆ.[೩೪] ಕಾರಣ ಪೊನ್ನನ "ಭುವನೈಕರಾಮಾಭ್ಯುದಯ"ದ ಕಥಾನಾಯಕ ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನೆಂದು ಆರ್.ನರಸಿಂಹಚಾರ್ ಹೇಳಿದರೆ, ಶಂಕರಗಂಡನೆಂದು ಡಿ.ಎಲ್.ನರಸಿಂಹಚಾರ್ ಹೇಳುತ್ತಾರೆ. ಹೀಗಾಗಿ ಈತನು ಈ ಮಹಾಕಾವ್ಯಕ್ಕೆ ಕಥಾನಾಯಕನೆಂಬುದು ಇನ್ನೂ ಸಂದೇಹ: ಆದರೆ ಮಹಾಕಾವ್ಯಕ್ಕೆ ವಸ್ತುವಾಗಬಲ್ಲ ವ್ಯಕ್ತಿಯೆಂಬುದು ಸತ್ಯ.[೩೫]

■■

---

೩೦. ಶಬ್ದಮಣಿದರ್ಪಣಂ. ಸೂ. ೧೩೦ (೧೯೬೪).

೩೧. ಶಬ್ದಮಣಿದರ್ಪಣಂ. ಸೂ. ೧೮೪ (೧೯೬೪).

೩೨. ಶಬ್ದಮಣಿದರ್ಪಣಂ. ಸೂ. ೧೮೩ (೧೯೬೪). ಇದಕ್ಕೆ 'ಚಲದಂಕರಾಮನಾ' ಎಂಬ ಪಾಠಾಂತರವೂ ಇದೆ.

೩೩. ಶಬ್ದಮಣಿದರ್ಪಣ: ಸೂ. ೧೬೭ (೧೯೬೪).

೩೪. ಕಕಚ (೧೯೬೧) ಅನು II ಪುಟ ೩೨ ಮತ್ತು ಪ್ರ. ಕ. ೧೫-೨. ಶ್ರೀ. ಆರ್. ನರಸಿಂಹಾಚಾರ್ ಅವರನ್ನು ಬೆಂಬಲಿಸಿ ಡಾ. ದ. ರಾ. ಬೇಂದ್ರೆ (ಸಾಹಿತ್ಯ ಸಂಶೋಧನ), ಡಾ. ಎಂ.ಆರ್.ಉಮಾದೇವಿ (ಕವಿಚಕ್ರವರ್ತಿ ಪೊನ್ನ) ಅವರೂ ಶ್ರೀ ಡಿ. ಎಲ್. ನರಸಿಂಹಾಚಾರ್ ಅವರನ್ನು ಬೆಂಬಲಿಸಿ ಡಾ. ಎಂ.ಬಿ.ಭೋಯಿ (ಕ. ಭಾ. ೩-೨) ಅವರೂ ಕೆಲವು ಹೊಸ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ.

೩೫. ಈ ಲೇಖನದ ವಿಷಯವಾಗಿ ತಮ್ಮೊಡನೆ ಚರ್ಚೆಗೆ ಅವಕಾಶ ಮಾಡಿಕೊಟ್ಟು "ಅಭಿಧಾನರಾಜೇಂದ್ರ"ದತ್ತ ನನ್ನ ಗಮನ ಹರಿಯುವಂತೆ ಮಾಡಿದ ದ. ರಾ. ಬೇಂದ್ರೆ ಅವರಿಗೆ ವಂದನೆಗಳು.

ಆಕರ : ಮಾರ್ಗ ಸಂಪುಟ–೩

೭೫

ಶಂಕರಗಂಡ: ಇನ್ನಷ್ಟು ಸಂಗತಿಗಳು

ಹತ್ತನೆಯ ಶತಮಾನದ ಕರ್ನಾಟಕದ ರಾಜಕೀಯ ಸಂದರ್ಭದಲ್ಲಿ ಅಭ್ಯಾಸಿಗಳ ತೀವ್ರ ಗಮನ ಸೆಳೆಯುವ ಗಂಭೀರವ್ಯಕ್ತಿ ದ್ವಿತೀಯ ಶಂಕರಂಗಂಡ. ಇವನ ಬಗ್ಗೆ ಸಾಹಿತ್ಯ ಮತ್ತು ಶಾಸನಗಳಲ್ಲಿ ಸಿಗುವ ಅಂಶಗಳನ್ನು ಸಂಗ್ರಹಿಸಿ "ಶಂಕರಗಂಡ" ಹೆಸರಿನ ಲೇಖನವನ್ನು ಬರೆದು ಪ್ರಕಟಿಸಿದ್ದೆನು (ಮಾರ್ಗ-I ಪು. ೮೫). ಆಗ ಈ ಕೆಳಗಿನ ೧೦ ಶಾಸನಗಳನ್ನು ಗಮನಿಸಲಾಗಿದ್ದಿತು.

೧. ಖಂಡೇಬಾಗೂರ-ಹಿರೇಕೆರೂರ ತಾ-ಇಂದ್ರ ೩-೯೨೪

೨. ಲಕ್ಷ್ಮೇಪುರ-ಹಾನಗಲ್ಲು ತಾ-ಇಂದ್ರ ೩-೯೨೫

೩. ಹಾವಣಗಿ I -ಹಾನಗಲ್ಲು ತಾ-ಇಂದ್ರ ೩-೯೨೫

೪. ಹಾವಣಗಿ II -ಹಾನಗಲ್ಲು ತಾ-ಇಂದ್ರ ೩-೯೨೫

೫. ಕ್ಯಾಸನೂರು I -ಹಾನಗಲ್ಲು ತಾ-ಅಮೋಘವರ್ಷ

೬. ಕ್ಯಾಸನೂರು II -ಹಾನಗಲ್ಲು ತಾ-ಕೃಷ್ಣ ೩

೭. ತಾಳಗುಂದ-ಶಿಕಾರಿಪುರ ತಾ-ಕೃಷ್ಣ ೩

೮. ಉಪ್ಪಿನಬೆಟಗೇರಿ-ಕೊಪ್ಪಳ ತಾ-ಕೃಷ್ಣ ೩-೯೬೪

೯. ಕೊಲ್ಲಿಪಾಕಿ I -ಭುವನಗಿರಿ ತಾ-ವಿಕ್ರಮಾದಿತ್ಯ ೩-೧೦೬೭

೧೦. ಕೊಲ್ಲಿಪಾಕಿ II -ಭುವನಗಿರಿ ತಾ-ವಿಕ್ರಮಾದಿತ್ಯ ೩-೧೦೭೭

ಇವುಗಳಲ್ಲಿ ತೃತೀಯ ಶಂಕರಗಂಡನಿಗೆ ಸಂಬಂಧಿಸಿದ ೧೦ನೆಯ ಶಾಸನ (ಕೊಲ್ಲಿಪಾಕಿ II) ಅಪ್ರಕಟಿತ. ಇದನ್ನು ಬಿಟ್ಟರೆ ಉಳಿಯುವ ದ್ವಿತೀಯ ಶಂಕರಗಂಡನಿಗೆ ಸಂಬಂಧಿಸಿದ ೯ಶಾಸನಗಳಲ್ಲಿ ನಾಲ್ಕು (ಲಕ್ಷ್ಮೇಪುರ, ಹಾವಣಗಿ I ಮತ್ತು II, ಕೊಲ್ಲಿಪಾಕಿ I) ಅಪ್ರಕಟಿತ, ಐದು ಪ್ರಕಟಿತವೆಂದು ಆ ಲೇಖನದಲ್ಲಿ ಹೇಳಲಾಗಿದ್ದಿತು. ಈಗ ಇಲ್ಲಿ ಹೇಳಲಾದ ಐದೂ ಅಪ್ರಕಟಿತ ಶಾಸನಗಳು ಪ್ರಕಟವಾಗಿ ಒಂದಿಷ್ಟು ಹೊಸ ವಿಷಯ ಹೀಗೆ ಬೆಳಕಿಗೆ ಬಂದಿದೆ:

ಇತ್ತೀಚೆ ಕನ್ನಡವಿಶ್ವವಿದ್ಯಾಲಯ ಪ್ರಕಟಿಸಿರುವ ಆಂಧ್ರಪ್ರದೇಶದ ಕನ್ನಡ ಶಾಸನಗಳು ಕೃತಿಯು ಎರಡನೆಯ ಸಂಪುಟದಲ್ಲಿ ಮೇಲೆ ಹೇಳಿದ ಕೊಲ್ಲಿಪಾಕಿಯ ಎರಡೂ ಶಾಸನಗಳು ಪ್ರಕಟವಾಗಿವೆ. (ನಂ ೫೭೫ ಕ್ರಿ. ಶ. ೧೦೬೭ ಮತ್ತು ನಂ ೫೬೦ ಕ್ರಿ.ಶ. ೧೦೭೭). ದ್ವಿತೀಯ ಶಂಕರಗಂಡ ಮಹಾಸಾಮಂತನಾಗಿದ್ದರೆ, ತೃತೀಯ ಶಂಕರಗಂಡ ಪದೋನ್ನತಿ ಪಡೆದು

ಮಂಡಲೇಶ್ವರನಾಗಿರುವುದನ್ನು ಈ ಎರಡೂ ಶಾಸನಗಳು ತಿಳಿಸುತ್ತವೆ. ಮೈಲಾರದೇವರ ಲಬ್ಧವರ ಪ್ರಸಾದಂ (ನಂ ೫೬೦)ಎಂಬ ವಿಶೇಷಣವು, ಮೂಲತಃ ಜೈನಮತೀಯನಾಗಿದ್ದ ತೃತೀಯ ಶಂಕರಗಂಡನು ಬಹುಶಃ ಜೈನೇತರ(ಶೈವ)ಮತೀಯನಾಗಿ ಮಾರ್ಪಟ್ಟುದನ್ನು ಸೂಚಿಸುತ್ತದೆ.

ಇದಲ್ಲದೆ ಶ್ರೀಮತಿ॥ ಹನುಮಾಕ್ಷಿ ಗೋಗಿಯವರ "ಅನುಶಾಸನ-ಸಂಪುಟ ೧" ಕೃತಿಯಲ್ಲಿ ಲಕ್ಷ್ಮೀಪುರ, ಹಾವಣಗಿ I, ಹಾವಣಗಿ II ಹೀಗೆ ಈ ವರೆಗೆ ಅಪ್ರಕಟಿತವಾಗಿದ್ದ ಮೂರೂ ಶಾಸನಗಳು ಪ್ರಕಟವಾಗಿವೆ. ಇವುಗಳಲ್ಲಿ ಲಕ್ಷ್ಮೀಪುರ ವೀರಗಲ್ಲು ಶಾಸನವು ರಾಷ್ಟ್ರಕೂಟ ಇಂದ್ರ IIIನ ಆಳ್ವಿಕೆಯಲ್ಲಿ ಬನವಾಸಿ ೧೨೦೦೦ ನಾಡನ್ನು ಶಂಕರಗಂಡ ಮತ್ತು ಬಂಕೇಯರು ಭಾಗಮಾಡಿಕೊಂಡು ಆಳುತ್ತಿರುವಾಗ ಅಜವರ್ಮರಸನು ನಾಳ್ಗಾವುಂಡನಾಗಿರುವ ಸಮಯದಲ್ಲಿ ಕಾದಾಡಿ ಮಡಿದ ಮಾಸರ ಎಂಬವನಿಗೆ ಅವನ ಮಕ್ಕಳು ವೀರಗಲ್ಲು ನಿಲ್ಲಿಸಿದುದನ್ನು ತಿಳಿಸುತ್ತದೆ. ಹಾವಣಗಿ I ಶಾಸನವು ರಾಷ್ಟ್ರಕೂಟ ಇಂದ್ರ IIIನ ಆಳ್ವಿಕೆಯಲ್ಲಿ ಶಂಕರಗಂಡನು ಬನವಾಸಿಯನ್ನಾಳುತ್ತಿರುವುದನ್ನೂ (ಸ್ರ)ಜ್ಜನಿನ್ದಪಯ್ಯನ ಮಗ ಸ್ರ(?)ಬುರ್ಚುವಿಟ್ಟ(ದೆಯ), ಸ್ರ(?)ಪ್ಪನ-ಇವರನ್ನು ಹೆಸರಿಸುತ್ತದೆ. ಹಾವಣಗಿ IIನೆಯ ಶಾಸನವು ರಾಷ್ಟ್ರಕೂಟ ಇಂದ್ರ IIIನ, ಬನವಾಸಿಯನ್ನಾಳುವ ಶಂಕರಗಂಡನ, ದಾನ ನೀಡಿದ ಮಾರವಣ್ಣನ ವಿವರ ಒದಗಿಸುತ್ತದೆ. ಒಟ್ಟಾರೆ ತನ್ನ ಮೊದಲಿನ ಲೇಖನದಲ್ಲಿ ಸೂಚಿಸಿದ್ದ ಅಪ್ರಕಟಿತವಾಗಿದ್ದ ಐದೂ ಶಾಸನಗಳು ಅಂದರೆ ಎಲ್ಲ ಹತ್ತೂ ಶಾಸನಗಳು ಪ್ರಕಟವಾಗಿ, ಶಂಕರಗಂಡನ ಬಗೆಗಿನ ನಮ್ಮ ತಿಳಿವಳಿಕೆಗಳನ್ನು ವಿಸ್ತರಿಸಿವೆ.

ಇವುಗಳನ್ನು ಬಿಟ್ಟರೆ "ಆಂಧ್ರಪ್ರದೇಶದ ಶಾಸನಗಳು" ಕೃತಿಯ ೨ನೆಯ ಸಂಪುಟ ಈ ಕೆಳಗಿನಂತೆ ಹೆಚ್ಚಿನ ಸಂಗತಿಗಳನ್ನು ಒದಗಿಸುತ್ತದೆ. ಅಂದರೆ ಇಲ್ಲಿಯ ಅಕನೂರು, ಜಫರ್ಘಡ್ ಮತ್ತು ತುಮ್ಮಲಗೂಡೆಂ ಶಾಸನಗಳಲ್ಲಿಯೂ ದ್ವಿತೀಯ ಶಂಕರಗಂಡನ ಉಲ್ಲೇಖವಿದೆ. ಅಕನೂರ(ಜನಗಾಂ ತಾಲೂಕು, ವರಂಗಲ್ಲ ಜಿಲ್ಲೆ) ಶಾಸನದಲ್ಲಿ[೧] ದ್ವಿತೀಯ ಶಂಕರಗಂಡನು ಕೊಲ್ಲಿಪಾಕೆಯನ್ನಾಳುತ್ತಲಿರುವಾಗ ಇಂದಪಯ್ಯ ಅಕನೂರನ್ನಾಳುತ್ತಿದ್ದನು; ಬಸದಿಗೆ ದಾನ ನೀಡಲಾಯಿತು; ಎಂದು ಹೇಳಲಾಗಿದೆ; ತೇದಿ ದಾಖಲಿಸಿಲ್ಲ. ಜಫರ್ಘಡ್ (ಜನಗಾಂ ತಾಲೂಕು, ವರಂಗಲ್ಲ ಜಿಲ್ಲೆ)ಶಾಸನದಲ್ಲಿ ದ್ವಿತೀಯ ಶಂಕರಗಂಡನು ವೇಲ್ಪುಗೊಂಡ ಬೆಟ್ಟದ ಮೇಲೆ ಕೆರೆ ಕಟ್ಟಿಸಿದುದನ್ನು ದಾಖಲಿಸಲಾಗಿದೆ.[೨] ಇಲ್ಲಿಯೂ ತೇದಿ ಹೇಳಿಲ್ಲ.

ತುಮ್ಮಲಗೂಡೆಂ (ರಾಮನ್ನಪೇಟೆ ತಾಲೂಕು, ನಲ್ಗೊಂಡ ಜಿಲ್ಲೆ) ಶಾಸನವು[೩] ಅಲ್ಲಿಯ ಜೈನದೇವಾಯದ ಕಂಬದ ಮೇಲಿದೆ. ಗೋಡೆಗೆ ಹೊಂದಿಕೊಂಡಿರುವ ಶಾಸನದ ಮುಖದಲ್ಲಿ ತೇದಿ ಇರಬಹುದು. "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮನ್ತಾಧಿಪತಿ, ಜಯಧೀರ, ಭುವನಯ್ಕರಾಮನಭಿಮಾನಧವಳಂ ರಟ್ಟರಮೇರು ರಾಜಭೂರಿಶ್ರವ ವಿದ್ವಿಷ್ಟ ನಾರಾಯಣ ಧರ್ಮರತ್ನಾಕರ ಶ್ರೀಮತ ಸಂಕರಗಂಡರಸ ಜಯಧೀರ ಜಿನಾಲಯ"ಕ್ಕೆ ಬೇರೊಬ್ಬರು

---

೧. ಆಂಧ್ರಪ್ರದೇಶದ ಕನ್ನಡ ಶಾಸನಗಳು -II- ೪೧೮ (೧೦ನೆಯ ಶತಮಾನ)
೨. ಆಂಧ್ರಪ್ರದೇಶದ ಕನ್ನಡ ಶಾಸನಗಳು -II - ೪೩೦ (೧೦ನೆಯ ಶತಮಾನ)
೩. ಆಂಧ್ರಪ್ರದೇಶದ ಕನ್ನಡ ಶಾಸನಗಳು -II- ೫೩೨ (೧೦ನೆಯ ಶತಮಾನ)

ದಾನನೀಡಿರುವರೋ, ಶಂಕರಗಂಡನೇ ದಾನನೀಡಿರುವನೋ ಸ್ಪಷ್ಟವಾಗುವುದಿಲ್ಲ. ಅದೇನೇ ಇದ್ದರೂ ಇಲ್ಲಿಯ ಬಿರುದನ್ನಾಧರಿಸಿ ಈತನು ದ್ವಿತೀಯ ಶಂಕರಗಂಡನೆಂದು ಹೇಳಬಹುದು. ಈತನು ಕೊಪ್ಪಳದಲ್ಲಿಯೂ ಜಯಧೀರ ಹೆಸರಿನ ಜಿನಾಲಯ ಕಟ್ಟಿಸಿದುದಾಗಿ ಉಪ್ಪಿನಬೆಟಗೇರಿ ಶಾಸನ ತಿಳಿಸುವುದನ್ನು ಇಲ್ಲಿ ಸ್ಮರಿಸಬೇಕು.

*****

ಈ ಮೂರು ಶಾಸನಗಳನ್ನು ಬಿಟ್ಟರೆ ಓರಂಗಲ್ಲು ಪ್ರತಾಪರುದ್ರನ ಕಾಲದ ಕೊಲ್ಲಿಪಾಕೆಯ ಜೈನಮಂದಿರದ ಪ್ರಾಕಾರ ಗೋಡೆಯ ಶಾಸನ(ಆಂಧ್ರಪ್ರದೇಶದ ಕನ್ನಡ ಶಾಸನಗಳು – II, ೫೪೮)ದಲ್ಲಿ "ರಾಷ್ಟ್ರಕುಲತಿಲಕ ಕೊಲಿಪಾಕಾ ಪುರವರಾಧೀಶ್ವರ ಶ್ರೀಮತ್ಸ್ವಯಂಭೂ ಮಾಣಿಕ್ಯತೀರ್ಥೇಶ್ವರ" ಎಂಬ ಉಲ್ಲೇಖವಿದೆ. ಶಂಕರಗಂಡನು ಕೊಲ್ಲಿಪಾಕಿಯಲ್ಲಿ ಮಾಣಿಕ್ಯಜಿನಾಲಯ ಕಟ್ಟಿಸಿರುವನೆಂದು ಕನ್ನಡ ಮಾಣಿಕ ಜಿನಚರಿತೆ ತಿಳಿಸುತ್ತಿದ್ದು, ಅದು ಈ ಶಾಸನೋಕ್ತ ಮಾಣಿಕ್ಯತೀರ್ಥೇಶ್ವರನೇ ಆಗಿರಬಹುದು.[೪]

ಕೊಲ್ಲಿಪಾಕೆಯ ಇನ್ನೊಂದು ಶಾಸನ(ಆಂಧ್ರಪ್ರದೇಶದ ಕನ್ನಡ ಶಾಸನಗಳು II–೫೪೯)ದಲ್ಲಿ "ರಾಷ್ಟ್ರಕೂಟ ತಿಳಿಕೋನ್ನತಿ ಸ......ನ್ನುತ ಜಿನ[ಗೇಹ]ದೊಳ್" ಎಂಬ ಪಠ್ಯವಿದ್ದು, ಇದೂ ಶಂಕರಗಂಡ ಕಟ್ಟಿಸಿದ ಮಾಣಿಕ್ಯಜಿನಾಲಯವನ್ನೇ ಸೂಚಿಸಿತ್ತಿರಬಹುದು.[೫]

ಶಂಕರಗಂಡನ ಪೂರ್ವಜರಲ್ಲಿ ಅಸಗಮರಸನ ಉಲ್ಲೇಖ ಉಪ್ಪಿನ ಬೆಟಗೇರಿ ಶಾಸನದಲ್ಲಿ ಬರುತ್ತದೆ. ಈ ಮನೆತನದ ಉತ್ತರಕಾಲೀನ ತಲೆಮಾರಿನಲ್ಲಿಯೂ ಒಬ್ಬ ವ್ಯಕ್ತಿಗೆ ಈ ಹೆಸರನ್ನಿಟ್ಟಿದ್ದು, ಈ ವಂಶದ ಪಾರಂಪರಿಕ ಬಿರುದಿನೊಂದಿಗೆ ಈತನ ಉಲ್ಲೇಖ, ಮತ್ತು ಈತನ ಹೆಸರಿನ ಅಸಗೇಶ್ವರದೇವಾಲಯದ ಉಲ್ಲೇಖ ಇದೇ ಸಂಪುಟದ ಈ ಕೆಳಗಿನ ಶಾಸನಗಳಲ್ಲಿ ಬರುತ್ತದೆ.

೧. ನಂ ೫೫೫ ಕೊಲ್ಲಿಪಾಕಿ ಕ್ರಿ. ಶ. ೧೦೭೭
೨. ನಂ ೫೪೯ ಕೊಲ್ಲಿಪಾಕಿ ಕ್ರಿ. ಶ. ೧೦೭೪
೩. ನಂ ೫೭೨ ಕೊಲ್ಲಿಪಾಕಿ ಕ್ರಿ. ಶ. ೧೦೭೫
೪. ನಂ ೫೭೭ ಕೊಲ್ಲಿಪಾಕಿ ಕ್ರಿ. ಶ. ೧೦೭೦
೫. ನಂ ೫೨೭ ಚಿಲ್ಲೂಕುರು ಕ್ರಿ. ಶ. ೧೧೦೩
೬. ನಂ ೫೨೮ ಚಿಲ್ಲೂಕುರು ಕ್ರಿ. ಶ. ೧೦೬೭
೭. ನಂ ೫೨೯ ಚಿಲ್ಲೂಕುರು ?
೮. ನಂ ೫೩೦ ಚಿಲ್ಲೂಕುರು ?

ಇವುಗಳಲ್ಲಿ ೫೨೭ ಮತ್ತು ೫೨೯ನೆಯ ನಂಬರಿನ ಶಾಸನಗಳು ಅಸಗೇಶ್ವರದೇವರನ್ನು, ಧ್ರುವೇಶ್ವರಪಂಡಿತರಿಗೆ ದಾನನೀಡಿದುದನ್ನು, ೫೨೮ನೆಯ ಶಾಸನ ಅಸಗೇಶ್ವರದೇವರ ಪ್ರತಿಷ್ಠೆಯನ್ನು

---

೪. ಆಂಧ್ರಪ್ರದೇಶದ ಕನ್ನಡ ಶಾಸನಗಳು –II– ೫೪೮ (೧೦ನೆಯ ಶತಮಾನ)
೫. ಆಂಧ್ರಪ್ರದೇಶದ ಕನ್ನಡ ಶಾಸನಗಳು –II– ೫೪೯(೧೦ನೆಯ ಶತಮಾನ)

ಸೂಚಿಸುತ್ತವೆ. ಈ ಅಸಗಮರಸರು ಕಲ್ಯಾಣ ಚಾಲುಕ್ಯರ ಮಂಡಳೇಶ್ವರನಾಗಿ ಕೊಲ್ಲಿಪಾಕಿಯಿಂದ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಹೆಚ್ಚಿನದಾಗಿ ಇವನಿಗಿರುವ ಪರಮ ಮಾಹೇಶ್ವರ ಎಂಬ ಬಿರುದೂ, ಇವನ ಹೆಸರಿನ ಅಸಗೇಶ್ವರ ದೇವಾಲಯವೂ, ಇದಕ್ಕೆ ಧ್ರುವೇಶ್ವರಪಂಡಿತರೆಂಬ ಕಾಳಾಮುಖರು ಆಚಾರ್ಯರಾಗಿರುವುದೂ, ಈತನ ತಲೆಮಾರಿನಲ್ಲಿ ಈ ಮನೆತನ ಶೈವಕ್ಕೆ ಮತಾಂತರ(ಒಕ್ಕಲು)ವಾದುದನ್ನು ಸೂಚಿಸುತ್ತದೆ.

ಶಂಕರಗಂಡನ ಪೂರ್ವಜರಲ್ಲಿ ಗೊಮ್ಮರಸನೆಂಬವನ ಹೆಸರು ಉಪ್ಪಿನಬೆಟಗೇರಿ ಶಾಸನದಲ್ಲಿದೆ. ಮಂಡಲಿಕ ಗೋಮರಸನೆಂಬವನನ್ನು ಮತ್ತು ಈತನು ವಿ(ಱ?)ಟ್ಟಕುಲತಿಲಕ ಜಿನಾಲಯಕ್ಕೆ ದಾನನೀಡಿದುದನ್ನು ಈ ಸಂಪುಟದ ನಂ ೫೭೯, ಕ್ರಿ. ಶ. ೧೦೯೩ರ ಕೊಲ್ಲಿಪಾಕೆ ಶಾಸನ ತಿಳಿಸುತ್ತದೆ. ಕೊಲ್ಲಿಪಾಕಿ ಶಾಸನೋಕ್ತ ಈ ಗೋಮರಸನು ಶಂಕರಗಂಡನ ಉತ್ತರ ವಂಶೀಯನಾಗಿರಬಹುದುದಾಗಿದೆ.

ಒಟ್ಟಾರೆ, ರಾಷ್ಟ್ರಕೂಟರ ಸಾಮಂತನಾಗಿದ್ದ ದ್ವಿತೀಯ ಶಂಕರಗಂಡನ ಉತ್ತರಕಾಲೀನ ವಂಶಸ್ಥರು ಜೈನದಿಂದ ಶೈವಕ್ಕೆ ಮತಾಂತರಗೊಂಡಿದ್ದರೆಂದೂ, ಕೊಲ್ಲಿಪಾಕಿ ರಾಜಧಾನಿಯಿಂದ ಕಲ್ಯಾಣಚಾಲುಕ್ಯರ ಕೈಕೆಳಗೆ (ಶಂಕರಗಂಡ ೩, ಅಸಗಮರಸ, ಗೋಮರಸ) ಮಾಂಡಳಿಕರಾಗಿ ಆಳುತ್ತಲಿದ್ದರೆಂದೂ ಹೇಳಬಹುದಾಗಿದೆ.

*****

ಹತ್ತನೆಯ ಶತಮಾನದ ಕರ್ನಾಟಕ ಕ್ಷಿತಿಜದ ಮೇಲೆ ಕಾಣಿಸಿಕೊಂಡ ಮಹಾದಾನಿಗಳನ್ನು ಬೂತುಗ, ಮರುಳ, ನೊಳಂಬಾತಕ ಮಾರಸಿಂಹ, ಚಾವುಂಡರಾಯ, ಅತ್ತಿಮಬ್ಬೆಯೆಂದು ರನ್ನನ ಅಜಿತಪುರಾಣ (೧೨-೯)ಹೀಗೆ ತಿಳಿಸುತ್ತದೆ.

ಪಿರಿಯಂ ಬೂತುಗನಾತನಿಂ ಮರುಳನಾತಂಗಂ ನೊಳಂಬಾಂತಕಂ
ಪಿರಿಯಂ ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂ ಕರಂ
ಪಿರಿಯಂ ಶಂಕರಗಡನಲ್ತೆ ಪಿರಿಯಂ ತದ್ಭಾರಮಂ ಪೊತ್ತು ನಿ
ತ್ತರಿಸುತ್ತಿರ್ಪುದರಿಂದೆ ನೀನೆ ಪಿರಿಯೈ ಶ್ರೀದಾನಚಿಂತಾಮಣೀ॥

ಈ ಹೆಸರುಗಳನ್ನು ಬಳಸಿಕೊಂಡು ಮುಂದುವರಿಸುವ ರೀತಿಯಲ್ಲಿ ೧೦೩೦ರ ಕೊಪ್ಪಳ ಶಾಸನವೊಂದು ರೇವಕನಿಮ್ಮಡಿಯನ್ನು ಹೀಗೆ ಹೊಗಳುತ್ತದೆ.

ಜನಪತಿ ಬೂತುಗಂ ನೆಗಳ್ದ ಸಂಕರಗಂಡನ ಮಾರಸಿಂಹದೇ
ವನ ಮಹಿಮಾಸ್ಪದಂ ಮರುಳದೇವನ ರಾಯನ ರಾಜಮಲ್ಲದೇ
ವನ ಗುಣದಂಕಕಾರ್ತಿಯ ಪರೋಕ್ಷದೊಳೀ ಜಿ[ನನಾ]ಥ ಧರ್ಮಮು
ಳ್ಳನಿತುಮನಾಂತು [ನಿ]ತ್ತರಿಪ ರೇವಕನಿರ್ಮಡಿಯೇಂ ಕೃತಾ[ರ್ಥೆ]ಯೋ॥[೬]

೬. ಕೊಪ್ಪಳಜಿಲ್ಲೆಯ ಶಾಸನಗಳು, ಕೊಪ್ಪಳ-೧೨೫ ಕೊಪ್ಪಳ, ೧೦೩೦

ಇಲ್ಲಿ ಬೂತುಗ, ಶಂಕರಗಂಡ, ಮಾರಸಿಂಹ, ಮರುಳದೇವ, (ಚಾವುಂಡ)ರಾಯ, ರಾಜಮಲ್ಲದೇವ, ಗುಣದಂಕಕಾರ್ತಿ (ಅತ್ತಿಮಬ್ಬೆ)ಯರ ದಾನವನ್ನು ಎತ್ತಿಹೇಳಲಾಗಿದೆ. ಬಹುಶ: ಈ ಪದ್ಯ ಬರೆಯುವಾಗ ರನ್ನನ ಮೇಲಿನ ಪದ್ಯ ಈ ಕವಿಯ ಕಣ್ಣ ಮುಂದಿದೆ. ತೀರಿಕೊಂಡು ಸುಮಾರು ತಲೆಮಾರುಗಳ ತರುವಾಯವೂ ಈ ಶಾಸನ ಶಂಕರಗಂಡನ ದಾನಗುಣವನ್ನು ನೆನಪಿಟ್ಟು ದಾಖಲಿಸಿದುದು, ಅವನ ಪ್ರಸಿದ್ಧಿಯ ದ್ಯೋತಕವೆನಿಸಿದೆ.

■■

ಆಕರ : ಮಾರ್ಗ ಸಂಪುಟ–೪

೭೬

ಪಂಚಮಠ

ಕರ್ನಾಟಕದ ಶಾಸನಗಳಲ್ಲಿ ಮತ್ತೆ ಮತ್ತೆ ಬಳಕೆಯಾಗಿರುವ ಪದ ಪಂಚಮಠ. ದಾನಪ್ರಸಂಗದಲ್ಲಿ ಪಂಚಮಠದ ಸನ್ನಿಧಿಯನ್ನು ಶಾಸನಗಳು ಒತ್ತಿ ಹೇಳುತ್ತವೆ. ಇದರೊಂದಿಗೆ ಕೆಲವೊಮ್ಮೆ "ಎಂಟು ಹಿಟ್ಟು" ಶಬ್ದ ಬಳಕೆಯಾಗಿದೆ. ಎಂಟು ಹಿಟ್ಟು ಶಬ್ದದ ಬಗ್ಗೆ ಸಾಕಷ್ಟು ಚರ್ಚೆ ನಡೆದು, "ಗೌಡ, ಕುಲಕರ್ಣಿ, ತಳವಾರ ಈ ಮೂವರು ಗ್ರಾಮಾಧಿಕಾರಿಗಳು ಮತ್ತು ಬಡಗಿ, ಕಮ್ಮಾರ, ಅಗಸ, ಕುಂಬಾರ, ಅಕ್ಕಸಾಲೆ ಈ ಐವರು ಪಂಚಕಾರುಕರು-ಹೀಗೆ ಎಂಟು ಜನರ ಸಮಿತಿ" ಎಂದು ಹೇಳಲಾಗುತ್ತದೆ (ಜಾನಪದ ದರ್ಶನ. ಸಂಪುಟ ೭ ಪುಟ ೭೧-೭೨). ಪಂಚಮಠದ ಬಗ್ಗೆ ಅಷ್ಟಾಗಿ ಚರ್ಚೆ ನಡೆದಿಲ್ಲ. ಬಿ.ಎಲ್.ರೈಸ್ ಅವರು ಎ. ಕ. VII-i ದ ಪ್ರಸ್ತಾವನೆಯಲ್ಲಿ ಬಳ್ಳಿಗಾವೆ ಶಾಸನದ "ಹರಿ ಹರ ಕಮಳಾಸನ ವೀತರಾಗ ಬೌದ್ಧಾಲಯಂಗಳಿನ್ದಿನ್ತು ವಸುನ್ಧರೆಗೆಸೆವ ಪಂಚಸರದನ್ತಿರೆ ಪಂಚಮಠಂಗಳೆಸೆವುವಾ ಪಟ್ಟಣದೊಳ್"ಎಂಬ ಪದ್ಯವನ್ನು ಗಮನಿಸಿ, ಪಂಚಮಠವೆಂದರೆ ಶಿವ, ವಿಷ್ಣು, ಬ್ರಹ್ಮ, ಜಿನ, ಬುದ್ಧ-ಇವರನ್ನು ಸೂಚಿಸುವ ಮಠಗಳೆಂದು ಹೇಳಿದ್ದಾರೆ. ಆದರೆ ನಮ್ಮ ಸಂಪ್ರದಾಯದಲ್ಲಿ ಬ್ರಹ್ಮನಿಗೆ ದೇವಾಲಯ ಪೂಜೆಗಳಿಲ್ಲವಾಗಿ, ಇವನ ಹೆಸರಿನಲ್ಲಿ ಮಠ ಸಂಪ್ರದಾಯ ಕಾಣುತ್ತಿಲ್ಲ. ಇದಲ್ಲದೆ ಅನೇಕ ಶಾಸನಗಳಲ್ಲಿ "ಚತುಸ್ಸಮಯ" ಶಬ್ದ ಬರುವುದರಿಂದ "ಚತುರ್ಮಠ"ವೆಂಬ ಉಲ್ಲೇಖವಿರಬೇಕಾಗಿತ್ತೇ ಹೊರತು, "ಪಂಚಮಠ"ವೆಂಬ ಉಲ್ಲೇಖವಲ್ಲ. ಹೀಗಾಗಿ ರೈಸ್ ಅವರ ಅಭಿಪ್ರಾಯ ಒಪ್ಪಿತವೆನಿಸುವುದಿಲ್ಲ.

ಆ ಬಳಿಕ ಈ ವಿಷಯವನ್ನು ಮತ್ತೆ ಚರ್ಚೆಗೆ ಎತ್ತಿಕೊಂಡ ಡಾ॥ ಎಸ್. ಶೆಟ್ಟರ್ ಅವರು ಹೀಗೆ ಹೇಳುತ್ತಾರೆ: ಬಹಳಷ್ಟು ದಾನಶಾಸನಗಳಲ್ಲಿ ಸಾಕ್ಷಿಯಾಗಿದ್ದ ಸಂಘ, ಸಂಸ್ಥೆ, ಅಧಿಕಾರಿಗಳ ಸಾಲಿನಲ್ಲಿ "ಪಂಚಮಠ" ಎಂಬುದು ನಾಮ ಮಾತ್ರ ಉಲ್ಲೇಖಗೊಂಡಿರುತ್ತದೆ. ಬಹುಶ: ಆ ಗ್ರಾಮದಲ್ಲಿ ಪಂಚಮಠ ಅಸ್ತಿತ್ವದಲ್ಲಿಲ್ಲದಿದ್ದರೂ ಒಂದು ಸಂಪ್ರದಾಯವೆಂಬಂತೆ ಈ ಶಬ್ದವನ್ನು ಶಾಸನಗಳು ಹೆಸರಿಸುತ್ತವೆ. ಇಂಥವುಗಳಿಂದ ಹೊಸ ವಿವರಣೆಯನ್ನು ಏನೂ ಅಪೇಕ್ಷಿಸುವಂತಿಲ್ಲ. ಕೆಲವು ಶಾಸನಗಳು, ಅದರಲ್ಲಿಯೂ ಬಳ್ಳಿಗಾವಿ ಪ್ರದೇಶದವು ಮಾತ್ರ ಒಂದಿಷ್ಟು ಮಾಹಿತಿ ಒದಗಿಸುತ್ತವೆ. ಪಂಚಮಠಕ್ಕೆ ಕಾಳಾಮುಖಶೈವರೇ ಆಚಾರ್ಯರಾಗಿದ್ದಾರೆ. ಸಾಮಾನ್ಯವಾಗಿ ಎಲ್ಲ ದತ್ತಿಗಳಿಗೆ ಸಾಕ್ಷಿಯಾಗಿರುವ ಇವರು ಜೈನದತ್ತಿಗೆ ಸಾಕ್ಷಿಯಾಗಿರುವ ಉಲ್ಲೇಖವಿಲ್ಲ[೧].

---

೧. ಬಳ್ಳಿಗಾವೆ: ಮಧ್ಯಕಾಲೀನ ನಗರವೊಂದರಲ್ಲಿ ಮತ ವೈವಿಧ್ಯತೆಯ ವಿನ್ಯಾಸ (ಮೂಲ-ಎಸ್. ಶೆಟ್ಟರ್, ಅನು-ರಾಜಾರಾಮ ಹೆಗಡೆ. ಕನ್ನಡ ಅಧ್ಯಯನ ೬-೪).

ಈಗ ಈ ಚರ್ಚೆಯನ್ನು ಇನ್ನಷ್ಟು ಮುಂದುವರಿಸಬಹುದು. ಅಲ್ಲಮನ ವಚನದಲ್ಲಿ ಈ ಪದ ಹೀಗೆ ಬಳಕೆಯಾಗಿದೆ:

ಸಟೆ ದಿಟವಾದಲ್ಲಿ ಮುಟ್ಟಿಯು ಮುಟ್ಟದೆ ಇರಬೇಕು.
ಅತಿರತಿ ಗತಿಮತಿಗೆ ಮಂದವಾಯಿತ್ತು,
ಎಂಟುಹಿಟ್ಟು ಪಂಚಮಠವುಂಟು ಧರೆಯ ಮೇಲೆ.
ನರ ಸುರಾದಿಗಳೆಲ್ಲ ಸಭಾರವ ಹೊತ್ತು ಬಂದೈದಾರೆ.
ಹಿಟ್ಟು ನಷ್ಟ, ಮಠ ಹಾಳು, ಊರಿಗುಪಟಳ
ಪಂಚಮಠವ ಸುಟ್ಟು ಗುಹೇಶ್ವರ ಬೀದಿಗರುವಾದ. (ಅ.ವ.ಚ. ೩೯೮)

೧೨ನೆಯ ಶತಮಾನದಷ್ಟು ಪೂರ್ವದಲ್ಲಿ ಪಂಚಮಠ ಶಬ್ದವನ್ನು ದಾಖಲಿಸಿದ ಏಕೈಕ ಸಾಹಿತ್ಯಿಕ ಆಕರವೆಂಬ ಕೀರ್ತಿ ಈ ವಚನಕ್ಕೆ ಸಲ್ಲುತ್ತದೆ. ಇದಕ್ಕೆ ಬರೆದ ಹುಲಿಗೆರೆಯ ಮಹಾಲಿಂಗದೇವನ ಟೀಕೆಯಲ್ಲಿ "ಪಂಚಮಠವೆಂದೊಡೆ ಪಂಚಭೂತಗ್ರಾಮಗಳು" ಎಂದು, "ಮಠ ಹಾಳು ಎಂದರೆ ಪಂಚಭೂತಗಳು ನಿವೃತ್ತಿಯಾಗಿ" ಎಂದು ಆಧ್ಯಾತ್ಮಿಕ ಅರ್ಥ ಹೇಳಲಾಗಿದೆ. ನಮಗೆ ಬೇಕಾಗಿರುವ ವಾಚ್ಯಾರ್ಥ ಇಲ್ಲಿ ಸಿಗುವುದಿಲ್ಲ.

ಪ್ರಾದೇಶಿಕ ವ್ಯಾಪ್ತಿಯನ್ನು ಗಮನಿಸಿ ಹೇಳುವುದಾದರೆ ಕರ್ನಾಟಕದ ಶಿವಮೊಗ್ಗ, ಕಡೂರ, ಧಾರವಾಡ, ಬಳ್ಳಾರಿ, ಕೊಪ್ಪಳ, ವಿಜಾಪುರ, ಗುಲ್ಬರ್ಗ, ಉತ್ತರ ಕನ್ನಡ, ಬೆಳಗಾವಿ ಜಿಲ್ಲೆಗಳಲ್ಲಿ, ಆಂಧ್ರಪ್ರದೇಶದ ನಲ್ಗೊಂಡ, ಮೆಹಬೂಬನಗರ, ಕರೀಂನಗರ, ಮೇದಕ ಜಿಲ್ಲೆಗಳಲ್ಲಿ ಈ ಶಬ್ದ ಬಳಕೆಯಾಗಿದೆ. ಇದೆಲ್ಲ ಸಾಮಾನ್ಯವಾಗಿ ಪ್ರಾಚೀನ ಕರ್ನಾಟಕ ಪ್ರದೇಶವೇ ಆಗಿದೆ.

ಕಾಲದೃಷ್ಟಿಯಿಂದ ಪಂಚಮಠವು ಕೊನಲುಪಾಕ (ಆಂಧ್ರಪ್ರದೇಶದ ಕನ್ನಡ ಶಾಸನಗಳು II-೫೭೧ ಕೊನಲುಪಾಕ ೧೦೫೬)ದಲ್ಲಿ ಮೊದಲು, ಬುಕ್ಕಸಾಗರ(ಹಂಪಿ ಶಾಸನಗಳು-೩೯೬ ಬುಕ್ಕಸಾಗರ ೧೬೧೨)ಶಾಸನದಲ್ಲಿ ಕೊನೆಗೆ ಉಲ್ಲೇಖಗೊಂಡಿದೆ. ಈ ನಡುವೆ ೧೨ ಮತ್ತು ೧೩ನೆಯ ಶತಮಾನಗಳಲ್ಲಿ ವಿಶೇಷ ಬಳಕೆಯಾಗಿದೆ.

ಹಕ್ಕಲು ಗ್ರಾಮದ ಶಾಸನದಲ್ಲಿರುವ (ಇ. ಸಿ. VIII-ಸೊರಬ ೨೭೭) "ನಿಸ್ಸಾತ್ಯ(>ನಿಶ್ಯಾತ್ಯ)ಮೆನಿಪ ಪಂಚಮಠಂಗಳಿಂ" ಎಂಬುದಕ್ಕೆ ನಿಷ್ಕಾಪಟ್ಯವೆಂದು ಅರ್ಥವಿದೆಯಾದರೂ, ಇದರಿಂದಲೂ ವಿಶೇಷ ತಿಳಿದುಬರುವುದಿಲ್ಲ. ಈ ಮಠದಲ್ಲಿ "ತಪೋಧನ" (ಆಂಧ್ರಪ್ರದೇಶದ ಶಾಸನಗಳು II-೫೭೧ ಕೊನಲುಪಾಕ ೧೦೫೬), "ಸ್ಥಾನಾಚಾರ್ಯ" (ಎಸ್. ಆಯ್. ಆಯ್. XX-೧೫೭ ಅಗರಖೇಡ ೧೧೭೦) ಇರುತ್ತಿದ್ದನೆಂದು ಶಾಸನ ತಿಳಿಸುತ್ತವೆ.

ತರಿಕೆರೆ ತಾಲೂಕಿನ ದ್ಯಾಂಪುರ ಶಾಸನ(ಇ. ಸಿ. VI-ತರಿಕೆರೆ ೧೭ ದ್ಯಾಂಪುರ ೧೧೫೦)ಬ್ರಹ್ಮೇಶ್ವರದೇವರಿಗಾಗಿ[೨] "ಪಂಚಮಠ ಸ್ಥಾನಾಚಾರ್ಯನಪ್ಪ ಅನಂತಶಿವಶಕ್ತಿ ದೇವರ ಪುತ್ರ ಕಲ್ಯಾಣಶಕ್ತಿದೇವರ ಪುತ್ರನಪ್ಪ ಈಶ್ವರದೇವಂಗೆ" ದತ್ತಿ ಬಿಟ್ಟುದನ್ನು ತಿಳಿಸುತ್ತದೆ. ಇದೇ

---

೨. ಇದು ಬ್ರಹ್ಮನನ್ನು ಕುರಿತುದಲ್ಲ. ಬ್ರಹ್ಮ(ಬೊಮ್ಮ)ನೆಂಬ ವ್ಯಕ್ತಿಯ ಹೆಸರಿನಲ್ಲಿ ಸ್ಥಾಪಿಸಿದ ದೇವರು.

ತಾಲೂಕಿನ ಸಮತಳ ಗ್ರಾಮದ ಶಾಸನವು (ಇ. ಸಿ. VI ತರಿಕೆರೆ-೪೯ ಸಮತಳಗ್ರಾಮ ೧೧೫೮)ಮೇಲೆ ಹೇಳಿದ ಕಲ್ಯಾಣಶಕ್ತಿದೇವರ ಸಹೋದರನಾದ X X X ಪಂಡಿತದೇವರಿಗೆ ದಾನಬಿಟ್ಟುದನ್ನು ಹೇಳುತ್ತದೆ. ಈ ಉಲ್ಲೇಖಗಳು ಇವರಲ್ಲಿ ಕೆಲವರಾದರೂ ಸಂಸಾರಿಗಳೆಂದು ಸೂಚಿಸುತ್ತವೆ.

ಬಳ್ಳಿಗಾವಿ ಶಾಸನಗಳಲ್ಲಿಯ "ಪಂಚಲಿಂಗದಾಚಾರ್ಯರು ಶ್ರೀಕಂಠ ಪಂಡಿತದೇವರು........ ಪಂಚಮಠದಾಚಾರ್ಯ ಮೂಲಿಗ ಹೊಂನ್ನಜೀಯರು" (ಇ. ಸಿ. VII ಶಿಕಾರಿಪುರ ೧೦೬ ಬಳ್ಳಿಗಾವಿ), "ಪಂಚಮಠದಾಚಾರ್ಯ ಧರ್ಮಶಿವದೇವರ........ ಮೂಲಿಗ ಮಧುಕೇಶ್ವರದೇವರ........ಶ್ರೀ ಪಂಚಲಿಂಗದಾಚಾರ್ಯ ಸರ್ವೇಶ್ವರ ಪಂಡಿತದೇವರ" (ಇ. ಸಿ. ೭ ಶಿಕಾರಿಪುರ ೧೨೩ ಬಳ್ಳಿಗಾವಿ) ಈ ವಾಕ್ಯಗಳಿಂದ ಪಂಚಲಿಂಗದಾಚಾರ್ಯ, ಪಂಚಮಠದಾಚಾರ್ಯ ಭಿನ್ನವೆಂದು ತಿಳಿದುಬರುತ್ತದೆ. ಇಷ್ಟು ಮಾಹಿತಿ ಸಂಗ್ರಹಿಸಿದರೂ ಪಂಚಮಠವೆಂದರೇನು? ಎಂಬುದು ಸ್ಪಷ್ಟವಾಗುವುದಿಲ್ಲ. ಹೀಗಿದ್ದೂ ಕೆಲವು ಶಾಸನಗಳಲ್ಲಿ ಪಂಚಮಠ ಶಬ್ದದ ಹಿಂದೆ ಇಲ್ಲವೆ ಮುಂದೆ ನಗರ (ನಕರ)ಶಬ್ದ ಬರುವುದು ನಮ್ಮ ಗಮನ ಸೆಳೆಯುತ್ತದೆ. ಉದಾ:

೧. "ಈರ್ವ್ವರು ಸೆಟಿಗಳುಂ ನಗರ ಪಂಚಮಠಂಗಳಲ್ಲಿ........"
(ಇ. ಸಿ. VII ಶಿಕಾರಿಪುರ ೧೩೩ ಬಳ್ಳಿಗಾವಿ)

೨. "ಯೆಂಟುಹಿಟ್ಟು ಪಂಚಮಠ ನಖರ ಮುಂಮುರಿದಣ್ಡಸಹಿತ........"
(ಎಸ್. ಆಯ್. ಆಯ್ XVIII -೨೪೬ ಚೌಡದಾನಪುರ ೧೨೬೩)

೩. "ಅರಸಂ ನಗರ ಪಂಚಮಠಸ್ಥಾನಮುಂ ನೊಸಲೊ[ಳೆ]ಶ್ವಾನಪಾದವನೊತ್ತಿ ಪೊರಮಡಿಸಿ ಕಟಿವರು........" (ಆಂಧ್ರಪ್ರದೇಶದ ಶಾಸನಗಳು II-೩೯೫ ವೇಮುಲವಾಡ ೧೦೮೩)

೪. "ಈ ಧರ್ಮಕ್ಕೆ ಪ್ರಭು ಪಂಚಮಠಸ್ಥಾನ ನಗರ ನಾಲ್ವತ್ತೊಕ್ಕಲುಂ...... ಪ್ರತಿಪಾಳಿಸುವರು........" (ಆಂಧ್ರಪ್ರದೇಶದ ಶಾಸನಗಳು II-೬೦೪ ಪಟಾನ್ ಚೆರು ೧೧೨೭)

೫. "ಬಳ್ಳಿಗಾವಿಯ ನಗರ ಪಂಚಮಠಸ್ಥಾನದೊಳಗಾಗಿ........" (ಇ. ಸಿ. VII-ಶಿಕಾರಿಪುರ ೧೭೦ ಬಳ್ಳಿಗಾವಿ)

೬. "ಅನಿತುಂ ಪಂಚಮಠಸ್ಥಾನ ನಗರಮುಂ, ಮೂಱು ಪುರಮುಮಱಿಯುತ್ತಿರೆ...."
(ಇ. ಸಿ. VII ಶಿಕಾರಿಪುರ ೯೯ ಬಳ್ಳಿಗಾವಿ)

೭. "ಪ್ರಮುಖ ನಗರ ಪಂಚಮಠ, ಮೂರುಪುರದ ಸನ್ನಿಧಿಯೊಳ್"
(ಇ. ಸಿ. VII ಶಿಕಾರಿಪುರ ೧೨೩ ಬಳ್ಳಿಗಾವಿ)

೮. "ಪುರಿಗೆರೆಯ ನಗರ ಮಹಾಜನಂ, ಪಂಚಮಠಸ್ಥಾನಂಗಳ ಸೆ[ಟ್ಟಿ]ಸ್ವಾಮಿ ತಳಸಮಸ್ತಮುಂ"
(ಎಸ್. ಆಯ್. ಆಯ್. XX-೧೦೮ ಲಕ್ಷ್ಮೇಶ್ವರ ೧೧೩೮)

ಇಲ್ಲಿ ನಗರವೆಂದರೆ ಪಟ್ಟಣವೆಂದು ಅರ್ಥವಲ್ಲ, ನಖರ, ವ್ಯಾಪಾರಿಯೆಂದು ಅರ್ಥ[illegible] ಸಾಧ್ಯತೆಯಿದೆ. ಉದಾ: "[ಪಟ್ಟಣ]ಸಾವಿ ಕೀರ್ತಿಸೆಟ್ಟಿ ಮೇಚಿಸೆಟ್ಟಿ ಪ್ರಮುಖ ಸಮಸ್ತ ನಗರ ಜನಂಗಳ ಪಂಚಮಠದಾಚಾರ್ಯ ಧರ್ಮಶಿವದೇವರ" (ಇ. ಸಿ. VII ಶಿಕಾರಿಪುರ ೧೨೩ ಬಳ್ಳಿಗಾವಿ), "ಪಟ್ಟಣಸಾವಿ ಮೇಚಿಸೆಟ್ಟಿ ಕೀರ್ತಿಸೆಟ್ಟಿಯಶೇಷ ನಗರ ಪಂಚಮಠಂ" (ಇ. ಸಿ. VII ಶಿಕಾರಿಪುರ

೧೧೮ ಬಳ್ಳಿಗಾವಿ). ಇಲ್ಲಿ ನಗರ ಜನಂಗಳ ಪಂಚಮಠ, ನಗರ ಪಂಚಮಠವೆಂದರೆ ನಖರರಿಗೆ ಸಂಬಂಧಿಸಿದ ಪಂಚಮಠವೆಂಬ ಅರ್ಥ ಹೊರಡುತ್ತದೆ. "ಸಲಿಪರಖಿಳ ಬಾಧಾ ಪರಿಹಾರಂ ಮಾಡಿ ಪಂಚಮಠ ನಗರಂಗಳ್" (ಇ. ಸಿ. VII ಶಿಕಾರಿಪುರ ೯೯, ಬಳ್ಳಿಗಾವಿ) ಎಂಬ ವಾಕ್ಯ ಈ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ಬಸವಕಲ್ಯಾಣದ ಕೋಟೆಯ ವಸ್ತುಸಂಗ್ರಹಾಲಯದ ಎರಡು ಶಾಸನ (೧೧೧೭, ೧೧೪೭) ಗಳಲ್ಲಿ ಪಂಚನಗರಂಗಳು ಪದ ಬಳಕೆಯಾಗಿದ್ದು, ಇದು ಪಂಚಮಠದ ಪರ್ಯಾಯ ಪದವೇ ಆಗಿರಬಹುದು.

ಒಟ್ಟಾರೆ, ಈ ವರೆಗಿನ ಚರ್ಚೆಯಿಂದ ಪಂಚಮಠವೆನ್ನುವುದು ವ್ಯಾಪಾರಸ್ಥರಿಗೆ ಸಂಬಂಧಿಸಿದುದೆಂಬ ನಿರ್ಣಯಕ್ಕೆ ಬರಬಹುದಾಗಿದೆ. ಹಾಗಿದ್ದರೆ ಬಳ್ಳಿಗಾವಿ ಶಾಸನವನ್ನಾಧರಿಸಿ ರೈಸ್ ಹೇಳುವಂತೆ ಹರಿ, ಹರ, ಬ್ರಹ್ಮ, ಜೈನ, ಬೌದ್ಧ–ಈ ಐದೂ ಮತದ ಪ್ರತಿನಿಧಿಗಳನ್ನೊಳಗೊಂಡ ವ್ಯಾಪಾರಿಗಳ ಸಂಸ್ಥೆಯೇ? ಎಂದು ಕೇಳಬೇಕಾಗುತ್ತದೆ. ಆದರೆ ಜೈನ ದತ್ತಿ ಸಂದರ್ಭದಲ್ಲಿ ಇವರ ಉಲ್ಲೇಖವೇಕಿಲ್ಲ? ಮಿಕ್ಕ ನಾಲ್ಕು ಮತದವರನ್ನು ಬಿಟ್ಟು ಕೇವಲ ಲಾಕುಳಶೈವ ಮತದವರೇ ಏಕೆ ಈ ಮಠಾಧಿಪತಿಗಳಾಗಿದ್ದಾರೆ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಹೀಗಾಗಿ ಪಂಚಮಠವೆಂಬುದು ಕೇವಲ ಶೈವ ವ್ಯಾಪಾರಿ(ನಖರ, ನಗರ)ಗಳಿಗೆ ಸಂಬಂಧಿಸಿದುದೆಂದು ಇಟ್ಟುಕೊಂಡಲ್ಲಿ, ನಮಗೆ "ಪಂಚವಣಿಜರು" ಪದ ನೆನಪಾಗುತ್ತದೆ. ಈ ಪಂಚವಣಿಜರೆಂದರೆ ವಾತುಲಾಗಮದ ಪ್ರಕಾರ ನಾಡನಾಳುವ ಸೆಟ್ಟಿ, ಸೆಟ್ಟಿಗುತ್ತ, ಮಹಾಜನಶೆಟ್ಟಿ, ಪಟ್ಟಣಶೆಟ್ಟಿ, ಮಿಂಡಗುದ್ದಲಿಶೆಟ್ಟಿ. ನಿರಂಜನವಂಶ ರತ್ನಾಕರದ ಪ್ರಕಾರ ಕೋರಿಶೆಟ್ಟಿ, ಮಹಾನಾಡಸೆಟ್ಟಿ, ವಾಲಿಸೆಟ್ಟಿ, ಪಟ್ಟಣಶೆಟ್ಟಿ, ಮಿಂಡಗುದ್ದಲಿಶೆಟ್ಟಿ. ಈ ಇಲ್ಲವೆ ಇಂಥ ಬೇರೆ ಐದು ಶೈವಸೆಟ್ಟಿಗಳನ್ನು ಪ್ರತಿನಿಧಿಸುವುದೇ ಪಂಚಮಠವಾಗಿರಬಹುದೇ? ಎನಿಸುತ್ತದೆ.

ಶಾಸನೋಕ್ತ ಪಂಚಮಠಗಳಿಗೆ ಲಾಕುಳಶೈವರೇ ಆಚಾರ್ಯರಾಗಿರುವುದರಿಂದ ಈ "ಪಂಚಮಠ" ಈಗ ವೀರಶೈವದಲ್ಲಿ ಲೀನವಾಗಿರುವ ಸಾಧ್ಯತೆಯೂ ಇದೆ. ಹಾಗಿದ್ದರೆ ಇಂದು ಕರ್ನಾಟಕದಲ್ಲಿ ಕಂಡುಬರುವ ವೀರಶೈವ "ಪಂಚವಣ್ಣಿಗೆ ಮಠ"ಗಳೇ ಪ್ರಾಚೀನ ಪಂಚಮಠಗಳಾಗಿರಬಹುದೇ?

ಕೊಡೇಕಲ್ಲ ಬಸವಣ್ಣನನ್ನು ಕುರಿತ ನಂದಿ ಆಗಮಲೀಲೆ (ಕರ್ತೃ: ಕೊಡೇಕಲ್ಲ ಬಸವಣ್ಣನ ವಂಶಸ್ಥ ವೀರಸಂಗಯ್ಯ)ಯಲ್ಲಿ ಕೆಲವು ವಿವರಗಳು ಹೀಗೆ ಬರುತ್ತವೆ:

ಮೊದಲನೆಯ ಹೆಂಡತಿ ತೀರಿಕೊಂಡ ಬಳಿಕ ಲಿಂಗವಂತ ಬಣಜಿಗ ಜಾತಿಯ ಕೊಡೇಕಲ್ಲ ಬಸವಣ್ಣನು ಬಳ್ಳಿಗಾವಿಗೆ ಬಂದನು. ಅಲ್ಲಿಯ "ಸುಜನ ಪಂಚಾವಣ್ಣಿಗೆಯ ಸಿದ್ಧಯ್ಯ ಚೆನ್ನಮ್ಮನ ನಿಜಗರ್ಭದಲ್ಲಿ........ ಹುಟ್ಟಿದ ಮಹಾದೇವಿಯೆಂಬ ನಾಮ"ದ ಕನ್ಯೆಯನ್ನು ಮದುವೆಯಾದನು. ಇಲ್ಲಿಯ ಪಂಚವಣ್ಣಿಗೆಯ ಸಿದ್ಧಯ್ಯನು ಪಂಚವಣ್ಣಿಗೆ ಮಠದ ಸಿದ್ಧಯ್ಯನೇ ಆಗಿರಬೇಕು. ಬಳ್ಳಿಗಾವಿಯ ಈ ಪಂಚವಣ್ಣಿಗೆಮಠವು ಪಂಚವಣಿಜರಮಠ=ಪಂಚಮಠ ವೆಂದು ಭಾವಿಸುವಲ್ಲಿ ತಪ್ಪೇನೂ ಕಾಣುವುದಿಲ್ಲ. ವಣಿಜರ ಮಠದ ಹೆಣ್ಣನ್ನು ವಣಿಜನು ಮದುವೆಯಾದುದೂ ಸಹಜವೆನಿಸುತ್ತದೆ. ಇಂದಿಗೂ ಬಳ್ಳಿಗಾವಿಯಲ್ಲಿ ಪಂಚವಣ್ಣಿಗೆ ಮಠವಿದೆ. ನೆರೆಯ ತೊಗರ್ಸಿಯಲ್ಲಿ, ಬೆಳಗಾವಿ ಜಿಲ್ಲೆಯ ಹೂಲಿಯಲ್ಲಿ ಪಂಚವಣ್ಣಿಗೆ ಮಠಗಳಿವೆ. ಕೆಳದಿ ಶಿವಪ್ಪನಾಯಕನ ಕಾಲದಲ್ಲಿ ತೊಗರ್ಸಿ, ಕೆಳದಿ,

ಗೊಗ್ಗಿಹಳ್ಳಿ, ಕ್ಯಾಸನೂರು, ಗೌರಿಕೆರೆ ಈ ಐದು ಗ್ರಾಮಗಳಲ್ಲಿ ಏಕಕಾಲಕ್ಕೆ ಪಂಚಮಠಗಳು ಸ್ಥಾಪನೆಯಾದ್ದರಿಂದ ತೊಗರ್ಸಿ ಮಠಕ್ಕೆ ಪಂಚವಣ್ಣಿಗೆ ಮಠ ಎಂಬ ಹೆಸರು ಬಂದಿರುವುದಾಗಿ ಒಂದು ಹೇಳಿಕೆಯಿದೆ(ಕರ್ನಾಟಕದ ವೀರಶೈವ ಮಠಗಳು ಪು. ೧೧೭೬). ತೊಗರ್ಸಿಯದು ಪುತ್ರವರ್ಗದ ಮಠವಾಗಿದೆ. ಹೂಲಿಯಲ್ಲಿ ಚರಪಟ್ಟಾಧಿಕಾರಿಮಠ ಮತ್ತು ಸ್ಥಿರಪಟ್ಟಾಧಿಕಾರಿಮಠ ಹೀಗೆ ಎರಡೂ ಸಂಪ್ರದಾಯದ ಮಠಗಳಿದ್ದು, ಇವೆರಡೂ ಸುಮಾರು ೫೦ರಷ್ಟು ತಲೆಮಾರಿನ ಸ್ವಾಮಿಗಳ ಹೆಸರನ್ನು ಒದಗಿಸುತ್ತವೆ. ಇವೆಲ್ಲ ಕಾಶಿಪೀಠಕ್ಕೆ ಸಂಬಂಧಿಸಿದುದು ಗಮನಿಸಬೇಕಾದ ಅಂಶವಾಗಿದೆ. ಹೂಲಿಮಠಗಳನ್ನು "ಶ್ರೀ ಪೂವಲ್ಲಿ ಪಂಚವರ್ಣ ಬೃಹನ್ಮಠ" ಎಂದೂ ಕರೆಯುವುದು ರೂಢಿಯಲ್ಲಿದೆ. ಇಲ್ಲಿಯ ವರ್ಣ ವೆಂಬುದು ಬಳ್ಳಿಗಾವಿ ಶಾಸನೋಕ್ತ ಬೌದ್ಧ, ಜೈನ, ಹರಿ, ಹರ, ಬ್ರಹ್ಮ–ಈ ಐದು ಮತ(ವರ್ಣ)ಗಳನ್ನು ನೆನಪಿಸುತ್ತದೆ.

ಪಂಚವಣ್ಣಿಗೆಯೆಂಬುದನ್ನು ಪಂಚ+ಬಣ್ಣಿಗೆ ಎಂದೂ ಬಿಡಿಸಬಹುದು. ಬಣ್ಣಿಗೆದೆರೆ ಇತ್ಯಾದಿ ಪದಗಳು ಶಾಸನಗಳಲ್ಲಿ ಸಿಗುತ್ತವೆ. ಬಣ್ಣಿಗೆಯೆಂದರೆ ಕೈಗಾರಿಕೆ ವಸ್ತುವೆಂದು ಡಾ. ರಿತ್ತಿ "ಪ್ರಾಚೀನ ಕರ್ನಾಟಕದ ಆಡಳಿತ ಪದಕೋಶ"ದಲ್ಲಿ ಹೇಳುತ್ತಾರೆ.[೩] ಹಾಗಿದ್ದರೆ ಪಂಚವಣ್ಣಿಗೆಮಠ=ಪಂಚಕಾರುಕ ಮಠ= ಪಂಚಾಳರ ೫ ಮಠಗಳೇ? "ತೊಟ್ಟಿಲ ಹೊತಗೊಂಡು ತವರಬಣ್ಣ ಉಟಗೊಂಡು" ಎಂಬ ಜನಪದ ಹಾಡು ಬಣ್ಣ=ಬಟ್ಟೆ ಅರ್ಥ ನೀಡುತ್ತದೆ. ಹೀಗಾಗಿ ಪಂಚವಣ್ಣಿಗೆಯೆಂಬುದು ಐದು ಬಗೆಯ ಬಟ್ಟೆ ಅರ್ಥವನ್ನೊಳಗೊಂಡಿದೆಯೇ ? ಅಥವಾ ಐದು ಬಣ್ಣಗಳ ಬಟ್ಟೆಯನ್ನು ಸೂಚಿಸುವುದೇ ?

ಇನ್ನಷ್ಟು ವಿಷಯ: ೧೫ ಇಲ್ಲವೆ ೧೬ನೆಯ ಶತಮಾನದ ಶಾಸನಗಳಲ್ಲಿ ಕೆಲವು ವಾಕ್ಯಗಳು ಹೀಗಿವೆ. "ಶ್ರೀ ಗಿರಿಶಿಂಹ್ವಾಸನದ ಮಹಾಮಹಾತ್ಮರಾದ ಪಂಚಮಠ ಪಂಚ್ಚಗೃಹಾಂಗಳಿಗೆ ಮುಖ್ಯವಾದ ಬಸವಣನ ಗೃಹದ ಶಿಂಹ್ವಾಸನದ ಮಹಾಮಹತ್ತಿನ ಪಟ್ಟದ ಪ್ರಮಥೇಶ್ವರದೇವರ ಅಯ್ಯವಾರಿ"(ಆಂಧ್ರಪ್ರದೇಶದ ಶಾಸನಗಳು II –೪೯೨ ಅಲಂಪುರ ೧೫೫೩). "ಶ್ರೀ ನಂದಿನಾಥ ಶ್ರೀ ಭೃಂಗಿನಾಥ ಶ್ರೀ ವೀರಭದ್ರದೇವರ ಮುಖ್ಯವಾದ ಮಹಾಮಹತ್ತಿನೊಳಗಾದ ಹಂಪೆಯ ಸಿಂಹ್ಮಾಸನದ ಪ(೦)ಚಮಠದ ಪಂಚಗೃಹದೊಳಗಾದ ಬುಕ್ಕಸಾಗರದ ಕರಿಸಿದ್ಧೇದೇವರ" (ಹಂಪಿಶಾಸನಗಳು–೩೯೬ ಬುಕ್ಕಸಾಗರ, ೧೬೧೨). ಇಲ್ಲಿ ಪಂಚಮಠವಲ್ಲದೆ ಪಂಚಗೃಹ ಎಂಬುದೂ ಬಳಕೆಯಾಗಿದೆ. ಪಂಚಗೃಹ ಮಠ, ಪಂಚಗೃಹ ಹಿರೇಮಠ ಹೆಸರಿನ ವೀರಶೈವಮಠಗಳೂ ಅಲ್ಲಲ್ಲಿ ಕಂಡುಬರುತ್ತವೆ. ಈ ಪಂಚಮಠ–ಪಂಚವಣ್ಣಿಗೆ ಮಠ–ಪಂಚಗೃಹಮಠ–ಪಂಚಗೃಹ ಹಿರೇಮಠಗಳ ಪರಸ್ಪರ ಸಂಬಂಧ ಶೋಧನೀಯವಾಗಿದೆ.

'ಗುಣಾರಿ' ಎಂಬುದು ಪಂಚವಣಿಜರ ಒಂದು ಪ್ರಭೇದ. ಕರ್ನಾಟಕದಲ್ಲಿ ಗುಣಾರಿಮಠ ಹೆಸರಿನ ಮಠಗಳಿರುವುದರಿಂದ ಮಿಕ್ಕ ೪ ವಣಿಜರಿಗೂ ೪ ಪ್ರತ್ಯೇಕ ಮಠಗಳಿರಬಹುದು. ಮೂಲತ: ಈ ಐದೂ ಬಗೆಯ ವಣಿಜಿಗರಿಗೆ ಸಂಬಂಧಿಸಿದುದೇ ಪಂಚಮಠವಾಗಿರಬಹುದೇ? ಗಣವಾರಿಶೆಟ್ಟಿ

---

೩. ಪಂಚವಣ್ಣಿಗೆಯಡಕೆ ಮೆಳಸು ಧಾಂನ್ಯವರ್ಗವನೇನಂ ಹೇಱದಡಂ (ಕೆ. ಆಯ್ I–೨೫ ಸಿರಸಂಗಿ. ಕ್ರಿ. ಶ. ೧೧೪೯). ಇಲ್ಲಿ ಪಂಚವಣ್ಣಿಗೆ ಮಾರಾಟದ ವಸ್ತುವೆಂಬ ಅರ್ಥ ಕೊಡುತ್ತದೆ.

ಅಡ್ಡ ಹೆಸರಿನ ಮನೆತನ ಗಂಗಾವತಿಯಲ್ಲಿದೆ. ಇದು ಗುಣಾರಿ ಎಂಬುದರ ಇನ್ನೊಂದು ರೂಪವಾಗಿರಬಹುದು.

ವಿಜಾಪುರದ ಒಂದು ಶಾಸನ(ಎಸ್. ಆಯ್. ಆಯ್ XVIII–೩೮೧ ವಿಜಾಪುರ, ೧೨೭೮)ದಲ್ಲಿ "ಸಮಸ್ತ ನಗರಶ್ರೇಷ್ಠ ನಖರಾದಿ: ವಣಿಕ್ಸಭಾಂ ಅಷ್ಟಾಶಷ್ಟಾನ್ ಪಂಚಮಠಾನ್ ಸಂಪೂಜ್ಯ ಪುರಮಧ್ಯತ: ತದ್ಧಸ್ತೇ ದತ್ತವಾನ್ ಧರ್ಮಂ" ಎಂಬ ವಾಕ್ಯವೂ, ಕುಡತಿನಿ ಶಾಸನಗಳಲ್ಲಿ ಬರುವ "ಅಯ್ದು ವರ್ಗಮುಂ" (ಬಳ್ಳಾರಿ ಜಿಲ್ಲೆಯ ಶಾಸನಗಳು–ಬಳ್ಳಾರಿ ೨೪–ಕುಡತಿನಿ, ೧೨೧೦), "ಕೊಟ್ಟಿತೊಣೆಯ ಸ್ಥಾನದೈದುಂ ವರ್ಗಂಗಳುಂ।ಪಂಚಮಠಸ್ಥಾನದ ತಪೋಧನರುಂ।ಅಸಂಖ್ಯಾತ ಗಣಂಗಳುಂ ಮಹಾಸಭೆಯಾಗಿ ನೆರೆದು" (ಬಳ್ಳಾರಿ ಜಿಲ್ಲೆಯ ಶಾಸನಗಳು–ಬಳ್ಳಾರಿ ೩೫–ಕುಡತಿನಿ, ೧೨೧೮), "ಕೊಟ್ಟಿತೊಣೆಯ ಸ್ಥಾನದಯ್ದುಂ ವರ್ಗ್ಗಂ" (ಬಳ್ಳಾರಿ ಜಿಲ್ಲೆಯ ಶಾಸನಗಳು–ಬಳ್ಳಾರಿ ೩೬ ಕುಡತಿನಿ ೧೧೯೯) ಎಂಬ ವಾಕ್ಯಗಳೂ ರಾಯಚೂರು ಜಿಲ್ಲೆಯ ಶಾಸನ ಸಂಪುಟದಲ್ಲಿಯ (ದೇವದುರ್ಗ–೩೧ ವೀರಗೋಟ, ಕ್ರಿ. ಶ. ೧೨೨೩) "ಪಂಚವಳ್ಳಿ" ಶಬ್ದವೂ, ಕೊಪ್ಪಳ ಜಿಲ್ಲೆಯ ಶಾಸನ ಸಂಪುಟದಲ್ಲಿಯ (ಯಲಬುರ್ಗಾ–೧೦ ಕಲ್ಲೂರು ಕ್ರಿ. ಶ. ೧೦೦೨) "ಪಂಚವರ್ಗ" ಶಬ್ದವೂ ನಮ್ಮ ಗಮನ ಸೆಳೆಯುತ್ತವೆ.

ವೀರಶೈವರಲ್ಲಿ ಪಂಚಮಸಾಲು (ಪಂಚಮ+ಸಾಲು) ಹೆಸರಿನ ಬಹುಸಂಖ್ಯೆಯ ಪಂಗಡವಿದೆ. ಇದಕ್ಕೂ ಪಂಚಮಠಕ್ಕೂ ಸಂಬಂಧವಿದೆಯೇ? ವಿಚಾರಿಸಬೇಕು. ಒಟ್ಟಾರೆ ಇಲ್ಲಿ ಕೆಲವು ಪ್ರಶ್ನೆಗಳನ್ನೆತ್ತಲಾಗಿದ್ದು, ಇವುಗಳಿಗೆ ಅಂತಿಮ ಉತ್ತರವನ್ನು ವಿದ್ವಾಂಸರು ಕಂಡುಹಿಡಿಯಬೇಕಾಗಿದೆ.

ಹೀಗಿದ್ದೂ, ಮೇಲೆ ಉದ್ಧರಿಸಿದ ಅಲ್ಲಮನ ವಚನವನ್ನು ನೆನಪಿಸಿಕೊಂಡು, "ಪಂಚಮಠ"ವೆಂದರೆ ಉತ್ಪಾದನೆ, ಮಾರಾಟ ವೃತ್ತಿಗೆ ಸಂಬಂಧಿಸಿದ ಐದು ಬಗೆಯ (ಶಿವೋಪಾಸಕ) ಶ್ರಮಿಕವರ್ಗ, "ಎಂಟು ಹಿಟ್ಟು"ಯೆಂದರೆ ಇವರಿಗೆ ನೆರವಾಗುವ ಬಡಿಗ, ಕಮ್ಮಾರ ಇತ್ಯಾದಿ ಆಯಗಾರವರ್ಗವೆಂದು ಹೇಳಬೇಕೆನಿಸುತ್ತದೆ (ನೋಡಿ ಇದೇ ಪುಸ್ತಕದ : ಪಂಚಮಸಾಲಿ–ಹಾಗೆಂದರೇನು ? ಹೆಸರಿನ ಲೇಖನ).

■■

ಆಕರ : ಮಾರ್ಗ ಸಂಪುಟ–೪

೭೭

ಅಸಂಖ್ಯಾತರು–ಗಣಮಠ

ಪಾರಿಭಾಷಿಕ ಪದಗಳಿಗೆ ಮೂಲತಃ ನಿರ್ದಿಷ್ಟ ಅರ್ಥವಿರುತ್ತದೆ. ಕಾಲ ರೂಪಿಸಿದಂತೆ ಆ ಅರ್ಥ, ಸಂಕೋಚ ವಿಸ್ತಾರ ಪಲ್ಲಟ ಇತ್ಯಾದಿಗಳಿಗೆ ಗುರಿಯಾಗುತ್ತ ಬರುತ್ತದೆ. ಈ ಬಗೆಯ ಅರ್ಥ ವ್ಯತ್ಯಾಸಕ್ಕೆ ಗುರಿಯಾಗಿರುವ ಅಸಂಖ್ಯಾತರು ಮತ್ತು ಗಣಮಠಗಳೆಂಬ ಪಾರಿಭಾಷಿಕ ಪದಗಳನ್ನು ಕುರಿತು ಇಲ್ಲಿ ಚರ್ಚಿಸಬಹುದಾಗಿದೆ.

೧೨ನೆಯ ಶತಮಾನದ ಬಳಿಕ ಲಿಂಗಾಯತ ಮತ್ತು ವೀರಶೈವ ಪರಂಪರೆಗಳು ಮಿಶ್ರವಾಗುತ್ತ ಬಂದಿವೆ. ಆಗ ಸಹಜವಾಗಿಯೇ ಇವುಗಳ ಪಾರಿಭಾಷಿಕ ಪದಗಳು ಪರಸ್ಪರ ವರ್ಗಾವಣೆಗೊಂಡವು. ಇದರಿಂದಾಗಿ ಒಂದು ಪಾರಿಭಾಷಿಕ ಪದ ಮೂಲತಃ ಇವೆರಡರಲ್ಲಿ ಯಾವುದಕ್ಕೆ ಸಂಬಂಧಿಸಿದೆ? ಎಂಬುದನ್ನು ಕಾಲಕ್ರಮೇಣ ಸಂಭವಿಸಿದ ಇವುಗಳ ಅರ್ಥವ್ಯತ್ಯಾಸವನ್ನು ಸ್ಪಷ್ಟಪಡಿಸಲು ಸಾಧ್ಯವಾಗದ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಇಂಥ ಸಂದರ್ಭದಲ್ಲಿ ಶಾಸನಗಳು ಕೆಲಮಟ್ಟಿಗೆ ನೆರವಾಗುತ್ತಿದ್ದು, ಇವುಗಳ ನೆರವಿನಿಂದ 'ಅಸಂಖ್ಯಾತರು' ಮತ್ತು 'ಗಣಮಠ' ಪದಗಳ ಅರ್ಥವನ್ನು ಇಲ್ಲಿ ಸ್ಪಷ್ಟಪಡಿಸಬಹುದಾಗಿದೆ.

ಅಸಂಖ್ಯಾತರು

ಶೈವ ಸಂಪ್ರದಾಯದ ಪ್ರಕಾರ ಕೈಲಾಸದಲ್ಲಿ ಚಿರಂಜೀವಿಗಳಾದ ಅಮರಗಣಂಗಳಿದ್ದು, ಅಗಣಿತ ಸಂಖ್ಯೆಯಲ್ಲಿರುವ ಕಾರಣ ಇವರಿಗೆ ಅಸಂಖ್ಯಾತರೆಂದೂ (ಅಬ್ಬಲೂರು ಶಾಸನ) ಹೆಸರು. ಇವರಲ್ಲಿ ಪ್ರಮಥಗಣ, ರುದ್ರಗಣಗಳೆಂಬ ಎರಡು ವರ್ಗಗಳಿವೆ. ಶಿವನ ಆಜ್ಞೆಯಂತೆ ಲೋಕದಲ್ಲಿ ಅವತರಿಸುವ ಇವರಲ್ಲಿ ಪ್ರಮಥಗಣಗಳು ಸೌಮ್ಯರೀತಿಯಿಂದ, ರುದ್ರಗಣಗಳು ಉಗ್ರ ಭೀತಿಯಿಂದ ವರ್ತಿಸಿ, ಇಲ್ಲಿ ಶೈವಧರ್ಮವನ್ನು ಉದ್ಧರಿಸುತ್ತಾರೆ. ಸಂರಕ್ಷಿಸುತ್ತಾರೆ.

ಶಿವನ ಇನ್ನೊಂದು ಹೆಸರು ಮಹೇಶ್ವರ. ಈ ಮಹೇಶ್ವರನ ಅನುಯಾಯಿಗಳು ಮಾಹೇಶ್ವರರು. ಧಾರ್ಮಿಕ ವಿರೋಧಿಗಳನ್ನು ನಿಗ್ರಹಿಸಬೇಕಾಗಿ ಬಂದ ಒಂದು ಕಾಲಘಟ್ಟದಲ್ಲಿ ಈ ಮಾಹೇಶ್ವರರಲ್ಲಿ ಕೆಲವರನ್ನೊಳಗೊಂಡ ಧಾರ್ಮಿಕ ವೀರಯೋಧ ಪಡೆಗಳು ಅಲ್ಲಲ್ಲಿ ಅಸ್ತಿತ್ವಕ್ಕೆ ಬಂದಂತಿವೆ. ಇವರನ್ನು ವೀರ ಮಾಹೇಶ್ವರರು, ಅಸಂಖ್ಯಾತರು ಎಂದು ಶಾಸನಗಳು ಕರೆದಿದ್ದು ಆ ವಿವರ ಹೀಗಿದೆ :

೧. ತಾಳಿಕೋಟೆ ಶಾಸನ (೧೧೮೪)

ಮಂಡಳೇಶ್ವರ ವಿರುಪರಸದೇವನು ವೀರ ಬಯ್ಯೇಶ್ವರ ದೇವರಿಗಾಗಿ ವೀರದಾಸನಿಗೆ ನೀಡಿದ ದತ್ತಿ ಶಾಸನವಿದು. ಇದರ ಆರಂಭದಲ್ಲಿ "..........ಜಿನಸಮಯ ವನದಹನ ದಾವಾನಳರುಂ....ಬೌದ್ಧ ಸನುಮ ವಿಧ್ವಂಸನ ಪ್ರವೀಣರುಂ.....ಅನ್ಯ ಸನುಯಿಗಲ ಬೆನ್ನ ಬಾರನೆತ್ತುವದುಂ" ಎಂದು ಮುಂತಾದ ಉಗ್ರ ವಿಶೇಷಣಗಳೊಂದಿಗೆ ಅಸಂಖ್ಯಾತ ಸಂಖ್ಯಾಬಾಧೇಯರೆಂದು ಇವರನ್ನು ಕರೆಯಲಾಗಿದೆ. ಇವರು ಪರಿಯಳಿಗೆ, ಅಣಿಲವಾಡ, ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮಾರಡಗಿ, ಅಣಂಪೂರ, ಕರಹಾಡ, ಕೆಂಬಾವಿ, ಬಮ್ಮಕೂರು ಮೊದಲಾದ ಗ್ರಾಮಗಳಲ್ಲಿ ಪ[illegible]ಯಗಳನ್ನು ನಾಶಗೊಳಿಸಿ 'ಶಿವಲಿಂಗ'ಗಳನ್ನು ಸ್ಥಾಪಿಸಿದರೆಂದು ಹೇಳಲಾಗಿದೆ. ಈ ವಿವರಗಳು ಇವರ ಧಾರ್ಮಿಕ ಉಗ್ರ ಆಕ್ರಮಣಗಳನ್ನು ಸ್ಪಷ್ಟಪಡಿಸುತ್ತಿದ್ದು, ಇವರನ್ನು ಅಸಂಖ್ಯಾತ ಸಂಖ್ಯಾಭಿಧೇಯ ಪುರಾತನ ನೂತನರೆನಿಸಿದ ಅಸಂಖ್ಯಾತ ಗಣವೆಂದು ಈ ಶಾಸನದಲ್ಲಿ ಕರೆಯಲಾಗಿದೆ.

೨. ಅಣ್ಣಿಗೇರಿ ಶಾಸನ (೧೧೮೪)

ಬೆಳವಲ ನಾಡಿನ ರಾಜಧಾನಿಯಾದ ಅಣ್ಣಿಗೇರಿಯಲ್ಲಿ ಇತ್ತೀಚೆಗೆ ಲಭ್ಯವಾದ ೫೦೦ ರಷ್ಟು ತಲೆಬುರುಡೆಗಳು ಧಾರ್ಮಿಕ ಉಗ್ರ ಘಟನೆಗೆ ಸಂಬಂಧಪಟ್ಟವೆಂದು ನಾನು ಬೇರೊಂದು ಲೇಖನದಲ್ಲಿ (ಮಾರ್ಗ–೩, ೧೭೯) ಹೇಳಿದ್ದೇನೆ. ಇಲ್ಲಿ ಸಗರ ನಾಡಿನ ಹೈರಯ ರಾಜವಂಶದ ವೀರಗೊಗ್ಗಿದೇವ ಜೈನಮೃಗ ಬೇಂಟೆಕಾರ.....ಜೈನಾಗಮ ಧೂಮಕೇತು ಎಂದು ಮುಂತಾಗಿ ತನ್ನನ್ನು ಕರೆದುಕೊಂಡಿದ್ದಾನೆ. ಜೈನ ಘಟಾಂತಿಕ (ಪದ್ಮಾವತಿ) ಮತ್ತು ತೀರ್ಥಂಕರ ವಿಗ್ರಹಗಳನ್ನು ಭಿನ್ನಗೊಳಿಸಿದ ಈತನು "ಅಸಂಖ್ಯಾತರ ಪುತ್ರ"ನೆಂದೂ, ಚಾಲುಕ್ಯ ಬ್ರಹ್ಮ ದಂಡನಾಯಕನು ಸ್ಥಾಪಿಸಿದ ಬ್ರಹ್ಮೇಶ್ವರ ಅಂಗದ ಸಲುವಾಗಿ ತನಗೆ ನೀಡಿದ ಈ ದಾನವನ್ನು ಅಸಂಖ್ಯಾತಗಣಂಗಳು ರಕ್ಷಿಸಬೇಕೆಂದೂ ಇಲ್ಲಿ ಹೇಳಲಾಗಿದೆ. (ಬಳಿಕ ಯಾವುದೇ ಕಾಲ ಘಟ್ಟದಲ್ಲಿ ಈ ಬ್ರಹ್ಮೇಶ್ವರ ಲಿಂಗವನ್ನು ಕಿತ್ತಿ ಹಾಕಿ ವೀರಭದ್ರ ವಿಗ್ರಹವನ್ನು ಸ್ಥಾಪಿಸಲಾಗಿದೆ. ಲಿಂಗದ ಮುಂದಿನ ನಂದಿ ವಿಗ್ರಹ ಮಾತ್ರ ಉಳಿದುಕೊಂಡಿದೆ.)

೩. ಇಂಗಳಗಿ ಶಾಸನ (೧೨೦೯)

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ಇಂಗಳಗಿ ಗ್ರಾಮದ ಮಾಲೇಶ್ವರ ದೇವಸ್ಥಾನದ ಶಾಸನದಲ್ಲಿ ಬರುವ

ಕರಿಕರನಂ ಸೆಂಡಾಡುವ
ರುರಗಪನಂ ತೀರಲಿಟ್ಟು ಬಿಟ್ಟಿಕ್ಕುವರಾ।
ಗಿರಿಕುಳಮಂ ಕಿತ್ತೆತ್ತುವ
ರುರಿಯೊಳು ಪರಿಮರಿಯಾಡುತಿರ್ಪರು ಶರಣರು॥

ಎಂಬ ಪದ್ಯ ಶಿವಭಕ್ತರ ಉಗ್ರ ಭಕ್ತಿಯನ್ನು ಸೂಚಿಸುತ್ತದೆ. ಇವರನ್ನು "ಮಹಾಲಿಂಗದೇವರ ಉರಿಗಣ್ಣ ಜ್ವಾಲೆಬಂದುದಯಿಸಿದ ಮಹಾವೀರ ಗಣಂಗಳಸಂಖ್ಯಾತರು' ಎಂದು ಇಲ್ಲಿ ಕರೆದಿದ್ದು, ಇಲ್ಲಿಯ 'ಅಸಂಖ್ಯಾತರು' ಪದವನ್ನು ಗಮನಿಸಬೇಕು.

೪. ಕುಡುತಿನಿ ಶಾಸನ (೧೨೦೭, ೧೨೧೦, ೧೨೮೯)

ಈ ಗ್ರಾಮದ ಮೂರು ಶಾಸನಗಳು ನಮಗೆ ಮುಖ್ಯವೆನಿಸಿವೆ. ಇವುಗಳಲ್ಲಿ ಕುಮಾರಸ್ವಾಮಿ ದೇವಾಲಯ ಮುಂದಿನ ಶಾಸನವು ವೀರಭದ್ರಾದಿಗಳಿಂ ಸೊಪ್ಪಾಗಲ್ವೇಡಿ ಎಂದು ವಿರೋಧಿಗಳಿಗೆ ಎಚ್ಚರಿಕೆ ನೀಡುವುದಾಗಿದೆ, "ಕ್ರೂರ ವಿಷಂಗಳಂ ಕುಡಿವರ್ ..... ವೀರಗಣಂಗಳ್ ..... ಪ್ರಮಥರ್', "ಕರಕಮಳಂಗಳಂ ಮುರಿದುಮಾಪತಿಗೇರಿಸಿ, ಮೀಂಟಿ ಕಣ್ಣಳಂ ಪುರಮಥನಂಗೆ ಕೊಟ್ಟು ಮಗುಳ್ದುಂ ಪಡೆವರ್ .... ಪ್ರಮಥರ್" "ಶಿವದೂಷಕರೆಂಬವರೊಕ್ಕಲಿಕ್ಕುವರ್ ವೀರಗಣಂಗಳ್" ಎಂದು ಶಿವಭಕ್ತರ ಉಗ್ರ ವ್ಯಕ್ತಿತ್ವವನ್ನು ಸೂಚಿಸುತ್ತ, ಇಲ್ಲಿಯ ದಾನವನ್ನು ಅಸಂಖ್ಯಾತರು ರಕ್ಷಿಸಬೇಕೆಂದು ಸೂಚಿಸುತ್ತದೆ. ಇನ್ನೆರಡು ಶಾಸನಗಳಲ್ಲಿ ಅಸಂಖ್ಯಾತ ಗಣಂಗಳು ಸಭೆ ನೆರೆದುದನ್ನು ಉಲ್ಲೇಖಿಸುತ್ತದೆ. ಒಟ್ಟಾರೆ ಇಲ್ಲಿಯ ಮೂರು ಶಾಸನಗಳು ಉಗ್ರಭಕ್ತರನ್ನು ಅಸಂಖ್ಯಾತ ರೆಂದು ಕರೆದುದನ್ನು ಇಲ್ಲಿ ಅವಶ್ಯ ಗಮನಿಸಬೇಕು.

೫ ಶ್ರೀಶೈಲದ ತೆಲುಗು ಶಾಸನ (೧೩೧೩)

ದಕ್ಷಿಣಭಾರತದ ಸುಪ್ರಸಿದ್ಧ ಶೈವ ಕ್ಷೇತ್ರವಾಗಿರುವ ಶ್ರೀಶೈಲ ತುಂಬ ಪ್ರಾಚೀನವಾಗಿದ್ದರೂ ಈಗಿನ ಮಲ್ಲಿಕಾರ್ಜುನನ ದೇವಾಲಯದ ಕಟ್ಟಡವು ೧೬ನೆಯ ಶತಮಾನದಷ್ಟು ಅರ್ವಾಚೀನದ್ದಾಗಿದೆ. ಈ ಆವರಣದಲ್ಲಿ ಸಿಗುವ ಈ ದೇವರಿಗೆ ಸಂಬಂಧಿಸಿದ ಮೊದಲ ಶಾಸನ (ತೆಲುಗು) ೧೩೧೩ ರಷ್ಟು ಈಚೀನದಾಗಿದೆ. ವೀರಭದ್ರ ದೇವಾಲಯದ ಗಣಮಠದಲ್ಲಿ ಸೇರಿದ್ದ ಸಭೆಯಲ್ಲಿ ಪಾಶುಪತ ಶೈವನಾಗಿದ್ದು ಅರಸುಮಠದ ಈಶ್ವರ ಶಿವಾಚಾರ್ಯ ಇನ್ನು ಮುಂದೆ ಅಸಂಖ್ಯಾತರೆನಿಸಿದ ಮಹಾಮಹೇಶ್ವರರ ಆಜ್ಞೆಯಂತೆ ಮಲ್ಲಿಕಾರ್ಜುನ ದೇವಾಲಯದ ಪೂಜಾಕಾರ್ಯ ನಡೆಸಬೇಕೆಂದು ತೀರ್ಮಾನಿಸಲಾದುದನ್ನು ಈ ಶಾಸನ ತಿಳಿಸುತ್ತದೆ. ಕೊನೆಯಲ್ಲಿ ಅನೇಕ ದಾನಿಗಳು ಆಗಾಗ ನೀಡಿದ್ದ ೭೦ ಗ್ರಾಮಗಳ ಹೆಸರಿನ ಪಟ್ಟಿಯಿದೆ. ಆದರೆ ಈ ೭೦ ಶಾಸನಗಳು ಈಗ ಎಲ್ಲಿ ಹೋದವು? ಬಹುಶಃ ಮೇಲೆ ಹೇಳಿರುವ ತೀರ್ಮಾನ ಸ್ವೀಕರಿಸಿದ ಪ್ರಸಂಗದಲ್ಲಿ ಅವುಗಳನ್ನು ಒಡೆದು ಹಾಕಿ, ಕೇವಲ ದಾನವಾಗಿ ಬಂದ ಗ್ರಾಮಗಳ ಹೆಸರುಗಳನ್ನು ಮಾತ್ರ ಇಲ್ಲಿ ಪಟ್ಟಿ ರೂಪದಲ್ಲಿ ದಾಖಲಿಸಿದಂತೆ ತೋರುತ್ತದೆ. ಮಲ್ಲಿಕಾರ್ಜುನನ ಈ ಪೂಜಾಪದ್ಧತಿ ಬದಲಾವಣೆಯ ಭೀಕರ ಸಂದರ್ಭ ಸೃಷ್ಟಿ ಮಾಡಿದವರು ಮಹಾಮಹೇಶ್ವರ ಅಸಂಖ್ಯಾತರೆಂದು ಇಲ್ಲಿ ಹೇಳಲಾಗಿದೆ.

೬. ರಾಯಶೆಟ್ಟಿಪುರ ಶಾಸನ (೧೧೮೫, ೧೨೫೧)

ಮಂಡ್ಯ ತಾಲೂಕಿನ ರಾಯಶೆಟ್ಟಿಪುರದ ಸೋಮೇಶ್ವರ ದೇವಾಲಯದ ಶಾಸನವಿದು. ಇದರಲ್ಲಿ ಬೇರೆ ಬೇರೆ ಕಾಲದ ಎರಡು ಶಾಸನಗಳಿವೆ. ಎರಡನೆಯ ಶಾಸನದಲ್ಲಿ ಅಸಂಖ್ಯಾತ 'ಮಹಾಗಣಂಗಳು ವೀರಭದ್ರದೇವರು ಮುಖ್ಯರಾದ ವೀರಸೋಮನಾಥಪುರದ ವ್ರಿತ್ತಿಮಂತ್ರರು' ಎಂಬ ಪಠ್ಯವಿದೆ. ಇಲ್ಲಿ ಉಗ್ರ ದೇವತೆಯಾದ ವೀರಭದ್ರದೇವರ ಉಲ್ಲೇಖದೊಂದಿಗೆ 'ಅಸಂಖ್ಯಾತಗಣಂಗಳು' ಎಂಬ ಶಬ್ದವಿರುವುದನ್ನು ಗಮನಿಸಬೇಕು.

೭. **ತೊಣಚಿ ಶಾಸನ** (೧೧೩೧?೧೧೯೧?)

ಮಂಡ್ಯ ಜಿಲ್ಲೆಯ ಕೃಷ್ಣರಾಜಪುರ ತಾಲೂಕಿನ ತೊಣಚಿ ಗ್ರಾಮದ ಈಶ್ವರ (ಸಿದ್ಧೇಶ್ವರ) ದೇವಾಲಯದ ಮುಂದೆ ಶಾಸನವಿದ್ದು, ಇಲ್ಲಿ "ಸಿದ್ಧನಾಥ ದೇವರು. ಅಸಂಖ್ಯಾತ ಗಣಂಗಳು ಪ್ರಾಣನಾಥದೇವರುಂ" ಎಂಬ ಮತ್ತು "ಸಿದ್ಧನಾಥದೇವರ ದೇವಸ್ಥಾನಕ್ಕೊಡೆಯನು ಅಸಂಖ್ಯಾತ ಗಣಂಗಳ ಕುಮಾರನು" ಎಂಬ ಉಲ್ಲೇಖಗಳಿವೆ. ಇಲ್ಲಿಯೇ ಉರಿಯ ಉಯ್ಯಲೆ ಎಂಬ ಉಗ್ರ ಆಚರಣೆಯ ಮತ್ತು ಗಣಗಳಾಹಾರದಾನಕ್ಕುಂ" ಬಿಟ್ಟ ದತ್ತಿಯ ಉಲ್ಲೇಖಗಳಿವೆ.

* * *

ನನ್ನ ಗಮನಕ್ಕೆ ಬಂದ ಅಸಂಖ್ಯಾತರನ್ನು ಕುರಿತ ದಾಖಲೆಗಳಿವು. ಇಲ್ಲೆಲ್ಲ ಉಗ್ರ ವ್ಯಕ್ತಿಗಳ ಧಾರ್ಮಿಕ ಸಂಘರ್ಷದ ಪ್ರಸ್ತಾಪವಿರುವುದನ್ನು ನೋಡಿದರೆ, ಅಂದು ಶೈವ ಉಗ್ರರನ್ನು ಅಸಂಖ್ಯಾತ ರೆಂದು ಕರೆಯುತ್ತಿದ್ದರೆಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ತಾಳಿಕೋಟಿ ಶಾಸನದಲ್ಲಿ ವೀರ + ಬಯ್ಯೇಶ್ವರ ದೇವರು ವೀರ+ದಾಸ ಹೆಸರುಗಳಲ್ಲಿರುವ ವೀರ ವಿಶೇಷಣವಿರುವುದನ್ನು ಗಮನಿಸಬೇಕು.

ಮೊದ ಮೊದಲು ಅಸಂಘಟಿತವಾಗಿದ್ದ ಈ ಶೈವಯೋಧರ ಆಚರಣೆ ಬರ ಬರುತ್ತ ಒಂದು ವ್ರತ, ಒಂದು ದೀಕ್ಷೆಯಾಗಿ ರೂಪಗೊಂಡಂತಿದೆ. ಅಂದರೆ ವೀರಭದ್ರನ ಸನ್ನಿಧಿಯಲ್ಲಿ ಇವರು ವ್ರತ ಹಿಡಿಯುವಲ್ಲಿ ಈ ಆಚರಣೆ ನಿರ್ಧಿಷ್ಟ ಸ್ವರೂಪ ಪಡೆಯಿತು. ಚೌಡದಾನಪುರ ಶಿವದೇವನು 'ವೀರಭದ್ರನ ಶ್ರೀಪದಮಂ ಸ್ಮರಿಸುತ ವೀರಬ್ರತಮಂ ಧರಿಸಿದಂ' ಎಂಬ ಮಾತು ಇದಕ್ಕೆ ನಿದರ್ಶನವೆನಿಸಿದೆ. ಅಣ್ಣಿಗೇರಿ ಶಾಸನವು ಮೂಲತಃ ಬ್ರಹ್ಮೇಶ್ವರಲಿಂಗ ಸ್ಥಾಪನೆಯನ್ನು ಕುರಿತುದಾಗಿದೆ. ಆದರೆ ಕಾಲಕ್ರಮದಲ್ಲಿ ಈ ಲಿಂಗವನ್ನು ಮೂಲೋತ್ಪಾದನೆ ಮಾಡಿ, ಅಲ್ಲಿ ವೀರಭದ್ರ ವಿಗ್ರಹವನ್ನು ಸ್ಥಾಪಿಸಲಾಗಿದೆ. (ಲಿಂಗದ ಮುಂದಿನ ನಂದಿ ಉಳಿದುಕೊಂಡಿದೆ). ಈ ವೀರಭದ್ರನನ್ನು ಈಗ ಪುರದ ವೀರಭದ್ರನೆಂದು ಕರೆಯುತ್ತಾರೆ. ಪುರ ಎನ್ನುವುದಕ್ಕೆ ಇಲ್ಲಿ ಪಟ್ಟಣವೆಂಬ ಸಾಮಾನ್ಯ ಅರ್ಥವಿಲ್ಲ. ಕಾಶ್ಮೀರ ಶೈವದ ಪಾಶುಪತ, ನಕುಲೀಶ, ಮಹಾವ್ರತಿ, ಶುದ್ಧಶೈವವೆಂಬ ನಾಲ್ಕು ಶಾಖೆಗಳಲ್ಲಿ ಒಂದಾಗಿರುವ ಶುದ್ಧಶೈವ ಜನವರ್ಗದ ಬಡಾವಣೆಗೆ ಪುರವೆಂದು ಕರೆಯುತ್ತಿದ್ದರು. ಈ ಬಡಾವಣೆಯಲ್ಲಿರುವ ವೀರಭದ್ರನೇ ಪುರದ ವೀರಭದ್ರ.

ಒಟ್ಟಾರೆ, ವೀರಭದ್ರನ ಸನ್ನಿಧಿಯಲ್ಲಿ 'ವೀರವ್ರತ' ಹಿಡಿಯುತ್ತಿದ್ದ ಈ ಶುದ್ಧಶೈವರೇ 'ಅಸಂಖ್ಯಾತರೆ'ಂದು ವೀರವ್ರತಿಗಳಾದುದರಿಂದ ಬರುಬರುತ್ತ ವೀರಶೈವರೆಂದು ಕರೆಯಿಸಿಕೊಳ್ಳತೊಡಗಿದರೆಂದು ಹೇಳಬಹುದಾಗಿದೆ. ಮುಂದೆ ಈ ವೀರಶೈವ ಶಬ್ದವು ಲಿಂಗಾಯತಕ್ಕೆ ಪರ್ಯಾಯ ಪದವಾಗಿ ಬಳಕೆಗೊಂಡುದು ತಿಳಿದ ಸಂಗತಿಯೇ ಆಗಿದೆ.

ಗಣಮತ

ಈಗ ಸಂಖ್ಯಾತರಿಗೂ ಗಣಮತಕ್ಕೂ ಸಂಬಂಧವಿರುವಂತಿದೆ. ಮೇಲೆ ಹೇಳಿದ ಶೈವ ತಾಳಿಕೋಟೆ ಶಾಸನದಲ್ಲಿ, 'ಅಸಂಖ್ಯಾತ ಸಂಖ್ಯಾಧೇಯ ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಗಳ' ಎಂಬ ವಾಕ್ಯಗಳೊಂದಿಗೆ 'ಶ್ರೀಮನು ಮಹಾ ಮಂಡಳೇಶ್ವರಂ ವಿರುಪರಸದೇವರು

ವೀರದಾಸಂಗೆ ಗಣಮಠವಾಗಿ ಕೊಟ್ಟ ಕೆಯಿ' ಎಂಬ ವಾಕ್ಯವೂ ಇದೆ. ಬಹುಶಃ ಈ ಅಸಂಖ್ಯಾತರೆಂಬ ಉಗ್ರ ಗಣಾಚಾರದವರು ವಾಸಿಸುವ ಕೇಂದ್ರವೇ ಗಣಮಠವಾಗಿರಬಹುದು. ತಾಳಿಕೋಟಿ ಶಾಸನದಂತೆ ಮೇಲೆ ಹೇಳಿದ ಇಂಗಳಗಿ ಶಾಸನದಲ್ಲಿ 'ಮಹಾವೀರ ಗಣಗಳಸಂಖ್ಯಾತರ ಮಹಿಮೆಯೆಂತೆಂದೊಡೆ' ಎಂಬ ವಾಕ್ಯವಲ್ಲದೆ 'ಸಕಳ ಲಿಂಗ ದೇವರಿಗೆ, ಶ್ರೀ ಗುಡ್ಡವ್ವೆಗಳು ಮುಖ್ಯವಾಗಿ ಗಣಮಠಕ್ಕೆ ಕೊಟ್ಟ ದತ್ತಿ' ಎಂಬ ವಾಕ್ಯವಿದ್ದು, ಇಲ್ಲಿಯೂ ವೀರಗಣ, ಅಸಂಖ್ಯಾತ ಗಣಮಠ ಪದಗಳಿರುವುದನ್ನು ಗಮನಿಸಬೇಕು. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಲ್ಲಟ ಶಾಸನ (೧೧೯೬) ದಲ್ಲಿ "ಮಹೇಶ್ವರರಾಹಾರ ದಾನಕ್ಕುಂ ಗಣಮಠವಾಗಿ ಕಲ್ಲಯ್ಯಂಗೆ" ದಾನವಾಗಿ ನೀಡಿದ ಉಲ್ಲೇಖವಿದೆ. ಬೀದರ ಜಿಲ್ಲೆಯ ಬಾತಂಬ್ರ (ಸು. ೧೨ ನೆಯ ಶತಮಾನ) ಶಾಸನದಲ್ಲಿಯೂ 'ಗಣಮಟದ ವೃತ್ತಿ' ಎಂಬ ಪಠ್ಯವಿದೆ. ಇವುಗಳಿಗಿಂತ ಮುಖ್ಯವಾದುದು, ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕಲ್ಲೂರು ಗ್ರಾಮದ ಕಲ್ಲಿನಾಥ ದೇವಾಲಯದ ೧೧೮೬ ರ ಶಾಸನದಲ್ಲಿ "ಮೊಲ್ಲೆಯ ಬಮ್ಮಯ್ಯಂಗೆ ಪ್ರಥಮ ವೃತ್ತಿಯಾಗಿ ಗಣಮಠಕ್ಕೆ ಕೊಟ್ಟ ಭೂಮಿ"ಯ ಉಲ್ಲೇಖವಿರುವುದು (ಇಲ್ಲಿಯ ೧೧೩೨ ರ ಶಾಸನದಲ್ಲಿಯೂ ಈ ಮೊಲ್ಲೆಯ ಬೊಮ್ಮಯ್ಯನ ಪ್ರಸ್ತಾಪವಿದೆ). ಕರಿದೇವರು ಭಕ್ತನಾದ ಈತನನ್ನು ಕುರಿತ ಅಂದರೆ ಜಗದೇವನೊಂದಿಗೆ ಸೇರಿ ಈತನು ಬಿಜ್ಜಳನನ್ನು ಸಂಹರಿಸಿದುದನ್ನು ಕುರಿತ 'ಮೊಲ್ಲೆ ಬೊಮ್ಮಯ್ಯಗಳ ಕಾವ್ಯ' ದ ಹಸ್ತಪ್ರತಿ ಈ ಗ್ರಾಮದಲ್ಲಿದ್ದು, ಗದುಗಿನ ಶ್ರೀ ತೋಂಟದಾರ್ಯ ಮಠದಿಂದ ಪ್ರಕಟವಾಗಿದೆ. ಬಹುಶಃ ಈತನು ತನ್ನ ಉತ್ತರಾರ್ಧ ಜೀವನದಲ್ಲಿ 'ಶರಣ' ದೀಕ್ಷಿತನಾಗಿ, ಕಲ್ಯಾಣ ವಿಪ್ಲವದಲ್ಲಿ ಭಾಗಿಯಾಗಿರಬಹುದು.

ಒಟ್ಟಾರೆ, ಗಣಮಠಗಳು ಉಗ್ರ ಶಿವಗಣಂಗಳಿಗೆ ಸಂಬಂಧಿಸಿದ್ದು, ಇಲ್ಲಿ ನೆಲೆ ಪಡೆದವರನ್ನು 'ಅಸಂಖ್ಯಾತ' ರೆಂದು ಕರೆಯುತ್ತಿದ್ದರು. ಇಂದು ಈ ಗಣಮಠಗಳು ಘನಮಠವೆಂದು ಹೆಸರು ಧರಿಸಿಕೊಂಡಂತಿದೆ. ಸ್ವರವಚನ ಮತ್ತು ಕೃಷಿಜ್ಞಾನಪ್ರದೀಪಿಕೆಯ ಕರ್ತೃ ಘನಮಠದಾರ್ಯ ಹೆಸರಿನ ಮೂಲ ಗಣಮಠದಾರ್ಯ (ಗಣಮಠದ ಒಡೆಯ) ಎಂದೇ ಇರಬಹುದು.

■■

ಆಕರ : ಮಾರ್ಗ ಸಂಪುಟ–೭

೭೮

ಚೌರಂಗಿಮಠ>ಸಾರಂಗಮಠ

ವೀರಶೈವ ಧಾರ್ಮಿಕ ಸಂಸ್ಥೆಗಳಲ್ಲಿ ಸಾರಂಗಮಠ ಕೇವಲ ಒಂದು ಮಠವಲ್ಲ; ಅನೇಕ ಮಠಗಳ ಒಂದು ಸಂಕೀರ್ಣ. ಈ ಸಂಕೀರ್ಣದ ಮೂಲಸ್ವರೂಪ-ಐತಿಹಾಸಿಕ ಬೆಳವಣಿಗೆಗಳು ಜನವದಂತಿ ಮತ್ತು ಪುರಾಣಗಳ ಮಿಶ್ರಣವಾಗಿದ್ದು, ಇದರಿಂದ ನಿಜಚರಿತ್ರೆ ಹೊರತೆಗೆಯುವುದು ಕಷ್ಟದ ಕೆಲಸವಾಗಿದೆ.

ಇಂದು ಈ ಹೆಸರಿನ ಮಠಗಳು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಕಂಡುಬರುತ್ತಿದ್ದರೂ, ಇತಿಹಾಸ ಕಟ್ಟುವಲ್ಲಿ ಇವು ಅಷ್ಟಾಗಿ ನೆರವಾಗುವುದಿಲ್ಲ. ಪ್ರತಿಯೊಂದು ಮಠಗಳು ಏನೇನೋ ಕಟ್ಟುಕಥೆ ಹೇಳುತ್ತವೆ. ಒಂದು ಮಾತು ನಿಜ, ಇವೆಲ್ಲ ಇಂದು ಪಂಚಾಚಾರ್ಯ ಪರಂಪರೆಯ ಮರುಳಸಿದ್ಧ ಸಂಪ್ರದಾಯಕ್ಕೆ ಸೇರಿವೆ. ಸೋಜಿಗದ ಸಂಗತಿಯೆಂದರೆ ಬಹುಶಃ ಸಾರಂಗಮಠ ಸಂಪ್ರದಾಯಕ್ಕಿಂತ ಮರುಳಸಿದ್ಧ ಪೀಠ ಈಚಿನದು. ಆದರೆ ಪ್ರಾಚೀನ ಸಾರಂಗಮಠಗಳನ್ನು ತರುವಾಯ ಹುಟ್ಟಿಕೊಂಡ ಮರುಳಸಿದ್ಧ ಪೀಠದವರು ತಮ್ಮದನ್ನಾಗಿಸಿಕೊಂಡರು. ಅದೇನೇ ಇರಲಿ, ಅನೇಕ ಪವಾಡ-ಅಸ್ಪಷ್ಟ ಚರಿತ್ರೆಗಳಿಂದ ಕೂಡಿರುವ ಮರುಳಸಿದ್ಧ ಚರಿತ್ರೆಯಿಂದಲೂ ಸಾರಂಗಮಠದ ನಿಜಸ್ವರೂಪ ಗೊತ್ತಾಗುವುದಿಲ್ಲ. ಇಂಥ ನಿರಾಶೆಯ ಸಂದರ್ಭದಲ್ಲಿ ಸಾರಂಗಮಠ ಮತ್ತು ಸಾರಂಗದೇವರನ್ನು ಕುರಿತು ಕೆಲವು ಶಾಸನಗಳು ಸಿಗುತ್ತಿದ್ದು, ಅವು ಹೀಗಿವೆ:

ಕೊತ್ತಪಲ್ಲಿಯ ಕನ್ನಡ ಶಾಸನ(ಆಂಧ್ರಪ್ರದೇಶದ ಕನ್ನಡ ಶಾಸನಗಳು I-೩೩೮. ಕ್ರಿ.ಶ.೧೧೫೮)ದಲ್ಲಿ ಸಾರಂಗೇಶ್ವರದೇವರು ಹೆಸರಿನ ದೈವತಕ್ಕೆ ಮತ್ತು ಅಲ್ಲಿಯ ಛತ್ರಕ್ಕೆ ಸಿರಿಪುರ ಹೆಸರಿನ ಗ್ರಾಮವನ್ನು ದಾನ ನೀಡಿದ ವಿಷಯವಿದೆ. ಇದು ಪರ್ಯಾಯವಾಗಿ ಸಾರಂಗಮಠವನ್ನು ಸೂಚಿಸುತ್ತಿರಬಹುದು. ಇಲ್ಲಿಯ ಆದಿಸ್ವಯಂಭೂ ಭೈರವದೇವರಿಗೂ ದಾನನೀಡಿದ ವಿಷಯ ಈ ಶಾಸನದಲ್ಲಿದೆ.

ಇಲ್ಲಿಂದ ಮೂರು ಶತಮಾನಗಳ ಬಳಿಕ ಸಿಗುವ ಅಲಂಪುರ ತೆಲುಗು ಶಾಸನವು (ತೆಲಂಗಾಣ ಶಾಸನಮುಲು II-ಪು. ೧೧೦, ಕ್ರಿ.ಶ.೧೪೬೮) ಪೆದ್ದ ಕಾಚಪ್ಪೊಡೆಯರು ಮಲ್ಲಿಕಾರ್ಜುನದೇವರ ಭಂಡಾರಕ್ಕೆ ೫೦೦ ವರಹ ನೀಡಿ, ಶ್ರೀಶೈಲದಲ್ಲಿ ಭಿಕ್ಷಾವರ್ತಿ ಅಯ್ಯನವರಿಂದ ಖರೀದಿಸಿದ ಭೂಮಿಯಲ್ಲಿ ಸಾರಂಗಪುರ ಗ್ರಾಮ ಕಟ್ಟಿಸಿ, ಸಾರಂಗೇಶ್ವರಮಠದ ಪೆದ್ದ ಕುಪ್ಪಸದೇವರು

---

* ಬಸವಪಥ. ೩೪-೨ ಮೇ ೨೦೧೨

ಮೊದಲಾದವರಿಗೆ ದಾನನೀಡಿದುದನ್ನು ಸೂಚಿಸುತ್ತದೆ. ಇದು ನೇರವಾಗಿ ಶ್ರೀಶೈಲದ ಸಾರಂಗಮಠವನ್ನು ಉಲ್ಲೇಖಿಸುವ ಮೊದಲ ಶಾಸನವಾಗಿದೆ.

ಈ ತರುವಾಯದ ಅಲಂಪುರ ಕನ್ನಡ ತಾಮ್ರಶಾಸನವು (ಆಂಧ್ರ ಪ್ರದೇಶದ ಕನ್ನಡ ಶಾಸನಗಳು II–೪೯೨. ಕ್ರಿ.ಶ. ೧೫೯೩) ಕುಪ್ಪಸಕಂಥೆಯ ಶಿವಲಿಂಗದೇವರಿಗೆ ನಗರೇಶ್ವರಮಠ ನೀಡಿದುದನ್ನು ಹೇಳುವುದೇ ಹೊರತು, ಸಾರಂಗಮಠದ ಉಲ್ಲೇಖ ಮಾಡುವುದಿಲ್ಲ. ಇಲ್ಲಿಯ ಕುಪ್ಪಸಕಂಥೆ ಶಿವಲಿಂಗದೇವನು ಮೇಲೆ ಹೇಳಿದ ಸಾರಂಗೇಶ್ವರಮಠದ ಪೆದ್ದ ಕುಪ್ಪಸದೇವರ ಸಂಪ್ರದಾಯದವನಾಗಿರಬೇಕು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇದೇ ಸುಮಾರಿಗೆ ಹುಟ್ಟಿದ ಶಾಸನ(೧೯೧೫.MER ೪೪ ಕ್ರಿ.ಶ. ೧೫೮೫) ವೊಂದರಲ್ಲಿ ಐದು ಮಠಗಳ ಮುಖ್ಯಸ್ಥರು ಸೇರಿ "ಸಾರಂಗಮಠಕ್ಕೆ ಒಡೆಯರಾಗಲು ಯಾರೂ ಪಿತೂರಿ ಇತ್ಯಾದಿ ನಡೆಸಬಾರದು" ಎಂಬ ಎಚ್ಚರಿಕೆ ನೀಡಿದ ವಿಚಿತ್ರ ವಿಷಯವಿದೆ. ಇದನ್ನು ನೋಡಿದರೆ ಈ ಕಾಲಾವಧಿಯಲ್ಲಿ ಶ್ರೀಶೈಲ ಸಾರಂಗಮಠಕ್ಕೆ ಏನೋ ತೊಂದರೆ ಉದ್ಭವಿಸಿರಬಹುದೆನಿಸುತ್ತದೆ. ಬಹುಶಃ ಇದನ್ನು ಸೂಚಿಸುವ ಸಿದ್ಧನಂಜೇಶನ ಗುರುರಾಜ ಚಾರಿತ್ರದ (ಕ್ರಿ.ಶ. ಸು. ೧೬೦೦) ಒಂದು ಪ್ರಸಂಗ ಹೀಗಿದೆ:

ಬಾಳೆಹಳ್ಳಿಮಠದ ಕುಮಾರದೇವನ ಕನಸಿನಲ್ಲಿ ಶಿವನು ಬಂದು "......ಪರ್ವತದ ಸಾರಂಗಮಠದೊಳಿಹ। ಜೋಗಿವಡೆಯ ಸಂಹರಿಸಿ ಮಹತ್ತಿನುರು ಸಿಂಹಾಸನವ" ಸ್ಥಾಪಿಸೆಂದು ಆಜ್ಞಾಪಿಸಲು, ಆ ವೇರೆಗೆ ಅವನು "ಸೂರ್ಯಗ್ರಹಣ ಪುಣ್ಯಕಾಲದೊಳು ಹೊಳೆಗಿಳಿದೇಳುನೂರಂದಳದ ಜೋಗಿಗಳ ಕೊಂದು ಸಲೆ ವೀರಮಾಹೇಶ್ವರರ ತಿಂಥಿಣಿಯ ಮಾಡಿ" ಮೆರೆದನೆಂದು ಈ ಕಾವ್ಯದಲ್ಲಿ ಹೇಳಲಾಗಿದೆ. ಈ ಕುಮಾರದೇವನು ಕ್ರಿ.ಶ. ೧೫೬೯ರ ಬಾಳೆಹಳ್ಳಿ ಶಾಸನೋಕ್ತ ದಿಗಂಬರ ಮುಕ್ತಿನಾಥನ('ನಾಥ' ಶಬ್ದ ಗಮನಿಸಿರಿ) ಶಿಷ್ಯ ಕುಮಾರ ಚೆನ್ನಬಸವೇಶನೇ ಆಗಿರಬಹುದು. ಹೀಗೆ ದಾಳಿಗೊಳಗಾದ ಶ್ರೀಶೈಲ ಸಾರಂಗಮಠದ "ಜೋಗಿ"ಗಳ ಮತ್ತು ದಾಳಿಮಾಡಿದ ಮಹತ್ತಿನ "ವೀರಮಾಹೇಶ್ವರ" ರ ಬಗ್ಗೆ ಕೆಳಗಿನಂತೆ ಸ್ಪಷ್ಟೀಕರಣ ನೀಡಬಹುದು:

ನಾಥಪಂಥದಲ್ಲಿಯೇ ಭೈರವಾರಾಧನೆಯ ನಾಗಾರ್ಜುನಾದಿ ಪರಂಪರೆಯ 'ಜೋಗಿ'ಗಳದು ಒಂದು ಶಾಖೆ, ಶಿವನ ಆರಾಧನೆಯ ರೇವಣಸಿದ್ಧ–ಸಿದ್ಧರಾಮಾದಿ ಪರಂಪರೆಯ 'ಸಿದ್ಧ'ರದು ಇನ್ನೊಂದು ಶಾಖೆಗಳಿದ್ದವೆಂದು ಸಿದ್ಧರಾಮ ಚಾರಿತ್ರ ತಿಳಿಸುತ್ತದೆ (ನೋಡಿ: ಸಿದ್ಧರಾಮ ಚಾರಿತ್ರ–ವಿಕಾರಿಸಿದ್ಧ ಸಂಪ್ರದಾಯ, ಶಿವಸಿದ್ಧ ಸಂಪ್ರದಾಯ, ಮಾರ್ಗ–IV).ಇವುಗಳಲ್ಲಿ ಶ್ರೀಶೈಲದ "ಜೋಗಿ"ಗಳು ಮೊದಲನೆಯ ಶಾಖೆಯವರು, ರೇವಣಸಿದ್ಧ–ರುದ್ರಮುನಿ–ಮುಕ್ತಿಮುನಿನಾಥ–ದಿಗಂಬರ ಮುಕ್ತಿಮುನಿನಾಥ–ಕುಮಾರ ಚೆನ್ನಬಸವರೆಂಬ ಬಾಳೆಹಳ್ಳಿಯ "ಸಿದ್ಧ"ರು ಎರಡನೆಯ ಶಾಖೆಯವರು. ಈ ಕುಮಾರ ಚೆನ್ನಬಸವನನ್ನು ಗುರುರಾಜ ಚಾರಿತ್ರವು ಇಲ್ಲಿ ಮಹತ್ತಿನ ಸಿಂಹಾಸನದವ, ವೀರಮಾಹೇಶ್ವರನೆಂದು ಕರೆದಿರುವುದರಿಂದ, ಇವನ ಜೀವನದಲ್ಲಿ 'ಸಿದ್ಧ' ಪಂಥದಿಂದ 'ವೀರಮಾಹೇಶ್ವರ' ಪಂಥಕ್ಕೆ ಮತಾಂತರಗೊಂಡ ಘಟನೆ ಜರುಗಿರಬೇಕು. ಅಂದರೆ ಜೋಗಿಗಳು ಸಿದ್ಧರಲ್ಲಿಯೂ, ಸಿದ್ಧರು (ವೀರ)ಮಾಹೇಶ್ವರರಲ್ಲಿಯೂ ಲೀನವಾದರೆಂದು ತೋರುತ್ತದೆ. ಹೀಗೆ

ವೀರಮಾಹೇಶ್ವರಕ್ಕೆ ಮತಾಂತರಗೊಂಡ ಬಳಿಕವೇ ಕುಮಾರ ಚೆನ್ನಬಸವೇಶನು ಶ್ರೀಶೈಲಕ್ಕೆ ಹೋಗಿ, ಜೋಗಿಗಳನ್ನು ಸೋಲಿಸಿದ ಘಟನೆ ಜರುಗಿರಬಹುದು.

ಶ್ರೀಶೈಲದ ಮೇಲಿನ ಈ ದಾಳಿಯ ಬಗ್ಗೆ ಮರುಳ ಸಿದ್ಧಕವಿಯ 'ಗುರುಲಿಂಗಜಂಗಮ ಚಾರಿತ್ರ' (೧೭ನೆಯ ಶತಮಾನದ ಅಂತ್ಯ) ಇನ್ನೂ ಹೆಚ್ಚಿನ ವಿವರಗಳನ್ನು ಹೀಗೆ ನೀಡುತ್ತದೆ: ರೇವಣಸಿದ್ಧ-ರುದ್ರಮುನಿ-ಶಾಂತಮಲ್ಲಿಕಾರ್ಜುನ-ಪಡುವೀಡುಸ್ವಾಮಿ ಈ ರೀತಿ ಬೆಳೆದು ಬಂದ ಒಂದು ಶಾಖೆಗೆ ಸಂಬಂಧಿಸಿದ ಪಡುವೀಡುಸ್ವಾಮಿಯು ತನ್ನ ಮಹತ್ತಿನ (ಸಂಚಾರಿ ಶೈವ ವೀರಪಡೆ?) ಸದಸ್ಯರ ಸಹಾಯದಿಂದ ಕುಂಭಕೋಣಂದಲ್ಲಿ ಜೋಗಿಗಳನ್ನು [illegible] ಬಡಿದು, ಆ ಮಠವನ್ನು ವಶಪಡಿಸಿಕೊಂಡನು. ಬಳಿಕ ಈತನ ಆಜ್ಞೆಯಂತೆ ಶಿಷ್ಯರು ನಾಲ್ಕು ಮಹತ್ತು ಕಟ್ಟಿಕೊಂಡು ಅಲ್ಲಲ್ಲಿ ಸಂಚರಿಸುತ್ತ, ಕೊನೆಗೆ ನಂಜನಗೂಡಿಗೆ ಬರಲು, ಉಮ್ಮತ್ತೂರು ದೊರೆ ನಂಜರಾಜ ಇವರನ್ನು ಬರಮಾಡಿಕೊಂಡು ಸತ್ಕರಿಸಿದನು. ಇವರು ಅಲ್ಲಲ್ಲಿ ಮಠಗಳನ್ನು ಸ್ಥಾಪಿಸುತ್ತ ನಡೆದು ಬಾಳೆಹಳ್ಳಿಗೂ ಬಂದು, ವೀರೇಶ್ವರನನ್ನು ಪೂಜಿಸಿ, ಅಲ್ಲಿಯೂ ಮಠ ಸ್ಥಾಪಿಸಿದರು. ಆಮೇಲೆ (ಬಾಳೆಹಳ್ಳಿಯ) ಹಿರಿಯ ಕುಮಾರದೇವನನ್ನು ಅಂದರೆ ಕುಮಾರ ಚೆನ್ನಬಸವೇಶನನ್ನೊಳಗೊಂಡು ಈ ಮಹತ್ತು ಕಲ್ಯಾಣ ಕೊಲ್ಲಿಪಾಕಿಗಳಿಗೆ, ಬಳಿಕ ಶ್ರೀಶೈಲಕ್ಕೆ ಬಂದಿತು. ಅಲ್ಲಿಯ ಸಾರಂಗ ಮಂಟಪ(ಮಠ)ದಲ್ಲಿ ಬೀಡು ಬಿಟ್ಟು, ಸಾರಂಗ ಸಿದ್ಧೇಶ್ವರ ಲಿಂಗದ ದರ್ಶನ ಪಡೆದುಕೊಂಡಿತು. ಆಗ ೧೨ ಸಾವಿರ ಜೋಗಿಗಳು ಬಂದು ಈ ಸಾರಂಗಮಠ ತಮ್ಮದೆಂದು ವಾದ ಹೂಡಿದರು. "ನಮ್ಮ ಸಾರಂಗಸಿದ್ಧನು ಮಲ್ಲಿಕಾರ್ಜುನನಿಂದ ಈ ಕ್ಷೇತ್ರವನ್ನು ಪಡೆದಿರುವನು. ಮತ್ಸೇಂದ್ರ-ಗೋರಕ್ಷ-ನಾಗಾರ್ಜುನ ಮೊದಲಾದವರೆಲ್ಲ ಇಲ್ಲಿ ತಪಸ್ಸು ಮಾಡಿರುವರು. ಆದಿ ಭೈರವನೇ ಆದಿ ಸಿದ್ಧ" ನೆಂದು ವಾದಿಸಿದರು. ಪರಸ್ಪರ ಘರ್ಷಣೆಯಲ್ಲಿ ಜೋಗಿಗಳ ಪಡೆ ನಾಶವಾಗಿ, ವೀರಮಾಹೇಶ್ವರ ಮಹತ್ತು ಜಯಶಾಲಿಯಾಯಿತು. ತಮ್ಮಲ್ಲಿ ಒಬ್ಬನನ್ನು ಆ ಸಾರಂಗಮಠಕ್ಕೆ ಸ್ವಾಮಿಯನ್ನಾಗಿ ನೇಮಿಸಿ, ಈ ಮಹತ್ತು ಮುಂದುವರಿದು ಮಲ್ಲಿಕಾರ್ಜುನ ದೇವಾಲಯಕ್ಕೆ (ವೀರ)ಭಿಕ್ಷಾವರ್ತಿ ಸ್ವಾಮಿಯನ್ನು ಅಧಿಕಾರಿಯನ್ನಾಗಿ ನೇಮಿಸಿತು. (ಗುರುಲಿಂಗಜಂಗಮ ಚಾರಿತ್ರ ಸಂಧಿ ೨, ೪ ಮತ್ತು ೫).

ಗುರುರಾಜಚಾರಿತ್ರ, ಗುರುಲಿಂಗಜಂಗಮ ಚಾರಿತ್ರ ನೀಡುವ ಈ ವಿವರಣೆಯಿಂದ ಕುಂಭಕೋಣಂ ಮತ್ತು ಶ್ರೀಶೈಲ ಸಾರಂಗಮಠಗಳು ಮೂಲತಃ ಮತ್ಸೇಂದ್ರನಾಥ, ಗೋರಖನಾಥ, ನಾಗಾರ್ಜುನ ಪರಂಪರೆಯ (ಭೈರವ)ಜೋಗಿಗಳ ನಾಥ ಸಂಪ್ರದಾಯಕ್ಕೆ ಸೇರಿದುವೆಂದು ಸ್ಪಷ್ಟವಾಗುತ್ತದೆ. ಹಾಗಾದರೆ ಈ ನಾಥಸಂಪ್ರದಾಯದ ಮಠಗಳಿಗೆ 'ಸಾರಂಗಮಠ' ಎಂಬ ಹೆಸರು ಬರಲು ಕಾರಣವೇನು? ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಅದಕ್ಕೆ ವಿವರಣೆ ಹೀಗಿದೆ:

ನಾಥ ಸಂಪ್ರದಾಯದ ಮತ್ಸೇಂದ್ರನಾಥನ ಶಿಷ್ಯರಲ್ಲಿ ಗೋರಖನಾಥ, ಚೌರಂಗಿನಾಥ (ಕಂದಳನಾಥ, ಕಂಥಡನಾಥ)ಮುಖ್ಯರು. ಮರಾಠಿ ಜ್ಞಾನೇಶ್ವರಿ ಮತ್ತು ನವನಾಥ ಭಕ್ತಿಸಾರಗಳ ಪ್ರಕಾರ ಮಲತಾಯಿಯ ಪ್ರೇಮವನ್ನು ನಿರಾಕರಿಸಿದ ಈ ಚೌರಂಗಿನಾಥನು ಕ್ರೂರ ಹಿಂಸೆಗೆ ಒಳಗಾಗಿ, ಕೈಕಾಲು ಕಳೆದುಕೊಂಡನು. ತೆಲುಗು ನವನಾಥ ಚಾರಿತ್ರ ಕೃತಿಯು ಈ ಹಿಂಸೆಗೆ ಒಳಗಾದವನನ್ನು ಸಾರಂಗಧರನೆಂದು ಕರೆಯುವ ಮೂಲಕ ಈ ಸಾರಂಗಧರ ಮತ್ತು ಮರಾಠಿಕೃತಿ ಹೇಳುವ ಚೌರಂಗಿನಾಥ ಎಂಬಿವು ಒಬ್ಬನೇ ವ್ಯಕ್ತಿಯ ಭಿನ್ನ ಹೆಸರುಗಳೆಂದು ಸ್ಪಷ್ಟಪಡಿಸುತ್ತದೆ.

ಈ ಚೌರಂಗಿನಾಥನ ಚರಿತ್ರೆಯಲ್ಲಿ ಕೇಳಿ ಬರುವ ಹುಲಿಯ ಸವಾರಿ–ಗೋಡೆಯ ಸವಾರಿ ಪ್ರಸಂಗವು ಸಾರಂಗಮಠದ ಮೂಲಪುರುಷ ಸಾರಂಗದೇವನ ವಿಷಯದಲ್ಲಿಯೂ ಕೇಳಿಬರುತ್ತದೆ. ನಾಥ ಸಂಪ್ರದಾಯದ ಒಂದು ಲಕ್ಷಣ ಗೋವು (= ಕಪಿಲೆ)ಪಾಲನೆ. ಈ ಸಂಪ್ರದಾಯದಲ್ಲಿ ಕಪಿಲಸಿದ್ಧ ಜನಪ್ರಿಯ ಹೆಸರು. ಸಾರಂಗದೇವನಿಗೆ ಕಪಿಲಸಿದ್ಧನೆಂಬ ಇನ್ನೊಂದು ಹೆಸರಿದ್ದಿತೆಂದು ಸಾರಂಗಮಠ ಸಂಪ್ರದಾಯದವರು ಈಗಲೂ ಹೇಳುತ್ತಾರೆ. ಈ ಎಲ್ಲ ಆಧಾರಗಳಿಂದ ಚೌರಂಗಿನಾಥನೇ ಸಾರಂಗಧರ, ಸಾರಂಗದೇವನೆಂದು ಸ್ಪಷ್ಟವಾಗುತ್ತದೆ. ಹೀಗಾಗಿ ಚೌರಂಗಿನಾಥ ಸಂಪ್ರದಾಯದ ಮಠಗಳೇ ಇಂದಿನ ಸಾರಂಗಮಠಗಳಾಗಿದ್ದು, ಇತಿಹಾಸದ ಯಾವುದೋ ಕಾಲಘಟ್ಟದಲ್ಲಿ ಇವು ವೀರಶೈವ ಮಠಗಳಾದವೆಂದು ತೋರುತ್ತದೆ. ಬಹುಶಃ ಮೇಲೆ ಹೇಳಿದ ೧೫–೧೬ನೆಯ ಶತಮಾನದಲ್ಲಿ ಭೈರವ ಸಂಪ್ರದಾಯದ (ಜೋಗಿ)ನಾಥಮಠಗಳು ಶಿವಸಂಪ್ರದಾಯದ (ರೇವಣಸಿದ್ಧ)ನಾಥ ಮಠಗಳಾಗಿ, ಬಳಿಕ ಈಗಿನ (ರೇಣುಕಾಚಾರ್ಯ) ಇತ್ಯಾದಿ ಪಂಚಾಚಾರ್ಯಮಠಗಳಾದವೆಂದು ಹೇಳಬಹುದು.

ಆಂಧ್ರಪ್ರದೇಶದ ಶ್ರೀಶೈಲದಂತೆ ಇನ್ನೊಂದು ಸಾರಂಗಮಠ ತಮಿಳುನಾಡಿನ ಕುಂಭಕೋಣಂ ಕ್ಷೇತ್ರದ 'ಸಾರಂಗ ಪೆರಿಯಮಠ'. ಇದು ಪಂಚಗೃಹ ಸಿಂಹಾಸನವೆಂದು ಪ್ರಸಿದ್ಧವಾಗಿದೆ. ಕೊಳದಲ್ಲಿ ಮುಳುಗಿದ ಕುಂಭವೊಂದು ತೇಲಿದ ಪವಾಡ ನಡೆದ ಕಾರಣ ಇದರ ಮೂಲನಾಮ ಕುಂಭಕೊಳ. ಜನರ ಬಾಯಿಯಲ್ಲಿ ಕುಂಭಕೊಣ>ಕುಂಭಕೋಣವೆಂದು ಬದಲಾಗಿದೆ.

ಹೀಗೆ ಆಂಧ್ರಪ್ರದೇಶದ ಶ್ರೀಶೈಲ, ತಮಿಳುನಾಡಿನ ಕುಂಭಕೋಣಂಗಳಂತೆ ಕರ್ನಾಟಕದಲ್ಲಿಯ ಚೌರಂಗಿನಾಥ ಶಾಖೆಯ ಪ್ರಸಿದ್ಧ ಸಾರಂಗಮಠವೆಂದರೆ ಕಪ್ಪಡಿ (ಕೂಡಲ) ಸಂಗಮದ್ದು. ಕಪ್ಪಡಿಯೆಂಬುದು ಬಹುಶಃ ನಾಥಸಂಪ್ರದಾಯದ ಕೇಂದ್ರವನ್ನು ಸೂಚಿಸುವ ಒಂದು ಪಾರಿಭಾಷಿಕ ಶಬ್ದವೆಂದು ತೋರುತ್ತದೆ. ಮೈಸೂರು ಜಿಲ್ಲೆಯ ಕೃಷ್ಣರಾಜನಗರ ಬಳಿಯ ಕಪ್ಪಡಿ ಕ್ಷೇತ್ರದಲ್ಲಿಯೂ ನಾಥಪಂಥದ ಮಠವಿರುವುದನ್ನು ಇಲ್ಲಿ ಸ್ಮರಿಸಬಹುದು. ಈ ಕಪ್ಪಡಿ(ಕೂಡಲ)ಸಂಗಮ ಕ್ಷೇತ್ರದಲ್ಲಿರುವ ದೇವತೆಯಾದ ಸಂಗಮನಾಥನ ಹೆಸರಿನಲ್ಲಿರುವ 'ನಾಥ' ಶಬ್ದವೂ, ಇದು ದ್ವಾಪರಯುಗದಲ್ಲಿ ಕಪಿಲಕ್ಷೇತ್ರ–ಆಗಿನ ದೇವರು ಸಿದ್ಧೇಶ್ವರನೆಂದು ಇಲ್ಲಿಯ ಸ್ಥಳಪುರಾಣ ಕರೆದುದೂ, ಅಬೆದುಬ್ಬೆ ಮತ್ತು ಸಿ. ಪಿ. ಬ್ರೌನ್ ಅವರು ಬಸವಣ್ಣನು ಕಪಿಲೆಗೆ, ಕಪಿಲೆ ಸಂಗಮಕ್ಕೆ ಹೋಗಿ ಲಿಂಗೈಕ್ಯನಾದನೆಂದು ಹೇಳಿದುದೂ, ಇಂದು ಇಲ್ಲಿರುವ ಸಾರಂಗಮಠವೂ, ಇದು ನಾಥ ಸಂಪ್ರದಾಯದ ಕೇಂದ್ರವೆಂಬುದನ್ನು ಖಚಿತಪಡಿಸುತ್ತವೆ. ಈ ವಿಷಯದ ವಿವರಣೆಗಾಗಿ ನನ್ನ "ಕಪ್ಪಡಿ–ನಾಥಸಂಪ್ರದಾಯ– ಕಪಿಲಷಷ್ಠಿ" (ಮಾರ್ಗ : IV–೨೭೮) ಲೇಖನವನ್ನು ನೋಡಬಹುದು.

ಒಟ್ಟಾರೆ, ಮತ್ಸೇಂದ್ರನಾಥನ ಶಿಷ್ಯನಾದ ಚೌರಂಗಿನಾಥನು ದಕ್ಷಿಣಭಾರತದ ಆಂಧ್ರ, ತಮಿಳ್ನಾಡು, ಕರ್ನಾಟಕಗಳಲ್ಲಿ ತನ್ನ ಕೇಂದ್ರಗಳನ್ನು ಸ್ಥಾಪಿಸಿದ್ದು, ಇವುಗಳಲ್ಲಿ ಕರ್ನಾಟಕದ ಮುಖ್ಯಕೇಂದ್ರ ಕಪ್ಪಡಿಸಂಗಮವೆಂದೂ, ಅಲ್ಲಲ್ಲಿರುವ ಸಂಗಮನಾಥ ದೇವಾಲಯಗಳೆಲ್ಲ ಈ ಚೌರಂಗಿನಾಥ ಸಂಪ್ರದಾಯದ ನೆಲೆಗಳೆಂದೂ ಹೇಳಬಹುದು.

ಇಂದಿಗೂ ಕೂಡಲಸಂಗಮದಲ್ಲಿ ಮೇಲಿನಮಠ, ಕೆಳಗಿನಮಠ ಹೆಸರಿನ ಎರಡು ಸಾರಂಗಮಠಗಳಿವೆ. ಈ ಮಠಗಳಲ್ಲಿರುವ ಹಸ್ತಪ್ರತಿ ಬಳಸಿ ಡಾ. ಫ.ಗು. ಹಳಕಟ್ಟಿಯವರು

'ಸಾರಂಗಮಠಾಧೀಶ್ವರರು' ಹೆಸರಿನ ಪುಸ್ತಕ ಪ್ರಕಟಿಸಿದ್ದಾರೆ. ಇದರಲ್ಲಿ ಮುಸಲ್ಮಾನ ಆಳ್ವಿಕೆ ಕಾಲದ ಸಾರಂಗದೇವ, ಶಿವಸಂಗಪ್ಪಯ್ಯ, ಕಾಶಿದೇವ, ಸೂರಪ್ಪಯ್ಯ, ಸಣ್ಣಸಾರಂಗೇಶ್ವರ ಇವರ ಚರಿತ್ರೆ, ಅಲ್ಲಲ್ಲಿ ಸ್ಥಾಪಿತವಾದ ಸಾರಂಗಮಠಗಳ ವಿವರವಿದೆಯೇ ಹೊರತು, ಈ ಮಠಸಂಪ್ರದಾಯದ ಹುಟ್ಟು, ಬೆಳವಣಿಗೆ, ಅದು ನಾಥದಿಂದ ವೀರಶೈವಕ್ಕೆ ಹೊರಳಿದ ಸಂದರ್ಭ ಇತ್ಯಾದಿ ವಿಷಯಗಳಿಲ್ಲ.

ಹೀಗೆ, ಮೂಲತಃ ನಾಥಪಂಥೀಯವಾಗಿದ್ದ ಕೂಡಲ ಸಂಗಮದ ಸಾರಂಗಮಠವು ಆಮೇಲೆ ಇಂದಿನ ಪಂಚಾಚಾರ್ಯ ಪರಂಪರೆಯ ಮರುಳಸಿದ್ಧಶಾಖೆಗೆ ಸೇರಿಹೋಯಿತೆಂದು ತೋರುತ್ತದೆ. ಆದರೆ ನಾಥಪಂಥದ ಶ್ರೀಶೈಲ, ಕುಂಭಕೋಣಂ ಮೊದಲಾದ ಸಾರಂಗಮಠಗಳನ್ನು ವೀ(ರ)ಮಾಹೇಶ್ವರರು ವಶಪಡಿಸಿಕೊಂಡ ಬಗ್ಗೆ ತಿಳಿಸುವ ೧೭ನೆಯ ಶತಮಾನದ 'ಗುರುಲಿಂಗಜಂಗಮ ಚಾರಿತ್ರ' (ಮಹತ್ತಿನ ಕಾವ್ಯ) ಕೃತಿಯು ಕೂಡಲ ಸಂಗಮದಂಥ ದೊಡ್ಡ ಕೇಂದ್ರ ಪರಿವರ್ತನಗೊಂಡುದರ ಬಗ್ಗೆ ಮೌನವಹಿಸಿದೆ. ಬಹುಶಃ ಈ ಪರಿವರ್ತನ ಘಟನೆ ಬಹಳ ವರ್ಷಗಳ ಹಿಂದೆಯೇ ಜರುಗಿ, ಈ ಕಾವ್ಯ ಹುಟ್ಟುವ ವೇಳೆಗೆ ಅದರ ನೆನಪು ಇತಿಹಾಸದಲ್ಲಿ ಮರೆಯಾಗಿ ಹೋಗಿರಬಹುದು. ಇಲ್ಲವೆ ದೂರದ ಕೂಡಲ ಸಂಗಮದ ಘಟನೆ ದಕ್ಷಿಣ ಕರ್ನಾಟಕದ ಈ ಕವಿಯ ಗಮನಕ್ಕೆ ಬಂದಿರಲಿಕ್ಕಿಲ್ಲ.

ಸಾರಂಗಮಠ ಸಂಪ್ರದಾಯದ ಬಗ್ಗೆ ಈ ರೀತಿಯ ಹೊಸ ವಿಚಾರ ತಿಳಿಸುವ ಪ್ರಥಮ ಲೇಖನವಿದು. ವಿದ್ವಾಂಸರು ಈ ಬಗ್ಗೆ ಅಭ್ಯಾಸ ಮುಂದುವರಿಸುವುದು, ಇದೇ ಬಗೆಯಲ್ಲಿ ಇಂದಿನ ವೀರಶೈವ ಘನಮಠ (ಗಣಮಠ), ಭಿಕ್ಷಾವರ್ತಿಮಠ, ನಿರಾಸೆಮಠ, ವಂಶೀಕೃತಮಠ, ಪುರದಮಠ, ಪುರವರ್ಗದಮಠ, ಪಂಚವಣ್ಣಿಗೆ ಮಠ, ಮಹತ್ತಿನಮಠ, ಹಿರೇಮಠ ಇತ್ಯಾದಿಗಳ ಬಗ್ಗೆ ಅಧ್ಯಯನ ಕೈಕೊಳ್ಳುವುದು ಅವಶ್ಯವಿದೆ.

■■

ಆಕರ : ಮಾರ್ಗ ಸಂಪುಟ–೭

೭೯

ಚಾಲುಕ್ಯರು : ಇನ್ನಷ್ಟು ಚರ್ಚೆ

ರಾಜಮನೆತನಗಳ ಜೀವನಾವಧಿಯಷ್ಟೇ ಮಹತ್ವದ್ದಾಗಿದೆ, ಅವುಗಳ ಪೂರ್ವೋತ್ತರಗಳ ಅಭ್ಯಾಸ. ಈ ದೃಷ್ಟಿಯಿಂದ ಚಾಲುಕ್ಯರ ಮೂಲ ಯಾವುದು? ನಾಶದ ಬಳಿಕ ಉಳಿದಿರುವ ಅವರ ಅವಶೇಷಗಳೇನು? ಎಂಬುದು ತುಂಬ ಮುಖ್ಯವೆನಿಸುತ್ತದೆ. ಅಂಥ ಕೆಲವು ಶಾಬ್ದಿಕ ಅವಶೇಷಗಳನ್ನು ಚರ್ಚಿಸುವುದು ಈ ಲೇಖನದ ಉದ್ದೇಶ.

ಚಾಲುಕ್ಯ ಶಬ್ದದ ಅರ್ಥವೇ ಇನ್ನೂ ಸಮಸ್ಯೆಯಾಗಿ ಉಳಿದಿದೆ. ಚುಲಕ ಅಂದರೆ ಅಂಗೈಯ ತಗ್ಗುಭಾಗ. ಪೂಜಾ ಸಂದರ್ಭದಲ್ಲಿ ದೇವರಿಗೆ ಅರ್ಪಿಸುತ್ತಲಿದ್ದ ಇಂಥ ಅಂಗೈ ತಗ್ಗು ಭಾಗದ ನೀರಿನಿಂದ ಈ ಮನೆತನದ ಪೂರ್ವಜನು ಹುಟ್ಟಿದನೆಂದು ಹೇಳುವುದು ಕಲ್ಪಿತಪುರಾಣ. ಇದನ್ನು ಬದಿಗಿಟ್ಟು ಕೆಲವು ವಿದ್ವಾಂಸರು ಶಾಸನಗಳಲ್ಲಿಯ ಪರ್ಯಾಯ ರೂಪಗಳಾದ ಚಳಿಕಿ, ಚಲಿಕ್ಯ, ಚಲ್ಕ್ಯ, ಚಲುಕ್ಯ, ಸಳುಕಿ, ಚೊಳಿಕಿಗಳನ್ನು ಗಮನಿಸಿ, ಇದು ಕೃಷಿ ಉಪಕರಣವಾದ ಸಲಿಕೆಯನ್ನು ಸೂಚಿಸುವುದೆಂದೂ, ಇವರು ಕೃಷಿಮೂಲದವರೆಂದೂ ಹೇಳಿದ್ದಾರೆ. ಈ ಬಗ್ಗೆ ಇನ್ನಷ್ಟು ಆಕರಗಳನ್ನು, ಊಹೆಗಳನ್ನು ಇಲ್ಲಿ ಮಂಡಿಸಬಹುದು.

ಲಿಂಗಸುಗೂರು ತಾಲೂಕಿನ (ರಾಯಚೂರು ಜಿಲ್ಲೆಯ ಶಾಸನಗಳು–ಲಿಂಗಸುಗೂರು–೩೨, ಮಸ್ಕಿ ೧೦೧೦)ಕಲ್ಯಾಣಚಾಲುಕ್ಯ ಇಮ್ಮಡಿ ಜಯಸಿಂಹನ ಕಾಲದ ಶಾಸನದಲ್ಲಿ, ಈ ಅರಸನು ಕರಿಯಾಯ್ಚಯ್ಯನಿಗೆ ಮಸ್ಕಿಯಲ್ಲಿ ದಾನನೀಡಿದ ನೂರು ಮತ್ತರು ಭೂಮಿಯ ಸೀಮಾರೇಖೆಯನ್ನು ಹೇಳುವ ಸಂದರ್ಭದಲ್ಲಿ "ಚಳುಕಿಯರ ಪೊಲಗೆಱೆ" ಎಂಬ ಉಲ್ಲೇಖ ಕಂಡುಬರುತ್ತದೆ. ಹೀಗೆಂದರೇನು? ಅರ್ಥವಾಗುತ್ತಿಲ್ಲ. ಇದು ಚಳುಕಿ ಕುಟುಂಬ ಅಥವಾ ಕುಲಗುಂಪಿನ ಹೊಲವನ್ನೋ, ಹೊಲೆಯರ ಕೇರಿಯನ್ನೋ ಸೂಚಿಸುವಂತಿದೆ. ನಮ್ಮ ಊರಲ್ಲಿ (ಸಿಂದಗಿ ತಾಲೂಕಿನ ಎರಗಲ್ಲು) ಒಂದೇ ಪ್ರದೇಶದಲ್ಲಿರುವ, ಆದರೆ ಇಂದು ಬೇರೆ ಬೇರೆಯವರ ಸ್ವಾಧೀನದಲ್ಲಿರುವ ಹತ್ತಿಪ್ಪತ್ತು ಹೊಲಗಳಿಗೆ "ಚಾಳಕೇರ ಹೊಲ"ಗಳೆಂದು ಕರೆಯುತ್ತಾರೆ. ಇವೆರಡಕ್ಕೂ ಒಂದೇ ಅರ್ಥವಿದೆಯೇ? ವಿಚಾರಿಸಬೇಕು.

ಇಂಡಿ ತಾಲೂಕಿನ ರೂಗಿ ಗ್ರಾಮದ ಶಾಸನದಲ್ಲಿ (SII XX–೧೯ ರೂಗಿ ಕ್ರಿ. ಶ. ೧೦೧೫) "ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ [ಪ್ರಥುವೀವಲ್ಲಭ]ಮಹಾರಾಜಾಧಿರಾಜ ಪರಮೇ[ಶ್ವರ] ಪರಮಭಟ್ಟಾರಕಂ ನಯುಶಟ್ಟಿಪುರವೇಶ್ವರಂ ಸತ್ಯಾಶ್ರಯಕುಲXXX ದೀಪವರ್ಧನನೆನಿಸಿದ

ಜಯಸಿಂಘವಲ್ಲಭ ನನ್ದ[ನ] ರಣರಾಗದೇವಂ, ವಾತಾಪಿ ಪುರವರೇಶ್ವರ[ನಶ್ವ]ಯಜ್ಞದೀಕ್ಷಿತಂ ಪೊಲಿಕೇಸಿವಲ್ಲಭಂ ಕೀರ್ತಿವರ್ಮರ್........" ಎಂದು ಚಾಲುಕ್ಯರ ವಂಶಾವಳಿ ಮುಂದುವರಿಯುತ್ತದೆ. ಇಲ್ಲಿಯ "ನಯಶಟ್ಟಿಪುರವರೇಶ್ವರ" "ವಾತಾಪಿಪುರವರೇಶ್ವರ" ಎಂಬ ಎರಡು ಭಿನ್ನ ಉಲ್ಲೇಖಗಳು ನಮ್ಮ ಗಮನ ಸೆಳೆಯುತ್ತವೆ. ಬಹುಶ: ವಾತಾಪಿ(ಬಾದಾಮಿ)ಗಿಂತ ಪೂರ್ವದಲ್ಲಿ ಈ ಕುಟುಂಬ ನಯಶಳ್ಕಿ ಪುರಕ್ಕೆ ಸಂಬಂಧಿಸಿದ್ದಿತೇ? ಎನಿಸುತ್ತದೆ. ಇಲ್ಲಿಯ ಶಟ್ಟಿ ಎಂಬುದು ಚಳ್ಕಿ, ಚಳುಕ್ಯ, ಚಾಳುಕ್ಯ ಎಂಬಿವುಗಳ ಹಳೆಯ ರೂಪವೆನಿಸುತ್ತಿದ್ದು, ಇದನ್ನು ಪುರ ಎಂದು ಕರೆದ ಕಾರಣ, ಚಾಲುಕ್ಯವೆಂಬುದು ಯಾವುದೋ ಗ್ರಾಮನಾಮದ ವ್ಯತ್ಯಸ್ತರೂಪವಿರಬಹುದೇ? ಎನಿಸುತ್ತದೆ. ಇಲ್ಲಿಯ "ನಯ" ಎಂಬುದಕ್ಕೇನು ಅರ್ಥ? ಬಹುಶ: ಸಂಪಾದಕರು ತಪ್ಪು ಓದಿರಬಹುದೇ? ಶಾಸನ ಬರೆಯುವಾಗಲೇ ತಪ್ಪು ರೂಪ ದಾಖಲಾಯಿತೇ? ಈ ಪ್ರಶ್ನೆಗಳನ್ನು ಬಿಡಿಸಿಕೊಂಡು, ಈ ಗ್ರಾಮವನ್ನು ವಿದ್ವಾಂಸರು ಶೋಧಿಸಿದಲ್ಲಿ ಚಾಲುಕ್ಯರ ಮೂಲದ ಬಗ್ಗೆ ಹೊಸ ಬೆಳಕು ಬೀಳಬಹುದಾಗಿದೆ.

ಮಾನ್ವಿ ತಾಲೂಕಿನ ಕವುತಾಳ ಶಾಸನವೊಂದು (ರಾಯಚೂರು ಜಿಲ್ಲೆಯ ಶಾಸನಗಳು. ಮಾನ್ವಿ-೧೧೬ ಕವುತಾಳ ಕ್ರಿ. ಶ. ೧೨೧೭) ದೇವಗಿರಿ ಯಾದವಸಿಂಘಣನಿಗೆ ಸಂಬಂಧಿಸಿದ್ದು, ಇವರ ಸಾಮಂತನಾದ ಹೈಹಯ ವಂಶದ ಇಮ್ಮಡಿ ಮಲ್ಲಿದೇವರಸನು ಐಯಣ ಸಿರಿವುರ (ಸಿರಿವಾರ)ದಲ್ಲಿ ಆಳುತ್ತಲಿರುವಾಗ, ಇವನ ಪಾದಪದ್ಮೋಪಜೀವಿಯಾಗಿದ್ದವನು ಬೀಚಿಸೆಟ್ಟಿ. ಶಾಸನದಲ್ಲಿ ಈತನ ಬಿರುದಾವಳಿಯನ್ನು "......ಬಲದೇವ ವಾಸುದೇವ ಖಂಡಳಿಮೂಳಭದ್ರ ವಂಸೋದ್ಭವರುಂ, ಅಹಿಚ್ಛತ್ರಪುರವಿನಿರ್ಗತರುಂ, ನಾರಾಯಣದತ್ತ ಚಕ್ರಲಾಂಛನ ಕೀರ್ತ್ತಿಕೇತನ ಪಲ್ಲವಧ್ವಜ ಪತಾಕರುಂ, ಚಾಳುಕ್ಯಾನ್ವಯರುಂ, ಚೋಳಕುಳಾಂನ್ತರುಮಪ್ಪ ಶ್ರೀಮತು ಮೊರಟ ಮುಂನೂಱಱ ಸೆಟ್ಟಿಗುತ್ತ ಬೀಚಿಸೆಟ್ಟಿಯರುಂ, ರೇಚಿಸೆಟ್ಟಿಯರುಮಿರ್ದು ತಂಮಯ್ಯನ ಪೆಸರೊಳು ಲಿಂಗಪ್ರತಿಷ್ಠೆಯಂ ಮಾಡಿದಾ ಸ್ಥಳಕ್ಕೆ ಮಾಳ್ಪ ವೃತ್ತಿ ಸಂಕಲ್ಪವೆಂತೆಂದಡೆ" ಎಂದು ಹೇಳುತ್ತ, ಇವರ "ಕುಲಗುರುಗಳಪ್ಪ ಸಂಕರಾಸಿಪಂಡಿತ"ರಿಗೆ ದಾನನೀಡಿದುದನ್ನು ಸೂಚಿಸಲಾಗಿದೆ. ಇದೇ ಊರಿನ ಇನ್ನೊಂದು ಶಾಸನದಲ್ಲಿಯೂ ಈ ಬಿರುದಾವಳಿ ಬರುತ್ತದೆ. ವ್ಯಾಪಾರಿಗಳು ಐಹೊಳೆಗೆ ಸಂಬಂಧಪಟ್ಟವರು ನಿಜ. ಐಹೊಳೆಯು ಚಾಳುಕ್ಯರು ಆಳುತ್ತಲಿದ್ದ ಬಾದಾಮಿ ಮತ್ತು ಪಟ್ಟದಕಲ್ಲು ಗ್ರಾಮಗಳ ನೆರೆಯಲ್ಲಿರುವುದೂ ನಿಜ. ಆದರೆ ಐಹೊಳೆಯ ವ್ಯಾಪಾರಿಗಳನ್ನು "ಚಾಳುಕ್ಯಾನ್ವಯರುಂ" ಎಂದು ಏಕೆ ಕರೆಯಲಾಯಿತು? ವರ್ತಕರಿಗೂ ರಾಜರಿಗೂ ಏನು ಸಂಬಂಧ? ಎಂಬಿವು ಪ್ರಶ್ನೆಯಾಗಿಯೇ ಉಳಿಯುತ್ತವೆ. ಇಲ್ಲಿ ಗುಡ್ಡಧ್ವಜಕ್ಕೆ ಬದಲು "ಪಲ್ಲವಧ್ವಜ" ಎಂಬ ಪದವಿರುವುದನ್ನೂ ಗಮನಿಸಬೇಕು.


ಕುಷ್ಟಗಿ ತಾಲೂಕಿನ ಹೆಸರೂರು ಗ್ರಾಮದ ಶಿಲಾಶಾಸನದಲ್ಲಿ (ಕೊಪ್ಪಳ ಜಿಲ್ಲೆಯ ಶಾಸನಗಳು- ಕುಷ್ಟಗಿ ೨, ಹೆಸರೂರು ಕ್ರಿ. ಶ. ೧೧೦೪) ಆದಿತ್ಯದೇವರಿಗೆ "ಅಯ್ಯೂಱು ತಂತ್ರಮು ಊರೊಡೆಯರು ಪನ್ನಿರ್ವ್ವರ್" ಸೇರಿ ದಾನನೀಡಿದ ವಿಷಯವಿದೆ. ಬಹುಶಃ ಇಲ್ಲಿ "ಅಯ್ಯೂಱು ತಂತ್ರ" ಪಂಗಡವನ್ನು ಸುದೀರ್ಘ ಬಿರುದುಗಳಿಂದ ಬಣ್ಣಿಸಲಾಗಿದೆ. ಈ ಬಿರುದುಗಳಲ್ಲಿ "ಚಾಳುಕ್ಯರಾಯರ ಕುಲದೈವದೊಕ್ಕಲುಗಳು" ಎಂಬುದೂ ಒಂದು. ಈ "ಅಯ್ಯೂಱು ತಂತ್ರ" ಎಂಬುದು ಬಹುಶಃ

ಅಯ್ಯಾವಳೆಯ ಐಯ್ಯೂರ್ವರನ್ನು ಸೂಚಿಸುತ್ತಿರಬಹುದೇ? ಏಕೆಂದರೆ ಬೇರೆ ಶಾಸನಗಳಲ್ಲಿಯಂತೆ ಇಲ್ಲಿಯೂ ಇವರಿಗೆ "ಭಗವತೀದೇವಿ ಲಬ್ಧವ......ಸಾದರು" ಎಂದು ಕರೆಯಲಾಗಿದೆ. ಆದರೆ "ತಂತ್ರ" ಎಂಬುದು ಸೈನ್ಯವನ್ನು ಸೂಚಿಸುವುದರಿಂದ ಇವರು ಬಣಜುಗಳಲ್ಲಿಯೇ ವೀರಬಣಜುಗಳಾಗಿರಬಹುದು. ಸೋಮದೇವನ ನೀತಿವಾಕ್ಯಾಮೃತದಲ್ಲಿ ಬರುವ "ತಂತ್ರಂ ಚತುರಂಗಬಲಂ" (೧೮-೧೨) ಎಂಬುದೂ ನಮ್ಮ ಹೇಳಿಕೆಯನ್ನು ಬೆಂಬಲಿಸುತ್ತದೆ. ಮೇಲೆ ಹೇಳಿದ ಕವತಾಳ ಶಾಸನದಲ್ಲಿಯೂ ವ್ಯಾಪಾರಿಗಳು ತಮ್ಮನ್ನು "ಚಾಳುಕ್ಯಾನ್ವಯರುಂ" ಎಂದು ಕರೆದುಕೊಂಡುದನ್ನು ಇಲ್ಲಿ ಸ್ಮರಿಸಬಹುದು.

ಇಲ್ಲಿ ತಾವು "ಚಾಳುಕ್ಯರಾಯರ ಕುಲದೈವದೊಕ್ಕಲು"ಗಳೆಂದು ಹೇಳಿಕೊಂಡಿರುವುದರಿಂದ, ಚಾಲುಕ್ಯರ ಕುಲದೈವ ಅಂದರೆ ಈ ವ್ಯಾಪಾರಿಗಳ ಕುಲದೈವ ಯಾವುದೆಂಬ ಪ್ರಶ್ನೆ ಉದ್ಭವಿಸುತ್ತದೆ. ಇಲ್ಲಿಯೇ ಈ ವ್ಯಾಪಾರಿಗಳು ಒಂದು ಕಡೆ ತಮ್ಮನ್ನು "ಭಗವತೀದೇವಿ ಲಬ್ಧವ......ಸಾದರು" ಎಂದು ಕರೆದುಕೊಂಡಿದ್ದರೆ, ಇನ್ನೊಂದು ಕಡೆ "ಆದಿತ್ಯದೇವರ ಅಂಗಭೋಗಕ್ಕಂ......" ದಾನ ನೀಡಿದ್ದಾರೆ. ಹೀಗಾಗಿ ಚಾಲುಕ್ಯರ ಕುಲದೈವ ಭಗವತಿಯೇ? ಆದಿತ್ಯನೇ? ಎಂಬ ಸಂದೇಹ ಮೂಡುತ್ತದೆ.

■■

ಆಕರ : ಮಾರ್ಗ ಸಂಪುಟ-೪



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಮಾಜಿ ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ: 97390 67359